ವರು ರಾಷ್ಟ್ರದ ಪರವಾಗಿ ಮಹಾತ್ಮರಿಗೆ ಸ್ವಾಗತ ಮಾಡಿದರು. ಬರ್ಗ್ಯಯಿಂದ ಮರಳಿ ಬಂದ ಬಗ್ಗೆ ರಾಷ್ಟ್ರಕ್ಕೆ ವ್ಯಸನವಿಲ್ಲವಾಗಿ ಸಂದಾನದರು ಮಡಿದ್ದು, ಬ್ರಿಟಿಶರಿಗೆ ರಾಷ್ಟ್ರದ ಅಭಿಪ್ರಾಯವನ್ನು ಧೈರ್ಯದಿಂದಲೂ ನಿಗ್ರಹದಿಂದಲೂ ತಿಳಿಸಿದ ಬಗ್ಗೆ ಮಹಾತ್ಮರಿಗೆ ಕೊಂಡಾಡಿದರು. ಸ್ವಾಗತ ಮಾಡಿದ ಬಗ್ಗೆ ಮಹಾತ್ಮರು ಎಲ್ಲರಿಗೆ ಸಂತೋಷದಿಂದ ಹರಸಿದರು. “ಇಂದಿಗೆ ಇಲ್ಲಿ ಬಂದ ಬಳಿಕ ನನಗೆ ಬಹಳ ಸಂಗತಿಗಳು ತಿಳಿದವು. ಪೇಶಾವರದಲ್ಲಿ ಗುಂಡು ಹಾರಿಸಿದ್ದು ಇಂದಿಗೇ ತಿಳಿಯಿತು. ಪಂಡಿತ ಜವಾಹಿರಲಾಲಾದಿಗಳಿಗೆ ಸೆರೆಹಿಡಿದದ್ದು ಇಂದಿಗೇ ತಿಳಿಯಿತು. ಸರಕಾರಕ್ಕೆ ವಿರಾಗಲು ಏನು ಮಾಡಬೇಕೆಂಬುದು ವಿಚಾರಾರ್ಹ ಪ್ರಶ್ನೆ? ಆ ಪ್ರಶ್ನೆಗೆ ನಾನಿನ್ನೂ ಉತ್ತರ ಕೊಡಲಾರೆ. ಹೋರಾಟವಾಗದಂತೆ ನಾನು ಶಕ್ತಿಮೀರಿ ಮಾಡಿರುವೆನು. ಆದರೆ ಇನ್ನು ಹೋರಾಟವನ್ನು ಸೇರಿದ ಬಳಿಕ ಹಿಂಜರಿಯುವದಿಲ್ಲ. ಬಂಗಾಲದಲ್ಲಿ ಇಬ್ಬ ಹುಡುಗಿಯರು ನಿಶಾನೆಗಿಟ್ಟು ಯುರೋಪಿಯನ್ ಮ್ಯಾಜಿಸ್ಟ್ರೇಟರ ಕೊಲೆ ಪಾತಕ ಮಾಡಿದ ವಾರ್ತೆ ಕೇಳಿ ನನಗೆ ವ್ಯಸನವಾಯಿತು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾವು ಜೀವ ಕೊಡಲ್ಯವಾಗನು, ಜೀವ ತೆಗೆಯತಕ್ಕವರಾಗಬಾರದು. ಇದೇ ಸತ್ಯಾಗ್ರಹಿಯ ಧರ್ಮ. ಪ್ರೀತಿಯಿಂದ ಸರಕಾರದೊತನ ನಾವು ಬದಲಾಯಿಸಬೇಕು. ಹುಡುಗಿಯರ ದುರಾಚಾರಕ್ಕಾಗಿ ಸರಕಾರವು ಇಡೀ ಜನಾಂಗವನ್ನು ದಬ್ಬುವದು ಶ್ರೇಯಸ್ಕರವಾದದ್ದಲ್ಲ! ರಾಜಶಾಸನಗಳಿಂದ ಸಂಧಾನ ಮಾರ್ಗಕ್ಕೂ ಆತಂಕ ಬಿದ್ದಂತಾಗಿದೆ. ಆದಾಗ್ಯೂ ನಾನು ಆಶಾಭರಿತನಿದ್ದೇನೆ. ಪುನಃ ಸಂಗ್ರಾಮವಾದರೆ ನಾವೆಲ್ಲರೂ ಸೇರಬೇಕು. ಹಿಟ್ಟರಿಗೆ ಸಹ ಹಿಂಮುಳಿಯಲಾಗಾಯಿಲ್ಲ. ದೊಡ್ಡಯ ಪೆಟ್ಟು ಮಾತ್ರ ಬಿದ್ದಿತೆಂದು ಎಣಿಸಲಾಗದು, ಗುಂಡು ಹಾರುವದು. ಅದಕ್ಕೆ ಎದೆ ಗಟ್ಟಿಮಾಡಿ ನಾವು ಎದುರಾಗಬೇಕು. ಬ್ರಿಟಿಶ ಪ್ರಧಾನ ಮಂಡಳವು ಅಪ್ರಾಮಾಣಿಕವಲ್ಲ. ಅವರೆಲ್ಲರೂ ಪ್ರಾಮಾಣಿಕರೇ! ಸ್ವರಾಜ್ಯ ಪಡೆಯಲು ಹಿಂದುಸ್ಥಾನವು ಅಸಮರ್ಥವೆಂದು ಅವರೆಲ್ಲರ ಪ್ರಾಮಾಣಿಕ ನಂಬಿಗೆ.

ರಾಷ್ಟ್ರೀಯ ಸಭೆಯು ಅಹಿಂಸೆಯ ವೇಷ ಮಾತ್ರವಾಗಿ ಅವರ ಅಂದೋಲನ. ಅದರಿಂದ ಜನರು ನಡೆ-ನುಡಿಗಳನ್ನು ಶುದ್ಧಿಕೊಳ್ಳಬೇಕು ರಾಷ್ಟ್ರೀಯ ಸಭೆಯ ವರ್ಚಸ್ಸನ್ನು ಬೆಳೆಸಬೇಕು. ಪರಕೀಯರ ಬುದ್ಧಿಯನ್ನು ಅಹ್ವ ತೊರೆಯಬೇಕು. ಅಹಿಂಸೆಯ ಪಾಲನ ಮಾಡಲಾಗದಿದ್ದರೆ ಅವರು ರಾಷ್ಟ್ರೀಯ ಸಭೆಯಲ್ಲಿ ಎಷ್ಟು ಮಾತ್ರ ಸೇರಬಾರದು. ನಾನು ಸ್ವತಂತ್ರನಾಗಿ ಉಳಿದರೆ, ‘ಯಂಗ ಇಂಡಿಯಾ’ ಪತ್ರಿಕೆಯಲ್ಲಿ ನನ್ನ ಅನುಭವಗಳನ್ನು ಹೇಳುವೆನು. ಸಂಧಿಗಾಗಿ ನಾನು ಯಥಾಶಕ್ತಿ—ಪಕ್ಕಾ-ಶಕ್ತಿಮೀರಿ ಪ್ರಯತ್ನ ಮಾಡುವೆನು. ಸಂಗ್ರಾಮವೇ ಒದಗಿಬಂದರೆ ನೀವು ಅದಕ್ಕೆ ತಯಾರಿರಬೇಕು. ಈ ಸಂಗ್ರಾಮದಲ್ಲಿ ಕೊನೆಯ ನಿರ್ಣಯವಾಗುವದು” ಹೀಗೆ ಮಹಾತ್ಮರು ಹೇಳಿ ಸಭೆಯನ್ನು ವಿಸರ್ಜಿಸಿದರು.

ರಾತ್ರಿ ೧೦ ಗಂಟೆಗೆ ಮೆಜೆಸ್ಟಿಕ್ ಹೋಟೆಲಿನಲ್ಲಿ “ವೆಲ್ಫೇರ ಆಫ ಇಂಡಿಯಾ ಲೀಗ” ಯೆಂಬ ಹಿಂದುಸ್ಥಾನದ ಕಲ್ಯಾಣ ಸಂಘವೆಂಬ ಸಂಸ್ಥೆಯ. ವಿದ್ಯಮಾನ ಸಭೆಯಾಯಿತು. ಮುಂಬಯಿಯೊಳಗಿನ ಯುರೋಪಿಯನ್ನರೂ, ನಮ್ಮ ಕೆಲ ಹಿಂದೀ ಮುಖಾ ಸುಭಾಷರೂ, ಈ ಸಭೆಯನ್ನು ಏರ್ಪಡಿಸಿದ್ದಾರೆ ಮಹಾತ್ಮರಿಗೆ ಹಡಗದ ಮೇಲಿರುವಾಗಲೇ ಈ ಸಭೆಯಿಂದ ನಿಮಂತ್ರಣ ಹೋಗಿತ್ತು. ಮುಂಬಯಿಯ ಸರಕಾರ ಪಕ್ಷದಾತ “ಟೈಮ್ಸ ಆಫ್ ಇಂಡಿಯಾ” ಪತ್ರಿಕೆಯ ಸಂಪಾದಕರಾಗಿದ್ದ ಸರ್ ಸ್ಟ್ಯಾನ್ಲೀ ರೀಡರವರು ಸಭಾಧ್ಯಕ್ಷರಾಗಿದ್ದರು. ಮಹಾತ್ಮರ ಜೊತೆಗೆ ಸರದಾರ ವಲ್ಲಭಭಾಯಿ ಪಟೇಲ, ಡಾ|| ಅನಸಾರಿ, ಸರದಾರ ಶಾರ್ದೂಲಸಿಂಗ, ಶ್ರೀ|| ರಾಜಗೋಪಾಲಾಚಾರ್ಯ, ಶ್ರೀ|| ರಾಜೇಂದ್ರ ಪ್ರಸಾದ, ನರಿಮಾನರವರು ಸಭೆಗೆ ಹೋಗಿದ್ದರು. ಮಹಾತ್ಮರು ನುಡಿದದ್ದೇನಂದರೆ.—

“ನಾನು ಇಂದಿಗೆ ರೌಂಡ ಟೇಬಲಿನ ಅನುಭವಗಳನ್ನು ನಿಮಗೆ ಹೇಳಬೇಕೆಂದಿದ್ದೆ. ಆದರೆ ಹಿಂದುಸ್ಥಾನದ ಸ್ಥಿತಿಯು ರಾಜಶಾಸನದ ಮೂಲಕ ಹೀಗೆ ಒದಗಿದೆ ಇದೇನು ಸುಲಕ್ಷಣವಲ್ಲ. ಇರ್ವಿನ್ ದೊರೆಗಳು ೧೧ ರಾಜಶಾಸನಗಳನ್ನು ಹೊರಡಿಸಿದ್ದರು. ವಿಲಿಂಗ್ಡನ್ ದೊರೆಗಳು ೧೩ ರಾಜಶಾಸನ ಹೊರಡಿಸಿ ಅವರಿಗಿಂತ ಮೇಲಾಗಿದ್ದಾರೆ. ರಾಷ್ಟ್ರೀಯ ಸಭೆಯು ಪ್ರತಿ ಸರಕಾರವನ್ನೇ ಸ್ಥಾಪಿಸುತ್ತದೆಂದು ಸರಕಾರದ ದೂರು. ಅದರ ಅರ್ಥವಾಗಿ ಇಷ್ಟೇ ಅರ್ಥವೇನದೆ? ಸರಕಾರ ಅಸ್ತ್ರಗಳಿಂದಾಗ ಜನರು ಅಸ್ತ್ರಗಳನ್ನು ಹೊಂದಿಬಿಡುತ್ತಾರೆ, ಹಾಗೆಯೇ ಜನರು ನ್ಯಾಯ ಕೋರ್ಟುಗಳನ್ನು, ಪಂಚ ಕೋರ್ಟುಗಳನ್ನು ಸ್ಥಾಪಿಸಬಹುದು. ಇಂಥ ಉಪಕ್ರಮಗಳಿಗೆ ಸರಕಾರವು ಸ್ವಾಗತ ಮಾಡಬೇಕು. ನಾನು ಗವರ್ನರನಾಗಿದ್ದರೆ ಇಂಥ ಉಪಕ್ರಮಗಳನ್ನು ಸ್ವಾಗತಿಸುತ್ತಿದ್ದೆ. ಈ ಸರಕಾರವನ್ನು ತೆಗೆದು ಪ್ರತಿ ಸರಕಾರವನ್ನು ನಿರ್ಮಿಸಿ ಅದನ್ನು ಸ್ವೀಕಾರ ಮಾಡಿಕೊಳ್ಳಲು ರಾಷ್ಟ್ರೀಯ ಸಭೆಯು ಸಂಕಲ್ಪಿಸಿದೆ. ರಾಷ್ಟ್ರೀಯ ಸಭೆಗೆ ಆ ಸಾಮರ್ಥ್ಯವಿಲ್ಲದಿದ್ದರೆ ಸ್ವರಾಜ್ಯದ ಆಶೆ ಇಲ್ಲ. ಸ್ವಾತಂತ್ರ್ಯದ ಸಂಪೂರ್ಣ ಅಧಿಕಾರಗಳನ್ನು ಕೈಕೊಳ್ಳಲು ರಾಷ್ಟ್ರೀಯ ಸಭೆಯು ಸಿದ್ಧವಿರುವದಾಗಿ ನಾನು ರೌಂಡ ಟೇಬಲಿನಲ್ಲಿ ತಿಳಿಸಿದ್ದೇನೆ. ಲೋಕಸೇವೆಗಾಗಿ ಲೋಕಮತದ ಬೆಂಬಲದಿಂದ ಪ್ರತಿಸಂಸ್ಥೆಗಳನ್ನೇರ್ಪಡಿಸುವದು ಅಪರಾಧವಲ್ಲ. ರಾಷ್ಟ್ರೀಯ ಸಭೆಯು ಆಧಾರಸ್ತಂಭವಿದು. ರಾಷ್ಟ್ರೀಯ ಸಭೆಯಾಗಿ ಆಗ ಅಧಿಕಾರ ಶಕ್ತಿಮಾನವಾಗುತ್ತ ಬಂತು. ಇಷ್ಟು ಪ್ರಾಯವಾದಾಗ್ಯೂ ಸರಕಾರ ಸ್ಥಾನವನ್ನು ಸಾಮರ್ಥ್ಯವಿಲ್ಲದಿದ್ದರೆ ರಾಷ್ಟ್ರೀಯ ಸಭೆಯು ಬಾಳ್ವೆಯಿಂದೇನು ಪ್ರಯೋಜನ? ರಾಷ್ಟ್ರೀಯ ಸಭೆಯು ಕಡೆ ಅಂತರಂಗವೇನಿಲ್ಲ. ಸರಕಾರವು ಇನ್ನೂ ಅವನಂದಿಗೆ ಪಡುವದಾದರೆ, ಸರಕಾರಕ್ಕೆ ಎಷ್ಟು ಕ್ಕೆ ತೋರಿಕೆ ಬೇಕಾಗ ಪದು ಹಿಂದುಸ್ಥಾನದ ಕಲ್ಯಾಣವನ್ನು ಸೇವೆ ಸಮಯು ನಿಕ್ಕಿದಾಗ ಸಾಧಿಸಲು ಪ್ರಯತ್ನ ಪಡಬಹುದು. ಇದರ ರಾಷ್ಟ್ರೀಯ ಸಭೆಗೆ ಅದು ಜೀವನಾಧಾರವಿದು” ಈ ಪ್ರಕಾರ ಮಹಾತ್ಮರು ನುಡಿದು ಪ್ರಶ್ನೆಗೆ ಉತ್ತರ ಹೇಳಿದರು. ೧೦-೧೨ ಪ್ರಶ್ನೆಗಳು ಕೇಳಲ್ಪಟ್ಟವು ೨-೩ ಪ್ರಶ್ನೆಗಳ ಉತ್ತರದಲ್ಲಿ ರಾಜಶಾಸನಗಳಿಗೆ ನಿಷೇಧಿಸುವ ಮುಂಚೆ ಆಯಾ ಪ್ರಾಂತಗಳ ಹೋಗ ತಯಾರಿದ್ದೇನೆಂದು ಹಿಟ್ಟು ಹೇಳಿದರು “ಆತುರ ಸಿದ್ಧನಿದ್ದೇನೆ, ನಾಳೆ ಹೊರಡುತ್ತೇನೆ, ಆದರೆ ಸರಕಾರವು ನನಗೆ ಹೋಗಗೊಡುವದಿಲ್ಲ. ನೀವು ಯಾರಾದರೊಬ್ಬರು ಮಧ್ಯಸ್ಥರಾಗಿ ನನಗೆ ಅಪ್ಪಣೆ ತರಿಸಿಕೊಡಬಹುದು. ಗವರ್ನರನಿಗೆ ಹೋಗಲು ಇರ್ವಿನ್ ದೊರೆಗಳ ಕಡೆ ಬಿನ್ನೈಸಿಕೊಂಡೆ ಅವರು ಅಪ್ಪಣೆ ಕೊಡಲಿಲ್ಲ ವಿಲಿಂಗಡನ್ ದೊರೆಗಳ ಕಡೆ ಕೇಳಿಕೊಂಡೆ, ಅವರೂ ಒಪ್ಪಲಿಲ್ಲ ಸರಕಾರದ ನಿರ್ಬಂಧಗಳಿಗೊಪ್ಪಿ ಸಂಚರಿಸಲು ಮಾತ್ರ ನಾನೊಪ್ಪುವದಿಲ್ಲ. ಅನಿರ್ಬಂಧವಾಗಿ ನನಗೆ ಸಂಚರಿಸಗೊಡಬೇಕು. ರೆಕ್ಕೆ ಕಡಿದು ಹಕ್ಕಿಗೆ ಹಾರ ಹೇಳಬಹುದೇನು? ಪಠಾಣರು ಕೊಂದರು ಅಬ್ದುಲ್ ಗಫ್ಫರಖಾನರಿಗೆ ನಾನು ಮನ ಒಲಿಸಬಲ್ಲೆ” ಹೀಗೆ ಮಹಾತ್ಮರು ನುಡಿದರು. ಬಂಗಾಲದಲ್ಲಿ ಕ್ರಾಂತಿಕಾರಕ ಸಂಘಗಳಿರುವವೆಂದು ನಿಮಗೆ ಖಾತ್ರಿಯಾದರೆ ರಾಜಶಾಸನಗಳನ್ನು ನೀವು ಸಮರ್ಥಿಸುವರೇನೆಂದು ಕೇಳಲು, ಮಹಾತ್ಮರು ನುಡಿದದ್ದೇನಂದರೆ— ರಾಜದ್ರೋಹದ ಅರ್ಥ ಎಳೆದ ಹಾಗೆ ಬರುತ್ತದೆ. ಆದರೆ ಸಮಾಜವ್ಯವಸ್ಥೆಗೆ ಭಂಗ ತರುವ ಪ್ರಕಾರವೇ ರಾಜದ್ರೋಹವೆಂದು ನಾನು ತಿಳಿಯುತ್ತೇನೆ ಕಾಯಿದೆಯು ಸಾಮಾನ್ಯ ಕ್ರಮದಿಂದಲೇ ಇವುಗಳ ಪಾರುಪತ್ಯನಾಗಬೇಕು. ಆದರೆ ಐವರ ಅಪರಾಧಕ್ಕಾಗಿ ೫೦೦೦೦ ಜನರಿಗೆ ಶಾಸನ ಮಾಡುವ ಕ್ರಮವೆಂತಹದು? ನಾನು ಭಾರತ ಮಂತ್ರಿಯಾಗಿದ್ದರೆ, ಸರ್ವಾಧಿಪತಿಯಾಗಿದ್ದರೆ, ರಾಜಶಾಸನಗಳಿಗಾಗಿ ಅಧಿಕಾರ ಕೇಳುವ ಬಂಗಾಲದ ಗವರ್ನರರಿಗೆ ರಾಜನಾಮೆ ಕೊಡಹೇಳುತ್ತಿದ್ದೆ. ಪ್ರಾಂತಿಕ ಪ್ರಮುಖರಿಗೆ ಕರೆ ಕಳುಹಿ ಅವರೊಡನೆ ಗುಪ್ತ ಆಲೋಚನೆ ಮಾಡಿ ಅಸಮಾಧಾನದ ಮೂಲ ಕಾರಣವನ್ನು ಪರಿಶೋಧಿಸುತ್ತಿದ್ದೆ. “ಬ್ರಿಟಿಶ ಪ್ರಾಣರಕ್ಷಣೆಯಾಗಬೇಕೆಂಬ ಮಾತು ನಿಜ ಆದರೆ, ಅದಕ್ಕಾಗಿ ರಾಜಶಾಸನಗಳನ್ನು ಹೊರಡಿಸುವದರಲ್ಲಿ ಬ್ರಿಟಿಶರು ರಕ್ಷಣೆ ಪಡೆಯಲು ಅನರ್ಹರೆಂದು ನನ್ನ ಅಂದೋಲನ. ರಾಜಶಾಸನಗಳ ಮೂಲಕ ರಾಷ್ಟ್ರಘಟನೆಯ ವಿಚಾರ ಮಾಡಲು ತೊಂದರೆಯಾಗಿದೆ. ರಾಜನಿಷ್ಠರು ಸರಕಾರಕ್ಕೆ ಬೆಂಬಲಕೊಟ್ಟು ಇವುಗಳಿಗೆ ತಕರಾರುಗಳಿಲ್ಲವೆಂದು ತಿಳಿಯಬೇಡಿ. ಅಂತರಂಗದಲ್ಲಿ ಅವರು ಇವುಗಳಿಗೆ ಒಪ್ಪುವದಿಲ್ಲ. ಹೀಗೆ ಪ್ರಶ್ನೋತ್ತರಗಳಾದ ಬಳಿಕ, ಆಭಾರಮನ್ನಣೆಯಾಗಿ ಸಭೆಯು ಮಧ್ಯರಾತ್ರಿ ಮುಗಿಯಿತು. ಮಂಗಳವಾರದಿಂದ ಮಣಿಭುವನದಲ್ಲಿ ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರಿತು. ಮಹಾತ್ಮರು ಬೇರೆ ಬೇರೆ ಪ್ರಾಂತಗಳ ಪ್ರಮುಖರೊಡನೆ ಅಲ್ಲಲ್ಲಿಯ ಸ್ಥಿತಿಗತಿಗಳನ್ನು ಕೇಳಿಕೊಂಡರು. ಕಾರ್ಯಕಾರಿ ಮಂಡಳದಲ್ಲಿ ಕಾರ್ಯಕ್ರಮವನ್ನು ಆಲೋಚಿಸಿದರು. ಮಂಗಳವಾರ ಸಂಜೆ ಮಾತನಾಡುವದಕ್ಕಾಗಿ ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳಿಗೆ ತಂತಿ ಮಾಡಿದರು. ಅದಕ್ಕೆ ಗುರುವಾರ ಮಧ್ಯಾಹ್ನ ೩ ಘಂಟೆಗೆ ಉತ್ತರ ಬಂತು. ಮಹಾತ್ಮರು ರಾತ್ರಿ ೨ ಗಂಟೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಕರೆದು ವಿಲಿಂಗಡನ್‌ರೊಡನೆ ನಡೆದ ತಂತಿ ವ್ಯವಹಾರವನ್ನು, ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಠರಾವನ್ನೂ ಕೊಟ್ಟರು. ಕ್ರಾನಿಕಲ್ ಪತ್ರಿಕಾ ಪ್ರತಿನಿಧಿಗಳು ಕ್ರೈಸ್ತ ಯುಗಾದಿಯ ಸಂದೇಶವೇನೆಂದು ಕೇಳಲು, ಮಹಾತ್ಮರು ನುಡಿದದ್ದೇನಂದರೆ ಕಾಂಗ್ರೆಸ್ ಕಾರ್ಯಕಾರಿ ಮಂಡಳದ ಠರಾವೇ ನನ್ನ ಸಂದೇಶವೆಂದು ನಗೆಮೊಗದಿಂದ ನುಡಿದರು. ಈ ವೃತ್ತಾಂತವನ್ನು ದೇಶಕ್ಕೆ ಕೊಟ್ಟಿದೆ.

* * *

ಮ॥ ಗಾಂಧಿಯವರ

ಗೀತಾ-ಬೋಧ.

ಅ — ಶ್ರೀ॥ ಹಣಮಂತರಾವ ಮಾಂಜರೇಕರ

ಬ್ರಹ್ಮಾರ್ಪಣ-ಯೋಗ.

೪ನೇ ಅಧ್ಯಾಯ

— ೪ —

ಭಗವಂತನು ಅರ್ಜುನನಿಗೆ ಅಂದದ್ದು —

ನಾನು ನಿಂಗೆ ಹೇಳಿದ ನಿಷ್ಕಾಮ ಕರ್ಮಯೋಗವು ಹಳೆಯ ಕಾಲದಿಂದ ನಡೆದುಕೊಂಡು ಬಂದಿರುವದು. ಅದೇನು ಹೊಸದಲ್ಲ. ನೀನು ನನ್ನ ಪ್ರಿಯ ಭಕ್ತನಾಗಿರುವದರಿಂದಲೂ ಧರ್ಮಸಂಕಟದಲ್ಲಿ ಬಿದ್ದಿರುವದರಿಂದಲೂ ಅದರೊಳಗಿಂದ ನಿನ್ನನ್ನು ಪಾರಗಡೆ ಮಾಡಲಿಕ್ಕೆಂದು ಅದನ್ನು ನಿನಗೆ ಹೇಳಿದೆನು. ಧರ್ಮಗ್ಲಾನಿಯಾಗಿ ಅಧರ್ಮವು ಹಬ್ಬಲು ನಾನು ಅವತರಿಸುತ್ತೇನೆ. ಭಕ್ತರನ್ನು ಪಾಲಿಸಿ ಪಾಪಿಗಳನ್ನು ಸಂಹರಿಸುತ್ತೇನೆ. ಈ ನನ್ನ ಮಾಯೆಯನ್ನು ತಿಳಿದವನಿಗೆ ಅವತಾರವು ಅಳಿಯುವದೆಂಬ ನಂಬಿಗೆಯು ಇದ್ದೇ ಇರುವದು. ಈಶ್ವರನು ಸಜ್ಜನರ ಪಾಲಕನೆಂದು ಅವನ ಶ್ರದ್ಧೆಯು ಇರುತ್ತದೆ. ಆದುದರಿಂದಲೆ ಅವನು ಧರ್ಮದ ತ್ಯಾಗಮಾಡದೆ [illegible] ನನಗೆ [illegible]ತ್ತಾನೆ. ನನ್ನ ಚರಿತ್ರೆಯನ್ನು ವಿಚಾರಿಸುವದರಿಂದಲೂ, ನನ್ನನ್ನು ಧ್ಯಾನಿಸುವದರಿಂದಲೂ ಅವನು ಕಾಮಕ್ರೋಧಾದಿಗಳಿಂದ ಮುಕ್ತನಾಗಿ [illegible], ಜ್ಞಾನದಿಂದಲೂ ನಿಷ್ಕಲಂಕನಾಗಿ [illegible]ತ್ತಾನೆ. ಮನುಷ್ಯನು ಮಾಡಿದಂತೆ ಉಣ್ಣುತ್ತಾನೆ. ನನ್ನ ನಿಯಂತ್ರಣೆಗಳನ್ನು ಮೀರಿ ನಡೆಯುವದು ಯಾರಿಗೂ ಶಕ್ಯವಿಲ್ಲ. ಗುಣಕರ್ಮಗಳ ಭೇದಕ್ಕನುಸರಿಸಿ ನಾನು ನಾಲ್ಕು ವರ್ಣಗಳನ್ನು ನಿರ್ಮಿಸಿದ್ದೇನೆ. ಆದರೂ ನಾನು ಅವುಗಳ ಕರ್ತನೆಂದು ತಿಳಿಯಬೇಡ. ಯಾಕಂದರೆ ಈ ಕೆಲಸದಿಂದ ಫಲಪ್ರಾಪ್ತಿಯಾಗಬೇಕೆಂದು ನಾನು ಬಯಸುವದಿಲ್ಲ. ಅದರ ಗರ್ವ ಸ್ಪರ್ಶವೂ ನನಗಿಲ್ಲ. ಇದು ಈಶ್ವರ ಮಹಿಮೆಯೆಂದು ತಿಳಿಯಬೇಕು. ಜಗತ್ತಿನಲ್ಲಿ ನಡೆದು ಬಂದಿರುವ ವ್ಯವಸ್ಥೆಯು ಈಶ್ವರನ ನಿಯಮಗಳಿಗೆ ಅಧೀನವಾಗಿದ್ದರೂ ಈಶ್ವರನು ಅದರಿಂದ ಅಲಿಪ್ತನಾಗಿದ್ದಾನೆ. ಆದುದರಿಂದ ಅವನು ಕರ್ತನೂ ಇದ್ದಾನೆ, ಅಕರ್ತನೂ ಇದ್ದಾನೆ. ಈಶ್ವರನು ಅಲಿಪ್ತನಾಗಿದ್ದಾನೆ. ಅನಾಸಕ್ತನಾಗಿದ್ದು, ಫಲೇಚ್ಛೆಯನ್ನು [illegible] ಮನುಷ್ಯನು [illegible]ದಲ್ಲಿ ಮನುಷ್ಯನು ಸಹ ನಿಷ್ಕಾಮನಾಗಿದ್ದರೆ ಮೋಕ್ಷದ ಪಟ್ಟಕ್ಕೆ ಏರುವನು. ಅಂಥವನಿಗೆ ಕರ್ಮದಲ್ಲಿ ಅಕರ್ಮವು ಕಾಣುತ್ತದೆ. [illegible] ಕರ್ಮದ ಜ್ಞಾನವು ಅವನಿಗೆ ಬೇಗ ಉಂಟಾಗುತ್ತದೆ. ಯಾವ ಕರ್ಮದ ಬಗ್ಗೆ ಕಾಮನೆಯು ಇರುವದೋ, ಹಾಗೂ ಇಚ್ಛೆ ಇದ್ದ ಹೊರತು ಯಾವ ಕಾರ್ಯವು ಆಗುವದಕ್ಕೆ [illegible] ತ್ಯಾಜ್ಯವೆಂದು ತಿಳಿದು [illegible] ಇದ್ದು ಕರ್ಮಗಳನ್ನು ಅಲಿಪ್ತನಾಗಿ ಮಾಡುವದು ಯಾರಿಗೂ ಸಾಧ್ಯವಿಲ್ಲ. ಸಂಶಯವನ್ನು ತೊರೆದು ಕರ್ತವ್ಯ ಕರ್ಮವನ್ನು ಮಾಡುತ್ತಿರುವ ಮನುಷ್ಯನು ಜ್ಞಾನರೂಪದ ಅಗ್ನಿಯಲ್ಲಿ ಕರ್ಮಬಂಧನಗಳನ್ನು ಸುಟ್ಟು [illegible] [illegible] ಯಜ್ಞಗಳು ಸಹಜವಾಗಿ ನಡೆಯುವಂತೆ ಅಂಥವನ ವ್ಯವಹಾರಗಳು ಸಹಜವಾಗಿ ನಡೆಯುತ್ತವೆ. ಅವನು ಅವನ್ನು ಮಾಡುತ್ತೇನೆ ಎನ್ನುವದರ ಅಭಿಮಾನವಾಗಲಿ ತಿಳಿವಾಗಲಿ ಅವನಿಗೆ ಇರುವದಿಲ್ಲ. ಅವನು ನಿಮಿತ್ತಮಾತ್ರನಾಗಿರುತ್ತಾನೆ. ಕೆಲಸವು [illegible] ಅದರದು ಅವನಿಗೇನೂ ಇಲ್ಲ. ಅವನು ಪರನಿರ್ಭರನು ಆಗುವದಿಲ್ಲ, [illegible]ನೂ ಆಗುವದಿಲ್ಲ. ಅವನ ಯಾವತ್ತು ಕರ್ಮಗಳು ಯಜ್ಞರೂಪವಾದ ಸೇವೆಗಾಗಿಯೇ ಇವೆ. ಎಲ್ಲ ಕ್ರಿಯೆಗಳಲ್ಲಿ ಅವನು ಈಶ್ವರನನ್ನೇ ಕಾಣುತ್ತಾನೆ. ಹಾಗೂ ಅಂತ್ಯದಲ್ಲಿ ಈಶ್ವರನಿಗೇ ಮುಟ್ಟುತ್ತಾನೆ.

ಯಜ್ಞದ ಬೇರೆ ಬೇರೆ ತರಗಳನ್ನು ಬಣ್ಣಿಸಿದ್ದಾಯಿತು. ಅವೆಲ್ಲವುಗಳಲ್ಲಿ ಚಿತ್ತಶುದ್ಧಿ-ಸೇವೆ ಈ ತತ್ವಗಳೇ ಅಡಕವಾಗಿವೆ. ಇಂದ್ರಿಯ ದಮನವು ಒಂದು ಪ್ರಕಾರದ ಯಜ್ಞವು. ದಾನಮಾಡುವದು ಯಜ್ಞದ ಇನ್ನೊಂದು ಪ್ರಕಾರವು. ಚಿತ್ತಶುದ್ಧಿಗಾಗಿ ಪ್ರಾಣಾಯಾಮಾದಿಗಳನ್ನು ಅಭ್ಯಾಸಿಸುವದು ಒಂದು ಯಜ್ಞವೇ ಆಗಿರುವದು. ಇದರಿಂದ ಜ್ಞಾನವನ್ನು [illegible]ಗಳಿಂದ ಮಾಡಿಕೊಳ್ಳಬೇಕು. ವಿನಯ ಜಿಜ್ಞಾಸೆ ಸೇವೆ ಇವುಗಳ ಯೋಗದಿಂದ ಗುರುಗಳ ಸತ್ಸಂಗವು ಲಭಿಸುವದು. ಬಹುಜನರು ಯಜ್ಞದ ಸ್ವರೂಪವನ್ನು ತಿಳಕೊಳ್ಳದೆ ಒಂದು ವಿಧವಾದ ಕಾರ್ಯಕಲಾಪಗಳಲ್ಲಿ ತೊಡಗಿ ಅರ್ಥವಿಲ್ಲದ [illegible] ಅಂತೆಯೇ [illegible]ವನ್ನು ಪೂರ್ಣ ಯಜ್ಞವೆಂದು ಮಾಡುವದು ಅಶಕ್ಯವಿದೆ.

ಈ ಜ್ಞಾನವು ಬುದ್ಧಿಜ್ಞಾನವಲ್ಲ. ಈ ಜ್ಞಾನದಲ್ಲಿ [illegible] ಸಾಧನಗಳು [illegible] ಇಲ್ಲ. ಶ್ರದ್ಧೆಯೊಳಗಿಂದ [illegible] ಸ್ವಾಭಾವಿಕವಾಗಿ [illegible] ಅನುಭವವು ಬರುತ್ತದೆ. ಈ ಜ್ಞಾನದ ಯೋಗದಿಂದ ಮನುಷ್ಯನು ಪ್ರಾಣಿಮಾತ್ರರನ್ನು ತನ್ನಂತೆಯೇ [illegible] ಹಾಗೂ ತನ್ನ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಅವರೆ ಕೆಲವು ಸ್ತ್ರೀಯರ ಯೌವನಗಳೂ ತಮ್ಮ ಕೂದಲುಗಳ [illegible] ಮಾಡುತ್ತಾರೆ. ಕೂದಲು ಮನೋಹರವಾಗಿರದೆ ಇದ್ದರೆ, [illegible] ಲಕ್ಷ ಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡುವಿರಿ. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಇಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ	೧—೦—೦
ಅಂಚೆವೆಚ್ಚ ,	೦—೬—೦
೩ ಬಾಟಲಿಗಳಿಗೆ ,,	೨—೧೦—೦
ಅಂಚೆವೆಚ್ಚ ,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

— 0 —

೧ ಔಂಸಿಗೆ ರೂ	೩—೦—೦
[illegible] ಸಿಗೆ "	೧ ೪ ೦
ಡ್ರಾಮಿಗೆ ,,	೦—೧೩—೦
ಅಂಚೆವೆಚ್ಚ ,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಪರಿಮಳವನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧದ್ರವ್ಯಗಳು ಸಿಗುತ್ತವೆ. ಅವರ ಅವುಗಳಿಗೆ ಹೂವಿನ ಸಹಜ ಪರಿಮಳ [illegible], ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯದ [illegible] ಹೂವಿನ ಸಹಜ ಪರಿಮಳವು [illegible] ಒಟ್ಟೋ-ದಿಲ್ ಬಹಾರದಿಂದ ಉತ್ತಮವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX 2082 **BOMBAY No**

[illegible]

ಈ ಎರಡು [illegible]

[illegible] ಗಿದೆ ಈ ಪ್ರಯತ್ನವು

[illegible]
[illegible]
ತಾ. [illegible]

Siromani Udipi Narayanacharya

CHAUKHAMBA BENARES CITY

UDIPI CC
BENARES CITY

[illegible] 108 [illegible] 1ಕ್ಕೆ 0-6-0 [illegible] 10 [illegible] 32 [illegible] 1ಕ್ಕೆ ರೂ 0-8-0 [illegible] 100 [illegible] 1ಕ್ಕೆ ರೂ 3-8-0 [illegible] 0-1-0 [illegible] 1 [illegible] 1 [illegible]

ಶಿರೋಮಣಿ ನಾರಾಯಣಾಚಾರ್ಯ

ಚೌಖಾಂಬಾ, ಕಾಶೀ ಕ್ಷೇತ್ರ

ಬಾಲಜೀವನ

ಈ ಔಷಧವು [illegible] (Rickets) [illegible] (Pain in the liver), [illegible] (Hernia), [illegible] (Liver complaint) [illegible] 'ಬಾಲಜೀವನ' [illegible]

ಬಾಟ್ಲಿ ಕ್ರಯ ರೂ ೧-೪-೦ [illegible]

ಡಬ್ ಸೆಟ್ ಎಂಡ್ ಕೋ.

[illegible] ಕುಮಟಾ [illegible]

[illegible]

ಸುಗಂಧಸುಂದರ [illegible]

[illegible]

ಕೆರೇಕರ ದಿವ್ಯೌಷಧಿ ವಖ್ಯಾರ, ಕುಮಟಾ
(ಉ ಕನ್ನಡ)

ನಾರಿನ ಸ್ವೈರಿಯು.

[illegible]

[illegible] ಜೇ [illegible], ಸೋಲ್ಲಾಪುರ.

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ ಲಿಮಿಟೆಡ್

ಸ್ಥಾಪನೆ 1908.

[illegible]

ಮಲ್ಟಿಪಲ್ ಬೆನಿಫಿಟ್ [illegible]

[illegible]

Kumta Agents—
D K NAYAK Esq
A S PAI Esq
Honavar Agent
DR V PARBHU Esq

K. Padmanabha Rao & Sons.,
BELGAUM
Chief Agents for
Karnatak Districts & S M States

ಸನ್ ಲಾ ಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.

[illegible]

[illegible] ಕಾನಡಾ ಬಿಲ್ಡಿಂಗ, ಹೋರ್ನಬಿ ರೋಡ ಮುಂಬಯಿ

[illegible]

The District Manager,
Canada Building,
Hornby Road, BOMBAY

OR

Mr S. B. Rege,
Chief Agent,
171 Civil Lines
Camp BELGAUM

ಮ॥ ಗಾಂಧಿಯವರ

ಗೀತಾ-ಬೋಧ.

ಅ — ಶ್ರೀ॥ ಹಣಮಂತರಾವ ಮಾಂಜರೇಕರ

ಸನ್ಯಾಸ-ಯೋಗ.

೫ನೇ ಅಧ್ಯಾಯ

ಅರ್ಜುನನು ಅಂದದ್ದು— ಜ್ಞಾನವು ಮಿಗಿಲಾದದ್ದು ಎಂದು ನೀನು ಅನ್ನುತ್ತೀ ಆದುದರಿಂದ ಕರ್ಮ ಮಾಡುವ ಆವಶ್ಯಕತೆ ಇಲ್ಲ, ಸನ್ಯಾಸವೇ ಲೇಸೆಂದು ನನಗೆ ಅನಿಸುತ್ತದೆ ಆದರೆ ತಿರುಗಿ ಕರ್ಮಯೋಗವನ್ನು ಹೊಗಳುತ್ತೀ, ಅದರ ಮೇಲಿಂದ ಕರ್ಮಯೋಗವು ಚಲೋದೆಂದು ಅನಿಸಹತ್ತುತ್ತದೆ ಇವೆರಡರಲ್ಲಿ ಯಾವದು ಹೆಚ್ಚು ಶ್ರೇಯಸ್ಕರವೆಂಬದನ್ನು ನಿಶ್ಚಯವಾಗಿ ನನಗೆ ಹೇಳು, ಅಂದರೆ ನನಗೆ ಹಾದಿಯು ಸಿಗುವದು

ಇದನ್ನು ಕೇಳಿ ಭಗವಂತನು ಅಂದದ್ದು—

“ಸನ್ಯಾಸವೆಂದರೆ ಜ್ಞಾನವು ಕರ್ಮಯೋಗವೆಂದರೆ ನಿಷ್ಕಾಮ ಕರ್ಮವು ಈ ಎರಡೂ ಮಾರ್ಗಗಳು [illegible] ಆದರೆ ನನ್ನ ಅಭಿಪ್ರಾಯದ [illegible] ದೃಷ್ಟಿ, ಲೋಕಗ ಅಂದರೆ ಅನಾಸಕ್ತಿಪೂರ್ವಕವಾದ ಕರ್ಮವೇ ನನಗೆ [illegible] ಸನ್ಯಾಸವು ಯಾವಾತನು ಯಾರನ್ನೂ ದ್ವೇಷಿಸುವದಿಲ್ಲವೋ, [illegible] ದ್ವಂದ್ವಗಳಿಂದ ಅಲಿಪ್ತನಾಗಿ ಇರುವನೋ ಅವನು ಸನ್ಯಾಸಿಯಾಗಿಯೇ ಇದ್ದಾನೆ— ಇಂಥವನು ಕರ್ಮಗಳನ್ನು [illegible] ಮಾಡಿದರೂ [illegible] ತ್ಯಾಗಿಯೇ [illegible] ಇಲ್ಲದ ಜನರು ಜ್ಞಾನ-ಯೋಗಗಳನ್ನು ಭಿನ್ನವಾಗಿ ಭಾವಿಸುತ್ತಾರೆ ಜ್ಞಾನಿಯ ದೃಷ್ಟಿಯ [illegible] ಎರಡೂ ಮಾರ್ಗಗಳಿಂದಲೂ [illegible] ಒಂದೇ [illegible] ಒಂದೇ ಧ್ಯೇಯದ [illegible] ಪ್ರಾಪ್ತವಾಗುತ್ತದೆ ಆದುದರಿಂದ ಅವುಗಳ ಏಕರೂಪತೆಯನ್ನು ಅರಿತವನೇ [illegible] ಜ್ಞಾನವು [illegible] ಸಂಕಲ್ಪರಹಿತ [illegible] ಸಿದ್ಧಿಯನ್ನು [illegible] ಅವನಿಗೆ ಬಾಹ್ಯ ಕರ್ಮಗಳ [illegible] ಆವಶ್ಯಕತೆ ಇಲ್ಲ [illegible] ಜನಕನ [illegible] ಬೇರೆ ಜನರ ಕೆಲಸವು [illegible] ನೋಡಿಸುವ [illegible] ಜನಕನ ಸಂಕಲ್ಪದಲ್ಲಿಯೇ [illegible] ನೋಡಿಸುವ ಕ್ರಿಯೆಯು [illegible] ಯಾಕಂದರೆ ಅವನ [illegible] ಅವನ [illegible] ದಲ್ಲಿಯೇ ಇದ್ದರೆ [illegible] ಉಳಿದ ಜನರೆಲ್ಲರೂ ಅವನೊಳಗೇ [illegible] ಇಲ್ಲ [illegible] ಜನಕನನ್ನು [illegible] ಇದ್ದರೂ ಆದರೆ ಎಲ್ಲರಿಗೆ ಒಮ್ಮೆಲೇ ಜನಕರಾಗ [illegible] ಜನಕನ [illegible] ಅತ್ಯಂತ [illegible] ಜನರೊಳಗೆ ಒಬ್ಬೊಬ್ಬನೇ [illegible] ಗಳಲ್ಲಿ [illegible] ನಿಷ್ಕಾಮ ಕರ್ಮಗಳನ್ನು [illegible] ಹೋದ [illegible] ಅಲ್ಪ [illegible] ಬೆಳೆಯ [illegible] ಕರ್ಮಗಳು [illegible] ನಿಶ್ಚಯವಾಗಿ [illegible] ಆತನಿಗೆ [illegible] ಅವನು [illegible] ಮಾರ್ಗದಲ್ಲಿಯೇ [illegible] ಆತನ [illegible] ಸಂಕಲ್ಪದಲ್ಲಿಯೇ [illegible] ಅತಿಶಯ ವೇಗವುಳ್ಳ [illegible] ದು ಪನ್ನುತ್ತ ಸ್ಥಿರವಾಗಿ [illegible] ಅವನು ಜಗತ್ತಿಗೆ [illegible] ಮೇಲಿಂದ [illegible] ನು [illegible] ನಡಲ್ಲಿನ್ನು [illegible] ಸ್ಥಿತಿಯನ್ನು [illegible] ಕಲ್ಪನೆಯಿಂದ [illegible] ಅದರ ಅನುಭವವನ್ನು [illegible] ಆದುದರಿಂದಲೇ ಕರ್ಮಯೋಗದ [illegible] ಯನ್ನು [illegible] ನಿಷ್ಕಾಮ ಕರ್ಮದಿಂದಲೇ ಸನ್ಯಾಸದ ಫಲವನ್ನು ಪಡೆಯುತ್ತಾರೆ [illegible] ಎಲ್ಲವೂ [illegible] ಸನ್ಯಾಸ [illegible] ಸಂಭವವಿದೆ [illegible] ನು [illegible] ಕಾರಣ ಸರ್ವವನ್ನು [illegible] ಯಾಗಿ ಕರ್ಮಗಳನ್ನು [illegible] ವ ಮನವನ್ನು [illegible] ಇಂದ್ರಿಯಗಳನ್ನು [illegible] ಎಲ್ಲ ಜೀವಿಗಳೊಡನೆ [illegible] ತನ್ನಂತೆಯೇ [illegible] ಕರ್ಮಗಳನ್ನು ಮಾಡುತ್ತಿದ್ದರೂ [illegible] ಅಂದರೆ ಅವುಗಳ [illegible] ಎಲ್ಲ ಕೆಲಸಗಳನ್ನು, ಅವನು [illegible] ಇಂದ್ರಿಯಗಳ [illegible] ಅವನು [illegible] ಆರೋಗ್ಯದಿಂದಿದ್ದವನ [illegible] ಶರೀರದೊಳಗಿನ ಪ್ರಕೃತಿಗಳು [illegible] ನಡೆಸುತ್ತವೆ ಅವರ [illegible] ಅವನು [illegible] ಬದಿ [illegible] ಕೆಲಸಗಳನ್ನು [illegible] ಅಂದರೆ [illegible] ಮಾಡುತ್ತಿದ್ದರೂ [illegible] ಅವನು [illegible] ಮಾಡುತ್ತಿದ್ದರೂ [illegible] ಶ್ರೇಷ್ಠ [illegible] ಕರ್ಮಗಳನ್ನು [illegible] ತ್ಯಾಗ [illegible] ಕರ್ಮದಿಂದ [illegible] ಆಸಕ್ತಿ [illegible] ಫಲವನ್ನು [illegible] ಪ್ರಕೃತಿಯ [illegible] ಜ್ಞಾನವನ್ನು [illegible] ಕರ್ಮಗಳು [illegible] ಅಜ್ಞಾನವನ್ನು [illegible] ಕರ್ಮಗಳು [illegible] ಎಲ್ಲರ [illegible] ಹೋಗುತ್ತದೆ [illegible] ಆತನು [illegible] ಯಾವನು [illegible] ಅಂದರೆ ಅವನ [illegible] ಮಾಡುತ್ತಾನೆ [illegible]

ಮಾನವನ್ನು ಕೊಡಲಿಕ್ಕೆ ಇಲ್ಲವೆ ಇನ್ನೊಬ್ಬನಿಗೆ ಹೇಳಿ ಸೆಂದು ಹೇಳಲಿಕ್ಕಿಲ್ಲ

ಯರವಡಾ
ಸೋಮ ಪ್ರಭಾತ
ತಾ ೧-೧೨-೩೦

ಜಾಹೀರ ನೋಟೀಸು.

ವರದಾ ಕೋಂ ರಾಮಕೃಷ್ಣ ಭಟ್ಟಾ ಸಾ. [illegible] ಪ್ರಾಂತದ [illegible] ತಾಲೂಕ ಸಿದ್ದಾಪುರ ಇವಳು ಇದರ ಮೂಲಕ ತಿಳಿಸುವದರಲ್ಲಿ ಬರುತ್ತದಲ್ಲಾ— ನನ್ನ [illegible] ರಾಮಕೃಷ್ಣ ನಾರಾಯಣ ಭಟ್ಟಾ ಇವರು [illegible] ೧೧ ವರ್ಷಗಳ ಹಿಂದೆ ಮರಣಪಟ್ಟರು [illegible] ನನ್ನ ಪತಿಗಳ [illegible] ಆಸ್ತಿಗೆ [illegible] ನಾನೇ ವಾರಸದಾರ ವ ಹಕ್ಕುದಾರಳಿದ್ದು [illegible] ನನ್ನ [illegible] ನಾನು [illegible] ನನ್ನ ತಾಯಿ ನನ್ನ [illegible] ನನ್ನ ಹೆಸರು [illegible] ನಾನು [illegible] ಇಲ್ಲದಿರಲಿ, ಸರಿಯಾಗಿ ನನಗೆ ಬೇರೆ [illegible] ನನ್ನ [illegible] ಯೋಗ್ಯವಲ್ಲ [illegible] ನನ್ನ [illegible] ನನ್ನ [illegible] ನನ್ನ ಬಗ್ಗೆ [illegible] ನನ್ನ [illegible] ತಿಳಿಯುವ [illegible] ಮುದ್ರೆ ಹಾಕಿದ ತಾ ೩—೧—೧೯೩೨

× ಇದು [illegible] ಮುದ್ರೆ ವರದಾ ಕೋಂ ರಾಮಕೃಷ್ಣ ಭಟ್ಟಾ ಇವಳದು.

The Bombay Provincial
Cooperative Insurance
Society Ltd
9 *Bakehouse Lane*, FORT BOMBAY,
Chief Organisers for the Presidency
JANI KULKARNI & CO

ಈ ಸೊಸೈಟಿಯನ್ನು ಮುಂಬಯಿಯೊಳಗಿನ ಪ್ರಸಿದ್ಧ ಸಹಕಾರಿಗಳು ಸ್ಥಾಪಿಸಿದ್ದಾರೆ ಸರಕಾರಿ [illegible] ರಜಿಸ್ಟ್ರಾರರು ಇದರ ಮೇಲ್ವಿಚಾರಣೆ ಮಾಡುತ್ತಾರೆ

ರೂ ೧೦೦೦ರಿಂದ ರೂ ೫೦೦೦ರ ತನಕ ಡಾಕ್ಟರ ಪರೀಕ್ಷೆಯಿಲ್ಲದೆ ವಿಮಾ ಪತ್ರಗಳು ಕೊಡಲ್ಪಡುತ್ತವೆ

ರೂ ೫೦೦೦ರಿಂದ ರೂ ೨೦೦೦೦ದ ವರೆಗೆ ವಿಮಾ ಪತ್ರಗಳನ್ನು ಪಡೆಯಬೇಕಾದರೆ, ಡಾಕ್ಟರರಿಂದ ಪರೀಕ್ಷೆಯಾಗಬೇಕು —

[illegible] ಸೂಸ್ಯಾಯಿಟಿಯ ಆಫೀಸಿನಂತ [illegible]

ಏಜನ್ಸಿ [illegible] ಮತ್ತು [illegible]

ಏಜನ್ಸಿ ಕೊಡುವಾಗ ಸಹಕಾರಿ ಸಂಘಗಳಿಗೆ
[illegible]

ಡಿ. ಎಸ್. ಕುಲಕರ್ಣಿ,
[illegible] ಕಾರವಾರ

ಮಹಾತ್ಮರಿಗೆ ಹೇಗೆ ಸೆರೆಹಿಡಿದರು?

(ನಮ್ಮ ಪ್ರತಿನಿಧಿಗಳಿಂದ)

ಮುಂಬಯಿ, ತಾ. ೮-೧-೧೯೩೨

ಶನಿವಾರ ರಾತ್ರಿ ಮಹಾತ್ಮರು 'ಮಣಿಭುವನ'ದಲ್ಲಿ ೪ನೇ ಉಪ್ಪರಿಗೆಯ ಮೇಲೆ ಮುದ್ದಾದ ಪರ್ಣಕುಟೀರದಲ್ಲಿ ಮಲಗಿದ್ದರು. ಆ ದಿನ ಮಧ್ಯರಾತ್ರಿ ತನಕ ಮಹಾತ್ಮರು ವಿಚಾರಮಗ್ನರಾಗಿ ನೂತನ ಕಾಂಗ್ರೆಸ ಕಾರ್ಯಕಾರಿ ಮಂಡಳವು ಬೆಳೆಯಿಸಬೇಕಾದ ಅವರೆ, ಕಾರ್ಯಕಾರಿ ಮಂಡಳದ ಪರಂಪರೆಯನ್ನು ಮುಂದರಿಸುವದಕ್ಕಾಗಿ ಅನುಕ್ರಮವಾಗಿ ಯಾವ ಯಾವ ಅಧಿಕಾರಿಗಳಾಗಿ ನೇಮಿಸತಕ್ಕದ್ದು? ಎಂಬುದರ ಬಗ್ಗೆ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರೊಡನೆ ಮಹಾತ್ಮರು ಆಲೋಚಿಸಿದರು. ಶೇಟ ಜಮನಾಲಾಲಜಿಯವರು ಒಂದು ಯಾದಿಯನ್ನು ತಯಾರಿಸಿದರು. ಅದನ್ನು ಮಹಾತ್ಮರು ಪರ್ಯಾಲೋಚಿಸಿದರು. ಕೆಲವು ತಿದ್ದುಪಾಟುಗಳನ್ನು ಸೂಚಿಸಿದರು, ಮತ್ತು ಮಲಕೊಂಡರು.

ಸುಮಾರು ೩ ಘಂಟೆ ಸಮಯ ಎಲ್ಲರೂ ನಿದ್ರೆ ಹತ್ತಿದ್ದಾಗ, ಮಹಾತ್ಮರ ಕೆಲ ಭಕ್ತರು 'ಮಣಿಭವನ'ದ ಮುಂದಿನ ಮಾರ್ಗದ ಮೇಲೆ ಮಹಾತ್ಮರ ದರ್ಶನಾಕಾಂಕ್ಷಿಯಾಗಿ ಕಾಲ್ದಾರಿಯ ಮೇಲೆ ಮಲಗಿದ್ದರು. ಅವರಿಗೆ ಅರಮರವು, ನಿದ್ರೆ ಎಂದರೆ ನಿದ್ರೆ ಜಾಗರಣವೆಂದರೆ ಜಾಗರಣ. ಮಹಾತ್ಮರಿಗೆ ಸೆರೆಯಾಗುತ್ತದೆಂದು ೨-೩ ದಿನಗಳಿಂದ ಊರತುಂಬ ಮಾತು, ಸೆರೆಹಿಡಿವರೆಂಬ ಸುದ್ದಿ ಹಬ್ಬಿತ್ತು. ಅದರಿಂದ ಜನರು ಮಹಾತ್ಮರ ಕೊನೆಯ ದರ್ಶನ ಪಡೆಯಬಯಸಿ ಮಾರ್ಗದ ಮೇಲೆ ಬಿದ್ದಿದ್ದರು. ಸ್ವಯಂಸೇವಕರು ದ್ವಾರಪಾಲಕರಾಗಿ ನಿಂತುಕೊಂಡಿದ್ದರು. ಪತ್ರಿಕಾಪ್ರತಿನಿಧಿಗಳು ೩ನೇ ಉಪ್ಪರಿಗೆಯ ಮೇಲೆ ಜಾಗರಣ ಮಾಡುತ್ತಿದ್ದರು. ಮಹಾತ್ಮರಿಗೆ ಸೆರೆಹಿಡಿಯುತ್ತಾರೆಂಬ, ಸೆರೆಹಿಡಿಯುವ ನಿರ್ಧಾರವಾಗಿದೆಂದು ಅವರಿಗೆ ಎಂದೋ ಕನಸು ಬಿದ್ದಿತ್ತು. ಮಹಾತ್ಮರು ಲಂಡನದಿಂದ ಹೊರಡುವಾಗಲೇ ಮಹಾತ್ಮರಿಗೆ ಸೆರೆಯಾಗುತ್ತದಾಗಿಯೂ, ಹಡಗದಿಂದಿಳಿದ ಕೂಡಲೆ ಮಹಾತ್ಮರು ಬಂದಿವಾಸವನ್ನನುಭವಿಸುವ ಯೋಗವಿರುತ್ತದಾಗಿಯೂ, ಮಹಾತ್ಮರಿಗೆ ಅಪ್ಪಣೆ ಕೊಡುವಾಗ ಹೆಂಗಸರು ಸಹ ಮರುಗಿದ ವಾರ್ತೆ ಈ ಹಿಂದೆಯೇ ಪ್ರಕಟವಾಗಿದೆ. ಸರ್ವಾಧಿಪತಿಗಳು ಮಹಾತ್ಮರ ಮನೆಯ ತಂತಿಯನ್ನು ಧಿಕ್ಕರಿಸಿ ಉತ್ತರ ಕಳಿಸಿದಂದಿನಿಂದ ಮಹಾತ್ಮರಿಗೆ ಯಾವಾಗ ಸೆರೆಹಿಡಿಯುವರೆಂದು ಯಾರೂ ಹೇಳಲಾರರು. ಮಹಾತ್ಮರ ಕಾರ್ಯಕ್ರಮವೇನು, ಎಂದು ಅಹಮದಾಬಾದಿಗೆ ಹೋಗುತ್ತಾರೆ? ಹೀಗೆ ಪತ್ರಿಕಾ ಪ್ರತಿನಿಧಿಗಳು ಶ್ರೀ| ಮಹಾದೇವಭಾಯಿಯವರ ಕಡೆ ಕೇಳಿದರು. "ಸರಕಾರದ ಮರ್ಜಿ! ಸರಕಾರವು ಒಯ್ದಲ್ಲಿ ಮಹಾತ್ಮರು ಹೋಗಲು ತಯಾರು!" ಹೀಗೆ ಅವರು ಶನಿವಾರ ಉದ್ಗರಿಸಿದ್ದರು. "ನಾನು ಸರ್ವಾಧಿಪತಿಗಳ ನಿವಾಸಸ್ಥಾನಕ್ಕೆ ಹೋಗಲಿಕ್ಕೂ ತಯಾರು, ಜೈಲಿಗೆ ಹೋಗಲಿಕ್ಕೂ ತಯಾರು!" ಹೀಗೆ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗೆ ಉತ್ತರ ಕೊಟ್ಟಿದ್ದರು. ಶನಿವಾರ ಪ್ರಾರ್ಥನೆ ಸಮಯದಲ್ಲೂ ಮಹಾತ್ಮರು ಜೈಲಿಗೆ ಹೋಗುವ ಪ್ರಸಂಗ ಬರುವ ಸನಿಹವ ಬಂದಿದೆಂದು ಹೇಳಿ ಜನರಿಗೆ ಸನ್ಮಾರ್ಗ ತೋರಿಸುವ ಆಜ್ಞೆ ಮಾಡಿದರು. ಶನಿವಾರ ಮಧ್ಯರಾತ್ರಿ ೧ ಘಂಟೆಗೆ ನಡೆದ ವೃತ್ತದ ವಾರ್ತೆ ಹೀಗಿದೆ, ಮಹಾತ್ಮರ ಮಹಿಮೆಯು ಕಲ್ಪನೆಯಾಗುತ್ತದೆ. ಮಹಾತ್ಮರು ತುಸು ಮಲಗಿರಬೇಕು. ೧ ಘಂಟೆಯಾಯಿತು. ಅಷ್ಟರಲ್ಲಿ ಸರ್ವಾಧಿಪತಿಗಳು ಮಹಾತ್ಮರಿಗೆ ಕೊಟ್ಟ ತಂತಿ ವಿಷಯದ ಪತ್ರಿಕಾ ಪ್ರತಿನಿಧಿಗಳಿಗೆ ಬಂತು. ಅದೆ ತಂತಿ ಮಹಾತ್ಮರಿಗೆ ಆಗಲೇ ಬಂದು ಮುಟ್ಟಿತ್ತು. ೨ ಘಂಟೆಗೆ ಒಂದು ತಲ್ಲಿಸು ಪತ್ರಿಕಾ ಪ್ರತಿನಿಧಿಗಳು ತಮ್ಮ ತಂತಿಯನ್ನು ಮಹಾತ್ಮರಿಗೆ ತೋರಿಸಿ ಅವರಕ್ಕೆ ಇಟ್ಟರು. ಮಹಾತ್ಮರು ಉತ್ತರ ಹೇಳಹೇಳುತ್ತಿರುವಾಗಲೇ ಪೋಲೀಸರು ಸೆರೆಹಿಡಿಯುಕೂಟರಾಗಿ ಮಿಂಪತ್ರ ಆಕ್ಷೇಪಿಸಿ ಮಿ| ವಿಲ್ಸನ್ ಬಂತು. ಈ ಸುದ್ದಿ ಮಹಾತ್ಮರಿಗೆ ತಿಳಿಸಲು, "ನಾನು ಸಿದ್ಧನಿದ್ದೇನೆ, ಅರ್ಧ ಘಂಟೆ ಬೇಕು" ಹೀಗೆ ಮಹಾತ್ಮರು ಸಹನಶೀಲ ಪ್ರಸನ್ನಚಿತ್ತರಾಗಿ ನುಡಿದರು. ಪತ್ರಿಕಾ ಪ್ರತಿನಿಧಿಗಳಿಗೆ ಉತ್ತರ ಹೇಳಿದ ಬಳಿಕ, ಅಮೇರಿಕಾ ಪತ್ರಿಕಾ ಪ್ರತಿನಿಧಿಗಳಾದ ಮಿ| ಮಿಲ್ಲರವರು ಮಹಾತ್ಮರ ಕಡೆ ಪ್ರಶ್ನೋತ್ತರ ನಡೆಸಿದರು. ಮಹಾತ್ಮರು ಮಿ| ಮಿಲ್ಲರವರಿಗೆ ಹಾಸಿಗೆಯ ಬಳಿ ಕರೆದರು. ಬಹು ಪ್ರೀತಿಯಿಂದ, ಮಮತೆಯಿಂದ ಹಸ್ತ ಮೇಲನ ಎತ್ತಿ ನುಡಿದರೆಂದರೆ, "ಅಮೇರಿಕೆಗೆ ಹಿಂದುಸ್ಥಾನದೊಳಗಿನ ಸತ್ಯಸ್ಥಿತಿಯನ್ನು ತಿಳಿಸಿರಿ. ಬಡಬಗ್ಗರ ಸಲುವಾಗಿ, ಅವರ ಉದ್ಧಾರಕ್ಕಾಗಿ ಸತ್ಯ-ಅಹಿಂಸೆಗಳನ್ನಾಶ್ರಯಿಸಿ ನಾನು ಹೋರಾಡುತ್ತಿದ್ದೇನೆ. ಕಗ್ಗತ್ತಲ ಮೋಡ ಮುಸುಕಿವೆ, ಆದಾಗ್ಯೂ ಸೂರ್ಯ ಪ್ರಕಾಶವಾಗ ಮಾಗ ಕಾಲವಿದೆ, ಅದರಂತೆಯೇ ಈಗಿನ ದಬ್ಬಾಳಿಕೆಯೊಳಗಿಂದ ಸ್ವರಾಜ್ಯಪ್ರಾಪ್ತಿಯಾಗುವದು," ಹೀಗೆ ಮಹಾತ್ಮರು ಮಿ| ಮಿಲ್ಲರವರಿಗೆ ಸಂದೇಶ ಕೊಟ್ಟರು "ನೀವು ಒಳ್ಳೆ ಪ್ರತಿನಿಧಿಗಳಿದ್ದೀರಿ. ಪತ್ರಿಕೆಗೆ ಸತ್ಯ ವಾರ್ತೆಗಳನ್ನಷ್ಟೇ ಕಳಿಸಿ ಸೇವೆ ಮಾಡಿದಿರಿ," ಹೀಗೆ ಮಹಾತ್ಮರು ಉದ್ಗರಿಸಿ ಮುದ್ದಾಗಿ ಅಪ್ಪಣೆ ಕೊಟ್ಟರು. ಮಿ| ಮಿಲ್ಲರವರು ಈಗ ೮-೯ ತಿಂಗಳುಗಳಿಂದ ಅಮೇರಿಕೆಯ ಪತ್ರಿಕಾ ಪ್ರತಿನಿಧಿಗಳಾಗಿ ಮಹಾತ್ಮರ ಬಳಿಯಲ್ಲಿಯೇ ಉಳಕೊಳ್ಳುತ್ತಾರೆ. ಮಹಾತ್ಮರ ಸಂಗಡ ರಜಪುತಾನಾ ಹಡಗಕ್ಕೆ ಅವರು ಲಂಡನಿಗೆ ಸಹ ಹೋಗಿದ್ದರು. ಮಹಾತ್ಮರ ಸಾಧು ಸ್ವಭಾವದಿಂದ ಅವರಿಗೆ ಮಹಾತ್ಮರಲ್ಲಿ ಆದರವುಂಟಾಗಿದೆ. ಮಹಾತ್ಮರು ಅವರಿಗೆ ತಲೆಯ ಮೇಲೆ ಕೈಯಾಡಿಸಿ ಮಮತೆಯಿಂದ ಅಪ್ಪಣೆ ಕೊಟ್ಟ ಕೂಡಲೆ, ಮಿ| ಮಿಲ್ಲರವರಿಗೆ ಏನಾಯಿತೋ ಏನೋ, ಮಿ| ಮಿಲ್ಲರವರು ಕಣ್ಣೀರು ಸುರಿಸಿದರು. ಮಹಾತ್ಮರ ಹಸ್ತ ಸ್ಪರ್ಶದಿಂದ ಆನಂದಾತಿರೇಕವಾಯಿತೋ, ಅಥವಾ ವಿರಹವಿಚಾರದಿಂದ ದುಃಖಾವೇಗವಾಯಿತೋ ತಿಳಿಯದು, ಬಹು ಕಾಲದ ತನಕ ಅವರು ಹಿಂದೆದೆ ಕಣ್ಣೀರು ಸುರಿಸುತ್ತಿದ್ದರು. ಮುಕ್ತಾಂಬದಿಂದೆ ಮಹಾತ್ಮರಿಗೆ ಹಸ್ತಾಂದೋಲನ ಕೊಡುತ್ತಿದ್ದರು. ಬಳಿಯಲ್ಲಿ ಮಹಾತ್ಮರ ಕಾಲು ಒತ್ತುತ್ತ ಕುಳಿತಿದ್ದ ಸೌ| ಕಸ್ತೂರಬಾಯಿಯವರಿಗೆ ಈ ನೋಟ ನೋಡಿ ಕಣ್ಣೀರು ಬಂತು. ಮಿ| ಮಿಲ್ಲರವರಿಗೆ ಸಮಾಧಾನವಾದ ಬಳಿಕ, ಪತ್ರಿಕಾ ಪ್ರತಿನಿಧಿಗಳೆಲ್ಲರೂ ಕೆಳಕ್ಕೆ ಹೋದರು. ಮಹಾತ್ಮರು ಸ್ವಸ್ಥಚಿತ್ತರಾಗಿ ನಿದ್ದೆಹೋದರು. ೪|| ಘಂಟೆಗೆ ಎಂದಿನಂತೆ ಸೂರ್ಯೋದಯಕ್ಕೆ ಹಿಂದು ಆ ಸದಾಲಯದಲ್ಲಿ ಪ್ರಾರ್ಥನೆ ನಡೆಯಿತು.

ರವಿವಾರ ಮಹಾತ್ಮರ ಕಡೆ ಉಂಗರದ ಕವಾಂದಿಗಳಾದ ರಾ| ಮುಕುಂದರಾವ ಜಯಕರ ಮೊದಲಾದ ಮಧ್ಯಸ್ಥರು ಸರ್ ಪುರುಷೋತ್ತಮದಾಸ ಠಾಕೂರದಾಸ ಮೊದಲಾದ ವರ್ತಕ ಸಂಘದವರು, ರಾ| ಮೋತಿ ಮೊದಲಿಂದ ಗಿರಣಿ ಸಾವ್ಕಾರರು ಪೆರ್ಫರ ಲೀಗಿನವರು ಆಲೋಚನೆ ಮಾಡಿ ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳಿಗೆ ತಂತಿ ಮಾಡಿ ಮಹಾತ್ಮರ ಅಪೇಕ್ಷೆಯಂತೆ ದೊರೆಗಳು ಮಹಾತ್ಮರಿಗೆ ಒಂದು ಪ್ರಸ್ತುತ ಪರಿಸ್ಥಿತಿಯನ್ನು ನಿರಾತಂಕವಾಗಿ ಆಲೋಚಿಸಬೇಕೆಂದು ತಂತಿ ಮಾಡಿದರು. ಮಹಾತ್ಮರಿಗೆ ಒಂದು ದಿನ ಮುಕ್ಕಾಮು ಬೆಳೆಸಬೇಕೆಂದು ವಿನಂತಿ ಮಾಡಿಕೊಂಡರು. ಮಹಾತ್ಮರು ರವಿವಾರ ರಾತ್ರಿಗೇ ಅಹಮದಾಬಾದಿಗೆ ಹೋಗಬೇಕು ಸಿದ್ಧರು. ಅವರ ಆಗ್ರಹಕ್ಕಾಗಿ ರವಿವಾರ ರಾತ್ರಿ ಹೊರಡುವದು ಉಳಿದರೂ ಏನು ನಡೆಯಿತೆಂದು ಕೇಳಲು, ಮಧ್ಯಸ್ಥರ್ಯಾರೂ ಸುದ್ದಿ ಕೊಡದಾದರು. "ನಾನು ಬಹಳ ಪ್ರಯತ್ನ ಮಾಡುತ್ತಿದ್ದೇನೆ ಈಗ ಯಾವುದನ್ನೂ ಹೇಳಲಾರೆ" ಹೀಗೆ ರಾ| ಜಯಕರರು ನುಡಿದರೆ, "ಗಾಂಧಿಯವರ ಕಡೆ ಹೋಗಿ ನನಗೆ ಮಾತಾಡುವ ಹಕ್ಕಿಲ್ಲವೇನು?" ಎಂದು ಸರ್ ಕಾವಸಜಿ ಜಹಾಂಗೀರರವರು ಮನನೊಂದು ನುಡಿದರು. ಮಧ್ಯಸ್ಥರ ಮಧ್ಯಸ್ಥಿಕೆ ನಡೆದದರಿಂದ ಮಹಾತ್ಮರಿಗೆ ಇಷ್ಟು ಬೇಗ ಸೆರೆಯಾಗಲಿಕ್ಕಿಲ್ಲವಾಗಿ ಒಂದು ತರ್ಕ ಹುಟ್ಟಿತು. ಆದಾಗ್ಯೂ ಸೆರೆಹಿಡಿಯುತ್ತಾರೆ, ಸೆರೆಹಿಡಿಯುವರು, ಇದೀಗಲೇ ಸೆರೆಹಿಡಿಯುವದು ಹೀಗೆ ಕೆಲವರು 'ಮಣಿಭುವನ'ದ ಎದುರಿಗೆ ಕುಳಿತಿದ್ದರು. 'ಅತಿಸ್ನೇಹಃ ಪಾಪಶಂಕೀ' ಮಹಾತ್ಮರು ಸಂಜೆ ಊಟ ಮುಗಿಸಿದರ ಕ್ರಿಸ್ತ ಸೇವಾ ಸಂಘದ ಪಾದರಿ ಎಲ್ವಿನ್‌ರವರು ಇದೇ ದಿನ ಪುಣೆಯಿಂದ 'ಮಣಿಭವನ'ಕ್ಕೆ ಬಂದಿದ್ದರು. ಅವರೊಡನೆ ನಾಲ್ಕು ಮಾತನಾಡಿ ಮಹಾತ್ಮರು ರಾತ್ರಿ ೯ ಘಂಟೆಗೆ ಮೌನವ್ರತ ಕೈಕೊಂಡರು. ೧೧ ಘಂಟೆಯ ತನಕ ಮಹಾತ್ಮರು ನೂತು ನಿದ್ದೆ ಹೋದರು. ಎಲ್ಲರೂ ನಿದ್ದೆ ಹೋದರು.

೩ ಘಂಟೆಯಾಯಿತು, ಅಷ್ಟರಲ್ಲಿ ಪೋಲೀಸ ಕಮಿಶನರರಾದ ಮಿ| ವಿಲ್ಸನ್‌ರವರು 'ಮಣಿಭುವನ'ಕ್ಕೆ ಬಂದರು. ಪತ್ರಿಕಾಪ್ರತಿನಿಧಿಗಳ ಜಾಗರಣ ಅವರು ನೋಡಿದರು. ಮಿ| ವಿಲ್ಸನ್‌ರವರು ಉಪ್ಪರಿಗೆಯ ಮೇಲೆ ಹೋಗಿ ಮಹಾತ್ಮರ ಮಗಂದಿರಾದ ಶ್ರೀ| ದೇವದಾಸ ಗಾಂಧಿಯವರಿಗೆ ಎಬ್ಬಿಸಿದರು. ಮಹಾತ್ಮರಿಗೆ ಸೆರೆಹಿಡಿಯುವಂದಿದ್ದೇವಾಗಿ ತಿಳಿಸಿದರು. ಶ್ರೀ| ದೇವದಾಸ ಗಾಂಧಿಯವರು ಮಹಾತ್ಮರಿಗೆ ಎಬ್ಬಿಸಿ ಈ ಸಂಗತಿ ತಿಳಿಸಿದರು. ಪೋಲೀಸರು ವಾರಂಟು ತೋರಿಸಿ ಸೆರೆಹಿಡಿಯುವದು ತಮ್ಮ ಕರ್ತವ್ಯವಾಗಿ ಮಹಾತ್ಮರಿಗೆ ಹೇಳಲು, ಮಹಾತ್ಮರು ನಸುನಕ್ಕು, ಕೆಲ ಹೊತ್ತು ಬೇಕೆಂದು ಸೂಚಿಸಿದರು. ಹೊರತು ಮೌನಭಂಗ ಮಾಡಲಿಲ್ಲ. ನಾವು ಗಾಬರಿ ಮಾಡುವದಿಲ್ಲ, ಹೀಗೆ ಪೋಲೀಸರು ನುಡಿದರು. ಮಹಾತ್ಮರು ಪ್ರಾತರ್ವಿಧಿ ಮುಗಿಸಿ ಎಲ್ಲರಿಗೆ ಕರೆದರು. ಸೌ| ಕಸ್ತೂರಬಾಯಿ ಗಾಂಧಿ, ಮೀರಾ ಬೇನ, ಕಾರ್ಯಕರ್ತರಾದ ಕೆ|

ಯಾವ ಕಾಯಿದೆಯಂತೆ ಸೆರೆಹಿಡಿದರು?

ಮಹಾದೇವಭಾಯಿ ದೇಸಾಯಿ, ಶ್ರೀ| ಪ್ಯಾರೇಲಾಲ ಕ್ರಿಸ್ತ ಸೇವಾ ಸಂಘದ ಫಾದರ ಎಲ್ವಿನ್ ಮೊದಲಾದವರು ಸುತ್ತು ಮುತ್ತ ಕೂಡಿದ್ದರು. ಮಹಾತ್ಮರು ರಾಷ್ಟ್ರಸಂದೇಶ ಬರೆದು ಸರದಾರ ವಲ್ಲಭಭಾಯಿಯವರಿಗೆ ತಲ್ಪಿಸಬೇಕಾಗಿ ಹೇಳಿದರು. [illegible] ಅಹಮದಾಬಾದಿನ ಗಿರಣಿ ಕೂಲಿಕಾರರಿಗೂ ಒಂದು ಸಂದೇಶ ಕೊಟ್ಟರು. ರಾಷ್ಟ್ರಕ್ಕೆ ಕೊಟ್ಟ ಸಂದೇಶವೆನಂದರೆ - "ದೇವರ ದಯೆಯನ್ನು, ಅಹಿಂಸಾ ಮಾರ್ಗ ಸತ್ಯಗಳನ್ನು ಬಿಡಬೇಡಿರಿ, [illegible] ಬೇಡಿರಿ, ಬೆನ್ನು ತೋರಿಸಬೇಡಿರಿ. ಪ್ರಾಣವನ್ನು ಸಹ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿರಿ." ಫಾದರ ಎಲ್ವಿನ್‌ರವರ ಕಡೆ ತಿರುಗಿ [illegible] 'ಕೊಟ್ಟರು ಹೇಳಿದರು "ನೀವು ಹಿಂದಿರುಗಿ ಹೋದಾಗ ನನಗೆ ಇಂಗ್ಲಿಷರು ನನ್ನ ದೇಶಬಾಂಧವರಂತೆ ನಿಮ್ಮ ದೇಶಬಾಂಧವರಿಗೂ ನಾನು ಪ್ರೀತಿಸುತ್ತೇನೆಂದು ನಿಮ್ಮ ದೇಶಬಾಂಧವರಿಗೆ ತಿಳಿಸಬೇಕೆಂದು ನನ್ನ ಅಪೇಕ್ಷೆಯಿದೆ. ಪ್ರೇಮದಿಂದ [illegible] ದಿಂದ ನಾನೆಂದೂ ಅಡೆ ನಡೆಸಲಿಲ್ಲ, [illegible] ಹೋರಾಟ [illegible] ನಾನು ದೇವರ ಕಡೆ ಪ್ರಾರ್ಥಿಸಿಕೊಳ್ಳುತ್ತೇನೆ." ಮಹಾತ್ಮರು ಮೌನವ್ರತ ಬಿಟ್ಟು ಮಾತಾಡಬೇಕಾಗಿ ಒಬ್ಬರು ಸೂಚಿಸಿದರು, ಮಹಾತ್ಮರು ಒಪ್ಪಲಿಲ್ಲ. ಈ ಅನೇಕ ಪ್ರಸಂಗದಲ್ಲಿಯಾಗಲಿ ಮಹಾತ್ಮರ ಚರ್ಯೆಯಲ್ಲಾಗಲಿ [illegible] ಸ್ವಾಭಾವಿಕವಾಗಿ ಮಹಾತ್ಮರು ನುಡಿದರು. [illegible] ಮಹಾತ್ಮರ ಸಾಮಗ್ರಿಗಳನ್ನು ಕಟ್ಟಿ ಕೊಡುತ್ತಿದ್ದರು [illegible] ರಟೆ, ಒಂದು ಚಾಪೆ, ಎರಡು ಕೈಚೀಲ, ಒಂದು ಹಣ್ಣು-ಹಂಪಲುಗಳ ಬುಟ್ಟಿ, ಕಾಗದಗಳು, ಒಂದು ಹಾಲಿನ ಬುಟ್ಟಿ, ೬ ಪುಸ್ತಕಗಳು. ಆ ಪುಸ್ತಕಗಳಲ್ಲಿ ಒಂದು ಮುಸ್ಲಿಮ ಪ್ರಧಾನರು ಬರೆದದ್ದು, ಒಂದು ಭಾರತ ಮಂತ್ರಿಗಳು ಬರೆದದ್ದು. ಇವೆರಡನ್ನೂ ಮಹಾತ್ಮರಿಗೆ ಮುಸ್ಲಿಮ ಪ್ರಧಾನ-ಭಾರತ ಮಂತ್ರಿಗಳು ರೌಂಡ ಟೇಬಲು ಮುಗಿದ ಬಳಿಕ ಕಾಣಿಕೆ ಮಾಡಿದ್ದರು. ೧ ಬೈಬಲು, [illegible] ನ ಕಾಯಿದೆಗಳು, ಹೀಗೆ ಆರು ಪುಸ್ತಕಗಳಿದ್ದವು. ಈ ಸಾಮಗ್ರಿ ನೋಡಿ, ಇಷ್ಟೇ ನಿಮ್ಮ ಸರಂಜಾಮು! ಪೋಲೀಸ ಕಮಿಶನರರಾದ ಮಿ| ವಿಲ್ಸನ್‌ರವರು ಉದ್ಗರಿಸಿದರು! ಆ ಮೇಲೆ, "ವೈಷ್ಣವ ಜನ ತೋ ತೇನೆ ಕಹಿಯೇ ಜೆ ಪೀಡ ಪರಾಯೀ ಜಾಣೇರೇ" ಎಂಬ ಪದ್ಯ ಹಾಡಲ್ಪಟ್ಟಿತು. ಮಹಾತ್ಮರಿಗೆ ಕುಂಕುಮ ಹಚ್ಚಿ, ಹೂವಿನ ಹಾರ ಹಾಕಿದರು, ಮತ್ತು [illegible] ಮಹಾತ್ಮರು [illegible] ಕೊಟ್ಟರು [illegible] "[illegible] ಬಿಟ್ಟು ಹೋಗಬೇಡಿರಿ," ಹೀಗೆ ಉದ್ಗರಿಸಿದರೆ ಮಹಾತ್ಮರು [illegible] ನಗುತ್ತಿದ್ದರು. [illegible], [illegible] ತಿರುಗಿ ನೋಡುತ್ತಿದ್ದರು "ಇದನ್ನು [illegible] ಸೇರಿತು, [illegible] ನಗುತ್ತಿದ್ದಾರೆ! [illegible] ಉದ್ಗರಿಸಿ [illegible] ಮಹಾತ್ಮರಿಗೆ ಅಪ್ಪಿಕೊಂಡರು, ಮತ್ತು ಭಕ್ತಿಭಾವದಿಂದ ಸಾಷ್ಟಾಂಗ ನಮಿಸಿ 'ಬಾಪೂಜಿ' ಎಂದು ಉದ್ಗರಿಸಿ ಮರಮರಳಿ ನಮಿಸಿದರು, [illegible]! ಮಹಾತ್ಮರ ಸಹಕಾರಿಗಳಿಗೆ ಸಂದೇಶಪತ್ರ ಬರೆದು ಕೊಟ್ಟು ಇಳಿದುಬಂದರು, 'ಮಣಿ ಭುವನ'ದ ಎದುರಿನ ಬೀದಿಗಳಲ್ಲಿ ನಿಂತಿದ್ದ ಜನರನ್ನು [illegible] ಪೋಲೀಸರು ಈ ಸ್ಥಿತಿ [illegible] ಟೆಲಿಫೋನನ್ನು ಕೈವಶ ಮಾಡಿಕೊಂಡಿದ್ದಾಗ್ಯೂ ಅತ್ತಿತ್ತ ಸುದ್ದಿ ಹರಡಿ ಸಾವಿರಾರು ಜನರು 'ಮಣಿ ಭುವನ'ದ ಸುತ್ತು ಮುತ್ತು ನೆರೆದಿದ್ದರು. ಅವರೆಲ್ಲರೂ 'ಮಹಾತ್ಮಾ ಗಾಂಧೀಕೀ ಜಯ!' ಎಂಬ ಜಯಘೋಷ ಮಾಡಿ ಮಹಾತ್ಮರಿಗೆ ಅಪ್ಪಣೆ ಕೊಟ್ಟರು. ಮೋಟಾರು ಹೊರಡಬೇಕಾಗುವಷ್ಟರಲ್ಲಿ ಸರದಾರ ವಲ್ಲಭಭಾಯಿ ಪಟೇಲರ ನಿವಾಸಸ್ಥಾನದಲ್ಲಿ ಅವರೊಡನೆ ಮಲಗಿದ್ದ ಶ್ರೀ| [illegible] ರವರು ಎಂದು ಸರದಾರ ವಲ್ಲಭಭಾಯಿಯವರಿಗೂ ಸೆರೆಹಿಡಿದ ಸುದ್ದಿ ಮಹಾತ್ಮರಿಗೆ ತಿಳಿಸಿದರು. ಹಾಗೆಯೇ ಮಹಾತ್ಮರ ಮೋಟಾರು ಗಾಂವದೇವಿ ಪೋಲೀಸ ಸ್ಟೇಶನಿಗೆ ಹೋಯ್ತು. ಅಲ್ಲಿ ಸರದಾರ ವಲ್ಲಭಭಾಯಿ ಪಟೇಲರ ಮೋಟಾರನ್ನು ಪೋಲೀಸರು ಜೊತೆಗೆ ಕರಕೊಂಡು ಪುಣೆ ಕಡೆಗೆ ಹೊರಟರು.

ಸರದಾರ ವಲ್ಲಭಭಾಯಿ ಪಟೇಲರವರು ತಮ್ಮ ಶ್ರೀ [illegible] ನಿವಾಸದಲ್ಲಿ ಮಲಗಿದ್ದರು. ಆ ದಿನ [illegible] ಕಾರ್ಯಗಳಿಂದ [illegible] ಜಾಗರಣೆಯಾಗಿತ್ತು. ಈ ಹೊತ್ತಿಗೆ [illegible] ಪೋಲೀಸರು [illegible] ಒಳಪ್ರವೇಶ ಮಾಡಬೇಕೆಂದು [illegible] ನಿಮ್ಮ ಅಪ್ಪಣೆ ನನಗೆ ತೋರಿಸಿರಿ, ನನ್ನ ಯಜಮಾನನ ಅಪ್ಪಣೆ ಬೇಕು, ಈ ಅಪ್ಪಣೆ ನನಗೆ ಯಾಕೆ ಎಷ್ಟು ಹೊತ್ತಿನಲ್ಲಿ" [illegible] ಗಟ್ಟಿ ಕೂಗಿ ಹೇಳಿದನಂತೆ. ಹೀಗೆ ಮಾತನಾಡಿದ ಬಳಿಕ, ಪೋಲೀಸರು ಬಂದಿರುತ್ತಾರೆಂದಾಗಿ ಯಜಮಾನರಿಗೆ ತಿಳಿಸಿದನು. ಸರದಾರ ವಲ್ಲಭಭಾಯಿಯವರು ಪೋಲೀಸರ ಜೊತೆಡನೆ "ಒಹೋ! ನೀವು ಕರೆಯಲಿಕ್ಕೆ ಬಂದಿರಿ ನಾನು ಮೊದಲೇ ತಯಾರಿದ್ದೆ" ಹೀಗೆ ನುಡಿದು ಪೋಲೀಸರ ವಾಹನದವರು [illegible] ಗಿದೆ, ನೀವು [illegible] ಕೇಳಿದ್ದ [illegible]" ಹೀಗೆ ಪೋಲೀಸರು ಸರದಾರರಿಗೆ [illegible] ಮುಂಬಯಿನಲ್ಲಿ [illegible] ಮುಂಚೆ ಸರದಾರರು [illegible] ತಿಳಿಸಿದ್ದರೆಂದರೆ — "ಸರಕಾರವು ರಾಷ್ಟ್ರದ ಮೇಲೆ ಯುದ್ಧ ಹೂಡಿದೆ. ಇದು ಭಯಂಕರ ಸಂಗ್ರಾಮ, ಕೊನೆಯ ಯುದ್ಧ, ಜೀವನ ಮೇಲಿನ ಪ್ರಸಂಗ. ಒಂದೇ ಅಳಿಯಬೇಕು, ಇಲ್ಲವೆ ಉಳಿಯಬೇಕು. ಸಂಪೂರ್ಣ, ಪರಿಪೂರ್ಣ ಅಹಿಂಸಾಯುತ [illegible] ಪರಮಾವಧಿಯ [illegible] ಮಾಡುವದೆಂದು ನಾನು [illegible] ನೆ, ಅಂದರೆ, [illegible]" ಹೀಗೆ ಸರದಾರರು ಸಂದೇಶ ಕೊಟ್ಟು [illegible].

ಎರಡೂ ಮೋಟಾರುಗಳು ಶೀಘ್ರವಾಗಿ ಓಡಿದವು [illegible] ಕ್ಕೆ [illegible] ಮೋಟಾರುಗಳು [illegible] ಕಲ್ಪಿಸಿದ್ದು. [illegible] ಮಹಾತ್ಮರು, ಸರದಾರರೂ ಯೆರವಡಾ ಜೈಲಿಗೆ ಮುಟ್ಟಿದರು. [illegible] ದಿನ ಸೋಮವಾರ [illegible] ಘಂಟೆಗೆ [illegible] ಹತ್ತಿರದಿಂದ ಮುಂಬಯಿಯ ಬೋರೀಲ ಸ್ಟೇಶನ್‌ನಲ್ಲಿ ಇಳಿದ ಮಹಾತ್ಮರು ಮರುಸೋಮವಾರ ಅದೇ ಸಮಯ ಯೆರವಡಾ ಜೈಲಿನಲ್ಲಿ ಕಾಲಿಟ್ಟರು! ಈ ವಿಲಕ್ಷಣ ಕಲ್ಪನಾತೀತ ಅವಸ್ಥಾಂತರವು ಕಲ್ಪಿತ ಕಥೆಗಿಂತ ಆಶ್ಚರ್ಯದ್ದಾಗಿದೆ!

ಮಹಾತ್ಮರಿಗೆ, ಸರದಾರರಿಗೆ ಯಾವ ಕಾಯಿದೆಯಂತೆ ಸೆರೆಹಿಡಿದರು? ಕಳೆದ ಸತ್ಯಾಗ್ರಹದಲ್ಲಿ ಮಹಾತ್ಮರಿಗೆ ೧೮೨೭ನೇ ಇಸ್ವಿಯ ೨೫ನೇ ಕಾನೂನಿನನ್ವಯ ಸೆರೆಹಿಡಿದಿದ್ದರು. ಅದರಂತೆಯೇ ಈಗಲೂ ಹಿಡಿಯಲ್ಪಟ್ಟಿದೆ. ಮುಂಬಯಿ ಸರಕಾರದ ಕಾರ್ಯದರ್ಶಿಗಳಾದ ಮಿ| ಆರ್. ಎಮ್. ಮ್ಯಾಕ್ಸವೆಲ್‌ರವರು ಮುಂಬಯಿಯ ಪೋಲೀಸ ಕಮಿಶನರರಿಗೆ ಅಪ್ಪಣೆ ಮಾಡಿದ್ದರು: "ಗವರ್ನರ-ಇನ್-ಕೌನ್ಸಿಲ್‌ರವರು ಯೋಗ್ಯ ಮತ್ತು ಸಾಕಷ್ಟು ಕಾರಣಗಳ ಮೂಲಕ ೧೮೨೭ನೇ ಇಸ್ವಿಯ ೨೫ನೇ ರೆಗ್ಯುಲೇಶನಿನಂತೆ ತನಗಿರುವ ಅಧಿಕಾರದನ್ವಯ ಮಿ| ಎಮ್. ಕೆ. ಗಾಂಧಿಯವರಿಗೆ ಸರಕಾರದ ಮರ್ಜಿಯಿರುವವರೆಗೆ ಯರವಡಾ ಸೆಂಟ್ರಲ್ ಜೈಲಿನಲ್ಲಿ ಪ್ರತಿಬಂಧ ಮಾಡಿಡಬೇಕೆಂದು ಠರಾಯಿಸಿರುತ್ತಾರೆ. ಅದರಂತೆ ಆ ಗಾಂಧಿಯವರಿಗೆ ನೀವು ಹಿಡಿದು, ಅವರನ್ನು ಬೇಗನೆ ಜೈಲು ಸುಪರಿಂಟೆಂಡೆಂಟರ ಕಡೆ ಒಪ್ಪಿಸಬೇಕೆಂದು ಈ ಮೂಲಕ ನಿಮಗೆ ಅಪ್ಪಣೆಯಾಗುತ್ತದೆ" ಈ ವಾರಂಟಿನ ಮೇಲೆ ಬರೆಯಲ್ಪಟ್ಟಿದ್ದಾಗಿ ತಿಳಿಯುತ್ತದೆ. ಸರದಾರ ವಲ್ಲಭಭಾಯಿ ಪಟೇಲರ ಮೇಲೂ, ಇದೇ ಪ್ರಕಾರ ಹೆಸರು ಬದಲಿಸಿ ವಾರಂಟು ಹೊರಡಿಸಲ್ಪಟ್ಟಿದೆ. ಕಳೆದ ಬಾರಿ ವಾರಂಟಿನಲ್ಲಿ ಶಬ್ದ ಜೋಡಿಸಿದ ಸ್ವಲ್ಪ ಭಿನ್ನತೆಯಿರುತ್ತಿತ್ತು? 'ಗವರ್ನರ-ಇನ್-ಕೌನ್ಸಿಲರವರ ಬದಲಿಗೆ 'ಸರಕಾರ'ವೆಂಬ ಶಬ್ದವಿತ್ತು. ರಾ| ಎಮ್. ಕೆ. ಗಾಂಧಿಯವರ ಚಳವಳಿಯನ್ನು ನೋಡಿ ಸರಕಾರವು ದಿಗಿಲುಪಟ್ಟಿದೆಯೆಂದು [illegible]. ಆ ವಾರಂಟು ಜಾರಿ ಮಾಡಿದ ಪೊಲೀಸ ಮೆಜಿಸ್ಟ್ರೇಟರಿಗೆ ಅವಲಂಬನೆಯ ಬಗ್ಗೆ ತಿಳಿಸಿತ್ತು. ದೇಶದೊಳಗೆ ಶಾಂತತೆ ಕಾಪಾಡುವುದಕ್ಕಾಗಿ ಅಥವಾ ದೇಶ ರಾಜಕಾರಣದ ಮೂಲಕ ನ್ಯಾಯಾಸನದಲ್ಲಿ ವಿಚಾರ ನಡಿಸದೆ ಬಂಧಿಸಿಡಲು ಈ ಕಾಯಿದೆಯಾಗಿದೆ [illegible] ದರ್ಜೆ ಗುಣಿತವಾಗಿ ಸರಕಾರವು ಖರ್ಚಿಗೆ ಹಣ ಪೂರೈಸಲು ಬದ್ಧವಿದೆ. ಕಳೆದ ಬಾರಿ ಸರಕಾರವು ಮಹಾತ್ಮರಿಗೆ ಮಾಸಿಕ ಖರ್ಚಿಗಾಗಿ ೧೦೦ ರೂಪಾಯಿ ಕೊಡುತ್ತಿತ್ತು. ಮಹಾತ್ಮರಿಗೆ ಮುಂಬಯಿಯ 'ಟೈಮ್ಸ್ ಆಫ್ ಇಂಡಿಯಾ' ನಿತ್ಯಪತ್ರಿಕೆಯನ್ನು ಒದಗಿಸುತ್ತಿತ್ತಂತೆ. 'ಟೈಮ್ಸ್' ಪತ್ರಿಕೆಯು ಸರಕಾರಿ ಪಕ್ಷದ ಪತ್ರಿಕೆ.

ಸರದಾರ ವಲ್ಲಭಭಾಯಿಯವರು ತಮ್ಮ ಉತ್ತರಾಧಿಕಾರಿಯಾಗಿ ಶ್ರೀ| ಬಾಬು ರಾಜೇಂದ್ರಪ್ರಸಾದರವರಿಗೆ ನೇಮಿಸಿದ್ದರು; ಅವರಿಗೆ ಮಾರನೇ ದಿವಸವೇ ತಾ| ೫ನೇಗೆ ಪಾಟನಾ ಪಟ್ಟಣದಲ್ಲಿ ಸೆರೆಯಾಯಿತು. ಅವರು ಬಳಿಕ ಡಾ| ಅನ್ಸಾರಿಯವರಿಗೆ ತಮ್ಮ ಉತ್ತರಾಧಿಕಾರಿಯಾಗಿ ನೇಮಿಸಿದ್ದಾರೆ. ಡಾ| ಅನ್ಸಾರಿಯವರಿಗೆ ತಾ| ೭ನೇಗೆ ಸೆರೆಹಿಡಿದರು. ಅವರ ಮನೆಯ ಮುಂದೆ ಪೋಲೀಸರು ದ್ವಾರಪಾಲಕರಾಗಿ ನಿಂತು ಬರ-ಹೋಗುವವರ ತಪಾಸು ಮಾಡುತ್ತಿದ್ದರಾಗಿ ಪ್ರಕಟವಾಗಿದೆ. ಡಾ| ಅನ್ಸಾರಿಯವರು ರಾಷ್ಟ್ರೀಯ ಮುಸಲ್ಮಾನ ಪಕ್ಷದ ಅಧ್ಯಕ್ಷರು ವ ರಾಷ್ಟ್ರೀಯ ಸಭೆಯ [illegible] ಭಕ್ತರು; ಮಹಾತ್ಮರ ಪರಮ

ಮಿತ್ರರು. ಗಾಂಧಿ— ಇರ್ವಿನ್ ಒಡಂಬಡಿಕೆಗಾಗಿ ಪ್ರಯತ್ನಪಟ್ಟ ಹಾಗು ಅದನ್ನೊಳಗೆ ಮುರಿದು ಸಂಧಾನ ಮಾಡಿದ ಶ್ರೇಯಸ್ಸು ಇವರಿಗೇ ಸಲ್ಲತಕ್ಕದ್ದು. ಇವರ ಮನೆಗೆ 'ದರ್ಯಾಗಂಜ' ಎಂದು ಹೆಸರು. ಇವರ ಮನೆಯಲ್ಲಿಯೇ ಕಾಂಗ್ರೆಸ ಕಾರ್ಯಕಾರಿ ಮಂಡಳಿಯ ಸಭೆಯಾಗಿ ಗಾಂಧಿ-ಇರ್ವಿನ್ ಒಡಂಬಡಿಕೆಗೆ ಸಮ್ಮತಿಯ ಮುದ್ರೆ ಬಿದ್ದಿತ್ತು.

ಶ್ರೀ। ಸುಭಾಷಚಂದ್ರ ಬೋಸರಿಗೆ ಸೆರೆ!

ಶ್ರೀ। ಸುಭಾಷಚಂದ್ರ ಬೋಸರಿಗೆ ೧೮೧೮ನೇ ಇಸ್ವಿಯ ರೆಗ್ಯುಲೇಶನಿನಂತೆ ಶನಿವಾರ ತಾ ೨ನೇ ಕಲ್ಯಾಣ ಸ್ಟೇಶನಿನಿಂದ ಬಂಗಾಲದ ಕಡೆ ಹೊರಟಾಗ ಸೆರೆಹಿಡಿದರು. ಇದು ಹದ್ದುಬಾರಿಯ ವಾರಂಟು. ಶ್ರೀ। ಬೋಸರಿಗೆ ಈಗ ಮಧ್ಯಪ್ರಾಂತದ ಸಿವನಿ ಜೈಲಿನಲ್ಲಿ ಬಂಧಿಸಿಟ್ಟಿದ್ದಾರೆ

ಹೊಸ ಹೊಸ ರಾಜಶಾಸನಗಳು.

ಸೋಮವಾರ ದಿಲ್ಲಿ ಪಟ್ಟಣದಿಂದ ಸರ್ವಾಧಿಪತಿಗಳು ೪ ಹೊಸ ರಾಜಶಾಸನಗಳನ್ನು ಹೊರಡಿಸಿದರು. ಈ ರಾಜಶಾಸನಗಳಲ್ಲಿ ಬಂಗಾಲ, ಸಂಯುಕ್ತಪ್ರಾಂತ, ಗಡಿನಾಡುಗಳಲ್ಲಿ ಹೊರಡಿಸಿದ ರಾಜಶಾಸನಗಳ ಕಲಮುಗಳಿದ್ದು, ಮೇಲೆ ಕೆಲವು ಹೊಸ ಹೊಸ ಕಲಮುಗಳು ಸೇರಿಸಲ್ಪಟ್ಟಿವೆ. ಕೆಲವು ಕಲಮುಗಳ ವ್ಯಾಪ್ತಿ ಬೆಳೆಸಲ್ಪಟ್ಟಿದೆ. ಅವುಗಳ ಸಾಮಾನ್ಯ ಸ್ವರೂಪವೇನೆಂದರೆ, ಸಾರ್ವಜನಿಕ ಶಾಂತತೆ ಯಾ ಸುರಕ್ಷಿತತೆಗೆ ಬಾಧೆ ತರುವಂಥ ಚಳವಳಿಗಳಲ್ಲಿ ಸೇರುವ ಸಂಶಯ ಬಂದರೆ, ಅವರಿಗೆ ವಾರಂಟಿಲ್ಲದೆ ದಸ್ತಗಿರಿ ಮಾಡಬಹುದು. ತಡೆ ಕಾಯಿದೆಯ ವ್ಯವಸ್ಥೆಗೆ ಭಂಗ ಬರುವಂತೆ ಉತ್ತೇಜನ ಕೊಡಬಾರದು. ಕರ ಕೊಡಬಾರದೆಂದು ಯಾ ತಹಶೀಲು ಇಡಬೇಕೆಂದು ಹೇಳಕೂಡದು, ಬೇಕಾದ ಸಂಸ್ಥೆಯನ್ನು ಬೇಕಾಯಿದೇಶೀರ ಎಂದು ಜಾಹೀರನಾಮೆ ಹೊರಡಿಸಬಹುದು. ಬಹಿಷ್ಕಾರ ಹಾಕಿದರೆ ಅಪರಾಧವಾಗುತ್ತದೆ. ಯಾವದೇ ಪ್ರಕಾರದ ತೊಂದರೆಯನ್ನುಂಟು ಮಾಡಕೂಡದು. ಈ ಕಾಯಿದೆಯಂತೆ ಪಿಕೆಟಿಂಗು ಸಹ ಅಪರಾಧವಾಗುತ್ತದೆ. ಶಾಂತತೆಯಿಂದ ನಡೆಯುವ ಪಿಕೆಟಿಂಗು ಸಹ ಅಪರಾಧವು. ಶಾಂತತೆಯಿಂದ ನಡೆಯುವ ಪಿಕೆಟಿಂಗು ಅಪರಾಧವಲ್ಲೆಂದು ಮುಂಬಯಿ ಹೈಕೋರ್ಟು ಮಾಡಿದ ಠರಾವು ಸಹ ಈ ರಾಜಶಾಸನಗಳಿಂದ ರದ್ದಾಗಿದೆ. ಈ ರಾಜಶಾಸನಗಳಂತೆ ಕಾಂಗ್ರೆಸ ಕಾರ್ಯಕಾರಿ ಮಂಡಳವು ಬೇಕಾಯಿದೇಶೀರ ಸಂಸ್ಥೆಯೆಂದು ಜಾಹೀರನಾಮೆ ಸೋಮವಾರ ತಾ ೪ನೇ ಹೊರಟಿತು. ಮುಂಬಯಿಯಲ್ಲಿ ಮಂಗಳವಾರ ಸಾಯಂಕಾಲ ಮುಂಬಯಿ ಸರಕಾರದ್ದು ವಿಶೇಷ ಗ್ಯಾಜೇಟನ್ನು ಹೊರಡಿಸಿ ವಾರಂಟಿಲ್ಲದೆ ಬೇಕಾದವರಿಗೆ ಸೆರೆಹಿಡಿಯುವ ಅಧಿಕಾರವನ್ನು ಎಲ್ಲ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರಿಗೂ, ಸಬಡಿವಿಜನಲ್ ಮ್ಯಾಜಿಸ್ಟ್ರೇಟರಿಗೂ, ಫೌಜದಾರರಿಗೂ ಒಪ್ಪಿಸಿದರು. ಮಂಗಳವಾರದಿಂದ ಮುಂಬಯಿ ಇಲಾಖೆಯಲ್ಲಿ ಈ ರಾಜಶಾಸನಗಳಂತೆ ಅಮಲಬಜಾವಣೆ ನಡೆಯುವದಾಗಿ ನಿಧಿಸಿತು. ಬುಧವಾರ ಬೆಳಿಗ್ಗೆ ಮುಂಬಯಿಯಲ್ಲಿ ಸೆರೆಹಿಡಿಯುವ ದೊಡ್ಡ ದಾಳಿ. ಮೊಟ್ಟ ಮೊದಲು ವರಿಷ್ಠ ಕಾಯಿದೆ ಕೌನ್ಸಿಲಿನ ಮಾಜಿ ಅಧ್ಯಕ್ಷ ಶ್ರೀ। ವಿಠ್ಠಲಭಾಯಿ ಪಟೇಲರಿಗೆ ಸೆರೆಹಿಡಿದರು. ನಸುಕು ಹರಿಯುವಷ್ಟರಲ್ಲಿ ಇವರು ಸೆರೆಯಾಳಾದರು. ಶ್ರೀ। ಪಟೇಲರು ಬ್ರಿಟಿಶೇತರ ಸಿಗರೇಟನ್ನು ಸೇದುತ್ತ ಕುಳಿತಿದ್ದರು. "ಅತ್ಯಾಚಾರ ಮಾಡಬಾರದು, ಅದರಿಂದ ಕಾರ್ಯಹಾನಿಯಾಗುತ್ತದೆ. ಬ್ರಿಟಿಶರ ಜೊತೆಗೆ ಬಂದಾಗ ಒದಗಿದ ಗಾಂಧಿ-ಇರ್ವಿನ್ ಒಡಂಬಡಿಕೆಯಂಥ ಸಂಪೂರ್ಣ ಸ್ವರಾಜ್ಯಕ್ಕೆ ಬಾಧೆ ಬರುವಂಥ ತಪ್ಪು ಮಾಡದಂತೆ ಕಾಂಗ್ರೆಸ ಕಾರ್ಯಕರ್ತರ ಸಂಘ ಬಹಿಷ್ಕಾರ ನಡೆಸಬೇಕು." ಹೀಗೆ ಸಂದೇಶ ಕೊಟ್ಟರು. ಆ ಮೇಲೆ ಶ್ರೀ। ನರಿಮಾನರಿಗೆ ಹಿಡಿದರು. ಶ್ರೀ। ನರಿಮಾನರು ಪೋಲೀಸ ಅಧಿಕಾರಿಗೆ ಕಂಡೊಡನೆ ಉಪ್ಪರಿಗೆಯ ಮೇಲೆ ಕರೆದು, 'ನಿಮ್ಮ ಹಾದಿ ಕಾಯುತ್ತಿದ್ದೆನಾಗಿ' ಸ್ವಾಗತಿಸಿ, ಮುದದಿಂದ ಪೋಲೀಸರ ಸ್ವಾಧೀನವಾದರು. ಮುಂಜಾವು ೯ ಘಂಟೆಯೊಳಗೆ ೩೭ ಮಂದಿಗಳು ಪೋಲೀಸರ ಸ್ವಾಧೀನವಾದರು. ಶ್ರೀ। ಕನ್ಹಯಾಲಾಲ ಮುನಶಿ, ಸೌ। ಲೀಲಾವತಿ ಮುನಶಿ, ಸೌ। ಪೆರಿನ್ ಕ್ಯಾಪ್ಟನ್, ಸೌ। ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀ। ವಿ ಹೆಚ ಅಲ್ವಿ, ಮುಕುಂದ ಮಾಲವೀಯ, ಸಯ್ಯದ ಅಬ್ದುಲ್ಲಾ ಬ್ರೆಲ್ವಿ, ಮೂಲರಾಜ ಕರಸನದಾಸ, ಖಾಲೀದ ಅಲ್ಲೀ, ದಿಲಾಶೇಟ ಸಯ್ಯದ, ಜಯಂತ ದಳವಿ, ಜವಾನಸಿಂಗ, ಮೊದಲಾದ ಬಂಧು-ಭಗಿನಿಯರು ಸೆರೆಹಿಡಿಯಲ್ಪಟ್ಟರು. ಇನ್ನೂ ಸೆರೆಯಾಗುತ್ತಲಿವೆ! ಮುಂಬಯಿಯಲ್ಲಿ ಸುಮಾರು ೩೦೦-೪೦೦ ಜನರಿಗೆ ಇಷ್ಟರೊಳಗೆ ಸೆರೆಯಾಗಿರಬೇಕು. ಅದೇ ದಿನ ಬುಧವಾರ ಮುಂಜಾನೆ ೭ ಘಂಟೆಗೆ ಕಾಂಗ್ರೆಸ ಕಚೇರಿಯನ್ನು ಸರಕಾರದ್ದು ಕೈವಶ ಮಾಡಿಕೊಂಡಿತು. ಆಫೀಸಿನಲ್ಲಿ ಕಾಗದ-ಪತ್ರಗಳೂ ಇತರ ಲಿಪಿ, ರಾಷ್ಟ್ರಧ್ವಜವೊಂದು ಜಪ್ತುಮಾಡಲ್ಪಟ್ಟಿತು. ಅದನ್ನು ಪೋಲೀಸರು ತೆಗೆದು ಅದರ ಬದಲಿಗೆ ಬ್ರಿಟಿಶ ಧ್ವಜವನ್ನು ಹಚ್ಚಿದರು. ಪೋಲೀಸರು ದ್ವಾರಪಾಲಕರಾಗಿದ್ದಾರೆ. ಇದರಂತೆ ಆಂಧ್ರ, ತಮಿಳನಾಡು, ಗುಜರಾತ ಮೊದಲಾದ ಕಡೆಗಳಲ್ಲಿ ಆರ್ಡಿನನ್ಸಿನ ರಾಜ್ಯ ನಡೆದಿದೆ. ಎಲ್ಲೆಲ್ಲಿಯೂ ಸೆರೆಹಿಡಿಯುವ ಭರಾಟೆಯಿಂದ ನಡೆದಿದೆ. ಬುಧವಾರ ತಾ ೬ನೇಗೆ ಮುಂಬಯಿ ಸರಕಾರದ ತಾರೀಖಿನ ಇನ್ನೊಂದು ಸರಕಾರಿ ಗ್ಯಾಜೇಟು ಹೊರಟಿತು. ಆ ಗ್ಯಾಜೇಟಿನಲ್ಲಿ ಕಾಂಗ್ರೆಸ ಕಮಿಟಿ, ಅದಕ್ಕೆ ಸಹಾನುಭೂತಿಯುಳ್ಳ ಪರದೇಶಿ ಅರಿವೆಯ ಬಹಿಷ್ಕಾರ ಸಂಘ, ನವಜವಾನ ಸಂಘ, ಯುವಕ ಸಂಘ, ಪಂಚಾಯತು, ಸೇವಾದಲ ಸಂಘ, ದೇಶಸೇವಿಕಾ ಸಂಘ, ಸ್ವರಾಜ್ಯ ಆಶ್ರಮ, ಕಾಂಗ್ರೆಸ ಛಾವಣಿ, ಸ್ವದೇಶಿ ಪ್ರಚಾರಕ ಸಂಘ, ಕಾಂತಣ-ಪಿಂಜಣ ಸಂಘ, ಮುಸೂರದ ಪ್ರತ್ಯಕ್ಷಕಾರ್ಯಕರ್ತರು, ಕುಮಾರಿ ಖಾದಿ ಆಶ್ರಮ ಹಟ್ಟಿ, ಮೊದಲಾದ ಮುಂಬಯಿ ಇಲಾಖೆಯೊಳಗಿನ ೪೭೭ ಸಂಸ್ಥೆಗಳೂ, ಮುಂಬಯಿಯೊಳಗಿನ ೭೯ ಸಂಸ್ಥೆಗಳೂ ಬೇಕಾಯಿದೇಶೀರ ಎಂದು ಜಾಹೀರ ಮಾಡಲ್ಪಟ್ಟಿವೆ ಇವುಗಳ ವಿಸ್ತಾರವಾದ ವಿವರ ಹ್ಯಾಗೆಂದರೆ — ಸುರತದಲ್ಲಿ ೬೯, ಅಹಮದಾಬಾದದಲ್ಲಿ ೩೪, ಮುಂಬಯಿ-ಉಪನಗರದಲ್ಲಿ ೩೨, ಪೂರ್ವಖಾನದೇಶದಲ್ಲಿ ೨೭, ಠಾಣೆಯಲ್ಲಿ ೨೫, ರತ್ನಾಗಿರಿಯಲ್ಲಿ ೨೪, ಸೊಲ್ಲಾಪುರದಲ್ಲಿ ೨೩, ನಮ್ಮ ಉತ್ತರ ಕನ್ನಡದೊಳಗೆ ೨೨, ನಾಶಿಕ-ಸಾತಾರಾ-ಪುಣೆ-ಧಾರವಾಡಗಳಲ್ಲಿ ೨೦-೨೦-೨೦-೨೦, ಖೇಡ-ಸಕ್ಕರಗಳಲ್ಲಿ ೧೯-೧೯, ಬೆಳಗಾವಿ-ಕುಲಾಬಾಗಳಲ್ಲಿ ೧೮ ೧೮, ಅಹಮ್ಮದನಗರದಲ್ಲಿ ೧೭, ವಿಜಾಪುರದಲ್ಲಿ ೧೦, ಪಂಚಮಹಾಲದಲ್ಲಿ ೯, ಭಡೋಚದಲ್ಲಿ ೮, ನವಾಬಶಹಾದಲ್ಲಿ ೭, ಹೈದರಾಬಾದದಲ್ಲಿ ೬, ಕರಾಚಿ-ಲಾರ್ಖಾನಾ ದಾದುಗಳಲ್ಲಿ ೫-೫-೫, ಪಶ್ಚಿಮ-ಖಾನದೇಶದಲ್ಲಿ ೪, ಥರಪಾರಕರದಲ್ಲಿ ೨, ಸಿಂಧ-ಸರಹದ್ದಿನಲ್ಲಿ ೧, ಹೀಗೆ ೫೫೬ ಸಂಸ್ಥೆಗಳು ಬೇಕಾಯಿದೇಶೀರ ಎಂದು ಜಾಹೀರನಾಮೆ ಹೊರಟಿದೆ, ಇದಲ್ಲದೆ, ಮುಂಬಯಿಯ ಕಾಂಗ್ರೆಸ ಮಂದಿರ ಮುಕ್ತ ಇಲಾಖೆಯೊಳಗಿನ ೧೪೧ ಸ್ಥಳಗಳು ಸರಕಾರದ ವಶವಾಗಿವೆ. ಅದರೊಳಗೆ ಧಾರವಾಡದಲ್ಲಿ ೧೧, ಸೊಲ್ಲಾಪುರದಲ್ಲಿ ೮, ನಮ್ಮ ಜಿಲ್ಲೆಯಲ್ಲಿ ೩, ಬೆಳಗಾವಿ-ವಿಜಾಪುರಗಳಲ್ಲಿ ೧-೧, ಹೀಗೆ ಸಂಸ್ಥೆಯ ಆಫೀಸುಗಳು ಪೋಲೀಸರ ಕೈವಶವಾಗಲಾರಂಭಿಸಿವೆ. ಇನ್ನ್ಯಾರ್ಯಾರ ಮೇಲೆ ಯಾವ್ಯಾವಾಗ ಸಂಕ್ರಾಂತಿ ಬರುವದೆಂಬುದು ಹೇಳಬರದು.

ಯಾವ ಕಾಯಿದೆಯಿಂದ ಸೆರೆಹಿಡಿಯಲ್ಪಟ್ಟರು ?

ದೇಶಬಂಧುಗಳಿಗೆ ಸೆರೆಹಿಡಿಯುತ್ತಿದ್ದಾರೆ. ಕೂತವರಿಗೆ, ಎದ್ದವರಿಗೆ ಎಲ್ಲರಿಗೂ ಸೆರೆಹಿಡಿಯುತ್ತಾರೆ. ಇದಕ್ಕೆ ಕಾಯಿದೆ ಆಧಾರ ಯಾವದೆಂದರೆ- ೧೯೩೨ನೇ ಇಸ್ವಿಯ ೨ನೇ ರಾಜಶಾಸನದ ೩ನೇ ಕಲಮು. ಸಾರ್ವಜನಿಕ ಶಾಂತತೆ, ಸುರಕ್ಷಿತತೆಗೆ ಭಂಗ ಬರುವಂತೆ ಯಾರಾದರೊಬ್ಬರು ವರ್ತಿಸುತ್ತಾರೆ, ವರ್ತಿಸಿಕೊಳ್ಳುವವರಿದ್ದಾರೆ, ಹೀಗೆ ಈ ರಾಜಶಾಸನದಂತೆ ಅಧಿಕಾರವುಳ್ಳ ಅಧಿಕಾರಿಗೆ ತೋರಿದರೆ, ಅವರಿಗೆ ವಾರಂಟಿಲ್ಲದೆ ಸೆರೆಹಿಡಿಯಬಹುದು. ಸೆರೆಹಿಡಿದ ಕೂಡಲೆ ಸರಕಾರಕ್ಕೆ ರಿಪೋರ್ಟ ಮಾಡಬೇಕು. ಹೀಗೆ ಸೆರೆಹಿಡಿದವರಿಗೆ ೧೫ ದಿವಸಗಳಿಗೆ ಮಿಕ್ಕಿ ಬಂಧಿಸಿಡ ಕೂಡದು. ಪ್ರಾಂತಿಕ ಸರಕಾರದ ಅಪ್ಪಣೆ ಪಡೆದಲ್ಲಿ ೨ ತಿಂಗಳ ತನಕ ಬಂಧಿಸಿಡಬಹುದು.

ಅದೇ ಶಾಸನದ ೫ನೇ ಕಲಮಿನಂತೆ ಇಮಾರತುಗಳನ್ನು ಪೋಲೀಸರು ಕೈವಶ ಮಾಡಿಕೊಳ್ಳುತ್ತಾರೆ. ಆ ಕಲಮು ಹೀಗಿದೆ.— ಅಧಿಕಾರಿಗಳಿಗೆ ಕವಾಯತು ಮಾಡಲು ಯಾ ಬಿಡಾರ ಇಡಲು, ಸೈನಿಕರಿಗೆ ಯಾ ಪೋಲೀಸರಿಗೆ ಇಳುಕೊಳ್ಳಲು ಅಥವಾ ಸಾರ್ವಜನಿಕ ಹಿತಕ್ಕೆ ಅವಶ್ಯವೆಂದು ಪ್ರಾಂತಿಕ ಸರಕಾರಕ್ಕೆ ತೋರಿದರೆ, ಅವರು ಇಮಾರತಿನ ಯಾ ಭೂಮಿಯ ಮಾಲೀಕರಿಗೆ ಹಾಗೆ ನೋಟೀಸು ಕೊಟ್ಟು, ಇಮಾರತುಗಳನ್ನು ಕೈವಶ ಮಾಡಿಕೊಳ್ಳಬಹುದು

ಕಾಯಿದೆಯ ಕಲಮುಗಳಂತೆ ದೇಶದಲ್ಲೆಲ್ಲ ಸದ್ಯಕ್ಕೆ ಸಾವಿರಾರು ಬಂಧು-ಭಗಿನಿಯರಿಗೆ ಸೆರೆಯಾಯಿತು

ರಾಷ್ಟ್ರೀಯ ಸಭೆಯೂ, ಅದರ ವಿಧಾನ ನಡೆಯುವ ಯಾವತ್ತೂ ಚಳವಳಿಗಳೂ ಬೇಕಾಯಿದೇಶೀರ ಎಂದು ಜಾಹೀರಾದ್ದರಿಂದ ಈ ಕೆಳಗೆ ಕಾಣಿಸಿದ ಕೃತಿಗಳೂ ಬೇಕಾಯಿದೇಶೀರ ಆದವೆಂದು ಚಕ್ರವರ್ತಿ ರಾಜಗೋಪಾಲಾಚಾರ್ಯರು ಪ್ರಸಿದ್ಧಿಸುತ್ತಾರೆ.

(೧) ಭಾಷಣದಲ್ಲಿ ಯಾ ಬರಹದಲ್ಲಿ, ಅಂತರಂಗ ಯಾ ಬಹಿರಂಗದಿಂದ ಅಹಿಂಸೆಯ ಪ್ರಚಾರ ಮಾಡುವದು;

(೨) ಪರದೇಶಿ ಬಟ್ಟೆ, ಮದ್ಯ, ಬ್ರಿಟಿಶ ಸರಕುಗಳ ಬಹಿಷ್ಕಾರದ ಪ್ರಚಾರ ಹಾಗು ಪಿಕೆಟಿಂಗು (ಇವು ಬೇಕಾಯಿದೇಶೀರ ಎಂದು ರಾಜಶಾಸನದ ಮೇಲಿಂದ ತಿಳಿಯುತ್ತದೆ)

(೩) ರಾಷ್ಟ್ರೀಯ ಸಭೆಯು ಮನ್ನಿಸಿದಷ್ಟು ಸ್ವದೇಶೀ ಗಿರಣಿಗಳಿಗೆ ಬಹಿಷ್ಕರಿಸದಿರುವದು;

(೪) ಖಾದಿಯನ್ನು ಧರಿಸುವದು,

(೫) ಟೊಪ್ಪಿಗೆಯಲ್ಲಿ ಬಿಲ್ಲೆ ಕಟ್ಟಿರುವದು,

(೬) ಕೋರ್ಟುಗಳಲ್ಲಿಯೂ, ಜೈಲುಗಳಲ್ಲಿಯೂ ಸಭ್ಯತೆಯಿಂದ ನಡೆಯುವದು,

(೭) ಕೈದಖಾನೆಯ ನಿಯಮಗಳನ್ನು ಪಾಲಿಸುವದು

ಕಾನಡಾವೃತ್ತ.

ಪ್ರಜಾಪತಿ ಸಂ। ಪುಷ್ಯ ಶು। ೪ರ್ಥಿ ಸೋಮವಾರ

ಆನಂದ ವಾರ್ತೆ!

* * *

ನಮಗೆ ಆನಂದವಾಗಿದೆ, ಅತ್ಯಾನಂದವಾಗಿದೆ ಹಿಂದುಸ್ಥಾನದೊಳಗಿನ ಅವಸ್ಥೆಯ ಕುರಿತು ಮಹಾತ್ಮರು ಮಾಡಿದ ರೋಗನಿದಾನವು ದಿಟವಾಯಿತು! ಕಳೆದ ತಾ ೩೧-೧೨-೩೧ನೇ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಮಹಾತ್ಮರು "ಹಿಂದುಸ್ಥಾನಕ್ಕೆ ಸ್ವರಾಜ್ಯಪ್ರಾಪ್ತಿಯಾಗಬೇಕಾದರೆ, ಲಂಡನ್ನಿನಲ್ಲಿ ದುಡಿದು ಪ್ರಯೋಜನವಿಲ್ಲ, ಹಿಂದುಸ್ಥಾನದಲ್ಲಿ ದುಡಿಯಬೇಕು; ಬ್ರಿಟಿಶ ಪ್ರಧಾನರ ಮನಒಲಿಸುವದಲ್ಲ, ಇಲ್ಲಿರುವ ಬ್ರಿಟಿಶ ಅಧಿಕಾರಿಗಳ ಮನಒಲಿಸಬೇಕು, ಪ್ರಬಲ ಭಾರತ ಮಂತ್ರಿಗಳು ಸಹ ಸ್ಥಳಿಕ ಅಧಿಕಾರಿಗಳಿಗೆ ಧಿಃಕರಿಸಿ ನಡೆಯಲಾರರು, ಹಿಂದುಸ್ಥಾನದಲ್ಲಿ ೨೫೦ ಮಂದಿ ಜಿಲ್ಲಾಧಿಪತಿಗಳಿದ್ದಾರೆ, ಅವರೇ ಹಿಂದುಸ್ಥಾನದ ಖರೇ ಪತ್ಯಗಾರರು, ಇವರಿಗೆ ಹಿಂದುಸ್ಥಾನದಲ್ಲಿರುವಷ್ಟು ಅಧಿಕಾರವು ಬೇರೆ ಯಾವ ದೇಶದಲ್ಲಿಯೂ ಇರುವದಿಲ್ಲ, ಜಿಲ್ಲಾಧಿಪತಿಗಳ ಅಂಬೋಣದಂತೆ ರಾಜ್ಯರಥ ನಡೆಯುತ್ತದೆ, ಪ್ರತಿಯೊಂದು ಜಿಲ್ಲೆಯವರ ಕೈಯಲ್ಲಿಯೇ ಮುಕ್ತಿಮಾರ್ಗವಿದೆ" ಹೀಗೆ ಬರೆದಿದ್ದಾರೆ ಮಹಾತ್ಮರು ಇದನ್ನು ಬರೆದದ್ದು 'ಪಿಲ್ಸನಾ' ಹಡಗದ ಮೇಲೆ, ಡಿಸೆಂಬರ ೨೮ನೇ ತಾರೀಖಿಗೆ, ಮುಂಬಯಿಯಲ್ಲಿಳಿಯುವ ಮುಂಚೆ, ಇಲ್ಲಿಯ ಪರಿಸ್ಥಿತಿ ತಿಳಕೊಳ್ಳುವ ಮುಂಚೆ ಆದರೆ, ಒಂದು ವಾರದಲ್ಲಿಯೇ ಮಹಾತ್ಮರ ವಚನವು ಯಥಾರ್ಥವಾಯಿತು, ಒಡಂಬಡಿಕೆ ಮುರಿಯಿತು, ಸತ್ಯಾಗ್ರಹದ ಶಂಖ ಊದಿತು, ಮೊದಲಿನ ಬಲಿಗೆ ಮಹಾತ್ಮರೂ, ರಾಷ್ಟ್ರೀಯ ಸಭಾಪತಿಗಳಾದ ಸರದಾರ ವಲ್ಲಭಭಾಯಿಯವರೂ ಸೆರೆಯಾಳಾದರು. ಮಹಾತ್ಮರಿಗೆ ಭಾರತ ಮಂತ್ರಿಗಳ ಪತ್ರವು ವಿಮಾನ ಮಾರ್ಗವಾಗಿ ಜನವರಿ ೧ನೇ ತಾರೀಖಿಗೆ ತಲ್ಪಿತ್ತು. ರಾಷ್ಟ್ರೀಯ ಸಭೆಯ ಅಪೇಕ್ಷೆಯಂತೆ ರೌಂಡ ಟೇಬಲ್ ಪರಿಷತ್ತಿನ ಮಂಡಳಗಳಲ್ಲಿ ಸಂಪೂರ್ಣ ಸ್ವರಾಜ್ಯಕ್ಕಾಗಿ ಪ್ರಯತ್ನ ಮಾಡಲು ಭಾರತ ಮಂತ್ರಿಗಳು ಅಪ್ಪಣೆ ಕೊಟ್ಟದ್ದರಿಂದ ಮಹಾತ್ಮರಿಗೆ ಕೆಲ ಮಟ್ಟಿಗೆ ಸಮಾಧಾನವಾಗಿತ್ತು. ಸಂಯುಕ್ತ ಪ್ರಾಂತದೊಳಗಿನ ಜಮೀನದಾರರೂ ಮಹಾತ್ಮರೊಡನೆ ಅಲ್ಲಿಯ ಸ್ಥಿತಿ ವಿಚಾರಿಸಿ ಸಂಧಾನ ಮಾಡಿಕೊಳ್ಳಲು ತಯಾರಿದ್ದರು ಸರಕಾರವು ಲೇವೀ ವಸೂಲಿಯ ಕ್ರಮಕ್ಕೆ ತಡೆಹಾಕಬೇಕು, ಕೊಂಗ್ರೆಸ ಕಮೀಟಿಯವರು ಕರನಿರಾಕರಣೆಯ ಪತ್ರಿಕೆಗಳನ್ನು ಹಿಂತೆಗದುಕೊಳ್ಳಬೇಕು, ಹೀಗೆ ಸಹ ಗೊತ್ತಾಗಿತ್ತು. ಛತ್ರಿ-ನವಾಬರು — ಇವರು ಸಂಯುಕ್ತ ಪ್ರಾಂತದೊಳಗಿನ ದೊಡ್ಡ ಜಮೀನದಾರರು, ರೌಂಡ ಟೇಬಲಿಗೆ ಹೋಗಿದ್ದರು — ಮಹಾತ್ಮರೊಡನೆ ಆಲೋಚಿಸಿ ತಾವು ಹಿಂದುಸ್ಥಾನಕ್ಕೆ ತಿರುಗಿ ಬರೋದ ಕೂಡಲೆ ಎಲ್ಲ ವ್ಯವಸ್ಥೆ ಮಾಡುತ್ತೇವಾಗಿ ಹೇಳಿದ್ದರು ಆದರೆ, ಅವರು ಬಂದು ಮುಟ್ಟುವ ಮುಂಚೆಯೇ ಪಂಡಿತ ಜವಾಹಿರಲಾಲರಿಗೆ ಸೆರೆ ಹಿಡಿದಾಗಿತ್ತು. ಡಾ| ಜಯಕರರೂ, ಸರ್ ತೇಜಬಹಾದ್ದೂರ ಸಪ್ರುರವರೂ ಜನವರಿ ೨ನೇ ತಾರೀಖಿಗೆ ಮಹಾತ್ಮರೊಡನೆ ಆಲೋಚಿಸಿ ಸಂಯುಕ್ತ ಪ್ರಾಂತದೊಳಗಿನ ಸ್ಥಿತಿಯನ್ನು ಪರಿಹರಿಸುವ ಒಂದು ಯೋಜನೆ ಸಹ ತಯಾರಿಸಿದ್ದರು ವಂಗ ದೇಶದಲ್ಲಿ ಮಹಾತ್ಮರು ದಿಗ್ವಿಜಯ ಬೆಳಸಿ ಸಮಾಧಾನ ಮಾಡಬೇಕಾಗಿಯೂ ಗೊತ್ತಾಗಿತ್ತು. ಆದರೆ, ಇವೆಲ್ಲ ಮಧ್ಯಸ್ಥಿಕೆ ನಡೆಯುತ್ತಿರುವಾಗಲೇ ಸರ್ವಾಧಿಪತಿಗಳೂ, ಮಹಾತ್ಮರೂ "ರಂಜಾನ್ ಪದ್ಮಃ ಸ್ಪದರ್ ಸ್ಪದರ್!" ಎಂಬಂತೆ, ಸತ್ಯಾಗ್ರಹ ಸಂಗ್ರಾಮದಲ್ಲಿ ಸೇರಿದ್ದಾರೆ ಗಾಂಧಿ-ಇರ್ವಿನ್ ಒಡಂಬಡಿಕೆಗೆ ಇಲ್ಲಿಯ ಅಧಿಕಾರಿಗಳು ಎಂದೂ ಒಡಂಬಟ್ಟಿದ್ದಿಲ್ಲ ಅದೊಂದು ಬ್ರಿಟಿಶ ರಾಜವೈಭವಕ್ಕೆ ಕಲಂಕವೆಂದು ಅವರು ಗ್ರಹಿಸಿ ರಾಷ್ಟ್ರಸಭೆಯನ್ನು ಅಸವಾದ ಕ್ಷೀಣ ಮಾಡಲು ಅಂತರಂಗದಿಂದ ಬಹು ಪ್ರಯತ್ನಪಟ್ಟರು. ಸರದಾರ ವಲ್ಲಭಭಾಯಿಯವರ ಕಡೆ ಮೇಲಧಿಕಾರಿಗಳು ಬರೆದ ಅನೇಕ ಪತ್ರಗಳ ಪ್ರತಿಗಳಿವೆ ಮಹಾತ್ಮರು ನುಡಿದಂತೆ, ಇಲ್ಲಿಯ ಜಿಲ್ಲಾಧಿಪತಿಗಳ ಕಡೆ ಮೇರೆಯ ಅಧಿಕಾರವಿದೆ. ಜಗತ್ತಿನಲ್ಲಿ ಎಲ್ಲಿಯೂ ಜಿಲ್ಲಾಧಿಕಾರಿಗೆ ಇಷ್ಟು ಅಧಿಕಾರವಿಲ್ಲ ಸ್ವರಾಜ್ಯ ಸಿಗಬೇಕಾದಲ್ಲಿ ಇವರ ಅಧಿಕಾರ ಕುಗ್ಗಬೇಕು ಇವರು ಅಧಿಕಾರವನ್ನು ಕುಗ್ಗಿಸಿಕೊಳ್ಳಲೊಪ್ಪಿದರೆ, ಸಾಮ್ರಾಜ್ಯ ಸರಕಾರವು ಹೆಚ್ಚಿನ ಗೋಜಿಗೆ ಹೋಗದೆ ಇವರ ಅಂಬೋಣದಂತೆ ನಡಕೊಳ್ಳುತ್ತದೆ ಇವರೇ ಇಲ್ಲಿಯ ರಾಜಾಧಿಕಾರದ ಪರಿಚಾರಕರು "ಇವರ ಮನಒಲಿಸಿರಿ, ಸ್ವರಾಜ್ಯ ಪಡೆಯಲು ತಾವು ಸಮರ್ಥರೆಂದು ಅಲ್ಲಲ್ಲಿಯ ಜನರು ತಂತಮ್ಮ ಜಿಲ್ಲಾಧಿಪತಿಗಳಿಗೆ ಮನಗಾಣಿಸಲಿ ಅಂದರೆ, ಸ್ವರಾಜ್ಯವು ನಿಮ್ಮ ಹಸ್ತಗತವಾಗುತ್ತದೆ" ಹೀಗೆ ಮಹಾತ್ಮರು ಅಪ್ಪಣೆ ಕೊಡುತ್ತಾರೆ ಭಾರತಮಂತ್ರಿಗಳ ಸಂಕಲ್ಪಕ್ಕೆ ಸಿಕ್ಕಿ ಶಾಂತಿಮೂರುತಿಯಾದ ಮಹಾತ್ಮರಿಗೆ ಲಗಬಗೆಯಿಂದ ಸೆರೆಮನೆಗಟ್ಟಿ ಸರ್ವಾಧಿಪತಿಗಳು ಮಹಾತ್ಮರ ಸ್ವರಾಜ್ಯ ಮಾರ್ಗದ ಕಲ್ಪನೆಯು ಯಥಾರ್ಥವಾದದ್ದೆಂದು ತಿಳಿಸಿದ್ದಾರೆ ಸ್ವರಾಜ್ಯ ಪ್ರಾಪ್ತಿಗಾಗಿ ಪರದೇಶ ಸಂಚಾರ, ಜಲಪರ್ಯಟಣಗಳನ್ನು ಕೈಕೊಳ್ಳುವ ಕಾರಣವಿಲ್ಲ ಪ್ರಜೆಗಳು ಇಲ್ಲಿಯೇ ಉಳಿದು ಜಿಲ್ಲಾಧಿಪತಿಗಳಿಗೆ ಪ್ರಸನ್ನ ಮಾಡಿಕೊಂಡರಾಯಿತು ಈಗಿನ ಸತ್ಯಾಗ್ರಹದಿಂದ ತಿಳಿಯಬೇಕಾದ ಆನಂದ ವಾರ್ತೆಯಿದು!

ರಾಜಧಾನಿಗಳಿಂದ ದೇಶತುಂಬ ಅಪೂರ್ವ ವಿಷಾದದ ಕೋಲಾಹಲವೆದ್ದಿದೆ ಸತ್ಯಾಗ್ರಹ ಬೇಡ, ಕಾಯಿದೆಭಂಗ ಬೇಡ, ಪಿಕೆಟಿಂಗೂ ಬೇಡ, ಬರೇ ಸಂಶಯದ ಮೇಲೆ ದೊಡ್ಡ ದೊಡ್ಡ ಪ್ರಮುಖರಿಗೆ ಸೆರೆಹಿಡಿಯುವ ಕ್ರಮ ನಡೆದಿದೆ ರಾಷ್ಟ್ರೀಯ ಸಭೆಯ ನಿಧಿಗಳನ್ನು ಸರಕಾರವು ಜಪ್ತಿ ಮಾಡುತ್ತಿದೆ ಕಾಯಿದೆಯಂತೆ ಇರುವ ಶಾಂತತೆಯ ಪಿಕೆಟಿಂಗಿನ ಅಧಿಕಾರ ಸಹ ಲಯ ಹೊಂದಿತು, ಯಾರಿಗೂ, ಏನೂ ಸ್ಥಿರವೆಂದು ಎಣಿಸಬರುವದಿಲ್ಲ ರಾಷ್ಟ್ರೀಯ ಸಭೆಗೆ ಸಹಾನುಭೂತಿಯೆಂದು ಯಾರಾದರೊಬ್ಬನ ಯಾವದೊಂದು ಕೃತ್ಯವು ಪೋಲೀಸರಿಗೆ ತೋರಿದರೆ, ಅವರಿಗೆ ವಾರಂಟಿಲ್ಲದೆ, ವಿಚಾರವಿಲ್ಲದೆ ಸೆರೆಹಿಡಿಯುವ ಕ್ರಮ ನಡೆದಿದೆ ಮುಂಬಯಿಯ ಹಿಂದೀ ವರ್ತಕ ಸಂಘದ ಉಪಾಧ್ಯಕ್ಷರಾದ ಶ್ರೀ| ಕಾರಂಜಿಯಾರವರಿಗೆ ಮುಂಬಯಿಯ ಗವ್ಹರ್ನರರು ಕರೆದು ಸ್ವದೇಶಿಯ ಪ್ರಚಾರಕ್ಕಾಗಿ ಪ್ರಯತ್ನಿಸುವದು ಅಪರಾಧವಾಗುತ್ತದೆಂದು ತಿಳಿಸಿದರಂತೆ! ರಾಷ್ಟ್ರೀಯ ಸಭೆಗೆ ಅಂತರಂಗದಿಂದಾಗಲಿ, ಬಹಿರಂಗದಿಂದಾಗಲಿ ಯಾವದೇ ಸಹಾಯ ಎಳ್ಳಷ್ಟೂ ದೊರೆಯದಂತೆ ಸರಕಾರವು ಪ್ರಯತ್ನ ನಡಿಸುವದಾಗಿ ಗವ್ಹರ್ನರರು ಸಂದೇಶ ಹೊರಡಿಸಿದ್ದಾರೆ ಇದಕ್ಕಾಗಿ ಬೇಂಕುಗಳಲ್ಲಿರುವ ಠೇವುಗಳ ತಪಾಸಾಗುತ್ತದೆ. ಸರಕಾರವು ಮಲಗಿದವರಿಗೆ ಎಬ್ಬಿಸಲಾರಂಭಿಸಿದೆ ಮುಂಬಯಿಯೊಳಗಿನ ೪ ಮಂದಿ ಶ್ರೀಮಂತ ಪ್ರಮುಖರಿಗೆ ಸರಕಾರವು ಪತ್ರ ಬರೆದು ರಾಷ್ಟ್ರೀಯ ಸಭೆಯ ವಿಷಯ ಅವರ ಅಭಿಪ್ರಾಯವೇನೆಂದು ಕೇಳಿದೆ ಕಳೆದ ಸತ್ಯಾಗ್ರಹದಲ್ಲಿ ಅವರು ಮುಂಬಯಿ ಪ್ರಾಂತಿಕ ಕೊಂಗ್ರೆಸ ಕಮೀಟಿಗೆ ದ್ರವ್ಯಸಹಾಯ ಮಾಡಿದ ವಾರ್ತೆ ಸರಕಾರಕ್ಕೆ ತಿಳಿದುಬಂದದ್ದರಿಂದ ಸರಕಾರವು ಅವರ ಅಭಿಪ್ರಾಯ ಕೇಳಿದೆ ವರ್ತಕ ಸಂಘಗಳು ರಾಷ್ಟ್ರೀಯ ಸಭೆಯ ಕಡೆ ಒಲಿದರೆ, ಸರಕಾರವು ಮುನಿದು ಆ ಸಂಸ್ಥೆಗಳನ್ನು ಬೇಕಾಯಿದೇಶೀರ ಮಾಡುವದೆಂದು ಹೇಳುತ್ತಾರೆ ಆದರೆ, ದೇಶತುಂಬ ನಡೆದ ರಾಷ್ಟ್ರೀಯ ಸಭೆಯ ವಿಶ್ವರೂಪ ದರ್ಶನ ನೋಡಿ ಸರಕಾರವು ದಿಗಿಲುಬಿದ್ದಿದೆ ಮಹಾತ್ಮರು 'ವೆಲ್‌ಫೇರ ಆಫ್ ಇಂಡಿಯಾ ಲೀಗಿನ' ಸಭೆಯಲ್ಲಿ ನುಡಿದಂತೆ, ಸರಕಾರವು ತಪ್ಪಿಬಿದ್ದಿದೆಂದು ಈಗ ಇಂಗ್ಲಂಡದಲ್ಲಿ ಸರ್ವಗದ್ದಲವಾಗಿದೆ ಮಹಾತ್ಮರಿಗೆ ಬಂಧಿಸಿದ್ದು ಬ್ರಿಟಿಶ ದೌರ್ಜನ್ಯ ಅನುಚಿತವೆಂದು ಪಾದ್ರಿಗಳು ನಿಷೇಧಿಸುತ್ತಾರೆ. ಪಾರ್ಲಮೆಂಟಿನ ಸಭೆಯನ್ನು ಕೂಡಲೆ ಕರೆಯಬೇಕಾಗಿ ಪಾರ್ಲಿಮೆಂಟಿನ ಸಭಾಸದರು ಅಲ್ಲಿಯ ಅಧ್ಯಕ್ಷರಿಗೆ ನೋಟೀಸು ಕೊಟ್ಟಿರುತ್ತಾರೆ. ಕೋಟ್ಯಾವಧಿ ಜನರಿಗೆ ಚುಚ್ಚಿದ್ದರಿಂದ ಬ್ರಿಟಿಶ ದೇಶಕ್ಕೆ ಕ್ಷೇಮವಿಲ್ಲವಾಗಿಯೂ ಮುಂಜಾಗ್ರತೆ ಕೊಟ್ಟಿರುತ್ತಾರೆ ಸರ್ವಾಧಿಪತಿ ವಿಲಿಂಗಡನ್ ದೊರೆಗಳು ಕೊಟ್ಟ ಉತ್ತರ ನೋಡಿ ಬ್ರಿಟಿಶರೊಬ್ಬರು ಬಹು ನಾಚಿಕೆಪಟ್ಟರೆಂದು ಶ್ರೀ| ಮಹಾದೇವಭಾಯಿ ದೇಸಾಯಿಯವರು ಒರೆಯುತ್ತಾರೆ ಹೀಗೆಲ್ಲ ವಾತಾವರಣವು ಪ್ರಕ್ಷುಬ್ಧವಾಗಿದೆ ಆದರಿಂದ ಸರ್ವಾಧಿಪತಿ ವಿಲಿಂಗಡನ್ ದೊರೆಗಳು ಆಲೋಚನೆಗಾಗಿ ಸರ್ ತೇಜಬಹಾದ್ದೂರ ಸಪ್ರುರವರಿಗೂ, ಶ್ರೀ| ಮುಕುಂದ ರಾವ ಜಯಕರರಿಗೂ, ಸರ್ ಫಿರೋಜ ಸೇಠನಾರವರಿಗೂ, ಶ್ರೀ| ಚಿಂತಾಮಣಿ ಹಾಗು ರಂಗಸ್ವಾಮಿ ಅಯ್ಯಂಗಾರರವರಿಗೂ ಲಗಬಗೆಯಿಂದ ದಿಲ್ಲಿಗೆ ಕರೆಕೊಂಡಿದ್ದಾರೆ ಸರ್ವಾಧಿಪತಿಗಳಿಗೂ, ಈ ಪ್ರಕರಣದೊಳಗಿಂದ ಮರ್ಯಾದೆಯಿಂದ ಹೇಗೆ ಹೊರಬೀಳಬೇಕೆಂದು ಅನಿಸುತ್ತದಂತೆ ಎಲ್ಲರೂ ಕೂಡಿ ಮಧ್ಯಸ್ಥಿಕೆಯ ವಿಚಾರ ಮಾಡುವರಾಗಿಯೂ, ಅದಕ ಸರಿಗ ಸರಕಾರವು ಕೈಕೊಳ್ಳುವದಾಗಿಯೂ ಮುಂಬಯಿಯ 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯು ಪ್ರಕಟಿಸುತ್ತದೆ. ಒಮ್ಮೆಲೇ ಗಗನ ಹರಿದ್ದರಿಂದ ದೊಪ್ಪನೆ ಕೆಳಬೀಳುವ ಪ್ರಸಂಗ ಸರಕಾರದ ಮೇಲೆ ಬರಬಹುದೆಂಬ ಭೀತಿಯಾಗಿದೆಯೋ ಏನೋ! ಸರಕಾರದ ದಬ್ಬಾಳಿಕೆಯು ಮುಗಿಯಿತೆಂದು ಯಾರೂ ಎಣಿಸಲಾಗದು ಈಗಿನ ಕ್ರಮವು ವಿರಾಂತವಲ್ಲವಂತೆ, ಮತ್ತು ಮುಂಬರಿದರೆ, ಕಠಿಣವಾದ ಆಪತ್ತುಗಳು ಸಂಭವಿಸುವವಂತೆ ಇನ್ನೂ ಯಾವ ಯಾವ ಆಪತ್ತುಗಳು ಬರಲಿಕ್ಕಿವೆಯೆಂದು ನಮ್ಮಿಂದ ಹೇಳಬರದು, ಬಲ್ಲಿದ

ಲಿಕ್ಕೆ ಸಹ ಬರದು, ಆದಾಗ್ಯೂ, ಸರ್ವಾಧಿಪತಿಗಳ-ಶ್ರೀ| ಸಪ್ರೂ ಜಯಕರರಂಥ ಮಧ್ಯಸ್ಥರಾಚನೆ ಆಲೋಚಿಸುತ್ತಾರೆಂದು ತಿಳಿದು ಆನಂದವಾಗಿದೆ ಅನೇಕ ವರೆಗೆ ದಬ್ಬಾಳಿಕೆಗೆ ತಡೆಯೊಂದಾದರೂ ಆನಂದವೇ. ಸರ್ವಾಧಿಪತಿಗಳಿಗೆ ಸದ್ಬುದ್ಧಿ ಪ್ರೇರಣೆಯಾಗಿ ಅವರು ದಬ್ಬಾಳಿಕೆಯನ್ನು ತ್ಯಜಿಸುವರೆಂದು ನಾವು ಕೋರುತ್ತೇವೆ

ಮಹಾತ್ಮರ ದಿನಚರಿ.

ಮಹಾತ್ಮರು ಕಳೆದ ವರ್ಷ ಉಳಕೊಂಡ ಯೆರವಡಾ ಜೈಲಿನ ಕೋಣೆಯಲ್ಲಿಯೇ ಉಳಕೊಂಡಿದ್ದಾರೆ, ಸರೋಜಿನಿಯವರು ಕಳೆದ ವರ್ಷದವರೆಗೆ ಮಹಾತ್ಮರ ಜೋಡೆ. ಮಹಾತ್ಮರು ಬಿಡುಗಡೆಯಾದಂದಿನಿಂದ ಖಾಲಿ ಇತ್ತು. ಕಳೆದ ವರ್ಷ ಮಹಾತ್ಮರ ಚಾಕರಿ ಮಾಡುತ್ತಿದ್ದ ಪರಿಚಾರಕನೇ ಈ ವರ್ಷವೂ ಕೆಲಸ ಮಾಡುತ್ತಾನೆ. ಮಹಾತ್ಮರು ಸೋಮವಾರ ಯೆರವಡಾ ಮಂದಿರ ಸೇರಿದೊಡನೆ ಮೀರಾಬಾಯಿಯವರ ಕೊಟ್ಟ ಹಣ್ಣು-ಹಂಪಲಗಳಿಂದ ಸ್ವಾದಿಷ್ಟ ರಸಾಯನ ತಯಾರಿಸಿ ಕುಡಿದರು. ೧೦ ಘಂಟೆಯ ತನಕ ನೂತು, ಆಮೇಲೆ ವಿಶ್ರಾಂತಿ ಮಾಡಿದರು. ಸಂಜೆ ೬ಗಂಟೆಯಲ್ಲಿ ಅಂದಾಜಿ ೭|| ಘಂಟೆಗೆ ಪ್ರಾರ್ಥನೆ ಮಾಡಿದರು. ಪುಸ್ತಕಗಳನ್ನು ತಲೆಗಿಂಬಿನಿಟ್ಟು ಚಾಪೆಯನ್ನು ಜಗಲಿಯ ಮೇಲೆ ಹಾಕಿಕೊಂಡು ಮಲಗಿದರು. ದಿನಾ ಮಹಾತ್ಮರು ೩೦೦ ಗಜ ನೂಲನ್ನು ನೂಲುತ್ತಾರೆ. ನಿತ್ಯನೇಮದಂತೆ ಬೆಳಗ್ಗೆ ೪ ಘಂಟೆಗೆ ಏಳುತ್ತಾರೆ

ವಾರ್ತೆಗಳು.

— ಮುಂಬಯಿ ಹೈಕೋರ್ಟಿನಲ್ಲಿ ಒಂದು ಅರ್ಜಿ ದಾಖಲ ಮಾಡಿ ಮಹಾತ್ಮರಿಗೆ ಕಾಯಿದೆಯಂತೆ ಬಂಧಿಸಿದಬರುವದಿಲ್ಲವಾಗಿ ಸಾಧಿಸಿ ಮುಂಬಯಿಯ ವಕೀಲರು ಮಹಾತ್ಮರಿಗೆ ಕೋರ್ಟಿನಲ್ಲಿ ಹಾಜರುಪಡಿಸುವಂತೆ ಸರಕಾರದ ಮೇಲೆ ಸಮನ್ಸ ಕೊಡುವರಂತೆ

— ಫೆಬ್ರುವರಿ ೮ನೇ ತಾರೀಖಿನೊಳಗೆ ಹಿಂದುಸ್ಥಾನದೊಳಗಿನ ಈಗಿನ ಸ್ಥಿತಿ ಸುಧಾರಿಸುವದಾಗಿ ಇಂದೂರಿನ ರಾ| ಲವಂಗಿಯಾ ಎಂಬ ಜ್ಯೋತಿಷಶಾಸ್ತ್ರವಿಶಾರದರು ಭವಿಷ್ಯ ಮಾಡಿದ್ದಾರೆ

— ಕಾಂಗ್ರೆಸ ಪಕ್ಷದವರೆಂದು ಸಂಶಯ ಬಂದವರ ಮೇಲೆ ಆರ್ಡಿನೆನ್ಸಿನಂತೆ ಪ್ರತಿಬಂಧಕ ಹುಕುಮನ್ನು ಹೊರಡಿಸಿ ಅದರಂತೆ ನಡಕೊಳ್ಳಲು ಒಪ್ಪದಿದ್ದವರ ಮೇಲೆ ಸರಕಾರವು ಖಟ್ಲೆ ನಡಿಸಿ ೨-೩|| ವರ್ಷಗಳ ತನಕ ಶಿಕ್ಷೆ ಮಾಡುವ ಯೋಜನೆಯಿರುವದಾಗಿ ಮುಂಬಯಿ 'ಈವ್ನಿಂಗ ನ್ಯೂಸ' ಪತ್ರಿಕೆಯ ಸುದ್ದಿ!

— ರಾಷ್ಟ್ರೀಯ ಸಭೆಯು ಬೇಕಾಯಿದೇಶೀರ ಆದ್ದರಿಂದ ಅದಕ್ಕೆ ಅನುಕೂಲವಾಗಿ ಮೆರವಣಿಗೆ ಹೊರಡಿಸುವದು, ಹರತಾಳ ಮಾಡುವದು ಇವೆಲ್ಲ ಬೇಕಾಯಿದೇಶೀರ ಎಂದು ಮುಂಬಯಿಯ 'ಡೈರೆಕ್ಟರ ಆಫ ಇನ್‌ಫಾರ್ಮೇಶನ್'ರವರು ಜಾಹೀರ ಹೇಳುತ್ತಾರೆ

— ಮಹಾತ್ಮರಿಗೆ ಬಂಧಿಸಿದ್ದರಿಂದ ಮುಂಬಯಿಯಲ್ಲಿ ಹತ್ತಿ ಪೇಟೆಯವರು ಎಲ್ಲ ವ್ಯಾಪಾರವನ್ನು ತಡೆದು ನಿಲ್ಲಿಸಬೇಕಾಗಿ ನಿರ್ಧಾರ ಮಾಡಿದ್ದಾರೆ ಇಂಗ್ಲಂಡ ದೇಶದೊಳಗಿನ ಲಿವ್ಹರಪೂಲ ಹತ್ತಿ ಸಂಘದವರೂ ದಸ ವ್ಯವಹಾರ ಮಾಡಬಾರದಾಗಿಯೂ ದಲಾಲರ ಅಂಬೋಣವಾಗಿದೆ ಆದರಿಂದ ಹರತಾಳ ಮುಗಿದು ಆಫೀಸು ಚಾಲು ಆದಾಗ್ಯೂ, ಹತ್ತಿ-ಬೆಳ್ಳಿ ಒಪ್ಪೆ ಮೊದಲಾದವುಗಳ ವ್ಯಾಪಾರವಾಗಲಿಲ್ಲ

— ಮುಂಬಯಿಯಲ್ಲಿ ಪಿಕೆಟಿಂಗಿಗೆ ಪ್ರಾರಂಭವಾಯಿತು ಪರದೇಶಿ ಜವಳಿ ಅಂಗಡಿಗಳ ಮುಂದೆ ದೇಶಸೇವಿಕೆಯರು ನಿಂತು ಪಿಕೆಟಿಂಗ ನಡಿಸುತ್ತಾರೆ ಸರದಾರ ಜಮಾಯತ ಸಿಂಗರವರ ಪತ್ನಿಯಿಂದಿರಾದ ಶ್ರೀಮತಿ ಅಮೃತ ಕುವರರವರಿಗ ಸರೆಹಿಡಿಯಲ್ಪಟ್ಟಿದೆ ರಾಷ್ಟ್ರೀಯ ಸಭೆಯು ನಿಷೇಧವಾದ ಸಭೆ, ಮೆರವಣಿಗೆ ಸೇರಬಾರದೆಂದು ಇನ್ನೂ ಪೊಲೀಸ ಕಮಿಶನರರು ಹುಕುಮು ಹೊರಡಿಸಲಿಲ್ಲ. ಅಂಥ ಹುಕುಮು ಹೊರಡಿಸುವ ತಯಾರಿ ನಡೆದಿದೆ. ರಾಷ್ಟ್ರೀಯ ಮುಸಲ್ಮಾನ ಪಕ್ಷವೆಂಬ ಸಂಸ್ಥೆಯನ್ನೂ ಸರಕಾರವು ಬೇಕಾಯಿದೇಶೀರ ಎಂದು ಜಾಹೀರಪಡಿಸಿದೆ "ನಾವು ಕಾಯಿದೆಭಂಗ ಪ್ರಚಾರಕರಲ್ಲ, ಮುಸಲ್ಮಾನ ಬಾಂಧವರಿಗೆ ರಾಷ್ಟ್ರದೃಷ್ಟಿ ಒದಗಿಸುವ ಕಾರ್ಯ ಮಾಡುತ್ತೇವೆ, ಇಂಥ ಸಂಸ್ಥೆ ಬೇಕಾಯಿದೆಯಾದರೆ ಅದನ್ನು ರೌಂಡ ಟೇಬಲಿನ ಮುಂದಿನ ವಿಚಾರವನ್ನು ಇಷ್ಟಕ್ಕೇ ತಡಿಸುವದುತ್ತಮ ಮುಂದಿನ ವಿಚಾರಕ್ಕಾಗಿ ಲಂಡನಿಂದ ಇದೇ ೨೦ನೇ ೧೯ನೇ ತಾರೀಖಿಗೆ ಹೊರಡಲಿಕ್ಕಿದ್ದ ಬ್ರಿಟಿಶ ಸಭಾಸದರಿಗ ಹೊರಡಬಾರದೆಂದು ಸರಕಾರವು ಬೇಗನೆ ತಿಳಿಸುವದುತ್ತಮ' ಹೀಗೆ ಆ ಪಕ್ಷದ ಕಾರ್ಯದರ್ಶಿಗಳಾದ ಶ್ರೀ| ಎಮ್. ಸಿ ಚಗ್ಲಾರವರು ಪ್ರಕಟಿಸುತ್ತಾರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯು [illegible] ತಯಾರಿಸಿದ ಮುದ್ರಣಶಾಸನ ಉಲ್ಲಂಘಿಸಿ 'ಕಾಂಗ್ರೆಸ ಬುಲೆಟಿನ್' ಪತ್ರಿಕೆ ಪ್ರಕಟಿಸಲಾಗುತ್ತಿದೆ [illegible] ಕಷ್ಟದಿಂದ ಇವುಗಳ ವಿಕ್ರಯ ಮಾಡುತ್ತವಾಗಿ ಸರಕಾರದ ಅಂಬೋಣ, ಬಹಳ ವಿಕ್ರಯವಾಗುತ್ತದೆಂದು ಮುಂಬಯಿ 'ಕ್ರಾನಿಕಲ್' ಪತ್ರಿಕೆಯ ಅಂಬೋಣ!

— ಕರ್ನಾಟಕದಲ್ಲಿ ಶ್ರೀ| ಗಂಗಾಧರರಾವ ದೇಶಪಾಂಡೆ, ಹನುಮಂತರಾವ ಕೌಜಲಗಿ, ಮುದವೀಡು ಕೃಷ್ಣರಾವ, ನಾರಾಯಣರಾವ ಜೋಶಿ, ಕಾಕಾ ಕಾರಖಾನೀಸ, ಹೊಸಮನಿ ಸಿದ್ದಪ್ಪ ಮೊದಲಾದವರಿಗೆ ಸೆರೆಹಿಡಿದಿದ್ದಾರೆ ಪ್ರಾಂತಿಕ ಕಾಂಗ್ರೆಸ ಕಮಿಟಿಯು ವಿಸರ್ಜನ ಹೊಂದಿ ಶ್ರೀ| ದಿವಾಕರ ರಂಗನಾಥರಾಯರಿಗೆ ಸರ್ವಾಧಿಕಾರಿಯಾಗಿ ನೇಮಿಸಲಾಗಿದೆ ಹುಬ್ಬಳ್ಳಿಯ ತಿಲಕ ಗ್ರಂಥ ಸಂಗ್ರಹ-ವಾಚನಾಲಯ, ಸಂಸ್ಥೆಯು ಬೇಕಾಯಿದೇಶೀರ ಆದ್ದರಿಂದ ಅದನ್ನು ಮುಚ್ಚಬೇಕಾಗಿ ಠರಾವಾಗಿದೆ

— ಸಂಯುಕ್ತ ಪ್ರಾಂತದಲ್ಲಿ ದೊಡ್ಡ ಗಾವಿ ಶ್ರೀಕ್ಷೇತ್ರ ಕಾಶಿ, ಲಖನೌ, ಕಾನಪುರ ಪ್ರಯಾಗ ಮೊದಲಾದ ಕಡೆಗಳಲ್ಲಿ ಪ್ರತಿಬಂಧಕ ಹುಕುಮನ್ನು ಮುರಿದು ಮಹಾತ್ಮರಿಗೆ, ಸರದಾರ ವಲ್ಲಭಭಾಯಿ ಮೊದಲಾದವರಿಗೆ ಸರೆಹಿಡಿದ ಬಗ್ಗೆ ಸಭೆಗಳಾದವು ಪ್ರಯಾಗದಲ್ಲಿ ಪಂಡಿತ ಜವಾಹರಲಾಲರ ವಯೋವೃದ್ಧ ಮಾತೋಶ್ರೀಯವರಾದ ಶ್ರೀ ಮತಿ ಸ್ವರೂಪರಾಣಿ ನೆಹರೂರವರು ಮೆರವಣಿಗೆಯನ್ನು ಹೊರಡಿಸಿದರು. ಪೊಲೀಸರು ಅಡ್ಡಗಟ್ಟಲು, ಜನರು ಹಾಗೇ ಕೂತರು ಮುಂದೆ ಕೆಲ ಕಾಲದ ಬಳಿಕ ಮೆರವಣಿಗ ಮುಂದರಿದು ಸಭೆಯಾಯಿತು ಶ್ರೀ ಕ್ಷೇತ್ರ ಕಾಶಿಯಲ್ಲಿ ಪೊಲೀಸರು ಚದರಿಸಿದಾಗ್ಯೂ ಸಭಿಕರು ಚದರಲಿಲ್ಲ; ಅದರಿಂದ ಅವರ ಮೇಲೆ ಗುಂಡು ಹಾರಿಸಲ್ಪಟ್ಟವು, ಡೊಣ್ಣೆಯ ಪ್ರಯೋಗವಾಯಿತು ಇಬ್ಬರು ಮಡಿದರು, ೨೦೦ ಮಂದಿಗಳಿಗೆ ಗಾಯಗಳಾಗಿವೆ ಕಾನಪುರದಲ್ಲಿ ಸಭೆ ಚದರಿಸುವಾಗ ಪೊಲೀಸರು ತುಪಾಕಿಗಳ ವೃಷ್ಟಿಯಿಂದ ಜನರಿಗೆ ನೋಯಿಸಿದರು ಲಖನೌದಲ್ಲಿಯೂ ಇದೇ ಪ್ರಕಾರದ ಸ್ಥಿತಿ ಅಲ್ಲಿ ಪಿಕೆಟಿಂಗಿಗೆ ಇದಿರಾಗುವದಕ್ಕಾಗಿ ಪ್ರತಿ-ಪಿಕೆಟಿಂಗ ಸಂಸ್ಥೆಗಳನ್ನು ಸ್ಥಾಪಿಸುವ ಆಲೋಚನೆ ನಡೆದಿದೆ [illegible] ನರರು ಅತ್ತ ಕಡೆ ದಿಗ್ವಿಜಯ ಮಾಡಿ ಒಂದರು ಪಂಡಿತ ಜವಾಹಿರಲಾಲರಿಗೆ ೬ ವರ್ಷಗಳ ಶಿಕ್ಷೆ, ರೂ ೫೦೦ ದಂಡ ಆಯಿತು ಶೆ| ಶೇರವಾಣಿಯವರಿಗ ೬ ತಿಂಗಳ ಶಿಕ್ಷೆ, ೧೫೦ ರೂ ದಂಡ! ೭೦ ವರ್ಷದ ಮುದಕರಿಗೆ ಸಹ ಶಿಕ್ಷೆಯಾಗಿದೆ ಪ್ರಾಂತಿಕ ಕಾಯಿದೆ ಕೌನ್ಸಿಲಿನ ವಾಚನಾಲಯದ ಮುಖ್ಯ ಅಧಿಕಾರಿಗಳಾದ ರಾ| ಟಿಳಕರವರು ರಾಜಿನಾಮೆ ಕೊಟ್ಟಿದ್ದಾರೆ

— ದಿಲ್ಲಿಯಲ್ಲಿ ಅಖಿಲ ಭಾರತೀಯ ಮುಸಲ್ಮಾನ ಪರಿಷತ್ತಿನ ಕಾರ್ಯಕಾರಿ ಮಂಡಳ ಸೇರಿತ್ತು ಮುಸಲ್ಮಾನ ಬಾಂಧವರು ಕಾಯಿದೆಭಂಗಕ್ಕೆ, ಸತ್ಯಾಗ್ರಹಕ್ಕೆ ಜನ್ಮವಂಥ ಯಾವದೇ ಕಾರ್ಯಕ್ರಮ ಕೈಕೊಳ್ಳಬಾರದಾಗಿ ವ್ಯಕ್ತವಾದ ಠರಾವ ಇಸ್ಮಾಯಿಲಖಾನ ಹಾಗೂ ಕಾರ್ಯದರ್ಶಿಗಳಾದ ಮೌ| ಶಫಿ ದಾವೂದ ಇವರ್ಮೆದರವರ ಅಭಿಪ್ರಾಯ. ಅಹಮದ್ ವರು ಒಪ್ಪಲಿಲ್ಲ; ಇವರೂ ರಾಜಿನಾಮೆ ಕೊಟ್ಟರು ನಲೀಮರಾಜರೂ ಕಾರ್ಯಕಾರಿ ಮಂಡಳದ ಸಭಾಸದತ್ವಕ್ಕೆ ಇದೇ ಕಾರಣದಮೂಲಕ ರಾಜಿನಾಮೆ ಕೊಟ್ಟರು

— ಗಡಿನಾಡಿನಲ್ಲಿ ಸ್ಥಿತಿ ಹಾಗಿದೆಯೆಂದು ಅಧಿಕಾರಿಗಳು ತಿಳಿಸಿದಷ್ಟು ಸಂಗೀನವಾಗಿ ತೋರುತ್ತದೆ ಶಾಂತಿ-ಭಂಗಕಾರಿಗಳಿಗೆ ಪ್ರತಿಬಂಧ ಸರಕಾರಿ ಪ್ರಕಟಣೆಗಳಲ್ಲಿ ಸಮಾಧಾನವಾಗಿದೆಂಬ ಒಂದು ವಾಕ್ಯವಿರುತ್ತಿದ್ದು ಉಳಿದ ವೃತ್ತಾಂತವಲ್ಲ ಅಸಮಾಧಾನದ್ದೇ! ಖುದಾಯಿ-ಖಿದಮತಗಾರರು ಚದರಿದ್ದೇಶದರೆ ಚದರುವದಿಲ್ಲ, ಸಭೆ ಸೇರಿಸುತ್ತಾರೆ, ಮೆರವಣಿಗೆ ಹೊರಡಿಸುತ್ತಾರೆ ಕೋರ್ಟಿನ ಮುಂದ ಪಿಕೆಟಿಂಗ ನಡಿಸುತ್ತಾರೆ ಪ್ರತಿ ಜಿಲ್ಲೆಯಲ್ಲಿ ಸರಕಾರವು ಸೈನ್ಯ ಪಥಕಗಳನ್ನು ಕಳಿಸುತ್ತಿದೆ ಮರ್ದಾನ ಭಾಗಗಳಲ್ಲಿ ಸೈನ್ಯ ಪಥಕ್ಕೆ ಜನರನ್ನು ಚದರಿಸುವ ಪ್ರಸಂಗ ಬಂತು ರಾಷ್ಟ್ರೀಯ ಸಭೆಯವರಿಗೆ ಸೆರೆಹಿಡಿಯುತ್ತಿದ್ದಾರೆ. ಮಹಾತ್ಮರ ಅಪ್ಪಣೆಯಂತೆ ಆ ಕಡೆ ಪರಿಸ್ಥಿತಿ ನೋಡಿ ಮುಂದಿನ ಮಾರ್ಗಯೋಜನೆ ಮಾಡಹೋದ ಶ್ರೀ| ದೇವದಾಸ ಗಾಂಧಿಯವರಿಗೆ ಸೆರೆಯಾಯಿತು.

— ಗುಜರಾಥದಲ್ಲಿ ಶ್ರೀ| ಮಹಾದೇವಭಾಯಿ ದೇಸಾಯಿ, ಕಾಕಾ ಕಾಲೇಲಕರ, ಅಬ್ಬಾಸ ತಯ್ಯಬಜಿಯವರಿಗೆ ಸೆರೆಹಿಡಿದಿದ್ದಾರೆ ಸುರತ ಬಾರ್ಡೋಲಿ, ಅಹಮದಾಬಾದಗಳೊಳಗಿನ ಇನ್ನೂ ಅನೇಕ ಮುಂದಾಳುಗಳಿಗ ಸೆರೆಹಿಡಿದಿದ್ದಾರೆ ಶ್ರೀ| ಮಹಾದೇವಭಾಯಿ ಹಾಗು ಕಾಲೇಲಕರರವರು ಮಹಾತ್ಮರ ತರುವಾಯ ಅನುಕ್ರಮವಾಗಿ 'ಯಂಗ ಇಂಡಿಯಾ' ಹಾಗು 'ನವಜೀವನ' ಪತ್ರಿಕೆಗಳ ಚಾಲಕರಾಗಿದ್ದರು.

—ವಿಜ್ಞಾಪನೆ.

'ಕರ್ನಾಟಕ ಧುರೀಣ' ಪತ್ರಿಕೆಯ ಸಂಪಾದಕರಾದ ಶ್ರೀ| ಗಣೇಶ ರಾಮ ಯಾಜಿಯವರಿಗ ಸರೆಹಿಡಿದದ್ದರಿಂದ ಹೊಸ ಸಂಪಾದಕರ ವ್ಯವಸ್ಥೆಯಾಗವವರೆಗ 'ಕರ್ನಾಟಕ ಧುರೀಣ' ಪತ್ರಿಕೆಯು ನಿಲ್ಲಿಸಲ್ಪಡುವದಾಗಿಯೂ, ನಾಳಿಯಿಂದ ಪತ್ರಿಕೆ ಹೊರಡಲಿಕ್ಕಿಲ್ಲವಾಗಿಯೂ, ಹೊಸ ವ್ಯವಸ್ಥೆಯಾದ ಕೂಡಲೆ ಪತ್ರಿಕೆ ಕಳಿಸಲ್ಪಡುವದಾಗಿಯೂ, ವಾಚಕರು ಕ್ಷಮಿಸಬೇಕಾಗಿಯೂ ಪತ್ರಿಕೆಯ ಮೆನೇಜರರ ಪ್ರಾರ್ಥನೆ

ಕುಮಟಾ, ತಾ ೯-೧-೧೯೩೨.

ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಿರಂಕುಶ ರಾಜಶಾಸನಗಳ ಆರ್ಭಾಟ!

ಸ್ಥಾನಿಕ ವೃತ್ತಾಂತ

ಕುಮಟಾ— ಇಲ್ಲಿಯ ಮುಖ್ಯ ವಾರ್ತೆ ರಾಜಶಾಸನಗಳ [illegible] ಸರಿಹಿಡಿದದ್ದು. ನೆಟ್ಟ ಸೋಮವಾರ ಇಲ್ಲಿಯ ಶ್ರೀ ಶ್ರೀಪಾದರಾವ ಕಲ್ಯಾಣಪುರಕರ ವಕೀಲ ಹಾಗು ಶ್ರೀ [illegible] ಇವರಿಬ್ಬರಿಗೆ ಪೋಲೀಸರು ೧೪೪ನೇ ಕಲಮಿನ [illegible] ಇವರು. ಈ ಸುದ್ದಿ ಊರೊಳಗೆ ಹಬ್ಬಿದ [illegible] ಮೆರವಣಿಗೆಯಿಂದ ಕರೆದೊಯ್ದ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದ [illegible] ದೊಡ್ಡ ಸಭೆಯಾಯಿತು. ಶಾಸಿತರಾದವರಿಗೆ [illegible] ಸಭೆಯ [illegible] ಪ್ರದರ್ಶಿಸಬೇಕಾಗಿಯೂ, [illegible] ಕಡುಕರವಾಗಿ [illegible] ಸಂಸ್ಥೆ [illegible] ಜನರು [illegible] ಪೋಲೀಸರ [illegible] ಮೋಟಾರ ಹತ್ತಿಸಿ [illegible] ಶ್ರೀ [illegible] ಶ್ರೀ [illegible] ಕೇಶವ [illegible] ವಕೀಲ [illegible] ಕಾರವಾರಕ್ಕೊಯ್ದರು [illegible]

ಶ್ರೀ [illegible] ಹಾಗು ಶ್ರೀ [illegible] ಕಾಮಾಕ್ಷಿ ದೇವಸ್ಥಾನಗಳಲ್ಲಿ [illegible] ಶ್ರೀ [illegible] ಶಾಸ್ತ್ರಿಗಳ ಕೀರ್ತನಗಳಾದವು. ಶ್ರೀ ಶಾಸ್ತ್ರಿಗಳು ಕನ್ನಡ ನಾಡಿನ [illegible] ಕೀರ್ತನೆಗಳಲ್ಲಿ [illegible] ಅನುಭವಗಳನ್ನು ಕನ್ನಡ ನಾಡ ಮಹಿಮೆ ಪ್ರಾಚೀನ ವೈಭವವನ್ನು [illegible] ಸರಸವಾಗಿ ವಿವರಿಸುತ್ತಾರೆ.

ಮಹಾತ್ಮರಿಗೂ ಸರದಾರ ವಲ್ಲಭಭಾಯಿಯವರಿಗೂ ಸೆರೆಹಿಡಿದದ್ದರಿಂದ ಇಲ್ಲಿ ಮಂಗಳವಾರ ಇಡೀ ದಿನ ಹರತಾಳವಾಯಿತು. ಸಂಜೆ ಮೆರವಣಿಗೆಯಾಯಿತು.

ನಿನ್ನೆಯಿಂದ ಸ್ವಯಂಸೇವಕರೆಗಳಿಗೆ ಪ್ರಾರಂಭವಾಗಿದೆ.

ಇಲ್ಲಿಯ [illegible] ತಾಲೂಕ ಕೊಂಗ್ರೆಸ ಮಂಡ[illegible] ವಿಸರ್ಜನವಾಗಿರುತ್ತದೆ.

ಮುಂಬಯಿಯ [illegible] ಕಿಲಿಕ್ ನಿಕ್ಸನ್ [illegible] ಕಿಲಿಕ್ ನಿಕ್ಸನ್ [illegible] ಇಂಡಿಯಾ [illegible] ಕಿಲಿಕ್ ನಿಕ್ಸನ್ ಬೋಟಿಯ ಮೇಲೆ [illegible] ಕಿಲಿಕ್ ನಿಕ್ಸನ್ ಕಂಪನಿಯು [illegible] ಇಂಡಿಯಾ [illegible] ಕಂಪನಿ ದೇಶೀ!

ಇಲ್ಲಿಯ ವಕೀಲರ ಸಂಘ ಹಾಗು ಅಡಿಕೆ ದಲಾಲ ಮತ್ತು ವರ್ತಕರ ಸಂಘಗಳನ್ನು [illegible] ಸಂಘಗಳ ಅಧ್ಯಕ್ಷರಾದ ಶ್ರೀ ಜಮುನಾದಾಸ [illegible] ತಿಳಿಸುತ್ತಾರೆ.

ಹೊನ್ನಾವರ— ಇಲ್ಲಿ ನಿನ್ನೆ ಮುಂಜಾನೆ ಪೋಲೀಸರು [illegible] ಶಾಸ್ತ್ರಿ ವಕೀಲ, [illegible] ಕೇಶವ ಭಟ್ಟ ವಕೀಲ ಇವರೀರ್ವರಿಗೆ ಮುಂಜಾವು ೫ ಘಂಟೆಗೆ ಎಬ್ಬಿಸಿ ಸೆರೆಹಿಡಿದರು. ಕೂಡಲೆ ಜನರು ನೆರೆದರು. "ಹೊನ್ನಾವರದ ಹೆಸರನ್ನು ಕಾಪಾಡಿರಿ, ಅಹಿಂಸೆಯಿಂದ ನಡಕೊಳ್ಳಿರಿ, ಪರದೇಶಿ ಸರಕಿಗೆ ಬಹಿಷ್ಕಾರ ಹಾಕಿರಿ, ಕೈರಾಟೆಯ ಮೇಲೆ ನೂಲು ತೆಗೆಯಿರಿ, ಖಾದಿ ತೊಟ್ಟುಕೊಳ್ಳಿರಿ " ಹೀಗೆ ಉತ್ತರಿಸಿ ನುಡಿದರು. ಹಾಗೆಯೇ ೭ ಘಂಟೆಗೆ ಮೋಟಾರ ಹತ್ತಿಸಿ ಕುಮಟೆ ಮಾರ್ಗವಾಗಿ ಕಾರವಾರಕ್ಕೊಯ್ದರು. ಅವರಿಂದು ಸಂಪೂರ್ಣ ಹರತಾಳ.

ಮಹಾತ್ಮರಿಗೂ, ಸರದಾರ ವಲ್ಲಭಭಾಯಿಯವರಿಗೂ ಸೆರೆಹಿಡಿದ ವರ್ತಮಾನ ಇಲ್ಲಿಯ ಟಪ್ಪಾಲ ಹೋಲಿನಲ್ಲಿ ಮಂಗಳವಾರ ೩ ಘಂಟೆಗೆ ಸಭೆ ಸೇರಿ ಸರಕಾರದ ದಬ್ಬಾಳಿಕೆಯ ಧೋರಣದ ನಿಷೇಧವಾಯಿತು.

ಮಂಗಳವಾರ ಸಾಯಂಕಾಲ ಶ್ರೀ ಆನಂದಮೂರ್ತಿಯವರ ಸುಶ್ರಾವ್ಯ ಪ್ರವಚನವಾಯಿತು. ಪ್ರಾಚೀನ ಪರಂಪರೆಯಲ್ಲಿ ಆಚಾರ್ಯರಲ್ಲಿ ಈಗಿನ ದಿನಮಾನಕ್ಕುಚಿತವಾಗಿ ತಕ್ಕ ಬದಲಾವಣೆಗಳನ್ನು ಮಾಡಿಕೊಂಡು ಸನಾತನ ಧರ್ಮರಕ್ಷಣೆ ಮಾಡಬೇಕಾಗಿಯೂ, ಧರ್ಮಶಾಸನದ [illegible] ಬದಲಿಸಿಕೊಳ್ಳಬೇಕಾಗಿಯೂ, ದಿನಾ ೧೨ [illegible] ನಮಸ್ಕಾರಗಳನ್ನು ತಪ್ಪದೆ ಹಾಕಬೇಕಾಗಿಯೂ ಬೋಧಿಸಿದರು. ಸೂರ್ಯನಮಸ್ಕಾರ ಶಾಸ್ತ್ರೀಯವಾಗಿ [illegible] ಕೊಡುವವರಿಗೆ ಶ್ರೀ [illegible] ದೇವರ ಒಂದೊಂದು ಬಾವಚಿತ್ರ ಕೊಡುತ್ತೇವಾಗಿ ತಿಳಿಸಿದರು. ಪ್ರವಚನಕ್ಕೆ ಮುಸಲ್ಮಾನರೂ, ಕ್ರಿಶ್ಚನ್ನರೂ ನೆರೆದಿದ್ದರು. ವಿಶೇಷ. ಮಾರನೇ ದಿನ ಶ್ರೀ ಆನಂದ ಮೂರ್ತಿಯವರು ಕಾರವಾರಕ್ಕೆ ತೆರಳಿದರು.

ಇಲ್ಲಿಯ ಟಪ್ಪಾಲ ಹೋಲನ್ನು ಪೋಲೀಸರು ಸ್ವಾಧೀನ ಮಾಡಿಕೊಂಡರು. ಇಲ್ಲಿ [illegible]

ಭಟಕಳ— ಮಹಾತ್ಮರಿಗೆ, ಸರದಾರ ವಲ್ಲಭಭಾಯಿಯವರಿಗೆ ಸೆರೆಹಿಡಿದ ಬಗ್ಗೆ ಮಂಗಳವಾರ ಇಲ್ಲಿ ಸಂಪೂರ್ಣ ಹರತಾಳ. ಸಾಯಂಕಾಲ ಛಾಯಾಚಿತ್ರದ ಮೆರವಣಿಗೆ, ಸಭೆ.

ಚಿನ್ನದ ದರ ಬಹಳ ಏರಿದ್ದರಿಂದ ಇಲ್ಲಿ ಬಹಳ ಕಷ್ಟ [illegible] ತೊಲೆ ಚಿನ್ನ ಮುಂಬಯಿಕ್ಕೆ ಹೋಯಿತು. ಅಕ್ಕಸಾಲಿಗರು ದಾಗಿನ ಮಾಡಿಕೊಟ್ಟ ಬಡಬಗ್ಗರ ಚಿನ್ನ ಮಾರಿಕೊಂಡು ಹೋದದಾಗಿ ತಿಳಿಯುತ್ತದೆ.

[illegible] ಡಾ। ಗಣಪತಿ ನಾರಾಯಣ ಭಟ್ಟ [illegible] ಇವರು ಹಿಂದೂ ವಿದ್ಯಾ-ವಿಕಾಸಗಳ ವಿಶೇಷ ಪ್ರಚಾರಕ್ಕಾಗಿ ಎಡೆಬಿಡದೆ ಪ್ರಯತ್ನ ನಡಿಸಿದ್ದಾರೆ. ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಸಂಚರಿಸಿ, ಪ್ರಮುಖರ ಅಭಿಪ್ರಾಯ [illegible] ಸಂಗ್ರಹಿಸಿದ್ದಾರೆ, [illegible] ಒಂದು ಪುಸ್ತಕ ಪ್ರಕಟಿಸಿದ್ದಾರೆ. ಇವರ ಈ ಕಾರ್ಯ ಯಶಸ್ವಿಯಾದರೆ ದಕ್ಷಿಣ ಕನ್ನಡ ಜಿಲ್ಲೆಗೆ [illegible] ಜನರು [illegible] ಬೀಳುವ ಪ್ರಸಂಗ ತಪ್ಪುವಂತಿದೆ. ಹೀಗೆ ಹವ್ಯಕ ಸಮಾಜದ ಹಿತಚಿಂತಕರೆಲ್ಲರೂ ತಿಳಿಸುತ್ತಾರೆ.

ದುರುಸ್ತಿ — ಭಟಕಳದ ಮ್ಯುನಿಸಿಪಾಲಿಟಿಯ [illegible] ಇಲ್ಲಿ [illegible] ಅವರು [illegible] ನಮ್ಮ ಬಾತ್ಮೀದಾರರಾಗಿದ್ದರು, ಈಗ ಅವರು ನಮ್ಮ ಬಾತ್ಮೀದಾರರಲ್ಲ.

ಬೈಲೂರ— ಬುಧವಾರ ಮಹಾತ್ಮರಿಗೆ ಸೆರೆಹಿಡಿದ ಬಗ್ಗೆ ಹರತಾಳವಾಯಿತು. ಜಯಘೋಷದೊಡನೆ ಮೆರವಣಿಗೆಗಳಾದವು. [illegible] ಶಾಲೆ [illegible] ಬಿಟ್ಟು [illegible] ಹಿಂತಿರುಗಿ [illegible] ಎಪ್ರಿಲ್ ತಿಂಗಳಿನಿಂದ ಆತನ ಕೆಲಸ ಬೇಡವಾಗಿ ನೋಟೀಸಾಗಿದೆ.

ಶಿರಸಿ— ಇಲ್ಲಿಯೂ ಮುಖ್ಯ ಸುದ್ದಿ ಮಹಾತ್ಮರಿಗೆ ಸೆರೆಹಿಡಿದದ್ದು. ಮಂಗಳವಾರ ಸಂಪೂರ್ಣ ಹರತಾಳ, ಸಂತೆ ಸೇರಲಿಲ್ಲ. ಹೈಸ್ಕೂಲು, ಕನ್ನಡ ಶಾಲೆ, ಹೆಣ್ಣುಮಕ್ಕಳ ಶಾಲೆಗಳೆಲ್ಲ ಹರತಾಳಗಳನ್ನಾಚರಿಸಿದವು. ಬೆಳಗ್ಗೆ ಪ್ರಭಾತ ಫೇರಿ-ಮೆರವಣಿಗೆಗಳು ನಡೆದವು. [illegible] ಬೈಲಿನಲ್ಲಿ ಪ್ರಚಂಡ ಸಭೆಯಾಯಿತು. ಶ್ರೀ ತಿಮ್ಮಪ್ಪ ಶ್ರೀನಿವಾಸ ನಾಯ್ಕರವರು ಬಹು ಗಂಭೀರವಾಗಿ [illegible] ಭಾಷಣ ಮಾಡಿ [illegible] ಮುಂದಿನ ಕರ್ತವ್ಯಗಳನ್ನು ತಿಳಿಸಿ ಹೇಳಿದರು. ತಾಲೂಕ ಕೊಂಗ್ರೆಸ ಕಮಿಟಿಯವರು ತಮ್ಮ [illegible] ಶ್ರೀ ತಿಮ್ಮಪ್ಪ ನಾಯ್ಕರವರಿಗೆ ಸರ್ವಾಧಿಕಾರಿಗಳಾಗಿ ನೇಮಿಸಿದ್ದಾರೆ.

ಇಲ್ಲಿಯ [illegible] ಭಾಂಡಾರದಲ್ಲಿ [illegible] ಬಹಳ [illegible] ಭಾಂಡಾರದವರು [illegible] ಒಂದು [illegible] ತೆರೆದಿದ್ದಾರೆ.

[illegible] ವಸೂಲಿಯು ಕೆಲಸ ಭರದಿಂದ ನಡೆದಿದೆ. ಜನರು ಜಪ್ತಿ ಮಾಡಿಸಿಕೊಳ್ಳುತ್ತಾರೆ, [illegible] ತೆರುವದಿಲ್ಲ.

ಇಲ್ಲಿ ನಾಟಕ ಪ್ರಯೋಗ ಮಾಡುತ್ತಿದ್ದ ಮಂಗಳೂರಿನ ಶ್ರೀ [illegible] ಕರ್ನಾಟಕ ಸಂಗೀತ ನಾಟಕ ಮಂಡಳಿಯವರ ಮೇಲೆ ಅಕಸ್ಮಾತ್ ಆಪತ್ತು ಒಂದೊದಗಿದೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಕಂಪನಿಗೆ ಇಡೀ ಜಿಲ್ಲೆಯಲ್ಲಿ ನಾಟಕವಾಡಬಾರದಾಗಿ ಪ್ರತಿಬಂಧಿಸಿದ್ದಾರೆ. ಕಾರಣವೇನೆಂದರೆ — ಈ ಕಂಪನಿಯ ಥಿಯೇಟರಿನಲ್ಲಿ ಶ್ರೀಮತಿ ಕೃಷ್ಣಾಬಾಯಿ ಪಂಜಿಕರರವರು ಭಾಷಣ ಮಾಡಿದರಂತೆ, ಇದೊಂದೇ ಕಾರಣ. ಇತರೆ ಒಳಗುಟ್ಟು ಬೇರೆಯೊಂದಿದೆ, [illegible] ನಾಟಕ ನೋಡಲು ಕೆಲ ಅಧಿಕಾರಿಗಳಿಗೆ ಫ್ರೀಪಾಸು ಕೊಡ [illegible] ಜನರು ಹೇಳುತ್ತಾರೆ. ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ವಿಚಾರಿಸಬೇಕಾಗಿ ಸೂಚನೆ.

ಯಲ್ಲಾಪುರ— [illegible] ಬಹಳ ಜನರು ಅಸ್ವಸ್ಥರಿದ್ದಾರೆ. [illegible] ಅಡಿಕೆ ಧಾರಣೆ [illegible] ಹೀಗಿದೆ.

ಮಹಾತ್ಮರಿಗೆ ಸೆರೆ ಮಾಡಿದ ವಾರ್ತೆ ಇಲ್ಲಿ ಮಂಗಳವಾರ ತಿಳಿಯಿತು. ಕೂಡಲೆ ಸಂಪೂರ್ಣ ಹರತಾಳವಾಯಿತು.

ಕಾರವಾರದಲ್ಲಿ ಕೂಡಿದ ಕರ್ನಾಟಕ ಸಾಹಿತ್ಯ ಸಮ್ಮೇಳನಕ್ಕೆ [illegible] ಕೇರಿಯಿಂದ [illegible] ಪ್ರತಿನಿಧಿಗಳು ಹೋಗಿದ್ದರು.

ಅಂಕೋಲಾ— ಕಾರವಾರದಿಂದ ಇಲ್ಲಿ [illegible] ಜಿಲ್ಲಾ ಕೊಂಗ್ರೆಸ ಕಮಿಟಿ, ಈ ತಾಲೂಕ ಕೊಂಗ್ರೆಸ ಕಮಿಟಿ, ಈ ಶಹರ ಕೊಂಗ್ರೆಸ ಕಮಿಟಿಗಳು ಈ ಹಿಂದೆಯೇ ವಿಸರ್ಜಿಸಲ್ಪಟ್ಟಿದ್ದವು. ಜಿಲ್ಲಾ ಕೊಂಗ್ರೆಸ ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀ ಸುಬ್ರಾಯ ರಾಮಚಂದ್ರ ಹಳದೀಪುರಕರ ಹಾಗು [illegible] ನಾಡಕರ್ಣಿ ವಕೀಲ ಇವರಿಬ್ಬರು ಬೆಳಗ್ಗೆ ಮೋಟಾರ ಹತ್ತಿ ಕಾರವಾರಕ್ಕೆ ಹೋಗುವಾಗ ಪೋಲೀಸರು ಸೆರೆಹಿಡಿದು ಅದೇ ಮೋಟಾರಿನಿಂದ ಕಾರವಾರಕ್ಕೊಯ್ದರು. ಹಾಗೆಯೇ ಶ್ರೀ [illegible] ಸುಬ್ರಾಯ ನಾಡಕರ್ಣಿ, ಹರಿ [illegible] ಇವರ ಮೇಲೆ ವಾರಂಟುಗಳಿರುವದಾಗಿ ಸುದ್ದಿಯಾಯಿತು. ಮೂವರೂ ಕಚೇರಿಯಲ್ಲಿ ಹೋಗಿ ಹಾಜರಾದರು. ಕಚೇರಿಯ ಸುತ್ತ ಮುತ್ತ ಜನರು ಸೇರಿದರು. ೧೧ ಘಂಟೆಗೆ ಮೆರವಣಿಗೆಯಿಂದ [illegible] ಕಳುಹಿಸಿಕೊಟ್ಟರು. ಅಲ್ಲಿಂದ ಅವರಿಗೆ ಕಾರವಾರಕ್ಕೆ ಒಯ್ಯಲಾಯಿತು. ಇಲ್ಲಿಯ ಕೊಂಗ್ರೆಸ ಕಚೇರಿಯಿಂದ [illegible] ಪೋಲೀಸರು [illegible] ಹಿಡಕೊಂಡರು. [illegible] ಮೇಲೂ ವಾರಂಟಿರುವದಾಗಿ ಸುದ್ದಿ. ಅವರು ಊರಿನಲ್ಲಿಲ್ಲದ್ದರಿಂದ [illegible] ಸೆರೆಹಿಡಿಯಲಿಲ್ಲ.

ನಮ್ಮ ಜಿಲ್ಹೆಯೊಳಗೆ ಬೇಕಾಯಿದೇಶೀರಾದ ಸಂಸ್ಥೆ-ಸ್ಥಳಗಳು

ಸಿಂಧ ಪ್ರಾಂತದ ಕರಾಚಿ, ಹೈದರಾಬಾದ, ಸಕ್ಕರ ಮೊದಲಾದ ಕಡೆಗಳಲ್ಲಿ ಸತ್ಯಾಗ್ರಹ ನಡೆದಿದೆ. ದೊಣ್ಣೆ, ರಾಜಶಾಸನ ಮೊದಲಾದ ಬಲಾತ್ಕಾರಗಳೂ ನಡೆದಿವೆ. ಕಾಂಗ್ರೆಸ ಕಾರ್ಯದರ್ಶಿಗಳಾದ ಶ್ರೀ| ಜಯರಾಮದಾಸ ದೌಲತರಾಮ, ಯುದ್ಧಮಂಡಳದ ಸ್ವಾಮಿ ಗೋವಿಂದಾನಂದ, ಶ್ರೀ| ನಾರಾಯಣದಾಸ ಬೇಚಾರ, ಶ್ರೀಮತಿ ಕಿಶಿಬೇನ, ಸುಂದರಿಬೇನ, ಮೊದಲಾದ ೧೩ ಯುದ್ಧಮಂಡಳಗಳು ಸೆರೆಮನೆ ಸೇರಿದವು. ಉಪ್ಪಿನ ಸತ್ಯಾಗ್ರಹವಾಯಿತು. ಮೆಜಿಸ್ಟ್ರೇಟ ದಿವಾನಿ ಕೋರ್ಟುಗಳ ಪ್ರಾಕಾರದಲ್ಲಿಯೇ ಜನರು ಉಪ್ಪು ಮಾಡಹತ್ತಿದ್ದಾರೆ. ಆದರಿಂದ ಕೋರ್ಟುಗಳ ಸುತ್ತುಮುತ್ತು ಪೋಲೀಸರ ಪಹರೆ. ಕರಾಚಿ, ಹೈದರಾಬಾದ, ಸಕ್ಕರ ಮೊದಲಾದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಕಠಿಣ ಪಿಕೆಟಿಂಗು ನಡೆದಿದೆ. ಕರಾಚಿಯ ಕೆಲ ಜವಳಿ ವರ್ತಕರು ಪಿಕೆಟಿಂಗಿನ ಉಪದ್ರವವನ್ನು ತಪ್ಪಿಸಿಕೊಳ್ಳುವದಕ್ಕಾಗಿ ತಮ್ಮ ಜವಳಿ ಗಂಟುಗಳನ್ನು ಗೋವರ್ಧನದಾಸ ಪೇಟೆಯಿಂದ ಯು

(೬ನೇ ಪಾನಿನಮೇಲೆ ಮುಂದುವರಿದಿದೆ.)

ಲೋಕದಲ್ಲೆಲ್ಲಿ ಅಸಮಾಧಾನ; ಬ್ರಿಟಿಶ ಪ್ರಧಾನ ಮಂಡಳದಲ್ಲಿ ಪೇಚಾಟ!

ಪ್ರಕೃತ ಪರಿಸ್ಥಿತಿ.

ಭಾರತ ಮಂತ್ರಿಗಳು ಗುರುವಾರ ಒಂದು ಭಾಷಣ ಮಾಡಿ ಹಿಂದುಸ್ಥಾನದೊಳಗಿನ ಪರಿಸ್ಥಿತಿಯ ಮೇಲೆ ತಮ್ಮ ಅಭಿಪ್ರಾಯವನ್ನು ಪ್ರಕಟಿಸಿದ್ದಾರೆ. "ರಾಷ್ಟ್ರೀಯ ಸಭೆಯೇ ತಪ್ಪಿರುವದೆಂದು ನನ್ನ ಅಭಿಪ್ರಾಯವಿತ್ತು, ನಿಷ್ಪಕ್ಷಪಾತಿ ಇರ್ವಿನ್ ದೊರೆಯೂ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. ಹಿಂದುಸ್ಥಾನದೊಳಗಿನ ಸ್ಥಿತಿ ಸುಧಾರಿಸುವದರಿಂದ ಗಾಂಧಿಯವರಿಗೆ ನಾನು ವಚನ ಕೊಡಲಿಲ್ಲ. ನನ್ನ ರಾಜ್ಯಕಾರಣದಲ್ಲಿ ಏನು ನೀತಿಯಿಲ್ಲ. ನಿಗ್ರಹ ಮನಸ್ಸಿನಿಂದ ಸಮಾನ ಭಾವನೆಯಿಂದ ರಾಜ್ಯಸುಧಾರಣೆ ಮಾಡಲು ನಾವು ನಿರ್ಧರಿಸಿದ್ದೇವೆ. ನಮ್ಮ ಗಣೆಯರಿಗೆ ನಾನು ಒಂದು ತೋಡುಕೆತ [illegible] ಗೆ ದವರಲ್ಕಿಲ್ಲ." ಈ ಪ್ರಕಾರ ಭಾರತಮಂತ್ರಿಗಳು ನಿಗ್ರಹಮನಸ್ಸಿನಿಂದ ದಬ್ಬಾಳಿಕೆಯನ್ನು ನಡೆಸುತ್ತಿದ್ದಾರೆ. ದಬ್ಬಾಳಿಕೆಯು ಇನ್ನೆರಡು ದಿನ ಅಸಹ್ಯವಾಗುವದರಿಂದ ಲಂಡನಿನೊಳಗಿನ 'ಫ್ರೀ ಪ್ರೆಸ್' ಪತ್ರಿಕೆಯು ಸೂಚಿಸಿದರು. ಉಪಸ್ಥಿತರಿದ್ದ ರೌಂಡ ಟೇಬಲ್ ಪರಿಷತ್ತಿನ ಫೆಡರಲ್ ಕಮಿಟೀ ಬ್ರಿಟಿಶ ಸಭಾಸದರು ಮಾರ್ಚ ಮೊದಲಿಗೆ ಒಂದು ತಲ್ಪುವವರಿದ್ದರು. ಈ ಮಹಾಕಾರ್ಯಕ್ಕಾಗಿ ಬಂದ ಬ್ರಿಟಿಶ ಪ್ರತಿನಿಧಿಗಳಲ್ಲಿ ಬರೇ ೨೩ ವರ್ಷದ [illegible]ನ್ ಎಂಬ ಹುಡುಗರೂ ಇದ್ದಾರೆ! ಇವರು ವಿಚಾರಿಸತಕ್ಕ ಕಾರ್ಯಕ್ರಮ ಪತ್ರಿಕೆಯು ಇನ್ನೂ ತಯಾರಾಗಲಿಲ್ಲ. ಬ್ರಿಟಿಶ ಪ್ರತಿನಿಧಿಗಳು ಫೆಬ್ರುವರಿ ೨೫ನೇ ತಾರೀಖಿನ ತನಕ ಸಂಸ್ಥಾನಗಳಲ್ಲಿ ಅವರೆಲ್ಲ ಸಂಚರಿಸಿ, ೨೬ನೇ ತಾರೀಖಿಗೆ ದಿಲ್ಲಿಗೆ ತಲ್ಪುವರು. ಮುಖ್ಯ ಪ್ರಧಾನರಿಗೆ ವಿಚಾರ ವಿಷಯಗಳನ್ನು ಅರ್ಪಿಸಲು ಹಿಂದುಸ್ಥಾನ ಸರಕಾರವು ತಿಳಿಸಿದ ಸರ್ ತೇಜಬಹಾದ್ದೂರ ಸಪ್ರೂರವರು ರೌಂಡ ಟೇಬಲಿನ ಕಾರ್ಯವನ್ನು ಮುಂದರಿಸುವದಕ್ಕಾಗಿ ಬಹು ಪ್ರಯಾಸಪಡುತ್ತಿದ್ದಾರೆ. ಇವರಂಥ ದಬ್ಬಾಳಿಕೆಯ ಕಡೆ ನೋಡಲು ಇವರಿಗೆ ಸಮಯವಿಲ್ಲ ಈ, ಕುರಿತು ಇವರು ಆಕ್ಷೇಪಿಸಕೂಡದು. ಲಖನೌದಲ್ಲಿ ಡಾ| ರಿಯಾಜುದ್ದೀನ ನವಾಬ ಇಸ್ಮಾಯಿಲ ಖಾನ ಸರ್ ಕುತುಬುದ್ದೀನ ಖಾಲಿ, ಶಾಹೀಮಪುರದ ರಾಜಾ, ಮೊದಲಾದವರ ನಿಮಂತ್ರಣ ಸೇರಿಗೆ ಮುಸಲ್ಮಾನ ಸಮಾಜದೊಳಗಿನ ಬನ್ನ ಭಿನ್ನ ವಿಚಾರದ ಪ್ರಮುಖರು ಸಭೆಸೇರಿ ರೌಂಡಟೇಬಲಿನಿಂದ ಪ್ರಾಪ್ತಿಯಿಲ್ಲವಾಗಿ ಅಭಿಪ್ರಾಯಪಟ್ಟು ಅದನ್ನು ಬಹಿಷ್ಕರಿಸಬೇಕಾಗಿ ಠರಾಯಿಸಿದ್ದಾರೆ. ಮದ್ರಾಸದಲ್ಲಿ ಸಂಯುಕ್ತ ರಾಷ್ಟ್ರೀಯ ಕೌನ್ಸಿಲು ಪಕ್ಷವೆಂಬದೊಂದು ಸಂಸ್ಥೆಯಿದೆ. ರಾಷ್ಟ್ರೀಯ ಸಭೆಗೆ ಸೇರಿಕೆಯಿಂದ ಹೊರತು, ರಾಜ್ಯಸುಧಾರಣೆಯ ಕಾರ್ಯವನ್ನು ಮುಂದರಿಯಲಿಕ್ಕಿಲ್ಲವಾಗಿ ಅವರು ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಅಸಮಾಧಾನವಲ್ಲ ಕಮಿಶನರರು ವರ್ತಕರ ಸಭೆ ಸೇರಿಸಿ ಕಾಯಿದೆ ಪಾಲಕ ನಾಗರಿಕರೆಲ್ಲರೂ ಕಾಯಿದೆಭಂಜಕರ ಗೋಣು ಮುರಿಯುವಲ್ಲಿ ನೆರವಾಗಬೇಕೆಂದರು. ಮಹಾತ್ಮರು ಜೈಲಿನಲ್ಲಿರುವ ತನಕ ದೇಶದಲ್ಲಿ ಶಾಂತತೆ ನೆಲಗೊಳ್ಳದೆಂದು ಜನರು ಕಮಿಶನರರಿಗೆ ಹೇಳಿದರು. ಅಖಿಲ ಭಾರತೀಯ ವರ್ತಕ ಸಂಘವವೂ ರೌಂಡ ಟೇಬಲನ್ನು ಬಹಿಷ್ಕರಿಸಬೇಕಾಗಿ ಠರಾಯಿಸಿ ಸರ್ವಾಧಿಪತಿಗಳ ನಿಮಂತ್ರಣವನ್ನು ಧಿಕ್ಕರಿಸಿ ತಮ್ಮ ಪ್ರತಿನಿಧಿಗಳಾದ ಸರ್ ಪುರುಷೋತ್ತಮದಾಸ ಠಾಕುರದಾಸರವರಿಗೆ ರೌಂಡ ಟೇಬಲ್ ಕಮಿಟಿಯಲ್ಲಿ ಸೇರಬಾರದಾಗಿ ಎಚ್ಚರಿಕೆ ಮಾಡಿದರು. ರೌಂಡ ಟೇಬಲ್ ಕಮಿಟಿಗಳ ಕ್ರಮ ಅಸಮಾಧಾನಕರವೆಂದು ಪ್ರಯಾಗದ 'ಲೀಡರ' ಪತ್ರಿಕಾಕರ್ತರು ಬಹಳ ಟೀಕಿಸಿದ್ದರು. ಈಗ ಇವರಿಗೆ ಸಾಮಿಪ್ಯ ಬೀಳಿ, 'ಲೀಡರ' ಪತ್ರಿಕಾಕರ್ತರಿಗೆ ಸ್ವಲ್ಪ ಸಮಾಧಾನವಾಗ ತೊಡಗಿತು. ಅಸಮಾಧಾನವೆನ್ನ ಸಮ್ಮತಕ್ಕೆ ಬರುವ ಬಗೆ ಹೇಗೆ ರಾಜ್ಯಘಟನಾ ವಿಷಯ ಇನ್ನು ನಿರ್ಣಯವಾಗುವದಿದ್ದಾಗ್ಯೂ ಗವರ್ನರಜನರಲ್ ಗದ್ದುಗೆಯದರ ಸಂಬಂಧ ವಿಷಯಕ್ಕೆ ದೂಟಿ. ಸಾವರ ಇರಬೇಕು, ಕಾರ್ಯಕಾರಿ ಮಂಡ ಳ ನೇಮಕದವರ ತಮ್ಮ ವಿಷಯ ಕಸರ ರಾ ಖಚಿತ ಪಡಿಸಬೇಕ, ಎಂದು ಸಂಗ ಗಳು ನಿಶ್ಚಿತವಾಗಿ ಸರಕಾರ ಪ್ರಕಟಣೆ ಸಹ ಹೊರಟಿತು. ಕಾಯಿದೆ ಕೌನ್ಸಿಲಿನಲ್ಲಿ [illegible] ಸ್ಥಾಪಿಸಬೇಕಾಗಿಯೂ ಗೊತ್ತಾದ ರೌಂಡ ಟೇಬಲ್ ಕಮಿಟೀ ವಿಚಾರ ನಡೆದಾಗ ದೇಶದ ರಾಷ್ಟ್ರೀಯ ಗಾಂಧಿಯವರು ಗಾಂಧಿಯವನ್ನಿಟ್ಟ, ೩ ಲಕ್ಷ ಜನರಂಗ ಮಾಡದಂತ ದಬ್ಬಾಳಿಕೆಯನ್ನು ಸರಕಾರವು ನಡೆಸುತ್ತಿರುವದಂತೆ ತನ್ನ ದೇಶದಲ್ಲಿ ಹೊಸ ಚಳವಳಿ ಪ್ರಕರಣಕ್ಕೆ ಕಾರಣರೀತಿ ಜನ ಸ್ವಸ್ವತ್ವ ಹರಣದ ಬಂದವನ್ನು ಕೈಸರ ಮಾಡಿದೆ. ಇದು, ಬೇಸರದ ಸಂಪ್ರಮುಕ್ತ ಹದಗಿದೆ, ಮುಕ್ತ ಮತ್ತು ಜನದ ಕವನ ಹಸ್ತಾಕ್ರಾಂತಮಾಡಿಕೊಳ್ಳುವ ಅಧಿಕಾರ ಸಮಲ್ಲಿದ ಎಂಬ ಕಾಯುವ ನಿಷೇಧ ಮಾಡಿದ್ದಾರೆ. ಜನ ಸ ಪ್ರೇಮದ ಬಂದರಗಳನ್ನು ತಮ್ಮ ಸಮಯಂತೆ ಸರ್ವ ರಾಷ್ಟ್ರಗಳು ಮುಕ್ತಿಗೆ ಹಾಕಬೇಕು, ಜನ ಕೆ ಸರಕುಗಳ ಬಹಿಷ್ಕರಿಸಬೇಕ, ಜಪಾನದ ಬಂದರಗಳಲ್ಲಿ ಇತರ ರಾಷ್ಟ್ರಗಳು ಪ್ರತಿ ಹಡಗುಗಳನ್ನಿಡಬೇಕಾಗಿಯೂ ಅಮೇರಿಕೆಯವರು ಹೇಳಿದರು. ಬ್ರಿಟಿಶ ಸರಕಾರದ ಅನುಮತಿ ಕೇಳಿದ್ದಾರೆ. ಬ್ರಿಟಿಶರು ಜಪಾನದವರಕ್ಕೆ ಹೆದರುತ್ತಾರಂತೆ! ಬ್ರಿಟಿಶರು ಬೇಗ ಜಪಾನದೇಶಗಳೊಳಗಿನ ವಿವಾದವನ್ನು ಸ್ಥೈರ್ಯದಿಂದ ನಿರ್ಣಯಿಸಲೊಪ್ಪರು. ಜರ್ಮನ ದೇಶದ ಒಂದನೆ ಪ್ರಶ್ನೆಯು ಯುರೋಪದೊಳಗಿನ ಬ್ರಿಟಿಶ- ಫ್ರೆಂಚರಿಗೆ ಕಲಹಕಾರಣವಾಗುವದೆಂದು ಹೇಳುತ್ತಾರೆ. ಫ್ರೆಂಚರಿಗೆ ಜರ್ಮನರ ಮೇಲೆ ಹಗೆ. ಹಿಂದಣ ಸಮರ ಋಣ ತೀರಬೇಕೆಂದು ಅವರ ಹಟ. ಹಿಂದಣ ಸಮರ ಋಣಗಳನ್ನು ಬಿಟ್ಟರೆ ಜರ್ಮನಿಯು ದಿವಾಳಿಯಾಗಿ ಬ್ರಿಟಿಶರು ಅಲ್ಲಿಕೊಟ್ಟ ಹಣವೆಲ್ಲಾ ಶೂನ್ಯವಾಗುವದು. ಫ್ರೆಂಚ ಪಕ್ಷಕ್ಕೆ ಸೇರಿದ ಜರ್ಮನಿಯ ಕಡ ಒರಗಿದರ ಫ್ರೆಂಚ ಸಾವಕಾರರು ಬ್ರಿಟಿಶರಿಗೆ ಸಾಲದ ತಗಾದೆ ಮಾಡುತ್ತಾರೆ. ಸಾಲಕೊಡುವ ಸಾಮರ್ಥ್ಯ ಈಗ ಬ್ರಿಟಿಶ ಸರಕಾರಕ್ಕಿಲ್ಲ. ಸರಕುಗಳ ಮೇಲೆ ತೆರಿಗೆ ಹಾಕಿ ದುಡ್ಡು ಸಂಪಾದನೆ ಮಾಡಬೇಕಾಗಿ ಬ್ರಿಟಿಶರ ವಿಚಾರ. ಆದರೆ, ಅದಕ್ಕೆ ಪ್ರಧಾನ ಮಂಡಳದಲ್ಲಿ ಏಕ ಮತದಿಂದ ನಿರ್ಣಯವಾಗದು. ಇತ್ತಂಡಗಳಾಗಿವೆ. ಆದಾಗ್ಯೂ ಲೋಕಕ್ಕೆ ಒಕ್ಕಟ್ಟನ್ನು ತೋರ್ಪಡಿಸುವದಕ್ಕಾಗಿ ಬ್ರಿಟಿಶ ಪ್ರಧಾನ ಮಂಡಳವು ಸಂಪ್ರದಾಯದಂತೆ ರಾಜಿನಾಮೆ ಕೊಡದು. ಗಡಿಬಿಡಿ, ಗೊಂದಲ, ಎಲ್ಲಿಯೂ ಸಮಾಧಾನವಿಲ್ಲ. ಯಾವಾಗ, ಏನಾಗುತ್ತದೆಂದು ಯಾರಿಗೂ ಹೇಳಬರದು. ಇದೇ ಪ್ರಕೃತ ಪರಿಸ್ಥಿತಿಯ ಲಕ್ಷಣ!

— ಮಹಾತ್ಮರು ಒಳ್ಳೇ ಆರೋಗ್ಯದಿಂದಿದ್ದಾರೆಂದು ಬುಧವಾರ ಅವರಿಗೆ ಜೈಲಿನಲ್ಲಿ ಭೆಟ್ಟಿಯಾಗಿ ಬಂದ ಕುಮಾರಿ ಮೀರಾಬಾಯಿಯವರ ಪ್ರಕಟಣೆ

ಸತ್ಯಾಗ್ರಹದ ವಾರ್ತೆ.

(೨ನೇ ಪಾನಿನಿಂದ ಮುಂದರಿಸಿದ್ದು)

ಯುರೋಪಿಯನ್ನರ ಕಂಪನಿಗಳ ಗೋಡೌನುಗಳಲ್ಲಿ ಒಯ್ಯುತ್ತಿರುವ ಇಲ್ಲಿಂದ ಜಪ್ತಿ ಮಾಡುವ ವಾರಸ್ಥಾನ ನಡೆಯಿತು. ಪಿಕೆಟರಿಗೆ ಈ ಸುಳಿವು ಹತ್ತಿತು. ಅವರು ಅಲ್ಲಿ ಹೋಗಿ ಪಿಕೆಟಿಂಗ ಮಾಡಲಾರಂಭಿಸಿದರು. ವರ್ತಕರು ಪುನಃ ಜಪ್ತಿ ಗಂಟುಗಳನ್ನು ತಮ್ಮ ಸ್ವಂತ ಉಗ್ರಾಣಗಳಲ್ಲಿ ತಂದಿಟ್ಟು ೮ ೧೦ ದಿನಗಳ ತನಕ ವ್ಯಾಪಾರವನ್ನೇ ನಿಲ್ಲಿಸಬೇಕಾಗಿ ಠರಾಯಿಸಿದ್ದಾರೆ. ಮೆಜಿಸ್ಟ್ರೇಟ ಕೋರ್ಟಿನ ಮೇಲೆ ರಾಷ್ಟ್ರಧ್ವಜ ಹಾರಹತ್ತಿದೆ. ಸ್ವಾತಂತ್ರ್ಯೋತ್ಸವ ದಿನ ಸ್ವಾತಂತ್ರ್ಯ ಪ್ರತಿಜ್ಞೆ ಓದುತ್ತಿರುವಾಗಲೇ ಅದ್ವೈಕ್ಷರಿಗ ನಡೆದಿದವರು. ಕೂಡಲೆ ೧೧ನೇ ಅನ್ಯಕ್ಷರು ಎದ್ದು ನಿಂತು ಮುಂದಿನ ಭಾಗ ಓದಿ ಮುಗಿಸಿದರು. ಅನ್ಯರಲ್ಲಿ ಅವರಿಗೆ ಸೆರೆ ಹಿಡಿದರು. ಬಿ ಎ, ವಿದ್ಯಾರ್ಥಿನಿಯಾದ ಶ್ರೀಮತಿ ನಿರ್ಮಲಾಬಾಯಿಯವರು ಸಣ್ಣ ಭಾಷಣ ಮಾಡಿ ಸಭಾಕಾರ್ಯವನ್ನು ಮುಗಿಸಿದರು. ಇವರಿಗೂ ಸೆರೆ ಹಿಡಿಯಲ್ಪಟ್ಟಿತು. ಇವರಿಗೆ ಪೋಲೀಸ ಮೋಟರಿನಲ್ಲಿ ಕುಳ್ಳಿರಿಸಿ ಜೊತೆಗೆ ಶಿಪಾಯಿ ಕುಳ್ಳಿರಹೋದನು, ಜನರು ಕೂಡ್ರಗೊಡಲಿಲ್ಲ, ಮೋಟರಿಯ ಮುಂದ ಮಲಗಿದರು. ಫೌಜದಾರರು ನಿರುಪಾಯರಾಗಿ ಪೋಲೀಸ ಬಂದೋಬಸ್ತಿಲ್ಲದೆ ಮೋಟರನ್ನೊಯ್ದರು. ಹೈದರಾಬಾದದಲ್ಲಿ ಸ್ವಾತಂತ್ರ್ಯೋತ್ಸವದ ಸಮಯ ಉಪಯೋಗಿಸಿದ ಬೆಂದು ಒಪ್ಪಿಯಿತು. ಅದರಿಂದ ಜನರು ಚಿಮಣಿ ದಷ್ಟಿ ಒಯಿಸಿ ಮನೆಗೆ ಹೋರಡಿಸುತ್ತಾರೆ. ಧೃಡಂಬಾದದ ಆಲಬೇಂದ ದೌಲತರಾಮರವರಿಗೆ ಶಿಕ್ಷೆಯಾಗಿದೆ. ಅವರ ಪತ್ನಿಯವರು ಪಿಕೆಟಿಂಗ ಮಾಡಿ ಜೈಲು ಸೇರಿದರ. ಕರಾಚಿಯೊಳಗಿನ ಒಂದು ಹಿಂದು ಖಾನಾವಳಿಯ ಮೇಲೆ ಪೋಲೀಸರು ಪಕ್ಕನೆ ದಾಳಿ ಮಾಡಿ ಸ್ವಯಂಸೇವಕರು ಬಡಿಸಿದ ಬಗ್ಗೆ ಖಾನಾವಳಿಯವರಿಗೆ ಸರಬರಾಯಿ ಸ್ವಯಂಸೇವಕರಿಗೆ ಎಲ್ಲಲ್ಲಿ ಯಾರ‍್ಯಾರು ಬಡಿಸುತ್ತಾರೆಂಬದರ ಕುರಿತು ಚೌಕಶಿಯಾಗುತ್ತಿದೆ. ಖಾನೇ ರಾಷ್ಟ್ರೀಯ ಸಭ ಪ್ರಾಂತಿಕ ಜಿಲ್ಹಾ ಕಾಂಗ್ರೆಸ ಕಮಿಟಿಗಳ ಲೆಕ್ಕಕ್ಕೆ ಜಮೆಯಿರುವ ಮೊಬಲಗನ್ನು ಕೊಡಬಾರದಾಗಿ ಬೇಂಕುಗಳಿಗ ರಾಜಶಾಸನದಂತೆ ಹುಕುಮಾಗಿದೆ. ಸರಕಾರಿ ಬೇಂಕುಗಳ ಮುಂದ ಪಿಕೆಟಿಂಗ ನಡಿಸಿದ ಬಗ್ಗೆ ಅನೇಕರಿಗೆ ಶಿಕ್ಷೆಯಾಯಿತು! ಕಾಂಗ್ರೆಸ ಕಚೇರಿ ಜಪ್ತಾದ್ದರಿಂದ ಸ್ವಯಂಸೇವಕರು ಜೈಲು ಪ್ರದೇಶದಲ್ಲಿ ಕೂತು ರಾಷ್ಟ್ರೀಯ ಸಭೆಯ ಕಾರ್ಯ ನಡಿಸುತ್ತಾರೆ. ರಾಮಬಾಗ ಉಪವನದಲ್ಲಿ ಉಪ್ಪಿನ ಸತ್ಯಾಗ್ರಹಕ್ಕಾಗಿ ಸೇರಿದ ಸಭೆಯನ್ನು ಪೋಲೀಸರು ಮೊನ್ನೆ ಹೊಡೆದು ಚದರಿಸಿದರು, ಹಚ್ಚಿದ ಧ್ವಜ ಕಿತ್ತರು. ಜನರು ಪುನಃ ಧ್ವಜ ಹಚ್ಚಿ ಜಯಘೋಷದೊಡನೆ ಸಭಾಕಾರ್ಯವನ್ನು ನೆರವೇರಿಸಿದರು.

ಕರಾಚಿಯೊಳಗಿನ ಹಿಂದು-ಮುಸಲ್ಮಾನ ಪಾರ್ಸಿ ವರ್ತಕರೂ, ಜೆಂಕಿನವರೂ ಕೂಡಿ ಸ್ವದೇಶಿ ಸರಕುಗಳನ್ನು ಕೊಳ್ಳುವಂತೆ ಪ್ರಚಾರ ಕಾರ್ಯ ನಡಿಸುವದೊಂದು ಸಂಸ್ಥೆಯನ್ನು ಸ್ಥಾಪಿಸಿದ್ದಾರೆ.

ಕಾರವಾರದಲ್ಲಿ ಪರದೇಶಿ ಜವಳಿಯ ಗಂಟು ಕಟ್ಟಿಸಿಟ್ಟ ಬಗ್ಗೆ ಕೈಸೆರೆ.

ಬಂಧು ಭಗಿನಿಯರ ಬಳಿಗೆ ಅರಿಕೆ.

ನಾನು ಹಾಗೂ ನನ್ನ ಸಂಗಡ ಸೆರೆಯಿಂದ ತಾತ್ಕಾಲಿಕ್ಕೆ ಬಂದವರುತ್ತರಾದ ಶ್ರೀ| ಯಶವಂತರಾವ ನಾಡಕರ್ಣಿ (ಕಾರವಾರ), ಶ್ರೀ ಮಾಧವರಾವ ಕಲ್ಯಾಣಪುರಕರ (ಕುಮಟಾ), ಗಣೇಶ ರಾಮ ಯಾಜಿ (ಕುಮಟಾ), ಶಿವರಾವ ಶಾಸ್ತ್ರಿ (ಹೊನ್ನಾವರ), ಈಶ್ವರ ಭಟ್ಟ (ಹೊನ್ನಾವರ) ಈ ಎಲ್ಲ ಬಾಂಧವರು ಸರಕಾರದ ಕಡೆಗೆ ಮಾಫಿ ಬೇಡಿ ಲೇಖಿ ಬರೆಕೊಟ್ಟು, ನಮ್ಮ ಬಿಡುಗಡೆ ಮಾಡಿಕೊಂಡು ಬಂದಿರುತ್ತೇವಾಗಿ ನಮ್ಮ ವಿಷಯದಲ್ಲಿ ನಮ್ಮ ಜಿಲ್ಲೆಯ ಕೆಲ ಭಾಗಗಳಲ್ಲಿ ತಪ್ಪು ತಿಳುವಳಿಕೆ ಪಸರಿಸಿರುವದಾಗಿಯೂ, ಕೆಲವರು ಈ ರೀತಿಯಾಗಿ ಜನರ ತಪ್ಪು ಗ್ರಹಿಕೆ ಬೇಕೆಂದು ಮಾಡಿಕೊಟ್ಟು ಇದೇ ನಮ್ಮ ಉದಾಹರಣೆಯನ್ನು ಅನುಸರಿಸಿ ಮಾಫಿ ಬೇಡಿ ಮುಕ್ತತೆ ಪಡೆದು ಬಂದಾಗಿ ಬೇರೆ ಸೆರೆಹಿಡಿದವರನ್ನು ಉಪದೇಶಿಸುತ್ತಾರಾಗಿಯೂ ನನ್ನ ತಿಳುವಳಿಕೆಗೆ ಹಲವು ಕಡೆಯಿಂದ ಬಂದಿರುತ್ತದೆ. ನಮ್ಮ ಕೈಲಾದ ಮಟ್ಟಿಗ ದೇಶಸೇವೆಯನ್ನು ಮಾಡುತ್ತಿರುವ ನನ್ನ ಮತ್ತು ನನ್ನ ಬಾಂಧವರ ಬಗ್ಗೆ ನಮ್ಮ ಕೆಲ ದೇಶಬಾಂಧವರಾದರೂ ಅಸಾವಧಾನತನದಿಂದ ಈ ಪರಿಯ ತಪ್ಪು ತಿಳುವಳಿಕೆ ಮಾಡಿಕೊಂಡ ಬಗ್ಗೆ ಮತ್ತು ತಮ್ಮ ಬಾಂಧವರಾದ ನಮ್ಮಲ್ಲಿ ನಂಬಿಗೆಯಿಡದೇ ನಾವು ಈ ರೀತಿ ಎಂದಾದರೂ ವರ್ತಿಸಬಹುದೆಂಬ ಸಂಗತಿಯಲ್ಲಿ ವಿಶ್ವಾಸವಿಟ್ಟ ಬಗ್ಗೆ ನಾನು ತುಂಬಾ ವ್ಯಸನಪಡುವೆನು ಮತ್ತು ಇದಕ್ಕೂ ಹೆಚ್ಚಿಗೆ ವಿಶ್ವಾಸಕ್ಕೆ ಪಾತ್ರನಾಗುವಷ್ಟು ದೇಶಸೇವೆಯ ಯೋಗವು ಲಭಿಸಲಿಲ್ಲವೆಂದು ನನ್ನ ದುರ್ಭಾಗ್ಯತೆಗೇ ದೋಷ ಕೊಡುವೆನು ಇರಲಿ

ನಡೆದ ವಸ್ತುಸ್ಥಿತಿ ಹೇಳುವದು ಅವಶ್ಯವಾಗಿಯೇ ಇರುವದರಿಂದಷ್ಟು ವಿವರಿಸುವೆ, ಸರಕಾರದವರು ಎರಡನೇ ಆರ್ಡಿನನ್ಸದ ಪ್ರಕಾರ ಸಂಶಯದ ಮೇಲಿಂದ ಬೇಕಾದವರಿಗೆ ಕೆಲ ಕಾಲ ಪ್ರತಿಬಂಧದಲ್ಲಿ ಇಡಬಹುದೆಂಬ ಅಧಿಕಾರದಂತೆ ನನ್ನನ್ನು ಮತ್ತು ಮೇಲೆ ಕಾಣಿಸಿದ ನನ್ನ ಬಾಂಧವರನ್ನು ವ ಇನ್ನೂ ಕೆಲವರನ್ನು ಕೂಡ, ತಾ ೯ನೇಗೆ ಮತ್ತು ತಾ. ೧೦ನೇಗ ಸರಹದ್ದು ಜೈಲಿನಲ್ಲಿಟ್ಟರು ನಾವು ಸಂತೋಷದಿಂದ ಹೋಗಿ ಸೆರೆಮನೆಯಲ್ಲಿ ಉಳಿದೆವು ಆ ನೋಟೀಸಿನ ಕಾಲದವರು, ೬ ನಂತರ ಬದಲು ಮಾಡಿದ ತಮ್ಮ ಹೊಸ ಧೋರಣದಂತೆ ಇನ್ನು ಹಲವೆಡೆ ಮಾಡಿದಂತೆಯೇ ಅಂಕೋಲೆಯ ಮತ್ತು ಶಿರ್ಸಿ-ಸಿದ್ದಾಪುರದವರನ್ನಿಟ್ಟುಕೊಂಡು ಕಾರವಾರ-ಕುಮಟಾ ಹಾಗು ಹೊನ್ನಾವರದವರನ್ನು ಎಲ್ಲರನ್ನೂ ತಾವಾಗಿಯೇ ಬಿಟ್ಟುಕೊಟ್ಟರು ಹಾಗ ಅವರು ಬಿಟ್ಟುಕೊಟ್ಟ ಸಂಗತಿಯಲ್ಲಿ ನಾವು ಹೊರಗೆ ಹೋಗಲಿಕ್ಕಿಲ್ಲವೆಂದು ಹೇಳುವ ಸ್ವತಂತ್ರತೆ ನಮಗೆ ಇದ್ದಿಲ್ಲವಷ್ಟೇ. ನಮಗೆ ಈ ಪ್ರಕಾರ ಅವರ ಸ್ವೇಚ್ಛೆಯಿಂದಲೇ ಬಿಟ್ಟುಕೊಡುವ ಪೂರ್ವದಲ್ಲಿ ಅದೇ ಆರ್ಡಿನನ್ಸಿನ ಪ್ರಕಾರ ನಮಗೆ ಇನ್ನೂ ಹೆಚ್ಚು ಸಕ್ರಮ ಶಿಕ್ಷೆಗೆ ಗುರಿ ಮಾಡಲಿಕ್ಕೆ, ನಾವು ಚಳವಳಿಯಲ್ಲಿ ಯಾವದೇ ರೀತಿ ಭಾಗವನ್ನು ಎತ್ತಿಕೊಳ್ಳಬಾರದೆಂದು ೪ನೇ ಕಲಮಿನ ಪ್ರಕಾರ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು ಹುಕುಮು ಮಾಡಿ, ಆ ನೋಟೀಸುಗಳನ್ನು ನಮ್ಮ ಮೇಲೆ ಬಜಾಯಿಸಿದರು. (ಆ ತರುವಾಯ ಬೇರೆ ಕೆಲವು ಕಡೆಯಲ್ಲಿ ಹೊರಟ ನೋಟೀಸುಗಳಲ್ಲ ಇರುವಂತೆ ಪೋಲೀಸರಲ್ಲಿ ನಾವು ನಿತ್ಯ ಹಾಜರಿಯನ್ನೀಯಬೇಕಾ ಹುಕುಮು ನಮ್ಮ ನೋಟೀಸುಗಳಲ್ಲಿ ಇದ್ದಿಲ್ಲ.) ಈ ರೀತಿ ವರ್ತಿಸಲಿಕ್ಕೆ ನಾವು ಒಪ್ಪಿಕೊಂಡಿದ್ದೆವು ಸಹಾ ಕಬೂಲಿ ಕೊಟ್ಟಿದ್ದೆವೆಂಬುದು ತೀರ ಸುಳ್ಳು. ಅತಿಶಯ ವಿನೀತವು ನೋಟೀಸುಗಳು ನಮ್ಮ ಮೇಲೆ ರೀತಿಯಂತೆ ಜಾರಿ ಮಾಡಿದ ಬಗ್ಗೆ ಮಾತ್ರ ನಾವು ಸಹಿ ಕೊಡಬೇಕಾದಂತೆ ಸಹಿ ಕೊಟ್ಟಿರುತ್ತಿದ್ದೆವು ಇದರ ಹೊರತು ನಾವು ಯಾವದೇ ರೀತಿಯ ಒಡಂಬಡಿಕೆ ಮಾಡಿದ್ದೆವೆಂಬುದು ಸಂಪೂರ್ಣ ಸುಳ್ಳು. ನೋಟೀಸಿನಲ್ಲಿಯ ಹುಕುಮಿನ ವಿರೋಧವಾಗಿ ವರ್ತಿಸಿದರೆ, ಎರಡು ವರ್ಷಗಳ ವರೆಗೆ ಶಿಕ್ಷೆಗೆ ಪಾತ್ರರಾಗುತ್ತೇವೆಂದು ಎಲ್ಲರಿಗ ಗೊತ್ತೇ ಇದ್ದ ಸಂಗತಿ

ಜನರಿಗೆ ಸರಿಯಾಗಿ ಕಲ್ಪನೆಯಾಗಬೇಕೆಂಬುದರಿಂದ ನಾನು ಇದರಡಿಯಲ್ಲಿ ನನ್ನ ಮೇಲೆ ಜಾರಿ ಮಾಡಿದ ನೋಟೀಸಿನ ಕನ್ನಡ ತರ್ಜುಮೆಯು ಸಾದರಪಡಿಸುವೆನು ಅದೇ ನಮೂನೆಯ ನೋಟೀಸುಗಳು ಇತರ ಬಾಂಧವರ ಮೇಲೆಯೂ ಬಜಾಯಿಸಲ್ಪಟ್ಟವು ಈ ಎಲ್ಲ ನಡೆದ ಹಕೀಕತ. ನನ್ನ ಬಂಧು ಭಗಿನಿಯರೆಲ್ಲರೂ ಸರಿಯಾಗಿ ತಿಳಕೊಂಡು ತಮ್ಮ ತಮ್ಮ ಉದ್ದಿಷ್ಟ ಹೇತುವನ್ನು ಸಾಧ್ಯಪಡಿಸಿಕೊಳ್ಳಲಿಕ್ಕೆ ಬೇರೆ ಬೇರೆ ಜನರು ಬೇರೆ ಬೇರೆ ಹೇತುವಿನಿಂದ ತಪ್ಪು ತಿಳುವಳಿಕೆ ಮಾಡಿಕೊಡಲು ಪ್ರಯತ್ನಿಸಿದರೆ ಅವಿಶ್ವಾಸಕ್ಕೆ ಇಂಬು ಕೊಡಬಾರದೆಂದೂ, ತಪ್ಪು ಗ್ರಹಿಕೆಗೆ ಒಳಗಾಗಬಾರದೆಂದೂ ಜನತಾಜನಾರ್ದನನಲ್ಲಿ ಕರಮುಗಿದು ಪ್ರಾರ್ಥನೆ

ನನ್ನ ಮೇಲೆ ಹೊರಡಿಸಿದ ಹುಕುಮಿನ ತರ್ಜುಮೆ.

ನಾನು ಉತ್ತರ ಕನ್ನಡ ಜಿಲ್ಲೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟನಾದ ಜಿ ಆರ್ ಸ ಬೆಲ್ಲ ಕ್ಲೇ ಎಂಬವನು ೧೯೩೧ನೇ ಇಸವಿಯ ವಿಶೇಷ ಅಧಿಕಾರಗಳ ಕುರಿತು ಹೊರಡಿಸಿದ ಆರ್ಡಿನನ್ಸಿನ ೪ (೧)ನೇ ಕಲಮಿನನ್ವಯ ನನಗೆ ಪ್ರಾಪ್ತವಾದ ಅಧಿಕಾರಗಳ ಮೂಲಕ ನಿಮಗ ಸುಬ್ರಾವ ರಾಮಚಂದ್ರ ಹಳದೀಪೂರ ಎಂಬವರಿಗೆ ವಿಧಿಸುತ್ತೇನಲ್ಲ — ನೀವು ಸವಿನಯ ಕಾಯಿದೇಭಂಗದ ಚಳವಳಿಯಲ್ಲಿ ಭಾಗವನ್ನು ಎತ್ತಿಕೊಳ್ಳದೇ ಹಾಗು ಅದಕ್ಕೆ ಯಾವದೇ ರೀತಿಯ ಸಹಾಯವನ್ನೀಯದೆ ಇರುಯತಕ್ಕದ್ದು ಹಾಗು ಯಾವದೇ ಜಾಹೀರ ಸಭೆಯಲ್ಲಾಗಲಿ ಅಥವಾ ಸಂಪ್ರದರ್ಶನದಲ್ಲಾಗಲಿ ನೀವು ಭಾಗ ತೆಗೆದುಕೊಳ್ಳಬಾರದು ಈ ಹುಕುಂ ಈ ಹೊತ್ತಿನಿಂದ ಒಂದು ತಿಂಗಳ ವರೆಗೆ ಅಮಲಿನಲ್ಲಿ ಉಳಿಯತಕ್ಕದ್ದು. ತಾ ೨೩ ಜನವರಿ ೧೯೩೨

[ಕ್ಲೇಯವರ ಸಹಿ]
ಕಾನಡಾದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟ

ಕಾರವಾರ, ಮಂಗಳವಾರ ತಾ. ೨೬-೧-೩೨.

ಸುಬ್ರಾವ ರಾಮಚಂದ್ರ ಹಳದೀಪುರಕರ

ಸ್ಥಾನಿಕ ವೃತ್ತಾಂತ

(೪ನೇ ಪುಟದಿಂದ ಮುಂದರಿಸಿದ್ದು.)

ಕಾರವಾರ— ಇಲ್ಲಿನ ಮುಂದಾಳುಗಳಾದ ಶ್ರೀ| ಸುಬ್ರಾವ ರಾಮಚಂದ್ರ ಹಳದೀಪುರಕರ ಇವರಿಗೆ ಆರ್ಡಿನನ್ಸಿನ ಪ್ರಕಾರ ಸಂಶಯದ ಮೇಲಿಂದ ಇದೇ ತಿಂಗಳ ತಾ. ೯ನೇಗೆ ಜೈಲಿನಲ್ಲಿಟ್ಟು ಕಡೆಗೆ ಬೇರೆ ಕೆಲವರ ಸಂಗಡ ಅವರಿಗೆ ತಾ ೧೯ನೇ ಬಿಟ್ಟುಕೊಡಲಾಗಿ ಅವರ ಮೇಲೆ ಕ್ರಿಯಾಬಂದಿಯ ಹುಕುಮು ಅದೇ ಆರ್ಡಿನನ್ಸಿನನ್ವಯ ಜಾರಿ ಮಾಡಲಾಗಿತ್ತಷ್ಟೇ ಆ ನೋಟೀಸಿನ ಪ್ರಕಾರ ಅವರು ನಡಕೊಳ್ಳದೇ ಆ ಹುಕುಮು ಉಲ್ಲಂಘಿಸಿದರೆಂಬ ಆರೋಪದ ಮೇಲಿಂದ ಅವರಿಗೆ ಬುಧವಾರ ಬೆಳಿಗ್ಗೆ ೭ ಘಂಟೆಗೆ ಅವರ ಮನೆಯಲ್ಲಿ ಹಿಡಿಯಲಾಯಿತು ಇಲ್ಲಿನ ೧ನೇ ವರ್ಗದ ಸ್ಪೆಶಲ್ ಮೆಜಿಸ್ಟ್ರೇಟ ಮಿ| ಮುಂಡಗೋಡ ಇವರ ಮುಂದೆ ಖಟ್ಲೆಯು ನಡೆಯಿತು. ಶ್ರೀ| ಹಳದೀಪುರಕರರು ಇಲ್ಲಿಯ ಸ್ಥಾನಿಕ ವ್ಯಾಪಾರಿಗಳ ದುಕಾನುಗಳಿಗೆ ಹೋಗಿ ಅವರಲ್ಲಿಯ ಪರದೇಶೀ ಅರಿವೆಗಳ ಗಂಟುಗಳನ್ನು ಕಟ್ಟಿಸಿ ಮೋಹರಬಂದ ಮಾಡಿ ಇರಿಸಿದರೆಂಬುದರಿಂದಲೇ ಅವರು ಮೇಲೆ ಹೇಳಿಸಿದ ಹುಕುಮು ಉಲ್ಲಂಘಿಸಿದಂತಾಯಿತು ಎಂಬುದಾಗಿ ಫಿರ್ಯಾದಿ ಪಕ್ಷದವರ ಹೇಳಿಕೆ ಅವರ ಮೇಲೆ ಜಾರಿ ಮಾಡಿದ ನೋಟೀಸಿನಲ್ಲಿ ಕಾಯಿದೇಭಂಗದ ಚಳವಳಿಯಲ್ಲಿ ಭಾಗ ಎತ್ತಿಕೊಳ್ಳಬಾರದಾಗಿ ಅವರಿಗೆ ನಿರ್ಬಂಧವಿದ್ದು ಅವರ ಮೇಲಿನ ಕೃತ್ಯವು ಕಾಯಿದೇಭಂಗದ ಚಳವಳಿಯಲ್ಲಿ ಅವರು ಭಾಗ ವಹಿಸಿದಂತೆ ಆಗುವದಿಲ್ಲವೆಂಬುದಾಗಿ ಸರಕಾರದ ಕೆಲ ವಕೀಲರಿಗೆ ಕಂಡ ಆದರೂ ಮೆಜಿಸ್ಟ್ರೇಟರು ಅಪ್ಪಣೆಯಿಂದ ತ್ರಯ ಸಾಕ್ಷಿಯಿಂದ ಈ ಸಂಗತಿ ಕೋರ್ಟಿನ ನಜರಿಗೆ ತಂದರು. ಶ್ರೀ| ಸುಬ್ರಾವ ಹಳದೀಪುರಕರ ಇವರು ಖಟ್ಲೆಯ ವಿಚಾರದಲ್ಲಿ ತಾನು ಏನೂ ಭಾಗ ತೆಗೆದುಕೊಳ್ಳಲಪೇಕ್ಷಿಸುವದಿಲ್ಲವಾಗಿ ಸ್ಪಷ್ಟವಾಗಿ ತಿಳಿಸಿ ನಿವೃತ್ತರಾದರು ಖಟ್ಲೆಯ ವಿಚಾರ ಗುರುವಾರ ದಿವಸ ಮುಂದಕ್ಕೆ ಹೋಗಿ ಮೆಜಿಸ್ಟ್ರೇಟರು ಶ್ರೀ| ಸುಬ್ರಾವ ಇವರ ಮೇಲೆ ಆರೋಪ ಹೊರಿಸಿ ಅವರಿಗೆ ೧ ವರ್ಷ ಸಕ್ರಮ ಕಾರಾಗೃಹವಾಸದ ಶಿಕ್ಷೆಯನ್ನು ಮತ್ತು ೩೦೦ ರೂಪಾಯಿ ದಂಡ ಇಲ್ಲವೆ ಆ ಬಗ್ಗೆ ಇನ್ನು ೩ ತಿಂಗಳ ಸಜೆ ಈ ರೀತಿ ಶಿಕ್ಷೆ ವಿಧಿಸಿದರು. ಪರದೇಶೀ ಅರಿವೆಗಳ ಗಂಟು ಕಟ್ಟಿಸಿ ಮೊಹರಬಂದ ಮಾಡಿ ಇರಿಸಿದ್ದು ಪ್ರತ್ಯಕ್ಷ ಕಾಯಿದೇಭಂಗದ ಚಳವಳಿಯು ಅಲ್ಲವಾದರೂ ಪರರಿಗೆ ವ್ಯವಹಾರದಲ್ಲಿ ಅಡಚಣೆಪಡಿಸಬಾರದೆಂಬ (Molestation Ordinance) ನಾಮಕದ ಕಾಯಿದೆಯಂತೆ, ಅದು ಗುನ್ಹೆಯಾಗುವದು, ಮತ್ತು ಈ ಕಾರಣದಿಂದ ಆ ಕಾಯಿದೆಯನ್ನೂ ಉಲ್ಲಂಘಿಸಿದಂತಾಗುತ್ತದಾದ್ದರಿಂದ, ಆ ಕಾಯಿದೆಯನ್ನು ಉಲ್ಲಂಘಿಸಿ ಕಾಯಿದೆಭಂಗದಲ್ಲಿ ಸಹಭಾಗಿಗಳಾದಂತೆಯೇ ಆಯಿತು, ಎಂದು ಮ್ಯಾಜಿಸ್ಟ್ರೇಟರು ಅಭಿಪ್ರಾಯಪಟ್ಟಿರುವರು ಅವರಿಗೆ ನಡೆಸಿದ ಖಟ್ಲೆ ಬುಧವಾರ ದಿವಸ ಖುಲ್ಲೆಯಲ್ಲಿ ಹೇಳಲಾಯಿತು.

ಪರದೇಶೀ ಜವಳಿ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಬಗ್ಗೆ ಶ್ರೀ| ಗಣಪತರಾವ ನಾಡಕರ್ಣಿಯವರಿಗೆ ಕ್ರಮಾತ ಕರೆದು ಶನಿವಾರ ಮಿ| ಮುಂಡಗೋಡರವರ ಕೋರ್ಟಿನಲ್ಲಿ ಖಟ್ಲೆ ವಿಚಾರವಾಗಿ ೬ ತಿಂಗಳ ಸಜೆ, ರೂ ೨೦೦ ದಂಡ ವಿಧಿಸಲ್ಪಟ್ಟಿದೆ, ದಂಡ ಕೊಡದಿದ್ದರೆ, ೧|| ತಿಂಗಳ ಸಜೆ ಈ ಬಗ್ಗೆ ಶನಿವಾರ ಇಲ್ಲಿ ಹರತಾಳವಾಯಿತು

ಅಲ್ಲಿ ಬೀಳಕೊಡುತ್ತಿರೆ ಜನರು ಅಲ್ಲಿಗಿದ್ದಲ್ಲಿ ಹೋಗಿ ಅಭಿನಂದಿಸಿದರು.

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಹಸ್ರಗೋಡ ಗ್ರೂಪ ಸಹಕಾರಿ ಸಂಘದ ವ್ಯವಸ್ಥಾಪಕ ಕಮಿಟಿ ಮೆಂಬರರು ಜಾಹೀರಪಡಿಸುವದೇನಂದರೆ — ಸದ್ರಿ ಸಂಘದಲ್ಲಿ ಮೆಂಬರರಾದವರು ತಮ್ಮ ಮೇಲಿನ ಸಾಲದ ಜವಾಬದಾರಿ ತಪ್ಪಿಸಿಕೊಂಡ ವಿನಹ ತಮ್ಮ ಆಸ್ತಿಗಳನ್ನು ಯಾವದೇ ಕಾರಣದಿಂದ ಪರಾಧೀನಪಡಿಸಿದ್ದಲ್ಲಿ ಅದು ಸಿಂಧು ಆಗಲಿಕ್ಕಿಲ್ಲ. ಮತ್ತು ಸದ್ರಿ ಸಂಘದ ಮೆಂಬರರ ಆಸ್ತಿ ಖರೀದಿಸಿಕೊಳ್ಳುವವರು ಸಂಘದಲ್ಲಿ ಸದ್ರಿ ಮೆಂಬರರ ಸಾಲದ ಜವಾಬದಾರಿಯನ್ನು ತಪ್ಪಿಸಿದ ಶಿವಾಯ ಒಡವು-ಕ್ರಯ ವಗೈರೆ ಸ್ವಾಧೀನತೆಯು ಸಿಂಧು ಆಗಲಿಕ್ಕಿಲ್ಲ ತಿಳಿಯುವದು.

ತಾರೀಕು ೨೮-೧-೧೯೩೨

ವ್ಯವಸ್ಥಾಪಕ ಮೆಂಬರರು,
ಹಸ್ರಗೋಡ ಗ್ರೂಪ ಸಹಕಾರಿ ಸಂಘ.

ಭಟಕಳದಲ್ಲಿ ಹೆಂಗಸರ ಮೇಲೆ, ಮಕ್ಕಳ ಮೇಲೆ ಅನಪೇಕ್ಷಿತ ಲಾಠಿ ಪ್ರಹಾರ!

ಸ್ಥಾನಿಕ ವೃತ್ತಾಂತ.

ಕುಮಟಾ— ಧ್ವಜ, ಧ್ವಜಸ್ಥಳ, ಧ್ವಜವಂದನ ಪ್ರಭಾತ ಫೇರಿ ಇವೇ ಇಲ್ಲಿಯ ಈಗಿನ ಮುಖ್ಯ ವಿಷಯಗಳು. ರವಿವಾರ ಧ್ವಜ [illegible] ಪ್ರಭಾತ ಫೇರಿಗೆ [illegible] ಸ್ವಯಂಸೇವಕರ [illegible] ಪ್ರಭು, ನರಸಿಂಹ [illegible] ಬಿಡುಗಡೆ ಮಾಡಿದರು. [illegible] ಮೊದಲಾದ ೬ ಜನರಿಗೆ [illegible] ಸ್ವಾತಂತ್ರ್ಯ [illegible] ಪೋಲೀಸರ [illegible] ಸಂಜೆ ಶ್ರೀ [illegible] ದೇವಸ್ಥಾನದ [illegible] ಧ್ವಜ [illegible] ಪೋಲೀಸರು [illegible] ಪೋಲೀಸರು ಕಾವಲು ನಡೆಸುತ್ತಾರೆ.

[illegible] ಇಲ್ಲಿ ಸೋಮವಾರ ದಿವಸ [illegible] ಧ್ವಜವಂದನೆಯಾಯಿತು! [illegible] ಶ್ರೀ ವೆಂಕಟರಮಣ ದೇವಸ್ಥಾನಕ್ಕೆ ಹೋಗಿ ವಿಸರ್ಜನ ಹೊಂದಿತು.

ಮುಂಜಾನೆ-ಸಂಜೆ ಪೋಲೀಸರಿಗೆ [illegible] ಬೇಕಾಗಿ [illegible] ಗೋಕರ್ಣ ಫೌಜದಾರ [illegible] ನಡೆಸಿದಂತೆ! ಶ್ರೀಧರ [illegible] ಇಲ್ಲವೇ! [illegible] ಪ್ರವಾಸಾಂತರಗಳಲ್ಲಿ [illegible] ಹೇಳುತ್ತಾರೆ.

ಯೋಗ್ಯ [illegible] ಎಂಬುವರ ವಿದ್ಯಾ [illegible] ಎಂಬುದನ್ನು [illegible] ದರು ಮುಂದುವರಿಸಿದಂತೆ.

ಇಲ್ಲಿಯ ಕನ್ನಡ ಶಾಲೆಯಲ್ಲಿ ಈ ತಾಲೂಕಿನೊಳಗಿನ [illegible] ಶಿಕ್ಷಕರ ಸಮ್ಮೇಳನವು ಕಳೆದ ಸೋಮವಾರ, ಮಂಗಳವಾರ ಇಲ್ಲಿಯ ಸಬ್‌ಜಡ್ಜ ರಾ| ಸಿ ಎಸ್ ದೇವಧರರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಹುಡುಗರ [illegible] ಸಂಗೀತ, [illegible] ಶಿಕ್ಷಕ-ಶಿಕ್ಷಕಿಯರ [illegible] ಸಮ್ಮೇಳನವು [illegible] ವಿದ್ಯಾರ್ಥಿಗಳ ಶಾರೀರಿಕ, ಮಾನಸಿಕ, ನೈತಿಕ ಉನ್ನತಿಯಾಗುವಂತೆ ಶಿಕ್ಷಕರು ಮನಸ್ಸಿಟ್ಟು [illegible] ಅಧ್ಯಕ್ಷರು ಉಪದೇಶಿಸಿದರು.

ಸೋಮವಾರ ರಾತ್ರಿ ಉತ್ತರ ಕನ್ನಡ ಸಾಹಿತ್ಯ [illegible] ಮಂಡಳದ [illegible] ಸಾಹಿತ್ಯ [illegible] ಹಲವು ಶಿಕ್ಷಕರು ಸಂಘದ ಸದಸ್ಯರಾಗಿದ್ದಾರೆ. [illegible] ಮಂಡಳದ [illegible] ರಾ| ಎಮ್ ಎಸ್ [illegible] ಅಧ್ಯಕ್ಷರಾಗಿದ್ದರು.

ಸ್ವಾತಂತ್ರ್ಯ ದಿನ ಶ್ರೀ ಕ್ಷೇತ್ರ ಗೋಕರ್ಣ, [illegible] ಹೊಳಗದ್ದೆ ಗ್ರಾಮಗಳಲ್ಲಿ [illegible] ಗೋಕರ್ಣ-ಹಿರೇಗುತ್ತಿಗಳಲ್ಲಿ [illegible] ಹೊಳಗದ್ದೆಯವರ [illegible] ಶ್ರೀ ಗೋಕರ್ಣ ಕ್ಷೇತ್ರದಲ್ಲಿ ದಿನಾ ಪ್ರಭಾತ ಫೇರಿಗಳು ನಡೆಯುತ್ತವೆ. ಸ್ವಾತಂತ್ರ್ಯೋತ್ಸವದ ದಿನ [illegible]

ಹೊನ್ನಾವರ— ಮಂಗಳವಾರ ಸ್ವಾತಂತ್ರ್ಯ ದಿನ [illegible] ಮುಂಜಾನೆ ೬ ಘಂಟೆಗೆ [illegible] ಪೋಲೀಸರು [illegible] ಕೊಂಡು [illegible]

ಶುಕ್ರವಾರ ಇಲ್ಲಿ [illegible] ದಿನ [illegible] ಪೋಲೀಸರು ದೊಣ್ಣೆ ಹಿಡಕೊಂಡು ಸಂದಿ-ಗೊಂದಿಗಳಲ್ಲಿ ಸಜ್ಜಾಗಿ ಹಗಲೆಲ್ಲ ನಿಂತುಕೊಂಡಿದ್ದರು.

ಶಿರಾಲಿ— ಆಚೆ ರವಿವಾರ ತಾ. [illegible] ಯಿಂದ ನಿತ್ಯ ಪ್ರಭಾತ ಫೇರಿ ನಡೆಯುತ್ತದೆ. ಸ್ವಾತಂತ್ರ್ಯ ದಿನ ಇಲ್ಲಿ ಹರತಾಳ ಇತ್ತು.

ಶನಿವಾರ ತಾ. [illegible] ಪೋಲೀಸರು [illegible] ಸಂತೆಗೆ ಹೋಗಿದ್ದರು [illegible] ಪೋಲೀಸರು [illegible] ವಿಠ್ಠಲರಾಯರು ಪ್ರಭಾತ ಫೇರಿಯ ಚಾಲಕರು.

ಭಟಕಳ— ಇಲ್ಲಿಯ ಸ್ವಾತಂತ್ರ್ಯೋತ್ಸವಕ್ಕೆ ಮುಂಚಿನಿಂದಲೇ ವಿಘ್ನಗಳು! ಸೋಮವಾರ [illegible] ಹುಡುಗರು [illegible] ಜಾಗಟೆ-ಶಂಖನಾದಗಳನ್ನು [illegible] ಮಾರನೇ ದಿನ ನಡೆಯಲಿದ್ದ ಸ್ವಾತಂತ್ರ್ಯೋತ್ಸವಕ್ಕೆ [illegible] ಅವರಿಗೆ ಹಿಡಿದು ಕಚೇರಿಗೆ [illegible] ಬಿಟ್ಟುಕೊಟ್ಟರು. ಈ ಸಮಯ ಕಚೇರಿ [illegible] ಪೋಲೀಸರು [illegible] ವರು [illegible] ಪೋಲೀಸರು ಬಹಳ ಗದ್ದರಿಸಿದರು “[illegible] ಕೊಡು, ನಿನಗೇನು ಕೆಲಸ? ಇಲ್ಲಿ [illegible] ಈಗ ಕಚೇರಿಯಿಲ್ಲ, ಹೊರಹೋಗು!” ಹೀಗೆ ಗದ್ದರಿಸಿದರು. “ಕೋರ್ಟ ಸಮಯ ತೀರಿದಾಗ್ಯೂ [illegible] ಇದ್ದಾರೆ, ಕಾರಕೂನರು ಇದ್ದಾರೆ, ನಾನು ಕಚೇರಿಯ ಒಳಸೇರಲಿಲ್ಲ, ಜಗಲಿಯ ಮೇಲೆ ನಿಂತುಕೊಂಡಿದ್ದೇನೆ, ಇಲ್ಲಿ ನಿಲ್ಲಲು ಆತಂಕ ಮಾಡಬಾರದು.” ಹೀಗೆ [illegible] ಮಂಗಳವಾರ ಬೆಳಗು [illegible] ದಂತೆ, ಮುಂಜಾನೆ ೫ ಘಂಟೆಗೆ ಸರಿಯಾಗಿ ಗ್ರಾಮದೇವರಾದ ಶ್ರೀ ಹನುಮಂತ ದೇವಸ್ಥಾನದ ಮುಂದಿನ [illegible] ಧ್ವಜವಂದನೆಯಾಗಿ ಪ್ರಭಾತ ಫೇರಿ [illegible] ಮಾರ್ಗವಾಗಿ, [illegible] ಮಾರ್ಗವಾಗಿ ಪ್ರಭಾತ ಫೇರಿಯು [illegible] ಪದ್ಯಗಳನ್ನು ಹಾಡುತ್ತ [illegible] ಜಯಘೋಷಗಳನ್ನು ಘೋಷಿಸುತ್ತ [illegible] ನಡೆದಿತ್ತು. ಮುಂಭಾಗದಲ್ಲಿ [illegible] ವರ್ಷದ ಹುಡುಗಿಯು ಧ್ವಜ ಹಿಡಕೊಂಡು [illegible] ಮಾಡುತ್ತಿದ್ದಳು. ಅವಳ ಬೆನ್ನಿಗೆ [illegible] ಹೆಂಗಸರು [illegible] ನಡೆಯುತ್ತಿದ್ದರು. ಫೇರಿಯು ಶ್ರೀ [illegible] ದೇವಸ್ಥಾನಕ್ಕೆ [illegible] ಅಲ್ಲಿ ಪೋಲೀಸರು ದೊಣ್ಣೆ ಹಿಡಕೊಂಡು ಸಜ್ಜಾಗಿ ನಿಂತಿದ್ದರು. ಫೌಜದಾರರು [illegible] ಧ್ವಜ [illegible] ಒಮ್ಮೆಲೇ ಪೋಲೀಸರು [illegible] ಶ್ರೀ [illegible] ದೇವಸ್ಥಾನದ ಕಡೆಗೆ [illegible] ಪೋಲೀಸರಿಗೆ [illegible] ಫೌಜದಾರರು [illegible] ಪೋಲೀಸರು [illegible] ಲಕ್ಷ್ಮಣ [illegible] ಧ್ವಜಸ್ತಂಭ [illegible] ಧ್ವಜವನ್ನು [illegible] ಕಚೇರಿಯಲ್ಲಿ ಒಯ್ದಿಟ್ಟರು [illegible] ಮ್ಯಾಜಿಸ್ಟ್ರೇಟರಲ್ಲಿ [illegible] ದಿನ [illegible] ಫೌಜದಾರ [illegible] ಪೋಲೀಸರು [illegible] ಶುಕ್ರವಾರ [illegible] ದಿನದ [illegible]

ಇಲ್ಲಿಯ [illegible] ಪೋಲೀಸರ [illegible]

[illegible] ೧೦|| ಘಂಟೆಗೆ [illegible] ವಿದ್ಯಾರ್ಥಿಗಳಿಗೆ [illegible]

ಶಿರ್ಶಿಯಲ್ಲಿ ರಾಜನಿಷ್ಠ ಸಭೆ; ಅಂಕೋಲೆಯಲ್ಲಿ ಸೇವಕರ ಸಭೆ;

[illegible]

[illegible]

[illegible]

ಶಿರ್ಶಿ— [illegible]

[illegible]

[illegible]

[illegible]

[illegible]

[illegible]

ಸಿದ್ದಾಪುರ— [illegible]

[illegible]

ಅಂಕೋಲೆ— [illegible]

[illegible]

[illegible]

([illegible])

ಇತರ ವಾರ್ತೆಗಳು.

— ಪ್ರತಿಯಲ್ಲಿ ರಾಜಬಿಸ್ತರು ಹಿಂದು ಸಂಘವನ್ನು ಸ್ಥಾಪಿಸಿದಾರೆ. ಸತ್ಯಾಗ್ರಹವನ್ನು ಹಬ್ಬುವದೇ ಈ ಸಂಘದ ಉದ್ದೇಶ. ಜಾತಿ ವರ್ತಕರು ಸಂಘದ ಖರ್ಚು ಪ್ರತ್ಯೇಕವಾದರು ಸಂಘದ ಕೆಲಸ ಮಾಡುವ ಸ್ವಯಂಸೇವಕರಿಗೆ ದಿನಗೂಲಿ ಸಿಗುತದೆ.

— ಮುದ್ರಾಸ ವರ್ತಕರ ಸಂಘವು ಅಲ್ಲಿ ಪಿಕೆಟಿಂಗ ಮೇಲೆ ನಡೆಯುತ್ತಿರುವ ಬಹಿಷ್ಕಾರವನ್ನು ನಿಷೇಧಿಸಿದೆ. ಈ ಸಂಘದಲ್ಲಿ ಯುರೋಪಿಯನ್ ವರ್ತಕರಿದ್ದಾರೆ. ಅವರು ಸಹ ಈ ನಿಷೇಧಕ್ಕೆ ಅನುಮತಿಯನ್ನಿತ್ತಿದ್ದಾರೆ. [illegible] ಎಲ್ಲ ಕಾಯಿದೆಯ ವಿಚಾರದಲ್ಲಿ [illegible] ಪಿಕೆಟಿಂಗು ಶಿಕ್ಷಾರ್ಹ ಸಭೆಯಾಗಿದ್ದು, [illegible] ಅಂದಿನಿಂದ ಪೋಲೀಸರಿಗೆ [illegible] ಅಧಿಕಾರಿಗಳಿಗೆ ಸಭಿಕರ ಮೇಲೆ [illegible] ನಿಷಿದ್ಧವಾಗಿಯೂ ಅಧಿಕ್ರಿಯವಷ್ಟೇ ಅಲ್ಲದೆ [illegible] ನ್ಯಾಯವೂ [illegible] ನ್ಯಾಯಾಧೀಶರೂ [illegible] ಪ್ರಮುಖರೂ [illegible] ಹೊರವಿಯುವಾಗಿನ ಸತ್ಯಾಗ್ರಹಕ್ಕೆ [illegible] ಸರಕಾರಿ [illegible] ಅಧಿಕಾರಿಗಳು.

— ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಕಳೆದ ವಾರ ವಾದ ಸರ್ವಾಧಿಪತಿಗಳು ಭಾಷಣ ಮಾಡಿದರು. ರಾಷ್ಟ್ರೀಯ ಸಭೆಯು ಲೋಕ್ಸಭೆಯಲ್ಲಿ ನಿರ್ಧಾರದಿಂದ ಸರಕಾರವು ಮುರಿಯುವ ಸಂಕಲ್ಪ ಮಾಡಿರುವದಾಗಿಯೂ, ಆ ಸಂಕಲ್ಪವು ಸಿದ್ಧಿಗೈಯುವದಾಗಿಯೂ ರಾಷ್ಟ್ರೀಯ ಸಭೆಯವರು ಹಟವಾದಿಗಳೆಂದೂ, ಅವರಿಗೆ ನಿಶಾ ಮುಮಾಡಿದ್ದರಿಂದಲೇ ಹಿಂದುಸ್ಥಾನಕ್ಕೆ ಕ್ಷೇಮವಾಗುವದೆಂದೂ ನುಡಿದರು. "ಇದು ಶಕ್ಯವೇ? ಇನ್ನು ವೇ? ಇದರಿಂದ ರಾಜ್ಯಕಾರಭಾರದ ಕಾರ್ಯಕ್ಕೆ ಅನುಕೂಲವಾಗಬಲ್ಲದೇ?" ಎಂಬದಾಗಿ ಲಂಡನಿನ 'ನ್ಯೂಸ ಕ್ರಾನಿಕಲ್' ಪತ್ರಿಕೆಯು ಸವಾಲು ಮಾಡುತ್ತದೆ. 'ಡೇಲಿ ಟೆಲಿಗ್ರಾಫ-ಮೇಲ" ಮೊದಲಾದ ಪತ್ರಿಕೆಗಳು ಸರ್ವಾಧಿಪತಿಗಳಿಗೆ "ಭಾಪ್ಪರೆ! ಭಾಪ್ಪರೆ!!" ಎಂದು ಬೆನ್ನುತಟ್ಟುತ್ತವೆ.

— ಇರ್ವಿನ್ ದೊರೆಗಳು ಈಗ ಸರ್ವಾಧಿಪತಿಗಳಾಗಿದ್ದರೆ, ಅವರು ವಿಲಿಂಗ್ಡನ್ ದೊರೆಗಳಂತೆ ನಡೆದುಕೊಳ್ಳುತ್ತಿದ್ದಿಲ್ಲವಾಗಿ ಹಲವರು ಹೇಳಿ ಸರ್ವಾಧಿಪ ವಿಲಿಂಗ್ಡನ್ ದೊರೆಗಳಿಗೆ ದೂರುತ್ತಾರೆ. ಇದನ್ನು ಸರ್ವಾಧಿಪತಿಗಳಾಗಿದ್ದ ಇರ್ವಿನ್ ದೊರೆಗಳು ಲೀಡ್ಸದೊಳಗೆ ಮಾಡಿದ ಒಂದು ಭಾಷಣದಲ್ಲಿ ಅಲ್ಲಗಳೆದರು - "ವಿಲಿಂಗ್ಡನ್ ದೊರೆಗಳಂತೆಯೇ ನಾನು ನಡೆಕೊಳ್ಳುತ್ತಿದ್ದೆ. ರಾ| ಗಾಂಧಿಯವರ ತಪ್ಪಿಲ್ಲ, ಅವರು ನಿರುಪಾಯರಾದರು. ರಾಷ್ಟ್ರೀಯ ಸಭೆಯದೇ ತಪ್ಪು!" ಹೀಗೆ ದೊರೆಗಳು ನಡೆದ ವರ್ತನವನ್ನು ಕೇಳಿ ತೀರ್ಪು ಕೊಟ್ಟಿರುವದೆ. ವಿಲಿಂಗ್ಡನ್ ದೊರೆಗಳಿಗೆ ಹಳಿದು, ಇರ್ವಿನ್‌ದೊರೆಗಳಿಗೆ ಹೊಗಳುವವರು ತಕ್ಕ ಬೋಧ ಪಡೆಯಬೇಕು.

ಬಾಲಜೀವನ.

ಈ ಔಷಧವು ಗಾಣಿ (Rickets), ಬಾಲಪೀಡೆ, ಅಸ್ಥಿಜ್ವರ, ಥಂಡಿ, ಕಫ, ನಾಯಿಗೆಮ್ಮು, ಕಾಳಿಜ ನೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬುಗಳ ರೋಗ, ಕ್ಷಯ, ಅಪಸ್ಮಾರ, ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ದಿವ್ಯೌಷಧವಾಗಿರುತ್ತದೆ. ಈ ಔಷಧವು ಒಂದು ತಿಂಗಳ ಕೂಸಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ ಕಾಲುಗಳು ಕ್ಷೀಣವಾಗುವದು, ತಲೆಯು ಯಾವಾಗಲೂ ಬೆವರಿ ಬಿಸಿಯಾಗುವದು, ಹಲ್ಲು ಬರುವಾಗ ಅತಿಸಾರ, ಬಾಲಗ್ರಹ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ. ೧-೮ ೦. ಪೋ. ಖ. ಬೇರೆ.

ಡಲ್‌ಸೆಟ್ ಎಂಡ್ ಕೋ,
ಪ್ರೋ ಕುಮಟಾ (ಉ ಕಾನಡಾ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಅದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು, ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ [illegible] ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಇದು ತಿಕ್ಕಿದ ಕೂಡಲೆ ತಲೆಯು ತಂಪಾಗುತ್ತದೆ, [illegible] ಕೂದಲುಗಳ ಬೇರುಗಳಿಗೆ [illegible] ಸಿಗುವದೆ [illegible] ಕೂದಲುಗಳಿಗೆ ಪುಷ್ಟಿ ನಿಮ್ಮ ರೂಪವು ಹಸನಾಗಿ ಬೆಳಯುತ್ತದೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ
ಅಥವಾ
ನಮಗೇ ಬರೆದು ತರಿಸಿಕೊಳ್ಳಿ

ಬಾಟ್ಲಿ ೧ಕ್ಕೆ	ರೂ.	೧—೦—
ಅಂಚೆವೆಚ್ಚ	,,	೦—೬—
೩ ಬಾಟಲಿಗಳಿಗೆ	,,	೨—೧೦—
ಅಂಚೆವೆಚ್ಚ	,,	೦—೧೨—

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ.

೧ ಔಂಸಿಗೆ	ರೂ	೨ ೦-೦
ಔಂಸಿಗೆ	"	೧-೪ ೦
ಡ್ರ್ಯಾಮಿಗೆ	,,	೦-೧-೦
ಅಂಚೆವೆಚ್ಚ	,,	೦-೬-೦

ಒಟ್ಟೋ ದಿಲ್ ಬಹಾರ
ಹೇಳಲಿಕ್ಕೆ ಮರೆಯಬೇಡಿರಿ!



"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದ
ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂ
ಸಂಪಾದಿಸಬಹುದು—ಅದ್ಯಾವುದು?—

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ

ಪೇಟೆಯಲ್ಲಿ ಅನೇಕ ಸಾಧಾರಣ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತದೆ ಇದರಿಂದ ಹೂವಿನ ಸಹಜ ಪರಿಮಳವು ಸಿಗುವ ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಸಮ್ಮನ ಸ್ಪರ್ಧವಿಲ್ಲ.

THE ANGLO INDIAN DRUG & CHEMICAL CO.
POST BOX 2082. **BOMBAY** No.

ಮ॥ ಗಾಂಧಿಯವರ

ಗೀತಾ-ಬೋಧ.

ಅ:— ಶ್ರೀ॥ ಹನುಮಂತರಾವ ಹಾರೋಲಿಕರ

ಅಕ್ಷರ-ಬ್ರಹ್ಮ-ಯೋಗ.

೮ನೇ ಅಧ್ಯಾಯ

ಅರ್ಜುನನು ಕೇಳಿದ್ದು —

'ಪೂರ್ಣಬ್ರಹ್ಮ, ಅಧ್ಯಾತ್ಮ, ಕರ್ಮ, ಅಧಿಭೂತ ಅಧಿದೈವ, ಅಧಿಯಜ್ಞ ಎಂಬೀ ಶಬ್ದಗಳ ಬಳಕೆಯು ಹಿಂದಿನ ಅಧ್ಯಾಯದಲ್ಲಿ ಬಂದಿತು. ಅವರ ಅರ್ಥ ಸ್ಪಷ್ಟವಾಗಿ ತಿಳಿಯಲಿಲ್ಲ ಅದಲ್ಲದೆ ಕೃಷ್ಣನು [illegible] ಜ್ಞಾನಿಗಳನ್ನು ಗುರುತಿಸುವವನು ಮನುಷ್ಯನನ್ನು ಕೊನೆಯ ಕಾಲದಲ್ಲಿ ಹೇಗೆ ಬಂದು ಕಾಣುತ್ತೀಯೆಂದು ನೀನು ಅಂದಿರುವದನ್ನು ಸ್ಪಷ್ಟವಾಗುವಂತೆ ಹೇಳು"

ಶ್ರೀಕೃಷ್ಣನು ಅಂದದ್ದು — "ಸರ್ವೋತ್ತಮವಾಗಿ ನಾಶರಹಿತವಾದ ಸ್ವರೂಪವೇ ಪೂರ್ಣಬ್ರಹ್ಮವು. ಪ್ರಾಣಿಮಾತ್ರದಲ್ಲಿ ಕರ್ತಾ ಭೋಕ್ತಾ ಎಂಬ ರೂಪದಿಂದ ದೇಹದ [illegible] ಅಧ್ಯಾತ್ಮವು [illegible] ಕ್ರಿಯೆಯಿಂದ ಉತ್ಪತ್ತಿಯಾಗುತ್ತವೆಯೋ ಅದು ಕರ್ಮವು ಯಾವ ಕ್ರಿಯೆಯಿಂದ ಎಲ್ಲ ಉತ್ಪತ್ತಿಯಾಗುತ್ತವೆಯೋ ಅದು ಕರ್ಮವೆಂದು [illegible] ನಾಶವುಳ್ಳ ನನ್ನ ದೇಹ ಸ್ವರೂಪವು ಅಧಿಭೂತವು ಅಧಿಯಜ್ಞವೆಂದರೆ — ಯಜ್ಞ ಕ್ರಿಯೆ [illegible] ನಾನು [illegible] ನೀನು [illegible] ಸ್ವರೂಪವಾದೆನು [illegible] ದೇಹರೂಪದಿಂದಲೂ, ಜೀವರೂಪದಿಂದಲೂ, ಶುದ್ಧ ಜೀವರೂಪದಿಂದಲೂ, ಪೂರ್ಣಬ್ರಹ್ಮರೂಪದಿಂದಲೂ ಎಲ್ಲವೂ ನಾನೇ ಆಗಿ [illegible] ಇಂಥ ನನ್ನ ಸ್ವರೂಪವನ್ನು ಧ್ಯಾನಿಸುವವನು ತನ್ನನ್ನು ಮರೆತುಬಿಡುವವನು, ಸಂಪೂರ್ಣವಾಗಿ ನಿಃಶೂನ್ಯನಾಗಿ [illegible] ನನಗೆ ಒಂದು ಕಾಲಾವಧಿಯಲ್ಲಿ ನಿಜ ಸಂದೇಹವಿಲ್ಲ ಯಾವ ಸ್ವರೂಪವನ್ನು ನಿಶ್ಚಯ ಧ್ಯಾನಿಸಿ ಕೊನೆಯ ಘಳಿಗೆ ನಾವು ಯಾವ ಸ್ವರೂಪವನ್ನು ಧ್ಯಾನಿಸುತ್ತಿರುವನೋ, ಅದೇ ಸ್ವರೂಪಕ್ಕೆ ಅವನು ಹೊಂದುತ್ತಾನೆ ಆದುದರಿಂದ ನೀನು ಯಾವಾಗಲೂ ನನ್ನನ್ನೇ ಧ್ಯಾನಿಸುತ್ತಿರು, ನನ್ನ ಸ್ವರೂಪದಲ್ಲಿಯೇ ಮನಸ್ಸನ್ನು ಬುದ್ಧಿಯನ್ನು ಸ್ಥಿರವಾಗಿ ಇಡು. ಅಂದರೆ ನನಗೇ ಬಂದು ಸೇರುವಿ [illegible] ಸ್ಥಿರವಾಗಿರಲಾರದು ನೀನು ಅಭ್ಯಾಸದಿಂದ [illegible] ಪ್ರಯತ್ನ ಮಾಡುವದರಿಂದಲೂ ಒಂದೇ ಸಮನೆ ಪ್ರಯತ್ನ ಮಾಡುವದರಿಂದಲೂ ಇಂಥ ದ್ಯಾನವು [illegible] ಲಕ್ಷದಲ್ಲಿಡು ಅಭ್ಯಾಸ ಮಾಡಿದರೆ [illegible] ನನ್ನ ಸ್ವರೂಪವೇ ಆಗುವವನು ನೀನಾಗ ಇದೇ [illegible] ಕಾರಣದಿಂದಲೇ ಮನುಷ್ಯನು ಮೊದಲಿನಿಂದಲೇ ಸಿದ್ಧನಾಗಿ ನಿಶ್ಚಯ ಬೇಕು, ಅಂದರೆ ಅಂತಕಾಲದಲ್ಲಿ ಮನಸ್ಸು ಬ್ರಹ್ಮನ ಲಕ್ಷ್ಯದಲ್ಲಿ, ಭಕ್ತಿಯುಳ್ಳ ಚಿತ್ತ ಹೊಂದುವದು, ಪ್ರಾಣಗಳು ಸ್ಥಿರವಾಗ ಬಲ್ಲ ಅಂಗಾ ಸರ್ವಜ್ಞನೂ, ಪುರಾತನನೂ, ನಿಯಂತ್ಯವೂ ಬಗಿರುವನೋ ಸೂಕ್ಷ್ಮನಾಗಿದ್ದರೂ ಎಲ್ಲವನ್ನು ಪೋಷಿಸಲಿಕ್ಕೆ ಸಮರ್ಥನಾಗಿರುವನೋ, ಚಿಂತಿಸಲು ಯಾವಾತನು ಸ್ವರೂಪವನ್ನು ಚಿಂತಿಸಲಿಕ್ಕಾಗುವದಿಲ್ಲವೋ, ಯಾವಾತನ ಅಜ್ಞಾನರೂಪವಾದ ಕತ್ತಲೆಯನ್ನು ಸೂರ್ಯನಂತೆ ದೂರಮಾಡುವನೋ, ಆ ಪರಮಾತ್ಮನ ಸ್ಮರಣೆಯು ಆಗುತ್ತಿರುವದು

ಈ ಪದವು ಪದಕ್ಕೆ ವೇದಗಳು ಅಕ್ಷರಬ್ರಹ್ಮವೆಂದು ಕರೆಯುತ್ತವೆ ರಾಗ- ದ್ವೇಷಾದಿಗಳನ್ನು ಬಿಟ್ಟು ಬಿಟ್ಟ ಮುನಿಗಳು ಈ ಪದಕ್ಕೆ ಸೇರುತ್ತಾರೆ ಈ ಪದವನ್ನು ಹೊಂದಬೇಕೆನ್ನುವವರೆಲ್ಲ ಸಾಧಕರು ಬ್ರಹ್ಮಚರ್ಯವನ್ನು ಪಾಲಿಸುತ್ತಾರೆ ಅಂದರೆ ಮನೋವಾಕ್ಕಾಯಗಳನ್ನು ಅಧೀನದಲ್ಲಿರಿಸಿ ವಿಷಯಾದಿಗಳನ್ನು ತ್ಯಜಿಸುತ್ತಾರೆ ಇಂದ್ರಿ

ಯಗಳನ್ನು ಬಿಗಿದು ಹಿಡಿದವನು, ನಿರ್ದಿಷ್ಟ, ನನ್ನನ್ನು ಬೇರೆ ಸೃಷ್ಟಿ ದೇಹವನ್ನು [illegible] ಈ ಪದವನ್ನು ಹೊಂದುತ್ತಾರೆ. [illegible] ಆತ್ಮಾ ಹುಟ್ಟುವದಿಲ್ಲ. ಈ ಜನುಮಾಂತ್ರ [illegible] ಅವರ ಸಲುವಾಗಿ ನನಗೆ ಬಂದು ಮುಟ್ಟುವವರಿಗೆ ತಿರುಗಿ ಜನ್ಮ [illegible] ಜನ್ಮದಿಂದ [illegible] ದಿಂದ ಬಿಡುಗಡೆ [illegible] ಪರ ನನ್ನನ್ನು ಹೊಂದುವದಿಲ್ಲವೆಂದು [illegible] ಮನುಷ್ಯನು [illegible] ಆಗತ ಮಾಡುತ್ತಾನೆ. [illegible] ಗಿರುವದು [illegible] ಯುಗಗಳೆಂದರೆ ಬ್ರಹ್ಮದೇವರ ಒಂದು ದಿವಸವು [illegible] ಮನುಷ್ಯನ ಒಂದು ದಿವಸದ [illegible] ಎಷ್ಟರದು? [illegible] ಈ ಅನಂತವಾದ ಕಾಲಚಕ್ರದಲ್ಲಿ [illegible] [illegible]

[illegible] ಕೃಷ್ಣನು [illegible] ಹೊಂದುವವರೇ [illegible] ಆಗುವದು [illegible] ಯಾವ ಅಕ್ಷರ [illegible] ಕ್ಷಣದಲ್ಲಿ [illegible] [illegible] ನಾನು [illegible] ಜನ್ಮ [illegible] ಪರಮಾತ್ಮ ಹಗಲಿನ [illegible] ಅದರ [illegible] ಅವ್ಯಕ್ತದಿಂದ [illegible] ಎಲ್ಲ ಜಗತ್ತು [illegible] ಮತ್ತು ಅದು ಎಲ್ಲ [illegible]

[illegible] ರಾತ್ರಿ [illegible] ಸತ್ತ [illegible] ಉತ್ತರಾಯಣ [illegible] ದಕ್ಷಿಣಾಯನ [illegible] ಅರ್ಥ [illegible] ಜ್ಞಾನದ [illegible] ಅಜ್ಞಾನದ [illegible] ಮನುಷ್ಯನು [illegible] ಅನಾಸಕ್ತನಾಗಿ [illegible] ಕರ್ಮಗಳಲ್ಲಿಯೇ [illegible] ಮನುಷ್ಯನು [illegible] ಯುಕ್ತ [illegible]

ಯರವಡಾ,
ಸೋಮವಾರ ಪ್ರಭಾತ,
ತಾ ೨೯-೧೨-೩೦

ನಾರಿನ ವೈರಿಯು.

ಎಂಥ ನಾರು ಇದ್ದರೂ ಒಲೆ ೨-೩ ತಾಸುಗಳಲ್ಲಿ ಇದರ ಉಪಯೋಗದಿಂದ [illegible] ಹೋ ಪುಸ್ತಿದೆ ಬೆಲೆ ೦—೧೨—೦ ಆಣೆ [illegible] ೨ ಬಾಟ್ಲಿ [illegible] ಪ್ರತ್ಯೇಕ

ಪಿ. ಜೇ ಕಾಟೋಳೆ, ಸೊಲ್ಲಾಪುರ

ಜಾಹೀರ ನೋಟೀಸು.

ಕಳೆದ [illegible] ವರ್ಷದ [illegible] ಈ ನೋಟೀಸಿನ ಮೂಲಕ ತಿಳಿಸುವದೇನಂದರೆ — ನನ್ನ ತಂದೆ ಕೈ॥ ರಾಮಕೃಷ್ಣ [illegible] ಸ್ಥಿರ ಆಸ್ತಿಗಳ [illegible] ತಾ. ೫—೧—೧೯೩೨ನೇ ಇಸ್ವಿ.

ಶ್ರೀಧರ ರಾಮಕೃಷ್ಣ ಕಾಮತ, ಶಿರಾಲಿ

The Bombay Provincial
Cooperative Insurance
Society Ltd

Bakehouse Lane, Fort. Bombay.

Chief Organisers for the Presidency.

JANI, KULKARNI & CO,

ಈ ಸೊಸೈಟಿಯನ್ನು ಮುಂಬಯಿ ಗವರ್ನಮೆಂಟು ಸ್ಥಾಪಿಸಿದ್ದಾರೆ ಸಹಕಾರಿ ಸಂಘಗಳ ರಜಿಸ್ಟ್ರಾರರು ಇದರ ಮೇಲ್ವಿಚಾರಣೆ ಮಾಡುತ್ತಾರೆ

ರೂ. ೧೦೦೦ದಿಂದ ರೂ ೫೦೦೦ದ ವರೆಗೆ ಡಾಕ್ಟರ ಪರೀಕ್ಷೆಯಿಲ್ಲದೆ ವಿಮೆ ಪತ್ರಗಳು ಕೊಡಲ್ಪಡುತ್ತವೆ.

ರೂ ೫೦೦೦ದಿಂದ ರೂ ೨೦೦೦೦ದ ವರೆಗೆ ವಿಮೆ ಪತ್ರಗಳನ್ನು ಪಡೆಯಬೇಕಾದರೆ, ಡಾಕ್ಟರರಿಂದ ಪರೀಕ್ಷೆಯಾಗಬೇಕು.

ಕೋಆಪರೇಟಿವ್ ಸೊಸೈಟಿಯ ಒಕ್ಕಟ್ಟಿನಂತೆ ಈ ಸೊಸೈಟಿಗೆ ಎಲ್ಲಾ ಹಕ್ಕುಗಳಿವೆ

ಏಜನ್ಸಿ ಅಪೇಕ್ಷಿಸುವವರು ನಿಯಮ ಮತ್ತು ಜಾಹೀರ ಪತ್ರಿಕೆಗಳಿಗಾಗಿ ಈ ಕೆಳಗಿನ ಪತ್ತೆಗೆ ಬರೆಯಬೇಕು.

ಏಜನ್ಸಿ ಕೊಡುವಾಗ ಸಹಕಾರಿ ಸಂಘಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿರುವದು

ಡಿ. ಎಸ್. ಕುಲಕರ್ಣಿ,
ಕಾರಭಾರಿ ಕಾರವಾರ

Siromani Udipi Narayanacharya,
CHAUKHAMBA BENARES CITY

ಮಾಹೇಶ್ವರ ದೇವಿ [illegible] ಶಾಸ್ತ್ರೀಯ ಪ್ರತಿಕೃತಿಯನ್ನು [illegible] ಹೊಂದಿರಿ [illegible] 108 [illegible] 1ಕ್ಕೆ 0 6–0 [illegible] 10–[illegible] [illegible] 32 [illegible] 1ಕ್ಕೆ ರೂ.0 8-0ಯಿಂದ ರೂ. 100, [illegible] 1ಕ್ಕೆ ರೂ 1 8-0 [illegible] ವರೆಗೆ ಮತ್ತು ಬೇರೆ [illegible] ಅಪೇಕ್ಷಿಸುವವರು 0-1-0ರ ಸ್ಟಾಂಪು [illegible] 1 [illegible] 1 [illegible] ನನ್ನ [illegible]

ಶಿರೋಮಣಿ ನಾರಾಯಣಾಚಾರ್ಯ,
ಚೌಕಾಂಬಾ, ಕಾಶೀಕ್ಷೇತ್ರ

ಚೀನ—ಜಪಾನ ಯುದ್ಧ.

ಯುದ್ಧವೆಂದು ಒಬ್ಬರೂ ಹೇಳಲಾಗದು. ಇನ್ನೂ ಶಾಸ್ತ್ರದಂತೆ ಯುದ್ಧದ ಜಾಹೀರನಾಮೆಯಾಗಲಿಲ್ಲ! ಕಾದಾಟವನ್ನಿರಿ, ಜಗಳಾಟವನ್ನಿರಿ, ಹೋರಾಟವೆನ್ನಿರಿ, ಬೇಕಾದ್ದನ್ನಿರಿ, ಯುದ್ಧವೆಂದು ಮಾತ್ರ ಅನ್ನಬೇಡಿ! ಓದುಗರು ಸರಿಪಡಿಸಿಕೊಂಡು ಗ್ರಹಿಕೆ ಇಡಬೇಕು. ಜಿನೇವಾದಲ್ಲಿ ರಾಷ್ಟ್ರಸಂಘದ ಪರಿಷತ್ತು ಸೇರಿದೆ. ಚೀನ-ಜಪಾನಗಳೊಳಗಿನ ವಿವಾದ ವಿಷಯವನ್ನು ತಿಳಕೊಂಡು ರಿಪೋರ್ಟು ಮಾಡುವದಕ್ಕಾಗಿ ಕಾರ್ಯದರ್ಶಿಗಳಿಗೆ ಅಧ್ಯಕ್ಷರು ಅಪ್ಪಣೆ ಮಾಡಿರುತ್ತಾರೆ. ಕಾರ್ಯದರ್ಶಿಗಳು ಚೀನ ದೇಶಕ್ಕೆ ವಿಚಾರಕ್ಕಾಗಿ ಒಂದು ನಿಷ್ಟಮಂಡಳವನ್ನು ಕಳುಹುವ ಆಲೋಚನೆಯಲ್ಲಿದ್ದಾರೆ, ಶಿಷ್ಟರು ನೇಮಿಸಲ್ಪಡುತ್ತಿದ್ದಾರೆ. [illegible], ಜಿನೇವಾದಲ್ಲಿ ಶಸ್ತ್ರಸನ್ಯಾಸ ಪರಿಷತ್ತು ಸೇರಿದೆ. ಮಂಗಳವಾರ ಸಂಜೆ ೪| ಘಂಟೆಗೆ ಶಸ್ತ್ರಸನ್ಯಾಸ ಪರಿಷತ್ತು ಸೇರಿತು. ಆ ಸಭೆಯ ಅಧ್ಯಕ್ಷರಾದ ಸರ್ ಆರ್ಥರ ಹೆಂಡರಸನ್‌ರವರು ಈ ಹಿಂದ ಮಾಡಿಕೊಂಡ ತಹನಾಮೆಗಳಂತೆ ನಡಕೊಳ್ಳಲು ತಹನಾಮೆಗಳಿಗೆ ಸಹಿ ಮಾಡಿದ ರಾಷ್ಟ್ರಗಳಿಗೆ ಹೃತ್ಪೂರ್ವಕವಾಗಿ ಬೋಧಿಸಿದರು. ಪರಿಷತ್ತಿಗೆ ೨೦೦೦ ಪ್ರತಿನಿಧಿಗಳು ಹೋಗಿದ್ದಾರೆ. ೬೪ ರಾಷ್ಟ್ರಗಳ ಪ್ರತಿನಿಧಿಗಳವರು. ಜಪಾನ ದೇಶದ ಪ್ರತಿನಿಧಿಗಳ ಸಂಖ್ಯೆ ಎಲ್ಲರಿಗಿಂತಲೂ ಹೆಚ್ಚು; ೯೦ ಪ್ರತಿನಿಧಿಗಳನ್ನು ಜಪಾನ ದೇಶವು ಕಳಿಸಿದೆ. ಈ ಸರಕಾರಗಳಿಗೆ ಯುದ್ಧ ಬೇಡ, ಸೈನ್ಯ ಖರ್ಚ ತೆತ್ತು ತೆತ್ತು ಇವು ಸೋತುಹೋಗಿವೆ, ದೇಶತುಂಬ ಬಡತನ ಹಬ್ಬಿದೆ, ಆದರಿಂದ ಸೈನ್ಯಬಲವನ್ನು ಕುಗ್ಗಿಸುವದಕ್ಕಾಗಿ ಗಾಂಭೀರ್ಯದಿಂದ ವಿಚಾರ ಮಾಡಬೇಕು, ಈ ಪರಿಷತ್ತಿನ ಕಾರ್ಯದಲ್ಲಿ ನಮಗೇನೂ ಅಪಯಶಸ್ಸು ಒದಗಲಿಕ್ಕಿಲ್ಲ, ಇದರಿಂದ ಲೋಕಕಲ್ಯಾಣವಾಗಲೇಬೇಕು, ಆಮಗೇನೂ ಸಂದೇಹವಿಲ್ಲ, ಹೀಗೆ ಮಿ| ಆರ್ಥರ ಹೆಂಡರಸನ್‌ರವರು ಶಸ್ತ್ರಸನ್ಯಾಸ ಪರಿಷತ್ತಿನ ಅಧ್ಯಕ್ಷರಾಗಿ ಒಳ್ಳೇ ಸ್ಫೂರ್ತಿದಾಯಕ ಭಾಷಣ ಮಾಡಿದರೆಂದು ಪ್ರಕಟವಾಗಿದೆ. ವಿಚಾರ ಮಾಡುವದಕ್ಕಾಗಿ ೩ ಕಮಿಟಿಗಳು ನೇಮಿಸಲ್ಪಟ್ಟವು. ಆ ಕಮಿಟಿಯಲ್ಲಿ ಜಪಾನಿಗಳಿದ್ದಾರೆ, ರಶ್ಯರಿದ್ದಾರೆ, ಅಮೇರಿಕೆಯವರಿದ್ದಾರೆ, ಬ್ರಿಟಿಶರಿದ್ದಾರೆ, ಫ್ರೆಂಚರಿದ್ದಾರೆ. ಸೈನ್ಯಕ್ಕಾಗಿ ಖರ್ಚು ಮಾಡುವ ರಕಮಿನ ಮಿತಿ ತಿಳಕೊಳ್ಳುವದುಚಿತ. ವರ್ಷಾವಸಾನ ೧ ಖರ್ವ, ೬ ಅಬ್ಜ ಹಣಗಳು ಸೈನ್ಯಕ್ಕಾಗಿ ಖರ್ಚಾಗುತ್ತಿವೆ. ಇನ್ನೂ ಖರ್ಚು ಬೆಳೆಯುತ್ತಿದೆ, ಹೊರತು ಕುಗ್ಗುವದಿಲ್ಲ. ಹಡಗುಪಡೆಗಳನ್ನು ಕಟ್ಟುತ್ತಿದ್ದಾರೆ, ವಿಮಾನಗಳನ್ನು ತಯಾರಿಸುತ್ತಿದ್ದಾರೆ, ಸೈನ್ಯದಳಗಳ ಸೇರ್ಪಡಿಸುತ್ತಿದ್ದಾರೆ, ಕಂಕುಳಲ್ಲಿ ದೊಣ್ಣೆ, ಕೈಯಲ್ಲಿ ಸಲಾಮು! ಎಂದಂತೆ, ಶಸ್ತ್ರಸನ್ಯಾಸ ರಾಷ್ಟ್ರಗಳು ಶಾಂತಿಸಾರ ಹೇಳುತ್ತ, ರಣದೇವಿಯ ಆರಾಧನೆಯನ್ನು ಎಡೆಬಿಡದೆ ನಡಿಸಿರುತ್ತವಾಗಿ ಇಟಾಲಿಯ ಸರ್ವಾಧಿಕಾರಿಗಳಾದ ಸ್ಯಾನೋರ ಮುಸೋಲಿನಿಯವರೇ ಬರೆಯುತ್ತಾರೆ. ಕಳೆದ ಮಹಾಯುದ್ಧದಲ್ಲಿ ೧ ಕೋಟಿ ಜನರ ಕೊಲೆಯಾಯಿತು, ೩ ಕೋಟಿ ಜನರು ಗಾಯಪಟ್ಟರು, ಊನರಾದರು, ಅರ್ಧಕೋಟಿ ಜನರು ವಿಧವೆಯಾದರು, ಅರ್ಧಕೋಟಿ ಮಕ್ಕಳು ಅನಾಥರಾದರು, ೧ ಕೋಟಿ ಜನರು ನಿರಾಶ್ರಿತರಾದರು! ಈ ಪ್ರಕಾರ ಲೋಕಕ್ಕೆ ಹಾನಿಯಾಗುತ್ತಿದ್ದಾಗ್ಯೂ, ರಾಷ್ಟ್ರಗಳು ಕೇವಲ ಸ್ವಾರ್ಥಪರಾಯಣರಾಗಿ ಕೋಟ್ಯಾವಧಿ ರಕಮು ಖರ್ಚ ಮಾಡಿ ಯುದ್ಧ ತಯಾರಿಯನ್ನೇ ನಡಿಸುತ್ತಿವೆ. ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಇದರಿಂದ ಲೋಕಕ್ಕೆ ಕ್ಷೇಮವಿಲ್ಲವಾಗಿ ತಿಳಿಸಲ್ಪಟ್ಟಿತು. ಶಸ್ತ್ರಸನ್ಯಾಸ ಪರಿಷತ್ತನ್ನು ಸಾರ್ಥಕಗೊಳಿಸಿ ಲೋಕಕ್ಷೇಮ ವಿಚಾರ ಮಾಡಬೇಕಾಗಿ ಮಿ. ಹೆಂಡರಸನ್‌ರವರು ಬೋಧಿಸಿದರು. ಪರಿಷತ್ತಿನ ಯಶಸ್ಸೂ, ಅಪಯಶಸ್ಸೂ, ಸಾರ್ಥಕತೆಯೂ, ನಿರರ್ಥಕತೆಯೂ ಸಂಪೂರ್ಣವಾಗಿ ಚೀನ-ಜಪಾನ ಪರಿಸ್ಥಿತಿಯ ಮೇಲೆ ಅವಲಂಬಿಸಿರುತ್ತವೆ. ಹೋರಾಟ ನಡೆಯುತ್ತಿರುವಾಗ ಪರಿಷತ್ತಿನ ಅಧಿವೇಶನ ನಡೆದದೆ. ರಾಷ್ಟ್ರಸಂಘದಲ್ಲಿ ತಹನಾಮೆಯಂತೆ ತನ್ನ ವಿಚಾರ ನಡಿಸಿ ಚೀನದ ರಾಯಬಾರಿಗಳಾದ ಡಾ. ಯೇನರವರು ನ್ಯಾಯಾಪ್ರಿಯ ಜಾದ ಸತ್ವರ ರಾಷ್ಟ್ರಸಂಘದ ಘಟನೆಯ ೧೦-೧೧-೧೫ ನೇ ಕಲಮುಗಳಂತೆ ನಡಕೊಳ್ಳಲು ಮಿ| ಯೇನರವರು ಸಂಘಕ್ಕೆ ವಿಜ್ಞಾಪಿಸಿಕೊಳ್ಳುತ್ತಿದ್ದಾರೆ. ಒಂದು ರಾಷ್ಟ್ರದ ಮೇಲೆ ಇನ್ನೊಂದು ರಾಷ್ಟ್ರ ದಾಳಿ ಮಾಡದಂತೆ ರಕ್ಷಿಸಲು ರಾಷ್ಟ್ರಸಂಘವು ೧೦ನೇ ಕಲಮಿನಂತೆ ಬದ್ಧವಿದೆ. ದಾಳಿಯಾದಾಗ ತಕ್ಕ ಉಪಾಯ ಸೂಚಿಸಲಿಕ್ಕೂ ಬದ್ಧವಿದೆ. ವಿವಾದ ವಿಷಯವನ್ನು ಸಂಘಕ್ಕೆ ಸಾದರಪಡಿಸಲು ಸಂಘದ ಸಭಾಸದರು ೧೫ನೇ ಕಲಮಿನಂತೆ ಒಪ್ಪಿದ್ದಾರೆ. ಸಂಘವು ವಿಚಾರ ಮಾಡಿ ಒಂದು ನಿರ್ಣಯಿಸಬೇಕು. ಮತ್ತು ಆ ಕುರಿತು ರಿಪೋರ್ಟು ನಿರ್ಣಯವನ್ನು ಪ್ರಕಟಿಸಬೇಕು. ನಿರ್ಣಯಕ್ಕೆ ವಿವಾದದ ರಾಷ್ಟ್ರಗಳ ಹೊರತಾಗಿ ಉಳಿದ ಎಲ್ಲ ರಾಷ್ಟ್ರಗಳ ಅನುಮತಿಯಿದ್ದರೆ, ಆ ನಿರ್ಣಯಕ್ಕನುಸರಿಸಿ ವಿವಾದದ ರಾಷ್ಟ್ರಗಳು ಉಲ್ಲಂಘಿಸಿ ನಡೆಯದಂತೆ ಜಾಗರೂಕರಾಗಿರಬೇಕು. ಮತ್ತು ನಿರ್ಣಯ ಪಾಲಿಸುವ ರಾಷ್ಟ್ರದ ವಿರುದ್ಧವಾಗಿ ಯುದ್ಧದಲ್ಲಿ ಸೇರಬಾರದು. ಬಹುಮತವಾದರೆ ನ್ಯಾಯನೀತಿಯ ವಿಚಾರದಿಂದ ಎಲ್ಲ ರಾಷ್ಟ್ರಗಳು ನಡೆಯತಕ್ಕದ್ದು. ರಾಷ್ಟ್ರಸಂಘದ ನಿಯಮ ಕೇಳದ ಯಾವದೊಂದು ರಾಷ್ಟ್ರವು ಯುದ್ಧ ಮಾಡಿದ್ದಲ್ಲಿ ಸಂಘಕ್ಕೊಳಪಟ್ಟಿದ ರಾಷ್ಟ್ರಗಳೆಲ್ಲವೂ ಆ ರಾಷ್ಟ್ರಕ್ಕೆ ಬಹಿಷ್ಕಾರ ಹಾಕಬೇಕು, ಅಂದರೆ, ಆ ದೇಶದೊಡನಿರುವ ಯಾವತ್ತೂ ವ್ಯವಹಾರ ಸಂಬಂಧಗಳನ್ನು ತುಂಡರಿಸಬೇಕು. ಹೀಗೆ ನಿಯಮಗಳಿವೆ. ಆದರೆ, ಮಂಚೂರಿಯಾ ವಿಷಯದ ಮೇಲೆ ಜಪಾನ ರಾಷ್ಟ್ರವು ತನ್ನ ಹಕ್ಕು ಎಷ್ಟಕ್ಕೂ ಬಿಟ್ಟುಕೊಡಬರುವದಿಲ್ಲವಾಗಿ ಜಪಾನ ರಾಯಭಾರಿಗಳಾದ ಮಿ| ಸತೋರವರು ಸಂಘಕ್ಕೆ ಹೇಳಿಬಿಟ್ಟರು. ಇದರಿಂದ ಸಂಘದ ಸಭೆಯಲ್ಲಿ ಗಡಿಬಿಡಿಯಾಯಿತಂತೆ!

ಈ ಪ್ರಕಾರ -ಆಲೋಚನ-ಪರಿಷತ್ತು ನಡೆಯುತ್ತಿರುವಾಗಲೇ ಜಪಾನ ಸೈನ್ಯವು ಮುಂದರಿಯಿತು, ಹರಬೀನ ಪಟ್ಟಣವನ್ನು ಆಕ್ರಮಿಸಿತು. ಹರಬೀನ ಪಟ್ಟಣದೊಳಗಿನ ಜಪಾನಿಯರಿಗೆ ಚೀನಿಯರು ಸುಲಿಯುತ್ತಾರೆ, ಅವರಿಗೆ ಸಂರಕ್ಷಿಸುವದು ಜಪಾನಿಯರ ಕರ್ತವ್ಯ, ಹೀಗೆ ಹೇಳಿ ಜಪಾನಿಯರು ಮುಂದಾದರು. ಈ ಪಟ್ಟಣಕ್ಕೆ ತಮ್ಮ ಸೈನ್ಯದಳವನ್ನು ಒಯ್ಯಗೊಡಬೇಕಾಗಿ ರಶ್ಯ ಸರಕಾರದ ಅಪ್ಪಣೆಯನ್ನು ಜಪಾನಿಗಳು ಬೇಡಿದರು. ಹರಬೀನ ಪಟ್ಟಣಕ್ಕೆ ಹೋಗತಕ್ಕ ಉಗಿಬಂಡಿಯು ರಶ್ಯ ಸರಕಾರದ್ದು. ರಶ್ಯರು ಒಪ್ಪಲಿಲ್ಲ. ತಾವು ಈ ಪ್ರಕರಣದಲ್ಲಿ ಸಂಪೂರ್ಣ ತಟಸ್ಥರಿರುವೆವಾಗಿ ರಶ್ಯ ಸರಕಾರದಿಂದ ಉತ್ತರ ಬಂತು. ಚೀನ ಸೈನ್ಯವನ್ನೂ ಒಯ್ಯಲು ಒಪ್ಪಲಿಲ್ಲ. ಬೇರೆ ಉಪಾಯದಿಂದ ಚೀನ-ಜಪಾನಿಯರು ಹರಬೀನ ಪಟ್ಟಣಕ್ಕೆ ಹೋಗಿ ಅಲ್ಲಿ ಘೋರ ಸಂಗ್ರಾಮ ಹೂಡಿದರು. ಈಗ ಆ ಪಟ್ಟಣವು ಜಪಾನರ ಕೈವಶವಾದಂತೆಯೇ! ಜಪಾನರು ಮತ್ತೂ ಮುಂದರಿದರು! ಚಾಪೇ ಪ್ರದೇಶದಲ್ಲಿ ಈಗ ಘೋರ ಸಂಗ್ರಾಮ ನಡೆದದೆ. ಚಾಪೇ ಪಟ್ಟಣದ ಮೇಲೆ ಜಪಾನಿಗಳು ಬಾಂಬು ಹಾರಿಸುತ್ತಿದ್ದಾರೆ. ಚೀನರು ಜಪಾನಿಗಳಿಗೆ ಮುಂದರಿಯಗೊಡುವದಿಲ್ಲ, ಅಲ್ಲಿಯೇ ಹಿಡಕೊಂಡು ನಿಂತಿದ್ದಾರೆ. ಇತ್ತ ಕಡೆ ಜಪಾನಿಯರು ಶಾಂಘಾಯ ಪಟ್ಟಣದ ಮೇಲೂ ನುಗ್ಗಿಬಂದರು. ಶಾಂಘಾಯ ಪಟ್ಟಣದ ಕೆಲ ಭಾಗವು ಅಮೇರಿಕಾ, ಬ್ರಿಟಿಶ, ಫ್ರೆಂಚ ಮೊದಲಾದ ಬೇರೆ ಬೇರೆ ರಾಷ್ಟ್ರಗಳ ಸ್ವಾಧೀನವಿದೆ. ಈ ರಾಷ್ಟ್ರಗಳೆಲ್ಲ ಕೂಡಿ ಒಂದು ಮ್ಯುನಿಸಿಪಾಲಿಟಿಯನ್ನೇರ್ಪಡಿಸಿದ್ದಾರೆ. ಒಂದರಷ್ಟು ದೊಡ್ಡ ವ್ಯಾಪಾರಸ್ಥಳ ಚೀನದೇಶದವರೊಡನೆ ಈ ಪಟ್ಟಣದ ೩೦ ಚದರ ಮೈಲು ಪ್ರದೇಶವಿದೆ. ಉಳಿದ ಪ್ರದೇಶವೆಲ್ಲ ಬೇರೆ ರಾಷ್ಟ್ರಗಳಿಗೆ ಕೊಡಲ್ಪಟ್ಟಿದೆ. ಈ ರಾಷ್ಟ್ರದವರು ಇಂಟರ ನಶನಲ್ ಸೆಟಲ್‌ಮೆಂಟ ಯಾನೆ ಅಂತರ್ರಾಷ್ಟ್ರೀಯ ವಸಾಹತನ್ನು ನಿರ್ಮಿಸಿದ್ದಾರೆ. ಅಂತರ್ರಾಷ್ಟ್ರೀಯ ವಸಾಹತು ಚಾಪೇ ಹಾಗು ಚೀನ-ಶಾಂಘಾಯ ಪಟ್ಟಣದ ನಡುವ ಇರುತ್ತದೆ. ಬ್ರಿಟಿಶ, ಫ್ರೆಂಚ, ಜಪಾನ, ಜರ್ಮನ್, ಅಮೇರಿಕಾ ಹೀಗೆ ೫ ರಾಷ್ಟ್ರಗಳ ವಸಾಹತಿಗೆ ಅಂತರ್ರಾಷ್ಟ್ರೀಯ ವಸಾಹತೆನ್ನುತ್ತಾರೆ. ವಸಾಹತುಗಳ ಕ್ಷೇತ್ರವು ನಿಶ್ಚಿತವಿದ್ದಾಗ್ಯೂ, ಇವೆಲ್ಲ ಒಂದೇ ಮ್ಯುನಿಸಿಪಾಲಿಟಿಯ ಕೈಯಲ್ಲಿವೆ. ಪ್ರತ್ಯೇಕವಾಗಿ ಅವುಗಳ ವ್ಯವಹಾರವಿಲ್ಲ, ಪ್ರತ್ಯೇಕವಾಗಿ ವ್ಯವಹಾರ ನಡಿಸುವದು ಸಾಧ್ಯವಿಲ್ಲ. ಹೀಗೆ ಒಂದು ದರ್ಜೆ ಮತ್ತೊಂದು ಬೆರೆತುಕೊಂಡಿದೆ. ಈ ವಸಾಹತಿನಲ್ಲಿ ೧೯ ದೇಶಗಳ ಜನರು ಉಳಕೊಳ್ಳುತ್ತಾರೆ. ಸುಮಾರು ೭೦೦ ವಿದೇಶಿ ವರ್ತಕರ ಕಂಪನಿಗಳಿವೆ, ೩೦೦ ಕಂಪನಿಗಳಿವೆ, ೩೦ ವಿದೇಶಿ ಬೇಂಕುಗಳು, ೪೦ ಚೀನಿ ಬೇಂಕುಗಳೂ ಇವೆ. ಚೀನಿ ಬೇಂಕುಗಳ ತ್ರಿಜೂರಿಯಲ್ಲಿ ತುಂಬ ದ್ರವ್ಯವಿದೆ. ವಸಾಹತಿನ ಭಾಗವೂ, ಚೀನಿಯರ ಶಾಂಘಾಯ ಪಟ್ಟಣವೂ ಬಲು ದೊಡ್ಡ ವ್ಯಾಪಾರದ ಪ್ರದೇಶ. ಚೀನ ಸರಕಾರದ ತ್ರಿಜೂರಿಗೆ ಈ ಬಂದರದಿಂದ ಸಿಗುವ ಜಕಾತಿ ತೆರಿಗೆಯಿಂದ ಚೀನಸರಕಾರದ ಆಡಳಿತ ನಡೆಯಬೇಕು. ಚೀನ ದೇಶದಲ್ಲಿ ಇಷ್ಟು ದೊಡ್ಡ ಬಂದರವು ಎಲ್ಲಿಯೂ ಇಲ್ಲ. ಯಾಂಗ್ಟ್ಸೀ ನದಿಯಗುಂಟ ನಡೆಯುವ ವ್ಯಾಪಾರವೆಲ್ಲ ಈ ಬಂದರದಿಂದಲೇ ಸಾಗಬೇಕು. ಇನ್ನೂ ಈ ಬಂದರವು ಬೆಳೆಯುತ್ತಿದೆ, ಹೊರತು ಕುಗ್ಗುವದಿಲ್ಲ. ಶಾಂಘಾಯದಲ್ಲಿ ಜಪಾನಿಗಳ ೩೧ ಗಿರಣಿಗಳಿವೆ, ಅವುಗಳೊಳಗಿನ ಕೂಲಿಕಾರರು ಮುಖ್ಯವಾಗಿ ಚೀನಿಯರೇ. ೧| ಲಕ್ಷ ಕೂಲಿಕಾರರು ಈ ಗಿರಣಿಗಳಲ್ಲಿ ಕೆಲಸ ಮಾಡುತ್ತಾರೆ. ' ಜಪಾನ ಸಾಧುಗಳನ್ನ ಕೊಂದರು, ಜಪಾನಿಗಳಿಗೆ ಕೊಂದರು, ಜಪಾನಿ ಸರಕುಗಳ ವ್ಯಾಪಾರ ಮಾಡುವವ

ರಿ ಒಳಗಿನಿಟ್ಟರು," ಹೀಗೊಂದು ನವ ಸಾಡಿ ಜಪಾನಿಯರು ಶಾಂಘಾಯ ಬಂದರದ ಮೇಲೆ ಸಾಗಿ ಹೋಗಿದ್ದಾರೆ. ಅಲ್ಲಿ ಘೋರ ಕದನವಾಗುತ್ತಿದೆ. ಈ ಪ್ರಕಾರ ಕದನವಾಗಿ ಸಾವಿರಾರು ಮಂದಿಗಳ ಕೊಲೆಯಾಗುತ್ತಿದೆ. ಚೀನ ಸರಕಾರದ ರಾಜಧಾನಿಯಾದ ನಾನಕಿಂಗ ಪಟ್ಟಣದ ಮೇಲೆ ಜಪಾನಿ ಹಡಗುಪಡೆಗಳು ತೋಪಿನ ಗುಂಡು ಹಾರಿಸಲಾರಂಭಿಸಿದ್ದರಿಂದ ಅಲ್ಲಿಂದ ರಾಜಧಾನಿಯನ್ನು ತೆಗೆದು ಲೋಯಾಂಗ ಪಟ್ಟಣಕ್ಕೊಯ್ದಿದ್ದಾರೆ. ಈ ಪ್ರಕಾರ ಜಪಾನ ದೇಶದ ದಾಳಿಯಿಂದ ಅಂತರರಾಷ್ಟ್ರೀಯ ವಸಾಹತಿಗೆ ಅಪಾಯ ಸಂಭವಿಸುವ ಪ್ರಸಂಗ ಒದಗಿದೆ. ಬ್ರಿಟಿಶರು ಹಡಗುಪಡೆಗಳನ್ನು ರವಾನಿಸಿದರು, ಅಮೇರಿಕೆಯವರು ಹಡಗುಪಡೆಗಳನ್ನು ರವಾನಿಸಿದರು, ಫ್ರೆಂಚರು ಹಡಗುಪಡೆಯನ್ನೂ, ಕಾಲಾಳುಗಳನ್ನೂ ರವಾನಿಸಿದರು, ಇಟಾಲಿಯವರು ೨ ಹಡಗ ತುಂಬಿ ಸೈನ್ಯ ಕಳುಹಿದ್ದಾರೆ. ಜಪಾನ ದೇಶದಿಂದ ಸೈನ್ಯವು ಹಡಗ ತುಂಬಿ ತುಂಬಿ ಬರುತ್ತಿದ್ದಾರೆ. ಜಪಾನ ವಸತಿ ಬಿಟ್ಟು ಜಪಾನಿಯರನೇಕರು ಬ್ರಿಟಿಶ-ಫ್ರೆಂಚ-ವಸಾಹತುಗಳಲ್ಲಿ ಹಿಂವದಾರರಾಗಿ ಓಡಿಹೋಗುತ್ತಿದ್ದಾರೆ. ಚೀನಿಯರು ಇದಿರಾಗುತ್ತಿದ್ದಾರೆ. ವಸಾಹತು ರಕ್ಷಣೆಗಾಗಿ ಬ್ರಿಟಿಶ ಸೇನಾಪತಿಗಳಾದ ಜ| ಬ್ರುನಿಂಗರವರು ಸೈನ್ಯಸಂಗ್ರಹ ಮಾಡಿ ವಸಾಹತಿನ ರಕ್ಷಣ ಮಾಡಿಕೊಳ್ಳುತ್ತಿದ್ದಾರೆ. ಚೀನಿಯರಿಗೆ ಬಹಳ ಉತ್ಸಾಹ ಹೆಚ್ಚಿದೆ. ಅವರು ಹುರಿಯಾಳಾಗಿದ್ದಾರೆ. ಸೈನ್ಯ ಶಿಕ್ಷಣವನ್ನು ಜಪಾನದಲ್ಲೇ ಪಡೆದ. ಪ್ರಸಿದ್ಧ ಸೇನಾಪತಿಗಳಾದ, ಸೆ ತ್ಸಬ್ಬಿ ಲಾವ, ಚೀನ ದೇಶವನ್ನು ಕಠಿಣ ಪ್ರಸಂಗದಲ್ಲಿ ಸಂರಕ್ಷಿಸಿಕೊಂಡವರೇ ಇವರು, ಜ್ಞಾನವೃದ್ಧ ಚೆಂಗ-ಕಿಶೇಕರವರು ತಮ್ಮ ಕಪ್ಪಲಿಗರ ದಳವನ್ನು ಶಾಂಘಾಯ ಪಟ್ಟಣಕ್ಕೆ ರವಾನಿಸಿ ಸ್ವತಃ ತಾವೇ ಸೇನಾಪತಿಗಳಾಗಲು ಮುಂದಾಗಿದ್ದಾರೆ. ಚೀನಿಯರು ಜಪಾನರನ್ನು ಎದುರಿಸುವದರಲ್ಲಿ ಆದಾಗ್ಯೂ ಚೆಂಗ-ಕಿಶೇಕರವರ ನೇತೃತ್ವದಲ್ಲಿ ತಾವು ವಿಜಯಶಾಲಿಗಳಾಗಿ ಜಪಾನಿಯರಿಗೆ ಸೋಲಿಸುವೆವಾಗಿ ಧೈರ್ಯಗೊಂಡಿದ್ದಾರೆ. ಶಾಂಘಾಯ ಪಟ್ಟಣದಲ್ಲಿಯೂ ಚಾಪೀ ಪ್ರದೇಶದಲ್ಲಿಯೂ ಘೋರ ಸಂಗ್ರಾಮ ನಡೆದಿದೆ. ಸುಮಾರು ೩೦೦೦ ಚೀನಿಯರು ರಣಕ್ಷೇತ್ರದಲ್ಲಿ ಪ್ರಾಣಾರ್ಪಣ ಮಾಡಿದರು. ಜಪಾನಿ ಅಧಿಕಾರಿಗಳೂ, ನಾವಿಕರು ಕಾಲಾಳುಗಳೂ ಹಿಂಡಿಕೊಂಡರು. ನಾನಕಿಂಗ ಪಟ್ಟಣದಲ್ಲಿ ಲಷ್ಕರಿ ಕಾಯಿದೆ ಜಾಹೀರ ಮಾಡಲ್ಪಟ್ಟಿದೆ. ಶಾಂಘಾಯ ಪಟ್ಟಣದಲ್ಲಿ ಯಾರೂ ರಾತ್ರಿ ಓಡಾಡಬಾರದಾಗಿ ಜಾಹೀರನಾಮೆ ಹೊರಟಿದೆ. ಈ ಪ್ರಕಾರ ಚೀನ ದೇಶದೊಳಗೆ ರಣದೇವಿಯ ಆವಾಹನೆಯಾಗಿದೆ. ಬ್ರಿಟಿಶರೂ, ಅಮೇರಿಕೆಯವರೂ, ನಿಷೇಧ ಪ್ರದರ್ಶನ ಮಾಡುತ್ತಿದ್ದಾರೆ. ಈಗ ವೂಸಂಗ ಕೋಟೆಯ ಮೇಲೆ ದಾಳಿ ನಡೆದಿದೆ. ಜಪಾನಿಗಳು ಈಗ ಯಾಂಗತ್ಸೀ ನದಿಯಲ್ಲಿ ನಿಂತು ಹಡಗಗಳ ಮೇಲಿಂದ ಗುಂಡು ಹಾರಿಸುತ್ತಿದ್ದಾರೆ. ಬುಧವಾರ ೧೧|| ಘಂಟೆಯಿಂದ ೬ ಹಡಗುಪಡೆಗಳು ಗುಂಡು ಹಾರಿಸಹತ್ತಿವೆ. ಚೀನಿಯರು ರಣಧೀರರಾಗಿ ಇದಿರಾಗುತ್ತಿದ್ದಾರೆ. ಒಂದು ಹಡಗುಪಡೆ ಯಾಂಗತ್ಸೀ ನದಿಯಲ್ಲಿ ಜಲಸಮಾಧಿ ಹೊಂದಿತು. ನೆರೆಯ ವೂಸನ್ ಕೋಟೆಯ ಮೇಲೂ ಜಪಾನಿಗಳ ಕಟಾಕ್ಷ. ಅಲ್ಲೂ ವಿಮಾನಗಳ ಮೇಲಿಂದ ಗುಂಡು ಹಾರಹತ್ತಿವೆ. ವಸಾಹತು ಸ್ವಯಂಸೇವಕ ದಳವು ಜಪಾನಿಗಳ ಬಲಾತ್ಕಾರದಿಂದ ವಸಾಹತಿಗೆ ಬಾಧ ತಪ್ಪದಂತೆ ಇದಿರಾಗುತ್ತಿದೆ. ನಿರಾಶ್ರಿತರಾಗಿ ಬಂದ ಚೀನಿಯರಿಗೆ ನೆರವಾಗುತ್ತಿದೆ. ಜಪಾನ ಸರಕಾರವು ವೂಸಂಗ ಪ್ರೂಪನ್ ಕೋಟೆಗಳನ್ನು ಗೆದ್ದುಕೊಂಡು ನಾನಕಿಂಗ ಪಟ್ಟಣವನ್ನು, ಶಾಂಘಾಯ ಪಟ್ಟಣವನ್ನೂ ಚೀನಿಯರಿಂದ ಕೈವಶ ಮಾಡಿಕೊಳ್ಳಲು ಹೊಂಚುಹಾಕಿದೆ. ಇದಕ್ಕೆ ಬೇರೆ ರಾಷ್ಟ್ರಗಳ ಒಪ್ಪಿಗೆಯಿಲ್ಲ. ಇದು ಶುದ್ಧ ಬಲಾತ್ಕಾರವೆಂದೂ, ಇದರಿಂದ ಜಪಾನ ರಾಷ್ಟ್ರವು ಭೂಮಂಡಲದಲ್ಲಿ ಬಲಾಢ್ಯ ದೇಶವಾಗಿ ಎಲ್ಲರಿಗೂ ತೊಂದರೆ ಕೊಡುವದೆಂದೂ, ರಾಷ್ಟ್ರಸಂಘದ ಮೂಲ ಉದ್ದೇಶವೇ ಭಂಗ ಹೊಂದಿ ಪುನಃ ಲೋಕದಲ್ಲಿ ಅನರ್ಥವಾಗುವದೆಂದೂ ಭೀತಿಯುಂಟಾಗಿದೆ. ಎಲ್ಲರೂ ಆ ಕಡೆ ಸೈನ್ಯ ಕಳಿಸುತ್ತಿದ್ದಾರೆ. ಮುಂಬಯಿಯಿಂದ ಸೈನ್ಯ ಒಯ್ಯುವದಕ್ಕಾಗಿ ಪಿ ಎಂಡ್ ಓ ಕಂಪನಿಗೆ ಬ್ರಿಟಿಶ ಸರಕಾರದ ಆಜ್ಞೆಯಾಗಿರುವದಂತೆ. ಬ್ರಿಟಿಶಾದಿ ರಾಷ್ಟ್ರಗಳು ಶಾಂಘಾಯದಲ್ಲಿ ಸೈನ್ಯ ಸಂಗ್ರಹ ಮಾಡುವದು ಬ್ರಿಟಿಶಾದಿಗಳ ಸಂರಕ್ಷಣೆಕ್ಕಾಗಿ ಎಂದು ಹೇಳಲ್ಪಡುತ್ತದೆ. ಜಪಾನ ರಾಜಧಾನಿಯಾದ ಟೋಕಿಯೋ ಪಟ್ಟಣದಲ್ಲಿ ಅಮೇರಿಕಾದಿ ರಾಷ್ಟ್ರಗಳು ತಮ್ಮ ತಮ್ಮ ರಾಯಭಾರಿಗಳ ವಿಜ್ಞಾಪನ (೧) ಜಪಾನ ಸರಕಾರಕ್ಕೆ ಕೈತಡೆಯಬೇಕು, (೨) ಇನ್ನು ಮುಂದ ಕೈ ಎತ್ತಬಾರದು, (೩) ಶಾಂಘಾಯ ಪ್ರದೇಶದಲ್ಲಿ ಚೀನ-ಜಪಾನ ದಳಗಳು ಹಿಂಜರಿಯಬೇಕು, (೪) ಅಂತರರಾಷ್ಟ್ರೀಯ ವಸಾಹತಿಗೆ ಬಾಧೆ ತಪ್ಪದಂತೆ ಸುತ್ತುಮುತ್ತು ಒಂದು ಪ್ರದೇಶವನ್ನು ನಿರ್ಮಿಸಿ ಅಲ್ಲಿ ಇಬ್ಬಟ್ಟಿನವರೂ ಪ್ರವೇಶಿಸಬಾರದು (೫) ಕೆಲಾಗ ಕರಾರನಾಮೆಯಂತೆ ಇದ್ದಂಥ ವಿವಾದ ವಿಷಯಗಳನ್ನು ರಾಷ್ಟ್ರಸಂಘದ ಮಧ್ಯಸ್ಥಾನ ನಿರ್ಣಯಿಸಿಕೊಳ್ಳಬೇಕು. ಈಗ ಜಪಾನ ಸರಕಾರಕ್ಕೆ ತಿಳಿಸಿದೆ. ಇದರಂತೆಯೇ ಚೀನ ಸರಕಾರಕ್ಕೂ ತಿಳಿಸಿದೆ. ಚೀನ ಸರಕಾರವು ಒಪ್ಪಿಕೊಂಡಿದೆ, ಜಪಾನ ಸರಕಾರವು ಒಪ್ಪಲಿಲ್ಲ. ಚೀನ ಪ್ರಶ್ನೆಯು ರಾಷ್ಟ್ರಸಂಘದ ವಿಚಾರ ಕಕ್ಷೆಯೊಳಗಿನದಲ್ಲವಾಗಿ ಜಪಾನಿಯರ ಸಾಧನೆ. ರಾಷ್ಟ್ರಸಂಘವು ಈಗೇನು ಮಾಡತಕ್ಕದ್ದೆಂದು ಎಲ್ಲರೂ ಕೇಳುತ್ತಿದ್ದಾರೆ.

ರಾಷ್ಟ್ರಸಂಘದಲ್ಲಿ ಬ್ರಿಟಿಶ ಫ್ರೆಂಚ-ಇಟಾಲಿ ಮುಂತಾದ ದೊಡ್ಡ ದೊಡ್ಡ ರಾಷ್ಟ್ರಗಳೂ, ಚಿಕ್ಕ ಪುಟ್ಟ ರಾಷ್ಟ್ರಗಳೂ ಇವೆ. ಹೀಗ ೫೦ ರಾಷ್ಟ್ರಗಳಿದ್ದಾಗ್ಯೂ ಜಪಾನ ದೇಶದ ಕದನಬಂದ ತಹನಾಮೆಗಳನ್ನು ರಾಷ್ಟ್ರಸಂಘವು ಕಾಲಿಕೊಳ್ಳಲಾರದಾಗಿದೆ. ಇದರ ಗುಟ್ಟೇನೆಂದು ಎಲ್ಲರೂ ಕೇಳುತ್ತಿದ್ದಾರೆ. ಲಂಡನ ನಗರದ 'ಸ್ಪೆಕ್ಟೇಟರ' ಪತ್ರಿಕೆಯಲ್ಲಿ "ಜರ್ನಲ ಡಿ ಜಿನೇವಾ" ಎಂಬ ಜಿನೇವಾ ಪತ್ರಿಕೆಯಲ್ಲಿ ವಿದೇಶ ರಾಜಕಾರಣ ಸಂಪಾದಕರಾದ ಮಿ| ವಿಲಿಯಮ್ ಮಾರ್ಟಿನ್‌ರವರು ಒಂದು ಲೇಖ ಬರೆದಿದ್ದಾರೆ. ಅದರೊಳಗೆ ಬ್ರಿಟಿಶ ಫ್ರೆಂಚ ಮೊದಲಾದ ಮಹಾನುಭಾವ ರಾಷ್ಟ್ರಗಳ ಗುಪ್ತ ಕಾರಸ್ಥಾನಗಳು ಬೈಲಿಗೆ ಬಂದಿವೆ. ಇಂಗ್ಲಂಡದಲ್ಲಿ ನೌಕಾ ಬಲದ ಪರಿಷತ್ತು ನಡೆದ ಸಮಯ ಜಪಾನ, ಅಮೇರಿಕಾ, ಬ್ರಿಟಿಶ ದೇಶದವರು ನಾ ಮುಂದೆ, ನೀ ಮುಂದೆ, ಎಂದು ಹೊಸಹೊಸ ಹಡಗುಪಡೆಗಳನ್ನು ಸಜ್ಜುಗೊಳಿಸುತ್ತಿದ್ದಾರೆ, ಇದರಿಂದ ಮೂವರಿಗೂ ಅಹಿತವಿದೆ. ಜಪಾನಿಯರು ಹೀಗೆ ಮಾಡಬಾರದು, ಇದಕ್ಕೆ ಜಪಾನ ಸರಕಾರವು ಒಪ್ಪಿಕೊಂಡಿತು. ಮಂಚೂರಿಯಾ ಪ್ರದೇಶದಲ್ಲಿ ಬೇಕಾದ ಹಾಗೆ ಲೂಟಿ ಮಾಡಗೊಟ್ಟರೆ ಇನ್ನು ಹಡಗುಪಡೆ ಕಟ್ಟಿಸಲಿಕ್ಕಿಲ್ಲವಾಗಿ ಜಪಾನರ ವಚನ. ಆಯಿತು, ಯಾರಿಗೇನು? ಚೀನ ದೇಶವನ್ನು ಜಪಾನಕ್ಕೆ ಒಪ್ಪಿಸಿ ಬ್ರಿಟನ್-ಅಮೇರಿಕೆಯ ಮುತ್ಸದ್ದಿಗಳು ಗುಪ್ತ ವಚನ ಕೊಟ್ಟು ತಮ್ಮ ಕಾರ್ಯಭಾಗ ಸಾಧಿಸಿಕೊಂಡರು. ಫ್ರೆಂಚರೂ ತಮ್ಮ ಒಗ್ಗ ಕೆಲವು ತನಗೂ ಸ್ವಲ್ಪ ಪಡೆದು ಮಂಚೂರಿಯಾ ಪ್ರದೇಶಗಳೊಳಗ ಜಪಾನಿಗಳು ಮನಬಂದಂತೆ ಲೂಟಿ ಮಾಡಲು ಒಪ್ಪಿಗೆ ಕೊಟ್ಟರು. ಗುಪ್ತ ವಚನಗಳು ರಾಷ್ಟ್ರಸಂಘದ ಉದ್ದೇಶಕ್ಕೂ, ತಹನಾಮೆಗಳಿಗೂ ವಿಸಂಗತವಿದ್ದರೆ ಅದರಿಂದ ಈ ರಾಷ್ಟ್ರಗಳು ಉದ್ದುದ್ದ ಪತ್ರ ಬರೆದು ಜಪಾನ ಸರಕಾರದ ನಿಷೇಧ ಮಾತ್ರ ಮಾಡುವ [illegible]ಯಂತೆ ಜಪಾನ ಸರಕಾರಕ್ಕೆ ಇದಿರಾಗಲೊಲ್ಲರು. ಇದರಿಂದಲೇ ಚೀನ-ಜಪಾನ ವಿವಾದವು ರಾಷ್ಟ್ರಸಂಘದ ಕಕ್ಷೆಯೊಳಗಿನದಲ್ಲವಾಗಿ ಜಪಾನದ ರಾಯಭಾರಿಗಳು ನುಡಿಯುತ್ತಿದ್ದಾರೆ. ಆದರೆ ಈ ಪ್ರಕರಣವು ಇಷ್ಟಕ್ಕೇ ತಣ್ಣಗಾಗುವದೆಂದು ಹೇಳಬರದು. ಮಂಚೂರಿಯಾ ಪ್ರದೇಶವು ಸಮೃದ್ಧ ದೇಶವಿದೆ. ಅದನ್ನು ಪಾದಾಕ್ರಾಂತ ಮಾಡಿಕೊಳ್ಳಲು ಎಲ್ಲರೂ ಹವಣಿಸುತ್ತಿದ್ದಾರೆ. ಈ ಸಮಯ ಮಂಚೂರಿಯಾ ದೇಶವನ್ನು ಸಂಚರಿಸಿ ಸದ್ಯಕ್ಕೇ ಮರಳಿದ ಜಪಾನರ ಮುತ್ಸದ್ದಿಗಳಾದ ಮಿ| ಕ್ವಾನ ಮಿಟ್ಸುಮುರಾರವರು ಪ್ರಕಟಿಸಿದ ವೃತ್ತಾಂತವು ವರ್ಣನೀಯವಿದೆ. ಮಿ| ಮಿಟ್ಸುಮುರಾರವರು ಬೇರೆ ಬೇರೆ ರಾಷ್ಟ್ರಗಳ ಹಿತಸಂಬಂಧಗಳನ್ನು ಬಹು ವಿಶದವಾಗಿ ನಿವೇದಿಸಿದ್ದಾರೆ. ಮಂಚೂರಿಯಾ ಪ್ರಶ್ನೆಯು ಸಾಮೋಪಚಾರದಿಂದ ಇತ್ಯರ್ಥವಾಗದಿದ್ದಲ್ಲಿ ಬಹು ದೊಡ್ಡ ಗಲಭೆಯಾಗುವದಾಗಿ ಅಭಿಪ್ರಾಯ ಪಟ್ಟಿದ್ದಾರೆ. ಮಿ| ಮಿಟ್ಸುಮುರಾರವರು ನುಡಿಯುವದೇನಂದರೆ —

ದಕ್ಷಿಣ ಮಂಚೂರಿಯಾ ಪ್ರದೇಶದೊಳಗಿನ ಖನಿಜವನ್ನೂ, ಇತರ ಸೃಷ್ಟಿ ಸಂಪತ್ತನ್ನೂ ಜಪಾನಿಗಳು ಈ ತನಕ ಪಡೆದಿದ್ದಾರೆ. ಈಗ ಉತ್ತರ ಮಂಚೂರಿಯಾ ಪ್ರದೇಶವು ಸಮೃದ್ಧವಿದೆ. ಒಕ್ಕಲತನಕ್ಕೆ ಇಲ್ಲಿ ತುಂಬಾ ಅವಕಾಶವಿದೆ, ಖನಿಜವಿದೆ, ದಟ್ಟಡವಿಗಳು, ಇಡೀ ಭೂಮಂಡಲಕ್ಕೇ ಈ ಪ್ರದೇಶವು ಸಾಕಬಲ್ಲದು. ಇಲ್ಲಿಯ ಬಳಿ ದಕ್ಷಿಣ ಮಂಚೂರಿಯಾಗಿಂತ ಇಮ್ಮಡಿ ಪಟ್ಟು ಮಂಚೂರಿಯಾ ಪ್ರದೇಶವೆಂದರೆ, ಒಂದೊಂದು ದೊಡ್ಡ ಗೋಚರಾವಿನ ಕ್ಷೇತ್ರ ಇತ್ತ ಬೇವಿನ್ನು ಹುಲ್ಲು ಎಲ್ಲೆಲ್ಲಿಯೂ ಬೆಳೆದ ದೂ ಇನ್ನು ದೊಡ್ಡ ಪ್ರದೇಶದಲ್ಲಿ ಗಿಡಗಂಟಿ ಹುಡುಕಿದರೆ, ಎಲ್ಲೆಲ್ಲಿಯೂ ಕಾಣದು! ದನಕರು, ಕುದುರೆ, ಕುರಿ ಆಡುಗಳಲ್ಲಿ ಇಲ್ಲಿ ವಿಪುಲ. ಇದೆಲ್ಲವೂ ಜಪಾನ ದೇಶಕ್ಕೆ ಬೇಕು. ಈ ಸಂಪತ್ತನ್ನು ಸ್ವೈರ ಮಾಡಿಕೊಳ್ಳಬೇಕಾದರೆ, ಚೀನ ದೇಶದ ಆಧಿಪತ್ಯ ಕಳಚಿ ಉಗಿಬಂಡಿ ಕಟ್ಟಿಸಲು ಸ್ವಾನುಕೂಲತೆ ಬೇಕು. ಸುಮಾರು ೩೦೦ ಮೈಲು ಚೆಂಗಚೂನ ಕಿರೀನ ಪಟ್ಟಣಗಳ ನೆರೆಯ ಪ್ರದೇಶ ಕೈವಶವಾದರೆ ಕೊರಿಯಾದಲ್ಲಿ ಸಿಚೀನ ಬಂದರ ಕಟ್ಟಿ ಸರಕು ಪರಸ್ಪರ ರವಾನೆ ಮಾಡಲು ಅನುಕೂಲವಾಗುತ್ತದೆ. ಕೊರಿಯಾ ಪ್ರಾಂತವು ಜಪಾನ ದೇಶದ್ದು. ಸಿಚೀನ ಬಂದರದ ವಿಸ್ತಾರಟಿನಿಂದ ವ್ಲಾಡಿ ವೊಸ್ಟಾಕ್ ಬಂದರಕ್ಕೆ ಪಟ್ಟಿದೆ ವ್ಲಾಡಿ ವೊಸ್ಟೋಕ್ ಬಂದರವು

[೧೦ನೇ ಪಾನು ನೋಡಿರಿ]

ಅದ್ಭುತ ವಾರ್ತೆಗಳು!

— ವಲ್ಲಿಚೇರಿಯಲ್ಲಿ ಸೌ॥ ಕಮಲಾ ಕೃಷ್ಣಗಾವರ ಮೇಲೆ ಅದ್ಭುತವಾದ ಅತ್ಯಾಚಾರ ನಡೆಯಿತು. ಸೌಭಾಗ್ಯವತಿಯವರು ಕೇಂದ್ರ [illegible] ಅಧಿಕಾರಿಗಳಾದ ಶ್ರೀ॥ ಎಲ್. ಎಸ್. ಕೃಷ್ಣಗಾವರ ಪತ್ನಿಯರು ಶ್ರೀ ಕೃಷ್ಣಗಾವರು [illegible]ಗಿನ ದೊಡ್ಡ ವಕೀಲರು, ಅವರಿಗೆ [illegible] ಗಿದೆ. ಬೆನ್ನಿಗೆ ಸೌ॥ [illegible] ಇತರ ಕೆಲ ಸ್ತ್ರೀಯರೊಡನೆ [illegible] ಗಾಗಿ ನಡೆಯುತಿದ್ದ ತಂದರು. [illegible] ಪ್ರಾಂತ [illegible] ದಾದ ಮಿ॥ ಘೂಡನಲ್‌ರವರ ಕೋರ್ಟಿನಲ್ಲಿ ಅಟ್ಟೆಯ ವಿಚಾರ ನಡೆದಿತು. ಸರಕಾರ [illegible] ಮುಗಿದದೆ, [illegible] ಒಂದು ಸಣ್ಣ ಪ್ರಸಂಗ [illegible] ರಿ. ನಿಮಗ [illegible] ದಂಡವು ಹಾಕಲ್ಪಟ್ಟಿಲ್ಲ, [illegible] ವರು "ಸ್ತ್ರೀಯರು [illegible] ಗುನದು, [illegible] ತನ, [illegible] ನುಡಿದರು, [illegible] ನಿಮಗ [illegible] ಕೊಟ್ಟರು [illegible] ಮಾಡಿದರು. [illegible] ರಿಗೆ [illegible] ಸಲ್ಪಟ್ಟಿತು. ಆತವರಿಗೆ [illegible] ತನಕ [illegible] ರಿಗೆ ದಂಡಕ್ಕಾಗಿ [illegible] ಕಾಗಿ ನ್ಯಾಯಮೂರ್ತಿಗಳು [illegible] ದಂಡಿಲ್ಲ! ಸೌಭಾಗ್ಯವತಿಯರು ಎಲ್ಲಿ ಇದನ್ನು ಕೊಟ್ಟರು! "ಮಂಗಲ ಸೂತ್ರ ತೆಗೆಯುತೇನೆ. [illegible] ಹೋಗಲ್ಲಿ, ಇದನ್ನು ತೆಗೆಯುತೇವರೇವಲ್ಲಿ [illegible] ಗೆ ಮಿ [illegible] ತಿರಸ್ಕಾರದಿಂದ ನುಡಿದರು, "ನಾನು ಹಿಂದುಸ್ಥಾನದ ಪತಿವ್ರತೆಯಾಗಿದ್ದೇನೆ, ಮಂಗಲಸೂತ್ರವು [illegible] ಕಾಲಿಕ್ಕೆ ಕಟ್ಟಲ್ಪಟ್ಟಿದ್ದು, [illegible] ಕಾಪಾಡಲೇ ಬೇಕು." ಹೀಗೆ ಸೌಭಾಗ್ಯವತಿಯವರು ನಿರ್ಧಾರದಿಂದ ನುಡಿದರು. ಆ ಸಮಯ ಕೋರ್ಟಿನಲ್ಲಿ ಪಿ. ಡಿ. ಕೃಷ್ಣ ಎಂಬ ವಕೀಲರು ಹಾಜರಿದ್ದು ಮಂಗಲಸೂತ್ರವಾಗಲಿ, ವೈವಾಹಿಕ ಚಿನ್ಹೆಗಳು ಜಪ್ತು ಮಾಡಬಾರದಿಲ್ಲವಾಗಿ [illegible] "ನಿಮಗ ಅದರ ಮಾಲುಕರುವದೇನು? ನಿಮ್ಮ ಅದೇ ಅಪ್ಪರೇನು? [illegible] ಇಲ್ಲವಾದರೆ, ಸುಮ್ಮಗುಳಿಯಿರಿ" ಹೀಗೆ ಮಾಜಿಸ್ಟ್ರೇಟರು ಪಿ. ಡಿ. ಕೃಷ್ಣರವರಿಗೆ ಸುಮ್ಮಗಿರಿಸಿದರು. ಪೋಲೀಸ ಪೇದೆಗೆ ಮಂಗಲಸೂತ್ರ ತೆಗೆಯಲು ಅಪ್ಪಣೆಯಾಯಿತು. ಪೋಲೀಸ ಪೇದೆಯು ಬಲಾತ್ಕಾರದಿಂದ ಮಂಗಲಸೂತ್ರ ಹರಿಯಬಾರದೆಂದು, ಸೌಭಾಗ್ಯವತಿಯವರು ತನ್ನ ಒಳಿಯಲ್ಲಿ ನಿಂತಿದ್ದ ಒಬ್ಬಳ ಕಡೆಯಿಂದ ಮಂಗಲಸೂತ್ರ ತೆಗೆಸಿ ಪೋಲೀಸ ಪೇದೆಯ ಕಡೆಗೆ ಕೊಡಿಸಿದರು. ಈ ವಾರ್ತೆ ಕೇಳಿದೊಡನೆ ಮದ್ರಾಸದೊಳಗೂ, ಹಿಂದುಸ್ಥಾನದೊಳಗೂ, ದೊಡ್ಡ ಕೋಲಾಹಲ ನಡೆದಿದೆ. "ಫ್ರೀ ಪ್ರೆಸ್" ಪತ್ರಿಕೆಯ ವಾರ್ತೆ ಸರಕಾರ ತನಾಸನೆಯಿಂದ [illegible] ವಿಕಲವಾಗಿ ಕಳಿಸಲ್ಪಟ್ಟಿತು. ಮದ್ರಾಸದೊಳಗಿನ ಸ್ತ್ರೀಯರು ಸಭೆ [illegible] ಈ ಅಸಕ್ಕತ್ಯದ ನಿಷೇಧ ಮಾಡಿದರು. ಮದ್ರಾಸ ಸರಕಾರವು ಈ ಸ್ತ್ರೀಯ [illegible] ಕೊರಳ ಮಂಗಲಸೂತ್ರವನ್ನು ಸೌಭಾಗ್ಯವತಿಯವರಿಗೆ ಅರ್ಪಿಸಬೇಕಾಗಿ ತಂತಿಯಿಂದ ಅಪ್ಪಣೆ ಮಾಡಿತು. ಅದಾಗ್ಯೂ, ಈ ಪ್ರಕಾರದಿಂದ ಕಾಗಿನ ನಬ್ಬಾಳಿಕೆಯು ಬಿದ್ದ ದಾಖಲು ಬಯಲಾಯಿತು. ಮಂಗಳಸೂತ್ರವನ್ನು ಯಾವದೇ ಪ್ರಸಂಗದಲ್ಲಿ ತೆಗೆಯಬಾರದಾಗಿ ಪ್ಯಾಲಿ ಮೆಸ್ಸಿಟಲ್ಲಿನ [illegible] ಅಧ್ಯಾಯದ [illegible] ಕಲಮಿನಲ್ಲಿ ಸ್ಪಷ್ಟವಾಗಿ ವಿಧಿಸಲ್ಪಟ್ಟಿದೆ. [illegible] ಮವರು ವಿದ್ಯಾವತಿಯರು, ಮದ್ರಾಸ ಇಲಾಖೆಯಲ್ಲಿ ವಿದ್ಯಾಪ್ರಸಾರಕ್ಕಾಗಿ ಹಗಲಿರುಳು ದುಡಿದು ಕೀರ್ತಿಸಂಪಾದನೆ ಮಾಡಿದ ಸುಭೂಷ್ಯ ಮಗಳಂದಿರು.

ಮುಂಬಯಿಯ ಚೀಫ ಪ್ರೆಸಿಡನ್ಸಿ ಮೆಜಿಸ್ಟ್ರೇಟ ಕೋರ್ಟಿನಲ್ಲಿ, ಟೋಂಕಿನ ಮುಂದೆ ನಿಂತು ಪಿಕೆಟಿಂಗ ಮಾಡಿ ಜನ್ನ [illegible] ಜೋರಿಯೊಳಗಿಂದ [illegible] ಇತರಗಾದಲ್ಲಿನೆಂಬ ಅಪರಾಧದ ಒಗ್ಗೆ ಚಂದ್ರಕಾಂತ ಜೋಶಿ ಎಂಬ ೧೬-೧೭ ವರ್ಷದ ಹುಡುಗನಿಗ ಪೋಲೀಸರು ಹಿಡಿತಂದರು. "ನೀನು [illegible] ಘಸಾದಿಯಲ್ಲಿ, ನಾನೆಲ್ಲ ವಿಚಾರ ಮಾಡಿದೆ; ನಿನಗ ಚಿತ್ರ [illegible] ಮಾಡುವದೇ ಯೋಗ್ಯ ಶಿಕ್ಷೆ, ಚಿತ್ರ [illegible] ಕಲ್ಯಕಯಂತ ಒರೇ [illegible] ಹುಡಿಚಿತ್ತ ಹೊಡಿಸಬೇಕೆಂದು ನಾನು [illegible] ಇದರಿಂದ ನಿನಗೆ ಬುದ್ಧಿ ಬಂದೀತು" [illegible] ಮಾಜಿಸ್ಟ್ರೇಟರಾದ ಮಿ॥ ಎಚ್. ಪಿ. ದಸ್ತೂರ [illegible] ಬ್ರಿಸಿದರು. ಕೂಡಲೆ ಚಂದ್ರಕಾಂತನಿ [illegible] ಬಗಿದು [illegible] ಚಕ್ಕೆ ಹೊಡೆದರು. ಹುಡುಗನು ಸಮಾಧಾನದಿಂದ ಸಹಿಸಿದನು. [illegible] ೧೫ ದಿನಗಳ ತನಕ ಚಿತ್ತದ ಶಿಕ್ಷೆಯನ್ನು ಕೊಡಬಾರದಾಗಿ ಕ್ರಿಮಿನಲ್ ಪ್ರೊಸೀಜರ ಕೋಡಿನಲ್ಲಿ ಸ್ಪಷ್ಟವಾದ ನಿಯಮವಿದೆ, ಇದನ್ನು ಪ್ರಾಂತ ಸರಕಾರವು ಏರ್ಪಡಿಸಿದ ನಿಯಮದಂತೆ ವಿಧಿಸಬೇಕಾಗಿಯೂ ಕಟ್ಟಳೆಯಿದೆ. ಮಿ॥ ದಸ್ತೂರರವರು ಎಲ್ಲ ಕಾಯಿದೆ ಕಟ್ಟಳೆಟ್ಟು ಚಂದ್ರಕಾಂತನಿಗ ಬುದ್ಧಿಗಲಿಸಹೋಗಿ ತಮಗೆ ಬುದ್ಧಿಯಿಲ್ಲವಾಗಿ ಲೋಕಕ್ಕೆ ಪ್ರದರ್ಶಿಸಿದ್ದಾರೆ ಬಹಿರಂಗವಾಗಿ ಕೋರ್ಟಿನಲ್ಲಿ ಅಪರಾಧಿಗಳಿಗೆ ಚಿತ್ತ ಹೊಡೆದದ್ದು ಕೋರ್ಟ ಇತಿಹಾಸದಲ್ಲಿಲ್ಲ.

— ಸೇತಾಪರ-ಕಲಕತ್ತೆಗಳೊಳಗಿನ ಕೆಲವು ಅದ್ಭುತ ಪ್ರಕಾರಗಳು ವರಿಷ್ಠ ಕಾಯಿದೆ ಕೌನ್ಸಿಲಿನ ಆದಿವೇಶನದಲ್ಲಿ ಬೈಲಿಗೆ ಬಂದವು ರಾಜಶಾಸನಗಳನ್ನು ಹೊರಡಿಸಿ ಸರಕಾರವು ನಡಿಸಿದ ರಾಜ್ಯಭಾರ ನಿಷೇಧಿಸುವ ಠರಾವನ್ನು ಸರ್ ಹರಿಸಿಂಗ ಗೌಡರವರ ಸೂಚನೆ ಮೇರೆಗೆ ವರಿಷ್ಠ ಕಾಯಿದೆ ಕೌನ್ಸಿಲಿನ ಸೋಮವಾರ-ಮಂಗಳವಾರದ ಅಧಿವೇಶನದಲ್ಲಿ ಚರ್ಚಿಸಲ್ಪಟ್ಟು ಠರಾವು ಬಹುಮತದಿಂದ ತಿರಸ್ಕರಿಸಲ್ಪಟ್ಟಿತು ಮತ ಕೊಡುವಾಗ ಸರ್ ಮಹಮ್ಮದ ಯಾಕೂಬ, ಮಿ॥ ಡಿಸೋಜಾ, ಮಿ॥ ಗರುನವಿ ಮೊದಲಾದವರ. ಸರ್ವಾಧಿಪತಿಗಳ ಪತ್ನಿಯಂದಿರಾದ ಎಲಿಂಗಡನ್ ಬೋರೆಸಾಸಿಯವರೊಡನೆ ಹಸ್ತಾಂದೋಲನ ಮಾಡಿ ಪ್ರತಿಕೂಲ ಅಭಿಪ್ರಾಯ ಕೊಟ್ಟರು ಮೌಲಾನಾ ಶಫೀ ದಾವುದಿ ಹಾಗು ಸಯ್ಯದ ಮೂರ್ತಜಸಾಹ ಬರು ಸ್ವಾನುಭವಗಳನ್ನು ನಿವೇದಿಸಿದರು. ಇವನ್ನು ಕೇಳಿದರೆ, ರೋಮಾಂಚಗಳೇಳುತ್ತವೆ. "ಗಡಿನಾಡಿನಲ್ಲಿ ಜನರು ಗಟ್ಟಿಮಾತಾಡಲು ಹೆದರುತ್ತಾರೆ, ಏನಾದರೂ ಹೇಳುವದಿದ್ದರೆ ಗುಣುಗುಟ್ಟುತ್ತಾರೆ, ಜನರಿಗೆ ಒತ್ತರಿ ಮಾಡಿ ಸ್ಮೃತಿ ತಪ್ಪುವ ತನಕ ಪೋಲೀಸರು ಹೊಡೆದರಂತೆ! ಒಂದೆಡೆ ಒಬ್ಬ ಹೆಂಗಸು ಪ್ರಾರ್ಥನೆ ಮಾಡುತ್ತಿದ್ದಳು, ಅವಳ ಚಿನ್ನವನ್ನೆಲ್ಲ ಪೋಲೀಸರು ಬಲಾತ್ಕಾರದಿಂದ ತೆಗೆದುಕೊಂಡರು. ಬಳಿಯಲ್ಲಿಯೇ ಅವಳ ಗಂಡನು ಕೂತುಕೊಂಡಿದ್ದನು, ಆತನು ನಿಷೇಧಿಸಿದನು. "ಭಾಗ್ಯವಂತ ನೀನೆ, ನಿನ್ನ ಪಂಡಿತ

॥ ಶ್ರೀ ದತ್ತರಾಜ ಸಮರ್ಥ ॥

ಅಖಿಲ ಕನ್ನಡ ನಾಡಿನ ಸುಪ್ರಸಿದ್ಧವಾದ,
ಸಾಹಿತ್ಯ ಮಹಾಪರಿಷತ್ತಿನ ಗೌರವವನ್ನು ಪಡೆದ
ಗದಗ ಶ್ರೀದತ್ತಾತ್ರೇಯ ಸಂಗೀತ ನಾಟಕ ಮಂಡಳಿ
ಯವರು ಗುರುವಾರ ತಾ. ೧೧-೨-೧೯೩೭ನೇ ರಾತ್ರಿ ೧೦ ಘಂಟೆಗೆ
ಪ್ರಸಿದ್ಧವಾದ ಕನ್ನಡ ಐತಿಹಾಸಿಕ "ಯುಕ್ತನ್ಮಾ ನಾಯಿಕ"
ನೆಂಬ ನಾಟಕವನ್ನು ಆಡಿತೋರಿಸುವರು !!
ಕರ್ನಾಟಕ ರಂಗಭೂಮಿಯ ಅಭಿಮಾನಿಗಳೂ,
ರಸಿಕ ಮಹಾಶಯರೂ ತಪ್ಪದೆ ಪ್ರೋತ್ಸಾಹಿಸಬೇಕು !

ಸಂಘದೊಡೆಯ:— ಗರೂಡ ಸದಾಶಿವರಾಯ. ನಾಟಕಾಲಂಕಾರ,
ಅಭಿನಯಕೇಸರಿ.

ಪತಿಗೆ ನಿನ್ನ ಬಲಿ ಬಿಟ್ಟುಹೋದಷ್ಟೇ ಸ್ವಾಸ್ಥ್ಯಸಂಪದ ನಾ!" ಹೀಗೆ ಪೊಲೀಸರು ನುಡಿದರು. ಈ ಕುರಿತು ಜಿಲ್ಲಾ ಕಲೆಕ್ಟರರ ಕಡೆ ಸೌ॥ ರಸ್ಸಿ ದಾಸ್ತದಿಯವರು ವಿಚಾರಿಸಿದರಂತೆ. ಜೇಲ ಕಮೀಶನರರು ಕೈಕೆಳಗಿನ ಅಧಿಕಾರಿಗಳಿಗೆ ಆಜ್ಞೋಪಿಸಲಾಗಿದೆ; ಇವರ ಕ್ಕಿರಿಗೆ ಜೇಲ ಕಮೀಶನರರು ಹೇಳುತ್ತಾರೆ ಹುಡುಗಿಂತ ಹೂಗುತಿಯ ಭಾರ ಹೆಚ್ಚು!' ಹೀಗೆ ಇವರ ಕಂಡುಬಂತಾಗಿ ಹೌಲಾನಾರವರು ನುಡಿದರು ಶ್ರೀ ನಿಯೋಗಿಯವರು ಬಂಗಾಲಮೊಳಗಿನ ಒಂದು ಕಥೆ ಹೇಳಿದರು. ಕಲಕತ್ತೆಯೊಳಗೆ ಜಿ. ಸಿ. ನಾಗ ಎಂಬೊಬ್ಬ ಗೃಹಸ್ಥರಿದ್ದಾರೆ ಅವರು ರಾವಬಹಾದ್ದೂರರು. ಡಪ್ಯೂಟಿ ಕಲೆಕ್ಟರರ ತನಕ ಸರಕಾರಿ ಕೆಲಸ ನಡಿಸಿ ಈಗ ಪೆನ್ಶನು ಪಡೆದಿದ್ದಾರೆ, ಒಂದು ದಿನ ರಾತ್ರಿ ಒಬ್ಬ ಯುರೋಪಿಯನ್ ಪೋಲೀಸ ಆಫೀಸರನು ಅವರ ಮನೆ ನುಗ್ಗಿ ಬಾಯಿಗೆ ಬಂದಹಾಗೆ ಬೈದನು. ಇದು ಸರಿಯಲ್ಲವಾಗಿ ರಾವಬಹಾದ್ದೂರರು ನುಡಿದುದು, "ಪೊ॥ ಸುಪರಿಂಟೆಂಡೆಂಟರು ಬಂದರೆ, ನಿಮಗೆ ಜೆಲ್ ಬರಿಯುತ್ತಿದ್ದರು," ಹೀಗೆ ಆಫೀಸರನು ನುಡಿದು ಮನೆಯಲ್ಲಿದ್ದ ಖುರ್ಚಿ-ಮೇಜು ಮೊದಲಾದ ಸಾಮಾನುಗಳನ್ನೆಲ್ಲ ಚೂರು ಚೂರು ಮಾಡಿದನು ನಾಗರವರ ಮಗನಿಗೂ, ಮಗಳಿಗೂ ಬಡಿದಿದನು ಮಗಳ ಮೇಲೆ ಯಾ ಮಗನ ಮೇಲೆ ಯಾವದೇ ಆರೋಪವಿಲ್ಲ. ಮಗಳಿಗೆ ಊರೂರು ಒಯ್ದರು. ಒಬ್ಬ ಗಂಡಸು ಹೆಂಡಿಯು ಅವಳಿಗೆ ಒಯ್ಯುತ್ತಿದ್ದನು. ಇದೆಲ್ಲ ವೃತ್ತಾಂತವನ್ನು ರಾವಬಹಾದ್ದೂರ ಜಿ. ಸಿ. ನಾಗರವರು ಶ್ರೀ. ನಿಯೋಗಿಯವರಿಗೆ ಪತ್ರ ಬರೆದು ತಿಳಿಸಿದ್ದರು. ಆ ಪತ್ರ ಓದಬೇಕೆನ್ನುವಷ್ಟರಲ್ಲಿ, ಭಾಷಣದ ಅವಧಿ ಮುಗಿಯಿತು, ಈಗಿನ ರಾಜಶಾಸನಗಳ ರಾಜ್ಯಭಾರದಲ್ಲಿ ಯಾರೂ ಸುರಕ್ಷಿತರಲ್ಲವಾಗಿ ಸರ್ ಅಬ್ದುರ್ ರಹೀಮರವರು ಉದ್ಗರಿಸಿದರು. "ವರಿಷ್ಠ ರಾಯಿದೆ ಕೌನ್ಸಿಲ್ಲ ರದ್ದುಪಡಿಸಿರಿ, ಇಲ್ಲವ ಸಭಾಸದರ ಕೆಲಯಿಂದ ಪ್ರಶ್ನೆ ಯಾನೆ ಮತ ಕೊಡುವ ಅಧಿಕಾರಪತ್ರಗಳನ್ನು ಕಸಿಕೊಂಡು ಕೆಲಸ ನಡಿಸಿರಿ; ಕಾಯಿದೆ ಕೌನ್ಸಿಲಿನ ವೇಷ ಬೇಡ"ವಾಗಿ ಸಭಾಸದರಾದ ಮಿ॥ ಹೊಸರವರು ಒಂದು ಠರಾವನ್ನು ಸೂಚಿಸ ಹೊರಟಿದ್ದಾರೆ. ಕೌನ್ಸಿಲ್ ಆಫ್ ಸ್ಟೇಟದಲ್ಲಿಯೂ ಇದೇ ಪ್ರಕಾರದ ಠರಾವನ್ನು ಮಿ॥ ಸುಬೇರ ಹುಸೇನ ಕಿದವಾಯಿಯವರು ಸೂಚಿಸುವವರಿದ್ದಾರೆ. ಗೃಹಮಂತ್ರಿಗಳಾದ ಸರ್ ಜೇಮ್ಸ್ ಕ್ರೇರರವರು ಈ ಅತ್ಯಾಚಾರಗಳನ್ನು ಎಲ್ಲಿ ಗಣಿಸಲಿಲ್ಲ; ಇದು ಪ್ರಕಾರ ರಾಷ್ಟ್ರೀಯ ಸಭೆಯು ಹರಿಸಿದ ಅನೇಕ ಅತ್ಯಾಚಾರಗಳನ್ನು ಉಲ್ಲೇಖಿಸಬಹುದೆಂದರು. ಇವರಂಥ ಸಮರ್ಥನೆಯಿಂದು ವಿಚಾರಶೀಲರು ಕೇಳುತ್ತಿದ್ದಾರೆ. ರಾಷ್ಟ್ರೀಯ ಸಭೆಯು ಅತ್ಯಾಚಾರದಿಂದ ಯಾ ಯಾರೊಬ್ಬರ ಅತ್ಯಾಚಾರದಿಂದ ಪ್ರಜೆಗಳ ಪರಿಪಾಲನ ಮಾಡಲು ಸರಕಾರವು ಕಟ್ಟಾಗಿ ಬದ್ಧವಿದೆ, ಹೀಗಿದ್ದು ಅವರ ಕಡೆ ಬೆಟ್ಟು ತೋರಿಸಿ ಸ್ವತಃ ಪ್ರಜಾಪೀಡನ ನಡಿಸುವ ಬಗೆ ಹೇಗೆ? ರಾಷ್ಟ್ರೀಯ ಸಭೆಯ ಅತ್ಯಾಚಾರದಿಂದ ಕೆಲವರು. ಸರಕಾರಿ ಅತ್ಯಾಚಾರದಿಂದ ಹಲವರು; ಹೀಗೆ ಬ್ರಿಟಿಶ ರಾಜ್ಯದೊಳಗೆ ಪ್ರಜೆಗಳು ಪೀಡನೆ ಹೊಂದುವದಾದರೆ, ಅವರಿಗೆ ಕಾಯುವವರಾರು?

— ಈಗಿನ ರಾಜಶಾಸನದ ಕಾರಕೀರ್ದಿಯಲ್ಲಿ ಪೋಲೀಸರು ಸ್ವತಂತ್ರರಾಗಿದ್ದಾರೆಂದು ಲೋಕಾಭಿಪ್ರಾಯವಾಗಿದೆ ಡಾ॥ ಮುಹಮ್ಮದ ಆಲಮರವರಿಗೆ ರಾಜಶಾಸನದಂತೆ ೬ ತಿಂಗಳು ಶಿಕ್ಷೆಯಾಗಿದೆ ಆದಾಗ್ಯೂ, ಅವರ ಮೇಲೆ ರಾಜದ್ರೋಹದ ಕಾಯದೆಯನ್ವಯ ಖಟ್ಲೆ ನಡೆದದೆ. ಖಟ್ಲೆಯ ವಿಚಾರವು ಲಾಹೋರದೊಳಗಿನ ಬೋರ್ಸ್ಟಲ್ ಜೈಲಿನಲ್ಲಿ ನಡೆದದೆ ಡಾ॥ ಆಲಮರವರ ವಿಲ್ಲಿಯ ಕಾಲಕ್ಕೆ ತಮಗೆ ಹಾಜರಿರಗೊಡಬೇಕಾಗಿ ಡಾ॥ ಸತ್ಯಪಾಲ, ಮಲಿಕ ಲಾಲಖಾನ ಪ್ರಭೃತಿ ಸರಕಾರಿ ವೈದಿಗಳು ಮೆಜಿಸ್ಟ್ರೇಟರ ಅಪ್ಪಣೆ ಕೇಳಿದರು; ಮೊದಲು ಅಪ್ಪಣೆ ಕೊಟ್ಟರು ಆದರೆ, ಜೈಲರರು ಮಲಿಕ ಲಾಲಖಾನರಿಗೆ ಬಿಡಲಿಲ್ಲ, ಇದು ಕೋರ್ಟಿನ ಅಪಮಾನವೆಂದು ಮೆಜಿಸ್ಟ್ರೇಟರಿಗೆ ತಿಳಿಸಿದರೆ, ಮೆಜಿಸ್ಟ್ರೇಟರು ವಿಚಾರ ಮಾಡುತ್ತೇನೆಂಬ ಆಶ್ವಾಸನ ಕೊಟ್ಟಿರುತ್ತಾರೆ ಈ ವ್ಯಾಪಾರ ಅಪ್ರಕೃತವಲ್ಲವೇ?

— ಕೋಮಿಲ್ಲಾದಲ್ಲಿ ಡಿ॥ ಮ್ಯಾ॥ ಸ್ಟೀವ್ಹನ್ಸರವರಿಗೆ ಗುಂಡುಹಾಕಿ ಕೊಂದ ಸುನೀತಿ ಚೌಧರಿ, ಶಾಂತಿ ಘೋಷ ಎಂಬ ಇಬ್ಬರು ೧೬ ವರ್ಷದ ಹುಡುಗಿಯರಿಗೆ ಕಾಲಾಪಾನಿಶಿಕ್ಷೆಯಾಗಿದೆ. ಹುಡುಗಿಯರು ತೀರ್ಪು ಕೇಳುವಾಗ ಸಮಾಧಾನದಿಂದಿದ್ದರು; ಕುದುರೆಯ ಲಾಯದೋಪಾದಿಯಲ್ಲಿರುವ ಜೈಲಿನಲ್ಲಿರುವದಕ್ಕಿಂತ ಮರಣವೇ ಲೇಸೆಂದು ಸುನೀತಿ-ಶಾಂತಿಯವರು ತೀರ್ಪು ಕೇಳಿ ಉದ್ಗರಿಸಿದರು! ನಿತ್ಯವೂ ಅವರು ಹೂ ಮುಡಿದುಕೊಂಡು ಕೋರ್ಟಿಗೆ ಬರುತ್ತಿದ್ದರು.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಉಪೇಕ್ಷೆ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲೆಣ್ಣೆ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಎಣ್ಣೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ. ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟಲಿಗಳಿಗೆ ,, ೨—೧೦—೦
ಅಂಚೆವೆಚ್ಚ ,, ೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

—:o:—

೩ ಔಂಸಿಗೆ ರೂ ೩—೦—೦
ಔಂಸಿಗೆ " ೧—೪—೦
ಡ್ರಾಮಿಗೆ ,, ೦—೧೨—೦
ಅಂಚೆವೆಚ್ಚ ,, ೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ



"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ನಾನಾತರದ ಸುಗಂಧ ದ್ರವ್ಯಗಳು ಸಿಗುತ್ತವೆ ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ; ಅವುಗಳಲ್ಲಿ ಆರ್ಟಿಫಿಶಿಯಲ್ ಯಾನೆ ಪರದ್ರವ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮತ್ತಾವ ಸ್ಪರ್ಧೆಯಿಲ್ಲ.

THE ANGLO INDIAN DRUG & CHEMICAL CO.
POST BOX 2082. BOMBAY No. -

"ಕೊಂಗ್ರೆಸಿಗೆ ಕೊಲ್ಲುವ ಹವ್ಯಾಸ ತೊರೆದುಬಿಡಿ! ನಿಮ್ಮಿಂದಾಗದ ಮಾತದು!!"

ಸತ್ಯಾಗ್ರಹದ ವಾರ್ತೆ.

ಮುಂಬಯಿಯೊಳಗೆ

ಮುಂಬಯಿಯೊಳಗಿನ ಪರಿಸ್ಥಿತಿ ಮತ್ತೂ ಗಡುಚಾಗುತ್ತಿದೆ. ಸರಕಾರವು ಶ್ರೀ| ನರಿಮಾನ ಮೊದಲಾದ ಮುಖ್ಯ ಮುಖ್ಯಸ್ಥರನ್ನು ವಿಚಾರವಿಲ್ಲದೆ ಸೆರೆ ಹಿಡಿದಿಟ್ಟಾಗ್ಯೂ, ಸತ್ಯಾಗ್ರಹವು ಎಂದಿನಂತೆ ನಡದಿದೆ. ೧೦ ಯುದ್ಧ ಮಂಡಳಗಳು ಈ ತನಕ ಸೆರೆಮನೆ ಸೇರಿದವು. ಆದಾಗ್ಯೂ ಮೆರವಣಿಗೆ-ಸಭೆ-ಪಿಕೆಟಿಂಗು ಅಪ್ರತಿಹತವಾಗಿ ನಡೆದಿವೆ. ಡಾ| ಎಸ್ ಎಸ್ ಬಾಟ್ಲಿವಾಲಾರವರ ಮಗಂದಿರರಾದ ರಾ| ಬಾಟ್ಲಿವಾಲಾ ಎಡ್ವೋಕೇಟರವರ ಮೇಲೆ ಸತ್ಯಾಗ್ರಹಕ್ಕೆ ಬೆಂಬಲವನ್ನಿತ್ತ ಬಗ್ಗೆ ಖಟ್ಲೆ ನಡದಿತ್ತು. ಅವರಲ್ಲೊಂದು ಪತ್ರ ದೊರಕಿತು, ಕೆಲವು ಹಣ ದೊರಕಿತು, ಎಂಬದರಿಂದ ಅವರು ರಾಷ್ಟ್ರೀಯ ಸಭೆಯ ಕಾರ್ಯಕ್ರಮ ಪ್ರವರ್ತಕರೆಂದು ಸರಕಾರಿ ವಕೀಲರು ವಾದಿಸಿದರು. ಮೆಜಿಸ್ಟ್ರೇಟರು ಈ ಪುರಾವೆ ಸಾಲುವದಿಲ್ಲವಾಗಿ ಅವರಿಗೆ ಬಿಟ್ಟುಕೊಟ್ಟರು. ಕೋರ್ಟಿನಿಂದ ಹೊರಬಿಡುವಷ್ಟರಲ್ಲಿ ಅವರಿಗೆ ರಾಜಶಾಸನದಂತೆ ಸೆರೆಮನೆಗಟ್ಟಿದರು. ಸೈಕಲ್ ಸ್ವಾರರಾಗಿ ಭೂಪ್ರದಕ್ಷಿಣ ಮಾಡಿದ ವಿಖ್ಯಾತ ಶ್ರೀ| ರಸ್ತುಮಜಿ ಭೂಮಗಾರರವರು ೧ನೇ ಯುದ್ಧ ಮಂಡಳದ ಸಭಾಸದರಾಗಿ ಸೆರೆಮನೆ ಸೇರಿದ್ದಾರೆ. ಮಹಾತ್ಮರ ಸಲ್ಲಾಗಾರರಾದ ರಾಜಕೋಟದ ಶ್ರೀ| ಕೇವಲರಾಮ ದವೇಯವರ ಮೂವರ ಮಗಳಂದಿರಾದ ಸುಭದ್ರಾ, ಸರಳಾ, ಇಂದುಮತಿಗಳವರು ೯ನೇ ಯುದ್ಧ ಮಂಡಳದ ಅಧ್ಯಕ್ಷರೂ, ಸಭಾಸದರೂ ಆಗಿರುವರು. ಸುಭದ್ರೆಯ ಪ್ರಾಯ ೨೧ ವರ್ಷ, ಎಲ್ಫಿನ್ಸ್ಟನ್ ಕಾಲೇಜಿನಲ್ಲಿ ಎಮ್ ಎ, ವಿದ್ಯಾರ್ಥಿ. ಸರಳೆಯ ಪ್ರಾಯ ೧೮ ವರ್ಷ, ಮುಂಬಯಿಯ ಜೇ. ಜೇ. ಸ್ಕೂಲ ಆಫ್ ಆರ್ಟ್ಸ ಎಂಬ ಕಲಾಕೌಶಲ್ಯ ಶಾಲೆಯ ಕೊನೆಯ ತರಗತಿಯಲ್ಲಿದ್ದಾರೆ. ಇಂದುಮತಿಯ ಪ್ರಾಯ ೧೬ ವರ್ಷ, ಮೆಟ್ರಿಕ್ಯುಲೇಶನ್ ಕಲಿಯುತ್ತಿದ್ದಾಳೆ. ಮೂವರ ಅಕ್ಕ-ತಂಗಿಯರಿಗೂ ೧—೧ ವರ್ಷದ ಕಠಿಣ ಸಜೆ, ೩೦೦ ೩೦೦ ರೂಪಾಯಿ ದಂಡ ವಿಧಿಸಲ್ಪಟ್ಟಿತು. ಕೊಂಗ್ರೆಸ ಬುಲೆಟಿನ್ ಮಾರಿದ ಬಗ್ಗೆ, ಪಿಕೆಟಿಂಗ ಮಾಡಿದ ಬಗ್ಗೆ ಹಿಡಿಹಿಡಿದು ಶಿಕ್ಷಿಸಲಾಗುತ್ತಿವೆ. ಒಂದು ಸಣ್ಣ ಕಾಯಿದೆಯ ಅರ್ಥ ಒಂದಿದೆ. ಮೆಜಿಸ್ಟ್ರೇಟರಾದ ರಾ| ಖಂಡಾಲಾವಾಲಾರವರು ಈ ಆಕ್ಷೇಪ ತೆಗೆದರು. "ಬುಲೆಟಿನ್ನಿನ ಮೇಲೆ ಕೊಂಗ್ರೆಸಿನಿಂದ ಪ್ರಸಿದ್ಧವಾದದ್ದೆಂಬ ಶಬ್ದ ಮಾತ್ರವಿರುತ್ತದೆ, ಅದರ ಮೇಲಿಂದ ಅದು ಕೊಂಗ್ರೆಸಿನ ಪರವಾಗಿ ಪ್ರಕಟವಾಗುತ್ತದೆಂದು ತಿಳಿಯಬಾರದಾಗಿ ಮುಂಬಯಿ ಹೈಕೋರ್ಟಿನ ಠರಾವಾಗಿದೆ. ಅದು ಕೊಂಗ್ರೆಸಿಗೆ ಒಪ್ಪಿದ್ದೆಂದು ನೀವು ಹ್ಯಾಗೆ ಸಿದ್ಧಪಡಿಸುತ್ತೀರಿ?" ಎಂದು ಕೇಳಲು ಸರಕಾರಿ ವಕೀಲರು ಖುಲಾಸೆ ಮಾಡಲು ಅವಕಾಶ ಕೊಂಡಿದ್ದಾರೆ. ಮುಂಬಯಿ ಊರತುಂಬ ಅಲ್ಲಲ್ಲಿ ಪರದೇಶಿ ಜವಳಿಯ ಹೋಳಿಗಳಾಗುತ್ತಿವೆ, ಇವನ್ನು ನಿಲ್ಲಿಸಲು ಪೋಲೀಸರಿಂದಾಗಲಿಲ್ಲ! ಸೋಮವಾರ ದಿನದ [illegible] ನಡೆದ ಮೆರವಣಿಗೆಗಳಲ್ಲಿ ಪೋಲೀಸರಿಗೂ ಜನರಿಗೂ ಕಾದಾಟವಾಯಿತು, ದೊಣ್ಣೆ ಹೊಡದು, ಗುಂಡು ಹೊಡೆದು ಜನರಿಗೆ ಪೋಲೀಸರು ಚದರಿಸಿದರು. ಒಬ್ಬರು ತೀರಿಕೊಂಡರು, ೨೦೦ಮಂದಿಗಳಿಗೆ ಘಾಯಗಳಾಗಿವೆ. ಸುಮಾರು ೨೦ ಮಂದಿಗಳಿಗೆ ಸೆರೆಹಿಡಿದರು. ನಜರು ಪೋಲೀಸರ ಮೇಲೆ ಕಲ್ಲು ಹೊಡೆದದ್ದರಿಂದ ಇಷ್ಟೆಲ್ಲ ಅನರ್ಥವಾಯಿತು. ಆ ದಿನ ಹೊರಟ ಮೆರವಣಿಗೆಗಳ ಲೆಕ್ಕವಿಲ್ಲ. ಬೊಬ್ಬೆಯಂತೆ ಅಲ್ಲಲ್ಲಿ ಮೆರವಣಿಗೆಗಳು ಎದ್ದೇಳುತ್ತಿದ್ದವು. ಅಲ್ಲಲ್ಲಿ ಪರದೇಶಿ ಜವಳಿಯ ಹೋಳಿ! ಆದರೆ, ಗಾಂಧಿ ದಿನ ನಡೆದ ಮೆರವಣಿಗೆ ಮಾತ್ರ ಬಹು ಸುಸಂಘಟಿತವಾಗಿ ನಡೆಯಿತು. ಜನರು ಕಾಳಬಾದೇವಿಯಿಂದ ಮಾಂಡವಿ, ಝವೇರಿ ಬಜಾರ ಪೇಟೆಗಳೊಳಗಿಂದ ಮೆರವಣಿಗೆ ಹೊರಡಿಸಿಕೊಂಡು 'ಮಣಿಭುವನಕ್ಕೆ' ಹೊರಟರು. ಪೋಲೀಸರು ಅಡ್ಡಗಟ್ಟಿ ಹಿಡಿದರು. ಅಲ್ಲಿಯೇ ಬೇರೊಂದು ಮೆರವಣಿಗೆಯಾಗಿ ಮುಂದರಿಯುತ್ತು. ಹೀಗೆ ಪೋಲೀಸರು ಅಡ್ಡಗಟ್ಟಿದ ಸ್ಥಳದಿಂದ ಹೊಸ ಹೊಸ ಮೆರವಣಿಗೆಗಳು ಹೊರಟು, ಮಣಿಭುವನಕ್ಕೆ ಕೊನೆಯ ಮೆರವಣಿಗೆ ತಲ್ಪಿತು. ಧ್ವಜವಂದನೆಯಾಯಿತು. ಕಾರ್ಯಕ್ರಮ ಮುಗಿಯುವಷ್ಟರಲ್ಲಿ ಆಗಮಿಸಿದ ಪೋಲೀಸರು ಹಿಡಿದು ಧ್ವಜ ಕಿತ್ತುಗೊಂಡರು. ೧೮ ಮಂದಿಗಳಿಗೆ ಸೆರೆಹಿಡಿಯಲ್ಪಟ್ಟಿತು.

ಮುಂಬಯಿಯ ಸ್ಟೋಕ್ ಎಕ್ಸಚೇಂಜ ಹಾಗು ಹುಂಡಣಾವಳಿ ಪೇಟೆಯನ್ನು ಮುಚ್ಚುವ ಬಗ್ಗೆ ಸರಕಾರವು ಎಕ್ಸಚೇಂಜಿನ ಅಧ್ಯಕ್ಷರ ಕಡೆ ಹೀಗೆ ಕೇಳಿತ್ತು. ಹೀಗೆ ಕೊಂಗ್ರೆಸಿಗೆ ಅನುಕೂಲವಾಗಿ ಹರತಾಳ ಆಚರಿಸಿದರೆ ಎಕ್ಸಚೇಂಜಿಗೆ ಇರುವ ಸರಕಾರದ ಮನ್ನಣೆ ತಪ್ಪಾಗುವದು ಎಂದು ಬೆದರಿಸಿತ್ತು. "ನಾವು ರೀತಿಯಂತೆ ಬಾಗಿಲು ತೆರೆದೆವು, ವರ್ತಕರು ವ್ಯಾಪಾರ ಮಾಡದಿದ್ದರೆ, ಈ ಜನಗಳ ರಾಜ್ಯದಲ್ಲಿ ಯಾರಿಗೂ ಜಪ್ತಿ ಇಲ್ಲ. ಈ ಮಾತನ್ನು ಸ್ವತಂತ್ರವಿದ್ದವರು [illegible] ತ್ತಾರೆ!" ಹೀಗೆ ಅಧ್ಯಕ್ಷರು ಸರಕಾರಕ್ಕೆ ಉತ್ತರ ಕೊಟ್ಟಿದ್ದಾರೆ. ವರ್ತಕರು ವರ್ತಕ ಸಂಘದ ಹೆಸರಿನಿಂದ ರಾಜಶಾಸನಗಳ ರಾಜ್ಯವನ್ನು ನಿಷೇಧಿಸುವದಕ್ಕಾಗಿ ಈ ಹೊತ್ತು ಸಭೆ ಸೇರುವವರಿದ್ದಾರೆ. ಠರಾವುಗಳ ಒಕ್ಕಣಿಕೆ ತಯಾರಿಸಿ ಸರಕಾರಿ ಮನ್ನಣೆಗೆ ಕಳಿಸಿದರು. ಠರಾವುಗಳು ಕಾಯಿದೆಗೆ ಸಮ್ಮತವೋ ಅಸಮ್ಮತವೋ ಎಂಬ ಅಭಿಪ್ರಾಯ ಸರಕಾರವು ಕೊಡಲಿಲ್ಲ. ಈ ಸಮಯ ಸಭೆ ಸೇರಿಸಬೇಡಿ ಎಂಬುದಾಗಿ ಮಾತ್ರ ತಿಳಿಸಿತು. ಆದಾಗ್ಯೂ ವರ್ತಕರು ಈ ಹೊತ್ತು ಸಭೆ ಸೇರುವವರಿದ್ದಾರೆ. ಶ್ರೀ ರತಿಲಾಲ ತ್ರಿಭುವನ ದಲಾಲರವರಿಗೆ ೨೪ ತಾಸುಗಳಲ್ಲಿ ಮುಂಬಯಿ ಬಿಟ್ಟು ಹೋಗಬೇಕಾಗಿ ಅಪ್ಪಣೆಯಾಗಿತ್ತು. "ನಾನೀಗ ೨೫ ವರ್ಷಗಳಿಂದ ಇಲ್ಲಿ ವ್ಯಾಪಾರ ಮಾಡುತ್ತಿದ್ದೇನೆ, ಲಕ್ಷಾವಧಿ ರೂಪಾಯಿಗಳ ವ್ಯಾಪಾರವಿದೆ, ನಾನು ಮುಂಬಯಿ ಬಿಟ್ಟು ಹೋಗಲಾರೆ," ಹೀಗವರು ಬರೆದರು. ಅವರಿಗೆ ಸೆರೆಹಿಡಿದು ೨ ವರ್ಷಗಳ ಕಠಿಣ ಸಜೆ, ೩೦೦ ರೂಪಾಯಿ ದಂಡ ವಿಧಿಸಲ್ಪಟ್ಟಿದೆ. ಇವರು ಅರಳೀ ದಲಾಲರ ಸಂಘದ ಕಾರ್ಯದರ್ಶಿಗಳು.

ಮುಂಬಯಿಯೊಳಗಿನ ಜೈಲುಗಳು ತುಂಬುತ್ತ ಬಂದವು, ತುಂಬಿದವು! ಘೋರವಡದಲ್ಲಿ ಒಳಬದಿಗ ಒಂದು ಕೇಂಪಿನ ಏರ್ಪಾಟಾಗಿದೆ! ವಿಸಾಪುರದಲ್ಲಿ ಹಂಗಾಮಿ ಜೈಲಿನ ಏರ್ಪಾಟಾಗಿದೆ! ಜೈಲು ಖಾತೆಯ ಖರ್ಚು ಅನಪೇಕ್ಷಿತವಾಗಿ ಬೆಳೆದದ್ದರಿಂದ ತಾ| ೧೭ನೇಗೆ ಸೇರಲಿಕ್ಕಿದ್ದ ಮುಂಬಯಿ ಕಾಯಿದೆ ಕೌನ್ಸಿಲನಲ್ಲಿ ಈ ಖಾತೆಯ ಹೆಚ್ಚಿನ ಖರ್ಚಿಗೆ ಮಂಜೂರಿ ಪಡೆಕೊಳ್ಳುವ ಸೂಚನೆಯಾಗುವದು.

ಮುಂಬಯಿಯಲ್ಲಿ ಆರ್ಡಿನನ್ಸುಗಳಿಂದ ಸಮಾಧಾನವಾಗುವ ಬದಲು ಗಡಿಬಿಡಿ ಹೆಚ್ಚಾಯಿತು. ಗವ್ಹರ್ನರರಾದ ಸರ್ ಫ್ರೆಡರಿಕ್ ಸ್ಯಾಕ್ಸರವರಿಗೆ ಹಿಂಗತಿ [illegible] ಪ್ರಯಾಗದ 'ಪಾಯೋನಿಯರ' ಪತ್ರಿಕೆಯ ಲಂಡನ್ ಸುದ್ದಿಗಾರರು ಪ್ರಕಟಿಸಿದ್ದರು. ಮುಂಬಯಿ ಸರಕಾರವು ಚನ್ನಾಗಿ ವರ್ತಿಸದೆ ಜನರಿಗೆ [illegible] ಮುಂಬಯಿ ಸರಕಾರದ ಮೇಲೆ ಆರೋಪ ಬಂದು ಪ್ರಚಂಡ ಗವ್ಹರ್ನರರಿಗೆ ನೇಮಿಸುವದಾಗಿ ವಾರ್ತೆ. ರಾಜಶಾಸನದಿಂದ ಮುಂಬಯಿಯ ವ್ಯಾಪಾರ ಸಮಾಧಾನಿಸಲಿಲ್ಲ. [illegible] ಪರಿಸ್ಥಿತಿ ಬಹು ಸ್ವಾರಸ್ಯ [illegible] ಲಂಡನ್ 'ಡೇಲಿ ಎಕ್ಸಪ್ರೆಸ್' ಹಾಗು 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಸುದ್ದಿಗಾರರು ಪ್ರಕಟಿಸುತ್ತಾರೆ. "ಸೊಣಗಲಗಾದರೂ ಹಿಡಿಯಬಹುದು, ಜೇನುಗಾರರಿಗೆ ಹಿಡಿಯುವದು ಮತ್ತೂ ಕಠಿಣ ಕೆಲಸ!" ಹೀಗೆ ಪೋಲೀಸ ಕಮಿಶನರರಾದ ಮಿ| ವಿಲ್ಸನ್‌ರವರು 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಸುದ್ದಿಗಾರರ ಬಳಿ ಉದ್ಗರಿಸಿದರಂತೆ! ಗವ್ಹರ್ನರರಿಗೆ ಹಿಂಗದೆಕೊಳ್ಳುವ ವಾರ್ತೆ ನಿಜವಲ್ಲವಾಗಿ ಸರಕಾರಿ ಪತ್ರಿಕೆ ಪ್ರಕಟಣೆ ಹೊರಡಿಸಿದ್ದರೆ ಈ ಕಾರಣದಿಂದಲೋ, ಬೇರೆಯಾವ ಕಾರಣದಿಂದಲೋ ಮುಂಬಯಿ ಸರಕಾರವು ಒಂದು ಪ್ರಕಟಣೆಯನ್ನೇ ಹೊರಡಿಸಿಬಿಟ್ಟಿದೆ. "ಮುಂಬಯಿಯಲ್ಲಿ ಅತ್ಯಾಚಾರಗಳಾಗುತ್ತಿವೆ. ಇದರಿಂದ [illegible] ಭಂಗ ಬರುವಂತಿದೆ. ಪೋಲೀಸರು ಈ ತನಕ ಬಹಳ ಸಮಾಧಾನ ಹಿಡಿದರು, ಈಗ ಸಮಾಧಾನ ಹಿಡಿಯಬಾರದು. ಪೋಲೀಸರ ಹುಕುಮಿನಂತೆ ಮೆರವಣಿಗೆ ಚದರದೆ ತುಂಟತನ ಮಾಡಿದ್ದಲ್ಲಿ ಗುಂಡು ಹೊಡೆಯುವಂತೆ ಹುಕುಮಾಗಿದೆ. ಜನರು ಇಂಥ ಹಿಂಸಾಚಾರಿ ಮೆರವಣಿಗೆಗಳಲ್ಲಿ ಸೇರಬಾರದು." ಮುಂಬಯಿಯಲ್ಲೀಗ ಬಹುಕಷ್ಟ ಒಂತಂಮ ಎಲ್ಲರೂ ದಿಗಿಲು ಬಿದ್ದಿದ್ದಾರೆ.

'ರಾಷ್ಟ್ರೀಯ ಸಭೆಗೆ ಸಂಬಂಧಪಟ್ಟ ಯಾವದೇ ಕಾರ್ಯಕ್ರಮ, ಹ್ಯಾಗೂ ಪ್ರಕಟಿಸಕೂಡದು,' .. ..ನಡೆದಿದೆ' ಎಂದು ಸಹ ಪ್ರಕಟಿಸಕೂಡದು ಕಾಯಿದೆಭಂಗದಲ್ಲಿ ಸೆರೆಯಾಳಾದವರ ನಾಮನಿರ್ದೇಶ ಮಾಡಕೂಡದು, ಭಾವಚಿತ್ರ ಅಚ್ಚು ಹಾಕಬಾರದು ಅವರ ಗುರುತಾಗುವಂತೆ ಹಿಂದಿನ-ಮುಂದಿನ ಪರಿಚಯ ಹೇಳಲಾಂತಕವಿಲ್ಲ ಮುಂಬಯಿಯ 'ಇಂಡಿಯನ್ 'ಡೇಲಿ ಮೇಲ' ಪತ್ರಿಕೆಯಲ್ಲಿ ಸೆರೆಬಿದ್ದವರ ಹೆಸರು ಬರೆಯುವ ಸ್ಥಳ ಬರಿದಾಗಿಟ್ಟು, ಅವರ ಗುಣವರ್ಣನೆ ಮಾತ್ರ ಪ್ರಕಟವಾಗುತ್ತಿದ್ದ, ಅವನ್ನೋದಿದರೆ, ಹೆಂಡತಿ ಗಂಡನ ಹೆಸರು ಹೇಳುವಂತೆ ಭಾಸವಾಗುತ್ತದೆ! ವಿಶಿಷ್ಟ ವಾರ್ತೆಗಳನ್ನು ಪ್ರಕಟಿಸಕೂಡದು, ವಿಶಿಷ್ಟ ವರ್ತಮಾನಪತ್ರಗಳೇ ಪ್ರಕಟಿಸಕೂಡದು ವಾರ್ತೆಗಳಿಗೆ ದೊಡ್ಡ ದೊಡ್ಡ ಸವಡುಗಳನ್ನು ಕೊಡಕೂಡದು, ದೊಡ್ಡ ದೊಡ್ಡ ಅಕ್ಷರಗಳನ್ನು ಉಪಯೋಗಿಸಬಾರದು. "ಸ್ತ್ರೀಯರಿಗೆ ಹಿಡಿದರು, ಮುಸಲ್ಮಾನರಿಗೆ ಹಿಡಿದರು!" ಹೀಗೆ ದೊಡ್ಡ ಸವಡುಗಳನ್ನು ಹಾಕಕೂಡದು! ಕಾಯಿದೆಭಂಗದ ವಾರ್ತೆಗೆ [illegible]ಕಣದ ಸವಡುಗಳನ್ನು ಕೊಡಲಾಗದು, ಈ ಸುದ್ದಿಗಳನ್ನು ಮೂಲೆಗುಂಪಾಗಿ ಪ್ರಕಟಿಸಬೇಕು ಸರಕಾರದ ಧೋರಣವನ್ನು ಉಗ್ರವಾಗಿ ಟೀಕಿಸಕೂಡದು. ಟೀಕೆಗಳ ಉಗ್ರ-ಸೌಮ್ಯ ರೂಪವನ್ನು ನಿಶ್ಚಯಿಸುವ ಅಧಿಕಾರಿ ಅಲ್ಲಲ್ಲಿಯ ಪರಿಸ್ಥಿತಿ ಬಲ್ಲಾದ ಅಧಿಕಾರಿಗಳದು. ಆ ಅಧಿಕಾರಿಗಳ ಧೋರಣ ನೋಡಿ, ಪರಿಸ್ಥಿತಿ ತಿಳಿದು ಸರಕಾರದ ಧೋರಣ ಟೀಕಿಸಬಹುದು ಟೀಕೆಯ ಗೋಜಿಗೆ ಹೋಗದಿರುವದೇ ಉತ್ತಮ ಪಕ್ಷ ಸರಕಾರಕ್ಕೆ ಬೆಂಬಲ ಸಿಗುವಂತೆ ಧೋರಣವನ್ನಿಟ್ಟು ಪತ್ರಕರ್ತರು ಶಕ್ತಿಮೀರಿ ಸಹಾಯ ಮಾಡಬೇಕು ಪೋಲೀಸರು ದೊಣ್ಣೆ ಹೊಡೆದರು, ಘಾಯಪಟ್ಟವರಿಗೆ ಶುಶ್ರೂಷೆ ಮಾಡಗೊಡಲಿಲ್ಲ, ನಿಶ್ಶಸ್ತ್ರರಾಗಿ ಬೀಳುವನಕ ಹೊಡೆದರು, ಮನೆ ನುಗ್ಗಿ ಜಪ್ತಿ ಮಾಡಿದರು, ಮೊದಲಾದವುಗಳ ಬಾಹುಳ್ಯ ಮಾಡಕೂಡದು ಸತ್ಯಾಗ್ರಹದಿಂದುಂಟಾದ ಅನರ್ಥ, ರಾಷ್ಟ್ರೀಯ ಸಭೆಯವರ ಹಟ, ಸ್ವಯಂಸೇವಕರ ಹುಡುಗಾಟಿಕೆ-ಕಿಡಿಗೇಡಿತನ, ಪಿಕೆಟಿಂಗಿನ ಹಾವಳಿ, ಈ ವಿಷಯಗಳ ಮೇಲೆ ಲೇಖಗಳನ್ನು ಬರೆಯಬೇಕು ರೌಂಡ ಟೇಬಲಿನ ಉಪಕಾರ ಮನವಣಿ ಸ್ಮರಿಸಬೇಕು ಹಿಂದುಸ್ಥಾನದಿಂದ ರಫ್ತಾದ ಚಿನ್ನದಿಂದ ಹಿಂದುಸ್ಥಾನಕ್ಕೆ ಲಾಭವಾಯಿತೆಂಬ ಸರ್ವಾಧಿಪತಿಗಳ ಮತವನ್ನು ಸಪ್ರಮಾಣ ಪ್ರತಿಪಾದಿಸಬೇಕು, ಇವೇ ಮೊದಲಾದ ಪ್ರಕೃತ ಪರಿಸ್ಥಿತಿಗನು[illegible]ವ, ಸಮಾಜಶಾಂತಿಗೆ ಉಪಯುಕ್ತವಾದ, ಹಿಂದುಸ್ಥಾನದ ಕಲ್ಯಾಣ ಮಾಡುವ, ಈಗಿನ ರಾಜ್ಯಭಾರಕ್ಕೆ ಪೋಷಕವಾಗುವ, ರೌಂಡ ಟೇಬಲಿಗೆ ಬೆಂಬಲ ಕೊಡುವಂಥ ಎಷ್ಟೋ ವಿಷಯಗಳ ಮೇಲೆ ದಿನಾ ಲೇಖಗಳನ್ನು ಬರೆಯುತ್ತ ಸರಕಾರಕ್ಕೆ ತುಂಬಾ ನೆರವಾಗಬೇಕು

[ಟೀಕು:- ಮೇಲ್ಕಾಣಿಸಿದ 'ಪತ್ರಕರ್ತರಿಗೆ ಸೂಚನೆ'ಗಳನ್ನು ಬಂಗಾಲ-ಮುಂಬಯಿ ಮೊದಲಾದ ಕಡೆ ನಡೆಯುವ ಪ್ರಕಾರಗಳ ಮೇಲಿಂದ ನಾನು ಸೂಚಿಸಿದ್ದೇನೆ ಇತರ ಸೂಚನೆಗಳನ್ನು ದೇಶದೊಳಗೆ ಎಲ್ಲೆಲ್ಲಿ ನಡೆಯುವ ವರ್ತಮಾನಗಳ ಪರಾಂಬರಿಕೆಯಿಂದ ನಿರ್ದೇಶಿಸಿದ್ದೇನೆ ಎಲ್ಲ ಸೂಚನೆಗಳು ಎಲ್ಲ ಗ್ರಾಮಗಳಿಗೆ, ಪ್ರಾಂತಗಳಿಗೆ ಯಾ ಪತ್ರಗಳಿಗೆ ಸಂಪೂರ್ಣ ಸಂಬಂಧಪಟ್ಟಿಲ್ಲ, ಸ್ಥಳಿಕ ಪರಿಸ್ಥಿತಿ ನೋಡಿ ಅಲ್ಲಲ್ಲಿಯ, ಪೋಲೀಸರ-ಅಧಿಕಾರಿಗಳ ಮನಮೂಲಿಯಂತೆ ಈ ಸೂಚನೆಗಳಲ್ಲದೆ ಬೇಕಾದ ಸೂಚನೆಗಳನ್ನು ಜನರು ಗ್ರಹಿಸಿ ಆತ್ಮಕ್ಷೇಮ ಸಾಧಿಸಿಕೊಳ್ಳಬೇಕು ಈ ಸೂಚನೆಗಳಲ್ಲಿ ಅವಶ್ಯ ತಿದ್ದುಪಾಡುಗಳನ್ನು ನನಗೆ ತಿಳಿಸಬೇಕು ಯಾರು ತಿಳಿಸುವರೊ ಅವರಿಗೆ ತುಂಬಾ ಉಪಕೃತನಾಗುವೆನು

—ಅಪ್ಪಸಿದ್ಧ]

ಎಲ್ಲೆಲ್ಲೂ ದುಡ್ಡಿನ ಬರ!

—ಮುಂಬಯಿ ಕಾಯದ ಕೌನ್ಸಿಲಿನ ಅಧಿವೇಶನ ನಡೆದದೆ. ಮುಂಬಯಿ ಸರಕಾರದ ಜಮಾ-ಖರ್ಚಿನ ಪತ್ರಿಕೆ ಪ್ರಕಟವಾಯಿತು ಉತ್ಪನ್ನ ೧೪ ಕೋಟಿ [illegible] ಲಕ್ಷ, ಖರ್ಚು ೧೫ ಕೋಟಿ ೫೮ ಲಕ್ಷ! ೧ ಕೋಟಿ ೧೦ ಲಕ್ಷ ರೂಪಾಯಿ ತುಟ್ಟಿಯಾಗುತ್ತದೆ. ಮುಂಬಯಿ ಸರಕಾರಕ್ಕೆ ೨೫ ಕೋಟಿ ರೂಪಾಯಿ ಸಾಲವಿದೆ, ಈ ಬಗ್ಗೆ ವರ್ಷಾಸನ ೨ ಕೋಟಿ ರೂಪಾಯಿ ಬಡ್ಡಿ ತೆರಬೇಕು ಮುಂದಿನ ವರ್ಷ ೨೩ ಕೋಟಿ ರೂಪಾಯಿ ತುಟ್ಟಿ ಬರುತ್ತದೆ. ಅವನ್ನು ತುಂಬುವದಕ್ಕಾಗಿ ಹೊಸ ತೆರಿಗೆಗಳನ್ನು ಹೇರಬೇಕೆಂದು ಗೊತ್ತಾಗಿದೆ ಹೊಸ ತೆರಿಗೆಗಳಿಂದ ೫೮ ಲಕ್ಷ ರೂಪಾಯಿ ಹುಟ್ಟುವವು ಹೋದಿ ಉಳಿದ ೭೨ ಲಕ್ಷ ರೂಪಾಯಿಗಳಲ್ಲಿ ೩೯ ಲಕ್ಷ ರೂಪಾಯಿಗಳನ್ನು ಹಿಂದುಸ್ಥಾನ ಸರಕಾರದಿಂದ ಸಾಲ ಕೊಂಡು, ೬ ಲಕ್ಷ ರೂಪಾಯಿಗಳ ಖಾತೆಗಳನ್ನು ಕಡಿಮೆ ಮಾಡಬೇಕಾಗಿ ಗೊತ್ತಾಗಿದೆ ಆದಾಗ್ಯೂ, [illegible] ಖರ್ಚ ಬಾಯಿಗೂಡದ್ದರಿಂದ ಮುಂಬಯಿ ಸರಕಾರದ ಜಮಾ-ಖರ್ಚಿನ ಖಾತೆಗಳನ್ನು ಪರಾಂಬರಿಸಿ ಖರ್ಚು ತಗ್ಗಿಸುವ ವಿಚಾರ ಮಾಡುವದಕ್ಕಾಗಿ ಸರ್ ಫ್ರೆಡರಿಕ್ ಗೋಂಟಲೇಟ್‌ರವರ ಅಧ್ಯಕ್ಷತೆಯಲ್ಲಿ ಒಂದು ಆಲೋಚನಾ ಮಂಡಳ ನೇಮಿಸಲ್ಪಟ್ಟಿದೆ. ಈಗ ಮುಂಬಯಿ ಸರಕಾರದಲ್ಲಿ ೩ ಮಂದಿ ದಿವಾಣರೂ, ೩ ಮಂದಿ ಸರಕಾರಿ ಪ್ರಧಾನರೂ ಇದ್ದಾರೆ ಅವರೊಳಗಿನ ಒಬ್ಬೊಬ್ಬ ದಿವಾಣ-ಪ್ರಧಾನರಿಗೆ ಕಡಿಮೆ ಮಾಡಬೇಕಾಗಿ ಗೊತ್ತಾಗಿದೆ ಶಿಕ್ಷಣ ಖಾತೆಯ ಗ್ರಾಂಟಿಗೆ ನಿಯಮಾಂಶದಿಂದ ಕತ್ತರಿ ಹಾಕಬೇಕಾಯಿತಾಗಿ ಕೋಶಾಧಿಕಾರಿಗಳು ವ್ಯಸನಪಡುತ್ತಾರೆ. ಕಾಯಿದೆಭಂಜಕರೊಡನೆ ತಾವೆಂದೆಂದಿಗೂ, ಎಷ್ಟೂ ಸಂಧಾನ ಮಾಡಿಕೊಳ್ಳಲಿಕ್ಕಿಲ್ಲವಾಗಿ ಗವರ್ನರರು ಕಾಯದೆ ಕೌನ್ಸಿಲಿನಲ್ಲಿ ಕೊಟ್ಟ ಭಾಷಣದಲ್ಲಿ ನುಡಿದರು. "ರಾಷ್ಟ್ರೀಯ ಸಭೆಗೆ ಎಂದೆಂದಿಗೂ ಸಹಾಯ ಮಾಡಬೇಡಿರಿ, ಸಂಕಟಕ್ಕೆ ಗುರಿಯಾಗುವಿರಿ, ಸರಕಾರಕ್ಕೆ ಸಹಾಯ ಮಾಡಿರಿ ಇಲಾಖೆಯ ಕೀರ್ತಿಯನ್ನು ಬೆಳಗಿಸಿರಿ!" ಹೀಗೆ ನಮ್ಮ ಗವರ್ನರರು ತಮ್ಮ ಭಾಷಣದಲ್ಲಿ ನುಡಿದು, ಜನತೆಯ ಕಡೆ ಸಹಕಾರ ಮಾಡಲು ಕೈಯೊಡ್ಡಿದ್ದಾರೆ

— ಹಿಂದುಸ್ಥಾನ ಸರಕಾರಕ್ಕೂ ಹಣದ ಅಡಚಣಿ ಸಿಕ್ಕ ಬಳಿಗ ಹಣಾನುಕೂಲತೆಯಿಲ್ಲದೆ ಸರಕಾರವು ಬೇಂಕಿನಲ್ಲಿ ೧೫ ಕೋಟಿ ರೂಪಾಯಿಗಳ ಸಾಲ ತೆಗೆದಿದ ಹೊಸ ನೋಟುಗಳ ಛಾಪಣಾವಳಿ ನಡೆದಿದೆ ೩೯ ಕೋಟಿ ರೂಪಾಯಿಗಳ ಹೊಸ ನೋಟುಗಳಾದವು ಹೊಸದಾಗಿ ೨೦ ಕೋಟಿ ರೂಪಾಯಿಗಳನ್ನು ಟಂಕಸಾಲೆಯಿಂದ ಹೊರಡಿಸಿದರು, ಆದಾಗ್ಯೂ ಹಣ ಸಾಲುವದಿಲ್ಲ ಕಾಯಿದೆಯಂತೆ ಇನ್ನು ೪ ಕೋಟಿ ರೂಪಾಯಿಗಳ ತನಕ ಬೇಂಕು ಸರಕಾರಕ್ಕೆ ಸಾಲ ಕೊಡಬಲ್ಲದು ಟ್ರೆಝರಿ ಬಿಲ್ಲಿನ ೧೫ ಕೋಟಿ ರೂಪಾಯಿ ಸಾಲ, ಇದೇ ತಿಂಗಳಲ್ಲಿ ತೀರಿಸಬೇಕು. ಅದಕ್ಕೆ ಹಣ ಬೇಕು ಅದನ್ನು ಹ್ಯಾಗೆ ನೀಗಿಸುವದೆಂದು ಹಿಂದುಸ್ಥಾನ ಸರಕಾರವು ವಿಚಾರಮಾಡುತ್ತಿದೆ ಇನ್ನು ಹೊಸ ತೆರಿಗೆ ಹೇರಲು ಮಧ್ಯ ಕಾಯದ ಕೌನ್ಸಿಲಿನಲ್ಲಿ ಮಾಡಿದ ಸೂಚನ ಬಿದ್ದುಹೋಯಿತು. ದಿನೇ ದಿನೇ ವ್ಯಾಪಾರ ಕುಗ್ಗುತ್ತ ನಡದದ್ದರಿಂದ ಬಾಗಿಬಂದಿ ಕಸ್ಟಮ್ ಖಾತೆಯ ಉತ್ಪನ್ನ ಕುಗ್ಗುತ್ತಲಿದೆ ಸಪ್ಟಂಬರದಿಂದ ಡಿಸೆಂಬರದ ವರೆಗಿನ ೪ ತಿಂಗಳಲ್ಲಿ ಸರಕಾರಕ್ಕೆ ೩೩ ಕೋಟಿ ರೂಪಾಯಿ ಸಾಲ ತೆಗೆಯುವ ಪ್ರಸಂಗ ಬಂತು— ಈತನಕ ೭೩ ಕೋಟಿ ರೂಪಾಯಿ ಸಾಲವಾಗಿದೆ ಇನ್ನು ವರ್ಷ ಮುಗಿಯಲು ೬ ವಾರಗಳಿವೆ ಇನ್ನೆಷ್ಟು ಕೋಟಿ ರೂಪಾಯಿ ಬೇಕೆಂದು ಈಗ ಹೇಳಲಸಾಧ್ಯ!

— ಬ್ರಿಟಿಶ ಸಾಮ್ರಾಜ್ಯ ಸರಕಾರಕ್ಕೂ ಹಣದ ಅಡಚಣೆ ಹಿಂದುಸ್ಥಾನದಿಂದ ರಫ್ತಾದ ಚಿನ್ನವನ್ನು ಅಮೇರಿಕಾ-ಫ್ರಾನ್ಸ ಮೊದಲಾದ ದೇಶಗಳಿಗೆ ಕಳುಹಿ ಬ್ರಿಟಿಶ ಸರಕಾರವು ಸಾಲದ ಜನವರಿ ತಿಂಗಳ ಕಂತ

ನ್ನ ತೀರಿಸಿತು, ಈಗ ಈ ತಿಂಗಳ ಕಂತು ತೀರಿಸಬೇಕು, ಅದಕ್ಕೆ ಚಿನ್ನವಿಲ್ಲ. ವ್ಯಾಪಾರದ ಸರಕು ಮಾರಾಗುವದಿಲ್ಲ. ಗ್ಲಾಸಗೋ ಪಂಕಿಗಳು ಮರಗಳು ಸ್ತಬ್ಧವಾಗಿ ನಿಂತಿವೆ, ಇನ್ನು ಹೊಸ ಹಡಗ ಕಟ್ಟುವ ಮಾತು ಹಾಗಿರಲಿ, ಇದ್ದ ಹಡಗಗಳಿಗ ಸರಕು ತರ ಒಯ್ಯುತಿಗವೆ ಕಂಪನಿಯವರಿಗ ಕಷ್ಟ-ನಷ್ಟ! ಇದರಿಂದ ಪ್ರತ್ಯಕ್ಷ ಚಿನ್ನವನ್ನೇ ಕಳಿಸಿ ಸಾಲ ತೀರಿಸಬೇಕು. ಅದಕ್ಕಾಗಿ ಇಂಗ್ಲಂಡಿನ ಸರಕಾರಿ ಬೇಂಕಿನಲ್ಲಿ ಎಲ್ಲಿಯ ಚಿನ್ನ ಕೇಳಿಸಿಕೊಂಡ ಜನರಿಗೆ ಹುರಿಮುಂಬಿಸುತ್ತಿದ್ದಾರೆ. ಸಾಮ್ರಾಜ್ಯ ಸರಕಾರವು ಎಲ್ಲ ತೀರು ಕೋಲುತಗಳನ್ನು ಪ್ರೋತ್ಸಾಹಿಸಿ [illegible] ಟಪಾಲಿನಲ್ಲಿ ಹಣ ಪಾಡರ ಮಾಡಿದರೆ ಅದನ್ನು ಬೇಂಕಿಗೆ ಕಳಿಸುವಂತ ವ್ಯವಸ್ಥೆಯಾಗುತ್ತದ. ಸದ್ಯಕ್ಕೆ ಇಂಗ್ಲಂಡ ಬೇಂಕಿನಲ್ಲಿ ಹಿಂದುಸ್ಥಾನದಿಂದ ರವಾನಿಸಿದ ೯೦ ಲಕ್ಷದ ಚಿನ್ನವನ್ನೇ ಇದ ಆಗಸ್ಟ ತಿಸ್ಯರಿಗೆ ೨ ಕೋಟಿ ಪವನು ಸಾಲ ತೀರಿಸಬೇಕು ಇದರಿಂದ ಪವನು ಚಿನ್ನದ ದರ ಏರಿತು! ಏರಿದ ಪ್ರಮಾಣ ನೋಡಿದರೆ ಕಣ್ಣಿಗೆ ಕತ್ತಲೆ ಎದುರ್ತ್ತದ. ಪವನು ನೋಟಿನ ದರ ಇದ್ದಂತೆಯೇ! ಪವನಿಗ ೫೦ ಶಿಲಿಂಗಿನ ಕೋಷ್ಟಕ [illegible] ಶಿಲಿಂಗು ಕೊಟ್ಟು ೧೧ ಪವನು ಸಿಗುತ್ತಿತ್ತು. ಪವನಿನ ನೋಟು ಬೇಕಾದರ ನೋಟು, ನಾಣ್ಯ ಬೇಕಾದರೆ ನಾಣ್ಯ ಸಿಗುತ್ತಿತ್ತು. ಈಗ ಫೇಬ್ರುವರಿ ೧೧ನೇ ತಾರೀಖಿಗೆ ನಾಣ್ಯಕ್ಕೆ ೫೭ ಶಿಲಿಂಗಾಯಿತು. ಚಿನ್ನ ಅಮ್ಯುಕ್ತ ಯಾದಿಂದ ಬರಲಿಲ್ಲ, ವರ್ತಮಾನಪತ್ರಗಳಲ್ಲಿ ಚಿನ್ನ ಬೇಕು, ಚಿನ್ನ ಕಳಿಸಿರಿ, ತ್ವರ ಮಾಡಿರಿ!! ಮುಂತಾದ ದೊಡ್ಡದೊಡ್ಡ ಅಕ್ಷರಗಳ ಪ್ರಕಟಣೆಯ ಜಾಹೀರಾತಗಳು ಹೊರಟವು. ನಾಣ್ಯದ ದರ ಏರಿತು! ಆರು ದಿನಗಳಲ್ಲಿ ಪವನು ನಾಣ್ಯಕ್ಕೆ ೬೭ ಶಿಲಿಂಗು ದರವಾಯಿತು! ಜನರು ಗಡಿಯಾರ ಗಡಿಗಾರದ [illegible] ಕರಿ ಕನ್ನಡಕದ ಚೌಕಟ್ಟು, ಚಿನ್ನದ ಹಲ್ಲಿ ಗುಣ್ಣ ಸಹ ಮಾರಲಾರಂಭಿಸಿದ್ದಾರೆ. ಚಿನ್ನದ ವರ್ತಕರಿಗೆ ಮಾರಲು ದಿನವೂ ಯಿಲ್ಲ. ಹೇಳಿದ [illegible] ದರ ಸಿಗದಿದ್ದರೆ ಈ ಮುಷ್ಟಿನ ಒದ ಬರಲಿಲ್ಲ [illegible] ನೋಡದ, ಏನಾದು ಕಾ[illegible] ನಷ್ಟ ಹೊಂದು ಕಲ್ಪಿಸಲಸಾಧ್ಯ! ಬ್ರಿಟಿಶ ದೇಶದ ೧೯೩೦ನೇ ಇಸ್ವಿಯ ಲೆಕ್ಕ ಪ್ರಕಟವಾಗಿದ ದಕ್ಕಿಗಿಂತ ಆಮದು ಯಾವಾಗಲೂ ಕಡಿಮೆಯಿರುತ್ತಿತ್ತು, ಬ್ರಿಟಿಶ ದೇಶಕ್ಕೆ ಯಾವಾಗಲೂ ಪರರಾಷ್ಟ್ರಗಳಿಂದ ಹಣ ಸಲ್ಲುವದಿರುತ್ತಿತ್ತು. ೧೯೨೯ನೇ ಇಸ್ವಿಯಲ್ಲಿ ೧೦೦ ಕೋಟಿ ಪವನು, ೧೯೩೦ನೇ ಇಸ್ವಿಯಲ್ಲಿ ೭ ಕೋಟಿ ೯೦ ಲಕ್ಷ ಪವನು ಬ್ರಿಟಿಶ ದೇಶಕ್ಕೆ ಸಲ್ಲುವದಾಗುತ್ತಿತ್ತು. ೧೯೩೧ನೇ ಸಾಲಿನಲ್ಲಿ ೧೧ ಕೋಟಿ ಪವನು ಬ್ರಿಟಿಶ ದೇಶದಿಂದ ಪರರಾಷ್ಟ್ರಕ್ಕೆ ಸಲ್ಲಬೇಕಾಗಿದೆ! ತಿಂದಿ ತಿನಸು ಬ್ರಿಟಿಶದೇಶದಲ್ಲಿ ಬೆಳೆಯುವದಿಲ್ಲ, ಪರದೇಶಗಳಿಂದ ಬರಬೇಕು. ಸರಕು ಹೆಚ್ಚಾಗಿ ಮಾರಾಟವಾದರ ಮಾತ್ರ ಬ್ರಿಟಿಶ ದೇಶದ ಬಾಳ್ವೆ. ಇಲ್ಲದಿದ್ದರೆ ಕಠಿಣ ಕಾಲ, ದುಃಸ್ಥಿತಿ [illegible]!

ನಾಶಿಕದಲ್ಲಿ ನೋಟು ಹಾಗು ಟಪಾಲು ಸ್ಟಾಂಪು ಛಾಪಿಸುವ ಸರಕಾರಿ ಹೊಸ ಮುದ್ರಣಾಲಯವಿದೆ. ಟಪಾಲು ದರ ಏರಿದ್ದರಿಂದ ಅಂದಾಜಿನಂತೆ ಸ್ಟಾಂಪುಗಳು ಖರ್ಚಾಗದೆ ೧ ಲಕ್ಷ ರೂಪಾಯಿಗಳ ನಷ್ಟ!

ತ್ವರೆ ಮಾಡಿರಿ! ನಿಯಮಿತ ಪ್ರತಿಗಳು ಅಚ್ಚಾಗಿವೆ! ತ್ವರೆ ಮಾಡಿರಿ!!

ವೇ|| ಕೃಷ್ಣ ಶಾಸ್ತ್ರಿ ಅಗ್ನೇಕರ ಇವರಿಂದ ರಚಿತವಾದ ಅಂಗಿರಾನಾಮ ಸಂ||ದ ಸ್ವದೇಶಿ ಪಂಚಾಂಗಗಳು

ಇದೇ ಬರುವ ಮಾರ್ಚ ೪ನೇ ತಾರೀಖಿಗೆ ಮಾರಾಟಕ್ಕೆ ಸಿದ್ಧವಾಗುವವು!!

ಬೇಕಾದವರು ಹಣ ಮುಂಗಡ ಕಳಿಸಿ ಮುಂದಾಗಿ ಆರ್ಡರು ಕೊಡಬೇಕು

ದರವಾರು:— ೧೦೦ಕ್ಕೆ ರೂ ೧೦, ೫೦ಕ್ಕೆ ರೂ ೬, ೨೫ಕ್ಕೆ ರೂ ೩|| ೧ಕ್ಕೆ ೨ ಆಣೆ.

ಪತ್ತಾ - ಮೆನೇಜರ "ಸ್ಟಾರ ಆಫ್ ಕೆನರಾ" ಪ್ರೆಸ್ ಕುಮಟಾ. (ಉ ಕನ್ನಡ)

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೩೧-೩೨) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ

"ಪಾಫ್" ಹೊಲಿಗೆ ಮಶೀನುಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!

ಹಾಗು

ಬೇಕಾದ ಬಿಡಿ ಭಾಗಗಳು ಸಹ ದೊರೆಯುತ್ತವೆ!!

ಈ ಮಶೀನುಗಳು

ನೋಡಲಿಕ್ಕೆ ಚಂದವೂ, ನಡಿಸಲಿಕ್ಕೆ ಸುಕರವೂ, ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ ಏಜಂಟರು.—

ಶಂಕರ ಅಪ್ಪಾಜಿರಾವ ವಾಘ,
ಮೆನೇಜರ, ಕುಲಕರ್ಣಿ-ವಾಘ ಎಂಡ್ ಕಂಪನಿ,
ಶಾಂತಿಭುವನ, **ಕಾರವಾರ.**

ಸಿರ್ಸಿ ಏಜಂಟರು — ಕಾಮತ ಬ್ರದರ್ಸ.
ಕುಮಟಾ ಏಜಂಟರು — ಶಂಕರ ಅಪ್ಪಾಜಿರಾವ ವಾಘ
ಹೊನ್ನಾವರ ಏಜಂಟರು.— ಕರ್ಕಿ ಮಂಜಪ್ಪಾ ಗಣೇಶ ಶೇಟ

The Bombay Provincial Cooperative Insurance Society Ltd

9 Bakehouse Lane, FORT, BOMBAY.
Chief Organisers for the Presidency -
JANI, KULKARNI & CO,

ಈ ಸೊಸ್ಯಾಟಿಯನ್ನು ಮುಂಬಯಿಯೋಗಿನ ಮುಖ್ಯ ಮುಖ್ಯ ಸಹಕಾರಿಗಳು ಹೊರಡಿಸಿದ್ದಾರೆ ಸಹಕಾರಿ ಸಂಘಗಳ ರಜಿಸ್ಟ್ರಾರರು ಇದರ ಮೇಲ್ತಪಾಸ ಮಾಡುತ್ತಾರೆ.

ರೂ. ೧೦೦೦ರಿಂದ ರೂ ೨೫೦೦ರ ತನಕ ಡಾಕ್ಟರ ಪರೀಕ್ಷೆಯಿಲ್ಲದ ವಿಮೆ ಪತ್ರಗಳು ಕೊಡಲ್ಪಡುತ್ತವೆ

ರೂ ೨೫೦೦ರಿಂದ ರೂ ೫೦೦೦ದ ತನಕ ವಿಮೆ ಪತ್ರಗಳನ್ನು ಪಡೆಯಬೇಕಾದರೆ, ಡಾಕ್ಟರರಿಂದ ಪರೀಕ್ಷೆಯಾಗಬೇಕು

ಕೊಓಪರೇಟಿವ್ ಸೊಸ್ಯಾಟಿಯ ಆಕ್ಟಿನಂತೆ ಈ ಸೊಸ್ಯಾಟಿಗೆ ಎಲ್ಲಾ ಹಕ್ಕುಗಳಿವೆ

ಏಜನ್ಸಿ ಕೊಳ್ಳಲಿಚ್ಛಿಸುವವರು ಕರಾರು ಮತ್ತು ಉದ್ದೇಶ ಪತ್ರಿಕೆಗಳಿಗಾಗಿ ಈ ಕೆಳಗ ಕೊಟ್ಟ ಪತ್ತೆಗ ಬರಕೊಳ್ಳಬೇಕು

ಏಜನ್ಸಿ ಕೊಡುವಾಗ ಸಹಕಾರಿ ಸಂಘಗಳಿಗೆ
ಹೆಚ್ಚಿನ ಪ್ರಾಶಸ್ತ್ಯವಿಟ್ಟದೆ

ಡಿ. ಎಸ್. ಕುಲಕರ್ಣಿ,
ಕಾಜುಬಾಗ ಕಾರವಾರ.

ಸ್ಥಾನಿಕ ವೃತ್ತಾಂತ.

ಕುಮಟೆ—— ಈ ಪತ್ರದಲ್ಲಿ ಈ ತಾಲೂಕಿನೊಳಗೆ ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟು-ಪ್ರಕಾರವನ್ನು ಗಳನ್ವಯ ಅನೇಕರಿಗೆ ಸರಿಹೋದ ಶಿಕ್ಷೆ ವಿಧಿಸಲಾಯಿತು. ಕಳೆದ ತಾ ೧೯ನೇ ಸಂಚಿಕೆಯ ಅಂಕೋಲೆಯ ವೃತ್ತಾಂತದಲ್ಲಿ, "ಈಗ ಅಂಕೋಲೆಯಲ್ಲಿ ೫ನೇ ಸರ್ವಾಧಿಕಾರಿಗಳ ವಿದ್ಯಮಾನ ರಾಷ್ಟ್ರೀಯ ಸಭೆಯ ಕೆಲಸ ನಡೆದಿದೆ. ಸೌ| ಭಾಗೀರಥಿಬಾಯಿ ಗಣೇಶಕಾಮತರವರು ಈಗಿನ ಸರ್ವಾಧಿಕಾರಿಗಳು" ಎಂಬ ವಾಕ್ಯವನ್ನುಳ್ಳದು ಪ್ರಕಟವಾಯಿಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕ್ರಮಕ್ಕೆ ಬೆಂಬಲ ಕೊಟ್ಟಂತಾಗುತ್ತದಾಗಿ ಡಿ| ಮೆಜಿಸ್ಟ್ರೇಟರು ಅಭಿಪ್ರಾಯಪಟ್ಟು ಅಲ್ಲಿಯ ಫೌಜದಾರರಿಗೆ ಈ ಪತ್ರದ ಸಂಪಾದಕರ ಮೇಲೆ ಖಟ್ಲೆ ದಾಖಲಿಸಲು ಅಪ್ಪಣೆ ಕೊಟ್ಟಂತೆ, ಗುರುವಾರ ತಾ ೧೮ರೇಗೆ ಸಂಪಾದಕರಿಗೆ ಸರಿಹೋದ ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರ ಸಮಾರ ಕೋರ್ಟಿನಲ್ಲಿ ಅದೇ ದಿನ ಅಪರಾಧ ವಿಚಾರವಾಗಿ ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟಿನ ೧೯(೧)ನೇ ಕಲಮಿನಂತೆ ರೂ ೨೦೦ ದಂಡ ಇಲ್ಲವೆ ೬ ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತು. ಅದೇ ದಿನ ಸಾಯಂಕಾಲ ದಂಡದ ರಕಮು ತುಂಬಲಾಯಿತು. ಈ ಕುರಿತಿನ ಮೇಲೆ ಅಪೀಲಾಗುವದಿದೆ

ಕಾಯಿದೆಭಂಗದಲ್ಲಿ ಮೊದಲೇ ಪ್ರಕಾಶ ಸೇರಿದಂತೆ ಇಲ್ಲಿಯ ಶ್ರೀ ಪ್ರಮೋದರಾವ ಕಲ್ಯಾಣಪುರಕರ-ಮನೆಯವರ ಮೇಲೆ ಜಾರಿ ಮಾಡಿದ ನೋಟೀಸಿನ ಅವಧಿ ಜುಲೈ ೧೩ನೇ ತಾರೀಖಿನ ತನಕ ಬೆಳೆಸಲ್ಪಟ್ಟಿದೆ ಅವಧಿ ಬಗ್ಗೆ ಸಿದ್ದು ಮುಂದಿಯ ಸರಕಾರದ್ದು, ಜೂನ ನೋಟೀಸು ಕೊಟ್ಟವರು ಡಿಸ್ಟ್ರಿಕ್ಟ ಮೆಜಿಸ್ಟ್ರೇಟರು

ಶನಿವಾರ ತಾ ೬ನೇ ಪ್ರಭಾತ ಫೇರಿಯಲ್ಲೂ, ರವಿವಾರ ತಾ ೭ನೇ ೧ರ ಮೋತಿಲಾಲರ ಪುಣ್ಯದಿನದ ಪ್ರೀತ್ಯರ್ಥ ಹರತಾಳ ಮೆರವಣಿಗೆಯಲ್ಲೂ ಸೇರಿದ್ದ ಶ್ರೀ ಹನುಮಂತ ಅಣ್ಣಪ್ಪ ಪೈ ಕಾಗಾಲ ಮೊದಲಾದವರ ಮೇಲಿನ ಖಟ್ಲೆ ವಿಚಾರವು ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟರ ಸಮಾರ ಕೋರ್ಟಿನಲ್ಲಿ ತಾ ೧೬ನೇಗೆ ವಿಚಾರವಾಯಿತು ಎಲ್ಲರಿಗೆ ೬-೬ ತಿಂಗಳ ಸಜೆ ಮತ್ತು ೧೦-೧೦ ರೂಪಾಯಿ ದಂಡ ದಂಡ ಕೊಡದಿದ್ದರೆ ೧-೧ ತಿಂಗಳ ಸಜೆ, ಡಾ| ಗಣಪತಿ ಪ್ರಭಾಕರಶೇಟರ ಇವರಿಗೆ ಮಾತ್ರ ೬ ತಿಂಗಳ ಸಜೆ, ೩೦ ರೂಪಾಯಿ ದಂಡ, ಇವೆಲ್ಲ ಶಿಕ್ಷೆಗಳು ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟಿನ ಕಲಮು ೧೯(೧)ರ ಅನ್ವಯ ವಿಧಿಸಲ್ಪಟ್ಟವು. ಅದೇ ದಿನ ದಾರೇಶ್ವರದಲ್ಲಿ ಜಂಗಲ ಸತ್ಯಾಗ್ರಹ ಮಾಡಿದ ಬಗ್ಗೆ ೩ ಜನರಿಗೆ ಹಿಡಕೊಂಡರು ಅವರ ಕೇಸು ಇಲ್ಲಿಯ ಸಮಾರ ಕೋರ್ಟಿನಲ್ಲಿ ನಡೆದು ಇವರಿಗೆ ೯ ತಿಂಗಳ ಸಜೆ, ಒಬ್ಬನಿಗೆ ೬ ತಿಂಗಳ ಸಜೆ ವಿಧಿಸಲ್ಪಟ್ಟಿತು ಗುರುವಾರ ಇಲ್ಲಿಯ ಗೋಮಾಳ ವ್ಯಾಪಾರಿ [illegible] ಎಂಬ ಹುಡುಗನು [illegible] ರಾಜಹಂಸ-ಜನ್ಮಭೂಮಿ ಪತ್ರಿಕೆಗಳನ್ನು — ಸರದಿಗಳನ್ನು ಗಟ್ಟಿಯಾಗಿ ಕೂಗುತ್ತ— ಮಾರಾಟ ಮಾಡುತ್ತಿದ್ದನು ಒಂದು ಸದರು 'ಮೆಜಿಸ್ಟ್ರೇಟರ ಮೇಲೆ ಮಜ್ಜಿ ಬಿಗಿದನು' ಎಂಬುದಾಗಿತ್ತು, ಹೀಗೆಯೇ ಆತನು ಓದುತ್ತ ನಡೆದಿದ್ದನು ಆಸ್ಪತ್ರೆಯ ಬಳಿ ಸಹ ಆತನು ಹಾಗೇ ಓದುವದನ್ನು ನೆರೆಯಲ್ಲಿಯೇ ಮೆಜಿಸ್ಟ್ರೇಟರು ಕೇಳಿಕೊಳ್ಳುತ್ತಾರೆ ಪಟ್ಟೇವಾಲನು ಹುಡುಗನಿಗೆ ಹಿಡಿದನು, ಆತನ ಬಳಿಯಿದ್ದ ರಾಜಹಂಸ-ಜನ್ಮಭೂಮಿ ಪತ್ರಿಕೆಗಳನ್ನು ಮೆಜಿಸ್ಟ್ರೇಟರು ಜಪ್ತ ಮಾಡಿದರು ಬಳಿಕ ಆ ಪ್ರತಿಗಳು ಹರಿಯಲ್ಪಟ್ಟವು. 'ಮೆಜಿಸ್ಟ್ರೇಟರ ಮೇಲೆ ಮೆಟ್ಟುಹೊಡೆದನು," ಎಂದು ಓದುತ್ತಿದ್ದನಾಗಿ ಆ ಹುಡುಗನಮೇಲೆ ಆಪಾದನೆ ಹುಡುಗನು ಅದನ್ನು ನಿರಾಕರಿಸಿದನು, ಸದರಿನಲ್ಲಿದ್ದಂತೆ ಓದುತ್ತಿದ್ದನಾಗಿ ಆತನು ನುಡಿದನು, ಹುಡುಗನು ಖಟ್ಲೆಯಲ್ಲಿ ಸ್ವತಃ ಬಚಾವು ಮಾಡಿದನು, ಡಾಕ್ಟರರಿಗೆ ಸಾಕ್ಷಿಗೆ ಕರೆದನು. ಎರಡೂ ವಾಕ್ಯಗಳರ್ಥ ಒಂದೇ ಎಂದು ಡಾಕ್ಟರರು ನುಡಿದರು, ಸದರು ಕೂಗುತ್ತಿದ್ದನಾಗಿ ಹೇಳಿದರು. ಮೆಜಿಸ್ಟ್ರೇಟರು ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟಿನ ಕಲಮು ೧೯ (೨) ರನ್ವಯ ಆತನಿಗೆ ೬ ತಿಂಗಳ ಕಠಿಣ ಸಜೆ ವಿಧಿಸಿದರು ಗೋಕರ್ಣದಿಂದ ಡಾ| ಪಶುಪತಿ ಭಟ್ಟ ಕೊಡ್ಲಕೆರೆ ರಾಮ ಭಟ್ಟ, ಕುಂಟಕೋಣದಿಂದ ರಾ| [illegible] ಸಾವರ್ಕರ, ವಿಠ್ಠಲ ನಾಡಕರ್ಣಿ, ಮಾಸ್ಕೇರಿಯಿಂದ ರಾ| ತಿಮ್ಮಣ್ಣ ರಾಮ ನಾಯ್ಕ ಮೊದಲಾದ ೧೬ ಜನರು ಸ್ವಯಂಸೇವಕರಾಗಿ ಪ್ರಭಾತ ಫೇರಿ ಹೊರಡಿಸಿ ರಾಷ್ಟ್ರೀಯ ಸಭೆಗೆ ಸೇರಿದರೆಂದು ಅವರ ಮೇಲೆ ರಾಜದ್ರೋಹದಂತೆ ಖಟ್ಲೆ ನಡಿಸಿ ಅವರಿಗೆ ೬-೬ ತಿಂಗಳ ಕಠಿಣ ಸಜೆ ಮತ್ತು ದಂಡ ವಿಧಿಸಲ್ಪಟ್ಟಿತು. ದಂಡ ಕೊಡದಿದ್ದರೆ ಇನ್ನು ೧-೧|| ತಿಂಗಳ ಕಠಿಣ ಸಜೆಯಾಗಿದೆ ಇವರೆಲ್ಲರಿಗೆ ಕಾರವಾರಕ್ಕೆ ರವಾನೆಯಾಯಿತು ಈ ಖಟ್ಲೆಯೊಳಗೆ ಧ್ವಜಗಳನ್ನೂ, ತುತೂರಿಗಳನ್ನೂ ಜಪ್ತ ಮಾಡಿ ತಂದಿದ್ದರು

ಇಲ್ಲಿ ಧ್ವಜ ಕಟ್ಟಿದು ಕೆಡಿಸಿದ ದಿನ ಸರಿಹೋದರೊಬ್ಬರು ರಾಘವೇಂದ್ರ ಮಹಾದೇವ ಕಾಮತ ಮೊದಲಾದ ೬ ಜನರ ಮೇಲೆ ಕಾರವಾರ ಮುಕ್ಕಾಮಿನಲ್ಲಿ ಸಬಡಿವಿಜನಲ್ ಮೆಜಿಸ್ಟ್ರೇಟರ ಸಮಾರ ಕೋರ್ಟಿನಲ್ಲಿ ವಿಚಾರ ನಡೆಯಿತು ಪ್ರತಿಯೊಬ್ಬರಿಗೆ ೬-೬ ತಿಂಗಳ ಸಜೆ ೨೦-೪೦ ರೂಪಾಯಿಗಳ ದಂಡವಾಯಿತು ದಂಡ ಕೊಡದಿದ್ದರೆ ರೂಪಾಯಿಗೊಂದು ದಿನದಂತೆ ಹೆಚ್ಚಿನ ಸಜೆ ವಿಧಿಸಲಾಗಿದೆ

ಡಾ| ಗಣಪತಿ ಪ್ರಭಾಕರಶೇಟರ ಇವರ ೩೦ ರೂಪಾಯಿ ದಂಡ ವಸೂಲಿಗಾಗಿ ಅವರ ತಂಗಿದ್ದಂದಿನ ಮನೆಯಲ್ಲಿ ಕೆಲವು ಹಣ ಮತ್ತು [illegible] ತಾ. ೧೩ನೇಗೆ ಜಪ್ತಾಯಿತು ಡಾ| ಪ್ರಭಾಕರಶೇಟರು ಇದರಲ್ಲಿಯೇ [illegible]ತ್ತಿದ್ದರು

ನಾಡುಮಾಸ್ಕೇರಿ, ಗೋಕರ್ಣ, ಬಗರಗೋಣ ಗಂಗಾವಳಿ ಮೊದಲಾದ ನೆರೆಹೊರೆಯ ಗ್ರಾಮದ ಸುಮಾರು ೨೦೦ ಜನರು ತಾ ೧೪ನೇಗೆ ಬೆಟ್ಟಕ್ಕೆ ಹೋಗಿ ಕಾಗಮಾನಿ ಕಟ್ಟಿಗೆ ಕಡಿದು ತಂದು ನಾಡುಮಾಸ್ಕೇರಿಯೊಳಗಿನ ನೆಹರೂ ಚೌಕಿನಲ್ಲಿ ಜಾಹೀರ ಸಭೆ ಸೇರಿತು ರಾ| ತಿಮ್ಮಣ್ಣ ಸುಬ್ಬಯ್ಯ ನಾಯ್ಕರು ಒಳ್ಳೇ ಭಾಷಣ ಮಾಡಿದರು ಅಪರೇಲ ಕಟ್ಟಿಗೆಯ ಲಿಲಾಂವು ನಡೆಯಿತು. ರಾ| ತಿಮ್ಮಣ್ಣಾ ಹಮ್ಮಣ್ಣಾ ಗಾಂವಕರ, ರಾಮಾ ವೆಂಕಣ್ಣಾ ನಾಯ್ಕ, ಹೊನ್ನಯ್ಯ ನಾಗಪ್ಪ ನಾಯ್ಕ, ಕಾವಲಗೇರಿ, ರಾಮಾ ನಾರಾಯಣ, [illegible] ಕೋಂ ಹೊನ್ನಪ್ಪ ನಾಯ್ಕ, ಮಹಾದೇವಿ ಕೃಷ್ಣ ನಾಯ್ಕ (೩ ವರ್ಷದ ಹುಡುಗಿ) ಇವರು ಕಟ್ಟಿಗೆ ಕೊಂಡರು

ರಾ| ಶ್ರೀಧರ ಬಾಳಗಿಯ ಪತ್ತೆ ಇನ್ನೂ ಪೋಲೀಸರಿಗೆ ಹತ್ತಲಿಲ್ಲ. ತಾಲೂಕಿನೊಳಗಿನ ಪಟೇಲರೆಲ್ಲ ರಾ| ಬಾಳಗಿಯ ಪತ್ತೆ ಹೆಕ್ಕಲು ಸಕಾಲದಾಗೆ ಹೋಗಿವೆ. ಆದಾಗ್ಯೂ ಅವರ ಪತ್ತೆಯಾಗಲಿಲ್ಲ ಎಲ್ಲಿದ್ದಾರೆಂಬ ಸುಳುವು ದೊರೆಯಲಿಲ್ಲ ಘಟ್ಟಗಳಿಗೆ ಹೋಗಿದ್ದಾರೆಂದು ಕೆಲವರು, ಊರಲ್ಲಿಯೇ ಇದ್ದಾರೆಂದು ಇನ್ನು ಕೆಲವರು ಮುಂಬಯಿ ಕಡೆ ಹೋಗಿದ್ದಾರೆಂದು ಹಲವರು, ಮನೆಯಲ್ಲಿಯೇ ಅಡಗಿಕೊಂಡಿದ್ದಾರೆಂದು ಅನೇಕರು ಅನುಮಾನಿಸುತ್ತಾರೆ. ಮೊನ್ನೆ ಶನಿವಾರ ಸುಮಾರು ೨೪-೩೦ ಮಂದಿ ಪೋಲೀಸರು ಮನೆಯಲ್ಲಿಯೂ, ಅವರ ಜನಿಕ ತಂದೆಯವರಲ್ಲಿಯೂ, ಧೀರ ರಾ| ಕೃಷ್ಣಾ ಅಣ್ಣಪ್ಪ [illegible] ಇವರಲ್ಲಿಯೂ ಪಹರೆಯಿಟ್ಟು ಝಡತಿ ಮಾಡಿದರು. ಆದರೆ, ಅವರ ಪತ್ತೆ ದೊರೆಯಲಿಲ್ಲ ಎಲ್ಲಿದ್ದಾರೆಂದು ತಿಳಿಯುವದಿಲ್ಲ!

ಕಳೆದ ಶುಕ್ರವಾರ ವರೆಗೆ ಪ್ರಭಾತ ಫೇರಿಗಳು ನಡೆದವು ಯಾರಿಗೂ ಸೆರೆಹಿಡಿಯಲಿಲ್ಲ ಈಗ ಪ್ರಭಾತ ಫೇರಿ ನಿಂತಿವೆ

ಇಂತು ಕೋರ್ಟಿನ [illegible] ಪ್ರಕರಣ ಚೌಕಿಗೆ [illegible] ೧ ಮೊನ್ನೆ ಶನಿವಾರದಿಂದ ಇಲ್ಲಿಯ ತಾಲೂಕ ಬೋರ್ಡ ಕಚೇರಿಯಲ್ಲಿ ಚೌಕಿಗೆ ಪ್ರಾರಂಭವಾಗಿದೆ ಚೌಕಿ ನಡೆಯುವದರಿಂದಲೂ, ಹೀಗೆ ನಡೆಸಿದ್ದರಲ್ಲಿ ಜಿಲ್ಹಾ-ತಾಲೂಕ ಬೋರ್ಡುಗಳೊಳಗಿನ ಸಹಕಾರಕ್ಕೆ ಭಂಗ ಬರುವದಾಗಿಯೂ, ತಾಲೂಕ ಬೋರ್ಡಿನ ಅಧ್ಯಕ್ಷರು ಜಿಲ್ಹಾ ಬೋರ್ಡಿನ ಅಧ್ಯಕ್ಷರಿಗೆ ಉದ್ದುದ್ದ ಪತ್ರ ಬರೆದಿದ್ದರು ಜಿಲ್ಹಾ ಬೋರ್ಡಿನ ಅಧ್ಯಕ್ಷರು ಅದನ್ನು ಸಭಾಸದರ ಅಭಿಪ್ರಾಯಕ್ಕಾಗಿ ಸರ್ಕ್ಯುಲೇಶನ್ನಿಗೆ ಹಾಕಿದ್ದರು.

ಮಂಗಳೂರಿನ ಶ್ರೀ ಪಂಜೆ ಮಂಗೇಶರಾಯರು ಈ ವಾರ ಇತ್ತ ಕಡೆ ಬಂದಿದ್ದರು. ಶ್ರೀ ಗೋಕರ್ಣ ಕ್ಷೇತ್ರದ ಯಾತ್ರೆಗಾಗಿಯೂ ಇತ್ತ ಕಡೆ ಶಾಸನಗಳ ಸಂಶೋಧನಕ್ಕಾಗಿಯೂ ಶ್ರೀಯುತರು ಬಂದಿದ್ದರಂತೆ ಇಲ್ಲಿಯ ಗಿಬ್ಬ ಹೈಸ್ಕೂಲಿನಲ್ಲಿಯೂ, ಕನ್ನಡ ಶಾಲೆಯಲ್ಲಿಯೂ ಇವರ ೨ ವ್ಯಾಖ್ಯಾನಗಳಾದವು ಕನ್ನಡ ಭಾಷೆಯ ಮೇಲಿನ ತಾತ್ಸಾರ ಬಿಟ್ಟು, ಅದನ್ನು ಅಭಿಮಾನದಿಂದ ಕಲಿತು ಅದರ ಅಗಣಿತ ನಿಗೂಢ ಭಂಡಾರವನ್ನು ಕನ್ನಡಿಗರು ಮಮತೆಯಿಂದ ಸವಿದು, ಅಭಿವೃದ್ಧಿ ಹೊಂದ ಬೇಕಾಗಿ ಶ್ರೀಯುತರು ಒತ್ತಿ ಹೇಳಿದರು. ಕನ್ನಡ ವಾಙ್ಮಯವು ವಿಪುಲವಿದೆ, ಮೇಲಾದ ಗದ್ಯ-ಪದ್ಯ ಕಾವ್ಯಗಳಿವೆ, ಎಂಬುದಾಗಿ ಶ್ರೀಯುತರು ತಿಳಿಸಿ ಹೇಳಿದರು

ಮಾದರೂರಿನ ಪಟ್ಟಣದ ಗ್ರಾಮದಲ್ಲಿ ಭತ್ತ ಬೇಯಿಸಲು ಹಾಕಿದ ಒಲೆಯ ಬೆಂಕಿ ಮನೆಯ ಹುಲ್ಲು ಗೋಣಿಗೆ ಹತ್ತಿ, ಹಾಗೆಯೇ ಹುಲ್ಲುಮನೆಗಳಿಗೆ ತಾಗಿ ೧೦ ೧೬ ಮನೆಗಳು ಕಳೆದ ವಾರ ಸುಟ್ಟು ಭಸ್ಮವಾದವು ಗಂಡಸರೆಲ್ಲರೂ ಹೊಲಗೆಲಸಗಳಿಗಾಗಿ ಸೆರೆಯ ಹೊರಗಿನ ಗ್ರಾಮಕ್ಕೆ ಹೋಗಿ [illegible] ದವರ ಮನೆಯಲ್ಲಿ ಸುಮಾರು ೨೦೦— ೩೫೦ ಖಂಡಗ ಭತ್ತದ ಕಣಜಗಳಿದ್ದವು, ಅವೆಲ್ಲ ಸುಟ್ಟು ಹೋಗಿ ಸುಮಾರು ೪-೫ ಸಾವಿರ ರೂಪಾಯಿ ನಷ್ಟವಾಗಿರುವದಂತೆ!

ಹೊನ್ನಾವರ— ತಾ ೧೩ನೇಗೆ ಶ್ರೀ [illegible] ಶಿಕ್ಷೆಯ ದಂಡದ ವಸೂಲಿಯ ಬಗ್ಗೆ ಜಪ್ತಿಯಾಯಿತು [illegible] ಪಾತ್ರೆಗಳಷ್ಟೇ ಇದ್ದವು, ಮತ್ತೇನೂ ಸಿಗಲಿಲ್ಲ. ಆದರಿಂದ ಅಲ್ಲಿ ಜಪ್ತಿಯಾಗಲಿಲ್ಲ ಮಾತ್ರ ೨ ಘಂಟೆಗೆ ಪೋಲೀಸರು ಅವರ ದಫೇದಾರ ಬೀಗ ಮುರಿದರು. ಅವರ ಮನೆಗೆಯ ಮೇಲೆ ಪೋಲೀಸರು ರಾತ್ರಿ ಪಹರೆಯಿಟ್ಟು, ಮಾರನೇ ದಿನ [illegible], [illegible] ಬೆಂಚು, ಕೈಯಲ್ಲಿ ಹಿಡಿಯುವ ಚಿತ್ರ, ಗೋಡೆಗೆ ಹಚ್ಚಿದ ಮಹಾತ್ಮರಾದಿಗಳ ಪಾಠಗಳು ಫೋಟೋ, ಪೆಟ್ಟಿಗೆ ವಸ್ತ್ರ [illegible] ಗುಚ್ಚ ಮೊದಲಾದ ವಿವಿಧ ಸರಂಜಾಮನ್ನು ಜಪ್ತ ಮಾಡಿ ಒಯ್ದರು. ಕಾಯದೆ ಪ್ರಸ್ತಾಪಗಳು ಸಹ ಜಪ್ತಾಗಿವೆ ರೀತಿಯಂತೆ ಪಂಚನಾಮೆಯಾಗಲಿಲ್ಲ. ಪಕ್ಷಗಾರರ ನಂಬರದ ಇಟ್ಟಿಗೆಗಳನ್ನು ಪೋಲೀಸರು ಅಸ್ತ-ವ್ಯಸ್ತ ಮಾಡಿಬಿಟ್ಟಿದ್ದಾರೆ ಒಂದು ಫೋಟೋ ಮಾತ್ರ ಜಪ್ತಾಗಲಿಲ್ಲ! ಅದು [illegible] ಸರದಾರ ಭಗತಸಿಂಗರದು!!

ಇಲ್ಲಿನ ಪೋಲೀಸರ ಗರ್ಭಗುಡಿಯಲ್ಲಿ ಗಲಭೆ ಪೋಲೀಸರಿಗೂ ಫೌಜದಾರರಿಗೂ [illegible] ಪೋಲೀಸ ಸುಪರಿಂಟೆಂಡೆಂಟರು ಇಲ್ಲಿದ್ದಾರೆ ಮೊನ್ನೆ ಶನಿವಾರ ಪೋಲೀಸ ಕಚೇರಿಯಲ್ಲಿ ಚೌಕಿ ನಡೆಯಿತು ಡಾ| [illegible] ಫೌಜದಾರರು ತಮಗೆ ಬಾಯಿಗೆ ಬಂದ ಹಾಗೆ ಬೈಯುತ್ತಾರೆ ಹೊಡೆಯುತ್ತಾರೆ, ಹೆಂಗಸರಿದ್ದಾರೆಂದು ಸಹ ನೋಡುವದಿಲ್ಲ,ರಾತ್ರಿ ೧೧ ಘಂಟೆ ಹಾಜರಿ ಕೊಳ್ಳುತ್ತಾರೆ, [illegible] ಆಚರಿಸಲು ತಮಗೆ ಹೇಳುತ್ತಾರೆ, [illegible] ಯೊಳಗಿಂದ ಒಬ್ಬರ ಮನೆಯಲ್ಲಿ ಕೆಲವು ಕಾಗದ ಗುಪ್ತವಾಗಿ ಒಗೆಯಲು ಹೇಳಿದರು, ಹೀಗೆಲ್ಲ ಒಬ್ಬರ ಹಿಂದೊಬ್ಬರು ಪೋಲೀಸ ಸುಪರಿಂಟೆಂಡೆಂಟರ ಕಡೆ ಕಚೇರಿಯಲ್ಲಿ ಬಹಿರಂಗವಾಗಿ ದೂರಿಕೊಂಡವರಾಗಿ ತಿಳಿಯುತ್ತದೆ ಉಪದ್ರವಪಟ್ಟವರಿಗೆ ಕೈ ಮೇಲಕ್ಕೆತ್ತಲು ಹೇಳಿದರಂತೆ. ಹವಾಲದಾರರಿಬ್ಬರು ಕೈಯೆತ್ತಲಿಲ್ಲ, ಉಳಿದವರೆಲ್ಲರೂ ಕೈಯೆತ್ತಿದರು! [illegible] ಬೆಂಕಿ ಹಾಕಿದ ಪ್ರಕರಣದಲ್ಲಿ ತಿಮ್ಮಯ್ಯನು ಪೋಲೀಸ ಸುಪರಿಂಟೆಂಡೆಂಟರ [illegible] ಮಾಡಿದ ಅರ್ಜಿಯು ಚೌಕಿ ಸಹ ನಡೆಯುತಾಗಿ ತಿಳಿಯುತ್ತದೆ

ಭಟಕಳ— ರವಿವಾರ ತಾ ೧೪ನೇ ಬೆಳಿಗ್ಗೆ ಕನ್ನಡ ಶಾಲೆ ಹುಡುಗರು ದೊಡ್ಡ ಮೆರವಣಿಗೆ ಹೊರಡಿಸಿ ಮ ೨೦ [illegible] ಧ್ವಜಸ್ಥಳದಲ್ಲಿ ಧ್ವಜ ನೆಟ್ಟು ಜಯಘೋಷದೊಡನೆ ಧ್ವಜವಂದನೆ ಮಾಡಿದರು ಹ [illegible]

ಕಬ್ಬು ಬೆಳೆಯುದರಿಂದ ರಾಷ್ಟ್ರದ್ಯದ ಸಕ್ಕರೆ [illegible] ಗದ [illegible] ಇಲ್ಲಿಲ್ಲ ರಾಷ್ಟ್ರಗಳ [illegible] ಮಾರ್ಗವೆಂದರೆ, ಶ್ರೀ [illegible] ದಿಂದ ಶ್ರೀ [illegible] ದೇವಸ್ಥಾನದ [illegible] ಮಾರ್ಗ, ಜವಾನ [illegible]!

ಶ್ರೀ ಜೋಶಿ ಶ್ರೀ [illegible] ಭಟ್ಟರವರ ಮೇಲೆ [illegible] ಅರ್ಜಿಸಲ್ಲಿಸಿಂತೆ ರಾಷ್ಟ್ರೀಯ ಸಭೆಯ [illegible] ತಿಂಗಳ [illegible] ಆಗಿ [illegible] ದಿನಾ [illegible] ನಲ್ಲಿ [illegible] ಜಾರಿಯಾಗಿದೆ

[illegible] ಮಾಲುಗಳ [illegible] ಪಟ್ಟಿಯ [illegible] ಉಕ್ತರ [illegible] ದಿನ. [illegible] ಪಟ್ಟಿ [illegible] ನಡೆ [illegible] ನಡೆದವೆ

ಹಿರೀಕ— [illegible] ಪೋಲೀಸರ [illegible] ಮಾಡಿದ್ದನ್ನು [illegible] ತಿಳಿದಿಲ್ಲ ಶ್ರೀ [illegible] ದಿನ [illegible] ಪೋಲೀಸ [illegible] ಜಪ್ತ [illegible] ಅವರನ್ನು [illegible] ಅವರಿಗೆ [illegible] ಮೂರ್ತಿ [illegible] ಪೋಲೀಸರ [illegible] ಆದರಿಂದ [illegible] ಸಿಕ್ಕಲಿಲ್ಲ [illegible] ಮೊದಲಿನಿಂದ [illegible] ಬಿಟ್ಟುಕೊಡುವದಿಲ್ಲ [illegible] ಎಂಬ [illegible] ವರ್ಷದ [illegible] ನಪ್ಪಿ ಹಿಡಿದು [illegible] ಭಟ್ಟ ಎಂಬ [illegible] ಹೋಗಿ ಹಿಡಿದು [illegible]! ದಿನಾ [illegible]!' ಈ ಗಂಡನು [illegible] ಪೋಲೀಸರು [illegible] ಆವನಿಗೆ ಫೌಜದಾರರ [illegible] ಫೌಜದಾರರ ಬಿಟ್ಟರು ಪೋಲೀಸ [illegible] ಚಂದ್ರನಂತೆ [illegible] ಭಟ್ಟನು [illegible] ಪೋಲೀಸನು [illegible]! [illegible]! ಎಂದು [illegible]!! ಪೋಲೀಸನಿಗೆ ಸಿಟ್ಟು ಬಂತು, [illegible] ಕೆಟ್ಟನು, [illegible] ಫೌಜದಾರರು ಪೋಲೀಸನಿಗೆ [illegible] " [illegible] ಯಾಕೆ [illegible]? [illegible] ಬಿಟ್ಟಿದ್ದ" ಎಂದು ಫೌಜದಾರರು ಕೇಳಿದರು " ನಾನು [illegible] ಮಾಡಲಿಲ್ಲ ಎಂದು [illegible], ಆದರೆ ಅದು [illegible]" ಹೀಗೆ ಪೋಲೀಸನು [illegible] ಎಂದಂತೆ [illegible] ಕೊಟ್ಟ [illegible] ದಾರಿಗೂ [illegible] ನಿಲ್ಲ!! ಗಟ್ಟಿ [illegible]!!! [illegible]

[illegible] ನ್ಯಾಯಾಧೀಶರ [illegible] ಆದನ್ನು ಅವರು [illegible] ಬಗ್ಗೆ ಅವಿಚಾರ [illegible] ಅವರಿಗೆ [illegible] ರೆಸ್ಟ್ರು, [illegible] ಕುಲಕರ್ಣಿ [illegible] ಹಿಡಿದು [illegible] ಮಂಡಳದಲ್ಲಿ [illegible] ಸರ್ಕಾರದವರಿಗೂ [illegible] ದಂಡ [illegible] ಒಂದು [illegible] ಪ್ರಕರಣ [illegible] ಇವರು [illegible] ಇಲ್ಲದಿದ್ದರೂ ಅವರಿಗೆ [illegible] ೩—೪ ಸಾರೆ [illegible] ತಂದುಕೊಡದ ಹೋಗಿ, [illegible]

[illegible] ೩೦ [illegible] ಜನರು [illegible] ಸಂಸ್ಥೆಗಳ [illegible] (ತಾ. ೧೪—೨—೩೨)

ಸಿದ್ದಾಪುರ— [illegible] ನೋಟೀಸು [illegible] ಬಗ್ಗೆ [illegible] ೧ ವರ್ಷದ ಕಠಿಣ ಸಜೆ ಮತ್ತು ೩೦೦ ರೂಪಾಯಿ [illegible] ದಂಡ [illegible] ಗಳ ಸಜೆ [illegible] ಗೃಹ [illegible] ಪತಿ [illegible] ಹೀಗೆ [illegible] ನಡೆಸಿದ್ದಾರೆ

[illegible] ಸಾಮಾನ್ಯವಾಗಿ [illegible] ತೀರ್ವೆ [illegible] ಆದನ್ನವರು [illegible] ವರ್ಷದ ೧೧ [illegible] ಎಂದ [illegible] ಕೇಳಿದರು [illegible] ನಾನು [illegible] ಎಂದು [illegible] ಕೊಟ್ಟರು [illegible] ತೀರ್ವೆ [illegible] ತೀರ್ವೆ [illegible] ಎಂದು [illegible] ಉಗ್ರ [illegible], ಅದಕ್ಕೆ ಆವರು [illegible] ತೀರ್ವೆ [illegible] ತೀರ್ವೆ [illegible] ಆಗಿ [illegible]

ಅಂಕೋಲಾ— [illegible] ತೀರ್ವೆ [illegible] ಪ್ರಾರಂಭವಾಯಿತು. [illegible] ತೀರ್ವೆ [illegible] ತೀರ್ವೆ [illegible], [illegible] ನಾಯ್ಕ [illegible] ಮಾಡಿ [illegible] ಪೋಲೀಸರೊಡನೆ [illegible] ಕೊಟ್ಟಗಳನ್ನು [illegible]

ಹನುಮನ್ತ ನಾಯ್ಕರು ಮನೆಯಲ್ಲಿರಲಿಲ್ಲ, ಪೆಟ್ಟಿಗೆಯಲ್ಲಿ [illegible] ನೋಡಿರಿ, ಎಂದು [illegible] ಕೂಡಲೆ ಅವರ ಮನೆಗೆ ಹೋಗಿ ಪೆಟ್ಟಿಗೆ ಹೊರತಂದರು, ಅದರಲ್ಲಿ ಬೇರೆ ಚಿನ್ನವಿತ್ತು ಅದಕ್ಕೆ ಮುಟ್ಟುಗೋಲು [illegible] ನುಡಿದರು. [illegible] ಪೆಟ್ಟಿಗೆ ತಂದು ಅದರೊಳಗಿನ [illegible], ಚಿನ್ನದ ಮಣಿ ಸರಳ, [illegible], [illegible] ಮೊದಲಾದ ಸಾಮಾನುಗಳನ್ನು ಜಪ್ತ ಮಾಡಿ [illegible] ಕೊಟ್ಟರು. [illegible] ಪೋಲೀಸರು [illegible] ನಾಯ್ಕರ ಮನೆ ಜಪ್ತಿಯಾದ [illegible] ಜಪ್ತಿಯಾಯಿತು [illegible] ಕೊಟ್ಟರು [illegible] ನಾಯ್ಕರ [illegible] ಪೆಟ್ಟಿಗೆಯು [illegible] ಕೇಳಿದರು. " [illegible] ಜಪ್ತಮಾಡಿ [illegible], " ಎಂದು [illegible] ತೀರ್ವೆ [illegible] ಪರಿಣಾಮವಾಗಿ [illegible] ತೀರ್ವೆ [illegible] ನಾಯ್ಕರಲ್ಲಿ [illegible] ನಾಯ್ಕರಲ್ಲಿ [illegible]

[illegible] ತಾ ೧೯ನೇ [illegible] ನಾಯ್ಕರಿಗೆ [illegible] ಪಟ್ಟಿ [illegible] ಒಂದು [illegible] ಅವರು [illegible] ಲೋಕಪ್ಪಿನಲ್ಲಿ [illegible]

(ತಾ ೧೧—೨—೩೨) ಶ್ರೀ [illegible] ಪೋಲೀಸರು [illegible] ಅವರ ಪತ್ತೆಯಾಗುವದಿಲ್ಲ [illegible]

[ಮುಂದೆ ೫ನೇ ಪಾನಿನ ಮೇಲೆ ಮುಂದರಿಸಿದೆ]

ಜಾಹೀರ ನೋಟೀಸು.

ಸಿದ್ದಾಪುರ ತಾಲೂಕ ಹಸ್ರಗೋಡ ಗ್ರಾಮ ಸಹಕಾರಿ ಸಂಘದ ವ್ಯವಸ್ಥಾಪಕ ಕಮಿಟಿ ಮೆಂಬರರು ಜಾಹೀರಪಡಿಸುವದೇನಂದರೆ — ಸದ್ರಿ ಸಂಘದಲ್ಲಿ ಮೆಂಬರರಾದವರು ತಮ್ಮ ಮೇಲಿನ ಸಾಲದ ಜವಾಬದಾರಿ ತಪ್ಪಿಸಿಕೊಂಡ [illegible] ತಮ್ಮ ಆಸ್ತಿಗಳನ್ನು ಯಾವ ರೀತಿಯಿಂದ ಹಸ್ತಾಂತರಪಡಿಸಿದ್ದಲ್ಲಿ ಅದು ಸಿಂಧು ಆಗಲಿಕ್ಕಿಲ್ಲ ಮತ್ತು ಸದ್ರಿ ಸಂಘದ ಮೆಂಬರರ ಆಸ್ತಿ ಖರೀದಿಕೊಳ್ಳುವವರು ಸಂಘದಲ್ಲಿ ಸದ್ರಿ ಮೆಂಬರರ ಸಾಲದ ಜವಾಬದಾರಿಯನ್ನು ತಪ್ಪಿಸಿದ ಹೊರತು ಖರೀದಿ—ಕ್ರಯ ವಗೈರೆ ಸ್ವಾಧೀನತೆಯು ಸಿಂಧು ಆಗಲಿಕ್ಕಿಲ್ಲ ತಿಳಿಯುವದು

ತಾರೀಖು ೨೦—೨—೧೯೩೨

ವ್ಯವಸ್ಥಾಪಕ ಮೆಂಬರರು,
ಹಸ್ರಗೋಡ ಗ್ರಾಮ ಸಹಕಾರಿ ಸಂಘ.

ಮ॥ ಗಾಂಧಿಯವರ
ಗೀತಾ-ಬೋಧ.

ಅ.— ಶ್ರೀ॥ ಹನುಮಂತರಾವ ಸಾಂಜರೇಕರ

ವಿಭೂತಿ-ಯೋಗ.

೧೦ನೇ ಅಧ್ಯಾಯ

ಶ್ರೀಕೃಷ್ಣನು ಅಂದದ್ದು —

« ಭಕ್ತರ ಹಿತಕ್ಕಾಗಿ ನಾನು ನಿನಗೆ ಇನ್ನೊಂದು ಸಂಗತಿ ಹೇಳುವದನ್ನು ಕೇಳು. ದೇವರೂ ಮಹರ್ಷಿಗಳೂ ಕೂಡ ನನ್ನ ಉತ್ಪತ್ತಿಯನ್ನು ಅರಿತಿರುವದಿಲ್ಲ ಯಾಕಂದರೆ ನನ್ನಲ್ಲಿ ಹುಟ್ಟುವ ಕ್ರಿಯೆಯೇ ಸಂಭವಿಸುವದಿಲ್ಲ. ನಾನೇ ಅವರೆಲ್ಲರ ಹಾಗೂ ಬೇರೆಯವರ ಉತ್ಪತ್ತಿಯ ಕಾರಣನು. ನನ್ನನ್ನು ಜನ್ಮರಹಿತನೆಂದೂ ಅನಾದಿಯೆಂದೂ ಅರಿತಿರುವ ಜ್ಞಾನಿಗಳೆಲ್ಲರೂ ಎಲ್ಲ ಪಾಪದಿಂದ ಮುಕ್ತರಾಗುತ್ತಾರೆ. ಹೇಗೆಂದರೆ ಜೀವ ಕ್ಷೇತ್ರದ ಆ ರಾಜನನ್ನು ಅರಿತು, ತಾನು ಅವನ ಪ್ರಜೆಯೆಂದು ಇಲ್ಲವೆ ಅಂಶನೆಂದು ತಿಳಿದ ಕೂಡಲೇ ಮನುಷ್ಯನ ಪಾಪಪ್ರವೃತ್ತಿಯು ಉಳಿಯುವದಿಲ್ಲ. ತನ್ನ ವಿಸ್ಮೃತಿ, ಅಜ್ಞಾನವೇ ಪಾಪದ ತಾಯಿಯು ಹೌದಲ್ಲವೆ.

« ನನ್ನಿಂದ ಎಲ್ಲ ಪ್ರಾಣಿಗಳ ಉತ್ಪತ್ತಿಯಾಗಿರುವಂತೆಯೇ ಕ್ಷಮಾ, ಸತ್ಯ, ದುಃಖ, ಜನ್ಮ-ಮೃತ್ಯು, ಭಯ-ಅಭಯ ಮುಂತಾದ ಅವರ ವಿವಿಧ ಭಾವಗಳೂ ನನ್ನಿಂದಲೇ ಹುಟ್ಟಿರುತ್ತವೆ. ಇದೆಲ್ಲವನ್ನು ವಿಭೂತಿ ಎಂದು ತಿಳಿದವನ ಬುದ್ಧಿಯಲ್ಲಿ ಸಮಯೋಗ ತೋರುತ್ತಿರುತ್ತದೆ ಯಾಕಂದರೆ ಅದು ಅಹಂಕಾರದ ತ್ಯಾಗವಾಗಿರುತ್ತದೆ. ಅವನ ಚಿತ್ತವು ನನ್ನಲ್ಲಿ ಸ್ಥಿರಗೊಂಡಿದ್ದಿರುತ್ತದೆ, ಅವನು ನನಗೆ ತನ್ನ ಸರ್ವಸ್ವವನ್ನು ಅರ್ಪಿಸುತ್ತಾನೆ, ಅವನ ಮಾತಿನ ನಾನೇ ವಿಷಯವಾಗಿರುತ್ತೇನೆ, ಅವನು ನನ್ನ ಕೀರ್ತನೆಯನ್ನೇ ಮಾಡುತ್ತಾನೆ ಹಾಗೂ ಸಂತೋಷದಿಂದಲೂ, ಆನಂದದಿಂದಲೂ ತನ್ನ ಜೀವನವನ್ನು ಕಳೆಯುತ್ತಾನೆ. ಈ ರೀತಿಯಿಂದ ನನ್ನನ್ನು ಪ್ರೇಮದಿಂದ ಭಜಿಸುವವನಿಗೆ ನನ್ನಲ್ಲಿ ಮನಸ್ಸನ್ನು ಸ್ಥಿರಗೊಳಿಸುವವನಿಗೆ ನಾನು ಜ್ಞಾನವನ್ನೀಯುತ್ತೇನೆ. ಆ ಜ್ಞಾನದ ಬಲದಿಂದಲೇ ಕಟ್ಟಕಡೆಗೆ ಅವನು ನನಗೆ ಬಂದು ಕೂಡುತ್ತಾನೆ."

ಇದನ್ನು ಕೇಳಿ ಅರ್ಜುನನು ಭಗವಂತನನ್ನು ಹೀಗೆ ಸ್ತುತಿಸಿದನು.—

‘ನೀನು ಪರಬ್ರಹ್ಮನಾಗಿದ್ದೀ, ನೀನು ಪರಮ ಧಾಮನು ಪವಿತ್ರನು ನೀನೇ. ಆದಿದೇವನು ಅಜನ್ಮನು ಸಾಕ್ಷಾತ್ ಈಶ್ವರನಾಗಿದ್ದೀ. ಇದನ್ನರಿತು ಋಷಿ ಸಂಘಗಳು ನಿನ್ನನ್ನು ಭಜಿಸುತ್ತಾರೆ."

"ಎಲೇ ಸ್ವಾಮಿಯೇ, ಹಿರಿಯನೇ, ನಿನ್ನ ಸ್ವರೂಪವು ಯಾರಿಗೂ ಗಮ್ಯವಾಗದಲ್ಲ. ನಿನ್ನನ್ನು ಅರಿತವನು ನೀನೇ. ಈಗ ನನಗೆ ನಿನ್ನ ವಿಭೂತಿಗಳನ್ನರುಹು. ಹೀಗೆ ನಿನ್ನನ್ನು ಚಿಂತಿಸಿ ನಿನಗೆ ಹೇಗೆ ಕೂಡಬೇಕೆಂಬುದನ್ನು ಹೇಳು.

— ಭಗವಂತನು ಅಂದದ್ದು —

« ನನ್ನ ವಿಭೂತಿಗಳು ಲೆಕ್ಕವಿಲ್ಲದಷ್ಟಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನೇ ನಿನಗೆ ಹೇಳುವೆನು. ಎಲ್ಲ ಪ್ರಾಣಿಗಳ ಹೃದಯದಲ್ಲಿ ನಾನೇ ನೆಲೆಯಾಗಿದ್ದೇನೆ, ನಾನೇ ಅವರ ಉತ್ಪತ್ತಿಯು, ನಾನೇ ಅವರ ಮಧ್ಯನೂ, ನಾನೇ ಅವರ ಅಂತ್ಯನೂ ಆಗಿರುವೆನು. ಆದಿತ್ಯರಲ್ಲಿ ವಿಷ್ಣುವು ನಾನೇ, ಬೆಳಕಿನ ಒಡವೆಗಳಲ್ಲಿ ಹೊಳೆವನ್ನೀಯುವ ಸೂರ್ಯನು ನಾನು, ವಾಯುಗಳಲ್ಲಿ ಮರೀಚಿಯು ನಾನು, ನಕ್ಷತ್ರಗಳಲ್ಲಿ ಚಂದ್ರನು ನಾನು, ಸಾಮ ವೇದವು ನಾನು, ದೇವರಲ್ಲಿ ಇಂದ್ರನು ನಾನು, ಇಂದ್ರಿಯಗಳಲ್ಲಿ ಮನಸ್ಸು ನಾನೇ, ಪ್ರಾಣಿಗಳೊಳಗಿನ ಚೈತನ್ಯ ಶಕ್ತಿಯು ನಾನೇ, ರುದ್ರರಲ್ಲಿ ಶಂಕರನು ನಾನು, ಯಕ್ಷ ರಾಕ್ಷಸರಲ್ಲಿ ಕುಬೇರನು ನಾನು, ದೈತ್ಯರಲ್ಲಿ ಪ್ರಹ್ಲಾದನು ನಾನು, ಪಶುಗಳಲ್ಲಿ ಸಿಂಹವು ನಾನು, ಪಕ್ಷಿಗಳಲ್ಲಿ ಗರುಡನು ನಾನು, ಕಪಟಿಗಳ ಜೂಜಾಟ ನಾನು, ಎಂದು ತಿಳಿ. ಈ ಜಗತ್ತಿನಲ್ಲಿ ಸಂಭವಿಸುವದೆಲ್ಲವೂ ನನ್ನ ಅಪ್ಪಣೆ ಹೊರತು ಆಗುವದಿಲ್ಲ. ಒಳಿತು-ಕೆಡುಕುಗಳು ಸಹ ನಾನು ಇಚ್ಛಿಸಿದ್ದರಿಂದ ಸಂಭವಿಸುತ್ತವೆ. ಇದನ್ನರಿತು ಮನುಷ್ಯನು ಅಭಿಮಾನವನ್ನು ತೊರೆದು ತನ್ನನ್ನು ಕೇಡಿನಿಂದ ಕಾಯ್ದುಕೊಳ್ಳಬೇಕು ಯಾಕಂದರೆ ಒಳಿತು ಕೇಡುಗಳ ಫಲವನ್ನೀಯುವವನು ನಾನೇ.

ಸಾರಾಂಶ ಈ ಜಗತ್ತು ನನ್ನ ವಿಭೂತಿಯ ಒಂದು ಅಂಶದಿಂದಲೇ ನಡೆದಿರುವದೆಂಬುದು ನೆನಪಿಡು.'

ಯೆರವಡಾ,
ಸೋಮ-ಪ್ರಭಾತ,
ತಾ. ೧೨-೧-೩೨

ತಿಂಗಳಿಗೆ ೧೦೦ ರೂ ಪ್ರಾಪ್ತಿ!

ಹ್ಯಾಗೆ ಮತ್ತು ಯಾವ ಉದ್ಯೋಗ ಮಾಡಿ
ಗಳಿಸಬೇಕೆಂದು ೩ ಪೈಸೆ ಟಿಕೀಟು ಕಳಿಸುವವರಿಗೆ ಈ
ಪೂರ್ತಿ ಹಕೀಗತ ಒಳಗೊಂಡ ಪತ್ರಿಕೆ [illegible]

ವಿ. ಜೀ ಹಾಡೊಳ್ಳಿ, ಸೊಲ್ಲಾಪುರ

ಬಾಲಜೀವನ.

ಈ ಔಷಧವು ಗ್ರಾಣಿ (Rickets), ಬಾಲಪೀಡೆ, ಅಸ್ಥಿಜ್ವರ, ಧಂತಿ, ಕಫ, ನಾಯಿಗೆಮ್ಮು, ಕಾಳಿಜ ನೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬುಗಳ ರೋಗ, ಕ್ಷಯ, ಅಪಸ್ಮಾರ, ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ದಿವ್ಯೌಷಧವಾಗಿರುತ್ತದೆ. ಈ ಔಷಧವು ಒಂದು ತಿಂಗಳ ಕೂಸಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ-ಕಾಲುಗಳು ಕ್ಷೀಣವಾಗುವದು, ತಲೆಯು ಯಾವಾಗಲೂ ಜವರಿ ಬಲಹೀನರಾಗುವದು, ಹಲ್ಲು ಬರುವಾಗ ಅತಿಸಾರ, ಬಾಲಗ್ರಹ ಈ ಎಲ್ಲಾ ತರದ ರೋಗಗಳನ್ನು ನಾಶಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ ೧-೮-೦ ಟ ಖ. ಬೇರೆ
ಡಲ್‌ಸೆಟ್ ಎಂಡ್ ಕೋ॥,
ಪೋ. ಕುಮಟಾ (ಉ ಕಾನಡಾ

ಸನ್ ಲ್ಯಾಯ್ಫ್ ಎಶ್ಶೂರನ್ಸ ಕಂಪನಿ ಆಫ್ ಕೆನಡಾ

ಇದೇ ಬ್ರಿಟಿಶ ಸಾಮ್ರಾಜ್ಯದಲ್ಲಿ ಅತೀ ಬಹು ದೊಡ್ಡ ಕಂಪನಿ!
ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಆಫೀಸು — ಕೆನಡಾ ಬಿಲ್ಡಿಂಗ್, ಹಾರ್ನಬಿ ರೋಡ ಮುಂಬಯಿ
ಜನರಲ್ ಮ್ಯಾನೇಜರ — [illegible]
೧೯೩೦ನೇ ಇಸ್ವಿಯಲ್ಲಿ ಬಂದ ಹೊಸ ವಿಮಾ ರಕಮು, ೧೭೩ ಕೋಟಿಗೂ ಮಿಕ್ಕಿದೆ
೧೯೩೦ನೇ ಇಸ್ವಿ ಡಿಸೆಂಬರ ೩೧ನೇ ತಾರೀಖಿಗೆ ಕೂಡಿದ ನಿಧಿ ೧೩೩ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಕೆಲಸ ಹುರುಪಿನಿಂದ ಹಾಗು ದಕ್ಷತೆಯಿಂದ ನಡೆಯಿಸುವವರು
ದೊರೆತರೆ ಸುಖವಾಗಿ ಮರ್ಯಾದೆಯಿಂದ ಜೀವನ ನಡೆಸಬಹುದು
ಫಾರಂ ಮೊದಲಾದವುಗಳಿಗಾಗಿ ಪತ್ರವ್ಯವಹಾರ ನಡೆಸುವ ಪತ್ತೆ —

The District Manager,
Canada Building,
Hornby Road, BOMBAY

OR

Mr. S. B. Rege,
Chief Agent,
171, Civil Lines,
Camp BELGAUM

ದಿ ಬೋಂಬೆ ಲ್ಯಾಯ್ಫ್ ಎಶ್ಶೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ. 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇತರ ಕಂಪನಿ ದರಗಳೂ, ಕರಾರುಗಳೂ ಬಹಳ ಸೋಯಿಯುಳ್ಳ ಇವೆ. ಕಂಪನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಬಹಾಲ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು

Kumta Agents –
D. L. NAYAK Bros
Honavar Agent
R. V. PARBHU Esq

K. PadmanabhaRao & Sons.,
BELGAUM
Chief Agents for
Karnatak Districts & S. M. States

ವಾರ್ತೆಗಳು.

— ಹಿಂದುಸ್ಥಾನದಲ್ಲಿ ಸೈನ್ಯದ ಖಾತೆಗೆ ದಿನಾ [illegible] ಲಕ್ಷ ರೂಪಾಯಿಗಳು ವೆಚ್ಚವಾಗುತ್ತವೆ

— ಮಹಾತ್ಮರ ಅಂಗರಕ್ಷಣೆಗಾಗಿ ಬ್ರಿಟಿಶ ಸರಕಾರವು ರೌಂಡ ಟೇಬಲಿನ ಸಮಯ ನಾಲ್ವರು ಪೋಲೀಸರಿಗೆ ೫೦೦೦ ಪವಣ ಖರ್ಚು ಬಂತೆಂದು ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ನುಡಿದರು

— ಸಾಬರಮತಿಯಲ್ಲಿ ಮಂಗಳವಾರ [illegible] ತಾರೀಖು ಹೋಯಿತು ಆದರಿಂದ ಸ್ತ್ರೀ ಕೈದಿಗಳಿಗೆ [illegible] ಸಂಸ್ಥಾನಕ್ಕೆ ಒಯ್ದು [illegible] ತುಂಬಿತು, ೩೦೦ [illegible] ಹೊರಗಿನ ಇಸ್ಪಿತಾಲು [illegible] ಕೈದಿಗಳನ್ನು ಅಲ್ಲಿಗೆ ಕಳಿಸಿದರು ಅವರಿಗೆ [illegible] ಹಾಕಿದವರು ಈ ಪ್ರಶ್ನೆ [illegible] ಇವರಾದರನ್ನು [illegible] ಕೊಟ್ಟರು!

ನಿನ್ನೆ ಈ ದಿವಸ ಕೌನ್ಸಿಲಿನಲ್ಲಿ ಒಂದು ಸಣ್ಣ ಗಡಿಬಿಡಿಯಾಯಿತು. ಸರ್ ಹರಿಸಿಂಗ ಗೌಡರವರ [illegible] ಚರ್ಚೆಯಾಗುವಾಗ [illegible] ಇರಲಿಲ್ಲ. ಎರಡು ೩ ಘಂಟೆ ಬಾರಿಸಿದಾಗ್ಯೂ [illegible] ಸಭಾಸದರು [illegible] ಕೌನ್ಸಿಲಿನ [illegible] ಸಭಾಸದರಿಗೆ ಕೆಲ ಸರಕಾರಿ ಸಭಾಸದರೇ [illegible] ಮಾಡಿದರು ಈ ಕುರಿತು ಸರ್ ಹರಿಸಿಂಗ ಗೌಡರವರು ಅಧ್ಯಕ್ಷರ ಕಡೆ ತಕ್ರಾರು ಮಾಡಿದರು. ಅಧ್ಯಕ್ಷರು ವಿಚಾರ ಮಾಡಿ ಸಭಿಕರಿಗೆ [illegible] ಮುಂದೆ ಪ್ರತಿ ಕೌನ್ಸಿಲಿನ [illegible] ಇಂಥ ಪ್ರಕಾರಗಳು ಇನ್ನು ಮುಂದೆ ಸಂಭವಿಸಬಾರದಾಗಿ [illegible] ಅಧ್ಯಕ್ಷರಿಗೆ ಈ ಸಂಗತಿ ಕ್ರಮದಿಂದ [illegible] ವರ್ತಮಾನ ಪತ್ರಗಳಲ್ಲಿ ಪ್ರಸಿದ್ಧವಾಯಿತು. [illegible] ಅಧ್ಯಕ್ಷರಿಗೆ ತಿಳಿಸಿ, ಈ ಕುರಿತು [illegible] ಅಧ್ಯಕ್ಷರು ಸಿಟ್ಟುಮಾಡಿ [illegible] ಅಧ್ಯಕ್ಷರು ನುಡಿದರು [illegible] ಲಂಡನಿನ 'ಡೇಲಿ ಹೆರಲ್ಡ' ಪತ್ರಿಕೆಯ ಸಂಪಾದಕರ

— ವೆಂಗುರ್ಲೆ [illegible] ರೌಂಡ ಟೇಬಲ [illegible] ಮಂಡಳದವರು [illegible] ಪ್ರಾಂತದ ವಸಂತಪುರ ಗ್ರಾಮಕ್ಕೆ ಹೋಗಿದರು. '[illegible], ನಿಮ್ಮ ಮನೆಗೆ ತಿರುಗಿರಿ' ಎಂಬ [illegible] ಕೊಂಡು ಇವರು ಹೋಗುತ್ತಿದ್ದರು [illegible] ನಾಲ್ವರು. ಈ ಕಮಿಟಿಯ ಅಧ್ಯಕ್ಷರು. ಈ [illegible] ಕಡೆ ಲೋಥಿಯನ್ [illegible] ದಲಾದವರುಗಳ [illegible] ಚರ್ಚೆ ಮಾಡಿದರು, ಆ ಮೇಲೆ ಅವರ ಬೆನ್ನಿಗಿದ್ದ ಪೋಲೀಸರಿಗೆ ಕಂಡರು. ಕಮೀಟಿಗೆ ಬಹಿಷ್ಕಾರ ಮಾಡಬೇಕಾಗಿ ಪ್ರಚಾರ ಮಾಡಿದ ಬಗ್ಗೆ ಅವರಿಗೆ ಶಿಕ್ಷೆಯಾಯಿತ್ತಾರಾಗಿ ಲೋಥಿಯನ್ನರಿಗೆ ತಿಳಿದುಬಂತು. "ಅವರಿಗೆ ಬಿಡು" ಎಂದು ಲೋಥಿಯನ್ನರು ಅಪೇಕ್ಷಿಸಿದ ಮೇರೆಗೆ ಬಿಡುಗಡೆಯಾಯಿತು. ಲೋಥಿಯನ್ನರಿಗೆ ಪೋಲೀಸರು ಕಸಕೊಂಡಿದ್ದ ಕರಿ ಪತಾಕೆಯನ್ನು ಪಡಕೊಂಡ ಇದನ್ನು ತಾವು ಕಾಪಾಡುವೆವಾಗಿ ನುಡಿದರು. ಸ್ವಯಂಸೇವಕರು ದೊರಗಳಿಗೆ ಕಪ್ಪು ಬಾವು[illegible] ಕೈ ಬಾವುಟದ ಕಾಣಿಕೆ ಮಾಡಿದರು ಊರವರೆಲ್ಲರೂ ಕಮೀಟಿಯವರಿಗೆ ಚಪ್ಪಾಳೆಯ ಸೋಸದಿಂದ ಸ್ವಾಗತಿಸಿದರು. ಜನರ ಮನವೊಲಿಸಿಕೊಳ್ಳುವ ಕ್ರಮ ಇದು, ಎಂಬುದಾಗಿ ಎಲ್ಲರೂ ಅಲ್ಲಲ್ಲಿ ಹೊಗಳುತ್ತಿದೆ. ದಬ್ಬಾಳಿಕೆಯಿಂದ ಪ್ರಯೋಜನ ವಿಲ್ಲ, ಅದರಿಂದ ಜನಮನವು ಮತ್ತಿಷ್ಟು ಉದ್ವಿಗ್ನವಾಗುತ್ತದೆ, ಆದೇ ಔದಾರ್ಯ ದರ್ಶಿಸಿದರೆ, ಜನರು ಒಲಿಯುತ್ತಾರೆ, ಎಂಬುದಕ್ಕೆ ಈ ಸಂಗತಿ ಸಾಕ್ಷಿ

ಕಲ್ಲಿಕೋಟೆಯ ಸೌ॥ ಕಮಲಾ ಪ್ರಭುಗಳವರ ಮಂಗಳಸೂತ್ರದ [illegible] ಮದ್ರಾಸ ಸರಕಾರವು [illegible] ಪ್ರಕಟಿಸಿದೆ— ಮಂಗಳಸೂತ್ರ ತೆಗೆಯಹಚ್ಚಿದ ಮಿ॥ ಜೊಡವೆಲ್ [illegible] ವ್ಯಸನಪಟ್ಟಿದ್ದಾರೆ, ಪೋಲೀಸ ಠಾಣೆಯಲ್ಲಿ ಸ್ತ್ರೀ-ಕೈದಿಗಳ ಮೇಲೆ ಅತ್ಯಾಚಾರವಾಗಬಾರ[illegible] ಸತ್ಯಾಗ್ರಹದಲ್ಲಿ ಸೇರಬಾರದೆಂದು [illegible] ಜೊಡವೆಲ್ ಮೆಜಿಸ್ಟ್ರೇಟರು ಹೇಳಲಿಲ್ಲ [illegible] ಸ್ತ್ರೀಯರಿಗೆ ಮಾನ ಕಾಯ್ದುಕೊಳ್ಳ[illegible] ಮುಂದಿನ ಪರಿಸ್ಥಿತಿಯನ್ನು [illegible] ಮೆಜಿಸ್ಟ್ರೇಟರು ಉದ್ದೇಶಿಸಿದ್ದರಾಗಿ [illegible] ಸತ್ಯಾಗ್ರಹದಿಂದ ಸ್ತ್ರೀಯರು [illegible] ಉಪಕಾರ ಬುದ್ಧಿಯಿಂದ [illegible] ಯಾವ ಉದ್ದೇಶ[illegible] ಮಂಗಳಸೂತ್ರಗಳನ್ನು ತೆಗೆಯದಂತೆ [illegible] ವಿಚಾರ ನಡೆದದ

ಬಂಗಾಲ ಸರಕಾರದ ಜಮಾ-ಖರ್ಚು ಪ್ರಕಟವಾಯಿತ. ೩ ಕೋಟಿ ೧೨ ಲಕ್ಷ ರೂಪಾಯಿಗಳು [illegible] ಬಂದಿವೆ ಕ್ರಾಂತಿಕಾರಕರಿಗಾಗಿ ೩೦ ಲಕ್ಷ ರೂಪಾಯಿಗಳು ವೆಚ್ಚವಾದವು. ಮುಂದಿನ ವರ್ಷ ೧॥ ಕೋಟಿ ರೂಪಾಯಿ [illegible] ಹೆಚ್ಚೆಂದು ಊಗಿಸಲಾಗಿದೆ. ಹಿಂದುಸ್ಥಾನ ಸರಕಾರವು ಹಣ ಕೊಟ್ಟು ನೆರವಾಗಬೇಕಾಗಿ ಬಂಗಾಲ ಸರಕಾರವು ಬಿನ್ನೈಸಿಕೊಳ್ಳುತ್ತದೆ.

— ಪಂಡಿತ ಜವಾಹಿರಲಾಲ ಹಾಗು ಶಿರವಾಣಿಯವರ ದಂಡದ ರಕಮಿನಲ್ಲಿ ಕೆಲ ರಕಮು ಸರಕಾರಕ್ಕೆ ವಸೂಲ ಬಂತು. ಪಂಡಿತ ಜವಾಹಿರಲಾಲ-ಶಿರವಾಣಿಯವರು ಮುಂಬಯಿಗೆ ಹೋಗ ತೆಗೆದ ಟಿಕೀಟುಗಳನ್ನು ಸೆರೆಹಿಡಿದ ಬಳಿಕ ಅವರು ಪೋಲೀಸ ಸುಪರಿಂಟೆಂಡೆಂಟರ ಕಡೆ ಕೊಟ್ಟಿದ್ದರು. ಅವುಗಳ ಹಣ ತಿರುಗಿ ಬಂತು, ಅಷ್ಟು ಹಣ ಮಾತ್ರ ದಂಡದ ರಕಮಿನಲ್ಲ ವಸೂಲ ಬಂದಿದೆ! ಮತ್ತೇನೂ ರಕಮು ವಸೂಲಾಗಲಿಲ್ಲ

— ದಿಲ್ಲಿಯೊಳಗೆ ರೌಂಡ ಟೇಬಲು ಕಮಿಟಿ ಸೇರಿತ್ತು. ಇದು ಆಲೋಚನಾ ಮಂಡಳ. ಈ ಸಭೆಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಸೇರಿಸುವದಿಲ್ಲ, ಗುಪ್ತವಾಗಿ ಈ ಸಭೆ ಸೇರಿಸಲ್ಪಟ್ಟಿತು. ಈ ಸಭೆಯಲ್ಲ ಏನು ನಡೆಯಿತು? ಎಂದು ಅಲ್ಲಲ್ಲಿ ಕೇಳುತ್ತಾರೆ. ಪ್ರಾಂತಿಕ ಸ್ವರಾಜ್ಯ ಕೊಟ್ಟರೆ ಸಾಕು, ಹಿಂದುಸ್ಥಾನ ಸರಕಾರದಲ್ಲಿ ಅಧಿಕಾರ ಬೇಡ, ಹೀಗೆ ಕೆಲವರು ನುಡಿದರಂತೆ. ಸರ್ ಸಪ್ರು ಬಹಾದ್ದೂರರಿಗೆ ಬಲು ದೊಡ್ಡ ಸಿಟ್ಟು ಬಂತು! 'ಹಾಗಾದರೆ, ನಾನು ಈ ಕಮಿಟಿಯ ಕಾರ್ಯದಲ್ಲಿ ಸೇರುವದೇ ಇಲ್ಲ, ಗಂಟುಮೂಟೆ ಕಟ್ಟಿಕೊಂಡು ಇದೋ ಈಗ ಹೊರಟೆ. ಹೀಗೆ ವಿರಕ್ತರಾಗಿ ನುಡಿದರು. "ಬ್ರಿಟಿಶ ಸರಕಾರದ ಅಂತರಂಗವೇ ಇನ್ನೂ ತಿಳಿಯಲಿಲ್ಲ. ಇದೊಂದು ಮುಂಚೆ ಜಾಹೀರಾಗಲಿ," ಹೀಗೆ ಕೆಲ ಸಭಾಸದರು ನುಡಿದರು ಈ ಪ್ರಕಾರ ನಿಷೇಧವಾಗುತ್ತಿದೆ, ಚರ್ಚೆಯಾಗುತ್ತಿದೆ; ಸಂಹಾರ ನಡೆದಿದೆ. ಡಾ॥ ಸಪ್ರುರವರು ರೌಂಡ ಟೇಬಲಿನ ಕಾರ್ಯವನ್ನು ತ್ವರ್ಯವೇ ಮುಗಿಸಿಕೊಂಡು ಸತ್ಯಾಗ್ರಹವನ್ನು ಮುರಿಬಡಿಯುವದಕ್ಕಾಗಿ ಹಂಚಿಕೆ ಮಾಡಿರುತ್ತಾರಂತೆ! ಮಹಾತ್ಮರಿಗೆ ಬಿಡುಗಡೆ ಮಾಡಲು ಅವರ ಪ್ರಯತ್ನವೇ ಇಲ್ಲವಾಗಿ ಲಂಡನಿನ 'ಡೇಲಿ ಹೆರಲ್ಡ' ಪತ್ರಿಕೆಯ ದಿಲ್ಲಿಯ ಸುದ್ದಿಗಾರರ ಅಭಿಪ್ರಾಯ ಇದೇ ಸಮಯ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಒಂದು ಪ್ರಕಾರವನ್ನು ನಮೂದಿಸಬಹುದು. ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರಾದ ಕರ್ನಲ್ ಗಿಡ್ನೀಯವರು ರೌಂಡ ಟೇಬಲ್ ಪರಿಷತ್ತಿನ ಒಂದು ಕಾರ್ಟೂನ ಯಾನೆ ವಿನೋದ ಚಿತ್ರವನ್ನು ತಯಾರಿಸಿ ಒಯ್ದಿದ್ದರು. ಅದು ತಮ್ಮದೊಂದು ಕೌನ್ಸಿಲು ಸಭಾಮಂದಿರಕ್ಕೆ ಕಾಣಿಕೆಯೆಂದೂ ಬರೆದಿದ್ದರು ಸಭಾಸದರೆಲ್ಲ ಆ ಚಿತ್ರ ನೋಡಹತ್ತಿದರು 'ಸಾಬರಮತಿಯ ಋಷಿಗಳೆಲ್ಲಿ?' ಹೀಗೆ ಹಿಂದುಸ್ಥಾನ ಸರಕಾರದ ಸಭಾಸದರೊಬ್ಬರು ಪ್ರಶ್ನಿಸಿದರು. 'ಮಹಾತ್ಮರಲ್ಲಿ?' ಎಂಬದಾಗಿ ಒಬ್ಬ ಅಧಿಕಾರಿಗಳು ಕೇಳಿದರು. ಇದನ್ನೆಲ್ಲ ನೋಡಿ ಗಿಡ್ನೀಯವರಿಗೆ ನಿರುತ್ಸಾಹವಾಯಿತು! ಮಹಾತ್ಮರಿಲ್ಲದ ರೌಂಡ ಟೇಬಲ್ ಪರಿಷತ್ತಿನ ಚಿತ್ರ ನಿರರ್ಥಕವೆಂದು ಒಬ್ಬ ಸಭಾಸದರು ನೆಟ್ಟಗೆ ಹೇಳಿಬಿಟ್ಟರು. ಈ ಚಿತ್ರವು ಎರಡನೇ ಪರಿಷತ್ತಿನದಲ್ಲ, ಮೊದಲನೇ ಪರಿಷತ್ತಿನದು! ಆದರಿಂದ ಅದರೊಳಗೆ ಮಹಾತ್ಮರ ಚಿತ್ರವಿದ್ದಿಲ್ಲ

— ಬಂಗಾಲದ ಪೋಸ್ಟ ಮಾಸ್ತರ ಜನರಲ್‌ರವರು ಒಂದು ಸರ್ಕ್ಯುಲಾರನ್ನು ಹೊರಡಿಸಿದ್ದಾರೆ 'ಕೊಂಗ್ರೆಸ ಪೋಸ್ಟೆಲ್ ಸರ್ವಿಸ್' ಎಂಬ ಛಾಪೆಯುಳ್ಳ ಟಪಾಲ ಸ್ಟ್ಯಾಂಪುಗಳು ತಯಾರಾಗಿವೆ. ಅವುಗಳ ಆಕಾರ, ಬಣ್ಣ ಟಪಾಲ ಸ್ಟ್ಯಾಂಪಿನ ನಮೂನೆಯದೇ. ಆದರಿಂದ ಟಪಾಲ ಕಾರಕೂನರೆಲ್ಲರೂ ಸ್ಟ್ಯಾಂಪುಗಳನ್ನು ಚನ್ನಾಗಿ ತಪಾಸ ಮಾಡಿಕೊಂಡು ಕಾಗದಗಳನ್ನು ಟಪಾಲಿಗೆ ಹಾಕತಕ್ಕದ್ದು; ಸರಕಾರಿ ಸ್ಟ್ಯಾಂಪು ಹಚ್ಚಿದ ಪತ್ರಗಳ ವ್ಯವಸ್ಥೆ ರೀತಿಯಂತೆ ಆಗ[illegible]ದ್ದು, ಹೀಗೆ ಸರ್ಕ್ಯುಲಾರು

— ಅಹಮುದಾಬಾದದಲ್ಲಿ ಊರೊಳಗಿನ ಗೋಡೆಗಳಿಗೆ 'ಗುಜರಾಥ ಮೇಲ' ಎಂಬ ಸಹಿಯಿಂದ ದೊಡ್ಡ ದೊಡ್ಡ ಕೈಬರಹದ ಜಾಹೀರಾತುಗಳು ಹಚ್ಚಲ್ಪಟ್ಟಿವೆ "ಗುಜರಾಥ ಮೇಲ" ಎಂಬದೊಂದು ಸಂಸ್ಥೆಯಿರುವದಂತೆ! ಈ ಸಂಸ್ಥೆಯಲ್ಲಿ ವಿದ್ಯಾವಿದ್ಯಾಲಯದ ಸಭಾಸದರಿರುವರಂತೆ! ಇವರು ಅರಾಜಕರಂತೆ!! ಹಿಂಸಾವಾದಿಗಳಂತೆ! ಅತ್ಯಾಚಾರ ಮಾಡುವ ಸರಕಾರಿ ಅಧಿಕಾರಿಗಳಿಗೆ ದೇಹಾಂತ ಪ್ರಾಯಶ್ಚಿತ್ತ ಕೊಡಲು ಇವರು ಟೊಂಕಕಟ್ಟಿರುವರಂತೆ! ಪೋಲೀಸರಿಗೆ, ಪೋಲೀಸ ಇನ್ಸಪೆಕ್ಟರರಾದ ಗ್ರೀಯರವರಿಗೆ ಕೊಲ್ಲುತ್ತೇವಾಗಿ ಹಸ್ತಲಿಖಿತ ಪತ್ರಿಕೆಯಲ್ಲಿ ಬರೆದಿವೆ. ಈ ಪತ್ರಿಕೆಯ ಮೇಲ್ಗಡೆ ತುಬಾಕಿಯ ಚಿತ್ರವಿದೆ ಅಹಮುದಾಬಾದದೊಳಗಿನ "ಗುಜರಾಥ ಸಮಾಚಾರ" ಹಾಗು "ಸಂದೇಶ" ಎಂಬ ಎರಡು

— ಪಾರ್ಲಿಮೆಂಟಿನಲ್ಲಿ ಸೋಮವಾರ ನಡೆದ ಕೆಲವು ಪ್ರಶ್ನೋತ್ತರಗಳು ಚಿತ್ತಕ್ಷೋಭಕವಿವೆ! ಹೆ ಕಾಮ್ಸು

ರಾಷ್ಟ್ರೀಯ ನಿತ್ಯಪತ್ರಿಕೆಗಳ ಸಂಪಾದಕರಿಗೆ ೨ ಪತ್ರಗಳು ಕಳಿಸಲ್ಪಟ್ಟವು. ಪತ್ರಗಳ ಧೋರಣ ತಿದ್ದುಪಡಿಯಾಗದಿದ್ದಲ್ಲಿ ಸಂಪಾದಕರಿಗೆ ಯಮಸದನಕ್ಕಟ್ಟಲ್ಪಡುವದಾಗಿ ಜಾಗ್ರತೆ ಕೊಡಲ್ಪಟ್ಟಿದೆ. ಕೆಳಗೆ 'ಸುಧಾರಕ ಅರಾಜಕರ ಕಪ್ತಾನ' ಹೀಗೆ ಸಹಿಯಿದೆ. ಕಾಗದಗಳಿಗೆ ೩-೩ ಲಕೋಟೆಗಳಿದ್ದವು. ಅವುಗಳ ಮೇಲೆ ತುಬಾಕಿಗಳ ಚಿನ್ಹೆ, ಜಿ ಎಮ್. ಎಂಬ ರಬ್ಬರ ಸ್ಟಾಂಪು ಇತ್ತು. ಪೋಲೀಸರು ಸೂಕ್ಷ್ಮ ಚೌಕಶಿ ನಡಿಸಿದ್ದಾರೆ.

— ಪಾರ್ಲಿಮೆಂಟಿನಲ್ಲಿ ಸೋಮವಾರ ನಡೆದ ಕೆಲವು ಪ್ರಶ್ನೋತ್ತರಗಳು ಚಿತ್ತವೇಧಕವಿವೆ! ಹುಕುಮು ಉಲ್ಲಂಘಿಸಿ ರಾಷ್ಟ್ರಧ್ವಜ ಹಚ್ಚುವದು ಬೇಕಾಯದೇಶೀರ ಆಗುತ್ತದೆ; ಮ್ಯುನಿಸಿಪಾಲಿಟಿ-ಬೋರ್ಡುಗಳ ಠರಾವಿನಂತೆ ಮ್ಯುನಿಸಿಪಾಲಿಟಿ-ಬೋರ್ಡುಗಳಿಗೆ ರಾಷ್ಟ್ರಧ್ವಜ ಹಚ್ಚಿದ ಬಗ್ಗೆ ಅಧ್ಯಕ್ಷರಿಗೆ ಶಿಕ್ಷೆಯಾದದ್ದು ಗೊತ್ತಿಲ್ಲ; ಸ್ವಯಂಸೇವಕರಿಗೆ ತಿಂಡಿ-ತಿನಸು ಕೊಡದಂತೆ ವ್ಯಾಪಾರಿಯವರಿಗೆ, ಮದ್ಯದ ಅಂಗಡಿಕಾರರಿಗೆ ವಿಧಿಸಿದ ಸಂಗತಿ ಗೊತ್ತಿಲ್ಲ; ಕಾಯದೆಭಂಗದ ಕುರಿತು ಸೆರೆಹಿಡಿದವರ ಸಂಖ್ಯೆ ೧೫ ಸಾವಿರವಾಯಿತಾಗಿ ಭಾರತ ಮಂತ್ರಿಗಳು ಸಭಿಕರಿಗೆ ತಿಳಿಸಿದರು. ಈಗ ಹಿಂದುಸ್ಥಾನದೊಳಗಿನ ಸ್ಥಿತಿ ಸುಧಾರಿಸುತ್ತದಾಗಿಯೂ ಭಾರತ ಮಂತ್ರಿಗಳು ಸಮಾಧಾನ ಹೇಳಿದರು (ಸತ್ಯಾಗ್ರಹಿಗಳ ೧೫ ಸಾವಿರದ ಸಂಖ್ಯೆ ಜನವರಿ ಅಖೈರ ವರೆಗೆ ಸೆರೆಮನೆ ಸೇರಿದವರದೆಂದು ದಿಲ್ಲಿಯೊಳಗಿನ ವಾರ್ತೆ

— ಕಲಕತ್ತೆಯಲ್ಲಿ ವಿಶ್ವವಿದ್ಯಾಲಯದ ಸಭೆ ಸೇರಿತ್ತು. ಬಿ ಎ, ಎಮ್. ಎ, ಮೊದಲಾದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪದವಿಗಳನ್ನು ಹಂಚುವ ಸಮಾರಂಭವಿತ್ತು. ಆ ದಿನ ಬಂಗಾಲದ ಗವ್ಹರ್ನರರಾದ ಸರ್ ಸ್ಟೇನಲೀ ಜೆಕ್ಸನ್‌ರವರು ಅಧ್ಯಕ್ಷರಾಗಿ ಪದವಿಗಳನ್ನರ್ಪಿಸುವವರಿದ್ದವರಿಂದ ಕಠಿಣ ಬಂದೋಬಸ್ತಿಡಲ್ಪಟ್ಟಿತ್ತು. ಗವ್ಹರ್ನರರು ಬಂದರು. ಪ್ರಾಸ್ತಾವಿಕ ವಿಧಿಗಳಾದ ಬಳಿಕ, ಭಾಷಣ ಮಾಡನಿಂತರು. ಸ್ವಲ್ಪಹೊತ್ತು ಓದುವಷ್ಟರಲ್ಲಿ ಮುಂಬಾಗದಲ್ಲಿ ಕೂತುಕೊಂಡಿದ್ದ ವೀಣಾ ದಾಸ ಎಂಬ ಬಿ.ಎ., ಪಾಸಾದ ಹುಡುಗಿಯು ಥಟ್ಟನೆ ಎದ್ದು ನಿಂತು ಗವ್ಹರ್ನರರ ಮೇಲೆ ನಾಲ್ಕು ಗುಂಡು ಹೊಡೆದಳು. ಗವ್ಹರ್ನರರು ೨ ಹೆಜ್ಜೆ ಹಿಂಜರಿದು ಬಿದ್ದರು; ಅದರಿಂದ ಅವರಿಗೆ ಏನೂ ಅಪಾಯವಾಗಲಿಲ್ಲ, ಎಂಥೊಂದು ಭಾಗ್ಯ! ಇನ್ನೂ ಗುಂಡು ಹಾರಿಸುವವಳಿದ್ದಳು. ಅಷ್ಟರಲ್ಲಿ ವ್ಹಾಯಿಸ ಚೆನ್ಸಲರರು ಆವೇಳೆಗೆ ಹಿಡಿದು ಪೋಲೀಸರಿಗೆ ಒಪ್ಪಿಸಿದರು; ಹಾಗೆಯೇ ಸಭಿಕರು ಶಾಂತರಾದರು. ಮುಂದೆ ಗವ್ಹರ್ನರರು ತಮ್ಮ ಭಾಷಣ ಮುಗಿಸಿ ಸಭೆ ವಿಸರ್ಜಿಸಿ ನಡೆದರು. ಬಂಗಾಲ ಸರಕಾರವು ಮೂವರ ಕಲಕತ್ತೆಯ ಹೈಕೋರ್ಟಿನ ನ್ಯಾಯಾಧೀಶರ ನ್ಯಾಯಸ್ಥಾನ ನಿರ್ಮಿಸಿ ವಿಚಾರ ನಡಿಸಿತು. ನ್ಯಾ| ಮೂರ್ತಿ ಸಿ. ಸಿ ಘೋಷರವರು ಅಧ್ಯಕ್ಷರು ಫಿರ್ಯಾದಿ ಕಡೆ ಪುರಾವೆಯಾದ ಬಳಿಕ, ಕುಮಾರಿ ವೀಣಾದಾಸರವರು ತಮ್ಮ ಕೈಫಿಯತನ್ನು ಓದಿ ಹೇಳಿದರು. ಅವರು ನುಡಿದದ್ದೇನಂದರೆ.— "ದೇಶಬಾಂಧವರ ಮೇಲೆ ನಡಿಸಿದ ಅತ್ಯಾಚಾರಗಳಿಂದ ನನಗೆ ಸಂಕಟವಾಯಿತು. ೨ ವರ್ಷಗಳಿಂದ ಹೊರಡಿಸಿದ ರಾಜಶಾಸನಗಳಿಂದ ಹಿಂದುಸ್ಥಾನದ ಪೌರುಷೇಯವನ್ನೇ ನಿರ್ನಾಮ ಮಾಡಲು ಸರಕಾರವು ಹವಣಿಸಿದೆ. ಮಿದ್ನಾಪುರ, ಹಿಜಲಿ, ಚಿತಗಾಂಗ ಮೊದಲಾದ ಕಡೆ ನಡೆದ ಪ್ರಕಾರಗಳಿಂದ ನನ್ನ ಬುದ್ಧಿ ಚಂಚಲವಾಯಿತು. ನಾನು ಚಿತಗಾಂಗಿನವಳು, ಅದು ನನ್ನ ಜಿಲ್ಹೆ. ಅಲ್ಲಲ್ಲಿ ಒದಗಿದ ಅತ್ಯಾಚಾರ ವಾರ್ತೆಗಳಿಂದ ನನಗೆ ಹೇರಳ ದುಃಖವಾಯಿತು, ಅದನ್ನು ನನ್ನಿಂದ ಸಹಿಸಲಾಗಲಿಲ್ಲ. ದೇಶಮಾತೆಯ ಚರಣದಲ್ಲಿ ನನ್ನನ್ನೇ ಅರ್ಪಿಸಿಕೊಂಡು ಈ ದೇಹವನ್ನು ಅಂತ್ಯಪಡಿಸಿಕೊಳ್ಳಬೇಕಾಗಿ ನಾನು ನಿರ್ಧರಿಸಿದೆ. ನನ್ನ ದುಃಖ ಅಂತ್ಯಪಡಿಸಿಕೊಳ್ಳುವ ಬೇರೆ ಉಪಾಯ ನನಗೆ ತೋಚಲಿಲ್ಲ. ದೇಶಾಭಿಮಾನಪ್ರೇರಿತಳಾಗಿ ನಾನು ಗವ್ಹರ್ನರರ ಮೇಲೆ ಗುಂಡು ಹಾರಿಸಿದೆ. ನನಗೆ ಗವ್ಹರ್ನರರ ಮೇಲೆ ಹಗೆಯಿಲ್ಲ. ಅವರು ನನ್ನ ತಂದೆಯಂತಿದ್ದಾರೆ, ಅವರ ಪತ್ನಿ ನನಗೆ ತಾಯಿ! ಅವರಿಗೆ ಅಪಾಯವಾಗದೆ ಅವರು ಸುರಕ್ಷಿತ ಪಾರಾದ ಬಗ್ಗೆ ನನಗೆ ಅತ್ಯಾನಂದವಾಗಿದೆ. ರಕ್ತದ ಬಿಂದು ಚೆಲ್ಲದೆ ನನ್ನ ಕಾರ್ಯ ಸಾಧ್ಯವಾಯಿತು. ನಾನು ಅಬಲೆ, ನಾನು ಮನೆತನಸ್ಥಳು; [illegible]ತನ ಪರಂಪರೆಯಲ್ಲಿ ಹುಟ್ಟಿ ಬೆಳೆದವಳು, ಅಂಥವಳು ಸರಕಾರದ ಅತ್ಯಾಚಾರಗಳಿಂದ ಈ ಪ್ರಕಾರ ಹೇಯ ಪಾಪ ಕೆಲಸಕ್ಕೆ ಪ್ರವೃತ್ತಳಾದೆನು. ಇದರ ಮೇಲಿಂದ ಜನರೂ, ಸರಕಾರವೂ ತಕ್ಕ ಆಲೋಚನ ಪಡೆಯಬೇಕು. ದೇಶಬಂಧು-ಭಗಿನಿಯರಿಗೆ ದಾಸ್ಯತ್ವದಲ್ಲಿಡಲು ಕಾರಣವಾದ ರಾಜ್ಯಾಧಾರದ ಪ್ರತಿನಿಧಿಗಳೆಂದು ನಾನು ಗವ್ಹರ್ನರರಿಗೆ ಕೊಲ್ಲಲುದ್ಯುಕ್ತಳಾದೆ" ಹೀಗೆ ವೀಣಾ ದಾಸರವರು ಕೈಫಿಯತನ್ನೋದಿದರು. ಎಡ್ವೊಕೇಟ ಜನರಲ್‌ರವರು ಘೋರ ಶಿಕ್ಷೆ ವಿಧಿಸಬೇಕಾಗಿ ತಮ್ಮ ಆಗ್ರಹವಿಲ್ಲವೆಂದು ಸರಕಾರದ ಪರವಾಗಿ ನುಡಿದರು. "ಕೈದಿಯು ಅಪರಾಧ ಒಪ್ಪುತ್ತಾಳೆ, ಕಾಲೇಜಿನಲ್ಲಿ ಇವಳು ಒಬ್ಬ ಶಿಷ್ಟಳೆಂದು, ಸಭ್ಯತೆಯಿಂದ ನಡಕೊಂಡಿದ್ದಳು, ಎಳೆ ಪ್ರಾಯದವಳು," ಹೀಗೆ ನ್ಯಾಯಮೂರ್ತಿಗಳು ನುಡಿದು, ವೀಣಾ ದಾಸರಿಗೆ ೯ ವರ್ಷಗಳ ಕಠಿಣ ಶಿಕ್ಷೆ ವಿಧಿಸಿದರು. ಅವಳ ಮನೆತನದ ವಿಚಾರ ಮಾಡಿ ಅವಳಿಗೆ ೨ನೇ ವರ್ಗದಲ್ಲಿಟ್ಟಿದ್ದಾರೆ. ಕುಮಾರಿ ವೀಣಾ ದಾಸಳು ಚಿತಗಾಂಗದ ಶ್ರೇಷ್ಠ ಮಾಧವದಾಸ ಎಂಬ ವಿದ್ವಾಂಸರ ಮಗಳಂತೆ. ಕಲ್ಯಾಣದಾಸ ಎಂಬವರ ತಂಗಿ. ಕಲ್ಯಾಣದಾಸರು ಬಿ ಎ, ಪದವೀಧರರಿದ್ದು, ಸತ್ಯಾಗ್ರಹದಲ್ಲಿ ಸೇರಿ ಈಗ ಶಿಕ್ಷೆಯನ್ನನುಭವಿಸುತ್ತಿದ್ದಾರೆ. ಬಂಗಾಲದ ಗವ್ಹರ್ನರರು ಸುರಕ್ಷಿತ ಪಾರಾದ ಬಗ್ಗೆ [illegible] ಬಾದಶಹರೂ, ಭಾರತ ಮಂತ್ರಿಗಳೂ, ಸರ್ವಾಧಿಪತಿಗಳೂ, ವಿಶ್ವವಿದ್ಯಾಲಯದವರೂ ಎಲ್ಲರೂ ಅಭಿನಂದಿಸುತ್ತಾರೆ. ಗುಂಡು ಹಾರುತ್ತಿರುವಾಗ ಸಾಹಸದಿಂದ ಮುಂದಾಗಿ ವೀಣಾ ದಾಸರವರಿಗೆ ಹಿಡಕೊಟ್ಟ ಬಗ್ಗೆ ವ್ಹಾಯಿಸ-ಚೆನ್ಸಲರರಾದ ಸುಹ್ರವಾರ್ದಿಯವರಿಗೆ 'ನ್ಯಾಟಹುಡ್' ಎಂಬ ಪದವಿಯು ಜಾಹೀರ ಮಾಡಿದೆ. ವೀಣಾ ದಾಸರ ಕೈಫಿಯತನ್ನು ಪ್ರಕಟಿಸಬಾರದಾಗಿ ಬಂಗಾಲ ಸರಕಾರವು ಕಲಕತ್ತೆಯ ಪತ್ರಕರ್ತರಿಗೆ ವಿಧಿಸಿತು. ಅದರಿಂದ ಆ ಪತ್ರಗಳಲ್ಲಿ ಅವಳ ಕೈಫಿಯತು ಓದಸಿಗದೆ ಪರಪ್ರಾಂತಗಳ ವರ್ತಮಾನಪತ್ರಗಳಿಂದ ಅದನ್ನು ಅಲ್ಲಿಯವರು ಓದಬೇಕಾಯಿತಂತೆ. ಅದನ್ನು ಪರಿಶುದ್ಧಗೊಳಿಸಿ ಪ್ರಕಟಿಸಬೇಕಾಗಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿತ್ತು, ಹೊರತು ಪ್ರಕಟಿಸಬಾರದಾಗಿ ತಿಳಿಸಿದ್ದಿಲ್ಲವೆಂದು ಬಂಗಾಲ ಕಾಯಿದೆ ಕೌನ್ಸಿಲಿನಲ್ಲಿ ಸರಕಾರವು ತಿಳಿಸಿಯದೆ

— ಲಂಡನಿನ 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕೆಯು ಹಿಂದೀ ಪರಿಸ್ಥಿತಿಯ ಮೇಲೆ ಮುಖ್ಯ ಲೇಖ ಬರೆದದೆ "ತೋರಗಾಣಿಕೆಗೆ ಹಿಂದುಸ್ಥಾನದೊಳಗೆ ಸಮಾಧಾನವಿದೆ, ಆದರೆ, ಅಂತಃಕರಣವಲ್ಲ ಬಹಳ ಕಳವಳಗೊಂಡಿದೆ. ಚಳವಳಿಯು ಈಗ ಆಳವಾಗಿ ಹಬ್ಬಿಕೊಂಡಿದೆ. ರಾಷ್ಟ್ರೀಯ ಸಭೆಯನ್ನು ಕೊಲ್ಲಲು ಸರಕಾರದ ಎಷ್ಟು ಬಲಾತ್ಕಾರ ನಡಿಸಿದಾಗ್ಯೂ ಅದು ಸಾಧ್ಯವಾಗದು. ಸ್ವರಾಜ್ಯ ಕೊಡಲು ಬ್ರಿಟಿಶರು ವಚನ ಕೊಟ್ಟಿದ್ದಾರೆ, ಅದಕ್ಕೆ ಹಿಂದೀಯರ ಸಹಕಾರ ಬೇಕು. ದಬ್ಬಾಳಿಕೆಯಿಂದ ಹಿಂದೀಯರ ಸಹಕಾರ ಸಿಗದು. ರಾಜಶಾಸನಗಳಿಂದ ಜನರು ಉದ್ವಿಗ್ನರಾಗುತ್ತಾರೆ, ಸರಕಾರದ ಕಡೆ ಸಹಕಾರ ಮಾಡಲು ಕಷ್ಟವಾಗುತ್ತದೆ. ಹೀಗೆ ಸರಕಾರಕ್ಕೂ ಜನರಿಗೂ ಕದನ ನಡದಾಗ ಕ್ರಾಂತಿಕಾರಕರಿಗೆ ಉತ್ತೇಜನ ದೊರಕುತ್ತದೆ; ಈಗ ದೊಡ್ಡ ಸಾಹಸಮಾಡಿ ಮುಖ್ಯ ಮುಖ್ಯ ಲೋಕನಾಯಕರ ಕಡೆ ಮುಂದಿನ ಕಾರ್ಯದ ಬಗ್ಗೆ ಆಲೋಚನ ಮಾಡಿರಿ. ಅಡ್ಡಹಾದಿ ಹಿಡಿದು ಹೋಗುವ ಕ್ರಾಂತಿಕಾರಕರಿಗೆ ಕಿವಿ ಹಿಡಿದು ರಾಜಮಾರ್ಗಕ್ಕೆ ತರಬೇಕು." ಹೀಗೆ "ಮೆಂಚೆಸ್ಟರ ಗಾರ್ಡಿಯನ್" ಪತ್ರಿಕೆಯು ಬ್ರಿಟಿಶ ಸರಕಾರಕ್ಕೆ ಬುದ್ಧಿ ಹೇಳಿದೆ. ರೌಂಡ ಟೇಬಲಿನ ಫೆಡರಲ್ ಸ್ಟ್ರಕ್ಚರ ಕಮಿಟಿಯ ಅಧ್ಯಕ್ಷರಾದ ಸಂಕಿ ದೊರೆಗಳಿಗೆ ಹಿಂದುಸ್ಥಾನದೊಳಗಿನ ದಬ್ಬಾಳಿಕೆ ನೋಡಿ ಬಹಳ ಮನೋವ್ಯಥೆಯಾಗಿರುವದಂತೆ. ಸಂಕಿ ದೊರೆಗಳು ಸಾಮ್ರಾಜ್ಯ ಸರಕಾರದ ಒಬ್ಬ ಮಂತ್ರಿಗಳು. ಆದರೆ, ಇವರ ವ್ಯಸನದಿಂದ ಮೊದಲೇನೂ ಪರಿಣಾಮವಾದದ್ದು ಕಾಣುವದಿಲ್ಲವಾಗಿ "ಫ್ರೀ ಪ್ರೆಸ್" ಪತ್ರಿಕೆಯ ರಿಪೋರ್ಟರರು ಬರೆದು, ದೊರೆಗಳು ನಿದ್ದೆ ಹೋದರೇನೆಂದು ಪ್ರಶ್ನಿಸುತ್ತಾರೆ.

— ಸಾಮ್ರಾಜ್ಯ ಸರಕಾರದ ವರ್ತಕ ಇಲಾಖೆಯ ರಿಪೋರ್ಟು ಪ್ರಕಟವಾಯಿತು. ೧೯೩೧ನೇ ಮಾರ್ಚ ಅಖೈರಿಗೆ ಅಂತ್ಯವಾಗುವ ವರ್ಷದ ರಿಪೋರ್ಟಿನ ಹಿಂದುಸ್ಥಾನದಲ್ಲಿ ಮಾರಾಗುವ ಜವಳಿಯಲ್ಲಿ ಮೂರು ಪಾಲು ಬ್ರಿಟಿಶ ದೇಶದ್ದು; ಒಂದು ಪಾಲು ಹಿಂದುಸ್ಥಾನದೊಳಗಿನ ಗಿರಣಿಯದು ಇರುತ್ತಿತ್ತು. ಈಗ ಹಿಂದುಸ್ಥಾನದೊಳಗಿನದು ೩ ಪಾಲು, ಎಲ್ಲ ಪರದೇಶಗಳದು ಕೂಡಿ ೧ ಪಾಲು, ಈ ಚತುರ್ಥಾಂಶದೊಳಗೆ ಅರ್ಧದಷ್ಟು ಬ್ರಿಟಿಶರದು, ಉಳಿದದ್ದು ಜಪಾನ ಮೊದಲಾದ ದೇಶಗಳದು. ಇದಕ್ಕೆ ೪ ಕಾರಣಗಳಿರುವವಾಗಿ ಇಲಾಖೆಯ ಅಭಿಪ್ರಾಯ - (೧) ಬಡತನ. (೨) ಬಹಿಷ್ಕಾರ. (೩) ಹಿಂದೀ ಗಿರಣಿಯವರ ಪೈಪೋಟಿ, (೪) ಜಪಾನ ಸರಕುಗಳ ಕಡಿಮೆ ದರ. ಕಳಕೊಂಡ ವ್ಯಾಪಾರವನ್ನು ಹೇಗೆ ಉದ್ಧರಿಸುವದೆಂದು ವರ್ತಕ ಇಲಾಖೆಯವರ ಚಿಂತೆ. ಹಿಂದೀಯರಿಗೆ ಆಮದು-ರಪ್ತಿನ-ಮೇಲೆ ಸ್ವಾಧಿಪತ್ಯವಿಡಲು ಅಧಿಕಾರ ಕೊಡಲಾಗದು; ಕೊಟ್ಟರೆ, ಲಂಕೆಶಾಯರದ ಗಿರಾಕಿ ಕುಗ್ಗುವದು. ಹೀಗೆ ವರ್ತಕ ಇಲಾಖೆಯವರ ಮುಂಜಾಗ್ರತೆ.

— ಮದ್ರಾಸ ಇಲಾಖೆಯ ಜಮಾ-ಖರ್ಚು ಪ್ರಕಟವಾಗಿದೆ. ೨ ಕೋಟಿ ೩೩ ಲಕ್ಷ ರೂಪಾಯಿ ತುಟ್ಟಿ! ಜನರು ಬಡವರಾದರು; ಸತ್ಯಾಗ್ರಹದ ಗಡಿಬಿಡಿ, ಈ ಮೂಲಕ ಆಯ ಕುಗ್ಗಿತು, ವ್ಯಯ ಹಿಗ್ಗಿತು; ಹೀಗೆ ಕೋಶಾಧಿಕಾರಿಗಳು ಮರುಗಿದರು.

(೧ನೇ ಪಾನಿನ ಮೇಲೆ ಮುಂದರಿಸಿಯದೆ)

ಚೀನ-ಜಪಾನ ಯುದ್ಧ!

ಕಳೆದ ವಾರದಲ್ಲಿ ಅಪೇಕ್ಷೆಯಂತೆ ಸಂಧಾನವಾಗಲಿಲ್ಲ. ಶುಕ್ರವಾರ ೮/೫೦ ಘಂಟೆಗೆ ಚಾಪೆ ಪ್ರದೇಶದಲ್ಲಿ ಜಪಾನರು ಒಮ್ಮೆಲೇ ಸಾಗಿಹೋದರು. ಚೀನಿಯರಿಗೂ, ಜಪಾನರಿಗೂ ಅಂದಿನಿಂದ ಘೋರ ಕದನವಾಯಿತು. ಅದ್ಭುತ ಸಂಗ್ರಾಮವಾಯಿತು ಕಿಯಾಂಗವಾನ ಗ್ರಾಮದಲ್ಲಿಯೂ. ವೂಸಂಗ ಪ್ರದೇಶದಲ್ಲಿಯೂ ಚಾಪೇ ನೆರೆಹೊರೆಯಲ್ಲಿಯೂ ಚೀನಿಯರು ವಿಲಕ್ಷಣ ಧೈರ್ಯದಿಂದ ಜಪಾನ ಸೈನ್ಯಕ್ಕೆ ಇದಿರಾದರು; ಮುಂದೆ ಹೆಜ್ಜೆಯಿಡಗೊಡಲಿಲ್ಲ. ಚೀನಿಯರ ಕಡೆ ಆಧುನಿಕ ಮದ್ದು-ಗುಂಡುಗಳ ಸಂಗ್ರಹವಿಲ್ಲ. ಆದಾಗ್ಯೂ, ಪುರಾತನ ಮದ್ದುಗುಂಡುಗಳಿಂದಲೇ ಕಾರ್ಯಭಾಗ ಸಾಗಿಸಿದರು. ಜಪಾನ ಸೈನ್ಯವು ಹಿಂಜರಿಯಿತು. ೧-೨ ದಿನಗಳಲ್ಲಿ ೩,೦೦೦ ಮಂದಿ ಜಪಾನಿ ಸೈನಿಕರು ಮಡಿದರಾಗಿ ಜಪಾನ ಸರಕಾರ ಪ್ರಕಟಿಸಿ. ಇನ್ನೂ ಹೆಚ್ಚು ಜನರು ತೀರಿರಬೇಕಾಗಿ ನಿರೀಕ್ಷಕರ ಎಂಬೋಣ. ಆಕಾರದಲ್ಲಿ ವಿಮಾನಗಳ ಸಂಗ್ರಾಮವಾಯಿತು. ಅಲ್ಲಿ ಚೀನಿಯರು ಸೋತರೆಂದು ಜಪಾನ ಸರಕಾರದ ಅಂಬೋಣ, ಆದಾಗ್ಯೂ, ಕಿಯಾಂಗವಾನ ಹಳ್ಳಿಯನ್ನು ಜಪಾನಿಯರು ಬಿಟ್ಟು ಹೋಗಬೇಕಾಯಿತು. ಕಿಯಾಂಗವಾನ ಹಳ್ಳಿಯಲ್ಲಿಯೇ ಈಗ ಘೋರ ಸಂಗ್ರಾಮ ನಡದಿದೆ. ಜಪಾನಿಯರು ವಿಮಾನಗಳ ಮೇಲಿಂದ ಬಾಂಬುಗಳನ್ನು ಹಾರಿಸುತ್ತಾರೆ. ಕಾಲಾಳುಗಳು ಗುಂಡು ತೋಪುಗಳನ್ನು ಹಾರಿಸುತ್ತಾರೆ. ಈಗ ಅಲ್ಲಿ ಮಳೆಗಾಲ ಪ್ರಾರಂಭವಾಗಿದೆ. ಅದರಿಂದ ಸ್ವಲ್ಪ ಸಮಾಧಾನವಾದಂತೆ ತೋರುತ್ತದೆ. ಆದಾಗ್ಯೂ, ಸಂಗ್ರಾಮದ ಪ್ರವೃತ್ತಿಯೇನೂ ಕುಂದಲಿಲ್ಲ. ವಿಪರೀತ ಮಳೆ ಬೀಳುವದರಿಂದ ಯಾಂತ್ರಿಕ ತೋಪುಗಳನ್ನು ಒಯ್ಯಲು ತೊಂದರೆಯಾಗಿದೆ. ಇದಕ್ಕಾಗಿ ಈ ಪ್ರದೇಶದ ಮಾಹಿತಿ ಜಪಾನಿಯರಿಗೆ ಕಡಿಮೆ. ಚೀನಿಯರು ಊರವರು, ಅವರಿಗೆ ಅಲ್ಲಿಯ ಎಲ್ಲ ಮಾಹಿತಿಯುಂಟು. ಸಾವಿರಾರು ಚೀನಿ ಸೈನಿಕರು ಸಹ ತೀರಿಕೊಂಡರು. ಇಷ್ಟಾಗ್ಯನಲ್ಲಿಯೂ ಮೊದಲಿನ ತಯಾರಿ ನಡೆದಿದೆ. ಜಪಾನ ದೇಶದಿಂದ ೩೦ ಸಾವಿರ ಸೈನಿಕರು ಇದೀಗಲೇ ರಣಕ್ಷೇತ್ರದಲ್ಲಿದ್ದಾರೆ. ಇನ್ನು ಅಷ್ಟೇ ಸೈನ್ಯ ಕಳಿಸಬೇಕಾಗಿ ಒರಳೊಂಡಿರುವದಂತೆ. ರ್ಯೂಟರ ಪತ್ರಿಕಾ ಪ್ರತಿನಿಧಿಗಳು ಚೀನ ಸೇನಾಪತಿಗಳ ಕಡೆ ಈ ಕುರಿತು ವಿಚಾರಿಸಲು, "ನಾವು ಯಾವುದಕ್ಕೂ ತಯಾರಿದ್ದೇವೆ, ೧ ವರ್ಷದ ತನಕ ಯುದ್ಧ ನಡಿಸಬಲ್ಲೆವು," ಹೀಗವರು ಹೇಳಿದರು. "ಒಬ್ಬೊಂಟಿಗ ಚೀನಿಯನ ತನಕ ಚೀನಿಯರೊಡನೆ ನಾನು ಹೋರಾಡುವೆ. ಅವರೊಡನೆ ಹೋರಾಡುತ್ತ, ಹೋರಾಡುತ್ತ ನಾನು ಮಡಿಯುವೆ" ಹೀಗೆ ಮುಖ್ಯ ಚೀನ ಸೇನಾಪತಿಗಳಾದ ಚಿಯಾಂಗ-ಕೈ-ಶೇಕರವರು ಹೇಳಿ, ಸೈನಿಕರಿಗಲ್ಲಿ ಇದೇ ನಿರ್ಧಾರದಿಂದ ಹೋರಾಡಲು ಅಪ್ಪಣೆ ಮಾಡಿದ್ದಾರೆ. ಚೀನ ಸೇನಾಪತಿಗಳಲ್ಲಿಯೂ ಒಕ್ಕಟ್ಟಾದ್ದರಿಂದ ಇಡೀ ಚೀನ ದೇಶದಲ್ಲಿ ಅದ್ಭುತ ಉತ್ಸಾಹವು ನೆಲೆಗೊಂಡಿದೆ. ಜಪಾನ ದೇಶದ ಹಾವಳಿಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಬೇಕುಬೇಕಾದ ಸ್ವಾರ್ಥತ್ಯಾಗ ಮಾಡಲು ಚೀನಿಯರು ಸಿದ್ಧರಾಗಿದ್ದಾರೆ. ಇದಕ್ಕಾಗಿ, ಚೀನಿಯರು ಪರದೇಶದವರಿಗೆ ಸ್ನೇಹಿಸುವದಿಲ್ಲ. ಸ್ವದೇಶವನ್ನು ಸುಲಿಯಗೊಡಬಾರದೆಂದೇ ಅವರ ಹೇಳಿಕೆ. ಚೀನಿಯರು ಈ ಧೋರಣದಿಂದಲೇ ಕಿಯಾಂಗವಾನ ಗ್ರಾಮದಲ್ಲಿ ವೀರಾವೇಶದಿಂದ ಹೋರಾಡುತ್ತಿದ್ದಾರೆ. ಗುರುವಾರ ಚೀನಿಯರ ಸೈನ್ಯ ಪಡೆ ಚದರಿಸಿ ಜಪಾನಿಯರು ಅವರಿಗೆ ಸುತ್ತುಗಟ್ಟಲು ಕೌಶಲ್ಯದಿಂದ ಪ್ರಯತ್ನಿಸಿದರು. ಸೈನಿಕರಲ್ಲದನ್ನು, ಮದ್ದು-ಗುಂಡುಗಳನ್ನೂ, ಯಾಂತ್ರಿಕ ತೋಪುಗಳನ್ನೂ ಒಟ್ಟು ಮಾಡಿ ೩ ತಾಸುಗಳ ತನಕ ಚೀನಿಯರ ಮೇಲೆ ರೌದ್ರಾವತಾರ ತಾಳಿ ಸಾಗಿಹೋದರು. ಚದರಿಹೋದ ಚೀನಿಯರು ಮತ್ತೆ ಪುನಃ ತಂಡುಗಟ್ಟಿ ಬಂದು ಜಪಾನಿಯರಿಗೆ ಇದಿರಾಗಿ ಹಿಂದಕ್ಕೊತ್ತಿದರು. ಈಗ ಶಾಂಘಾಯ ರಣಕ್ಷೇತ್ರದಲ್ಲಿಯೇ ಘನಘೋರ ಸಂಗ್ರಾಮ ನಡೆಯುವದು. ಮುಕಡೇನ-ಕೆಂಟನ್ ಮೊದಲಾದ ಕಡೆಗಳಿಂದ ಸೇನಾಪತಿಗಳು ಸೈನ್ಯ ಕೊಂಡು ಶಾಂಘಾಯ ಕಡೆ ಕೂಚು ಮಾಡುತ್ತಿದ್ದಾರೆ. ಕೆಂಟನ್‌ದಿಂದ ಸೈನಿಕರೂ, ತಿಂಗಳಿಗೆ ೧೫ ಸಾವಿರ ಜನವೂ ಯುದ್ಧಕ್ಕಾಗಿ ರವಾನೆಯಾಗುತ್ತಿವೆ. ಇದರಿಂದ ಶಾಂಘಾಯದೊಳಗಿನ ಸೈನಿಕರಿಗೆ ಹೊಸ ಹುರುಪು ಬಂದಿದೆ. ಅಂತರ್‌ರಾಷ್ಟ್ರೀಯ ವಸಾಹತಿನಲ್ಲಿ ಜಪಾನಿಯರು ಉಂದು ತಮ್ಮ ಮೇಲೆ ಸಾಗಿಬರುವದರಿಂದ ಠರಾವಿನಂತೆ ಅಂತರ್‌ರಾಷ್ಟ್ರೀಯ ವಸಾಹತನ್ನು ರಕ್ಷಿಸಲು ತಾವು ಒಪ್ಪಿದರಲ್ಲವಾಗಿ ಚೀನ ಸರಕಾರವು ಜಾಹೀರನಾಮೆ ಹೊರಡಿಸಿದೆ. ಅದರಿಂದ ವಸಾಹತಿನಲ್ಲಿ ಉಳಿದ ಬ್ರಿಟಿಶ-ಜರ್ಮನಿ ಮೊದಲಾದ ಪರರಾಷ್ಟ್ರದವರು ಗಂಟು-ಮೂಟೆ ಕಟ್ಟಿ ಸ್ವದೇಶಕ್ಕೆ ತೆರಳತಯಾರಾಗಿದ್ದಾರೆ. ಶರಣಾಗತರಾದರೆ ನಿಮಗೆ ಕೊಲ್ಲುವದಿಲ್ಲವಾಗಿ ಜಪಾನ ಸೇನಾಪತಿಗಳು ಉದಾರಧೀಗಳಾಗಿ ವಿಮಾನಗಳಿಂದ ಪ್ರಕಟಣೆಗಳನ್ನು ಚಲ್ಲಿಕೊಟ್ಟಿದ್ದರು. ಅದರಂತೆ ಶರಣಾಗತರಾದವ್ಯಾರಿಲ್ಲ. ಸೆರೆಬಿದ್ದ ಜಪಾನಿಯರಿಗೆ ಚೀನಿಯರು ಆದರದಿಂದ, ಪರೋಪಕಾರ ಬುದ್ಧಿಯಿಂದ ನಡಿಸಿಕೊಳ್ಳುತ್ತಾರೆ, ಗಾಯಪಟ್ಟವರಿಗೆ ಭೂತದಯೆಯಿಂದ ಉಪಚಾರ ಮಾಡುತ್ತಾರೆ. ಜಪಾನಿಯರು ಹೊಡೆದ ಗುಂಡುಗಳಿಂದ ಚಾಪೇ ಪ್ರದೇಶವು ಉರಿಯುತ್ತಲಿದೆ.

ಜಪಾನಿಯರೂ ಅಷ್ಟೇ ನಿರ್ಧಾರದಿಂದ, ಸ್ವಾರ್ಥತ್ಯಾಗದಿಂದ ಚೀನ ದೇಶವನ್ನು ಪಾದಾಕ್ರಾಂತ ಮಾಡಿಕೊಳ್ಳಲು ಹೋರಾಡುತ್ತಿದ್ದಾರೆ. ವೂಸಂಗದಲ್ಲಿ ಚೀನಿಯರು ಮುಳ್ಳಿನ ಬೇಲಿಹಾಕಿ ಜಪಾನ ಸೈನಿಕರು ಒಳಸೇರದಂತೆ ವ್ಯವಸ್ಥೆ ಮಾಡಿದ್ದರು. ಮೂವರು ಜಪಾನಿಯರು ಜೀವದ ಪರಿವೆ ಹಿಡಿಯದೆ ತಮ್ಮ ಮೈ ಸುತ್ತುಮುತ್ತು ಬಾಂಬುಗಳನ್ನು ಕಟ್ಟಿಕೊಂಡು ಬೇಲಿಯ ಕಡೆಗೆ ಹೋಗಿ ಅವಕ್ಕೆ ಬೆಂಕಿ ಹಚ್ಚಿ ಬೇಲಿಯನ್ನು ಮುರಿದು ಚೂರುಚೂರು ಮಾಡಿ ಸೈನಿಕರಿಗೆ ಒಳಸೇರ ಹಾದಿಮಾಡಿಕೊಟ್ಟು ಮಡಿದರು. ಈ ಕುರಿತು ಜಪಾನ ಸೇನಾಪತಿಗಳಾದ ವುಯಿದಾರವರು ಅವರಿಗೆ ಹೊಗಳಿದರು. ಈಗ ಜಪಾನಿಯರು ಚೀನ ಸೈನ್ಯದ ಪಟ್ಟು ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಈ ಯುದ್ಧ ಖರ್ಚಿಗಾಗಿ ಜಪಾನ ದೇಶವು ೪ ಕೋಟಿ ಯೇನು ನಾಣ್ಯವನ್ನು ಮಂಜೂರ ಮಾಡಿಯದೆ. ಮಾರ್ಚ ತಾ ೩೧ ರ ತನಕ ಇಷ್ಟು ಖರ್ಚ ತಗಲುವದಾಗಿ ಹೇಳುತ್ತಾರೆ. ಯೇನು ನಾಣ್ಯವೆಂದರೆ, ೩ ರೂಪಾಯಿ

ಜಪಾನಿಯರು ತಮ್ಮ ರಣಕ್ಷೇತ್ರದ ಕಚೇರಿಯಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಸೇರಗೊಡುವದಿಲ್ಲ. ಚೀನಿ ಸೇನಾಪತಿಗಳು ಅವರೆಲ್ಲರಿಗೆ ತಮ್ಮ ಕಚೇರಿಯಲ್ಲಿ ಕರೆದು ಔತಣ ಕೊಟ್ಟು ಇದ್ದ ಸ್ಥಿತಿಯನ್ನು ವಿವರಿಸಿದರಂತೆ. ಜಪಾನಿಯರ ಬೆಂಡೇಳಿಸುವದೆಂದು ತಿಳಿಯದು. ಚೀನ ಸೇನಾಪತಿಗಳಾದ ಸೈತಿಂಗ ಕೇರವರ ಸಮೂನೆ ಕೇಳಿದರೆ ಆಶ್ಚರ್ಯವಾಗುತ್ತದೆ. "ನನಗೆ ಜಲೋ ಹೋರಾಡಬೇಕೆಂದು ಇಚ್ಛೆಯಿದೆ. ಹೋರಾಡಲು ನನ್ನ ಸೈನಿಕರು ಆತುರಗೊಳ್ಳುತ್ತಾರೆ." ಹೀಗೆ ಅವರು ರ್ಯೂಟರ ಪತ್ರಿಕಾಪ್ರತಿನಿಧಿಗಳ ಬಳಿ ನುಡಿದರು. ಇವರು ವಿಲಕ್ಷಣ ಪುರುಷರು. ರಣರಂಗದಲ್ಲಿ ಯುದ್ಧ ತಡವಾಗ ಒಂದೆಡೆ ಕೂತು ಗ್ರಂಥಗಳನ್ನು ಓದುತ್ತಾರೆ, ಕವಿತೆಗಳನ್ನು ರಚಿಸುತ್ತಾರೆ! ಚೀನ ಸೈನಿಕರಿಗೆ ರುಶ್ಯ ದೇಶದ ಮಾರ್ಗವಾಗಿ ಮದ್ದುಗುಂಡುಗಳ ಪೂರೈಕೆಯಾಗುತ್ತದೆಂದು ವಾರ್ತೆ. ಜರ್ಮನ್ ಸರಕಾರವು ಇದು ದಿಟವಲ್ಲವಾಗಿ ಒಂದು ಪ್ರಕಟಣೆಯನ್ನೇ ಹೊರಡಿಸಿ ಬಿಟ್ಟಿದೆ. ಜರ್ಮನ್ ಯುದ್ಧಕಲಾವಿಶಾರದರು ಚೀನಿ ಸೈನಿಕರಿಗೆ ಯುದ್ಧಕಲೆಯನ್ನು ಕಲಿಸಿಕೊಡುತ್ತಾರಾಗಿಯೂ ಒಂದು ವಾರ್ತೆ. ಅದೂ ದಿಟವಲ್ಲವಾಗಿ ಹೇಳುತ್ತಾರೆ. ಜಪಾನ ದೇಶವು ಶಾಂಘಾಯ ಪ್ರದೇಶವನ್ನು ಪಾದಾಕ್ರಾಂತ ಮಾಡಿಕೊಂಡರೆ, ಈಗಿನ ಯುದ್ಧಕ್ಕೆ ಉಗ್ರರೂಪ ಬರುವದಾಗಿ ಜರ್ಮನಿಯೊಳಗಿನ 'ಬೋರಸೇನ-ಝಿತುಂಗ,' 'ಓಸೀಜಾ ಝಿತುಂಗ' ಪತ್ರಿಕೆಗಳ ಅಭಿಪ್ರಾಯ. ಚೀನಿಯರ ವಿದ್ಯಮಾನ ಜಪಾನ ವಿರೋಧದ ಗೋಣು ಮುರಿದ ಬಳಿಕ, ಅಮೇರಿಕೆಯವರು ಜಪಾನ ದೇಶದ ಉದ ಸೊಕ್ಕು ಮುರಿದು, ಚೀನ ರಾಷ್ಟ್ರಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾಗುವದಾಗಿ 'ಬೋರಸೇನ-ಝಿತುಂಗ' ಪತ್ರಿಕೆಯ ಎಣಿಕೆ. ಜರ್ಮನಿಯಲ್ಲಿ ಗಾಳಿ ಯಾವ ಮಾರ್ಗದಿಂದ ಬೀಸುತ್ತದೆಂದು ಇದರ ಮೇಲಿಂದ ತಿಳಿಯಬಹುದು.

ಈಗ ಎಲ್ಲರೂ ಗಾಬರಿಯಾಗಿದ್ದಾರೆ. ಬ್ರಿಟಿಶ ಪ್ರಧಾನ ಮಂಡಳವು ಮತ್ತೂ ಗಾಬರಿಯಾಗಿದೆ. ಜಪಾನ ದೇಶದ ಮೇಲೆ ಸಾಗಿ ಹೋಗಲಿಕ್ಕೆ ಬ್ರಿಟಿಶರು ಧೈರ್ಯ ಪಡುವದಿಲ್ಲ. ಸಾಗಿ ಹೋಗದೆ ಸುಮ್ಮಗಿದ್ದರೆ, ಜಪಾನಿಯರು ಯಾರಿಗೂ ಕೇಳುವದಿಲ್ಲ. ಶಾಂಘಾಯ ಬಂದರದಲ್ಲಿ ಇದ್ದ ಬ್ರಿಟಿಶ ವಸಾಹತು ನಷ್ಟವಾಗುವ ಭೀತಿಯಿದೆ. ಬ್ರಿಟಿಶ ವ್ಯಾಪಾರವು ನಿಂತುಹೋಗುವದು. ಈ ತನಕ ಸುಮ್ಮಗುಳಿದು ಜಪಾನಿಯರಿಗೆ ಉತ್ತೇಜನ ಕೊಟ್ಟರಾಗಿಯೂ, ಇನ್ನು ಸುಮ್ಮಗುಳಿಯಲಸಾಧ್ಯವೆಂದೂ ಮಿ| ಬ್ರೇಲ್ಸಫರ್ಡರವರೂ, ಸರ್ ಫ್ರೆಡರಿಕ್ ವ್ಹೈಟರವರೂ ಅಭಿಪ್ರಾಯಪಡುತ್ತಾರೆ. ಬ್ರಿಟಿಶರು ದುರ್ಬಲರಾದವರು, ಮತದೋಸನಲ್ಲರು ಧೈರ್ಯ ಹಿಡಿಯಲಿಲ್ಲ, ಜಪಾನಿಯರು ತಮ್ಮ ಮುಂದೆ ಹಾಗೆ ಬ್ರಿಟಿಶರು ತಲೆ ಬಗ್ಗಿಸಿದರು, ಪ್ರತೀಕಾರ ಮಾಡಲಿಲ್ಲ. ಹೀಗೆ ಮಿ| ಬ್ರೇಲ್ಸಫರ್ಡರವರು ಬ್ರಿಟಿಶ ಪ್ರಧಾನ ಮಂಡಳದ ಮೇಲೆ ಆಕ್ಷೇಪ ಮಾಡುತ್ತಾರೆ. ಸರ್ ಫ್ರೆಡರಿಕ್ ವ್ಹೈಟರವರು ಸಾಮಾನ್ಯ ಮನುಷ್ಯರಲ್ಲ. ೧೯೨೧ನೇ ಇಸ್ವಿಯಲ್ಲಿ ಚೀನ ರಾಷ್ಟ್ರೀಯ ಸಲ್ಲಾಗಾರರಾಗಿ ಇವರು ಕೆಲಸ ಮಾಡುತ್ತಿದ್ದರು. ಜಪಾನ ದೇಶಕ್ಕೆ ಇದೀಗಲೇ ಪ್ರತಿಕಾರ ಮಾಡದಿದ್ದರೆ, ಇಂಗ್ಲಂಡ, ಫ್ರಾನ್ಸ, ಅಮೇರಿಕಾ. ಹೀಗೆ ಎಲ್ಲ ದೇಶಗಳು ಒಂದರ ಹಿಂದೊಂದು ರಣಕ್ಷೇತ್ರದಲ್ಲಿಳಿಯುವ ಪ್ರಸಂಗವಿರವದಾಗಿಯೂ,

ದುಷ್ಟರು ಸಹ ಅಲಿಪ್ತರಿರಲಿಕ್ಕಿಲ್ಲವಾಗಿಯೂ ಊಹಿಸುತ್ತಾರೆ. ರಾಷ್ಟ್ರಸಂಘವು ಚೀನ ದೇಶವನ್ನು ರಕ್ಷಿಸಲು ಬದ್ಧವಿದೆ. ಹಾಗೆ ನಡಕೊಳ್ಳಲು ಕರಾರುಗಳ ಅನಸ್ನೆಲ್ಲ ಉಲ್ಲಂಘಿಸಿ ಚೀನ ದೇಶದ ಭಾಗವನ್ನು ಜಪಾನ ಸರಕಾರವು ಬಲಾತ್ಕಾರದಿಂದ ಅಪಹರಿಸಿದರೆ, ಅದಕ್ಕ ಮನ್ನಣೆ ಸಿಗಲಿಕ್ಕಿಲ್ಲವಾಗಿ ಜಪಾನ ಸರಕಾರಕ್ಕೆ ಒಂದು ನೋಟೀಸು ಕೊಡಬೇಕಾಗಿ ಸರ್ ಫ್ರೆಡರಿಕ್ ವ್ಹೈಟರವರ ಸೂಚನೆ ನೋಟೀಸು ಸೂಚನೆ ಮಾಡಲಾದ ಕಾಗದ ಕುಮರಿಗಳಿಗೆ ಜಪಾನ ಸರಕಾರವು ಮಣಿಯಲಿಲ್ಲ ಇದು ಜಪಾನ ದೇಶದ ವ್ಯಕ್ತಿಗತ ವಿಷಯವಾದ್ದರಿಂದ ಕೈಹಾಕಲು ರಾಷ್ಟ್ರಸಂಘಕ್ಕೆ ಅಧಿಕಾರವೇ ಇಲ್ಲವಾಗಿ ಜಪಾನಿ ರಾಯಬಾರಿಗಳು ಈಗಲೂ ಆಕ್ಷೇಪಿಸುತ್ತಾರೆ. ಬ್ರಿಟಿಶ ಪರರಾಷ್ಟ್ರೀಯ ಪ್ರಧಾನರಾದ ಸರ್ ಜೊನ್ ಸ್ಯಾಮನ್‌ರವರು ಪ್ರಧಾನ ಮಂಡಳದವರೊಡನೆ ಆಲೋಚಿಸಿ ಲಗಬಗೆಯಿಂದ ಮಂಗಳವಾರ ಅವರಾಷ್ಟ್ರ ರಾಷ್ಟ್ರಸಂಘದ ಮುಖ್ಯ ಪಟ್ಟಣವಾದ ಜಿನೇವಾ ಪಟ್ಟಣಕ್ಕೆ ತೆರಳಿದರು. ಫ್ರಾನ್ಸ ದೇಶದಿಂದ ತಾರ್ಡಿಯರವರೂ, ಇತಾಲಿಯಿಂದ ಸ್ಯಾನೋರ ಗ್ರೆಂಡಿಯವರೂ, ಜರ್ಮನಿಯಿಂದ ಡಾ| ಬ್ರುನಿಂಗರವರೂ ಜಿನೇವಾದ ಕಡೆ ಒಮ್ಮೆಲೇ ತೆರಳಿದ್ದಾರೆ ಲಗಬಗೆಯಿಂದ ಸಭೆಯಾಗುವದಿದೆ. ಇನ್ನು ಜಪಾನ ದೇಶಕ್ಕೆ ಬರೇ ನಿಷೇಧ ಪತ್ರ ಕಳಿಸಿ ಪ್ರಯೋಜನವಿಲ್ಲವಾಗಿಯೂ ಅಭಿಪ್ರಾಯವಾಗಿದೆ ಇಬ್ಬರೂ ಒಮ್ಮಲೇ ವಿಘ್ನವನ್ನು ಒರೆಯಲ್ಲಿ ಹಾಕಬೇಕಾಗಿಯೂ, ಆ ಮೇಲೆ ಎಲ್ಲ ವಿಚಾರ ಮಾಡಬೇಕಾಗಿಯೂ ಬ್ರಿಟಿಶರ ಸೂಚನೆ. ಲೋಕದೊಳಗಿನ ಯುದ್ಧಗಳನ್ನು ನಿಲ್ಲಿಸುವದಕ್ಕಾಗಿ ಜನ್ಮವನ್ನೆತ್ತಿದ್ದ ರಾಷ್ಟ್ರಸಂಘವು ಇನ್ನೂ ಹಯಾತಿಯಲ್ಲಿರುವಾಗ, ಚೀನ-ಜಪಾನ ದೇಶಗಳೊಳಗೆ ಯುದ್ಧ ನಡೆದು ರಣದೇವಿಯ ಅರ್ಭಾಟ ನಡೆಯಗೊಟ್ಟಲ್ಲಿ ರಾಷ್ಟ್ರಸಂಘ ನಿರರ್ಥಕವಾಗುವದಾಗಿ ರಾಷ್ಟ್ರಸಂಘದ ಅಭಿಮಾನಿಗಳು ಮರುಗುತ್ತಾರೆ. ರಾಷ್ಟ್ರಸಂಘದ ಸ್ಥಾಪನೆ ಕಾಲಕ್ಕೆ ಡಂಗುರ ಹೊಡೆದದ್ದೆಲ್ಲ ನಿರರ್ಥಕವಾಗುವ ಪ್ರಸಂಗ ಬಂದಿದೆ; ಸಾರ್ಥಕವಾಗುವ ಸಮಯವಾದರೂ ಇದೇ. ಆದಾಗ್ಯೂ ಬ್ರಿಟಿಶರು ಹೆದರುತ್ತಾರೆ. ಪಾರ್ಲಿಮೆಂಟಿನ ಸಭೆಯಲ್ಲಿ ಚರ್ಚೆಯ ಕಾಲಕ್ಕೆ ಜಪಾನ ದೇಶವನ್ನು ಆಕ್ಷೇಪಿಸಿ ಉಗ್ರ ಭಾಷಣವಾಗಲು, “ಜಪಾನಿಯರು ನಮ್ಮ ಮಿತ್ರರು, ಶತ್ರುಗಳಲ್ಲ; ಹಾಗೆ ಆಕ್ಷೇಪಿಸಲಾಗದು,” ಹೀಗೆ ಅಧ್ಯಕ್ಷರು ಉದ್ಗರಿಸಿದರು. ಬ್ರಿಟಿಶರು ಜಪಾನಿಯರಿಗೆ ಮದ್ದುಗುಂಡುಗಳನ್ನು ಇನ್ನೂ ಪೂರೈಸಲಿಲ್ಲ. ಆ ಕುರಿತು ಲೈಸನ್ಸುಗಳನ್ನು ಯಾರಿಗೂ ಕೊಡಲಿಲ್ಲವಾಗಿ ತಿಳಿಯುತ್ತದೆ. ಜಪಾನ ಸೈನ್ಯಕ್ಕೆ ಪರದೇಶಗಳಿಂದ ಮದ್ದುಗುಂಡಿನ ಪೂರೈಕೆಯಾಗುತ್ತದಾಗಿ ಹೇಳುತ್ತಾರೆ. ಯಾವ ದೇಶದಿಂದ ಎಂದು ತಿಳಿಯಲಿಲ್ಲ

ಲೋಕದಲ್ಲಿ ಶಾಂತತೆ ಸ್ಥಾಪಿಸಿ ಯುದ್ಧಕಾರಣಗಳನ್ನು ವಾದ-ವಿವಾದಗಳಿಂದ ಇತ್ಯರ್ಥಿಸಿ ಲೋಕಸಂಕಟ ಪರಿಹರಿಸುವದಕ್ಕಾಗಿ ಸ್ಥಾಪಿತವಾದ ರಾಷ್ಟ್ರಸಂಘದ ಸಂಸಾರ ದೊಡ್ಡದು. ಕೆಲಸವೇನೂ ತೋರದಿದ್ದಾಗ್ಯೂ, ಇದಕ್ಕೆ ಈ ತನಕ ಅಂತು ೧ ಕೋಟಿ ೧೦ ಲಕ್ಷ ಪವನು ಖರ್ಚು ಬಂತು ! ಅದರೊಳಗ ಬ್ರಿಟಿಶ ಸರಕಾರದ ಪಟ್ಟಿ ೧೩ ಲಕ್ಷ ೮೦ ಸಾವಿರ ಪವನಿಗೆ ಮುಟ್ಟಿತು

The Bombay Provincial
Cooperative Insurance
Society Ltd
9 *Bakehouse Lane*, FORT, BOMBAY.
Chief Organisers for the Presidency
JANI, KULKARNI & CO.

ಈ ಸೊಸೈಟಿಯನ್ನು ಮುಂಬಯಿಯೊಳಗಿನ ಮುಖ್ಯ ಮುಖ್ಯ ಸಹಕಾರಿಗಳು ಹೊರಡಿಸಿದ್ದಾರೆ ಸಹಕಾರಿ ಸಂಘಗಳ ರಿಜಿಸ್ಟ್ರಾರರು ಇದರ ಮೇಲ್ತಪಾಸ ಮಾಡುತ್ತಾರೆ

ರೂ ೧೦೦ರಿಂದ ರೂ ೫೦೦ರ ತನಕ ಡಾಕ್ಟರ ಪರೀಕ್ಷೆಯಿಲ್ಲದೆ ವಿಮಾ ಪತ್ರಗಳು ಕೊಡಲ್ಪಡುತ್ತವೆ

ರೂ ೫೦೦ರಿಂದ ರೂ ೨೦೦೦ದ ತನಕ ವಿಮೆ ಪತ್ರಗಳನ್ನು ಪಡೆಯಬೇಕಾದರೆ, ಡಾಕ್ಟರರಿಂದ ಪರೀಕ್ಷೆಯಾಗಬೇಕು

ಕೊ-ಆಪರೇಟಿವ್ಹ ಸೊಸೈಟಿಯ ಆಕ್ಟಿನಂತೆ ಈ ಸೊಸೈಟಿಗೆ ಎಲ್ಲಾ ಹಕ್ಕುಗಳಿವೆ

ಏಜನ್ಸಿ ಕೊಳ್ಳಲಪೇಕ್ಷಿಸುವವರು ಕರಾರು ಮತ್ತು ಊ ಪತ್ರಿಕೆಗಳಿಗಾಗಿ ಈ ಕೆಳಗೆ ಕೊಟ್ಟ ಪತ್ತೆಗೆ ಬರೆಕೊಳ್ಳಬೇಕು

ಏಜನ್ಸಿ ಕೊಡುವಾಗ ಸಹಕಾರಿ ಸಂಘಗಳಿಗೆ
ಹೆಚ್ಚಿನ ಪ್ರಾಶಸ್ತ್ಯವಿಟ್ಟಿದೆ.

ಡಿ. ಎಮ್. ಕುಲಕರ್ಣಿ,
ಕಾಜುಬಾಗ, ಕಾರವಾರ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಒಡೆಯುವವು, ಮತ್ತು ಉದುರುವವು. ನೀವು ಅವಕ್ಕೆ ಚಲೋ ‘ಕೂದಲನ್ನು’ ಕೊಡಬೇಕು. ಶ್ರೇಷ್ಠವಾದ ಕೂದಲನ್ನಾವದು ?

ಕಾಮಿನಿಯಾ ಆಯಿಲ್. (ರಿಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ.
ಅಥವಾ
ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನೀವು ಅಂಗಡಿಕಾರರಿಂದ
ತರಿಸಿಕೊಳ್ಳಿರಿ.

—:0:—

೩ ಔಂಸಿಗೆ	ರೂ.	೨-೦-೮
ಔಂಸಿಗೆ	"	೧-೪-೦
ಡ್ರ್ಯಾಮಿಗೆ	,,	೦-೧೨-೦
ಅಂಚೆವೆಚ್ಚ	,,	೦-೬-೦

ಒಟ್ಟೋ-ದಿಲ್ ಬಹಾರ
ಹೇಳಲಿಕ್ಕೆ ಮರೆಯಬೇಡಿರಿ

“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ”

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು, ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ

THE ANGLO INDIAN DRUG & CHEMICAL CO.
POST BOX 2082. **BOMBAY No.**

ಸತ್ಯಾಗ್ರಹದ ವಾರ್ತೆ.

— ಮುಂಬಯಿರ ಬಾಲಿಸ್ಟ್ರರ ಶ್ರೀ ಯಶವಂತ ಪ್ರಸಾದ ದೇಸಾಯಿಯವರು, ಮಹಾತ್ಮರಿಗೆ [illegible] ಎಂದರು ಮಹಾತ್ಮರ ಸ್ವಸ್ಥತೆ ನೆಟ್ಟಗಿದೆ, ಮಹಾತ್ಮರು ಉಲ್ಲಾಸದಿಂದಿದ್ದಾರೆ, [illegible] ವರು ಪ್ರಕಟಿಸುತ್ತಾರೆ.

— ಮುಂಬಯಿಯಲ್ಲಿ ಕಳೆದ ಸೋಮವಾರ ನೆರೆದ [illegible] ಸಭಾಗೃಹದ [illegible] ಆಚರಣ [illegible] ಸಂಕಲ್ಪಿತ [illegible] ಶ್ರೀ [illegible] ಪೋಲೀಸರು [illegible] ಮನೆ [illegible] ಪ್ರಾಂತಿಕ ಕಾಂಗ್ರೆಸ ಕಮಿಟಿಯ [illegible] 'ಕ್ಲಾಸಿಕಲ್' [illegible] ಶ್ರೀ [illegible] ವಿದ್ಯಾರ್ಥಿಗಳು [illegible] ದಿನವನ್ನಾಚರಿಸಿದರು ಸ್ವದೇಶಿ [illegible] ವಿಶ್ವವಿದ್ಯಾಲಯದ [illegible] ಧ್ವಜ ಹಚ್ಚಿದರು. ಆ ದಿನ [illegible] ಎಲ್ಲ ಅಂಗಡಿಗಳು ಮುಚ್ಚಿಕೊಂಡಿದ್ದವು. [illegible] ಮುಂದೆ ಪಿಕೆಟಿಂಗ ಆಯಿತು. [illegible] ಮೇಲೆ ಪೋಲೀಸರು [illegible] ಇಂಪೀರಿಯಲ್ ಬೆಂಕ ಆಫ್ ಇಂಡಿಯಾ ಎಂಬ ಸರಕಾರಿ ಬೆಂಕಿನ ಮುಂದೆ ಪಿಕೆಟಿಂಗ್ ಮಾಡಿದ ಬಗ್ಗೆ ಶ್ರೀ [illegible] ಜನರಿಗ ಸೆರೆಮನೆ ಶಿಕ್ಷೆ ವಿಧಿಸಲ್ಪಟ್ಟಿದೆ. ಶ್ರೀ ಮೂಲರಾಜರಿಗ [illegible] ವರ್ಷ [illegible] ೧೦೦೦ ರೂಪಾಯಿ [illegible] ದಂಡ ವಿಧಿಸಲಾಗಿದೆ. ಮುಂಬಯಿಯಲ್ಲಿ ಇಷ್ಟು ಶಿಕ್ಷೆ [illegible] ಇವರ [illegible] ಸತ್ಯಾಗ್ರಹಸಂಗ್ರಾಮದಲ್ಲಿ ಕೊಂಗ್ರೆಸಿನ ಪತ್ರಗಳನ್ನು ನಡೆಸಿದ ಕುರಿತು [illegible] ಸರಕಾರಕ್ಕೆ [illegible] ಕೊಟ್ಟು [illegible] ನಡೆಸುತ್ತಾ [illegible] ಬುಲೆಟಿನು ಹೊರಡು [illegible] ಒಂದು ಬಂಗಲೆಯಲ್ಲಿ ಪೋಲೀಸರು [illegible] ಯಂತ್ರ [illegible] ಕಾಗದಗಳನ್ನು ಜಪ್ತ ಮಾಡಿದರು. ಬುಲೆಟಿನ್ನಿನ [illegible] ಆದರೆ, ಬುಲೆಟಿನು ಎಂದಿನಂತೆ ಹೊರಡುತ್ತದೆ. ಮ್ಯಾಜಿಸ್ಟ್ರೇಟ ಕೋರ್ಟಿನಲ್ಲಿ ಬುಲೆಟಿನ್ [illegible] ಮಾರುತ್ತಿದ್ದಾರೆ [illegible] ಪೋಲೀಸರು [illegible] ಶ್ರೀ [illegible] ಜನರಿಗ ವಿಧಿಸಿದ ದಂಡ ವಸೂಲಿಗಾಗಿ [illegible] ಮನೆಗೆ ಪೋಲೀಸರು ಅದೇ ದಿನ ಹೋಗಿ ಅವರ ಹೆಂಡತಿ, ಮಗ, ೯೦ ವರ್ಷದ ಮುದುಕಿ ಅಜ್ಜಿ [illegible] ಮನೆಯಿಂದ ಹೊರಹಾಕಿದರು. "ಮನೆ ನನ್ನದು, ೯೦ ವರ್ಷದವಳು ನಾನು [illegible]" [illegible] ದಂಡ [illegible] ಮನೆ [illegible] ಸರಕು [illegible]

[illegible] ಕೊಡದ್ದರಿಂದ [illegible] ಪತ್ರಕರು [illegible] ಒಪ್ಪಲಿಲ್ಲ [illegible] ಮುಂದಾಗಿ ಬಂದಿದ್ದಾರೆ.

[illegible] ಪಿಕೆಟಿಂಗ [illegible] ಪಿಕೆಟಿಂಗ ಮಾಡಿದರು [illegible] ಕೆಟ್ಟಿಗೆಗಳನ್ನು ಜಪ್ತಮಾಡಿದ್ದಾರೆ.

— ಮುಂಬಯಿರ ನವಜೀವನ ಪತ್ರಿಕೆಯ ಮುದ್ರಣಾಲಯದ ಪ್ರಕಾಶಕರಾದ ಶ್ರೀ [illegible] ಸರಕಾರದಿಂದ [illegible] ರೂಪಾಯಿ [illegible] 'ನವಜೀವನ' ಮುದ್ರಣಾಲಯವು ಈಗ ನಡೆಯುವದಿಲ್ಲ. ಅದು ಪೋಲೀಸರ ತಾಬೆಯಲ್ಲಿದೆ. ಪತ್ರಿಕೆಯನ್ನು ಸೈಕ್ಲೋಸ್ಟೈಲ ಮಾಡಿ ಪ್ರಕಟಿಸುತ್ತಾರೆ.

— [illegible] ಜಿಲ್ಹೆಯ ಕಲೆಕ್ಟರರು ಒಂದು ಸರ್ಕ್ಯುಲರ [illegible] ಹೊರಡಿಸಿದ್ದಾರೆ - ರಾಷ್ಟ್ರೀಯ ಸಭೆಯ ವಿನಾಶಕ ಚಳವಳಿಯನ್ನು ಮುರಿದು ಕಾಯಿದೆ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸುವದಕ್ಕಾಗಿ ಒಂದು ಸಂಘವನ್ನು ಸ್ಥಾಪಿಸಬೇಕು, ಅದಕ್ಕೆ ಎಲ್ಲವರೂ ನೆರವಾಗಬೇಕು, ಮುಂದಾ [illegible] ನವರು ತಮ್ಮ ಹೆಸರು ತಿಳಿಸಬೇಕು, ಹೀಗೆ ಕಲೆಕ್ಟರರು ಜಿಲ್ಹೆಯ ಪ್ರಮುಖರಿಗ ತಿಳಿಸಿದ್ದಾರೆ.

— ರಾಷ್ಟ್ರೀಯ ಸಭೆಯ ನಿಧಿಯನ್ನು ಬೆಂಕಿನಿಂದ ಪಡೆದು ಬಾರ್ಡೋಲಿಯ ಸ್ವರಾಜ್ಯಾಶ್ರಮ ಹಾಗು ತಾಲೂಕ ಕೊಂಗ್ರೆಸ ಕಮಿಟಿಯ ಕಾರ್ಯಕ್ಕೆ ನೆರವಾದ ಬಗ್ಗೆ ಅಹಮದಾಬಾದದ ಶ್ರೀ| ದಯಾಬಾಯಿಯ [illegible] ಅವರಿಗೆ ೪ ತಿಂಗಳ ಸಜೆ, ರೂ ೧೦೦ ದಂಡವಾಯಿತು.

— ಅಹಮದಾಬಾದದ ಶ್ರೀ| ರಾಮಪ್ರಸಾದರವರು ಮ್ಯಾಜಿಸ್ಟ್ರೇಟರಿಗೆ ಮಾಡಿದ ಅರ್ಜಿ ನಾಮಂಜೂರಾಗಿದೆ. ರಾಮಪ್ರಸಾದರ ಹೆಂಡತಿ ಪಿಕೆಟಿಂಗ್ ಮಾಡಿದ ಬಗ್ಗೆ ಅವಳಿಗ ದಂಡವಾಗಿತ್ತು. ಆ ದಂಡದ ವಸೂಲಿಯ ಬಗ್ಗೆ ಜಪ್ತು ಮಾಡಿದ ಆಸ್ತಿ ತನ್ನದೆಂದು ಶ್ರೀ ರಾಮಪ್ರಸಾದರು ಅರ್ಜಿ ಮಾಡಿದ್ದರು. ನಿಮ್ಮ ಆಸ್ತಿ ಬಿಟ್ಟುಕೊಟ್ಟರೆ ನಿಮ್ಮ ಹೆಂಡತಿಯ [illegible] ಲಿಲಾಂವಿನಿಂದ ದಂಡ ವಸೂಲಾಗತಕ್ಕದ್ದು. ಹೀಗೆ ವಿಧಿಸಲ್ಪಟ್ಟಿತು.

— ಬೆಳಗಾವಿಯ ಸ್ಕೂಲ ಬೋರ್ಡಿನ ಚೇರಮನ್ನರು ಒಂದು ಸರ್ಕ್ಯುಲಾರನ್ನು ಹೊರಡಿಸಿದ್ದಾರೆ - ವಿದ್ಯಾರ್ಥಿಗಳು ಸತ್ಯಾಗ್ರಹದಲ್ಲಿ ಸೇರಬಾರದು, ಸತ್ಯಾಗ್ರಹ ಪ್ರಮುಖರ ಜಯ ಘೋಷ ಮಾಡಬಾರದು, ಹಾಗೆ ಮಾಡಿದ್ದು ಕಂಡುಬಂದಲ್ಲಿ ವಿದ್ಯಾರ್ಥಿಗಳಿಗ ಬೋರ್ಡಿನ ಯಾವದೇ ಶಾಲೆಯಲ್ಲಿ ಪ್ರವೇಶ ಸಿಗಲಿಕ್ಕಿಲ್ಲ. ಶಿಕ್ಷಕ-ಶಿಕ್ಷಕಿಯರು ಈ ಚಳವಳಿಯಲ್ಲಿ ಸೇರಬಾರದೆಂಬುದಾಗಿಯೂ ಕಠಿಣ ಆಜ್ಞೆಯಾಗಿದೆ.

— ಆಸಾಮದ [illegible] ಜಿಲ್ಹೆಯ ಯೂನಿಯನ್ ಬೋರ್ಡ ಯಾನೆ ಜಿಲ್ಹಾಬೋರ್ಡಗಳ ಅಧ್ಯಕ್ಷರ ಸಭೆಯಾಯಿತು. ಡಾಕ್ಕಾ ಭಾಗದ ಕಮಿಶನರರಾದ ಮಿ| [illegible]ರವರು ಭಾಷಣ ಮಾಡಿದರು. ರಾಷ್ಟ್ರೀಯ ಸಭೆಯವರು ಸತ್ಯ ಹೇಳುವದಿಲ್ಲ, ಆ ಪಕ್ಷದ ವರ್ತಮಾನಪತ್ರಗಳಾದರೂ ಹಾಗೆಯೇ. ಇವರು ಪಟಿಂಗರು. ಸರಕಾರಿ ಆಫೀಸರರು ಸತ್ಯ ಹೇಳಲು ಬದ್ಧರಿದ್ದಾರೆ, ಅವರು ಜವಾಬದಾರಿ ಮಂದಿಗಳು. ರಾಷ್ಟ್ರೀಯ ಸಭೆಯ ಜಾಲದಲ್ಲಿ ಶಿಕ್ಷಿತ ಹುಡುಗರು ತುಂಡುಪಾಳೆಗಾರರಾಗಿದ್ದಾರೆ. ಹುಡುಗಿಯರು ಸಹ ಹಾಗೆಯೇ. ನಾಗರಿಕರ ಪರವಾಗಿ ಸರಕಾರವು ಹೋರಾಡುತ್ತಿದೆ. ಈ ಸಂಗ್ರಾಮದಲ್ಲಿ ನೀವೊಂದು ಪಕ್ಷವನ್ನು ವಹಿಸಬೇಕು, ಸರಕಾರಿ ಪಕ್ಷವನ್ನೇ ವಹಿಸಬೇಕು. ಸತ್ಯಾಗ್ರಹವನ್ನು ಬುಡಗೂಡಿ ನಾಶ ಮಾಡಬೇಕಾದರೆ, ಜನರು ಎದೆಗಟ್ಟಿಮಾಡಿ ಮುಂದಾಗಿ ಬಂದು ಸರಕಾರಕ್ಕೆ ನೆರವಾಗಬೇಕು.

ತ್ವರೆ ಮಾಡಿರಿ! ನಿಯಮಿತ ಪ್ರತಿಗಳು ಅಚ್ಚಾಗಿವೆ! ತ್ವರೆ ಮಾಡಿರಿ!!

ವೇ|| ಕೃಷ್ಣಶಾಸ್ತ್ರಿ ಅಗೇರಕರ ಇವರಿಂದ ರಚಿತವಾದ ಅಂಗಿರಾನಾಮ ಸಂವದ ಸ್ವದೇಶಿ ಪಂಚಾಂಗಗಳು

ಇದೇ ಬರುವ ಮಾರ್ಚ ೪ನೇ ತಾರೀಖಿಗೆ ಮಾರಾಟಕ್ಕೆ ಸಿದ್ಧವಾಗುವವು!!

ಬೇಕಾದವರು ಹಣ ಮುಂಗಡ ಕಳಿಸಿ ಮುಂದಾಗಿ ಆರ್ಡರು ಕೊಡಬೇಕು.

ದರಪಾರು:— ೧೦೦ಕ್ಕೆ ರೂ ೧೧, ೫೦ಕ್ಕೆ ರೂ ೬, ೨೫ಕ್ಕೆ ರೂ ೩||, ೧ಕ್ಕೆ ೨ ಆಣೆ.

ಪತ್ತೆ – ಮೆನೇಜರ, "ಸ್ಟಾರ ಆಫ್ ಕೆನರಾ" ಪ್ರೆಸ್, ಕುಮಟಾ (ಉ ಕನ್ನಡ)

ಸ್ಥಾನಿಕ ವೃತ್ತಾಂತ

(೯ನೇ ಪಾನಿನಿಂದ ಮುಂದರಿಸಿದ್ದು)

ಇನ್ನು ದಂಡದ ಸಾಕ್ಷಿಯು ಕಥೆ. ಜಂಗಲ ಕಾಯಿದೆ ಭಂಗದಲ್ಲಿ ಶಿಕ್ಷೆ ಹೊಂದಿದ ರಾ| ಗೋವಿಂದ ಸುಬ್ಬಾ ಭಟ್ಟ ಹಾಗು ರಾಮಚಂದ್ರ ಲಕ್ಷ್ಮಣ ಹೆಗಡೆಯವರಲ್ಲಿ ಜಪ್ತಿ ಮಾಡಿಕೊಂಡ ಸಾಮಾನುಗಳ ಲಿಲಾಂವು ತಾ| ೧೫ನೇಗೆ ಕಚೇರಿಯಲ್ಲಿ ನಡೆಯಿತು. ಈ ಸಮಯಕ್ಕೆ ೩-೪ ಜನರನ್ನು ಪೋಲೀಸರು ಅತ್ಯಾಗ್ರಹದಿಂದ ಕರೆದೊಯ್ದಿದ್ದರು, ಆದರೆ ಅವರು ಕೊಳ್ಳಲೊಲ್ಲಲಿಲ್ಲ. ಪೋಲೀಸರ ಉಗ್ರಾಣಿಗಳೇ ಪಟ್ಟೇವಾಲರೇ ಮುಖ್ಯವಾಗಿ ಸವಾಲು ಮಾಡಿದರು. ಬಹಳ ಅಗ್ಗವಾಗಿ ಸಾಮಾನುಗಳು ದೊರೆತವು! ೩-೩ ಆಣೆಗೆ ತಂಬಿಗೆ, ೩-೮ ರೂಪಾಯಿಗೆ ದೊಡ್ಡ ದೊಡ್ಡ ಹಂಡೆಗಳು ದೊರೆತವು!' ಹುಲ್ಲುಬನ್ನಿಯ ಬಗ್ಗೆ ದಾಳಿವಳ್ಳಿಯ ಸುಬ್ರಾಯ ಹೆಗಡೆಯಲ್ಲಿ ಜಪ್ತಿ ಮಾಡಿದ ೩॥ ರೂಪಾಯಿಗಳ ಸಾಮಾನು ೧॥ ರೂಪಾಯಿಗಳಿಗೆ ದಾಳಿವಳ್ಳಿಯಲ್ಲಿಯೇ ಲಿಲಾಂವಾಗಿ ಉಗ್ರಾಣಿ-ಶಾನಭೋಗರೇ ಮಾತ್ರ ಸ್ವಲ್ಪ ಮಾನವುಳ್ಳವರೂ ಕೊಂಡು ಕೊಂಡರಂತೆ! ಬಹಿರಂಗವಾಗಿ ಲಿಲಾಂವಾಗಲಿಲ್ಲವಾಗಿ ಕೆಲವರ ಅಂಬೋಣ. ಸ್ಪಷ್ಟವಾಗಿ ಲಿಲಾಂವು ನಡೆದಿತ್ತಾಗಿ ಉಗ್ರಾಣಿ-ಶಾನಭೋಗರು ಹೇಳುತ್ತಾರೆ. ಸುಗಾವಿಯಲ್ಲಿ ರಾ| ಲಕ್ಷ್ಮಣ ವೆಂಕಟಭಟ್ಟ ಸುಬ್ರಾಯ ನಾಗಭಟ್ಟ ಇವರಲ್ಲಿ ಹುಲ್ಲುಬನ್ನಿಯ ಬಗೆ ಜಪ್ತಿಯಾಗಿ ಬಂದ ಸಾಮಾನನ್ನು ಆ ಗ್ರಾಮದ ಉಗ್ರಾಣಿಯು ಕೊಂಡನು. ೧೩ ರೂಪಾಯಿ ಸಾಮಾನಿಗೆ ೪ ರೂಪಾಯಿ ೬ ಆಣೆ ಸವಾಲು ಬಂತು. ಹುಲ್ಲುಬನ್ನಿಯ ಬಗೆ ಇನ್ನೂ ಜಪ್ತಿಗಳಾಗುತ್ತಿವೆ. ಹಾರಗೋಡದ ರಾ| ಅನಂತ ಹೆಗಡೆ ಅಡಿಕೆಯವರ, ಸುಗಾವಿಯ ರಾ| ಬಸಪ್ಪ ಕೊಟ್ಟಪ್ಪ, ಸೋಮವಾರದವರಲ್ಲಿ ಜಪ್ತಿಗಳಾದವು. [illegible] ಮಾರವರ ಮೇಲೆ ಬಾಕಿ ೧॥ ರೂಪಾಯಿ. ಅದಕ್ಕೆ ಮುಕ್ಕಾಲು ಪಟ್ಟು ಎಷ್ಟೆಯಿದ್ದ ಬೆಳೆ [illegible], ಮಾನ್ಯದ ಕೊಡಬೇಕಾದ ೧ ಹೋರಿ ಜಪ್ತಿಯಾದವು. ೧ ವಾರದಲ್ಲಿ ಬಿಟ್ಟು ಬಿಟ್ಟು, ಜಪ್ತಿಮಾಡಹೋದಾಗ ಕರು ಬಿದುರು ಭಾಗವಾಗಿತ್ತು. ಅದನ್ನು ಜಪ್ತಮಾಡಬೇಕೋ, ಬೇಡವೋ? ಎಂಬ ಬಗ್ಗೆ ಪಟೇಲ-ಶಾನಭೋಗರೊಳಗೆ ವಾದವಾಯಿತು. ಕೊನೆಗೆ ಜಪ್ತ ಮಾಡಲಿಲ್ಲ. ಏನ ಹಟ್ಟಿ ಮನೆಯ ಸಂದಿ-ಗೊಂದಿಗಳಲ್ಲಿ ಸಹ ನೋಡಿದರು. ಒಂದೆಡೆ ಕೊಡಲಿಯು ತ್ತು. ಅದನ್ನು ಜಪ್ತಮಾಡಿ ಒಯ್ದರು. ಇಷ್ಟೆಲ್ಲ ಸಾಮಾನಿಗೆ ೪॥ ರೂಪಾಯಿ ಬೆಲೆ ! ಆದರೆ ಬಹಳ ಬಾಕಿ ಬಿದ್ದಿದೆ. ಅದನ್ನು ವಸೂಲ ಮಾಡುವದಕ್ಕಾಗಿ ಎಲ್ಲರೂ ಪ್ರಯತ್ನ ಪಡುತ್ತಿದ್ದಾರೆ. ಹುಲ್ಲುಬನ್ನಿಯ ಬಗ್ಗೆ ಜಪ್ತಿಯ ಜೋರಿನಿಂದ ಹುಟ್ಟಿದ ಹಣದಲ್ಲಿ ಹುಲ್ಲುಬನ್ನಿಯ ಹಣ ವಜಾ ಕೊಂಡು ಉಳಿದ ಹಣ [illegible]ಯಂತೆ ಜನರಿಗೆ ಕೊಡುವದಿಲ್ಲ. ಸುಗಾವಿಯಲ್ಲಿ ಒಬ್ಬ ಹೆಣ್ಣುಮಗಳ ಹೆಸರಿನ ಹುಲ್ಲುಬನ್ನಿಯ ಬಗ್ಗೆ ಜಪ್ತಿಯಾಗುತ್ತ ಉಳಿದ ಹಣ ತೀರ್ವೆ ತುಂಬಿಕೊಳ್ಳುತ್ತೇವೆಂದು ಶಾನಭೋಗರು ಹೇಳಿದರು. ಅವಳೊಪ್ಪಲಿಲ್ಲ. "ನನ್ನ [illegible] ಗರು [illegible] ನನ್ನ ಹಣ ನನಗೆ ಕೊಡಿ, ನಾ ಮೇಲೆ ಕೊಡುವದಿದೆ ಕೊಡುತ್ತೇನೆ" ಹೀಗವಳು ಹೇಳಿದಳಂತೆ. ಸುಗಾವಿಯ ರಾ| ತಿಂಮಣ್ಣಭಟ್ಟರಲ್ಲಿ ಪಟೇಲ-ಉಗ್ರಾಣಿ-ಸರ್ಕಾಲ್ ಇನ್ನಿಬ್ಬರು ಹೋಗಿ ೧೦ ರೂಪಾಯಿ ವಸೂಲ ಮಾಡಿದರು. ರಾ| ಸೂರ್ಯನಾರಾಯಣ ಮಧುಲಿಂಗಭಟ್ಟರ ಕಡೆ ತೀರ್ವೆ ಕೇಳಲು ಅವರು ಕೊಡುವದಿಲ್ಲವಾಗಿ ಹೇಳಿದರು. ಜೈಲಿಗೆ ಹೋಗಬೇಕಾದೀತಾಗಿಯೂ, ಕೆಲವರು ತೀರ್ವೆ ಕೊಟ್ಟರಾಗಿಯೂ ಸರ್ಕಾಲ್ ಇನ್ನಿಬ್ಬರು ಅವರಿಗೆ ತಿಳಿಸಿ ಹೇಳಿದರು. ಆದಾಗ್ಯೂ ಅವರು ಕೊಡಲೊಪ್ಪಲಿಲ್ಲ. ಬೆಲ್ಲದ ಕೊಪ್ಪ, ಬೆಲ್ಲದ ತಟ್ಟೆಗಳು ಜಪ್ತಾದವು. ರಾ| ಮಹಾಬಲೇಶ್ವರ ಹೆಗಡೆರ ಕಡೆ ತೀರ್ವೆ ಮತ್ತು ಬಾಕಿ ಹಣ ಕೇಳಿದರು, ಅವರು ಹಣವಿಲ್ಲೆಂದರು. ಇದ್ದಷ್ಟು ಕೊಡಬೇಕೆಂದು ಅವರು ೧೦-೧೫-೦ ನ್ನು ಕೊಟ್ಟರು. ೩ ರೂಪಾಯಿ ಮುಟ್ಟಿತೆಂದು ಅಧಿಕಾರಿರು ಬರಕೊಂಡು ಹೋದರು. ಕ್ರಮದಂತೆ ನೋಟೀಸುಗಳ ಜಪ್ತಿಗಳಾಗಿವೆ. ಹಾಡುಗಾರರಲ್ಲಿ ಶಾನಭೋಗರು ತೀರ್ವೆ ವಸೂಲಿಗೆ ಹೋಗಿದ್ದರು. ಈ ಶಾನಭೋಗರ ಹಿಂದೆ ಸ್ವಯಂಸೇವಕರು ಹೋಗುತ್ತಾರೆ. [illegible] ಕೃತ್ಯ ಅಕ್ರಮ-ವಿಶ್ವಾಸಗಳನ್ನೆಲ್ಲ ಅವರು ನೋಡುತ್ತಾರೆ. ಅದರಿಂದ ಶಾನಭೋಗರಿಗೆ ಸಂಕಟವಾಗುವದಂತೆ. [illegible] ಬೆನ್ನ ಹಿಂದೆ ಒಂದ ಸ್ವಯಂಸೇವಕರಿಗೆ ಶಾನಭೋಗರು ಅವಾಚ್ಯ ಶಬ್ದಗಳಿಂದ ಬೈದರು. ಆದಾಗ್ಯೂ, ಸ್ವಯಂಸೇವಕರು ಬೆನ್ನು ಬಿಡಲಿಲ್ಲ. ಮರ್ಯಾದೆ ಬಿಟ್ಟು ಬೆನ್ನಿಗೇ ಹೋದ ಸ್ವಯಂಸೇವಕರು ಗಾದೆ ಬಿಟ್ಟಿದ್ದಾರೆ, ಮರ್ಯಾದೆ ಬಿಟ್ಟಿದ್ದಾರೆ, ಎಲ್ಲವನ್ನೂ ತೂರಿದ್ದಾರೆ!

ಒಂದು ಸಂಗತಿ ಜಂಗಲಸತ್ಯಾಗ್ರಹದಲ್ಲಿ ಸರೆಯಾಳಾದ ವತ್ತಾ ಕೃಷ್ಣ ಹೆಗಡೆ ಎಂಬ [illegible] ದಂಡವಾಗಿತ್ತು. ಅದನ್ನು ವಸೂಲ ಮಾಡಲು ಪೋಲೀಸರು ಅವರ ತಂದೆಯ ಕಡೆ ಕೇಳಿದರು. ಅವರು ಕೊಡಲಿಲ್ಲ.

ಸಿದ್ದಾಪುರ— ಈ ತಾಲೂಕಿನ ಹೇರೂರ ಕೇಂದ್ರದಲ್ಲಿ ಗ್ರಾಮಚಾವಡಿಗೆ ಈ ಕೆಳಗಿನಂತೆ ನೋಟೀಸು ಹಚ್ಚಲ್ಪಟ್ಟಿದೆ — ನೋಟೀಸು

ಉಂಬಳಮನೆ ಮೂಜಾರು ಫಿರ್ಕಾದ ಎಲ್ಲ ಜನರಿಗೆ ಇದರ ಮೂಲಕ ತಿಳಿಸುವದೇನೆಂದರೆ — ನೀವು ಸರಕಾರಕ್ಕೆ ಕೊಡಬೇಕಾಗಿದ್ದ ಸಂಬಂಧ ಈ ವರ್ಷ ತೀರ್ವೆ ಬಗ್ಗೆ [illegible] ಸವಲತ್ತು ಸಿಗಬೇಕಾಗಿ ಅರ್ಜಿ ಮಾಡಿಕೊಂಡಿದ್ದೀರಷ್ಟೇ? ಅದರ ಬಗ್ಗೆ ಚೌಕಶಿ ನಡೆದು ಈ ವರ್ಷ ಬಾಗಾಯತಕಿನ ಆಣೆವಾರಿ ೧೦-೧೨ ಆಣೆ ಆಗಿರುವದರಿಂದ ನಿಮ್ಮ ಅರ್ಜಿಯಂತೆ ಏನೂ ಸವಲತ್ತು ಸಿಗಲಾರದಾಗಿ ಹುಜೂರ ಹುಕುಮು ಬಂದಿದೆ. ಕಾರಣ ಎಲ್ಲ ಜನರು ಬಾಬು ಸಾಲು ೧ನೇ ಹಪ್ತೆಯ ತೀರ್ವೆಯ ಹಣ ಇದೇ [illegible] ೧೫ನೇ ತಾರೀಖಿನೊಳಗೆ ಗ್ರಾಮಸ್ಥರ ಕಡೆ ಕೊಟ್ಟು ಪಾವತಿ ಪಡಕೊಳ್ಳತಕ್ಕದ್ದು. ಯಾರು ಮುದ್ದತ್ತಿನೊಳಗೆ ತೀರ್ವೆ ಕೊಡದೆ ಬಾಕಿ ಇಟ್ಟುಕೊಳ್ಳುತ್ತಾರೋ, ಅಂಥವರ ಕಡೆಯಿಂದ ಈ ವರ್ಷ [illegible] ನಂತ ಸಹಿತ ಕಿಸ್ತಿಯಿಂದ ವಸೂಲ ಮಾಡಲಾಗುವದಲ್ಲದೆ [illegible]

ತಾ ೧೩-೨-೩೨

ಗ್ರಾಮ ನೊರೆ	ಕೃಷ್ಣ ರಾಮಕೃಷ್ಣ ಭಟ್ಟ,
ಮೂಜಾರು ಫಿರ್ಕಾ	ಉಂಬಳಮನೆ ಫಿರ್ಕಾ
ಶಾನಭೋಗ	ಶಾನಭೋಗ

ವಸೂಲ ಮಾಡತಕ್ಕವರಲ್ಲಿ ಹುಡುಕುವರು, ಎಂಬ ಶಬ್ದಗಳ ಕೆಳಗೆ ಗೆರೆ ಹೊಡೆಯಲಾಗಿದೆ. ಆದರೆ ವಸೂಲ ಮಾಡದೆ ಬಿಡಲಿಕ್ಕಿಲ್ಲವೆಂಬ ಅರ್ಥ. ಉಂಬಳಮನೆ ಗ್ರಾಮದಲ್ಲಿ ಮಂಜಪ್ಪ ಕೇಶವ [illegible] ಭಟ್ಟ [illegible] ೬ ಜನರ ಮೇಲೆ ತೀರ್ವೆ ಕೊಡಬೇಕಾಗಿ ಶಾನಭೋಗರು ನೋಟೀಸು ಹೊರಡಿಸಿದರು. ಅವರಗಳ ಮೇಲೆ ಸಹಿಯಿಲ್ಲದ್ದರಿಂದ [illegible] ಇವರಲ್ಲಿ ನಾಲ್ವರು [illegible] ಇದ್ದರೂ ತಮ್ಮ ಭೂಮಿಯನ್ನು ಮಾರಾಟ ಮಾಡಿದವರು. ಈ ೬ ಜನ ತೀರ್ವೆ ಕೊಡಬೇಕಾದವರಲ್ಲ, ಅದು ಗ್ರಾಮಸ್ಥರು [illegible] ಕೊಡುವ ಗಾಬರಿಯಲ್ಲಿ ಶಾನಭೋಗರು ಸಹಿ ಹಾಕ ಮರೆತಿರಬೇಕು. ಸ್ವಯಂಸೇವಕರ ಮುಕ್ಕಾಮು ಈ ತಾಲೂಕಿನಲ್ಲಿದೆ. ಗುಂಡಗೋಡ ಕೇಂದ್ರದಲ್ಲಿ ಸಂಘದವರು ಆಗ್ರಹದಿಂದ ನೋಡಿದರು. ರೈತರಿಗೆ ಶರಿಯ ತೀರ್ವೆ ಕೇಳಿದರು. ತಮ್ಮ ಕಡೆ ಹಣವಿಲ್ಲವಾಗಿ ರೈತರು ಹೇಳಿಕೊಂಡರು. ಈ ತೀರ್ವೆ ಹಣ ಕೊಟ್ಟಲ್ಲಿ ಮುಂದಿನ ತೀರ್ವೆ [illegible] ಮಾಡು ಎಂತ ಮೇಲಧಿಕಾರಿಗಳ ಕಡೆ ಬರಕೊಳ್ಳುತ್ತೇವೆ, [illegible] ಹಿಡಿದು ಹಣ ವಸೂಲ ಮಾಡಲ್ಲ [illegible] ಹೀಗೆ ಸಂಘದವರು ಪರಿಬಂಧಿಯಿಂದ ರೈತರಿಗೆ ಹೇಳಿದರು. "ನಮ್ಮ ಹತ್ತಿರ ಹಣವಿಲ್ಲ"ವಾಗಿ ರೈತರು ಹೇಳಿದರು. 'ಕರಬಂದಿ ಮಾಡ [illegible] ದರ್ ಅರ್ಜಿ ಕೊಟ್ಟೀರೋ, ರಾಜೀನಾಮೆ ಕೊಟ್ಟೀರೋ?" ಎಂದಾಗಿ ಸಂಘದವರು ಪ್ರಶ್ನಿಸಲು, ದಯಾವಂತರೇ ನಿಮ್ಮ ಕಡೆ ಹಣವೇ ಇಲ್ಲ ಎಂಬ ಮಾತಿದ್ದೇ ಹಾಡನ್ನು ರೈತರು ಪುನಃ ಹಾಡಿದರು. ಸಂಘದವರಿಗೆ ಸಿಟ್ಟು ಬಂತು "ರಾಜಕೀಯ ಮಾಡಿದರೆ ಹೇಳಬಹುದು, ನನ್ನ ಮನಸ್ಸಿಗೆ ತಿಳಿದದ್ದು ಮಾಡುತ್ತೇವೆ, ಒಂದ ಕಷ್ಟ-ನಷ್ಟಗಳನ್ನು ಸಹನ ಮಾಡಬೇಕಾದೀತು ಜೋಕೆ!" ಎಂದಾಗಿ ಹೇಳಿದಾಗ್ಯೂ, ಯಾರೂ ತೀರ್ವೆ ಕೊಡಲೊಪ್ಪಲಿಲ್ಲ. ಸಾಹೇಬರು ಬಿಳಗಿಗೆ ಹೋಗಿದ್ದರು, ಅಲ್ಲಿಯೂ ತೀರ್ವೆ ಕೇಳಿದರು. ತಮ್ಮ ಕಡೆ ಹಣವಿಲ್ಲವಾಗಿ ರೈತರು ಹೇಳಿದರು. ೫ ರೂಪಾಯಿ ಕೊಡ ಇಲ್ಲವೋ ಹೇಗೆ? ಎಂಬದಾಗಿ ಸಾಹೇಬರು ಕೇಳಿದರು. 'ಭತ್ತವಿದ್ದ ಬೇಕಾದರೆ ಒಯ್ಯಿರಿ,' ಎಂದು ರೈತರು ಹೇಳಿದರು. ಬೇಡ, ನಮಗೆ ರೂಪಾಯಿಗಳೇ ಬೇಕು; ನಾಳೆ ಮಾಮಲೇದಾರರು ಬರುತ್ತಾರೆ." ಹೀಗೆ ಸಾಹೇಬರು ನುಡಿದು ಹೋದರು. ೫ ರೂಪಾಯಿ ಪೋಲೀಸರ ಈ [illegible] ಹೋಗಿದ್ದಾರೆ. ಬಳಗಿ-[illegible] ಗ್ರಾಮಗಳಲ್ಲಿ ರೈತರ ಗೋಳು ಕೇಳದ ಸರಕಾರಕ್ಕೆ ತೀರ್ವೆ ಕೊಡಬೇಡಿರೆಂದು ಪತ್ರಿಕೆಗಳು ಮನೆಗೋಡೆಗಳಿಗೆ ಅಂಟಿಸಲ್ಪಟ್ಟಿವೆ. ಒಂದು ಪತ್ರಿಕೆಯು ಮುದ್ರಿ[illegible] ಎಂಬ ಶಬ್ದಗಳಿದ್ದವು, ಅದರಿಂದ ರಾ|| ನಾರಾಯಣ ಹೆಗಡೆ ಹರಗಿ, ಇವರಿಗೆ ನೋಟೀಸಿಯಾಗಿದೆ. ಅನಂತರ ಅವರ ಮಾವಂದಿರ ಕಡೆ ತೀರ್ವೆ ಕೇಳಿದರು. ಅವರು ಕೊಡುವದಿಲ್ಲವೆಂದರು. ಅಧಿಕಾರಿಗಳು ಕೊಡಲೇಬೇಕೆಂದರು, ಅದಕ್ಕೂ ಅವರೊಪ್ಪಲಿಲ್ಲ. ಅದಕ್ಕಾಗಿ ಅವರಿಗೆ ನೋಟೀಸಿಯಲ್ಪಟ್ಟಿರುವದಂತೆ.

ಕವಳಗಿ ಗ್ರಾಮದ ರಾ| ಶಿವರಾಮ ಮಂಜಭಟ್ಟ ಇವರಿಗೆ ನೋಟೀಸಿಯಾಗಿದೆ. ಬಿಳಗಿಯ ರಾ| ಮಾದವ ಕೃಷ್ಣ [illegible], ಕೃಷ್ಣ ಬಾಲಕೃಷ್ಣ ಪುರಾಣಿಕ ಇವರಿಗೆ ನೋಟೀಸಿಯಾಗಿದೆ. ರಾ| ಭಾಸ್ಕರ ಮಾಸ್ತರ ಇವರಿಗೆ ೪ ತಿಂಗಳು ಶಿಕ್ಷೆ, ೫೦ ರೂಪಾಯಿ ದಂಡ, ಇಲ್ಲವೇ ೧॥ ತಿಂಗಳ ಹೆಚ್ಚಿನ ಶಿಕ್ಷೆ ವಿಧಿಸಲ್ಪಟ್ಟಿದೆ. ರಾ| ಮಹಾಬಲೇಶ್ವರ ವೆಂಕಪ್ಪ ಹೆಗಡೆ ಪಣಸ್ವಲುವರಿಗೆ ೮ ತಿಂಗಳ ಶಿಕ್ಷೆ, ರೂ ೨೦೦ ದಂಡವಾಗಿದೆ. ದಂಡ ಕೊಡದಿದ್ದರೆ, ೨ ತಿಂಗಳ ಶಿಕ್ಷೆ. ಈ ಊರಲ್ಲಿ ಮನೆಗಳಿಗೆ ಹಚ್ಚಿದ ರಾಷ್ಟ್ರಧ್ವಜಗಳನ್ನು ಶನಿವಾರ [illegible] ಪೋಲೀಸರು ತೆಗೆದರು.

ರಾ| ಹರಿಯಪ್ಪ ರಾಜಪ್ಪನವರ ದಂಡ ವಸೂಲಿಗಾಗಿ ಫೌಜದಾರರು ಅವರ ಅಂಗಡಿಯಲ್ಲಿ ಹೋಗಿದ್ದರು, ಅವರು ವಸೂಲ ಕೊಡಲಿಲ್ಲ.

[illegible]-ಹೇರೂರ ಕೇಂದ್ರಗಳಲ್ಲಿ ಪೋಲೀಸರು ದಾಳಿಮಾಡುತ್ತಿದ್ದಾರೆ. ರಾ| ಮಂಜುನಾಥ ಹೆಗಡೆ ಮನೆಯಲ್ಲಿದ್ದಾರೆಂದು ಕೇಳಿ ಅವರಿಲ್ಲವಾಗಿ ತಿಳಿದು, ರಾ| ಕೃಷ್ಣ ಹೆಗಡೆ ಮನೆಗೆ ಹೋದರು, ಅವರೂ ಇರಲಿಲ್ಲ. ಬಳಿಕ ಹೊರಗೆ ಬಂದ ಮೇಲೆ ಪ್ರಶ್ನಿಸಲಾಗಿ ಕಾಲಿಗೆ ಕೊಂಡಿದ್ದ [illegible] ನಾರಾಯಣ ಹೆಗಡೆಗೆ ಕಳಹಿದ [illegible] ಜೋಡಿಸಿಕೊಂಡು ಡೇರೆಯ ಕಡೆ ಅಡಿಗದ [illegible]ಗಳ ಮೇಲೆಲ್ಲ ಹುಡುಕಿದರು. ರಾ| ನಾರಾಯಣ ಗಣಪತಿ ಹೆಗಡೆ ಹೇರೂರ ಇವರಿಗೆ ೫ ದಿನಗಳ [illegible] ಕೊಡುತ್ತೇವೆಂದು ಹೇಳಿ [illegible] ಕೊಂಡು ಬಿಟ್ಟರು, ಮಾಫಿ ಬೇಡಹೇಳಿದರು. [illegible] ಮಾಫಿ ಬೇಡಲು, ತೀರ್ವೆ ಕೊಡುತ್ತೇನೆಂದು ಹೇಳು ಎಂದು ಶಾನಭೋಗರು ಹೇಳಿದರು. ಅದಲ್ಲ ನಿರಪರಾಧವಾಯಿತು. ಅವರಿಗೆ ಬಿಟ್ಟರು. ಅದೇ ದಿನ ರಾ| ಮಹಾಬಲೇಶ್ವರ ಹೆಗಡೆಗೆ ನೋಟೀಸಿಯಾದರು, ಆಳವು [illegible]ಲ್ಲಿ ಸೇರುವದಿಲ್ಲವಾಗಿ ಬರಕೊಡಲು ಅವರಿಗೆ [illegible] ಬು ಅವರೊಪ್ಪಲಿಲ್ಲ. ಮೊರದ ತೀರ್ಪಾಯಿತು. "ನೀನ್ನು ಮಾಡುವುದೇನೆ ಎಲ್ಲ ಬಿಟ್ಟುಕೊಂಡು ಬಾ" ಹೀಗೆ ಸಂತಾನ [illegible] ಸಾರಿದನು. [illegible] ಬೇಕಾಗಿ ಇಂಗಡ [illegible] ಹೊರಟವರ ಕಡೆಯಿಂದ ಜಾಗಂಟೆ [illegible] ಇದು ಪತ್ರ [illegible]ವಾಗಿ ಮುಗಿದನು "ಮಹಾಪತಿ ಕೊಡ್ರಿ" ಎಂದು ಅವರು ಕೇಳಿ ಬರೆದುಕೊಟ್ಟು ಅವರಿಗೆ ಬೈದು ಕಳಿಸಿದನು.

ಕಾರವಾರ— ೧೫। ಸುಬ್ರಾಯ ಹಳದೀಪುರಕರ ಮತ್ತು ಗಣಪ ನಾಡಕರ್ಣಿ ಮೊದಲಾದ ಸ್ವಯಂಸೇ[illegible] ಮಂಗಳವಾರ ಬೆಳಿಗ್ಗೆಯಿಂದ ರಸ್ತೆಗಳಿಗೆ ಒಯ್ಯುತ್ತಾರೆ

ಸ್ಥಾನಿಕ ವೃತ್ತಾಂತ

ಕುಮಟಾ— ಈ ವಾರದಲ್ಲಿ ಹೇಳತಕ್ಕಂಥ ಸತ್ಯಾಗ್ರಹದ ವಾರ್ತೆಯಿಲ್ಲ. ಕಾಮುಂಚೇರಿಯಲ್ಲಿ ಸೇರಿದ ಬಗ್ಗೆ ಶಿಕ್ಷೆಯಾಗಿ ಕಾರವಾರಕ್ಕೊಯ್ದ ರಾ| ತಿಮ್ಮಣ್ಣ ಹೆಗಡೆ ಯವರನ್ನು ಕಾರವಾರದಿಂದ ಈ ವಾರ [illegible] ಹಿಂಡಲಗಕ್ಕೆ ಒಯ್ದರು. ತಾ| ೧೨-೧-೩೨ನೇಗೆ [illegible] ನಡೆದ ಜಂಗಲ ಸತ್ಯಾಗ್ರಹದಲ್ಲಿ ಇವರು ಸೇರಿದ್ದರಂತೆ ಆ ಬಾಬತು ಕುಮಟಾ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆ ನಡೆದದೆ

ಈ ವರ್ಷದ ಸಂಬಂಧದಲ್ಲಿ ಮೇಲೆ ವಿಧಿಸಿದ ದಂಡದ ಹುಕುಮಿನ ಮೇಲೆ ಕಾರವಾರ ಸೆಶನ್ಸ ಜಡ್ಜರಲ್ಲಿ ಮಾಡಿದ ಅಪೀಲು ಶೀಘ್ರವಾದ ಕೇಸು ಜಡ್ಜರ ಮುಂದೆ ಬಂದು, ರಿ| ಮೆಜಿಸ್ಟ್ರೇಟರ ಮೇಲೆ ನೋಟೀಸು ಹೊರಡಿಸಿಯದೆ

ರಾ| ಶ್ರೀಪಾದ ಮಾಳಗಿಮನಿಯವರ ಪತ್ತೆ ಇನ್ನೂ ದೊರೆಯಲಿಲ್ಲ

ಕವಡಿಯ ರಾ| ಬಿಕ್ಕುಮಯ್ಯ ಜನಾರ್ದನ ಬಾಳಿಗಾ ಎಂಬ ೧೮-೧೯ ವರ್ಷ ಪ್ರಾಯದ ಹುಡುಗನು ಕಳೆದ ೩ನೇ ತಾರೀಖಿಗೆ ವಿಷಮಜ್ವರದಿಂದ ತೀರಿಕೊಂಡನೆಂದು ತಿಳಿಸಲು ವ್ಯಸನವಾಗುತ್ತದೆ. ಈತನು ಕಳೆದ ಸತ್ಯಾಗ್ರಹದಲ್ಲಿ ಸೇರಿ ೧|| ವರ್ಷಗಳ ಶಿಕ್ಷೆ ಹೊಂದಿ ಕಾರವಾರ-ಹಿಂಡಲಗಿ ಜೈಲುಗಳಲ್ಲಿ ಇದ್ದನು. ಗಾಂಧಿ-ಇರ್ವಿನ್ ಒಪ್ಪಂದದಂತೆ ಬಿಡುಗಡೆ ಹೊಂದಿದ್ದನು. ಈತನ ನಿಧನದಿಂದ ಮುದಿ ತಾಯಿಗೆ ಅಪಾರವಾದ ಶೋಕವಾಗಿದೆ. ಉಪಾಯವಿಲ್ಲ

ಇಲ್ಲಿ ಇದೇ ೧೧ನೇ ತಾರೀಖಿನಿಂದ ತಮ್ಮ ಪ್ರಯೋಗಗಳನ್ನಾಡಿ ತೋರಿಸುತ್ತಿದ್ದ ಗದಗ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿಯವರು ಪೂರ್ಣ 'ವಿಧವಾ ವಿವಾಹ' ನಾಟಕವನ್ನಾಡಿ ಅವರ ಉತ್ಪನ್ನವನ್ನು ಆಸ್ಪತ್ರೆ ನಿಧಿಗೆ ಅರ್ಪಿಸಿದರಾಗಿ ತಿಳಿಯುತ್ತದೆ. ನಾಟಕಕ್ಕೆ ಸುಮಾರು ರೂಪಾಯಿ ೫೦೦ ಉತ್ಪನ್ನವಾಗಿತ್ತು. ನೆರೆಹೊರೆಯ ಗ್ರಾಮಗಳಿಂದ ಸಹ ಜನರು ಬಂದಿದ್ದರು. [illegible] ನಾಯಕ ಆಜ್ಞಾಕಾರಿ, ಶ್ರೀ ಸಂಪ್ರಮ, ಬಂಕಾಪುರ ನ್ಯಾಯವತಿಯ ಅಂದ್ರ ಮೊದಲಾದ ಪಾತ್ರಗಳು ಸಿಕ್ಕಿ, ಪೌರಾಣಿಕ, ಸಾಮಾಜಿಕ ನಾಟಕಗಳನ್ನಾಡಿ ಜನಮನರಂಜನಗೊಳಿಸಿ, ಈ ಮಂಡಳಿಯವರು ಶಿವರಾತ್ರಿಗಾಗಿ ಗೋಕರ್ಣಕ್ಕೆ ತೆರಳಿದರು. ಕಾರವಾರ ಆಸ್ಪತ್ರೆಯಲ್ಲಿ ಉಪಚಾರ ಹೊಂದುವ ಬಡಬಗ್ಗರಿಗೆ ಅರಿವೆ-ಅಂಚಡಿ ಕೊಡುವದಕ್ಕಾಗಿಯೂ, ಔಷಧ ಕೊಡುವದಕ್ಕಾಗಿಯೂ ಈ ಆಸ್ಪತ್ರೆ ನಿಧಿಯು ಉಪಯೋಗವಾಗುವದಂತೆ!

ಇಲ್ಲಿಯ ರಾ| ರಂಗಾ ದೇವಪ್ಪ ಶ್ಯಾನಭಾಗ ಇವರಿಗೆ ಕಾರವಾರದಲ್ಲಿ ಆರ್ಡಿನನ್ಸಿನಂತೆ ಸೆರೆಹಿಡಿದು ಶಿಕ್ಷೆಯಾಗಿ ಇಲ್ಲಿಂದಲೇ ಕಳೆದ ಮಂಗಳವಾರ ಬೋಟಿಯ ಮೇಲೆ ರತ್ನಾಗಿರಿ ಜೈಲಿಗೆ ಒಯ್ದರು

ಈ ತಿಂಗಳಿನಲ್ಲಿ, ಇಲ್ಲಿ ಬೀಡುಬಿಟ್ಟಿರುವ ಚಲಚ್ಚಿತ್ರ ಪಟಗಳ ಕಂಪನಿ ಒಂದಿದೆ. ಕಂಪನಿಗೆ ಒಳ್ಳೇ ಆದಾಯ. ಪ್ರತಿ ದಿವಸ ೨-೨ ೩-೩ ದಿವಸ ನಡೆದಾಗ್ಯೂ ಪ್ರೇಕ್ಷಕರ ಜಮಾವಣೆ ಕಡಿಮೆಯಿಲ್ಲ ಚಿತ್ರಪಟಗಳೇನು ಅಷ್ಟು ಶ್ರೇಷ್ಠವಲ್ಲ ಜನ ಮರುಳೋ, ಜಾತ್ರೆ ಮರುಳೋ?

ಮ್ಯುನಿಸಿಪಾಲಿಟಿಯಲ್ಲಿ ಗುರುವಾರ ತಾ ೨೫ನೇಗೆ ಸಂಧ್ಯಾರ ಸಭೆ ಸೇರಿ ಜಮಾ-ಖರ್ಚಿನ ಪತ್ರಿಕೆ ಮಂಜೂರಾಯಿತು. [illegible] ರಸ್ತೆ ಕಟ್ಟಬೇಕೆಂದು ಗೊತ್ತಾಗಿದೆ ೨ ವರ್ಷಗಳ ಜಮಾ-ಖರ್ಚನ್ನು ತೂಗಿಸಿ [illegible] ಹೈಸ್ಕೂಲಿಗೆ ಗ್ರಾಂಟ ಕೊಡುವ ಒಂದು ಠರಾವು ನಮೂದುಮಾಡುವದು [illegible] ರದ್ದುಪಡಿಸಲಾಗಿದೆ ಚಕ ಬೀದಿ ಅಂಗಡಿಗಳ ಮೇಲಿನ ಸುಂಕ ಅರ್ಧಕ್ಕಿಳಿಸಲಾಗಿದೆ ಈ ಕಾರಣ ಸ್ವಲ್ಪದೊಂದು ಚರ್ಚೆಯಾಯಿತು. ಈ ಸುಂಕವನ್ನು ಸಂಪೂರ್ಣ ತೆಗೆಯಬೇಕಾಗಿಯೂ, ಅಲ್ಲದೆ ಕಾಲಕ್ಕೆ ಹಾಗೆ ವಚನ ಸಹ ಕೊಟ್ಟಿದ್ದಾಗಿಯೂ ರಾ| ಕಸ್ತುಕರರು ಸೂಚಿಸಿದರು ಸಂಪೂರ್ಣವಾಗಿ ರದ್ದು ಪಡಿಸಬೇಕೆಂದು. ರಾ| ಪ್ರಭುಗಳು ಉಪಸೂಚನ ತಂದರು, ಚೆಅರಮನ್‌ರು ಅದನ್ನು ಅಂಗೀಕರಿಸಬೇಕೆನ್ನುವಷ್ಟರಲ್ಲಿ, ರಾ| ಗಾವಸ್ಕಂರು ಉತ್ಪನ್ನ ಕುಗ್ಗುವದಾಗಿ ರಾ| ಅಗ್ನಿಕೃ-ಪ್ರಭುಗಳವರಿಗೆ ಮುಂಜಾಗ್ರತೆ ಕೊಟ್ಟರು. ಆದರಿಂದ ಸಂಕಲ್ಪಿತ ಉಪಸೂಚನೆ ಮುಂದೆ ಬರಲಿಲ್ಲ. ಇದ್ದಂತೆ ಇರಗೊಡಬೇಕಾಗಿ ಹೇಳಿ, ರಾ| ಅಗ್ನಿಕೃ-ಪ್ರಭುಗಳವರು ಅರ್ಧಕ್ಕಿಳಿಸಬೇಕೆಂಬ ಮೂಸಲಂಗ ತಪ್ಪಿ ಬಿಡುವರ ಮೂಲ ಸೂಚನೆಗೆ ವಿರೋಧಿಸಿದರು. ಬಹುಮತದಿಂದ ಈ ಸೂಚನೆ ಮಂಜೂರಾಯಿತು

ನಾಳೆ ೧ನೇ ತಾರೀಖಿನಿಂದ ಕುಮಟಾ-ಕಾರವಾರ ಟಪಾಲು ಕೊಂಡೊಯ್ಯುವ ಕಂಟ್ರಾಕ್ಟು [illegible] ಮೋಟರ ಸರ್ವಿಸಿನವರಿಗೆ ಸಿಕ್ಕಿದೆ ಅಂಕೋಲಾ-ಹುಬ್ಬಳ್ಳಿಯ ಕಡೆ ಟಪಾಲು ಈ ಸರ್ವಿಸಿನವರೇ ಒಯ್ಯುತ್ತಾರೆ

ಸೂಚನೆ:— ಕಳೆದ ಸಂಚಿಕೆಯಲ್ಲಿ ಗೋಕರ್ಣದ ವಾಸುದೇವ ಪ್ರಭು ಎಂಬಾತನ ಖಟ್ಲೆ ಕಡೀಕತ್ತಿನಲ್ಲಿ ಹಚ್ಚ-ಕಡಿದೆ ಯೆಂಬದಾಗಿ ತಿಳಿಯುತ್ತದೆ; ಮುಂದಿನ ಸಂಚಿಕೆಯಲ್ಲಿ ಎಲ್ಲ ವೃತ್ತಾಂತ ಕೊಡುವ ತಿದ್ದುಪಡಿಮಾಡಲಾಗುವದು

ಹಳದೀಪುರ— ಇಲ್ಲಿ ಈ ವರ್ಷದ ರಥೋತ್ಸವವನ್ನು ಅನೇಕ ಜೂಗಾರ ಮಂಡಳಿಗಳೂ, ಗರಗಡ ಆಟಗಳೂ ನಡೆಸಬಂದಿದ್ದವು' ಕರಕರದ ಆಟ' ಪೋಲೀಸರು ಜಾಗ್ರತರಾಗಿ ಬಂದೋಬಸ್ತಿನಲ್ಲಿ ತೊಡಗಿದ್ದರೂ, ಈ ಮಂಡ-ಆಟಗಳಿಗೇನು ಗ್ರಹಚಾರ ತಾಗಲಿಲ್ಲ. ಅವುಗಳಲ್ಲಿ ದಂಡವಾದವು ಪೋಲೀಸರ ಕಣ್ಣು ತಪ್ಪಿಸಿ ಪೋಲೀಸ ಪಟೇಲರ ಕಣ್ಣು ತಪ್ಪಿಸಿ, ಇದರ ಎಲ್ಲ ಜನರಿಗೆ ಕಾಣುವಂತೆ ಈ ಮಂಡ-ಆಟಗಳು ನಡೆದವು. ದೃಶ್ಯತದೇವಿಯ ಮಾಯೆಯೋ ಹೀಗಿದೆ' 'ಜಯ ಜಯ ಬಜಾರ'ವೇ ಅದು! ಜೂಜಾಡುವರ ಕಣ್ಣು ತಪ್ಪಿಸಿಕೊಳ್ಳುವಂಥ, ಜೂಜಾಡುವರಿಗೆ ಬಾಳಿಸಿಕೊಳ್ಳುವಂಥ ಚತುರರವರು!

ಹೊನ್ನಾವರ— ಯಾರೋ ಒಬ್ಬರು-ಇಬ್ಬರೋ, ಇಪ್ಪತ್ತರೋ, ಮೂವತ್ತರೋ, ಎಷ್ಟು ಜನರೋ ಗೊತ್ತಿಲ್ಲ ಪ್ರತಿಯೊಂದು ಅಂಗಡಿಗೂ ಮನೆಗೂ ಬ್ರಿಟಿಶ ಮಾಲವನ್ನು ಬಹಿಷ್ಕರಿಸಿರಿ, " «ಬೊಯ್‌ಕಾಟ' ಬ್ರಿಟಿಶ್‌ಗುಡ್ಸ " ಎಂಬ ಅಕ್ಷರಗಳನ್ನು ಡಾಮರಿನಿಂದ ಬರೆದಿದ್ದರು. ಪಕ್ಕಾಲಿನ ಬೇಲಿಗಳಿಗೆ ನೆರೆನಿಂತಂತೆ, ಈ ಭಸ್ಪ ಹೊಡೆದಿತ್ತು. ಇದು ಬುಧವಾರ ಬೆಳಿಗ್ಗಿನ ಸಂಗತಿ. ಸಾಯಂಕಾಲವೇ ಕಚೇರಿಯಲ್ಲಿ ಒಗ್ಗಟ್ಟಿನಿಂದ ಸಭೆಯಾಯಿತು ಮಾಮಲೇದಾರರೂ, ಫೌಜದಾರರೂ; ಪೋಲೀಸರೂ ಪಟ್ಟಣಶೆಟ್ಟಿ-ಪ್ರಭುಗಳಿಗೆ ಕರೆಕಳಿಸಿದರು. ಕಚೇರಿಗೆ ಬಂದ ಜನರು ಮಾಮಲೇದಾರರ ಪ್ರಸ್ತಾವಿಕ ಭಾಷಣವಾದ ಬಳಿಕ, ಫೌಜದಾರರ ಮುಖ್ಯ ಭಾಷಣವಾಯಿತು «ಸಭೆಗೆ ಬಂದವರು ಒಳ್ಳೇ ಮಂದಿ. ನೀವು ಚಳವಳಿಯಲ್ಲಿಲ್ಲ" ಹೀಗೆ ಸಭೆಗೆ ಬಂದವರಿಗೆ ಸರ್ಟಿಫಿಕೇಟು ಕೊಟ್ಟು ನಿರಪರಾಧಿಗಳಿಗೆ ಜೈಲಿಗೆ ಕಳಿಸುವ ಕಾಯಕವನ್ನು ಕಾಂಗ್ರೆಸ್ಸಿಗರು ನಡೆಸುವದಾಗಿ ಹೇಳಿದರು. ಮಾರ್-ಮುಂಜನರ ಹೀಗೆ ಇಷ್ಟರ ನಾವೇನಿದೇಕೆ ಮಾಡಿದರು. ಈ ಊರಲ್ಲಿ ಚಳವಳಿಯಿಲ್ಲ, ಮುಂಚೆ ಪ್ರತಿಯೊಬ್ಬರೂ ನಡೆಯುತ್ತಿದ್ದರು; ಈಗ ಒಬ್ಬರ ಕೈಯಲ್ಲಿಯೂ ಬೊಗಳ ಕಾಣುವದಿಲ್ಲ. " ಹೀಗೆ ಫೌಜದಾರರು ಉದ್ಗರಿಸಿದರು ಹೀಗೆ ಭಸ್ಪ ಹೊಡೆಸುವದರಿಂದ ಲಾಭವಿಲ್ಲವಾಗಿ ಫೌಜದಾರರು ಅಭಿಪ್ರಾಯಪಟ್ಟರು. ಮತ್ತು ಹಾಗೆಯೇ ನುಡಿದ್ದೇನಂದರೆ—' ನಾಳೆಗೆ ನೀವೆಲ್ಲರೂ ನಿಮ್ಮ ಅಂಗಡಿಗೆ ಹಾಕಿದ ಭಸ್ಪವನ್ನು ಅಳಿಸಬೇಕು; ನೆರೆಯ ಅಂಗಡಿಗೆ ಹಾಕಿದ ಭಸ್ಪವನ್ನು ಅಳಿಸಬೇಕು. ನನಗೀಗ ಸಮಯವಿಲ್ಲ, ನಮ್ಮ ಸಾಹೇಬರು ಬರಲಿದ್ದಾರೆ, ಅವರು ಹೋದ ಬಳಿಕ, ಇದರ ಪತ್ತೆ ಹಚ್ಚುತ್ತೇನೆ. " ಆದುದರಿಂದ ಸಂಗತಿಯಲ್ಲಿ ಫೌಜದಾರರು ಇಷ್ಟು ಆತುರಪಡುವರೇಕೆಂದು ಜನರು ಚಕ್ಕಿಗೊಂಡಿದ್ದಾರೆ!!

ಫೌಜದಾರ ಮಿ| ಮುನಗೋಳಿಯವರ ಮೇಲಿನ ಆರೋಪದ ಚೌಕಶಿ ಈಗ ಬಹಿರಂಗವಾಗಿ ನಡೆಯುವದಿಲ್ಲ; ಅಂತರಂಗದಿಂದ ನಡೆಯುತ್ತದೆ ಪೋಲೀಸ ಇನ್ಸಪೆಕ್ಟರರಾದ ಮಿ| ತೊಂಬತ್ತೂರರವರೂ ಬಂದಿದ್ದಾರೆ ಅವರೂ ಈ ಚೌಕಶಿ ನಡಿಸುವರಂತೆ! ಸಾಹೇಬರ ಒಳ ದೂರಿಕೊಂಡ ಪೋಲೀಸರಿಗೆ ಪಟ್ಟದ ಮೇಲೆ ವರ್ಗಾಯಿಸಿ ಪ್ರಕರಣ ಅಂತ್ಯವಾಗುವದಾಗಿ ಕೆಲವರ ಅಂದಾಜು! ಬಹುತರವಾಗಿ ಮಿ| ಮುನಗೋಳಿಯವರಿಗೆ ಎಲ್ಲಾದರೂ ದೂರ ವರ್ಗವಾಗಲಿದೆಂದು ಇನ್ನ ಕೆಲವರು ಹೇಳುತ್ತಾರೆ! ದುರ್ಬಲರ ಘಾತ ಮಾಡುವದೇ ಸೃಷ್ಟಿ ಕ್ರಮವೆಂದು] ಮತ್ತು ಕೆಲವರು ಊಹಿಸಿ ರಾ| ಮುನಗೋಳಿಯವರಿಗೆ ಬಾರೆ ಶಿಕ್ಷೆಯೆಂದು ಹೇಳುತ್ತಾರೆ! ಯಾವುದು ದಿಟವೋ, ಯಾವುದು ಸಟೆಯೋ? ಕಲ್ಪನೆಯ ಸಾಮ್ರಾಜ್ಯ !!

ಭಟಕಳ— ಈ ವಾರದ ಇಲ್ಲಿಯ ವಾರ್ತೆಗಳು ವಿಚಿತ್ರವಾದವು. ಇಲ್ಲಿಯ ಶ್ರೀ ಹನುಮಂತ ದೇವಸ್ಥಾನದ ಚಂದ್ರಶಾಲೆಯ ಮೇಲೆ ಒಬ್ಬ ಭಿಕ್ಷುಕನು ಮಲಗಿದ್ದನು ಆತನಿಗೆ ಹಸಿವಾಯಿತೋ ಏನೋ, ಆತನು ಬಹು ದೈನ್ಯದಿಂದ ಒದರಿದನು, ಅಷ್ಟಕ್ಕೆ ಯಾರೋ ಬಂದು ಹೊಡೆದರಂತೆ ಪೋಲೀಸನು ಹೊಡೆದನೆಂದು ಕೆಲವರ ಅಂಬೋಣ ಸುಪರಿಂಟೆಂಡೆಂಟರು ವಿಚಾರ ಮಾಡಬೇಕು. ಒಬ್ಬ ಅಂಗಡಿಕಾರನಿಗೆ ಮಾರ್ಗದ ಮೇಲೆ [illegible] ಹಾಕಿ ಲೋಕದ ಹವೆ ಕೆಡಿಸಿದ ಬಗ್ಗೆ ಪೋಲೀಸ ಖಟ್ಲೆಯಾಗಿ ೧ ರೂಪಾಯಿ ದಂಡ; ದಂಡ ಕೊಡದಿದ್ದರೆ ೨ ದಿನಗಳ ಸಜೆ ಇನ್ನೊಂದು ಅಂಗಡಿಯ ಮುಂದಿನ ಗಿಡದಲ್ಲಿ ತೆಂಗಿನಕಾಯಿಗಳ ರಾಶಿ ಹಾಕಿತ್ತು ಅದರ ಬಳಿ ನಿಂತ ಇನ್ನೊಬ್ಬನಿಗೆ ೪ ರೂಪಾಯಿ ದಂಡ ಇದೇನೆಂದು ಒಬ್ಬರು ಕೇಳುತ್ತಾರೆ.

ಒಬ್ಬ ನವ್ವಾತನು ಕಾರವಾರದಿಂದ ಬೇನೆಯಾಗಿ ಇಲ್ಲಿ ಬಂದಿದ್ದನು, ಆತನಿಗಾದದ್ದು ಪ್ಲೇಗು ಹಾಗೇ ಆತನು ತೀರಿಕೊಂಡನು ಇವನಿಗೆ ನೋಡಿಕೊಂಡ ಇನ್ನೊಬ್ಬನಿಗೆ ಪ್ಲೇಗಾಗಿದೆ ಆತನಿಗೆ ಊರ ಹೊರಗಿಟ್ಟು ಉಪಚಾರ ನಡಿಸುತ್ತಾರೆ ಮ್ಯುನಿಸಿಪಾಲಿಟಿಯವರು ಪ್ಲೇಗು ಹಬ್ಬದಂತೆ ಮುಂಜಾಗ್ರತೆ ಕೊಳ್ಳತಕ್ಕದ್ದು.

ಶಿರಸಿ—ಕಾಯಿದೆಭಂಗದಲ್ಲಿ ಸೇರಿದಂತೆ ಹೊರಡಿಸಿದ ನೋಟೀಸನ್ನು ಮುರಿದ ರಾ| ಗೋಪಾಳ ಮಹಾಗಾಂವಕರ ಹಾಗೂ ಗೋಪಾಳ ಕಿಣಿಯವರ ಮೇಲಿನ ಖಟ್ಲೆಯ ವಿಚಾರವು ಶನಿವಾರ ತಾ. ೨೦ನೇಗೆ ನಡೆದು ಅವರಿಗೆ ೧-೧ ವರ್ಷದ ಶಿಕ್ಷೆ, ಅನುಕ್ರಮವಾಗಿ ೧೦೦-೫೦ ರೂಪಾಯಿ ದಂಡವಾಯಿತು ದಂಡ ಕೊಡದಿದ್ದರೆ, ೨-೩ ತಿಂಗಳ ಶಿಕ್ಷೆ. ರಾ| ಶ್ರೀಧರ ಕಿಣಿಯವರು ಅಸ್ವಸ್ಥರಿದ್ದರೆ, ಕಾರಣ ಅವರ ಖಟ್ಲೆ ವಿಚಾರವಾಗಲಿಲ್ಲ ರಾ| ಮಹಾದೇವ ಶೆಟ್ಟಿ, ಶಂಕರ, ಕನೆಯಪ್ಪ ಇವರಿಗೆ ಅನುಕ್ರಮವಾಗಿ ೮ ತಿಂಗಳು ಶಿಕ್ಷೆ. ೫೦ ರೂಪಾಯಿ ದಂಡ (ಇಲ್ಲವೆ ೧ ತಿಂಗಳ ಶಿಕ್ಷೆ ,, ೬ ತಿಂಗಳ ಶಿಕ್ಷೆ ೧೨೦ ರೂ ದಂಡ (ಇಲ್ಲವೆ ೧|| ತಿಂಗಳ ಶಿಕ್ಷೆ,) ೬ ತಿಂಗಳ ಶಿಕ್ಷೆ ೫೦ ರೂ. ದಂಡ (ಇಲ್ಲವೆ ೧|| ತಿಂಗಳ ಶಿಕ್ಷೆ) ಹೀಗೆ ಶಿಕ್ಷೆಯಾಗಿದೆ ಬೀರು ಎಂಬ ಬನವಾಸಿಯ ೧೩ ವರ್ಷದ ಹುಡುಗನಿಗೆ ೪ ತಿಂಗಳ ಸಜೆ ರೂ ೫೦ ದಂಡ ಇಲ್ಲವೆ ೧ ತಿಂಗಳ ಸಜೆ; ಹೆಗಡೆಕಟ್ಟೆಯ ಸ್ವಯಂಸೇವಕ ರಾ| ನಾರ್ಣಪ್ಪ ಹೆಗಡೆ ಅಜ್ಜೀಮನೆ ಇವರಿಗೆ ೧ ವರ್ಷದ ಶಿಕ್ಷೆ ೧೦೦ ರೂಪಾಯಿ ದಂಡವಾಯಿತು, ಇಲ್ಲವೆ ೧|| ತಿಂಗಳ ಶಿಕ್ಷೆ, ರಾ| ಮಹಾನಂದ ಎಂಬುವರಿಗೆ ೬ ತಿಂಗಳ ಸಜೆ ರೂ ೫೦ ದಂಡ, ದಂಡ ಕೊಡದಿದ್ದರೆ ೧ ತಿಂಗಳ ಸಜೆ, ಕೊಡಗದ ರಾ| ಮಣ್ಣಯ್ಯ ಎಂಬುವರು ನೋಟೀಸು ಹತ್ತಿ [illegible] ಕಡೆ ಹೋಗುತ್ತಿದ್ದರು; ಅವರಿಗೆ ಅವಳೂರ ಸಮೀಪ ಸೆರೆಹಿಡಿದು ೧ ವರ್ಷದ ಕಠಿಣ ಸಜೆ ವಿಧಿಸಲಾಗಿದೆ. ರಾ| ಕೇಶವ ಕಾಮತರೆಂಬ ವರ್ತಕರು ಇಲ್ಲಿಯ ಕಚೇರಿಯಲ್ಲಿ ದಂಡದ ವಸೂಲಿಗಾಗಿ ಜಪ್ತಿ ಮಾಡಿ ತಂದ ಸಾಮಾನನ್ನು ಕೊಳ್ಳಬಾರದಾಗಿ ಹೇಳಿದರು. ಹೀಗೆ ಪಿಕೆಟಿಂಗ

ನಾಡಿದ ಒಳಗೆ ದಾ| ಕಾಮತರಿಗೆ ಪೋಲೀಸರು ದಪ್ಪ ಕೊಡಲಾರಂಭಿಸಿದರು, ಆಸ್ಪತ್ರೆಯಿಂದ ಜಿಲ್ಲಾ ಕಾಮತರಿಂದ ಬಂದೈಕ ವಸ್ತುಗಳನ್ನು ಕೊಳ್ಳಲಾರಿಂದ ದಾ| ಕಾಮತರ ಹೇಳಿ ಬಿಕಟ್ಟಂಗ ಕಾಣಿಸಿದರು ಮಹಾದೇವ ದಿನ ಅಂದರೆ ತಾ. ೧೪ನೇಗ ದಾ| ಕಾಮತರು ಅಂಗೋಲದಲ್ಲಿ ಕೂತಿದ್ದರು, ಕ್ಯಾಗ ಬಂದು, ಕೊಂಬುಳ್ಳ ಹಗ್ಗ ಹಾಕಿ ಪೋಲೀಸರು ಸಂಭ್ರಮದಿಂದ ಅವರಿಗೆ ಸರಿಸಿಕೊಂಡು ಕಚೇರಿಗೆ ಒಯ್ದರು. ಅಲ್ಲಿ ಮಿಟ್ಲೆಗ್ರು ವಿಚಾರಿಸಿ ೫೦ ರೂಪಾಯಿ ದಂಡ ಇಲ್ಲವೆ ೩ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಕ್ರಮ ವರ್ತಕರಾದ ದಾ| ಕಾಮತರ ಸ್ವಯಂಸೇವಕರ ಗುಂಪಿಗೆ ಮಂಗಳವಾರ ತಾ ೩ನೇಗೆ ಮ. ಶ್ರೀಗ ಹಾಕಿ ಝಡತಿ ನಾಡಿಸಿದರು ಎಲ್ಲ ನೋಡಿದವರಲ್ಲಿ ಪೋಲೀಸರ ಪ್ರೌಢಿಯು! ಕೊಂಗ್ರೆಸಿಗೆ ಸಂಬಂಧವಿಲ್ಲ, ಯಾವದೇ ದಾರಿಯ ದಾ| ಸ್ವಯಂಸೇವಕರಲ್ಲಿ ದೊರಕಲಿಲ್ಲ. ಗಾಜದಾಸನವರಂತೆ ಇವರಿಗೆ ೧೧ ಘಂಟೆಗೆ ಕ್ರಮ ಮಾಡಿ ಕಚೇರಿಗೆ ಒಯ್ದರು. ನಿಷೇಧನೆಂದು ಬಾರಿಬಾರಿ ಹರತಾಳವಾಯಿತು. ಅಂಗಡಿ ಮುಚ್ಚಿದವರ ಹೆಸರು ಬರೆದೊಳ್ಳಲು ಪೋಲೀಸರು ಬಂದಿದ್ದರು ಕೆಲವರ ಹೆಸರು ಬರೆದರು, ಕೆಲವರ ಹೆಸರು ಅವರಿಗೆ ತಿಳಿಯಲಿಲ್ಲ. ಹೀಗೆ ಪೋಲೀಸರ ಕೆಲಸ ಪೂರ್ಣತೆವಾಗಲಿಲ್ಲ. ಶ್ರೀ ಲಕ್ಷ್ಮೀಬಾಯಿಯವರು ಪಟ್ಟಣದಲ್ಲಿ ಮುಷ್ಟಿಯಿಂದು ಕೂಡಿಸುತ್ತಾರೆ. ಇದೊಂದು ಅಪರಾಧವಂತೆ, ಆದರಿಂದ ಅವರಿಗೆ ಪೋಲೀಸರು ಕ್ರಮವಾಡಿ ಕಚೇರಿಗೆ ಒಯ್ದರು. ಕೆಲಹೊತ್ತು ಇಟ್ಟುಕೊಂಡು. ಹಾಗೆಯೇ ಬಿಟ್ಟುಬಿಟ್ಟರು

ಈಗ ಪೋಲೀಸರು ಕರಪತ್ರದ ಬೇಟೆ ನಡಿಸಿದ್ದಾರೆ, ಎಲ್ಲಿ ಪಟ ಸಿಕ್ಕ, ಹೆಸರು ಬರೆದಿತ್ತಾರೆ, ಯಾರ್ಯಾರು ಮಾರುತ್ತಾರೆ, ಎಂಬುದೇ ಪೋಲೀಸರ ರೋಷ ೫೫ ತಾನೇಗೆ ದಾ| ಜನಾರ್ದನ ಪಂಡಿತ ಎಂಬುವರು ಪೇಟೆಯಲ್ಲಿ ಆಪ್ತನ ಹೋಗುತ್ತಿದ್ದರು, ಪೋಲೀಸರಿಗೆ ಸಂದೇಹ ಬಂತು, ಅವರಿಗೆ ಸರ್ಚಿಸಿದರು. ಝಡತಿ ಮಾಡಲಾಗಿ ಅವರ ಕಡೆ ೧೦೦ ಕರಪತ್ರಗಳು ಸಿಕ್ಕಿದವು ಅವರಿಗೆ ಸರ್ಚಿಸಿದ ಬಳಿಕ ಮಾಡಿ ೫೦ ರೂಪಾಯಿ ದಂಡ, ಇಲ್ಲವೆ ೧|| ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿತು. ಕರಪತ್ರಗಳು ಎಂಗಲ್ಲಿ ಜೋರಬುತ್ತವೆ ದಿನಾ ಬರುತ್ತವೆ!' ಕಲವಿದರುಗ ವರ್ತಕರ ಮೇಲೆ ಪೋಲೀಸರು ನೋಟೀಸು ಜಾರಿ ಮಾಡಿದ್ದಾರೆ— "ಕರಪತ್ರ ಕೊಂಡು ಕೊಡು ಕೊಂಗ್ರೆಸಿಗೆ ಸಹಾಯ ಮಾಡುತ್ತೀರಿ, ಉತ್ತೇಜನ ಕೊಡುತ್ತೀರಿ, ಆಕ್ಟ ಕಾರಣ ತಿಳಿಸಬೇಕು" ಇಲ್ಲದಿದ್ದರೆ ಕಾಇಲ್ಲಿ ನಡಿಸಲಾಗುತ್ತದೆ, ಹೀಗೆ ನೋಟೀಸು ಜಾರಿಯಾಗಿದೆ. "ನಾವು ದುಷ್ಕೃ ಕೊಡುವದಿಲ್ಲ, ಕೊಂಗ್ರೆಸಿನವರು ಪ್ರತ್ಯಕ ಗಾದಿಕ್ಕ ಕೊಟ್ಟು ಹೋಗುತ್ತಾರೆ," ಎಂದು ಕೆಲವರು ಹೇಳಿದರು. ಎಂತೆಂದರೂ ದುಡ್ಡು ಕೊಟ್ಟುಕೊಳ್ಳವದಿಲ್ಲವಾಗಿ ಬರಕೊಡಬೇಕು, ಹೀಗೆ ಪೋಲೀಸರು ಹೇಳಲು, ಕೆಲವರು ಬರಕೊಟ್ಟು ಬಿಟ್ಟರು. "ಮುಂದ ಹೀಗೆಯೇ ನಡಕೊಳ್ಳುತ್ತೇನೆ ಇರುಗಲೇ ಯಾಗೆ ಬಂದಿತ ಹೇಳುವದು! ಮನುಷ್ಯ ಜೀವನವೇ ಕ್ಷಣಭಂಗುರವಾದದ್ದು, ಇಂದಿನ ಬುದ್ಧಿ ನಾಳೆ ಉಳಿಯುವದೆಂದು ಹೇಳುವದು ಹ್ಯಾಗೆ ರಾಜೇ ಸಾಧ್ಯ?" ಎಂಬಿವೇನ ಮಾತುಗಳನ್ನಾಡಿ ಉಳಿದವರು ಹಾಗೆ ಬರಕೊಡಲೊಪ್ಪಲಿಲ್ಲ ಇವರೆಲ್ಲರೂ ಫೌಜದಾರ ಕಚೇರಿಗೆ ಹೋಗಿದ್ದರು

ಹೀರಾಯಿಂದ ಮೋಟರ ಮೇಲೆ ಅಹ್ಮದಾಬಾದ ಕ್ರಿಯೆನಿಕರಿಗೆ ಪೋಲೀಸರು ಝಡತಿ ಮಾಡುವ ಹೊಸ ಕ್ರಮ ನಡೆದಿದೆ ಕುಮಟೆಯಿಂದ ದಾ| ರಾಮಭಟ್ಟ ಕುಂಟ್ಕೇಕರು [illegible] ಮತ್ತು ಮಂಗಳೂರಿನ ಒಬ್ಬ ಗೃಹಸ್ಥರು ಇಲ್ಲಿ ಮೋಟಾರು ಹತ್ತಿ ಬಂದಿದ್ದರು. ಮೋಟರಿನ ಬಳಿ ಬಸ್ಸು ನಿಲ್ಲಿಸಿಕೊಂಡಿದ್ದರು ಪೋಲೀಸರು ಅವರಿಗೆ ಫೆಟ್ಟಿಯಾಗಿ ಮೂರವರಿಗೂ ಇಳಿಸಿಕೊಂಡು ಮಂಗಳೂರಿನವರಿಗೆ ಪೋಲೀಸ ಕಚೇರಿಯಲ್ಲಿ ಕರೆದೊಯ್ದು ಹಾಗೆಯೇ ಬಿಟ್ಟುಕೊಟ್ಟರು ಇವರು ಹುಬ್ಬಳ್ಳಿಗೆ ಹೋಗಲಿದ್ದರು.

ಮಲ್ಯಾಳಿಸಿದ ಶ್ರೀಯಾದವರಿಗೆಲ್ಲ ಶಾಂತಿವಾದರೂ ದಿತ್ತಾರೆ, ಅವರ ಜೊತೆಗೆ ದಾ| ಕಮಲಾಕರ ಸ್ವಾಮಿಯವರನ್ನು ಒಯ್ದರು ದಾ| ಸ್ವಾಮಿಯವರು ಲೋಕಪ್ರಿಯ ಡಾಕ್ಟರು. ಅವರ ಹಿಂದಿನದರಿಂದ ವರ್ತಕ ಸಮಾಜದಲ್ಲಿ ಬಹಳ ಅಸಮಾಧಾನವುಂಟಾಗಿದೆ

(ಇನ್ನೂ [illegible].)

ಜಾಹೀರ ನೋಟೀಸು.

ಶಿದ್ದಾಪುರ ತಾಲೂಕ ಹಸ್ರಗೋಡ ಗ್ರಾಮ ಸಹಕಾರಿ ಸಂಘದ ವ್ಯವಸ್ಥಾಪಕ ಕಮಿಟಿ ಮೆಂಬರರು ಜಾಹೀರಪಡಿಸುವದೇನಂದರೆ — ಸದ್ರಿ ಸಂಘದಲ್ಲಿ ಮೆಂಬರರಾದವರು ತಮ್ಮ ಮೇಲಿನ ಸಾಲದ ಜವಾಬದಾರಿ ತಪ್ಪಿಸಿಕೊಂಡ ಹಿನಹ ತಮ್ಮ ಆಸ್ತಿಗಳನ್ನು ಯಾವ ಪ್ರಕಾರದಿಂದ ಪರಾಧೀನಪಡಿಸಿದ್ದಲ್ಲಿ ಅದು ಸಿಂಧು ಆಗಲಿಕ್ಕಿಲ್ಲ ಮತ್ತು ಸದ್ರಿ ಸಂಘದ ಮೆಂಬರರ ಆಸ್ತಿ ಖರಿಸಿಕೊಳ್ಳುವವರು ಸಂಘದಲ್ಲಿ ಸದ್ರಿ ಮೆಂಬರರ ಸಾಲದ ಜವಾಬದಾರಿಯನ್ನು ತಪ್ಪಿಸಿದ ಹೊರತು—ಕ್ರಯ ವಗೈರೆ ಸ್ವಾಧೀನತೆಯು ಸಿಂಧು ಆಗಲಿಕ್ಕಿಲ್ಲ ತಿಳಿಯತಕ್ಕದ್ದು.

ತಾರೀಕು ೨೮—೧—೧೯೩೨.

ವ್ಯವಸ್ಥಾಪಕ ಮೆಂಬರರು,
ಹಸ್ರಗೋಡ ಗ್ರಾಮ ಸಹಕಾರಿ ಸಂಘ.

ಬಾಲಜೀವನ.

ಈ ಔಷಧವು ಗ್ರಾಣ (Rickets), ಬಾಲಪೀಡೆ, ಅಸ್ಥಿಜ್ವರ, ಧಾತಿ, ಕಫ, ನಾಯಿಗೆಮ್ಮು, ಕಾಳಿಜ ನೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬಿನ ಗಂಡ ರೋಗ, ಕ್ಷಯ, ಅಪಸ್ಮಾರ ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ಅಪ್ರತಿಮವಾಗಿರುತ್ತದೆ. ಈ ಔಷಧವು ಒಂದು ತಿಂಗಳ ಶಿಶುವಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ-ಕಾಲುಗಳು ಕ್ಷೀಣವಾಗುವದು, ತಲೆಯು ಯಾವಾಗಲೂ ದೇಹ ಬಲಹೀನರಾಗುವದು, ಹಲ್ಲು ಬರುವಾಗ ಅತಿಸಾರ, ಬಾಲಗ್ರಹ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ. ೧-೮-೦. ಟ. ಖ. ಬೇರೆ.

ಡಲ್‌ನೆಟ್ ಎಂಡ್ ಕೋ,
ಪ್ರೋ. ಕುಮಟಾ. (ಉ. ಕಾನಡಾ.

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ

ಇದೇ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!
ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಆಫೀಸು— ಕೆನಡಾ ಬಿಲ್ಡಿಂಗ, ಹೋರ್ನಬಿ ರೋಡ, ಮುಂಬಯಿ.
ಜನರಲ್ ಮೆನೇಜರ— ನಾ| ಸರ ಫಿರೋಜ ಸೇಠನಾ, ಕೆ. ಟಿ. ಓ. ಬಿ. ಇ.
೧೯೩೦ನೇ ಇಸ್ವಿಯಲ್ಲಿ ಬಂದ ಹೊಸ ವಿಮಾ ರಕಮು ೧೯.೩ ಕೋಟಿಗೂ ಮಿಕ್ಕಿದೆ
೧೯೩೦ನೇ ಇಸ್ವಿ ಡಿಸೆಂಬರ ತಿಂಗಳ ತಾರೀಖಿಗೆ ಕೂಡಿದ ನಿಧಿ. ೧೯.೩ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ವಿಜಯಿ ವಿಮಾ ಪಾಲಿಸಿನಿಂದ ಹಾಗು ದಕ್ಷತೆಯಿಂದ ನವಯುವಕರು
ಮುದಿಮ ಸುಲಭವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು
ಕೆಲಸ ಮಾಡಬಲ್ಲವರಿಗಾಗಿ ಪತ್ರವ್ಯವಹಾರ ನಡಿಸುವ ಪತ್ತೆ—

The District Manager,
Canada Building
Hornby Road, BOMBAY

OR

Mr. S. B. Rege,
Chief Agent,
171, Civil Lines,
Camp BELGAUM

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟಡ್.

ಸ್ಥಾಪನೆ: **1908.**

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇವರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents:-
D. K. NAYAK Bros
Honavar Agent.-
R. V. PARBHU Esq

K. Padmanabha Rao & Sons.,
BELGAUM
Chief Agents for
Karnatak Districts & S. M. States

ವಾರ್ತೆಗಳು.

(೬ನೇ ಪಾನಿನಿಂದ ಮುಂದರಿದದ್ದು)

— [illegible] ವರ್ಧಂತಿಯ ದಿನ ಮಹಾತ್ಮರಿಗೆ ಅಭಿನಂದಿಸಿ ದೀರ್ಘಾಯುರಾರೋಗ್ಯ ಪ್ರಾರ್ಥಿಸಿ ಠರಾವು ಮಾಡಿದ್ದು ತಕ್ಕದ್ದಲ್ಲವೆಂದು ಸರಕಾರವು ಕಲ್ಕತ್ತೆಯ ಮ್ಯುನಿಸಿಪಾಲಿಟಿಗೆ ಬರೆದು ಆ ಠರಾವನ್ನು ರದ್ದು ಮಾಡಲು ಎಚ್ಚರಿಕೆ ಕೊಟ್ಟಿದ್ದಾರೆ. ಯಾವ ಕಾಯ್ದೆಯ ಯಾವ ಅಧಿಕಾರದಿಂದ ಈ ಹುಕುಮವಾಗಿರುವದೆಂದು ಮ್ಯುನಿಸಿಪಾಲಿಟಿಯು ಸವಾಲು. ಮ್ಯುನಿಸಿಪಾಲಿಟಿಯ ಕಟ್ಟಡದ ಮೇಲೆ ಹಚ್ಚಿದ ರಾಷ್ಟ್ರಧ್ವಜವನ್ನು ತಗೆದು ಬೇಗ ಕಲೆಕ್ಟರರು ಮಾಡಿದ ಹುಕುಮಿನಂತೆ ಮ್ಯುನಿಸಿಪಾಲಿಟಿಯ ಎಂಜಿನೀಯರ [illegible] ಅಧ್ಯಕ್ಷರು ರಾಷ್ಟ್ರಧ್ವಜ ತಗೆದು ಹಾಕಿದರ ಈ ಬಗ್ಗೆ ಗಲಾಟೆ ಆಯಿತು. ಸಭೆಯ ಮುಂದೆ ರಿಸಲ್ಯೂಷನ್ ಅನುಮೋದನವು ಮ್ಯುನಿಸಿಪಾಲಿಟಿಯಲ್ಲಿ ಪ್ರತಿನಿಧಿಸುವ ತಾಳುವ ಕಾರ್ಯಗಾರಿಗಳನ್ನು ಈ ಬಗ್ಗೆ [illegible] ಮ್ಯುನಿಸಿಪಾಲಿಟಿಯು ಠರಾವನ್ನು ಎಂದು ಬೇಕಾಯಿತೆಂದೂ ಗೈಯುತ್ತಾ ನಮ್ಮ ಕೈಯಿಂದ ಗತ್ಯವಾಗಿ ಅಭಿಮಾನ ಬರದ ಕಲೆಕ್ಟರರ ಎಂಜಿನೀಯರು ಆ ಠರಾವಿನ ಅರ್ಥ [illegible] ಜನರ ಹಿತಕ್ಕಾಗಿ ಆ ಠರಾವು ಮಾಡಲ್ಪಟ್ಟಿದೆ, ಆಕ್ಷೇಪಣೆ ಮಾಡತಕ್ಕದ್ದೇನಿಲ್ಲ. ಈಗ ಮ್ಯುನಿಸಿಪಾಲಿಟಿಯವರು ಠರಾವು ಮಾಡಿದ್ದಾರೆ. ಎಂದು ಬಾಬುದರ ಮ್ಯುನಿಸಿಪಾಲಿಟಿಯ ಎಂಜಿನಿಯರರು ಆಫೀಸರರ ಮುಂದೆ ಶಿಸ್ತಿನಿಂದ ನಿಲ್ಲಬೇಕೆಂದು ಪಡೆದುಕೊಳ್ಳಬೇಕಾಗಿ ಹುಕುಮು ಮಾಡಿದರು. ಅದರಂತೆ ಆಫೀಸರರು ಮ್ಯುನಿಸಿಪಾಲಿಟಿಯ [illegible] ಕೆಲವು ತೆಗೆದು ಹಾಕಿದರು. ಅವರ ಜಾಗಕ್ಕೆ ಬೇರೆ ಅಕ್ಷರದ ಪತ್ರಗಳನ್ನು ತಗೆದರು. ಕಳೆದ ಸಂಗ್ರಾಮ ಮ್ಯುನಿಸಿಪಾಲಿಟಿಯು ಸಭೆಯಾಯಿತು. “ಮ್ಯುನಿಸಿಪಾಲಿಟಿಯು ಠರಾವಿನಲ್ಲಿಯ ಹಕ್ಕಿನ ವಧ್ಯವನ್ನು ತೆಗೆಯುವ ಅಧಿಕಾರ ಆಫೀಸರರಿಗೆ ಯಾಕೆ ಬಂತು? ಫೋಟೋ ತೆಗೆಸುವ ಅಧಿಕಾರವೇನು? ಧ್ವಜ ಹಚ್ಚಿದ ಹೀಗೆ ಪ್ರಸಂಗದಲ್ಲಿ ಮ್ಯುನಿಸಿಪಾಲಿಟಿಯು ತಮ್ಮ ಬಗ್ಗೆ ಆಫೀಸರರಿಗೆ ಎಚ್ಚರಿಕೆ ಮಾಡಿದ ಆಫೀಸರರ ಹಾಗೂ ಆಫೀಸರರು ಪಗಾರ ತಿನ್ನುವದು ಮ್ಯುನಿಸಿಪಾಲಿಟಿಯದು, ಅವರದು, ಇದಕ್ಕೆ ಸರಕಾರ! ಇವ್ವರ ಬದಲಾವಣೆಯಲ್ಲಿ ಸಾಗಸತ್ವದ ಹುಚ್ಚು!!

— ಕರ್ನಾಟಕ ಪ್ರಾಂತದಲ್ಲಿ ಹಿಂದೂಸ್ಥಾನ ಸರಕಾರಕ್ಕೆ ಹಾನಿ ತಟ್ಟಿ ಬಂದದ್ದು ಎಂಬ ಭಾಗಗಳಲ್ಲಿ ಜನರು ಒಮ್ಮದಿನ ತಲೆ [illegible] ಕಡಿಮೆಯಾಯಿತು, ಸಿಗರೇಟಿನ [illegible] ಉತ್ಪನ್ನ ಕಡಿಮೆಯಾಯಿತು!

— ಮುಂಬಯಿ ಸರಕಾರವು ಮುಂಬಯಿಯ ಬೇಕ್ ಬೇ ಸಮುದ್ರವನ್ನು ಸರ್ವತ್ತು ತುಂಬಿ ಹಾಕುವದಕ್ಕೆ ಭೂಮಿಯನ್ನು ತಯಾರಿಸಲು ಸಂಕಲ್ಪ ಈಗ ಜಗತ್ಪ್ರಸಿದ್ಧವಿದೆ. ‘ಲಾಯ್ಡ ಬ್ರಿಜ’ ಎಂಬದನ್ನು ತುಂಬುವದಕ್ಕೆ ಎರಡು ಲಕ್ಷ ೬೦ ಸಾವಿರ ರೂಪಾಯಿ ನಷ್ಟ ಬಂತು. ಇದನ್ನು ಕೇಳಿದ್ದು, ೩೩ ಲಕ್ಷ ೪೦ ಸಾವಿರಕ್ಕೆ, ಸರಿಪಡಿಸುವದಕ್ಕೆ ೧೯ ಲಕ್ಷ ೫೦ ಸಾವಿರ ಖರ್ಚು ಬಂತು. ೧೦ ಲಕ್ಷ ರೂಪಾಯಿ ಒಡ್ಡಿ ಕೊಟ್ಟಾಯಿತು. ಯಂತ್ರ ಮಾರಲು, ೩ ಲಕ್ಷ ೬೦ ಸಾವಿರ ರೂಪಾಯಿ ಹುಟ್ಟುವಂತೆ ಯಾಯಿತು. ಒಂದು ೫೩ ಲಕ್ಷ ೪೦ ಸಾವಿರ ರೂಪಾಯಿ ನಷ್ಟ. ಹೊಸ ಮಾದರಿಯ ಯಂತ್ರ ತರಿಸಿದೆ. ಹೊಸ ಮಾದರಿಯ ಯಂತ್ರಗಳಂಥವು ಕೆಲಸ ಮಾಡಿದ್ದು, ೧೯ ಲಕ್ಷ ೬೦ ಸಾವಿರ ರೂಪಾಯಿಗಳೊಳಗೆ ಈ ಕೆಲಸವಾಗುತ್ತಿತ್ತಾಗಿ ಮುಂಬಯಿ ಸರಕಾರದ ಎಂಜಿನೀಯರ ಸಾಹೇಬರಿಗೆ ಹೋಗಿ ೩೭ ಲಕ್ಷ ೬೦ ಸಾವಿರ ರೂಪಾಯಿ ನಷ್ಟ ಬಂತು! ಈ ಯಂತ್ರ ತರಿಸಿದ್ದು ಬ್ರಿಟಿಶ ದೇಶದಿಂದ. ಮುಂಬಯಿ ಗವ್ಹರ್ನರರಾದ ಸರ್ ಜಾರ್ಜ ಲಾಯ್ಡರವರ ಕಾರಕೀರ್ದಿಯಲ್ಲ ತರಿಸಿತ್ತು, ಅದಕ್ಕಾಗಿ ಅವರ ಹೆಸರು ಈ ಯಂತ್ರಕ್ಕೆ ಕೊಟ್ಟಿದೆ.

ಮುಂಬಯಿ ಕಾಯದೆ ಕೌನ್ಸಿಲ ಅಧಿವೇಶನ ನಡೆದ ಒಮ್ಮೆ [illegible] ಬಗ್ಗೆ ಮಿಸ್ಟರ [illegible] ಮೇಲೆ ಸರಕಾರ ಹೊರಿಸುವ ಸಾರ್ವಜನಿಕ ಸ್ವಾಭಿಮಾನ ಕೊಲೆ ಮಿ. ಸ್ಟ್ರೇಂಜ್ ವರ ವಸ್ತುಗಳ ಸೂಚನೆ ಮಾಡಿದ. ಈ ಠರಾವು ಸಂಬಂಧ ಚರ್ಚೆ ನಡೆಯಿತು. ಮೂಲ ಸೂಚನೆಯಲ್ಲಿ [illegible] ಸೂಚನೆಯು ಒಂದು [illegible] ಆ [illegible] ಹೀಗೆ ಕೋರಿಯಾಗುವದು [illegible] ಪ್ರತಿನಿಧಿ [illegible] ಹೊಸ [illegible] ಮರೆತು [illegible] ಪರ್ವಾನಗಿ [illegible] ಜನರು ಒಡಪರಾಗಿದ್ದರೆ [illegible] ಹೊರಟರು, ಒಂದೆ ಕೆಲ ಸಭಾಸದರು [illegible] ವಾದಿಸಿದಾಗ್ಯೂ ಬಹುಮತದ ಪಡೆಯಿಂದ [illegible] ಸರಕಾರದ [illegible] ತರುವದು ತಮ್ಮ [illegible] ಸುಮಂತ ಮಾರ್ಗ ದವರು ಸೂರತ [illegible] ಕೆಲಸ ನಡೆಸುತ್ತಿರಲು ಇವರ ಪರಿಚಯದ ಸುಶಿಕ್ಷಿತರು, ಸುಸಂಸ್ಕೃತರು, ಎಂದೀಗ ಸೂರತ [illegible] ಬಿಟ್ಟು ಹೋಗಬೇಕಾಗಿ ಹುಕುಮಾಯಿತು. [illegible] ದೀಕ್ಷಿತರವರು [illegible] ಡಿ| ಮ್ಯಾಜಿಸ್ಟ್ರೇಟರಿಗೆ ಕಂಡು ಹುಕುಮನ್ನು ಖಮಪಡಿ ಮಾಡಬೇಕಾಗಿ ಡಾ| ದೀಕ್ಷಿತರು ಬಿನ್ನೈಸಿ ದರು. ಅದಕ್ಕೆ ಡಿ| ಮ್ಯಾಜಿಸ್ಟ್ರೇಟರು ಆ ದಿನ ಊರಲ್ಲಿರಲಿಲ್ಲ, ಮಾರನೇ ದಿನವೂ ಇರಲಿಲ್ಲ. ಡಾ| ಸುಮಂತರವರಿಗೆ ಅವರು ಇಟ್ಟುಕೊಂಡು ರೀತಿಯಂತೆ ಆತಿಥ್ಯ ಮಾಡಿದರು. “ ಅಪರಾಧಿಗೆ ತಪ್ಪಿಸಿಕೊಳ್ಳಲು ಆಶ್ರಯ ಕೊಟ್ಟರೆಂದು ಡಾ| ದೀಕ್ಷಿತರವರ ಮೇಲೆ ಆರೋಪ ಬಂದು ಅವರಿಗೆ ಸರಪಳಿಯ ಹಾಕುವ ಶೂರ್ವ ಘೋಷಣೆಯಾಯಿತು. ಡಾ| ದೀಕ್ಷಿತರವರು ಡಿ| ಪೋ| ಸುಪರಿಂಟೆಂಡೆಂಟರಿಗೆ ಕಂಡು ಸತ್ಯ ಸ್ಥಿತಿಯನ್ನು ತಿಳಿಸಿಹೋದರು. ಹೀಗೆಯೇ ಬರಕೊಡಬೇಕಾಗಿ ಸುಪರಿಂಟೆಂಡೆಂಟರ ಆಜ್ಞೆಯಾಯಿತು. ಅದರಂತೆ ಡಾ| ದೀಕ್ಷಿತರವರು ಬರಕೊಟ್ಟು ಸತ್ಯಾಗ್ರಹಿಗಳಿಗೆ ಪೋಲೀಸರ ಕಣ್ಣು ತಪ್ಪಿಸಿಕೊಂಡು ಹೋಗುವ ಕಾರ್ಯದಲ್ಲಿ ತಾವೆಂದಿಗೂ ನೆರವಾಗಲಿಕ್ಕಿಲ್ಲವಾ! ಬರಕೊಟ್ಟರು. ಹೀಗೆ ತಮ್ಮ ಮೇಲಿನ ಗ್ರಹಣ ಬಿಡುಗಡೆಯಾಯಿತಾಗಿ ಡಾ| ದೀಕ್ಷಿತರವರು ಹೇಳಿದರು.

— ಜಬಲಪುರದ ವರ್ತಕರಿಗೆ ಸಿನಾಂದಿ ಪತ್ರಗಳು ಬರಲಾರಂಭಿಸಿವೆ. ಒಂದು ವಾರದ ತನಕ ಹರತಾಳ ಆಚರಿಸದಿದ್ದರೆ, ಘಾತವಾಗುವದಾಗಿ ಹೆದರಿಸಲ್ಪಟ್ಟಿದೆ. ಹರತಾಳ ಮಾಡಿದರೆ ಸರಕಾರವು ಖಟ್ಲೆ ಮಾಡುತ್ತದೆ. ಪೋಲೀಸ ಸುಪರಿಂಟೆಂಡೆಂಟರು ವರ್ತಕರಿಗೆ ರಕ್ಷಿಸುತ್ತೇವಾಗಿ ಆಶ್ವಾಸನ ಕೊಟ್ಟಿರುತ್ತಾರೆ. ಪತ್ರ ಬರೆಯುವ ಪಟಿಗಳಲ್ಲಿ ಏನೇನಿದೆ ಎನ್ನಲ್ಲ ಸ್ಫೋಟಿಸಿದ ಅವರ ಬಂದಿಗಳು ಮೋರೆತವು ಪೋಸ್ಟ ಆಫೀಸಿಗೆ ಬೆಂಕಿ ಹಚ್ಚುವ ಪ್ರಯತ್ನವಿದೆಂದು ಹೇಳುತ್ತಾರೆ. ಪೋಲೀಸರು ಸೂಕ್ಷ್ಮ ಚೌಕಶಿ ನಡಿಸುತ್ತಿದ್ದಾರೆ.

— ಪಂಡಿತ ಮದನ ಮೋಹನ ಮಾಲವೀಯರವರು ಪ್ರಯಾಗ ಕ್ಷೇತ್ರದಲ್ಲಿ ಇದೇ ಮಾಘ ಮಾಸದ ಕೃಷ್ಣ ಪಕ್ಷದಲ್ಲಿ ಪ್ರಾಯಶ್ಚಿತ್ತವಿಧಿ ಕೊಂದು ಪ್ರನೀತರಾದರು. ಇದಕ್ಕೂ, ಪರದೇಶಗಮನಕ್ಕೂ ಸಂಬಂಧವಿಲ್ಲ. ಪರ್ವಕ್ಕಾರಣವೆಂದು ಪಂಡಿತ ಮಾಲವೀಯರವರು ಪ್ರಾಯಶ್ಚಿತ್ತ ಕೊಳ್ಳುವ ಸಂಪ್ರದಾಯವಿದ್ದ, ಅದರಂತೆ ಈ ವಿಧಿಯಾಯಿತು. ಪರದೇಶಗಮನ ಕಾರಣದಿಂದ ವಿಶೇಷ ವಿಧಿಯಾಗುವದವಶ್ಯವಿಲ್ಲವಾಗಿ ಪಂಡಿತರ ಅಭಿಪ್ರಾಯವಾಯಿತು.

— ಹಿಂದುಸ್ಥಾನದಲ್ಲಿ ಸತ್ಯಾಗ್ರಹ ಪ್ರಾರಂಭವಾದ ಬಳಿಕ ಮುಂಬಯಿ ‘ಕ್ರಾನಿಕಲ್’ ಪತ್ರಿಕೆ ತನಗೆ ಬಿಗಲಿಲ್ಲ. ‘ಕ್ರಾನಿಕಲ್’ ಪತ್ರಿಕೆಯ ಲಂಡನ ಸುದ್ದಿಗಾರರು ಹೇರುತ್ತಾರೆ ‘ಟ್ರಿಬ್ಯೂನ’ ಪತ್ರಿಕೆಯಂತೆ, ಇತರ ರಾಷ್ಟ್ರೀಯ ನಿತ್ಯ ಪತ್ರಿಕೆಗಳು ಬರಲಿಲ್ಲ! ಈ ಕುರಿತು ಭಾರತ ಮಂತ್ರಿಗಳಿಗೆ ಕಾಮನ್ಸ್‌ನಲ್ಲಿ ಕೇಳಲು, ಹಿಂದುಸ್ಥಾನ ಸರಕಾರವು ಪರಿಸರಗಳಿಗೆ ಯಾವ ಪತ್ರಿಕೆ ಹೋಗಗೊಡ ತ್ತದೆ, ಯಾವ ಪತ್ರಿಕೆ ಹೋಗಗೊಡುವದಿಲ್ಲ? ಎಂಬುದನ್ನು ವಿಚಾರಿಸುವ ಕಲಸ ತನ್ನದಲ್ಲವಾಗಿ ಉತ್ತರ ಕೊಟ್ಟರು.

— ಈ ವರುಷದ ಅಖಿಲ ಭಾರತೀಯ ವರ್ತಕ ಸಂಘ ಪರಿಷದವು ಹಿಂದುಸ್ಥಾನ ಸರಕಾರವು ಅಸಹಕಾರ ಮಾಡಿದ ಮುಂಬಯಿ ವರ್ತಕ ಸಂಘಕ್ಕೆ ಸರಕಾರಿ ಮನ್ನಣೆಯುಳ್ಳ ವರ್ತಕರ ಹಿತಸಂಬಂಧಗಳನ್ನು ಸರಕಾರಕ್ಕೆ ಒಯ್ಯುವ ಅಧಿಕಾರವು ಈ ಸಂಘಕ್ಕಿದ್ದು ಈ ಸಂಘದಲ್ಲಿ ಮುದ್ರಾ ಮೂಡ್ಡು ಅಖಿಲ ಭಾರತೀಯ ವರ್ತಕರೂ, ವರ್ತಕ ಸಂಘಗಳೂ ಇವ ವರಂಪರೆಯಂತ ವಾರ್ಷಿಕ ಸಮ್ಮೇಳನ ಕಾಲಕ್ಕೆ ಈ ಬಾರಿ ಸರ್ಕಾರಿ ಪ್ರತಿನಿಧಿಗಳು ಹಾಜರಾಗಿ ಸಮಾರಂಭವನ್ನು ನೆರವೇರಿಸಬೇಕು. ಒಂದು ವರ್ಷದ ಬಾರಿ ಸರಕಾರದ್ದು, ಒಂದು ವರ್ಷ ಪ್ರಮುಖ ಲೋಕ ನಾಯಕರದು. ೧೯೩೧ನೇ ಇಸ್ವಿಯಲ್ಲಿ ಇರ್ವಿನ್ ಸಾಹೇಬರು ಈ ಸಮ್ಮೇಳನ ನೆರವೇರಿಸಿದ್ದರು. ಕಳೆದ ವರ್ಷ ಮಹಾತ್ಮರು ಈ ಸಮಾರಂಭದ ಆಚಾರ್ಯರಾದರು. ಈ ಬಾರಿ ಸರ್ವಾಧಿಪತಿ ವಿಲಿಂಗಡನ್ ದೊರೆಗಳು ಅಧ್ಯಕ್ಷರಾಗಬೇಕು. ಸಂಘದವರು ರೌಂಡ ಟೇಬಲ್ ಪರಿಷತ್ತಿನೊಡನೆ ಅಸಹಕಾರ ಮಾಡಿ ತಮ್ಮ ಪ್ರತಿನಿಧಿಗಳಿಗೆ ಹಿಂತಗೆದುಕೊಂಡದ್ದರಿಂದ ಸರ್ವಾಧಿಪತಿಗಳು, ತಾವು ಈ ಸಮಾರಂಭ ನೆರವೇರಿಸಲಾರೆವಾಗಿ ಸಂಘದವರಿಗೆ ತಿಳಿಸಿದ್ದಾರೆ. ಈ ವಿಷಯ ವಿಚಾರ ಮಾಡಲು ಶಿವರಾತ್ರಿಯ ದಿನ ದಿಲ್ಲಿಯಲ್ಲಿ ಸಭೆ ಸೇರುವದಿದೆ. ಅಖಿಲ ಭಾರತೀಯ ಸಂಘವು ಅಸಹಕಾರದ ಠರಾವನ್ನು ರದ್ದುಮಾಡಲಿಕ್ಕಿಲ್ಲವಾಗಿ ‘ಕ್ರಾನಿಕಲ್’ ಪತ್ರಿಕೆಯ ಎಣಿಕೆ.

* * *

ಮ॥ ಗಾಂಧಿಯವರ

ಗೀತಾ-ಬೋಧ

ಅ.— ಶ್ರೀ॥ ಹನುಮಂತರಾವ ಮಾಂಜರೇಕರ

ವಿಶ್ವರೂಪ-ದರ್ಶನ-ಯೋಗ.

೧೧ನೇ ಅಧ್ಯಾಯ

ಅರ್ಜುನನು ಬೇಡಿಕೊಂಡಿರುವದು ಏನಂದರೆ.—

ಭಗವಾನ್, ನೀನು ನಿನ್ನ ಸ್ವರೂಪದಬಗ್ಗೆ ನನಗೆ ಹೇಳಿದುದರಿಂದ ನನ್ನ ಮೋಹವು ಇಲ್ಲದಂತಾಗಿದೆ. ಸರ್ವವೂ ನೀನೇ ಆಗಿರುತ್ತೀ. ಕರ್ತನೂ ನೀನೇ, ಸಂಹರಿಸುವವನೂ ನೀನೇ, ಸಾಕ್ಷೀಭೂತನೂ ನೀನು. ಸಾಧ್ಯವಿದ್ದರೆ ನಿನ್ನ ಈಶ್ವರೀಯರೂಪದ ದರ್ಶನವು ನನಗಾಗುವಂತೆ ಮಾಡು "

ಭಗವಂತನು ಅಂದದ್ದು —

ನನಗೆ ಸಾವಿರಾರು ರೂಪಗಳಿವೆ, ಮತ್ತು ಅವು ಅನೇಕ ಬಣ್ಣಗಳವುಗಳು. ಅವುಗಳಲ್ಲಿ ಆದಿತ್ಯ ರುದ್ರ ಮೊದಲಾದವರು ಒಟ್ಟುಗೂಡಿರುವರು. ನನ್ನಲ್ಲಿ ಎಲ್ಲ ಚರಾಚರವಸ್ತು, ಜಗತ್ತು ಒಟ್ಟುಗೂಡಿದೆ. ಈ ರೂಪವು ಚರ್ಮಚಕ್ಷುಗಳಿಗೆ ಕಾಣಿಸದು. ಆದುದರಿಂದ ನಾನು ನಿನಗೆ ದಿವ್ಯದೃಷ್ಟಿಯನ್ನು ಕೊಡುವೆನು. ಅದರಿಂದ ಆ ರೂಪವನ್ನು ನೋಡು '

ಸಂಜಯನು ಧೃತರಾಷ್ಟ್ರನಿಗೆ ಅಂದದ್ದು —

" ರಾಜನೇ, ಈ ರೀತಿ ಅರ್ಜುನನಿಗೆ ಹೇಳಿ ಭಗವಂತನು ತೋರಿಸಿದ ಅದ್ಭುತ ರೂಪವು ವರ್ಣನೆಗೆ ಮೀರಿದ್ದು. ನಭದಲ್ಲಿ ಒಬ್ಬ ಸೂರ್ಯನು ಹೊಳೆಯುತ್ತಾನೆ. ಅದರ ಬದಲು ಸಾವಿರ ಸೂರ್ಯರು ಉದಯಿಸಿದರೆಂದರೆ, ಅವುಗಳ ತೇಜವು ಎಷ್ಟಾಗುವದೋ ಅದಕ್ಕಿಂತಲೂ ಹೆಚ್ಚಾದ ತೇಜವು ಆ ರೂಪದಲ್ಲಿ ಹೊಳೆಯುತ್ತಿತ್ತು. ಅದರ ಕಣ್ಣುಗಳೂ, ಅಲಂಕಾರಗಳೂ ಅಷ್ಟೇ ಹೊಳೆಯುತ್ತಿದ್ದವು. ಇದನ್ನು ಕಂಡು ಅರ್ಜುನನು ರೋಮಾಂಚಿತನಾದನು. ಅವನ ತಲೆಯು ತಿರುಗಲಿಕ್ಕೆ ಹತ್ತಿತು. ಹಾಗೂ ದಂಡನೆ ನತನಾಗುತ್ತ ಆತನು ಸ್ತುತಿಸಹತ್ತಿದನು

ದೇವಾ, ನಿನ್ನೀ ವಿಶಾಲವಾದ ದೇಹದಲ್ಲಿ ನನಗೆ ಸರ್ವವೂ ಕಾಣುತ್ತಿದೆ. ಬ್ರಹ್ಮನೂ ಅದರಲ್ಲಿದ್ದಾನೆ, ಮಹಾದೇವನೂ ಇದ್ದಾನೆ, ಋಷಿಗಳೂ ಇದ್ದಾರೆ, ಮತ್ತು ಸರ್ಪಗಳೂ ಇದ್ದಾವೆ. ನಿನ್ನ ಕೈ-ಮೊಗಗಳಿಗೆ ಎಣಿಕೆಯಿಲ್ಲ. ಆದಿ-ಮಧ್ಯಾಂತ್ಯಗಳೂ ನಿನಗಿಲ್ಲ. ನಿನ್ನ ರೂಪವು ಹೊಳೆಯುವ ಬೆಟ್ಟದಂತೆ ಕಾಣಿಸುತ್ತಿದೆ. ನೋಡುವಾಗ ಕಣ್ಣುಗಳು ಕೋರೈಸುತ್ತವೆ. ಸುಡುವ ಬೆಂಕಿಯಂತೆ ನಿನ್ನ ತೇಜವು ಪ್ರಬಲವಾಗಿಯೂ ಅಪ್ರಮೇಯವಾಗಿಯೂ ಕಾಣುತ್ತದೆ. ನೀನೇ ಜಗತ್ತಿನ ಆಧಾರನು. ನೀನೇ ಪುರಾಣ ಪುರುಷನು, ನೀನೇ ಧರ್ಮರಕ್ಷಕನು. ಎತ್ತ ನೋಡಿದತ್ತ ನಿನ್ನ ದೇಹದ ಅವಯವಗಳು ಕಣ್ಣಿಗೆ ಬೀಳುತ್ತವೆ. ಸೂರ್ಯ ಚಂದ್ರರಂತೂ ನಿನ್ನ ಕಣ್ಣುಗಳಂತೆ ತೋರುತ್ತವೆ. ನೀನೇ ಪೃಥ್ವೀ-ಆಕಾಶಗಳನ್ನು ವ್ಯಾಪಿಸಿದ್ದು, ನಿನ್ನ ತೇಜವು ಜಗತ್ತಿಗೆ ತಾಪಕೊಡುತ್ತಿರುವದು. ಈ ಜಗತ್ತು ಥರಥರ ನಡುಗುತ್ತಿದೆ. ದೇವರ್ಷಿ ಸಿದ್ಧರುಗಳು ಕೈ ಜೋಡಿಸಿ ಭೀತಿಯಿಂದ ನಿನ್ನನ್ನು ಸ್ತುತಿಸುತ್ತಿದ್ದಾರೆ. ಈ ವಿರಾಟ್ ಸ್ವರೂಪವನ್ನು, ಈ ತೇಜವನ್ನು ಕಂಡು ನಾನಂತೂ ದಿಗಿಲುಗೊಂಡಿರುವೆನು. ನನ್ನ ಶಾಂತಿಯೂ ಧೈರ್ಯವೂ ಅಳಿದುಹೋದವು. ದೇವಾ, ಈಗ ಪ್ರಸನ್ನನಾಗು. ನಿನ್ನ ದವಡೆಗಳು ವಿಕರಾಳವಾಗಿವೆ. ದೀಪದ ಮೇಲೆ ಪತಂಗಗಳು ಬೀಳುವಂತೆ ನಿನ್ನ ಮೊಗದೊಳು ಜನರು ಬೀಳುತ್ತಿರುವಂತೆಯೂ ಅವರನ್ನು ನೀನು ಚೂರುಚೂರುಮಾಡಿ ತಿನ್ನುವಂತೆಯೂ ನನಗನಿಸುತ್ತದೆ. ಇಂಥ ಉಗ್ರಸ್ವರೂಪಧಾರಿ ನೀನು ಯಾರಾಗಿರುವಿ? ನಿನ್ನ ಪ್ರವೃತ್ತಿಯಾದರೂ ಯಾವುದು?"

ಭಗವಂತನು ಅಂದದ್ದು —

" ಜನರ ಸಂಹಾರಮಾಡುವ ಕಾಲಪುರುಷನು ನಾನೇ. ನೀನು ಯುದ್ಧಮಾಡು ಅಥವಾ ಬಿಡು, ಈ ಎಲ್ಲರ ನಾಶವಾಗದೇ ಇರಲಿಕ್ಕಿಲ್ಲ. ನೀನು ನಿಮಿತ್ತ-ಮಾತ್ರನಾಗಿದ್ದಿ '

ಅರ್ಜುನನು ಅಂದದ್ದು:—

ದೇವಾ ಜಗನ್ನಿವಾಸ, ನೀನು ಅಕ್ಷರನಾಗಿರುವಿ. ಸತ್ ಅಸತ್ತು ನೀನೇ. ಅದರಾಚೆಗೆ ಇರುವಂಥದ್ದು ನೀನೇ. ನೀನು ಆದಿದೇವನೂ ಪುರಾಣಪುರುಷನೂ, ಈ ಜಗತ್ತಿಗೆ ಆಶ್ರಯನೂ ಆಗಿರುತ್ತೀ. ತಿಳಿದುಕೊಳ್ಳಲಿಕ್ಕೆ ಯೋಗ್ಯನಾದವನು ನೀನೇ. ವಾಯು, ಯಮ, ಅಗ್ನಿ, ಪ್ರಜಾಪತಿಯೂ ಸಹ ನೀನೇ. ನಿನಗೆ ನಾನು ಸಾವಿರ ಸರತಿ ಎರಗುವೆನು. ಈಗ ನೀನು ನಿನ್ನ ಮುಂಚಿನ ರೂಪವನ್ನು ತಾಳು "

ಅದಕ್ಕೆ ಭಗವಂತನು ಅಂದದ್ದು —

ನಿನಗೆ ಪ್ರಸನ್ನನಾಗಿ ನನ್ನ ವಿಶ್ವರೂಪವನ್ನು ನಿನಗೆ ತೋರಿಸಿದೆನು. ವೇದಾಭ್ಯಾಸದಿಂದಲೂ, ಯಜ್ಞದಿಂದಲೂ ಇತರ ಶಾಸ್ತ್ರಗಳ ಅಭ್ಯಾಸದಿಂದಲೂ ದಾನ-ತಪಗಳಿಂದಲೂ, ಈ ರೂಪವನ್ನು ನೀನು ಕಾಣಲಾರೆ. ಅದನ್ನು ನೀನು ಕಂಡು ನೋಡಿದಿ. ಅದನ್ನು ಕಂಡು ಮೂರ್ಛೆ ಹೋಗಬೇಡ. ಅಂಜಿಕೆಯನ್ನು ತೊರೆದು ಶಾಂತನಾಗು. ಹಾಗೂ ನಿನ್ನ ಗುರುತಿನ ನನ್ನ ನಿತ್ಯದ ರೂಪವನ್ನು ನೋಡು. ನನ್ನೀ ದರ್ಶನವು ದೇವರಿಗೆ ಸಹ ದುರ್ಲಭವಾದುದು. ಈ ದರ್ಶನವು ಕೇವಲ ಶುದ್ಧ ಭಕ್ತಿಯಿಂದಲೇ ಲಭಿಸುವದು. ಸರ್ವಕರ್ಮಗಳನ್ನು ನನಗೆ ಅರ್ಪಿಸಿ ಮತ್ಪರಾಯಣನಾಗಿ ನನ್ನ ಭಕ್ತನಾಗಿ ಎಲ್ಲಕಡೆಗೂ ಆಸಕ್ತಿಯನ್ನು ಬಿಟ್ಟು ಎಲ್ಲ ಪ್ರಾಣಿಗಳಲ್ಲಿ ಪ್ರೀತಿಯನ್ನಿಟ್ಟಿರುವವನು ನನಗೆ ಬಂದು ಕೂಡುತ್ತಾನೆ "

ಟಿಪ್ಪಣಿ — ಹತ್ತನೆಯ ಅಧ್ಯಾಯದ ಮೇಲಿನ ಪ್ರವಚನದಂತೆಯೇ ಈ ಅಧ್ಯಾಯದ ಮೇಲಿನ ಪ್ರವಚನವನ್ನು ಸಂಕ್ಷೇಪವಾಗಿ ನಿವೇದಿಸಿದ್ದೇನೆ. ಈ ಅಧ್ಯಾಯವು ಕಾವ್ಯಮಯವಾಗಿರುವದು. ಇದರಿಂದ ಮೂಲವನ್ನು ಅಥವಾ ಅನುವಾದವನ್ನು ಇದಕ್ಕಿಂತ ಮೇಲಿನ ರೀತಿ ಓದಲು ಯೋಗ್ಯವಾಗಿರುತ್ತದೆ. ಆದರಿಂದ ಭಕ್ತಿರಸವು ಅಂತಃಕರಣದಲ್ಲಿ ಹರಿಯುವದು. ಭಕ್ತಿರಸವು ಅಂತಃಕರಣದಲ್ಲಿ ಒಡಮೂಡಿದೆಯೋ ಇಲ್ಲವೋ ಎಂಬದನ್ನು ನೋಡುವದಕ್ಕೆ ಕಡೆಯ ಶ್ಲೋಕವು ಒರೆಗಲ್ಲು ಎಂತಿದೆ. ಸರ್ವಾರ್ಪಣೆ ಮಾಡಿದ ಹೊರತು, ಸರ್ವಾತ್ಮೈಕ್ಯಭಾವದ ಪ್ರೇಮವು ಇದ್ದ ಹೊರತು ಭಕ್ತಿಯು ಇಲ್ಲ. ಈಶ್ವರನ ಕಾಲಸ್ವರೂಪದ ಚಿಂತನ ಮಾಡುವದರಿಂದಲೂ ಆತನ ಮುಖದಲ್ಲಿ ಸೃಷ್ಟಿಯು ಹೊಕ್ಕುನಿಗರಾಗುವದಿದೆ, ಕ್ಷಣ-ಕ್ಷಣಕ್ಕೂ ಕಾಲನ ಈ ಕೆಲಸವು ನಡೆದೇ ಇದೆ ಎಂಬುದನ್ನು ಆ ಸ್ಸ್ಮೃತಿಯಲ್ಲಿಟ್ಟುಕೊಳ್ಳುವದರಿಂದಲೂ ಆತ್ಮಸಮರ್ಪಣೆಯೂ ಜೀವಮಾತ್ರದ ಬಗ್ಗೆ ಐಕ್ಯಭಾವನೆಯೂ ಸಹಜವಾಗಿ ಕೈಗೂಡುವವು. ನಮ್ಮ ಇಚ್ಛೆ ಇರಲಿ, — ಇಲ್ಲದಿರಲಿ ಗೊತ್ತಿರದ ಕ್ಷಣದಲ್ಲಿ ಆ ಬಾಯಿಯಲ್ಲಿ ನಾವು ಬೀಳುವವರಿದ್ದೇವೆ. ಅದರಲ್ಲಿ ಸಣ್ಣ-ದೊಡ್ಡ, ಮೇಲು-ಕೀಳು, ಸ್ತ್ರೀ-ಪುರುಷ, ಮನುಷ್ಯ-ಮನುಷ್ಯೇತರ ಎಂಬ ಭೇದವು ಉಳಿಯುವದಿಲ್ಲ. ನಾವೆಲ್ಲರೂ ಆ ಕಾಲೇಶ್ವರನ ಒಂದೇ ತುತ್ತಾಗಿರುವೆವು ಎಂಬುದನ್ನು ಅರಿತು ನಾವು ನಮ್ರರಾಗಿ ಶೂನ್ಯವತ್ ಏಕೆ ಆಗಬಾರದು? ಎಲ್ಲರ ಕೂಡ ಗೆಳೆತನವನ್ನು ಏಕೆ ಬೆಳೆಸಬಾರದು? ಹೀಗೆ ದೃಷ್ಟಿಯನ್ನಿಟ್ಟು ನಡೆಯುವವನಿಗೆ ಕಾಲಸ್ವರೂಪವು ಅಂಜಿಕೆಯನ್ನುಂಟುಮಾಡುವದಿಲ್ಲ. ಅದು ಆತನ ಶಾಂತಿಯ ಸ್ಥಾನವಾಗಿರುವದು

ಯೆರವಡಾ
ಮಂಗಲ ಪ್ರಭಾತ,
ತಾ: ೧೪-೧-೩೧

— ಇಚಲಕರಂಜಿಯ ಮಾಮಲೇದಾರರು ಕುದುರೆ ಸವಾರಿಯಾಗಿ ಸಾಳೆ ಗ್ರಾಮಕ್ಕೆ ಸರ್ಕೀಟಿಗೆ ಹೋಗಿದ್ದರು. ಕುಚೋದ್ಯಗಾರನೊಬ್ಬನು ಕುದುರೆಯ ಕಿವಿ ಕಡಿದನು. ಸಾಹೇಬರ ಬೇರಿಕೆ! ಯಾರೆಂದು ಹಿಡಿಯಹೋಗುವಷ್ಟರಲ್ಲಿ ಕುಚೋದ್ಯಗಾರನು ಮಾಯವಾಗಿಬಿಟ್ಟನು!!

— ಇಂಗ್ಲಂಡದಲ್ಲಿ ಕೊಲೆಪಾತಕಿಯು ಅಪ್ರಾಯಸ್ಥನಿದ್ದರೆ ಅವನಿಗೆ ಗಲ್ಲಿಗೇರಿಸಬಾರದೆಂಬ ಕಟ್ಟಳೆಯಿದೆ. ಹಾಗೆಯೇ ಅಪ್ರಾಯಸ್ಥರಿಗೆ ಚಿತ್ರಪ್ರಸಾರ ಮಾಡಬಾರದೆಂಬ ನಿಯಮವಿದೆ. ನಮ್ಮ ಹಿಂದುಸ್ಥಾನದಲ್ಲಿ?



ಮುದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೨೭-೨೮) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ

"ಪಾಫ್" ಹೊಲಿಗೆ ಮಶೀನು

ಗಳು ನಮ್ಮಲ್ಲಿ ಹಪ್ತೆಯಿಂದ ಶಿಗುತ್ತವೆ!

ಹಾಗು

ಬೇಕಾದ ಬೇರೆ ಭಾಗಗಳೂ ಸಹ ದೊರೆಯುತ್ತವೆ !!

ಈ ಮಶೀನುಗಳು

ನೋಡಲಿಕ್ಕೆ ಚಂದವೂ, ನಡಿಸಲಿಕ್ಕೆ ಸುಲಭವೂ, ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ ದಕ್ಷಿಣ ಕನ್ನಡ ಜಿಲ್ಹೆಗಳ ಸೋಲ ಏಜಂಟರು

ಶಂಕರ ಆಪ್ಪಾಜಿರಾವ ನಾಫ,
ಮೆನೇಜರ, ಕುಲಕರ್ಣಿ-ನಾಫ ಎಂಡ್ ಕಂಪನಿ,
ಶಾಂತಿಭುವನ, **ಕಾರವಾರ.**

ಶಿರಸಿ ಏಜಂಟರು —	ಕುಮಟಾ ಏಜಂಟರು —	ಹೊನ್ನಾವರ ಏಜಂಟರು —
ಕಾಮತ ಬ್ರದರ್ಸ.	ಶಂಕರ ಆಪ್ಪಾಜಿರಾವ ನಾಫ	ಕೆಕ್ಕರ ಮಂಜಪ್ಪಾ ಗಣೇಶ ಶೇಟ

ಮ॥ ಗಾಂಧಿಯವರ
ಗೀತಾಬೋಧ.

ಲೇ — ಶ್ರೀ॥ ಹನುಮಂತರಾವ ಸಾಂಬರೇಕರ

ಭಕ್ತಿಯೋಗ.

[illegible]

[illegible]

[illegible]

[illegible]

ಉಪಾಸನೆಯ ಧ್ಯಾನ ಮಾರ್ಗವು ಸುಲಭವು ಮತ್ತು ಧ್ಯಾನಕ್ಕಿಂತಲೂ ಕರ್ಮಫಲತ್ಯಾಗವೇ ಹೆಚ್ಚು ಸುಲಭವು [illegible] ಎಲ್ಲವರಿಗೂ ಒಂದೇ ಮಾರ್ಗವು ಸುಲಭವೆಂದು [illegible] ಕೆಲವರಿಗೆ ಎಲ್ಲ ಮಾರ್ಗಗಳನ್ನು ಅವಲಂಬಿಸಬೇಕಾಗುತ್ತದೆ. ಈ ಮಾರ್ಗಗಳು ಒಂದರಲ್ಲೊಂದು [illegible] ಒಂದಿಲ್ಲೊಂದು ಮಾರ್ಗದಿಂದ ಭಕ್ತಿಯನ್ನು [illegible]

[illegible]

ಟಿಪ್ಪಣಿ

[illegible]

[illegible]

[illegible]

ಇದು ಆರಂಭ [illegible]

ಮೊದಲಾ
ಮಂಗಳ [illegible]
ತಾ [illegible]

The Bombay Provincial
Cooperative Insurance
Society Ltd
9 Bell House Lane, Fort Bombay
Chief Organisers for the Presidency
JANI KULKARNI & CO

[illegible]

ಡಿ. ಎಸ್. ಕುಲಕರ್ಣಿ,
[illegible] ಕಾರವಾರ.

ಬಾಲಜೀವನ

[illegible] (Pain in the liver) [illegible] (Liver complaint) [illegible] 'ಬಾಲಜೀವನ' [illegible]

ಬಾಟ್ಲಿ ಕ್ರಯ ರೂ ೧-೮-೦ [illegible]

ಡಲ್ಸೆಟ್ ಎಂಡ್ ಕೋ.
ಪೋ ಕುಮಟಾ (ಉ ಕಾನಡಾ.)

ವಾರ್ತೆಗಳು.

— ಪಾರ್ಲಮೆಂಟಿನಲ್ಲಿ ಸೋಮವಾರ ಹಿಂದುಸ್ಥಾನದ ವಿಷಯ ಚರ್ಚೆ ನಡೆಯಿತು. ಭಾರತ ಮಂತ್ರಿಗಳಾದ ಸರ್ ಸಾಮ್ಯುಯೆಲ್ ಹೋರರವರು ಸವಿಸ್ತಾರವಾಗಿ ಮಾತಾಡಿದರು. ರಾಷ್ಟ್ರೀಯ ಸಭೆಗೆ ಹಿಂದಿನಾ ಬಲವು ಇಷ್ಟವಿರಲಿಲ್ಲ, ಸಮರಕ್ಕಾಗಿ ಅದು ದಾರಿ ಕಾಯುತ್ತಿತ್ತು, ಸತ್ಯಾಗ್ರಹ ಪ್ರಾರಂಭ ಮಾಡಿದಾಗ ಬಹು ಎಚ್ಚರಿಕೆಯಿಂದಿತ್ತು, ರಾಷ್ಟ್ರೀಯ ಸಭೆಯು ಲೋಕಪ್ರತಿನಿಧಿ ಸಂಸ್ಥೆಯಲ್ಲ, ಸರಕಾರವೆಂಬ ಸಮಾಜ ವ್ಯವಸ್ಥೆಗೆ ರಾಷ್ಟ್ರೀಯ ಸಭೆಯು ಹಗೆ ಆಗಿದೆ. ರಾಜಶಾಸನಗಳನ್ನು ಜಾರಿ ಮಾಡಿದ್ದರಿಂದ ಅದಕ್ಕೆ ಸೋಲುಂಟಾಯಿತು, ಕಾಣಬಹುದಾದ ಕರಾರುವಾಕ್ಕಾಗಿ ಇನ್ನು ಪ್ರಸಂಗೋಚಿತವಿದ್ದಷ್ಟು ಆ ವಿಚಾರದಿಂದ ವಿವೇಕದಿಂದ ಬಳಸಲಾಗುತ್ತದೆ. ಸರಕಾರದವರು ಎಲ್ಲ ವಿಷಯಗಳನ್ನು ಪರಿಶೀಲಿಸುತ್ತಿದ್ದಾರೆ, ಪೋಲೀಸರು ಬಹು ಸಮಾಧಾನದಿಂದ ವರ್ತಿಸುತ್ತಾರೆ, ಅವರ ಮೇಲೆ ಬಂದ ಆರೋಪಗಳು ಬಹುಶಃ ಸುಳ್ಳು, ಹಿಂದೂ ಜನಾಂಗದ ವಾದವನ್ನು ಒಪ್ಪಿಕೊಂಡಿದ್ದು, ಬ್ರಿಟಿಷ ರಾಷ್ಟ್ರದಿಂದ ಲೋಕದಲ್ಲಿ ಹಿಂದುಸ್ಥಾನದ ಗೌರವವಾಯಿತು. ಹಿಂದುಸ್ಥಾನಕ್ಕೆ ಹಿತವಾಯಿತು, ರಾಜಶಾಸನ ಜಾರಿಗೊಳಿಸಿ ಜನರಿಗೆ ದೆವ್ವದ ಭಯವಿಲ್ಲ, ಸರ್ಕಾರ ಕೊಡಬೇಕೆಂಬ ವಿಚಾರವಿಲ್ಲ, ಅದನ್ನು ಮುಂದರಿಸುವದಕ್ಕಾಗಿಯೆ ರಾಜಶಾಸನಗಳು ನಿರ್ಮಿತವಾದವು, ಮುಖ್ಯ ಪ್ರಧಾನರು ಹೊರಡಿಸಿದ ಘೋಷಣೆ ನಾನಾಯುಂಟಿ ಮುಂದಿನ ವ್ಯವಹಾರ ನಡೆಸುವದು, ಒಂದು ದಿನದ ಧೋರಣದಲ್ಲಿ ನಾವು ಬದಲಿಸಬೇಕಾದುದಿಲ್ಲ ರಾಜ್ಯ ನೀತಿ ಯಾವಾಗಾದೀತೆಂದು ಇದನ್ನು ಹೇಳಲಾರೆ ಎಂದು ನುಡಿದರು. ಕೂಲಿಕಾರ ಪಕ್ಷದ ಮಿ| ಮೋರ್ಗನ ಜೋನ್ಸರವರು ರಾಜಶಾಸನಗಳನ್ನು ನಿಂದಿಸಿದರು. ರಾಜಶಾಸನಗಳಿಂದ ನಾಗರಿಕರ ಸ್ವಾತಂತ್ರ್ಯ ಶೂನ್ಯವಾಯಿತಾಗಿ ನುಡಿದರು. ಹಿಂದಾ ಜಲಿಯಲ್ಲಿ ಪೋಲೀಸರು ಜನರಿಗೆ ಹಿಡಿದು ಚಿತ್ರಹಿಂಸೆ ಮಾಡಿ ಅವರ ಕೈಗಳ ನಡುವೆ ಒಂದು ಬೆಂಕಿ ಕೈಯಲ್ಲಿ ಊರಿಸಿ ನಿಲ್ಲಿಸಿದರಾಗಿ ಮಿ| ಮೋರ್ಗನ ಜೋನ್ಸರವರು ಹೇಳಿ ಪೋಲೀಸರ ನಡಾವಳಿಯನ್ನು ಹೇಳಿದರು, ಈ ಕುರಿತು ತಮ್ಮ ಕಡೆ ದಾಖಲೆಗಳಿದ್ದವಾಗಿಯೂ ಹೇಳಿದರು. ಹರಿಯುವವರೆಗೆ ಎಳೆಯ ಬೇಡಿ, ಬ್ರಿಟಿಷ ವಂಶಕ್ಕೆ ಕಲ್ಯಾಣವಾಗದು, ಎಂಬದಾಗಿಯೂ ಎಚ್ಚರಿಕೆ ಕೊಟ್ಟರು. ಕೂಲಿಕಾರ ಪಕ್ಷದ ಮುಖ್ಯ ನಾಯಕರಾದ ಮಿ| ಲೆನ್ಸಬರಿಯವರು ‘ ಹಿಂದುಸ್ಥಾನಕ್ಕೆ ಆಪಮಾನ ಮಾಡಬೇಡಿ. ಇದು ನಾಗರಿಕತೆ ಇತರ, ಸ್ವಾತಂತ್ರ್ಯದ ಹಕ್ಕುವನ್ನು ಒಪ್ಪಿಕೊಳ್ಳಿ, ಸಿದ್ಧವಿದ್ದಲ್ಲಿ ಸ್ವತಃ ಪರರಾಷ್ಟ್ರೀಯ ಸಂಬಂಧ ಮೊದಲಾದವುಗಳ ಹಿತಾಸಕ್ತಿಯನ್ನು ಬ್ರಿಟಿಷರು ಇಟ್ಟುಕೊಳ್ಳಬಹುದು ’ ಹೀಗೆ ಮಿ| ಲೆನ್ಸಬರಿಯವರು ಒತ್ತಿ ಹೇಳಿದರು. ಕೊನೆಗೆ ಭಾರತ ಮಂತ್ರಿಗಳ ಅಂಬೋಣಕ್ಕೆ ಬಹುಮತ ದೊರೆಯಿತು.

— ಇದೇ ದಿನ ಪಾರ್ಲಿಮೆಂಟಿನಲ್ಲಿ ಕೆಲವು ಪ್ರಶ್ನೋತ್ತರಗಳು ನಡೆದವು. ಕುಮಾರಿ ಮೀರಾಬಾಯಿಯವರೂ, ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿಯವರೂ ಪಾರ್ಲಿಮೆಂಟಿನ ಸಭಾಸದರೊಡನೆ ಮಿ| ಥಾಮಸ ವಿಲಿಯಮ್ಸರವರಿಗೆ ಬರೆದ ಪತ್ರಗಳು ತಲುಪದೆ ಇದ್ದ ಬಗ್ಗೆ ದಿ| ಮುಂಬಯಿ ಸರಕಾರ ಎಷ್ಟರ ವರೆಗೆ ಮುಟ್ಟಿಸಲಿಕ್ಕೆ ತಡವಿಲ್ಲ, ಅವರು ದಾವಣಗೆರೆಯಲ್ಲಿಯೋ ಎಲ್ಲಿ ತಡೆಹಿಡಿದರು? "ಪಾರ್ಲಿಮೆಂಟಿನ ಸಭಾಸದರಿಗೆ ಸಹ ಹೀಗಾದ ಮಾಹಿತಿ ಪತ್ರಗಳ ಅಧಿಕಾರವಿಲ್ಲವೇ? ಬೇಡ?" ಎಂದಾಗ ಮಿ| ಲೆನ್ಸಬರಿಯವರು ಪ್ರಶ್ನೆ ಮಾಡಿದರು. ಪಾರ್ಲಿಮೆಂಟಿನ ಸಭಾಸದರಿಗೆ ವಿಶೇಷ ಹಕ್ಕು ಇದ್ದದ್ದು ತೋರಲಿಲ್ಲವಾಗಿ ಅಧ್ಯಕ್ಷರು ಉತ್ತರಿಸಿದರು. ಪಾರ್ಲಿಮೆಂಟಿನ ಸಭಾಸದರ ವಿಶೇಷಾಧಿಕಾರದ ಬಗ್ಗೆ ಚರ್ಚೆಯಾಗುವ ಸಂಭವವಿದ್ದ, ಮುಂದೆ ಕಾಲದಲ್ಲಿ ಸ್ವಸ್ಥ ನಡೆಸಲು ಸ್ವಸ್ಥ ಬಿಡಲು ದ ಮಾಹಿತಿಗಳ ಪಾರ್ಲಿಮೆಂಟಿನ ಸಭಾಸದರಿಗೆ ಕೊಡಬೇಕಾದೀತು, ಅದಕ್ಕೆ ಪ್ರತಿಬಂಧವಿರಬಾರದು ಹೀಗೆ ಭಾರತ ಮಂತ್ರಿಗಳು ಉತ್ತರಿಸಿ ಈ ಪ್ರಕರಣವನ್ನು ಅಂತ್ಯಗೊಳಿಸಿದರು.

— ಭಾರತ ಮಂತ್ರಿಗಳು ಹಿಂದೊಂದು ಭಾಷಣ ಮಾಡಿದ್ದರು. ಅದರಲ್ಲಿ "ಸತ್ಯಾಗ್ರಹಿಯು ಬಹುಮಂದಿ ನಾಯಿಗಳಂತೆ ಬೊಗಳುತ್ತಾರೆ. ಆದರೆ ಕಡೆಗೆ ದ ಹೋಟೆಲ್ ಕಾರವಾನವು ಮುಂದೆ ಸಾಗುತ್ತದೆ" ಹೀಗೆ ಉದ್ಗರಿಸಿದ್ದರು! ‘*Though dogs bark, the caravan passes on*.’ ಈ ಉಕ್ತಿಯಿಂದ ಹಿಂದುಸ್ಥಾನದಲ್ಲಿ ಗಿನ ಜನರನ್ನು ಸಿಟ್ಟಿಗೆಬ್ಬಿಸಿ ಕೊಂಡಿದ್ದಾರೆ, ಸರ್ ಮಿರ್ಜಾ ಇಸ್ಮಾಯಿಲರು ಸಹ ಸಿಟ್ಟಿಗೆದ್ದಿದ್ದಾರೆ, ಹೀಗಿರುವಾಗ ‘ ಹಿಂದೂ ಮಹಾಸಭೆಯ ಭಾರತ ಮಂತ್ರಿಗಳ ನಿಲುವನ್ನು ಖಂಡಿಸಿದ್ದಾರೆ — ನಾಯಿ ಬೊಗಳುವ ನುಡಿ ಇಂದು ಪ್ರಸಂಗೋಚಿತವಲ್ಲ. ನನ್ನ ಮನಸ್ಸಿಗೆ ಖೇದವಾದ್ದನ್ನು ವ್ಯಕ್ತಪಡಿಸುತ್ತದೆ ’ ಈ ಉಕ್ತಿಯನ್ನು ಉದ್ಧರಿಸಿ ಕಲಕತ್ತೆಯ ‘ ಅಮೃತ ಬಜಾರ ಪತ್ರಿಕೆ ’ಯು ಬರೆದ ಲೇಖದ ತಾತ್ಪರ್ಯವೇನೆಂದರೆ - ನಾಯಿ ಮರಣ, ದೆವ್ವ ಇವುಗಳಿಗೆ ಒಂದು ಸಂಬಂಧವಿದೆಯೆಂದು ಜನರು ನಂಬುತ್ತಾರೆ. ನಾಯಿಗಳಿಗೆ ಅಲೌಕಿಕವಾದ ದೃಷ್ಟಿಯಿರುವದರಿಂದ ಪುರಾತನ ಕಾಲದಿಂದ ಒಂದು ಭಾವನೆಯಿದೆ. ಯಮದೂತರು ನಾಯಿಗಳಿಗೆ ಕಾಣುತ್ತಾರೆ, ದೆವ್ವಗಳು ನಾಯಿಗಳಿಗೆ ಕಾಣುತ್ತವೆ. ಅವನ್ನು ನೋಡಿದ ಕೂಡಲೆ ನಾಯಿಗಳು ವಿಲಕ್ಷಣವಾದ ಧ್ವನಿಯಿಂದ ಕೂಗಾಡಲು ಮಾಡುತ್ತವೆ, ಹೀಗೆ ಪುರಾತನ ಕಾಲದಿಂದ ಒಂದು ಭಾವನೆಯಿದೆ. ‘ ಕರವಾನ ’ ಎಂದರೆ ಒಂಟೆಯ ಸಾಲು, ಅಂದರೆ, ವ್ಯಾಪಾರದ ನಿಮಿತ್ತ, ಅರಬಸ್ಥಾನ ಮುಂತಾದ ದೇಶಗಳಲ್ಲಿ ಪ್ರಾರಂಭವಾಗುವ ಒಂದು ವ್ಯಾಪಾರದ ಸರಕುಗಳನ್ನು ಒಂಟೆಗಳ ಮೇಲೆ ಹೇರಿಕೊಂಡು ವ್ಯಾಪಾರ ನಡೆಸುತ್ತಿದ್ದ ಸಂಗತಿ ಲೋಕಪ್ರಸಿದ್ಧವಿದೆ. ಆ ಕಾಲದಲ್ಲಿ ನಾಯಿಗಳು ಒಂಟೆಗಳ ಸಾಲ ಕೇಳಿದರೆ, ಮುಂದೆ ತಾನೇ ಯಮದೂತರು ಬಂದ ಭಾವನೆ ಭಾರತ ಮಂತ್ರಿಗಳು ಒಂಟೆಗಳ ಸಾಲು ನಾಯಿಗಳ ಕೂಗಾಟದಿಂದ ಉಲ್ಲೇಖಿಸಿದ್ದರಿಂದ ರಾಷ್ಟ್ರೀಯ ಕಾರ್ಯಕರ್ತರನ್ನು ಒಗೆದರೆಂದು ಕೂಡ ದಾಗಿದ ಅಪಾಯವೇನು ಸ್ವಾಮಿ ಸೂಚಕವಲ್ಲ. ನಾಯಿಗಳು ಕಾಣುವಂತೆ ಭಾರತ ಮಂತ್ರಿಗಳು ಏನು ಕಂಡರೋ?

— ಪೋಲೀಸರು ಬಹು ಸಮಾಧಾನದಿಂದ ನಡೆದುಕೊಂಡರೆಂಬದಾಗಿ ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಹೇಳಿದರು. ಈ ಹಿಂದೆ ಹೋಗಿ ಮಾಡಿದ ಅನೇಕ ಪ್ರಕಾರದ ಪ್ರಕಟವಾಗಿನ ಸಾಕ್ಷ್ಯವನ್ನು ಜನರು ಲಾಠಿಯ ಹೊಡೆತದಿಂದ ಕ್ರೂರ ಬರೋಡದಲ್ಲಿ ಸರಕಾರ ಜನರ ಅಂಗಡಿಯ ಪಿಕೆಟಿಂಗ

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೩೧-೩೨) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ

"ಪಾಫ್" ಹೊಲಿಗೆಮಶೀನು

ಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!

ಹಾಗು

ಬೇಕಾದ ಬೇರೆ ಭಾಗಗಳು ಸಹ ದೊರೆಯುತ್ತವೆ!!

ಈ ಮಶೀನುಗಳು

ನೋಡಲಿಕ್ಕೆ ಚಂದವೂ ನಡಿಸಲಿಕ್ಕೆ ಸುಕರವೂ, ನಿಶ್ಶಬ್ದವೂ, ಬಾಳಿಕೆಯವೂ, ಗಟ್ಟಿಯಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ ಏಜಂಟರು —

ಕುಲಕರ್ಣಿ ಶಾಫ ಎಂಡ್ ಕಂಪನಿ,
ಶಾಂತಿಭುವನ, **ಕಾರವಾರ.**

ಮಂಗಳೂರ ಏಜಂಟರ — ಕಮಲಾಕರ ಅಪ್ಪಾಜಿರಾವ ಶಾಫ.

ಶಿರಸಿ ಏಜಂಟರು —	ಕುಮಟಾ ಏಜಂಟರು —	ಹೊನ್ನಾವರ ಏಜಂಟರು —
ಕಾಮತ ಬ್ರದರ್ಸ.	ಶಂಕರ ಅಪ್ಪಾಜಿರಾವ ಶಾಫ	ಕರ್ಕಿ ಮಂಜಪ್ಪಾ ಗಜೇರ ಸೇಟ

ಮಾಡುವಾಗ ಅಲ್ಲಿಯ 'ಸ್ವರಾಜ್ಯ' ಪತ್ರಿಕೆಯ ಸಂಪಾದಕ ವರ್ಗದ ಶ್ರೀ ಟಿ. ಎಸ್. ಸುಬ್ರಾಯ ರಾಮಸ್ವಾಮಿ ಎಂಬವರಿಗೆ ಹೊಡೆದದ್ದು ಭಯಂಕರವೆಂದು ಮದ್ರಾಸ ಶಾಸನ ಕೌನ್ಸಿಲಿನಲ್ಲಿ ಸರಕಾರವು ಒಪ್ಪಿದೆ. ಆ ಪ್ರಕಾರವು ಹೀಗೆ— ಅವರಿಗೂ ಪೋಲೀಸರು ಯಾರೆಂದು ಕೇಳಿದರು. ನಾವು ಸ್ವಯಂಸೇವಕರು, ಪಿಕೆಟಿಂಗ ಮಾಡನಿಂತಿದ್ದೇವೆ. ಹೀಗೆ ಅವರೂ ನುಡಿದರು. "ನಿಮ್ಮ ಜವಾಬದಾರೀ ಇಲ್ಲವಾ? ನಿಮ್ಮ ಜವಾಬದಾರಿಯಿದ್ದರೆ [illegible]ವೆವು" ಹೀಗೆ ಇನ್ಸಪೆಕ್ಟರ ಕಳಿಯುವರು ಗದರಿಸಿದರು. ಕರ್ತವ್ಯ-ಕಾರ್ಯ ಬಿಟ್ಟು ಹೋಗಲಾರೆವು, ಬಂದದ್ದನ್ನು ಅನುಭೋಗಿಸುವೆವು. ಹೀಗೆ ಅವರೂ ನುಡಿದರು. ಕೂಡಲೆ ಬಲಪ್ರಯೋಗಕ್ಕೆ ಪ್ರಾರಂಭ. ಶ್ರೀ| ರಾಮಸ್ವಾಮಿಯವರಿಗೆ ಮೊದಲು ಹೊಡೆದರು. ಕಂಡಲ್ಲಿ ಹೊಡೆದರು, ತಿಕ್ಕ ಬಾಗಿ ನೋಡಿದರು. ಲಾಟ್ಟಿ ಕಟ್ಟಿಗೆ ಮುರಿದು ಹೋಯಿತು. [illegible] ಗವಸ್ತ್ರ [illegible], ಅವರು ನಿಶ್ಚೇಷ್ಟರಾಗಿ ಬಿದ್ದರು, ಬಿದ್ದವರಿಗೆ ನಿಲ್ಲಿಸಿ ಮತ್ತೆ ಹೊಡೆದರು, ಬೀಳಲು ಎಳೆದು ಮತ್ತೆ ಹೊಡೆದ ಬಳಿಕ, ಅಷ್ಟರಲ್ಲಿ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರು ಬಂದರು. "[illegible] ನೀವು ನಿಮಿಷ ನಿಲ್ಲದೆ ಯಾಕೆ ತಿರುಗಾಡುತ್ತೀರಿ? ನಿಮಗ ಇಂತು ಕೆಲಸ?" ಹೀಗ ಪೋಲೀಸರು ಶ್ರೀಮತಿಯವರಿಗೆ ಕೇಳಿದರು. "ವಾಯುಸೇವನಕ್ಕ ಬಂದ್ರೂ ಮಾಡ [illegible] ಬಂದಿದ್ದೇನೆ," ಹೀಗೆ ಶ್ರೀಮತಿಯವರು ನಿರ್ದಾಕ್ಷಿಣ್ಯದಿಂದ ಹೇಳಿದರು. ಇನ್ನೊಂದು ಬದಿಗ ಶ್ರೀ ಸುಬ್ಬರಾಯರಿಗ ಪೋಲೀಸರು ಹೊಡೆಯುತ್ತಿದ್ದರು. ಶ್ರೀಯುತರು ನಿಗ್ರಹದಿಂದ ಪಿಕೆಟಿಂಗ ಮಾಡುತ್ತಿದ್ದರು, ಮತ್ತೆ ಪೋಲೀಸರು ಹೊಡೆದರು. "ಹೊಡೆಯಿರಿ, ಬೇಕಷ್ಟು ಹೊಡೆಯಿರಿ," ಹೀಗ ಶ್ರೀ| ಸುಬ್ಬರಾಯರು ಹೇಳಿದರು; ಪುನಃ ಅವರಿಗ ಹೊಡೆದರು ಲಾಟ್ಟಿ ಕಟ್ಟ ಮುರಿದು ಚೂರಾಯಿತು! ಮನೋನಿಗ್ರಹದಲ್ಲಿ ತಕ್ಕ ಸಾಮರ್ಥ್ಯ ಕಾಲುಗಳಲ್ಲಿ ಇರಲಿಲ್ಲ, ಅವು ನಡುಗಲಾರಂಭಿಸಿದವು, ಹಾಗೆಯೇ ಶ್ರೀ| ಸುಬ್ಬರಾಯರು ಕೆಳಗೆ ಬಿದ್ದರು, ರಕ್ತ ಕಾರಲಾರಂಭಿಸಿತು 'ನನಗೆ ನೋವಾಗಲಿಲ್ಲ, ಕಟ್ಟ ತೆಗೆಯಿರಿ, ಈತನಿಗ ಕಟ್ಟನ್ನು ಮುಟ್ಟಗೊಡಲಿಲ್ಲ," ಎಂಬವಾಗಿ ನಾ[illegible] ಮಾಡಿದರು, ಕಟ್ಟ ತಂದು ಮತ್ತೆ ಹೊಡೆದರು! ಶ್ರೀ ರಾಮಸ್ವಾಮಿಯವರಿಗೆ ತಮ್ಮ ಮೋಟಾರಿನಲ್ಲಿ ಹಾಕಿಕೊಂಡು ಶ್ರೀ| ಸುಬ್ಬರಾಯ[illegible] ಉಪಾಯದಿಂದ [illegible] ಶ್ರೀಮತಿಗಳು ಅವರಿಗ ತಿಳಿಸಿ ತಮ್ಮ ಮೋಟಾರಿನಲ್ಲಿ [illegible] ಡಾಕ್ಟರರ ಕಡೆ ಹೋಗಿ [illegible] ಮಾಡಿದರು '[illegible] ಶ್ರೀ [illegible]ಸ್ವಾಮಿಯವರು ಕೇಳಿದ್ದು, "[illegible] ಹೊಡೆತ ತಿಂದಿದ್ದೀರಿ," ಹೀಗ ಕೇಳಿದರು. [illegible] ಮಾತಾಡಿದರು "ಹೊಡೆತವು ನಮಗೆ ಬಿದ್ದಿಲ್ಲ, ನಾವು ಸ್ವಸ್ಥ ಮಾಡಲು ಬಂದಿದ್ದೇವೆ," ಹೀಗೆ ಶ್ರೀಮತಿಯವರು ನುಡಿಯಲು. "ಪೋಲೀಸ ಕಮೀಶನರರಿಗೆ ಬರೆಯುತ್ತೇನೆ, [illegible] ರದ್ದು ಮಾಡಿಸುತ್ತೇನೆ" ಎಂದವರಿಗೆ [illegible] ಗದರಿಸಿದರು 'ಬೇಕಾದ್ದನ್ನು ಮಾಡಿರಿ, ನಾನು ಕೆಲಸದ ಕಡೆ ಹೋಗುತ್ತೇನೆ," ಹೀಗೆ ಶ್ರೀಮತಿಯವರು ನುಡಿದು ಅವರಿಗೂ [illegible] ಒಪ್ಪತ್ರಿಗೆ ಬಿಟ್ಟು ಕೂಡಲೇ ಸ್ವಸ್ಥರಾದರು. ಅವರಿಗೂ ಭಯಂಕರ ಪೆಟ್ಟಾಗಿದೆ. ಇವೀ [illegible] ಅವರಿಗೆ ಆಸ್ಪತ್ರಿಯಲ್ಲಿ ಬಂಧನದಲ್ಲಿಟ್ಟಿರುತ್ತಾರಾಗಿಯೂ, ಪ್ರಕೃತಿಸ್ವಾಸ್ಥ್ಯ [illegible] ಒಳಿತ, ಅವರ ಮೇಲಿಟ್ಟಿ ನಡೆಯುವದಾಗಿಯೂ ಹೇಳುತ್ತಾರೆ. ಇವರಿಗಾದ ಪೆಟ್ಟನ್ನು ಮದ್ರಾಸ ಸರಕಾರದ ಅಂಡರ ಸೆಕ್ರೆಟರಿಗಳು ಸಹ ನೋಡಿ ಹೋದರಾಗಿ ತಿಳಿಯುತ್ತದೆ. ಪೋಲೀಸರು ಘೋರವಾದ ಪೆಟ್ಟು ಹೊಡೆದರೆಂದು ಒಪ್ಪಿದ ಸಂಗತಿ ಆಶ್ಚರ್ಯಕಾರಕವಿದೆ. ಯಾಕಂದರೆ, ಇಂಥ ಒಪ್ಪಿಗೆಯನ್ನು ಮದ್ರಾಸ ಸರಕಾರವು ಸಹಸಾ ಕೊಡುವದಿಲ್ಲ ತಿಳಿದುಬರದಲ್ಲ, ಗಂಜಮದಲ್ಲ ಪೋಲೀಸರು ಹೊಡೆದದ್ದರಿಂದ ಸ್ವಯಂಸೇವಕರು ತೀರಿಕೊಂಡದ್ದು ನಿಜವೇನಂದು ಕೇಳಲು, "ಪೋಲೀಸರ ಹೊಡತದಿಂದ ಯಾರೂ ಸಾಯಲಿಲ್ಲ, ಜನರಿಗೆ [illegible]ರಿಂದ ಸ್ವಯಂಸೇವಕರು ಸತ್ತರು," ಹೀಗೆ ಮದ್ರಾಸ ಸರಕಾರದ ಸರವಾಗಿ ಸರ್ ಮಹಮ್ಮದ ಉಸ್ಮಾನರವರು ಉತ್ತರ ಕೊಟ್ಟರು. ಮದ್ರಾಸದ ಈ ವಾದಿ ಪ್ರಮುಖರು ಮದ್ರಾಸ ಸರಕಾರಕ್ಕೆ ಒಂದ ನೋಟಿಸ್ ಕೊಟ್ಟು 'ಪೋಲೀಸರು ಅನಾವಶ್ಯಕವಾಗಿ [illegible] ಮಾಡುತ್ತ [illegible] ಶಿಕ್ಷೆಯನ್ನು [illegible] ವಿಧಿಸುವರಿಗ [illegible] ಜನರು ಮುನಿದಿದ್ದಾರೆ" ಈ ಪ್ರಕಾರ ಪ್ರಮುಖರು ಮದ್ರಾಸ ಸರಕಾರಕ್ಕೆ ತಿಳಿಸಿದ್ದಾರೆ.

ಮುಂಬಯಿಯ 'ಟೈಮ್ಸ' ಆಫ್ ಇಂಡಿಯಾ' ಪತ್ರಿಕೆ ಸರಕಾರಿ ಪಕ್ಷದ್ದು. ಆ ಪತ್ರಿಕೆಯ ಫೆಬ್ರುವರಿ ೨೯ನೇ ತಾರೀಖಿನ ಸಂಚಿಕೆಯಲ್ಲಿ ಯುರೋಪಿಯನರೊಬ್ಬರು ಒಂದು ಲೇಖ ಬರೆದಿದ್ದಾರೆ. "ರಾಜಶಾಸನಗಳ ದುರುಪಯೋಗವಾಗುತ್ತದೇನು?" ಎಂಬ ಪ್ರಶ್ನೆಯನ್ನು ಬರಹಗಾರರು ಎತ್ತಿ ಕೊಟ್ಟು ಉತ್ತರವು ಮನಸ್ಸಿಗೆ ಯುಕ್ತವಿದೆ. ಅವರು ಬರೆಯುವದೇನಂದರೆ ರಾಜಶಾಸನಗಳನ್ನು ಬರಹಗಾರರು ಎತ್ತಿಕೊಟ್ಟ ಉತ್ತರವು ಮನಸ್ಸಿಗೆ ಯುಕ್ತವಿದೆ. ಅವರು ಬರೆಯುವದೇನಂದರೆ ರಾಜಶಾಸನಗಳನ್ನು ಅವಿವೇಕತನದಿಂದ ಚಿಕ್ಕ ಪುಟ್ಟ ಅಧಿಕಾರಿಗಳು ಕಂಡ ಹಾಗೆ ಉಪಯೋಗಿಸುತ್ತಾರೆ. ಜಿಲ್ಲೆಗಳಲ್ಲಿ ಇವುಗಳ ದುರುಪಯೋಗವಾಗುವದು ಹೆಚ್ಚು. ಮುಂಬಯಿ-ಬಂಗಾಲ ಮೊದಲಾದ ಪ್ರಾಂತಗಳೊಳಗಿನ ವಾರ್ತೆಗಳನ್ನು ಕೇಳಿದರೆ, ಒಂದು ಸಂಶಯದ ಮೇಲೆ ಅಸಂಖ್ಯ ಜನರನ್ನು ಸೆರೆಯಲಿಟ್ಟಿರುವದಾಗಿ ತೋರಬಹುದು. ಸರಕಾರವು ಮುಂಜಾಗ್ರತೆ ಹಿಡಿಯಬೇಕು. ಅಸಾಮಾನ್ಯ ಅಧಿಕಾರಗಳನ್ನು ಸಾಮಾನ್ಯವಾಗಿ ಉಪಯೋಗಿಸಹತ್ತಿದರೆ ಭಯಂಕರ ಕಷ್ಟವಾಗುತ್ತದೆ

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ
ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ
ಹಿಂದುಸ್ತಾನ ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಕಚೇರಿ — ಕೆನಡಾ ಬಿಲ್ಡಿಂಗ, ಹಾರ್ನಬಿ ರೋಡ, ಮುಂಬಯಿ.
ಅಧ್ಯಕ್ಷರು — ನಾ| ಸರ್ ಫಿರೋಜ ಸೇಠನಾ, ಕೆ ಟಿ ಓ ಬಿ ಇ
[illegible] ಬಂದ ಹೊಸ ವಿಮೆ ರಕಮು [illegible] ಕೋಟಿಗೂ ಮಿಕ್ಕಿದೆ
[illegible] ಕೂಡಿದ ನಿಧಿ [illegible] ಕೋಟಿಗೂ ಮಿಕ್ಕಿದೆ.
ಈ ಕಂಪನಿಯು [illegible] ದಕ್ಷತೆಯಿಂದ ನಡೆಯುವದರಿಂದ
[illegible] ಜೀವನ ನಡಿಸಬಹುದು
[illegible] ಪತ್ರವ್ಯವಹಾರ ನಡಿಸುವ ಪತ್ತೆ—

The District Manager,
Canada Building
Hornby Road, BOMBAY

or

Mr. S. B. Rege,
Chief Agent,
171, Civil Lanes,
Camp BELGAUM

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.
ಸ್ಥಾಪನೆ. 1908.
ಈ ಕಂಪನಿಯು ಪ್ರೋಗ್ರೆಸ್ [illegible], [illegible] ಕೊಡುತ್ತ ಇವೆ. ಕಂಪನಿಯ ಹಣವು ಸರಕಾರಿ ಪ್ರೋ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟ ದ ನಿಯಮಗಳಂತೆ [illegible] ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.
ಮ್ಯುಚ್ಯುಯಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.
[illegible] ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆಯಬೇಕು.

Kumta Agents -
D. K. NAYAK Bros
Honavar Agent
R. V. PARBHU Esq

K. Padmanabharao & Sons.,
BELGAUM
Chief Agents for
Karnatak Districts & S. M. States

— ಸರಕಾರಕ್ಕೆ ಹಣದ ಅಡಚಣೆ ಆದರ, ಔತಣ ಸಮಾರಂಭಗಳಿಗೆ, ಮೇಜವಾನಿಗಳಿಗೆ ಅದರಿಂದ ಕುಂದರಿಕೆಯಾಗುವದಿಲ್ಲ. ಗುರುವಾರ ತಾ ೩ನೇಗೆ ಮುಂಬಯಿಯ ಗವ್ಹರ್ನರರು ೩೦೦೦ ಮಹಾಶಯರಿಗೆ ಮೇಜವಾನಿ ಕೊಟ್ಟರು. ಸಂಸ್ಥಾನಿಕರು, ಮಹಾರಾಜರು, ಕಾಯಿದೆ ಕೌನ್ಸಿಲಿನ ಸಭಾಸದರು, ಅವರ-ಇವರು ಕೂಡಿ ೩೦೦೦ ದೊಡ್ಡವರು ಸರಕಾರಿ ಖರ್ಚಿನಿಂದ ಮಿಷ್ಟಾನ್ನಭೋಜನ ಮಾಡಿದರು. ಸರಕಾರಿ ಬೇಂಡುವಾದ್ಯ ಘೋಷದಲ್ಲಿ ಔತಣ ಸಮಾರಂಭವು ಸಾಗಸಾಗಿ ನೆರವೇರಿತು. ಸರ್ವಾಧಿಪತಿಗಳು ದಿಲ್ಲಿಯಲ್ಲಿ ಒಂದು ಔತಣ ಸಮಾರಂಭ ಕೊಟ್ಟರು. ಅದಕ್ಕೆ ೧೭೦೦ ಮಂದಿ ದೊಡ್ಡ-ದೊಡ್ಡವರು ನೆರೆದಿದ್ದರು. ಆ ವರ್ಣನೆ ಹೇಳಲಸಲ್ಲ. ಸರ್ವಾಧಿಪತಿಗಳ ಪತ್ನಿಯವರು ಮೇಜವಾನಿಯಲ್ಲಿ ಪುನರ್ಘಟನೆ ಮಾಡಿದ್ದರಂತೆ. ಸೊಗಸಾದ ಉಡಿಗೆ-ತೊಡಿಗೆ, ರುಚಿಕರವಾದ ಪಕ್ವಾನ್ನ-ಪೇಯಗಳಿಂದ, ಅಂದ-ಚಂದವಾದ ನೋಟಗಳಿಂದ, ಇಂಪಾದ ಬೇಂಡುವಾದ್ಯ ಘೋಷದಿಂದ, ರಂಭಾ-ಊರ್ವಶಿ-ಮೇನಕಾ ಮೊದಲಾದ ದೇವಕನ್ನಿಕೆಯರಂತೆ ಓಡಾಡುವ ದೊರೆಸಾನಿಗಳ ಆಗಮನದಿಂದ ಸಮಾರಂಭವು ಮಧುರವಾಯಿತೆಂದು ಮುಂಬಯಿಯ 'ಟೈಮ್ಸ ಆಫ್ ಇಂಡಿಯಾ' ಪತ್ರಿಕಾಕರ್ತರು ವರ್ಣಿಸುತ್ತಾರೆ. ಸರ್ವಾಧಿಪತಿ ವಿಲಿಂಗಡನ್ ದೊರೆಗಳೂ-ದೊರೆಸಾನಿಯವರೂ ಅತಿಥಿಗಳೊಡನೆ ಹಸ್ತಾಂದೋಲನ ಮಾಡುವಾಗ ದಿಗ್ವಿಜಯ-ದುಂದುಭಿಗಳೋಪಾದಿಯಲ್ಲಿ ತುತ್ತೂರಿಗಳು ಮೊಳಗಿದವಂತೆ! ಉಪವಾಸದಿಂದ ಒಣಗುವ, ರಾಜಶಾಸನಗಳಿಂದ ನೋಯುವ ಜನರೆಲ್ಲರೂ ಈ ಕಥೆ ಕೇಳಿ ಸಂತೋಷಪಡಬೇಕು. ಈ ಸಮಾರಂಭಗಳಿಗೆ ತಗಲುವ ಖರ್ಚನ್ನು ಕಡಿಮೆ ಮಾಡಲಾಗದೆ ಹೊಸ ಹೊಸ ತೆರಿಗೆಗಳನ್ನು ಸರಕಾರವು ಹೇರಬೇಕಾಯಿತೆಂದರಿತು ಸಮಾಧಾನ ಮಾಡಿಕೊಳ್ಳಬೇಕು

— ಕಲ್ಲಿಕೋಟೆಯೊಳಗಿನ ಕಥೆ. ಅಲ್ಲಿಯ ಮ್ಯುನಿಸಿಪಾಲಿಟಿಯವರು ಮಹಾತ್ಮರಾದಿ ಲೋಕನಾಯಕರ ಹಾಗು ಜವಾಹರರ ಭಾವಚಿತ್ರ ಕೊಳ್ಳಬೇಕಾಗಿ ಠರಾವು ಮಾಡಿದ್ದರೆ, ಇದನ್ನು ಮದ್ರಾಸ ಸರಕಾರವು ಪ್ರತಿಬಂಧಿಸಿದೆ. ಬಾದಶಹರ ಭಾವಚಿತ್ರ ಕೊಳ್ಳಲು ಪ್ರತಿಬಂಧವಿಲ್ಲ. ಸರಕಾರಿ ಔಷಧದ ಉಗ್ರಾಣದೊಳಗಿಂದ ಮ್ಯುನಿಸಿಪಾಲಿಟಿಗೆ ತಗಲುವ ಔಷಧ ಸಾಮಗ್ರಿಗಳನ್ನು ಕೊಳ್ಳುವ ಸಂಪ್ರದಾಯವಿತ್ತು, ಅಲ್ಲಿ ದರ ತುಟ್ಟಿ. ಆದರಿಂದ ಬೇಕಾದ ಔಷಧ ಅಂಗಡಿಗಳಲ್ಲಿ ಔಷಧಗಳನ್ನು ಕೊಂಡುಕೊಳ್ಳಬಹುದಾಗಿ ಮ್ಯುನಿಸಿಪಾಲಿಟಿಯವರು ಠರಾವ ಮಾಡಿದರು. ಅದನ್ನು ಸಹ ಸರಕಾರವು ಜಾರಿಯಲ್ಲಿ ತರಬಾರದಾಗಿ ಮ್ಯುನಿಸಿಪಾಲಿಟಿಗೆ ವಿಧಿಸಿದೆ.

— ಅದೇ ಕಲ್ಲಿಕೋಟೆಯೊಳಗಿನ ಕಥೆ. ಎಳೆ ಪ್ರಾಯದ ಮೂವರು ಹೆಂಗಸರು ರಾಷ್ಟ್ರಧ್ವಜಗಳನ್ನು ಹಿಡಕೊಂಡು ರಾಷ್ಟ್ರಪದ್ಯಗಳನ್ನು ಹಾಡುತ್ತ ಮೆರವಣಿಗೆ ತೆಗೆದರು. ಆ ಬಗ್ಗೆ ಅವರಿಗೆ ಸೆರೆಹಿಡಿದು ಶಿಕ್ಷೆಯಾಯಿತು. ಅವರಲ್ಲೊಬ್ಬಳು ಪಾಲಘಾಟ ರಾಜಾ ಎಂಬ ದೊಡ್ಡ ಜಮಿನದಾರ ಮನೆತನದ ಹೆಂಗಸು! ಎರಡನೇಯವಳು ಮುಂಬಯಿಯ ಡಾ|ವೈದ್ಯರ ಮಗಳು ಮೂರನೇಯವಳು ಮುನಿಸಿಪಾಲಿಟಿಯ ಸಭಾಸದಳು, ವಕೀಲರ ಹೆಂಡತಿ; ತಹಶೀಲದಾರರ ಮಗಳು. ಡಿಸ್ಟ್ರಿಕ್ಟ ಜಡ್ಜರಾದ ರಾವಬಹಾದ್ದೂರ ಗೋವಿಂದ ಮೆನನರವರ ಸಹೋದರರ ಮಗಳು ಇವಳ ಹೆಸರು ಸೌ| ಕುನ್ನಿಮಾಲು ಅಮ್ಮಾ. ಇವಳಿಗೆ ಇಬ್ಬ ಮಕ್ಕಳು. ಒಂದರ ಪ್ರಾಯ ೩ ವರ್ಷ, ಇನ್ನೊಂದು ಶಿಶು ೩ ತಿಂಗಳದು ಈರ್ವ ಮಕ್ಕಳಿಗೂ ತನ್ನ ಜೊತೆಗೇ ಇರಗೊಡಬೇಕಾಗಿ ಅವಳು ಮೆಜಿಸ್ಟ್ರೇಟರಿಗೆ ಹೇಳಿದಳು. ' ಜೈಲ ಸುಪರಿಂಟೆಂಡೆಂಟರಿಗೆ ಕೇಳಿಕೊಳ್ಳಿ ' ಹೀಗೆ ಮೆಜಿಸ್ಟ್ರೇಟರು ಉದ್ಗರಿಸಿದರು! ಬಂಗಾಲದ ಪಾಲ್ನಾ ಗ್ರಾಮದಲ್ಲಿಯೂ ಇದೇ ಪ್ರಕಾರದ ಒಂದು ಕಥೆಯಾಯಿತು ಶ್ರೀಮತಿ ಶೈವಾಲಿನಿ ದೇವಿಯವರಿಗೆ ಪೋಲೀಸ ಹುಕುಮು ಮುರಿದು ಭಾಷಣ ಕೊಟ್ಟ ಬಗ್ಗೆ ೧ ವರ್ಷದ ಶಿಕ್ಷೆಯಾಯಿತು. ೨ ವರ್ಷದ ಮಗನು ತಾಯಿಯೊಡನೆ ತಾನು ಜೈಲು ಸೇರುತ್ತೇನಾಗಿ ಹಟ ಹಿಡಿದನು. ಮೆಜಿಸ್ಟ್ರೇಟರು ಹುಡುಗನಿಗೆ ಜೈಲು ಸೇರಗೊಟ್ಟರು

— ಲಂಡನಿನೊಳಗಿನ 'ನೇಶನ' ಮತ್ತು 'ನ್ಯೂ ಸ್ಟೇಟಮನ್' ಎಂಬ ಪತ್ರಿಕೆಯು ಈಗಿನ ಸತ್ಯಾಗ್ರಹ ಸಮರದಲ್ಲಿ ಮಹಾತ್ಮರೇ ಗೆಲ್ಲುವರೆಂದು ಸ್ಪಷ್ಟವಾ ಸ್ವದೇಶ ಬಾಂಧವರಿಗೆ ಹೇಳಿದೆ. ಸತ್ಯಾಗ್ರಹ ಸಮರದಲ್ಲಿ ಡಾ| ಗಾಂಧಿಯವರು ಸರಳತನದಿಂದ ನಡಕೊಂಡಿದ್ದಾರೆ, ಅವರಿಂದ ತಪ್ಪೇನಿಲ್ಲ; ಏನಾದರೊಂದು ಆಕಿಯಿರುವ ತನಕ ಹಾದಿಕಾಯಲು ಅವರು ತಯಾರಾಗಿದ್ದಾರೆ, ಅವರ ಶರೀರವು ದುರ್ಬಲವಾದದ್ದು, ಆದರೆ, ಅವರು ಪ್ರಚಂಡ ಸಾಮರ್ಥ್ಯವಂತರು ಪ್ರಚಂಡ ಸಾಮ್ರಾಜ್ಯಕ್ಕೆ ಪ್ರಚಂಡ ಶತ್ರುಗಳವರು ವಿಲಿಂಗಡನರಂಥ ಸರ್ವಾಧಿಪತಿಗಳ ಅಧಿಕಾರದ ಬಲವು ಮಹಾತ್ಮರ ಮಾನಸಿಕ ದೊಡ್ಡಸ್ತನದ ಮುಂದೆ ಕೀಳಾದದ್ದು. ಸೆರೆಹಿಡಿಯಬಂದವರಿಗೆ ನಗುಮೋರೆಯಿಂದ ಒಡಮಾಡಿಕೊಂಡು, "ನಾವು ಸರ್ವಸ್ವವನ್ನು ತೊರೆಯಲು ಸಿದ್ಧರಿದ್ದೇವೆ. ಇಷ್ಟ-ಮಿತ್ರ-ಬಂಧು-ಬಾಂಧವರಿಗೆಲ್ಲ ಮರೆತಿದ್ದೇವೆ. ಭಯಂಕರ ಕಷ್ಟಭೋಗವನ್ನು ಸಹಿಸತಯಾರಾಗಿದ್ದೇವೆ ಪೊಲೀಸರ ಕಠಿಣ ಹೊಡೆತವನ್ನೂ ಯಾಂತ್ರಿಕ ತೋಫಿನ ಗುಂಡುಗಳನ್ನೂ ನಾವು ಸಹಿಸುವೆವು. ಆದರೆ ಬ್ರಿಟಿಶರ ಮೇಲೆ ಹಗೆ ಹಿಡಿಯಲಾರೆವು." ಹೀಗೆ ಡಾ| ಗಾಂಧಿಯವರು ನುಡಿಯುತ್ತಾರ ಇದು ವಿಜಯಶ್ರೀಯ ಲಕ್ಷಣ. ಇದರಿಂದಲೇ ಹಿಂದುಸ್ಥಾನವು ದಿಗ್ವಿಜಯಹೊಂದುವದಾಗಿ ಸದರ ಪತ್ರಿಕೆಯ ಅಭಿಪ್ರಾಯ

— ಶ್ರೀ| ವಿಠ್ಠಲಭಾಯಿ ಪಟೇಲರವರು ಇಂದುನಾಳೆ ಬಿಡುಗಡೆ ಹೊಂದುತ್ತಾರೆ ಅವರ ಸಜೆಅವಧಿ ಮುಗಿಯುತ್ತ ಬಂತು. ಅವರಿಗೆ ಪುಣೆಯ ಯೆರವಡಾ ಜೈಲಿನಿಂದ ಬುಧವಾರ ರಾತ್ರಿ ಮುಂಬಯಿಗೆ ಒಯ್ದಿದ್ದಾರೆ. ಅವರ ಗಡ್ಡ ಬೋಳಿಸೋಣಾಗಿದೆ ಪ್ರಕೃತಿಗಾಗಿ ಅವರ ಇಚ್ಛೆಯಂತೆಯೇ ಅದು ಕತ್ತರಿಸಲ್ಪಟ್ಟಿತು. ಇನ್ನೂ ಹೊಟ್ಟೆ ನೋಯುತ್ತದೆ. ವ್ಹಿಯೆನ್ನಾದಲ್ಲಿ ನಡಿಸಿದ ಶಸ್ತ್ರಪ್ರಯೋಗದ ಹುಣ್ಣು ಇನ್ನೂ ಮಾಯಲಿಲ್ಲ. ಅದರಿಂದ ಅವರು ಬಹಳ ಸೊರಗಿದ್ದಾರೆ. ಗೆಳೆಯರಿಗೆ ಗುರುತು ಸಹ ಹಿಡಿಯಲು ಕಷ್ಟವಾಯಿತಾಗಿ 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ವಾರ್ತೆ!

— ಲಂಕೆಯೊಳಗಿನ ಸಮಾಚಾರ ಕೇಳತಕ್ಕಂಥಾದ್ದಿದೆ. ಇಲ್ಲಿ ಬ್ರಿಟಿಶರು ಡನೋಮೋರ ದೊರೆಗಳ ಅಧ್ಯಕ್ಷತೆಯಲ್ಲಿ ಚೌಕಶಿ ಮಂಡಳ ನೇಮಿಸಿ, ಇತ್ತ ೧-೨ ವರ್ಷಗಳಲ್ಲಿ ಹೊಸ ರಾಜ್ಯಘಟನೆ ಪ್ರಾರಂಭವಾಗಿದೆ. ಹೊಸ ರಾಜ್ಯದಲ್ಲಿ ಹುರುಳೇನಿಲ್ಲ, ಇದರಿಂದ ಜನರಿಗೆ ಪ್ರಾಪ್ತಿಯಾದದ್ದೇನಿಲ್ಲವಾಗಿ ಫೆಬ್ರುವರಿ ೨೩ನೇ ತಾರೀಖಿಗೆ ಸೇರಿದ ಸ್ಟೇಟ ಕೌನ್ಸಿಲಿನಲ್ಲಿ ಸಾಮಾನ್ಯ ಅಭಿಪ್ರಾಯವಾಗಿದೆ. ಲೋಕಪ್ರತಿನಿಧಿಗಳ ಠರಾವುಗಳನ್ನು ಮುಂದೆ ಚರ್ಚೆಗೇ ಬರಗೊಡುವದಿಲ್ಲವಾಗಿ ಸಭಾಸದರ ದೂರು. ಹೊಸ ರಾಜ್ಯಭಾರವು ಫಾರ್ಸಾಗಿದೆಂದು ಡಾ| ಗುಣೇಸಿಂಹ ಎಂಬ ಸಭಾಸದರು ಉದ್ಗರಿಸಿದರು. ಗವ್ಹರ್ನರರಿಗೆ ಹಿಂಗರೆದುಕೊಳ್ಳಬೇಕಾಗಿ ಸೂಚನೆ ಬಂದಿದೆ ಖರ್ಚ ಹೆಚ್ಚು, ಹಣದ ಅಡಚಣೆ! ಸರಕಾರವು ಖರ್ಚು ಕಡಿಮೆಮಾಡಿಕೊಳ್ಳುವ ಒಂದು ಪ್ರಕಾರ ಕೇಳಿಕೊಳ್ಳಿ! ಬ್ಲಾಟಿಂಗ ಪೇಪರಿನ ಖರ್ಚು ಕಡಿಮೆ ಮಾಡುವದಕ್ಕಾಗಿ ಆಫೀಸರರು ಉಪಯೋಗಿಸಿದ ಪತ್ರ ಖರ್ಡಾ ಕಾಗದವನ್ನು ಕಾರಕೂನರು ಉಪಯೋಗಿಸಬೇಕಂತೆ!! ಹುಲ್ಲು ಕೂಡಿದು ಹುಷ್ಟಿ ತುಂಬಿಕೊಳ್ಳುವ ಪ್ರಕಾರಕ್ಕಿಂತ ಹಳೇ ಪತ್ರ ಖರ್ಡಗಳನ್ನು ಕಾರಕೂನರಿಗೆ ಕೊಟ್ಟು ಜಮಾ-ಖರ್ಚನ್ನು ಬಾಯಿಗೂಡಿಸಲೆಳಸುವ ಕ್ರಮ ಅದ್ಭುತವಾದದ್ದು!!! ಈ ಹೊಸ ರಾಜ್ಯಘಟನೆಯೊಳಗಿನ ಮತ್ತೊಂದು ನೂತನ ಪ್ರಕಾರ ಕೇಳಿ! ಉಗಬಂಡಿ ಕಂಪನಿಯವರು ಕೊಟ್ಟ ಪಗಾರು ಸಾಲದೆ ಒಬ್ಬ ಕಂಪನಿಯ ಕೂಲಿಯಾಳು ಕಂಬಿಗಳನ್ನು ತೆಗೆದು ಕಂಪನಿಗೆ ನಷ್ಟಪಡಿಸಿದನು, ಅದಕ್ಕಾಗಿ ನೆರೆ-ಹೊರೆಯ ಗ್ರಾಮಗಳಲ್ಲಿ ಪೋಲೀಸ ದಂಡವಿಟ್ಟು, ಆ ಪೋಲೀಸ ದಂಡಿನ ಖರ್ಚನ್ನು ಜನರ ಕಡೆಯಿಂದ ವಸೂಲ ಮಾಡಬೇಕೆಂದು ವಿಧಿಸಲಾಗಿದೆ ೩೦೦೦ ಜಪ್ತಿ ವಾರಂಟುಗಳು ಹೊರಟಿವೆ. ಉಗಿಬಂಡಿಯ ಕೂಲಿಯಾಳೇ ಕಂಬಿಗಳನ್ನು ತೆಗೆದು ಕಂಪನಿಗೆ ನಷ್ಟಪಡಿಸಿದ ಸಂಗತಿ ಸರಕಾರಕ್ಕೆ ಒಪ್ಪಿಗೆಯಿದೆ ಸಾಮ್ರಾಜ್ಯ ಸರಕಾರವು ಲಂಕೆಯವರಿಗೊಂದು ಸವಲತ್ತು ಕೂಡ ಮಾಡಿದೆ. ಅದೇನಂದರೆ— ಲಂಕೆಯಲ್ಲಿ ಬೆಳೆಯುವ ಚಹವನ್ನು ಬ್ರಿಟಿಶರು ತೆರಿಗೆ ಕೊಡದೆ ತಮ್ಮ ರಾಜ್ಯದಲ್ಲಿ ಆಮದು ಮಾಡಿಕೊಳ್ಳಬೇಕು, ಪ್ರತಿಯಾಗಿ ಬ್ರಿಟಿಶ ಸರಕುಗಳ ಮೇಲೆ ಲಂಕೆಯವರು ಆಮದು ತೆರಿಗೆ ಹೇರಲಾಗದು, ಅಂದರೆ ಲಂಕೆಯವರ ಚಹಕ್ಕೆ ಬ್ರಿಟಿಶ ದೇಶದಲ್ಲಿ ಆಮದು ತೆರಿಗೆಯಿಲ್ಲ! ಬ್ರಿಟಿಶರ ಸರಕಿಗೆ ಲಂಕೆಯಲ್ಲಿ ಆಮದು ತೆರಿಗೆಯಿಲ್ಲ! ಆದರೆ, ಚಹವನ್ನು ತೆರಿಗೆಯಿಲ್ಲದೆ ಬ್ರಿಟಿಶರು ಬರಮಾಡಿಕೊಳ್ಳುವ ಗೂಢ ಬೇರೆ ಅಲ್ಲಿಯ ಚಹ ಬೆಳೆಸುವ ತೋಟಿಗರು ಯುರೋಪಿಯನ್ ಸಾಹುಕಾರರು ಆಮದು ತೆರಿಗೆಯಿಲ್ಲದ ಬ್ರಿಟಿಶರ ಚಹಾ, ಬ್ರಿಟಿಶರ ಸರಕುಗಳನ್ನು ಪರಸ್ಪರ ಕಳಿಸಿ ಪರಸ್ಪರ ಲಾಭ ಹೊಂದುವ ಹಂಚಿಕೆಯಿದೆಂದು ಅಲ್ಲಿಯ ಬಲ್ಲವರು ಹೇಳುತ್ತಾರೆ.

— ಜೈಲುಗಳು ತುಂಬಿದವು, ರತ್ನಾಗಿರಿಯ ಜೈಲು ತುಂಬಿತು ಇಲ್ಲಿ ೨೫೦ ಮಂದಿಗಳಿಗೆ ಉಳಕೊಳ್ಳಲು ಸ್ಥಳವಿದೆ, ಅದು ತುಂಬಿತು ಉತ್ತರ ಕನ್ನಡ ಜಿಲ್ಲೆಯಿಂದಲೂ, ಅಹಮದಾಬಾದದಿಂದಲೂ ಕೈದಿಗಳಿಗೆ ಹಿಡಿಹಿಡಿದು ಒಯ್ಯುತ್ತಿದ್ದಾರೆ ಅರ್ಧಕ್ಕೆ ಮಿಕ್ಕಿದ ಕೈದಿಗಳು ಸತ್ಯಾಗ್ರಹಿಗಳು, ಬೆಳಗಾವಿಯ ಜೈಲೂ ತುಂಬಿತು. ಆದರಿಂದ ಅಲ್ಲಿಯ ೨೦೦ ಮಂದಿ ಕೈದಿಗಳನ್ನು ಯೆರವಡಾ ಜೈಲಿಗೆ ಒಯ್ದಿರುತ್ತಾರೆ. ಪಂಡಿತ ಜವಾಹಿರಲಾಲರವರನ್ನೂ, ಶ್ರೀ| ಸುಭಾಷಚಂದ್ರ ಬೋಸರನ್ನೂ ಯೆರವಡಾ ಜೈಲಿಗೆ ತಂದಿದ್ದಾರಾಗಿ ಒಂದು ವಾರ್ತೆ.

ಚೀನ-ಜಪಾನ ಯುದ್ಧ!

ಇನ್ನೂ ರಾಸ್ತದಂತೆ ಯುದ್ಧ ನಿಂತ ಹಾಗಿಲ್ಲ ಚೀನ ದೇಶದ ರಾಯಭಾರಿಗಳು ಜಪಾನದಲ್ಲಿ ಜಪಾನ ದೇಶದ ರಾಯಭಾರಿಗಳು ಚೀನದಲ್ಲಿ ಇರುತ್ತಾರೆ ಇತ್ತ ಹೋರಾಟ ನಡೆದದ ರೌಂಡ ಟೇಬಲ್ [illegible] ಗೋಲಾಕಾರದ ಮೇಜಿನ ಸುತ್ತು ಮತ್ತ ಚೀನ ಜಪಾನ ಸರಕಾರಗಳ ಪ್ರತಿನಿಧಿಗಳೂ ಬ್ರಿಟಿಶ ಅಮೇರಿಕಾ ಫ್ರಾನ್ಸ ಮೊದಲಾದ ದೇಶ ಪ್ರತಿನಿಧಿಗಳೂ ಒಂದೆಡೆ ಕೂತುಕೊಂಡು ಚರ್ಚೆ ನಡಿಸಬೇಕಾಗಿಯೂ, ಅನೇಕ ವಿದೇಶಿ ಪತ್ರಿಕೆಗಳವರೂ ತಮ್ಮ ತಮ್ಮ ಪತ್ರವನ್ನು ಒದಯಕ್ಕೆ ಪ್ರಕಟಿಸಬೇಕಾಗಿ ರಾಷ್ಟ್ರ ಸಂಘದ ಯಜಮಾನರ ಸಹ [illegible] ವಾರದ ಹಿಂದೆ ಪತ್ರಿಕೆಯವರೂ ಸಮಾಧಾನ ಪಡೆದಿದ್ದರು ಆದರೆ [illegible] ಬಣ್ಣ ಒದಲಿತು ಚೀನ ಜಪಾನಿಯರು ಗುಂಡು ಹಾರಿಸಿದರು ಚೀನಿಯರು ಸೈನಿಕರು ಹಡಮುರಿ ಕಟ್ಟಿಕೊಂಡು ನಿರಂತರವಾಗಿ ಒಂದರೆ ಯುದ್ಧವನ್ನು ನಡೆಸುತ್ತಿದ್ದಾಗ ಜಪಾನಿಯರು ಹೇಳುತ್ತಾರಂತೆ! [illegible] ಕೊಲ್ಲುವುದರನ್ನು ಬಿಟ್ಟ ಚೀನಿ ಜಪಾನಿಯರಲ್ಲಿದೆ ಮನ ನೋಡಿ ಹುಂಬಾ ಸಂತೋಷ! ಪ್ರಸಂಗ, ಕಿದಂಗವಾದ ಪ್ರದೇಶಗಳಲ್ಲಿ ಘೋರ ಸಂಗ್ರಾಮ ನಡೆದು ಜಪಾನಿಯರು ಮುಂದ ಮುಂದ ಒತ್ತರಿಸಿ ಹೋದರ ಚೀನಿಯರು ಹಿಂದ ಸರಿದರು ಒಟ್ಟಿನಲ್ಲಿ ಜಪಾನಿಯರ ತಂಡುಗಟ್ಟಿ ಒಂದಷ್ಟು [illegible] ಚೀನಿಯರು [illegible] ಆದಾಗ್ಯೂ ಚೀನಿಯರು ಸೋತಿಲ್ಲ ಇನ್ನೂ ನಿಕರವಾಗಿ ಒಪ್ಪುತೆಯಿಂದ ಕಾದುತ್ತಿದ್ದಾರೆ ಅಂತರ್ರಾಷ್ಟ್ರೀಯ ಪಸಾಕಿಟ್ ಕರಾರನ್ನು ಮುರಿದು ಜಪಾನಿಯರು ಅಂತರ್ರಾಷ್ಟ್ರೀಯ ಮಹಾಸಭೆಯಲ್ಲಿ [illegible] ಸಿದರು ಅಮೇರಿಕಾದಿ ರಾಷ್ಟ್ರಗಳು ನಾರಿ ಹೇಳಿದಾಗ್ಯೂ ಆ ಕಡೆ ಧಿಕ್ಕಾರ ಮಾಡಿದರು, ಆದರಿಂದ ಅಮೇರಿಕವು ಮುನಿದಿದೆ, ಹಡಗುಪಡೆಗಳನ್ನು ಕಳಿಸಿದ ಬ್ರಿಟಿಶರು, ಇಟೋಲಿಯವರೂ ಜರ್ಮನಿಯವರೂ ಚೀನ ದೇಶದ ಪಕ್ಷಪಾತಿಯಾಗಿ ಹೋರಾಡುವದೇ [illegible] ಫ್ರೆಂಚರು ಜಪಾನಿಯರಿಗೂ ಅಂತರಂಗದಿಂದ ಒಂದು ತರಹ ಮಾನಾಗಿದ ಚೀನ ದೇಶದ ಮೇಲೆ ಯುದ್ಧ ಮಾಡಲು ಬೇಕಾಗುವ ಮದ್ದುಗುಂಡುಗಳನ್ನು ಫ್ರೆಂಚ ಸರಕಾರದ ಜಪಾನಿಯರಿಗೆ ಪೂರೈಸುವ ಕರಾರು ಮಾಡಿದೆ. ಇತ್ತೀಚೆಗೆ ಫ್ರೆಂಚ ದೇಶದ ಪ್ರತಿನಿಧಿಗಳೇ ರಾಷ್ಟ್ರಸಂಘದ [illegible] ಮೊನ್ನೆ ಗುರುವಾರ ನಡದ [illegible] ಬ್ರಿಟಿಶ ದೇಶದ ಪರರಾಷ್ಟ್ರೀಯ ಮಂತ್ರಿಗಳ ಅಧ್ಯಕ್ಷಸ್ಥಾನ ದೂರಿದೆ ಫ್ರೆಂಚರು ಜಪಾನ ದೇಶದ ಪಕ್ಷಪಾತಿಯಾಗಿಯುದು ಹೀಗೆ ಚೀನ-ಜಪಾನ ಯುದ್ಧವು [illegible] ಕಲಹವಾಗ [illegible] ಗುರುವಾರ ನಡೆದ ರಾಷ್ಟ್ರಸಂಘದ ಸಭೆಯಲ್ಲಿ ಫ್ರೆಂಚ ಪ್ರತಿನಿಧಿಗಳಾದ ಬೋಂಕರರವರೇ [illegible]

ಇಂಗ್ಲಿಶರು ಶಾಂಘಾಯ ಬಂದರದಲ್ಲಿ ನಿಂತುಕೊಂಡಿದ್ದ ಕೆಂಟ ಬ್ರಿಟಿಶ ಹಡಗುಪಡೆಯ ಮೇಲ ಹಡಗುಪಡೆಯ ನಾಯಕರಾದ ಕೆಲ್ಲಿಯವರು ಚೀನ ಜಪಾನ ದೇಶಗಳ ರಾಯಭಾರಿಗಳನ್ನು ಒತ್ತಟ್ಟಿಗ ಕೂಡಿಸಿ ಸಂಧಿಯ ವಿಚಾರ ಮಾಡುತ್ತಿದ್ದಾರೆ ಚೀನಿಯರು ಜಪಾನರಿಗೆ ಶರಣಾಗತರಾಗ ಮ ತಯಾರಿಯಲ್ಲಿಲ್ಲ! ಕೆಂಟ ಹಡಗಿನ ಮೇಲಿ ಸಿಕ್ಕಯಮಾದ ವಹನಾಮೆಯನ್ನು ಸಹ ಮುರಿದು ಜಪಾನಿಯರು ಮದ್ದು ಗುಂಡು ಹಾರಿಸದರಾಗಿಯೂ, [illegible] ಚೀನಿಯರು ಇರುವ ತನಕ ಜಪಾನಿಯರೊಡನ ಕಾದಾಡುವವರಾಗಿಯೂ ಚೀನ ದೇಶದ ರಾಯಭಾರಿಗಳು ರಾಷ್ಟ್ರಸಂಘಕ್ಕೆ ತಿಳಿಸಿದರು

ಚೀನ ದೇಶದಲ್ಲಿ ಹೆಂಗಸರ ಸೈನಿಕರಾಗಿ ಕಾದಾಡುತ್ತಾರೆ ಅವರ ತಮ್ಮದೊಂದು ಪ್ರತ್ಯೇಕ ದಳವನ್ನೇ ನಿರ್ಮಿಸಿದ್ದಾರೆ ಸ್ಥೈರ್ಯದಿಂದ ಶತ್ರುಗಳೊಡನ ಇವರು ಹೋರಾಡುತ್ತಾರೆ ಇವರ [illegible]

ಜಪಾನ ದೇಶಕ್ಕೆ ಅಕ್ಕಿಯ ಪೂರವಟ ಬೇಕಾಗಿದೆ ರಂಗೂನಿನಿಂದ ಹಡಗ ತುಂಬಿ ತುಂಬಿ ಅಕ್ಕಿ ಹೋಗುತ್ತಿದೆ ಅಕ್ಕಿಯ ದರ ಏರಿತು

ಜಪಾನ ಸರಕಾರಕ್ಕೆ ಈ [illegible] ಈ ಯುದ್ಧದ [illegible] ಪ್ರತಿ [illegible] ಮಾಡುತ್ತ ಹೋಗಬೇಕಾಗಿ ಜಪಾನ ಸರಕಾರದ ನಿರ್ಧರಿಸಿದೆ

ಶ್ರೀ ವಿಠ್ಠಲಭಾಯಿ ಪಟೇಲರವರಿಗ ಗುರುವಾರ ಬಹ ಗಡಯಾಯಿತು ಶ್ರೀ ಪಟೇಲರು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ [illegible] ಆಸ್ಪತ್ರೆಯಲ್ಲಿ ಉಪಚಾರ ಹೊಂದಬೇಕ ವಿಷಮೋಪಚಾರಕ್ಕಾಗಿ ವ್ಹಿಯೆನ್ನಾ ಪಟ್ಟಣಕ್ಕೆ ಹೋಗಲಿದ್ದಿಯಲ್ಲಿ ಶ್ರೀ ಪಟೇಲರ ಪ್ರಕೃತಿ ನೆಟ್ಟಗಿಲ್ಲ ಅದರಿಂದ ಅವರು ಮುನ್ನ ರವಿವಾರ ವ್ಹಿಯೆನ್ನಾ ಪಟ್ಟಣಕ್ಕೆ ಹೋಗುವವರಿದ್ದರು

— ಕಲಕತ್ತಾ ಮ್ಯುನಿಸಿಪಾಲಿಟಿಯ ಶಿಕ್ಷಕರಿಗ ೭ ಮಾಸಗಳಿಂದ ಪಗಾರ ಸಿಗಲಿಲ್ಲ ಅದರಿಂದ ಶಿಕ್ಷಕರು ತಂಡುಗಟ್ಟಿಕೊಂಡು ಮ್ಯುನಿಸಿಪಾಲಿಟಿ ಆಫೀಸಿನ ಮೇಲೆ ಸಾಗಿಹೋದರು ಅಧ್ಯಕ್ಷರು ಅವರಿಗೆ ಸಮಾಧಾನ ಹೇಳಿ ವಿಚಾರ ಮಾಡುತ್ತೇವಾಗಿ ತಿಳಿಸಿದ್ದಾರೆ

ಸತ್ಯಾಗ್ರಹದ ವಾರ್ತೆ.

— ಮುಂಬಯಿಯಲ್ಲಿ ಜೇ. ಜೇ ಸ್ಕೂಲ ಆಫ್ ಆರ್ಟ್ಸ ಎಂಬ ಚಿತ್ರಕಲಾ ಶಾಲೆಯಿದೆ ಇಲ್ಲಿ ಉಚ್ಚ ತರಗತಿಯ ಚಿತ್ರಕಲೆ ಕಲಿಸುತ್ತಾರೆ ಪ್ರತಿವರ್ಷದಂತೆ ಈ ವರ್ಷ ಇನಾಮು ಸಮಾರಂಭವಾಯಿತು ಗವರ್ನರರು ಈ ಸಮಾರಂಭಕ್ಕೆ ಬಿತ್ತೈಸಿದ್ದರು ರಾ| ಜೋಶಿ ಎಂಬ ಹುಡುಗನಿಗೆ ಗೋಮಾಂತಕ ನೋಟದ ಒಂದು ಚಿತ್ರ ತೆಗೆದ ಬಗ್ಗೆ ಇತರರೊಡನ ಇನಾಮು ಸಿಗುವದಿತ್ತು ಅನೇಕ ಹುಡುಗರು ಗವರ್ನರರೊಡನೆ ಆನಂದಭರಿತರಾಗಿ ಹಸ್ತಾಂದೋಲನ ಮಾಡಿ ತಂತಮ್ಮ ಇನಾಮು ಪಡಕೊಂಡು ಹೋದರು ರಾ| ಜೋಶಿಯವರಿಗೆ ಕರೆದರು ಈತನು ಖಾದಿ ಅಂಗಿ ಹಾಗು ಪೋಶಕ ಉಟ್ಟುಕೊಂಡಿದ್ದನು, ಕರೆದ ಮೇರೆಗೆ ಬಂದನು ಸ್ವಲ್ಪ ದೂರ ನಿಂತು ನುಡಿದದ್ದೇನಂದರೆ— "ತಮ್ಮ ಬಗ್ಗೆ ನನ್ನಲ್ಲಿ ಆದರವಿದೆ, ಶಾಲೆಯ ಪ್ರಿನ್ಸಿಪಾಲರಿಗೂ ನಾನು ಮನ್ನಿಸುತ್ತೇನ ಆದರೆ ಈ ಸಮಾರಂಭದಲ್ಲಿ ಸೇರಲು ನನಗೆ ನಾಚಿಕೆಯೆನಿಸುತ್ತದೆ ಯಾಕಂದರ ರಾಷ್ಟ್ರೀಯ ಸಭೆಯ ಧ್ಯೇಯದಿಂದ ನಾನು ಬದ್ಧನಾಗಿದ್ದೇನೆ

ಮುಗಿಲು ಕಳಚಿಕೊಂಡು ಬಿದ್ದಂತಾಗಿ ಎಲ್ಲರೂ ದಿಗಿಲುವಿದ್ದರು! ಇದೇನು ಚಮತ್ಕಾರವೆಂಬುದು ತಿಳಿಯಲಿಲ್ಲ ಇಷ್ಟರಲ್ಲಿ ಮುಖ್ಯಾಧ್ಯಾಪಕರಾದ ಮಿ| ಸೊಲೊಮನ್‌ರವರು ಮುಂದಾಗಿ ರಾ| ಜೋಶಿಯವರ ಕಿವಿಯಲ್ಲಿ ಏನನ್ನೋ ಹೇಳಿದರು ರಾ| ಜೋಶಿಯವರ ಮಾತು ಅಸ್ತಿತ್ವಕ್ಕೆ ಬಡಿಯಿತು ಹುಡುಗನು ಇನಾಮು ಕೊಳ್ಳದೆ ಹಿಂತಿರುಗಿದನು ಸಂಪ್ರದಾಯದಂತೆ ಗವರ್ನರರ ಭಾಷಣವಾಯಿತು ವಿದ್ಯಾರ್ಥಿಗಳ ಗೋಮಾಂತಕಕ್ಕೆ ಒಯ್ದು ಚಿತ್ರಕಲೆಯ ಸೇವೆ ನಡಿಸಿದ ಬಗ್ಗೆ ಮಿ| ಸೊಲೊಮನ್‌ರವರಿಗ ಹೊಗಳಿದರು ಆದರೆ ಗೋಮಾಂತಕದ ಚಿತ್ರಗಾರರಾದ ರಾ| ಜೋಶಿಯವರ ಸಂಕಟದ ಉಲ್ಲೇಖ ಮಾಡಲಿಲ್ಲ ರಾ| ಜೋಶಿಯವರು ಗುಜರಾಥದ ನಡಿಯಾದದವರು, ಬಡವರು ಚಿತ್ರಕಲೆಯ ಅಭಿರುಚಿ ನೋಡಿ, ಅವರಿಗ ಮಿ| ಸೊಲೊಮನ್‌ರವರು ರೂ [illegible] ಸ್ಮಾರಕ ವೇತನ ಕೊಟ್ಟು ಪ್ರೀತಿಯಿಂದ ಕಲಿಸಿದ್ದರು!

— ಪಂಡಿತ ಮದನಮೋಹನ ಮಾಲವೀಯರವರು, ಫೆಬ್ರವರಿ ೨೮ನೇ ತಾರೀಖಿನ 'ಭಾರತ ಮಂತ್ರಿಗಳಿಗೆ ಉತ್ತರ'ವೆಂದು ಕಾಶಿಯಿಂದ ಕಳುಹಿದ ಲಂಬವಾದ ತಂತಿಯನ್ನು ತಂತಿ ಖಾತೆಯವರು ಕಳಿಸಲೊಪ್ಪಲಿಲ್ಲ ಈ ತನಕ ೪೭೦೦೦ ಜನರು ಸೆರೆಮನೆ ಸೇರಿದರಾಗಿ ಪಂಡಿತ ಮಾಲವೀಯರವರು ನಮೂದಿಸುತ್ತಾರೆ

ತ್ವರೆ ಮಾಡಿರಿ! —— ನಿಯಮಿತ ಪ್ರತಿಗಳು ಅಚ್ಚಾಗಿವೆ! —— ತ್ವರೆ ಮಾಡಿರಿ!!

ವೇ|| ಕೃಷ್ಣ ಶಾಸ್ತ್ರಿ ಆಗೇರಕರ ಇವರಿಂದ ರಚಿತವಾದ ಅಂಗಿರಾನಾಮ ಸಂದ ಸ್ವದೇಶಿ ಪಂಚಾಂಗಗಳು ಮಾರಾಟಕ್ಕೆ ಸಿದ್ಧವಾಗಿವೆ.

ಬೇಕಾದವರು ಹಣ ಮುಂಗಡ ಕಳಿಸಿ ಆರ್ಡರು ಕೊಡಬೇಕು

ದರವಾರ:— ೧೦೦ಕ್ಕೆ ರೂ ೧೧, ೫೦ಕ್ಕೆ ರೂ ೬, ೨೫ಕ್ಕೆ ರೂ ೩||, ೧ಕ್ಕೆ ೨ ಆಣೆ.

ಪತ್ತೆ ಮೆನೆಜರ, "ಸ್ಟಾರ ಆಫ್ ಕೆನರಾ" ಪ್ರೆಸ್, ಕುಮಟಾ (ಉ ಕನ್ನಡ)

ಸ್ಥಾನಿಕ ವೃತ್ತಾಂತ

(೯ನೆ ಪುಟದಿಂದ ಮುಂದುವರಿದಿದ್ದು)

ಕ್ರ ಎಲ್ಲ ಕಡೆಗಳಲ್ಲಿ ವರಾದ ಕೇದಾರಿ ಇಬ್ಬರು ಸಬ್‌ಇನ್ಸ್‌ಪೆಕ್ಟರರು ಪೋಲೀಸರ ಸಹಿತ ಹೋಗಿದ್ದರು. ತ್ರಿವರ್ಣ ಕೊಟ್ಟಿರಿ ನಾನು ನಾನು ಕೊಡುತ್ತೇನೆ, ಹಿಂದುಗಡೆಯಿಂ ನವರ್ [illegible] ಕೊಡಬಹುದು ಸಾತ್ಯಕಿ ನಾಡವರ ಹೇಳಿಕೆಗೆ ಬೋಗಸಹೋಗಿತಿರಿ, ರನ್ನ [illegible] ವಸಾಕ್ಕೊಳ್ಳಬೇಡಿ! ಎಂದಾಗಿ ಹೇಳು [illegible] ರಾಮದಾಸನು, ಬಟ್ಟೆಯು, [illegible] ಲಕ್ಷ್ಮಣ [illegible] ಹೇಳಿದರು. ಹೇಳಿದ್ದು ರಾಮದಾಸರಿಗೆ ಈಗಿನ ದಿನಮಾನದಲ್ಲಿ ಕೆಲ ಜನ ಜಪ್ತಿಯಾದರು ಬೇಕಾದ್ದನ್ನು ಕೊಂಡು ಹೋಗಲಿ' ಎಂಬದಾಗಿ ರಾಮದಾಸನ ಮನುಷ್ಯರು ಹೇಳಿದ ಬಳಿಕ ಭತ್ತ-ಬತ್ತಿ ಜಪ್ತಾಯಿತು. ಹಲಿಯಪ್ಪಗೌಡನ ಮನೆಯಲ್ಲಿ ಜಪ್ತಿಗೆ ಹೋದರು. ಹೆಂಡತಿಯಿದ್ದಳು. ತ್ರಿವರ್ಣ ಕೊಟ್ಟಿರುವಿರೇ 'ಸೆಂದು ಕೇಳಲು ಯಜಮಾನರಿಗೆ ಕೇಳಿರೆಂದು ಅವಳು ನುಡಿದಳು. ಜಪ್ತಿಯ ಮಾಡದೆ ಗೋವಿಂದದಾಸನ ಮನೆಗೆ ಹೋದರು. ಈತನು ೩೦ ವರ್ಷದ ಯುವಕ. ಹೊಲಕ್ಕೆ ಹೋಗಿದನು. ಮನೆಯಲ್ಲಿಂದಿಲ್ಲ. ಈ ದಿವಸದಲ್ಲಿ ತ್ರಿವರ್ಣ ತುಂಬಿರುವುದೆ— ಹಾಕೆ ಬೀಳುವದಿಲ್ಲ ಅಕ್ಕಿ ಬೊಟ್ಟು ತೋರಿಸಿ, ಇದನ್ನೆಲ್ಲ ಒಮ್ಮುಷ್ಟಿ ಮಾಗಿ ಜಪ್ತ ಮಾಡುವರು ಹೇಳಿದರು. ಸಾಗರ ಬಸವಗೌಡನ ಮನೆಗೆ ಹೋದರು, ಆವನೂ ಮನೆಯಲ್ಲಿರಲಿಲ್ಲ. ಹೆಂಡತಿಯಿದ್ದಳು. "ಇಷ್ಟಕ್ಕೆ ಹಿರಿತ್ತೇವೆ ನೀವು ನಿಮ್ಮ [illegible] ಬಳಿಯ ಬೇಕು ಕೊಡಹೋಗಲಾಗದು." ಹೀಗೆ ಅವಳಿಗೆ ದಬ್ಬಾಳಿಕೆಯಾಯಿತು. ಅವಳ ಹೆಸರು [illegible]ಯೆಂದು. "ಕೊಡುವುದೆಂದರೆ ಕೊಟ್ಟ ತುಂಬುವದಿಲ್ಲ ನೀವೆ ಜಪ್ತಿ ಮಾಡಿರಿ" ಎಂದು ನುಡಿದಳು. ಅವಳು ಹೊಂಟಳು. ರಾಮದಾಸನ ಮನೆಯಲ್ಲಿ ಜಪ್ತ ಮಾಡಿದ ಅಕ್ಕಿ-ಭತ್ತವನ್ನು ಸಾಗಿಸಿ ಕಟ್ಟಿಯು ತನ್ನ ಜೋಡಿಯಲ್ಲಿ ತಂದು ಇಟ್ಟರೆ ಜಾನಭೋಗರು ಅಂದ ಆಳುಗಳ ಮೇಲೆ ಹೊರಿಸಿಕೊಂಡು ಸಾಗಿಸ್ಸಿದ್ದ ಪೇಟೆಯ ಮೇಲೆ ಪತ್ರಿಕೆಯಿಂದ ಎತ್ತಿ ೧೧ ಘಂಟೆಗೆ ಸಾಗಿಸ್ಸಿದ್ದ ಅಂಗಡಿಯಲ್ಲಿ ಭತ್ತ ಸುರಿದು ಹೋದರು. ಈ ಜಪ್ತಾದದ್ದು [illegible] ತಾ [illegible] ಸಾಗಿದ್ದು ಮುದ್ದಗೌಡ. ಹೊನ್ನಪ್ಪನ ಮನೆ-[illegible]ಲ್ಲಿ ಜಪ್ತಿಯಾಯಿತು. ಭತ್ತ-ದನ-ಕರುಗಳನ್ನು ಸಹ ಜಪ್ತ ಮಾಡಿದರು. ದನದ ಕರುಗಳನ್ನು ಮುಂದೆ ಬಯಲಿಗೆ ಹೊಡೆ [illegible] ಮಾರಿಯೋ ಬಿಟ್ಟರಂತೆ. ತಾ [illegible] 'ಗೋವಿಂದದ ಸನದ ಬಗೆಯಲ್ಲಿ ಜಪ್ತ' ಮಾಡಿದನು. ಕವಳ [illegible]ದನು. ತ್ರಿವರ್ಣ ಕೊಡದಿದ್ದರೆ ನಿಮಗೆ ಹೊಡೆಯುತ್ತೇವೆ, ನಿಮ್ಮ ಮನೆಯ ಮೇಲೆ ಬೀಳುತ್ತೇವೆ ಹೀಗೆ ಜಪ್ತಿಯುವ ಹೇಳಿದರು. ದುಡ್ಡಿಲ್ಲವಾಗಿ ಮಂಡುಕನು ನುಡಿದನು. ಬತ್ತದ ಕಣಜ ಒಡೆದು ಚೀಲ ತುಂಬಿ ಒಯ್ದರು. ಜೊತೆಗೆ ಒಂದು ಹಂಡೆಯ [illegible] ಹಲಿಯಪ್ಪಗೌಡ, ದೇವಪ್ಪ ಜೋಗಿಗೌಡ, ಜೋಗಿ [illegible]ಗೌಡ, ಮಂಜೇಗೌಡ, ಕೇಶವ ಬಡಕಗೌಡ, ಬೊಮ್ಮನ್ನ [illegible]ಗೌಡ ಇವರಲ್ಲಿ ಜಪ್ತಿಯಾಯಿತು. ತಾ [illegible] ರಾ| ಹೊನ್ನಪ್ಪ ನಾಯ್ಕರಲ್ಲಿ [illegible] "ಇವರಲ್ಲಿ ಏನೂ ಇಲ್ಲ? ಮುದ್ದಲ್ಲ ಎಲ್ಲಿಟ್ಟಿರಿ?" ಎಂದು ಮಾಮಲೇದಾರರು ಕೇಳಲು "ದಡ್ಡಿನ ಇಲ್ಲ" ಎಂದು ರಾ| ಹೊನ್ನಪ್ಪ ನಾಯ್ಕರು ನುಡಿದರು. ಆ ಮೇಲೆ ಕಣಜದಲ್ಲಿಯು ಭತ್ತ ಸಿಗದು. ಭತ್ತ ತುಂಬಲು ಚೀಲ ಕೊಡಿರಿ. ಇಲ್ಲದಿದ್ದರೆ ಚೀಲ [illegible] ಹೊಡೆಗಳ ನಿಮ್ಮ ಮೇಲೆ ಬೀಳುವವೆಂದು ಮಾಮಲೇದಾರರು ಹೇಳಿದರು. "ನಾವು ನಿಮಗೆ ಭತ್ತ ಕೊಟ್ಟಿಲ್ಲ, ಚೀಲ ಕೊಡುವದಿಲ್ಲ. ಭತ್ತ ಕೊಂಡವರು ಚೀಲ ಕೊಡಬೇಕು" ಹೀಗೆ ರಾ| ಹೊನ್ನಪ್ಪನಾಯ್ಕರು ಹೇಳಿದರು. ಅಂಕೋಲೆಯಿಂದ [illegible] ಬಂದು ಅವುಗಳಲ್ಲಿ ಭತ್ತ ತುಂಬಿಸಿ ನಾಲ್ಕು ಆಳಿಗೆ ಹಿಡಕೊಂಡಿದ್ದರು. ಬಿಟ್ಟನು ಮಂಜೇಗೌಡ [illegible]ಬಿಟ್ಟನು [illegible] ಒಳಗಳನ್ನು ತ್ರಿವರ್ಣ [illegible] ಬಿಟ್ಟು ಹೋದರು. ಹೆದರಿಸಿ ಸರಕಾರಕ್ಕೆ ಕರ ಕೊಡದ [illegible]ಗಿ ಕೊಳೆಯುವಗಳಿಗೆ ಹೇಳುತ್ತಿದ್ದರು. ಪೋಲೀಸರು ಅವರಿಗೆ [illegible] ರಾಮಕೃಷ್ಣ ತಿಮ್ಮಣ್ಣನಾಯ್ಕರ ಮನೆ ಮುಟ್ಟಿ ಜಪ್ತಿಯಾಯಿತು. [illegible] ಬೀಗ ಹಾಕಿದರು. ನೋಡಿದರು ಕಪಾಟಿನ ಬಾಗಿಲು ಒಡೆಯಲು [illegible] ಮಹಾಬಲನಾಯ್ಕರ ಮನೆಯಲ್ಲಿ ಏನೂ ಸಿಗಲಿಲ್ಲ. ಮಾಸ್ಕೇರಿಯ ರಾ| ನಾಗಪ್ಪ ದೇವಣ್ಣನಾಯ್ಕರಲ್ಲದ ಜಪ್ತಿಯು [illegible] ಅವರು ಮನೆಯಲ್ಲಿರಲಿಲ್ಲ, ತಮ್ಮ [illegible]ವಿದ್ದರೆ ತ್ರಿವರ್ಣ ಕೊಡಿ ಎಂದು ಮಾಮಲೇದಾರರು ನುಡಿಯಲು ಹಣವಿಲ್ಲ ಹೀಗೆ ರಾ| ಸೋಮಯ್ಯನಾಯ್ಕರ ನುಡಿದರು. "೫ ರೂಪಾಯಿಗಳ [illegible] ಕೊಡಿರಿ ಪ್ರಾಮಿಸರಿ ನೋಟನ್ನಾದರೂ ಬರಕೊಡಿರಿ, ನಿಮ್ಮ ತ್ರಿವರ್ಣವನ್ನು [illegible]ತ್ತೇವೆ" ಹೀಗೆ ಮಾಮಲೇದಾರರು ನುಡಿದರು. "ಸರಕಾರಕ್ಕೆ ದುಡ್ಡು ಕೊಡುವದಿಲ್ಲ ತ್ರಿವರ್ಣ ಕೊಡತಕ್ಕದ್ದೆಂದರು" ಎರಡು ಪೆಟ್ಟಿಗೆ ಒಡೆದರು, ಏನೂ ಸಿಗಲಿಲ್ಲ! ಪೋಲೀಸರು ಒಂದು ಕೋಣೆಯಲ್ಲಿ [illegible] ಏನೂ ಸಿಗಲಿಲ್ಲ! ಜಪ್ತಿ [illegible] ನೋಡಿದರು ಏನೂ ಸಿಗಲಿಲ್ಲ. ಈಗ [illegible] ಒಡೆದು ಸ್ವತಃ [illegible] ತೋರಿಸಿದರು. ಪ್ರಾಮಿಸರಿ ನೋಟು [illegible] ನಿಂತರು. ಬೆದರಿಸಿದರು! ತುಳಸೀಕಟ್ಟೆಯಲ್ಲಿ ಒಂದು ೫೦ ರೂಪಾಯಿಗಳ ಪ್ರಾಮಿಸರಿ ನೋಟು [illegible] ದೇವರ ಪೀಠದ [illegible]ದಲ್ಲಿ ದುಡ್ಡಿರಬಹುದೆಂದು ದೇವರನ್ನು [illegible] ನೋಡಬೇಕು ಎಂದು ಮಾಮಲೇದಾರರು [illegible] ಒಪ್ಪಲಿಲ್ಲ. ಹುಡುಕಲು [illegible] ೫೦ ರೂಪಾಯಿಗಳ [illegible] ಇದನ್ನು [illegible] ನಾಯ್ಕರ ತಾಯಿ [illegible] ಬಂಗಾರ [illegible] ಬಿಟ್ಟಿದ್ದಳಂತೆ! ಪೋಲೀಸರ [illegible] ನೋಡಿದರು [illegible] ಒಡ್ಡು [illegible] ಗಿಂಡಿ [illegible] ಪೋಲೀಸರು [illegible] ಸಾಗಿಸಲು [illegible] ಮಾಡಿದರು. [illegible] ಇವರು ಗಟ್ಟಿ [illegible] ಈ ಸಾಮಾನೆಲ್ಲ [illegible] ಬಿಟ್ಟು ಜಪ್ತಿಯ ನಂತರ ನಡೆದರು.

ತ್ರಿವರ್ಣ ಕೊಡದ ಬಗ್ಗೆ [illegible] ಬೊಮ್ಮಣ್ಣ [illegible]ಣ್ಣನಾಯ್ಕ [illegible] ಬೊಮ್ಮಯ್ಯ [illegible] ಸೆರೆಹಿಡಿದರು.

[illegible] ಹಳ್ಳಿಯ [illegible] ಜಪ್ತಿಯ [illegible] ಸೆರೆಯ [illegible] ೯ಂ ಘಂಟೆಗೆ [illegible] ಒಂದು [illegible] ಪಿಕೆಟಿಂಗಿಗಾಗಿ ೫೦ ಮಂದಿ ಹುಡುಗರು [illegible] ಬಂದಿದ್ದರು. [illegible] ಸಿಗಲಿಲ್ಲ. ರಾ| [illegible]ಣ್ಣ [illegible] ನಾಯ್ಕ ಮೊದಲಾದ [illegible] ಮಂದಿಗೆ ಪೋಲೀಸರು ಸೆರೆಹಿಡಿದರು. [illegible] ಬಿಟ್ಟರು. ಹಂಗಿಸಿ [illegible] ಹಿಡಿದ [illegible] ಜಪ್ತಿಯ [illegible] ತಂಗಿ [illegible] ಹುಡುಗರಿಗೆ ಸಂಜೆಗೆ ಬಿಟ್ಟರು. ಹುಡುಗರು [illegible] ಸಂಜೆಗೆ [illegible].

[illegible] ಗಾಂಧಿ ದಿನ [illegible] ಘಂಟೆಗೆ [illegible] ಪೋಲೀಸರು [illegible] ಧ್ವಜಗಳನ್ನು [illegible] ರಾ| [illegible] ಹಾರಿಸಿದರು [illegible] ತೋರಿಗಳನ್ನು [illegible] ಪೋಲೀಸರು [illegible] ಧ್ವಜವಂದನೆಯು [illegible] ಗಾಂಧಿ [illegible] ರಾ| [illegible] ವಿದ್ಯಾರ್ಥಿಗಳಿಗೆ [illegible] ಪ್ರತಿಜ್ಞೆ [illegible] ಪೋಲೀಸರು [illegible] ಸೆರೆಹಿಡಿದರು. [illegible] ಹುಡುಗರನ್ನು [illegible] ಹುಡುಗರನ್ನು ಪೋಲೀಸರು [illegible] ಬಿಟ್ಟರು. [illegible] ಬಿಟ್ಟು [illegible] ಹೋಯಿತು.

ಸ| ಭಾಗೀರಥಿಬಾಯಿ [illegible] ತಮ್ಮ [illegible] ಸೆರೆಹಿಡಿಯುವದರಿಂದ [illegible] ಸರ್ಕಾರ [illegible] ತ್ಯಾಗಮಾಡಿ, ರಾ| [illegible] ಕೃಷ್ಣ [illegible] ನಾಯ್ಕರವರಿಗೆ [illegible] ಮಾಸಿಕ [illegible] ರಾ| ಲಕ್ಷ್ಮಣ [illegible], ಗಣಪತಿ [illegible], [illegible] ಸರ್ವೋತ್ತಮ [illegible] ಸೆರೆಹಿಡಿದರು. [illegible] ಮೊದಲಾದ [illegible] ಪೋಲೀಸರು [illegible] ಜಪ್ತ [illegible] ಬರೆದಿತ್ತು.

[illegible] ರಾ| [illegible]ಣ್ಣ ನಾಯ್ಕರ ಮನೆ [illegible] ಹೇಳಿದರು [illegible] ನೋಡಿದ [illegible] ಹುಡುಗರು, [illegible] ಕಾಗಿಲದಲ್ಲಿ [illegible] ಪೋಲೀಸರು [illegible] ನಿಮ್ಮ [illegible] "ಹೀಗೆ [illegible] ನಮ್ಮ [illegible]" ಹೀಗೆ [illegible] ಜಪ್ತಿ [illegible] ಮುಟ್ಟಲಾಗಲಿಲ್ಲ [illegible] ಸಂಭ್ರಮವಾಯಿತು!

[illegible] ಸರಕಾರಕ್ಕೆ [illegible]ಯಿರುವದರಿಂದ [illegible] ಬರೆದು [illegible].

ರಾ| [illegible] ಜಪ್ತಿಯ [illegible] ಬಗ್ಗೆ [illegible]!

ಇಲ್ಲಿಂದ [illegible] ಸಂಗತಿಗಳನ್ನು [illegible] ಬರಲಿಲ್ಲ.

ಕಾರವಾರ— ಈ [illegible] ಜಪ್ತಿಯಾಯಿತು [illegible] ಜಪ್ತಿಯಾದ [illegible], [illegible] ಪೋಲೀಸರು ಜಪ್ತಿ ಮಾಡಲು [illegible] ತಾ [illegible] ಗುರುವಾರ ಜಪ್ತಿಯಾಯಿತು [illegible] ಮೊದಲಾದ [illegible] ರೂಪಾಯಿಗಳ [illegible] ಜಪ್ತಿಗಿದೆ [illegible] ರೂಪಾಯಿ ೩೦೦ [illegible] ಮಾಡುವದಿಲ್ಲವಾಗಿ [illegible] ಜಪ್ತಿಯಾಯಿತು. ಈ ಹಿಂದೆ ಜಪ್ತಿಗೆ [illegible] ಪೋಲೀಸರು ಜಪ್ತಿಮಾಡಿದ [illegible] ಮ್ಯಾಜಿಸ್ಟ್ರೇಟರು ಈ [illegible] ಜಪ್ತಿ ಮಾಡುವಂತೆ [illegible] ಈ ಜಪ್ತಿಯಾಗಿರುವದಂತೆ! [illegible]

— [illegible] ಗಾಂಧಿಯವರು [illegible] ಕೊಟ್ಟರು. [illegible] ಗ್ರಂಥಗಳನ್ನು [illegible] ತಮ್ಮ [illegible] ಸ| [illegible]

ಸ್ಥಾನಿಕ ವೃತ್ತಾಂತ

ಕುಮಟಾ— [illegible]

ಭಟಕಳ— [illegible]

ಶಿರಸಿ— [illegible]

[illegible] ವರಿದ್ದರೆ [illegible] ಎಂಬುದಾಗಿದೆ [illegible]

[illegible] ದ ಹಗು ದುಶಾಸ್ತ್ರ [illegible] ವಸ್ತುಬಂದ [illegible] ನೋಡುವಂತೆ [illegible] ಗುತ್ತಿದ್ದರು [illegible]

[illegible] ಸರ್ವತ್ರವಿದ್ದ ಕ್ಷತ್ರಿಯರಿಗೆ [illegible] ತಿಂಡಿ-ತಿನಸುಗಳ [illegible] ಕಾರಣ

[illegible] ಕೊಂಡವರ [illegible] ಪದಗಳು [illegible] ಗಳನ್ನು [illegible] ಪ್ರತಿಬಂಧಿಸದಿದ್ದರೆ [illegible]

[illegible] ವಿಶೇಷವಾಗಿ [illegible] ಬೇಕು [illegible]

[illegible] ಸ್ವಯಂಸೇವಕರು [illegible] ಜನಸಾಮಾನ್ಯರು [illegible] ಇದ್ದರು

ಸ್ಥಾ — ನೀನು ಸ್ವಯಂಸೇವಕನೋ ?

ಸ್ಥಾ — ನಿಮ್ಮ [illegible] ನಿಂದ ಬೇರೆ ಬಂದಿದೆ ?

ಉ — [illegible]

ಸ್ಥಾ — ನಿಮ್ಮ ಮುಸಲ್ಮಾನರಿಗೆಲ್ಲ ಕಾಂಗ್ರೆಸ್ಸಿನಲ್ಲಿ [illegible] ಸೇರಿದಂತಾಯಿತೋ ?

ಉ — ಅಹುದು ನಾನು ಮಾಡುತ್ತೇನೆ

[illegible]

ತಿಡ್ಡುಪತಿ— ಕಳೆದ ನವೆಂಬರ ತಿಂಗಳ [illegible] ವಿಸ ರಂಟಕವು [illegible] ಕಲೆಕ್ಟರು [illegible] ಬಂದ [illegible] ತಿಳಿದುಕೊಂಡಿದೆ [illegible] ಈ ಬಗ್ಗೆ ನಮಗೆ ವಿಷಾದವೆನಿಸುತ್ತದೆ [illegible]

ಶಿದ್ದಾಪುರ— [illegible] ಶಿವಸ್ವಾಮಿ ಭಟ್ಟ [illegible] ಸಗಡ [illegible] ಪಾರಸ್ತರಿಂದ [illegible] ಆದರೆ [illegible] ಮಾತ್ರ [illegible] (ತಾ ೨೮-೨-೩೦)

[illegible] ನೀನು [illegible]

[illegible] ೧೦೦೦ [illegible]

ಅಂಕೋಲಾ — [illegible] ಶುಕ್ರವಾರ [illegible] ಪ್ರತಿ [illegible] ಜನರ [illegible] ಬುದ್ಧಿ ಹೇಳುತ್ತಲೆ [illegible] ಕೊಟ್ಟಿರೆ [illegible] ಇಂಥ [illegible] ಉಕ್ತಿರ [illegible] ಕೊಟ್ಟು [illegible] ದಾರಿದ್ರ್ಯ [illegible]

(ಅಪೂರ್ಣ ಮುಂದುವರಿದೆ)

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಅವರ [illegible] ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ [illegible] ಮನೋಹರವಾಗಿರ [illegible] ಕೂದಲುಗಳನ್ನು [illegible] ನೀವು ಅವಶ್ಯ [illegible] ಶ್ರೇಷ್ಠವಾದ [illegible] ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

[illegible] ಚನ್ನಾಗಿ [illegible] ಕೂದಲಿಗೆ [illegible] ತಲೆಗೆ ತಂಪು [illegible] ಹೀಗೆ [illegible] ಕೂದಲುಗಳಿಗೆ [illegible] ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಔಷಧೀ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತದೆ
ಅಥವಾ
ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟ್ಲಿಗಳಿಗೆ ,, ೨—೧೦—೦
ಅಂಚೆವೆಚ್ಚ , ೦—೧೨—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ

ದೊಡ್ಡ ಸೀಸೆಗೆ ರೂ. ೩—೦—೦
ನಡು ಸೀಸೆಗೆ ,, ೧—೪—೦
ಡ್ರಾಮಿಗೆ ,, ೦—೧೨—೦
ಅಂಚೆವೆಚ್ಚ ,, ೦—೬—೦
ಒಟ್ಟೋದಿಲ್ ಬಹಾರ
ಕೇಳಲಿಕ್ಕೆ ಮರೆಯಬೇಡಿರಿ

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧಪುಷ್ಪವನ್ನು [illegible] ಎಲ್ಲಾ ಹೂವುಗಳ ಪರಿಮಳವನ್ನು ಒಂದೇ ಸುಗಂಧದ್ರವ್ಯದಿಂದ [illegible]

ಒಟ್ಟೋದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಎಂಬ ಮದ್ಯವು ಸೇರಿರುತದೆ ಇಂಥ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ [illegible] ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮತ್ತೊಂದು ಸ್ಪರ್ಧಿಯಿಲ್ಲ

THE ANGLO INDIAN DRUG & CHEMICAL CO.
POST BOX 2082 BOMBAY No

ಕಾವ್ಯ.

ಮ|| ಪಂಜೆ ಮಂಗೇಶರಾಯರ ವ್ಯಾಖ್ಯಾನ

ಕಾರವಾರ ತಾ [illegible]

ಕಾರವಾರ ನಗರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ವಹಿಸಲು ಕರೆದು ಮಾಡಿದ್ದ ಶ್ರೀ ಪಂಜೆ [illegible] ಮನೆಯ ತೊಂದರೆಗಳ ಮೂಲಕ ಅದನ್ನು ಅವರಿಗೆ ಸ್ವೀಕರಿಸಲಾಗಲಿಲ್ಲೆಂದು ಜನರು ಬಹಳ ವ್ಯಸನಪಟ್ಟಿದ್ದರು. ಆದರೆ ಅವರು ತಾವಾಗಿಯೇ ಇಲ್ಲಿಯ ವರೆಗೆ ಬಂದು ಇಲ್ಲಿಯ ಜನರಿಗೆ ದರ್ಶನದಾನವನ್ನೂ ಶ್ರವಣಲಾಭವನ್ನೂ ದೊರಕಿಸಿಕೊಟ್ಟದಕ್ಕಾಗಿ ಅವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ಕಡಿಮೆ. ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳು ವಿಭಾಗಿಸಲ್ಪಟ್ಟಿರುವದರಿಂದ ಪರಸ್ಪರ ಪರಿಚಯವು ಕಡಿಮೆ ಎಂಬುದಕ್ಕೆ ಹೋಯಿತು. ಹೀಗಾಗಿ ದ. ಕನ್ನಡದ ಮಹನೀಯರಾದ ಮ|| ಪಂಜೆ ಮಂಗೇಶರಾಯರ ಪರಿಚಯವು ಇಲ್ಲಿಯವರಿಗೆ ಇದ್ದದೆ ಇರಬಹುದು. ಮ|| ಪಂಜೆ ಮಂಗೇಶರಾವ್, ಬಿ.ಎ., ಎಲ್.ಟಿ. ಅವರು ದಕ್ಷಿಣ ಕನ್ನಡದವರು. ಕೊಡಗಿನ ವಿದ್ಯಾ ಇಲಾಖೆಯ ಅಧಿಕಾರಿಯ ಸ್ಥಾನದಿಂದ ನಿವೃತ್ತರಾದವರು. ಮಂಗಳೂರಿಯ ಗವರ್ನಮೆಂಟ ಸೆಂಟ್ರಲ್ ಹಾಯಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದರು. ಮಂಗಳೂರಿನಲ್ಲಿ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರು ಆಗಿದ್ದರು. ಅವರು ಶ್ರೇಷ್ಠ ಕನ್ನಡ ಶಿಕ್ಷಕರು, ಉತ್ತಮ ಕವಿಗಳು. ಅವರ ಪುಸ್ತಕಗಳನ್ನು ಹಾಯಸ್ಕೂಲಿನ ೪, ೫, ೬ನೇ ವರ್ಗದ ವಿದ್ಯಾರ್ಥಿಗಳು ಓದುತ್ತಾರೆ. ಕನ್ನಡದ ಬೆಳವಣಿಗೆಗಾಗಿ ಹೆಣಗುತ್ತಿರುವವರಲ್ಲಿ ಅವರು ಪ್ರಮುಖರು. ಮ|| ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಅವರನ್ನು ಹೀಗೆಂದು ಕೊಂಡಾಡಿರುವರು 'ಹೊಸಗನ್ನಡ ಸಾಹಿತ್ಯಕ್ಕೆ ಅಡಿಗಲ್ಲು ಹಾಕಿ ಬಂದವರ ಪೈಕಿ [illegible] ಯಾಗಿ ಉಳಿಯುತ್ತಿರುವ ಹಿರಿಯರಾದ ಶ್ರೀ ಪಂಜೆ ಮಂಗೇಶರಾಯರು ಶ್ರೀ ಪಂಜೆಯವರು ಬರೆದ 'ಕೋಟಿ ಚೆನ್ನಯ' ಎಂಬ ಕತೆಯು ಪ್ರಸಿದ್ಧ. ತುಳು ಭಾಷೆಯ 'ಪಾಡ್ದನ' ಎಂಬ ಪ್ರಕಾರದಿಂದ ಕಥಾಭಾಗವನ್ನು ತೆಗೆದುಕೊಂಡಿದ್ದಾರೆ. ತುಳುವಿನ ನುಡಿಗಟ್ಟು ಶೈಲಿ-ಭಾವನೆಗಳು ರಾಯರ ಲೇಖನಿಯಿಂದಿಳಿದು ಬರೆದ ವಿಶ್ವಕನ್ನಡದ ಕನ್ನಡತನಕ್ಕೆ ವಿಶೇಷವಾಗಿ ಹೊಳೆಯುತ್ತದೆ. ಶ್ರೀ ಪಂಜೆಯವರು ಆ ಕಾಲದ ತುಳುನಾಡಿನ ಸಂಸ್ಕೃತಿಯನ್ನು ಈ ಕಾಲದವರಿಗೆ ಸವಿಯುತ್ತಾರೆ ನಾಯಕರ [illegible]. 'ನಮ್ಮ ತೆಂಕಣ ಗಾಳಿಯ ಕವನಗಳು' [illegible] ನವಲ್ಲಿ 'ದಕ್ಷಿಣ ಕನ್ನಡದ ಕವಿಗಳು' ವಿಷಯವಾಗಿ ಉಪನ್ಯಾಸ ಮಾಡುವಾಗ ಶ್ರೀ ಕಡೆಂಗೋಡ್ಲು ಶಂಕರಭಟ್ಟರು ಅವರನ್ನು ಕುರಿತು ಹೀಗೆಂದರು "ಶ್ರೀ ಮಂಗೇಶರಾಯರು, ನಾನು ವಿದ್ಯಾರ್ಥಿಯಾಗಿದ್ದಾಗ ಇನ್ಸ್‌ಪೆಕ್ಟರಾಗಿ ನಮ್ಮ ಶಾಲೆಗೆ ಬರುತ್ತಿದ್ದರು. ಆಗ ಸಣ್ಣ ಸಣ್ಣ ಹುಡುಗರನ್ನು ಸುತ್ತಲು ನೆರೆಯಿಸಿ ತಾವೇ ರಚಿಸಿದ ಸುಲಭ ಕವನಗಳನ್ನು ಅವರಿಗೆ ಕಲಿಸಿ ಹಾಡಿಸಿಕೊಳ್ಳುತ್ತಿದ್ದರು. ಹೀಗೆ ಅವರಲ್ಲಿ ಸಣ್ಣವರಾಗಿರುವಾಗಲೇ ಕಾವ್ಯದ ಬಗ್ಗೆ ಅಭಿರುಚಿಯನ್ನು ಹುಟ್ಟಿಸಲಿಕ್ಕೆ ಬಹಳವಾಗಿ ಪ್ರಯತ್ನಿಸುತ್ತಿದ್ದರು. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕ ಸಭೆಯ ಅಧ್ಯಕ್ಷಸ್ಥಾನವನ್ನು ಕೊಟ್ಟು ಅವರು ಕನ್ನಡಕ್ಕೆ ಗೈದ ಸೇವೆಯ ಬಗ್ಗೆ ಅವರನ್ನು ಕಳೆದ ವರುಷ ಗೌರವಿಸಿದರು. ಕರ್ನಾಟಕದ ಶ್ರೇಷ್ಠ ಕವಿಗಳಲ್ಲೊಬ್ಬರಾದ ಶ್ರೀ ಕೆ. ವಿ. ಪುಟ್ಟಪ್ಪನವರು ಹೇಳುವದೇನೆಂದರೆ, "ಸಾಹಿತ್ಯಪ್ರೇಮಿಗಳು ಹಳ್ಳಿಗಳಲ್ಲಿ ಸಮಯ ದೊರೆತಾಗ ಸಂಚರಿಸಿ ಹಳ್ಳಿಗರು ಒಪ್ಪುವ ಸರಿಯಾದಂತೆ ಅವರಿಗೆ ಕಾವ್ಯಗಳನ್ನು ಓದಿ ಹೇಳಬೇಕು. ಶ್ರೀನಿವಾಸ್ ಪಂಜೆ ಮಂಗೇಶರಾಯರು ಇದನ್ನು ಮಂಗಳೂರು ಪ್ರಾಂತದಲ್ಲಿ ಬಹುಕಾಲದಿಂದ ಮಾಡುತ್ತಲಿರುವರು." ಸಾಹಿತ್ಯ ಸಮ್ಮೇಳನದ ಅಧ್ಯಕ್ಷಸ್ಥಾನವನ್ನು ಅವರಿಗೆ ಮೂರು ಬಾರಿ ಕೊಡಮಾಡಿತ್ತು. ಆದರೆ ಹಿಂದಿಲ್ಲೊಂದು ಕಾರಣದಿಂದ ಅವರಿಗೆ ಅದನ್ನು ಸ್ವೀಕರಿಸುವದಾಗಲಿಲ್ಲ. ಇವೆಲ್ಲವುಗಳ ಮೇಲಿಂದ ಕನ್ನಡ ಸಾಹಿತ್ಯ ಸೇವಕರಲ್ಲಿ ಅವರು ಪಡೆದ ಹಿರಿದಾದ ಸ್ಥಾನವನ್ನು ನಾವು ಅರಿತುಕೊಳ್ಳಬಹುದು.

೨೩ನೇ ತಾರೀಖಿನಂದು ಅವರು ಕಾರವಾರ ಹಾಯಸ್ಕೂಲಿಗೆ ಭೆಟ್ಟಿ ಕೊಟ್ಟರು. ಅಲ್ಲಿ ಅವರು ಕನ್ನಡ ಕಾವ್ಯವನ್ನು ಕುರಿತು *Appreciative Lesson* ಕೊಟ್ಟರು. ಅದನ್ನು ಕೇಳಿ ವಿದ್ಯಾರ್ಥಿಗಳು [illegible] ಕಲಿಸುವ ಪದ್ಧತಿಯಿಂದ ಎಲ್ಲರನ್ನೂ ಬೆರಗು ಮಾಡಿದರು.

ಅಂದು ಸಂಜೆಗೆ ಮಿತ್ರ ಸಮಾಜದಲ್ಲಿ 'ಕಾವ್ಯವನ್ನು ಕುರಿತು' ಸುಶ್ರಾವ್ಯವಾದ ಉಪನ್ಯಾಸವನ್ನು ಕೊಟ್ಟರು. ಅದರ ಸಾರಾಂಶವನ್ನು ಅವರ ಶಬ್ದಗಳಲ್ಲಿ ಕೊಡುವದು ಅಸಾಧ್ಯವಾದುದರಿಂದ ನನ್ನ ಶಬ್ದಗಳಲ್ಲಿ ಕೆಳಗೆ ಕೊಡುತ್ತೇವೆ —

"ಕಾವ್ಯವನ್ನು ಕುರಿತು ಮಾತಾಡಬೇಕೆಂದು ನೀವು ನನಗೆ ಅಪ್ಪಣೆಯನ್ನು ಕೊಟ್ಟಿದ್ದೀರಿ. ಆದರೆ ಕವಿಯ ಯೋಗ್ಯತೆಯು ನನ್ನಲ್ಲಿ ಎಷ್ಟುಮಾತ್ರವೂ ಇಲ್ಲ. ನಾನು ಕನ್ನಡದೇವಿಯ ಪ್ರಾಂಗಣದ ಹೊರಬದಿಯಲ್ಲಿ ಬಿದ್ದಿರುವ ಕಸವನ್ನು [illegible] ಕಸದಲ್ಲಿ ಎಲ್ಲಿಯಾದರೂ ಸಿಕ್ಕಿರುವ ರತ್ನಗಳನ್ನು ಕಂಡು, ಆರಿಸಿ ನೋಡಿ ಆನಂದಪಟ್ಟವನು. ಅದರಿಂದ ನನ್ನಲ್ಲಿ ಉಂಟಾದ ಸಂಸ್ಕಾರದ ಫಲವನ್ನು ನಾನು ಸ್ವಲ್ಪದರಲ್ಲಿ ನಿಮಗೆ ಅರುಹುವೆನು.

ನಾನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದವನು. ನನ್ನ ಸೀಮೆಗೆ ಮೊಟ್ಟಮೊದಲು ಕಾವ್ಯದ ಹೊನಲು ಹರಿದು ಬಂದದ್ದು ಉತ್ತರ ಕನ್ನಡದಿಂದಲೇ. ನಮಗೆ ಕವಿತೆಯ ಸವಿಯನ್ನುಣಿಸಿದವರು ಭಟಕಳ ಅಪ್ಪಯ್ಯನವರು. ಅನಂತರ ಯಕ್ಷಗಾನ ಪ್ರಬಂಧಗಳಿಂದ ನಮ್ಮನ್ನು ಸಂತೋಷಪಡಿಸಿದವರು ಗೇರಸೊಪ್ಪೆ ಶಾಂತಯ್ಯನವರು. ಯಕ್ಷಗಾನ ಪ್ರಬಂಧಗಳಲ್ಲಿ ಏನು ಕಾವ್ಯವಿದೆ? ಎಂದು ನೀವು ಕೇಳಬಹುದು. ಅಲ್ಲಿ ಅಂಬಿನವನು, ಹಾಕಿಕೊಂಡ ನಮಗೆ ಅದರಲ್ಲಿ ಕಾವ್ಯ ಕಾಣದೆ ಇರಬಹುದು. ಆದರೆ ನಿಜವಾಗಿಯೂ ಅದರಲ್ಲಿ ಕಾವ್ಯವಿದೆ. (ಅವರು ಶಾಂತಯ್ಯನವರ ಯಕ್ಷಗಾನದೊಳಗಿನ ಪಾತ್ರವನ್ನು ಓದಿ ತೋರಿಸಿ ಅದರೊಳಗಿನ ಕಾವ್ಯಮಯ ಭಾಗವಾವುದೆಂಬುದನ್ನು ತೋರಿಸಿದರು.)

ಕಾವ್ಯವನ್ನೋದಿ ಅದರ ಸೊಂಪನ್ನು ಅನುಭವಿಸಿ ಅದರ ಮರ್ಮವನ್ನರಿತು ಅದರಿಂದ ಆನಂದವನ್ನು ಹೇಗೆ ಉಣ್ಣಬೇಕು, ರಸವನ್ನು ಹೇಗೆ ಹೀರಬೇಕು, ಎಂಬುದನ್ನು ನಮಗೆ ಈಗ ತಿಳಿಯದಾಗಿದೆ. ಹತ್ತು-ಹನ್ನೆರಡು ವರುಷಗಳ ವರೆಗೆ ಇಂಗ್ಲಿಷ ಭಾಷೆಯನ್ನು ಕಲಿತವರು, ಅವರೊಳಗಿನ ಕಾವ್ಯವನ್ನೋದಿ 'ಈ ಕಾವ್ಯ ಬಹಳ ಚನ್ನಾಗಿದೆ,' ಎಂದು ಹೇಳುವರುಂಟು. ಯಾಕೆ ಎಂದು ಅವರಿಗೆ ಪ್ರಶ್ನೆ ಮಾಡಿದ್ದಲ್ಲಿ, "ನಮ್ಮ ಪ್ರಿನ್ಸಿಪಾಲರು ಇಲ್ಲವೆ ಇನ್ನೊಬ್ಬ ಮಹನೀಯರು ಹೀಗೆ ಹೇಳುತ್ತಿದ್ದರು." ಎಂದು ಉತ್ತರ ಕೊಡುವರು. ಕಾವ್ಯವನ್ನೋದಿ ಅದರ ರುಚಿಯನ್ನು ತಿಳಕೊಳ್ಳುವ ಶಕ್ತಿಯೇ ನಮ್ಮಲ್ಲಿ ಇಲ್ಲದಂತಾಗಿದೆ. ಕವಿವರ್ಯ ರವೀಂದ್ರನಾಥ ಠಾಗೋರರು ಕಾವ್ಯದ ರಸಾನುಭವನ್ನು ಪಡೆಯಲಾರದಂಥ ಜನಾಂಗವು ನಾಯಿಯ ಸ್ಥಿತಿಯಲ್ಲಿದೆ ಎಂದು ತಿಳಕೊಳ್ಳಬೇಕೆಂದು ಒಂದು ಕಡೆಗೆ ಅಂದಿರುವರು. ಈ ದುರವಸ್ಥೆಗೆ ನಮ್ಮ ಶಿಕ್ಷಣ ಪದ್ಧತಿಯೂ ಶಿಕ್ಷಕರ ಅನಾಸ್ಥೆಯೂ ಕಾರಣ. ನಮಗ ಸಣ್ಣ ಹುಡುಗರಲ್ಲಿ ಅನುಕರಣದಿಂದ ಕವನಗಳನ್ನು ಕಟ್ಟುವ ಸ್ವಾಭಾವಿಕವಾದ ಶಕ್ತಿಯು ಇರುತ್ತದೆ. ಅದಕ್ಕೆ ಪೋಷಕವಾಗುವಂತೆ ಪ್ರಟ ಕೊಡದೆ ಅವರಲ್ಲಿದ್ದ ಸ್ವಾಭಾವಿಕ ಕವಿತಾ ಶಕ್ತಿಯನ್ನು ನಾವು ಕೊಂದುಬಿಟ್ಟಿದ್ದೇವೆ. ಇಂಗ್ಲೀಷಿನಲ್ಲಿದ್ದಂತೆ ನಮ್ಮಲ್ಲಿ ಅದಕ್ಕೆ ತಕ್ಕ ಸೌಕರ್ಯಗಳಿಲ್ಲವೆಂದೂ ನಾವು ಹೇಳುತ್ತೇವೆ. ಹಿಂದಿನ ಕನ್ನಡ ಕಾವ್ಯಗಳು ಚಿಕ್ಕ ಮಕ್ಕಳ ಅವಗಾಹನೆಗೆ ಬರಲಾರದ ವಿಷಯಗಳನ್ನು ಪ್ರಾಯಶವಾಗಿ ವರ್ಣಿಸುತ್ತವೆ. ಇದರ ಮೇಲಿಂದ ಕನ್ನಡ ಕವಿತೆಯನ್ನು ಓದುವ ಅಭಿರುಚಿಯು ಇಲ್ಲದೆ, ಮಕ್ಕಳಲ್ಲಿ ಸ್ವಾಭಾವಿಕವಾದ ಕವಿತಾಶಕ್ತಿಯೂ ನಾಶವಾಗುತ್ತದೆ. ಇಂಗ್ಲೀಷ ಭಾಷೆಯಲ್ಲಿ ಅನೇಕ ಸಣ್ಣ ಕವನಗಳಿವೆ. ಅವುಗಳನ್ನೇ ಮಾದರಿಗಾಗಿ ಕೊಟ್ಟು ಅವುಗಳ ಅನುಕರಣದಿಂದ ಸಣ್ಣ ಹುಡುಗರಿಗೆ ಕವನಗಳನ್ನು ಸ್ವತಃ ಕಟ್ಟುವದನ್ನು ಕಲಿಸುವ ಪದ್ಧತಿಯು ಅಲ್ಲಿರುವದು. ಇದರಿಂದ ಅವರೊಳಗಿನ ಸ್ವಾಭಾವಿಕ ಕವಿತಾಶಕ್ತಿಯು ವಿಕಾಸಗೊಳ್ಳುತ್ತದೆ. ನಾವು ಸಣ್ಣವರಿದ್ದಾಗ [illegible] ನಮಗೆ ತರೆದೊಯ್ದು 'ಒಂದು ಕಟ್ಟು, ಎರಡು ಕಟ್ಟು, ಮೂರು ಕಟ್ಟು, ನಾಲ್ಕು ಕಟ್ಟು' ಹೀಗೇನೋ ಹಾಡಲಿಕ್ಕೆ ಕಲಿಸುತ್ತಿದ್ದರು. ನಮಗೇನೂ ಅದರ ಅರ್ಥವಾಗುತ್ತಿರಲಿಲ್ಲ. ಆದರೆ ನಮ್ಮೊಳಗಿನೊಬ್ಬನು [illegible] ಸರಿಯಾಗುವಂತೆ 'ಜಗಳದ ಕಲೆಯು ಮೇಲೆ ವಿಮಾನವ ಬಿಟ್ಟು' ಎಂದು ಹಾಡಲಿಕ್ಕೆ ಪ್ರಾರಂಭಿಸಿದನು. ಇದು ಅನುಕರಣದಿಂದ ಆದುದು. ಇಂಥ ಅಣಕವಾಡು (*Parodies*) ಗಳು ಈಚಿ ಕಾಲದ ವರೆಗೆ ನಮ್ಮಲ್ಲಿ ಬಹಳವಾಗಿ ಪ್ರಚಾರದಲ್ಲಿದ್ದವು.

ಕಾವ್ಯದ ಸೌಂದರ್ಯವು ನಮಗ ತಿಳಿಯದೆ ಹೋಗಲಿಕ್ಕೆ ನಮ್ಮಲ್ಲಿದ್ದ ಕೆಲವು ತಪ್ಪು ತಿಳುವಳಿಕೆಯೇ ಕಾರಣ. ಕಾವ್ಯವೆಂದ ಕೂಡಲೇ ಅದಕ್ಕೊಂದು ರಾಗವಿರಬೇಕೆಂದು ಜನರು ಅನ್ನುತ್ತಾರೆ. ಕಾವ್ಯಕ್ಕೆ ರಾಗವು ಗೌಣವೆಂದು ನನ್ನ ಅಭಿಪ್ರಾಯ. ರಾಗವೆಂಬುದು [illegible] ಬಣ್ಣವಿದ್ದಂತೆ ಇಷ್ಟೇ. ಇಂಗ್ಲೀಷ ಕಾವ್ಯಗಳಿಗೆ ರಾಗವುಂಟೆಯೇ? ರಾಗವಿಲ್ಲದಿದ್ದರೂ ಅವನ್ನು ಓದಿ ಅದರ ಸವಿಯನ್ನು ಹೇಗೆ ಸವಿಸಬಲ್ಲೆವು? ಕನ್ನಡಕ್ಕೂ ಅದೇ ನಿಯಮವನ್ನು ಏಕೆ ಅನ್ವಯಿಸಿಕೊಳ್ಳಬಾರದು? ದಕ್ಷಿಣ ಕನ್ನಡದವರು, ಅಲ್ಲಿಯ ಹುಡುಗರು ಕವಿತೆಯನ್ನು ರಾಗದಲ್ಲಿ ಹಾಡುವದನ್ನು ಕೇಳಿ, 'ಯಾರಿಗೊಟ್ಟಿ

ಕಪಂತನ ತೆಂಗಿನ ಬಾಳುವ ಹಾಗೆ ಕಾಣುತ್ತ' ಎಂದು ಅನ್ನಬಹುದು ಅದೇ ನಮ್ಮಲ್ಲಿ ತಾಳಬದ್ಧವಾಗಿ ಇಂದು ಪ್ರಾಸಗಳ ಬಾರಿಸಿಕೊಂಡರೆ ಯಾವಾವ ಮನುಷ್ಯನ ಅಂತಃಕರಣದಲ್ಲಿಯೂ ಭಾವನಾತರಂಗಗಳೇಳುವವು, ಅವರ ಹೃದಯವು ಕುಣಿದಾಡ ಹತ್ತುವದು. ಇದನ್ನೆ ಯಾವನಾದರೊಬ್ಬ ಗಮಕಿಯು ಹಿಂದೋಳರಾಗದಲ್ಲಿ ಹಾಡಲಿಕ್ಕೆ ಪ್ರಾರಂಭಿಸಿದ ಕೂಡಲೇ ನಾವು ತಲೆದೂಗಿ, 'ಇದು ಕಾವ್ಯ' ಎಂದು ಅನ್ನುತ್ತೇವೆ. ಆದರೆ, ಹಾಡುಗಾರಿಕೆಯು ಕಾವ್ಯದ ನಿಜವಾದ ಒರೆಗಲ್ಲು ಅಲ್ಲ.

ಇಷ್ಟು ಹೇಳಿದ ಮೇಲೆ ಕಾವ್ಯವೆಂದರೇನು? ಅದರ ಲಕ್ಷಣಗಳಾವವು? ಅದು ಹೇಗೆ ಹುಟ್ಟುತ್ತದೆ? ಎಂಬ ಸಂಗತಿಗಳನ್ನು ಚರ್ಚಿಸಬೇಕಾಗಿದೆ. ಯಾವುದು ಹೃದಯಸ್ಪರ್ಶಿಯಾಗಿರುವದೋ, ಯಾವದನ್ನು ಓದುವದರಿಂದ ಒಂದು ವಿಧ ಸಮಾಧಾನ ತನ್ಮಯತೆಯ ನವ್ಯ ರಸಾನುಭವವನ್ನೂ ಪಡೆಯಬಹುದೋ ಅದು ಕಾವ್ಯವು. ಕಾವ್ಯದಲ್ಲಿ ಸಾಹಿತ್ಯಮಾಧುರ್ಯವು ಇರಬೇಕು. ಕಾರವಾರ ಎಂದು ಅನ್ನುವದು ಸ್ವಲ್ಪ ಕಷ್ಟವೆನಿಸುತ್ತದೆ, ಏಕೆ ಅಂಕೋಲೆ ಎಂದು ಹೇಳುವದು ಸರಳ. ಗೋಪಿಕಾವಸ್ತ್ರಾಪಹಾರ ಎನ್ನುವದು ಎಷ್ಟು ಕಷ್ಟ ನೋಡಿರಿ, ಅದೇ ಸಂಪಾದನ ಎನ್ನುವದು ಎಷ್ಟು ಸುಲಭ. ರ ಕಾಲಭವನದಿಂದ ಹಳಗನ್ನಡವೇನೋ ಮಾಯವಾಗುತ್ತಿದೆ. ಆದರೆ ಅದರಲ್ಲಿರುವ ಸ್ಪಷ್ಟ ಸಾಹಿತ್ಯಮಾಧುರ್ಯವು ನಮಗೆ ಬೇರೆ ಎಲ್ಲಿಯೂ ಕಾಣದು. ತಕ್ಕ (ಇಲ್ಲಿ ಇವರು ಮುದ್ದಣನ ರಾಮಾಶ್ವಮೇಧದಿಂದ ಕೆಲವೊಂದು ಭಾಗವನ್ನು ಓದಿ ತೋರಿಸಿದರು. ಅದರೊಳಗಿನ ಸಾಹಿತ್ಯಮಾಧುರ್ಯವನ್ನು ಕೇಳಿ ವ್ಯಾಖ್ಯಾತರು ಹೇಳಿದ ಮಾತಿನ ಸತ್ಯತೆಯು ಶ್ರೋತರಿಗೆ ಹೊಳೆಯಿತು) ಸಾಹಿತ್ಯಮಾಧುರ್ಯ ಬರಬೇಕಾದರೆ ಅದರಲ್ಲಿ ಅನುನಾಸಿಕಗಳೂ, ಅನುಸ್ವಾರಗಳೂ ಹೆಚ್ಚಾಗಿರಬೇಕು. ಅವು ನಮ್ಮ ಕಿವಿಗೆ ಇಂಪು ಕೊಡುತ್ತವೆ. ಕವಿತೆಯಲ್ಲಿ ತಾಳಬದ್ಧತೆಯೂ ಇರಬೇಕು. ಆವ ನುರಿತ ಸಿಪಾಯಿಯು ನಡೆಯುವಾಗ ಆತನ ಒಂದೊಂದೇ ಕಾಲದಲ್ಲಿ ಅಷ್ಟಷ್ಟೇ ಹೆಜ್ಜೆಗಳನ್ನಿಡುತ್ತಾನೆ, ಹಾಗೆಯೇ ಕಾವ್ಯಕ್ಕೆ ಮೆಟ್ಟುಗಳಿರುವವು. ಅವುಗಳಿಂದಲೇ ಅದಕ್ಕೆ ತಾಳಬದ್ಧತೆಯು ಬರುತ್ತದೆ. ಗದ್ಯಕ್ಕೂ ಪದ್ಯಕ್ಕೂ ಇರುವ ಭೇದವೆಂದರೂ ಇದೇ.

ಕಾವ್ಯದ ಹುಟ್ಟಿಗೆ ಕವಿಯ ಭಾವನೆಯೂ, ಸಂಸ್ಕಾರವೂ ಕಾರಣ. ಕವಿಯ ಮನದೊಳಗೆ ಭಾವನೆಗಳುಂಟಾಗಿ ಅವುಗಳಿಂದ ಅವನ ಹೃದಯವು ತುಂಬಿ ತುಳುಕಹತ್ತಿದಂದರೆ ಕಾವ್ಯವು ಹುಟ್ಟುವದು. ಆ ಸಂಸ್ಕಾರಶಾಲಿಗಳಿಗೂ ಭಾವನೆಗಳಿಗೂ ಸುತ್ತಲಿನ ಪರಿಸ್ಥಿತಿಯು ಕಾರಣ. ಬಾಹ್ಯ ಪರಿಸ್ಥಿತಿಯ ಪರಿಣಾಮವು ಗೆ ತಿಳಿಯದಂತೆ ಕೂಡ ಅವನ ಮನಸ್ಸಿನ ಮೇಲೆ ಆಗುತ್ತಿರುತ್ತದೆ— ನಮ್ಮಲ್ಲಿ ಶ್ರೀ|| ಎಂ. ಎನ್. ಕಾಮತ ಎಂಬ ಕವಿಗಳಿದ್ದಾರೆ. ಅವರು 'ಗೂಡಿನಲ್ಲಿಯ ಇಲಿ' ಎಂಬ ಕವಿತೆಯನ್ನು ಬರೆದಿದ್ದಾರೆ. ಅವರ ಅಭಿಪ್ರಾಯದ ಪ್ರಕಾರ ಇದೊಂದು ಕಾಡು ಕವಿತೆ. ಅದನ್ನು ನೋಡಿದೆನು, ಅದರಲ್ಲಿ ನಾನು ಉತ್ತಮವಾದ ಕಾವ್ಯವನ್ನು ಕಂಡೆನು. (ಇಲ್ಲಿಗೆ ಅವರು ಆ ಕವಿತೆಯನ್ನು ಓದಿ ಅದರಲ್ಲಿ ಕಾವ್ಯವು ಹೇಗೆ ತುಂಬಿದೆ ಎಂದು ತೋರಿಸಿದರು) ಅದರಲ್ಲಿ *Labour question* ಕೂಲಿಕಾರರ ಪ್ರಶ್ನೆಯು ಪಡಿನೆರಳುಗೊಂಡಿದೆ, ಎಂದು ನನಗೆ ತೋರಿತು. ಈ ಕವಿತೆಯನ್ನು ನಾನು ವಿದ್ಯಾರ್ಥಿಗಳಿಗೆ ಕಲಿಸುವಾಗ ಕವಿಗಳು (ಶ್ರೀ|| ಕಾಮತರು) ಕಂಡ ಕೂಲಿಕಾರರೆಂದು ಕೇಳಿದ್ದರು. ಅದಕ್ಕೆ ನಾನು ಕೊಟ್ಟ ಅರ್ಥವನ್ನೂ ವಿವರಣೆಯನ್ನೂ ಕೇಳಿ ಅವರು ವಿಸ್ಮಿತರಾದರು. ಕೂಲಿಕಾರರ ಪ್ರಶ್ನೆಯು ಮನುಷ್ಯನನ್ನು ಎತ್ತಿ ತೋರಿಸಲಿಕ್ಕೆ ನೀವು ಈ ಕವಿತೆಯನ್ನು ಓದಿದ್ದಿರೋ, ಎಂದು ಅವರಿಗೆ ಕೇಳಿದೆನು. ಅವರು ಏನು ಇಲ್ಲ, ಎಂದು ಹೇಳಿದರು. ಇದರ ಮೇಲಿಂದ ನಾವು ತಿಳಕೊಳ್ಳತಕ್ಕದ್ದು ಇಷ್ಟೇ. ಬಾಹ್ಯಪರಿಸ್ಥಿತಿಯ ಪರಿಣಾಮವು ಕವಿಯ ಮನಸ್ಸಿನ ಮೇಲೆ ತಿಳಿಯದೆ ಆಗುತ್ತದೆ. ಮನುಷ್ಯನು ಅದನ್ನು ತಿಳಿಯದೆ ಅನುಭವಿಸಿ ಹಾಡುತ್ತಾನೆ. ಎಲ್ಲ ಕಾವ್ಯಗಳು ಸ್ಫೂರ್ತಿಯಿಂದಲೇ ಹುಟ್ಟುವದಿಲ್ಲ, ದೀರ್ಘಕಾಲದ ಅಭ್ಯಾಸದಿಂದಲೂ ಸುತ್ತಲಿನ ವಸ್ತುಸ್ಥಿತಿಯನ್ನು ನಿರೀಕ್ಷಿಸಿ, ಅನುಭವಿಸಿ ಕವಿತೆಗಳನ್ನು ಬರೆಯಬಹುದು. ಅವು ಉತ್ಕೃಷ್ಟದರ್ಜೆಯವಾಗದೆ ಹೋಗಬಹುದು, ಆದರೆ ಅವುಗಳಿಂದ ಕೂಡ ಒಂದು ತರದ ಆನಂದವನ್ನು ಅನುಭವಿಸಬಹುದು.

ಹೊಸ ಕಾವ್ಯಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ಈ ಉಪನ್ಯಾಸವನ್ನು ಮುಗಿಸುವೆನು. ಹಿಂದಿನ ಕಾವ್ಯವು ಬಹಳ ಮಟ್ಟಿಗೆ ಪರಮಾರ್ಥಕ್ಕೆ ಸಂಬಂಧಪಟ್ಟಿದ್ದಿತ್ತು. ಈಗಿನ ಕಾವ್ಯವು ಇಂಗ್ಲಿಷ ಮಾರ್ಗದ ಅನುಕರಣದಿಂದ ರೊಮ್ಯಾಂಟಿಕ್, ಸಂಭಾಷಣಾತ್ಮಕ, ಲಿರಿಕ್, ಹೀಗೆ ಹಲವು ಬಗೆಯಾಗಿ ಹರಡಿದೆ. ಸಾಮಾಜಿಕ ಪರಿಸ್ಥಿತಿಯ ಪರಿಣಾಮವು ಕವಿಯ ಮನಸ್ಸಿನ ಮೇಲೆ ಆಗುತ್ತದೆ. ನಮ್ಮ ಮಿತ್ರರಾದ ಶ್ರೀವಸಂತ ಬಿ. ಎಂ. ಶ್ರೀಕಂಠಯ್ಯನವರು ಟಾಮಸ್ ಹುಡ್ ಎಂಬ ಆಂಗ್ಲಕವಿಯು ಬರೆದ '*Bridge of sorrow*' ಎಂಬ ಕವಿತೆಯನ್ನು 'ಮಱುಗಿನ ಸೇತು' ಎಂಬ ಹೆಸರಿನಿಂದ ಕನ್ನಡಕ್ಕೆ ಇಳಿಸಿದ್ದಾರೆ. ಹುಡ್ ಕವಿಯು ದಾರಿ ತಪ್ಪಿದ ಒಬ್ಬ ಆಂಗ್ಲ ಮಹಿಳೆಯ ಸ್ಥಿತಿಯನ್ನು ನೋಡಿ ಮರುಗಿ ಮರುಗಿ ಹಾಡಿದ್ದಾನೆ. ನಮ್ಮಲ್ಲಿ ವಿಧವೆಯರ ಸ್ಥಿತಿಯೂ ಹಾಗೇ ಇದೆ. ಶ್ರೀ|| ಶ್ರೀಕಂಠಯ್ಯನವರು ಅದರ ಚಿತ್ರವನ್ನು ಮನಸ್ಸು ಕರಗುವಂತೆ ಮೂಲದಕ್ಕೂ ಮಿಗಿಲೆನಿಸುವಂತೆ 'ಮಱುಗಿನ ಸೇತು'ವಿನಲ್ಲಿ ಇಳಿಸಿದ್ದಾರೆ (ಆ ಕವಿತೆಯನ್ನು ಓದಿ ತೋರಿಸಿದರು) ಶ್ರೀ|| ಪುಟ್ಟಪ್ಪನವರು ಹೊಸ ದಾರಿಯನ್ನು ಹಿಡಿದ ಕವಿಗಳು. ಅವರು ಅನೇಕ ಕವಿತೆಗಳನ್ನು ಬರೆದಿದ್ದಾರೆ. ಅದರಲ್ಲಿ ಶ್ರೇಷ್ಠವಾದ ಒಂದೇ 'ಕಲ್ಕಿ' ಎಂಬ ಕವಿತೆಯನ್ನು ನಿಮಗೆ ಓದಿ ತೋರಿಸುತ್ತೇನೆ. ನಮ್ಮಲ್ಲಿ 'ಕಲ್ಕಿ'ಯ ವಿಷಯ ಕ್ಲಿಷ್ಟ ಕಲ್ಪನೆಗಳನ್ನು ಒದಿಗೊತ್ತಿ ಹೊಸ ಕಲ್ಪನೆಗಳನ್ನು ಚಮತ್ಕಾರಕವಾಗುವಂತೆ ಅವರು ನಮ್ಮ ಮುಂದೆ ಇಟ್ಟಿದ್ದಾರೆ. ನಿಮ್ಮ ಜಿಲ್ಲೆಯ ಶ್ರೀ|| ದಿನಕರ ದೇಸಾಯಿ ಅವರೂ ಚಲುವ ಕವಿತೆಗಳನ್ನು ಬರೆಯುತ್ತಾರೆ. ಈ ಹೊಸ ಹಾದಿಯನ್ನು ಹಿಡಿದ ಕವಿಗಳ ಕೆಳಗೆ ನೀವು ಅಸಹ್ಯದಿಂದ ನೋಡಬಾರದು. ಅವುಗಳನ್ನು ಓದಿ ಆನಂದಪಡಬೇಕು. ಕನ್ನಡ ಕವಿತೆಯು ಸುಲಿದ ಬಾಳೆಯ ಹಣ್ಣಿನಂತಿದೆ ಎಂದು ಹೇಳಿದ್ದಾರೆ. ಆದರೆ ಸುಲಿದ ಬಾಳೆಯನ್ನು ಬರೇ ಕೈಯಲ್ಲಿ ಹಿಡಿದರೆ ಅದರ ಸವಿಯು ತಿಳಿಯಲಾರದು, ಅದನ್ನು ಬಾಯಿಯವರೆಗೆ ತಂದು, ಬಾಯಿಯಲ್ಲಿ ಹಾಕಿ ತಿಂದು ಸವಿ ನೋಡಬೇಕು. ಹಾಗೆಯೇ ತಾವು ಸ್ವಲ್ಪ ಶ್ರಮವಹಿಸಿ ಕಾವ್ಯದ ರಸಾಸ್ವಾದವನ್ನು ಹೊಂದಲಿಕ್ಕೆ ಕಲಿಯಬೇಕು."

ಮರುದಿವಸ ತಾ. ೫ನೇ ಶ್ರೀ|| ಮಾಂಜರೇಕರ ಹನುಮಂತರಾಯರು ಅವರನ್ನು ತಮ್ಮ 'ಸ್ಟ್ಯಾಂಡರ್ಡ ಇಂಗ್ಲಿಷ ಸ್ಕೂಲಿ'ಗೆ ಕರಕೊಂಡು ಹೋದರು. ಅಲ್ಲಿ ಅವರು '*Direct Method*'ದ ರೀತಿ ಒಂದು ಪಾಠವನ್ನು ಕಲಿಸಿ ತೋರಿಸಿದರು.

ಸಂಜೆಗೆ ಪ್ರಥಮ ಶಿಕ್ಷಕರಿಗಾಗಿ ಭಾಷಾ ಶಿಕ್ಷಣದಲ್ಲಿ ಪ್ರಥಮ ಪಾಠವನ್ನು ಕಲಿಸಿ ತೋರಿಸಿದರು. ಶಿಕ್ಷಕರನ್ನು ಉದ್ದೇಶಿಸಿ ಕೆಲವು ಮಾತುಗಳನ್ನು ಹೇಳಿದರು. ಅಷ್ಟರಿಂದ ಅವರು ಎಲ್ಲರ [illegible] ಹರ್ಷವಾಕ್ಯರಿಂದೊಡಗೂಡಿ ಅಂಕೋಲೆಗೆ ತೆರಳಿದರು.

ಶ್ರೀ ಪಂಜೇ ಮಂಗೇಶರಾಯರ ಆಗಮನದಿಂದ ಕಾರವಾರದಲ್ಲಿ ಶೈಕ್ಷಣಿಕ, ಹಾಗು ಕನ್ನಡ ವಾಙ್ಮಯದ ಬಗ್ಗೆ ಒಳ್ಳೆ ಜಾಗೃತಿಯಾಯಿತು. ಎಂದು ಹೇಳಬಹುದು.

ವಾರ್ತೆಗಳು.

— ಅಹಮದಾಬಾದದ ಕಾಂದಿ ಗ್ರಾಮದಲ್ಲಿ ಸತ್ಯಾಗ್ರಹ ಮಾಡಿದ ಬಗ್ಗೆ ಆರು ಹುಡುಗರಿಗೆ ದಂಡ ಮತ್ತು ಶಿಕ್ಷೆ ವಿಧಿಸಲಾಯಿತು. ದಂಡ ವಸೂಲಿಯ ಬಗ್ಗೆ ಅವರ ತಂದೆಯವರಲ್ಲಿ ಹೋಗಿ ಜಪ್ತಿಮಾಡಿದರು. ತಮ್ಮ ಆರು ಹುಡುಗರೂ ಸತ್ಯಾಗ್ರಹ ಮಾಡಿ ರಾಜದ್ರೋಹ ಬಗೆದು ಪತಿತರಾದ್ದರಿಂದ ಅವರು ನಮ್ಮ ಪಾಲಕರಲ್ಲವಾಗಿ ಮಕ್ಕಳ ತಂದೆಯವರು ದಸ್ತುವೇಜುಗಳನ್ನೇ ರಜಿಸ್ತ್ರಿ ಮಾಡಿ ದಂಡ ಜಂಜಡ ತಪ್ಪಿಸಿಕೊಂಡರು! ಸತ್ಯಾಗ್ರಹದ ಕಾಟ ತಪ್ಪಿಸಿಕೊಳ್ಳುವ ರಾಜಮಾರ್ಗವಿದು!

— ಮುಂಬಯಿ ಸರಕಾರವು ಅಹಮದಾಬಾದದಲ್ಲಿ 'ಸ್ವರಾಜ್ಯ' ಪತ್ರಿಕೆಯೆಂಬ ವಾರಪತ್ರ ಹೊರಡಿಸುತ್ತದೆ. ಪ್ರತಿವಾರಕ್ಕೆ ೭೦೦೦ ಪ್ರತಿಗಳು ಖರ್ಚಾಗುತ್ತವೆ! ಅದರಲ್ಲಿ ೬೦೦ ಪ್ರತಿಗಳು ಸರಕಾರದ ಕಚೇರಿಗೆ, ೬೦೦ ಪಟೇಲ ಕುಲಕರ್ಣಿಯವರಿಗೆ! ಉಳಿದ ೬೦೦೦ ಪ್ರತಿಗಳು ಬೇಕಾದವರಿಗೆ, ಬೇಡಾದವರಿಗೆ, ಎಲ್ಲರಿಗೆ ಹಂಚಲ್ಪಡುತ್ತವೆ!! ೧೨ ವರ್ಷ ಪತ್ರಿಕಾವ್ಯವಸಾಯದಲ್ಲಿ ನುರಿತ ಸಂಪಾದಕರು ಈ ಪತ್ರಿಕೆಯನ್ನು ನಡಿಸುತ್ತಾರೆ. ಇವರಿಗೆ ತಿಂಗಳಿಗೆ ೫೦೦ ರೂ. ಸಂಬಳ. ಪತ್ರಿಕೆಯ ಬಗ್ಗೆ ಸರಕಾರಕ್ಕೆ ಅಂಗಡಿ ರೂ. ೯೦ ಖರ್ಚು ಬರುತ್ತದೆ, ಉತ್ಪನ್ನ ರೂ. ೬೦!!

ಅಪಘಾತ ವಜ್ರಾಂಕುಶ ತೀವ್ರ

ರಾಮಬಾಣ ಮುಲಾಮು!

ಈ ದಿವ್ಯ ಮುಲಾಮು ಅಕಸ್ಮಾತ್ ಸಂಭವಿಸುವ ಗಾಯ, ಮೊಟ್ಟೆ ಅಂಗ, ಘಾತ, ಬಾಗು, ಕಸ, ಗಾಯಸ್ರೋತ, ಮೈಬಾವು ಮುಂತಾದ ಅಪಘಾತಗಳನ್ನು ತೀವ್ರವಾಗಿಯೂ, ಖಂಡಿತವಾಗಿಯೂ ಗುಣಪಡಿಸುತ್ತದೆ. ಅನುಭವಸಿದ್ಧ ಮುಲಾಮಿನ ಸಂಗಡ. ಬೆಲೆ ಡಬ್ಬಿಗೆ ರೂ ೧-೪-೦ ಟ ಪಿ ಬೇರೆ.

ಪತ್ತೆ – ದೇವಿದಾಸ ವಿಠೋಬಾ ಕಾಮತ, ಕೇಣಿ, ಪೋ॥ ಅಂಕೋಲಾ.

ಸೂಚನೆ — ಇದರ ವಿನಹ ನಮ್ಮ ಹಿಂದಿನ ಔಷದಗಳು ನಮ್ಮ ಅಂಕೋಲೆಯಲ್ಲಿ ರಾ|| ಸೈಬಂದಿ ಕಾಮತ ಇವರ ಅಂಗಡಿಯಲ್ಲಿ ದೊರೆಯುವವು.

ಯೌವನದ ಕನಸು.

[illegible]

[illegible] ೧೮

[illegible] ಲೋಕಸ್ಥಿತಿ [illegible] ಪ್ರಿಸಲು ಯತ್ನಿಸುವುದರಲ್ಲಿ ಆಶ್ಚರ್ಯವೇನಿದೆ? ಈ ಕಾಲ ಚಕ್ರದ ಏರುಪೇರುಗಳಿಂದ ಯಾವ ಸನಾತನ ನಿಬಂಧನೆಗಳೂ ಧರ್ಮಗಳೂ ಬದುಕಿ ಉಳಿದ ಪ್ರಾಣವು ಇಷ್ಟು ರಭಸದಿಂದ ನಡೆದ ಈ ಯುವಕರ ಉತ್ಸಾಹವೇಗಕ್ಕೆ ತಡೆಹಾಕಲು ಯಾರಿಗೆ ಸಾಧ್ಯ?

ಯುವಕರ ಮನಸ್ಸಿನ ಓಟವು ನಿರುಪಯೋಗಿಯೆಂದು ವೃದ್ಧರ ನಂಬಿಗೆ. ಈ “ನಂಬಿಗೆ”ಯೇ ಜಗತ್ತನ್ನು ಹಾಳು ಮಾಡಿತೆಂಬುದು ತರುಣರ ಉತ್ತರ. “ಸನಾತನ” ಪದ್ಧತಿಯು “ಪರಿಪೂರ್ಣ”ವಿದ್ದರೆ ನವೀನ ಆಕಾಂಕ್ಷೆಗಳು ಹೇಗೆ ಹುಟ್ಟುತ್ತಿದ್ದವು? ಅದರಲ್ಲಿ ದೋಷವಿರಲಿಕ್ಕೆ ಬೇಕು. “ಅಪ್ಪಾ, ಇದು ಕಲಿಕಾಲ” ಎಂದರೆ ತರುಣರು ನಂಬುವದಿಲ್ಲ. ಅವರಿಗೆ ಪ್ರಾಣವೂ ಕೃತಯುಗವೇ! ಹಿಂದಿನದು ಕೃತಯುಗವಿದ್ದರೆ ಕಲಿಯ ಪ್ರವೇಶವಾದರೂ ಯಾಕಾದಿತು? ನಮ್ಮ ಸಂಸ್ಕೃತಿಯು ಪರಿಪೂರ್ಣವಿದ್ದರೆ ಈಗಿನ ಅವನತಿಯಾದರೂ ಹೇಗೆ ಒದಗಿತು? “ಸನಾತನ ಧರ್ಮ”ವು ಚಿತ್ತಶಾಂತಿಯನ್ನೀಯುವದಾದರೆ ಮತ್ತೆ ಸಂಶಯಗಳು ಯಾಕೆ ಹುಟ್ಟಿದುವು? ಸಮಾಜಬಂಧನವು ನಿಸ್ಸೀಮವಿದ್ದರೆ ಅನೀತಿ ಅಸ್ಪದ ಹೇಗೆ ಸಿಕ್ಕಿತು? “ಪ್ರಾಚೀನ ಪರಿಪೂರ್ಣ ಧರ್ಮಗ್ರಂಥವಿದ್ದರೆ ಉಳಿದ ಮತ್ತಾವ ಗ್ರಂಥದ ಹೇಗೆ ಉಂಟಾಯಿತು?” ಇವು ತರುಣರ ಸರಳ ಪ್ರಶ್ನೆಗಳು. ವೃದ್ಧರ ಉತ್ತರವು ಇದಕ್ಕೆ ಇಷ್ಟೇ* “ಅಯ್ಯೋ! ಕಲಿಕಾಲ ಬಂತು! ನಮ್ಮ ಪೂರ್ವಜರು ದಡ್ಡರಲ್ಲ, ನೀವು ಓದಿಕೊಂಡದ್ದು ಸುಳ್ಳು ದೀತೇ?” ಎಂಬ ಅಡ್ಡತಿಡ್ಡ ಮಾತಿಗೆ ತರುಣರು ಕಿವಿಗೊಡುವದೇ ಇಲ್ಲ. ಪೂರ್ಣಪ್ರಜ್ಞರಾದ ಪೂರ್ವಜರ ಹೊಟ್ಟೆಯಲ್ಲಿ ಅಪರಿಪೂರ್ಣರಾದ ಈಗಿನ ತರುಣರು ಹೇಗೆ ಹುಟ್ಟಿದರು? ಪೂರ್ಣದಿಂದ ಪೂರ್ಣವೇ ಉಂಟಾಗುತ್ತಿರಲಿಲ್ಲವೇ? ಕಾಲಚಕ್ರವು ತಿರುಗಿದಂತೆ ತಕ್ಕ ಬದಲಾವಣೆಗಳಾಗಲೇ ಬೇಕು. ಹಳೆಯದು ‘ಚಿನ್ನ’ವೆಂದು ಹಿತ್ತಾಳೆಗೆ ಬಣ್ಣಕೊಂಡರೆ ಹೇಗೆ ತಾನೇ ಒಪ್ಪೀತು? ಮುಂದಿನ ಕಾಲವನ್ನು ಎದುರಿಸಲು ಅಶಕ್ತವಾಗದ ಹಿಂದಿನ ಕಾಲದ ಪರಿಸ್ಥಿತಿಯು ನಾಶವಾಗಲೇಬೇಕೆಂದು ತರುಣರ ಹಂಬಲ. ಯಾವುದೂ ಪರಿಪೂರ್ಣವಾಗಿಲ್ಲವೆಂದು ತಿಳಿದು ಪ್ರಗತಿ ಮಾರ್ಗ ಹಿಡಿಯಬೇಕೆಂಬುವುದೇ ಅವರ ಇಚ್ಛೆ.

ಮನುಷ್ಯನು ಸ್ವತಂತ್ರ ವೃತ್ತಿಯಲ್ಲಿಯೇ ಹುಟ್ಟಿ ಬೆಳೆಯುತ್ತಾನೆ. ಆದರೂ ಅವನ ಬೆಳವಣಿಗೆಯ ದಾರವನ್ನು ಹಿಡಿದ ಹಿರಿಯರು ಬಂಧನದ ಬೀಜಗಳನ್ನು ಅವನ ಸುತ್ತಲೂ ಪ್ರತಿಕ್ಷಣಕ್ಕೆ ಬಿತ್ತುತ್ತಾರೆ. ಕಾರಣ ಅದೇ ರೀತಿಯಲ್ಲಿ ಬೆಳೆದ ಅವನು ಅವನ್ನೇ ಪ್ರೀತಿಸಿ ಅವುಗಳಲ್ಲಿ ತಾದಾತ್ಮ್ಯನಾಗಿ ಹೋಗುತ್ತಾನೆ. ಇದೇ ಜಗತ್ತಿನ ದುಃಖಕ್ಕೆ ಕಾರಣ. ಇಲ್ಲಿಯ

---

* ವೃದ್ಧರ ಉತ್ತರವಿದ್ದರೆ ಸ್ಪಷ್ಟವಾಗಿ—ಸವಿಸ್ತಾರವಾಗಿ ಬರೆಯಬೇಕೆಂದೇ ನಾವು ಈ ಲೇಖನಕ್ಕೆ ಎಡೆಕೊಟ್ಟಿದ್ದೇವೆ. ಇದಕ್ಕೆ ಉತ್ತರವಾಗಿ ಬರೆದ ಯೋಗ್ಯವಾದ ಬರಹವನ್ನು ಅನ್ಯಾಯವಾದರೂ ಕಳುಹಿಸಿದಲ್ಲಿ ಅದಕ್ಕೆ ಎಡೆಯೀಯಲು ಜಯಕರ್ನಾಟಕವು ಸಿದ್ಧವಿದೆ. —ಸಂ. ಜ. ಕ.

ಮನೋಹರವಾದ ಕೂದಲನ್ನು ಚನ್ನಾಗಿ ಕಾಯಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಮೇಲೆ ಲಕ್ಷ್ಯ ಕೊಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆಗೆ ಲಕ್ಷ್ಯ ಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ ಅವು ಬಾಡಿ ಹೋಗಿ ಉದುರುವವು. ನೀವು ಅವಕ್ಕೆ ಚಲೋ ‘ಕೂದಲನ್ನು’ ಪೋಷಿಸುವ, ಶ್ರೇಷ್ಠವಾದ ಕೂದಲೆಣ್ಣೆ ಹಚ್ಚುವಿರಾ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ನಿಮ್ಮ [illegible] ತಲೆಯು ತಂಪು ಹೊಂದುತ್ತದೆ, [illegible] ಎಣ್ಣೆಯಿಂದ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. [illegible] ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ದಪ್ಪನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ
ಅಥವಾ
ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ

೨ ಔನ್ಸಿಗೆ	ರೂ	೨-೧-೦
ಔನ್ಸಿಗೆ	,,	೧-೪-೦
ಡ್ರಾಮಿಗೆ	,,	೦-೧೬-೦
ಅಂಚೆವೆಚ್ಚ	,,	೦-೬-೦

ಒಟ್ಟೋ-ದಿಲ್ ಬಹಾರ
ಕೇಳಲಿಕ್ಕೆ ಮರೆಯಬೇಡಿರಿ



“ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ”

ಒಂದು ಸುಗಂಧದ್ರವ್ಯದಲ್ಲಿ ಅದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು—ಅದ್ಯಾವುದು—?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲು ಯಾನೆ ಮದ್ಯವು ಸೇರಿರುತ್ತದೆ. ಇಂಥಿಂಥ ಹೂವಿನ ಸಹಜ ಪರಿಮಳವು ಬೇಕಾದರೆ ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.
POST BOX 2082 BOMBAY No

ವರೆಗೆ ಯುವಕರು ಇದನ್ನು ಗಮನಿಸಿದರೂ ಈ ವಿಶಾಲ ವಿಶ್ವದೃಷ್ಟಿಯುಳ್ಳವರಾದುದರಿಂದ ಇನ್ನು ಮುಂದೆ ಸಹಿಸಲಾರದವರಾಗಿದ್ದಾರೆ ಎಲ್ಲೆಲ್ಲಿಯೂ ತರುಣರು ಎಲ್ಲ ತರಹ ಬಂಧನಗಳನ್ನು ಹರಿದೊಗೆದು "ಮುಕ್ತ"ರಾಗಬೇಕಾಗಿ ಯತ್ನಿಸುತ್ತಲಿದ್ದಾರೆ ಈ ಯುದ್ಧದಲ್ಲಿ ವೃದ್ಧರು ಸೋಲಬೇಕು, ಇದೇ ನಿಶ್ಚಿತವೆಂದು ತರುಣರ ಭಾವನೆ

ಧರ್ಮಬಂಧನಗಳಿಂದ ಬಿಡುಗಡೆಯೊಂದುವುದೇ ಅವರ ಗುರಿ ಯಾವ ಧರ್ಮವೂ ಪೂರ್ಣವಲ್ಲವೆಂದು ಅವರ ಮತ ಅಸ್ತಿತ್ವದಲ್ಲಿದ್ದ ಯಾವ ಮತವೂ ವಿಶ್ವದ ಸಾರವನ್ನು ಹಿಡಿಸಿಲ್ಲ ಎಲ್ಲ ಧರ್ಮಗಳ ಗುಣಗಳನ್ನೊಳಗೊಂಡ 'ವಿಶ್ವಧರ್ಮ"ವನ್ನು ಸ್ಥಾಪಿಸಬೇಕೆಂದು ಅವರ ಕಾಮನೆ. ಯುವಕರು ಯಾವ ವೇದ 'ಶಾಸ್ತ್ರ ಪ್ರಮಾಣ' ಗ್ರಂಥಗಳನ್ನೂ ಮನ್ನಿಸುವದಿಲ್ಲ ಅವೆಲ್ಲವೂ ವಿಶ್ವಸಾರವನ್ನು ಬಿಂಬಿಸಲು ಅಪಪ್ರಯತ್ನಗಳೆಂದೇ ಅವರು ತಿಳಿದಿರುವದರಿಂದ ಆ ದೃಷ್ಟಿಯಿಂದ ನಮ್ಮ ಮುಂದಿನ ಧ್ಯೇಯ ಸಾಧನಗಳಾಗಿ ಅವುಗಳನ್ನು ಬಳಸಲು ಅಡ್ಡಿ ಇಲ್ಲ ಆದರೆ ಅವುಗಳಲ್ಲಿಯೇ ನಮ್ಮ ಜೀವನದ ಧ್ಯೇಯದ ಇತಿಶ್ರೀಯಾಯಿತೆಂದು ತಿಳಿಯುವುದು ಶುದ್ಧ ಅಜ್ಞಾನವು ಈಗ ಪ್ರಚಾರದಲ್ಲಿದ್ದ ಎಲ್ಲ ವಿಧಿಗಳೂ ಸಂಸ್ಕಾರಗಳೂ ಸ್ವಾರ್ಥಕ್ಕಾಗಿ ಕಲ್ಪಿಸಲ್ಪಟ್ಟಿವೆ ದೇವರ ವಿಷಯಕ ನಮ್ಮ ಎಲ್ಲ ಕಲ್ಪನೆಗಳೂ ತಪ್ಪುತ್ತವೆ. ತರುಣರು ಯಾವ "ಅವತಾರ"ಗಳನ್ನೂ ನಂಬುವದಿಲ್ಲ ಅವರಲ್ಲಿದ್ದ ಆಯಾ ಕಾಲದ ಮಹಾ ಪುರುಷರು ಇದ್ದುದರಿಂದ ಅವರು ನುಡಿದ ವಾಕ್ಯಗಳು ಗ್ರಂಥಗಳು ಮಾರ್ಗದರ್ಶಕಗಳೇ ಹೊರತು ಸಿದ್ಧ ಗ್ರಂಥಗಳಲ್ಲ. ಹಿಂದಿನ ಎಲ್ಲ "ದೇವಾಂಶೀಯ" "ಅಪೌರುಷೇಯ" ಗ್ರಂಥಗಳ ಸಹಾಯದಿಂದ ವಿಶ್ವದ ಗೂಢವನ್ನು ಬಿಡಿಸಿ ತಿಳಿಸಲಿಕ್ಕೆಂದು ವೃದ್ಧರನ್ನು ಯುವಕರು ಆಹ್ವಾನಿಸುತ್ತಾರೆ ಗೂಢವು ಇನ್ನೂ ಅಜ್ಞಾತವಿದೆಯೆಂದೇ ತರುಣರು ಅದರ ಶೋಧನೆಯಲ್ಲಿದ್ದಾರೆ ಹಿಂದಿನ ಎಲ್ಲ ಆಚಾರ ಬಂಧನಗಳಲ್ಲಿ ತರುಣರಿಗೆ ಸತ್ಯ ಕಾಣುವದಿಲ್ಲ ಮೇಲಾಗಿ ವೃದ್ಧರು ವಿವರಿಸುವ ಪುನರ್ಜನ್ಮವನ್ನೂ "ಆತ್ಮ"ದ ಸ್ಥಿರ ಅಸ್ತಿತ್ವವಾದವನ್ನೂ ಮುಂದೊಡ್ಡುವದನ್ನು ಅವರೆಂದಿಗೂ ನಂಬುವದಿಲ್ಲ ನಂಬಿಗೆ-ವಿಶ್ವಾಸವೆಂಬ ಭ್ರಾಮಕ ವಿಚಾರ (ಮಾನಸಿಕ)ದಿಂದ ದಾಸ್ಯಪಟ್ಟ ಎಲ್ಲ ಬಂಧನಗಳನ್ನು ಕಿತ್ತೊಗೆದು ಸರ್ವತಂತ್ರ ಸ್ವತಂತ್ರವಾದ "ವಿಶ್ವಧರ್ಮ"ವನ್ನು ಬೋಧಿಸಿ ಜಗತ್ತಿನಲ್ಲಿ ಸುಖ-ಶಾಂತಿಯನ್ನು ನೆಲೆಗೊಳಿಸಬೇಕೆಂದು ಅವರು ಹಂಬಲಿಸುತ್ತಿದ್ದಾರೆ

ಆದರೆ ಯುವಕರಿಗೆ ರೂಢಿಯ ಬಂಧನಗಳು ಎಲ್ಲೆಲ್ಲಿಯೂ ಅಡ್ಡ ಬರುತ್ತವೆ ಜಾತಿಭೇದವು ಕಲಹದ ಬೀಜವೆಂದೂ ಅನಾಗರಿಕತನದ ದ್ಯೋತಕವೆಂದೂ ಅವರು ಭಾವಿಸಿದ್ದಾರೆ ತರುಣರಿಗೆ ಸ್ವತಂತ್ರ-ಸ್ವೈರ ಸಂಚಾರ ಬೇಕು ಕುಟುಂಬವು ಆಕಾಂಕ್ಷೆಗಳನ್ನು ಮುರಿಯುವ ಕೋಲು ಎಂದು ಅವರು ತಿಳಿಯುತ್ತಾರೆ ಜಾತಿಯು ಮತಿಹೀನತೆಯನ್ನು ತೋರಿಸುತ್ತದೆ ನಿಜವಾದ ಜ್ಞಾನದಲ್ಲಿ ಇವೆಲ್ಲಕ್ಕೂ ಎಡೆಯಿಲ್ಲ ಯಾವ ವರ್ಗವೂ ಪ್ರತಿಷ್ಠೆ ಪಡೆದು ಬಂದಿಲ್ಲ. ಪರಿಸ್ಥಿತಿಯ ಮೂಲಕವಾಗಿ ಈ ವರ್ಗೀಕರಣವು ಉಂಟಾಗಿದ್ದರೂ ಮುಂದೆ ಜಗತ್ತಿನಲ್ಲಿ ಇದಕ್ಕೆ ಸ್ಥಳ ಸಿಗುವಂತಿಲ್ಲ ನಿಜವಾದ ಸುಧಾರಣೆಯು ಈ ಜಾತಿಯ ಕೆಡದಿಂದ ಆಗುವಂತೆ ಇಲ್ಲಿ ಸಮಾಜ ಬಂಧನಗಳು ಸಡಿಲಾಗುವವು ಇನ್ನು ಜಾತಿಯ ಬಂಧನಗಳು ಅಹಂಕಾರ ಪ್ರವರ್ತಕ ಅಂಜಿಕೆ, ಕಟ್ಟುಬಂಧನಗಳು ಹುಚ್ಚು ನಂಬಿಗೆ ಹುಟ್ಟಿಸಿ ತನ್ನ ಜವಾಬ್ದಾರಿಯನ್ನು ತನ್ನ ಮಕ್ಕಳ ಮೇಲೆ ಹಾಕಿ ನಿಶ್ಚಿಂತನಾಗುವ ದಾರಿ, ಎಂದು ತರುಣರು ತಿಳಿದಿದ್ದಾರೆ ಈ ಬಂಧನಗಳಿಗೆ ಇದಕ್ಕಿಂತ ಹೆಚ್ಚಿನ ಬೆಲೆ ಇಲ್ಲ ಆದರೂ ಮಾನವಸಮಾಜದಲ್ಲಿಯೇ ಬೇಗನೆ ಕ್ರಾಂತಿಯಾಗದ ಹೊರತು ತಮ್ಮ ಮೇಲೆ ಹಾಕಲ್ಪಟ್ಟ ಜವಾಬ್ದಾರಿಯನ್ನು ಬಿಸುಡಲು ತರುಣರು ಮನಸ್ಸು ಮಾಡುವದಿಲ್ಲ, ಇದು ಅವರ ಉದಾರತೆಯನ್ನು ತೋರಿಸುವುದಿಲ್ಲವೇ? ವೇದ ಪುರಾಣ—ಧರ್ಮ ಗ್ರಂಥಗಳಲ್ಲಿ ಜಾತಿಯ ಬಂಧನಗಳು ಹೇಳಿವೆ, 'ಭಗವಂತನೇ" ಈ ವರ್ಣ ಪದ್ಧತಿಯನ್ನು ನಿರ್ಮಿಸಿದ್ದಾನೆ ಎಂದು ವೃದ್ಧರು ಬೊಬ್ಬಿರಿದರೂ, ಈ ಪ್ರಾಮಾಣ್ಯವನ್ನೇ ನಂಬದ ತರುಣರ ಮನಸ್ಸು ಹೇಗೆ ಶಾಂತವಾದೀತು! ಯಾವ ಶಾಸ್ತ್ರಿಯ ಬುದ್ಧಿಯೂ ಇದನ್ನು ಸಿದ್ಧಗೊಳಿಸಲಿಕ್ಕಿಲ್ಲ ಪಿತಾ-ಪುತ್ರ, ಬಂಧು-ಬಾಂಧವ, ಗಂಡ ಹೆಂಡತಿ, ಒಕ್ಕಲ ದಣಿ, ಜಾತಿ ರಾಷ್ಟ್ರಧರ್ಮ ಗರ್ವ— ಈ ತರದ ಎಲ್ಲ ಬಂಧನಗಳೂ ಕಾಲಕ್ಕೆ ಸರಿ ಇದ್ದರೂ ಈಗ ಈ ಪದ್ಧತಿಗಳಲ್ಲಿ ಭಯಂಕರ ಸುಧಾರಣೆಯಾಗಿ ತರುಣರ ಮನಸ್ಸಿನ ಒಲವು ಪಡೆಯದಿದ್ದರೆ ಸಹಿಸಲಾರದ ಯುವಕರು ಬಂಡಾಯವೆಬ್ಬಿಸುವುದರಲ್ಲಿ ಆಶ್ಚರ್ಯವಿಲ್ಲ ಇಷ್ಟು ಆತುರರಾದ ತರುಣರು ಬಂಧನಗಳನ್ನು ಕಡಿದುಹಾಕದೇ ಇರುವರೇ?

ನೀತಿ-ಅನೀತಿ, ಪಾಪ-ಪುಣ್ಯವೆಂಬ ಭೇದಗಳ ಈಗಿನ ಪದ್ಧತಿಗಳನ್ನು ತರುಣರು ಮನ್ನಿಸುವದಿಲ್ಲ ಈ ಕಾಲದಲ್ಲಿ ಸಿರಿ ಅವರ ಸ್ವತ್ವಾಂತರವಾಗಿದೆ ಈ ಭೇದಗಳು ಸ್ವಾರ್ಥಿಗಳದೆಂದು ತೋರಿಸುತ್ತವೆ ಎಲ್ಲ ಅದನ್ನು ನಿಷ್ಪನ್ನವಾದ ವಸ್ತು ತನಗೇ ಉಪಭೋಗ್ಯವಿರಬೇಕೆಂದು ಪಾಪ ಪುಣ್ಯ ನೀತಿ-ಅನೀತಿಯನ್ನು ಕಲ್ಪಿಸಲಾಗಿದೆ ಒಂದು ಪಶುವಿಗೆ "ಕ್ರಿಯೆ" ಕಷ್ಟ ಅದನ್ನು ಸಂಗ್ರಹಿಸಿ ಉಪಯೋಗಕ್ಕಾಗಿ ಇತರರ ದೋಚಿಕೊಂಡರೆ ಕಳವು, ಬಲದಿಂದ ತೆಗೆದುಕೊಂಡರೆ ದರೋಡೆ, ಹಿಂಸೆಗೆ ಪ್ರತಿಹಿಂಸೆಯನ್ನು ಮಾಡಿದರೆ ಖೂನಿ, ಈ ರೀತಿ ಸ್ವಾರ್ಥ ಸಾಧಿಸುವ ಜನರು ನಿಷ್ಠ ಬುದ್ಧಿಕೌಶಲ್ಯದಿಂದ ನಿಬಂಧನೆಗಳನ್ನು ರಚಿಸಿದ್ದರು ಆದರೆ ಸಮಾಜವು ಈ ಬಂಧನಗಳನ್ನು ಸಂಪೂರ್ಣವಾಗಿ ಸ್ವೀಕರಿಸಿಲ್ಲ ಸ್ವಾಭಾವಿಕ ಬುದ್ಧಿಯು ಇದನ್ನು ಒದೆಯುದ್ದರಿಂದ ಬಹುಜನಸಮಾಜವ ತನ್ನ ಸುತ್ತಲೂ ಬೇಲಿಹಾಕಿದರೂ ಭದ್ರವಾಗಿ ಮಾಡಿಲ್ಲಿ ಶಾಸನದ ಭಯವಿದ್ದರೂ ಪಾಪ ಹೆಚ್ಚಿದೆ ಇದಕ್ಕೆ ಕಾರಣವೇನು? ಕಳವೂ, ಖೂನಿಯೂ, ಅನೀತಿಯೂ ಹಬ್ಬಿದೆ ಇದು ಯಾಕೆ? ಇವೆಲ್ಲವೂ ಜನ್ಮತಃ ಸಮಾನವಾದರೂ "ಸಮತ್ವ" (Even) ಇಲ್ಲದದರಿಂದ ಸ್ವಾರ್ಥ ಸಾಧನೆಯ ಕ್ರಿಯೆಯ ವಿರುದ್ಧ ಪ್ರತಿಕ್ರಿಯೆ ಎಂದೂ, ಕಾರಣ ದಂಡನೆಯಲ್ಲವೆಂದೂ ಅವರು ವಾದಿಸುತ್ತಾರೆ ಬೇಕಾದರೆ ನೀತಿ-ಅನೀತಿ, ಪಾಪ ಪುಣ್ಯ, ಸಂಗ್ರಹ-ಕಳವು, ಹಿಂಸೆ-ಅಹಿಂಸೆ ಇವದಕ್ಕೂ ಕಾರಣಗಳಾದ ವಸ್ತುವನ್ನೇ ಕಿತ್ತೊಗೆಯಿರಿ, ಇವನ್ನೆಲ್ಲ ಬಿಟ್ಟು ಬಂದದ್ದು 'ಕಾಯಿದೆ" ಎಂಬ ಹೊರರಕ್ಷಣೆ ಯಾಕೆ, ಸಹಜವಾದ ಅವರ ಪ್ರತಿಕ್ರಿಯೆಯನ್ನು ತಡೆಯುವುದು ಹೇಗೆ ತಾನೇ ಸಾಧ್ಯ? ಸಂಗ್ರಹ-ಕಳವು ಹಿಂಸ-ಅಹಿಂಸ, ನೀತಿ-ಅನೀತಿ ಸಪ್ರವೃತ್ತಿ-ಸಂಕೀರ್ತನ, ಏಕಪತ್ನೀವ್ರತ, ವ್ಯಭಿಚಾರ ಇವೆಲ್ಲವೂ ಮನಸ್ಸಿನ ವಿಕಾರಗಳು ಇವೆಂದೂ ತ್ಯಾಜ್ಯ. ಸ್ವಾಭಾವಿಕ ವ್ಯಕ್ತಿಸ್ವಾತಂತ್ರ್ಯವನ್ನು ಬದಿಗಿರಿಸುವ ಈ ಎಲ್ಲ ಬಂಧನಗಳನ್ನು ಕಿತ್ತೊಗೆದು ವಿಶಾಲ ಸ್ವಾತಂತ್ರ್ಯ ಕೊಡುವ ಹಾದಿಯೇ ನಿಜ ಹಾದಿಯೆಂದು ತರುಣರ ಮತ ಸಂಗ್ರಹವು ಸರಿಯಲ್ಲ, ಒಪ್ಪದ ನಿಜ ಸುಗುಣವು ಗುಣವಲ್ಲ ಅದರಂತೆ ಮೋಹಕೊಂಡು ಆಚರಿಸುವ ಪಾಪವು ಪುಣ್ಯವಾಗುವಂತಿಲ್ಲ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟ ಮೇಲೆ ಒಬ್ಬರ ಮನಸ್ಸಿನ ವಿರುದ್ಧ ಮತ್ತೊಬ್ಬರು ಬಂಧನ ಹಾಕುವುದೇ ಪಾಪ ಅನೀತಿ, ಬಂಧನಗಳಿಂದ ಒಳಗೊಂಡ ಗುಣವು ಗುಣವಲ್ಲವೆಂದೂ ಸ್ವಗುಣದಿಂದ ಮುಕ್ತನಾದ ಮೇಲೆ ಆಚರಿಸಲ್ಪಡಬಹುದಾದ ನಿಯಮಗಳೇ ಗುಣಗಳೆಂದೂ ತರುಣರು ತಿಳಿದಿದ್ದಾರೆ

ಮನುಷ್ಯಪ್ರಾಣಿಯು ಶ್ರೇಷ್ಠವೆನ್ನುವುದು ಹೇಗೆ? ಹೊಸ ಶೋಧಗಳನ್ನು ಹೊರಿಸಿದನೆಂದೇ? ಅಥವಾ ದೊಡ್ಡ ದೊಡ್ಡ ಪುಸ್ತಕಗಳನ್ನು ಬರೆದನೆಂದೋ? ಇವಾವುದರಿಂದಲೂ ಅವನ ಶ್ರೇಷ್ಠತೆಯು ಗೊತ್ತಾಗುವದರ ಬದಲು ಕನಿಷ್ಠತೆಯೇ ತಿಳಿದುಬರುತ್ತದೆ ಇತರ ಪ್ರಾಣಿಗಳಿಗೆ ಇವುಗಳ ಆವಶ್ಯಕತೆಯೇ ಇರುವದಿಲ್ಲ ನಿಜವಾಗಿ ನಾವು 'ಸ್ಥಿತಪ್ರಜ್ಞ" ಎನ್ನುವ ಸ್ಥಿತಿಗೆ ಅವು ಬಹುತರವಾಗಿ ಮುಟ್ಟಿಬಿಟ್ಟಿವೆ ನಾವು ಮಾತ್ರ ನಮ್ಮ ಮೂರ್ಖಬುದ್ಧಿಯ ಕೌಶಲ್ಯದಿಂದ ಬಹು ದೂರ ಉಳಿದಿದ್ದೇವೆ ನಾವೆಷ್ಟು ಪ್ರಯತ್ನಿಸಿ ದೊಡ್ಡ ವಾದಗಳನ್ನು ಹೂಡಿದರೂ ಸಂಪೂರ್ಣ ಸ್ವತಂತ್ರರಾಗಿ ಬಂಧನಗಳಿಲ್ಲದೇ, ಇತರ ಪಶು-ಪಕ್ಷಿ ಪ್ರಾಣಿಗಳಂತೆ ಜೀವನದಲ್ಲಿ ತೊಂದರೆ ಇಲ್ಲದೇ ವಿಶ್ವದಲ್ಲಿ ಲೀನವಾಗುವ ವರೆಗೆ ನಾವು ಚಿರಶಾಂತಿಯನ್ನು ಪಡೆಯಲಾರೆವು ಎಂದು ತರುಣರ ಮತ ನಮಗಿರುವ ಕೃತ್ರಿಮ ಬಂಧನಗಳೇ ನಮ್ಮ ದುಃಖಕ್ಕೆ ಕಾರಣವೆಂದು ಅವರು ತಿಳಿಸುತ್ತಾರೆ

ಸ್ವಾರ್ಥಕ್ಕಾಗಿ ಬಲ್ಲಿದರಿಂದ ಹೊಂದಿಸಲ್ಪಟ್ಟ ಬಂಧನಗಳೆಂದು ಎಲ್ಲ ರಾಜಕೀಯ ಬಂಧನಗಳನ್ನೂ ತರುಣರು ಒಪ್ಪುವದಿಲ್ಲ. ರಶಿಯದ ಸಮಾಜಸತ್ತಾವಾದಿ ಸರಕಾರವನ್ನು ನೋಡಲುಗೊಂಡು-ಇಂಗ್ಲಂಡಿನ ಪ್ರಜಾಪ್ರತಿನಿಧಿ ಸರಕಾರದಿಂದ ಇಂಡಿಯಾದ ಆರ್ಡಿನನ್ಸ್ ರಾಜ್ಯದವರೆಗೆ ಎಲ್ಲವೂ ಸ್ವಾರ್ಥತೆಯ ವಿಕಾರಗಳು ಬಲಾತ್ಕಾರದಿಂದ ಹೊರಿಸಲ್ಪಟ್ಟ ಬಾಹ್ಯ ಬಂಧನಗಳನ್ನು ತರುಣರು ಮನ್ನಿಸಲಿಕ್ಕಿಲ್ಲ ಯಾವ ರಾಜಕೀಯ ಬಂಧನಗಳಿಲ್ಲದೆ ವಿಶಾಲವಾದ "ವಿಶ್ವರಾಷ್ಟ್ರ"ವನ್ನು ನಿರ್ಮಿಸುವ ಧ್ಯೇಯಸಾಧನೆಗಾಗಿಯೇ ಈಗಿನ ತರುಣರು ಹೋರಾಡುತ್ತಿದ್ದಾರೆ

ಈಗಿದ್ದ ಎಲ್ಲವನ್ನು ಅಲ್ಲಗಳೆಯುವುದಾದರೆ ತರುಣರು ಇಚ್ಛಿಸುವದಾದರೂ ಏನು? ವ್ಯಕ್ತಿಸ್ವಾತಂತ್ರ್ಯವನ್ನೊಳಗೊಂಡ ಮಾನವ 'ಸಮಾಜ" ನಿರ್ಮಿತಿಯೇ ಅವರ ಆಕಾಂಕ್ಷೆ ಇದೇ ಸಮಾಜದ ಹಿತದ ಸ್ವಯಂಸ್ಫುರಿತ ನಿಯಮಗಳೇ ಅವರ ಸರಕಾರ ಪ್ರೇಮಬಂಧನವಿದ್ದರೂ ಬದ್ಧಪ್ರೇಮವಿರಲಿಕ್ಕಿಲ್ಲ ಕುಟುಂಬವಿದ್ದರೂ ಬದ್ಧಕುಟುಂಬವಿರಲಿಕ್ಕಿಲ್ಲ ಹಣವಿದ್ದರೂ ಸಂಗ್ರಹ, ಕಳವು ಇರಲಿಕ್ಕಿಲ್ಲ ನಿಯಮಗಳಿದ್ದರೂ ಪಾಪ-ಪುಣ್ಯದಿಂದ ಕಟ್ಟುವದು ಇರಲಿಕ್ಕಿಲ್ಲ ಭೋಗವಿದ್ದರೂ ಈಗಿನ ನೀತಿ-ಅನೀತಿಯ ನಿರ್ಬಂಧಗಳಿರಲಿಕ್ಕಿಲ್ಲ ಸಂಪೂರ್ಣಜ್ಞಾನವುಳ್ಳ ವ್ಯಕ್ತಿಸ್ವಾತಂತ್ರ್ಯವೇ ಇದಕ್ಕೆ ದಾರಿ ಎಂತು ನೋಡಿದ "ವಿಶ್ವ

"ಸಮಾಜವೇ" ಅವರ ಮಾತು. 'ಜೀವನ ವಿಪ್ಲವ' ಮನಃಕ್ರಾಂತಿಯೇ ಅವರ ಗುರಿ. ಇವರ ಗುರಿ ಒಂದ ಕಡೆ ನಿಲ್ಲಲಿಕ್ಕಿಲ್ಲ. 'ವಿಶ್ವಪ್ರೇಮ'ವೇ ಅವರ ನಿಯಮ. ಇವರ ಕಾನೂನುಗಳಿರಲಿಕ್ಕಿಲ್ಲ. ಆಂತರಿಕಪರಿಶುದ್ಧಿ, ಬಾಹ್ಯಪರಿಶುದ್ಧಿ, ಸತ್ಯಾನ್ವೇಷಣೆಯೇ ಅವರ ಧರ್ಮ. ಇತರ ಧರ್ಮಬಂಧನಗಳಿರಲಿಕ್ಕಿಲ್ಲ. ಇನಿತು ಹಿಂದುಮುಂದು ಮುಂದೆಯಾಗುವಂತ ತಾತ್ವಿಕ ಮನಃಕ್ರಾಂತಿ ಪಡೆಯುವ "ವಿಪ್ಲವವಾ"ದವನ್ನು ಸ್ಥಾಪಿಸಿ, 'ವಿಶ್ವರಾಷ್ಟ್ರ'ವನ್ನು ಸ್ಥಾಪಿಸಬೇಕಾಗಿರುವ ಈ ಅನಂತ ವಿಶ್ವದ ಗೂಢವನ್ನು ಬಯಲಿಗೆಳೆದು ಚಿರಶಾಂತಿ ಪಡೆಯಬೇಕಾಗಿಯೂ ಇವರ ಯತ್ನ. ಇಂಥ ವಿಶ್ವಕ್ರಾಂತಿಗಾಗಿಯೇ ಜನರು ಹೋರಾಡುತ್ತಾರೆ. ಇಚ್ಛಿತ ವ್ಯವಸಾಯಕ್ಕೆ ಕುಟುಂಬವು ಬಂಧನಕಾರಕ, ಪ್ರೇಮಲಗ್ನಕ್ಕೆ ಜಾತಿಯು ಬಂಧನಕಾರಕ, ಮತ ಪರಿವರ್ತನೆಗೆ ಧರ್ಮಾಚರಣೆ ಬಂಧನಕಾರಕ, ಮತಪ್ರಸಾರಕ್ಕೆ ಸರಕಾರದ ಶಾಸನವು ಬಂಧನಕಾರಕ. ಈ ಎಲ್ಲ ಬಂಧನಗಳನ್ನು ಕಡಿದೊಗೆದು ನ್ಯಾಯ ಸ್ವಾಧೀನತೆಗಾಗಿ ಪ್ರಯತ್ನದಿಂದ ಮುಂದೆ ಸಾಗುತ್ತಾರೆ.

ಇಂತಹ ತಮ್ಮನ್ನು ತರುಣರು ಕಾಣುತ್ತಿದ್ದಾರೆ. ಎಲ್ಲ ಯುವಕರೂ ಇದೇ ನ್ಯಾಯಪ್ರಿಯರಾಗಿರುವರು. ವೃದ್ಧರ ಕ್ಲೈಬ್ಯಕ್ಲಿಷ್ಟ ಆಚಾರಸೂತ್ರಗಳಿಂದ ಬಿಗಿಯಲ್ಪಟ್ಟ ಭಾವನೆಗಳ ಮೋಹವೇ ದೂರತು ಅವರಲ್ಲಿ ಸುಶಿಕ್ಷಿತರಿರಲಿ ಅಶಿಕ್ಷಿತರಿರಲಿ, ಅವರಿಗೆ ಒಂದ ನಮುಕ್ತ್ಯ (ಅವರವರ ದೃಷ್ಟಿಯಂತೆ) ದಾಗಬೇಕೆನ್ನುವ ಸಹಜಬುದ್ಧಿಯಿರುವದರಿಂದ ಯುವಕರು ಪ್ರಕಟಿಸಿದ್ದ ಉದಾಹರಣೆಗಳು ಒದಗಿವೆ. ವೃದ್ಧರ ಕಾರಸ್ಥಾನವನ್ನು ತಿತ್ತಿರಿಗೆಯಲಿಕ್ಕೆ ಅವರ ಆಚಾರ ಶಾಸ್ತ್ರಗಳ ಕೋಟೆಗಳ ಮೇಲೆ ಮುತ್ತಿಗೆ ಹಾಕಿ ರಣಾಂಗಣದಲ್ಲಿ ತಮಗೆ ಎದುರಾಗಲಿಕ್ಕೆ ಸಿದ್ಧವಾದ ವೃದ್ಧರಿದ್ದಾರೆಯೇ, ಎಂದು ಯುವಕರು ನಿರೀಕ್ಷಿಸುತ್ತಲಿದ್ದಾರೆ. ಈ ವೃದ್ಧ-ಯುವಕರ ಯುದ್ಧ ಸಮಾಪ್ತವಾಗಿ ಜಗತ್ತಿಗೆ, ಮಾನವ ಸಮಾಜಕ್ಕೆ ಕಲ್ಯಾಣಕಾರಿಯಾದುದರಿಂದ ವೃದ್ಧಮಹಾಶಯರಲ್ಲಿ ಯಾರಾದರೂ ಇವರನ್ನು ಎದುರಿಸಬೇಕೆಂದೂ ಈ ಲೇಖಕನ ವಿಜ್ಞಪ್ತಿ.

[ಧಾರವಾಡದ 'ಜಯ ಕರ್ನಾಟಕ' ಮಾಸಿಕದ ಮಾರ್ಚ ತಿಂಗಳ ಸಂಚಿಕೆಯಿಂದ ಎತ್ತಿ ಬರೆದುದು]

— ಅಹಮದಾಬಾದದಲ್ಲಿ ಒಂದು ಮಹಾ ಸಭೆಯಲ್ಲಿ ೨೦೦ ಜನ ಕ್ರಿಶ್ಚನ್ನರನ್ನು ಹಿಂದು ಧರ್ಮಕ್ಕೆ ಸೇರಿಸಿಕೊಂಡರು.

— ಫ್ರಾನ್ಸ ದೇಶದ ಸುಪ್ರಸಿದ್ಧ ಮುತ್ಸದ್ದಿಗಳಾದ ಬ್ರಿಯಾಂಡವರು ಕಳೆದ ವಾರದಲ್ಲಿ ಪರಲೋಕವಾಸಿಗಳಾದರು. ಇವರು ೧೧ ಸಾರೆ ಮುಖ್ಯ ಪ್ರಧಾನರಾಗಿದ್ದರು. ಸಾಯುವ ಕಾಲಕ್ಕೆ ಈಗಿನ ಮಂತ್ರಿ ಮಂಡಲದಲ್ಲಿ ಪರದೇಶಿ ರಾಜಕಾರಣದ ಖಾತೆಯ ಮಂತ್ರಿಗಳಾಗಿದ್ದರು.

— ಲಾಹೋರದ ಖಾಲಸಾ ಕಾಲೇಜಿನಲ್ಲಿ ಕಲಿಯುವ ೧೮ ವರ್ಷದ ವಿದ್ಯಾರ್ಥಿಯು ಈಗ ಕ್ರಮೇಣ ಹೆಂಗಸಾಗುತ್ತ ನಡೆದಿರುವನು! ಸದ್ಯಕ್ಕೆ ಅವನು ಶಸ್ತ್ರಕ್ರಿಯೆಯಲ್ಲಿದ್ದು, ಅವನ ಶರೀರದೊಳಗಿನ ಒಂದೊಂದೇ ಪುರುಷ ಚಿನ್ಹವು ಬಯಲಾಗಿ, ಸ್ತ್ರೀ ಚಿನ್ಹಗಳು ತಲೆದೋರುತ್ತಿವೆ! ವಿಚಿತ್ರ!!

ಪ್ರಪಂಚ-ಪರಿಚಯ.

ಹಿಂದುಸ್ಥಾನ ಸರಕಾರದ ಆಯ-ವ್ಯಯ.

ಹಿಂದುಸ್ಥಾನ ಸರಕಾರದ ೧೯೩೨-೩೩ನೇ ಸಾಲಿನ ಆಯ ವ್ಯಯ ಪತ್ರಿಕೆಯು ಕಳೆದ ಸೋಮವಾರ ದಿ ಎಸೆಂಬ್ಲಿಯಲ್ಲಿ, ವರಿಷ್ಠ ಕಾಯಿದ ಕೌನ್ಸಿಲಿನಲ್ಲಿ ಸಾದರವಾಯಿತು. ೧೯೩೦-೩೧ನೇ ಇಸ್ವಿಯಲ್ಲಿ ಅಂತು ಜಮೆಯು ೧೨೪ ಕೋಟಿ ೬೦ ಲಕ್ಷ ರೂಪಾಯಿ, ಖರ್ಚು ೧೩೬ ಕೋಟಿ ೧೨ ಲಕ್ಷ ರೂಪಾಯಿ. ಅಂತೂ ಆ ವರ್ಷದಲ್ಲಿ ೧೧ ಕೋಟಿ ೫೨ ಲಕ್ಷ ರೂ ತುಟ್ಟಿ ಬಂತು. ೧೯೩೧-೩೨ರಲ್ಲಿ ತಿದ್ದುಪಡಿಯಾದ ಜಮಾ ರೂಪಾಯಿ ೧೨೦ ಕೋಟಿ ೬೬ ಲಕ್ಷ, ಖರ್ಚು ೧೩೪ ಕೋಟಿ ೮೪ ಲಕ್ಷ. ಅಂತು ೧೪ ಕೋಟಿ ೧೮ ಲಕ್ಷ ರೂಪಾಯಿ ತುಟ್ಟಿ ಬರುವದು. ಕಳೆದ ಸಪ್ಟಂಬರ ತಿಂಗಳಲ್ಲಿ ಹೇರಿದ ಹೊಸ ಕರಗಳ ಮೂಲಕ ತುಟ್ಟಿಯು ಕಡಿಮೆಯಾಯಿತು. ಇಲ್ಲದಿದ್ದರೆ ೨೦ ಕೋಟಿಗೆ ಮುಟ್ಟುತ್ತಿತ್ತು! ೧೯೩೨-೩೩ರಲ್ಲಿ ಒಟ್ಟು ಜಮೆಯು ೧೨೮ ಕೋಟಿ ೧೬ ಲಕ್ಷ ಮತ್ತು ಅಂದಾಜ ಖರ್ಚು ೧೨೪ ಕೋಟಿ ೨೧ ಲಕ್ಷ ಹಿಡಿಯಲ್ಪಟ್ಟಿದೆ. ಅಂತೂ ೩ ಕೋಟಿ ೯೫ ಲಕ್ಷ ರೂಪಾಯಿ ಲಾಭವಾಗುವದು.

⁂

ಈಗ ಬರುವ ವರ್ಷದ ಬಗ್ಗೆ ಅವಶ್ಯವಿದ್ದ ಕರಗಳನ್ನು ಈ ಹಿಂದೆ ಸಪ್ಟಂಬರ ತಿಂಗಳಲ್ಲಿ ಹೇರಿರುವದರಿಂದ ಎಸೆಂಬ್ಲಿಯ ಚಾಲು ಅಧಿವೇಶನದಲ್ಲಿ ಇನ್ನು ಹೊಸ ಕರಹೇರಿಕೆಯ ಸೂಚನೆಯು ಬರಲಿಲ್ಲ.

⁂

ಹಿಂದುಸ್ಥಾನದ ಆಮದು ರಫ್ತು ಅರ್ಧಕ್ಕೆ ಕುಗ್ಗಿದೆ!

೧೯೩೦ ಜನವರಿ ವರೆಗಿನ ೧೦ ತಿಂಗಳಲ್ಲಿ ಹಿಂದುಸ್ಥಾನದಿಂದ ೨೦೩ ಕೋಟಿ ರೂ ಗಳ ಸರಕು ಪರದೇಶಗಳಿಗೆ ರಫ್ತಾಗಿತ್ತು. ೧೯೩೧ರ ವರ್ಷದ ೧೦ ತಿಂಗಳಲ್ಲಿ ಬರೇ ೧೨೬ ಕೋಟಿ ರೂ ಗಳ ಸರಕು ರಫ್ತಾಗಿದೆ! ೧೯೩೦ ರ ಮೊದಲಿನ ೧೦ ತಿಂಗಳಲ್ಲಿ ಪರದೇಶಗಳಿಂದ ೨೩೦ ಕೋಟಿ ರೂಪಾಯಿಗಳ ಸರಕು ನಮ್ಮ ದೇಶಕ್ಕೆ ಆಮದಾಗಿತ್ತು. ಈ ವರ್ಷದ ಅದೇ ಅವಧಿಯಲ್ಲಿ ಬರೇ ೧೨೦ ಕೋಟಿ ರೂ ಗಳ ಸರಕು ಬಂದಿದೆ! ಇಷ್ಟಾದರೂ ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯು ಕೆಟ್ಟಿಲ್ಲವೆಂದು ಆಳರಸರು ಸಾರಿ ಸಾರಿ ಹೇಳುತ್ತಿರುವರು!!

⁂

ಆದರೆ, ಕರಗಳು ಇಮ್ಮಡಿಯಾಗಿವೆ!

೨ ವರುಷಗಳ ಹಿಂದೆ ೩೦೧ ಕೋಟಿ ರೂ ಗಳ ಸರಕುಗಳ ಮೇಲೆ ಸರಕಾರವು ೪೭ ಕೋಟಿ ರೂ. ಆಮದು ಕರವನ್ನು ಎತ್ತುಗಡೆ ಮಾಡಿತ್ತು. ಈ ವರ್ಷ ೧೦೫ ಕೋಟಿ ರೂ.ಯ ಸರಕಿನ ಮೇಲೆ ೨೯ ಕೋಟಿ ರೂಪಾಯಿ ವಸೂಲು ಮಾಡಿದೆ!

⁂

೧೯೨೯-೩೦ರಲ್ಲಿ ೫೯|| ಕೋಟಿ ರೂ.ಗಳ ಅರಿವೆಯೂ, ೧೬ ಕೋಟಿ ರೂ ಗಳ ಸಕ್ಕರೆಯೂ ಹಿಂದುಸ್ಥಾನಕ್ಕೆ ಹೊರಗಿಂದ ಬಂದಿದ್ದವು. ಈ ವರ್ಷ ೧೬ ಕೋಟಿ ರೂ ಗಳ ಅರಿವೆ ಹಾಗೂ ೪ ಕೋಟಿ ರೂಪಾಯಿಗಳ ಸಕ್ಕರೆಯು ಮಾತ್ರ ಆಮದಾಗಿವೆ.

⁂

ಪ್ರಕೃತಕ್ಕೆ ಹಿಂದುಸ್ಥಾನದಲ್ಲಿ ತಿರುಗಾಡುತ್ತಿರುವ ರೌಂಡ ಟೇಬಲ್ ಪರಿಷತ್ತಿನ ಮೂರು ಕಮೀಟಿಗಳಿಗೆ ಕೂಡಿ ಅಂದಾಜ ಖರ್ಚು ೫|| ಲಕ್ಷ ರೂಪಾಯಿ ಬರುವದಂತೆ.

⁂

೧೯೨೦-೨೧ರಲ್ಲಿ ಸೈನ್ಯ ಖಾತೆಯ ಖರ್ಚು ೫೪ ಕೋಟಿ ೭೦ ಲಕ್ಷ ರೂ. ಬಂದಿತ್ತು. ೧೯೩೧-೩೨ರಲ್ಲಿ ಮೂಲ ಅಂದಾಜು ೫೨ ಕೋಟಿ ಹಿಡಿದಿತ್ತು, ತಿದ್ದುಪಡಿಯಾದ ಅಂದಾಜಿನಂತೆ ೫೧ ಕೋಟಿ ರೂ ಬರುವದು. ೧೯೩೨-೩೩ರಲ್ಲಿ ೪೬|| ಕೋಟಿ ೭೪ ಲಕ್ಷ ಖರ್ಚು ಬರುವದೆಂದು ಈಗಿನ ಅಂದಾಜು. ಅಂತು ಆಡಳಿತದ ಖರ್ಚು ಕುಗ್ಗಿಸುವ ಬಗ್ಗೆ ಸೈನ್ಯ ಖಾತೆಯಲ್ಲಿ ೫|| ಕೋಟಿ ರೂಪಾಯಿ ಉಳಿತಾಯ ಮಾಡುತ್ತೇವೆಂದು ಸೇನಾಧಿಪತಿಗಳು ವಚನ ಕೊಟ್ಟಂತೆ ವರ್ತಿಸಿದ ಬಗ್ಗೆ ಕೋಶಾಧ್ಯಕ್ಷರು ಅವರನ್ನು ಅಭಿನಂದಿಸಿರುವರು. ಆದರೆ ಹಿಂದುಸ್ಥಾನ ಸರಕಾರದ ಆರ್ಥಿಕ ಸ್ಥಿತಿಯು ಸುಧಾರಿಸಿದ ಕೂಡಲೇ ಈಗ ಕುಗ್ಗಿದ ಖರ್ಚು ಪರಿಸಲ್ಪಡುವದೆಂದು ಸೈನ್ಯಖಾತೆಯವರು ಮುಲ್ಕಿ ಅಧಿಕಾರಿಗಳಿಂದ ಅಭಿವಚನ ಪಡೆದಿರುವರಂತೆ!

⁂

ಚಿಮಣಿ ಎಣ್ಣೆ, ಉಪ್ಪು, ಅಡಿಕೆ ಮತ್ತು ಮಸಾಲೆ ಸಾಮಾನುಗಳ ಮೇಲೆ ಆಮದು-ಕರಗಳನ್ನು ಏರಿಸಿದ್ದರಿಂದ ಅವುಗಳ ಆಮದು ಯಾ ಉಪಯೋಗ ಕಡಿಮೆಯಾಗಲಿಲ್ಲವಂತೆ. ಇವುಗಳ ವಿಮರ್ಶೆಯಿಂದ ಕೋಶಾಧ್ಯಕ್ಷರು ಸಿದ್ಧಾಂತ ಮಾಡಿರುವದೇನೆಂದರೆ— "ಈ ಮುಂದೆ ಕರಹೇರಿಕೆಯ ಪ್ರಸಂಗ ಬಂದರೆ, ಎಲ್ಲ ಜನರ ಮೇಲೆ ಬೀಳುವಂಥ— ೩೫ ಕೋಟಿ ಪ್ರಜೆಗಳ ಮೇಲೆ ತಲೆಗೊಂದಕ್ಕೆ, ಕೆಲವು ಆಣೆಗಳು ಕರಗಳನ್ನು ಹೇರಬೇಕು. ವಿಶಿಷ್ಟ ವರ್ಗದ ಮೇಲೊಂದೇ ಕರ ಹೇರುವದು ಇನ್ನು ಮುಂದೆ ಸಾಕು. ಈ ನನ್ನ ಸಿದ್ಧಾಂತವು ಲೋಕಪ್ರಿಯವಾಗಲಿಕ್ಕಿಲ್ಲ, ಆದರೆ ಹಿಂದುಸ್ಥಾನದ ಸಾಂಪತ್ತಿಕ ಸ್ಥಿತಿಯ ಬಗ್ಗೆ ಆತುರ ಪಡುವವರು ಧೀರ್ಘ ವಿಚಾರ ಮಾಡಬೇಕು."

⁂

ಕಳೆದ ಸಪ್ಟಂಬರ ತಿಂಗಳಲ್ಲಿ ನೆರೆದ ಮುಂಬಯಿ ಪ್ರಾಂತಿಕ ಕಾಯಿದ ಕೌನ್ಸಿಲಿನ ಅಧಿವೇಶನಕ್ಕೆ ೭೨ ಸಾವಿರ ಖರ್ಚು ಬಂತು. ಮೆಂಬರ ಜನರಿಗೆ ಕೊಟ್ಟ ಪ್ರವಾಸ ಭತ್ತೆ ಮತ್ತು ದೈನಿಕ ಭತ್ತೆಯೇ ೧೭| ಸಾವಿರ ರೂಪಾಯಿಯಾಯಿತು!

⁂

ಸ್ಥಾನಿಕ ಸ್ವರಾಜ್ಯದ ಅಧಿಕಾರ!

ಅಹಮದಾಬಾದ ಮ್ಯುನಿಸಿಪಾಲಿಟಿಯು ರಾಷ್ಟ್ರೀಯ ಪಕ್ಷದ್ದೆಂಬುದು ಎಲ್ಲರೂ ಅರಿತಿರುವರು. ಸರಕಾರಿ ಲೆಕ್ಕತಪಾಸಕರು ಕೆಲವು ಕಾಲ ಹಿಂದೆ ಮ್ಯುನ್ಸಿಪಾಲಿಟಿಯ ಲೆಕ್ಕ ತಪಾಸ ಮಾಡಿ, ಈ ಕೆಳಗಿನ ಖರ್ಚಿನ ಬಾಬುಗಳಿಗೆ ಆಕ್ಷೇಪ ಕೊಂಡಿರುವರು —

(೧) ಹೋದ ಸತ್ಯಾಗ್ರಹದ ಚಳವಳಿಯಲ್ಲಿ ಸೆರೆಮನೆಗೆ ಹೋದ "ರಂಬ ಮತ್ತು ಟ್ಯಾಕ್ಸಗಳ ಸುಪರಿಂಟೆಂಡೆಂಟರಿಗೂ, ಮ್ಯುನ್ಸಿಪಾಲಿಟಿಯ ಲೆಕ್ಕತಪಾಸಕರಿಗೂ ಕೊಟ್ಟ ಪಗಾರ.

(೨) ವಿದೇಶಿ ವಸ್ತ್ರಗಳ ಬಹಿಷ್ಕಾರ ಚಳವಳಿಯ ಬಗ್ಗೆ ಕಡಿಮೆ ಬಾಡಿಗೆಯಿಂದ ಮ್ಯುನ್ಸಿಪಾಲಿಟಿಯ ಒಂದು ಅಂಗಡಿ ಕೊಟ್ಟಿದ್ದು;

(೩) ಕಳೆದ ಸತ್ಯಾಗ್ರಹ ಸಂಗ್ರಾಮದ ಕಾಲಕ್ಕೆ ಕಾಂಗ್ರೆಸ ಆಸ್ಪತ್ರೆಗೆ ಕೊಟ್ಟ ಗ್ರಾಂಟು,

(೪) ಮ್ಯು|ಯ. ಬಿಲ್ಡಿಂಗದ ಮ್ಯು|ಯ ಇಮಾರತುಗಳ ಮೇಲೆ ರಾಷ್ಟ್ರಧ್ವಜ ಹಚ್ಚಿದ್ದು.

ಈ ಬಾಬುಗಳ ಬಗ್ಗೆ ಸಮಾಧಾನಕರವಾದ ಉತ್ತರ ಕೊಡದಿದ್ದರೆ, ಮ್ಯು|ಯ ಮೇಲೆ ಸರಕಾರದವರು " ಡಿಸಿಪ್ಲಿನರಿ ಎಕ್ಶನ್ " ತಗೊಳ್ಳುವ ವಿಚಾರದಲ್ಲಿರುವರಂತೆ! ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಇರುವ ಸ್ವಾಯತ್ತತೆಯ ಸೀಮೆಯು ಎಲ್ಲಿಯದೆಂದು ಇದರ ಮೇಲಿಂದ ಸ್ಪಷ್ಟವಾಗುವದಿಲ್ಲವೇ?

⁂

ಮುಂಬಯಿಯ ವರ್ತಕರ ಸಭೆಗೆ ಬಂದಿ!

ರಾಜಶಾಸನಗಳ ಮೂಲಕ ವ್ಯಾಪಾರಕ್ಕೆ ಹೇರಳ ಹಾನಿಯಾಗುತ್ತದೆಂತಲೂ, ಜನತೆಯಲ್ಲಿ ಶಾಂತತೆ ನೆಲೆಗೊಳ್ಳಲಿಕ್ಕೆ ಮಹಾತ್ಮಾಜಿ ಪ್ರಭೃತಿಯವರ ಬಿಡುಗಡೆ ಮಾಡುವದು ಅವಶ್ಯವೆಂತಲೂ ಸರಕಾರಕ್ಕೇ ಎಚ್ಚರಿಕೆ ಕೊಡುವ ಬಗ್ಗೆ ಮುಂಬಯಿಯ ಅನೇಕ ವ್ಯಾಪಾರಿಗಳ ಸಂಘಗಳು ವರ್ತಕರದೊಂದು ದೊಡ್ಡ ಸಭೆ ಕೂಡಿಸಬೇಕೆಂದು ಅನೇಕ ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದವು. ಅನೇಕ ತೊಂದರೆಗಳ ಮೂಲಕ ಇಷ್ಟು ದಿನ ಆ ಸಭೆ ಕೂಡಿದ್ದಿಲ್ಲ. ಕೊನೆಗೆ ಮಾರ್ಚ ತಾ. ೮ಕ್ಕೆ ಸಭೆ ಸೇರಬೇಕೆಂದು ನಿರ್ಣಯವಾಗಿ ಸಭಾಮಂದಿರದ ವ್ಯವಸ್ಥೆಗೆ ಪ್ರಾರಂಭವಾಯಿತು. ಮೊಟ್ಟಮೊದಲು ಸಭೆಯ ವ್ಯವಸ್ಥಾಪಕರು ಸರ್ ಕಾವಸಜಿ ಜಹಾಂಗೀರ ಹಾಲು ಪಡೆಯುವ ಬಗ್ಗೆ ಪ್ರಯತ್ನ ಮಾಡಿದರು. ಈ ಸಭಾಮಂದಿರವು ಸರಕಾರದ ವಶವಾಗಿ ಮುಂಬಯಿಯ ಎಗ್ಸಿಕ್ಯೂಟಿವ್ಹ ಇಂಜನಿಯರರ ವಶಾ ಇರುತ್ತದ ಅವರು ಸಭೆಗಾಗಿ ಮಂದಿರವನ್ನು ಕೊಡಬರುವದಿಲ್ಲವಾಗಿ ತಿಳಿಸಿದರು. ಬೇರೆ ಬೇರೆ ಸಭಾಸ್ಥಾನಗಳನ್ನು ದೊರಕಿಸುವದಕ್ಕಾಗಿ ಪ್ರಯತ್ನಗಳು ನಡೆದವು, ಆದರೆ, ಎಲ್ಲೂ ಸಭಾಮಂದಿರ ಸಿಗಲಿಲ್ಲ; ನಾಟಕ ಮಂದಿರಗಳ ಮಾಲೀಕರು ಸಹ ತಮ್ಮ ಮಂದಿರಗಳನ್ನು ಕೊಡಲಿಕ್ಕೆ ಒಪ್ಪಲಿಲ್ಲ. ಆದ್ದರಿಂದ " ಇಂಡಿಯನ್ ಮರ್ಚಂಟ್ಸ ಚೇಂಬರ " ಸಂಸ್ಥೆಯ ಮಂದಿರದಲ್ಲೇ — ಮಂದಿರವು ಸಾಕಷ್ಟು ದೊಡ್ಡದಲ್ಲದಿದ್ದರೂ — ಸಭೆ ಕೂಡಿಸುವದು ಗೊತ್ತಾಯಿತು. ಕೂಡಲೆ, ಮುಂಬಯಿಯ ಪೋಲೀಸ ಕಮಿಶನರರು ಸದರ ಸಭೆಗೆ ಪ್ರತಿಬಂಧ ಮಾಡುವರೆ ರಾಜಶಾಸನಗಳನ್ವಯ ಹುಕುಮು ಹೊರಡಿಸಿ ಅದನ್ನು ಸಭೆಯ ನಿಯುಕ್ತ ಅಧ್ಯಕ್ಷರ ಮೇಲೂ, ಸಭೆಯಲ್ಲಿ ಮಾತಾಡಬಯಸುವ ಯಾ ಭಾಗ ತಕ್ಕೊಳ್ಳಬಹುದಾದ ಬೇರೆ ೨೦ ಪ್ರಮುಖ ವರ್ತಕರ ಮೇಲೂ ಜಾರಿ ಮಾಡಿದರು. ಹುಕುಮು ಮುರಿದು ಸದರಿ ಸಭೆಯನ್ನು ಸೇರಿಸಕೂಡದೆಂದು ಮುಂಚೆಯೇ ನಿರ್ಣಯವಾದಂತೆ ಸಭೆಯು ಸಂಕಲ್ಪದಂತೆ ಕೂಡಲಿಲ್ಲ.

⁂

ಪೋಲೀಸ ಕಮಿಶನರರ ವ್ಯಾಪಕ ಹುಕುಮು

ಪೋಲಿಸ ಕಮಿಶನರರ ಸದರಿ ಹುಕುಮು ವಿಸ್ತೃತವಾಗಿ ಓದತಕ್ಕಂಥಾದ್ದು ಅದೆ. ಆದ್ದರಿಂದ ಅದನ್ನು ಇದರಡಿಗೆ ಕೊಟ್ಟಿರುತ್ತೇವೆ.—

" ಸಾರ್ವಜನಿಕ ಸುರಕ್ಷಿತತೆಗೂ ಶಾಂತತೆಗೂ ಬಾಧಕವಾಗುವಂತೆ, ಮತ್ತು ಸಾರ್ವಜನಿಕ ಸುರಕ್ಷಿತತೆಗೂ ಶಾಂತತೆಗೂ ಬಾಧಕವಿರುವ ಚಳವಳಿಯ ಪುರಸ್ಕಾರಕ್ಕೆ ನೀವು ಪ್ರಸಿದ್ಧರೆಂತಾಗಲಿ, ವರ್ತಿಸುವವರಿದ್ದೀರೆಂತಾಗಲಿ ಮುಂಬಯಿಯ ಪೋಲಿಸ ಕಮಿಶನರರಾದ ಸರ ಪೆಟ್ರಿಕ ಕೆಲಿ ಎಂಬ ಹೆಸರುಳ್ಳ ನನಗೆ ಖಾತ್ರಿಲಾಯಕ ತಿಳಿದು ಬಂದಿದೆ. ಆದ್ದರಿಂದ ನಾನು, ನನಗೆ ಸಿಕ್ಕ ಅಧಿಕಾರಗಳ ಅನ್ವಯ, ನಿಮಗೆ ಈ ಮುಂದಿನ ಹುಕುಮು ಮಾಡುತ್ತೇನಲ್ಲಾ — ನೀವು ಕಾಯದೇಭಂಗದ ಚಳವಳಿಯನ್ನು ಪುರಸ್ಕರಿಸುವ ಯಾವದೇ ಕೃತಿಯನ್ನು ಮಾಡಕೂಡದು. ವಿಶೇಷತಃ ಯಾವ ಸಭೆಯಲ್ಲಿ ಮುಂಬಯಿ ಸರಕಾರದ, ಅಥವಾ ಬ್ರಿಟಿಷ ಹಿಂದುಸ್ಥಾನದಲ್ಲಿ ಕಾಯದೆಯಂತೆ ಸ್ಥಾಪನ ಹೊಂದಿದ ಬೇರೆ ಯಾವದೇ ಸರಕಾರದ, ಕಾಯದೆಶೀರ ಕೃತಿಗಳ ಬಗ್ಗೆ ಯಾ ಫರ್ಮಾನುಗಳ ಬಗ್ಗೆ, ತಕ್ರಾರು, ತಿರಸ್ಕಾರ ಯಾ ಅಮಾನ್ಯತೆ ಪ್ರದರ್ಶಿಸಲ್ಪಡುವದೋ, ಅಥವಾ ಇಂಥ ಕೃತ್ಯಗಳನ್ನು ಯಾ ಫರ್ಮಾನುಗಳನ್ನು ರದ್ದುಪಡಿಸಬೇಕೆಂತಾಗಲಿ, ಹಿಂತೆಗೆದುಕೊಳ್ಳಬೇಕೆಂತಾಗಲಿ ವಿಚಾರಸು ಮಾಡಲಾದೀತು, ಪುರಸ್ಕರಿಸಲಾದೀತು, ಸೂಚಿಸಲಾದೀತು ಯಾ ಉಪದೇಶಿಸಲಾದೀತೋ ಅಂಥ ಸಭೆ, ಅದಾ ಯಾವ ಸಭೆಯಲ್ಲಿ ಈ ರೀತಿಯ ಕೃತ್ಯಗಳು ಆಗುತ್ತವೆ ಯಾ ಮಾಡುವ ಸಂಕಲ್ಪವಿದೆ ಅಂಥ ಸಭೆ, ಆ ಸಭೆಯು ಮಾರ್ಚ ತಾ. ೮ಕ್ಕೆ ಕೂಡಲಿ, ಮುಂಚೆ ಕೂಡಲಿ ಯಾ ಆ ಬಳಿಕ ಕೂಡಲಿ. ಯಾವದೇ ಕಾಲಕ್ಕೆ ಯಾವದೇ ಸ್ಥಳದಲ್ಲಿ ಕೂಡಲಿ, ಈ ಕೆಳಗೆ ಕಾಣಿಸಿದ ಎಲ್ಲ ಸಂಘಗಳ ಯಾ ಅವುಗಳ ಪೈಕಿ ಯಾವದೇ ಸಂಘದ ವಿದ್ಯಮಾನ ಯಾ ನಿಮಂತ್ರಣೆಯ ಮೇರೆಗೆ ಕೂಡಲಿ, ಆ ಸಭೆಯನ್ನು ಕರೆಯುವದರಲ್ಲಾಗಲಿ, ಕೂಡಿಸುವದರಲ್ಲಾಗಲಿ. (ಸಭೆಗೆ) ಹೋಗುವದರಲ್ಲಾಗಲಿ ನೀವು ಭಾಗಿಗಳಾಗಕೂಡದು."

[ಹುಕುಮಿನಲ್ಲಿ ೨೭ ಸಂಘಗಳ ಹೆಸರುಗಳು ಕೊಟ್ಟದ್ದು, ಮುಂದ " ವಗೈರೆ" ಎಂತಲೂ ಬರೆದಿದೆ!]

⁂

ರಾಜಶಾಸನಗಳ ಕಾರಭಾರದಲ್ಲಿ ಪ್ರಜೆಗಳ ಉಚ್ಚಾರಸ್ವಾತಂತ್ರ್ಯವೂ ಸಮ್ಮೇಲನ ಸ್ವಾತಂತ್ರ್ಯವೂ ಎಷ್ಟು ಉಳಿದಿದೆಯೆಂಬುವದನ್ನು ಮೇಲೆ ಕೊಟ್ಟ ಹುಕುಮನ್ನು ಚನ್ನಾಗಿ ಪರಿಶೀಲಿಸಿ, ವಾಚಕರೇ ನಿರ್ಣಯಿಸಲಿ.

⁂

ಮುಂಬಯಿಯ ಬಹುತೇಕ ಪೇಟೆಗಳಲ್ಲಿ ಕಳೆದ ವಾರ ಹರತಾಳ! ಹಾ, ಜೀವರಾಜ ನೇಮಾರವರಿಗೆ ಸೆರೆಹಿಡಿದ ಬಗ್ಗೆ ಹರತಾಳ! ಲೋದಿಯನ್ ಕಮಿಟಿಯು ಮುಂಬಯಿಗೆ ಬರುವ ದಿನ, ಅಂದರೆ ಸೋಮವಾರ ಹರತಾಳ! ಮಂಗಳವಾರ-ಬುಧವಾರ-ಗುರುವಾರವೂ ಹರತಾಳ! ಎಷ್ಟು ದಿನ ಹರತಾಳವೆಂತ ತಿಳಿಯದಾಗಿದೆ. ಕೆಲವು ಪೇಟೆಯವರು ಒಂದು ವಾರ ಹರತಾಳವೆಂತಾ ಠರಾವು ಮಾಡಿದ್ದಾರಂತೆ! ಕೆಲವು ಪೇಟೆಯವರು ಠರಾವು ಮಾಡದೇ "ಪರಸ್ಪರಂತೆ" ಅಂಗಡಿ ಬಾಗಿಲುಗಳ ಮುಚ್ಚುತ್ತಿರುವರು. ಕೆಲವು ಪೇಟೆಯವರು ವಾರಕ್ಕೆ ೧-೨ ದಿನ ಅಂಗಡಿ ತೆರೆಯುವ ವ್ಯವಸ್ಥೆಯಿಟ್ಟು, ೨-೩ ವಾರ ಹರತಾಳ ಪಾಲಿಸುವರಂತೆ! ಏನು ಹರತಾಳವೋ!

⁂

ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಇನ್ನು ಕೆಲವು ದಿನಗಳಲ್ಲಿ ಹೊಸ ಅಧ್ಯಕ್ಷರ ಚುನಾವಣೆಯಾಗುವದು. ಅಧ್ಯಕ್ಷಸ್ಥಾನಕ್ಕೆ ಶ್ರೀ| ಲಕ್ಷ್ಮೀದಾಸ ತೈರಸೀಯವರು ಒಬ್ಬ ಉಮೇದ್ವಾರರು ಇದ್ದಾರೆ. ಆದರೆ ಅಧ್ಯಕ್ಷಸ್ಥಾನದ ಬಗ್ಗೆ ಡಾ| ಮಾಲಿನೀಬಾಯಿ ಸುಖಠಣಕರ ಇವರು ಉಮೇದ್ವಾರರಾಗಿ ನಿಲ್ಲುತ್ತಾರಾದರೆ ತಾವು ತಮ್ಮ ಉಮೇದ್ವಾರಿಯನ್ನು ಹಿಂತಿರುಗಿ ತೆಗೊಳ್ಳುತ್ತೇವೆಂತ ತೈರಸೀಯವರು ತಿಳಿಸಿದ್ದಾರಂತೆ. ಮುಂಬಯಿಯಲ್ಲಿ ಮ್ಯು|ಯ ಅಧ್ಯಕ್ಷಸ್ಥಾನದ ಬಗ್ಗೆ ಈತನಕ ಮಹಿಳೆಯರು ನಿಂತಿದ್ದಿಲ್ಲ. ಇತರ ಪುರುಷರೂ ತೈರಸೀಯವರಂತೆ ಸ್ತ್ರೀ-ದಾಕ್ಷಿಣ್ಯ-ಹಿಡಿದರೆ, ಡಾ| ಮಾಲಿನೀಬಾಯಿಯವರು ಮುಂಬಯಿ ಮ್ಯು| ಯ ಪ್ರಥಮ ಸ್ತ್ರೀ-ಅಧ್ಯಕ್ಷರಾಗುವರು!

⁂

ದಕ್ಷಿಣ ಭಾಗದಲ್ಲಿ ೧೫೫೦ ಜನರಿಗೆ ಸೆರೆ !

ಜನವರಿ ತಾರೀಕ ೨೦ರಿಂದ ಈ ತಿಂಗಳ ಮೊದಲನೇ ವಾರದ ತನಕ ಬೆಳಗಾಂವ ಜಿಲ್ಹೆಯಲ್ಲಿ ೩೦೦, ಧಾರವಾಡ ಜಿಲ್ಹೆಯಲ್ಲಿ ೪೧೦, ವಿಜಾಪುರ ಜಿಲ್ಹೆಯಲ್ಲಿ ೩೦೦ ಮತ್ತು ಕಾರವಾರ ಜಿಲ್ಹೆಯಲ್ಲಿ ೩೦೦, ಹೀಗೆ ಒಟ್ಟು ೧೫೫೦ ಜನರು ಸೆರೆಮನೆ ಸೇರಿದರೆಂದು ವಿಜಾಪುರ " ನವಕರ್ನಾಟಕ " ಪತ್ರಿಕೆಯಲ್ಲಿ ಪ್ರಸಿದ್ಧವಾಗಿದೆ.

⁂

ಒಂದೇ ಖಟ್ಲೆಯಲ್ಲಿ ೬೦ ಜನರಿಗೆ ಫಾಶಿ !

ಪೂರ್ವ ಆಫ್ರಿಕೆಯಲ್ಲಿ ಮೊನ್ನೆ ಮೊನ್ನೆ ಒಂದು ಖೂನಿ ಖಟ್ಲೆಯ ನಿಕಾಲೆಯಾಯಿತು. ಮಾಟ-ಮಂತ್ರಗಳಲ್ಲಿ ಆ ದೇಶದ ಜನರಿಗೆ ವಿಶ್ವಾಸ. ಒಂದು ಮುದಿ ಮಾಟಗಾರ್ತಿಯು ಪ್ರಮುಖ ಆರೋಪಿಯ ಹೆಂಡತಿಗೆ ಮಾಟ ಮಾಡಿದಳೆಂದು ಜನರ ನಂಬಿಗೆಯಾಯಿತು. ಹೆಂಡತಿಯು ಹಾಸಿಗೆ ಹಿಡಿದಳು. ನಂತರ ಮಾಟಗಾರ್ತಿಯನ್ನು ಕರೆತಂದು ಮಾಟ ಇಳಿಸಲು ಹೇಳಿದರು, ಆಕೆಯು ಒಪ್ಪಿದಳು. ಮಾಟವನ್ನು ಅರ್ಧಕ್ಕೆ ಇಳಿಸುವಷ್ಟರಲ್ಲಿ ಆಕೆಯು ಓಡಿದಳು. ಅಲ್ಲಿ ನೆರೆದ ಜನಸ್ತೋಮವು ಆಕೆಯನ್ನು ಬೆನ್ನಟ್ಟಿ, ಕಲ್ಲುಗಳಿಂದಲೂ, ಗುದಿಗೆಗಳಿಂದಲೂ ಬಡಿದು ಯಮಸದನಕ್ಕೆ ಅಟ್ಟಿತು. ಈ ಬಗ್ಗೆ ಪ್ರಸ್ತುತ ಖಟ್ಲೆಯಾಯಿತು. ೭೦ ಜನರು ದೋಷಿಗಳೆಂದು ನಿರ್ಣಯವಾಗಿ, ೬೦ ಜನರಿಗೆ ದೇಹಾಂತ ಶಿಕ್ಷೆ ವಿಧಿಸಲಾಗಿದೆ! ಬಾಕಿ ೧೦ ಜನರು ೧೬ ವರ್ಷಕ್ಕೂ ಕಡಿಮೆ ಪ್ರಾಯದವರಿರುವದರಿಂದ ಅವರು ಸರಕಾರಕ್ಕೆ ಇಷ್ಟವಿರುವ ತನಕ ಕಾರಾಗಾರದಲ್ಲಿ ಕೊಳೆಯುತ್ತಿರಬೇಕಾಗಿ ಶಿಕ್ಷೆ ಹೇಳಲಾಗಿದೆ

⁂

ಲಗ್ನದಲ್ಲೊಂದು ವಿಘ್ನ

ಬೆಂಗಳೂರ ಸ್ಟೇಶಂ ಮಲ್ಲೇಶ್ವರದಲ್ಲಿ ಒಂದು ಲಗ್ನವಾಯಿತು. ಊರ ಜನರಿಗೊಂದು ಔತಣವಾಯಿತು. ನೂರಿನ್ನೂರು ಜನರು ಊಟಕ್ಕೆ ಬಂದಿದ್ದರು. ಊಟ ತೀರಿ ಕೆಲವು ಹೊತ್ತು ಕಳೆಯುವಷ್ಟರಲ್ಲಿ ಎಲ್ಲರಿಗೂ ವಾಂತಿಯಾಗಲು ಪ್ರಾರಂಭವಾಯಿತು! ವೈದ್ಯರು ಬಂದು ಉಪಚಾರ ಮಾಡಿದರು. ಕೆಲವು ಜನರು ನೆಟ್ಟಗಾದರು, ೬೦ ಜನರು ಹಾಸಿಗೆ ಹಿಡಿದರು! ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಲಿದ್ದಾರೆ! ಅಡಿಗೆಗೆ ಉಪಯೋಗಿಸಿದ ತಾಂಬ್ರದ ಪಾತ್ರೆಗಳ ವಿಷದಿಂದ ಈ ಅವಸ್ಥೆಯಾಗಿರಬೇಕೆಂದು ತರ್ಕ! ಊಟದಲ್ಲಿ ಉಪಯೋಗಿಸಿದ ಸಾಮಾನುಗಳನ್ನು ತಪಾಸಣೆ

(೯ನೇ ಪಾನಿನಮೇಲೆ ಮುಂದರಿಸಿದೆ)

ಸತ್ಯಾಗ್ರಹದ ವಾರ್ತೆ.

ಗಡಿನಾಡಿನ ಸುದ್ದಿ.

ಮರದಾನದ ಇಬ್ಬ ವಕೀಲರಿಗೆ ಡಿಸೆಂಬರ ತಾ ೨೬ಕ್ಕೆ ಕೈದು ಮಾಡಿದ್ದರು; ಅವರು ಜಾಮೀನು ಕೊಡಲಿಕ್ಕೆ ತಯಾರಾಗದ್ದರಿಂದ "ಫ್ರಂಟಿಯರ ಕ್ರಿಮಿನಲ್ಸ ರೆಗ್ಯುಲೇಶನ"ನ ಕಲಂ ೪೦ರನ್ವಯ ಅವರಿಗೆ ಅನುಕ್ರಮವಾಗಿ ೩ ೩ ವರ್ಷಗಳ ಶಿಕ್ಷೆ ವಿಧಿಸಲಾಯಿತು "ನವಜವಾನ ಅಫಗಾಣ" ಪತ್ರಿಕೆಯ ಸಂಪಾದಕರಿಗೆ ಕೈದು ಮಾಡಿದ್ದರು, ಈಗ ಅವರು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ ಮೌ| ಶೌಕತ ಅಲ್ಲಿಯವರು ಗಡಿನಾಡಿನ ಸಂಚಾರಕ್ಕೆ ಹೋಗಿದ್ದರು ಅವರು ಚರಸದ್ದಾಕ್ಕೆ ಹೋದಾಗ ಕೊಂಗ್ರೆಸ ಪಕ್ಷದವರು ನಿಷೇಧಪ್ರದರ್ಶನಕ್ಕೆ ಹೊರಬಿದ್ದರು. ಆ ಪೈಕಿ ೬೦ ಜನ ಕೆಂಪಂಗಿಯವರಿಗೆ ಪೋಲೀಸರು ಕೈದು ಮಾಡಿದರು, ಬಾಕಿ ನೂರಿನ್ನೂರು [illegible] ಜನರನ್ನು ಚದರಿಸಿದರು

ಕಳೆದ ಸೋಮವಾರ ಸರಕಾರಿ ಪ್ರಕಟಣೆಯಿಂದು ಹೊರಬಿದ್ದ ತುರಂಗಜಾಯಿಯ ಹಾಜಿಯು [illegible] ಸಂಬಂಧವಂತೆ' ಈ ಹಾಜಿಯೂ [illegible] ಫಕೀರನೂ ಹಿಂದುಸ್ಥಾನ ಸರಹದ್ದಿನ ಮೇಲೆ ದಂಗೆ ಎಬ್ಬಿಸುವ ಉದ್ದೇಶದಿಂದ ಶಸ್ತ್ರವನ್ನು ಕೂಡಿಸ ಹತ್ತಿದಂತೆ' ಗಡಿನಾಡಿನೊಳಗಿನ ಕೊಂಗ್ರೆಸ ಜನರಿಗೂ ಈ ಪುಂಡರಿಗೂ ನಿಕಟ ಸಂಬಂಧವಿರುವವಂತೆ! ದುರ್ದೈವ ಎಂದರೆ ಪಾಪ ಧಂಗೆಗೂ ಅನುಕೂಲ ಪ್ರಸಂಗ ತಿಳ್ಳುವದೇ, ಈ ಜನರು ದಂಗೆ ಎಬ್ಬಿಸಲು ಹಿಂದೆ ಮುಂದೆ ನೋಡಲಿಕ್ಕಿಲ್ಲವಂತೆ! ಸರಕಾರದ ವಿರುದ್ಧ ಜನರನ್ನು ಕೂಡಲೆ ನಿಲ್ಲಿಸಬಿಡ್ಡರು. ದಂಗೆಗಾರ ಜನರ ಊರುಗಳ ಮೇಲೆ ಆಕಾಶದೊಳಗಿಂದ ಬಾಂಬುಗಳ ಮಳೆ ಸುರಿಸುವೆವೆಂದು ಸರಕಾರದವರು ಎಚ್ಚರಿಕೆ ಕೊಟ್ಟಿರುವರು.

ಪಂಜಾಬದ ಸುದ್ದಿ

ಮಾರ್ಚ ತಾ ೯ನೇಗೆ ಲಾಹೋರದಲ್ಲಿ ೨೦ನೇ ಸರ್ವಾಧಿಕಾರಿಗೂ, ಮೂವರು ಹೆಂಗಸರಿಗೂ, ಬೇರೆ ೧೬ ಜನರಿಗೂ ಸೆರೆಹಿಡಿದರು ಪಿಕೆಟಿಂಗ ಮಾಡುವದಕ್ಕೆ ಹೋಗುವಾಗ ಇಬ್ಬ ಶಿಖರಿಗೂ, ಇಬ್ಬ ಮಹಿಳೆಯರಿಗೂ ಕೈದು ಮಾಡಿದರು. ಆ ಮೇಲೆ ೫೦ ಜನರಾದ ಸ್ವಯಂಸೇವಕರದೊಂದು ಮೆರವಣಿಗೆ ಹೊರಟಿತು ಮೆರವಣಿಗೆಯು ವೇಗದಿಂದ ಸಾಗುತ್ತಿತ್ತು. ಪೋಲೀಸರು ಬೆನ್ನಟ್ಟಿದರು, ೪ ಸ್ವಯಂಸೇವಕರನ್ನು ಕೈದು ಮಾಡಿದರು ಪೋಲೀಸರಿಗೂ, ಇವರಿಗೂ ಜಟಾಜಟ್ಟಿಯಾಗುವದು ನೋಡನಿಂತ ಜನಸಮೂಹಕ್ಕೆ ಪೋಲೀಸರು ಚದರಿ ಹೋಗಲಿಕ್ಕೆ ಹುಕುಮು ಮಾಡಿದರು. ಕೆಲವರು ಹೋದರು. ಚದರಿಹೋಗದ ಅಜಮಾಸ ೫೦ ಜನರಿಗೆ ಶಿಕ್ಷೆಯಾಯಿತು ತಾ. ೭ಕ್ಕೆ ಪಿಕೆಟಿಂಗ ಮಾಡಿದ ಬಗ್ಗೆ ೧೦ ಸ್ವಯಂಸೇವಕರಿಗೆ ಹಿಡಿದರು ದೈನಿಕ "ಜಮೀನದಾರ" ಪತ್ರಿಕೆಯ ರೂ. ೧೦೦೦ ಜಾಮೀನಿನ ರಕಮು ಸರಕಾರ ಜಪ್ತಾ ಮಾಡಲ್ಪಟ್ಟಿದೆ. [illegible] ಸಹೋದರಿಯರಿಗೆ ಮೆರವಣಿಗೆಗಳಲ್ಲಿ ಭಾಗ ಕೊಂಡ ಬಗ್ಗೆ ೧-೧ ವರ್ಷದ ಸಜೆ, ೫೦-೫೦ ರೂ. ದಂಡ ವಿಧಿಸಲಾಗಿದೆ.

ದಿಲ್ಲಿಯ ಸುದ್ದಿ

ರೌಂಡ ಟೇಬಲ ಪರಿಷತ್ತಿನಲ್ಲೂ ಇತರ ಕಡೆಯಲ್ಲೂ ಸರಕಾರದವರ ಕೂಡ ಸಹಕಾರ ಮಾಡಿ ಏನೂ ಫಲ ನಿಷ್ಪನ್ನವಾಗಿಲ್ಲವಂತೆ. ಗಡಿನಾಡಿನಲ್ಲಿ ಮುಸಲ್ಮಾನ ಬಾಂಧವರಿಗೆ ಸರಕಾರವು ಪೀಡಿಸುತ್ತಿರುವದಂತೆ ಆದ್ದರಿಂದ ಈ ಮುಂದ ಕಾಂಗ್ರೆಸಿನ ಹಾದಿಯಿಂದಲೇ ನಡೆಯಿರೆಂದು ಜಮಾಯತ-ಉಲ್-ಉಲೇಮಾದ ಅಧ್ಯಕ್ಷ ಮುಫ್ತಿ ಕಿಫಾಯತುಲ್ಲಾರವರು ತಮ್ಮ ಧರ್ಮಬಾಂಧವರಿಗೆ ಬೋಧಿಸಹತ್ತಿದ್ದಾರೆ. ಉಲೇಮಾರ ಜಮಾಯತ್ತು ತಮ್ಮ ಕಾರ್ಯಕಾರಿ ಮಂಡಳ ವಿಸರ್ಜನೆ ಮಾಡಿ, ಅಧ್ಯಕ್ಷರಿಗೆ ಸರ್ವಾಧಿಕಾರ ಕೊಟ್ಟಿದೆ. ಮುಫ್ತಿ ಸಾಹೇಬರಿಗೆ ಭಾಷಣಗಳನ್ನು ಮಾಡಕೂಡದೆಂತಲೂ, ಪ್ರಕಟನೆಗಳನ್ನು ಹೊರಡಿಸಬಾರದೆಂತಲೂ ರಾಜಶಾಸನದನ್ವಯ ಹುಕುಮವಾಗಿದೆ. ಮುಫ್ತಿ ಸಾಹೇಬರು ಹುಕುಮು ಸ್ವೀಕರಿಸಲಿಲ್ಲ. ಹುಕುಮು ಮನೆ ಗೋಡೆಗೆ ಅಂಟಿಸಲಾಯಿತು. ಮುಫ್ತಿ ಸಾಹೇಬರು ಹುಕುಮು ಉಲ್ಲಂಘಿಸಿ ರಾಣಿಬಾಗದಲ್ಲಿ ಸಭೆ ಸೇರಿಸಿದ್ದರು, ಮುಫ್ತಿ ಸಾಹೇಬರಿಗೆ ಸೆರೆಹಿಡಿದರು. ಸಭೆ ಸೇರಿದ ಜನರಿಗೆ ಚದುರಹೇಳಿದರು, ಜನರು ಚದರಲಿಲ್ಲ. ದೊಣ್ಣೆ ಪ್ರಹಾರವಾಯಿತು. ಒಬ್ಬನಿಗೆ ವಿಶೇಷ ಘಾಯವಾಗಿದೆ. ಜಮಾಯತ-ಉಲ್-ಉಲೇಮಾದ ಕಚೇರಿಯಲ್ಲೂ, ಮುಫ್ತಿ ಸಾಹೇಬರ ಮನೆಯಲ್ಲೂ ಝಡತಿಯಾಗಿ ಸತ್ಯಾಗ್ರಹ ಕಾರ್ಯಕ್ರಮದ ಕಾಗದ-ಪತ್ರಗಳು ಜಪ್ತಮಾಡಿ ಒಯ್ಯಲ್ಪಟ್ಟಿವೆ.

ಸಂಯುಕ್ತ ಪ್ರಾಂತದ ಸುದ್ದಿ.

ಫೆಬ್ರುವರಿ ತಿಂಗಳ ಕೊನೆಯ ವಾರದಲ್ಲಿ ಕಾನಪುರದೊಳಗೆ ೧೫೫ಕ್ಕೂ ಹೆಚ್ಚು ಖಟ್ಲೆ ನಡೆದವು ಇಬ್ಬರಿಗೆ ಎಚ್ಚರಿಕೆ ಕೊಟ್ಟು ಬಿಟ್ಟರು, ಬಾಕಿಯವರಿಗೆ ಶಿಕ್ಷೆಯಾಗಿ ಜಾಮೀನ ಸಜೆಯಾಯಿತು ತಾ. ೩ಕ್ಕೆ ಕೆಲವು ಹುಡುಗರು ಪ್ರಯಾಗದೊಳಗಿನ "ಗಡಿಯಾರದ ಸ್ತಂಭ"ದ ಬಾಗಿಲು ಮುರಿದು ಮೇಲೆ ಹತ್ತಿ ರಾಷ್ಟ್ರಧ್ವಜ ಹಚ್ಚಿದರು ಈ ಕುರಿತು, ಅಕ್ರಮ ಪ್ರವೇಶ ಹಾಗೂ ಬೇಕಾಯಿದೇಶೀರ ಸಂಸ್ಥೆಗೆ ಸಹಾಯ ಮಾಡಿದ ಆರೋಪದ ಮೇಲೆ ಮೂವರಿಗೆ ಕೈದು ಮಾಡಿದ್ದಾರೆ ಕಾನಪೂರದ ಪ್ರಸಿದ್ಧ ಕಬ್ಬಿಣದ ವರ್ತಕರಿಗೆ ಊರ ಬಿಟ್ಟು ಹೋಗಬೇಕೆಂದು ಅಪ್ಪಣೆಯಾಯಿತು. ಹುಕುಮನ್ನು ಮನ್ನಿಸದ್ದರಿಂದ ಅವರಿಗೆ ಸೆರೆಹಿಡಿದಿರುವರು ಪಂ| ಜವಾಹಿರಲಾಲರ ಬಾಕಿ ಉಳಿದ ದಂಡದ ವಸೂಲಿಯ ಬಗ್ಗೆ ಅವರ ಮೋಟಾರ ಗಾಡಿಯನ್ನು ಜಪ್ತ ಮಾಡಿದ್ದಾರೆ ರಾಜಶಾಸನದಂತೆ ತಮಗಾದ ಹುಕುಮು ಮುರಿದು ಭಾಷಣ ಮಾಡಲಿಕ್ಕೆ ತೊಡಗಿದ ಒಲ್ಡ ಆಲ್ ಇಂಡಿಯಾ ಕಾಂಗ್ರೆಸ ಕಮೀಟಿಯ ಮಾಜಿ ಸಹಾಯಕ ಕಾರ್ಯದರ್ಶಿ ಶ್ರೀ| ರಾಮಕುಮಾರ ಶಾಸ್ತ್ರಿ ಇವರಿಗೆ ಭಾಷಣ ಮಾಡುತ್ತಿರುವಾಗಲೇ ಕೈದು ಮಾಡಿದರು. ತಾ ೪ಕ್ಕೆ "ಗಾಂಧಿ ದಿನ"ದ ಬಗ್ಗೆ ಕಾನಪೂರದಲ್ಲಿ ಹರತಾಳವಾಯಿತು. ಒಂದು ಸಣ್ಣ ಮೆರವಣಿಗೆ ಹೊರಟಿತ್ತು, ಪೋಲಿಸರು ಬರುವಷ್ಟರಲ್ಲಿ ಚದರಿ ಹೋಯಿತು ರಾತ್ರಿ ಸಮಯ, [illegible] ಸರ್ವಾಧಿಕಾರಿಯು ಕೆಲವರ ಜೊತೆಗೆ ರಾಷ್ಟ್ರೀಯ ಪದ್ಯಗಳನ್ನು ಹಾಡುತ್ತ ಹೊರಬಿದ್ದನು. ಅವನಿಗೆ ಕೈದು ಮಾಡಿದರು. ಹಾಪೂರ ಮ್ಯುನಿಸಿಪಾಲಿಟಿಯ ಹಾಗೂ ಮಿರತ ಜಿಲ್ಹಾ ಬೋರ್ಡಿನ ಮೆಂಬರರೊಬ್ಬರಿಗೆ ರಾಜಶಾಸನದನ್ವಯ ಅಂತು ೧ ವರ್ಷದ ಸಶ್ರಮ ಶಿಕ್ಷೆ ಮತ್ತು ರೂ. ೧೦೦೦ ದಂಡವಾಯಿತು

ಮಾರ್ಚ ತಾ. ೭ರ ತನಕ ಸಂಯುಕ್ತ ಪ್ರಾಂತದಲ್ಲಿ ೬೪೭೧ ಜನರಿಗೆ ಶಿಕ್ಷೆಯಾಯಿತೆಂದು ಸರಕಾರಿ ಪ್ರಕಟಣೆಯ ಮೇಲಿಂದ ತಿಳಿಯುತ್ತದೆ. ತೀರ್ವೆ ವಸೂಲಿಯು ಸಮಾಧಾನಕಾರಕವಿರುತ್ತದಂತೆ. ಲಖನೌ ಶಹರದಲ್ಲಿ ೫ ಬಾಂಬುಗಳ ಅತ್ಯಾಚಾರಗಳಾದವು; ಆದರೆ, ಹೆಚ್ಚಿನ ಅಪಘಾತವಾಗಲಿಲ್ಲ. ಕಾನಪೂರ ಹೊರತು ಬೇರೆ ಎಲ್ಲ ಕಡೆಯಲ್ಲಿ ಶಾಂತತೆಯು ನೆಲೆಗೊಂಡಿದೆಯೆಂದು ಸರಕಾರಿ ವರದಿಯು.

ತಾ ೮ಕ್ಕೆ ಕಾಶಿಯಲ್ಲಿ ಕೊಂಗ್ರೆಸ ಶಿಬಿರವನ್ನು ಮುತ್ತಿ ಪೋಲೀಸರು ೭ ಗಂಡಸರಿಗೂ, ೬ ಹೆಂಗಸರಿಗೂ ಕೈದು ಮಾಡಿದರು. ೪ ಜನ ಹೆಂಗಸರಿಗೆ ವಿದೇಶಿ ಜವಳಿ ಅಂಗಡಿಗಳ ಮುಂದೆ ಕಾವಲು ಮಾಡುವಾಗ ಸೆರೆಹಿಡಿದರು

ತಾ. ೯ನೇಗೆ ಶ್ರೀ| ಪ್ರಸಿದ್ಧನಾರಾಯಣ ಆನಂದ ಇವರ ಖಟ್ಲೆಯ ವಿಚಾರವಾಗಿ ಬೇಕಾಯಿದೇಶೀರ ಸಂಸ್ಥೆಗೆ ಸಹಾಯ ಮಾಡಿದ ಆರೋಪದ ಮೇಲೆ ರೂ. ೧೦೦ ದಂಡ ಯಾ ೧ ತಿಂಗಳ ಸಶ್ರಮ ಶಿಕ್ಷೆ ವಿಧಿಸಲಾಯಿತು. ಅದೇ ದಿನ ಬೇರೆ ೩೪ ಜನರಿಗೆ ೬-೬ ತಿಂಗಳ ಸಶ್ರಮ ಶಿಕ್ಷೆಯಾಯಿತು.

ಮುಂಬಯಿಯ ಸುದ್ದಿ.

ತಾ ೩ನೇಗೆ ಡಾ| ಜೀವರಾಜ ಮೇಥಾರವರಿಗೂ ಅವರ ಧರ್ಮಪತ್ನಿಯರಾದ ಶ್ರೀ| ಹಂಸಾ ಮೇಥಾರವರಿಗೂ ಸಂಶಯದ ಮೇಲೆ ಸೆರೆಹಿಡಿದರು. ಡಾ| ಜೀವರಾಜರವರು "ಗೋವರ್ಧನದಾಸ ಮೆಡಿಕಲ್ ಕಾಲೇಜ"ನ ಮುಖ್ಯಾಧ್ಯಾಪಕರು. ಹಂಸಾಬಾಯಿಯವರು ೧೯೩೦ರಲ್ಲಿ ಮುಂಬಯಿಯ "ಯುದ್ಧ ಮಂಡಳ"ದ ಸರ್ವಾಧಿಕಾರಿಗಳಾಗಿದ್ದರು ಶ್ರೀ| ಯುಸುಫ ಮೆಹೆರ ಅಲ್ಲೀ ಮತ್ತು ಪಂಡಿತ ಮುಕುಂದ ಮಾಲವೀಯರಿಗೆ ಮಧ್ಯಾಹ್ನ ೩||| ಘಂಟೆಗೆ ಬಿಟ್ಟರು, ೪ ಘಂಟೆಗೆ ಪೋಲೀಸ ಕಚೇರಿಯಲ್ಲಿ ಹಾಜರಾಗಹೇಳಿದರು ! ಇವರೀರ್ವರೂ ಗಾಡಿ ಹತ್ತಿ ಮಾರ್ಕೇಟ ಬದಿಗೆ ಹೋದರು ಮತ್ತು ಭಾಷಣ ಮಾಡಹತ್ತಿದರು, ಇಬ್ಬರಿಗೂ ಸೆರೆಯಾಯಿ[illegible] ಮರು ದಿನ ಖಟ್ಲೆ ನಡೆದು ೧-೧ ವರ್ಷದ ಸಜೆ ಮತ್ತು ದಂಡವಾಯಿತು. ದಂಡ ವಸೂಲಿಯ ಬಗ್ಗೆ ಮೆಹೆರ ಅಲ್ಲಿಯವರ ಮನೆಯಲ್ಲಿ ಝಡತಿಯಾಗಿ ಕೆಲವು ಸಾಮಾನು ಜಪ್ತ ಮಾಡಿ ಒಯ್ದರು ತಾ ೪ನೇಗ ಪ| ವಾ| ದಾದಾಭಾಯಿ ನವರೋಜಿಯವರ ಮೊಮ್ಮಕ್ಕಳಾದ ಶ್ರೀ| ಜೇ. ಎ ಡಿ ನವರೋಜಿಯವರಿಗೆ ಸಂಶಯದ ಮೇಲೆ ಸೆರೆಹಿಡಿದರು ನವರೋಜಿಯವರು ಟಾಟಾ ಕಂಪನಿಗಳ ಡಾಯರೆಕ್ಟರರಾಗಿರುತ್ತಾರೆ. "ಗಾಂಧಿ ದಿನ"ದ ಬಗ್ಗೆ ೨೬ ಜನರನ್ನು ಕೈದು ಮಾಡಿದರು. ತಾ. ೬ಕ್ಕೆ ಶ್ರೀ| ನರಿಮಾನ, ಎಡ್ವೊಕೇಟ ಮುನಶಿ ಮತ್ತು ಪೆರಿನ್ ಕೆಪ್ಟನ್ ಇವರಿಗೆ 'ಪರೋಲ' ಮೇಲೆ ವಿಸಾಪುರ ಜೈಲಿನಿಂದ ಬಿಡುಗಡೆಯಾಯಿತು: ಅವರು ಪೋಲೀಸರಲ್ಲಿ ಹಾಜರಿ ಕೊಡಲಿಲ್ಲ, ಕೂಡಲೆ ಅವರಿಗ ಸೆರೆಯಾಯಿತು ಹುಬ್ಬಳ್ಳಿಯ ಶಹರ ಮೆಜಿಸ್ಟ್ರೇಟರ ಮುಂದೆ ತನಖಿ ನಡೆದು ನರಿಮಾನ-ಮುನಶಿಯವರಿಗೆ ೨-೨ ವರ್ಷಗಳ ಕಠಿಣ ಶಿಕ್ಷೆ, ೨೦೦ ೨೦೦ ರೂ ದಂಡ; ದಂಡ ಕೊಡದಿದ್ದರೆ, ಮೇಲೆ ೬-೬ ತಿಂಗಳ

ದೆ, ಶ್ರೀಮತಿ ಪರಿಣ್‍ಬಾಯಿಯವರಿಗೆ ೧ ವರ್ಷದ ಸಾದಾ ಶಿಕ್ಷೆ ಹಾಗು ರೂ. ೧೦೦ ದಂಡ; ಹೀಗೆ ಶಿಕ್ಷೆ ವಿಧಿಸಲಾಗಿದೆ

ಸೋಮವಾರ ೭ನೇ ದಿನ ಲೋಥಿಯನ್ ಕಮಿಟಿಯು ಮುಂಬಯಿಗೆ ಬಂತು. ಕಮಿಟಿಯ ಆಗಮನದ ಪ್ರೀತ್ಯರ್ಥ ಮುಂಬಯಿಯಲ್ಲಿ ಸಾರ್ವತ್ರಿಕ ಹರತಾಳವಾಗಿತ್ತು. ಬಹುತೇಕ ಶಾಲೆಗಳೂ ಬಂದಾಗಿದ್ದವು. ಎಲ್ಫಿನ್‌ಸ್ಟನ್ ಹೈಸ್ಕೂಲು ಬಂದಾಗಿದ್ದಿಲ್ಲ. ಅದನ್ನು ಬಂದ ಮಾಡಿಸುವ ಉದ್ದೇಶದಿಂದ ಕೆಲ ವಿದ್ಯಾರ್ಥಿಗಳು ಶಾಲೆಯ ಆವಾರದಲ್ಲಿ ನುಗ್ಗಿ ಗುಲ್ಲು ಮಾಡಹತ್ತಿದರು ಕೆಲವರು ಕಲ್ಲು ಒಗೆದರಂತೆ! ಈ ಪೈಕಿಂ ೭ ಮಂದಿಗೆ ಸೆರೆಹಿಡಿದರು. ಒಬ್ಬ ವಿದ್ಯಾರ್ಥಿಯಂತೂ ರಾಜಾಬಾಯಿ ಗೋಪುರ ಹತ್ತಿ, ಅಲ್ಲಿ ರಾಷ್ಟ್ರಧ್ವಜವನ್ನು ಹಚ್ಚಿದನು; "ಸಂಪೂರ್ಣ ಸ್ವಾತಂತ್ರ್ಯಕ್ಕಿಂತ ಕಡಿಮೆ ಸಾಲದು" ಎಂಬ ಇಸ್ತಿಹಾರನ್ನು ಹಚ್ಚಿದನು!

ಸ್ಥಾನಿಕ ವೃತ್ತಾಂತ

(೫ನೇ ಪಾನಿನಿಂದ ಮುಂದವರಿದದ್ದು.)

ಭಟ್ಟರಿಗೆ ಸೆರೆಹಿಡಕೊಂಡು ನಡೆದರು. ಪ್ರಭಾತ ಫೇರಿ ಹೊರಟರೆ ಪೋಲೀಸರು ಫೇರಿಯವರನ್ನು ಹಿಡಿಯುತ್ತಾರೆ, ರಾಷ್ಟ್ರಧ್ವಜ ಕಸಕೊಳ್ಳುತ್ತಾರೆ! ಬಾಸೆಯ ಹಾಕು ಇಟ್ಟುಕೊಂಡು ಜನರನ್ನು ಹಾಸಗೆ ಕಳಿಸುತ್ತಾರೆ! ತಿರುಗಿ ಫೇರಿ ಹೊರಡಿಸಿದರೆ ಹೊಡತ ಕೊಡುವೆವೆಂದು ಬೆದರಿಕೆ ಹಾಕುತ್ತಾರೆ

ತೀರ್ವೆ ವಸೂಲಿಯ ಬಗ್ಗೆ ಆವಾರದಿಂದ ಜಪ್ತಿ ಸ್ವಲ್ಪ ಬಂದಿದೆ. ಅಲ್ಲಲ್ಲಿ ಜಪ್ತಿಗಳಾಗಹತ್ತಿವೆ. 'ಈಗ ಒಂದ ಸ್ವಲ್ಪ ಕಡಿಮೆ! ಬೇಕಾದರೆ ಮಿಲಿಟರಿಯನ್ನು ಕರಿಸುತ್ತೇವೆ" ಎಂದು ಗ್ರಾಮಸ್ಥರು ನುಡಿಯುತ್ತಾರಂತೆ! ಸೊಳಗಿ, ಬಿದ್ರಹಾಳ, ತಾರಗೋಡ, ಇಟಗಿ ಕೇಂದ್ರಗಳಲ್ಲಿ ಜಪ್ತಿಗಳಾಗಿವೆ. ತಾರಗೋಡ ರಂಗಪ್ಪ ಹೆಗಡೆ ಮನೆಯಲ್ಲಿ ಕಟಾಂ ಒಡೆದು ಸಾಮಾನು ಜಪ್ತ ಮಾಡಿದರು. ಸೊಳಗಿ ರಾಮಕೃಷ್ಣ ಸುಬ್ಬಯ್ಯ ಹೆಗಡೆ ಮನೆಯಲ್ಲಿ ಕೀಲಿಕೈಗಳನ್ನು ತಕ್ಕೊಂಡು ಎಲ್ಲ ಪೆಟ್ಟಿಗೆಗಳನ್ನು ತೆರೆದು ನೋಡಿದರು. ಏನೂ ಸಿಗಲಿಲ್ಲ! ಆ ಮೇಲೆ ೪೩ ಚೀಲ ಭತ್ತ, ೫೬ ಮನ ಮೆತ್ತು, ಬೇರೆ ಚಲ್ಲರೆ ಸಾಮಾನು ಜಪ್ತ ಮಾಡಿದರು. ಪ್ರಾತಃಕಾಲದಿಂದ ಸಾಯಂಕಾಲದ ತನಕ ಇದೊಂದೇ ಜಪ್ತಿಯಾಯಿತು! ಹಗ್ಗರಳ್ಳಿ ಕೃಷ್ಣ ನರಸಿಂಹ ಭಟ್ಟರಲ್ಲಿ ಹೋಗಿ ತೀರ್ವೆ ವಸೂಲ ಕೊಡಲು ಹೇಳಲಾಗಿ "ಕೊಳೆ ರೋಗದಿಂದ ಬೆಳೆ ಹಾಳಾಯಿತು, ಮನೆಯಲ್ಲಿ ಏನೂ ಇಲ್ಲ" ಎಂದು ಉತ್ತರ ಕೊಟ್ಟರು. ಆ ಕಾರಣ ಅದರ ವಸೂಲ ಕೊಡಲಿಕ್ಕೆ ಅಧಿಕಾರಿಗಳು ಬೋಧ ಮಾಡಿದರು. ಜಪ್ತಿಯ ಪಂಚರಿಗಳಿಕ್ಕೆ ಕರತಂದ ಜನಿವಾರ ಬಾಬುರಾಯರ ಹತ್ತಿರ ಚಿನ್ನ-ಬೆಳ್ಳಿ ದಾಗಿನೆಗಳೇನಾದರೂ ಕೊಡಿರಿ, ನಿಮ್ಮ ಋಣ ಅದರು ತೀರ್ವೆ ಕೇಳುವರು, ಎಂತಲೂ ಹೇಳಿದರು. ಭಟ್ಟರು ಏನೂ ಕೊಡಲಿಲ್ಲ! ಮುಂದೆ ಕೆಲವು ಸಾಮಾನು ಜಪ್ತಿಯಾಯಿತು.

ತಾ|| ೧೦ಕ್ಕೆ ಗುರುವಾರ ದಿನ, ಬೆಳಿಗ್ಗೆ ಪ್ರಭಾತ ಫೇರಿಯಾಯಿತು. ಮಧ್ಯಾನ್ಹಕ್ಕೆ ಮೆರವಣಿಗೆ ಜರುಗುವದಿತ್ತು. ನೆರೆಹೊರೆಯ ಹಳ್ಳಿಗಳಿಂದ ೫೦೦-೬೦೦ ಜನರು ಬಂದಿದ್ದರು. ೩ ಘಂಟೆ ಸುಮಾರಕ್ಕೆ ೩೦—೩೫ ಜನರದೊಂದು ತಂಡು ಹಾಡು ಹಾಡುತ್ತಾ ಹೊರಟಿತು. ಸ್ವಲ್ಪ ಹೋಗುವಷ್ಟರಲ್ಲಿ ಪೋಲೀಸರು ಬಂದು ಅವರಿಗೆ ಕೈದು ಮಾಡಿದರು. ಕೈದಾದ ಜನರು ಜಯಜಯಕಾರ ಮಾಡಹತ್ತಿದರು, ಪೋಲೀಸರು ಕೆನ್ನೆಗಳನ್ನು ಕೆಂಪು ಮಾಡಿದರು! ಸಾಯಂಕಾಲ ಇನ್ನೊಂದು ತಂಡು ಹೊರಟಿತು. ಈ ತಂಡದಲ್ಲಿ ಹೆಂಗಸರು ಸಹ ಇದ್ದರು. ತಂಡದವರು "ಗಾಂಧಿಮಹಾರಾಜಕೀ ಜೈ" ಎಂದು ಒದರಿದಂತೆ ಪೋಲೀಸರು ರೇಗಿಗೆದ್ದು ಏಟು ಕೊಡುತ್ತಿದ್ದರು. ಹೆಂಗಸರಿಗೆ ಸಹ ಏಟಿನ ಕಾಣಿಕೆ ಪ್ರಸಾದ ಸಿಕ್ಕಿದೆಯಂತೆ. ಎರಡೂ ತಂಡಗಳಲ್ಲಿ ಕೂಡಿ ೩೦—೪೦ ಜನರಿಗೆ ಕೈದಾಗಿದೆ

ಇಷ್ಟೆಲ್ಲದ ಬಳಿಕ ಸಭೆ ನಡೆಯಿತು, ಸಭಾ-ಸದಸ್ಯರ ಕಾಲಕ್ಕೆ ದೊಡ್ಡ ಜಯಜಯಕಾರವಾಯಿತು. ಪೋಲೀಸರು ಬಂದರು, ಜನರು ಓಡಿದರು; ಕಡೆಯಲ್ಲಿ ಕೊಳ್ಳದು ಪೋಲೀಸರು ಹಿಂಬಾಲಿಸಿದರು; ಸಿಕ್ಕವರನ್ನು ಬಡಿದರು. ಮುಸ್ಸಂಜೆ ಮಲಗಿಕೊಂಡಿದ್ದವರಿಗೂ ಏಟೋ ಏಟು ಬಿದ್ದಿದೆಯಂತೆ! ನಮ್ಮ ಪೇಟೆಯ ಮಧ್ಯದ ಒಂದು ಚಹ ಅಂಗಡಿಯೊಳಗಿನ ಕಪ್ಪು-ಬಸಿಗಳು ಸಹ ಚೂರಾದವು!

ಇಲ್ಲಿ ಶಿಕ್ಷೆ ಪಡೆದವರ ಹೆಸರುಗಳು.— ಪಾಡರ ಕೃಷ್ಣಾಬಾಯಿ ಮತ್ತು ಕೃಷ್ಣ ಬಲ್ಲಾಳ ಪ್ರಭಾಕರ ಇವರಿಗೆ ೩ ತಿಂ, ೧೦೦ ರೂ ದಂಡ, ಗಣಪತಿಭಟ್ಟ ಹೊಸ್ಕೇರಿ ಮತ್ತು ಗೋಪಾಳ ಹೆಗಡೆ ಇವರಿಗೆ ೧ ವರ್ಷ ೩೦ ರೂ ದಂಡ ಗಣೇಶ ಮಂಜುನಾಥ ಮತ್ತು ಸುಬ್ರಾಯ ನಾಗೇಶ ಚಂದ್ರಶೇಖರ ಇವರಿಗೆ ೪ ತಿಂಗಳ ಶಿಕ್ಷೆ; ೧೫ ರೂ ದಂಡ

ತಾ|| ೫ಕ್ಕೆ ರಾ|| ತಿರುಮಲಾಚಾರ್ಯ ಇವರು ಹೇಳಿದ ಸರಿದ ಪೋಲೀಸರಿಗೆ ಬೆಟ್ಟದಾಸರು ಅವರಿಗೆ ಬಹಳ ಪೆಟ್ಟು ಬಿತ್ತು. ...ಗೆ ಅವರಿಗೆ ನಡೆಯಲಾಗದ ಗಾಡಿಯ ಮೇಲೆ ಹಾಕಿ ಸಿದ್ದಾಪುರಕ್ಕೆ ತಂದರಂತೆ! ಮೈಮೇಲೆ ರಕ್ತದ ಕಲೆಗಳು ಕಾಣುತ್ತಿದ್ದವೆಂದು ಹೇಳುತ್ತಾರೆ.

ಪ್ರಭಾತ ಫೇರಿಯಲ್ಲಿ ಸೆರೆಹಿಡಿದ ಗಜಾನನ ಪರಮೇಶ್ವರ ಭಟ್ಟ ವಸ್ತ್ರೆ ಇವರಿಗೆ ೬-೬ ತಿಂಗಳ ಕಠಿಣ ಕೈದು, ೫೦-೫೦ ರೂ ದಂಡ, ದಂಡ ಕೊಡದಿದ್ದರೆ ೧ ೧ ತಿಂಗಳ ಹೆಚ್ಚಿನ ಕೈದು ವಿಧಿಸಲಾಯಿತು.

ತಾ|| ೧೧ಕ್ಕೆ ಜಪ್ತಾದ ವಸ್ತುಗಳ ಲಿಲಾಂವು ಕಚೇರಿಯಲ್ಲಿ ನಡೆಯಿತು. ಲಿಲಾಂವಿನ ಕಾಲಕ್ಕೆ ಕಚೇರಿಯ ಎದುರು ಬಾಗಿಲಿಗೆ ಪೋಲೀಸರ ಪಹರೆ ಇರುತ್ತಿತ್ತು, ಕೆಲವು ಭಗಿನಿಯರು ಲಿಲಾಂವಿನಲ್ಲಿ ಸಾಮಾನು ಕೊಳ್ಳಬಾರದಾಗಿ ಹೋಗುವ ಜನರಿಗೆ ಹೇಳುತ್ತಿದ್ದರು. ಕೆಲವು ದಾಗಿನೆಗಳು ಮಾರಾಟವಾದವು ೧ ಎಮ್ಮೆ ರೂ ೧೩ಕ್ಕೆ ೧ ಎಮ್ಮೆ ರೂ ೩೬ಕ್ಕೆ ಮತ್ತು ೨ ಎಮ್ಮೆಗಳು ಒಟ್ಟಿನಿಂದಕ್ಕೆ ರೂ ೨೦ ರಂತೆ ವಿಕ್ರಯವಾದವು! ೪೩ ಚೀಲ ಭತ್ತ ರೂ. ೬೦ಕ್ಕೆ ವಿಕ್ರಯವಾಯಿತು!

ಇನ್ನೂ ಜಪ್ತಿಗಳಾಗುತ್ತಿವೆ! ಪೋಲೀಸರು ಉಪಟಳ ತರುತ್ತಿದ್ದಾರೆ!

ಅಂಕೋಲಾ— ತಾ|| ೧ಕ್ಕೆ ಶ್ರೀ|| ರಾಮರಾವ ಕೃಷ್ಣ ದೇಶಪಾಂಡೆ ಆರ ವರ್ಷ ... ಅವರಿಗೆ ಬಿಡುಗಡೆ ಮಾಡಿದ್ದರಿಂದ ... ರ ಬಿಟ್ಟು ಹೊರಗೆ ಹೋಗಬಾರದೆಂತಲೂ ... ಅವರಿಗೆ ನೋಟಿಸ ಜಾರಿಯಾಗಿದೆ.

ಅದೇ ದಿನ ತಾಲೂಕಾ ಕಚೇರಿಯಲ್ಲಿ ತೀರ್ವೆ ಬಗ್ಗೆ ಜಪ್ತಾದ ವಸ್ತುಗಳ ಲಿಲಾಂವಿತ್ತು. ಕಚೇರಿಯ ಮುಂದೆ ಹೆಂಗಸರೂ ಹುಡುಗರೂ ಪಿಕೆಟಿಂಗ ಮಾಡುತ್ತಿದ್ದರು. ಬಾಸ್ಗೋಡ, ಬಾವಿಕೇರಿ, ಹಿಚಕಡ, ಕಣಗಿಲ, ಮುಂತಾದ ಹಳ್ಳಿಗಳಿಂದ ಸಹ ಗುಂಪುಗುಂಪಾಗಿ ಹೆಣ್ಣು ಮಕ್ಕಳೂ ಹುಡುಗರೂ ಬಂದಿದ್ದರು. ಪೋಲೀಸರು ಹುಡುಗರನ್ನು ಮಾತ್ರ ಕೈದು ಮಾಡಿ ಕಚೇರಿಯಲ್ಲಿಟ್ಟರು. ಹೆಣ್ಣು ಮಕ್ಕಳಿಗೆ ಮುಟ್ಟಲಿಲ್ಲ "ನಾವು ಸಹ ಪಿಕೆಟಿಂಗ ಮಾಡಲಿಕ್ಕೆ ಬಂದವರು, ನಮ್ಮನ್ನೂ ಕೈದು ಮಾಡಿರೆಂದು ಹೇಳಿದರೂ ಮುಟ್ಟಲಿಲ್ಲ. ಜಪ್ತ ದನಗಳನ್ನು ಮಾತ್ರ ಎಲ್ಲ ಭಗಿನಿಯರು ಕಚೇರಿಯ ಬಾಗಿಲಲ್ಲೇ ಕುಳಿತರು. ಸಂಜೆ ೬ ಘಂಟೆ ಸುಮಾರಕ್ಕೆ ಪೋಲೀಸರು ಕೈದು ಮಾಡಿದ ಹುಡುಗರ ಹೆಸರು ಕೇಳಿದರೆ ಹುಡುಗರು 'ಇನ್ಕಿಲಾಬ ಝಿಂದಾಬಾದ" ವಗೈರೆ ಚಿತ್ರ-ವಿಚಿತ್ರ ಹೆಸರುಗಳನ್ನು ಹೇಳಿದರಂತೆ! ತಂದೆಯ ಹೆಸರು ಕೇಳಿದರೆ 'ಸೇವಾದಲ" ಎಂದು ಉತ್ತರ ಕೊಟ್ಟರಂತೆ! ಎಲ್ಲ ಹುಡುಗರಿಗೆ ಮನೆಗೆ ಹೋಗಲು ಅಪ್ಪಣೆಯಾಯಿತು. ಸಂಜೆಯಾದ್ದರಿಂದ ಅವರು ಹೊರಬೀಳಲೊಪ್ಪಲಿಲ್ಲ; ಪೋಲೀಸರು ೩—೪ ಜನರನ್ನು ಎತ್ತಿ ಹೊರಗಿಟ್ಟರು ಇತರ ಬಾಕಿಯುಳಿದವರೂ ಹೊರಬಿದ್ದು ತಮ್ಮ ತಮ್ಮ ಮನೆ ದಾರಿ ಹಿಡಿದರು!

ಅಂದು ೩ ಎಮ್ಮೆ ೩ ಆಕಳು ೨ ಕೋಣ, ೨ ಎತ್ತು ಮತ್ತು ೧ ಬಾವಿ ಗಾಡಿ ಮಾರಾಟವಾದವು. ಈ ೧೫ ದನಗಳನ್ನು ಕಾರವಾರ ಕಸ್ಟಮ ಖಾತೆಯ ಇನ್ಸ್ಪೆಕ್ಟರು ರೂ ತಿವಸ್ತು ... ರೂ ೧೩-೦-೦ಕ್ಕೆ ಕೊಂಡರು. ಸರ್ಕಾರಿ ನಗೆಗಳನ್ನು ೧೦ ಜನ ಪೋಲೀಸರನ್ನು ಕಾವಲಿಗೆ ಕೊಟ್ಟು, ಕಾರವಾರಕ್ಕೆ ಒಯ್ದು ಕೊಡುವ ಏರ್ಪಾಟು ಮಾಡಿದರಂತೆ. ಮೇಲಿನ ದಾಗಿನೆಗಳನ್ನು ಕಾರವಾರಕ್ಕೆ ಒಯ್ಯುತ್ತಿರುವಾಗಲೇ ಕಾವಟಿಯ ರಾ|| ವೈಕುಂಠ ಬಾಳಾವ ... ಕಚೇರಿಯಿಂದ ... ಸ್ವಲ್ಪ ದೂರ ಹೋಗುತ್ತಿದ್ದರು. ಪೋಲೀಸರಿಗೆ ಏನು ಕಲ್ಪನೆ ಬಂತೋ ದೇವರೇ ಬಲ್ಲ! ಅವರಿಗೆ ಕೈದು ಮಾಡಿದರು. ದನಗಳನ್ನು ಹೊಡಕೊಂಡು ಪೋಲೀಸರು ಕಾರವಾರ ರಸ್ತೆ ಹಿಡಿದ ಕೆಲವು ಕಾಲದ ಮೇಲೆ ಅವರಿಗೆ ಬಿಟ್ಟುಕೊಟ್ಟರು!

ಶ್ರೀ|| ಕಾರವಾರಕರ ಇವರಿಗೆ ಹಿಡಕೊಟ್ಟರೆ ರೂ. ೧೦೦೦ದ ಇನಾಮು ಕೊಡುವೆವೆಂದು ಅಧಿಕಾರಿಗಳು ಜಾಹೀರು ಮಾಡಿರುವರಂತೆ. ಕಾರವಾರ ಹೈಸ್ಕೂಲಿನ ಓರ್ವ ವಿದ್ಯಾರ್ಥಿಯು ಈ ಸಾಹಸ ಮಾಡಲಿಕ್ಕೆ ಉದ್ಯುಕ್ತನಾಗಿರುವನಂತೆ!

ಬಂಕಿಕೊಡ್ಲದಲ್ಲಿ ರಾ|| ಬಾಬುರಾಯ ನಾಡಕರ್ಣಿಯವರ ಮನೆಯಲ್ಲಿ ತಾ|| ೪ಕ್ಕೆ ಜಪ್ತಿ ಝಡ್ತಿಯಾಯಿತು! ಫೌಜದಾರರೂ ೧೦—೧೫ ಪೋಲೀಸರೂ ಬಂದಿದ್ದರು. ಕೆಲವು ಕಾಂಗ್ರೆಸ ಕಾಗದಪತ್ರಗಳನ್ನು ಒಯ್ದರಂತೆ!

ಜಪ್ತಿಯು ಸತ್ವರ ಭರದಿಂದ ಸಾಗಿದೆ; ಉಳುವರೆ, ಮಾಸ್ಕೇರಿ ಮುಂತಾದ ಹಳ್ಳಿಗಳಲ್ಲಿ ಜಪ್ತಿಗಳಾದವು, ಉಳವರೆಯಲ್ಲಿ ತಿಮ್ಮಪ್ಪ ಗೌಡನ ಮನೆಯಲ್ಲಿ ದನವಿನ ಕೊಟ್ಟಿಗೆಯಲ್ಲಿದ್ದ ೪ ಆಕಳುಗಳನ್ನು ಜಪ್ತಿ ಮಾಡಿದರು! ಆ ಪೈಕಿ ೧ ಆಕಳು ಹಗ್ಗ ಹರಕೊಂಡು ಪಲಾಯನ ಮಾಡಿತು. ೧ ಆಕಳು ದಾರಿಯಲ್ಲೇ ಮಲಗಿತು! ಎಷ್ಟು ಹೊಡೆದರೂ ಏಳಲಿಲ್ಲ! ಕೊನೆಗೆ ಎರಡೇ ದನಗಳನ್ನು ತಕ್ಕೊಂಡು ಅಧಿಕಾರಿಗಳು ಹೋಗಬೇಕಾಯಿತು.

ತಾ|| ೫ಕ್ಕೆ ಮಾಸ್ಕೇರಿಯ ಗೋವಿಂದನಾಯ್ಕನ ಮನೆಯಲ್ಲಿ ಜಪ್ತಿಯಾಯಿತು. ಒಬ್ಬ ಹೆಂಗಸು ಮಾತ್ರ ಮನೆಯಲ್ಲಿದ್ದಳು. ಪೋಲೀಸರಿಗೂ ಅವಳಿಗೂ ಜಗ್ಗಾಟ ನಡೆಯಿತು. ಸಾಲಬೋಗರು ಮುಂದೆ ಬಂದು ಆ ಹೆಂಗಸಿಗೆ ಇದ್ದದ್ದನ್ನು ಕೊಡು, ಎಂದು ಬೋಧ ಮಾಡಿದರು. ಆಕೆಯು ಕೆಲವು ದಾಗಿನೆಗಳನ್ನೂ ೩೩ ರೂಪಾಯಿಗಳನ್ನೂ ತಂದು ಕೊಟ್ಟಳು. ಆಕೆ ಕೊಡತಕ್ಕ ತೀರ್ವೆ ೩೦೬ ರೂ. ಇಷ್ಟು ಹಣವನ್ನು ತಕ್ಕೊಂಡು, ಬಾಕಿ ಹಣ ಮತ್ತು ದಾಗಿನೆಗಳನ್ನು ಹೆಂಗಸಿಗೆ ತಿರುಗಿ ಕೊಟ್ಟು ಜಪ್ತಿ ಅಧಿಕಾರಿಗಳು ಹೋದರು. ೬ರ ತಿರ ಅನೇಕ ಇನ್ನು ೧೦—೧೫ ಮನೆಗಳಲ್ಲಿ ಜಪ್ತಿಗಳಾದವು ಕೆಲವು ಕಡೆ ಭತ್ತ, ಅಕ್ಕಿ ಜಪ್ತಿ ಆಗಿದೆ ಕೆಲವರ ಏನೂ ಸಿಗಲಿಲ್ಲ.

ಸ್ವಯಂಸೇವಕರ ತರಪೆ ಬಗ್ಗೆ ಪೋಲೀಸರು ಮಾಸ್ಕೇರಿ ಸಂಣಪ್ಪ ದೇವಣ್ಣ ನಾಯ್ಕರ ಮನೆಗೆ ಹೋಗಿದ್ದರು. ನಾಯ್ಕರ ತಾಯಿಯು ಪೋಲೀಸರಿಗೆ ಒಳಗೆ ಹೋಗಗೊಡಲಿಲ್ಲ—ಸಂಣಪ್ಪನಾಯ್ಕರಿಗೆ ಕೈದು ಮಾಡಿದ್ದಾರೆ.—

ಸ್ವಲ್ಪ ಪ್ರತಿಗಳು ಉಳಿದಿವೆ! ತ್ವರೆಮಾಡಿರಿ
ವೇ|| ಅಗೇಕರ ಶಾಸ್ತ್ರಿಗಳ
ಹೊಸ ಪಂಚಾಂಗ
ಮಾರಾಟಕ್ಕೆ ಸಿದ್ಧವಿದೆ. ಬೇಕಾದವರು ಬೇಗ ಬರೆಯಬೇಕು
ಮೆನೇಜರ, "ಸ್ಟಾರ ಆಫ್ ಕೆನರಾ" ಪ್ರೆಸ
ಕುಮಟಾ.

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible]

[illegible] ನಡೆಯುವದು

[illegible]

ಗೋಕರ್ಣ— [illegible] ಅವರಿಗೆ ಬುದ್ಧಿ ಕೊಡಲೆಂದು ಪ್ರಾರ್ಥನೆ!

[illegible]

[illegible]

[illegible] ಸ್ಥಿತಿಯೇ? ಸತ್ಯದ ದಾರಿ ಯಾವುದು?

ಹೊನ್ನಾವರ— [illegible]

[illegible]

[illegible]

[illegible] ಪ್ರಾರಂಭವಾಗಿದೆ

ಭಟಕಳ— [illegible] ಆರ್ಜಿ ಮಾಡಿದ್ದಾರೆ

[illegible]

[illegible] ಸಾಲಿ ಬಿಟ್ಟು ಬಂದಿದ್ದರು ನ್ಯಾ ಪಟೇಲ ಹೇಳಿದ ಬಗ್ಗೆ [illegible]

ಡಾ ಅನಂತಭಟ್ಟರ ಮೇಲೆ [illegible]

[illegible] ಸಭೆಯಲ್ಲಿ ಬಹಳ ಚರ್ಚೆಯಾಯಿತು [illegible] ಅಧ್ಯಕ್ಷರ ಈ ಥ ನಡತೆಯಿಂದ ಮೆಂಬರು ಬಹಳ ಬೇಸರಗೊಂಡಿರುವರಂತೆ!

[illegible] ತೋರುತ್ತಾರೆ!

[illegible] ವಿಚಾರಕ್ಕೆ ಇಟ್ಟಿದ್ದಾರೆ

ಶಿರ್ಶಿ— [illegible]

[illegible] ಜೈಲಿನಿಂದ ಬಿಡುಗಡೆ ಮಾಡಿದ್ದಾರೆ

[illegible]

ಸಿದ್ದಾಪುರ— [illegible]

(೬ನೇ ಪುಟದಿಂದ ಮುಂದರಿಸಿದ್ದು)

[illegible] ಯಂತ್ರ-ರಾಷ್ಟ್ರಗಳ ಕದಗ ಕೇಳಿಸಿದ್ದಾರಂತೆ!

⁂

ಇತ್ತ ಪಾಪಿ! ಅತ್ತ ಪುಂಡ!

ನಿನ್ನೆ ತಿಂಗಳ ಕೊನೆಗೆ ಕಾರವಾರದಲ್ಲಿ ಒಂದು ನಿರ್ಲಜ್ಜ ಅಂಗಡಿಗೆ ನುಸುಳು ಹರಿಯುವಷ್ಟರಲ್ಲಿ ಪೋಲೀಸ್ ಒಬ್ಬನು ಪಿಂಕೆ ಹಚ್ಚಿ ಓದಿ ಮಾಡಿದನು! ಮುಂದಿನ ದಿನವೇ ಹರತಾಳ ಆಚರಿಸದ ಬಗ್ಗೆ ಇನ್ನೊಂದು ಅಂಗಡಿಯು ಬೆಂಕಿ ಪಾಲಾಗಿತ್ತು! ಹರತಾಳ ತಪ್ಪಿಸಿದರೆ ಅಧಿಕಾರಿಗಳ ಸಿಟ್ಟು, ಆಚರಿಸದಿದ್ದರೆ ಪುಂಡರ ಕಾಟ! ಅಂತೂ ಇಂತೂ ವರ್ತಕರ ಮರ್ದನದ ಆಟ!!

⁂

ಮುಂಬಯಿ ಮಂತ್ರಿಮಂಡಳದ ಆತ್ಮತ್ಯಾಗ

ಮುಂಬಯಿ ಸರಕಾರದಲ್ಲಿ ಈಗ ೪ ಕಾರ್ಯಕಾರಿ ಸಭಾಸದರೂ, ೩ ಮಂತ್ರಿಗಳೂ ಇರುವರು. ಇವರ ಸಂಬಳವನ್ನು ಕಡಿಮೆ ಮಾಡಿಸುವ ವಿಚಾರವುಂಟೆಂದು, ಈ ಬಗ್ಗೆ ಕೌನ್ಸಿಲಿನ ಮುಂದೆ ಅವರ ತಮ್ಮ ಭಾಷಣದಲ್ಲಿ ನಾ| ಗವ್ಹರ್ನರ ಸಾಹೇಬರು ಹೇಳಿದ್ದರಷ್ಟೆ! ಈ ವ್ಯವಸ್ಥೆಯು ಎಂದಿನಿಂದ ಜಾರಿಯಲ್ಲಿ ಬರುವದೆಂದು ತಿಳಿದಿದ್ದಿಲ್ಲ. ಈಗ ಪ್ರಕಟವಾದ ಮಾಹಿತಿಯ ಮೇಲಿಂದ ತಿಳಿಯುವದೇನಂದರೆ — ಈ ಬಗ್ಗೆ ಮುಂಬಯಿ ಸರಕಾರದ್ದು ಭಾರತ ಮಂತ್ರಿಗಳೊಡನೆ ಪತ್ರವ್ಯವಹಾರ ನಡೆದು ಮಂತ್ರಿಮಂಡಲದ ಎಲ್ಲ ಸಭಾಸದರು ರಾಜೀನಾಮೆ ಬರೆದುಕೊಟ್ಟು ನಾ| ಗವ್ಹರ್ನರ ಸಾಹೇಬರ ಕೈಯ್ಯಲ್ಲಿ ಇಟ್ಟಿದ್ದಾರೆ. ಬೇಕಾದವರನ್ನು ಅವರು ಇಟ್ಟುಕೊಳ್ಳಬಹುದು! ಬೇಡಾದವರನ್ನು ಮನೆಗೆ ಕಳಿಸಬಹುದು!

⁂

ಎಲ್ಲಾ ಹಿಂದುಗಳಿಗೆ "ಮಂತ್ರದೀಕ್ಷೆ"

ಪಂಡಿತ ಮಾಲವೀಯರ ನೇತೃತ್ವದಲ್ಲಿ ಶಿವರಾತ್ರಿ ಸಮಯ ಪ್ರಯಾಗದಲ್ಲಿ ಗಂಗಾನದಿಯ ದಂಡೆಯ ಮೇಲೆ ಒಂದು ವಾರದ ತನಕ "ಮಂತ್ರದೀಕ್ಷೆ" ಕೊಡುವ ಸಮಾರಂಭವಾಯಿತು. ದಿನಾಲು ಬೆಳಿಗ್ಗೆ ಯಜ್ಞ, ಸಾಯಂಕಾಲ ಕಥಾ-ಪ್ರವಚನಗಳು ನಡೆಯುತ್ತಿದ್ದವು. ಒಂದು ದಿನ ಪಂಡಿತ ಪಂಡಿತ ಮಾಲವೀಯರೇ ಹರಿಕಥೆ ಹೇಳಿದರು! ಸಮಾರಂಭಕ್ಕೆ ನೂರಾರು ಪಂಡಿತರೂ, ಸನ್ಯಾಸಿಗಳೂ, ಸಂಸ್ಕೃತ-ಶಾಸ್ತ್ರಕೋವಿದರೂ ಬಂದಿದ್ದರು. ಪಂ| ಮಾಲವೀಯರವರು ಸುಮಾರು ೨೦೦ ಜನ ಗಂಡಸರು, ಹೆಂಗಸರ ಮಕ್ಕಳಿಗೆ ಮಂತ್ರದೀಕ್ಷೆಯನ್ನು ಕೊಟ್ಟರು. ಜಾತಿಭೇದವನ್ನು ಲಕ್ಷಿಸಲಿಲ್ಲ. [illegible] ಹಿಂದುಳಿದ ವರ್ಗದವರಿಗೂ ಮಂತ್ರದೀಕ್ಷೆ ದೊರಕಿತು. ಪ್ರತಿಯೊಬ್ಬರಿಗೆ ಪಂಡಿತಜಿಯವರ ಅಚ್ಚು ಮಾಡಿದ ಆಚಾರನಿಯಮಾವಲಿಯ ಒಂದೊಂದು ಪ್ರತಿಯನ್ನು ಕೊಟ್ಟರು.

⁂

ಇದಕ್ಕೆ ಸಹಿ ಮಾಡು, ಇಲ್ಲವೆ ಸಾಯಲು ಸಿದ್ಧನಾಗು!

ಮುಂಬಯಿಯ ಶ್ರೀ| ದೇವರೂಖಕರರು ಅಸ್ಪೃಶ್ಯ ವರ್ಗದ ಮುಂದಾಳುಗಳು, ರಾಷ್ಟ್ರೀಯ ವೃತ್ತಿಯವರು. ಅವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾರ ಸಂಘ ಬೇಡವೆಂಬ ಮತದವರು. ತಮ್ಮ ಈ ತರಗಳ ಪ್ರಚಾರದ ಬಗ್ಗೆ ಜೋರಿನ ಚಳವಳಿ ಮಾಡುತ್ತಿದ್ದರು. ಚಳವಳಿಯ ಪರಿಣಾಮವಾಗಿ ಮುಂಬಯಿಯ ಅಸ್ಪೃಶ್ಯರಲ್ಲಿ ಈಗ ಎರಡು ಪಕ್ಷಗಳಾಗಿವೆ. ದೇವರೂಖಕರ ಪಕ್ಷವೊಂದು, ಡಾ| ಅಂಬೇಡಕರರ ಪಕ್ಷವೊಂದು. ಕಳೆದ ಬುಧವಾರ ರಾತ್ರಿ ಶ್ರೀ| ದೇವರೂಖಕರರು ತಮ್ಮ ಬಿಡಾರದಲ್ಲಿ ಮಲಗಿದ್ದರು. ಅಂಬೇಡಕರ ಪಕ್ಷದ ಕೆಲವ ಜನರು ಮಧ್ಯರಾತ್ರಿ ಸಮಯ ಬಂದು ಅವರನ್ನು ಎಬ್ಬಿಸಿದರು, ಒಡನೆ ಒಂದು ಸಭೆಗೆ ಬರಬೇಕಾಗಿ ಆಗ್ರಹ ಮಾಡಿದರು. ದೇವರೂಖಕರರಿಗೆ ಸಂಶಯ ಬರಲಿಲ್ಲ. ಅವರ ಕೂಡ ಹೋದರು. ಮಾರ್ಗದ ಮೇಲೆ ಹಾದಿ ಕಾಯುತ್ತಿದ್ದ ಮೋಟಾರ ಗಾಡಿಯಲ್ಲಿ ಕೂತುಕೊಂಡರು. ಅವರಿಗೆ ಕರೆಯಬಂದ ಪುಂಡರು ಮೋಟಾರನ್ನು ಒಂದು ನಿರ್ಜನ ಸ್ಥಳಕ್ಕೆ ಒಯ್ದು ದೇವರೂಖಕರರಿಗೆ ಏಟು ಕೊಟ್ಟರು! ಸಂಯುಕ್ತ ಮತದಾರ ಸಂಘಗಳ ಬಗ್ಗೆ ಪ್ರಯತ್ನ ಮಾಡುವದನ್ನು ತಡಿಸಬೇಕಾಗಿ ಹೇಳಿದರು! ಪ್ರತ್ಯೇಕ ಸಂಘಗಳ ಪಕ್ಷ ಹಿಡಿದರೆ ಮುದ್ದಿನ ಗಂಟು ಸಿಗುವದೆಂದು ಆಶೆ ತೋರಿಸಿದರು! ಪ್ರತ್ಯೇಕ ಮತದಾರ ಸಂಘದ ಜಾಹೀರನಾಮೆ ಸಹಿ ಮಾಡು ಎಂದರು! ದೇವರೂಖಕರರು ಒಪ್ಪಲಿಲ್ಲ. ಅವರನ್ನು ಗಾಡಿಯ ಮೇಲೆ ಹಿಂದಕ್ಕೆ ತಂದು ಮನೆಯ ಹತ್ತರ ಬಿಟ್ಟು ಹೋಗುವಾಗ ಪುಂಡರು ಎಚ್ಚರಿಕೆ ಕೊಟ್ಟದ್ದೇನಂದರೆ 'ನಾವು ನಿಮ್ಮ ಸಹಿ ಮಾಡುತ್ತೇವೆ. ಆ ಸಹಿಯನ್ನು ನೀವು [illegible] ನಾವು [illegible] ಕೊಲ್ಲುವೆವು!' ಎನ್ನಲಿಕ್ಕೆ!

— ೨ ವರ್ಷಗಳ ಹಿಂದೆ [illegible] ಮಾಡಿದ ಒಟ್ಟು [illegible] ಜನರ ಮೇಲೆ ಖಟ್ಲೆ ನಡೆದಿತ್ತಷ್ಟೆ! ಅವರಲ್ಲಿ ೧೦ ಜನರಿಗೆ ಕಠಿಣ ಶಿಕ್ಷೆಯಾಗಿದೆ. ಬಾಕಿಯವರಿಗೆ ಅಲ್ಪ ಕಾಲದ ಸಶ್ರಮ ಶಿಕ್ಷೆಯಾಗಿದೆ. ಖಟ್ಲೆಯು ಬಹು ಕಾಲ ನಡೆದಿತ್ತು!

— ಕಲಕತ್ತೆಯಲ್ಲಿ ಮಾನ್ಯ ಅಜದುಲ ರಹಮಾನ್ ಎಂಬವನಿಗೆ ೫ ವರ್ಷ ಸಶ್ರಮ ಶಿಕ್ಷೆ ವಿಧಿಸಲಾಯಿತು. ಇವನು ಜಾತ್ಯಾ ಕಳ್ಳನಾಗಿದ್ದು, ಕಳ್ಳತನಗಳ ಬಗ್ಗೆ ಈ ಹಿಂದೆ ೨೭ ವರ್ಷ ಸೆರೆಮನೆಯಲ್ಲಿ ಕಳೆದಿರುವನು. ಮೊನ್ನೆ ಗುರುವಾರ [illegible] ಜೈಲಿನ ಅಧಿಕಾರಿಯ ೩ ಕೋಳಿಗಳನ್ನು ಕದ್ದನು! ಆ ಬಗ್ಗೆ ಅವನಿಗೆ ಪ್ರಸ್ತುತ ಶಿಕ್ಷೆಯಾಗಿದೆ.

ಜಾಹೀರಾತು.

ಕೇ| ರಾಮಪಂಡಿತ, ವೈದ್ಯ ಕುಮಟಾ ಇವರಲ್ಲಿ
ಕೇರಳ ಜ್ಯೋತಿಷ ಶಾಸ್ತ್ರವಿಶಾರದರಾದ
ವಿ. ಶಾಂತಪ್ಪ ಪುದುವಾಳ್, ಇವರು

ಬಂದಿದ್ದಾರೆ. ಇವರ ಕಡೆ ಜಾತಕ-ಪ್ರಶ್ನೆ ಮೊದಲಾದ ಪರಿಹಾರ ಯಥಾರ್ಥವಾಗಿ ತಿಳಿಸಲ್ಪಡುವವು. ಬೇಕಾದಲ್ಲಿ ಮಂತ್ರವಾದ ಕೆಲಸ ಸಹ ಮಾಡಿಕೊಡಲ್ಪಡುವದು. ಜನರು ಸಮಕ್ಷ ಯಾ ಪತ್ರದ್ವಾರಾ ಒಮ್ಮೆ ಪರೀಕ್ಷಿಸಿ ನೋಡಬಹುದು.

ಪತ್ತೆ — ವಿ. ಶಾಂತಪ್ಪ ಪುದುವಾಳ್,
C/o ಕೇ| ರಾಮ ಪಂಡಿತ ವೈದ್ಯ,
ತಾಲೂಕ ಕಚೇರಿ ಸಮೀಪ, ಕುಮಟಾ.

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು
ಜನರಿಂದ ವರ್ಣಿಸಲ್ಪಟ್ಟ, ಆಯುರ್ವೇದೋಕ್ತ

ತಿಂಗಳ ವರ್ಷ [illegible] ಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು.

ಈ ದ್ರಾಕ್ಷಾಮೃತವು ಸಮ್ಯಾದ್ರಿ ಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾ ರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವದರಿಂದ ಸ್ವಾದಿಷ್ಟವೂ ಸುಗಂಧವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಕ್ಷೀಣ, ಸ್ವಪ್ನದೋಷ ಅಥವಾ ಬೇರೆ ಯಾವದೇ ವಿಕಾರದಿಂದ ಒಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳ ಉರುಪು ಮೈಉರಿ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡ ನೋಯೋಣ, ಪಿತ್ತದಿಂದ ಕಣ್ಣುಗಳ ಕತ್ತಲೆ ಬಂದು ಭೋವಳಿಕೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಶರೀರವು ಬಲವಾಗುತ್ತದೆ ಮತ್ತು ಅಷ್ಟ ಚನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ಪರ ಸ್ತ್ರೀ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೂ ಮತ್ತು ಕುಸ್ಮದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು. ೧ ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೮-೦, ಒಂದು ಡಜನ ಬಾಟ್ಲಿಗೆ ೧೧-೦-೦ ಪೋಸ್ಟೇಜ ೧ ಡಜನ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೇವೆ. ಟಪಾಲ ಖರ್ಚ ಪ್ರೋಷ್ಟೇಜ ಬೇರೆ ಬೀಳುತ್ತದೆ.

ಎಜಂಟರ ಮೂಲಕ ೧ ಬಾಟ್ಲಿಗೆ ೧-೪-೦, ೩ ಬಾಟ್ಲಿಗೆ ೩-೮-೦, [illegible] ರೂಪಾಯಿ

ಮ್ಯಾನೇಜರ, ದ್ರಾಕ್ಷಾಮೃತ ಕಾರ್ಯಾಲಯ, ಪೋ| ನಿಪ್ಪಾಣಿ (ಜಿಲ್ಹಾ ಬೆಳಗಾವಿ)

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು.

ಕುಮಟಾ ಏಜಂಟ — ಶಿರ್ಸಿ ಏಜಂಟ — ಕಾರವಾರ ಏಜಂಟರು —
ನ್ಯೂ ಸಪ್ಲಾಯ ಏಜನ್ಸಿ ಎಸ್ ಎಲ್ ಥಾಕಪ್ಪಾ ದಾಮೋದರ ಶ್ಯಾನಭಾಗ & ಮುಜುಮದಾರ

ಶಿರ್ಶಿ ಮ್ಯುನಿಸಿಪಾಲಿಟಿಯ ಕರಗಳ ಹೊರೆ.

(ಲೇಖಕ [illegible])

ಮುಂಬಯಿ ಇಲಾಖೆಯೊಳಗಿನ ಮ್ಯುನಿಸಿಪಾಲಿಟಿಗಳ [illegible] ನೇ ವರ್ಷದ ಸರಕಾರಿ ವರದಿಯು ಕೆಲವು [illegible] ಹಿಂದೆ ಹೊರಬಿದ್ದಿದೆ. ಅದನ್ನು ಓದುವಾಗ ನಮ್ಮ ಶಿರ್ಶಿ ಮ್ಯುನಿಸಿಪಾಲಿಟಿಯು ಹೇರಿರುವ ಕರಗಳು, ಬೇರೆ ಮ್ಯುನಿಸಿಪಾಲಿಟಿಗಳ ಜೊತೆ ಪರಿಶೀಲಿಸಿದರೆ, ಅತಿ ವಿಪರೀತವಿರುತ್ತವೆಂದು ಕಂಡುಬರುತ್ತದೆ [illegible] ಜನಸಂಖ್ಯೆಯ ಮಾನದಿಂದ ಈ ತುಲನೆ ಮಾಡಬೇಕು. ಅದನ್ನೇ ಕೆಳಗೆ ಕೊಡುವೆವು.

ಶಿರ್ಶಿ ಮ್ಯುನಿಸಿಪಾಲಿಟಿಯ [illegible] ರಲ್ಲಿ ರೂ [illegible] ಉತ್ಪನ್ನವಿತ್ತು. ಇಲ್ಲಿಯ ಜನಸಂಖ್ಯೆಯು [illegible] ಮುಂಬಯಿ ಇಲಾಖೆಯಲ್ಲಿ ಒಟ್ಟು ಮ್ಯುನಿಸಿಪಾಲಿಟಿಗಳು [illegible] ಅವುಗಳಲ್ಲಿ [illegible] ಮ್ಯುನಿಸಿಪಾಲಿಟಿಗಳ ಹದ್ದಿನಲ್ಲಿರುವ ಜನಸಂಖ್ಯೆ [illegible] ಶಿರ್ಶಿಯ ಮ್ಯುನಿಸಿಪಾಲಿಟಿಯ ಜನಸಂಖ್ಯೆಗಿಂತ ಎಷ್ಟೋ ಹೆಚ್ಚಿದ್ದರೂ, ಆ ಮ್ಯುನಿಸಿಪಾಲಿಟಿಗಳ ಉತ್ಪನ್ನವು ನಮ್ಮ ಮ್ಯುನಿಸಿಪಾಲಿಟಿಗಿಂತ [illegible] ಕಡಿಮೆಯಿರುತ್ತದೆ. [illegible] ಕೆಲವು ಮ್ಯುನಿಸಿಪಾಲಿಟಿಗಳ ಅಂಕಿಗಳನ್ನು ಈ ಕೆಳಗೆ ಕೊಡುವೆವು.

ಮ್ಯುನಿಸಿಪಾಲಿಟಿ ಹೆಸರು	ಜನಸಂಖ್ಯೆ	ಕರಉತ್ಪನ್ನ ರೂ	ಒಟ್ಟು ಉತ್ಪನ್ನ ರೂ
ಕಾರವಾರ	[illegible]	[illegible]	[illegible]
ಕುಮಟಾ	[illegible]	[illegible]	[illegible]
ಹೊನ್ನಾವರ	[illegible]	[illegible]	[illegible]
ಹಾವೇರಿ	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	[illegible]
ರಾಣೇಬೆನ್ನೂರ	[illegible]	[illegible]	[illegible]
ರತ್ನಾಗಿರಿ	[illegible]	[illegible]	[illegible]
ವೆಂಗುರ್ಲೆ	[illegible]	[illegible]	[illegible]
ಸಿರ್ಸಿ	[illegible]	[illegible]	[illegible]

ಪ್ರತಿ ತಲೆಗೆ ಬೀಳುವ ಕರದ ಪ್ರಮಾಣದ ದೃಷ್ಟಿಯಿಂದ ತುಲನೆ ಮಾಡಿ ನೋಡುವಾ.

ಮ್ಯುನಿಸಿಪಾಲಿಟಿ ಹೆಸರು	ಪ್ರತಿ ತಲೆಗೆ ಕರ ರೂ ಆ ಪೈ	ಪ್ರತಿ ತಲೆಗೆ ಒಟ್ಟು ರೂ ಆ ಪೈ
ಸುರತ	[illegible]	[illegible]
ಭಡೋಚ	[illegible]	[illegible]
ಅಹಮ್ಮದನಗರ	[illegible]	[illegible]
ನಾಸಿಕ	[illegible]	[illegible]
[illegible]	[illegible]	[illegible]
ರತ್ನಾಗಿರಿ	[illegible]	[illegible]
ಬೆಳಗಾಂವ	[illegible]	[illegible]
ಧಾರವಾಡ	[illegible]	[illegible]
ಹುಬ್ಬಳ್ಳಿ	[illegible]	[illegible]
ವಿಜಾಪುರ	[illegible]	[illegible]
ಕಾರವಾರ	[illegible]	[illegible]
ಕುಮಟಾ	[illegible]	[illegible]
ಹೊನ್ನಾವರ	[illegible]	[illegible]
ಸಿರ್ಸಿ	[illegible]	[illegible]

ಆಯಾ [illegible] ಜನರ ಮೇಲೆ [illegible] ಕರದ ಪ್ರಮಾಣ ಹಿಡಿದು ತುಲನೆ ಮಾಡಿದರೆ, ಈ ತುಲನೆ ಬಗ್ಗೆ ಪ್ರಮುಖ ವ್ಯಾಪಾರದ ಕೇಂದ್ರಗಳನ್ನೇ ತೆಗೆದುಕೊಳ್ಳುವಾ.

ಮ್ಯುನಿಸಿಪಾಲಿಟಿ ಹೆಸರು	ಪ್ರತಿ ತಲೆಗೆ ಆದಾಯ [illegible] ಕರದ ಪ್ರಮಾಣ ರೂ. ಆ. ಪೈ
ಮುಂಬಯಿ	[illegible]
ಕರಾಚಿ	[illegible]
ಅಹಮದಾಬಾದ	[illegible]
ಸುರತ	[illegible]
ನಾಸಿಕ	[illegible]
ಬೆಳಗಾಂವ	[illegible]
ಸೊಲ್ಲಾಪುರ	[illegible]
ಧಾರವಾಡ	[illegible]
ಹುಬ್ಬಳ್ಳಿ	[illegible]
ಸಿರ್ಸಿ	[illegible]

(ಟಿಪ್ಪಣಿ — ಈ ಪೈಕಿ ಕೆಲವು ಮ್ಯುನಿಸಿಪಾಲಿಟಿಗಳಲ್ಲಿ ಹಿನ್ನು ಮಹಸೂಲಾದ ಕರವು [illegible] ಸಿರ್ಸಿಯಲ್ಲಿ [illegible] ರೂ ಮೇಲಿನಂತೆ ಸಿರ್ಸಿಯವರ ಹಾಡು)

ಮೇಲೆ ವಿವರಿಸಿದಂತೆ ಶಿರ್ಶಿ ಮ್ಯುನಿಸಿಪಾಲಿಟಿಯು ಉತ್ಪನ್ನವು ವಿಪರೀತ ಹೆಚ್ಚಿದ್ದರೂ, ವರದಿಯು ವರ್ಷದ ಮರುವರ್ಷವೇ [illegible] ಮ್ಯುನಿಸಿಪಾಲಿಟಿಯು [illegible] ಕರಗಳನ್ನು ಹೆಚ್ಚಿಸಿತು. [illegible] ಉತ್ಪನ್ನ [illegible] ಆಗ ಪ್ರಸಂಗ [illegible] ಸರಿಸುವ [illegible] ಸಹಜವೇ. ಆದ್ದರಿಂದ ಸಿರ್ಸಿಯ ಜನರು ಎಚ್ಚತ್ತು [illegible] ಜನಮನ [illegible] ಯನ್ನು [illegible] ಅವರ [illegible] ನಮ್ಮ ತಲೆಯ ಮೇಲೆ ಹಾಲಿ ಇದ್ದ ಅಸಹ್ಯ ಬಜೆಟ್ಟನ್ನು ಹಗುರ ಮಾಡಿಕೊಳ್ಳುವರೆ [illegible] ಮುಂದಾಗಬೇಕು. ತಮ್ಮ ಪ್ರತಿನಿಧಿಗಳ ಕಿವಿಗಳನ್ನು ಮೇಲಿಂದ ಮೇಲೆ ಹಿಂಡಿ ಅವರಿಗೆ ತಮ್ಮ ಕರ್ತವ್ಯದ ಜಾಗೃತಿ ಮಾಡಿಕೊಡಬೇಕು.

ಕದಾಚಿತ್ ಶಿರ್ಶಿ ಮ್ಯುನಿಸಿಪಾಲಿಟಿಯಲ್ಲಿ ಜನರಿಗೆ ಇತರ ಕಡೆಯಲ್ಲಿ [illegible] ಸಿಗುತ್ತವೆಯೆಂದು ಯಾರಾದರೂ ವಾದಿಸಬಹುದು. ಅದಕ್ಕಾವ ಸಂಗತಿಯೂ ಇಲ್ಲ. ಅನೇಕ ಮ್ಯುನಿಸಿಪಾಲಿಟಿಗಳು ನೀರಿನ ಪುರವಠೆ, ದವಾಖಾನೆಗಳ ಸ್ಥಾಪನೆ, ಸೆನಿಟೇಶನ್ ಮೊದಲಾದ ಸೋಯಿಗಳ ಬಗ್ಗೆ [illegible] ರೂಪಾಯಿಗಳನ್ನು ವೆಚ್ಚ ಮಾಡುತ್ತಿರುವರು. ಶಿರ್ಶಿಯಲ್ಲಿ ಅದೂ ಇಲ್ಲ. ಹೀಗಿದ್ದು ಶಿರ್ಶಿಯಲ್ಲಿ ಕರಭಾರ ಹೆಚ್ಚು. ಇಲ್ಲ ಕಡಿಮೆ! ಪ್ರಸ್ತುತ ಸರಕಾರಿ ವರದಿಯನ್ನು ಬದಿಯಿಂದ ತುಲಿತ ನಕ್ಷೆ ಹಿಡಿದರೆ ಶಿರ್ಶಿ ಮ್ಯುನಿಸಿಪಾಲಿಟಿಗಿಂತ ಇತರ ಮ್ಯುನಿಸಿಪಾಲಿಟಿಗಳ ಕಾರಭಾರವು [illegible] ಬರೆದದ್ದು ಕಾಣುವದಿಲ್ಲ. ಎಂದ ಮೇಲೆ ಶಿರ್ಶಿ [illegible] ವಿಪರೀತವೆಂತ [illegible] ಕಡಿಮೆ ಮಾಡಿ ಜನತೆಯ ತಲೆಯ ಮೇಲಿನ ಕರಭಾರವನ್ನು ಇಳಿಸುವದು ಯುಕ್ತವಲ್ಲವೇನು? ಶಿರ್ಶಿಯ ಮ್ಯುನಿಸಿಪಾಲಿಟಿಯ ಸಭಾಸದರು ಇತ್ತ ಕಡೆಗೆ ಲಕ್ಷ್ಯ [illegible] ಕೊಡುವರೇನು?

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ

ಇದೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!

ಹಿಂದುಸ್ಥಾನ ಬ್ರಹ್ಮದೇಶ, ಸಿಂಹಲದ್ವೀಪ [illegible] ಕಚೇರಿ

ಮುಖ್ಯ [illegible] ರೋಡ, ಮುಂಬಯಿ;

[illegible] — [illegible] ಫಿರೋಜ ಸೇಠನಾ, ಕೆ. ಓ. ಪಿ. ಬಿ. ಇ.

[illegible] ಕೋಟಿಗೂ ಮಿಕ್ಕಿದೆ

[illegible] ಕೋಟಿಗೂ ಮಿಕ್ಕಿದೆ

ಈ ಕಂಪನಿಯ [illegible] ದಕ್ಷತೆಯಿಂದ ನಮ್ಮ ಯುವಕರು [illegible] ಜೀವನ ನಡಿಸಬಹುದು

[illegible] ಪತ್ರವ್ಯವಹಾರ ನಡಿಸುವ ಪತ್ತೆ —

The District Manager,
Canada Building,
Hornby Road, BOMBAY

OR

Mr. S. B. Roge,
Chief Agent,
171 Civil Lines,
Camp BELGAUM

ದಿ ಬೊಂಬಾಯಿ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ 1908

ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂಪನಿ [illegible] ಬರುವ [illegible] ಕಂಪನಿಯ ಹಣವು ಸರಕಾರಿ [illegible] ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ [illegible] ಸೆಕ್ಯೂರಿಟಿಗಳಲ್ಲಿಯೇ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ [illegible]

ವಿಸ್ತೃತ [illegible] ಕೆಳಗೆ [illegible] ಪತ್ರದ್ವಾರದಿಂದ [illegible] ಬರೆದಲ್ಲಿ [illegible].

Kumta Agents –
D K NAYAK Bros
Honavar Agent
R V PARBHU Esq

K. Padmanabha Rao & Sons,
BELGAUM
Chief Agents for
Karnatak Districts & S M States

ಮ॥ ಗಾಂಧಿಯವರ

ಗೀತಾಬೋಧ.

ಅ — ರಾ॥ ಹನುಮಂತರಾವ ಮಾಂಜರೇಕರ

ಕ್ಷೇತ್ರ-ಕ್ಷೇತ್ರಜ್ಞ-ವಿಭಾಗ ಯೋಗ

೧೩ನೇ ಅಧ್ಯಾಯ.

ಶ್ರೀ ಕೃಷ್ಣನು ಅಂದದ್ದು—

‘ ಈ ದೇಹಕ್ಕೆ ಕ್ಷೇತ್ರವೆಂದ ಮತ್ತೊಂದು ಹೆಸರುಂಟು, ಇದನ್ನು ಅರಿತವನಿಗೆ ಕ್ಷೇತ್ರಜ್ಞನೆಂದನ್ನುತ್ತಾರೆ. ವ್ಯಾಪಿಸಿಕೊಂಡು ವಾಸವಾಗಿದ್ದ ನನ್ನನ್ನು ಕ್ಷೇತ್ರಜ್ಞನೆಂದು ತಿಳಿ. ಕ್ಷೇತ್ರ ಕ್ಷೇತ್ರಜ್ಞರೊಳಗಿನ ಭೇದವನ್ನು ತಿಳಿಕೊಳ್ಳಲಿಕ್ಕೆ ಆಗ ಬಂದ ಜ್ಞಾನವೇ ನಿಜವಾದ ಜ್ಞಾನವು. ಪಂಚ ಮಹಾ ಭೂತಗಳು, ಪೃಥ್ವಿ, ಅಪ್, ತೇಜ, ವಾಯು, ಆಕಾಶ, ಅಹಂಕಾರ, ಬುದ್ಧಿ, ಪ್ರಕೃತಿ, ಐದು ಕರ್ಮೇಂದ್ರಿಯಗಳು ಐದು ಜ್ಞಾನೇಂದ್ರಿಯಗಳು ಮನಸ್ಸು ಐದು ವಿಷಯಗಳು ಇಚ್ಛೆ, ದ್ವೇಷ, ಸುಖ ದುಃಖ, ಸಂಘಾತ (ಅಂದರೆ ಶರೀರವು ಉಂಟಾಗಲಿಕ್ಕೆ ಬೇಕಾದ ದ್ರವ್ಯಗಳು ಒಟ್ಟುಗೂಡಿ ಇರುವ ಶಕ್ತಿಯು,) ಚೇತನ ಶಕ್ತಿ ಹಾಗೂ ಧೃತಿ (ಶರೀರದೊಳಗಿನ ಪರಮಾಣುಗಳು ಒಂದಕ್ಕೊಂದು ಅಂಟಿ ಇರುವ ಗುಣ) ಇವೆಲ್ಲವುಗಳಿಂದ ಕ್ಷೇತ್ರವು ಉಂಟಾಗುತ್ತದೆ. ಈ ಶರೀರವನ್ನು ಅದರೊಳಗಿನ ವಿಕಾರಗಳನ್ನು ತಿಳಿಕೊಳ್ಳಬೇಕು, ಯಾಕೆಂದರೆ ಅವುಗಳನ್ನು ನಾವು ತ್ಯಾಗ ಮಾಡುವದಕ್ಕೆ ಜ್ಞಾನವು ಅವಶ್ಯವು. ಈ ಜ್ಞಾನವೆಂದರೆ— ಗರ್ವವನ್ನೂ ದಂಭವನ್ನೂ ಬಿಟ್ಟುಬಿಡುವದು, ಅಹಿಂಸೆ ಕ್ಷಮೆ, ಸರಲತೆ, ಗುರುಸೇವೆ, ಶುದ್ಧತೆ, ಸ್ಥಿರತೆ, ವಿಷಯಗಳನ್ನು ಅಂಕಿತದಲ್ಲಿಡುವದು, ವಿಷಯಗಳಲ್ಲಿ ವೈರಾಗ್ಯವು, ನಿರಹಂಕಾರವು, ಜನ್ಮ ಮೃತ್ಯು ಜರೆ, ವ್ಯಾಧಿ, ದುಃಖ, ಯಾವಾಗಲೂ ಆಗುವ ದೋಷಗಳ ಅರಿವು ಸ್ತ್ರೀ ಪುತ್ರ, ಮನೆಮಾರು ಇತ್ಯಾದಿಗಳ ಬಗ್ಗೆ ಪ್ರೀತಿಯನ್ನು ಹಿಡಿದಿರದಿರುವದು ಈಶ್ವರನಲ್ಲಿ ಅನನ್ಯ ಭಕ್ತಿಯು, ಏಕಾಂತವನ್ನು ಸೇವಿಸುವದು ಲೋಕದಲ್ಲಿದ್ದು ಭೋಗಗಳನ್ನು ಭೋಗಿಸುವದರಲ್ಲಿ ಅಪ್ರೀತಿಯು, ಆತ್ಮಜ್ಞಾನದ ಲಾಲಸೆಯು, ಜ್ಞಾನದ ಅಂತ್ಯದಲ್ಲಿ ಆತ್ಮದರ್ಶನವು ಇದಕ್ಕೆ ವಿರೋಧವಾದುದು ಅಜ್ಞಾನವು ಈ ಜ್ಞಾನವನ್ನು ಸಂಪಾದಿಸಿ ಯಾವದನ್ನು ತಿಳಿಕೊಳ್ಳಲಿಕ್ಕೆ ಯೋಗ್ಯವಾಗಿರುವದೋ ಹಾಗೂ ಯಾವದನ್ನು ತಿಳಿಕೊಂಡಲ್ಲಿ ಮೋಕ್ಷವು ಸಿಗುವದೋ, ಅದರ ಸ್ವಲ್ಪ ವರ್ಣನೆಯನ್ನು ಮಾಡುತ್ತೇನೆ ಅದನ್ನು ಕೇಳು (ಜ್ಞೇಯವು ‘ ತಿಳಿಕೊಳ್ಳಲು ಯೋಗ್ಯವಾದ ವಸ್ತುವು) ಅನಾದಿಯ ಪರಬ್ರಹ್ಮವು ಅದು ಅನಾದಿಯಾಗಿರುವದು ಅಂದರೆ ಅದಕ್ಕೆ ಹುಟ್ಟು ಇಲ್ಲ ಏನೂ ಇಲ್ಲದೆ ಇದ್ದಾಗ ಆ ಪರಬ್ರಹ್ಮವು ಇತ್ತು ಅದು ಸತ್ ಅಸತ್‌ಗಳಲ್ಲಿ ಯಾವದೂ ಇರುವದಿಲ್ಲ ಅದು ಇವೆರಡರ ಆಚೆಗಿರುವದು ಒಂದು ರೀತಿಯಿಂದ ಅದಕ್ಕೆ ಸತ್ ಎಂದರೂ ಅನ್ನಬಹುದು ಯಾಕೆಂದರೆ ಅದು ನಿತ್ಯವಾಗಿರುವದು ಆದರೆ ಅದರ ನಿಶ್ಚಿತತೆಯು ಮನುಷ್ಯನ ಬುದ್ಧಿಗೆ ನಿಲುಕದು ಆದಕಾರಣ ಅದು ‘ ಸತ್ ’ ದ ಆಚೆಗಿರುವ ವರ ಆಗಿರುವದು. ಅದರ ಸತ್ತೆಯು ಹೊರಗೆ ಏನೂ ಇಲ್ಲ ಅದಕ್ಕೆ ಸಾವಿರಾರು ಕೈ ಕಾಲುಗಳೂ ಮೊಗಗಳೂ ಇರುವವು ಆದರೂ ಅದು ಇಂದ್ರಿಯ ರಹಿತವಾಗಿರುವದು ಅದಕ್ಕೆ ಇಂದ್ರಿಯದ ಆವಶ್ಯಕತೆಯಿರುವದಿಲ್ಲ ಅವುಗಳಿಂದ ಅದು ಅಲಿಪ್ತವಾಗಿರುವದು, ಇಂದ್ರಿಯಗಳು ಇಂದು ಇರುವವು ನಾಳೆ ಇರಲಿಕ್ಕಿಲ್ಲ ಪರಬ್ರಹ್ಮವಂತೂ ನಿತ್ಯವಾಗಿರುತ್ತದೆ ಎಲ್ಲವನ್ನೂ ಹೊತ್ತಿರುವದು ಧಾರಣ ಮಾಡುವದು ಅದೇ, ಅದು ಗುಣಗಳನ್ನು ಸೇವಿಸುತ್ತಿದ್ದರೂ ಗುಣರಹಿತವಾಗಿರುತ್ತದೆ ಗುಣಗಳಲ್ಲಿ ವಿಕಾರಗಳು ಇದ್ದೇ ಇರುವವು ಆದರೆ ಪರಬ್ರಹ್ಮವು ವಿಕಾರರಹಿತವಾದುದು ಗುಣವೆಂದರೇ ವಿಕಾರವು ಅದು ಪ್ರಾಣಿ ಮಾತ್ರದ ಹೊರಗಿರುವದು ಅದರ ಸ್ವರೂಪವನ್ನರಿಯದವರಿಗೆ ಅದು ದೂರವೇ ಇರುವದು ಅದು ಪ್ರಾಣಿಗಳೊಳಗೂ ಇರುವದು, ಅದಕ್ಕೆ ಗತಿಯೂ ಇರುವದು ಅದು ಸ್ಥಿರವಾಗಿರುವದು ಅದು ಸೂಕ್ಷ್ಮವಿರುವದರಿಂದ ಅದರ ಸ್ವರೂಪವನ್ನು ತಿಳಿಕೊಳ್ಳಲಿಕ್ಕೆ ಬರುವದಿಲ್ಲ ಅದು ದೂರವಾಗಿರುವಂತೆ ಸಮೀಪದಲ್ಲೂ ಇರುವದು ಸಾಮಾನ್ಯರಿಗೆ ನಾನಾವಿಧವಾಗಿ ಕಂಡರೂ ಅದು ಅವಿಭಕ್ತವಾಗಿರುತ್ತದೆ ಅದರ ಅಸಂಖ್ಯ ಪ್ರಾಣಿಗಳಲ್ಲಿರುವ ಕಾರಣ ವಿಭಕ್ತವಾದದ್ದು ಹಾಗೆ ಕಾಣುತ್ತದೆ ಹುಟ್ಟಿಸುವದು ಅದೇ ಪೋಷಿಸುವದು ಅದೇ ಸಂಹಾರ ಮಾಡುವಂತಹದ್ದು ಅದೇ ಅದು ತೇಜದ ತೇಜವಾಗಿರುವದು, ಅಂಧಕಾರದ ಆಚೆಗಿರುವದು, ಜ್ಞಾನದ ಅಂತವು ಅಲ್ಲಿಯೇ ಆಗುತ್ತದೆ ಅಂದರೆ ಪರಬ್ರಹ್ಮವೇ ತಿಳಿಕೊಳ್ಳಲಿಕ್ಕೆ ಯೋಗ್ಯವಾದುದು ಅದೇ ಜ್ಞೇಯವು ಜ್ಞಾನವನ್ನು ಸಂಪಾದಿಸುವದಾದರೂ ಈ ಪದವನ್ನು ಮುಟ್ಟುವದಕ್ಕಾಗಿಯೇ.

ಈಶ್ವರನು ಅವನ ಮಾಯೆಯು ಅನಾದಿಕಾಲದಿಂದ ನಡೆದು ಬಂದಿರುತ್ತವೆ ಮಾಯೆಯೊಳಗಿಂದಲೇ ವಿಕಾರಗಳು ಹುಟ್ಟುತ್ತವೆ. ವಿಕಾರಗಳೊಳಗಿಂದ ಅನೇಕ ಪ್ರಕಾರದ ಕರ್ಮಗಳು ಆದ ವಿಷಯವು ಮಾಯೆಯಿಂದಲೇ ಜೀವವು ಸುಖದುಃಖಗಳನ್ನು ಭೋಗಿಸುತ್ತದೆ ಇದನ್ನರಿತು ಅಲಿಪ್ತನಾಗಿ ಕರ್ತವ್ಯವನ್ನು ಮಾಡುವವನು, ಕರ್ಮಗಳನ್ನು ಮಾಡುತ್ತಿದ್ದಾಗ್ಯೂ ತಿರುಗಿ ಜನ್ಮಕ್ಕೆ ಬರುವದಿಲ್ಲ ಯಾಕೆಂದರೆ ಎಲ್ಲದರಲ್ಲಿಯೂ ಅವನು ಈಶ್ವರನನ್ನೇ ಕಾಣುತ್ತಾನೆ ಅವನ ಪ್ರೇರಣೆಯು ಹೊರತು ಒಂದು ಎಲೆಯು ಕೂಡ ಅಲುಗಾಡುವದಿಲ್ಲವೆಂದು ಅರಿತು ಅವನು ಸ್ವಂತದ ಬಗ್ಗೆ ಅಹಂಕಾರವನ್ನು ಇಡುವದಿಲ್ಲ ಕರ್ಮದ ಬಂಧನದಿಂದ ಬೇರೆಯಾಗಿರುವನು. ಅವನು ತಿಳಿದಂತೆ ಆಕಾಶವು ಎಲ್ಲಕಡೆಗೆ ಇದ್ದರೂ ಅಲಿಪ್ತವಾಗಿರುವಂತೆ ಜೀವವು ಶರೀರದಲ್ಲಿದ್ದರೂ ಜ್ಞಾನದ ಯೋಗದಿಂದ ಅಲಿಪ್ತವಾಗಿರುವದು

ಯೆರವಡಾ,
ಸೋಮವಾರ ಪ್ರಭಾತ
ತಾ ೧೦-೧-೩೧

ಅಪಘಾತ ವಜ್ರಾಂಕುಶ ತೀವ್ರ

ರಾಮಬಾಣ ಮಲಮು!

ಈ ದಿವ್ಯ ಮಲಮು ಅಕಸ್ಮಾತ್ ಸಂಭವಿಸುವ ಗಾಯ, ಸುಟ್ಟ ಅಂಗ ನಾಶ, ಬಿಗು, ಕಸ ಗಂಟುನೋವು, ವ್ರಣ ಮುಂತಾದ ಅಪಘಾತಗಳಿಗೆ ತೀವ್ರವಾಗಿಯೂ, ಖಂಡಿತವಾಗಿಯೂ ಗುಣಪಡಿಸುತ್ತದೆ. ಅನುಭವಸಿದ್ಧ ಪ್ರಮುಖ ಮಲಮಿನ ಸಂಗಡ ಒಂದು ಡಬ್ಬಿಗೆ ರೂ ೧-೪-೦. ಟಿ ಪಿ ಬೇರೆ ಪತ್ತೆ— ದೇವಿದಾಸ ವಿಠೋಬ ಕಾಮತ, ಕೇಣಿ,
ಪೋ॥ ಅಂಕೋಲಾ.

ಸೂಚನೆ.— ಇದರ ವಿನಹ ನಮ್ಮ ಬೇರೆ ಔಷಧಗಳು ಸಹ ಅಂಕೋಲೆಯಲ್ಲಿ ರಾ॥ ವೈಕುಂಠ ಕಾಮತ ಇವರ ಅಂಗಡಿಯಲ್ಲಿ ದೊರೆಯುವವು

ಬಾಲಜೀವನ.

ಈ ಔಷಧವು ಗ್ರಾಣಿ (Rickets), ಬಾಲ-ಬಿಂದೆ ಅಸ್ಥಿಜ್ವರ, ಘಂಟಿ, ಕಫ, ನಾಯಿಗೆಮ್ಮು, ಕಾಳಿಜ ಬೇನೆ (Pain in the liver), ಅಂಡವಾಯು (Hernia) ಹೊಟ್ಟೆ ನೋವು, ಮಲಬದ್ಧತೆ, ರಕ್ತ ಹೀನತೆ, ಎಲುಬುಗಳ ರೋಗ, ಕ್ಷಯ, ಅಪಸ್ಮಾರ ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ದಿವ್ಯೌಷಧವಾಗಿರುತ್ತದೆ ಈ ಔಷಧವು ಹಿಂದು ತಿಂಗಳ ಶಿಶುವಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ-ಕಾಲುಗಳು ಕ್ಷೀಣವಾಗುವದು, ತಲೆಯು ಯಾವಾಗಲೂ ಬೆವರಿ [illegible]ರಾಗುವದು, ಹಲ್ಲು ಬರುವಾಗ ಆಗುವ ಉಪದ್ರವ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ ‘ಬಾಲಜೀವನ’ ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ

ಬಾಟ್ಲಿ ಕ್ರಯ ರೂ. ೧-೮-೦ ಟ ಖ. ಬೇರೆ

ಡಲ್‌ಸೆಟ್ ಎಂಡ್ ಕೋ.

ಪೋ. ಕುಮಟಾ (ಉ ಕಾನಡಾ.)

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೨೭-೨೮) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ

“ಪಾಫ್” ಹೊಲಿಗೆಮಶೀನುಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!

ಹಾಗು

ಬೇಕಾದ ಬೇರೆ ಭಾಗಗಳು ಸದಾ ದೊರೆಯುತ್ತವೆ

ಈ ಮಶೀನುಗಳು

ನೋಡಲಿಕ್ಕೆ ಚಂದವೂ, ನಡಿಸಲಿಕ್ಕೆ ಸುಕರವೂ, ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಮೂಲ ಏಜಂಟರು—

ಕುಲಕರ್ಣಿ ವಾಘ ಎಂಡ್ ಕಂಪನಿ,

ಶಾಂತಿಭುವನ, **ಕಾರವಾರ.**

ಮಂಗಳೂರ ಏಜಂಟರು — ಕಮಲಾಕರ ಅಪ್ಪಾಜಿರಾವ ವಾಘ

ಶಿರ್ಸಿ ಏಜಂಟರು— **ಕಾಮತ ಬ್ರದರ್ಸ.**
ಕುಮಟಾ ಏಜಂಟರು— **ಶಂಕರ ಅಪ್ಪಾಜಿರಾವ ವಾಘ**
ಹೊನ್ನಾವರ ಏಜಂಟರು— **ಶೇಟ ಮಂಜಪ್ಪಾ ಗಣೇಶ ಶೇಟ**

[ಕರ್ನಾಟಕ ಧುರೀಣದೊಳಗಿನ ಓರ್ವ ಮತದಾರ ಪ್ರೇಕ್ಷಕನ ಲೇಖನಕ್ಕೆ ಉತ್ತರ]

ಪ್ರೇಕ್ಷಕನು ನಾಯಿಯೇ?

(ಲೇಖಕ — ಗಣಪಯ್ಯಾ ಅನಂತ ನಾಯ್ಕ.)

೧. ಕರ್ನಾಟಕ ಧುರೀಣದ ತಾ. ೧೪-೩-೧೯೩೯ನೇ ಸಂಚಿಕೆಯಲ್ಲಿ 'ಓರ್ವ ಪ್ರೇಕ್ಷಕನು' ಒಂದು ಲೇಖವನ್ನು ಪ್ರಸಿದ್ಧಿಸಿರುವನು. ಅದರಲ್ಲಿ ಕಾನಡಾವೃತ್ತದ ತಾರೀಖು ೧೩-೩-೧೯೩೯ನೇ ಸಂಚಿಕೆಯಲ್ಲಿ ಕುಮಟಾ ಮ್ಯುನಿಸಿಪಾಲ್ಟಿಯ ಸಾಧಾರಣ ಸಭೆಯ ಸಂಬಂಧ ಆಗಿದ ಸಂಗತಿಯನ್ನು ವೃತ್ತಕಾರರು ಸೇರಿಸಿದ್ದಾರೆಂತ ಬರೆದಿರುತ್ತದೆ ಮತ್ತು ಜನತಾ-ಸಭೆ ಪತ್ರಿಕೆಯು ಪೂರ್ಣ ಮಾಹಿತಿಯನ್ನು ವೃತ್ತಕಾರರು ಒಪ್ಪಿಟ್ಟಿದ್ದು ತಾನು ಜನಸಾಮಾನ್ಯರ ತಿಳುವಳಿಕೆಯ ಬಗ್ಗೆ ಪ್ರಸಿದ್ಧಿಸುತ್ತೇನೆಂತ ವೃತ್ತಕಾರರಿಗೆ ಹೀಯಾಳಿಸಿ ತನ್ನ ಅಜ್ಞಾನತನವನ್ನೂ, ನಿಷ್ಪಕ್ಷಪಾತತನವನ್ನೂ ತೋರಿಸುವ ಹಾಗಿನ ವಾಕ್ಯ ರಚನೆಯನ್ನು ಮಾಡಿರುವನು ಒಮ್ಮೆ ಲೇಖದ ಪೂರ್ವ ಚರಿತೆಯು. ಅವನ ಲೇಖದಿಂದಲೇ ಇವನು ನಿಜವಾದ ಮಾಹಿತಿಯನ್ನು ಒಪ್ಪಿಟ್ಟು ಪಕ್ಷಪಾತತನದಿಂದ ಪೈ, ಪ್ರಭು, ಗಾವಸ್ಕರರನ್ನ ಎತ್ತಿ ಹಿಡಿದ. ಈಗಿನ ಚೇರಮನ್ನರಾದ ಶ್ರೀಯುತ ರಾಮ ಕಾಮತರನ್ನು ತಪ್ಪು ಮಾಡುವ ಉದ್ದೇಶದಿಂದ ಈ ಲೇಖವನ್ನು ಬರೆದಿರುತ್ತಾನೆಂಬುದು ಈ ಕೆಳಗಿನ ಮಾಹಿತಿಯಿಂದ ಜನಸಾಮಾನ್ಯರಿಗೆ ತಿಳಿದು ಬಂದೀತು.

೨. ಎರಡನೇ ಪ್ಯಾರಾದಲ್ಲಿ ಪ್ರೇಕ್ಷಕನು ಹೇಳುವಂತೆ ರಾ| ಅಣ್ಣಪ್ಪೈಯು ಅಧ್ಯಕ್ಷನ ಕಾಲದಲ್ಲಿ ಹಳೆ ಕಟ್ಟಿದ್ದೇನೆಂತ ನುಡಿದದ್ದು ಅಲ್ಲದಲ್ಲಿಯೂ, ರಾ| ಗಾವಸ್ಕರರು, ಅಣ್ಣಪ್ಪೈ-ಪ್ರಭುಗಳಿಗೆ ಮುಂದಾಗ್ರತೆ ಕೊಟ್ಟಿದ್ದಿಲ್ಲದಲ್ಲಿ ಪೈ-ಗಾವಸ್ಕರರೇ ಹಾಗೆ ಯಾಕೆ ಜಾಹೀರ ಮಾಡುವದಿಲ್ಲ. ಪ್ರೇಕ್ಷಕನಂಥ ಪಡದೆಯೊಳಗಿನ ವ್ಯಕ್ತಿಯು ಜಾಹೀರಗಿಂತ ಪೈ ಗಾವಸ್ಕರರು ಜಾಹೀರ ಮಾಡಿದರೆ ಹೆಚ್ಚು ವಿಶ್ವಸನೀಯವಲ್ಲವೇ? ಪೈ-ಗಾವಸ್ಕರರು ಸಕ್ಕ-ತ್ರಿಕೆಯು ಜನಸಾಮಾನ್ಯರಿಗೆ ತಿಳಿದುಬಂದೀತು. ಚಾ-ಬೀಡಿ ಸುಂಕವನ್ನು ಪೂರ್ಣ ರದ್ದು ಮಾಡಬೇಕಾಗಿ ಅಣ್ಣಪೈ-ಪ್ರಭುಗಳು ಮನೆಜಂಗ ಕಮಿಟಿಗೆ ಸೂಚಿಸಿದ್ದಾಗಿ ಪ್ರೇಕ್ಷಕನು ಬರೆಯುತ್ತಾನೆ. ಮನೆಜಂಗ ಕಮಿಟಿಯಲ್ಲಿ ಪೈ-ಪ್ರಭುಗಳು ಮೆಂಬರರು ಇಲ್ಲ. ಆದರೆ ಮನೆಜಂಗ ಕಮಿಟಿಯು ಪೆಶ್ಶಲ ಹಾಜರಿದ್ದರು ಇಲ್ಲ. ಅಂಥ ಮೇಲೆ ಮನೆಜಂಗ ಕಮಿಟಿಗೆ ಪೈ ಪ್ರಭುಗಳು ಯಾವಾಗ ಸೂಚಿಸಿದರು, ಅಥವಾ ಜನರಲ್ ಕಮಿಟಿಯಲ್ಲಿ ಮನೆಜಂಗ ಕಮಿಟಿಯೆಂತ ಹೇಳಿದ್ದೇ! ಒಂದು ವೇಳೆ ಮನೆಜಂಗ ಕಮಿಟಿಯು ಹೇಳಿದವನಾದರೂ ಜನರಲ್ ಕಮಿಟಿಯಲ್ಲಿ ಪೈ-ಪ್ರಭುಗಳ ಚಾ, ಬೀಡಿ ಸುಂಕವನ್ನು ಪೂರ್ಣ ರದ್ದು ಮಾಡಬೇಕೆಂಬ ಸೂಚನೆಯನ್ನು ಅಂಗೀಕರಿಸದಿದ್ದಲ್ಲಿ ಪೈ-ಪ್ರಭುಗಳು ತಮ್ಮ ಉಪಸೂಚನೆಯನ್ನು ಮಿನಿಟ ಬುಕದಲ್ಲಿ ಬರಿಸಬಹುದಿತ್ತಲ್ಲವೇ? ಅವರ ಕೈ-ಬಾಯಿಯನ್ನು ಯಾರು ಹಿಡಿದಿದ್ದರು? ಐದು ವರ್ಷಗಳ ವರೆಗೆ ಮ್ಯುನಿಸಿಪಾಲಿಟಿಯ ಅಧ್ಯಕ್ಷತನದ ಮಾಳಿಯನ್ನು ಹಾಕಿಕೊಂಡು ಮೆರೆದ ಪೈಗಳಿಗೆ ಮಿನಿಟ ಬುಕದಲ್ಲಿ ತಮ್ಮ ಉಪಸೂಚನೆಯನ್ನು ಬರಿಸಲಿಕ್ಕೆ ತಿಳಿಯುವದಿಲ್ಲವೇ? ಹಾಗೂ ಲೋಕಹಿತದಕ್ಷರೆಂತ ಮೆರೆಯುವ ಪೈ ಮುಖಂಡರು ೧೦-೨೦ ಸಾವಿರ ರೂಪಾಯಿ ಸಾಲ ಮಾಡಿದಾಗ್ಯೂ ಅವರ ಕಾಲಕ್ಕೆ ಚಾ-ಬೀಡಿ ಸುಂಕವನ್ನು ಯಾಕೆ ರದ್ದು ಮಾಡಲಿಲ್ಲ? ಈಗ ಮಾತ್ರ ಮ್ಯುನಿಸಿಪಾಲ್ಟಿಯು ಈ ಸುಂಕವನ್ನು ರದ್ದು ಮಾಡಬೇಕೆಂತ ಹೇಳುವದು ಪರೋಪದೇಶದಲ್ಲಿ ಪಾಂಡಿತ್ಯವಲ್ಲವೇ? ಪೈ ಮುಖಂಡರ ೩ ವರ್ಷದ ಕಾಲಕೀರ್ದಿಯಲ್ಲಿ ಅವರಿಂದ ರದ್ದಾಗದೇ ಇರುವ ಚಾ, ಬೀಡಿ ಸುಂಕವನ್ನು ಇತ್ತ ಮೂರು ತಿಂಗಳಿಂದ ಅಧಿಕಾರಾರೂಢರಾದ ರಾ| ಕಾಮತ ಇವರ ಮೆಂಬರ ಮಂಡಳಿಯವರು ಸದರ ಸುಂಕವನ್ನು ಅರ್ಧಕ್ಕಿಳಿಸುವ ಪ್ರಯತ್ನವಾದರೂ ಮಾಡಿರುವರಲ್ಲವೇ! ಇದರಿಂದ ಲೋಕಹಿತ ದಕ್ಷರ್ಯಾರೆಂಬುದು ಜನಸಾಮಾನ್ಯರೇ ತಿಳಕೊಳ್ಳಬಹುದು. ಉಪ್ಪಿನ್ನ ಕಾಗ್ಗ ವನೆಂಥ ಚೇರಮನ್ ಪೈ| ಕಾಮತರ ಗಣಾಗ ಟ್ಟಲಿಲ್ಲ. ೩೭ ಸಾವಿರ ರೂಪಾಯಿಗಳ ಬಜೆಟನಲ್ಲಿ ೩೦೦-೪೦೦ ರೂಪಾಯಿಗಳ ನಷ್ಟವೇನು?

೩. ಮೂರನೇ ಪ್ಯಾರಾದಲ್ಲಿ ಚೇರಮನ್ ಪೈ| ರಾಮ ಕಾಮತರವರು ಚಾ, ಬೀಡಿ ಸುಂಕವನ್ನು ಪೂರ್ಣ ರದ್ದು ಮಾಡುವ ಠರಾವನ್ನು ಯಾಕೆ ಪಾಸು ಮಾಡಿಕೊಳ್ಳಲಿಲ್ಲವೆಂತ ಅವರನ್ನು ದೂಷಿಸುತ್ತಾನೆ. ಮತ್ತು ಕೈ-ಬಾಯಿ ಹಿಡಿದಿದ್ದರೇ? ಪ್ರಶ್ನೆಗೆ ಗೌರವ ಪೇಕ? ನಾಲ್ಕೈದು ವರ್ಷಗಳಿಂದ ಕಾಮತರ ಮೇಲಿನ ತನ್ನ ದ್ವೇಷವನ್ನು ಮಾನ್ಸ ಯಗವನ್ನೂ ಸ್ಪಷ್ಟಮಾಡಿದ್ದಾನೆ. ಮನೆಜಂಗ ಕಮಿಟಿಯಲ್ಲಿ ಪಾಸ ಮಾಡಿಕೊಂಡ ಚಾ-ಬೀಡಿ ಸುಂಕವನ್ನು ಅರ್ಧಕ್ಕಿಳಿಸುವ ಠರಾವನ್ನು ಪೈ| ರಾಮ ಕಾಮತರೇ ಜನರಲ್ ಕಮಿಟಿಯಲ್ಲಿ ಸೂಚಿಸಿದರು. ಪೈ| ಗಾವಸ್ಕರರ ಪೈ-ಪ್ರಭುಗಳ ಬಾಯಿ ಹಿಡಿದು ಪೂರ್ಣ ರದ್ದುಮಾಡುವ ಉಪಸೂಚನೆಯನ್ನು ಮುಂದಿಡಲಿಕ್ಕೆ ಬಿಡದಿದ್ದ ಮೇಲೆ, ಪೈ| ಕಾಮತರು ತಮ್ಮ ಸೂಚನೆಯನ್ನು ಯಾಕೆ ಹಿಂತೆಗೆದುಕೊಳ್ಳಬೇಕು ಮತ್ತು ತಿದ್ದುಪಡಿ ಮಾಡಿ ಬೇರೆ ಸೂಚನೆಯನ್ನು ಯಾಕೆ ತರಬೇಕು, ಇದು ಸಭೆಯ ರಿವಾಜಿಗೆ ಅಸಂಬದ್ಧವೆಂತ "ಪ್ರೇಕ್ಷಕ"ನಿಗೆ ತಿಳಿಯುವದಿಲ್ಲವೇ? ಅಥವಾ ಕಾಮತರನ್ನು ದೂಷಿಸಿ ತಾನು ಪುಕ್ಕಟೆ ಗೌರವ ಪಡೆಯಲಿಕ್ಕೆ ಬರೆದಿರುವನು?

೪. ನಮ್ಮ ಪೇಟೆಯಲ್ಲಿ ಬಹು ಕಾಲದಿಂದ ಒಂದು ಮ್ಯುನಿಸಿಪಾಲ್ಟಿಯ ಬಾವಿಯುಂಟು. ಆ ಬಾವಿಯು ಕುಸಿದು ಬಿದ್ದದ್ದರಿಂದ ಹೊಸ ಬಾವಿಯನ್ನು ತೆಗಿಸಬೇಕಾಗಿಯೂ ಆ ಬಗ್ಗೆ ಶ್ರೀಯುತ ನಾಗೇಶ ಶಾಸ್ತ್ರಿಯರಿಂದ ಸುಬ್ಬ ಅಂಗಡಿಯ ಸಮೀಪ ಜಾಗೆಯನ್ನು ಕೊಡಬೇಕಾಗಿಯೂ, ಪೈ ಗಾವಸ್ಕರರ ಮ್ಯುನಿಸಿಪಾಲಿಟೀ ಈ ಮೊದಲೇ ನಿರ್ಣಯಿಸಿತ್ತು. ಮತ್ತು ಹೊಸ ಬಾವಿಯ ಬಗ್ಗೆ ಅಂಥ ಹಳೇ ಬಾವಿಯ ಸಮೀಪದ ಅವರ ಕಾಲದಲ್ಲಿ ಗುತ್ತಿಗಾರರನ್ನು ದಾಖಲ ಮಾಡಿದ್ದು ಈಗಲೂ ಕಾಣುತ್ತದೆ. ಆದರೆ ಹೋದ ವರುಷ ಅಣ್ಣಪೈರ ಅಧ್ಯಕ್ಷತೆಯಲ್ಲಿ ಕಟ್ಟಿಸಿದ ಸಮೀಪದ ಬಾವಿಯು ಪೈ ಗಾವಸ್ಕರರಿಗೆ ಮಹತ್ವದ್ದು ಕಂಡದ್ದರಿಂದ ಅವರು ಈ ಬಾವಿಯ ಕೆಲಸವನ್ನು ತಡೆಹಿಡಿದಿದ್ದರು. ಆ ಕೆಲಸವನ್ನು ರಾಮ ಕಾಮತರು ಮುಂದರಿಸಿದರೆ ತಪ್ಪೇನು? ಪೈ ಕಟ್ಟಿಸಿದ ಸಮೀಪದ ೭-೮ ಫೂಟ ಅಗಲದ ಬಾವಿಗೆ ರೂಪಾಯಿ ೮೦೦ ಖರ್ಚ, ಮತ್ತು ನಮ್ಮ ಪೇಟೆಯ ೧೬ ಫೂಟ ಅಗಲದ ಬಾವಿಗೆ ರೂ. ೮೦೦ ಅಂದಾಜು ಖರ್ಚ. ಮಿತವ್ಯಯ ಯಾರದೆಂತ ಆಲೋಚಿಸಿರಿ.

೫. ಈ ಕಾಲದಲ್ಲಿ ಮಾರ್ಕೆಟ್ಟಿಗೆ ಪೈರು ಕೊಂಡ ಮುಂದಿನ ಸಪ್ಪರ ವಟಾರಿಯ ಹಳೇ ಕಟ್ಟಿಗಳನ್ನು

(ಮುಂದೆ ೧೦ನೇ ಪಾನಿನ ಮೇಲೆ ಮುಂದರಿದೆ)

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೩೭-೩೮) ಅತ್ಯುಚ್ಚ ಯೋಗ್ಯತೆಯ
ಸರ್ಟಿಫಿಕೇಟು ಪಡೆದ
"ಪಾಫ್" ಹೊಲಿಗೆಮಶೀನು
ಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!
ಹಾಗು
ಬೇಕಾದ ಬೇರೆ ಭಾಗಗಳು ಸಹ ದೊರೆಯುತ್ತವೆ!!
ಈ ಮಶೀನುಗಳು
ನೋಡಲಿಕ್ಕೆ ಚಂದವೂ, ನಡಿಸಲಿಕ್ಕೆ ಸುಕರವೂ,
ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ
ಇದ್ದು ಅಗ್ಗವಾಗಿವೆ!!
☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!
ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ ಏಜಂಟರು—
ಕುಲಕರ್ಣಿ ವಾಘ ಎಂಡ್ ಕಂಪನಿ,
ಶಾಂತಿಭುವನ, ಕಾರವಾರ.
ಮಂಗಳೂರ ಏಜಂಟರು— ಕಮಲಾಕರ ಅಪ್ಪಾಜಿರಾವ ವಾಘ.
ಸಿರ್ಸಿ ಏಜಂಟರು:- ಕಾಮತ ಬ್ರದರ್ಸ.
ಕುಮಟಾ ಏಜಂಟರು.- - ಶಂಕರ ಅಪ್ಪಾಜಿರಾವ ವಾಘ
ಹೊನ್ನಾವರ ಏಜಂಟರು — ಕೆರ್ಕಿ ಮಂಜಪ್ಪಾ ನಗೇರ ಶೇಟ

ಗೀತೆಯೂ, ರಾಜಕಾರಣವೂ.

ಬರೆದವರು:

ಶ್ರೀ|| ಹನುಮಂತರಾವ ಮಾಂಜರೇಕರ.

[ಗೀತಾಬೋಧೆಯ ಅನುವಾದದಿಂದ 'ವೃತ್ತ'ದ ವಾಚಕರಿಗೆ ಪರಿಚಿತರಾದ ಶ್ರೀ|| ಮಾಂಜರೇಕರ ಹನುಮಂತರಾಯರ ಈ ಬರೆಹವು ಬೆಂಗಳೂರಿನ "ಸುಬೋಧ" ಮಾಸ ಪತ್ರಿಕೆಯ ಮಾರ್ಚ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿದೆ 'ವೃತ್ತ'ದ ವಾಚಕರಿಗಾಗಿ ಅದನ್ನು ಇಲ್ಲಿ ಪುನರ್ಮುದ್ರಿಸಿದೆ— ಸಂಪಾದಕ.]

ಭಗವದ್ಗೀತೆಯು ಬುನಾದಿಯಿಂದ ನಡೆದು ಬಂದ ಸಾಂಪ್ರದಾಯದ ಪ್ರಕಾರ ಅಧ್ಯಾತ್ಮ ವಿದ್ಯೆಗೆ ಸೇರಿದ ಒಂದು ಪಾವನವಾದ ಗ್ರಂಥವು, ಅಧ್ಯಾತ್ಮ ಶಾಸ್ತ್ರದ ವೇದಾಂತ ಗುಟ್ಟನ್ನು ಸಾಧಕರಿಗೆ ಸುಲಭವಾಗುವಂತೆ ಕಾವ್ಯಮಯವಾದ ಭಾಷೆಯಲ್ಲಿ ಬಿಚ್ಚಿ ಹೇಳುವಂತಹ ತತ್ವಗ್ರಂಥವು. ಇದು ಹಿಂದೂ ಸಂಸ್ಕೃತಿಯ ಉಚ್ಚವಾದ ತತ್ವಜ್ಞಾನವನ್ನೂ ನೀತಿಧರ್ಮವನ್ನೂ ಜನರಿಗೆ ಬೋಧಿಸುವಂಥ ಧರ್ಮಗ್ರಂಥವು. ಹೀಗಿದ್ದು ಗೀತೆಗೂ ರಾಜಕಾರಣಕ್ಕೂ ಇರುವ ಸಂಬಂಧವಾವುದೆಂಬ ಪ್ರಶ್ನೆಯು ಸಹಜವಾಗಿ ಹುಟ್ಟುತ್ತದೆ. ಆದರೆ ಗೀತೆಯ ಅವತಾರವು ಯಾವ ಕಾಲದಲ್ಲಿ ಆಯಿತು ಎಂಬುದರ ಕಡೆಗೆ ನಾವು ಗಮನಿಸಿದರೆ, ಈ ಸಮಸ್ಯೆಯನ್ನು ಯುಕ್ತವಾಗಿ ಬಿಡಿಸಬಹುದು. ಭಾರತವರ್ಷದಲ್ಲಿ ಅತಿ ಪ್ರಾಚೀನ ಕಾಲದಲ್ಲಿ ನಡೆದ ಒಂದು ದೊಡ್ಡ ರಾಜಕೀಯ ಆಂದೋಲನದ ಹೊತ್ತಿಗೆ ಗೀತೆಯು ಜನ್ಮವೆತ್ತಿತು. ಪಾಂಡವರ ನ್ಯಾಯವಾದ ಕನಿಷ್ಠ ಬೇಡಿಕೆಗಳನ್ನೂ ಮದಾಂಧರಾದ ಕೌರವರು ಧಿಕ್ಕರಿಸಿ ಉಂಟುಮಾಡಿದ ಪರಿಸ್ಥಿತಿಯಲ್ಲಿ ತಮ್ಮ ಹಕ್ಕುಸಂರಕ್ಷಣೆಗಾಗಿ ಯುದ್ಧ ಮಾಡುವದಲ್ಲದೆ ಬೇರೊಂದು ಗತಿಯು ಇರಲಿಲ್ಲ. ಹೋರಾಟಕ್ಕೆ ಸಜ್ಜವಾಗಿ ಎರಡು ಸೇನೆಗಳು ನಿಂತಿರುವಾಗ ಅರ್ಜುನನಿಗೆ ಶತ್ರುಪಕ್ಷದವರು ತಮ್ಮ ಬಂಧುಗಳೆಂದೂ, ಅವರನ್ನು ಕೊಲ್ಲುವುದು ಪಾಪವೆಂದೂ, ಉಪರತಿಯೂ ಮೋಹವೂ ಒಮ್ಮಿಂದೊಮ್ಮೆ ಉಂಟಾದವು. ಕ್ಷಾತ್ರಧರ್ಮಕ್ಕೆ ಸರ್ವದಾ ಒಪ್ಪದಂಥ ಈ ವೃತ್ತಿಯಿಂದ ಅರ್ಜುನನನ್ನು ಬಿಡಿಸಲಿಕ್ಕೆ ಕುರುಕ್ಷೇತ್ರದ ರಣಾಂಗಣದ ಮೇಲೆ ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಯುದ್ಧಕ್ಕೆ ಹುರಿಗೂ' ದೀಕ್ಷೆ ಮಾಡಿದ ಅಮೋಘವಾದ ಉಪದೇಶವೇ ಗೀತೆಯು. ಆ ದಿವ್ಯವಾಣಿಗೆ ಶ್ರೀ ವ್ಯಾಸರು ಕಾವ್ಯರೂಪವನ್ನು ಕೊಟ್ಟು ನಮ್ಮ ಮುಂದೆ ಇಟ್ಟಿದ್ದಾರೆ. 'ವಿನಾಶಾಯ ಚ ದುಷ್ಕೃತಾಂ' ಎಂಬಂತೆ ದುಷ್ಟರಾದ ಕೌರವರ ಕಡೆಯಿಂದ ರಾಜ್ಯಪರಿಪಾಲನೆಯನ್ನು ಬಿಡಿಸುವಂಥ ಮಹತ್ವದ ರಾಜಕೀಯ ಕಾರಸ್ಥಾನವನ್ನು ಶ್ರೀಕೃಷ್ಣನಿಗೆ ಅರ್ಜುನನ ಕಡೆಯಿಂದ ಮಾಡಿಸುವದಿತ್ತು. 'ಆ ರಾಜಕಾರಣವನ್ನು ಅವನು ಗೀತೋಪದೇಶದಿಂದ ಚೆನ್ನಾಗಿ ಸಾಧಿಸಿದನು ಇದರಮೇಲಿಂದ ಗೀತೆಗೂ ರಾಜಕಾರಣಕ್ಕೂ ಇರುವ ಮೂಲ ಸಂಬಂಧವನ್ನು ನಾವು ತಿಳಿದುಕೊಳ್ಳಬಹುದು. ಇನ್ನೂ ಪ್ರಮಾಣಗಳು ಬೇಕಾದರೆ, ಗೀತೆಯಲ್ಲಿಯೇ ಶ್ರೀಕೃಷ್ಣನು "ಗೀತಾಬೋಧವು ವಿವಸ್ವಾನ್, ಮನು, ಇಕ್ಷ್ವಾಕು ಮೊದಲಾದ ಕ್ಷತ್ರಿಯರಿಗೆ ಪರಂಪರೆಯಿಂದ ಗೊತ್ತಿತ್ತೆಂದು ಹೇಳಿದ್ದಾನೆ. ಹೀಗೆ ಪ್ರಾಮುಖ್ಯವಾಗಿ ಒಂದು ಮಹತ್ವದ ರಾಜಕೀಯ ಪ್ರಸಂಗದಲ್ಲಿ ಹೊರಟ ಗೀತಾಗ್ರಂಥಕ್ಕೆ ಪ್ರಸ್ಥಾನತ್ರಯಿಯಲ್ಲಿ ಹೇಗೆ ಎಡೆ ಸಿಕ್ಕಿತು ಎಂಬದನ್ನು ಬಲ್ಲವರು ಗೊತ್ತುಮಾಡತಕ್ಕಂಥ ವಿಷಯ. ಆದರೆ ನಮ್ಮ ರಾಜಕಾರಣದ ಕಟ್ಟಡವು ಧರ್ಮದ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆ, ಎಂಬ ಮಾತನ್ನು ಲಕ್ಷ್ಯಕ್ಕೆ ತಂದರೆ ಗೀತೆಯನ್ನು ವೇದಾಂತ ಶಾಸ್ತ್ರದ ಗ್ರಂಥಗಳಲ್ಲಿ ಹೇಗೆ ಸೇರಿಸಿಬಿಟ್ಟರು, ಎಂಬುವದನ್ನು ಊಹಿಸಬಹುದು।

ಹೀಗೆ ಸಾವಿರಾರು ವರ್ಷಗಳಿಂದ ಪ್ರಸ್ಥಾನತ್ರಯಿಯಲ್ಲಿ ಸೇರಿ ಕೇವಲ ವೇದಾಂತಿಗಳಿಂದಲೇ ಭಕ್ತಿಯಿಂದ ಸೇವಿಸಲ್ಪಟ್ಟಂಥ ಗೀತೆಯು ಮತ್ತೆ ಈ ಶತಮಾನದಲ್ಲಿ ಭಾರತದ ರಾಜಕಾರಣದಲ್ಲಿ—ಯುದ್ಧಾರಂಭದಲ್ಲಿ ಮೋಹಿತನಾದ ಅರ್ಜುನನಿಗೆ ಮಾಡಿದಂತೆ ಕಿಂಕರ್ತವ್ಯತಾಮೂಢರಾದ ಭಾರತೀಯರನ್ನು ತನ್ನ ದಿವ್ಯ ಸಂದೇಶದಿಂದ ಸ್ಫೂರ್ತಿಯನ್ನೀಯಲಿಕ್ಕೆ—ಹೇಗೆ ಇಳಿಯಿತೆನ್ನುವುದರ ವಿಚಾರವನ್ನು ಈಗ ಮಾಡಬೇಕಾಗಿ ಬಂದಿದೆ. ೧೯೦೫ನೇ ಇಸವಿಯ ವಂಗಭಂಗದ ಚಳುವಳಿಯ ಕಾಲಕ್ಕೆ ಮೊಟ್ಟಮೊದಲು ಬಂಗಾಲದಲ್ಲಿ ಆಧುನಿಕ ರಾಜಕಾರಣದಲ್ಲಿ ಗೀತೆಯ ಅವತಾರವಾಯಿತೆಂದು ಹೇಳಬಹುದು. ಈಗ ಪಾಂಡಿಚೇರಿಯಲ್ಲಿ ಯೋಗಸಾಧನೆ ಮಾಡುತ್ತಿರುವ ಶ್ರೀ| ಅರವಿಂದ ಘೋಷರು ಕ್ರಾಂತಿಕಾರಕರ ಖಟ್ಲೆಯೊಂದರಲ್ಲಿ ಸೇರಿಸಲ್ಪಟ್ಟವರಾಗಿ ಅಲಿಪುರದ ಜೈಲಿನಲ್ಲಿ ಶಿಕ್ಷೆಯನ್ನು ನಿರೀಕ್ಷಿಸುತ್ತಿರುವಾಗ ಗೀತೆಯ ನಾಯಕನಾದ ಶ್ರೀಕೃಷ್ಣನನ್ನು ಧ್ಯಾನಿಸುತ್ತಿರಲು, ತಮ್ಮ 'ಅಂಧೇರಿ'ಯಲ್ಲಿ ಅವರಿಗೆ ಪರಮಾತ್ಮದರ್ಶನವು ಅಕಸ್ಮಾತ್ತಾಗಿ ಆಯಿತು. ಅಲ್ಲಿ ತಮಗೆ ದೊರೆತ ಆದೇಶವನ್ನು ಅವರು ದೋಷಮುಕ್ತರಾಗಿ ಸೆರೆಮನೆಯಿಂದ ಹೊರಬಿದ್ದ ಕೂಡಲೇ ಉತ್ತರಪಾರಾ ಎಂಬಲ್ಲಿ ಮಾಡಿದ, ವಿಶೇಷ ಪ್ರಸಿದ್ಧಿಯನ್ನು ಪಡೆದ ಭಾಷಣದಲ್ಲಿ ಹಿಂದೀ ಜನತೆಗೆ ಅರುಹಿದರು. ಅಂದಿನಿಂದ ಗೀತೆಗೆ ರಾಜಕಾರಣದಲ್ಲಿ ಮತ್ತೆ ಮಹತ್ವವು ಪ್ರಾಪ್ತವಾಯಿತು. ಗೀತೆಯ ಉದಾತ್ತವಾದ ತತ್ವಜ್ಞಾನವು ಕ್ರಾಂತಿಕಾರಕರಿಗೆ ನವಚೈತನ್ಯವನ್ನು ಕೊಟ್ಟು ಹುರಿದುಂಬಿಸಿತು ಅವರು ಗೀತೆಯನ್ನು ಹಾಡಿ ತಮ್ಮ ಕಾರ್ಯಕ್ಕೆ ಹೊಸ ಹುರುಪನ್ನು ತಂದುಕೊಂಡರು. ಕನ್ಯಾಲಾಲ ದತ್ತರಂಥ ವೀರರು ಗೀತೆಯನ್ನು ಕೈಯಲ್ಲಿ ತೆಗೆದುಕೊಂಡು ನಗೆಮೊಗದಿಂದ ಸ್ವರಾಜ್ಯಕ್ಕಾಗಿ ಗಲ್ಲಿಗೇರಿದರು. ಪಂಜಾಬದ ಪ್ರಖ್ಯಾತ ದೇಶಭಕ್ತರಾದ ಭಾಯಿ ಪರಮಾನಂದರದೊಂದು ಕತೆಯನ್ನು ಹೇಳುತ್ತಾರೆ. ಅವರು ದೇಹಾಂತ ಶಿಕ್ಷೆಯನ್ನು ಹೊಂದಿ, ಸೆರೆಮನೆಯೊಳಗಣ 'ಫಾಶಿ' ಕೋಣೆಯಲ್ಲಿ ಭೀತಿಯಿಂದ ಕಳವಳಗೊಂಡು ಕಾಲವನ್ನು ಕಳೆಯುತ್ತಿರುವಾಗ ಗೀತೆಯ ನೆನಪು ಅವರಿಗಾಯಿತು ಮರುದಿವಸವೇ ಭೆಟ್ಟಿಗೆ ಬಂದ ತಮ್ಮ ಪತ್ನಿಯ ಕಡೆಯಿಂದ ಗೀತೆಯನ್ನು ತರಿಸಿ, ಅದರ ಪಾರಾಯಣದಿಂದ ಶಾಂತಿಯನ್ನು ಪಡೆದು ಭಯವನ್ನೋಡಿಸಿಬಿಟ್ಟರು. ಕಡೆಗೆ ಹೈಕೋರ್ಟಿನ ಮೇಲ್ವಿಚಾರಣೆಯಲ್ಲಿ ದೇಹಾಂತ ಶಿಕ್ಷೆಯ ಬದಲಾಗಿ ಕರಿನೀರಿನ ಶಿಕ್ಷೆಯು ಅವರಿಗೆ ವಿಧಿಸಲ್ಪಟ್ಟಿತು. ಆ ದೀರ್ಘಕಾಲದ ಶಿಕ್ಷೆಯನ್ನು ಮುಗಿಸಿ ತಾಯ್ನಾಡಿಗೆ ಮರಳಲು, ಗೀತೆಯ ಶ್ರೀಕೃಷ್ಣನ ಲೀಲಾಭೂಮಿಯಾದ ವೃಂದಾವನಕ್ಕೆ ಮೊಟ್ಟಮೊದಲು ಹೋಗಿ ಅಲ್ಲಿಯ ಪವಿತ್ರ ಧೂಲಿಯನ್ನು ಹಣೆಗಿಟ್ಟು ಶಾಂತಿಯನ್ನೈದಿ ಕೃತಾರ್ಥರಾದರು. ಇತ್ತೀಚೆಗೆ ಕಾಕೋರಿ ಖಟ್ಲೆಯೊಳಗಿನ ಶ್ರೀರಾಮಪ್ರಸಾದ ಮೊದಲಾದವರು ಗೀತೆಯ ಸಾನ್ನಿಧ್ಯದಲ್ಲಿಯೇ ಯಮನನ್ನು ಆಹ್ವಾನಿಸಿದರು.

ನಮ್ಮ ರಾಜಕೀಯ ಮುಂದಾಳುಗಳ ಚರಿತ್ರೆಗಳನ್ನು ನಾವು ಲಕ್ಷ್ಯಪೂರ್ವಕವಾಗಿ ಅವಲೋಕಿಸಿದರೆ ಗೀತೆಯೇ ಅವರಿಗೆ ಸಂಕಟ ಕಾಲದಲ್ಲಿ ಸ್ಫೂರ್ತಿಯನ್ನೂ, ಚೈತನ್ಯವನ್ನೂ, ಆವೇಶವನ್ನೂ ಕೊಟ್ಟು ರಾಜಕಾರಣದ ರಣಾಂಗಣದಲ್ಲಿ ಅವರನ್ನು ಎಳೆದು ತಂದಿದೆ ಎಂಬ ಮಾತು ತಾನೇ ಹೊಳೆಯುವದು. ನಿರಾಶೆಯ ಸಮಯದಲ್ಲಿ ಅವರಲ್ಲಿ ಆಶಾಂಕುರವನ್ನು ಹುಟ್ಟಿಸಿದೆ. ಅನೇಕ ದೇಶಭಕ್ತರು ಗೀತೆಯ ಪಾರಾಯಣವನ್ನು ಮಾಡಹತ್ತಿದರು; ಗೀತೆಯ ಮೇಲೆ ರಾಜಕೀಯ ಪ್ರವಚನಗಳಾಗಹತ್ತಿದವು; ಸ್ವಲ್ಪದರಲ್ಲಿ ಹೇಳಬೇಕಾದರೆ ಗೀತೆಯು ತರುಣ ದೇಶಭಕ್ತರಿಗೆ ನಿಷ್ಕಾಮ ಕರ್ಮಯೋಗಕ್ಕೂ, ಆತ್ಯಂತಿಕ ಸ್ವಾರ್ಥತ್ಯಾಗಕ್ಕೂ ಚೇತರಿಸಿ ಭಕ್ತಿ-ಶಕ್ತಿಗಳನ್ನೀಯುವ ನಿಧಿಯ ಗೂಡೇ ಆಯಿತು. ಹೀಗಾಗಿ ಗೀತೆಯು ನಮ್ಮ ಸರಕಾರದ ವಕ್ರದೃಷ್ಟಿಗೆ ಸಹ ಗುರಿಯಾಯಿತು.

ಈ ಶತಮಾನದಲ್ಲಿ ನಮ್ಮ ಮುಂದಾಳುಗಳಲ್ಲನೇಕರು ಗೀತೆಯ ಕುರಿತು ತಮ್ಮ ಅಮೋಘವಾದ ವಿಚಾರಗಳನ್ನು ಜನತೆಯ ಮುಂದಿಡುತ್ತಿದ್ದಾರೆ. ಲೋಕಮಾನ್ಯರು ಗೀತಾರಹಸ್ಯವನ್ನು ಜನರಿಗೆ ತಿಳಿಸಿ ಹೇಳಿದರು. ಮಹಾತ್ಮರು ಗೀತಾಬೋಧವನ್ನೂ, ಅನಾಸಕ್ತಿಯೋಗವನ್ನೂ ಬೋಧಿಸಿದರು; ಲಾಲಾಜಿಯವರು ಗೀತೆಯ ಸಂದೇಶವನ್ನು ಕೊಟ್ಟರು; ಭಾಯಿ ಪರಮಾನಂದರು ಗೀತಾಮೃತವನ್ನು ಕುಡಿಸಿದರು; ಅರವಿಂದರು ಗೀತೆಯ ಮೇಲೆ ನಿಬಂಧಗಳನ್ನು ಬರೆದರು, ಕರ್ನಾಟಕದಲ್ಲಿ ದಿವಾಕರರು ಗೀತೆಯ ಗುಟ್ಟನ್ನು ಹೇಳಿಬಿಟ್ಟರು. ಇಂಥ ರಾಜಕೀಯ ಹಾಗೂ ಧಾರ್ಮಿಕ-ಮನ್ನಣೆಯನ್ನು ಪಡೆದ ಗ್ರಂಥದ ಸಂದೇಶವು ವರ್ತಮಾನಕಾಲದಲ್ಲಾವುದೆಂಬುದನ್ನು ವಿಚಾರಿಸುವುದು ಅವಶ್ಯವು

ಭಾರತೀಯ ಯುದ್ಧದ ಕಾಲಕ್ಕೆ ಅರ್ಜುನನಿಗೆ ಬಂದೊದಗಿದ ತೊಡಕುಗಳೂ, ಶಂಕೆಗಳೂ ಇಂದು ನಮ್ಮ ಮುಂದೆ ಉಪಸ್ಥಿತವಾಗಿವೆ ಎಲ್ಲ ಪಾಶವೀ ಶಕ್ತಿಗಳಿಂದ ಕೂಡಿಕೊಂಡ ಎದುರಾಳಿಗೆ ಅಹಿಂಸಾ ಮಾರ್ಗದಿಂದ ಎದುರಾಗಬಹುದೇ ? ಕೈರಾಟೆಯ ಸಹಾಯದಿಂದ ಅವರ ಬಟ್ಟೆಗಳನ್ನು ಬಹಿಷ್ಕರಿಸಬಹುದೇ ? ಈ ಹೋರಾಟದಲ್ಲಿ ನಮಗೆ ಯಶಸ್ಸು ಸಿಕ್ಕುವದೇ ? ಅರ್ಜುನನಿಗೆ ಉಂಟಾದ ಮನೋದೌರ್ಬಲ್ಯವೇ ಇಂದು ನಮ್ಮನ್ನು ಮುತ್ತಿರುವುದು. ಇವೆಲ್ಲವುಗಳ ನಿವಾರಣೆಗೆ ನಾವೂ ಗೀತೆಗೇ ಶರಣು ಹೋಗಬೇಕು

ಐದು ಸಾವಿರ ವರ್ಷಗಳ ಹಿಂದಿನ ಆ ಯುದ್ಧವು ಕ್ಷತ್ರಿಯರಲ್ಲಿ ಶಸ್ತ್ರಾಸ್ತ್ರಗಳ ಸಹಾಯದಿಂದ ನಡೆದಿತ್ತು; ಅದು ಹಿಂಸಾತ್ಮಕವಾದುದು ಆದರೆ ಇಂದಿನ ಹೋರಾಟವು ಅಹಿಂಸಾ ಪ್ರಧಾನವಾಗಿರುವದೇಕೆ

ಮುದನ್ನು ನಾವು ವಿಚಾರಿಸಬೇಕು. ನಮ್ಮದು ವ್ಯಾಪಾರಿ-ಗಿರಾಕಿಗಳ ನಡುವಿನ ಒಗ್ಗಟ್ಟು. ಇದು ಶಸ್ತ್ರಾಸ್ತ್ರಗಳಿಂದ ಹೇಗೆ ಸಾಗಬೇಕು? ಇದರಲ್ಲಿ ಪ್ರತಿಸ್ಪರ್ಧಿಗಳಾದ ವ್ಯಾಪಾರಿಗಳ ಮಾಲನ್ನು ಗಿರಾಕಿಗಳಾದ ನಾವು ಕೊಂಡುಕೊಳ್ಳದಿರುವುದು, ನಮಗೆ ಬೇಕಾದ ಪದಾರ್ಥಗಳನ್ನು ನಾವೇ ತಯಾರಿಸುವುದು, ಸ್ವದೇಶೀ ವ್ರತವನ್ನು ಧರಿಸುವದು—ಇದೇ [illegible] ಶಾಂತತಾಪ್ರಧಾನವಾದ ಉಪಾಯದಿಂದ ಲೇ ಎದುರಾಳಿಯನ್ನು ಹಣ್ಣು ಮಾಡಬೇಕು. ನಾವು ಕೈಕೆಲಸದ ಸಾಧನಗಳಲ್ಲಿ ನಮ್ಮ ದೃಢವಾದ ನಂಬಿಕೆ ಇರಬೇಕು. ನಂಬಿಕೆಗೆ ತಕ್ಕಂತೆ ಫಲವು ಒದಗದು ಕಷ್ಟವೇ? ಆದರೆ ಒಂದು ವೇಳೆ ಕಣ್ಣಿಟ್ಟರೆ ವ್ಯಾಪಾರವನ್ನು ಯೋಚಿಸಿದರೆ ಸಿದ್ಧಾಂತವು ನಮ್ಮ ಪಾಲಿಗೆ ಬರುವುದು. ಸ್ವಾತಂತ್ರ್ಯ-ಸ್ವಮಾನವನ್ನು ನಿಶ್ಚಯಿಸಿದ ಅವಲಂಬನೆಯಿಂದ ಗೀತೆಯ ಗುಟ್ಟನ್ನು ನಾವು ಅರಿಯಬೇಕು. ಪಾರತಂತ್ರ್ಯದ ನಾಶದ [illegible] ಬರಿಮಾಗೆಯುವುದೇ ನಮ್ಮ ಕರ್ತವ್ಯ. [illegible] ನಮ್ಮಂಟಾದರೆ ನಮ್ಮ ಆಕಾಂಕ್ಷೆಗಳೆಲ್ಲ ಕೈಗೂಡುವವು.

ಇನ್ನೊಂದು ಮಾತು. ರಾಜಕಾರಣದ ದೃಷ್ಟಿಯಿಂದ ಗೀತೆಯ ಸಂದೇಶವನ್ನು ತಿಳಿದು ಆಚರಣೆ ಮಾಡುವಾಗ ನಾವು ನಮ್ಮ ರಾಜಕೀಯ ಮೋಕ್ಷಕ್ಕಾಗಿ ಸ್ವೀಕರಿಸುವ ಸಾಧನಗಳು ಅಹಿಂಸಾಮಯವಾಗಿರಬೇಕೋ ಹಿಂಸಾಮಯವಾಗಿರಬಹುದೋ? ಎಂಬ ಪ್ರಶ್ನೆಯನ್ನು ಎದುರಿಗೆ [illegible] ಬಿಡಿಸೋಣ. [illegible] ಗಿದೆ. ಹಿಂಸೆ ಎಂದ ಕೂಡಲೇ ಏಕಾಂತಿಕ ನಾಶ ಎನ್ನುವದೊಂದು ಸಂಪ್ರದಾಯವಿದೆ. ಅಹಿಂಸೆ ತ್ಯಾಜ್ಯವನ್ನು ಮಾಡಿದರೂ ತಲೆಯ ಮುಂದೆ ಇಡುತ್ತಾರೆ. ಹಿಂದೂ ಧರ್ಮ ವ್ಯಕ್ತಿಯಿಂದ ಹೇಳುವದಾದರೆ ಸಾಮೂಹಿಕ ಧರ್ಮಯ ದೃಷ್ಟಿಯಲ್ಲಿ ಹಿಂಸೆಯು ನಿಷ್ಪಾಪದೆನಿಸಲ್ಪಟ್ಟಿಲ್ಲ. ಗೀತೆಯು ಮಾತ್ರ ಹಾಗಲ್ಲ. ಗೀತೆಯಲ್ಲಿ ಸ್ಥಿತಪ್ರಜ್ಞನ, ಗುಣಾತೀತನ ಅಥವಾ ಭಕ್ತನ ಲಕ್ಷಣಗಳಲ್ಲಿ ಅಹಿಂಸೆಗೆ ಏನೋ ಮಿಗಿಲಾದ ಸ್ಥಾನವಿದೆ. ಇದು ವ್ಯಕ್ತಿಧರ್ಮದ ನಿರೂಪಣೆಯಲ್ಲಿ ನೆಟ್ಟಗಿದೆ. ಇದನ್ನು ರಣಕಾರ್ಯದಲ್ಲಿ ಅನ್ವಯಿಸಿಕೊಳ್ಳುವ ಬಗೆ [illegible] ವಸ್ಥಾ ಪ್ರಸಂಗವು ಬರಬಹುದು. ಗಾಂಧೀಜಿಯವರು ಕೂಡ ಗೀತೆಯು ಬರೇ ಅಹಿಂಸಾ ಧರ್ಮದ ನಿರೂಪಣೆಗಾಗಿಯೇ ಹೊರಟಿಲ್ಲವೆಂದು ಅನಾಸಕ್ತಿಯೋಗದ ಮುನ್ನುಡಿಯಲ್ಲಿ ಒಪ್ಪಿಕೊಂಡಿದ್ದಾರೆ. ಅವರ ಅವರ ಅತ್ಯಂತಿಕ ಭಕ್ತರಲ್ಲೊಬ್ಬರಾದ ಸತ್ಯಾಗ್ರಹ ಆಶ್ರಮದ ಶ್ರೀ ವಿನೋಬಾ ಭಾವೆ ಅವರು ಗೀತೆಯಲ್ಲಿ ಕೂಡ ಅಹಿಂಸೆಯನ್ನೇ ಹುಡುಕುತ್ತಾರೆ. ಕ್ಷಾತ್ರಧರ್ಮ ನಿರೂಪಣೆಯ ಗೀತೆ 'ಯುದ್ಧ' ಶಾಸ್ತ್ರ [illegible] ಎಂಬುದಕ್ಕೆ—ಯುದ್ಧದಲ್ಲಿ ನಿರ್ಭಯದಿಂದ ಎದುರಿಟ್ಟು ಪಲಾಯನ ಮಾಡದೆ ನಿಲ್ಲುವುದು ಕೂಡ [illegible] ಚಾರ ಮಾಡುವದು ಅಲ್ಲ—ಎಂಬ ಅರ್ಥ ಮಾಡ ಬೇಕಾಯಿತ್ತೆಂದು ಮಾಡಿದ್ದಾರೆ! ಇದು ಎಷ್ಟರಮಟ್ಟಿಗೆ ಯುಕ್ತವೋ ಸಂಶಯ. ನನ್ನ ಅಲ್ಪಬುದ್ಧಿ. ಹರಿಯನೆ ಮಾತು ಶ್ರೀ [illegible] 'Ethics of B[illegible]' ಎಂಬ [illegible] ನದಲ್ಲಿ ರಾಜಪ್ರಧಾನವಾದ ಕ್ಷಾತ್ರಧರ್ಮದಲ್ಲಿ ಹಿಂಸಾ ಮಾರ್ಗವು ತ್ಯಾಜ್ಯವಲ್ಲವೆಂದು ಹೇಳುವರು. ಇವೆಲ್ಲವುಗಳ ಮೇಲಿಂದ ಹೊರಡುವ ನಿಷ್ಕರ್ಷವಿಷ್ಟೇ—ರಾಜಕಾರಣದಲ್ಲಿ ಹಿಂಸಾಮಾರ್ಗವು ನಿಷಿದ್ಧವಾದುದಲ್ಲ. ಆದುದರಿಂದ ರಾಷ್ಟ್ರವು ಕಾಲಕಾಲಕ್ಕೆ ಗೊತ್ತುಪಡಿಸಿದ ಮಾರ್ಗದಿಂದ—ಅದು ಹಿಂಸಾತ್ಮಕವಿರಲಿ, ಅಹಿಂಸಾತ್ಮಕವಿರಲಿ ನಾವು ಶ್ರದ್ಧೆಯಿಟ್ಟು ನಡೆದು ಶ್ರೀಕೃಷ್ಣನು—ಹತೋ ವಾ ಪ್ರಾಪ್ಸ್ಯಸಿ ಸ್ವರ್ಗಂ ಜಿತ್ವಾ ವಾ ಭೋಕ್ಷ್ಯಸೇ ಮಹೀಮ್—ಎಂದು ಕೊಟ್ಟ ಆಶ್ವಾಸನವನ್ನು ಸಂಪೂರ್ಣವಾಗಿ ನಂಬಿ ರಾಜಕೀಯ ಮೋಕ್ಷವನ್ನು, ಅರ್ಥಾತ್ ಸ್ವಾತಂತ್ರ್ಯವನ್ನು ಸಾಧಿಸಬೇಕಾಗಿದೆ. ಈ ಸ್ವರಾಜ್ಯ ಸಾಧನದಲ್ಲಿ ಗೀತೆಯ ಭಕ್ತಿಯುಕ್ತವಾದ ಸತತಾಭ್ಯಾಸ, ಮನನಗಳು ನಮಗೆ ದಿವ್ಯಸ್ಫೂರ್ತಿಯನ್ನು ಮನೋಬಲವನ್ನು ಕೊಡಲಿ *

---

* ಲೇಖಕರು ಕಾರವಾರದ ಜೈಲಿನಲ್ಲಿರುವಾಗ ಅಲ್ಲಿಯ ಧನುರ್ಮಾಸದ ಸಭೆಗಳಲ್ಲೊಂದರಲ್ಲಿ ಮಾಡಿದ ಉಪನ್ಯಾಸದ ಸಾರಾಂಶ

ಸ್ವಲ್ಪ ಪ್ರತಿಗಳು ಉಳಿದಿವೆ! ತ್ವರೆಮಾಡಿರಿ!

ವೇ॥ ಅಗೇಕರ ಶಾಸ್ತ್ರಿಗಳ

ಹೊಸ ಪಂಚಾಂಗ

ಮಾರಾಟಕ್ಕೆ ಸಿದ್ಧವಿದೆ. ಬೇಕಾದವರು ಬೇಗನೆ ಬರೆಯಿರಿ.

ಮ್ಯಾನೇಜರ "ಸ್ಟಾರ ಆಫ್ ಕೆನರಾ" ಪ್ರೆಸ್,
ಕುಮಟಾ ◆

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಆದರೆ ಹಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಮೇಲ್ಲಕ್ಷ್ಯ ವಹಿಸುತ್ತಾರೆ. ಕೂದಲು ಮನೋಹರವಾಗಿರದೆ ಹೋದರೆ, ನೀವು ಏನು ಮಾಡಬೇಕು? ಲಕ್ಷ್ಯವಹಿಸಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಒಡೆಯುವವು, ಮತ್ತು ಉದುರುವವು. ನೀವು ಅವಶ್ಯವಾಗಿ 'ಕೂದಲನ್ನು' ನೋಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವುದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ರಾತ್ರಿ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ. ಹೀಗೆ ಸಿಕ್ಕಿದ ಶಕ್ತಿಯು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ಪಡೆಸಿಕೊಳ್ಳಿರಿ

—— ೧ ——

೩ ಔನ್ಸಿಗೆ	ರೂ.	೩-೦-೦
ಔನ್ಸಿಗೆ	,,	೧-೪-೦
ಡ್ರಾಮಿಗೆ	,,	೦-೧೨-೦
ಅಂಚೆವೆಚ್ಚ	,,	೦-೬-೦

ಒಟ್ಟೋ ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು. ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.
POST BOX 2082 BOMBAY No 2

ಪ್ರಪಂಚ-ಪರಿಚಯ.

ದೇಹ ದಂಡಿಸುವಿರಿ, ಮನಸ್ಸು ಬಂಧಿಸುವಿರಾ?

—'ರಾಜದ್ರೋಹಿಗಳು ಕೈಯಿಂದಲು ಒಬ್ಬರಂಗನ ಒಕ್ಕೂಟದ ಗಳನ್ನು ಬಲಾತ್ಕಾರದಿಂದ ನಿರೋಧಿಸಬಹುದಲ್ಲದೆ ಹಬ್ಬಿಸಲು ಹೊರಡಬಲ್ಲವು? ವಿದೇಶಿ ಪರ್ತಕರಗೂಡ ವ್ಯಾಪಾರ-ವ್ಯವಹಾರ ಮಾಡಲೇಬೇಕೆಂದು ಯಾ ಸರಕಾರಕ್ಕೆ ರಾಜಕೀಯ ಸಹಕಾರಿತ್ವವನ್ನು ಕೊಡಲೇಬೇಕೆಂದು ನಾಗರಿಕರನ್ನು ಒತ್ತಾಯಪಡಿಸುವ ಸಾಮರ್ಥ್ಯವು ರಾಜದ ಸೆಸ ಲ್ಲುಂಟೇ? ಸರಕಾರ-ಸತ್ತೆಯ ವೃಥಾ ಉಪಯೋಗವನ್ನು ದಂಡಿಸುವ ರಾಜಶಾಸನಗಳ ಉಪಯೋಗವು ಈಗ ಸಾಕು. ಈ ದಂಡನೆಯಿಂದ ವಿರೋಧವು ಮಾಯವಾಗದೇ ಹೊಸ್ಸವಡಿ ಅಡಗಿಕೊಂಡಿದೆ! ಅಡಗಿಕೊಂಡ ಈ ವಿರೋಧವು ವ್ಯಕ್ತ ವಿರೋಧಕ್ಕಿಂತ ಹೆಚ್ಚು ಅಪಾಯಕರವು! ಎಮನಿಸುವದೇ ಎದಕೆ ಮುಪ್ಪು!

"ಹಿಂದುಸ್ಥಾನ ಸರಕಾರವು ತನ್ನ ರಾಜ್ಯನೌಕೆಯ ಸುಂಕಾಣಿಯನ್ನು ಕೂಡಲೆ ತಿರುಗಿಸಬೇಕು, ಮತ್ತು ಇರ್ಲಿನ್ ದೊರೆಗಳ ಮಾರ್ಗವನ್ನು ಅನುಸರಿಸಬೇಕು"

— 'ಇಕೊನಾಮಿಸ್ಟ,' ಲಂಡನ್

⁂

ಆಯರ್ಲಂಡದಲ್ಲಿ ಲೋಕಪಕ್ಷದ ವಿಜಯ

ಈ ತಿಂಗಳ ಪ್ರಾರಂಭಕ್ಕೆ ಆಯರ್ಲಂಡದ ಫ್ರಿಸ್ಟೇಟದೊಳಗೆ ಡೇಲಿ ಎಯರಾನ (ಪಾರ್ಲಮಂಟ)ದ ಚುನಾವಣೆಯಾಯಿತು. ಚುನಾವಣೆಯಲ್ಲಿ ಡಿ ವ್ಹೆಲೆರಾ ಪಕ್ಷವು ವಿಜಯಿಯಾಗಿ ಅಧಿಕಾರಸೂತ್ರಗಳನ್ನು ತನ್ನ ಕೈಯಲ್ಲಿ ತಗೆದುಕೊಂಡಿದೆ. ಡಿ ವ್ಹೆಲರಾ ಇವರು ಅಧ್ಯಕ್ಷರಾಗಿರುವರು. ಚುನಾವಣೆಯ ಪೂರ್ವದಲ್ಲಿ, (೧) ರಾಜನಿಷ್ಠೆಯ ಶಪಥಕ್ಕೆ ಕಾಟು, (೨) ಇಂಗ್ಲಂಡಕ್ಕೆ ತೆರಬೇಕಾದ ವಾರ್ಷಿಕ ಖಂಡಣಿಯ ನಿರಾಕರಣ ಮತ್ತು (೩) ದಕ್ಷಿಣೋತ್ತರ ಆಯರ್ಲಂಡಗಳ ಪ್ರೇಮಭಾವದಿಂದ ಐಕ್ಯಸಾಧನ, ಇವೇ ತಮ್ಮ ಪಕ್ಷದ ಮುಖ್ಯ ಕಾರ್ಯಗಳೆಂದು ಡಿ ವ್ಹೆಲರಾರವರು ಘೋಷಿಸಿದ್ದರು! ಸಿಕ್ಕ ಸತ್ತೆಯ ಬಲದಿಂದ ಈ ಕಾರ್ಯಗಳನ್ನು ಅವರು ಯಾವ ಬಗೆಯಿಂದ ಎಷ್ಟರಮಟ್ಟಿಗೆ ಸಾಧಿಸುತ್ತಾರೆಂಬುದನ್ನು ಹಿಂದ ವಾಸಿಗಳು ನೋಡುತ್ತಿರುವರು.

⁂

ಡಿ ವ್ಹೆಲರಾ ಪಕ್ಷದ ಗಣಪತಿ-ಪೂಜೆ—

ಲೋಕಸತ್ತಾವಾದಿ ಪಕ್ಷದೊಳಗಿನ ಅತಿತ್ತಾಯಿಗಳು ದಾಂಧಲೆಗಳನ್ನೆಬ್ಬಿಸುವರು. ಅತ್ಯಾಚಾರ ಮಾಡುವರು. ಸಾಮಾನ್ಯ ಕಾಯಿದೆಗಳಿಂದ ಅವರಿಗೆ ಶಾಸನವು ಮಾಡುವದು ಸಾಧ್ಯವಿಲ್ಲ. ಕಾರಣ ತೀವ್ರತರ ಉಪಾಯಗಳ ಯೋಜನೆ ಮಾಡಲಿಕ್ಕೆ ಸರಕಾರಕ್ಕೆ ಅಧಿಕಾರ ಬೇಕು ಎಂದು ಪ್ರತಿಪಾದಿಸಿ, ೭-೮ ತಿಂಗಳ ಹಿಂದೆ ಆಯರ್ಲಂಡದಲ್ಲಿ ಅಧಿಕಾರಾರೂಢವಿದ್ದ ಕಾಸ್ಗ್ರೇವ್ಹ ಪಕ್ಷದ ಸರಕಾರವು ನಮ್ಮ ಹಿಂದುಸ್ಥಾನದಲ್ಲಿ ಹಾಲಿ ಪ್ರಚಲಿತವಿರುವ ರಾಜಶಾಸನಗಳ ಮಾದರಿಯ ಒಂದು ಕಾಯಿದೆಯನ್ನು ಮಾಡಿಕೊಂಡಿತ್ತು. ಅಲ್ಲಲ್ಲಿ ಲಷ್ಕರಿ ಕೋರ್ಟುಗ ಸ್ಥಾಪನೆಯಾಗಿದ್ದವು. ಅನೇಕರು ತುರಂಗಕ್ಕೆ ಕಳಿಸಲ್ಪಟ್ಟಿದ್ದರು! ಈಗ ಲೋಕಸತ್ತಾ ಪಕ್ಷವು ಅಧಿಕಾರಕ್ಕೆ ಬಂದ ಕೂಡಲೇ ತುರಂಗದೊಳಗಿಂದ ಆ ಜನರನ್ನು ಬಿಡುಗಡೆ ಮಾಡಿದೆ. ಕಾಸ್ಗ್ರೇವ್ಹ ಸರಕಾರದ ಕಡೆಯಿಂದ "ಬೇಕಾಯಿದೇಶೀರ ಸಂಸ್ಥೆ"ಯೆಂದು ಠರಾಯಿಸಲ್ಪಟ್ಟ ಐಯರಿಶ ರಿಪಬ್ಲಿಕ ಸೈನ್ಯವು ಪ್ರಾಂತೀಯ ಕಾಟವಿಲ್ಲದೆ ಬೀದಿ-ಬೀದಿಗಳಲ್ಲಿ ಕವಾಯತು ಮಾಡುತ್ತಿರುವದು! ನಿನ್ನೆ ದಿನ ಕೈದಿಗಳಿದ್ದವರು ಇಂದು ಅರಸರು!

⁂

—ಮತ್ತು ಪುರಸ್ಕಾರ ಹವಾಚನೆ

ಡಿ ವ್ಹೆಲರಾ ಪಕ್ಷವು ಅಧಿಕಾರಾರೂಢವಾಗಿ ಒಂದು ವಾರ ಸಹ ಕಳೆಯಲಿಲ್ಲ, ಅವರು ತಮ್ಮ ಕಾರಬಾರದ ದೊಡ್ಡಸ್ತಿಕೆಯನ್ನು ಒತ್ತರಿಸುವ ಉದ್ಯೋಗದಲ್ಲಿ ತೊಡಗಿದ್ದು ಒಂದು ಸಂಗತಿಯು ಮಾತ್ರ ನಿಶ್ಚಯವಾಗಿದೆ. ಅಧ್ಯಕ್ಷರು, ಮಂತ್ರಿ ಮಂಡಳದ ತಲೆಯಿಂದ ಕಸ್ತೂರಿ ಹಾಕುವದ ಡೇಲಿ ಐಯರಾನದ ಅಧ್ಯಕ್ಷರಿಗೆ ವರ್ಷಕ್ಕೆ ೨೫೦೦ ಪೌಂಡು ಪಗಾರ ಸಿಗುತ್ತಿತ್ತು, ಅದನ್ನು ಕಡಿಮೆಮಾಡಿ ೧೫೦೦ ಪೌಂಡುಗಳನ್ನು ಸ್ವೀಕರಿಸಲಿಕ್ಕೆ ಡಿ ವ್ಹೆಲರಾರವರು ಒಪ್ಪಿಕೊಂಡಿರುವರು! ಅವರ ಸಹಕಾರಿಗಳೂ ಕಡಿಮೆ ಪಗಾರದ ಮೇಲೆ ಕೆಲಸ ಮಾಡಲಿಕ್ಕೆ ಸಿದ್ಧರಾಗಿರುವರು! ಇದಕ್ಕೆನ್ನಬೇಕು ಲೋಕಸತ್ತಾತ್ಮಕತೆ!

⁂

ಹಿಂದೀಯರು ಡಿ ವ್ಹೆಲೆರಾರವರ ಶಿಷ್ಯರಾಗಬಾರದೇ?

ಪ್ರಚಲಿತ ಪಂಚವಾರ್ಷಿಕ ಯೋಜನೆಯಂತೆ ಡಿ ವ್ಹೆಲೆರಾರವರ ತಲಬು ಈ ವರ್ಷಕ್ಕೆ ರೂ ೧೨೦೦೦ಗಳ ಸುಮಾರು ಇರುವದು. ಹಿಂದುಸ್ಥಾನಕ್ಕಿಂತ ಶ್ರೀಮಂತವಿರುವ ಆಯರ್ಲಂಡದೊಳಗಿನ ಮುಖ್ಯ ಅಧಿಕಾರಿಗೆ ಸಿಗುವ ತಲಬು ಇದು! ಆದರೆ ನಮ್ಮ ಹಿಂದುಸ್ಥಾನದ ಕಡನಾಟಕಿ ಮಿತವ್ಯಯದ ಕೆಲಸ ಆಯಿತು, ಚರ್ಚೆಯಾಯಿತು, ಸಾಂಗೋಪಾಂಗ ವಿಚಾರವಾಯಿತು! ಕೊನೆಗೆ ನಮ್ಮ 'ಸೇವಕ'ರು ಶೇಕಡಾ ೧೦ ರಂತೆ ತಮ್ಮ ಪಗಾರ ಇಳಿಸಲಿಕ್ಕೆ ಹೇಗೂ ಹೀಗೂ ಒಪ್ಪಿಕೊಂಡರು! ವಿಲಾಯತಿಯಿಂದ ಬಂದ ಅಧಿಕಾರಿಗಳು ಏನೂ ಮಾಡಲಿ, ತಿಂಗಳಿಗೆ ಸಾವಿರಾರ್ಹಿ ತಲಬು ತಿನ್ನುವ ನಮ್ಮ ಹಿಂದೀ ಅಧಿಕಾರಿಗಳು ಡಿ ವ್ಹೆಲರಾರವರ ಅನುಕರಣ ಮಾಡುವರೇ?

⁂

ಪತಿವ್ರತೆಯ ಪ್ರಭಾವ!

ಬಂಗಾಲದ ಬಂಕುರಾ ಎಂಬಲ್ಲಿ ಸನತ್ಕುಮಾರರಾಯರೆಂಬವರು ಬಹಳ ದಿವಸಗಳಿಂದ ಅಸ್ವಸ್ಥರಿದ್ದರು. ಅವರ ಪತಿಪರಾಯಣ ಪತ್ನಿಯು ಪ್ರೇಮದಿಂದ ಅವರ ಆರೈಕೆ ಮಾಡುತ್ತಿದ್ದಳು. ಪತಿಯು ಹಾಸಿಗೆಯಾಗಿದ್ದರೆ, ತಾನೂ ಎಂದಿಗೂ ಬದುಕಲಾರೆನು ಎಂದು ನೆರೆಯೂರಿಯ ಜನರಿಗೆ ಹೇಳುತ್ತಿದ್ದಳು. ಹಗಲಿರುಳು ಪತಿಯ ರೋಗ ಮುಕ್ತತೆಯ ಬಗ್ಗೆ ಆಕೆಯು ಈಶ್ವರನಲ್ಲಿ ಬೇಡಿಕೊಳ್ಳುತ್ತಿದ್ದಳು, ಒಂದು ವೇಳೆ ಪತಿಯು ಸಾಯುವದೇ ಆದರೆ, ಅವರ ಸಂಗಡ ತನಗೂ ಸಾವು ಬರಲೆಂದು ಪ್ರಾರ್ಥಿಸುತ್ತಿದ್ದಳು! ಸನತ್ಕುಮಾರರಾಯರು ಪ್ರಾಣ ಬಿಟ್ಟರು. ಅವರ ಸುಶೀಲ ಪತ್ನಿಯು ಕೂಡಲೇ ಅವರ ಶವದ ಬಳಿಗೆ ಮಲಗಿ, ಕ್ಷಮೆ ಕೇಳಿ, ದೇವರ ಧ್ಯಾನ ನಡೆಸಿದಳು. ೨ ತಾಸುಗಳಲ್ಲಿ ನೆರೆಹೊರೆಯವರು ಬಂದು ನೋಡಿದರೆ ಪತ್ನಿಯ ಪ್ರಾಣಪಕ್ಷಿ ಹಾರಿಹೋಗಿದೆ! ಡಾಕ್ತರರು ಅವಳ ದೇಹಪರೀಕ್ಷೆ ಮಾಡಿದರು. 'ವಿಷದಿಂದಾಗಲಿ, ಇನ್ನಾವ ಉಗ್ರ ಉಪಾಯದಿಂದಾಗಲಿ ಸತ್ತಿಲ್ಲ! ಸ್ವಯಂಸ್ಫೂರ್ತಿಯಿಂದ ಪ್ರಾಣಬಿಟ್ಟಳು" ಎಂದು ಅಭಿಪ್ರಾಯಪಟ್ಟರು. ಪತಿಪತ್ನಿಯರಿಗೆ ಒಂದೇ ಚಿತೆಯ ಮೇಲೆ ಅಗ್ನಿ ಸಂಸ್ಕಾರವಾಯಿತು, ಊರ ಜನರೆಲ್ಲರೂ ಸ್ಮಶಾನ ಯಾತ್ರೆಗೆ ಹೋಗಿದ್ದರು!

⁂

ರಾಷ್ಟ್ರಸಭಾಪತಿಪದದ ಬಗ್ಗೆ ವಾದವೇ?

ಸರದಾರ ಶಾರ್ದೂಲಸಿಂಗರ ಬಳಿಕ, ಕೊಂಗ್ರೆಸ್ಸಿನ ಅಧ್ಯಕ್ಷರಾದ ಮೌಲಾನಾ ಅಬುಲ್ ಕಲಮ್ ಆಝಾದ ಇವರಿಗೆ ಕಳೆದ ತಾ ೧೫ನೇ ದಿಲ್ಲಿಯಲ್ಲಿ ಸೆರೆಹಿಡಿದರು. ಅವರ ಹಿಂದ ತಾವು ಕಾಂಗ್ರೆಸ್ಸಿನ ಅಧ್ಯಕ್ಷರೆಂದು ಮುಂಬಯಿಯಿಂದ ಸೌ| ಸರೋಜಿನಿ ನಾಯಡುರವರು ಪ್ರಕಟಪಡಿಸುತ್ತಾರೆ! ತಮ್ಮನ್ನು ತಾವೇ ನೇಮಿಸಿಕೊಂಡಿರುವರಂತೆ! ಇತ್ತ ದಿಲ್ಲಿಯಲ್ಲಿ ಅಮೃತಸರದ ಸರ್ದಾರ್ ಶ್ರೀ ಲಾಡೋರಾಣಿ [illegible]ಯವರು ಅಧ್ಯಕ್ಷರಾಗಿರುತ್ತಾರೆಂದು 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯು ಹೇಳುತ್ತದೆ! ನಿಜವಾದ ಅಧ್ಯಕ್ಷರು ಯಾರು?

⁂

ಗೊಬ್ಬರದ ರಾಶಿಯಲ್ಲಿ ಬಾಂಬುಗಳು!

ಅಮೃತಸರ ಮತ್ತು ಲಾಹೋರ ನಗರಗಳ ನಡುವೆ ಇರುವ ವಾಘಾ ಎಂಬ ಹಳ್ಳಿಯಲ್ಲಿ, ಕೆಲವು ದಿನಗಳ ಹಿಂದೆ ಒಂದು ಗೊಬ್ಬರದ ರಾಶಿಯಲ್ಲಿ ಬಾಂಬುಗಳು ಸಿಕ್ಕವು. ಇಬ್ಬ ಹುಡುಗರು ಒಂದು ತರದ ಚೆಂಡಿನಾಟ ಆಡುತ್ತಿದ್ದರು. ಚೆಂಡು ತಪ್ಪಿ ಗೊಬ್ಬರದ ರಾಶಿಯಲ್ಲಿ ಹೋಯಿತು. ಹುಡುಗರು ಹುಡುಕಹತ್ತಿದರು, ಅವರಿಗೆ ಒಂದು ದೊಡ್ಡ ಚೆಂಡು ಸಿಕ್ಕಿತು. ಅದನ್ನು ಅವರು ಒಡೆದರೆ ಕೂಡಲೆ ಸ್ಫೋಟವಾಗಿ ಇಬ್ಬರಿಗೂ ಗಾಯವಾಗಿದೆ. ಊರ ಜನರು ಬಂದು ಇನ್ನೂ ಶೋಧ ಮಾಡಲಾಗಿ ರಾಶಿಯಲ್ಲಿ ಮತ್ತೆರಡು ಬಾಂಬುಗಳು ದೊರಕಿದವು.

⁂

ಕಳವು ಮಾಡಬಂದವರು ಧರ್ಮ ಮಾಡಿ ಹೋದರು!

ಇಟಾಲಿ ದೇಶದೊಳಗಿನ ಕದೆ ಬರ್ಲೊಸ್ಕಯ [illegible] ಎಂಬವನು ಬಹಳ ಬಡವನಿದ್ದನು. ದನಕೋನ ಜನರು ಅವನ ಒಮ್ಮೆ ಹಿಡಿದಿದ್ದರಿಂದ ದಾರಿದ್ರ್ಯದೂ ಮತ್ತ್ರ ಕಡೆಯ ಸಾಲ ತರಲಿಕ್ಕೆಂದು ಮನೆಗೆ ಬೀಗ ಹಾಕಿ ಹೊರಗೆ ಹೋದನು. ಅವನಿಲ್ಲದ ಸಮಯ ಸಾಧಿಸಿ ಕಳವು ಕಳ್ಳರು ಕನ್ನ ತೆಗೆದು ಅವನ ಮನೆಯಲ್ಲಿ ಹೊಕ್ಕರು. ಕಳ್ಳರಿಗೆ ಏನೂ ಬೆಲೆಬಾಳುವ ವಸ್ತು ಸಿಗಲಿಲ್ಲ. ಒಂದು ಚೀಟಿ ಮಾತ್ರ ಅವರ ಕಣ್ಣಿಗೆ ಬಿತ್ತು. ಅದು ದನಕೋನ ಒಂದ ಚೀಟಿಯದು. ಅಂತರಾಸಾಗಳಲ್ಲಿ ೧೦೦ ಲೀರಾ (ಇಟಲಿ ದೇಶದೊಳಗಿನ ನಾಣ್ಯ) ಕೊಡದಿದ್ದರೆ ಕೆಲಸ ಕೆಡುವದೆಂದು ದನಕೋನು ಬೆದರಿಸಿ ಬರೆದಿದ್ದನು. ಈ ಚೀಟಿ ಓದಿ ಕಳ್ಳರ ಕರುಳು ಕರಗಿತು! ಅವರೊಂದು ಪತ್ರ ಬರೆದರು 'ನಿಮ್ಮ ದನಕೋನನ ಚೀಟಿ ನೋಡಿದೆವು. ಅವನಿಗೆ ಕೊಡಬೇಕಾದ ೧೦೦ ಲೀರಾ ಇದರ ಒಳಗೆ ಇಟ್ಟಿವೆ. ಒಂದಾನೊಂದು ದಿನ ಇವನ್ನು ಅವನಿಗೆ

ವಸೂಲ ಮಾಡಿದೆವು. ನೀವಿಲ್ಲದಾಗ ನಿಮ್ಮ ಮನೆಯಲ್ಲಿ ಹೊಕ್ಕಿದ ಬಗ್ಗೆ ಕ್ಷಮಿಸಬೇಕು. ಪಶ್ಚಾತ್ತಾಪಕ ಪ್ರಣಾಮಗಳು " ತಾ ೩- "ನಾವಿದಕ್ಕೆ ಸಹಿ ಮಾಡದಿಲ್ಲ ಕಾರಣವು ಸ್ಪಷ್ಟವಿದೆ " ಈ ಪತ್ರವನ್ನು ಹಣವನ್ನು ಅಲ್ಲಿ ಬಿಟ್ಟು ಕಳ್ಳರು ನಡೆದರು

⁂

ಒಂದೆಡೆ ಶಾಂತಿಪಾಠ! ಇನ್ನೊಂದೆಡೆ ಯುದ್ಧ ಸಾಮಗ್ರಿಯ ಮಾರಾಟ!

ಚೀನ-ಜಪಾನರ ನಡುವೆ ನಡೆಯುತ್ತಿರುವ ಸಂಗ್ರಾಮ ನಿಲ್ಲಿಸುವ ಬಗ್ಗೆ ಜಿನೀವಾದಲ್ಲಿ ರಾಷ್ಟ್ರಸಂಘವು ಪ್ರಯತ್ನಿಸುತ್ತಿದ್ದ ವಿಷಯಗಳು ಮೇಲಿಂದ ಮೇಲೆ ಬರುತ್ತಿವೆ. ಮೇಲಿಂದ ಮೇಲೆ ಸಭೆಗಳಾಗುತ್ತಲಿವೆ, ಚರ್ಚೆಗಳಾಗುತ್ತಿವೆ, ಹೊಸ ಹೊಸ ಸೂಚನೆಗಳು ಬರುತ್ತಲಿವೆ, ಹೇಗಾದರೂ ಸಂಧಾನ ಮಾಡಿ ಯುದ್ಧ ನಿಲ್ಲಿಸಬೇಕೆಂದು ಆಗ್ರಹ ಮಾಡುತ್ತಲಿದೆ! ರಾಷ್ಟ್ರಸಂಘದ ಕಾರ್ಯಾಲಯದಲ್ಲಿ ಈ ರೀತಿ ಶಿವಾಲೋಚನ ಮಾಡುತ್ತಿದ್ದ ರಾಷ್ಟ್ರಗಳು ಅತ್ತ ಒಳಗೆ ಚೀನ-ಜಪಾನ ದೇಶಗಳಿಗೆ ತೋಫು, ಮದ್ದು-ಗುಂಡು, ವಿಮಾನ, ಬಾಂಬು ಮೊದಲಾದ ಯುದ್ಧೋಪಯೋಗಿ ಸಾಮಗ್ರಿಗಳ ಪೂರೈಕೆ ಮಾಡುತ್ತಲಿರುವವು! ಕಳೆದ ೬ ತಿಂಗಳಲ್ಲಿ ೧೧ ಲಕ್ಷ ಪೌಂಡುಗಳ ಯುದ್ಧ ಸಾಮಗ್ರಿಯು ಚೀನದಲ್ಲಿ ಬಂದಿಳಿಯಿತು, ಇಷ್ಟು ದಿವಸಗಳಾಗುತ್ತಿದ್ದ ಜಿನೀವಾದಲ್ಲಿ ಶಾಂತಿಪಾಠ ಹೇಳುವ ರಾಷ್ಟ್ರಗಳೇ ಯುದ್ಧ ನಡೆಸುವ ದೇಶಕ್ಕೆಯು ಸಿದ್ಧವಾಗಿರುತ್ತಿದ್ದವೆ, ಅವರು ಈ ವ್ಯಾಪಾರವನ್ನು ಯಾಕೆ ಪ್ರತಿಬಂಧಿಸುವದಿಲ್ಲ? ಇದು ಒಂದು ಶಾಂತಿಪಾಠವಲ್ಲವೆ, ಇದರಲ್ಲಿ ಹುರುಳಿಲ್ಲವೆಂದು ನಾವ್ಯಾಕೆ ಒಗೆಯಬಾರದು?

⁂

ಹುಡುಗನ ಅಪರಾಧಕ್ಕಾಗಿ ಪಾಲಕನಿಗೆ ಶಿಕ್ಷೆ!

ರತ್ನಾಗಿರಿಯಲ್ಲಿ ಭಂಡಾರಿ ಜಾತಿಯ ೧೩ ವರ್ಷ ಪ್ರಾಯದ ಹುಡುಗನೊಬ್ಬನಿಗೆ ಬೇಹಾಯದ ಸಮೂಹದಲ್ಲಿ ಸೇರಿದ ಬಗ್ಗೆ ೧೦ ಬೆತ್ತಪ್ರಹಾರಗಳ ಶಿಕ್ಷೆ ಕೊಡಲಾಯಿತು. ಆದರೆ, ಸದರ ಶಿಕ್ಷೆ ಅನುಭವಿಸಲು ಶಕ್ತ ಶಕ್ತಿಯು ಹುಡುಗನಲ್ಲಿಲ್ಲವೆಂದು ಡಾಕ್ಟರರ ಅಭಿಪ್ರಾಯವಾಯಿತು! ಹುಡುಗನಿಗೆ ಬಿಟ್ಟುಕೊಟ್ಟರು ಪಾಲಕನಿಗೆ ಕರೆತಂದರು. ಆಪತ್ಕಾಲದ ವಿಶೇಷಾಧಿಕಾರಗಳ ರಾಜಶಾಸನ (*Emergency Powers Ordinance*)ದ ಕಲಂ ೨೨ ರಂತೆ ಆತನ ಮೇಲೆ ಖಟ್ಲೆ ನಡೆಯಿತು! ಮತ್ತು ೫೦ ರೂ. ದಂಡ; ದಂಡ ತೆರದಿದ್ದರೆ, ೨ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಯಿತು!

⁂

ಕೂಸು ಕಾಣೆಯಾಗಿದೆ! ಇನ್ನೂ ಪತ್ತೆಯಿಲ್ಲ

ಅಮೇರಿಕೆಯ ಕರ್ನಲ್ ಲಿಂಡಬರ್ಗ ಎಂಬ ವಿಮಾನವಿದ್ಯಾವಿಶಾರದರಿಗೆ ೧೯ ತಿಂಗಳು ಪ್ರಾಯದ ಒಂದು ಗಂಡು ಮಗುವಿತ್ತು. ರಾತ್ರಿ ಕಾಲದಲ್ಲಿ ಕೂಸಿಗೆ ಮಾಳಿಗೆಯ ಮೇಲೆ ಮಲಗಿಸಿ, ಮನೆಯವರು ಕೆಳಗೆ ಊಟಕ್ಕೆ ಕೂಡಿದ್ದರು. ಆಗ ಕೆಲವು ಕಳ್ಳರು ಮೋಟಾರ ಗಾಡಿಯ ಮೇಲೆ ಸಮೀಪದ ಬೆಟ್ಟದಲ್ಲಿ ಬಂದಿಳಿದರು. ಮತ್ತು ಸದ್ದುಮಾಡದೆ ಕಿಡಕಿ ಮಾರ್ಗವಾಗಿ ಮಾಳಿಗೆಯನ್ನು ಹೊಕ್ಕು ಮಲಗಿದ ಕೂಸನ್ನು ಕದ್ದುಕೊಂಡು ಪಲಾಯನ ಮಾಡಿದರು. ಕೆಲವು ಕಾಲ ಕಳೆದ ಮೇಲೆ ಕೂಸು ಇಲ್ಲದ ಸಂಗತಿಯು ತಿಳಿಯಿತು! ಪೊಲೀಸರಿಗೆ ಸುದ್ದಿ ತಿಳಿಸಲ್ಪಟ್ಟಿತು! ಹೊರಹೋಗುವ ಮೋಟಾರಗಾಡಿಗಳಲ್ಲಿ ಝಡ್ತಿಯಾಗಹತ್ತಿತು. ಅಮೇರಿಕಾದ ಗಡಿಯ ಮೇಲೆ ಕಾನಡಾ ದೇಶಕ್ಕೆ ಹೋಗುವ ಮೋಟಾರುಗಳಲ್ಲೂ ತಪಾಸ ನಡೆಯಿತು! ಮಗುವಿನ ಪತ್ತೆಯು ಸಿಗದು! ೧೫ ದಿವಸಗಳು ಕಳೆದು ಹೋದವು, ಇನ್ನೂ ಪತ್ತೆಯಿಲ್ಲ! ದಿನಾಲು ನಾನಾ ತರದ ಸುದ್ದಿಗಳು ಬರುತ್ತಿವೆ! ೫೦೦೦೦ ಡಾಲರು ಕೊಟ್ಟರೆ ಕೂಸು ತಿರುಗಿ ಸಿಗುವದೆಂದು ಕಳ್ಳರು ಕರ್ನಲ್ ಸಾಹೇಬರಿಗೆ ತಿಳಿಸಿರುವರಂತೆ!

⁂

ಜೈಲಿನಲ್ಲಿ ಜನನ

ಡಾಕೋರಿನ ಶ್ರೀ| ಮಹಾಲಕ್ಷ್ಮಿ ಪ್ರಭುಲಾಲ ಉಪಾಧ್ಯಾಯ ಎಂಬವರು ಸತ್ಯಾಗ್ರಹದಲ್ಲಿ ಜೈಲಿಗೆ ಹೋಗಿದ್ದರು. ಕಳೆದ ತಾ ೮ಕ್ಕೆ ಯರವಡಾ ಜೈಲಿನಲ್ಲಿ ಅವರು ಪ್ರಸೂತರಾಗಿ ಹೆಣ್ಣು ಕೂಸು ಹುಟ್ಟಿರುವದು!

⁂

ಜರ್ಮನಿಯಲ್ಲಿ ಅಧ್ಯಕ್ಷರ ಚುನಾವಣೆ.

ಜರ್ಮನಿಯಲ್ಲಿ ಮೊನ್ನೆ ತಾ ೧೩ಕ್ಕೆ ಅಧ್ಯಕ್ಷರ ಚುನಾವಣೆಯಾಯಿತು! ಮಹಾಯುದ್ಧದಲ್ಲಿ ಜರ್ಮನಿಯ ಮುಖ್ಯ ದಳವಾಯಿಗಳೂ, ಈ ಏಳು ವರ್ಷಗಳಲ್ಲಿ ಜರ್ಮನ್ ರಿಪಬ್ಲಿಕದ ಅಧ್ಯಕ್ಷರೂ ಆದ ವ್ಹಾನ ಹಿಂಡೆನ್‌ಬರ್ಗರವರೂ, ಇನ್ನೂ ೪ ಜನರೂ ಉಮೇದ್ವಾರರಾಗಿ ಚುನಾವಣೆಗೆ ನಿಂತಿದ್ದರು. ಚುನಾವಣೆಯಲ್ಲಿ ಹಿಂಡೆನಬರ್ಗರವರಿಗೆ ೧ ಕೋಟಿ ೮೬ ಲಕ್ಷ ಮತಗಳೂ, ಬಾಕಿ ಎಲ್ಲರಿಗೆ ಕೂಡಿ ೧ ಕೋಟಿ ೯೦ ಲಕ್ಷ ಮತಗಳೂ ಬಿದ್ದವು. ಜರ್ಮನ್ ರಾಜ್ಯಘಟನೆಯ ನಿಯಮದಂತೆ ಅಧ್ಯಕ್ಷರಿಗೆ, ಒಟ್ಟು ಮತಗಳ ಪ್ರಕಾರ ಅರ್ಧಕ್ಕಿಂತ ಹೆಚ್ಚು ಮತಗಳು ಬರದಿರುವದರಿಂದ, ಏಪ್ರಿಲ ತಾ ೧೦ಕ್ಕೆ ಪುನಃ ಚುನಾವಣೆ ನಡೆಯುವದು.

⁂

ಬೆಂಕಿಪೆಟ್ಟಿಗೆಗಳ ರಾಜನ ಆತ್ಮಹತ್ಯೆ.

ಬೆಂಕಿಪೆಟ್ಟಿಗೆಗಳ ರಾಜರೆಂದು ಬಿರುದು ಪಡೆದ ಸ್ವೀಡನ್ನಿನ ಮಿಸ್ಟರ್ ಕ್ರ್ಯುಗರರವರು ಕಳೆದ ವಾರದಲ್ಲಿ ಪ್ಯಾರಿಸ ಪಟ್ಟಣದಲ್ಲಿ ಎದೆಯ ಮೇಲೆ ಗುಂಡು ಹಾಕಿಕೊಂಡು, ಆತ್ಮಹತ್ಯೆ ಮಾಡಿಕೊಂಡರು! ಇಡೀ ಜಗತ್ತಿನೊಳಗಿನ ಬೆಂಕಿಪೆಟ್ಟಿಗೆಗಳ ಕಾರಖಾನೆಗಳಲ್ಲಿ ಶೇಕಡಾ ೭೫ರಷ್ಟು ಕಾರಖಾನೆಗಳು ಇವರ ಅಧಿಪತ್ಯಕ್ಕೆ ಒಳಗಾಗಿದ್ದವು. ಕ್ರ್ಯುಗರರವರು ಕೋಟ್ಯಾಧೀಶರಾಗಿದ್ದು ಅನೇಕ ಸರಕಾರಗಳಿಗೆ ಸಾಲ ಕೊಟ್ಟಿದ್ದರು. ಇವರ ಆಕಸ್ಮಿತ ನಿಧನದಿಂದ ಹಲವು ದೇಶಗಳ ಸಾಂಪತ್ತಿಕ ಸ್ಥಿತಿಯಲ್ಲಿ ಚಲನವಲನವಾಗುವದಂತೆ!

⁂

ಆತ್ಮಹತ್ಯೆಗಳು ಅಗ್ಗವಾದವು!

ಬೆಂಕಿಪೆಟ್ಟಿಗೆಗಳ ರಾಜನು ಆತ್ಮಹತ್ಯೆ ಮಾಡಿ ೪-೫ ದಿನಗಳಾಗಲಿಲ್ಲ. ಅವನ ಮೇಲಿಂದ ಮತ್ತೊಬ್ಬನು ಆತ್ಮಹತ್ಯೆ ಮಾಡಿದ ವಾರ್ತೆಯು ಬರ್ಲಿನದಿಂದ ಬಂದು ಬಿದ್ದಿದೆ! ಬೊಲ್ಶೆವಿಕ್ ಮೋಹ್ ಪಕ್ಷದ ಮೆನೇಜಿಂಗ ಡಾಯರೆಕ್ಟರ ಹರ್ ಮಾರ್ಗನರವರು ಜರ್ಮನಿಯ ಮಾಯನ್ಸ ಸ್ಟೀನ ಎಂಬ ಊರಲ್ಲಿ ಕಿಟಕಿಗೆ ಉರುಲು ಹಾಕಿಕೊಂಡು ಪ್ರಾಣ ಬಿಟ್ಟರು! ತಾ ೧೪ಕ್ಕೆ ಸುಪ್ರಸಿದ್ಧ "ಕೋಡಕ್" ಕೆಮರಾ ಯಂತ್ರಗಳ ಶೋಧಕರಾದ ಮಿ| ಜಾರ್ಜ ಈಸ್ಟಮನ್ ಎಂಬವರು ತಮ್ಮ ಮೇಲೆ ತಾವೇ ಗುಂಡು ಹಾಕಿಕೊಂಡು ಸತ್ತರು! ಈ ರೀತಿ ಕಳೆದ ವಾರದಲ್ಲಿ ಮೂವ ಜಗದ್ವಿಖ್ಯಾತ ಉದ್ಯೋಗಸ್ಥರು ಆತ್ಮಹತ್ಯೆಯ ಮಾರ್ಗದಿಂದ ಈ ಲೋಕವನ್ನು ಬಿಟ್ಟು ನಡೆದರು! ಇವರ ಉದ್ಯೋಗಕ್ಷೇತ್ರದಲ್ಲಿ ಏನಾದರೂ ತಪ್ಪಿರಬಹುದೇ?

ಸತ್ಯಾಗ್ರಹದ ವಾರ್ತೆ.

ಬಂಗಾಲ ಪ್ರಾಂತದ ಸುದ್ದಿ.

ಸತ್ಯಾಗ್ರಹಕ್ಕೆ ಪ್ರಾರಂಭವಾದಂದಿನಿಂದ ತಾ ೪-೩-೧೯೩೨ರ ತನಕ ಬಂಗಾಲದಲ್ಲಿ ೨೦೩ ಜನರಿಗೆ ಸೆರೆಹಿಡಿದರು, ೩೦೬ ಜನರಿಗೆ ಶಿಕ್ಷೆಯಾಯಿತು, ಬಾಕಿಯವರಿಗೆ ಬಿಟ್ಟುಕೊಟ್ಟರು ಕಾಯಿದೆ ಕೌನ್ಸಿಲದಲ್ಲಿ ಸಿಕ್ಕ ಮಾಹಿತಿಯಿದು.

ಇನ್ನೂ ತನಕ ಬಂಗಾಲದೊಳಗೆ ಅಲ್ಲಲ್ಲಿ ಸೆರೆಹಿಡಿಯುತ್ತಿದ್ದಾರೆ, ಶಿಕ್ಷೆಯಾಗುತ್ತಿದೆ. ಈ ಪ್ರವಾಹಕ್ಕೆ ಹಿಂದಸೇ ಬೀಳುವದಿಲ್ಲ. ಮಿದ್ನಾಪುರದಲ್ಲಂತೂ ಕೆಲವು ವಕೀಲರಿಗೆ ಪೋಲೀಸ ಕೆಲಸ ಮಾಡಬೇಕೆಂದು ಹುಕುಮಾಗಿದೆ! ದಿನಾಲು ಪೋಲೀಸ ಕಚೇರಿಗೆ ಹೋಗಿ ತಮಗೇನಾದರೂ ಕೆಲಸ ನೇಮಿಸಿಕೊಡುತ್ತಾರೋ ಎಂದು ನೋಡಬೇಕು! ಇದೊಂದು 'ಪೆರೋಲ' ಹಾಜರಿಯ ನಮೂನೆಯೇ ಸರಿ!

ಚಳವಳಿಯ ಪ್ರಾರಂಭಕ್ಕೆ ಆಪತ್ಕಾಲದ ವಿಶೇಷಾಧಿಕಾರಗಳ ರಾಜಶಾಸನವನ್ನಾಯ ಸೆರೆಹಿಡಿದವರಿಗೆ ಕ್ರಮವಾಗಿ ಬಿಟ್ಟುಕೊಡುತ್ತ ಅವರ ಮೇಲೆ ನಿರ್ಬಂಧನೆಗಳನ್ನು ಹಾಕುವ ಕ್ರಮವು ನಡೆದಿದೆ. ಪುರುಷರ ಜೊತೆಗೆ ಸ್ತ್ರೀಯರು ಸಹ ಸತ್ಯಾಗ್ರಹದಲ್ಲಿ ಸೇರುತ್ತಿರುವರು.

ಪೋಲೀಸ ಕೆಲಸ ಮಾಡಲಿಕ್ಕೆ ಒಪ್ಪದ ಬಗ್ಗೆ ಮಿದ್ನಾಪುರದ ಶ್ರೀ| ನರೇಂದ್ರ ಬಾಬು ವಕೀಲರಿಗೆ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ. ಬಾರಿಸಾಲದ ಒಬ್ಬ ಪತ್ರಿಕಾಕರ್ತರಾದ ಶ್ರೀ| ಜೋಗೇಂದ್ರನಾಥ ರಾಯರಿಗೂ, ಪಂಚಾನನ ಬಾಬು ವಕೀಲರಿಗೂ ೧೮-೧೮ ತಿಂಗಳ ಸಕ್ರಮ ಶಿಕ್ಷೆ ವಿಧಿಸಲಾಯಿತು. ಕೋಮಿಲ್ಲಾ ಕಾಂಗ್ರೆಸ ಕಮೀಟಿಯ ಮಾಜಿ ಅಧ್ಯಕ್ಷರಿಗೆ ಪೋಲೀಸರಲ್ಲಿ ಹಾಜರಿ ಕೊಡದ ಬಗ್ಗೆ ೩ ವರ್ಷಗಳ ಕಠಿಣ ಶಿಕ್ಷೆ ಕೊಟ್ಟಿದೆ.

ಕಳೆದ ವಾರದೊಳಗೆ ಇನ್ನೂ ಕೆಲವು ಸಂಸ್ಥೆಗಳು ಬೇಕಾಯಿದೇಶೀರ ಠರಾಯಿಸಲ್ಪಟ್ಟಿವೆ.

ಸರಕಾರ ಲೇವಿ ಕೊಡದ ಬಗ್ಗೆ ಚಿತಗಾಂಗ ಜಿಲ್ಹೆಯೊಳಗೆ ೩೦ ಜಮೀನದಾರರ ಆಸ್ತಿಗಳು ಕಳೆದ ತಾ ೧೪ಕ್ಕೆ ಲಿಲಾಂವಿಗೆ ಇಟ್ಟಿದ್ದವು, ನೋವಾಖಾಲಿ ಜಿಲ್ಹೆಯೊಳಗಿನ ೭೧ ಕಾಯಂಧಾರಾ ಪದ್ಧತಿಯ ಆಸ್ತಿಗಳೂ ೪೩೩ ಖಾಸ ಮಹಾಲ ಆಸ್ತಿಗಳೂ ಇಂದು ಲಿಲಾಂವಿಗೆ ಇಟ್ಟಿವೆ. ಬಹು ಪುರಾತನ ಕಾಲದಿಂದ ನಡೆದು ಬಂದ ಆಸ್ತಿಗಳಿವು.

ಮದ್ರಾಸ ಇಲಾಖೆಯ ಸುದ್ದಿ

ಈ ತಿಂಗಳ ಆರಂಭಕ್ಕೆ ಲಾರ್ಡ ಲೋಥಿಯನ್ಸ್ ಸಾಹೇಬರ "ಮತಾಧಿಕಾರ ಚೌಕಶಿ ಕಮಿಟಿಯು ಮದ್ರಾಸಿಗೆ ಬಂತು. ಕಮಿಟಿಯ ನಿಷೇಧದ ಬಗ್ಗೆ ಮದ್ರಾಸಿನಲ್ಲೂ, ಇತರ ಕಡೆಯಲ್ಲೂ ಕರಿ ನಿಶಾನೆಗಳ ಮೆರವಣಿಗೆಗಳಾದವು. ಈ ಕುರಿತು ಮದ್ರಾಸದಲ್ಲಿ ಶ್ರೀ| ಭಾಷ್ಯಂ ವಗೈರೆ ೬ ಜನರಿಗೆ ೬-೬ ತಿಂಗಳ ಶಿಕ್ಷೆ ಮತ್ತು ದಂಡ ವಿಧಿಸಲಾಯಿತು, ಕರಾಯಿಕುಡಿಯಲ್ಲಿ ೧೮ ಜನರಿಗೆ ಸೆರೆಹಿಡಿದರು. ಬೇರೆ ಸ್ಥಳಗಳಲ್ಲೂ ಅನೇಕರಿಗೆ ಸೆರೆಯಾಗಿರುವದು

ಕೆಲವು ದಿನಗಳ ಹಿಂದೆ ಕಾವಲು ಮಾಡಿದ ಬಗ್ಗೆ "ಸ್ವರಾಜ್ಯ" ಪತ್ರದ ಉಪಸಂಪಾದಕರಾದ ಶ್ರೀ| ಸುಬ್ಬರಾಯರಿಗೂ, ಶ್ರೀ| ರಾಮಸ್ವಾಮಿಯವರಿಗೂ ಪೋಲೀಸರು ಬೆತ್ತಪ್ರಹಾರ ಮಾಡಿದ್ದರು. ಪೆಟ್ಟು ಜಾಸ್ತಿಯಾಗಿ ಉಭಯತರೂ ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ಉಪಚಾರ ಹೊಂದುತ್ತಿದ್ದರು. ತಾ. ೯ಕ್ಕೆ ಅವರು ಆಸ್ಪತ್ರೆಯಿಂದ ಹೊರಬಿದ್ದರು. ಕೂಡಲೇ ಅವರಿಗೆ ಕೈದು ಮಾಡಿ ಕೋರ್ಟಿಗೆ ಒಯ್ದರು! ತನಿಖೆ ನಡೆದು ಸುಬ್ಬರಾಯರಿಗೆ ೬ ತಿಂಗಳ ಶಿಕ್ಷೆ ೧೦೦ ರೂ ದಂಡ ಮತ್ತು ರಾಮಸ್ವಾಮಿಯವರಿಗೆ ೧ ವರ್ಷದ ಶಿಕ್ಷೆ ಹಾಗೂ ರೂ ೫೦೦ ದಂಡ ವಿಧಿಸಲಾಯಿತು. ತಾ. ೭ಕ್ಕೆ ಮದುರೆಯಲ್ಲಿ ಕಾವಲು ಮಾಡಿದ ಬಗ್ಗೆ ಮಧುರೆಯ ಟೌನ್ ಸರ್ವಾಧಿಕಾರಿಯಾದ ಪದ್ಮಮಣಿ ಅಮ್ಮನವರಿಗೂ, ಇನ್ನೂ ಮೂವರು ಮಹಿಳೆಯರಿಗೂ ಸೆರೆಹಿಡಿದು, ಸರ್ವಾಧಿಕಾರಿಗೆ ೧೮ ತಿಂಗಳ ಮತ್ತು ಬಾಕಿಯವರಿಗೆ ೬-೬ ತಿಂಗಳ ಶಿಕ್ಷೆ ಕೊಡಲಾಯಿತು. ಮುನ್ನಾಣದಿನವೇ ಅದೇ ಮೆಜಿಸ್ಟ್ರೇಟರು ಒಬ್ಬನಿಗೆ ೧೮ ತಿಂಗಳ ಶಿಕ್ಷೆ ಮತ್ತು ಬೇರೆ ನಾಲ್ವರಿಗೆ ೬-೬ ತಿಂಗಳ ಶಿಕ್ಷೆ ಕೊಟ್ಟಿದ್ದರು

ಮದ್ರಾಸಿನಲ್ಲಿ "ಬ್ಯಾ ಇಂಡಿಯನ್ ಲೀಗ" ಯಾನೆ ಸ್ವದೇಶಿ ಪ್ರೋತ್ಸಾಹಕ ಸಂಘವೆಂಬ ರಾಜಕಾರಣದಿಂದ ಅಲಿಪ್ತವಿರುವ ಹೊಸದೊಂದು ಸಂಸ್ಥೆಯು ನಿರ್ಮಾಣವಾಗಿದೆ. ಅದರ ಶಾಖೆಗಳೂ ಅಲ್ಲಲ್ಲಿ ಹೊರಟಿವೆ. ಮದ್ರಾಸ ಸರಕಾರದವರು ಈ ಸಂಸ್ಥೆಗೆ ಮಾನ್ಯತೆಯನ್ನು ಸಹ ಕೊಟ್ಟಿರುವರು. ಹೀಗಿರುತ್ತ, ನರಸಾಪುರ ಎಂಬಲ್ಲಿ ಈ ಸಂಘದ ವಿದ್ಯಮಾನದ ಹೊರಟ ಮೆರವಣಿಗೆಯನ್ನು ಪೋಲೀಸರು ಬೆತ್ತದ ಉಪಯೋಗ ಮಾಡಿ ಚದರಿಸಿದರು! ಬಹು ದೊಡ್ಡ ಗಲಭೆಯಾಯಿತು! ಮುಖ್ಯ ಪ್ರಧಾನರಿಗೂ ಭಾರತ ಮಂತ್ರಿಗಳಿಗೂ ತಕ್ರಾರಿ-ತಂತಿಗಳು ತಲ್ಪಿದವು!

ಮದ್ರಾಸ ಕಾಯಿದೇ ಕೌನ್ಸಿಲಿನಲ್ಲಿ ತಹಕೂಬಿಯ ಸೂಚನೆಯನ್ನು ತರುವ ತಮ್ಮ ಸಂಕಲ್ಪವುಂಟೆಂದು ಡಾ| ಸುಬ್ಬರಾಯನ್‌ರವರು ಜಾಹೀರ ಮಾಡಿದರು! ಮರು ದಿನ ಕಾಯಿದೆ ಕೌನ್ಸಿಲಿನಲ್ಲಿ ಗೃಹಮಂತ್ರಿಗಳು ಸರಕಾರಿ ಖುಲಾಸೆ ಮಾಡಿದರು "ಬ್ಯಾ ಇಂಡಿಯನ್ ಲೀಗದ" ಪರದೆಯ ಹಿಂದೆ ಕಾಂಗ್ರೆಸ ಸ್ವಯಂಸೇವಕರು ತಮ್ಮ ಮತಗಳ ಪ್ರಚಾರ ಮಾಡಹತ್ತಿದ ಕಾರಣ ಮೆರವಣಿಗೆಗೆ ಅಡ್ಡಿ ಮಾಡಬೇಕಾಯಿತು. ಇನ್ನು ಮುಂದೆ ಇಂಥ ಕಟಕಟಿಗಳು ಬಾರದಂತೆ ಲೀಗಿನ ಚಾಲಕರು ಆಯಾಯ ಜಿಲ್ಹಾಧಿಕಾರಿಗಳ ತಂತ್ರದಿಂದ ಕಾರ್ಯಕ್ರಮ ರಚಿಸುವದು ಒಳಿತು. ಲೀಗಿನ ಕಾರ್ಯಕ್ಕೆ ತೊಂದರೆ ಮಾಡಬಾರದಾಗಿ ಎಲ್ಲಾ ಜಿಲ್ಹಾಧಿಕಾರಿಗಳಿಗೆ ನಾವು ಬರೆದು ತಿಳಿಸಿದ್ದೇವೆ, ಇತ್ಯಾದಿ- ಖುಲಾಸೆಯಾಯಿತು. ಈ ಖುಲಾಸೆಯಿಂದ ಸಮಾಧಾನವಾದ್ದರಿಂದ ತಹಕೂಬಿಯ ಸೂಚನೆಯು ಮುಂದೆ ಬರಲಿಲ್ಲ! ತಿನ್ನವೆಲ್ಲಿಯ ಶ್ರೀ| ಬಲ್ಲಯಾ ಪಿಳ್ಳೇ ಎಂಬವರು ಶಾಂತತೆಯಿಂದ ವಿದೇಶಿ ಜವಳಿಯ ಅಂಗಡಿಯ ಮುಂದೆ ಕಾವಲು ಮಾಡುತ್ತಿದ್ದರು, ಪೋಲೀಸರು ಅವರಿಗೆ ಸೆರೆಹಿಡಿದು ಒಯ್ದರು ಅಲ್ಲಿ ಅವರಿಗೆ ಬೆತ್ತದಿಂದ ಹೊಡೆದರಂತೆ! ಅದ ಮೇಲೆ ೮೦ ಏಟು ಕೊಟ್ಟರಂತೆ! ೭೫ ಗಾಯಗಳಾಗಿವೆಯಂತೆ! ಈ ಎಲ್ಲ ಗಾಯಗಳ ಬಗ್ಗೆ ಡಾಕ್ತರರು ಸರ್ಟಿಫಿಕೇಟು ಕೊಟ್ಟಿರುತ್ತಾರಂತೆ!! "ಅತಿಕ್ರಮ"ದ ಬಗ್ಗೆ ರೂ ೮೦೦ ಲುಕ್ಸಾನ ಬೇಡಿ ಪಿಳ್ಳೇಯವರು ಫೌಜದಾರರ ಮೇಲೂ, ಇನ್ನಿಬ್ಬ ಪೋಲೀಸರ ಮೇಲೂ ದಾವೆ ಮಾಡುವವರಿದ್ದಾರೆ. ತಿನ್ನವೆಲ್ಲಿಯ ಎಡ್ವೋಕೇಟ ಕೃಷ್ಣಸ್ವಾಮಿ ಅಯ್ಯರವರು ಕಾಯಿದೆಯಂತೆ ದಾವೆಯ ನೋಟೀಸ ಸಹ ಕೊಟ್ಟಿರುತ್ತಾರೆ!

ಕಳೆದ ತಾ. ೭ರ ತನಕ ಮದ್ರಾಸ ಇಲಾಖೆಯಲ್ಲಿ ಜೈಲಿಗೆ ಹೋದವರ ಸಂಖ್ಯೆಯು ೧೩೦೪ ಇರುತ್ತದೆ

ಒಡಿಸಾ ಪ್ರಾಂತದ ಸುದ್ದಿ.

ಫೆಬ್ರುವರಿ ತಿಂಗಳ ಕೊನೆಯ ತನಕ ಈ ಪ್ರಾಂತದಿಂದ ೧೦೦೦ ಜನರು ಸೆರೆಮನೆ ಸೇರಿರುವರು. ಬಹುತೇಕ ಜನಗಳು ವಿದೇಶಿ ವಸ್ತ್ರದ ಅಂಗಡಿಗಳ ಮುಂದೆ ಕಾವಲು ಮಾಡಿದ ಬಗ್ಗೆ, ಹೆಂಡದಂಗಡಿಗಳ ಮುಂದೆ ಕಾವಲು ಮಾಡಿದ ಬಗ್ಗೆ ಯಾ ರಾಷ್ಟ್ರಧ್ವಜಗಳ ಮೆರವಣಿಗೆಗಳನ್ನು ತೆಗೆದ ಬಗ್ಗೆ ಆದ್ದವಿರುತ್ತವೆ. ತಾ ೧೩ಕ್ಕೆ "ವಂದಿ ದಿನ"ದ ಆಚರಣೆಯಾಯಿತು ಆ ಬಗ್ಗೆ ಶ್ರೀ ಗೋಪಾಲ-ಬಂಧು ಚೌಧರಿಯವರ ಕನ್ಯಾ ಶ್ರೀಮತಿ ಅನ್ನಪೂರ್ಣಾದೇವಿಯವರಿಗೂ ಇನ್ನಿಬ್ಬರಿಗೂ ಸೆರೆಹಿಡಿದಿರುತ್ತಾರೆ

ಮಧ್ಯಪ್ರಾಂತದ ಸುದ್ದಿ.

ಫೆಬ್ರುವರಿ ತಾ ೨೮ರ ತನಕ ಈ ಪ್ರಾಂತದಲ್ಲಿ ಸೆರೆಹಿಡಿದವರ ಸಂಖ್ಯೆ ೧೬೯೩ ಶಿಕ್ಷೆಯಾದವರ ಸಂಖ್ಯೆ ೧೦೦೯. ಅಂತು ೪೫| ಸಾವಿರ ರೂಪಾಯಿಗಳ ದಂಡಗಳಾಗಿದ್ದವು. ಪೈಕಿ ೧೫ ಸಾವಿರ ರೂಪಾಯಿ ವಸೂಲಾಗಿತ್ತು. ಇಬ್ಬ ವಕೀಲರು ಮಾತ್ರ -ಬ್ಯಾ| ಅಭ್ಯಂಕರ ಮತ್ತು ಉಮರೇಕರ ಶ್ರೀ| ಟೋಕರಸರ ಇವರು ಸೆರೆಯಾಳಾಗಿರುವರು. ಇಬ್ಬರಿಗೂ ಅವರ ವಕೀಲಿಯ ಸನದು ಯಾಕೆ ರದ್ದುಮಾಡಬಾರದೆಂಬ ಬಗ್ಗೆ ನೋಟೀಸುಗಳಾಗಿವೆ.

ಬ್ಯಾ| ಅಭ್ಯಂಕರರಿಗೆ ಮೆಜಿಸ್ಟ್ರೇಟರು ೧೨ ಸಾವಿರ ರೂ. ದಂಡ ವಿಧಿಸಿದ್ದರು. ಮುಂದೆ ಪ್ರಾಂತಾಧಿಪರು ದಂಡವನ್ನು ೩| ಸಾವಿರಕ್ಕೆ ಇಳಿಸಿದರು ಈ ದಂಡದ ವಸೂಲಿಯ ಬಗ್ಗೆ ಅಭ್ಯಂಕರರ ಮೋಟಾರ ಕಾರು ಜಪ್ತ ಆಗಿತ್ತು. ತಾ ೧೦ಕ್ಕೆ ಅದನ್ನು ಲಿಲಾಂವಿಗೆ ತಂದರು. ಲಿಲಾಂವಿನಲ್ಲಿ ಒಬ್ಬರೇ ಸವಾಲು ಮಾಡಿದರು, ಅದು ರೂ ೫೦೦ಕ್ಕೆ ಸವಾಲು ಮಂಜೂರ ಆಗಲಿಲ್ಲ! ಪುನಃ ಲಿಲಾಂವಾಗುವದು

ವರ್ಧಾದೊಳಗಿನ ಒಂದು ಸಭೆಯ ಮೇಲೆ ಲಾಠಿ ಹಲ್ಲೆ ಮಾಡಿದ ಬಗ್ಗೆ ಕಾಯಿದೆ ಕೌನ್ಸಿಲಿನಲ್ಲಿ ಸರಕಾರದ ಮೇಲೆ ನಿಂದಾವ್ಯಂಜಕ ಠರಾವು ಒಂದು ಪಾಸಾಯಿತು ರಾಷ್ಟ್ರೀಯ ಸಭೆಯ ಬಗ್ಗೆ ಸಹಾನುಭೂತಿಯಿಲ್ಲದ ಮೆಂಬರರು ಸಹ "ವರ್ಧಾದಲ್ಲಿ ಚಳವಳಿಯು ಶಾಂತ ರೀತಿಯಿಂದ ನಡೆದಿರುತ್ತದೆಂತಲೂ, ಲಾಠಿಯ ಪ್ರಯೋಗ ಮಾಡಲಿಕ್ಕೆ ಏನೂ ಕಾರಣವಿದ್ದಿಲ್ಲವೆಂತಲೂ, ಸಭೆಯಲ್ಲಿ ಸೇರಿದ ಜನರಿಗೆ-ಸಹ ಪೋಲೀಸರು ಬಡೆದರೆಂತಲೂ ಆವೇಶದಿಂದ ನುಡಿದರು ಕೆಲವರು ತಮ್ಮ ಪ್ರತ್ಯಕ್ಷ ಮಾಹಿತಿಯನ್ನೇ ವಿವರಿಸಿದರು! ದಬ್ಬಾಳಿಕೆಯ ಬಗ್ಗೆ ಎಲ್ಲೂ ನಿಷೇಧವಾದದ್ದಿಲ್ಲವೆಂದು ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಉದ್ಗಾರ ತೆಗೆದ ಸ್ವಲ್ಪ ಕಾಲದಲ್ಲೇ ಈ ನಿಂದಾವ್ಯಂಜಕ ಠರಾವು ಪಾಸಾದದ್ದು ಒಂದು ಯೋಗವೇ!

ಶ್ರೀ| ಜಮನಾಲಾಲ ಬಜಾಜರವರ ಪತ್ನಿಯು ಸೆರೆಮನೆಯಲ್ಲಿ ಅಸ್ವಸ್ಥರಿದ್ದಾಳೆ! ತಾ. ೬ಕ್ಕೆ "ಗಾಂಧಿ ದಿನ"ದ ನಿಮಿತ್ತ ಹರತಾಳವಾಚರಿಸಲಿಕ್ಕೆ ಅಂಗಡಿಕಾರರಿಗೆ ಹೇಳಿದ ಬಗ್ಗೆ ಶ್ರೀ| ಬಜಾಜರವರ ಸಹೋದರರಿಗೂ, ಸಹೋದರಿಯ ಮಗಳಿಗೂ ಬೇರೆ ೭ ಜನ ದೇಶಸೇವಿಕೆಯರಿಗೂ ವರ್ಧಾದಲ್ಲಿ ಸೆರೆಹಿಡಿದರು ಎಲ್ಲರಿಗೂ ದಂಡ ದಂಡ ಕೊಡದಿದ್ದರೆ ೬-೬ ವಾರಗಳ ತುರಂಗವಾಸದ ಶಿಕ್ಷೆಯಾಗಿದೆ ಈ ಬಗ್ಗೆ ವರ್ಧಾದಲ್ಲಿ ಹರತಾಳವಾಯಿತು. ತಾ ೫ಕ್ಕೆ ಚಾಂದಾದಲ್ಲಿ ಒಂದು ಜನಸಮೂಹವನ್ನು ಪೋಲಿಸರು ಬಲಾತ್ಕಾರದಿಂದ ಚದರಿಸಿದರು. ೬ ಜನರಿಗೆ ಗಾಯವಾಯಿತು. ೧೧ ಜನರಿಗೆ ಸೆರೆಯಾಯಿತು.

ವರ್ಧಾ ಜಿಲ್ಹೆಯಲ್ಲಿ ಈತನಕ ೧೮೧ ಗಂಡಸರೂ ೫೦ ಮಂದಿ ಹೆಂಗಸರೂ ಕೂಡಿ ೨೩೧ ಮಂದಿ ಜೈಲಿಗೆ ಹೋಗಿರುತ್ತಾರೆ.

ತಾ ೧೫ಕ್ಕೆ ಅಮರಾವತಿಯ ಒಬ್ಬ ಪ್ರಮುಖ ಕಾರ್ಯಕರ್ತನಿಗೆ ರಾಜದ್ರೋಹಿ ವಾಙ್ಮಯವನ್ನು ಓದಿದ ಬಗ್ಗೆ ೩ ತಿಂಗಳ ಸಾದಾ ಶಿಕ್ಷೆ, ಹಾಗೂ ೧೦೦೦ ರೂ. ದಂಡವಾಗಿದೆ.

ಮಹಾರಾಷ್ಟ್ರ- ಸುದ್ದಿ.

ಪುಣೆ, ಅಹಮ್ಮದನಗರ, ಜಳಗಾಂವ, ರತ್ನಾಗಿರಿ, ನಾಶಿಕ ಮೊದಲಾದ ಕಡೆಯಲ್ಲಿ ಚಳವಳವು ಇನ್ನೂ ನಡೆದಿದೆ. ಅಹಮ್ಮದನಗರದಲ್ಲಿ ಅಂತೂ ೩೩ ಸರ್ವಾಧಿಕಾರಿಗಳು ಸೆರೆಮನೆ ಸೇರಿದರು ಜವಳಿ ವ್ಯಾಪಾರಿಗಳು ಕಾವಲಿಗಂಜಿ ವಿದೇಶಿ ಜವಳಿಯನ್ನು ಮುದ್ರೆ ಹಾಕಿಟ್ಟಿರುವದು ಸ್ವೀಕರಿಸಿ, ವೈದ್ಯಕ ಸಾಮಾನು ವಗೈರೆ ಬ್ರಿಟಿಶ ಮಾಲನ್ನು ವ್ಯಾಪಾರಿಗಳು ಮಾರಲಿಕ್ಕಿಡುವದಿಲ್ಲ ಈ ಕುರಿತು ಮಾತಾಡಲಿಕ್ಕೆ ಕೆಲ ವರ್ತಕರಿಗೆ ಕಲೆಕ್ಟರ ಸಾಹೇಬರು ಕರೆದಿದ್ದರು. ಏನು ಮಾತು-ಕಥ ನಡೆಯಿತೆಂದು ಪ್ರಕಟವಾಗಲಿಲ್ಲ. ಅಹಮ್ಮದನಗರದಲ್ಲಿ ಪ್ರಭಾತಫೇರಿಗಳೂ ಸಾಯಂಫೇರಿಗಳೂ ನಡೆದಿವೆ ದಿನಾಲು ಕರಪತ್ರವೂ ಹೊರಬೀಳುತ್ತಿವೆ ಕರಪತ್ರ ಮಾರುವವರಿಗೆ ಸೆರೆಹಿಡಿಯುತ್ತಿದ್ದಾರೆ.

ರತ್ನಾಗಿರಿಯಲ್ಲಿ ಶ್ರೀ| ವಿಷ್ಣುಪಂತರಿಗೆ ೨ ವರ್ಷಗಳ ಸಕ್ರಮ ಶಿಕ್ಷೆ ಮತ್ತು ೫೦ ರೂ. ದಂಡವಾಯಿತು ಮಾಲವಣ ೧ನೇ ವರ್ಗದ ಮೆಜಿಸ್ಟ್ರೇಟರ ಕಚೇರಿಯ ಹೊರಮುಗ್ಗಲಿಗೆ ರಾಷ್ಟ್ರಧ್ವಜ ಹಚ್ಚಲು ಪ್ರಯತ್ನಿಸಿದ ಆಚರೆಯ ೬ ಮಂದಿ ಸ್ವಯಂಸೇವಕರಿಗೆ ೬-೬ ತಿಂಗಳ ಕಠಿಣ ಶಿಕ್ಷೆ ಮತ್ತು ೫೦-೫೦ ರೂ ದಂಡ ವಿಧಿಸಲಾಗಿದೆ ಮಾಲವಣ ಮ್ಯು|ಯ ಮೇಲೆ ಇದ್ದ "ಕಾಂಗ್ರೆಸ" ಪತಾಕೆಯನ್ನು ಇಳಿಸಬೇಕಾಗಿ ಅಲ್ಲಿಯ ಪೋಲೀಸ ಸಬ ಇನ್ಸಪೆಕ್ಟರರ ತಿಳಿಸಿದರು. ಮ್ಯು|ಯ ಸಭೆಯಾಯಿತು, ನಾವು ಹಚ್ಚಿದ್ದು ರಾಷ್ಟ್ರಪತಾಕೆ! ಕಾಂಗ್ರೆಸ ಪತಾಕೆಯಲ್ಲ. ರಾಷ್ಟ್ರಪತಾಕೆಯು ಬೇಕಾಯದ ಎಂದು ರದ್ದಾಗಿದ್ದು ಕಾಣುವದಿಲ್ಲ ಅದನ್ನು-ಇಳಿಸಲು ಕಾರಣವಿಲ್ಲ" ಎಂದು ಸ| ಇ|ರಿಗೆ ತಿಳಿಸಬೇಕಾಗಿ ನಿರ್ಣಯವಾಯಿತು! ಮರುದಿನವೇ ರಾಷ್ಟ್ರಪತಾಕೆಯನ್ನು ಕೂಡಲೇ ತೆಗೆಯಬೇಕಾಗಿ ಡಿ| ಮೆಜಿಸ್ಟ್ರೇಟರ ಹುಕುಮು ಬಂತು! ಪತಾಕೆಯು ತೆಗೆಯಿತು, ಊರಲ್ಲಿ ಹರತಾಳವೂ ಆಯಿತು!

ತಾ ೧೪ಕ್ಕೆ ಲೋಥಿಯನ್ ಕಮೀಟಿಯವರು ಹಳ್ಳಿಗಳನ್ನು ನೋಡಬೇಕೆಂಬ ಉದ್ದೇಶದಿಂದ ನಾಶಿಕ ಜಿಲ್ಹೆಯ ಕೌಸೇ ಎಂಬಲ್ಲಿ ಹೋಗಿದ್ದರು ಕಮಿಟಿಯ ನಿಷೇಧ ಮಾಡಲಿಕ್ಕೆ ನಾಶಿಕದ ೧೪ನೇ ಸರ್ವಾಧಿಕಾ

[illegible] ದೇಶಪ್ರೇಮಿ [illegible]

[illegible] ವಿಧಿಸಲಾ[illegible] ಶಿಕ್ಷೆ ಪ್ರಕಾರ [illegible]

[illegible] ಸಂಸ್ಥೆ [illegible]

[illegible] (ಜಿಲ್ಲಾ ಕೋರ್ಟಿನ [illegible]) [illegible]

ಮುಂಬಯಿಯ ಸುದ್ದಿ

[illegible] ಜೊತೆ ವಾಗ್ಯುದ್ಧ [illegible] ಮೊದಲಿಂದ ವರ್ತಕ [illegible] ಸಿರುವರ ಸಂಖ್ಯೆಯು [illegible]

[illegible] ಕಮಿಟಿ [illegible] ಮುಂಬಯಿ [illegible] ಕಮಿಟಿಯು ಆಗಾಗಿನ [illegible] ಯಲ್ಲಿ [illegible] ಬಂದಾಗಿದ್ದರೂ ಪ್ರೊ[illegible] ಪ್ರತ್ಯೇಕ ಸಂಸ್ಥಾನದ ವರ್ತಕರಿಗೆ [illegible] ನೋಟೀಸು ಕೊಟ್ಟರು।

ಸಾಮಾನ್ಯ ನಿಯಮ [illegible] ಪದ್ಧತಿಯು ಹೊರಗೆ [illegible] ಮುಚ್ಚಬೇಕೆಂದು ಅಂಗಡಿಯಲ್ಲಿದ್ದ [illegible] ಗಿರಾಕಿಗಳಿಗೆ [illegible] ಮಾರಲಿಕ್ಕೆ [illegible] ಕೊಡಬಾರದು" ಎಂತಾ ಹುಕುಮು ಮಾಡಿದ್ದು. ಕಲವರಿಗೆ ಮಾತ್ರ ಹುಕುಮು ಜಾರಿ ಮಾಡಿತ [illegible] ಪತ್ರಿಯುಲ್ಲಿ। [illegible] ಪೋಲೀಸರ [illegible] ಇಲ್ಲ। [illegible] ಮುಂಬಯಿ ಬಿಟ್ಟುಹೋ[illegible] ವರ್ತಮಾನ ಹರಡಿದ। ಕಮಿ[illegible] ಹುಕುಮು [illegible], ಅಂಗಡಿ ತೆರೆಯದ [illegible] ಮೂರು ವರ್ತಕರಿಗೆ ಸೆರೆಯಾಯಿತು।

ಈ ವಾರದಲ್ಲಿ ಮುಂಬಯಿ ಕೋಶ ಖಾತೆಯ ಸೆಕ್ರೆಟರಿ ಮಿ| ವ್ಯಾಲ್ಸರವರು ಹತ್ತಿ ವ್ಯಾಪಾರಿಗಳಿಗೂ ದಲಾಲರಿಗೂ ಪತ್ರ ಬರೆದಿರುವರು. ಮುಂಬಯಿ ಕಾಂಗ್ರೆಸ ಕಮಿಟಿಯ ಆಜ್ಞೆಯಂತೆ [illegible] ಮುಚ್ಚುತ್ತಿದ್ದರಿ ಇದು ತರವಲ್ಲ, ಕ್ಷೇಮವಲ್ಲ. ಕಾಂಗ್ರೆಸಿನ [illegible]ಯನ್ನು ನಿರ್ಮೂಲಿಸಬೇಕಾಗಿದೆ ನಮ್ಮ ಒಂಬೋಣವೇನು? ಎಂಬುದೇ ಈ ಪತ್ರದ [illegible]. [illegible] ಕೆಲವು ವರ್ತಕರು ಸರಕಾರದ ದಬ್ಬಾಳಿಕೆ [illegible] ವ್ಯಾಪಾರದ ಅವ್ಯವಸ್ಥೆಗೆ ಕಾರಣವೆಂದು ಹೇಳುತ್ತಿರುವರು. ಕೆಲ ವರ್ತಕರಿಗೂ, ಮಿ| ವ್ಯಾಲ್ಸರಿಗೂ ಮಾತುಕತೆಯಾಯಿತು। ಇನ್ನೂ ತೀರಲಿಲ್ಲ. [illegible] ಪ್ರಧಾನರ ಮುಂದೆ ಮಂಡಿಸುವರು।

[illegible] ಮೇಲ್" ಪತ್ರದ ಸಂಪಾದಕರಾದ ಮಿ| [illegible] ಜೂಸಫರವರ ಕಡೆಯಿಂದ ಒಟ್ಟಿಗೆ ರೂ ೬೦೦೦ ಜಾಮೀನು [illegible]ಗಿದೆ. ಮಿ| ಹೊರ್ನಿಮನ್ [illegible] ಬರೆದ ಎರಡು ಲೇಖನಗಳಲ್ಲಿ ಕೆಲವು ಮಜಕೂರು ಆಕ್ಷೇಪಾರ್ಹವಂತೆ. ಈ ಹುಕುಮಿನ ವಿರುದ್ಧ ಮುಂಬಯಿ ಹೈಕೋರ್ಟಿನಲ್ಲಿ ಅಪೀಲಾಗಿದೆ. ಈ ವಾರದಲ್ಲಿ ಅಪೀಲು ನಿಕಾಲೆಯಾಗುವದು.

[illegible] ಯೂನಿಯನ್ ಕಮಿಟಿಯು [illegible] ನಿರ್ಬಂಧನೆಗಳ ಮೆರವಣಿಗೆಯು ಹೊರಟಿತ್ತು, [illegible] ಯಿಂದ ಚದರಿಸಲು [illegible] ಜನರಿಗೆ ಸರಿಯಾಗಿ [illegible]ವಾಯಿತು.

ಶ್ರೀ ಜಮುನಾಲಾಲ ಬಜಾಜರವರಿಗೆ 'ಪೆರೋಲ' ಮೇಲೆ [illegible] ಅವರು ರಾಜಿ ಕೊಡಲಿಲ್ಲ. ಅವರಿಗೆ [illegible] ೧ ವರ್ಷದ ಕಠಿಣ ಶಿಕ್ಷೆ ಮತ್ತು [illegible] ದಂಡ ವಿಧಿ[illegible]

ಶ್ರೀ [illegible]ಚಂದ [illegible] ಇವರು [illegible] ಮೂಲಕ ಉಪವಾಸದ [illegible] ಸ್ತ್ರೀಯರು [illegible] ಹೊರಗೆ ಒಂದ [illegible] ೧ ವರ್ಷದ [illegible] ೨೦೦ ರ [illegible] ವಿಧಿಸಲಾಗಿದೆ [illegible] ಸೇವಕೀಯಲ್ಲಿ [illegible] ಮುಂಬಯಿಯ ದೊಡ್ಡ ವರ್ತಕರು [illegible] ಯುದ್ಧ ಮಂಡಳದ ಅಧ್ಯಕ್ಷರಾಗಿದ್ದರು।

ಈಗ [illegible] ಜನರ ಮೇಲೆ [illegible] ಈ ಜನರು ಮುಂಬಯಿಯ ಕಾಂಗ್ರೆಸ್ [illegible] ಮಾತ್ರ [illegible]ತಂತೆ! [illegible] ಎಲ್ಲ ವ್ಯಸನ ಮಾಡುತ್ತಿದ್ದರಂತೆ!

ಸೋಮವಾರ ತಾ ೧೪ನೇ, ಎಲ್ಲ ಪೇಟೆಗಳು ತೆರೆದವು. ಆದರೆ ಒಬ್ಬ ಹತ್ತಿ ದಲಾಲರಿಗೆ ಕೈದು ಮಾಡಿದ್ದರಿಂದ ಮಧ್ಯಾಹ್ನ ೩ ಘಂಟೆಗೆ ಹತ್ತಿ ವ್ಯಾಪಾರದ ಪೇಟೆ [illegible] ಬಂದಾದವು.

ಮಂಗಳವಾರ 'ಧ್ವಜದ ದಿನ' [illegible] ದಲ್ಲಿ ಹರತಾಳವಾಯಿತು [illegible] ೧೨೦ ಕ್ಕೂ ಮಿಕ್ಕಿ ಜನರಿಗೆ ಕೈದಾಯಿತು. ಬುಧವಾರ ದಿನ [illegible] ೯೦ ಜನರ ಮೇಲೆ [illegible] ನಡೆಯಿತು! ಇದು ದೊಡ್ಡ [illegible] ಹಿಂದೆಂದೂ ನಡೆದಿದ್ದಿಲ್ಲ. [illegible] ಜನರಿಗೆ [illegible] ಶಿಕ್ಷೆಯಾಯಿತು [illegible] ರಿಪೋರ್ಟರಿಗೆ [illegible] ವಲ್ಲಿ [illegible]

ಶ್ರೀಮತಿ [illegible] ಕ್ಕೆ ಸಹಾಯ ಮಾಡುವದಕ್ಕಾಗಿ ಅವರಿಗೆ ನೋಟೀಸು ಕೊಟ್ಟಿದೆ.

[illegible] ಮಾರ್ಕೆಟು ಬಂದಾಗಿ [illegible] ಗಳಾಗುತ್ತ ಬಂತು [illegible] ಇಟ್ಟಿದ್ದರಿಂದ ಮಾರ್ಕೆಟು ತೆರೆಯುವ [illegible] ಬಾಗುವದಿಲ್ಲ.

ವಿಸಾಪ್ಪುರ ಜೈಲಿನಲ್ಲಿ ೯೦೦ ರಾಜಕೀಯ ಕೈದಿಗಳು [illegible] ೧೦೦೦ [illegible] ಕೈದಿಗಳೂ ಕೂಡಿ ೧೯೦೦ ಕೈದಿಗಳು ಇದ್ದರೆಂಬ ಸುದ್ದಿ.

ಸ್ಥಾನಿಕ ವೃತ್ತಾಂತ.

ಕುಮಟಾ— ಕಳೆದ ವಾರದಲ್ಲಿ ಜಿಲ್ಲಾ [illegible] ಅಧಿಕ ನ್ಯಾಯಾಧೀಶರ ಹಂಗಾಮ ತೀರಿತು. [illegible] 'ಕಾನಡಾವೃತ್ತ' [illegible] ಅಪೀಲು ವಿಚಾರ [illegible] ವಾರ ನಡೆಯಿತು. ನ್ಯಾಯಾಧೀಶರು ಗುರುವಾರ ನಿಕಾಲಿ ಹೇಳಿದರು. ಮೂಲ ತೀರ್ಪು ಕಾಯಂ [illegible] ಪ್ರಕ್ಷೋಭಕ [illegible]ದಿಂದ ಬೇರೆ ಯಾವ ಸಂಸ್ಥೆಗೆ ಸಹಾಯ [illegible]ಗುತ್ತದೆಂದು ಜಜ್ಜರ ಅಭಿಪ್ರಾಯವಾಯಿತು. [illegible] ಹೇಳಿದ [illegible] ದಿಂದ ರೂ ೫೦೦ ದಂಡವೇನು [illegible] ಲಿಲ್ಲವೆಂತ [illegible] ಕೊಟ್ಟರು.

ಈ ಸರ್ಕಲದ ಪೋಲಿಸ ಇನ್ಸಪೆಕ್ಟರ ಮೆ| [illegible] ಇವರು ೪ ತಿಂಗಳ ರಜೆಯ ಮೇಲೆ ಹೋಗಿದ್ದಾರೆ. ಅವರ ಬದಲಿಗೆ ಹೊನ್ನಾವರದ ಫೌಜದಾರ [illegible] ನಗರೀಯವರಿಗೆ [illegible]

ಗುಡೇಅಂಗಡಿಯ [illegible] ಅವರಿಗೆ [illegible] ಭೂಮಿಯ [illegible] ಅವರು [illegible] ತೀರ್ವ ಕೊಡಬೇಕು [illegible] ತೀರ್ಪು ಕೊಡಲಿಲ್ಲ! [illegible] ಗುಡೇಅಂಗಡಿಯಲ್ಲಿ ಅವರ ಮನೆಯೊಳಗೆ [illegible]

ಭಟಕಳ— ರಾ| [illegible] 'ಭಟ್ಟ' [illegible] ಸೋಲಿ ಫೌಜದಾರರಿಗೆ [illegible] ಬಗ್ಗೆ [illegible] ವಿಚಾರಕ್ಕೆ ಬಂತು. ಫೌಜದಾರರ ಜಬಾನಿ [illegible] ಆಗುವಷ್ಟರಲ್ಲಿ ಜಬಾನಿಯ [illegible] ಕೋರ್ಟಿನಿಂದ [illegible] ವಿಚಾರಕ್ಕೆ ಮುಖ್ಯ [illegible] ಅಧಿಕಾರವಿಲ್ಲವೆಂತ ಆರೋಪಿ [illegible] ವಕೀಲರು [illegible] ಈ ಸಂಗತಿಯು [illegible]ಗಲಿಲ್ಲ. [illegible] ವಿಚಾರವನ್ನು [illegible] ಮಾಡಿಕೊಳ್ಳುವ ಬಗ್ಗೆ ಹೈಕೋರ್ಟಿಗೆ ತಾವು ಅರ್ಜಿ ಮಾಡುವವರಿದ್ದೇವೆಂದು ಆರೋಪಿ ಅರ್ಜಿ ಮಾಡಿದ್ದರಿಂದ ವಿಚಾರವು [illegible]ಕ್ಕೆ ತಹಕೂಬ ಇಟ್ಟಿದೆ.

ಅದೇ ದಿನ [illegible] ಗಡಿಬಿಡಿ [illegible] ಹೋಟೆಲ [illegible] ಬಾಲಕರಾದ [illegible] ಮುಂದೆ ಒಂದು [illegible] ಸರ್ವಿಸಿನ ಬಸ [illegible] ಒಂದು [illegible] ಬಗ್ಗೆ ಒಂದು ಕಲ್ಲು [illegible] ಅಧಿಕಾರಿಗಳು [illegible] ಈ ಬಗ್ಗೆ [illegible] ನಡೆಯುತ್ತಿದೆ [illegible] ಹೊನ್ನಾವರ [illegible] ಬೆಳಗಿನ ೮ ಘಂಟೆ ಸುಮಾರಕ್ಕೆ ಮೋಟಾರ [illegible] ಅಕಸ್ಮಾತ್ [illegible] ಒಂದು [illegible] ಹಿಡಿದು [illegible] ವೈದ್ಯರ [illegible] ಕೋರ್ಟಿಗೆ ಹೋಗುವ [illegible]ದ್ದರಿಂದ ಎಲ್ಲ [illegible] ಮುಂದಿನ ಹೊನ್ನಾವರದಿಂದ

ತೆಲುಗಿ ಒಂದು ಎಕರೆ ಕಲಿತ ವೇತನದ ಹೇಳಿದರು. ಆದರೆ [illegible] ಕೇಳಲಿಲ್ಲ. ಬಾವುಟಗಳು ಹಿಂದೆ ಮುಂದೆ [illegible] ಪೋಲೀಸರು ಎಲ್ಲ [illegible] ಒಂದು [illegible] ಮಾರ್ಗವಾಗಿ [illegible] ಅಂಚೆ ಕಛೇರಿಯಿಂದ [illegible] ಸ್ವದೇಶಿ [illegible] ಒಂದು ವೇಳೆ ತನ್ನ [illegible] ಸಂಗದಲ್ಲಿ [illegible] ನಡೆದ [illegible] ಒಂದು [illegible] ಬಗ್ಗೆ [illegible] ಸಂಗತಿಯನ್ನು [illegible] ಬಿಡುಗಡೆ ಮಾಡಿದರೆಂದು [illegible] ವ್ಯಕ್ತಿ [illegible] ಎಲ್ಲ ಜನಗಳಿಗೆ [illegible] ಬಂತು! ಈಗ [illegible] ಜನರಲ್ಲಿ ಅಸಂತೋಷವೆದ್ದಿದೆ.

ದಾ॥ [illegible] ಮೇಲೆ [illegible] ಬರೆದಿದ್ದಾರೆ.

ಶಿರಸಿ— [illegible] ಕೋರ್ಟಿನಲ್ಲಿ [illegible] ಸತ್ಯಾಗ್ರಹಿ [illegible] ಮಾಡುತ್ತಿದೆ.

[illegible] ಬಿಟ್ಟು [illegible] ಬಗ್ಗೆ [illegible] ಗುಡ [illegible] ಅಲ್ಲಲ್ಲಿ [illegible] ಬಿಟ್ಟುಕೊಂಡರು.

[illegible] ಪಟೇಲ ದಾ॥ ಗೋವಿಂದ [illegible] ಕಾಂಗ್ರೆಸ್ಸಿಗೆ [illegible] ಕೆಲವು [illegible] ಅವರ [illegible] ಬಂದಿದೆ.

ಕೆಲವು ದಿವಸಗಳಿಂದ [illegible] ಪೇಟೆಯಲ್ಲಿ [illegible] ಸ್ತಂಭಕ್ಕೆ [illegible] ಮೇಲೆ [illegible] ಬಿಟ್ಟು [illegible] ಸಂಕಲ್ಪ [illegible] ಮಾಡುತ್ತಾರೆ. [illegible]

ಅಲ್ಲಲ್ಲಿ [illegible] ಬಗ್ಗೆ [illegible] ಪತ್ರಗಳು [illegible] ಸುದ್ದಿಗಳು [illegible] ಪ್ರಕಟವಾಗುತ್ತವೆ.

ಶ್ರೀ [illegible] ಮೇಲೆ [illegible] ಕಡೆಗೆ [illegible] ಒಟ್ಟಿಗೆ ನಡೆದು [illegible] ತಿಳಿದು ಬಂದಿಲ್ಲ.

ತಾ ೧೧ ನೇ [illegible] ಜನರಿಗೆ [illegible] ಹೇಳುತ್ತಾರೆ.

ಸಿದ್ದಾಪುರ—

[illegible] ಜನ್ನ [illegible] ತಾಲೂಕ್ಕೆ [illegible] ಕೇಳಬರುತ್ತದೆ. [illegible]

[illegible] ತಾ ೧೩ ನೇ [illegible] ಪ್ರಭಾತ ಫೇರಿ [illegible] ಪೋಲೀಸರು ಧ್ವಜವನ್ನು [illegible] ಧ್ವಜವನ್ನು [illegible] ಜಯಘೋಷ [illegible] ಪೋಲೀಸರು [illegible] ಪೋಲೀಸರು ಅವರ ಗೊಡವೆಗೆ ಹೋಗಲಿಲ್ಲ.

ಈ ತಾಲೂಕಿನಲ್ಲಿ [illegible] ಬಗ್ಗೆ [illegible] ತಾಲೂಕ್ಕೆ [illegible] ಕಾಂಗ್ರೆಸ [illegible] ಮಾಡಿಲ್ಲ. [illegible] ನಮಗೆ [illegible] ಎಂಬ [illegible] ಒಂದು [illegible] ಬಂದವರೂ [illegible] ತಪ್ಪಿಲ್ಲ.

[illegible] ಬಗ್ಗೆ [illegible] ಅವರಿಗೆ ಶಿಕ್ಷೆ ಮಾಡಿ [illegible] ಕಳಿಸಿದ್ದಾರೆ.

ಅಂಕೋಲಾ—

[illegible] ಸತ್ಯಾಗ್ರಹ [illegible] ತಾ ೧೧ ನೇ [illegible] ತಿಂಗಳ [illegible] ಶಿಕ್ಷೆ ವಿಧಿಸಲ್ಪಟ್ಟಿದೆ.

ತಾ ೧೩ ನೇ [illegible] ವಿದ್ಯಾರ್ಥಿಯ [illegible] ಅಂಕೋಲೆಗೆ [illegible] ಪೋಲೀಸರ [illegible] ಪುಸ್ತಕಗಳನ್ನು [illegible] ಅವನಿಗೆ ಶಿಕ್ಷೆ ಮಾಡಿ [illegible] ಬಿಟ್ಟುಕೊಟ್ಟರು!

ತಾ ೧೫ ನೇ [illegible] ಪೋಲೀಸರು [illegible] ಅವರ [illegible] ಪೋಲೀಸರು ಬಂದಿದ್ದರು. [illegible] ಅಂಕೋಲೆಯ [illegible] ಪೋಲೀಸರಿಗೆ [illegible] ಪೋಲೀಸ [illegible] ಬಟ್ಟೆ [illegible] ಮಾಡುತ್ತಾರೆ.

ಅದೇ ದಿನ [illegible] ಧ್ವಜ [illegible] ಪೋಲೀಸರು [illegible] ಶಿಕ್ಷೆ ಮಾಡಿ [illegible] ಪೋಲೀಸರು [illegible] ಅವನಿಗೆ [illegible] ಪೋಲೀಸರು [illegible] ಶಿಕ್ಷೆ ಮಾಡಿ [illegible] ಪ್ರತಿಬಂಧದಲ್ಲಿ ದ್ದ [illegible] ಮಾಡಿದರು.

ತಾ ೧೬ ನೇ [illegible] ಕೆಲಸ ಮಾಡುತ್ತಿ [illegible] ಎಂಬುವರಿಗೆ [illegible] ತಿಂಗಳ ಶಿಕ್ಷೆಯಾಯಿತು.

ಅದೇ ದಿನ [illegible] ಬಿಟ್ಟುಕೊಟ್ಟರು! ಅವರೇ [illegible] ಶಿಕ್ಷೆ ಮಾಡಿದ್ದರೆಂದು ತಿಳಿಯುತ್ತದೆ.

ಆ ದಿನ [illegible] ಪೋಲೀಸ [illegible] ಅಂಕೋಲೆಯಿಂದ [illegible] ಕೆಲವರು ಒಂದು [illegible] ಕೆಲವರು [illegible] ಕೆಲವರು [illegible] ಪೋಲೀಸರ [illegible] ತಿಂಗಳು [illegible] ಪೋಲೀಸರ [illegible] ಜೊತೆಗೆ [illegible] ಅಂಕೋಲೆಗೆ [illegible] ([illegible]) ಜೊತೆಗಾರರಿಗೆ [illegible] ಅಂಕೋಲೆಯಲ್ಲಿ [illegible]

[illegible] ಅಲ್ಲಲ್ಲಿ (ಟಪಾಲು) [illegible] ಅಂಕೋಲಾ [illegible] ಬೆಂಕಿ [illegible] ಅಂಕೋಲಾ [illegible] ಮೇಲೆ [illegible] ಹತ್ತಿರ ಸಂಕಲ್ಪ [illegible] ಪೋಲೀಸರು [illegible] ನಾಗರಿಕರು [illegible]

For Sale!

One 1½ Ton Chevrolet Lorry & one ½ Ton Chevrolet Taxi Car, both in good working order, are to be sold. For particulars see or write to the undersigned

G. D. MALGIKAR,
Petrol Agent, KUMTA

ಮೋಟರ ಮಾರುವದಿದೆ!

ಉತ್ತಮ ಸ್ಥಿತಿಯಲ್ಲಿದ್ದ

ಒಂದು ೧½ ಟನ್ನ ಶೆವರೋಲೆಟ್ ಲೋರಿ ಹಾಗು ಒಂದು ಅರ್ಧ ಟನ್ನಿನ ಶೆವರೋಲೆಟ್ ಟ್ಯಾಕ್ಸಿ [illegible] ಮಾರತಕ್ಕವಿವೆ. [illegible] ತೆಗೆದುಕೊಳ್ಳಬಯಸುವವರು ನಮಗೆ ನಮಸ್ತೆ ಭೆಟ್ಟಿಯಾದಲ್ಲಿ ಯಾ ಪತ್ರ ಬರೆದಲ್ಲಿ ಎಲ್ಲಾ ಮಾಹಿತಿ ಸಿಗುವದು.

ತಾ. ೨೦-೩-೧೯೩೨

ಜಿ ಡಿ. ಮಳಗೀಕರ,
ಪೆಟ್ರೋಲ ಏಜಂಟ, ಕುಮಟಾ.

ಪ್ರೇಕ್ಷಕನು ನಾಯಿಯೇ?

(೨ನೇ ಪಾನಿನಿಂದ ಮುಂದರಿಸಿದ್ದು)

ರೂಪಾಯಿ ೭-೮ ರಂತೆ ಪ್ರೊಪೈಸಿ ರಾ| ಬಿಕ್ಕು ಭಂಡಾರಿಯವರ ಮನೆಯ ವರೆಗೆ ಹೋಗುವ ಸ್ವಮಾರಕ್ಕೆ ಮಾಡಲಾದ ವ್ಯ ಮಹಾಕಾಯದ ಲೆಕ್ಕಹಿತದ [illegible] ಕೆಯಲ್ಲವೇ? ಮುಸ್ಸಂಜೆ ರಸ್ತೆಯನ್ನು ಎಲ್ಲ [illegible] ಪಾಸಿಸುತ್ತಿದ್ದ ನಗರ [illegible] ಬಗ್ಗೆ [illegible]ಯುವಿನಿಂದ ಮುಂದೆ ಆ ರಸ್ತೆ ಮಾಡಬೇಕೆಂತ ಠರಾವಿಸಿದರೆ ಶ್ರೀಯುತ [illegible] ತಪ್ಪೇ? ಪ್ರೈರಾ [illegible] ಕಾಲದಲ್ಲಿ ತಮ್ಮ [illegible] ಕೊಟ್ಟಿಗೆ ಸಮೀಪದ ವೀದಿ [illegible] ಹಣವನ್ನು ಮ್ಯುನ್ಸಿಪಾಲ್ಟಿ ಖರ್ಚಿನಿಂದ [illegible] ಮಾಡಲಿಲ್ಲವೇ? ಸ್ವಾರ್ಥಿಗಳ್ಯಾರು? ಪ್ರಿನ್ಸಿಪಲ್ [illegible] ಶ್ಯಾನಭೋಗರ ಮನೆಯಿಂದ [illegible] ರಸ್ತೆಯ [illegible] ಮುಂದೆ [illegible] ಮಾಡಿದ್ದು [illegible] ಪ್ರೇಕ್ಷಕನ ಬೆ[illegible] ಲೇಖನದ ಅರಿವಾಗುತ್ತದೆ.

೬. ವಿಕ್ಟೋರಿಯಾ ಲ್ಯಾಬ್ರರಿಗೆ ವರ್ಷದಾ ೩೦ ರೂಪಾಯಿ ಗ್ರಾಂಟು ಕೊಡಬೇಕೆಂತ ಮೊದಲಿನ [illegible] ನಿರ್ಣಯವಿದ್ದು. ಮೊದಲಿನ ಕಮಿಟಿ [illegible] ನಂತರ ಮಾತ್ರ ಬಜೆಟ್ ಕಮಿಟಿಯು [illegible] ಲ್ಯಾಬ್ರರಿಗೆ ಬಾಲಕರು ಪತ್ರಿಕೆ [illegible] ಪುಸ್ತಕಗಳನ್ನು ಸಂದರ್ಶಿಸಿದರು. ಅದ್ದರಿಂದ ೩೦ ರೂಪಾಯಿಯ ಗ್ರಾಂಟು ಕೊಡುವ ಕಾಲಕ್ಕೆ ಈ ಬಗ್ಗೆ ವಿಚಾರ ಮಾಡಬೇಕೆಂತ ಹಾಗೇ ಇಟ್ಟಿದ್ದು ಸ್ತ್ರೀ ಶಿಕ್ಷಣಕ್ಕೆ ಪ್ರಾರಂಭ ಮಾಡುವದು ಮ್ಯುನ್ಸಿಪಾಲ್ಟಿಯ ಕರ್ತವ್ಯದಲ್ಲಿ ಒಂದಾಗಿದೆ. ಹೀಗಿರುವ ಈ ದಿನಗಳಲ್ಲಿ ಸ್ತ್ರೀಯರು ಮುಂದೆ ಬರಲು ಪ್ರೋತ್ಸಾಹನ [illegible]ಯವನ್ನು ಕೆರೆದಲ್ಲಿ ರೂಪಾಯಿ ೧೦೦೦ [illegible].

೭. ಗಿಬ್ಬ ಹ್ಯಾಸ್ಕೂಲಿನ ವಿಷಯ:— ಮೊದಲಿಂದ ಕಮಿಟಿಯು ಮ್ಯುನ್ಸಿಪಾಲ್ಟಿಯಿಂದ ಸದ್ರಿ ಹ್ಯಾಸ್ಕೂಲಿಗೆ ಗ್ರಾಂಟು ಕೊಡ್ತಾ ಬಂದಿದ್ದು (೬ ವರ್ಷಗಳ) ಲೆಕ್ಕವನ್ನು ತಪಾಸ ಮಾಡಿ ಸದ್ರಿ ಹ್ಯಾಸ್ಕೂಲಿನ ಉತ್ಪನ್ನ ಬಗ್ಗೆ ಮ್ಯುನ್ಸಿಪಾಲಿಟಿಯು [illegible] ಮಾಡಬೇಕೆಂಬುವರ [illegible] ಸೂಚನೆ [illegible] ಮೂರು ಮೆಂಬರರ ಒಂದು ಉಪಕಮಿಟಿ ನೇಮಿಸ ಬೇಕಾಗಿ ನಿರ್ಣಯಿಸಿತ್ತು. ಸದ್ರಿ ದರಖಾಸ್ತು ಬಜೆಟ್ ಕಮಿಟಿಯಲ್ಲಿ ಸಾದರವಾಗಲು [illegible] ಚಾಲಕರ ಕಡೆಯ ಪತ್ರಗಳಿಗೂ [illegible] ೬ ವರ್ಷದ ಲೆಕ್ಕವನ್ನು ತೋರಿಸುವದೇ [illegible] ವೇದಿಕೆಗೆ ಬಲಿಬಿದ್ದು ಪ್ರಿನ್ಸಿಪಲ್ ಮಿ| [illegible] ಸಾಹೇಬರು ೨ ವರ್ಷದ ಲೆಕ್ಕವನ್ನು ತಪಾಸ ಮಾಡಿದಲ್ಲಿ ಸಾಕೆಂತ ಸೂಚಿಸಲು, ಸಭಾಸದರು ಕುಶಂಕೆಯನ್ನು ಅರಿಯದೆ ಕಬೂಲ ಮಾಡಿ ಮೂಲ ಠರಾವಿನಲ್ಲಿ ೬ ವರ್ಷಗಳ ಬದಲಾಗಿ ೧ ವರ್ಷ ಎಂತ ತಿದ್ದುಪಡಿ ಮಾಡಿ ಮೂಲ ಠರಾವನ್ನೇ ಬಿಡುವದರಿಂದ ನಾಶ ಮಾಡಿರುತ್ತದೆ. ೬ ವರ್ಷಗಳ ಬದಲಾಗಿ ೨ ವರ್ಷದ ಲೆಕ್ಕ ತಪಾಸ ಮಾಡಬೇಕೆಂತ ಆದ ತಿದ್ದುಪಡಿಯಿಂದ ಸಭಾಸದರು ಹ್ಯಾಸ್ಕೂಲಿನ ಚಾಲಕರ ಅನ್ಯಾಯದ ಕರ್ಮಗಳಿಗೆ ಅರಿಯದೇ ಭಾಗಿಗಳಾದರೆಂತ ನನಗೆ ತೋರುತ್ತದೆ. ಮ್ಯುನ್ಸಿಪಾಲ್ಟಿಗೂ ಹ್ಯಾಸ್ಕೂಲಿನ ಟ್ರಸ್ಟಿಗಳಿಗೂ ೧೯೧೧ನೇ ಇಸ್ವಿಯಲ್ಲಾದ ಕರಾರಿನಲ್ಲಿ ಶಾಲೆಯ ಕೆಲಸವು ಮ್ಯುನ್ಸಿಪಾಲ್ಟಿಗೆ ಸಮಾಧಾನಕಾರಕವಿದ್ದಲ್ಲಿ ಗ್ರಾಂಟು ಕೊಡತಕ್ಕದ್ದೆಂತ, ಸ್ಪಷ್ಟವಿರುತ್ತ ಚೌಕಶಿಯು ಗರದಲ್ಲೇನು? ಸದ್ರಿ ಹ್ಯಾಸ್ಕೂಲಿನಿಂದ ಪ್ರಕಟವಾದ ರಿಪೋರ್ಟ ನೋಡಿದಲ್ಲಿ ರಿವೆನ್ಯು, ಸ್ಪೇಶಲ [illegible] ಮತ್ತು ಖರ್ಚಿನ, ಮಿಸಲೇನಿಯಸ ವಗೈರೆ ಬಗ್ಗೆ ೧೯೨೮ ವರ್ಷಕ್ಕೆ ೫ ೩| ಸಾವಿರದಂತೆ ಅಜಮಾಸ ೬-೭ ವರ್ಷಗಳ ವರೆಗೆ [illegible] ಖರ್ಚ ಬಿದ್ದದೆ. ಈ ಬಗ್ಗೆ [illegible] ಮ್ಯುನ್ಸಿಪಾಲ್ಟಿಯು ಕಾಲಕ್ಕೆ ಮಾಹಿತಿಯನ್ನು ಕಳಿಸಿದ್ದಾಗಲೀ, ಚೌಕಶಿ ಮಾಡಿದ್ದಾಗಲೀ ಕಂಡುಬರುವದಿಲ್ಲ. ಮತ್ತು ಸದ್ರಿ ಹ್ಯಾಸ್ಕೂಲಿನ ಲೆಕ್ಕದಲ್ಲಿ ಸಾವಿರಗಟ್ಲೆ ಹಣದ ವಂಚನೆಯಾಗಿರುವದಾಗಿ [illegible]ಯಾಗಿದೆ. ಅದಕ್ಕೆ ರಿಪೋರ್ಟಗಳ ಜಮಾ-ಖರ್ಚಿನ ಕಲಮುಗಳಿಂದ ಪೂರ್ಣ [illegible] ಸಿಕ್ಕುತ್ತದೆ. [illegible] ಒಮ್ಮೊಂದೇ [illegible] ಕಾಪಿಯಿದ್ದು, ಅದರ ಪರಿಕ್ಷೆಯು [illegible] ಕಾರಣವಾಗಿ [illegible] ಸಾಗಿಸಿದ್ದರಿಂದ ಅದರ [illegible]ಗಳನ್ನು ಕೈಕೊಳ್ಳುವದು [illegible] ಕರ್ತವ್ಯವದೆ. ಅದ್ದರಿಂದ ಹ್ಯಾಸ್ಕೂಲಿನ ಲೆಕ್ಕ ತಪಾಸದಿಂದಲೂ, ಪರಿಕ್ಷೆಯು [illegible] ಸಬ್ ಕಮಿಟಿಯು ರಿಪೋರ್ಟಿನ ನಂತರ ಗ್ರಾಂಟಿನ ವಿಚಾರ ಮಾಡಬೇಕೆಂತ ಠರಾವಿಸಿದರೆ ತಪ್ಪೇನು?

೮. ಇಲೆಕ್ಷನ ಸದರನಲ್ಲಿ ಹತ್ತು ರೂಪಾಯಿ ಹಾಕಿದ ಬಗ್ಗೆ ಪ್ರೇಕ್ಷಕನದೊಂದು ಆಕ್ಷೇಪ, ಯಾರ ಜಾಗೆ ಖಾಲಿಯಾಗುವದಿದೆ ಎಂಬುವದು ಕಾಣುವದಿಲ್ಲವಂತೆ. ಆ ದಿವಸದ ಸಭೆಗೆ ಪ್ರೇಕ್ಷಕನು ಹಾಜರಿದ್ದರೆ ಅವನು ಈ ರೀತಿ ಬರೆಯುತ್ತಿದ್ದಿಲ್ಲ. ಕಾರಣ ಸಭೆಯ ಪೂರ್ವದಲ್ಲಿ ಅಧ್ಯಕ್ಷರಿಗೂ, ಮೆಂಬರ ಮಿ. ಕೇ. ಬಿ ಪ್ರಭುರಿಗೂ ವಾಚಾಟವಾಗಿ ಪ್ರಭುಗಳು ಸಭೆಯ ಕಾಯಿದೆ ವಿರುದ್ಧ ವರ್ತಿಸಿ ಎಳೆದು ಹೊರಗೆ ಹಾಕಿಸುತ್ತೇನೆಂತ ಹೇಳುವ ಪ್ರಸಂಗವನ್ನು ಅಧ್ಯಕ್ಷರಿಗೆ ತಂದರು. ಪ್ರಭುಗಳಂಥ ಕಾಯಿದೆ ಪಂಡಿತರೇ ತಪ್ಪು ವರ್ತನದಿಂದ ಇಂಥ ಪ್ರಸಂಗವನ್ನು ತರುವ ಮ್ಯುನ್ಸಿಪಾಲ್ಟಿಯ ಬಜೆಟಿನಲ್ಲಿ ೧೦ ರೂಪಾಯಿ ಇಲೆಕ್ಷನ ಸದರಿನಲ್ಲಿ ಹಾಕಿದರೆ ದೋಷವೇ?

೯. ಸೆಕ್ರೆಟರಿ ಮಿ| ರಾಮಕೃಷ್ಣ ಪಂಡಿತರು ಈಗ ೧೨ ವರ್ಷದಿಂದ ಮ್ಯುನ್ಸಿಪಾಲ್ಟಿಯ ಕೆಲಸ ಮಾಡುತ್ತಿದ್ದಾಗ್ಗೆ ಒಂದೆರಡು ಸರ್ತಿ ಇವರು ಸೆಕ್ರೆಟರಿಯ ಕೆಲಸವನ್ನು ನಡೆಸಿರುತ್ತಾರೆ ಈ ವರೆಗೆ ಇವರ ಬಗ್ಗೆ ಮ್ಯುನ್ಸಿಪಾಲಿಟಿಯಲ್ಲಿ ಚಲೋ ರಿಕಾರ್ಡ ಇದೆ. ಹೀಗಿರುತ್ತಾ ಹೋದ ವರ್ಷವೇ ಮ್ಯುನ್ಸಿಪಾಲ್ಟಿಯು ಕ್ವಾಲಿಫೈಡ, ನಾನ್ ಕ್ವಾಲಿಫೈಡ ಎಂಬ ಸ್ಕೇಲು

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ
ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!
ಹಿಂದುಸ್ತಾನ, ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಆಫೀಸ — ಕೆನಡಾ ಬಿಲ್ಡಿಂಗ, ಹೊರ್ನಬಿ ರೋಡ, ಮುಂಬಯಿ.
[illegible] — ನಾ| ಸರ್ ಫಿರೋಜ ಸೇಠನಾ, ಕೆ ಟಿ ಓ ಬಿ ಈ.
೧೯೩೦ನೇ ಇಸ್ವಿಯಲ್ಲಿ ಬಂದ ಹೊಸ ವಿಮೆ ರಕಮು [illegible] ಕೋಟಿಗೂ ಮಿಕ್ಕಿದೆ
೧೯೩೦ನೇ ಡಿಸೆಂಬರ ೩೧ನೇ ತಾರೀಖಿನ ಕೂಡಿದ ನಿಧಿ [illegible] ಕೋಟಿಗೂ ಮಿಕ್ಕಿದೆ
ಈ ಕಂಪನಿಯ ವಿಮೆ ಪಡೆದು ದುರ್ದೈವದಿಂದ ಹಾಗು ವೃದ್ಧತೆಯಿಂದ ನವೆಯುವಕರು
ಸುಖದ ಸುಲಭವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು
[illegible] ಪತ್ರವ್ಯವಹಾರ ನಡಿಸುವ ಪತ್ತೆ —
The District Manager, OR **Mr. S. B. Rege,**
Canada Building, *Chief Agent,*
Hornby Road, BOMBAY 171, Civil Lanes,
Camp BELGAUM.

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್.
ಸ್ಥಾಪನೆ 1908.
ಈ ಕಂಪನಿಯು ಪೂರ್ಣ ಹಿಂದೀ ಇದ್ದು ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಸ್ಕರ ಇವೆ. ಕಂಪೆನಿಯ ಹಣವು ಸರಕಾರಿ ಪ್ರೋ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ [illegible] ಸೆಕ್ಯುರಿಟಿಗಳಲ್ಲಿಯೂ ಇಡಲ್ಪಟ್ಟಿದೆ.
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭದಾಯಕವಾಗಿದೆ.
ಸವಿಸ್ತರ ಮಾಹಿತಿ ಸಲುವಾಗಿ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.
Kumta Agents – D K. NAYAK Bros
Honavar Agent R. V. PARBHU Esq
K. Padmanabha Rao & Sons.,
BELGAUM
Chief Agents for
Karnatak Districts & S. M. States

ತಯಾರಿಸಿ ಪಂಡಿತರನ್ನು ದಿಟ್ಟಿನ ಖಚಿತ ಪಡಿಸಿರುದೆ. ಈಗಿನ ಮ್ಯುನ್ಸಿಪಾಲಿಟಿಯಲ್ಲಿ ಪಂಡಿತರ ಕಮಿಗಾದ ಅನ್ಯಾಯವನ್ನು ಅರ್ಜಿದ್ವಾರ ನಿವೇದಿಸಿದರು ಜಜರಮನ್ ಮಿ. ದಾಸ ಕಾಮತರು ನ್ಯಾಯಬುದ್ಧಿಯಿಂದ ಕೆಲಸ—ಚಿಕ್ಕೇರಿಗೂ, ಫೋಲ್ಕ್ಸ್, ಕಿಪನ್ಸ್ ಆಫೀಸಿಗೂ, ಕೊಸ್ವಾರ—ಶೀರ್ [illegible] ನಿಸಿಪಾಲಿಟಿಗೂ, ಲೋಕಲ್ ಬೋರ್ಡ ಆಫೀಸಿಗೂ ಪತ್ರದ್ವಾರಾ ಚೌಕಶಿಯಿಂದ ಮಾಹಿತಿ ತರಿಸಿ ಕ್ವಾಲಿಫೈಡ್—ನೋನ್‌ಕ್ವಾಲಿಫೈಡ್ ಎಂಬ ಭೇದವು ಎಲ್ಲಿಯೂ ಇಲ್ಲದಿರಲೂ, [illegible] ಅಸ್ಥಿರ ಪಗಾರ ಹಿಂದೇ ಎಂತಲೂ [illegible] ಮಾಡಿಕೊಂ ಡ ಅದೇ ರೀತಿ ಮ [illegible] ನವಿಟೀಕಂತ ಠರಾವ ಮಾಡಿಕೊಂಡರು. ಈ ಪರಿಯಿಂದ ಅವರಿಗೆ ಈ ವರೆಗೆ ಸಿಗತಕ್ಕ ಪಗಾರನ್ನು ನ್ಯಾಯ ಬುದ್ಧಿಯಿಂದ ಕೊಟ್ಟಿರಬೋಕಪದೇ? ಮಸೇಕರಂ. ಫ್ಯಾನರ್-ಮುಕ್ರಿಕ ಪದಗೆ ಕಲಿಕನಿಷ್ಟು [illegible] ಪ್ರಬುಗರ ಗ್ಯರಹಾಜರಿಯಲ್ಲಿ ಆಫಿಸಿನಲ್ಲಿ ಮಾಡಿದ್ದರಿಂದಲೂ ಇವರ ಕೆಲಸವು ಮ್ಯುನ್ಸಿಪಾಲ್ಟಿಗೆ ಸಮಾಧಾನಕಾರಕವಾದ್ದರಿಂದಲೂ ಇವರಿಗೆ ರೂಪಾಯಿ ೬-೦ ಸ್ಕೇಲ ಬರ್ತಿ ಕೊಟ್ಟಿರುವುದೆ ಗೇಟಿನವರ ಇಚ್ಛಾನುಭಾಗ ಎಂಬವರಿಗೆ ೧೯೩೦ರ ಜನವರಿಯಲ್ಲಿ ಪದವುಲಾ ೧೫ ೦ ರ ಸ್ಕೇಲ್ ಪಗಾರ ಎಂತಲೂ, ರೂ. ೪ ಭತ್ತೆ ಎಂತಲೂ ಹೀಗೆ ೧೯-೦ ರೂಪಾಯಿಗಳ ಮೇಲೆ ಹಂಗಾಮಿ ನೇಮಣೂಕ ಆಯಿತ ಅದೇ ಎಪ್ರಿಲದೊಳಗೆ (ಜಿ. ಶಿಂಗಡೋಳ್‌ಗೆ) ಮ್ಯುನ್ಸಿಪಾಲ್ಟಿಯು ಕಾಯ್ಮ ವಾಗಿ ಗೋಟಾಕನಿಗೆ ೨೫ ೦ ರೂಪಾಯಿಗಳ ಮೇಲೆ ಕಾಯಂ ಮಾಡಿತು. ಮತ್ತು ೧೯೩೦ನೇ ಇಸ್ವಿ ಮೇ ತಿಂಗಳೊಳಗೆ ಹೊಸ ಸ್ಕೇಲನ್ನು ನಿರ್ಧರಿಸಿ ಅವನಿಗೆ ಸನ್ ೧೯೩೦ನೇ ಫೆಬ್ರುವರಿಯಿಂದ ೨೭-೮-೦ ಯಂತೆ ಪಗಾರ ಕೊಡತಕ್ಕದ್ದೆಂದು ಠರಾವ ಮಾಡಿ ಮ್ಯುನ್ಸಿಪಾಲಿಟಿಯು ಎಂದಾವರ್ಕ ಕಮೀಶನರರಿಗೆ ಬಿನ್ನೈಸಿತು. ಆದರೆ ಕಮೀಶನರ ಸಾಹೇಬರು ಈ ಬಿನ್ನಹದ ಮ್ಯಾನರ ಸ್ವರಿಕೆ ೧೯೩೧ನೇ ಇಸ್ವಿ ಮೇ ತಿಂಗಳ ಮುಂಚಿತವಾಗಿ ೨೭-೮-೦ ಪಗಾರ ಕೊಡಬಾರದಾಗಿ ಫರ್ಮಾನ ಹೊರಡಿಸಿತು. ಹೀಗಿರುವಾಗ ಈಗಿನ ಮ್ಯುನ್ಸಿಪಾಲ್ಟಿಯು ಮೇ ಮುಂಚಿತವಾಗಿ ಗೋಟಾಕನ ಅರ್ಜಿಯಂತೆ ೩೦-೦ ರೂಪಾಯಿ ಸಂಬಳ ಕೊಡತಕ್ಕದ್ದೆಂತ ಠರಾವ ಕಲಿಕ್ಕೆ ಒಪ್ಪಿದಲ್ಲಿ ತಪ್ಪೇನು?

೧೦. ಈ ಮೇಲಿನ ವಿವರಣೆಯಿಂದ ಈಗಿನ ಮ್ಯುನ್ಸಿಪಾಲ್ಟಿಯು ಸರ್ವಜನಿಕ ಹಣದ ನಿಧಿಯೊಳಗೆ ವನ್ನು ನ್ಯಾಯಬುದ್ಧಿಯಿಂದಲೂ, ಕರ್ತವ್ಯದಕ್ಷತೆಯಿಂದಲೂ ಮಾಡುತ್ತದೆಂಬ ವರು ಜನರಿಗೆ ವಿಸ್ತೃತವಾಗಿ ಪ್ರತ್ಯಯಾಗುವದು. ಇನ್ನು ಈ ಸಾಧಾರಣ ಕಥೆಯು ಬಿನ್ನ ಯಾವ ಪ್ರೇಕ್ಷಕನೂ ಕಥೆಯಲ್ಲಿ ಇದ್ದಷ್ಟು ಮಾಹಿತಿಯಿಲ್ಲ. ಆದರೆ ರಾ| ಅಣ್ಣಪ್ಪೈರ ನಾಯಿಯು ಶುರುವಿನಿಂದ ಆಖೈರ ವರೆಗೆ ಅವರ ಕಾಲುಬುಡದಲ್ಲಿ ಇತ್ತು. ಬೇರೆ ಯಾವ ಪ್ರೇಕ್ಷಕನೂ ಇಲ್ಲದೇ ಇರುವದರಿಂದ ಇನು ನಾಯಿಯು ಪ್ರಕಟಿಸಿದ ಮಾಹಿತಿಯಂತೆ ಬರಿಕವರು ತಿಳಕೊಂಡರೆ, ತಪ್ಪಾಗಲಿಕ್ಕಿಲ್ಲ. ನಾಯಿಯು ಪ್ರಕಟಿಸಿದ ಮಾಹಿತಿಯು ಅನ್ಯಾಯವಿದ್ದರೆ ಅಷ್ಟರವರ ಪ್ರೇಕ್ಷಕನು ತನ್ನ ಬದಿಯನ್ನು ತೆರೆದು ತನ್ನ ನಾಮನಿರ್ದೇಶವನ್ನು ಬೆಳಕಿಗೆ ತಂದು ತಾನು ಪ್ರಕಟಿಸಿದ ಮಾಹಿತಿಯ ವಿಪಕ್ಷವನ್ನು ಸಿದ್ಧಮಾಡಬೇಕು.

೨೨.೧-೩-೧೯೩೨

Dr. F. J. P. PEREIRA,

Physician & Specialist in Dentistry

Sunday Market, KARWAR. (N K)

ಆರೋಗ್ಯಬಯಸುವಿರಾ?

ಹಾಗಾದರೆ—

ಹಲ್ಲುಗಳನ್ನು ಕಾಪಾಡಿಕೊಳ್ಳಿ !!

ಯಾಕೆಂದರೆ, ಮಾನವನ ಆರೋಗ್ಯಕ್ಕೆ ಹಲ್ಲುಗಳೇ ಕಾರಣ! ಬರೇ ಸೌಂದರ್ಯಕ್ಕಾಗಿ ಅಲ್ಲ, ಆರೋಗ್ಯ ದೃಷ್ಟಿಯಿಂದಲೂ ಹಲ್ಲುಗಳ ಜೋಪಾನ ಮಾಡುವದು ಅತ್ಯವಶ್ಯ. ಹಲ್ಲುಗಳ ಬಿಜಾಗ್ರತೆಯಿಂದ ಅಗ್ನಿಮಾಂದ್ಯ, ಸಂಧಿವಾತ, ನೇತ್ರರೋಗ, ಕರ್ಣರೋಗ ಮೊದಲಾದ ಬೇನೆಗಳಾಗುತ್ತವೆ

ಕಾರಣ, ನಿಮ್ಮ ಹಲ್ಲುಗಳು ನೆಟ್ಟಗಿರದಿದ್ದರೆ,

ನಮ್ಮ ಕಡೆಗೆ ಬನ್ನಿ, ಪರೀಕ್ಷಿಸಿಕೊಳ್ಳಿ!

ಅವನ್ನು ಸ್ವಚ್ಛ ಸುಂದರ ಮಾಡಿಕೊಡುವೆವು.

ಡಾ|| ಎಫ್. ಜೇ. ಪಿ. ಪೆರೇರಾ,

ವೈದ್ಯ ಮತ್ತು ದಂತವೈದ್ಯಕ ವಿಶಾರದ,

ಸಂತೆ ಪೇಟೆ, **ಕಾರವಾರ.** (ಉ. ಕಾನಡಾ)

ಬಾಲಜೀವನ.

ಈ ಔಷಧವು ಗ್ರಾಣ (Rickets), ಬಾಲ-ಶೋಷ ಅಸ್ಥಿಜ್ವರ, ಫಿಟ್ಸ, ಕಫ, ನಾಯಿಕೆಮ್ಮು, ಕಾಳಿಜ ನೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬುಗಳ ರೋಗ, ಕ್ಷಯ, ಅಸ್ವಸ್ಥ ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ದಿವ್ಯೌಷಧವಾಗಿರುತ್ತದೆ. ಈ ಔಷಧವು ಒಂದು ತಿಂಗಳ ಶಿಶುವಿರುವಾಗ ಉಪಯೋಗ ಮಾಡುತ್ತಿದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ-ಕಾಲುಗಳು ಕ್ಷೀಣವಾಗುವದು, ಹಲ್ಲು ಮೂಡುವಾಗಲೂ ಬೇರೆ ಬಲಹೀನರಾಗುವದು, ಹಲ್ಲು ಬರುವಾಗ ಅತಿಸಾರ ಬಾಲಗ್ರಹ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ. ೧-೬-೦. ಟ. ಖ. ಬೇರೆ.

ಡಲ್‌ಸೆಟ್ ಎಂಡ್ ಕೋ,

ಪೋ: ಕುಮಟಾ. (ಉ. ಕಾನಡಾ)

ಅಪಘಾತ ವಜ್ರಾಂಕುಶ ತೀವ್ರ

ರಾಮಬಾಣ ಮಲಮು!

ಈ ದಿವ್ಯ ಮಲಮು ಅಕಸ್ಮಾತ್ ಸಂಭವಿಸುವ ಗಾಯ, ಸುಟ್ಟ ಬಂಗಿ ವಾತ, ಬೀಗು, ಕಸ, ಗಂಟುನೋವು, ವ್ರಣ ಮುಂತಾದ ಬಿಪಘಾತಗಳನ್ನು ತೀವ್ರವಾಗಿಯೂ, ಖಂಡಿತವಾಗಿಯೂ ಗುಣಪಡಿಸುತ್ತದೆ. ಉಪಯೋಗ ಕ್ರಮವು ಮಲಮಿನ ಸಂಗಡ ಬೆಲೆ ಡಬ್ಬಿಗೆ ರೂ ೧-೪-೦. ಟ. ಖ ಬೇರೆ.

ಪತ್ತೆ - ದೇವಿದಾಸ ವಿಠೋಬ ಕಾಮತ, ಕೇಣಿ,

ಪೋ: ಅಂಕೋಲಾ.

ಸೂಚನೆ:— ಇದರ ವಿನಹ ನಮ್ಮ ಬೇರೆ ಔಷಧಗಳು ಸಹ ಅಂಕೋಲೆಯಲ್ಲಿ ರಾ| ವೈಕುಂಠ ಕಾಮತ ಇವರ ಅಂಗಡಿಯಲ್ಲಿ ದೊರೆಯುವವು

ಒಂದೇ ಸಮನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು

ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟಗಳು ಮತ್ತು ಭಂಗಾರದ ಪದಕ ದೊರಕಿರುವ ಧಾತುಪೌಷ್ಟಿಕ ಮತ್ತು ರಕ್ತವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು.

ಈ ದ್ರಾಕ್ಷಾಮೃತವು ಸಹ್ಯಾದ್ರಿಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವದರಿಂದ ಸ್ವಾದಿಷ್ಟವೂ ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣೊಳಗೆ ಉರುವ ಬೇಗೆ ತೋರುವಿಕೆ, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ಸಣ್ಣ ಸಣ್ಣ ರೋಗ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದು ಭೋಳಿಕೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲ ವಿಕಾರಂಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ ಮತ್ತು ಅನ್ನ ಚನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣಾವಸ್ಥೆಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ದಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೂ ಮತ್ತು ಗರ್ಭಾಶಯ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಅಶಕ್ತ ಮಕ್ಕಳು ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿಯುವದು. ೧ ಬಾಟ್ಲಿ ಬೆಲೆ ೧ ೪-೦, ೩ ಬಾಟ್ಲಿಗೆ ೩-೪-೦, ಒಂದು ಡಜನ ಬಾಟ್ಲಿಗೆ ೧೧-೦-೦ ನಟ್ಟಗೆ ೧ ಡಜನ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೇವೆ. ಟಪಾಲ ಖರ್ಚ ಪೋಷ್ಟೇಜ ಬೇರೆ ಬೀಳುತ್ತದೆ

ಏಜಂಟರ ಮೂಲಕ ೧ ಬಾಟ್ಲಿಗೆ ೧-೪-೦, ೩ ಬಾಟ್ಲಿಗೆ ೩-೮-೦; ಡ. ೧೨ ರೂಪಾಯಿ.

ಮ್ಯಾನೇಜರ, **ದ್ರಾಕ್ಷಾಮೃತ ಕಾರ್ಯಾಲಯ, ಪೋ. ನಿಪ್ಪಾಣಿ** (ಜಿಲ್ಲಾ ಬೆಳಗಾವಿ)

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು

ಕುಮಟಾ ಏಜಂಟ:— ಶಿರಸಿ ಏಜಂಟ — ಕಾರವಾರ ಏಜಂಟರು

ನ್ಯೂಸಪೇಪರ ಏಜನ್ಸಿ ಎಸ್ ಎಲ್ ಭಾಕರಪ್ಪಾ ದಾಮೋದರ ಶ್ಯಾನಭಾಗ ೩ ಮುಜುಮದಾರ.

ಕುಮಟಾ ಅರ್ಬನ್ ಬೇಂಕಿನ ಚಾಲಕರ

ಕರ್ತವ್ಯಪರಾಙ್ಮುಖತೆ.

ಮಾ| ರಾ| 'ಕಾನಡಾವೃತ್ತ' ಪತ್ರಕರ್ತರ ಬಳಿಗೆ.-

ಈ ಕೆಳಗಿನ ಮಜಕೂರನ್ನು ತಮ್ಮ ಸನ್ಮಾನ್ಯ ಪತ್ರಿಕೆ ಬರುವ ಸಂಚಿಕೆಯಲ್ಲಿ ಪ್ರಸಿದ್ಧಿಪಡಿಸಬೇಕಾಗಿ ವಿನಂತಿ.

ಕುಮಟಾ ಅರ್ಬನ್ ಬ್ಯಾಂಕಿನ ಆಡಳಿತೆಯಲ್ಲಿ ಕಂಡುಬರುವ ನ್ಯೂನತೆಗಳ ಕುರಿತು ಕೆಲವು ಮಾಹಿತಿಯು ತಾ. ೨೧-೧೨-೧೯೩೧ನೇ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಅನಂತರ ನಡೆದ ಸಂಗತಿಗಳನ್ನು ಸಾರ್ವಜನಿಕ ಹಿತದ ದೃಷ್ಟಿಯಿಂದ ವಾಚಕರ ಅವಲೋಕನದ ಬಗ್ಗೆ ಅವಶ್ಯ ನಮೂದಿಸಬೇಕಾಗಿದೆ.

೧ ಸದರ ಬ್ಯಾಂಕಿನವರು ಚೆಅರಮನ್‌ರಿಂದ ಕೊಂಡ ಇಮಾರತು ಬಹಳೇ ಜೀರ್ಣವಾಗಿದ್ದು ಪಕ್ಕೆಂದರೆ ರೂ ೧೦೦೦ ಸಹ ಬೆಲೆ ಬಾರದು. ಆ ಘಟಕವನ್ನು ಚೆಅರಮನ್‌ರು ಸ್ವಾರ್ಥಸಾಧನೆಯಾಗಿ ರೂ ೩೪೦೦-೦-೦ಕ್ಕೆ ಬ್ಯಾಂಕಿಗೆ ಕ್ರಯಕ್ಕೆ ಕೊಟ್ಟಿರುವದರಿಂದ ಅಷ್ಟು ರಕಮನ್ನು ಅವರಿಂದ ಬ್ಯಾಂಕಿಗೆ ಮರಳ ತೆಗೆದುಕೊಂಡು ಇಮಾರತನ್ನು ಮಾಲೀಕರಿಗೆ ಮರಳ ಕೊಡುವರೆ ಹುಕುಮು ಆಗಬೇಕಾಗಿಯೂ, ಸೆಕ್ರೆಟರಿ ಮಿ| ದಾಸ ಪೈರು ಲೋನ ಅರ್ಜಿದಾರರ ಕಡೆಯಿಂದ ರು. ೧ರಂತೆ ಆಗಿ ರಕಮು ಅವರಾ ಲೋನ ರಕಮು ಕೊಡುವ ಕಾಲದಲ್ಲಿ ಮುಜರೆ ತೆಗೆಯುವ ಶರ್ತದ ಮೇಲೆ ಎರಡರ ಸ್ಥಿತಿ-ಗತಿಗಳ ಕರಿಸಿ ಕೇವಲ ೫ ೧೦ರ ವರೆಗೆ ಪರ್ಸೆಂಟೇಜ ತರೀಕ ರಿವಾಜ ಎಂತಾ ಪನಿಕೆ ರಕಮನ್ನು ಅವರಿಗೆ ತೆಗೆದುಕೊಳ್ಳುತ್ತಾ ಬಂದಿರುವದಾಗಿ ವಾಹಿಸಿ ಇರುವದರಿಂದ ಅವರ ಈ ದುರ್ವರ್ತನೆ ಬಗ್ಗೆ ಯೋಗ್ಯ ಚೌಕಶಿ ನಡಿಸಿ ಅವರಿಗೆ ಕೆಲಸದಿಂದ ದೂರಮಾಡಿಸಬೇಕಾಗಿ ಕುಮಟಾ ಬಡ ನಾಗರಿಕರ ಕಷ್ಟಗಳನ್ನು ಹೋಗಲಾಡಿಸಬೇಕಾಗಿಯೂ, ಈ ವರ್ಷದಲ್ಲಿ ಕಟ್ಟದ ಕ್ಷಾಮದಿಂದ ಉಂಟಾದ ಬಿಕ್ಕಟ್ಟಿನ ಸ್ಥಿತಿಯನ್ನು ಲಕ್ಷಕ್ಕೆ ತಂದು ಬಾಕಿಯಿದ್ದ ಸಾಲ ವಸೂಲಿಗೆ ಒಂದು ವರ್ಷದ ಮುದ್ದತು ಕೊಡುವದಕ್ಕೆ ಬ್ಯಾಂಕಿನ ಅಧಿಕಾರಿಗಳಿಗೆ ಹುಕುಮು ಆಗಬೇಕಾಗಿಯೂ, ಬೇಂಕಿನ ಆಡಳಿತೆಯಲ್ಲಿ ಚೆಅರಮನರು ನಡಿಸುವ ಪಕ್ಷಪಾತ ವರ್ತನದ ನಿರಾಕರಣೆ ಬಗ್ಗೆಯೂ ಮೆ| ರಿಜಿಸ್ಟ್ರಾರ ಸಾಹೇಬರ ಬಳಿಗೆ ಮಾಡಿಕೊಂಡ ಅರ್ಜಿಗಳಿಗೆ ವಿಚಾರ ಮಾಡುತ್ತೇವಾಗಿ ಆಶ್ವಾಸನ ಬಂದಿದೆ. ಆದರೆ ಇದು ವರೆಗೆ ಯಾವ ಹುಕುಮು ಸಿಗಲಿಲ್ಲವಾದ್ದರಿಂದ ಇನ್ನೂ ಚೌಕಶಿ ನಡೆಯುತ್ತಾ ಇರುವದಾಗಿ ಸಾಧಾರಪೂರ್ವಕ ತಿಳಿದು ಬಂದಿದೆ. ಅದೆಂತೆಂದರೆ,—

೧ ಸಾಲಗಾರರು ಮುದ್ದತಿ ಮಾಡುವ ಬಗ್ಗೆ ಲೇಖಿ ದರಖಾಸ್ತಿಯಿಂದ ಎಷ್ಟೇ ವಿನಂತಿ ಮಾಡಿಕೊಂಡಾಗ್ಯೂ ಲಕ್ಷಿಸದೆ ಇರುವ ಚಾಲಕರು, ಈಗ ತಾವಾಗಿಯೇ ಮುದ್ದತಿ ಮಾಡುವದು ಪುಸ್ತೇವಾಗಿ ಜಾಹೀರ ಮಾಡಿರುವದು ಇದು ಸದರ ಅರ್ಜಿಯ ಪರಿಣಾಮವು, ಶಿವಾಯ ಬ್ಯಾಂಕಿನ ಆಡಳಿತೆದಾರರ ಔದಾರ್ಯವಲ್ಲ.

೨. ಈ ಮೊದಲು ಪಾಸ ಬುಕ್ಕುಗಳು ಲೋನದಾರರಿಗೆ ವಶ್ಯಕೀರ ಸಿಗುತ್ತಿದ್ದಿಲ್ಲ. ಈಗ ಬೇಕಾದವರು ಒಯ್ಯಬಹುದಾಗಿ ಜಾಹೀರ ಮಾಡಿದ್ದಾರೆ.

೩. ಈ ತನಕ ಲೋನದಾರರಿಗೆ ಸೆಕ್ರೆಟರಿಯೇ ಲೋನ ರಕಮು ಕೊಡುತ್ತಿದ್ದನು. ಈಗ ಯಾವನೊಬ್ಬ ಮೆನೆಜಿಂಗ ಕಮಿಟಿ ಮೆಂಬರರ ಸಮಕ್ಷ ಲೋನ ರಕಮು ಕೊಡಲ್ಪಡುವದಾಗಿ ಪ್ರಕಟ ಮಾಡಿದ್ದಾರೆ.

೪ ಈ ಪೂರ್ವದಲ್ಲಿ ಸೆಕ್ರೆಟರಿಯ ಕಡಿಗೆ ಕೊಟ್ಟ ಅರ್ಜಿಗಳು ಕಮಿಟಿಯ ಮುಂದೆ ತಕ್ಕ ಹೊತ್ತಿಗೆ ಬರುತ್ತಿದ್ದಿಲ್ಲವಾಗಿ ತಿಳಿದು ಈಗ ಅರ್ಜಿಗಳನ್ನು ಹಾಕುವರೆ ಬೀಗಬಿದ್ದ ಪೆಟ್ಟಿಗೆಯನ್ನಿಟ್ಟು ಅದರ ಕೀಲಿಯು ಚೆಅರಮನ್‌ರ ತಾಬೆಯೇ ಇರುವದಾಗಿ ಪ್ರಸಿದ್ಧ ಮಾಡಿದ್ದಾರೆ.

ಈ ನಾಲ್ಕು ಕಲಮುಗಳಲ್ಲಿ ಸುಧಾರಣೆಗಳೆಂತಾ ತೋರಿಸಿದ್ದು ನಿಜವಾದ ಸುಧಾರಣೆಗಳಲ್ಲ. ಬರೇ ಅಶಿಕ್ಷಿತ ಜನರು ಮಾತ್ರ ನಿಜವಾದ ಸುಧಾರಣೆ ಎಂದು ತಿಳಕೊಳ್ಳಲಿಕ್ಕೆ ಆಸ್ಪದವುಂಟು. ಆದರೆ ಇದು ಸುಧಾರಣೆಯಲ್ಲವೆ [illegible] ಬಗಾರಿಯು ಶಿಸ್ತಾಗಿರುವದು

೨. ಮೆ| ರಿಜಿಸ್ಟ್ರಾರ ಸಾಹೇಬರ ಪರವಾಗಿ ಕೊಟ್ಟ ರೂಲಿನ ವಿರುದ್ಧವಾಗಿ ಬ್ಯಾಂಕಿನವರು ಇಮಾರತು ಖರೀದಿ ಕೊಂಡ ಬಗ್ಗೆ ಮೆ| ರಿಜಿಸ್ಟ್ರಾರ ಸಾಹೇಬರು ಆಕ್ಷೇಪಿಸಿದ್ದರಿಂದ ಅವರಿಗೆ ಸಮಾಧಾನಪಡಿಸುವ ಉದ್ದೇಶ್ಯ ಕುಮಟಾ ತಾ| ಲೋ| ಬೋ| ಪ್ರೆಸಿಡೆಂಟರ ಮಿ| ಅಯ್ಯರರ ಕಡೆಯಿಂದ ಸದರ ಜೀರ್ಣವಾದ ಇಮಾರತಿನ ಕಿಮ್ಮತ್ತು ರೂ ೩೦೦೦-೦ ವರೆಗೆ ತೋರಿಸಿ ಪೋತಳ ಎಸ್ಟಿಮೇಟ ತಯಾರ ಮಾಡಿಸಿದ್ದಾಗಿ ತಿಳಿಯುತ್ತದೆ. ಮಿ| ಅಯ್ಯರರವರು ಸಿವಿಲ ಇಂಜಿನಿಯರ ಆಗಿ ಇರದೆ ಬರದ ಎಸ್ಟಿಮೇಟು ತಯಾರ ಮಾಡಿದ್ದಿರಬೇಕು ಯಾಕೆಂದರೆ, ಸದರ ತಾ| ಲೋ| ಬೋ| ಪ್ರೆಸಿಡೆಂಟರು ಚೆಅರಮನ್‌ರ ಅವಿಭಕ್ತ ಬಂಧುಗಳಿದ್ದು ಮಿ| ಅಯ್ಯರರ ಮೇಲೆ ಕೋರ್ಟಿನಲ್ಲಿ ನಡೆದ ಕರಿತು ಮಾಡಿದ ಪ್ರಕರಣದಲ್ಲಿ ಸಾಕ್ಷಿ ಸ್ಪಷ್ಟ ನಿರ್ದೇಶ ಸಹಾಯವು ಅವರಿಗೆ ಅವಶ್ಯ ಬೇಕಾಗಿರುತ್ತದೆ. ಕಾರಣ ಸದ್ರಿ ಎಸ್ಟಿಮೇಟು ಎಷ್ಟರ ಮಟ್ಟಿಗೆ ಗ್ರಾಹ್ಯ ಮಾಡಬಾರದಾಗಿ ಜನರು ಮೆ| ರಿಜಿಸ್ಟ್ರಾರ ಸಾಹೇಬರ ಬಳಿಗೆ ಅರ್ಜಿ ಮಾಡಿಕೊಂಡಿರುವದಾಗಿ ತಿಳಿಯುತ್ತದೆ. ಇನ್ನು ಸದರ ಇಮಾರತು ಬಹಳೇ ಜೀರ್ಣ ಸ್ಥಿತಿಯಲ್ಲಿದ್ದು ರಸ್ತೆದಾರಿಗೆ ಹೊಂದಿರುವ ಮೂಲಕ ಯಾವಾಗ ಕುಸಿದು ಬಿದ್ದು ಜನರಿಗೆ ಅಪಾಯ ಸಂಭವಿಸೀತಾಗಿ ತಿಳಿಯದ್ದರಿಂದ ಆ ಕುರಿತು ತಕ್ಕ ಚೌಕಶಿಯಿಂದ ಯೋಗ್ಯ ವ್ಯವಸ್ಥೆ ಯಾಗಬೇಕಾಗಿ ನಾಗರಿಕರು ಮ್ಯುನಿಸಿಪಾಲಿಟಿಗೆ ಅರ್ಜಿ ದ್ವಾರಾ ವಿನ್ನೈಸಿಕೊಂಡಿದ್ದಾರೆ. ಸದರ ಇಮಾರತಿನ ಗೋಡೆಗಳು ಛಾವಣಿ ಕಡೆಯದೆ ಮಧ್ಯ ಮಧ್ಯದಲ್ಲಿ ಒಡೆದು ಸೀಳಿಹೋಗಿದ್ದು, ಅವುಗಳಿಗೆ ಹೊಸ ಸುಣ್ಣ ಹಚ್ಚಿ ಪಾಲೀಸ ಮಾಡಿದ್ದು ರಸ್ತೆಗೆ ಹೊಂದಿರುವ ಮೇಲುಪ್ಪರಿಗೆಯ ಗೋಡೆಯು ಎಲ್ಲೆಲ್ಲ ಒಡೆದು ಅದರಲ್ಲಿದ್ದ ಕಿಡಿಕಿಗಳು ರಸ್ತೆ ಮೇಲೆ ಬರ ಹೋಗುವ ಜನರಿಗೆ ಅದಗಿ ಸೋಡಲಿಕ್ಕೆ ಭಸಿವೆ. ಮೇಲುಪ್ಪರಿಗೆಗೆ ಮಹೋಲ್ಕಾಡಿಗೆ ಇರುವ ಬಂತೆ, ಮ ಪಕಾಸಗಳು ಬಿದ್ದು ಹೋಗುತ್ತಾ ಬಂದಿವೆ. ಇಮಾರತು ಇಂಥಾ ಸ್ಥಿತಿಯಲ್ಲಿರುವಾಗ ಮ್ಯುನಿಸಿಪಾಲಿಟಿಯವರು ಇನ್ನೂ ಈ ವಿಷಯದಲ್ಲಿ ಲಕ್ಷ ಪೂರೈಸದೆ ಇದ್ದದ್ದು ನೋಡಿ ಆಶ್ಚರ್ಯವಾಗುತ್ತದೆ

೩. ಬ್ಯಾಂಕಿನ ಕಾರಕೂನನಾದ ಬೆಳಿಯಾ ಮುಂಬಯ್ಯಾ ಇವನು ತನ್ನ ಕೆಲಸವನ್ನು ಸರಿಯಾಗಿ ಮಾಡುತ್ತಲಿದ್ದಾಗ್ಯೂ, ಈ ಮೇಲೆ ನಮೂದಿಸಿದ ಭಿನ್ನಗಳನ್ನು ಇತರರಿಗೆ ಜಾಹೀರ ಮಾಡಿರಬಹುದೆಂತ ಅನುಮಾನಿಸಿ ಏನೊಂದೂ ಸಬಲ ಕಾರಣವಿಲ್ಲದೇನೇ ಬರೇ ಅವನ ಖಾಸಗಿ ಗೈರುಹಾಜರಿಯ ಕಾರಣವನ್ನು ಮುಂದೊತ್ತಿ ಎರಡನೇ ಹುಕುಮು ಆಗುವವರೆಗೆ ಹಾಜರಾಗಬಾರದಾಗಿ ಕೆಲಸದಿಂದ ಸಸ್ಪೆಂಡ ಮಾಡಿ ಈಗ ಮೂರು ತಿಂಗಳಾಗುತ್ತಾ ಬಂದರೂ ಯಾವದೂ ವಿಚಾರ ಮಾಡದೇ ಅವನಿಗೆ ವೃಥಾ ದಣಿಸುವದು ಚಾಲಕರಿಗೆ ಭೂಷಣಾಸ್ಪದವಲ್ಲದ್ದರಿಂದ, ಇನ್ನಾದರೂ ಆತನ ಕುರಿತು ನಡೆದ ಪ್ರಕರಣದ ನ್ಯಾಯ ನಿಕಾಲಿ ಕೊಡುವದು ರಾಸ್ತವೀತು

ತಾತ್ಪರ್ಯವೇನಂದರೆ— ಈ ಸೆಕ್ರೆಟರಿಯು ಈಗ ೭-೮ ವರ್ಷಗಳಿಂದ ರೂ. ೩೦-೦-೦ ರ ಮೇಲೆ ಕೆಲಸಕ್ಕೆ ಹಾಜರಾಗಿ ಅಲ್ಪಾವಧಿಯಲ್ಲಿಯೇ ೧೦-೧೨ ಸಾವಿರದ ಕಟ್ಟಿಗೆ ದ್ರವ್ಯಾರ್ಜನೆಯನ್ನು ಮಾಡಿರುವನಾಗಿ ಊರಲ್ಲಿರುವ ದಟ್ಟ ವಾರ್ತೆಯು ಮೇಲಿಂದ ಆತನು ನಿಜವಾಗಿಯೂ ಲೋನ ಅರ್ಜಿದಾರರ ಕಡೆಯಿಂದ ಪರ್ಸೆಂಟೇಜ ತರೀಕ ಪನಿಕೆ ರಕಮನ್ನು ಕೊಳ್ಳುತ್ತಿರುತ್ತಾನೆಂದು ಜನರು ತಿಳಕೊಂಡರೆ ತಪ್ಪಾಗಲಿಕ್ಕಿಲ್ಲ. ಮತ್ತು ಚೆಅರಮನ್‌ರ ಬೆಂಬಲವಿದ್ದದೆ ಇಂಥ ಕೃತ್ಯಗಳನ್ನು ನಿರಂತರವಾಗಿ ಮಾಡುವದಕ್ಕೆ ಆತನಿಗೆ ಸಹಸಾ ಧೈರ್ಯ ಬರಲಿಕ್ಕಿಲ್ಲ. ಚೆಅರಮನ್‌ರು ಈ ವಿಷಯದಲ್ಲಿ ತಿಳಿದೂ ತಿಳಿದೂ ದುರ್ಲಕ್ಷ ಮಾಡುತ್ತಾರೆಂತ ಊಹಿಸಿಕೊಂಡರೆ ಆಶ್ಚರ್ಯವಲ್ಲ. ಅದರ ಮೇಲೆ ಚೆಅರಮನ್‌ರೇ ಅಪ್ರತ್ಯಕ್ಷ ರೀತಿಯಿಂದ ಜನರ ಅಸಂತೋಷಕ್ಕೆ ಕಾರಣರಾಗುತ್ತಾರೆ. ಚೆಅರಮನ್ ಮಿ| ಅಣ್ಣಪ್ಪರು ಶ್ರೀಮಂತರಿದ್ದದ್ದಲ್ಲದೆ ಜನರ ಸುಖ-ದುಃಖಗಳನ್ನು ಚನ್ನಾಗಿ ಅರಿತವರಿದ್ದು, ಬಡಜನರ ಹಿತದ ಬಗ್ಗೆ ಸ್ಥಾಪಿತವಾದ ಈ ಸಾರ್ವಜನಿಕ ಸಂಸ್ಥೆಯಲ್ಲಿ ಅವರಿಗೆ ಬೇಕಷ್ಟು ಸವಲತ್ತುಗಳನ್ನು ಕೊಟ್ಟು ಕಷ್ಟ ನಿವಾರಣೆ ಮಾಡುವದು ಹಿತ್ತಟ್ಟಿಗಿಟ್ಟು, ಈ ರೀತಿ ಕ್ರೂರವಾಗಿ ಸೆಕ್ರೆಟರಿಯು ಜನರಿಗೆ ಕೊಡುವ ಉಪದ್ರಕ್ಕೆ ಅಪ್ರತ್ಯಕ್ಷವಾಗಿ ನೆರವಾದದ್ದು ನೋಡಿದರೆ ಶ್ರೀ| ಪೈ ಮಹಾಶಯರು ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡಲಿಕ್ಕೆ ಎಷ್ಟರ ಮಟ್ಟಿಗೆ ಪಾತ್ರರಿರುತ್ತಾರೆಂಬುದು ವಾಚಕರೇ ತಿಳಿಯಲಿ. ಕಾರಣ ಮೇಲಧಿಕಾರಿಗಳು ಅವಶ್ಯ ಬೇಗನೆ ಯೋಗ್ಯ ವಿಚಾರದಿಂದ ಸದರ ಸೆಕ್ರೆಟರಿಯನ್ನು ಕೆಲಸದಿಂದ ದೂರಮಾಡಿಸಿ ಬಡ ಜನರಿಗೆ ಒದಗುವ ಕಷ್ಟವನ್ನು ಪರಿಹರಿಸುವದಾಗಿ ಸಂಗ್ರಹಯಿದೆ— ಶ್ರೀ| ಪೈ ಮಹಾಶಯರ ತಂದೆ ಪ್ರಸಿದ್ಧರಾದ ಪೈ| ವಾ| ರಾವ ಚಂದ್ರ ಪೈಗಳವರು ತಮ್ಮ ಚಾತುರ್ಯದಿಂದ ಅನೇಕ ಸಂಸ್ಥೆಗಳಲ್ಲಿ ಮುಖ್ಯಸ್ಥರಾಗಿ ಮುಳುಗುವ ಸದರ ಸಂಸ್ಥೆಗಳನ್ನು ಊರ್ಜಿತಾವಸ್ಥೆಗೆ ತಂದು ಲೋಕಾದರಕ್ಕೆ ಪಾತ್ರರಾಗಿದ್ದರು. ಅದರ ಪಶ್ಚಾತ್, ಈ ಮಹಾಶಯರು ಪ್ರಮುಖರಾಗಿ ಇಲ್ಲಿಯ ಸಂಸ್ಥೆಗಳಲ್ಲಿ ನಡಿಸಿದ ಕಾರ್ಯಕ್ರಮವಿದು ಲೋಕಸಮೂಹವು ಪ್ರತ್ಯಕ್ಷವಾಗಿ ಕಂಡ ಅನುಭವ ಹೊಂದಿದೆ.

ಪೈ ಮಹಾಶಯರೇ, ಸಾಕು, ಸಾಕು, ಸಾರ್ವಜನಿ

(ಮು ೧೫ನೇ ಪಾನಿನ ಮೇಲೆ ಮುಂದರಿಸಿದೆ)

ಹಿಂದುಸ್ಥಾನದೊಳಗಿನ ಪರಿಸ್ಥಿತಿ.

ಪಂಡಿತ ಮಾಲವೀಯರ ತಂತಿ.

ವಿಲಾಯತಿಯಲ್ಲಿ ಹಿಂದುಸ್ಥಾನದೊಳಗಿನ ಸತ್ಯಾಗ್ರಹದ ವಾರ್ತೆಗಳಿಗೆ ಪ್ರತಿಬಂಧವಿಲ್ಲವಾಗಿ ಹೇಳುತ್ತಾರೆ.

ವಾರ್ತೆಗಳು ಮಾತ್ರ ಪ್ರಕಟವಾಗುವದೇ ಇಲ್ಲ. ಇಂಗ್ಲಿಷ ಪತ್ರಕರ್ತರು ತಮ್ಮ ಪತ್ರಿಕೆಗಳಲ್ಲಿ ಹಿಂದುಸ್ಥಾನದೊಳಗಿನ ವಾರ್ತೆಗಳನ್ನು ಪ್ರಕಟಿಸದಂತೆ ಗುಪ್ತವಾದ ಕಾರಸ್ಥಾನವನ್ನೇ ನಡಿಸಿರುವರಾಗಿ "ಫ್ರೀ ಪ್ರೆಸ್" ಜರ್ನಲ್ ಪತ್ರಿಕೆಯ ರಿಪೋರ್ಟರ ಪ್ರತಿನಿಧಿಗಳು ಬರೆಯುತ್ತಾರೆ. ಡೊಂಬರ ಆಟದ ಉದ್ದುದ್ದ ವಾರ್ತೆಗಳನ್ನು ಕೊಟ್ಟು ಅನ್ಯಗಳ ಮೋಜ ಪತ್ರಕರ್ತರು ಸ್ಕ್ಯಾಂಡಲ್ಸು ಸಹ ಬರೆದದ್ದುಂಟು, ಆದರೆ ಸತ್ಯಾಗ್ರಹದ ವಾರ್ತೆಗಳೇ ಈ ಪತ್ರಿಕೆಗಳಿಗೆ ಸಿಗುವದಿಲ್ಲ! ಹೀಗೆ ಅವರು ಬರೆಯುತ್ತಾರೆ. ಸರಕಾರದವರು ವಾರ್ತೆಗಳನ್ನು ಪ್ರತಿಬಂಧಿಸುವದಿಲ್ಲವಾಗಿ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಗೃಹಮಂತ್ರಿಗಳಾದ ಸರ್ ಜೇಮ್ಸ ಕ್ರೇರರವರು ನುಡಿದರು. ಕು| ಮೀರಾಬಾಯಿಯವರು ಪಾರ್ಲಿಮೆಂಟಿನ ಸಭಾಸದರಾದ ಮಿ| ವಿಲಿಯಮ್ಸನ್ನರವರಿಗೂ, ಅಮೇರಿಕೆಯ ಪಾದ್ರಿ ಸಾಹೇಬರಾದ ಮಿ| ಹೋಮ್ಸರವರಿಗೂ, ಯುರೋಪ ಖಂಡದಲ್ಲಿ ತತ್ವಜ್ಞಾನಿಗಳೆಂದು ಹೆಸರುಗೊಂಡ ಮಿ| ರೋಮನ್ ರೋಲಂಡರವರಿಗೂ ಕಳಿಸಿದ ಸಂಕ್ಷಿಪ್ತ ವಾರ್ತೆಗಳ ತಂತಿಗಳು ಮುಂದೆ ಕಳಿಸದೆ ಹಿಂದೆಯೇ ಉಳಿದ ಸುದ್ದಿ ಈ ಮೊದಲೇ ಪ್ರಕಟವಾಗಿದೆ. ಕಳೆದ ಫೆಬ್ರುವರಿ ೨೯ನೇ ತಾರೀಖಿಗೆ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದ ಪರಿಸ್ಥಿತಿಯ ಕುರಿತು ಚರ್ಚೆಯಾಯಿತು. ಈ ಚರ್ಚೆಯಲ್ಲಿ ಉಪಯೋಗಿಸಲು ಹಿಂದುಸ್ಥಾನದ ಪರಿಸ್ಥಿತಿಯ ಬಗ್ಗೆ ವಿಶ್ವಸನೀಯ ಹಾಗೂ ಪೂರ್ಣ ಮಾಹಿತಿಯನ್ನು ತಮಗೆ ಪೂರೈಸಬೇಕಾಗಿ ಪಾರ್ಲಿಮೆಂಟಿನ ಕೆಲ ಸಭಾಸದರು ಪಂಡಿತ ಮಾಲವೀಯರಿಗೆ ತಿಳಿಸಿದ್ದರು. ಅದರಂತೆ ಪಂ| ಮಾಲವೀಯರವರು ಫೆಬ್ರುವರಿ ೨೬ನೇ ತಾರೀಖಿಗೆ ಮಧ್ಯಾನ್ಹ ಶ್ರೀ ಕಾಶೀಕ್ಷೇತ್ರದಿಂದ ಸುಮಾರು ೧೫೦೦ ಶಬ್ದಗಳ ಒಂದು ತಂತಿಯನ್ನು ಲಂಡನದೊಳಗಿನ ಮೂರು ಪತ್ರಿಕೆಗಳಿಗೆ ಕಳಿಸಿಕೊಟ್ಟರು. ತಂತಿಖಾತೆಯವರು ಅದನ್ನು ಸ್ವೀಕರಿಸಿ ವರ್ತಮಾನಪತ್ರಗಳ ಸುದ್ದಿಯಂತೆ ರೂ. ೨೩೦ ಆಕಾರ ಕೊಂಡರು. ಆದರೆ ತಂತಿಯನ್ನು ಕಳಿಸಲಿಲ್ಲ. ಸಂಜೆಯ ಸಮಯ ಮಾಲವೀಯರಿಗೆ ಟೆಲಿಫೋನು ವಾರ್ತೆ ಬಂತು. ನೀವು ಹೆಸರು ಕೊಟ್ಟ ಮೂರು ವರ್ತಮಾನಪತ್ರಿಕೆಗಳ ಪೈಕಿಂ "ಸ್ಪೆಕ್ಟೇಟರ" ಮತ್ತು "ಇಂಡಿಯನ್ ರಿವ್ಯೂ" ಪತ್ರಿಕೆಗಳು ರಜಿಸ್ಟರ್ಡ ಪತ್ರಿಕೆಗಳಲ್ಲವಾದ್ದರಿಂದ ಅವುಗಳಿಗೆ ತಂತಿ ಕಳಿಸಲಾಗುವದಿಲ್ಲವೆಂದು ವಾರ್ತೆ ಬಂತು. ಅದಕ್ಕೆ ಪಂಡಿತಜಿಯವರು "ಅಡ್ಡಿಯಿಲ್ಲ, "ಡೇಲಿ ಹೆರೊಲ್ಡ"ಕ್ಕೆ ಕಳಿಸಿರಿ" ಎಂದು ಉತ್ತರ ಕೊಟ್ಟರು. ಕೆಲ ಹೊತ್ತಿನ ಮೇಲೆ ಇನ್ನೊಂದು ಸಂದೇಶ ಬಂತು "ನೀವು ರಜಿಸ್ಟರ್ಡ ಯಾವ ಅಧಿಕಾರ ಪಟ್ಟ ಸುದ್ದಿಗಾರರಲ್ಲದ್ದರಿಂದ, ಪತ್ರಿಕೆಗೆ ಸಿಗುವ ರಿಯಾಯತಿ ದರದಿಂದ ನಿಮ್ಮ ತಂತಿ ಕಳಿಸಲಾಗುವದಿಲ್ಲ" ಎಂದು ತಂತಿ ಆಫೀಸಿನವರು ತಿಳಿಸಿದರು. ಅದಕ್ಕೆ ಮಾಲವೀಯರು "ಹಾಗಾದರೆ ಖಾಸಗಿ ತಂತಿಯೆಂದು ತಿಳಿದು ಕಳಿಸಿರಿ. ಆ ಬಗ್ಗೆ ತಗಲುವ ಹೆಚ್ಚಿನ ಆಕಾರ ರೂಪಾಯಿ ೩೦೦ ನಾನು ಕೊಡುತ್ತೇನೆ" ಎಂತ ನುಡಿದರು. ಇನ್ನೂ ಕೆಲ ಹೊತ್ತಿನ ಮೇಲೆ ಪುನಃ ಟೆಲಿಫೋನು ಬಂತು. "ಈಗ ಆಫೀಸ ಟಾಯಿಮು ಮುಗಿಯಿತು! ಜರೂರಿಯ ತಂತಿಯೆಂದು ರೂ ೩೦೦೦ ಜಾದಾ ಆಕಾರ ಕೊಟ್ಟರೆ, ನಿಮ್ಮ ತಂತಿ ಕಳಿಸಲಡ್ಡಿಯಿಲ್ಲ!" ಇಷ್ಟು ಹಣವನ್ನು ಕೊಡಲಿಕ್ಕೆ ಪಂಡಿತ ಮಾಲವೀಯರು ಒಪ್ಪಲಿಲ್ಲ, ಮತ್ತು ತಂತಿಯು ವಿಲಾಯತಿಯನ್ನು ಕಾಣಲಿಲ್ಲ. "ಬಡಿಸುವವರು ನಮ್ಮವರಿರಬೇಕು" ಎಂಬುದಾಗಿ ಯಾವದರೂ ಹೇಳುವ ಕಾರಣವಿದೆ. ಇಲ್ಲದಿದ್ದರೆ ಮಧ್ಯಾನ್ಹಕ್ಕೆ ಕೊಟ್ಟ ತಂತಿಯು ರಾತ್ರೆ ಆಫೀಸ ಟಾಯಿಮು ಮುಗಿಯುವ ತನಕ ಆಫೀಸಿನಲ್ಲಿ ಬಿದ್ದುಕೊಂಡಿರುತ್ತಿರಲಿಲ್ಲ. ಸುದ್ದಿ ಕಳುಹಲು ಕಾಯಿದೆಯಂತೆ ಪ್ರತಿಬಂಧವಿಲ್ಲ, ಕೃತಿಯಿಂದ ಸುದ್ದಿ ಪ್ರತ್ಯಕ್ಷ ಹೋಗುವದಿಲ್ಲ, ಇಂಥ ಸ್ಥಿತಿಯುಂಟಾಗಿದೆ.

ಪಂಡಿತ ಮಾಲವೀಯರು ಕಳುಹಲಿಚ್ಛಿಸಿದ ಸುದ್ದಿಯೋಲೆಯು ಈಗ ಹಿಂದೀ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಫೆಬ್ರುವರಿ ೨೦ರ ಕೊನೆಗೆ ಕಂಡುಬರುತ್ತಿದ್ದ ಹಿಂದೀ ಪರಿಸ್ಥಿತಿಯ ಚಿತ್ರವು ಅದರಲ್ಲಿ ಪಂಡಿತ ಮಾಲವೀಯರಂತಹ ನಿಷ್ಪಕ್ಷಪಾತಿಗಳ ಕೈಯಿಂದ ಚಿತ್ರಿತವಾಗಿರುವದರಿಂದ, ವಾಚಕರ ಮಾಹಿತಿಯ ಬಗ್ಗೆ ಅದರ ತಾತ್ಪರ್ಯವನ್ನು ಇದರಡಿ ಕೊಟ್ಟಿರುತ್ತೇವೆ.

ಪಂಡಿತ ಮಾಲವೀಯರ ತಂತಿ.

"ಭಾರತ ಮಂತ್ರಿಗಳು ಹಿಂದುಸ್ಥಾನದ ಸ್ಥಿತಿ ಸುಧಾರಿಸುತ್ತದಾಗಿ ಅಭಿಪ್ರಾಯಪಡುತ್ತಿದ್ದಾರೆ. ಆದರೆ ಇದು ವಸ್ತುಸ್ಥಿತಿಯಲ್ಲಿ ಬಹಿಷ್ಕಾರವೇ ರಾಷ್ಟ್ರೀಯ ಸಭೆಯ ಮುಖ್ಯ ಕಾರ್ಯಕ್ರಮವು, ಇದನ್ನು ಭಾರತ ಮಂತ್ರಿಗಳು ಒಪ್ಪುತ್ತಾರೆ. ಅದು ಕುಗ್ಗುವ ಲಕ್ಷಣಗಳಿಲ್ಲ. ದಿನೇ ದಿನೇ ಅದು ಕಡುತರವಾಗುತ್ತ ನಡೆದಿದೆ. ಸಮಸ್ತ ಗ್ರಾಮಗಳಲ್ಲಿ ಹಬ್ಬುತ್ತಿದೆ. ವರ್ತಕರು ಪರದೇಶಿ ಜವಳಿಯನ್ನೂ, ಬ್ರಿಟಿಶ ಸರಕುಗಳನ್ನೂ ತರಿಸುವದಿಲ್ಲ. ಅನೇಕರು ಶಿಲ್ಕು ಇದ್ದ ಮಾಲಿಗೆ ಮುದ್ರೆ ಹಾಕಿಟ್ಟರು. ದಿನಹೋದ ಹಾಗೆ ಇದೇ ಪರಿಸ್ಥಿತಿಯು ರಭಸದಿಂದ ಮುಂದರಿಯುವದು. ಸ್ತ್ರೀಯರು ಸಹ ಪ್ರಾಮುಖ್ಯವಾಗಿ ಮುಂದಾಗಿದ್ದಾರೆ. ತೋರಿಕೆಯ ವಿಭಾಗವು ಈಗಿನ ಚಳವಳಿಯಲ್ಲಿ ಮುಖ್ಯವಲ್ಲ. ಪ್ರತ್ಯಕ್ಷ ಕಾರ್ಯವು ನಿರ್ಧಾರದಿಂದ ನಡೆದಿದೆ. ಪೋಲೀಸರ ವಿರೋಧಕ್ಕೆ ಲಕ್ಷ್ಯವಿಡದೆ ಉಪ್ಪಿನ ಸತ್ಯಾಗ್ರಹವಾಗುತ್ತಿದೆ. ಮೆಜಿಸ್ಟ್ರೇಟರೂ, ಪೋಲೀಸರೂ ಹೊರಡಿಸಿದ ಹುಕುಮುಗಳನ್ನು ಮುರಿದು ಬೇರತುಂಬ ಸತ್ಯಾಗ್ರಹವಾಗುತ್ತಿದ. ನಿತ್ಯ ಪತ್ರಿಕೆಗಳ ಮೇಲಿಂದ ಜೈಲು ಸೇರಿದವರ ಸಂಖ್ಯೆ [illegible]ಕ್ಕೆ ಮುಟ್ಟಿರಬೇಕೆಂದು ತಿಳಿಯುತ್ತದೆ. ಕೊಂಗ್ರೆಸಿನವರ ಅಂದಾಜಿನಂತೆ ೬೦೦೦೦ ಜನರು ಸೆರೆಯಾಳಾದರು. ಜನರು ಅತ್ಯಾಚಾರ ಮಾಡಿದ ಉದಾಹರಣೆಗಳು ತೀರ ಅಲ್ಪವೆಂದು ಭಾರತ ಮಂತ್ರಿಗಳು ಒಪ್ಪುತ್ತಾರೆ. ಆದಾಗ್ಯೂ ಕಳೆದ ೧ ತಿಂಗಳಲ್ಲಿ ಬಹಳ ಕಡೆ ಪೋಲೀಸರು ಗುಂಡು ಹಾರಿಸಿದರು. ದೊಣ್ಣೆ ಹೊಡೆದು ಜನರ ಸಾಹಸ ನಿರ್ಮೂಲಿಸುವದು ಸರಕಾರಕ್ಕೆ ಅವಶ್ಯ ತೋರಿದ್ದರಿಂದ ಕೆಲವೆಡೆ ದೊಣ್ಣೆ ಹೊಡೆಯಲಿಲ್ಲವಾಗಿ ತಿಳಿಯುತ್ತದೆ. ಆದಾಗ್ಯೂ, ಜನರಿಗೆ ಪಡೆಸುವ ಅಸಹ್ಯಕೃತ್ಯಗಳು ಹೇರಳ ನಡೆಯುತ್ತಿವೆ. ಕೆಲ ಪ್ರಕಾರಗಳನ್ನು ವಿವರಿಸುತ್ತೇನೆ— ಗುಜರಾಥದೊಳಗಿನ ೩ ಗ್ರಾಮಗಳ ಜನರಿಗೆ ಮಲವಿಸರ್ಜನವಾದ ನಂತರ ಗುದಪ್ರಕ್ಷಾಲನ ಮಾಡಿಕೊಳ್ಳಲು ನೀರು ಕೊಡಲಿಲ್ಲ. ಪೋಲೀಸರು ಉಟ್ಟ ಧೋತರ, ಹರಿದು ಅವರಿಗೆ ಬತ್ತಲೆ ಮಾಡಿದರು. ಬಿಹಾರದಲ್ಲಿ ಸ್ವಯಂಸೇವಕರಿಗೆ ಬತ್ತಲೆ ಮಾಡಿದರು, ಮೀಸೆಗಳನ್ನು ಎಳೆದರು. ಮಗನಿಗೆ ವಿಧಿಸಿದ ದಂಡ ಕೊಡದ್ದರಿಂದ ತಂದೆಗೆ ೬ ತಿಂಗಳ ಕಠಿಣ ಸಜೆ. ರಾಷ್ಟ್ರೀಯ ಸಭೆಗೆ ಸಂಬಂಧವಿಲ್ಲದ ಸಾರ್ವಜನಿಕ ಸಂಸ್ಥೆಗಳು ಸಹ ಬೇಕಾಯಿದೇಶೀರ ಆಗಿವೆ. ರಾಷ್ಟ್ರೀಯ ಸಭೆಯವರಿಗೆ ಊಟ ಹಾಕಿದ ಬಗ್ಗೆ, ಉಳಿಯಗೊಟ್ಟ ಬಗ್ಗೆ ಅಂಗಡಿಕಾರರಿಗೆ ಶಿಕ್ಷೆಯಾಗಿದೆ. ವಾರ್ತೆಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆ ಕಳಿಸಗೊಡುವದಿಲ್ಲ. ಗಡಿನಾಡಿನಲ್ಲಿ ಕಠಿಣ ಪ್ರತಿಬಂಧ. ಕೆಲವೆಡೆ ಸತ್ಯಾಗ್ರಹಿಗಳ ಛಾಯಾಚಿತ್ರ, ಹೆಸರು ಪ್ರಕಟಿಸದಂತೆ ಪತ್ರಕರ್ತರಿಗೆ ಮುಂಜಾಗ್ರತೆ ಕೊಡಲ್ಪಟ್ಟಿದೆ. ಖುದಾಯಿ ಖಿದಮತಗಾರರು ಪಡಿದು ಪೇಶಾವರ ಜಿಲ್ಲೆಯನ್ನೇ ಬಿಟ್ಟು ಬೇರೆ ಕಡೆ ಹೋಗಿ ತಮ್ಮ ಕಾರ್ಯಕ್ರಮ ನಡಿಸುತ್ತಿದ್ದಾರಂತೆ. ಸಂಯುಕ್ತ ಪ್ರಾಂತದಲ್ಲಿ ಕಿಸಾನ ಒಕ್ಕಲಿಗರ ಕೈಯಿಂದ ಬಾಕಿ ಇರುವ ಗೇಣಿ ವಸೂಲಿಗಾಗಿ ಆಸ್ತಿ ಜಪ್ತಿ ಮಾಡಲ್ಪಟ್ಟಿದೆ. ಕೆಲವರು ಕೆಲ ಆಣೆ ಗೇಣಿ ಕೊಡುವದು ಬಾಕಿ ಇತ್ತು. ಅವರದೂ ನೂರಾರು ರೂಪಾಯಿಗಳ ಆಸ್ತಿ ಜಪ್ತಾಗಿದೆ. ವಸ್ತುಗಳಿಗೆ ನಿರ್ದಯತನದಿಂದ ಹೊಡೆಯುವ ಉಪಕ್ರಮ ನಡೆದಿದೆ. ಆದಾಗ್ಯೂ ಜನರು ಹಿಂಜರಿಯುವ ಲಕ್ಷಣಗಳು ತೋರುವದಿಲ್ಲ. ಮನೆಮಾರು ಬಿಟ್ಟು ಗಿಡದಡಿ ಠಾಣ್ಯ ಹೂಡಿ ಸ್ವಯಂಸೇವಕರು ತಮ್ಮ ಮೆರವಣಿಗೆ-ಸಭೆಗಳನ್ನು ನಡಿಸುತ್ತಿದ್ದಾರೆ. ಸ್ತ್ರೀಯರಿಗೆ ಮೋಟಾರ ಲಾರಿಗಳಲ್ಲಿ ತುಂಬಿ ದೂರ ನಿರ್ಜನ ಪ್ರದೇಶದಲ್ಲಿ ಒಯ್ದು ಬಿಡುತ್ತಾರೆ. ಕೆಲವೆಡೆ ಸ್ವಯಂಸೇವಕರಿಗೆ ನಿಶ್ಚೇಷ್ಟರಾಗುವ ತನಕ ಹೊಡೆದು ಆ ಮೇಲೆ ಉಡಿಗೆ-ತೊಡಿಗೆ ಕಸಕೊಂಡು ಮಧ್ಯಮಾರ್ಗದಲ್ಲಿಯೇ ಬಿಟ್ಟರು. ಆಸ್ಪತ್ರೆ ಮುಚ್ಚಿ ರೋಗಿಗಳನ್ನು ಹೊರತಳ್ಳಿದರು. ವಿದ್ಯಾನಿಲಯಗಳು ಬೇಕಾಯಿದೇಶೀರ ಆಗಿವೆ. ಇಷ್ಟರಿಗೆ ಕುದುರೆ ಗಾಡಿಗೆ ಕಟ್ಟಿ ದುಷ್ಟತನದಿಂದ ಧರಧರನೆ ಬಹು ದೂರ ಎಳೆದೊಯ್ದರು. ಕುಡಿಯಲಿಕ್ಕೆ ನೀರು ಬೇಡಲು ಬೆತ್ತದಿಂದ ಹೊಡೆದರು. ನಿಶ್ಚೇಷ್ಟ ಬಿದ್ದರೂ ಪೋಲೀಸರು ಜನರಿಗೆ ಹೊಡೆಯುವದನ್ನು ಬಿಡುವದಿಲ್ಲ. ಚಿಕ್ಕ ಮಕ್ಕಳಿಗೆ ಸಹ ಬೆತ್ತ ಪ್ರಹಾರವಾಗುತ್ತದೆ. ಕೆಲವರಿಗೆ ಅವರವರ ಮನೆಯಲ್ಲಿಯೇ ಬಂದಿಸಿಟ್ಟರು. ೮೦ ವರ್ಷದ ಮುದುಕಿಗೂ ಶಿಕ್ಷೆಯಾಗಿದೆ. ಪ್ರಯಾಗದೊಳಗಿನ ಸ್ವದೇಶೀ ಸಂಘದ ಸರಕು ಜಪ್ತಾಯಿತು. ಗಾಂಧಿಜಿ ಹಾಗೂ ಸರದಾರ ಪಟೇಲರವರ ಚಲಚ್ಚಿತ್ರ ಪಟಗಳಿಗೆ ಪ್ರತಿಬಂಧವಾಗಿದೆ. ಅನೇಕ ಚರಕಾ ಸಂಘ ಖಾದಿಭಾಂಡಾರಗಳಲ್ಲಿ ಜಪ್ತಿಗೊಳಗಾದವು. ರಾಷ್ಟ್ರಧ್ವಜ ಮಾರಾಟ ಮಾಡಿದ ಬಗ್ಗೆ ವ್ಯವಸ್ಥಾಪಕರೊಬ್ಬರು ಸೆರೆಯಾಳಾದರು. ೧೨ ವರ್ಷದ ಹುಡುಗನ ಕಡೆ ಜಾಮೀನು

(೧೦ನೇ ಪಾನಿನ ಮೇಲೆ ಮುಂದರಿಸಿದೆ.)

ಪ್ರಪಂಚ-ಪರಿಚಯ.

ಸರ್ವಾಧಿಪತಿಗಳು ವಿಲ್ಯಾತಿಗೆ ಹಾರುವರು?

ಬ್ರಿಟಿಶ ಮಂತ್ರಿಮಂಡಳದಮುಂದೆ ಹಿಂದುಸ್ತಾನದ ಪರಿಸ್ಥಿತಿಯನ್ನು ಅರುಹಲಿಕ್ಕೂ, ಭಾವೀ ರಾಜಕೀಯ ಸುಧಾರಣೆಗಳ ಚರ್ಚೆ ಮಾಡಲಿಕ್ಕೂ ಸರ್ವಾಧಿಪತಿಗಳು ಮೇ ತಿಂಗಳಲ್ಲಿ ಯಾ ಅವಕ್ಕೂ ಮುಂಚೆ ವಿಮಾನ ಮಾರ್ಗದಿಂದ ವಿಲಾಯತಿಗೆ ಹೋಗುವವರಿದ್ದಾರೆಂದು ಲಂಡನದೊಳಗಿನ 'ಡೇಲಿ ಟೆಲಿಗ್ರಾಫ' ಪತ್ರಿಕೆಯ ಇಂದ್ರಪ್ರಸ್ಥದೊಳಗಿನ ಸುದ್ದಿಗಾರನು ತಿಳಿಸುತ್ತಾನೆ.

⁂

ರಾಷ್ಟ್ರಧ್ವಜ ಹಾರ್ಯಾಡಿಸುವದು ಗುನ್ಹೆಯಲ್ಲ!

'ಸ್ವಾತಂತ್ರ್ಯ ದಿನ'ದ ಬಗ್ಗೆ ತಮ್ಮ ಆಫೀಸಿನ ಮೇಲೆ ರಾಷ್ಟ್ರಧ್ವಜವನ್ನು ಹಚ್ಚಿ, ಅಧಿಕಾರಿಗಳು ಅಪ್ಪಣೆ ಮಾಡಿದರೂ ಅದನ್ನು ತೆಗೆಯದ ಬಗ್ಗೆ ಅಹಮ್ಮದಾಬಾದದೊಳಗಿನ ಡಾ| ಕಣೂಗಾರವರ ಮೇಲೆ ಕ್ರಿಮಿನಲ್ ಲೋ ಎಮೆಂಡಮೆಂಟ ಆಕ್ಟ ಕಲಂ ೧೭(೧)ರನ್ವಯ ಖಟ್ಲೆ ನಡೆದು ಅವರಿಗೆ ರೂ ೧೦೦೦ ದಂಡವಾಗಿತ್ತು. ಈ ಶಿಕ್ಷೆಯ ವಿರುದ್ಧ ಡಾಕ್ಟರರು ಸ್ವತಃ ಅಪೀಲು ಮಾಡದಿದ್ದರೂ, ಅಹಮ್ಮದಾಬಾದದ ವಕೀಲ-ಮಂಡಳದವರು ಸೆಶನ್ಸ ಜಡ್ಜರ ಮುಂದೆ ಅಪೀಲು ಮಾಡಿದ್ದರು. ಅಪೀಲಿನ ವಿಚಾರವಾಗಿ ಶಿಕ್ಷೆಯು ರದ್ದಾಗಿದೆ. ನ್ಯಾಯಾಧೀಶರು ತಮ್ಮ ನಿಕಾಲಿಯಲ್ಲಿ ಹೇಳುತ್ತಾರೆನ್ನಲ್ಲ— 'ಆರೋಪಿಯು ಈ ಸರ್ವದ ಚಳವಳಿಯಲ್ಲಿ ಸೇರಿದ್ದು ಕಂಡು ಬರುವದಿಲ್ಲ. ರಾಷ್ಟ್ರೀಯ ಸಭೆಯಾಗಲಿ, ರಾಷ್ಟ್ರೀಯ ಸಭೆಯ ಧ್ವಜವಾಗಲಿ ಬೇಕಾಯದೇಶೀರ ಠರಾಯಿಸಿದ್ದಿಲ್ಲ. ರಾಷ್ಟ್ರಧ್ವಜ ಹಚ್ಚುವದೇ ಗುನ್ಹೆಯಾಗದ್ದರಿಂದ ಆರೋಪಿಯು ಅದನ್ನು ತೆಗೆಯಲೇ ಬೇಕಾಗಿದ್ದಿಲ್ಲ. ರಾಷ್ಟ್ರಧ್ವಜ ಹಚ್ಚಬಾರದೆಂದು ಡಿ| ಮೆಜಿಸ್ಟ್ರೇಟರು ಹುಕುಮು ಹೊರಡಿಸಲಿಲ್ಲ, ಮನೆಗಳ ಮೇಲಿನ ಧ್ವಜಗಳನ್ನು ಹಾಗೆಯೇ ಇಡಬೇಡಿರೆಂದು ಸಾಯಂಕಾಲಕ್ಕೆ ಜನರಿಗೆ ಸೂಚನೆ ಕೊಟ್ಟಿದ್ದರಷ್ಟೇ! ಪೋಲೀಸ ಅಧಿಕಾರಿಯ ಅನಧಿಕೃತ ಆಜ್ಞೆಯನ್ನು ಮೀರುವದರಿಂದ ಗುಜರಾಥ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕ್ಕೆ ಸಹಾಯ ಮಾಡಿದಂತಾಗುವದಿಲ್ಲ. ಆ ದಿನ ಸ್ವದೇಶಿ ವಸ್ತ್ರಗಳನ್ನೇ ತೊಡಬೇಕೆಂದು ಕಮಿಟಿಯ ಕಾರ್ಯಕ್ರಮದ ಒಂದು ಅಂಗವಿದ್ದ ಮಾತ್ರಕ್ಕೆ, ಸ್ವದೇಶಿ ಬಟ್ಟೆಗಳನ್ನು ಧರಿಸುವದೇ ಸ್ವತಃ ಗುನ್ಹೆಯಾಗುವ ತನಕ ಯಾರೂ ತಾನು ಉಟ್ಟ ಸ್ವದೇಶಿ ಉಡುಪನ್ನು ಬಿಸುಡಬೇಕೆಂದು ಹೇಳಬರುವದಿಲ್ಲ."

⁂

ರಾಷ್ಟ್ರಸೇವಕರ ಚಿತ್ರಗಳಿಗೆ ಯಾವ ಕಾಯಿದೆಯಂತೆ ಬಂದಿ?

ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ನಡೆದ ಈ ಕೆಳಗಿನ ಪ್ರಶ್ನೋತ್ತರಗಳು ಉದ್ಬೋಧಕ ಹಾಗೂ ಮನೋರಂಜಕವಿವೆ:—

ಆ| ಬಶೀರ ಅಹಮ್ಮದ ಸಾಯಿದ — (ಅ) ವ್ಯಕ್ತಿಗಳ ಕಡೆಯಿಂದಾಗಲಿ, ಅಂಗಡಿಗಳಿಂದಾಗಲಿ ದೇಶಸೇವಕರ ಚಿತ್ರಗಳನ್ನು ಜಪ್ತು ಮಾಡಲಿಕ್ಕೂ, ನಾಶಮಾಡಲಿಕ್ಕೂ ಸರಕಾರವು ಪೋಲೀಸರಿಗೆ ಅಧಿಕಾರ ಕೊಟ್ಟಿರುವದೇನು? (ಬ) ವ್ಯಕ್ತಿಗಳ ಕಡೆಗಿರುವ ಯಾ ಅಂಗಡಿ ಮುಂತಾದವುಗಳಲ್ಲಿ ತೂಗಹಾಕಿದ ದೇಶಸೇವಕರ ಚಿತ್ರಗಳನ್ನು ಜಪ್ತು ಮಾಡಿ, ಹರತೆಗೆದು, ನಾಶ ಮಾಡಲಿಕ್ಕೆ ಪೋಲೀಸರಿಗೆ ಯಾವ ಕಾಯಿದೆಯಂತೆ ಅಧಿಕಾರ ಪ್ರಾಪ್ತವಾಗಿರುವದು? (ಕ) ಪೋಲೀಸರ ಈ ಕೃತ್ಯಗಳು ಅನಧಿಕೃತವಿದ್ದಲ್ಲಿ, ಖಾಸಗಿ ಹಕ್ಕುಗಳ ಮೇಲೆ ಇಂತಹ ಅತ್ಯಾಚಾರಗಳಾಗದಂತೆ ಸರಕಾರದವರು ಯಾವ ಉಪಾಯ ಯೋಜನೆ ಮಾಡುವವರಿದ್ದಾರೆ?

ಗೃಹಮಂತ್ರಿಗಳು (ಅ) ಇಲ್ಲ. (ಬ) ಕಾಯಿದೆಭಂಗದ ಚಳವಳಿಯ ಮುಂದಾಳುಗಳ ಭಾವಚಿತ್ರಗಳು, ೧೯೩೧ನೇ ಇಸ್ವಿಯ ೨ನೇ (ಆಪತ್ಕಾಲದ ಅಧಿಕಾರಗಳ) ರಾಜಶಾಸನದ ಕಲಂ ೬೩ ಮತ್ತು ೧೯೩೧ನೇ ಇಸ್ವಿಯ ದುರುಸ್ತಿ ರಾಜಶಾಸನಗಳಂತೆ ತಿದ್ದುಪಡಿಯಾದ ೧೯೩೧ನೇ ಇಸ್ವಿಯ ಇಂಡಿಯನ್ ಪ್ರೆಸ್ ಆಕ್ಟ ಕಲಂ ೪ (೧) ಕಕ್ಷೆಯಲ್ಲಿ ಬೀಳುತ್ತವೆಂದು ತಿಳಿಯಬೇಕು. ಹಾಗಾದರೆ ಆ ಆಕ್ಟಿನ ಕಲಂ ೨ರಲ್ಲಿ ಕೊಟ್ಟ ವ್ಯಾಖ್ಯೆಗಳಂತೆ ಈ ಚಿತ್ರಗಳು ಬೇಕಾಯದೇಶೀರ ಸುದ್ದಿಯೋಲೆಗಳಾಗುವವು. ಇಂಥ ಬೇಕಾಯದೇಶೀರ ಸುದ್ದಿಯೋಲೆ (*News sheet*)ಗಳನ್ನು ಜಪ್ತು ಮಾಡಲಿಕ್ಕೆ ಪೋಲೀಸರಿಗೂ, ಅವುಗಳ ನಾಶ ಮಾಡಿಸಲಿಕ್ಕೆ ಮೆಜಿಸ್ಟ್ರೇಟರಿಗೂ ಆ ಆಕ್ಟಿನ ಕಲಂ ೧೯ರನ್ವಯ ಅಧಿಕಾರ ಕೊಟ್ಟಿದೆ (ಕ) ಈ ಪ್ರಶ್ನೆಗೆ ಅವಕಾಶವಿಲ್ಲ

ಪುರವಣಿ ಪ್ರಶ್ನೆಗಳೂ ಉತ್ತರಗಳೂ.

ಆ ಸಾಹಿಬ — ಈ ಕುರಿತು ಸರಕಾರಿ ವಕೀಲರ ಅಭಿಪ್ರಾಯ ಕೇಳುವಿರಾ? ಅವರ ಅಭಿಪ್ರಾಯ ಸಭೆಗೆ ನೋಡಸಿಗುವದೇನು?

ಗೃಹಮಂತ್ರಿ — ಸರಕಾರವು ಯಾವದೇ ಸೂಚನಗಳನ್ನು ಕೊಟ್ಟಿಲ್ಲ

ಆ| ರಾಮಸ್ವಾಮಿ ಮುದಲಿಯಾರ 'ಹಾಗಾದರೆ, ಆ ಆಕ್ಟಿನ ಕಲಂ ೨ರೊಳಗಿನ ವ್ಯಾಖ್ಯೆಯಂತೆ ಅವು (ಭಾವಚಿತ್ರಗಳು) ಬೇಕಾಯದೇಶೀರ ಸುದ್ದಿಯೋಲೆಗಳಾಗಬಹುದು" ಎಂದು ಸರಕಾರವು ನುಡಿಯುತ್ತದೆ. ತನ್ನ ಅಭಿಪ್ರಾಯದ ಬಗ್ಗೆ ಸರಕಾರಕ್ಕೆ (ಖಾತ್ರಿಯಿಲ್ಲವೆಂದು) ತಿಳಿಯಬೇಕೇನು?

ಗೃಹಮಂತ್ರಿ — ಕಾಯಿದೆಯು ಹೀಗೆಂದು ನಮಗನಿಸುತ್ತದೆ. ಆದರೆ ನಾವು ಯಾವ ಸೂಚನೆಗಳನ್ನೂ ಹೊರಡಿಸಿಲ್ಲ

ಆ| ಆರೋಗ್ಯಸ್ವಾಮಿ ಮುದಲಿಯಾರ — ಪಂಡಿತ ಮೋತಿಲಾಲ ನೆಹರು ಅಥವಾ ಲೋಕಮಾನ್ಯ ಟಿಳಕ ಇವರ ಚಿತ್ರಗಳೂ ಇದೇ ಸದರಿನಲ್ಲಿ ಬರುತ್ತವೇನು?

ಗೃಹಮಂತ್ರಿ — ಈ ಪ್ರಶ್ನೆಗೆ ಪೂರ್ವಸೂಚನೆ (*Notice*) ಬೇಕು

ಆ| ಅಯ್ಯಂಗಾರ — ಯಾವದಾದರೂ ಭಾವಚಿತ್ರವು ಈ ಸದರಿನಲ್ಲಿ ಬರುತ್ತದೋ ಇಲ್ಲವೆಂದು ನಿರ್ಣಯಿಸುವವರ್ಯಾರು?

ಗೃಹಮಂತ್ರಿ — ಅದು ಅಧಿಕಾರಿಗಳ ಕೈಯೊಳಗಿನ ಮಾತು. ಸರಕಾರವು ಯಾವ ಹುಕುಮೂ ಹೊರಡಿಸಿಲ್ಲ, ಸೂಚನೆಗಳನ್ನೂ ಕೊಟ್ಟಿಲ್ಲ

ಆ| ಸಾಯಿದ — ಕಳೆದ ಜನವರಿ ತಿಂಗಳಲ್ಲಿ ಅನೇಕ ಜನರು ಅಂಗಡಿಗಳೊಳಗಿಂದ ಮಹಾತ್ಮಾಜಿ ಮತ್ತು ವಲ್ಲಭಭಾಯಿ ಪಟೇಲರ ಭಾವಚಿತ್ರಗಳನ್ನು ಕೊಂಡುಕೊಂಡು ಮನೆಗೆ ಹೋಗುವಾಗ, ದಾರಿಯಲ್ಲೇ ಆ ಚಿತ್ರಗಳನ್ನು ಪೋಲೀಸರು ಕಸಕೊಂಡು ಅಲ್ಲಿಂದಲ್ಲೇ ಯಾಕೆ ನಾಶ ಮಾಡಿದರು?

ಗೃಹಮಂತ್ರಿ — ಈ ಹಕೀಕತು ನಿಜವೆಂದು ನಾನು ಭಾವಿಸುವದಿಲ್ಲ. ಇಂಥ ಸಂಗತಿಗಳೇನಾದರೂ ಆದದ್ದಿದ್ದರೆ, ಅವು ಕಾಯಿದೆಯಂತ ಮಾಡಿರಬೇಕು

ಆ| ಆರೋಗ್ಯಸ್ವಾಮಿ ಮುದಲಿಯಾರ — ಕಾಯಿದೆಭಂಗಕ್ಕೆ ಪ್ರಾರಂಭವಾಗುವ ಮೊದಲೇ ಕೊಂಡುಕೊಂಡ ಮತ್ತು ಮನೆಯಲ್ಲಿ ತೂಗಹಾಕಿದ ರಾಷ್ಟ್ರವೀರರ ಚಿತ್ರಗಳು ಈಗ ಬೇಕಾಯದೇಶೀರ ಸದರಿನಲ್ಲಿ ಬೀಳುತ್ತವೆಯೋ?

ಗೃಹಮಂತ್ರಿ — ಸರಕಾರವು ಯಾವದೇ ತರದ ಸೂಚನೆಗಳನ್ನು ಕೊಟ್ಟಿಲ್ಲ

ಆ| ಸಾಯಿದ — ಕೆಲವು ಚಹದಂಗಡಿಗಳಲ್ಲಿ ಮೊಕ್ಕೆ ಚಿಲ್ಲ ತೂಗಹಾಕಿದ ಚಿತ್ರಗಳನ್ನು ತೆಗೆಯಬೇಕೆಂದು ಪೋಲೀಸರು ಯಾಕೆ ಹೇಳಿದರು?

ಗೃಹಮಂತ್ರಿ — ಆಮದಾರ ಸಭಾಸದರು ವಿಶಿಷ್ಟ ಉದಾಹರಣಗಳನ್ನು ಕೊಟ್ಟರೆ, ನಾನು ಚೌಕಸಿ ನಡಿಸುವೆನು

ಮೇಲೆ ಅವತರಿಸಿ ಕೊಟ್ಟ ಪ್ರಶ್ನೋತ್ತರಗಳನ್ನು ವಾಚಕರು ಚನ್ನಾಗಿ ಲಕ್ಷಗೊಟ್ಟು ಓದಬೇಕು. ಕೌನ್ಸಿಲುಗಳಲ್ಲಿ ಕೆಲವು ಸಾರೆ ಸಭಾಸದರು ಕೇಳುವ ಪ್ರಶ್ನೆಗಳಿಗೆ ಸರಕಾರಿ ಸಭಾಸದರು ಎಷ್ಟು ತುಚ್ಛತೆಯಿಂದ ಉತ್ತರ ಕೊಡುತ್ತಾರೆ, ತಮಗೆ ಅಪ್ರಿಯವಾದ ಸಂಗತಿಗಳಲ್ಲಿ ನೆಟ್ಟಗ ಉತ್ತರ ಕೊಡಲಿಕ್ಕೆ ಹ್ಯಾಗೆ ಹಿಂದುಮುಂದು ಮಾಡುತ್ತಾರೆ, ಎಂಬುದು ಸ್ಪಷ್ಟವಾಗಿ ತಿಳಿದು ಬರುವಂತಿದೆ.

⁂

ದಿವಂಗತರು ಮೆಜಿಸ್ಟ್ರೇಟರಾಗಿರುವರು!

ಮೈಸೂರಿನಲ್ಲಿ ಒಂದು ಬೆಂಚಕೋರ್ಟ ಉಂಟು. ಆ ಬೆಂಚಿನ ಮೇಲೆ ಮ| ಆದಿರಾಜಯ್ಯ, ನಾಟಕೋಟಿ ಕದಿರೇಶಂ ಚೆಟ್ಟಿ, ನಾರಾಯಣಸ್ವಾಮಿ ಮತ್ತು ಶ್ರೀಕಂಠಾಚಾರ್ಯ ಇವರನ್ನು ೩ ವರ್ಷಗಳ ತನಕ ಮೆಜಿಸ್ಟ್ರೇಟರನ್ನಾಗಿ ನೇಮಿಸಿರುವದೆಂದು ತಾ ೨-೩-೧೯೩೨ರ ಮೈಸೂರ ಗೆಝೇಟಿನಲ್ಲಿ ಪ್ರಸಿದ್ಧವಾಗಿದೆ! ಈ ನಾಲ್ವರು ಮಹಾನುಭಾವರೊಳಗಿನ ನಾಟಕೋಟಿ ಕದಿರೇಶಂ ಚೆಟ್ಟಿಯವರೂ, ಶ್ರೀಕಂಠಾಚಾರ್ಯರೂ ೪ ೫ ತಿಂಗಳ ಹಿಂದೆಯೇ ಈ ಲೋಕವನ್ನು ಬಿಟ್ಟುಹೋಗಿರುವರಂತೆ! ಮೈಸೂರ ದರಬಾರಕ್ಕೆ ಈ ವಾರ್ತೆಯು ಗೊತ್ತಿಲ್ಲವೇ! ಅಥವಾ ಸತ್ತವರಿಗೆ ಬದುಕಿಸುವ ವಿದ್ಯೆಯನ್ನು ಅವರು ಕಲಿತಿರುವರು?

⁂

ಹಾಲು ಕೊಡುವದಕ್ಕೂ ಕಂಟಾಯಕ್ಕೂ ಸಂಬಂಧವಿಲ್ಲ?

ಸಿದ್ದಾಪುರದಲ್ಲಿ ಸುಬ್ರಾಯ ಹೆಗಡೆ ಎಂಬರನ್ನು ಕೈದು ಮಾಡಿದ್ದರು. ಅವರ ಪ್ರಕೃತಿಯು ನೆಟ್ಟಗಿದ್ದಿಲ್ಲ ಆದ್ದರಿಂದ ಅವರಬಗ್ಗೆ ಸ್ವಲ್ಪ ಹಾಲು ತಕ್ಕೊಂಡು ಅವರ ತಂದೆಯು ಸಿದ್ದಾಪುರ ಸಬಜೈಲಿಗೆ ಹೋದರು. ಪೋಲೀಸರು ಹಾಲು ಕೊಡಲಿಕ್ಕೆ ಅಪ್ಪಣೆ ಬೇಕೆಂದು ಹೇಳಿದರು. ಹೆಗಡೆಯು ತಿರಸ್ತೇದಾರರಿದ್ದಲ್ಲಿ ಹೋಗಿ ಅವರ

ಅಪ್ಪಣೆ, ಮೊದಲಾಗಿ 'ನೀವು ನಿಮ್ಮ ಕಂದಾಯ ಕೊಟ್ಟಿರುವಿರಾ?' ಎಂದು ಶಿರಸ್ತೇದಾರರು ಪ್ರಶ್ನೆ ಮಾಡಿದರು. ಹೆಗಡೆರು 'ಇಲ್ಲ'ವೆಂದು ನುಡಿದರು ಆಗ ಶಿರಸ್ತೇದಾರರು ಫೌಜದಾರರ ಕಡೆಗೆ ಹೋಗಿ ಅಪ್ಪಣೆ ಕೇಳಿರೆಂದು ಕಳಿಸಿಕೊಟ್ಟರು! ಹೆಗಡೆರು ಫೌಜದಾರರ ಬಳಿ ಹೋದರು ಅಲ್ಲಿಯೂ ಅದೇ ಪ್ರಶ್ನೆ ಬಂತು, ಅದೇ ಉತ್ತರ ಸಿಕ್ಕಿತು ಫೌಜದಾರರು ಶಿರಸ್ತೇದಾರರ ಕಡೆಗೆ ಹೋಗಿ ಅಪ್ಪಣೆ ಪಡೆಯಲು ಸೂಚನೆ ಮಾಡಿದರು! ಮುದುಕ ಹೆಗಡೆರಿಗೆ ಸಂತಾಪ ಬಂತು! ಈ ಕೆಳಗಿನಂತೆ ಸಂಭಾಷಣೆ ನಡೆಯಿತು —

ಹೆ— ನಿನ್ನ ಹತ್ತರ ಬಂದರೆ ಅವನ ಹತ್ತರ ಹೋಗೆಂದು ಹೇಳುತ್ತೀರಿ! ಅವನ ಹತ್ತರ ಹೋದರೆ ನೀನಿದ್ದಲ್ಲಿಗೆ ಕಳುಹಿಸುತ್ತಾನೆ! ಹೆಚ್ಚಿನವರ್ಯಾರು ಹಾಂ! ಸಬಜೈಲು ಯಾರ ಕೆಳಗಿದೆ?

ಫೌ— ಮಗನಿಗೆ ಹಾಲು ಕೊಡಲಿಕ್ಕೆ ನಿನಗೆ ಅಪ್ಪಣೆಯಿಲ್ಲ!

ಹೆ— ಇಷ್ಟು ನೀನು ಮೊದಲೇ ಹೇಳಬಹುದಾಗಿತ್ತು! ಇವನಪ್ಪನ ಬಳಿ ಹೋಗು, ಇವನಪ್ಪನ ಬಳಿ ಹೋಗು ಎಂದು ಏಕೆ ಹೇಳಬೇಕಾಗಿತ್ತು?

ಫೌ— ನಿನಗೆ ಅವಮಾನವೆನಿಸುತ್ತಿದ್ದರೆ ಕಂದಾಯ ಕೊಟ್ಟುಬಿಡು

ಹೆ— ಅದು ಸರಕಾರಕ್ಕೂ ನನಗೂ ಸಂಬಂಧಪಟ್ಟ ವಿಷಯ ನಿನಗೇನು ಸಂಬಂಧ?

ಫೌ— ನಾನೇ ಸರಕಾರ! ಈ ತಾಲೂಕಿನಲ್ಲಿ ನನಗೆ ನ್ಯಾಯಾಧೀಶರ ಅಧಿಕಾರವಿದೆ!

ಹೆಗಡೆ— ಹಾಗಾದರೆ ನಾನು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡು

ಫೌ— ಅವೇನು?

ಹೆಗಡೆ— ಕಂದಾಯವನ್ನು ಯಾವ ಆಧಾರದ ಮೇಲೆ ವಸೂಲ ಮಾಡುತ್ತಾರೆ?

ಫೌ— ಹುಟ್ಟುವಳಿಯ ಮೇಲಿಂದ

ಹೆಗಡೆ— ನೀವು ಬೇಡುವಷ್ಟು ಕಂದಾಯ ಕೊಡಲಿಕ್ಕೆ ಸಾಕಷ್ಟು ಬೆಳೆಯು ಬಂದಿದೆಯೆ?

ಫೌ— ಕಂದಾಯ ಕೊಡಲಿಕ್ಕೆ ನಿನ್ನ ಬಳಿ ಹಣವಿಲ್ಲೆಂದು ಹೇಳುವಿಯಾ?

ಹೆ— ಹಿರಿಯರು ಗಳಿಸಿಟ್ಟ ಬೇಕಾದಷ್ಟು ಹಣ ನನ್ನ ಇರಬಹುದು ನಿಮಗೆ ಕಂದಾಯ ಕೊಡುವಷ್ಟು ಬೆಳೆಯು ಈ ವರ್ಷ ಯಾ ಹೋದ ವರ್ಷ ಹುಟ್ಟಿರುತ್ತದೋ? ಈ ಪ್ರಶ್ನೆಗೆ ಉತ್ತರ ಕೊಡು

ಫೌ— ಇವನ್ನೆಲ್ಲ ಕೇಳುವದು ನಿನ್ನ ಕೆಲಸವಲ್ಲ ನೀನು ಕಂದಾಯ ಕೊಡದಿದ್ದರೆ ನಿನ್ನನ್ನು ಕೈದು ಮಾಡುವದು ನನ್ನ ಕೆಲಸ

ಹೆ— ಹಾಗಾದರೆ ನಿನ್ನ ಕೆಲಸ ನೀನು ಮಾಡು

ಕೊನೆಗೆ ಹೆಗಡೆರು ಮಗನಿಗೆ ಹಾಲು ಕೊಡದೆ—ಮನೆಗೆ ಹೋದರು!

* * *

ವಿಲಾಯತಿಯಲ್ಲಿ ಸ್ವದೇಶಿ ಚಳವಳಿ

"ಬಾಯ್ ಬ್ರಿಟಿಶ" ಎಂಬ ಸ್ವದೇಶಿ ಚಳವಳವು ವಿಲಾಯತಿಯಲ್ಲಿ ಕಡು ತೀವ್ರತೆಯಿಂದ ನಡೆದಿರುವದು ಯುದ್ಧ ಖಾತೆಯ ಮಂತ್ರಿಗಳಾದ ಲಾರ್ಡ ಹೇಲಶೆಮ್ ಇವರು ಒಂದು ಇಟಾಲಿಯನ್ ಮೋಟಾರಗಾಡಿಯನ್ನು ಕೊಂಡುಕೊಂಡಿದ್ದರು. ದೊರೆಗಳು ಒಂದು ದಿನ ತಮ್ಮ ಗಾಡಿಯನ್ನು ದೇವಾಲಯದ ಮುಂದೆ ಬೀದಿಯಲ್ಲಿ ಬಿಟ್ಟು ಪ್ರಾರ್ಥನೆಗಾಗಿ ದೇವಾಲಯವನ್ನು ಪ್ರವೇಶಿಸಿದರು ತಿರುಗಿ ಬಂದು ನೋಡಲಾಗಿ ಅವರ ಗಾಡಿಯ ಮೇಲೆ ಎಲ್ಲ ಕಡೆಯಲ್ಲಿ "ಬಾಯ್ ಬ್ರಿಟಿಶ" (ಬ್ರಿಟಿಶ ವಸ್ತುಗಳನ್ನೇ ಕೊಂಡುಕೊಳ್ಳಿರಿ) ಎಂಬ ಹಸ್ತಪತ್ರಿಕೆಗಳು ಅಂಟಿಸಲ್ಪಟ್ಟಿದ್ದವು ಅವನ್ನು ಓದಿ ದೊರೆಗಳಿಗೆ ನಾಚಿಕೆಯಾಗಿರಬೇಕು! ಗಾಡಿಯನ್ನು ಅಲ್ಲಿಯೇ ಬಿಟ್ಟು ೨ ಮೈಲು ದೂರವಿರುವ ತಮ್ಮ ಮನೆಗೆ ಕಾಲ್ನಡಿಗೆಯಿಂದಲೇ ಹೋದರು!

* * *

ಆಂಗ್ಲ ಬಂಧುಗಳಿಗೆ ಹಿಂದಭೂಮಿಯ ಮಾಹಿತಿಯೆಷ್ಟು?

ಹಿಂದುಸ್ಥಾನದ ಕಲ್ಯಾಣದ ಬಗ್ಗೆ ಅಂತಿಮ ಜವಾಬದಾರಿಯನ್ನು ಹೊತ್ತಿರುವ ಆಂಗ್ಲ ಜನತೆಯಲ್ಲಿ ಹಿಂದಭೂಮಿಯ ಬಗ್ಗೆ ಎಷ್ಟು ಅಜ್ಞಾನ ತುಂಬಿದೆ ಎಂಬುದನ್ನು ಮಿ| ಫೆನರ ಬ್ರೋಕವೇ ಎಂಬುವರು ಬಹು ಸುಂದರವಾಗಿ ಬಣ್ಣಿಸಿರುವರು ಅವರು ಹೇಳುತ್ತಾರೆ- "ಯಾವದೋ ಒಂದು ತರದ ಪರಿಷತ್ತಿನ ಬಗ್ಗೆ ಕೆಲವು ಭಾರತೀಯರು, ಲಂಡನಕ್ಕೆ ಬಂದಿದ್ದರು ಗಾಂಧಿಯವರು ಮರಳಿ ಹೋದ ಕೂಡಲೇ ಹಿಂದುಸ್ಥಾನದಲ್ಲಿ ಪುನಃ ಗೊಂದಲವೆದ್ದಿರುವುದನ್ನು ಮಾತ್ರ ಸಾಮಾನ್ಯ ಮನುಷ್ಯನು ಬಲ್ಲನು. ಹಿಂದುಸ್ಥಾನಕ್ಕೆ ಯಾವ ತರದ ರಾಜ್ಯಘಟನೆ ಸಿಗಬೇಕೆಂಬ ಬಗ್ಗೆ ಏನೋ ತಕ್ರಾರು ನಡೆದದೆ ಎಂಬುದನ್ನು ಅವನು ಅರಿತಿರುವನು ಈ ಹೊರತೆ ಅವನಿಗೆ ಏನೂ ಗೊತ್ತಿಲ್ಲ! ರಾಜಶಾಸನಗಳು ಹೊರಡಿಸಿದ ಸುದ್ದಿ ಅವನು ಓದುತ್ತಾನೆ, ಆದರೆ ರಾಜಶಾಸನವೆಂದರೇನು? ಅವನ್ನು ಹೊರಡಿಸುವದೆಂದರೇನು? ಎಂಬುದು ಅವನಿಗೆ ಗೊತ್ತಿಲ್ಲ! ಸಾಮಾನ್ಯರ ಅಜ್ಞಾನಕ್ಕೆ ಏನಾದರೂ ನೆವ ಹೇಳಬಹುದು ಆದರೆ ಇಡೀ ಲಂಡನ ಪಟ್ಟಣದಲ್ಲಿ ಹಿಂದುಸ್ಥಾನದಲ್ಲಿ ಜಾರಿಗೆ ಬಂದ ರಾಜಶಾಸನಗಳಲ್ಲೀಸಿದೆಯೆಂದು ಅಂಥ ಸುಧಾರು ಪತ್ರಿಕಾಕರ್ತರು ಇಂದಿಗೆ ಸಹ ನಗಲಿಕ್ಕಿಲ್ಲ! ಬಂಗಾಲ ರಾಜಶಾಸನವು ಅಕ್ಟೋಬರ ತಿಂಗಳಲ್ಲಿ ಪ್ರಕಟವಾಯಿತಲ್ಲವೇ? ೩ ವಾರಗಳ ಹಿಂದ ತನಕ ಭಾರತ ಮಂತ್ರಿಗಳ ಕಾರ್ಯಾಲಯದ ಹೊರಗೆ ಸದರ ರಾಜಶಾಸನದ ಒಂದು ಪ್ರತಿ ಸಹ ಇದ್ದಿಲ್ಲ! ೧೯೩೦ನೇ ಇಸ್ವಿಯಲ್ಲಿ ಲಾರ್ಡ ಇರ್ವಿನ್ ದೊರೆಗಳಿಗೆ ಮಹಾತ್ಮರ ಪತ್ರವನ್ನು ಒಯ್ದು ಕೊಟ್ಟ ಮಿ| ರೆಜಿನೋಲ್ಡ ರೇನೋಲ್ಡ್ಸ ಇವರು ಒಂದು ಪ್ರತಿಯನ್ನು ದೊರಕಿಸಬೇಕೆಂದು ಇಡೀ ಲಂಡನ್ ಶಹರವನ್ನು ಹುಡುಕಿದರು! ಕೊನೆಗೆ ಭಾರತ ಮಂತ್ರಿಗಳ ಆಫೀಸಿನಲ್ಲಿ ಒಂದು ಪ್ರತಿ ಕಡಾ ಸಿಕ್ಕಿತು!"

* * *

ಚೀನ-ಜಪಾನ ಯುದ್ಧವು ತಣಿದದೆ

— ಜಿನೆವಾದಲ್ಲಿ ಬಹು ಕಾಲ ಚರ್ಚೆ ನಡೆದು ರಾಷ್ಟ್ರಸಂಘದ ವಿದ್ಯಮಾನ ಚೀನ ಮತ್ತು ಜಪಾನಗಳ ನಡುವೆ ತಾತ್ಪೂರ್ತಿಕ ಶಾಂತತೆಯ ಕರಾರು ಆಗಿದೆ ಕರಾರಿನಂತೆ ಚೀನಿ ಸೈನ್ಯವು ಈಗಿದ್ದಲ್ಲಿಯೇ ಇರಬೇಕು. ಜಪಾನ ಸೈನ್ಯವು ಶಾಂಘಾಯದಲ್ಲಿ ಹಿಂದೆ ಸರಿಯಬೇಕು ಮೊನ್ನೆ ತಂದ ಜಾದಾ ಸೈನ್ಯವನ್ನು ಜಪಾನಕ್ಕೆ ಕಳಿಸಬೇಕು ಎರಡೂ ಸೈನ್ಯಗಳ ನಡುವಿರುವ ಭಾಗದಲ್ಲಿ ಚೀನಿ ಪೋಲೀಸರು ಶಾಂತತೆಯಿಡಬೇಕು ಇತ್ಯರ್ಥವಾಗದ ಜಗಳವನ್ನು ರಾಷ್ಟ್ರಸಂಘದ ಮುಂದೆ ತಂದು ಇತ್ಯರ್ಥ ಮಾಡಿಕೊಳ್ಳಬೇಕು. ಈ ತಾತ್ಪೂರ್ತಿಕ ಕರಾರುನಾಮೆಯಂತೆ ಕೆಲವು ಜಪಾನ ಸೈನ್ಯವು, ಹಲವು ಯುದ್ಧ-ನೌಕೆಗಳೂ ಜಪಾನಕ್ಕೆ ಮರಳಿ ಹೋದವಂತೆ

* * *

ಇಂಗ್ಲಂಡ-ಆಯರ್ಲಂಡ ಕಲಹಕ್ಕೆ ಆರಂಭ!

ಮಿ| ಡಿ ವ್ಯಾಲೆರಾ ಪಕ್ಷದವರು ರಾಜನಿಷ್ಠೆಯ ಶಪಥವನ್ನೂ, ಆಯರ್ಲಂಡವು ಇಂಗ್ಲಂಡಕ್ಕೆ ಕೊಡಬೇಕಾದ ವಾರ್ಷಿಕ ಕಪ್ಪಕ್ಕೂ ತಿಲಾಂಜಲಿ ಕೊಡಲಿಚ್ಛಿಸುತ್ತಾರೆಂದು ವಾಚಕರು ಬಲ್ಲರು. ಕಪ್ಪದ ಮಾತು ಇನ್ನೂ ಮುಂದೆ ವಿಧಿಯಂತೆ ಬಂದಿಲ್ಲ. ರಾಜನಿಷ್ಠೆಯ ಶಪಥದ ಮಾತು ಮಾತ್ರ ಐರಿಶ ಫ್ರೀ ಸ್ಟೇಟ ಸರಕಾರವು ಈ ಸಂಬಂಧ ತಮ್ಮ ಯೋಜನವನ್ನು ಬ್ರಿಟಿಶ ಮಂತ್ರಿಮಂಡಳಕ್ಕೆ ತಿಳಿಸಿಯದೆ. ಇಂಗ್ಲಂಡ-ಆಯರ್ಲಂಡಗಳ ನಡುವೆ ಆದ ತಹನಾಮೆಯಂತೆ ರಾಜನಿಷ್ಠೆಯ ಶಪಥದ ವಿಧಿಯು ಅಗತ್ಯವಿಲ್ಲ, ಐಚ್ಛಿಕವಿರುವದೆಂದು ಡಿ. ವ್ಯಾಲೆರಾರವರ ಅಭಿಪ್ರಾಯ ಈ ಮಾತು ಕೇಳಿ ಬ್ರಿಟಿಶ ಮಂತ್ರಿಮಂಡಳದಲ್ಲೂ ಪಾರ್ಲಿಮೆಂಟಿನ ಸರಕಾರಪಕ್ಷೀಯ ಸಭಾಸದರಲ್ಲೂ ದೊಡ್ಡ ಕೋಲಾಹಲವೆಬ್ಬಿದೆ! ಶಪಥವಿಧಿಯು ತಹನಾಮೆಯ ಮಹತ್ವದ ಅಂಗವೆಂತಲೂ, ವಾರ್ಷಿಕ ಕಪ್ಪ (೩೦ ಲಕ್ಷ ಪವನು) ಕೊಡಲಿಕ್ಕೆ ಆಯರ್ಲಂಡವು ಕಾಯದೆಯಂತ ಮತ್ತು ನೀತಿಯಂತ ಬದ್ಧವಿರುವದಾಗಿಯೂ, ಎರಡಕ್ಕೂ ತಪ್ಪಿದರೆ ತಹನಾಮೆಯನ್ನು ಐಯರಿಶ ಸರಕಾರವು ಮುರಿದಂತಾಗುವದೆಂತಲೂ ಬ್ರಿಟಿಶ ಮಂತ್ರಿಮಂಡಳದ ಸಲುವಾಗಿ ಮಿ| ಥೋಮಸ್‌ರವರು ಪಾರ್ಲಿಮೆಂಟಿನ ಸಭೆಯಲ್ಲಿ ಖುಲಾಸೆ ಮಾಡಿದ್ದಾರೆ! ಮುಂದೆ ಏನೇನಾಗುತ್ತದೆಂದು ನೋಡಬೇಕು!

* * *

ಮುಂಬಯಿಯ ಅರಳೀ ವರ್ತಕರ ಭೀತಿಯು ದೂರವಾಯಿತು.

ಮುಂಬಯಿಯ ಅರಳೀ ವ್ಯಾಪಾರಿಗಳಿಗೆ ಮುಂಬಯಿ ಸರಕಾರದ ಕೋಶಖಾತೆಯ ಸೆಕ್ರೆಟರಿಗಳು ಪತ್ರ ಬರೆದ ಸಂಗತಿ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿತ್ತಷ್ಟೆ. ಸೋಮವಾರ ಪುನಃ ಕೋಶಮಂತ್ರಿಗಳ ಅಧ್ಯಕ್ಷತೆಯಲ್ಲಿ ವ್ಯಾಪಾರಿಗಳ ಸಭೆಯಾಯಿತು ಕೋಶಮಂತ್ರಿಗಳು 'ಹತ್ತಿ ವ್ಯಾಪಾರ ಮಂದವಾಗಿದೆ, ಅದನ್ನು ಊರ್ಜಿತಾವಸ್ಥೆಗೆ ತರಲಿಕ್ಕೆ ನಾವು-ನೀವು ಪ್ರಯತ್ನಿಸುವಾ ನಿಮ್ಮ ವ್ಯವಹಾರದಲ್ಲಿ ಅಡ್ಡಿ ಮಾಡುವ ವಿಚಾರವು ನಮ್ಮದಿಲ್ಲ' ಎಂದು ವ್ಯಾಪಾರಿಗಳಿಗೆ ಅಭಯ ಕೊಟ್ಟರು. ಸೆಕ್ರೆಟರಿ ಮಿ| ವ್ಯಾಲೆಂಟಯಿನರವರೂ ಅದೇ ಸಂಗತಿಯನ್ನು ಕಾವ್ಯಮಯ ಭಾಷೆಯಲ್ಲಿ ವಿವರಿಸಿ ಹೇಳಿದರು! ಕೆಲವು ವರ್ತಕರೂ ಭಾಷಣಗಳನ್ನು ಮಾಡಿ ವ್ಯಾಪಾರಕ್ಕೆ ಮಂದಿ ಬರುವ ಕಾರಣವೇನು, ತಮ್ಮ ಮಾರ್ಗದಲ್ಲಿ ಯಾವ್ಯಾವ ಅಡಚಣಿಗಳು ಇವೆ,- ದೇಶದಲ್ಲುಂಟಾದ ಅಶಾಂತತೆಯ ಮೂಲಕ ವ್ಯಾಪಾರ ಮಾಡಲಿಕ್ಕೆ ತಮಗೆಷ್ಟು ಬವರಿಕೆ ಕಾಣುತ್ತದೆ, ಎಂಬುದನ್ನು ಸವಿಸ್ತರ ತಿಳಿಸಿಹೇಳಿದರು ಅಂತೂ ಅರಳೀ ವ್ಯಾಪಾರಿಗಳ ಮೇಲೆ ಸಿಡಿಲು ಬಡಿಯುತ್ತದೋ ಏನೆಂಬುವ ಭೀತಿಯು ದೂರವಾಯಿತು. ಅಧಿಕಾರಿಗಳು ಯಾವದೊಂದು ಸಾಹಸ ಮಾಡದ ಬಗ್ಗೆ ಅವರಿಗೆ ಅಭಿನಂದನೆ.

ರಾಷ್ಟ್ರೀಯ ಸಭೆಯು ಬೇಕಾಯಿದೆ ಸಂಸ್ಥೆಯಲ್ಲ!

ಶ್ರೀ| ಸರೋಜಿನಿ ನಾಯುಡುರವರು ಶಾಂತಿ-ಪ್ರೀತಿಯರಾಗುವರೇ ?

ಮೊನ್ನೆ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ, ರಾಷ್ಟ್ರೀಯ ಸಭೆಯು ಬೇಕಾಯಿದೇಶೀರ ಸಂಸ್ಥೆಯಾಗಿರುವದೇನೆಂದು ಶ್ರೀ ರಂಗಸ್ವಾಮಿ ಅಯ್ಯಂಗಾರ ಮಾಡಿದ ಪೃಚ್ಛೆಗೆ ಗೃಹಮಂತ್ರಿ ಸರ್ ಹ್ಯಾಗ್ ಕ್ರೇಗರವರು ಇಲ್ಲೆಂದು ಉತ್ತರವನ್ನಿತ್ತರು. ಮುಂಬಯಿಯೊಳಗಿನ ರಾಷ್ಟ್ರೀಯ ಸಭೆಯ ಅಧಿವೇಶನಕ್ಕೆ ಅಪ್ಪಣೆ ಸಿಗುವದೇ ಎಂದು ಕೇಳಲಾಗಿ, ಆ ವಿಷಯವು ವರ್ತಮಾನ ಸ್ವರೂಪದಲ್ಲಿ ಒಂದು ಸರಕಾರವು ಯಾವದೇ ನಿರ್ಣಯ ಮಾಡದೆಂದು ಜವಾಬು ಬಂತು! ಶ್ರೀಮತಿ ಸರೋಜಿನೀ ದೇವಿಯವರು ಈ ದಿಲ್ಲಿಯಲ್ಲಿ ಸರ್ವಾಧಿಪತಿಗಳ ಮುಂತ್ರಿಗಳಲ್ಲಿ ಒಬ್ಬರಾದ ಸರ್ ಫಜಲಿ ಹುಸೇನರ ಮನೆಯಲ್ಲಿ ಇಳಕೊಂಡಿರುವರು. ಶ್ರೀಮತಿಯವರನ್ನು ಮಹಾತ್ಮರ ಕೂಡ ಸಂಧಾನ ಮಾಡಲಿಕ್ಕೆ ಶಾಂತಿ-ಪ್ರೀತಿಯರಾಗಿ ಕಳುಹಿಕೊಡುವ ವಿಚಾರವನ್ನು ಸರಕಾರವು ಮಾಡುತ್ತಿರುವದೇನು ? ಎಂದು ಶ್ರೀ ರಂಗ ಅಯ್ಯರರು ಪ್ರಶ್ನೆ ಮಾಡಿದರು. ಅದಕ್ಕೆ ಗೃಹಮಂತ್ರಿಗಳು, ನಿಮ್ಮ ಕಲ್ಪನೆಯು ಆಕರ್ಷಕ (*interesting*) ವಿರುತ್ತದೆಂಬುದಕ್ಕೆ ಸಂದೇಹವಿಲ್ಲ” ವೆಂದು ನುಡಿದರು. ಪ್ರತಿ-ರಾಷ್ಟ್ರೀಯ ಸಭೆಯು ತಯಾರಿ ಮಾಡಲಿಕ್ಕೆ ಅನುಕೂಲವಾಗುವಂತೆ ಸ್ವಾಗತ ಕಮಿಟಿಯ ಅಧ್ಯಕ್ಷ ವಿ. ಸಿ. ಕಂಧಾರಿಗೆ ಬಿಡುಗಡೆ ಮಾಡುವಿರಾ, ಎಂದು ಕೇಳಲಾಗಿ. ಈ ಪ್ರಶ್ನೆಯ ಪ್ರಯೋಜನ ಬೇಕೆಂದು ಹೇಳಿದರು.

ಸತ್ಯಾಗ್ರಹದ ವಾರ್ತೆ.

ಮುಂಬಯಿಯ ಸುದ್ದಿ.

ಕಳೆದ ವಾರ ಮುಂಬಯಿ ‘ ಇಂಡಿಯನ್ ಡೇಲಿ ಮೇಲ ’ ಪತ್ರಿಕೆಯ ಸಂಪಾದಕರು ಮಾಡಿದ ಆಪಾದನೆ ಸುಳ್ಳಾಯಿತು. ಅಸ್ಪೃಶ್ಯ ಹಿಂದೂ ಸದಸ್ಯರ ಬಗ್ಗೆ ಪತ್ರಿಕೆ ಸುಳ್ಳನ್ನು ಹಬ್ಬಿಸಿದ್ದರಿಂದ ಅವರು ಮೊಕದ್ದಮೆ ಹೂಡಿದ್ದರು. ಮುಖ್ಯ ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ರಾಜಕೀಯ ಸಂಗತಿಗಳ ವರ್ತಮಾನ ಪತ್ರಗಳ ಮೇಲೆ ಜರುಗುವ ಪರಿಣಾಮವನ್ನು ಒಟ್ಟು ಮಾಡುವಂಥ ಟೀಕೆಗಳನ್ನು ರಾಯಿಸುವರು. ಆ ಟೀಕೆಯು ಬೇಕಾದ ಘಾತವೆನಿಸಲಿ ಯಾ ಅನ್ಯಾಯವನ್ನು ಪ್ರಕಟಿಸಿಕೊಳ್ಳುವ ಅಂತಹ ಉದ್ದೇಶದಿಂದ ಮಾಡಿದ್ದರೆ, ಸರಕಾರಿ ಅಧಿಕೃತ ಪತ್ರಗಳಿಗಿಂತ ಆ ಪತ್ರಗಳು ಅಂತವರಲ್ಲಿ ಜನರಲ್ಲಿಗೆ ಸರಕಾರದ ಬಗ್ಗೆ ತಿರಸ್ಕಾರ ಹಬ್ಬಿಸತ್ತವೆ, ಆದ್ದರಿಂದ ಇಂಥ ಟೀಕೆಯನ್ನು ಸರಕಾರವು ಪ್ರತಿಬಂಧಿಸಬೇಕೆಂದು ಸರಕಾರಿ ಬ್ಯಾರಿಸ್ಟರರು ವಾದಿಸಿದ್ದರು. ಮುಖ್ಯ ನ್ಯಾಯಾಧೀಶರು ಈ ಸಂಗತಿಯನ್ನು ಒಪ್ಪಿಕೊಂಡರು ಆದರೆ ಇದು ತಮ್ಮ ವಿಚಾರದ ಕಕ್ಷೆಯೊಳಗಿನ ಪ್ರಶ್ನೆಯಲ್ಲ, ಸರಕಾರದವರು ಗಮನಿಸತಕ್ಕ ವಿಷಯವೆಂದು ಅಭಿಪ್ರಾಯ ಕೊಟ್ಟರು

ಮುಂಬಯಿಯ ಲಕ್ಷ್ಮೀದಾಸ ಬಜಾಜ ಮಾರ್ಕೆಟ್ಟು ಈಗ “ ನೂತನ ಸ್ವದೇಶಿ ಮಾರ್ಕೆಟ್ಟು ” ಆಗಿದೆ. ಅಂಗಡಿಕಾರರು ಮೊದಲು ದೇಶಿ-ವಿದೇಶಿ ಜವಳಿಯನ್ನು ಮಾರುತ್ತಿದ್ದರು ಈ ಮುಂದೆ ಸ್ವದೇಶಿ ಜವಳಿಯನ್ನೇ ಮಾರುವರು ೯೬ ಅಂಗಡಿಗಳು ಈ ಹೊಸ ಸಂಸ್ಥೆಯಲ್ಲಿ ಸೇರಿವೆ

“ ಸೂತ್ರಧಾರ”ರ ಪತ್ನಿಯು ನಿಶಾನಿಯಾಯಿ ಅಹಮ್ಮದಾಬಾದದಲ್ಲಿ ಹೊಸ ನಮೂನೆಯ ಕಾವ ಕೊಟ್ಟರು.

ತು ೨೦ ಜನರಿಗೆ ಎರಡು ಆಣೆಯಗಳ ಶಿಕ್ಷೆ ಯಂತೆ ೧೦೦ ಜನರಿಗೆ ದಂಡ ಸಹ, ೧೦೦-೧೦೦ ರೂ ದಂಡ ವಿಧಿಸಲಾಯಿತು ೭ ಜನರಿಗೆ ಒಂದೇ ಆರೋಪಕ್ಕೆ ೬ ತಿಂಗಳ ಸಜೆ, ೫೦-೫೦ ರೂ. ದಂಡವಾಯಿತು ೧೦ ಜನರು ನಿರ್ದೋಷಿಗಳೆಂದು ಬಿಡಲ್ಪಟ್ಟರು. ಮುಕ್ತರಾದ ಜನರು ಕೋರ್ಟ ಹೊರಗೆ ಬರುವಷ್ಟರಲ್ಲಿ, ಅವರೊಳಗಿನ ನಾಲ್ವರನ್ನು ಎರಡನೆ ಸಾರೆ ರಾಜದ್ರೋಹದ ಆರೋಪದ ಮೇಲೆ ಪೋಲೀಸರು ಸೆರೆಹಿಡಿದರು. ‘

ತಾ ೨೦ರಂದು ಮಲಬಾರ ಗುಡ್ಡ ಯ ಗೋಪಿ ಟೆಂಗಿಂಗ ಗಾರ್ಡನದಲ್ಲಿ ಒಂದು ಮ್ಯುನಿಸಿಪಲ್ ದೀಪಸ್ತಂಭಕ್ಕೆ ಕೆಲವರು ರಾಷ್ಟ್ರಧ್ವಜವನ್ನು ಹಚ್ಚಿದರು ನೆರೆದ ಜನರು ರಾಷ್ಟ್ರಗೀತ ಹಾಡಿ ಧ್ವಜವಂದನೆ ಮಾಡಿದರು ಪೋಲೀಸರಿಗೆ ವರದಿ ಸಿಕ್ಕ ಅವರು ಒಂದು ಧ್ವಜವನ್ನು ತೆಗದುಕೊಂಡು ಹೋದರು. ಅಲ್ಲಲ್ಲಿ ಮಾರಾಟವಾಗುತ್ತಿರುವ ವಿದೇಶಿ ವಸ್ತ್ರ ದಂಗಡಿಗಳ ಮುಂದೆ ಕಾವಲು ನಡೆಯುತ್ತಿದೆ ಕರಪತ್ರಗಳು ಹೊರಡುತ್ತಿವೆ ದಿನಾಲು ಕೃಷ್ಣ-ವಿಷ್ಣುಗಳ ಸರ್ಪವು ಒಂದೇ ಸವನೆ ನಡೆದಿದೆ

“ ಹಿಲಾಲ ” ಪತ್ರದ ಸಂಪಾದಕ ಹಮೀದು ಅಲ್ಲಿ ಬಹಾದ್ದೂರ ಖಾನರಿಗೆ ೨೪ ತಾಸುಗಳಲ್ಲಿ ಮುಂಬಯಿ ಬಿಟ್ಟು ತೆರಳಬೇಕಾಗಿ ಪೋಲೀಸ ಕಮಿಶನರರ ಹುಕುಮಾಗಿತ್ತು

ಶ್ರೀ ಬಾಲ ಸಾವರೋಜಿ ಚಿಕಮಗಾ—(ನಮ್ಮ ಕಾನಡಾ ಜಿಲ್ಲೆಯ) ಡಾ| ದಿವೇಕರರಿಗೂ ಕಾಯಿದ ಭಂಗದ ಚಳವಳಿಕ್ಕೆ ಸಹಾಯ ಮಾಡಬಾರದೆಂದು ನೋಟೀಸ ಕೊಟ್ಟು ಬಿಟ್ಟು ಕೊಟ್ಟಿದ್ದಾರೆ

ಗುಜರಾಥದ ಸುದ್ದಿ

ಗುಜರಾಥದಲ್ಲಿ ಅಲ್ಲಲ್ಲಿ ಪರದೇಶಿ ಜವಳಿ ಅಂಗಡಿಗಳ ಮುಂದೆ ಕಾವಲು ನಡಿಯುತ್ತಾ ಇದೆ ವಿಶೇಷತಃ ಮಹಿಳೆಯರೇ ಈ ಕೆಲಸ ಮಾಡುತ್ತಾರೆ

ಲಿಗೆ ಪ್ರಾರಂಭವಾಗಿದೆ ವಿದೇಶಿ ಜವಳಿಯ ಮುದ್ರೆ ಒಂದ ಮಾಲದ ಅಂಗಡಿಕಾರರ ಅಂಗಡಿಯ ಮುಂದೆ ಒಬ್ಬಿಬ್ಬ ಭಗಿನಿಯರು ಉಪವಾಸ ಕೂತುಕೊಳ್ಳುತ್ತಾರೆ ಈ ಅಸ್ತ್ರದ ಪರಿಣಾಮವಾಗಿ ಕೆಲ ವರ್ತಕರು ತಮ್ಮ ಬಳಿಯಿರುವ ವಿದೇಶಿ ಜವಳಿಯನ್ನು ಕಟ್ಟಿಟ್ಟರು ಇಬ್ಬ ಭಗಿನಿಯರಿಗೆ ಡೆ| ಪೋಲೀಸ ಸುಪರಿಂಟೆಂಡಂಟರು ಕರೆದೊಯ್ದು ಕೇಳಲಾಗಿ, ಅವರು ತಾವು ಸ್ವದೇಶಿಯ ಪ್ರಚಾರ ಮಾಡುತ್ತೇವಾಗಿಯೂ, ವಿದೇಶಿ ಜವಳಿಯ ಬಹಿಷ್ಕಾರವನ್ನು ಪುರಸ್ಕರಿಸಲಿಲ್ಲವಾಗಿಯೂ, ತಾವು ಉಪವಾಸ ಮಾಡಿಲ್ಲ, ಶಾಂತತೆಯಿಂದ ಜನರ ಮನವೊಲಿಸುತ್ತೇವೆಂತಲೂ ಚಾತುರ್ಯದ ಉತ್ತರವನ್ನಿತ್ತರು

ದಿನಾಲು ಪಹರ ಮಾಡಿದ ಬಗ್ಗೂ, ಕರಪತ್ರಗಳ ಬಗ್ಗೂ ಅಲ್ಲಲ್ಲಿ ಸೆರೆ ಹಿಡಿಯುವ ಕ್ರಮ ನಡೆದದೆ. ಕೆಲವಡೆಯಲ್ಲಿ ಸರಕಾರಿ ಬ್ಯಾಂಕುಗಳ ಮುಂದೂ ಕೆಲವಡೆ ಟಪಾಲ ಕಚೇರಿಗಳ ಮುಂದೂ ಪಿಕೆಟಿಂಗ ನಡೆದದೆ

ಅಹಮದಾಬಾದ ಮ್ಯುನಿಸಿಪಾಲಿಟಿಯ ಶ್ರೀ| ಮಾವಳಂಕರ ಇವರಿಗೆ ಪ್ರತಿ ಶುಕ್ರವಾರ ಪೋಲೀಸರಲ್ಲಿ ಹಾಜರಿ ಕೊಡಬೇಕೆಂತಲೂ, ಸರಕಾರದ ಮೇಲೆ ತೀಕ್ಷ್ಣ ಟೀಕೆ ಮಾಡಬಾರದೆಂತಲೂ, ಸತ್ಯಾಗ್ರಹದಲ್ಲಿ ಭಾಗಕೊಳ್ಳಬಾರದೆಂತಲೂ ನೋಟೀಸು ಕೊಟ್ಟಿತ್ತು ಈಗ ‘ ಪೆರೋಲ ’ ಯಾನೆ ಹಾಜರಿ ಕೊಡುವ ಹುಕುಮು ರದ್ದಾಗಿದೆ

ಸರ್ವಂಟ್ಸ್ ಆಫ್ ಇಂಡಿಯಾ ಸೊಸಾಯಿಟಿಯ ಸಭಾಸದರಾದ ಸುಪ್ರಸಿದ್ಧ ಶ್ರೀ| ಅಮೃತಲಾಲ ಠಕ್ಕರರವರಿಗೆ ಗೋಧರಾ ತಾಲೂಕನ್ನು ಬಿಟ್ಟು ಹೋಗಬಾರದಾಗಿ ಆದ ಹುಕುಮು ಅದೇ ತಾ. ೨೫ಕ್ಕೆ ಮುಗಿದಿತು ರಿ| ಮೆಜಿಸ್ಟ್ರೇಟರು ಪುನಃ ಅದನ್ನು ರಾಜದ್ರೋಹದ ಅವಧಿಯ ತನಕ ಬೆಳೆಸಿದ್ದಾರೆ ಗೋಧರೆಯೊಳಗಿನ ಕೆಲ ಯುವಕರು ವಿನೋದಕ್ಕಾಗಿ ಒಂದು ಸಣ್ಣ ಕೊಂಗ್ರೆಸ ಮಂದಿರವನ್ನು ನಿರ್ಮಿಸಿದ್ದರು ಆ ಮಂದಿರದೊಳಗೆ ಮಹಾತ್ಮರ ಚಿತ್ರವನ್ನೂ, ಕೆಲವು ಕೊಂಗ್ರೆಸ ಕರಪತ್ರಗಳನ್ನೂ ಇಟ್ಟಿದ್ದರು. ಹುಡುಗರ ಈ ಆಟವನ್ನು ನೋಡಲಿಕ್ಕೆ ಜನರು ಗುಂಪುಗುಂಪಾಗಿ ಬರುತ್ತಿದ್ದರು. ಪೋಲೀಸರು ಬಂದು ಮಂದಿರವನ್ನು ಕಿತ್ತು ತೆಗೆದು ಎಲ್ಲ ಸಾಮಾನನ್ನು ಜಪ್ತ ಮಾಡಿ ಒಯ್ದರು !

ಪುದಾಸ್ಮರು ಸಾಕುಮಗಳಂತೆ ಸಲಹಿದ ಅಸ್ಪೃಶ್ಯ ಜಾತಿಯ ಲಕ್ಷ್ಮೀ ಇವಳು ಇನ್ನೂ ಕೆಲವು ಮಹಿಳೆಯರೊಡನೆ ಜಲಾಲಪುರ ತಾಲೂಕಿನಲ್ಲಿ ಕೊಂಗ್ರೆಸ ಪ್ರಚಾರದ ಬಗ್ಗೆ ಹೋಗಿದ್ದಳು ಅವಳಿಗೆ ಸೆರೆಹಿಡಿದ ವಾರ್ತೆ ಬಂದಿದೆ ಗುಜರಾಥ ವಿದ್ಯಾಪೀಠದ ರೂ ೧೯೦ ತೀರ್ವೆ ವಸೂಲಿಯ ಬಗ್ಗೆ ಜಪ್ತ ಮಾಡಿದ ವಸ್ತುಗಳು ಲಿಲಾಂವಾಗಿ ಅವನ್ನು ಇಬ್ಬ ಮುಸಲ್ಮಾನರು ರೂ ೧೬೦ಕ್ಕೆ ಕೊಂಡರು

ಸೂರತ ಜಿಲ್ಲೆಯಲ್ಲಿ ಪ್ರಚಾರಕ್ಕಾಗಿ ಹೋದಾಗ ಸೌ| ಕಸ್ತೂರಬಾಯಿ ಗಾಂಧಿಯವರಿಗೆ ಸೆರೆಹಿಡಿದು ೬ ತಿಂಗಳ ಶಿಕ್ಷೆಯಾಗಿತ್ತು. ಶಿಕ್ಷೆ ವಿಧಿಸಿದ ಮಾಜಿಸ್ಟ್ರೇಟರು ಸೌ|ಯವರಿಗೆ (ಕ) ವರ್ಗದಲ್ಲಿ ಸೇರಿಸಿದ್ದರು ಈ ಬಗ್ಗೆ ವೃತ್ತಪತ್ರಗಳಲ್ಲಿ ಕೋಲಾಹಲವೆದ್ದುದು| ಮೆಜಿಸ್ಟ್ರೇಟರು ಕೂಡಲೆ ಅವರಿಗೆ (ಖ) ವರ್ಗದಲ್ಲಿ ಸೇರಿಸಿಕೊಳ್ಳುವಂತೆ ತಂತಿಯಿಂದ ಹುಕುಮು ಕೊಟ್ಟರು.

ಅಹಮ್ಮದಾಬಾದದ ಸ್ವದೇಶೀ ಸಭೆಯೂ, ಬಟಿಗಿರಣಿಗಳನ್ನು ದೇಶಿ ಎಂದು ಶಿಫಾರಸ ಮಾಡುವ ಮಂಡಳವೂ ಬೇಕಾಯದೇಶೀರ ಸಂಸ್ಥೆಗಳಾಗಿವೆ ಸ್ವದೇಶೀ ಸಭೆಯ ಹೆಸರಲ್ಲಿ ಬೆಂಕಿನಲ್ಲಿದ್ದ ರೂ ೫೫ ಸಾವಿರ ನಿಧಿಯೂ ಸರಕಾರ ಜಪ್ತಾ ಆಗಿದೆ

ಖೇಡಾ ಜಿಲ್ಲೆಯಿಂದ ತಾ ೧೩ರ ತನಕ ೩೩ ಜನರು ಸೆರೆಯಾಗಿದ್ದಾರೆ.

ಪಿಕೆಟಿಂಗ ಮಾಡುವ ಸ್ವಯಂಸೇವಕರಿಗ ಊಟದ ವ್ಯವಸ್ಥೆ ಮಾಡಿದ ಬಗ್ಗ ಅಹಮದಾಬಾದದ ಒಬ್ಬ ರೇಶಿಮೆ ಬಟ್ಟೆ ವ್ಯಾಪಾರಿಗೇಗೆ ೬ ತಿಂಗಳ ಶಿಕ್ಷೆ, ರೂ ೫೦೦ ದಂಡ ವಿಧಿಸಲ್ಪಟ್ಟಿದೆ ಪಿಕೇಟಿಂಗ ಮಾಡಿದ ಬಗ್ಗೆ ಗುಜರಾಥ ಕಾಲೇಜಿನ ಒಬ್ಬ ವಿದ್ಯಾರ್ಥಿಗ ರೂ ೩೦೦ ದಂಡವಾಗಿದೆ ಮಹಾತ್ಮರ ಮೊಮ್ಮಗನಾದ ಶ್ರೀ| ಕಾಂತಿ ಗಾಂಧಿಗ ೬ ತಿಂಗಳ ಶಿಕ್ಷೆ

ದೋಹದದ ೧೫ನೇ ಸರ್ವಾಧಿಕಾರಿಯು ಒಂದು ಕೊಂಗ್ರೆಸ ಕಚೇರಿಯನ್ನು ತೆರದು ಫೌಜದಾರರಿಗೆ ಹಿಡಿದು ತರಲಿಕ್ಕೆ ಒಂದು ವಾರಂಟು ಕೊಟ್ಟನು! ಆವನಿಗ ೨ ವರ್ಷಗಳ ಶಿಕ್ಷೆ, ರೂ. ೨೫ ದಂಡ ವಿಧಿಸಿದೆ.

ಶ್ರೀ| ಅಬ್ಬಾಸ ತಯ್ಯಬಜಿಯವರಿಗೆ ಖೇಡಾ ಜಿಲ್ಲೆ ಪ್ರವೇಶಿಸದಂತೆಯೂ, ಸತ್ಯಾಗ್ರಹ ಕಾರ್ಯಕ್ಕೆ ನೆರವಾಗದಂತೆಯೂ ನೋಟೀಸು ಕೊಟ್ಟು ಬಿಟ್ಟಿದ್ದಾರೆ ಬಡೋದೆಯ ಸರಕಾರದಿಂದ ಅವರ ಪೆನ್ಶನ ಕಟ್ಟಾಗಿದೆ ಶ್ರೀ| ತಯ್ಯಬಜಿಯವರು ಬಡೋದಾ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿ ಪೆನ್ಶನ ಪಡೆದಿದ್ದರು.

ಸಿಂಧ ಪ್ರಾಂತದ ಸುದ್ದಿ.

ಮಾರ್ಚ ೨ನೇ ತಾರೀಖಿನ ತನಕ ಕರಾಚಿಯಿಂದ ಸೆರೆಬಿದ್ದವರು ೧೬೬ ಮಂದಿ ಮಹಿಳೆಯರ್ ೫೫ ಮಂದಿ.

ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಮುಖ್ಯ ಕಾರ್ಯದರ್ಶಿ ಶ್ರೀ| ಜಯರಾಮದಾಸ ದೌಲತರಾಮರವರಿಗ ಸರಕಾರ ಹುಕುಮು ಕೊಟ್ಟುಬಿಟ್ಟಿದ್ದರು, ಅದನ್ನು ಪಾಲಿಸದ ಬಗ್ಗ ಅವರಿಗ ೯ ತಿಂಗಳ ಶಿಕ್ಷೆ, ರೂ ೧೦೦೦ ದಂಡ

'ಹಿಂದು' ಪತ್ರಿಕೆಯ ಸಂಪಾದಕರಾದ ಶ್ರೀ| ಹಾಸಸಿಂಗರವರಿಗೂ ಮತ್ತು ಶ್ರೀ| ಕಾಕಾ ವಸನಮಲ್ಲರವರಿಗೂ ೧—೧ ವರ್ಷದ ಶಿಕ್ಷೆಯಾಗಿತ್ತು ಜೈಲಿನಲ್ಲಿ ಅವರು ಕೈದಖಾನೆಯ ನಿಯಮಗಳ ವಿರುದ್ಧ ಗುಪ್ತವಾಗಿ ಚೀಟಿಗಳನ್ನು ಬರೆದು ಕಳಿಸಿದ ಆಪಾದನೆಯ ಮೇಲೆ ಅವರಿಗೆ ಪುನಃ ೧–೧ ವರ್ಷದ ಶಿಕ್ಷೆ ವಿಧಿಸಲಾಗಿದ

ತಾ ೧೪ನೇಯಿಂದ ಕರಾಚಿಯಲ್ಲಿ ಒಂದು ಹೊಸ ತರದ ಸತ್ಯಾಗ್ರಹಕ್ಕೆ ಪ್ರಾರಂಭವಾಗಿದೆ. ಸ್ವಾಮಿ ಕೃಷ್ಣಾನಂದರವರು ಜಜ ಕೋರ್ಟಿಯ ಸಮೀಪ ನಡುಮಾರ್ಗದಲ್ಲಿ ಗೀತೆಯನ್ನ ಓದುತ್ತ ಕೂತುಕೊಂಡರು ಜನರು ನೆರೆದರು, ರಹದಾರಿಯು ಕಟ್ಟಾಯಿತು ಪೋಲೀಸರು ಬಂದು ಸ್ವಾಮಿಜಿಯವರಿಗ ಸೆರೆಹಿಡಿದೊಯ್ದರು ಕೂಡಲೆ, ಇನ್ನೊಬ್ಬ ಸ್ವಯಂಸೇವಕನು ಅದೇ ಸ್ಥಳದಲ್ಲಿ ಕೂತು ಗೀತೆಯನ್ನೋದತೊಡಗಿದನು. ಅವನಿಗೂ ಸೆರೆಯಾಯಿತು.

'ಸಿಂಧ ಹರೊಲ್ಡ' ಪತ್ರಿಕೆಯ ಶ್ರೀ| ಜೆಠಮಲ್ಲ ಪರಶರಾಮ ಇವರಿಗೆ ೧೮ ತಿಂಗಳ ಕಠಿಣ ಶಿಕ್ಷೆ ಮತ್ತು ರೂ ೧೦೦೦ ದಂಡವಾಗಿದೆ

ಕರಾಚಿಯ ಗೋವರ್ಧನದಾಸ ಮಾರ್ಕೆಟಿನಲ್ಲಿ ವಿದೇಶಿ ಬಟ್ಟೆಯ ಕಾವಲು ನಡೆದಿದೆ ಕಾವಲುಗಾರರಿಗೆ ಸೆರೆಯಾಗುತ್ತಲೂ ಇದೆ ಈ ಕುರಿತು ತಾ ೧೭ನೇಗೆ ಮಾರ್ಕೆಟು ಮುಚ್ಚಿತು ಅಂದಿನಿಂದ ಕೆಲ ವರ್ತಕರು ತಾವು ೩ ವಾರಗಳ ತನಕ ಹರತಾಳ ಆಚರಿಸುವವೆಂದ್ದೇವಾಗಿ ನುಡಿಯುತ್ತಿದ್ದರು.

ಪಂಜಾಬದ ಸುದ್ದಿ

ಲಾಹೋರದಲ್ಲಿ ವಿದೇಶಿ ಜವಳಿ ಅಂಗಡಿಗಳ ಮುಂದ ಕಾವಲು ನಡೆದಿದೆ ಆ ಬಗ್ಗೆ ತಾ ೧೫ನೇಗೆ ೧೧ ಜನರಿಗೂ, ಮರುದಿನ ೫ ಜನರಿಗೂ ಸೆರೆಯಾಯಿತು ತಾ ೨೩ಕ್ಕೆ ಭಗತಸಿಂಗ ಮೊದಲಾದವರಿಗೆ ಗಲ್ಲಿಗೇರಿಸಿದ ದಿನ! ಆ ದಿನದ ಆಚರಣೆಯ ಕಾರ್ಯಕ್ರಮವನ್ನೊಳಗೊಂಡ ಪ್ರಕಟಣೆಯನ್ನು ಗೋಡೆಗ ಅಂಟಿಸಿದ ಬಗ್ಗೆ ವಿದ್ಯಾರ್ಥಿ ಸಂಘದ ಅಧ್ಯಕ್ಷರಿಗೂ, ಕಾರ್ಯದರ್ಶಿಗಳಿಗೂ ಸೆರೆಹಿಡಿದರು 'ಭಗತಸಿಂಗ ದಿನ'ದ ಉದ್ದಿಷ್ಟ ಸಭೆಸೇರಿಸಲೆತ್ನಿಸಿದ ಮೂವರು ಸ್ವಯಂಸೇವಕರಿಗ ಶಿಕ್ಷೆಯಾಯಿತು

ಪೋಲಿಯಸ್ ಕಮಿಟಿಯು ಒಂದು ಗೊಂಬೆಯನ್ನು ಮಾಡಿ ಅದಕ್ಕೆ ಅಂತ್ಯ ಸಂಸ್ಕಾರ ಕೊಡುವ ಆಟವಾಡಿದ ಬಗ್ಗೆ ಇಬ್ಬರಿಗೆ ಹಿಡಿದಿರುವರು.

ಪಂಜಾಬದ ಮುಂದಾಳುಗಳಾದ ಡಾ| ಗೋಪಿಚಂದ, ಡಾ| ಸತ್ಯಪಾಲ ಮತ್ತು ಸರದಾರ ಮಂಗಲಸಿಂಗ ಇವರಿಗ ೧–೧ ವರ್ಷದ ಶಿಕ್ಷೆ ಮತ್ತು ೧೦೦-೧೦೦ ರೂ. ದಂಡವಾಯಿತು. ಡಾ| ಸತ್ಯಪಾಲರ ಮೇಲೆ ರಾಜದ್ರೋಹದ ಬಗ್ಗೆ ಇನ್ನೊಂದು ಖಟ್ಲೆ ನಡದು ೨ ವರ್ಷಗಳ ಶಿಕ್ಷೆ ೧೦೦ ರೂ ದಂಡ ವಿಧಿಸಲಾಗಿದೆ

ಲಾಹೋರದಲ್ಲಿ ಕಳೆದ ವಾರದೊಳಗೆ ಅಖಿಲ ಭಾರತೀಯ ಮುಸಲ್ಮಾನ ಪರಿಷತ್ತು ಸೇರಿತ್ತು. ಪರಿಷತ್ತಿನ ಅಧ್ಯಕ್ಷ ಸರ್ ಮಹಮ್ಮದ ಇಕಬಾಲ ಇವರು ತಮ್ಮ ಭಾಷಣದಲ್ಲಿ ಗಡಿನಾಡಿನಲ್ಲಿ ನಡೆದಿರುವ ದಬ್ಬಾಳಿಕೆಯ ನಿಷೇಧ ಮಾಡಿದರು ಮತ್ತು ರಾಜಶಾಸನಗಳನ್ನು ರದ್ದ ಪಡಿಸಬೇಕಾಗಿ ಆಗ್ರಹದ ಸೂಚನೆ ಮಾಡಿರುವರು ಸರ್ ಮಹಮ್ಮದರವರು ಸರಕಾರದ ಮಿತ್ರವರ್ಗದಲ್ಲೊಬ್ಬರು.

ದಿಲ್ಲಿಯ ಸುದ್ದಿ

ದಿಲ್ಲಿಯಲ್ಲಿ ಮುಸಲ್ಮಾನ ಬಾಂಧವರು ಸರಾಯಿ ಅಂಗಡಿಯ ಮುಂದೆ ಕಾವಲು ಮಾಡಲು ಪ್ರಾರಂಭಿಸಿದ್ದಾರೆ. ತಾ ೧೮ಕ್ಕೆ ಮಸೀದಿಯೊಳಗಿನ ಪ್ರಾರ್ಥನೆ ಮುಗಿಸಿ ಕಾವಲಿಗೆ ನಡೆದರು ಇಬ್ಬರಿಗ ಸೆರೆಯಾಯಿತು ಕೂಡಲೆ ಜನಸಮುದಾಯದಲ್ಲಿ ಗೊಂದಲವೆದ್ದು ಒಂದೆರಡು ಅಂಗಡಿಗಳಲ್ಲಿ ಲೂಟಿಯಾಯಿತು. ಆದರೆ ಈ ಪ್ರಕರಣ ವಿಶೇಷ ಬೆಳೆಯದೆ ಅಷ್ಟರಲ್ಲೇ ಶಾಂತವಾಯಿತು

ಅಜಮಿರ–ಮೇವಾಡ ಕಡೆಗಳಿಂದ ಸತ್ಯಾಗ್ರಹದಲ್ಲಿ ಸೇರಿ ತಾ ೨೩ವರೆಗೆ ಸೆರೆಬಿದ್ದವರ ಸಂಖ್ಯೆ ೨೦೦ಕ್ಕೆ ಮಿಕ್ಕಿದೆ

ಸಂಯುಕ್ತಪ್ರಾಂತದ ಸುದ್ದಿ.

ಸಂಯುಕ್ತ ಪ್ರಾಂತದಲ್ಲಿ ತಾ ೨೦ನೇ ತನಕ ಸೆರೆಯಾದವರ ೭೩೭೩ ಮಂದಿಗಳು

ಕಾನಪುರದೊಳಗೆ ಕೊಂಗ್ರೆಸಿನವರು ವಿದೇಶಿ ಜವಳಿಯ ವ್ಯಾಪಾರ ಪೂರ್ಣ ನಿಲ್ಲಿಸುವ ನಿರ್ಧಾರ ಮಾಡಿರುವರಂತೆ ಆ ಬಗ್ಗೆ ವರ್ತಕರಿಗೆ ಇಶಾರತು ಕೊಡೋಣಾಗಿದೆ. ಇದರಿಂದ ವರ್ತಕರಲ್ಲಿ ಗಡಿಬಿಡಿಯುಂಟಾಗಿದೆ ಕೆಲವರು ಕೊಂಗ್ರೆಸಿಗೆ ಶರಣಾಗತರಾಗುವ ವಿಚಾರದಲ್ಲಿದ್ದರೆ, ಇನ್ನು ಕೆಲವರು ವಿದೇಶಿ ಜವಳಿ ಮಾರುವ ಹಟ ತೊಟ್ಟಿದ್ದಾರೆ.

ತಾ ೧೯ನೇಗೆ ಒಬ್ಬ ಸ್ವಯಂಸೇವಕನು ಪಿಕೆಟಿಂಗದ ಕಾರ್ಯಕ್ರಮವನ್ನು ಪ್ರಕಟಿಸುತ್ತ ಬೀದಿಯಲ್ಲಿ ನಡೆದನು. ಪ್ರಕಟಣೆಯ ನಮೂನೆಯು ಕೇಳುವಂತಾದ್ದಿದೆ. ಮೈಮೇಲೆ ೩ ಬಣ್ಣಗಳ ಪೋಷಾಕು ಧರಿಸಿದ್ದನು, ತೊಟ್ಟ ಅಂಗಿಯ ಮೇಲೆಯೇ ಜಾಹೀರ ಮಾಡತಕ್ಕ ಕಾರ್ಯಕ್ರಮ ಬರೆದದ್ದಿತ್ತು. ಸ್ವಯಂಸೇವಕನು ಬಾಯೊಡೆಯುವ ಪ್ರಸಂಗವೇ ಇಲ್ಲ! ಈ ವಿಚಿತ್ರ ವೇಷವನ್ನು ನೋಡಲಿಕ್ಕೆ ಜನರು ನೆರೆಯಲಾಗಿ ಕಾರ್ಯಕ್ರಮವು ತಾನಾಗಿ ಪ್ರಕಟವಾಗುತ್ತದೆ! ಈ ಸ್ವಯಂಸೇವಕನಿಗೆ ಸೆರೆಹಿಡಿದರು.

ಕಾನಪುರದಲ್ಲಿ ತಾ ೨೩ನೇಗೆ ಹೋಳಿ ಹಬ್ಬದ ನಿಮಿತ್ತ ಹಿಂದು-ಮುಸಲ್ಮಾನರಲ್ಲಿ ಕಲಹವಾಗುತ್ತದೆಂದು ಭೀತಿಯುಂಟಾಯಿತು ಮೆಜಿಸ್ಟ್ರೇಟರು ಕ್ರಿ ಪ್ರೊ ಕೋಡ ಕಲಂ ೧೪೪ರನ್ವಯ ಮೆರವಣಿಗೆಗಳಿಗೂ, ಸಭೆಗಳಿಗೂ ಬಂದಿ ಮಾಡಿದರು. ೧೪ ಜನರಿಗೆ ೨೪ ತಾಸುಗಳಲ್ಲಿ ಕಾನಪುರ ಶಹರ ಬಿಟ್ಟು ಹೋಗಬೇಕಾಗಿ ಹುಕುಮಾಯಿತು ೮೪ ಪುಂಡರಿಗೆ ಸೆರೆಯಾಯಿತು.

ಈ ಪ್ರಾಂತಿಕ ಕಾಯಿದೆ ಕೌನ್ಸಿಲಿನ ಪುಸ್ತಕಾಲಯದ ವ್ಯವಸ್ಥಾಪಕ ಶ್ರೀ| ಶಿಂಕರರವರು ದಬ್ಬಾಳಿಕೆಯ ನಿಷೇಧವೆಂದು ತಮ್ಮ ಜಾಗೆಗೆ ರಾಜಿನಾಮೆ ಕೊಟ್ಟು, ಚಳವಳಿಯಲ್ಲಿ ಸೇರಿ ಕೊಂಗ್ರೆಸ ಕರಪತ್ರವನ್ನು ಹೊರಡಿಸುತ್ತಿದ್ದರು. ಅವರಿಗೆ ಸೆರೆಹಿಡಿದು ೬ ತಿಂಗಳ ಶಿಕ್ಷೆ, ೧೦೦ ರೂ. ದಂಡ ವಿಧಿಸಿರುವರು

ಬಂಗಾಲದ ಸುದ್ದಿ.

ಬಂಗಾಲದಲ್ಲಿ ಕಲಕತ್ತೆಯಲ್ಲೂ, ಜಿಲ್ಲೆಗಳಲ್ಲೂ ಕಾವಲು ನಡಿಸಿದ ಬಗ್ಗೆ ಹಾಗು ಮೆರವಣಿಗೆಗಳನ್ನು ಹೊರಡಿಸಿದ ಬಗ್ಗೆ ದಿನಾ ಸೆರೆಹಿಡಿಯುವ ಕ್ರಮ ನಡೆದಿದೆ ಶಿಕ್ಷೆಗಳು ಆಗುತ್ತಿವೆ. ಹೌರಾದೊಳಗೆ ತಾ. ೧೬ನೇಗೆ ೫೦ ವಿದ್ಯಾರ್ಥಿಗಳಿಗೆ ಸೆರೆಹಿಡಿದರು ೮ ಸ್ವಯಂಸೇವಕರಿಗೆ ೪ರಿಂದ ೬ ತಿಂಗಳ ತನಕ ಮತ್ತು ನಾಲ್ವರಿಗೆ ೬–೬ ತಿಂಗಳ ಶಿಕ್ಷೆ ವಿಧಿಸಲಾಯಿತು. ಅದೇ ದಿನ ಮುನಶಿಗಂಜದಲ್ಲಿ ಮೆರವಣಿಗೆ ತೆಗೆದ ಬಗ್ಗೆ ೧೧ ಮಹಿಳೆಯರಿಗೂ, ನಾಲ್ವ ಗಂಡಸರಿಗೂ ಸೆರೆ! ತಾ ೧೭ನೇಗೆ ಬಂಕರಾಲ ಕೋರ್ಟಿನಲ್ಲಿ ೧೩ ಜನರ ಮೇಲೆ ಖಟ್ಲೆ ನಡೆಯಿತು ೭ ಜನರು ಮಾಫಿ ಬೇಡಿದರು ಬಾಕಿ ೬ ಜನರಿಗೆ ಮೆರವಣಿಗೆಯಲ್ಲಿ ಸೇರಿದ ಬಗ್ಗೆ ೨ರಿಂದ ೯ ತಿಂಗಳ ತನಕ ಶಿಕ್ಷೆ ಜೋರಾಬಗಾನದಲ್ಲಿ ಅದೇ–ಅಪರಾಧದ ಬಗ್ಗೆ ೧೫ ಜನರಿಗೆ ೪ರಿಂದ ೯ ತಿಂಗಳ ತನಕ ಶಿಕ್ಷೆ. ತಾ. ೨೧ ಕಲಕತ್ತೆಯಲ್ಲಿ ೮ ಜನರಿಗೆ ೬–೬ ತಿಂಗಳ ಶಿಕ್ಷೆ ಹೌರಾದೊಳಗೆ ಅನೇಕರಿಗೆ ೩–೩ ತಿಂಗಳ ಶಿಕ್ಷೆ

ಬಂಗಾಲದಲ್ಲಿ ಇನ್ನೂ ಅನೇಕ ಸಂಸ್ಥೆಗಳು ಬೇಕಾಯಿದೆ ಠರಾಯಿಸಲ್ಪಡುತ್ತಿವೆ. ಈತನಕ ಬೇಕಾಯಿದೆ ಆದ ಸಂಸ್ಥೆಗಳ ಸಂಖ್ಯೆ ೫೭೭ ಆಯಿತು.

(೯ನೇ ಪಾನಿನಮೇಲೆ ಮುಂದರಿಸಿದೆ)

ಸ್ಥಾನಿಕ ವೃತ್ತಾಂತ.

ಕುಮಟಾ— ಇವೆಯು ಸಮೀಕ್ಷೋಪ್ಯವದ ಮೂಲಿಂದ ಮೇಲೆ ಮೋಡಗಳಾಗುತ್ತಿವೆ ಥಳಫಳನ್ನುವಿಗೆ ಗ ಬೀಸಿ. ಕಳೆದ ಸೋಮವಾರ ಗೋಕರ್ಣ, ಇನಾಲು ಬದಿಗೆ ಸ್ವಲ್ಪ ಮಳೆ ಹನಿಸಿತೆಂದು ತಿಳಿಯುತ್ತದೆ.

ಅಘೆಯ ರಾ। ರಾಮನಾಥ ಲಕ್ಷ್ಮಯ್ಯ ವ್ಯಾನಭಾಗರು ಏನೊಂದು ಖಾಸಗಿ ಕೆಲಸದ ಸಲುವಾಗಿ ಅಂಕೋಲೆಗೆ ಹೋಗಿದ್ದರಂತೆ. ಮಂಗಳವಾರ ದಿನ ಗ್ರಹಣ ಕಾಲಕ್ಕೆ ಗೋಕರ್ಣಕ್ಕೆ ಹೋಗಬೇಕೆಂದು ಅಂಕೋಲೆಯಿಂದ ಹಿಚಕಡ ಮಾರ್ಗವಾಗಿ ಬರುತ್ತಿದ್ದರು. ಹಿಚಕಡದಲ್ಲಿ ಅವರಿಗೆ ಪೋಲೀಸರು ಕೈದು ಮಾಡಿದರು! ಇವರೇ ಶ್ರೀಧರ ಬಳಗಿರು ಇರಬೇಕೆಂದು ತಿಳಿದು ಕೈದು ಮಾಡಿ ಅಂಕೋಲೆಗೆ ಒಯ್ದರು! ಅಲ್ಲಿ ಫೌಜದಾರರು ಇವರು ಬಳಗಿರು ಅಲ್ಲವೆಂದು ಎರಾಲಿ ಮಾಡಿ, ಇಬ್ಬ ಪೋಲೀಸರ ಸಂಗಡ ಶ್ರೀ ರಾಮನಾಥ ಭಾನಭಾಗರಿಗೆ ಗಂಗಾವರೆ ತಾನಿಯ ಹತ್ತರ ಕ್ಯಾಮು ಘಂಟೆ ಒಕ್ಕೆ ಬಿಟ್ಟು ಕೊಟ್ಟರು.

ಬುಧವಾರ ದಿನ ಮುಂಜಾವಿಗೆ ಗೋಕರ್ಣದಲ್ಲಿಯೂ, ಬಂಕಿಕೊಡ್ಲದಲ್ಲಿಯೂ ಬೆಟ್ಟಗಡ್ಡಿ! ಅಂಕೋಲೆಯಿಂದಲೂ, ಕುಮಟೆಯಿಂದಲೂ ಪೋಲೀಸ ಪಾರ್ಟಿಗಳು ಬಂದಿದ್ದವು. ಶ್ರೀ ಕರಮರಕರರ ಸಂಬಂಧವಿದ್ದ ಅದಾ ಅವರ ಕೈ—ಬರಹದ ಕಾಗದ-ಪತ್ರ, ಲೆಕ್ಕ ಪತ್ರ ಏನಾದರೂ ಏನ್ನಾದರೂ ಸಿಗುತ್ತದೋ ಎಂತ ನೋಡಲಿಕ್ಕೆ ಬಂದಿದ್ದವರು ತಿಳಿಯುತ್ತದೆ. ಗೋಕರ್ಣದಲ್ಲಿ ಹಿಂದೆ [illegible] ಶ್ರೀ [illegible] ಪೇಟೆಯ ದಲ್ಲಿ, ಪರಕೂರರ ಮನೆಗಳಲ್ಲಿ ಝಡತಿ ಮಾಡಿತು. ಪೋಲೀಸರಿಗೆ ಬೇಕಾದದ್ದು ಏನೂ ಸಿಗಲಿಲ್ಲ. ಬಂಕಿಕೊಡ್ಲದ ರಾ। ಪರಮ ಕಾಂತ ಭಟ್ಟ, ಸರ್ವೋತ್ತಮ [illegible] ಕಾಮತ ಮತ್ತು ಗೋಕರ್ಣದ ಸಾತ್ವಿಕ ಮನೆಗಳಲ್ಲಿಯೂ ಮಾಡಿದರು ರಾ। ಬೀರಣ್ಣ ನಾಯ್ಕರ ಶೋಧ ಮಾಡಲಾಗಿದೆ. ಪೋಲೀಸರಿಗೆ ಏನೂ ಸಿಗಲಿಲ್ಲ ಸದ್ರಿಯುದಂಗೆ, ರಾ। ದಯಾನಂದ ಸರ್ವೋತ್ತಮ ಸಾತ್ವಿಕರಿಗೆ ಕೈದು ಮಾಡಿ ಗೋಕರ್ಣಕ್ಕೆ, ಗೋಕರ್ಣದಿಂದ ಅಂಕೋಲೆಗೂ ಒಯ್ದರು ಅಲ್ಲಿ ಅವರ ಜಬಾನಿಗಳನ್ನು ತೆಗೆದರಂತೆ. ಈ ಎರಡು-ಮೂರು ತಿಂಗಳಲ್ಲಿ ಶ್ರೀ ಕರಮರಕರರನ್ನು ನೋಡಿದ್ದು ಇಲ್ಲವಾಗಿ ಅವರು ಹೇಳಿದರು. ಆ ಮೇಲೆ ಅವರನ್ನು ಸಾಯಂಕಾಲಕ್ಕೆ ಮೋಟಾರ ಮೇಲೆ ಗೋಕರ್ಣದಲ್ಲಿ ತಂದು ಬಿಟ್ಟರು.

ರಾ। ಶ್ರೀಧರ ಮಾಂಜರಂಗ ಬಳಗಿ ಇವರ ಪತ್ತೆ ಪೋಲೀಸರಿಗೆ ಇನ್ನೂ ಸಿಗಲಿಲ್ಲ. ಬಳಗಿರು ಪರೋಲು ಮುಕ್ತದನ್ನು ಉಲ್ಲಂಘಿಸಿ ಎಸ್ಕೇಪ್ ಆದ್ದರಿಂದ ಕಲಂ ೨೧೦ ರಂತೆ ಗುನ್ಹೆ ಮಾಡಿರುತ್ತಾರೆಂದು ಅವರಿಗೆ ವಾರಂಟು ಕೊಟ್ಟಿತ್ತು. ವಾರಂಟು ಜಾರಿಯಾಗದೇ ತಿರುಗಿ ಬಂದಿತು. ಆದ್ದರಿಂದ ಕ್ರಿ. ಪ್ರೊ. ಕೋಡ ಕಲಂ ೮೭ನ್ನೂ ನಡಿ ಬಳಗಿರು ತಾ ೯-೫-೧೯೩೨ಕ್ಕೆ ತಮ್ಮ ಮುಂದೆ ಹಾಜರಾಗಬೇಕೆಂದು ಕುಮಟೆಯ ೧ನೇ ವರ್ಗದ ಸ್ಪೆಶಲ್ ಮ್ಯಾಜಿಸ್ಟ್ರೇಟರು ಜಾಹೀರನಾಮೆಯನ್ನು ಹೊರಡಿಸಿದ್ದಾರೆ.

ಶಿರಸಿ— ಶ್ರೀ ಹೊನ್ನಯ್ಯನವರಿಗೆ ೧ ವರ್ಷದ ಕಠಿಣ ಸಜೆ ಮತ್ತು ರೂ ೧೦೦ ದಂಡ, ದಂಡ ಕೊಡದಿದ್ದರೆ ಮೇಲೆ ೩ ತಿಂಗಳ ಸಜೆ ಹೀಗೆ ಶಿಕ್ಷೆಯಾಯಿತು.

ರಾ। ಶ್ರೀಧರ ಲಕ್ಷ್ಮಣ ಶೇಟ ಇವರಿಗೂ ಪರೋಲು ನೋಟಿಸು ಬಂದಿತ್ತು. ಅದನ್ನು ಅವರು ಮಾನ್ಯ ಮಾಡಿದ್ದಿಲ್ಲ. ಆದರೆ ಅವರು ಬೇರೆ ಬಿಟ್ಟದರಿಂದ ಇಷ್ಟು ದಿವಸ ಖಟ್ಲೆ ಮಾಡಿದ್ದಿಲ್ಲ. ಕಳೆದ ವಾರದಲ್ಲಿ ಒಟ್ಟು ಸಿಬಂದಿಯಾಗಿ ಅವರಿಗೆ ೬ ತಿಂಗಳ ಶಿಕ್ಷೆ ರೂ ೫೦ ದಂಡ, ದಂಡ ಕೊಡದಿದ್ದರೆ, ೧ ತಿಂಗಳ ಶಿಕ್ಷೆ ವಿಧಿಸಿಯದೆ.

ಶ್ರೀ ತಿಮ್ಮಪ್ಪ ಶ್ರೀನಿವಾಸ ನಾಯ್ಕರು ತಾ ೧೧ಕ್ಕೆ ಕಾರವಾರದಿಂದ ಪರೋಲು ನೋಟೀಸ ಮೇಲೆ ಬಿಡುಗಡೆಯಾದವರು ಕಳೆದ ಶುಕ್ರವಾರ ತನಕ ಠಾಣೆಗೆ ಬಂದಿದ್ದಿಲ್ಲ ಇಂದಿಯು ಮಾತ್ರ ಕಾಣೆಯಾದರು! ಪೋಲೀಸರು ವಿಶೇಷ ಪ್ರಯತ್ನ ಮಾಡಿದರೂ ಸಿಗಲಿಲ್ಲ! ಶುಕ್ರವಾರಕ್ಕೆ ಅವರಾಗಿಯೇ ಪ್ರಕಟವಾಗಿ ನಡುಪೇಟೆಯಲ್ಲಿ ಪೋಲೀಸರ ಕೈವಶರಾದರು. ಕಾರವಾರದಿಂದ ಬಂದವರು ನೆಟ್ಟಗೆ ಹಳ್ಳಿಗಳಲ್ಲಿ ಸೇರಿ ಅಲ್ಲಲ್ಲಿ ಪ್ರಚಾರ ಕಾರ್ಯ ನಡಿಸುತ್ತಿದ್ದರೆಂದು ತಿಳಿಯುತ್ತದೆ.

ತಾ. ೨೩ಕ್ಕೆ ಬಿಸಲಕೊಪ್ಪ ಕೇಂದ್ರದಲ್ಲಿ ಜಂಗಲ ಸತ್ಯಾಗ್ರಹವಾಯಿತು ಹೆಂಗಸರೂ, ಗಂಡಸರೂ, ಹುಡುಗರೂ ಕೂಡಿ ೩೦ ೪೦ ಮಂದಿ ಸತ್ಯಾಗ್ರಹದಲ್ಲಿ ಸೇರಿದ್ದರು. ಕಾಯಿದೆ ಮುರಿದು ತಂದ ಕಟ್ಟಿಗೆಯು ಲಿಲಾಂವಾಯಿತು.

ರಾ। ರಾಮಚಂದ್ರ ಕೃಷ್ಣ ಭಟ್ಟ ಇವರಿಗೆ ರೂ. ೫೦ ದಂಡವಾಗಿತ್ತು, ೫-೬ ಪೋಲೀಸರು ಕೂಡಿ ಸದ್ರಿಯವರ ಅಣ್ಣ ರಾ। ಭಟ್ಟರ ಕಡೆಯಿಂದ ದಂಡ ವಸೂಲ ಮಾಡಿದರಂತೆ

ಸಿದ್ದಾಪುರ— ತಾ ೧೮ಕ್ಕೆ ಇಟಗಿ ಬಸ್ತಿಯ ಮೇಲೆ ಇಬ್ಬ ಹುಡುಗರನ್ನು ಸ್ವಯಂಸೇವಕರಿರಬಹುದೆಂದು ಕೈದು ಮಾಡಿ ಕಳಿಸಿದ್ದಾರೆ ಒಬ್ಬ ಲಿಂಗಾಯತ ಅಯ್ಯನಿಗೂ ಕೈದು ಮಾಡಿದ್ದಾರೆ!

ಅಡಳ್ಳಿಯ ರಾ। ಸುಬ್ರಾಯ ಹೆಗಡೆಯು ಜೈಲಿನಲ್ಲಿ ಇದ್ದಾಗ ಪೋಲೀಸರು ಅವರಲ್ಲಿ ತೀರ್ವೆ ವಸೂಲಿಗೆ ಹೋದರು. ತೀರ್ವೆ ಕೇಳಲಾಗಿ, ಹೆಗಡೆ ಹೆಂಡತಿಯು "ತೀರ್ವೆ ಕೊಡುವವರಿಗೆ ನೀವು ಜೈಲಿಗೆ ಕಳಿಸುತ್ತೀರಿ? ನಾವು ಕೊಡುವದಿಲ್ಲ! ನನ್ನ ಮನೆಯಲ್ಲಿ ಬೇಕಾದ್ದು ಜಪ್ತಿ ಮಾಡಿ ಒಯ್ಯಿರಿ" ಎಂತ ಉತ್ತರ ಕೊಟ್ಟಳು. ಗ್ರಾಮಸ್ಥರು ಬಂದು ತೀರ್ವೆಯನ್ನು ಜಪ್ತಿ ಮಾಡಿ ಒಯ್ದರು.

ತಾ. ೫ಕ್ಕೆ ಮೂರು ಗಂಟೆ ರಾತ್ರಿ ಕಳೆದು ಹೋದಾಗ ೩೦-೪೦ ಪೋಲೀಸರು ರಾ। ದೇವಪ್ಪನ ನಾಗೇಶ ಹೆಗಡೆರ ಮನೆಯ ಜಪ್ತಿಗೆ ಬಂದರು ಮನೆಯಲ್ಲಿ ಗಂಡಸರಿದ್ದಿಲ್ಲ ಹೆಂಗಸರು ಕದ ತೆರೆಯಲಿಲ್ಲ, ಎಷ್ಟು ಒತ್ತಿದರೂ ತೆರೆಯಲಿಲ್ಲ ಹೀಟೆಯಿಂದ ಮಹಜರನವರು ಬಂದ ಮೇಲೆ ಕದ ತೆಗೆದರು ಪೋಲೀಸರು ಇಡೀ ಮನೆ ಹುಡುಕಿ ನೋಡಿದರು. ಏನೂ ಪಕ್ಕೇ ಜಪ್ತಿ ವಸ್ತು ಸಿಗಲಿಲ್ಲ ಕೆಳಗೆ ಪಂಚಲ್ಲಿ ೩ ೪ ಮನೆಗಳಲ್ಲಿ ಜಪ್ತಿಗಳಾದವು ಏನೂ ಸಿಗಲಿಲ್ಲ

ಇಟಗಿಯೊಳಗೆ ತಾ ೧೬ಕ್ಕೆ ರಥೋತ್ಸವ. ಉತ್ಸವದಲ್ಲಿ ಮಹಾತ್ಮಾ ಜಯಜಯಕಾರ ಹಾಕಕೂಡದೆಂದು ಪೋಲೀಸರು ಜನರಿಗೆ ಹುಕುಮ ಮಾಡಿದರು. ಜಯಜಯಕಾರ ಹಾಕಿದರೆ ತೇರು ಎಳೆಯಲಿಕ್ಕೆ ಪ್ರತಿಬಂಧ ಮಾಡುತ್ತೇವೆಂದು ಸಹ ಬೆದರಿಸಿ ನೋಡಿದರು! ಜನರು ಲಕ್ಷ್ಯಕೊಡಲಿಲ್ಲ ರಥದ ಹಗ್ಗಗಳನ್ನು ಕೈಯಲ್ಲಿ ಹಿಡಕೊಂಡು ಮಹಾತ್ಮರ ಹೆಸರು ಉದ್ಘೋಷ ಮಾಡುತ್ತ ತೇರನ್ನು ಎಳೆದು ಹತ್ತಿದರು. ಪೋಲೀಸರು ಬಹಳ ಪ್ರಯತ್ನ ಮಾಡಿದರೂ ಜನರು ಸುಮ್ಮಗುಳಿಯಲಿಲ್ಲ. ಬೇಕೆಂದು ದೊಡ್ಡ ದೊಡ್ಡಕ್ಕೆ ಜಯಘೋಷ ಮಾಡುತ್ತಿದ್ದರು!

ಸದರಿ ರಥದ ಮೇಲೆ ಭಾರತ ಮಾತೆ, ಗಾಂಧೀಜಿ ಮತ್ತು ರಾಷ್ಟ್ರಧ್ವಜ ಹೀಗೆ ಚಿತ್ರಗಳನ್ನು ತೆರೆದಿದ್ದರು. ಈ ಚಿತ್ರಗಳನ್ನು ಚಿತ್ರಿಸಿದ ಚಿತ್ರಕಾರನು ಕೈದಾಗಿರುವನು.

ತೀರ್ವೆ ಬಗ್ಗೆ ಅಲ್ಲಲ್ಲಿ ಜಪ್ತಿಗಳಾಗುತ್ತಲಿವೆ ಕೂವಿನ ಮನೆ ದುಗ್ಗನನ್ನು ಕೋಣ ರಾಮಯ್ಯ ಹೆಗಡೆ ಇವರು ರೂ ೯೩ ತೀರ್ವೆ ಕೊಡಬೇಕು ಮನೆಯವರಾದರೆ ಸ್ವತಃ ಜೈಲಿಗೆ ಹೋಗಿದ್ದರು. ಇತ್ತೀಚೆಗೆ ಮನೆಯಲ್ಲಿ ಇರಲಿಲ್ಲ! ೩-೪ ಹಂಡೆದ ಪಾತ್ರೆಗಳು ಜಪ್ತಿಯಾದವು ಒಂದು ಕೋಣೆಯಲ್ಲಿ ಏನಾದರೂ ಹುಗಿದಿರಬಹುದೆಂದು ತಿಳಿದು ಅಲ್ಲಿ ಅಗಿಸಿದರು, ನೂಂಟುವನ್ನು ಹೊಂಡ ತೆಗೆದರು, ಬರೀ ಎರಡು ಕಲ್ಲುಗಳು ದೊರೆತವು!

ಶಿರಸಿಯ ಕೇಂದ್ರದ ನೀಲಕಂಠ [illegible] ಎಂಬವರು ಹೋದ ವರ್ಷ ರೂ ೧೦ ತಗಾವಿ ತಕ್ಕೊಂಡಿದ್ದರು ಅದರ ವಸೂಲಿ ಬಗ್ಗೆ ಅವರಲ್ಲಿ ಜಪ್ತಿಯಾಯಿತು ಒಂದು ಪೆಟ್ಟಿಗೆಯಲ್ಲಿ ೩ ರೂಪಾಯಿಗಳು ಸಿಕ್ಕಿದವು.

ಇನ್ನೂ ಕೆಲವು ಮನೆಗಳಲ್ಲಿ ಜಪ್ತಿಗಳಾಗಿವೆ. ಕೆಲವೆಡೆ ಪಾತ್ರೆ, ಕೆಲವೆಡೆ ದನಕರುಗಳು ಹೀಗೆ ಜಪ್ತಿ ಮಾಡಿದ್ದಾರೆ ದುಡ್ಡು ಅಥವಾ ಧಾನ್ಯದ ವಸ್ತು ಸಿಕ್ಕಿದ್ದು ಅಪರೂಪ.

ಅಂಕೋಲಾ— ತಾ. ೨೦ಕ್ಕೆ ಅಂಕೋಲೆ-ಕುಮಟಾ ರಸ್ತೆಯ ಮೇಲೆ ಸುಟ್ಟು ಹಾಕಿದ ಸಂಕದಿಂದ ಅಜಮಾಸ ೩ ಫರ್ಲಾಂಗ ದೂರದಲ್ಲಿ ಸುಂಕು ಗುತ್ತಿಕೇರಿ ನಾಯ್ಕ, ರಾಕು ಬೊಮ್ಮಯ್ಯನಾಯ್ಕ ಮತ್ತು ಶ್ರೀನಿವಾಸ ಮೂರ್ತಿ ಹೀಗೆ ಮೂವರು ಒಂದು ಕಟ್ಟಿಗೆ ಗಾಡಿ ಓಡಿಸಿಕೊಂಡಿದ್ದರು. ಪೋಲೀಸರು ಬಂದು ಅವರಿಗೆ ಕೈದು ಮಾಡಿದರು. ಶ್ರೀನಿವಾಸ ಮೂರ್ತಿಗಿಟ್ಟುಕೊಂಡು ಮಿಕ್ಕ ಇಬ್ಬರನ್ನು ಜಾಮೀನಿನ ಬಿಟ್ಟುಕೊಟ್ಟರು

ಅಂದು ಅಂಕೋಲೆಯಲ್ಲಿ ಸ್ವದೇಶಿ—ದಿನ ಆಚರಿಸಲ್ಪಟ್ಟಿತು ಪೇಟೆಯಲ್ಲಿಯೂ ಗಾಂಧಿ ಮೈದಾನದಲ್ಲಿ ಸಭೆಯಾಯಿತು ಸಭೆಯಲ್ಲಿ ಸ್ವದೇಶಿ ವ್ರತದ ಮಹತ್ವವನ್ನು ತಿಳಿಸಿ ಹೇಳಿದರು

ಈ ವಾರದಲ್ಲಿ ಬೇರೆ ಬೇರೆ ಊರುಗಳಲ್ಲಿ ತೀರ್ವೆ ವಸೂಲಿಯ ಬಗ್ಗೆ ಜಪ್ತಿಗಳಾದವು.

ಸಗಡಗೇರಿಯೊಳಗೆ ೧ ಹೊನ್ನಪ್ಪ ಪೊಕ್ಕ ನಾಯ್ಕ ೨ ಬೀರಣ್ಣ ಸುಬ್ಬಯ್ಯ ನಾಯ್ಕ ೩ ರಾಮಾ ವೆಂಕಣ್ಣ ನಾಯ್ಕ ೪ ವೆಂಕಣ್ಣ ನಾಯ್ಕ ೫ ಬೊಮ್ಮ ರಾಮ ನಾಯ್ಕ ಮತ್ತು ೬ ವೆಂಕಣ್ಣ ಸುಬ್ಬಯ್ಯ ನಾಯ್ಕ ಹೀಗೆ ಆರು ಮನೆಗಳಲ್ಲಿ ಜಪ್ತಿಗಳಾದವು. ಬೀರಣ್ಣ ಸುಬ್ಬಯ್ಯ ನಾಯ್ಕನ ಮನೆಯಲ್ಲಿ ಬಾವಿಯಲ್ಲಿ ಸಹ ಹುಡುಕಿ ನೋಡಿದರು! ಬಾವಿಯಲ್ಲಿ ಏನೂ ಸಿಗಲಿಲ್ಲ! ಮನೆಯಲ್ಲಿ ಇದೇ ೧೪ ತೆಂಗಿನಕಾಯಿಗಳು ಸಿಕ್ಕಿದವು. ಈ ಊರಲ್ಲಿ ಜಪ್ತಿ ಅಧಿಕಾರಿಗಳಿಗೆ ಅಡಿಗೆ ಮಾಡಲಿಕ್ಕೆ ಒಂದು ಪಾತ್ರೆ ಸಹ ಸಿಗಲಿಲ್ಲ! ಒಂದು ಮಣ್ಣಿನ ಪಾತ್ರೆಯನ್ನು ಸಂಪಾದಿಸಿ ನಿರ್ವಾಹ ಮಾಡುವ ಪ್ರಸಂಗ ಬಂತಂತೆ!

ಮೊಗಟೆಯಲ್ಲಿ ೧೭ ಮನೆಗಳಲ್ಲಿ ಜಪ್ತಿಗಳಾದವು ಮಣ್ಣು ಮಡಿಕೆಗಳ ಹೊರತು ಮನೆಗಳಲ್ಲಿ ಏನೂ ಇದ್ದಿಲ್ಲ. ದೇವಣ್ಣ ಬೀರಣ್ಣನಾಯ್ಕರ ಮನೆಯಲ್ಲಿ ಹೋದಾಗ ನಾಯ್ಕರು ಮನೆಯಲ್ಲಿದ್ದಿಲ್ಲ. ಹೆಂಡತಿಯು ಜಗಲಿ ಮೇಲೆ ಕುಳಿತಿದ್ದಳು. ಆಕೆಗೆ ಬಾಗಿಲು ತೆರೆಯಲಿಕ್ಕೆ ಹೇಳಿದರು ತಾನು ಮುಟ್ಟಾಗಿದ್ದೇನೆ, ಕದ ತೆರೆಯಲಾರೆನೆಂದು ಆಕೆ ಉತ್ತರ ಕೊಟ್ಟಳು! ಪೋಲೀಸರು ಗಂಡನಿಗೆ ಕರೆಯಲಿಕ್ಕೆ ಹೇಳಿದರು, ತನ್ನಿಂದ ಬರಲಿಕ್ಕೆ ಆಗುವದಿಲ್ಲವೆಂದು ಆಕೆ ನುಡಿದಳು ಅಧಿಕಾರಿಗಳು ಅಲ್ಲಿದ್ದ ಒಂದು ತಂಬಿಗೆಯನ್ನು ತೆಗೆದುಕೊಂಡರು. ಕೊನೆಗೆ ಏನು ತೋಚಿತೋ ಏನೋ! ತಂಬಿಗೆಯನ್ನು ಬಿಟ್ಟು ನಡೆದರು

ಉಳವರೆಯಲ್ಲಿ ತಿಮ್ಮ ಜೈರ ಗೌಡನ ಮನೆಯಲ್ಲಿ ಜಪ್ತಿಯಾಯಿತು. ತಿಮ್ಮನು ಮನೆಯಲ್ಲಿದ್ದಿಲ್ಲ, ಮಗನಿದ್ದನು ಅಧಿಕಾರಿಗಳು ತೆರಿಗೆ ಕೇಳಲು, ಮಗನು "ಅಪ್ಪ ಮನೆಯಲ್ಲಿಲ್ಲ, ನನ್ನ ಹತ್ತರ ಹಣವಿಲ್ಲ, ನೀವು ಬೇಕಾದ್ದು ಒಯ್ಯಿರಿ" ಎಂದು ಜವಾಬು ಕೊಟ್ಟನು ಪೋಲೀಸರು ಮನೆಯಲ್ಲಿ ಝಡತಿ ಮಾಡಿ ೨೦ ಚೀಲ ಭತ್ತ ಹೊಡಕ್ಕೊಂಡರು. ಅಧಿಕಾರಿಗಳು ೧೬ ಖಂಡಗದ ಪಾವತಿ ಕೊಟ್ಟಿರುತ್ತಾರೆ ಆದರೆ ಆ ಚೀಲದಲ್ಲಿ ೩೪ ಖಂಡಗವಿತ್ತೆಂದು ತಿಮ್ಮಗೌಡನ ಮನೆಯವರ ಹೇಳಿಕೆ!

ರಾ। ಬಾಸಗೋಡ ರಾಮನಾಯ್ಕರು ತೀರ್ವೆ ಮತ್ತು ಲೋಕಲ್ಫಂಡ ಕೂಡಿ ರೂ ೩೬-೬-೬ನ್ನು ಇನ್ನೂ ತುಂಬಿಲ್ಲ ಸದರಿ ರಕಮನ್ನು, ಚೌಥಾಯಿ ದಂಡವನ್ನೂ ಕೂಡಿ ತಾ ೧೩-೪-೧೯೩೨ರೊಳಗಾಗಿ ಅವರು ಸರಕಾರದಲ್ಲಿ ಭರಣಾ ಮಾಡದಿದ್ದರೆ ಅವರ ಭೂಮಿಗಳು ಲಿಲಾಂವ ಮಾಡಲ್ಪಡುವವೆಂದು ಮಾ। ಮಾಮಲೇದಾರರು ನೋಟೀಸು ತೆಗೆದಿದ್ದಾರೆ. ಇದೇ ತರದ ನೋಟೀಸುಗಳು

ವಹಿಕೆ ಸಾಧಾರಣ ಸಾಧ್ಯ ಸಂಶಯೂ ದಹಿಕೆ ಸಾಧ್ಯ ವಿಶ್ವ ಗೋವಿಂದ ಟೀಕ್ಯಾಯ್ಯ ನಾಮ್ಯ ಇರ ಮೇಲಿ ಕೊರಟವ

ತಾ ೨ನೇ ಟೆಗೆ ೮-೧೦ ಜನ ಪೋಲೀಸರು ಜಗ್ಗನ್ನಾಥರ ಸಣ್ಣ ಮಕ್ಕಳ ಕೋಣೆ ತಿಮ್ಮಣ್ಣ ನಾಯ್ಕ ಇವರ ಮನೆಯನ್ನು ಮುತ್ತಿದರು. ಮನೆಯಲ್ಲಿ ಗಂಡಸರು ಯಾರೂ ಇದ್ದಿಲ್ಲ ಸಣ್ಣ ಮಕ್ಕಳು ೭೫ ವರ್ಷದ ಮುದುಕಿ ಮಾತ್ರ ಕೊಂಡಲ್ಲೇ ಇದ್ದಳು ಪೋಲೀಸರು ಆಕೆಯನ್ನೆಬ್ಬಿಸಿ "ಕರಮುರಕರಂ ಹಣ-ಕಾಗದ-ಪತ್ರ ಮುಂತಾದವುಗಳ ಗಟು ನಿಮ್ಮ ಮನೆಯಲ್ಲಿದೆ! ಅದನ್ನು ಕೊಡು" ಎಂದು ಹೇಳಿದರು. ಈಗ ಆ ಮುದುಕಿಯು "ಏನು ನಿಮ್ಮ ಕಟಕಟ! ನನ್ನ ಒಂದು ಕರಮುರಕರಂಗೆ ಹಿತಕೊಂಡು ಹೋಯಿರಿ. ಇಗೇನು ನನ್ನ ಕರ್ಮ ಕೊಡಲಿ? ದಿನಾ ದಿನಾ ನಿಮ್ಮ ತ್ರಾಸು ಬೇಡಾ! ಇದ್ದದ್ದನ್ನೆಲ್ಲ ಒಮ್ಮೆಗಲೇ ಒಯ್ದು ಬಿಡಿರಿ!" ಎಂದು ಉದ್ಗಾರ ತೆಗೆದಳು. ಪೋಲೀಸರು ಮೂಲೆ ಮೂಲೆಗಳಲ್ಲಿ ಅಲೆಸಿ ನೋಡಿದರು ಏನೂ ಸಿಗಲಿಲ್ಲ

ಮರಳಿ ಹೊನ್ನಾವರ ಪೇಟೆಯಲ್ಲಿ ಕಟ್ಟಿನ ಗಡ್ಡದ ಕೆಲಸಕ್ಕೆಂದು ಹೋಗ ತ್ರಿಧ್ವ ವೇಣ್ಣಸಂಬ ಹುಡುಗನಿಗೆ, "ನಿನಗೆ ನಾವಂಕು ಆದ, ಬಾ" ಎಂದು ಹೇಳಿ ಉಳವರೆ ಠಾಣೆ ಕರಕೊಂಡು ಹೋದರು ಮತ್ತು ೩ ಏಟುಗಳನ್ನು ಕೊಟ್ಟು ಬಿಟ್ಟುಕೊಟ್ಟರಂತೆ! ಬಿಟ್ಟುಕೊಟ್ಟಾಗ ಹೊತ್ತು ತಿರುಗಿತ್ತು! ಪೋಲೀಸರಿಗಳು ಇಂಥ ಚೇಷ್ಟೆಗಳನ್ನು ಸ್ವದರ್ಶನವೇ ಇರಿಸುವದುತ್ತವು!

ತಾ ೨೪ಕ್ಕೆ ರಾ| ಶ್ರೀನಿವಾಸ ಗಣಪತಿ ಮಹಾಲೆ ಮತ್ತು ಶಂಕರ ಗೋವಿಂದ ಮಾಲೇಕರ ಇವರ ಮನೆಗಳಲ್ಲಿ ಝಡತಿಯಾಯಿತು., ಅವರಿಬ್ಬರಿಗೆ ಸೆರೆ ಹಾಕಿದ್ದಾರೆ. ಝಡತಿಯಲ್ಲಿ ದೊರೆತ ಹಿಂದೀ ಕ್ರಮಿಕ ಪುಸ್ತಕಗಳನ್ನು 'ಜಯಕರ್ನಾಟಕ"ದ ಕೆಲವು ಸಂಚಿಕೆಗಳನ್ನು ಜಪ್ತ ಮಾಡಿ ಒಯ್ದರು ಇವರ ಮೇಲೂ ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟ ಕಲಂ ೧೭,(೧) ರನ್ವಯ ಆರೋಪವಿರುತ್ತದೆಂದು ತಿಳಿಯುತ್ತದೆ

ಸತ್ಯಾಗ್ರಹದ ವಾರ್ತೆ.

(೭ನೇ ಪಾನಿನಿಂದ ಮುಂದುವರಿದ್ದು.)

ಡಾರಾ ಮ್ಯು| ಯ. ಚೇರಮನ್‌ರಾದ ಮಿ| ಸೇನರವರು ತಾವು ಕೊಂಗ್ರೆಸ ಪಕ್ಷದ ಪರವಾಗಿ ಮ್ಯು|ಲ್ಲಿ ಆರಿಸಿ ಬಂದಿದ್ದವರಾಗಿಯೂ, ನೀತಿಯಂತೆ ಪ್ರಕೃತ ಚಳವಳಿಯಲ್ಲಿ ತಾವು ಸೇರಬೇಕಿತ್ತಾಗಿಯೂ ಅದು ಒದಗ ಸಾಧ್ಯವಿಲ್ಲೆಂತಲೂ ತಮ್ಮ ಜಾಗೆಗೆ ರಾಜೀನಾಮೆ ಕೊಟ್ಟರು. ಸಭಾಸದರು ಅವರ ಮೇಲೆ ವಿಶ್ವಾಸದರ್ಶಕ ಠರಾವು ಮಾಡಿದರೂ ಅವರು ರಾಜೀನಾಮೆ ಹಿಂತೆಗೆದುಕೊಳ್ಳಲಿಲ್ಲ.

ತಾ ೧೮ನೇಗೆ ರಾಧಾರಾಣಿ ದೇ ಮತ್ತು ಸಂಧ್ಯಾರಾಣಿ ದೇ ಇವರಿಗೆ ೬-೬ ತಿಂಗಳ ಕಠಿಣ ಶಿಕ್ಷೆಯಾಯಿತು. ಇಬ್ಬರಿಗೂ ಮೊಲೆಕುಡಿಯುವ ಕೂಸುಗಳಿವೆ ಈ ಕೂಸುಗಳ ಸಹಿತ ಸೆರೆಮನೆ ಸೇರಿದರು.

ಬಿಹಾರ ಪ್ರಾಂತದ ಸುದ್ದಿ

ಪಾಟಣಾದೊಳಗೆ 'ಸರ್ಚಲೈಟ" ಪತ್ರಿಕೆಯ ಕಾರ್ಯಾಲಯದಲ್ಲಿ ಪೋಲೀಸರು ಝಡತಿ ಮಾಡಿ "ನವಜಕ ಸತ್ಯಾಗ್ರಹ"ದ ಒಂದು ಪ್ರತಿಯನ್ನು ಜಪ್ತ ಮಾಡಿ ಒಯ್ದರು ಇನ್ನೇನೂ ಅವರಿಗೆ ಸಿಗಲಿಲ್ಲ

ಪ್ರಾಂತಿಕ ಸರಕಾರದವರು ಆ ಪ್ರಾಂತದ ೮ ಹಳ್ಳಿಗಳಲ್ಲಿ ಕಾಯಿದೆ ಭಂಗದ ಚಳವಳವನ್ನು ಜನರು ನಿಲ್ಲಿಸದಿದ್ದರೆ, ಶಿಕ್ಷಾತ್ಮಕ ಪಟ್ಟಿಯನ್ನು ಹೇರುವದೆಂದು ಜಾಹೀರನಾಮೆ ಹೊರಡಿಸಿದ್ದಾರೆ.

ಮದ್ರಾಸ ಇಲಾಖೆಯ ಸುದ್ದಿ.

ಈ ಪ್ರಾಂತದಲ್ಲಿ ಮಂಗಲಸೂತ್ರದ ಪ್ರಶ್ನೆಯು ಕಣ್ಮರೆಯಾಗುವಷ್ಟರಲ್ಲಿ, ಸೌಭಾಗ್ಯದ್ರವ್ಯವಾದ ಕುಂಕುಮ-ಬಳೆಗಳ ಪ್ರಶ್ನೆಯು ಉದ್ಭವಿಸಿದೆ. ಮದ್ರಾಸ ಇಲಾಖೆಯಲ್ಲಿ ಅನೇಕ ಸೌಭಾಗ್ಯವತಿ ಸ್ತ್ರೀಯರು ಸತ್ಯಾಗ್ರಹಕ್ಕೆ ಸೇರಿ ಸೆರೆಮನೆಗೆ ಹೋಗಿರುವರು. ಅವರಿಗೆಲ್ಲ ಕುಂಕುಮ-ಬಳೆಗಳನ್ನು ಪೂರೈಸುವದಿಲ್ಲವಾಗಿ ತಕ್ರಾರು ಬಂದು, ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಈ ಕುರಿತು ಪ್ರಶ್ನೋತ್ತರಗಳಾದವು. ಜೈಲಖಾತೆಯ ಅಧ್ಯಕ್ಷರಾದ ಸರ ಕೃಷ್ಣನ್‌ನಾಯರರವರು "ಕುಂಕುಮ-ಬಳೆಗಳು ಸೌಭಾಗ್ಯ ದ್ರವ್ಯಗಳೇನಲ್ಲ; ಕುಮಾರಿಕೆಯರೂ ಅವನ್ನು ಧರಿಸುತ್ತಾರೆ!" ಎಂದು ಉತ್ತರ ಕೊಟ್ಟರು! ಹಿಂದು ಅಧಿಕಾರಿಗಳೇ ಹೀಗೆ ನುಡಿದದ್ದು ನೋಡಿ ಜನರೆಲ್ಲರೂ ಚಕಿತರಾಗಿರುವರು!

ಕಲಿಕೋಟ ಮ್ಯು| ಯು ಬ್ರಿಟಿಶೇತರ ಪೆಟ್ರೋಲನ್ನೇ ಉಪಯೋಗಿಸಬೇಕೆಂದು ಠರಾವು ಮಾಡಿತ್ತು. ಈ ಠರಾವು ಯಾಕೆ ರದ್ದುಪಡಿಸಬಾರದೆಂದು ಮದ್ರಾಸ ಸರಕಾರವು ಅವರಿಗೆ ಕೇಳಿತ್ತು. ಮ್ಯು| ಯವರು ಸಭೆಸೇರಿ ತಮ್ಮ ಠರಾವಿನಲ್ಲಿ ಬೇಕಾಯಿದೆ ಶೀರ ಏನುಂಟು? ತಾವು ಎಲ್ಲಿ ನಮ್ಮ ಅಧಿಕಾರವನ್ನು ಮೀರಿದ್ದೇವೆಂಬದನ್ನು ಸರಕಾರದವರು ಖುಲಾಸೆ ಮಾಡಿದಲ್ಲಿ ಸಮರ್ಪಕ ಉತ್ತರ ಕೊಡಬಹುದಾಗಿ ಠರಾವು ಮಾಡಿರುತ್ತಾರೆ

ಕರ್ನಾಟಕದ ಸುದ್ದಿ.

ಶ್ರೀ|| ದಿವಾಕರರಿಗೆ ರಾಜದ್ರೋಹದ ಬಗ್ಗೆ ೨ ವರ್ಷಗಳ ಕಠಿಣ ಶಿಕ್ಷೆ ಮತ್ತು ಪೋಲೀಸರಲ್ಲಿ ಸಿಕ್ಕೂರಿ ಮಾಡಲೆತ್ನಿಸಿದ ಬಗ್ಗೆ ೬ ತಿಂಗಳ ಶಿಕ್ಷೆ ಮತ್ತು ರೂ ೫೦ ದಂಡವಾಗಿದೆ. ಪೆರೋಲ ಹುಕುಮು ಅವಮಾನ್ಯ ಮಾಡಿದ್ದಕ್ಕಾಗಿ ಶ್ರೀ| ಭಾಸ್ಕರರಾವ ಜೋಶಿಯವರಿಗೆ ೧| ವರ್ಷದ ಶಿಕ್ಷೆ ಮತ್ತು ೧೦೦ ರೂ. ದಂಡ; ಶ್ರೀ| ಹಡೀಕರರಿಗೆ ೧|| ವರ್ಷದ ಶಿಕ್ಷೆ ಮತ್ತು ರೂ. ೧೦೦ ದಂಡ; ಶ್ರೀ| ಹುಕ್ಕೇರಿಕರ ಮತ್ತು ಅಗಂಗಟ್ಟಿ ರಂಗಾಚಾರ್ಯರಿಗೆ ೧||-೧|| ವರ್ಷದ ಶಿಕ್ಷೆ ಮತ್ತು ನೂರು ನೂರು ರೂಪಾಯಿಗಳ ದಂಡ ಹೀಗೆ ಶಿಕ್ಷೆಗಳಾಗಿವೆ.

ಮೊಸರಿತ್ತಿಯಲ್ಲಿ ಉಪ್ಪಿನ ಸತ್ಯಾಗ್ರಹದಲ್ಲಿ ಸೇರಿದ ಬಗ್ಗೆ ೮ ವಿದ್ಯಾರ್ಥಿಗಳಿಗೆ ಶಾಲೆಯಿಂದ ಹೊರ ತಳ್ಳಿರುವರು

ಹಿಂಡಲಗಿ ಜೈಲಿನಲ್ಲಿ ೧೨೦೦ ಕೈದಿಗಳಿಗೆ ಸಾಲುವಷ್ಟು ವ್ಯವಸ್ಥೆಯಿದೆ ಈಗ ಅಲ್ಲಿ ೧೫೦೦ ಕೈದಿಗಳಿದ್ದಾರೆ. ಅವರಿಗೆ ಬಹಳ ತೊಂದರೆಯಾಗಿರುವದಂತೆ!

ಸನ್ ಲ್ಯಾಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ

ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!
ಹಿಂದುಸ್ಥಾನ, ಬ್ರಹ್ಮದೇಶ- ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಆಫೀಸು— ಕೆನಡಾ ಬಿಲ್ಡಿಂಗ, ಹೋರ್ನಬಿ ರೋಡ, ಮುಂಬಯಿ.
ಜನರಲ್ ಮೆನೇಜರ.— ನಾ| ಸರ್ ಫಿರೋಜ ಸೇಠನಾ, ಕೇ ಟಿ ಓ ಬಿ ಈ.
(೧೯೩೦ನೇ ಇಸ್ವಿಯಲ್ಲಿ ಬಂದ ಹೊಸ ವಿಮೆ ರಕಮು: ೧೬೨ ಕೋಟಿಗೂ ಮಿಕ್ಕಿದೆ
೧೯೩೦ನೇ ಇಸ್ವಿ ಡಿಸೆಂಬರ ೩೧ನೇ ತಾರೀಖಿಗೆ ಕೂಡಿದ ನಿಧಿ ೧೬೨ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಪಡೆದು ಹುರುಪಿನಿಂದ ಹಾಗು ದಕ್ಷತೆಯಿಂದ ನಡೆಯುವವರು
ಮಡಿದು ಸುಲಭವಾಗಿ ಮರ್ಯಾದೆಯಿಂದ ಜೀವನ ನಡೆಸಬಹುದು.
ಶರಾದು ಮೊದಲಾದವುಗಳಿಗಾಗಿ ಪತ್ರವ್ಯವಹಾರ ನಡೆಸುವ ಪತ್ತೆ.—

The District Manager,
Canada Building,
Hornby Road, BOMBAY.

OR

Mr. S. B. Rege,
Chief Agent,
171, Civil Lines,
Camp: BELGAUM.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents:-
D K. NAYAK Bros
Honavar Agent:-
R. V. PARBHU Esq

K. PadmanabhaRao & Sons.,
BELGAUM
Chief Agents for
Karnatak Districts & S. M. States

ಹಿಂದುಸ್ಥಾನದೊಳಗಿನ ಪರಿಸ್ಥಿತಿ.

(೭ನೇ ಪಾನಿನಿಂದ ಮುಂದರಿಸಿದ್ದು)

ಪೀಡಿತರಾಯಿತು! ಆತ ಕೂಡಲಿಲ್ಲ. ಅದರಿಂದ ಆತನಿಗೆ ೧ ವರ್ಷದ ಸಜೆ. ಕಲಕತ್ತೆ ಸಂಸದ ಉಪನ್ಯಾಸರ ಮನೆ ಹೊಕ್ಕು ಪೋಲೀಸರು ಹೊಡೆದರು. ಹರತಾಳದಲ್ಲಿ ಸೇರಿದ್ದಕ್ಕೆ ಕಲಕತ್ತೆಯ ಬೇಥೂಣ ಕಾಲೇಜಿನ ಮುಖ್ಯಾಧ್ಯಾಪಕರು ಒಬ್ಬ ಹುಡುಗನಿಗೆ ಹೊರಹಾಕಿದರು. ಇದಕ್ಕಾಗಿ ೬೦ ಮಂದಿ ಹುಡುಗಿಯರು ಒಟ್ಟಾಗಿ ಕಾಲೇಜಿಗೆ ಹೋಗಲಿಲ್ಲ. ಅದಕ್ಕಾಗಿ ೮ ಹುಡುಗಿಯರಿಗೆ ಹೊರಹಾಕಲಾಗಿದೆ. ಪ್ರಯಾಗದ ೩ ವಿದ್ಯಾರ್ಥಿಗಳು [illegible] ಅಧ್ಯಾಪಕರಿಗೆ ಗುಪ್ತ ಪೋಲೀಸರ ಕೆಲಸ ಕೊಟ್ಟಿದ್ದಾರೆ. ಶಿಕ್ಷಕರು ಹುಡುಗರ ಮೇಲೆ ಗುಪ್ತವಾದ ಪಹರೆ ಇಟ್ಟು ರಾಷ್ಟ್ರೀಯ ಸಭೆಯ ಕಾರ್ಯಕ್ರಮದಲ್ಲಿ ಅವರು ಸೇರದಂತೆ ಉಪಾಯ ಮಾಡಬೇಕು. ಅದಾಗ್ಯೂ ವಿದ್ಯಾರ್ಥಿಗಳು ಹೆಚ್ಚಾಗಿ ಸೇರುತ್ತಿದ್ದಾರೆ. ಈಗ ರಜಾದಿನಗಳು ಬಂದವು. ಇನ್ನು ಹುಡುಗರು ಹೆಚ್ಚಾಗಿ ಸೇರುವರು. ಕಾನಪೂರ, ಪ್ರಯಾಗ, ಕಾಶಿ, ಕಲಕತ್ತಾ ಪಟ್ಟಣಗಳಲ್ಲಿ ಹರತಾಳ ಆಚರಿಸದಂತೆ ಮ್ಯಾಜಿಸ್ಟ್ರೇಟರು ವರ್ತಕರಿಗೆ ಹುಕುಮು ಮಾಡಿದರು. ವರ್ತಕರು ಈ ಹುಕುಮು ಮನ್ನಿಸಲಿಲ್ಲ. ಈಗ ಮತ್ತೂ ಕಠಿಣವಾಗಿ ಹರತಾಳ ನಡದದೆ. ಅಂಗಡಿಕಾರರ ಒಕ್ಕಟ್ಟಿನ ಮುಂದ ಮೆಜಿಸ್ಟ್ರೇಟರ ಕಾಟ ನಡೆಯದು. [illegible]ದಲ್ಲಿ ಶಿಕ್ಷೆಯನ್ನನುಭವಿಸುವ ಸತ್ಯಾಗ್ರಹಿಗಳ ನಿರ್ದಯ ರೀತಿಯಿಂದ ನಡಿಸುತ್ತಾರೆಂಗಿ ತಿಳಿಯುತ್ತದೆ. ಕೊಂಗ್ರೆಸ ಕಾರ್ಯಕರ್ತೆ [illegible] ವಾಗದುವದರಿಂದ ಅನೇಕ ಸಂಸ್ಥೆಗಳ ಜನರ ಮೇಲೆ [illegible]ಇಟ್ಟಾಯಿತು.

ಇಡೀ ದೇಶವು ಸಂತಪ್ತವಾಗಿದೆ. ಈ ತನಕ ಅಲಿಪ್ತರಾಗಿದ್ದವರು ಸಹ ಈಗ ರಾಷ್ಟ್ರೀಯ ಸಭೆಯವರೊಡನೆ ಸಮಾನುಭೂತಿಯನ್ನು ಪ್ರದರ್ಶಿಸುತ್ತಾರೆ. ದಬ್ಬಾಳಿಕೆಯಿಂದ ಜನರ ವಿಚಾರವು ಮತ್ತಷ್ಟು ದೃಢವಾಗಿದೆ. ಸರಕಾರದ ಪ್ರತಿಷ್ಠೆಯು ಬಹಳ ಕುಗ್ಗಿದೆ. ಸರಕಾರಕ್ಕೆ ದಿವಾಳಿ ತೆಗೆಯುವ ಪ್ರಸಂಗ ಬಂದಿದೆ. ಈ ಧೋರಣದಿಂದ ಜನಾಂಗದ ಸ್ವಾತಂತ್ರ್ಯ ಲಾಲಸೆಯನ್ನು ನಿರ್ಮೂಲಿಸಲು ಅಸಾಧ್ಯವಾಗಿರುವದರಿಂದ ಈ ಧೋರಣವನ್ನು ತ್ಯಜಿಸಲು ಒತ್ತಾಯಪಡಿಸಬೇಕು. ಇದರಲ್ಲೇ ಬ್ರಿಟಿಶರಿಗೆ ಹಿತವಿದೆ, ಎರಡೂ ದೇಶಗಳಿಗೆ ಕ್ಷೇಮವಾಗುವದು ”

ಬಂಗಾಲಿಗಳ ಸ್ವದೇಶಿಯ ಭಕ್ತಿ!

ಕೊಂಟಾಯಿ (ಬಂಗಾಲ)ಯಲ್ಲಿ ಒಂದು ನಾಟಕ ಕಂಪನಿಯವರು ಒಂದು ನಾಟಕಗಳನ್ನಾಡುತ್ತಿದ್ದರು. ಕಂಪನಿಯವರು ರಂಗಭೂಮಿಯ ಮೇಲೆ ಉಪಯೋಗಿಸುತ್ತಿದ್ದ ಪೋಷಾಕುಗಳು ವಿದೇಶಿ ಬಟ್ಟೆಯವಾಗಿದ್ದವು. ಮೊದಲಿನ ಎರಡು-ಮೂರು ಆಟಗಳಿಗೆ ಜನರ ಪ್ರೋತ್ಸಾಹ ಸಿಗಲಿಲ್ಲ. ಆದರಿಂದ ಕಂಪನಿಯವರ ಕಣ್ಣುಗಳು ತೆರೆದವು! ಕೂಡಲೆ ಖಾದಿಯ ಬಟ್ಟೆ ಹೊಲಿಸಿ ದೇಶೀ ಪೋಷಾಕು ಉಪಯೋಗಿಸಿ ಆಟಗಳನ್ನು ಆಡಲಾರಂಭಿಸಿದರು! ಜನರೂ ಒಳ್ಳೇ ಪ್ರೋತ್ಸಾಹ ಕೊಟ್ಟರು. ಬಂಗಾಲಿ ಜನರ ಈ ವರ್ತನೆಯಿಂದ ನಮ್ಮವರು ತಕ್ಕ ಬೋಧ ಪಡೆಯಬಹುದು!

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೨೭-೨೮) ಅತ್ಯುಚ್ಚ ಯೋಗ್ಯತೆಯ
ಸರ್ಟಿಫಿಕೇಟು ಪಡೆದ
“ಪಾಫ್” ಹೊಲಿಗೆಮಶೀನುಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!
ಹಾಗು
ಬೇಕಾದ ಬೇರೆ ಭಾಗಗಳು ಸಹ ದೊರೆಯುತ್ತವೆ!!

ಈ ಮಶೀನುಗಳು
ನೋಡಲಿಕ್ಕೆ ಚಂದವೂ, ನಡಿಸಲಿಕ್ಕೆ ಸುಕರವೂ, ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ-ದಕ್ಷಿಣ ಕನ್ನಡ ಜಿಲ್ಹೆಗಳ ಮೂಲ ಏಜಂಟರು —
ಕುಲಕರ್ಣಿ ವಾಘ ಎಂಡ್ ಕಂಪನಿ,
ಶಾಂತಿಭುವನ, **ಕಾರವಾರ.**
ಮಂಗಳೂರ ಏಜಂಟರು — ಕಮಲಾಕರ ಅಪ್ಪಾಜಿರಾವ ವಾಘ.

ಶಿರಸಿ ಏಜಂಟರು —	ಕುಮಟಾ ಏಜಂಟರು—	ಹೊನ್ನಾವರ ಏಜಂಟರು:—
ಕಾಮತ ಬ್ರದರ್ಸ.	ಶಂಕರ ಅಪ್ಪಾಜಿರಾವ ವಾಘ	ಕೆಕ್ಕಾರ ಮಂಜಪ್ಪಾ ಗಣೇಶ ಶೇಟ

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು
ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

[illegible] ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಬಂಗಾರದ ಪದಕು ದೊರೆತಿರುವ ಧಾತುಪೌಷ್ಟಿಕ ಮತ್ತು ರಕ್ತವರ್ಧಕ ಜಗತ್ಪ್ರಸಿದ್ಧ **ದ್ರಾಕ್ಷಾಮೃತವು.** ಈ ದ್ರಾಕ್ಷಾಮೃತವು [illegible]ದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿದ್ದರಿಂದ ಸ್ವಾದಿಷ್ಟವೂ ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳ ಉರುಪು ಬೀಳೋಣ, ಯೌವನಗಳ ಎಲುಬಿನಲ್ಲಿ ಜ್ವರ ಇರೋಣ, ಸಪ ಸೋಲೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಭೋವಳಿಕೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟವಂತರಾಗುವರು. ಹೆಂಗಸರಿಗೂ ಮುಟ್ಟಿನ ತ್ರಾಸಗಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೂ ಮತ್ತು [illegible] ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಅಶಕ್ತ ಮುದುಕರು ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು. ೧ ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೪-೦, ಒಂದು ಡಜನ ಬಾಟ್ಲಿಗೆ ೧೧-೦-೦ ಒಟ್ಟಿಗೆ ೧ ಡಜನ್ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೇವೆ. ಟಪಾಲ ಖರ್ಚು ಪೋಷ್ಟೇಜ ಬೇರೆ ಬೀಳುತ್ತದೆ.

ಏಜಂಟರ ಮುಖಾಂತರ ೧ ಬಾಟ್ಲಿಗೆ ೧-೪-೦, ೩ ಬಾಟ್ಲಿಗೆ ೩-೮-೦, ಡ ೧೨ ರೂಪಾಯಿ.

ಮ್ಯಾನೇಜರ, **ದ್ರಾಕ್ಷಾಮೃತ ಕಾರ್ಯಾಲಯ, ಪೋ. ನಿಪ್ಪಾಣಿ** (ಜಿಲ್ಹಾ ಬೆಳಗಾವಿ)
ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು

ಕುಮಟಾ ಏಜಂಟರು —	ಕಾರವಾರ ಏಜಂಟರು—
ನ್ಯೂಸಪೇಪರ ಏಜನ್ಸಿ. ವ ನೆಹರೂ ಸ್ಟೋರ್ಸ.	ದಾಮೋದರ ಶ್ಯಾನಭಾಗ [illegible]

ಶಿರ್ಸಿ ಏಜಂಟರು — ಎಸ್. ಎಲ್. ಭಾಕಪ್ಪಾ ವ ರಂಗಪ್ಪಾ ಗಾಂಜಾ.

ಕುಮಟಾ ಅರ್ಬನ್ ಬ್ಯಾಂಕಿನ ಚಾಲಕರ ಕರ್ತವ್ಯಪರಾಙ್ಮುಖತೆ

[೨ನೇ ಸಾರಿ ಪ್ರಸಿದ್ಧ ಪಡಿಸಿದ್ದು]

ಈ ಸಂಸ್ಥೆಗಳಲ್ಲಿ ಪ್ರಮುಖರಾಗಿ ಕಾರ್ಯಭಾರವ ನಡಿಸಿದ್ದು ಇಷ್ಟೇ ಸಾಕು ಸಾರ್ವಜನಿಕ ಸಂಸ್ಥೆಗಳಲ್ಲಿ ಸೇರಿ ಮುಖಂಡರೆ ಹೊಂದುವದೆಂದರೆ ಸಾಧಾರಣ ಕೆಲಸವಲ್ಲ. ತಮ್ಮ ಹಿಂದೆಯವರು ನಡಿಸಿಕೊಂಡು ಬಂದದ್ದು ತಾನೂ ನಡಿಸತ್ತೇವೆಂತಾ ಅಂದರೆ, ಸಾಲದು. ಅದಕ್ಕೆ ಸಾಕಷ್ಟು ವಿನಯವೂ, ಜಾಣತನವೂ, ಧೈರ್ಯಶೀಲತೆಯೂ, ಕರ್ತವ್ಯದಕ್ಷತೆಯೂ, ನಿಸ್ಪೃಹತೆಯೂ ಬೇಕೇ ಬೇಕು. ತಮ್ಮ ಹಿರಿಯರು ಸಾಧಿಸಿದಲ್ಲಿ ಒಣ ಸ್ವಾರ್ಥ ತುಂಬಿಕೊಂಡಿದ್ದರೆ ವಿವೇಕ ತಾತ್ವಿಕ ಗೌರವವನ್ನು ಕಾಯ್ದುಕೊಳ್ಳಲಿಕ್ಕೆ ಸಹಕರವರ ನೆರವು ಅವರಿಗೆ ಬೇಕಾಗುತ್ತದೆ. ಆದ್ದರಿಂದಲೂ ಮೇಲೆ ಕಾಣಿಸಿದ ಗುಣಗಳಲ್ಲಿ ಒಂದಾದರೂ ಸ್ವಲ್ಪ ಮಟ್ಟಿಗೆ ಸಹ ತಮ್ಮಲ್ಲಿ ಇದ್ದ ಹಾಗೆ ತಮ್ಮ ಇಷ್ಟು ದಿವಸಗಳ ವರೆಗಿನ ವರ್ತನದ ಮೇಲಿಂದ ಕಂಡುಬರುವದಿಲ್ಲಾದ್ದರಿಂದಲೂ ಈ ಹಿಂದೆ ಆಗಿಹೋದದ್ದಕ್ಕೆ ಅಂತಃಕರಣಪೂರ್ವಕ ಪಶ್ಚಾತ್ತಾಪಪಟ್ಟು ತಮ್ಮ ಬಗ್ಗೆ ಜನರಲ್ಲಿ ಉಂಟಾದ ಅಸಂತೋಷವನ್ನು ನೀಗಿಸುವದಕ್ಕಾಗಿ ಸಾರ್ವಜನಿಕ ಸಂಸ್ಥೆಗಳಲ್ಲಿರುವ ತಮ್ಮ ಅಂಗವನ್ನು ಸ್ವಸಂತೋಷದಿಂದ ತೆಗೆದುಕೊಂಡಲ್ಲಿ ಆಯಾ ಸಂಸ್ಥೆಗಳು ಉನ್ನತಾವಸ್ಥೆಗೆ ಮುಟ್ಟಿ ಲೋಕಹಿತವಾಗುವದರಿಂದ ತಾವು ಸಹಃ ಲೋಕಾದರಕ್ಕೆ ಪಾತ್ರರಾಗುವಿರಿ.

ತಾರೀಖು ೨೪-೩-೧೯೩೭

ಗೋವಿಂದ ಸುಬ್ರಾಯ ಪ್ರಭು, ಕುಮಟಾ.

Dr. F. J. P. PEREIRA,
Physician & Specialist in Dentistry,
Sunday Market, KARWAR. (N. K.)

ಆರೋಗ್ಯ ಬಯಸುವಿರಾ?

ಹಾಗಾದರೆ—

ಹಲ್ಲುಗಳನ್ನು ಕಾಪಾಡಿಕೊಳ್ಳಿ!!

ಯಾಕೆಂದರೆ, ಮಾನವನ ಆರೋಗ್ಯಕ್ಕೆ ಹಲ್ಲುಗಳೇ ಕಾರಣ! ಬರೀ ಸೌಂದರ್ಯಕ್ಕಾಗಿ ಅಲ್ಲ, ಆರೋಗ್ಯ ದೃಷ್ಟಿಯಿಂದಲೂ ಹಲ್ಲುಗಳ ಜೋಪಾಸನೆ ಮಾಡುವದು ಅವಶ್ಯ. ಹಲ್ಲುಗಳ ಅಜಾಗ್ರತೆಯಿಂದ ಅಗ್ನಿಮಾಂದ್ಯ, ಸಂಧಿವಾತ, ನೇತ್ರರೋಗ, ಕರ್ಣರೋಗ ಮೊದಲಾದ ಬೇನೆಗಳಾಗುತ್ತವೆ.

ಕಾರಣ, ನಿಮ್ಮ ಹಲ್ಲುಗಳು ಸರಿಯಿಲ್ಲದಿದ್ದರೆ,
ನಮ್ಮ ಕಡೆಗೆ ಬನ್ನಿ, ಪರೀಕ್ಷಿಸಿಕೊಳ್ಳಿ!

ಅವನ್ನು ಸ್ವಚ್ಛ-ಸುಂದರ ಮಾಡಿಕೊಡುವೆವು.

ಡಾ|| ಎಫ್. ಜೇ. ಪಿ. ಪೆರೇರಾ,
ವೈದ್ಯ ಮತ್ತು ದಂತವೈದ್ಯಕ ವಿಶಾರದ,
ಸಂತೆ ಪೇಟೆ, **ಕಾರವಾರ.** (ಉ. ಕಾನಡಾ)

For Sale!

One 1½ Ton Chevrolet Lorry & one ½ Ton Chevrolet Taxi Car, both in good working order, are to be sold. For particulars see or write to the undersigned.

G. D. MALGIKAR,
Petrol Agent, KUMTA.

ಮೋಟರ ಮಾರುವದಿದೆ!

ಉತ್ತಮ ಸ್ಥಿತಿಯಲ್ಲಿದ್ದ

ಒಂದು ೧½ ಟನ್ನ ಶೆವರೊಲೇಟ ಲೋರಿ ಹಾಗು ಒಂದು ಅರ್ಧ ಟನ್ನಿನ ಶೆವರೊಲೇಟ ಟ್ಯಾಕ್ಸಿ ಕಾರೂ ಮಾರತಕ್ಕವಿವೆ! ಕೊಂಡುಕೊಳ್ಳಲಿಚ್ಛಿಸುವವರು ನಮಗೆ ಸಮಕ್ಷ ಭೆಟ್ಟಿಯಾದಲ್ಲಿ ಯಾ ಪತ್ರ ಬರೆದಲ್ಲಿ ಎಲ್ಲಾ ಮಾಹಿತಿ ಸಿಗುವದು.

ತಾ. ೨೦-೩-೧೯೩೭.

ಜಿ. ಡಿ. ಮಾಳಗೀಕರ,
ಪೆಟ್ರೋಲ ಏಜಂಟ, ಕುಮಟಾ.

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಖರೇ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ; ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ದಟ್ಟವಾಗಿ ಬೆಳೆಯುತ್ತವೆ.

ಎಲ್ಲಾ ಔಷಧಿ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ
ಅಥವಾ
ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ. ೧-೦-೦
ಅಂಚೆವೆಚ್ಚ ,, ೦-೬-೦
೩ ಬಾಟಿಗಳಿಗೆ ,, ೨-೧೦-೦
ಅಂಚೆವೆಚ್ಚ ,, ೦-೧೨-೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ.

೨ ಔಂಸಿಗೆ ರೂ. ೩-೦-೦
೧ ಔಂಸಿಗೆ ,, ೧-೮-೦
ಡ್ರ್ಯಾಮಿಗೆ ,, ೦-೧೨-೦
ಅಂಚೆವೆಚ್ಚ ,, ೦-೬-೦

ಒಟ್ಟೋ-ದಿಲ್ ಬಹಾರ
ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ನಾನಾತರದ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.
POST BOX 2082, **BOMBAY No. 2.**

ಆನೆಗಳ ಬೇಟೆ!

ಆನೆಗಳು ಸಸ್ಯಸಮೃದ್ಧವಾದ ಪ್ರದೇಶಗಳಲ್ಲಿ ಸ್ವೇಚ್ಛೆಯಿಂದ ತಾವೇ ಗುಂಪಾಗಿ ವಿಹರಿಸುತ್ತವೆ. ಅವು ಗಾತ್ರದಲ್ಲಿ ಮನುಷ್ಯನ [illegible] ಹತ್ತಿರ ಎಂದಿಗೂ ಬಾರವು. ಅವು ಆತನನ್ನು ಎಂದಿಗೂ ಪೀಡಿಸವು. ಸವಾರರಾದರೋ ಸ್ವಸ್ವಭಾವ [illegible] ವಿನೋದಕ್ಕೋಸ್ಕರವಾಗಿ ಹಲವರು ಕೂಡಿಕೊಂಡು [illegible] ಆನೆಗಳನ್ನು ಬೇಟೆಯಾಡಿ ತಮ್ಮ ಸಂತೋಷಕ್ಕಾಗಿ ಅವುಗಳ ಸ್ವಾತಂತ್ರ್ಯವನ್ನು ಬಲಿಗೊಡುತ್ತಾರೆ. ಆನೆಗಳನ್ನು ಬೋನಿನಿಂದಲ್ಲದೆ ಬೇರೊಂದು ಉಪಾಯದಿಂದ ಹಿಡಿಯುವುದು ಪ್ರಯಾಸ [illegible] ಉಪಾಯದಿಂದ ನೆಲಗಳನ್ನು ಮಾಡಿಸಿ [illegible] ಬಿಡಾರಗಳನ್ನು [illegible] ಸಲಾಗಿ ಪರ್ವತಗಳ ಮೇಲೆ [illegible] ಗಳನ್ನು [illegible] ಗಿ ಕಟ್ಟುವರು. [illegible] ಇವರ ರಹಸ್ಯವನ್ನರಿಯದೆ [illegible] ಯಿಂದ ಬರುವಾಗ [illegible] ಅಂದೇ ಸಾವಕಾಶವಾಗಿ [illegible] ಎಷ್ಟೋ ದಿವಸ [illegible] ಸ್ವಾತಂತ್ರ್ಯವನ್ನು ಕಳೆದುಕೊಂಡಿರುತ್ತವೆ. [illegible] ಅವು ಇತರ ಸ್ಥಳದ [illegible] ಎತ್ತರದಿಂದಿರುತ್ತವೆ [illegible] ಜನರು ಅವನ್ನು [illegible] ಅಲ್ಲಿ [illegible] ವರು [illegible] ಹಿಡಿಯು [illegible] ತಿಂದು ಪೋಷಿಸುವರು. ಅವಕ್ಕೆ [illegible] ಸಿಕ್ಕಿದ ಕಡೆಗೆ ಓಡಿಹೋಗಲು ಏನೂ ಮಾಡದೆ [illegible] ಎರಡು ಶಂಕ್ರಗಳನ್ನು ಮಾಡುವರು. [illegible] ಎಲ್ಲಿಂದರೆ ಅಲ್ಲಿ ಕುಳಿತಿರುವ ಈ ಓಡ [illegible] ಗಳನ್ನು ಬೇಟೆಗಾರರು ಇವೆ [illegible] ಹೊಂಚುಹಾಕಿಕೊಂಡು ಕ್ರಮೇಣ ತಾವು [illegible] ರುವ ಕಂಪಣಗಳ ಕಡೆಗೆ ಅಟ್ಟುವರು. [illegible] ದೊಡ್ಡ ದಾರಿಗಳಾದ [illegible] ದಿಂದ ನುಗ್ಗಿ ಒಳಗೆ ಬೀಳುವವು. ಅವು ಸಣ್ಣ ಒಳಗೆ ಬಿದ್ದವೋ ಇಲ್ಲವೋ ಬೇಟೆಯಾಗಾರರ [illegible] ಲವೆ ಕೋಲಾಹಲ ಇದುವರೆಗೆ ಸಿರಾಕಂಪವಾಗಿ ತಿರುಗುತ್ತಿದ್ದ, ಬೇಟೆಗಾರರು ಕೊಟ್ಟದ್ದನ್ನು ಯಥೇಚ್ಛವಾಗಿ ತಿನ್ನುತ್ತಾ ವಿಹರಿಸುತ್ತಿದ್ದ ಈ ಪ್ರಾಣಿ ದೇಹಿಯು ಮ [illegible] ಮನುಷ್ಯರಿಗೆ ಈಗ ಬಂಧನ. ಅವುಗಳ ಹಿಂದು ಮುಂದಿನ ಕಾಲುಗಳು ಆಧಾರ! ಸ್ವಾತಂತ್ರ್ಯವೇ ರೂಪವಾಗಿ [illegible] ಸುಖದಿಂದ ಬಾಳುತ್ತಿರುವ ಈ ಪ್ರಾಣಿಗಳು ಬಾರದ ಕಷ್ಟಗಳನ್ನು ಅವುಗಳ ಮನಸ್ಸಿನಲ್ಲಿ ಬೇರೂರಿಸಿ ಬೇಕು! ದೊಡ್ಡವನ್ನು ತಾನೇ ಅವು ಯಾರ [illegible] ಹಿಡಿಸಿಕೊಳ್ಳಬಲ್ಲವು? ಮಹಾ ಬಲಶಾಲಿಗಳಾದ ಆನೆಗಳು ಹಲವು ಮನುಷ್ಯರ ಕೈಗೆ ಸುಮ್ಮನೆ ಸಿಲುಕುವವೇ? ಬಂಧನದಲ್ಲಿದ್ದರೂ ಅವು ಅವನಿಗೆ ಸುಲಭವಾಗಿ ಅಧೀನವಾಗುವವೇ? ಅವುಗಳ ಮನುಷ್ಯನನ್ನು ಕೊಲ್ಲುವ [illegible] ಇವರಿಗೆ ಗೊತ್ತುಂಟು. [illegible] ದಿವಸ [illegible] ಉಪವಾಸ ಬಿಡುವರು. [illegible] ಬಳಲಿದ ಆನೆಗಳ [illegible] ನ್ನು ಕೊಟ್ಟು [illegible] ಅವು [illegible] ಆಗಿ ಬಂಧನದಲ್ಲಿರುವ ಪ್ರಾಣಿಯೊಂದ [illegible] ಸಾಮ್ರಾಜ್ಯದ ಎದೆಗಳಲ್ಲಿ ತಗಲಿಸುವಂತೆ ಮಾಡಿ [illegible] ಬಂಧನವೊಂ ದು ಕಡೆ ಸ್ವಾತಂತ್ರ್ಯವುಳ್ಳವುಗಳ ಸ್ವಯಲ್ಲೇ ಈ ಪರಿಯಾಗಿ ಅದರ [illegible] ಅವಮಾನ ಸಹಿಸಲಾರದ [illegible] ಜೊತೆಗೆ ಪ್ರಾಣಗಳ [illegible] ಅವುಗಳ ದಶ್ಶಿಯನ್ನು [illegible] ಕೊಟ್ಟರೂ ಇಲ್ಲದೆ ಮಣಗಳ ಬಿಸಿ ಪಿಳಲಿ, [illegible] ದಿಂದ [illegible] ಒತ್ತಾಯಿ [illegible] ಗೆ ಹತ್ತಿಂಬು ದಿವಸದ [illegible] ಈ ಪಳಗಿದ [illegible] ಆನೆ [illegible] ಆನೆ [illegible] ವಾಗಿ ಅವಕ್ಕೆ ಕೊಂಡ [illegible] ದೊಡ್ಡ ಆನೆ [illegible] ಪಳಗಿದ ಆನೆಗಳ [illegible] ಸರ್ಕಾರದ [illegible] ಪಟ್ಟು ಸದೆಯುವ ಪಗಳಿಗೆ [illegible] ಹಾಗೆ [illegible] ವಾಗುತ್ತವೆ.

ಇಷ್ಟೆಲ್ಲ ಬರು ಆನೆಗಳ [illegible] ಸ್ವಾತಂತ್ರ್ಯ [illegible] ಬರುಮಾತ್ರ [illegible] ಇದ್ದ [illegible] ಗಳ [illegible] ಸಿಕ್ಕಿ ಬಿದ್ದು ಪಳಗಿರುವ ಒಂದೆರಡು ಆನೆಗಳ ಸಹಾಯವಿಲ್ಲದಿದ್ದರೆ ಹಿಂಡು ಹಿಂಡಾದ ಆನೆಗಳು ಸ್ವಾಧೀನವಾಗುವುದು ಅಸಾಧ್ಯ. ದಾಸ್ಯವೃತ್ತಿಯನ್ನು ಮಾಡುವ ಈ ಆನೆಗಳು ಸೋರಗಿ ಕೊರಗುತ್ತಿರುವ ಆ ಆನೆಗಳ ಬಳಿಗೆ ಹೋಗಿ ಅವುಗಳ ಕಾಲಿಗೆ ತನ್ನ ಸೊಂಡಿಲಿನಿಂದ ಸರಪಣಿಯನ್ನು ತೊಡಿಸಲು ಬಾಗಿದಾಗ ಅವು ಸಿಂ[illegible] ವೈರಾಗ್ಯದಿಂದಲೂ ಮುಗ್ಗಿ [illegible] ದಯನೀಯ ದೃಷ್ಟಿಯಿಂದ ಇದನ್ನು ನೋಡುತ್ತಿ, ಅಯ್ಯೋ [illegible] ಸ್ವಕಾರ್ಯಸಾಧಕ [illegible] ಇಂದ [illegible] ಬಂದೆ [illegible] ಬಂದ [illegible] ಆನೆಗಾಗಿ, [illegible] ಗಿ ನಮ್ಮ ಸ್ವಂತ [illegible] ಈ ಆನೆಗಳು ಅವರು ಹೇಳಿದಂತೆ [illegible] ಬಾಧಿಸುವದಲ್ಲ. [illegible] ಸಮಗೆ [illegible] ಈ [illegible] ಸ್ವಾತಂತ್ರ್ಯವಾಗಿದೆಯೇ? [illegible] ಸಿಕ್ಕಿರುವ [illegible] ಪರಿಜ್ಞಾನವೇ ಇಲ್ಲವಲ್ಲಾ" ಎಂದು [illegible] ತ್ತವೆಯಂತೆ!

— ವಿದ್ಯಾರ್ಥಿ [illegible]

ಸನ್ ಲೈಫ್ ಎಶೂರೆನ್ಸ ಕಂಪನಿ ಆಫ್ ಕೆನಡಾ.

ಇದೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!

[illegible] ಬ್ರಹ್ಮದೇಶ, ಸಿಂಹಳದ್ವೀಪಗ [illegible]

[illegible] ಕೆನಡಾ ಬಿಲ್ಡಿಂಗ್ ಹಾರ್ನಬಿ ರೋಡ, ಮುಂಬಯಿ

[illegible] ನಾ| ಸರ್ ಫಿರೋಜ ಸೇಠನಾ, [illegible]

[illegible] ೧೬೩ ಕೋಟಿಗೂ ಮಿಕ್ಕದೆ

[illegible] ನಿಧಿ ೧೬೩ ಕೋಟಿಗೂ ಮಿಕ್ಕಿದ

ಈ ಕಂಪನಿ [illegible] ದಕ್ಷತೆಯಿಂದ ನವಯುವಕರು

[illegible] ಜೀವನ ನಡಿಸಬಹುದು

[illegible] ಪತ್ರವ್ಯವಹಾರ ನಡೆಸ ಬೇಕು —

The District Manager, OR Mr S. B Rege,
Canada Building Chief Agent,
Hornby Road BOMBAY 171 Civil Lines
Camp BELGAUM

ದಿ ಬೊಂಬೆ ಲೈಫ್ ಎಶೂರೆನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು [illegible] ಕಂಪನಿಯು [illegible] ಇಂಡಿಯನ್ ಲ್ಯಾಂ [illegible] ಎಕ್ಸಿನ [illegible] ವಿಭಾಗದ [illegible] ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿ [illegible] ಕರವಾಗಿದೆ. [illegible] ಕೆಳಗಿನ ವಿಳಾಸಕ್ಕೆ ಬರೆಯಬೇಕು.

Kumta Agents—
D K NAYAK Bro
Honavar Agent
R V PAI HUE Esq

K. Padmanabha Rao & Sons.,
BELGAUM
Chief Agents for
Karnatak Dist et S M States

ಜೀವನ ಸಾಹಿತ್ಯ.

ಅ — ಶ್ರೀ| ಹನುಮಂತರಾವ ಮಾಂಜರೇಕರ

[ಪ್ರಸ್ತಾವನೆ — ಆಚಾರ್ಯ ಕಾಕಾ ಕಾಲೇಲಕರ ಅವರನ್ನರಿಯದವರು ಕರ್ನಾಟಕದಲ್ಲಿ ಬಹು ಸ್ವಲ್ಪ ಮಂದಿ. ಅವರು ಕರ್ನಾಟಕದವರೆಂಬುದು ಹಲವರಿಗೆ ಗೊತ್ತಿಲ್ಲದೆ ಇರಬಹುದು. ಅವರು ಮೂಲ ಶಹಾಪುರದವರು. ಕಾರಣಾಂತರದಿಂದ ಗುಜರಾತದಲ್ಲಿರುವ ಮಹಾತ್ಮರ ಸಹವಾಸದಲ್ಲಿ ಬಂದು, ಅವರ ತತ್ವಗಳನ್ನು ನಿಷ್ಠೆಯಿಂದಾಚರಿಸಿ, ಅವರ ಸಮೀಪದ ಶಿಷ್ಯರೆನಿಸಿಕೊಂಡವರು, [illegible] ಕಲಾಭಿಜ್ಞರು, ಕಲೋಪಾಸಕರು, ಆಚಾರ್ಯಶ್ರೇಷ್ಠರು, ಸ್ವತಂತ್ರ ವಿಚಾರವಾದಿಗಳು, ಸಾಬರಮತಿಯ ಸತ್ಯಾಗ್ರಹಾಶ್ರಮದಲ್ಲಿ ಶಿಕ್ಷಣ ವಿಭಾಗಕ್ಕೆ ಹಿರಿಯರು, ಗುಜರಾತ ವಿದ್ಯಾಪೀಠದ ಕುಲಪತಿಗಳು, ಮಾತೃಭಾಷೆಯಲ್ಲದ ಗುಜರಾಥಿಯಲ್ಲಿ ಸಮರ್ಥ ಲೇಖಕರು, [illegible], ಗುಜರಾಥದಲ್ಲಿ ಅವರ 'ವಿಚಾರಗಳ [illegible]'ವೆಂದೆನ್ನುವರು. ತಮ್ಮ ಲೇಖನಗಳಿಂದ ಗುಜರಾಥದ ಯುವಕರಲ್ಲಿ ವಿಚಾರಕ್ರಾಂತಿಯನ್ನುಂಟುಮಾಡಿದವರು ಶ್ರೀ| 'ಕಾಲೇಲಕರ' ನಮ್ಮ ನಡವಳಿ, ನಾಗರಿಕತೆ, ಸಂಸ್ಕೃತಿಗಳ ಮೇಲೆ ಹೊಸ ಬೆಳಕನ್ನು ಕೆಡಹುವರು. ಅವರು ಜೀವನವು ಒಂದು ಕಲೆಯೆಂದು ನಂಬಿದವರು. ಜೀವನದ ನಾನಾ ಸಾಹಿತ್ಯಗಳ ಮೇಲೆ ಬೆಳಕು ಚೆಲ್ಲಿ ಅವರು ಜೀವನಕ್ಕೆ ಒಂದು ಸಾಹಿತ್ಯವನ್ನೂ, ಸಾಹಿತ್ಯಕ್ಕೊಂದು ಜೀವನವನ್ನೂ ಒದಗಿಸಿಕೊಟ್ಟಿರುವರು. 'ಜೀವನ ಸಾಹಿತ್ಯ'ವು ಅವರ ಬರಹಗಳ ಆಯ್ಕೆಯು. ಕನ್ನಡ ನಾಡಿಗೆ ಇವುಗಳಲ್ಲಿ ತುಂಬಿರುವಂಥ ವಿಚಾರಸರಣಿಯು ತೀರ ಹೊಸದು ಎಂದು ನಂಬುಗೆ. ಇದು ಕರ್ನಾಟಕಸ್ಥರಿಗೆ ತಿಳಿಯಲೆಂದು ಈ ಅನುವಾದವನ್ನು ಮಾಡಿರುವೆನು. ಓದುಗರು ಇದನ್ನು ಮನಮುಟ್ಟಿ ಓದಬೇಕು. ಇದರಲ್ಲಿಯ ವಿಚಾರಗಳನ್ನು ಕುರಿತು ಚಿಂತಿಸಬೇಕು ಮತ್ತು ಯುಕ್ತವೆಂದು ತೋರಿದರೆ ಅವರ ಜೀವನ ಸಾಹಿತ್ಯದ ಹುರುಳನ್ನು ತಮ್ಮ ಜೀವನದಲ್ಲಿ ಬೆಳೆಸಿಡಬೇಕೆಂದು ನನ್ನ ಪ್ರಾರ್ಥನೆ. —ಅನುವಾದಕ]

೧. ಜೀವಿತ ಇತಿಹಾಸ.

ಹಿಂದುಸ್ಥಾನದ ಇತಿಹಾಸವು ಹಿಂದೀ ಜನರಿಂದ ಬರೆಯಲ್ಪಡಲಿಲ್ಲೆಂಬ ಮಾತನ್ನು ನಾವು ಎಷ್ಟು ವಿರೋಧಿಸಿದರೂ ಪ್ರಾಚೀನ ಕಾಲದ ನಮ್ಮ ಇತಿಹಾಸವು ಬರೆಯಲ್ಪಟ್ಟಿದೆ ಎಂಬ ಮಾತು ಸಿದ್ಧವಾಗುವದಿಲ್ಲ. ರಾಮಾಯಣ-ಮಹಾಭಾರತಗಳು ಇತಿಹಾಸವೆಂದು ಹೇಳಿಕ್ಕೆ ಬರುವ ಭಾಗಗಳಲ್ಲಿ ಆಧುನಿಕ ದೃಷ್ಟಿಯಿಂದ ಅವು ಇತಿಹಾಸವಲ್ಲ. ರಾಮಾಯಣ ಮಹಾಭಾರತಗಳಲ್ಲಿಯೂ ನಾನಾ ಪುರಾಣಗಳಲ್ಲಿಯೂ ಇಲ್ಲಿ ಇತಿಹಾಸವೆಂತೂ ಇದೆ. ಅವರು ಅದನ್ನಲ್ಲದ ನಮ್ಮ ದರ್ಶನವನ್ನು ನಿಶ್ಚಯಿಸಲಿಕ್ಕೆ ದೃಷ್ಟಾಂತರೂಪವಾಗಿ ಕೊಟ್ಟಿದ್ದ ಮತ್ತು ಅಂಥ ಇತಿವೃತ್ತಗಳು-ಇತಿಹಾಸವೆಂದು ಹೇಳಲ್ಪಡುತ್ತವೆ. ಆದರೆ ಅವು ಸಿಂಹಳದ್ವೀಪದವರ ಮತ್ತು ಉತ್ತರದವರಲ್ಲಿಯೂ ಇತಿಹಾಸದ ಭಾಗವು ಬಹು ಸ್ವಲ್ಪ ಬಂದಿದೆ. ಕ[illegible]ದ ರಾಜರ ದಂಗೆಗಳ ಹಾಡೂ ಇದೇ. ಇಲ್ಲ ನಮ್ಮ ಇತಿಹಾಸವು ಏಕೆ ಇಲ್ಲ, ಎಂಬ ಪ್ರಶ್ನೆಯು ಹುಟ್ಟುತ್ತದೆ. ಜೀವನದ ಪ್ರತಿಯೊಂದು ಅಂಗವನ್ನು ತಕ್ಕಷ್ಟರ ಮಟ್ಟಿಗೆ ಮಾಡಿದವರಲ್ಲಿ ನಾವು ಅಸಾಧಾರಣ ಪ್ರವೀಣತೆಯನ್ನು ತೋರಿದ್ದೇವೆ! ಹೀಗಿದ್ದು ನಮ್ಮಲ್ಲಿ ಇತಿಹಾಸವೇಕೆ ಇಲ್ಲ?

ಮಾನವ ಜಾತಿಗೆ ಎದುರಾದ ತೊಡಕುಗಳ ಪೈಕಿ ಅನೇಕ ಪ್ರಶ್ನೆಗಳು ಇತ್ತೀಚೆಗೆ ನಿರ್ಣಯವಾಗಿವೆ, ಬೇರೆ ಕೆಲವು ಇನ್ನೂ ಅನಿಶ್ಚಿತವಾಗಿಯೇ ಇರುವವು—ನಿರ್ಣಯವಾಗಿ ಹೋದ ಪ್ರಶ್ನೆಗಳು ಇಂದಿಗೆ ಪ್ರಶ್ನೆಗಳಲ್ಲ, ಅವುಗಳ ನಿರಾಕರಣೆಯು ಆಗಿಹೋಗಿದ ಅವು ನಮ್ಮ ಸಾಮಾಜಿಕ ಜೀವನದಲ್ಲಿ ಸಂಸ್ಕಾರ ರೂಪವಾಗಿ ಬರತಕ್ಕವು. ಅನ್ನವು ಪಚನವಾದ ಮೇಲೆ ಅದು ರಕ್ತವಾಗುವಂತೆ ಆ ಪ್ರಶ್ನೆಗಳು ರಾಷ್ಟ್ರೀಯ ಮಾನ್ಯತೆಯನ್ನು ಪಡೆದು ಸಂಸ್ಕಾರಗಳಂತೆ ರೂಪಗೊಂಡಿವೆ. ಮನುಷ್ಯನು ಆಹಾರವು ಪಚನವಾದ ಮೇಲೆ, ತಾನು ನಿನ್ನೆ ತಿಂದದ್ದು ಏನು ಎಂಬುವದರ ವಿಚಾರವನ್ನು ಮಾಡದಂತೆ ನಿರ್ಣಯವಾದ ಪ್ರಶ್ನೆಗಳ ಬಗ್ಗೆ ಅವನು ಉದಾಸೀನನಾಗಿರುತ್ತಾನೆ.

ನಿರ್ಣಯವಾಗದೆ ಇದ್ದ ಪ್ರಶ್ನೆಗಳ ವಿಷಯವನ್ನು ಈಗ ವಿಚಾರಿಸಬೇಕಾಗಿದೆ. ನಾವು ಪರಮಾವಧಿಗಳು ಆದುದರಿಂದ ಅನಿಶ್ಚಿತ ಪ್ರಶ್ನೆಗಳನ್ನು ಕಾಗದದ ಮೇಲೆ ಬರೆದಿಡಲು ಬಳಸುವದಿಲ್ಲ. ನಿಶ್ಚಿತ ಪ್ರಶ್ನೆಗಳ ಬಗ್ಗೆ ಮತಭೇದವು ಎದೆಯುಂಟು. ಮತಭೇದಗಳಿದ್ದರೆ ಸಂಪ್ರದಾಯಗಳನ್ನು ನಾವು ಉಂಟುಮಾಡುವ ಶುಷ್ಕ ವಾದಾವಾದರಣೆಯಲ್ಲ; ಮತ್ತು ಅವರವರಲ್ಲಿ ಬೇರೆ ಬೇರೆ ಜಾತಿಗಳನ್ನು ಹುಟ್ಟಿಸಿದವು. ಜೀವನದಲ್ಲಿ ಮತಭೇದವಾಗಲು ಸ್ವಾತಂತ್ರ್ಯವಿತ್ತು. ವಿವಾದಗಳೆಲ್ಲ ಪ್ರತ್ಯಕ್ಷವಾಗಿ ಎದೆಸಿಟ್ಟು [illegible] ಜ್ಞಾನದಲ್ಲಿ ತಪ್ಪು ಬೀಳದಿರಲು ಶುದ್ಧ ಸ್ವತಂತ್ರ ಮಾರ್ಗವು ನಿರ್ಮಾಣವಾಯಿತು. ಆಹಾರ-ವ್ಯವಹಾರಗಳು ಬೇರೆಯಾದಂತೆ ಬೇರೆ ಬೇರೆ ಜಾತಿಗಳು ನಿರ್ಮಾಣವಾಯಿತು. ಸಾಮಾಜಿಕ ರೂಢಿಗಳಲ್ಲಿ ಹುಡುಗರು ಗೂಢವಿರಲು ಉಪಜಾತಿಗಳುಂಟಾದವು. ತಪ್ಪು ಕಟ್ಟಳೆಗಳನ್ನು ಮೀರಿದರೆ ಇಲ್ಲಿನ ಮಹಾಪಾತಕಗಳನ್ನು ಮಾಡಿದರೆ ಅವನಿಗಾಗಿ ಪ್ರಾಯಶ್ಚಿತ್ತ ವಿಧಾನವು ಒಂದು ಕೈಯಲ್ಲಿ ಒದಗಿತು. ಬಹಿಷ್ಕಾರಕ್ಕಾಗಿಯೇ ಹೊಸದೊಂದು ಜಾತಿಯು ನಿರ್ಮಿಸಲ್ಪಡುತ್ತಿತ್ತು. ನಾವು ಈ ಸಮಸ್ಯೆಗಳ ಬಗ್ಗೆ ಮಾತ್ರ ದಾಖಲೆ ಮಾಡಿ, ರಾಜಕೀಯ ಘಟನೆಗಳ ಮತ್ತು ರಾಜ್ಯದ ಏಳುಬೀಳುಗಳ ಇತಿಹಾಸವನ್ನು ಜಾಗ್ರತವಿರುವಂತೆ ಮಾಡಿರುತ್ತೇವೆ. ಈ ಪರಿಯಾಗಿ ಅನೇಕ ಸಾಮಾಜಿಕ ಆಂದೋಲನಗಳ ಇತಿಹಾಸವನ್ನು, ಅವುಗಳ ಮಧ್ಯ ಒಂದುಗೂಡಿದ ಮೂಲತತ್ವಗಳನ್ನು ನಾವು ಒದಗಿಸಿಕೊಂಡಿದ್ದೇವೆ. ಈ ಪರಿಯಾಗಿ ಇತಿಹಾಸವನ್ನು ಬರೆಯುವದಕ್ಕಿಂತಲೂ ಇತಿಹಾಸವನ್ನು ಜೀವಂತವಿಡುವದು, ಅಂದರೆ ಜೀವನದಲ್ಲಿ ಅಳವಡಿಸಿ ತಂದು ತೋರಿಸುವದು ನಮ್ಮ ಸಮಾಜದ ಗುಟ್ಟು. ರಂಗಗಳಂತೆ ಮಾಡಿದ ಕಾಗದದ ಮೇಲಿನ ಇತಿಹಾಸವನ್ನು ಬರೆದಿಡುವದು ಇಷ್ಟವೇ? ಜೀವನದಲ್ಲಿಯೇ ಅದನ್ನು ಸಂಗ್ರಹಿಸಿಡುವದು ಹಿತವೇ? ಇವುಗಳಲ್ಲಿ ಯಾವ ಮಾರ್ಗವು ಸುಕರವೆಂದು ಹೇಳುವದು ಕಠಿಣವೇ! ನಮ್ಮ ಪರಂಪರೆಯು ಅಕುಂಠಿತವಾಗಿರುವತನಕ ನಮ್ಮ ಇತಿಹಾಸವು ನಮ್ಮ ಜೀವನದಲ್ಲಿಯೇ ಬದುಕಿತ್ತು. ಈಗಾದರೂ ನಮ್ಮ ರೀತಿ ರೂಢಿಗಳನ್ನು, ಅವುಗಳಿಗಿರುವ ಮಾನ್ಯತೆಯನ್ನು, ಜಾತಿ ಸಂಘಟನೆಯನ್ನು ಪರೀಕ್ಷಿಸಿ ನೋಡಿದರೆ ಬಹಳಾಗಿ ನಮ್ಮ ಇತಿಹಾಸವು ದೊರಕುತ್ತದೆ. ಅವರ ಬದು ಹೆಚ್ಚಾಗಿ ರಾಜಕೀಯವಾಗಲಿ, ರಾಜನೈತಿಕವಾಗಲಿ ಇರಲಿಕ್ಕಿಲ್ಲ, ಸಾಮಾಜಿಕವೂ ಧಾರ್ಮಿಕವೂ ಆಗಿರುವದು. ಇತಿಹಾಸ ಸಂಶೋಧಕರು ಈ ದಿಕ್ಕಿನಿಂದ ಪ್ರಯತ್ನ ಮಾಡುವರೇನು?

ಶಸ್ತ್ರಸನ್ಯಾಸವೋ, ಆತ್ಮನಾಶವೋ?

ಅಮೇರಿಕೆಯ ಮಿ| ಲೆಸ್ಟರ ಪಿ ಬಾರ್ಲೋ ಎಂಬ ಇಂಜನಿಯರರು ಒಂದು ಹೊಸ ಶೋಧ ಹಚ್ಚಿದ್ದಾರೆ. ತಮ್ಮ ಶೋಧದ 'ಕಾಲ' ಸ್ವರೂಪವನ್ನು ನೋಡಿ ಸ್ವತಃ ಶೋಧಕರೇ ಚಿಂತಾಕ್ರಾಂತರಾಗಿದ್ದಾರೆ! 'ರೇಡಿಯೋ'ದ ಸಹಾಯದಿಂದ ಎಷ್ಟು ದೂರವಿರುವ- ನಾವಿಕಾ [illegible] ಮೊದಲಿರುವ- ನಗರಗಳ ಮೇಲೆ ಸಹ ಅತ್ಯುಗ್ರ ಸ್ಫೋಟಕ ದ್ರವ್ಯಗಳ, ಜ್ವಾಲಾಗ್ರಾಹಿ ದ್ರವ್ಯಗಳ ಹಾಗೂ ಪ್ರಾಣನಾಶಕ ವಾಯುಗಳ ಪ್ರಯೋಗ ಮಾಡಿ, ಆ ನಗರಗಳನ್ನು ಅಲ್ಪಾವಧಿಯಲ್ಲಿ ಉಧ್ವಸ್ತ ಮಾಡುವ ಶಕ್ತಿಯು ಈ ಶೋಧದಲ್ಲಿದೆ! ಮಿ| ಬಾರ್ಲೋರವರು ತಮ್ಮ ಶೋಧದ ವರ್ಣನೆಯನ್ನು ಹೀಗೆ ಮಾಡುತ್ತಾರೆ.

"ನನ್ನ ಶೋಧವನ್ನೆಂದು ನಿಮಗೆ ಹೇಳಲಾರೆ! ಆದರೆ ಇಷ್ಟು ಮಾತ್ರ ಹೇಳುವೆನು, ನನ್ನ ಶೋಧಕ್ಕೆ 'ಯಾಂತ್ರಿಕ [illegible]'ವೆಂದು ಸಂಬೋಧಿಸುವೆನು. ಇಂಥ ಸಾವಿರ ಯುನಿಟುಗಳನ್ನು ನಾನು ಯಾವದಾದರೊಂದು ಒಂದೇ ದಿವಸ ಈ ದಿನ ಮೇಲೆ ಪ್ರಯೋಗಿಸಬಲ್ಲೆನು, ಒಂದೊಂದು ಯುನಿಟು ೨೦೦ ಪೌಂಡು ಸ್ಫೋಟಕ ವಾಯು ಅಥವಾ ಜ್ವಾಲಾಗ್ರಾಹಿ ದ್ರವ್ಯವನ್ನು ಒಯ್ಯುವದು. ಎಷ್ಟು ದೂರದಲ್ಲಿ ನಿಂತು ಬೇಕಾದರೂ ನಮ್ಮ ಗುರಿಯು ಜಗದ ಮೇಲೆ ಅವುಗಳನ್ನು ಪ್ರಯೋಗಿಸಬಹುದು. ಯಾವ ದೊಡ್ಡ - ಅನೇಕ ಎಷ್ಟು ಯುನಿಟು ಹಾರಿಬಿಡುವ ಮಾತ್ರದಿಂದ ಎಷ್ಟು ಪ್ರಾಣನಾಶ ಮಾಡಬಲ್ಲೆವೆಂದು ನನಗೆ ಲಕ್ಷ ಮಾಡುವ ಪ್ರಮೇಯವಿದೆ. ಈ ಹಡಗಿನ ಯಂತ್ರ ನಡೆಸಲಿಕ್ಕೆ ೩೦೦೦ ಜನರಿದ್ದರೆ ಸಾಕು. ಅವರ ಕೆಲಸವು ಸರಳವಿದ್ದು ಅದನ್ನು ನಡೆಸುವ ಜನರಿಗೆ ಏನೊಂದು ಭಯವಿಲ್ಲ. ಈ ಯಂತ್ರದ ಉಪಯುಕ್ತತೆ ಎಷ್ಟು ಸಂದೇಹವಿಲ್ಲದ್ದು ಪ್ರಯೋಗವನ್ನು ನಾನು ಮಾಡಿ ತೋರಿಸಿದ್ದೇನೆ. ಕೊಂಗ್ರೆಸ್ಸಿನ (ಅಮೇರಿಕೆಯ ಲೋಕಸಭೆ) ಸಾಮಾನ್ಯ ಸಭಿಕರು ಮಾಡಬೇಕೆಂದು ಬಯಸಿದಲ್ಲಿ ಜಿನೀವಾದೊಳಗೆ ಸೇರಿದ ಶಸ್ತ್ರಸನ್ಯಾಸ ಪರಿಷತ್ತಿನ ಮುಂದೆ ಈ ಯಂತ್ರದ ಪ್ರಯೋಗ ಮಾಡಿ ತೋರಿಸುವೆನು. ಯಾರಾದರೂ ಮುಂದೆ ಬರಲೆಂದು ನನ್ನ ಇಚ್ಛೆ! ಈ ಯಂತ್ರದ ಸಹಾಯದಿಂದ ಯುದ್ಧ ಪ್ರವೃತ್ತಿಯೇ ಅಳಿಯುವದೆಂದು ನಾನು ತಿಳಿದಿರುವೆನು. ನನ್ನ ಶೋಧದ ಮೂಲಕ ನಗರಗಳ ನಾಶದ ಭಯದಿಂದ ಬೇರೆ ಏನೊಂದೂ ಬೇಡ! ವಿಶ್ವದಲ್ಲಿ ಶಾಂತಿಯು ನೆಲೆಸಿದರೆ ಅದೇ ನನಗೆ ದೊಡ್ಡ ಇನಾಮು!!"

ಪ್ರಪಂಚ-ಪರಿಚಯ.

ಇನ್ನೊಂದು ಮಹತ್ವದ ನಿಕಾಲೆ.

"ಬಹಿಷ್ಕಾರವು ಬೇಕಾಯಿದೇಶೀರ ವೇನ?" ಎಂಬ ಪ್ರಶ್ನೆಯು ಗುಂಟೂರ ಜಿಲ್ಲೆಯ ಸೆಶನ ಜಜ್ಜರವರಿಂದ ಕಳೆದ ವಾರದಲ್ಲಿ ನಿರ್ಣಯಕ್ಕೆ ಬಂತು. ಶ್ರೀ ಕಿಯು ಇಟಿಕಲ ಸೂರ್ಯನಾರಾಯಣರೆಂಬ ವಕೀಲರಿಗೆ ಬೇಕಾಯಿದೆ ಸಂಸ್ಥೆಯ ಕಾರ್ಯಕ್ಕೆ ನೆರವಾದ ಒಗ್ಗಂತ ಶಿಕ್ಷೆಯಾಗಿತ್ತು.

"ನಮ್ಮ ಲಕ್ಷಗಟ್ಟಲೆ ದೇಶಬಾಂಧವರು ಎಷ್ಟುವಸ್ತ್ರ ಇಲ್ಲದೆ ನರಳುತ್ತಿರುವರು. ಅವರ ಉದ್ಧಾರಾರ್ಥ ದೇಶಿ ಉದ್ಯೋಗ-ಧಂದೆಗಳಿಗೆ ಉತ್ತೇಜನ ಕೊಡಿರಿ. ವಿದೇಶಿ ವರ್ತಕರು ನಮ್ಮ ಉದ್ಯೋಗಗಳನ್ನು ನಷ್ಟಪಡಿಸುವ ಯತ್ನದಲ್ಲಿದ್ದಾರೆ. ದೇಶಿವಸ್ತ್ರಗಳಿಂದ ತಯಾರಾದ ಬಟ್ಟೆಗಳನ್ನೇ ಧರಿಸಿರಿ. ದೇಶಿ ಬಟ್ಟೆಗಳನ್ನೇ ಉಪಯೋಗಿಸಿರಿ. ವಿದೇಶಿ ಬಟ್ಟೆಗಳ ಬಹಿಷ್ಕಾರ ಹಾಕಿರಿ! ಇದೇ ನನ್ನ ಪ್ರಾರ್ಥನೆ" ಎಂಬರ್ಥದ ಹಸ್ತಪತ್ರಿಕೆಗಳನ್ನು ಹಂಚಿದ ಬಗ್ಗೆ ಅವರಿಗೆ ಶಿಕ್ಷೆಯಾಗಿತ್ತು. ಈ ಬಗ್ಗೆಯ ಮೇಲೆ ಗುಂಟೂರ ಸೆಶನ್ಸ ಕೋರ್ಟಿನಲ್ಲಿ ಅಪೀಲು ಆಗಿ ನ್ಯಾಯಾಧೀಶರು ಶಿಕ್ಷೆಯನ್ನು ರದ್ದುಪಡಿಸಿದ್ದಾರೆ.

⁂

ಬೇಕಾಯಿದೆ ಸಂಸ್ಥೆಗೆ ಸಹಾಯವೆಂದರೇನು?

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಬರೆದ ಉತ್ತರ— "ವಿದೇಶಿ ಬಟ್ಟೆಯ ಬಹಿಷ್ಕಾರವು ಸರಕಾರಕ್ಕೆ ಗೊತ್ತಿದ್ದಾಗ್ಯೂ, ಆ ಬಹಿಷ್ಕಾರದ ಜೊತೆಗೆ ಪಿಕೆಟಿಂಗ, ಆತಂಕ, ಬೆದರಿಕೆ ಯಾ ಗಿರಾಕಿಗಳ ಬಸ್ಸು ಬಡಿದು ಅವರಿಗೆ ತ್ರಾಸು ಕೊಡುವದು, ಇಂಥ ಬಲಾತ್ಕಾರದ ಬಹಿಷ್ಕಾರವು ಅಪರಾಧವಾಗುತ್ತದೆಂದು ವಿಧಿಸಲಿಕ್ಕೆ ಸರಕಾರಕ್ಕೆ ಸಂದರ್ಭವಿಲ್ಲ. ಆದ್ದರಿಂದ ಬೇಕಾಯಿದೆ ಸಂಸ್ಥೆಯ ಮೆಂಬರನಲ್ಲದ ಮನುಷ್ಯನು, ಆ ಸಂಸ್ಥೆಯು ಮಾಡಿದ ಠರಾವಿನಂತೆಯು, ಸ್ವತಃ ಖಾದಿಯನ್ನು ತೊಟ್ಟುಕೊಂಡರೆ ಅದನ್ನು ಗಣಿಸನೇ? ನ್ಯಾಯ ಇನೇ ರಾಜರಾಜನದ ಏನೇ ಕಲಮಿನ ಕಕ್ಷೆಯೊಳಗೆ ಬಾರದಂಥ ವಿದೇಶಿ ವಸ್ತ್ರಗಳ ಬಹಿಷ್ಕಾರವನ್ನು ಜನರಲ್ಲಿ ಪ್ರಚಾರ ಮಾಡಿದರೆ ಅವನು ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟಿನ ೧೭ (೧) ಕಲಮಿನಂತೆ ಗುನ್ಹೆಗಾರನಾಗುವದಿಲ್ಲ ... ... ೧೭(೧) ರಂತೆ ಸ್ವೇಚ್ಛೆಯ ಸಹಾಯವು ಗುನ್ಹೆಯಾಗುತ್ತದೆ. ಲೋಕಶಾಲೀಯ ನ್ಯಾಯದಿಂದ ಸಂಭವಿಸಬಹುದಾದ ಸಹಾಯವು ಗುನ್ಹೆಯಲ್ಲ! ಒಂದು ಉದಾಹರಣೆಯನ್ನು ತಕ್ಕೊಳ್ಳಿರಿ: ಯಾವನೊಬ್ಬ ಕೊಂಗ್ರೆಸ ವಿರೋಧಿಯು ಖಾದಿಯನ್ನು ತೊಟ್ಟರೆ, ವಿದೇಶಿ ವಸ್ತ್ರಗಳ ಬಹಿಷ್ಕಾರದ ಪ್ರಚಾರ ಮಾಡಿದರೆ, ಹಿಂದು-ಮುಸಲ್ಮಾನರೊಳಗೆ ಐಕ್ಯದ ಉಪದೇಶ ಮಾಡಿದರೆ, ಯಾ ಅಸ್ಪೃಶ್ಯತೆಯನ್ನು ನಾಶಪಡಿಸಲು ಪ್ರಯತ್ನ ಮಾಡಿದರೆ, ಬೇಕಾಯಿದೆ ಠರಾಯಿಸಲ್ಪಟ್ಟ ಅಖಿಲ ಭಾರತೀಯ ಕೊಂಗ್ರೆಸ ಕಮಿಟಿಯ ಕಾರ್ಯಕ್ರಮದಲ್ಲಿ ಈ ಕಾರ್ಯಗಳು ಸೇರಿದ್ದಾವೆಂಬ ಮಾತ್ರದಿಂದ ಅವನು ಗುನ್ಹೆಗಾರನಾಗಲಾರನು! ಅ. ಭಾ. ಕಾಂ. ಕಮಿಟಿಯ ಹೆಸರಾಗಲಿ, ಅದರ ನಿರ್ಣಯವನ್ನಾಗಲಿ ಕೇಳದ, ಆ ಕಮಿಟಿಯ ಕಾರ್ಯಕ್ಕೆ ನೆರವಾಗಬೇಕೆಂಬ ಕಲ್ಪನೆಯಿಲ್ಲದ ಯಾವನು ಒಬ್ಬನು ಬೇಕಾಯಿದೆ ಉಪ್ಪು ತಯಾರಿಸಿದರೆ, ಆ ಉಪ್ಪು ತಯಾರಿಸುವದು ಆ ಕಮಿಟಿಯ ಉದ್ದೇಶಗಳಲ್ಲಿ ಒಂದಾಗಿರುತ್ತದೆಂಬವದರಿಂದಲೇ ೧೭ (೧) ಕಲಮಿನಂತೆ ಅಪರಾಧಿಯಾಗಲಾರನು!"

⁂

ಕೇವಲ ಬಹಿಷ್ಕಾರವು ಗುನ್ಹೆಯಲ್ಲ!

ಆ ಜಜ್ಜರು ಮುಂದೆ ಬರೆಯುತ್ತಾರೆ— "ಖಾದಿಯ ಉಪಯೋಗ, ದೇಶಿ ಗಿರಣಿಗಳ ಬಟ್ಟೆಯ ಪ್ರಚಾರ ಮಾಡುವದು ಕಾಯಿದೆಶೀರ ಇರುತ್ತದೆ, ಸ್ತುತ್ಯವೂ ಇರುತ್ತದೆ. ವಿದೇಶಿ ಬಟ್ಟೆಯ ಬಹಿಷ್ಕಾರದ ಪ್ರಚಾರವು ಯಾವ ತರಗತಿಯಲ್ಲಿರದಿದ್ದರೂ, ಅದು ಗೌರ್ನಮೆಂಟಿನ ಇಚ್ಛೆಯ ವಿರುದ್ಧವಿದ್ದರೂ ಆ ಬಹಿಷ್ಕಾರವು ಏನೇ ಕಲಮಿನ ಕಕ್ಷೆಯಲ್ಲಿ ಬಿದ್ದ ಹೊರತು ಅದಾಗ್ಯೂ ಬೇರೆ ಯಾವ ಕೃತಿಯು ಗುನ್ಹೆಯಾಗಲಾರದು."

⁂

ಹಾವಿನ ಕಡಿತ, ಮಂತ್ರ-ತಂತ್ರಗಳ ಪ್ರಭಾವ!

ಚಿತ್ರಗುಂಟಾ ಸ್ಟೇಶನದಲ್ಲಿ ಮದ್ರಾಸ-ಸದರ್ನ ಮರಾಠಾ ರೇಲ್ವೆಯ ಟ್ರಾಫಿಕ್ ಇನ್ಸ್ಪೆಕ್ಟರರಾದ ಮಿ. ... ಅವರ ೧೧ ವರ್ಷ ಪ್ರಾಯದ ಹುಡುಗನಿಗೆ ನಾಗರ ಹಾವು ಕಚ್ಚಿತು. ಕೆಲವು ಹೊತ್ತಿನಲ್ಲಿ ಹುಡುಗನು ಎಚ್ಚರತಪ್ಪಿ ಬಿದ್ದನು, ವಿಷವು ಏರಹತ್ತಿತು! ಬೇರೆಯವರು ಕೂಡಲೇ ಪ್ರಾಂತದ ... ಸ್ಟೇಶನ ಮಾಸ್ತರ ಮಿ. ನರಸಯ್ಯರಿಗೆ ಟೆಲಿಫೋನಿನ ಮೂಲಕ ಈ ಸಂಗತಿ ತಿಳಿಸಿದರು. ಮಿ. ನರಸಯ್ಯನವರು ಆ ಹುಡುಗನಿಗೆ ದೂರದ ಒಂದು ಪ್ರತ್ಯೇಕ ಸ್ಥಳದಲ್ಲಿ ಇದ್ದರೂ, ಟೆಲಿಫೋನಿನ ಮೂಲಕವೇ ಕೆಲವು ಮಂತ್ರಗಳನ್ನು ಉಚ್ಚರಿಸಿದರು! ಪ್ರಹರ ಹೊತ್ತು ಕಳೆದ ಮೇಲೆ ಆ ಹುಡುಗನು ನಿದ್ದೆಯೊಳಗಿಂದ ಎಚ್ಚತ್ತಹಾಗೆ ಎದ್ದು ನಡೆದನು! ಇನ್ನು ಈಗ ಜನ್ಮಾಂತರದ ಮಂತ್ರ ತಂತ್ರಗಳಲ್ಲಿ ಹುರುಳಿಲ್ಲವೇ?

⁂

ಸಂಯುಕ್ತ ಭಾರತದಲ್ಲಿ ಹಿಂದುಗಳು ಹೀನಬಲರೇ?

ದಿಲ್ಲಿಯಲ್ಲಿ ಈಗ ನರೇಂದ್ರ ಮಂಡಳದ ಸಭೆಯು ನಡೆದಿದೆ. ಸಂಯುಕ್ತ ಭಾರತದ ರಾಜ್ಯಘಟನೆಯ ಒಗ್ಗೂ ಮಂಡಳದಲ್ಲಿ ಚರ್ಚೆ ಸಾಗುತ್ತಲಿದೆ. ಚರ್ಚೆಯು ಇನ್ನೂ ನಡೆದಿದೆ. ಒಂದು ಸಂಗತಿ ಮಾತ್ರ ನಿಶ್ಚಿತವಾಗಿದೆಯಂತೆ: ಸಂಯುಕ್ತ ಭಾರತದ ಕಾಯದೆ ಕೌನ್ಸಿಲುಗಳಲ್ಲಿ ಸಂಸ್ಥಾನಿಕರಿಗೆ ಶೇಕಡಾ ೪೦ ಪ್ರತಿನಿಧಿಗಳು ಬೇಕು! ಆ ಜೋಡದಲ್ಲಿ ಕಾಡಿದ ಮುಸಲ್ಮಾನ ಪರಿಷತ್ತಿನ ಬೇಡಿಕೆಯಂತೆ ಮುಸಲ್ಮಾನರಿಗೆ ಸಂಪೂರ್ಣ ಕಾಯಿದೆ ಕೌನ್ಸಿಲಿನಲ್ಲಿ ಶೇಕಡಾ ೩೩ ಪ್ರತಿನಿಧಿಗಳು ಬೇಕು! ಶೀಖ ಸಮಾಜಕ್ಕೆ ಶೇಕಡಾ ೫ ಪ್ರತಿನಿಧಿಗಳು ಬೇಕು! ಎಂಗ್ಲೋ-ಇಂಡಿಯನ್ನರಿಗೂ ಬ್ರಿಟಿಶ ವರ್ತಕರಿಗೂ ತಮ್ಮ ಹಿತರಕ್ಷಣೆಯ ಬಗ್ಗೆ ವಿಶೇಷ ಪ್ರಾತಿನಿಧ್ಯ ಬೇಕೇ ಬೇಕು!! ಈ ಎಲ್ಲ ಬೇಡಿಕೆಗಳನ್ನು ಮನ್ನಿಸುತ್ತ ನಡೆದರೆ, ಬಹು ಜನಸಂಖ್ಯೆಯುಳ್ಳ ಹಿಂದುಗಳಿಗೆ ಕಾಯಿದೆ ಕೌನ್ಸಿಲಿನಲ್ಲಿ ಸ್ಥಳ ಸಿಗುವ ಬಗೆ ಎಂತು? ಅವರು ಹಿಂದೀ ಮಹಾಸಾಗರದಲ್ಲಿ ಪ್ರವೇಶಿಸುವದು ಒಳಿತು!!

⁂

ಮುಸಲ್ಮಾನ ಪರಿಷತ್ತಿನ ಬೆದರಿಕೆ!

ಲಾಹೋರದಲ್ಲಿ ನೆರೆದ ಅಖಿಲ ಭಾರತೀಯ ಮುಸಲ್ಮಾನರ ಪರಿಷತ್ತು ಈಗ ಕೊನೆಗಂಡಿತು. ಕೊನೆಯ ಅಧಿವೇಶನದಲ್ಲಿ ಬಹಳ ಗಡಿಬಿಡಿಯಾಗಿ ಪೋಲೀಸರಿಗೆ ಕರೆತಂದರು. ಶಾಂತತೆ ಪ್ರಸ್ಥಾಪಿಸುವ ಪ್ರಸಂಗ ಸಹ ಬಂತು. ವಿಶೇಷ ಚರ್ಚೆ ಭಾಷಣಗಳಿಲ್ಲದೆ ಕೆಲವು ಠರಾವುಗಳು ಪಾಸಾದವು. ಪರಿಷತ್ತು ಕೈಕೊಂಡ ಮುಖ್ಯ ತೀರ್ಮಾನದ ಸಾರಾಂಶವೇನೆಂದರೆ - ಎರಡೂ ರೌಂಡ ಟೇಬಲ್ ಪರಿಷತ್ತುಗಳಲ್ಲಿ ಮುಸಲ್ಮಾನರ ಬೇಡಿಕೆಗಳಿಗೆ ಮನ್ನಣೆ ಸಿಗಲಿಲ್ಲ, ಮುಸಲ್ಮಾನರಲ್ಲಿ ಬಹಳೇ ಅಸಂತೋಷವಿದ್ದಿದೆ, ಈ ವರೆಗೆ ಸರಕಾರದ ಕೂಡ ಸಹಕಾರ ಮಾಡಿ ವಿಶೇಷ ಪ್ರಯೋಜನವಾಗಲಿಲ್ಲ, ಮುಸಲ್ಮಾನರ ಯಾವತ್ತೂ ಬೇಡಿಕೆಗಳನ್ನು ಪೂರೈಸುವ ಆಶ್ವಾಸನ ಕೊಡದೆ ಘಟನೆಯನ್ನು ತಯಾರಿಸುತ್ತಲಿರುವ ರೌಂಡ ಟೇಬಲ್ ಕಮಿಟಿಗಳ ಕಾರ್ಯದಲ್ಲಿ ಸಹಕಾರ ಮಾಡುವದು ಸಾಧ್ಯವಿಲ್ಲ, ಆದಾಗ್ಯೂ ಜಾತಿ ಜಾತಿಯ ತಂಟೆಯಲ್ಲಿ ಸಾಮ್ರಾಜ್ಯ ಸರಕಾರವು ಆದಷ್ಟು ಶೀಘ್ರ ನಿಕಾಲೆ ಹೇಳುತ್ತೇವೆಂದು ಜಾಹೀರು ಮಾಡಿ ಆ ನಿಕಾಲೆಯನ್ನು ಅವರು ತ್ವರಾ ಕೊಡಬೇಕು, ಅಂದರೆ ಮುಸಲ್ಮಾನರಿಗೆ ಘಟನೆಯಲ್ಲಿ ತಮ್ಮ ಸ್ಥಾನವೆಲ್ಲದೆಯೆಂದು ಕಂಡುಬರುವದು, ಜೂನ ತಿಂಗಳ ಪೂರ್ವದಲ್ಲಿ ಈ ನಿಕಾಲೆಯು ಬರದಿದ್ದರೆ ಜುಲಾಯಿ ತಿಂಗಳಲ್ಲಿ ಪರಿಷತ್ತಿನ ಕಾರ್ಯವಾಹಕ ಮಂಡಳವು ಅಸಹಕಾರಿತೆಯ ಚಳವಳವನ್ನು ಕೈಕೊಳ್ಳಬೇಕು. ಅಂಥ ಪ್ರಸಂಗವು ಬಂದಲ್ಲಿ ಅದಕ್ಕೆ ಸಿದ್ಧರಾಗಿರುವ ಉದ್ದೇಶದಿಂದ ದೇಶದೊಳಗೆ ಅಲ್ಲಲ್ಲಿ ಪರಿಷತ್ತಿನ ಶಾಖೆಗಳನ್ನು ಏರ್ಪಡಿಸಬೇಕು, ಸಮಾಜದಲ್ಲಿ ಐಕ್ಯವನ್ನುಂಟುಮಾಡಬೇಕು, ಮುಸಲ್ಮಾನ ಸಮಾಜದ ಬೇಡಿಕೆಗಳನ್ನು ಒಪ್ಪಿಕೊಳ್ಳಲಿಕ್ಕೆ ಒತ್ತಾಯಪಡಿಸುವರೆ ಬೇಕಾದ ಆತ್ಮತ್ಯಾಗ ಮಾಡಲಿಕ್ಕೆ ವಚನಬದ್ಧರಾದ ಸ್ವಯಂಸೇವಕರನ್ನು ತಯಾರಿಸಬೇಕು, ಆ ಬಗ್ಗೆ ತಗಲುವ ಖರ್ಚಿಗೆ ನಿಧಿಯನ್ನು ಕೂಡಿಸಬೇಕು. ನಿರ್ಣಯವಂತೂ ಮನೋರಂಜಕವಿದೆ! ಇದರೆ ಎಂದೆಂದಿಗೂ ಸರಕಾರದ ಮರ್ಜಿಯಂತೆ ಕುಣಿಯುತ್ತಿರುವ ಈ ಪರಿಷತ್ತಿನ ಬೆದರಿಕೆಯ ಲೇಶಕ್ಕೆ ಸರಕಾರವು ಸೊಪ್ಪು ಹಾಕುವದೇ?

⁂

ಬಂಗಾಲದಲ್ಲಿ ಬಿರುಗಾಳಿಯ ಹಾವಳಿ.

ಉತ್ತರ ಬಂಗಾಲದಲ್ಲಿ ದೊಡ್ಡ ಬಿರುಗಾಳಿಯು ಎದ್ದು ಪದ್ಮಾ ನದಿಯನ್ನು ದಾಟಿತು. ನದಿಯ ಎರಡೂ ಮಗ್ಗುಲಿಗಿರುವ ಅನೇಕ ಹಳ್ಳಿಗಳಲ್ಲಿ ಬಹಳ ಅನರ್ಥವಾಗಿ ನೂರಾರು ಜನರು ಮನೆಮಾರು ಇಲ್ಲದೆ ನಿರಾಶ್ರಿತರಾಗಿರುವರು! ಶಿವಾಲಯ ಎಂಬಲ್ಲಿರುವ ಪೋಲೀಸ ಕಚೇರಿಯೂ, ಟಪಾಲ ಕಚೇರಿಯೂ ಹಾರಿ ಹೋದವು! ನಾಲ್ಕು ಜನರು ಸತ್ತುಹೋದರು! ೩೦ ಜನರಿಗೆ ಜಬರ ಗಾಯವಾಗಿದೆ, ಹತ್ತು ಜನರಂತು ಅತ್ಯವಸ್ಥರಿದ್ದಾರೆ!

⁂

ಅಮೇರಿಕೆಯಲ್ಲಿ ಬಹು ದೊಡ್ಡ ಹಾವಳಿ!

ಮಾರ್ಚ ತಾ. ೨೧ಕ್ಕೆ ಅಮೇರಿಕೆಯ ದಕ್ಷಿಣ ಭಾಗದೊಳಗಿನ ೪ ಸಂಸ್ಥಾನಗಳಲ್ಲಿ ಅತಿ ಉಗ್ರವಾದ ಬಿರುಗಾಳಿ ಬೀಸಿತು. ಅಲಬಾಮಾ ಎಂಬ ಒಂದೇ

ಸಂಸ್ಥಾನದಲ್ಲಿ ೩೦೦ ಜನರು ಮೃತ್ಯುಮುಖದಲ್ಲಿ ಬಿದ್ದರು! ೫॥ ಸಾವಿರ ಜನರು ಗಾಯ ಹೊಂದಿದರು! ೭ ಸಾವಿರ ಜನರು ಬೀದಿ-ಪೈಲುಗಳಲ್ಲಿ ಬಿದ್ದಿರುವರು! ೧ ಕೋಟಿ ರೂಪಾಯಿಯ ಸೊತ್ತು ಹಾಳಾಗಿ ಹೋಯಿತು!!

⁂

ಪಾಪಕ್ಕೆ ಪ್ರಾಯಶ್ಚಿತ್ತ!

ಮುಲ್ತಾನದೊಳಗಿನ "[illegible]" ಪತ್ರಿಕೆಯ ಸಂಪಾದಕ ಸುಖಾನಂದರೆಂಬವರು, ಮುಲ್ತಾನದ ೫ ಮಂದಿ ವರ್ತಕರು ಪಂಜಾಬದ ಗವ್ಹರ್ನರರ ಮೇಲೆ ಬಾಂಬು ಒಗೆಯುವ ಯೋಜನೆಯಲ್ಲಿದ್ದಾರೆಂದು ಪೋಲೀಸರಿಗೆ ಸುಳ್ಳೇ ವರ್ತಮಾನ ಕೊಟ್ಟರು. ವರ್ತಕರಿಗೆ ಸೆರೆಯಾಯಿತು! ಅವರು ಬಿಡುಗಡೆಯಾಗಬೇಕಾದರೆ ೩ ಲಕ್ಷ ರೂಪಾಯಿಗಳ ಜಾಮೀನು ಕೊಡಬೇಕಾಯಿತು! ಮುಂದೆ ಖಟ್ಲೆಯ ವಿಚಾರದಲ್ಲಿ ಸುಖಾನಂದರು ಕೊಟ್ಟ ಸುದ್ದಿಯು ಸುಳ್ಳೆಂದು ಸಿದ್ಧವಾಯಿತು. ವರ್ತಕರು ನಿರ್ದೋಷಿಗಳೆಂದು ನಿರ್ಣಯವಾಗಿ ಮುಕ್ತರಾದರು. ಈಗ ಸುಖಾನಂದರ ಕಡೆಯಿಂದ ಸುಳ್ಳು ಮಾಹಿತಿ ಕೊಟ್ಟು ನಿರಪರಾಧಿಗಳಿಗೆ ಪೀಡಿಸಿದ ಒಬ್ಬ ರೂ. ೨೦೦ರ ಜಾಮೀನು ತಕ್ಕೊಂಡಿದ್ದಾರೆ! ಸುಳ್ಳು ಸುದ್ದಿಗಳನ್ನು ನಂಬಿ ಜನರಿಗೆ ಪೀಡಿಸುವ ಪೋಲೀಸರಿಗೆ ಮಾತ್ರ ಮಾಫಿಯೇ?

⁂

ವಿಲಾಯತಿಯಲ್ಲಿ ಬೆಂಕಿಯ ಹಾವಳಿ!

ಇಂಗ್ಲಂಡದೊಳಗೆ ಸಸೆಕ್ಸ ಜಿಲ್ಹೆಯಲ್ಲಿರುವ ಎಶ್ ಡೌನೆ ಬೆಟ್ಟವು ಸುಂದರವಾದ ಬೆಟ್ಟವು. ಹೋದ "ಗುಡ್ ಫ್ರಾಯಡೇ" ಹಬ್ಬದ ದಿನ ಸಾವಿರಾರು ಜನರು ಈ ಬೆಟ್ಟದಲ್ಲಿ ವಿಹಾರ ಮಾಡಿದರು, ವನಭೋಜನ ಮಾಡಿದರು. ಮರುದಿನ ಬೆಳಿಗ್ಗೆ ಬೆಟ್ಟಕ್ಕೆ ಬೆಂಕಿ ಬಿದ್ದು, ನಾಲ್ಕು ನೂರು ಎಕ್ರೆ ಬೆಟ್ಟವು ಸುಟ್ಟು ಬೂದಿಯಾಯಿತು! ಬೆಂಕಿಯ ಜ್ವಾಲೆಗಳು ೧೦—೧೫ ಆಳು ಎತ್ತರ ತನಕ ಹಾರುತ್ತಿದ್ದವು!

⁂

ಪಂಡಿತ ಜವಾಹಿರಲಾಲರ ಕ್ಷೇಮಸಮಾಚಾರ

ಪಂ| ಜವಾಹಿರಲಾಲರ ಪತ್ನಿ ಶ್ರೀ| ಕಮಲಾ ನೆಹರೂ ೫ ತಾ॥ಕ್ಕೆ ಬರೇಲಿ ಜೈಲಿನಲ್ಲಿ ತಮ್ಮ ಪತಿಯ ದರ್ಶನಕ್ಕೆ ಹೋಗಿದ್ದರು. ಪಂ| ಜವಾಹಿರಲಾಲರಿಗೆ ದಿನಾಲು ಸಂಜೆಗೆ ಸ್ವಲ್ಪ ಜ್ವರ ಏರುತ್ತದೆ. ಎದೆಯ ಕೆಳಗೆ ಬಲಪಕ್ಕದಲ್ಲಿ ಸತತ ನೋವಾಗುತ್ತದೆ. ಜೈಲ ಡಾಕ್ಟರರು ಉಪಚಾರ ನಡಿಸುತ್ತಾರೆ. ಪಂಡಿತರ ತೂಕದಲ್ಲಿ ಹೆಚ್ಚು-ಕಡಿಮೆಯಾಗಿಲ್ಲ

⁂

ಪಂಜಾಬದ ಮಂತ್ರಿಗಳ ತಲಬು,——— ಆಯರ್ಲಂಡದೊಳಗಿನ ತಲಬುಗಳು.

ಪಂಜಾಬದ ಮಂತ್ರಿಗಳಿಗೆ ತಿಂಗಳಿಗೆ ರೂ ೫೦೦೦ ತಲಬು ಸಿಗುತ್ತಿತ್ತು. ನೂರಕ್ಕೆ ೧೦ರಂತೆ ಕತ್ತರಿ ಹಾಕುವ ಯೋಜನೆಯಾದಂದಿನಿಂದ ರೂ ೪೫೦೦ ಸಿಗುತ್ತದೆ. ಕಳೆದ ತಿಂಗಳಲ್ಲಿ ಈ ತಲಬನ್ನು ರೂ ೩೦೦೦ಕ್ಕೆ ಇಳಿಸಬೇಕಾಗಿ ಕೌನ್ಸಿಲಿನಲ್ಲಿ ಒಬ್ಬರು ಠರಾವು ತಂದರು. ಬಹಳ ಚರ್ಚೆಯಾಯಿತು! ಕೋಶಾಧ್ಯಕ್ಷರು, ಈ ರೀತಿ ತಲಬು ಕಡಿಮೆ ಮಾಡಿದರೆ ಚಲೋ ಜನರು ಸಾರ್ವಜನಿಕ ಸೇವೆ ಮಾಡಲಿಕ್ಕೆ ಮುಂದೆ ಬರಲಿಕ್ಕಿಲ್ಲವೆಂದು ವಾದಿಸಿದರು! ಠರಾವು ಬಿದ್ದು ಹೋಯಿತು!!

ಈಗ ಆಯರ್ಲಂಡದೊಳಗಿನ ಕಥೆ ಕೇಳಿರಿ. ಕಾರ್ಯಕಾರಿ ಮಂಡಳದ ಅಧ್ಯಕ್ಷ ಮಿ| ಡಿ ವ್ಹೆಲೆರಾ ಅವರು ವರ್ಷಕ್ಕೆ ೨೫೦೦ ಪೌಂಡಗಳ ಬದಲಾಗಿ ೧೫೦೦ ಪೌಂಡಗಳನ್ನು ಸ್ವೀಕರಿಸುವರು, ಮಂತ್ರಿಗಳು ೧೭೦೦ ಪೌಂಡುಗಳ ಬದಲಾಗಿ ೧೦೦೦ ಪೌಂಡುಗಳನ್ನು ತಕ್ಕೊಳ್ಳುವರು. ಪಾರ್ಲಿಮೆಂಟಿನ ಸೆಕ್ರೆಟರಿಗಳು ೧೨೦೦ ಪೌಡುಗಳ ಬದಲಾಗಿ ೭೫೦ ಪೌಂಡುಗಳ ಮೇಲೆ ಕೆಲಸ ಮಾಡಲಿಕ್ಕೆ ಒಪ್ಪಿರುವರು. ಹಿಂದುಸ್ಥಾನಕ್ಕಿಂತ ಸಂಪನ್ನವಿರುವ ಆಯರ್ಲಂಡದೊಳಗಿನ ಮುಖ್ಯ ಮುಖ್ಯ ಅಧಿಕಾರಿಗಳ ತಲಬುಗಳ ಪ್ರಮಾಣ ನೋಡಿರಿ. ತಲಬು ಕಡಿಮೆಯಾದ್ದರಿಂದ ಅಲ್ಲಿ ಅಧಿಕಾರದ ಜಾಗೆಗಳು ಖಾಲಿ ಬಿದ್ದ ಸುದ್ದಿ ಯಾರಾದರೂ ಕೇಳಿದವರೇ?

⁂

ಒತ್ತಾಯದ ಕಾಯಿದೆಭಂಗ!

ಪುಣೆಯಲ್ಲಿ ಡಾ| ಶ್ರೀಧರ ಮಹಾದೇವ ಜೋಶಿ ಎಂಬವರಿಗೆ ಎಮರ್ಜನ್ಸಿ ಶಾಸನದಂತೆ ಸೆರೆಹಿಡಿದಿದ್ದರು. ಕೆಲವು ದಿವಸಗಳಲ್ಲಿ ಇವರಿಗೆ ಪುಣೆ ಲಷ್ಕರದ ಹದ್ದುಬಿಟ್ಟು ಹೋಗಬಾರದಾಗಿ ನಿರ್ಬಂಧ ಹಾಕಿ ಬಿಟ್ಟುಕೊಟ್ಟರು. ಅಲ್ಲದೆ ಹಗಲು ರಾತ್ರಿ ಪೋಲೀಸರು ಅವರ ಬೆನ್ನು ಹತ್ತಿದ್ದರು. ಅವರ ವೃದ್ಧ ತಾಯಿಯು ಕರ್ನಾಟಕದಲ್ಲಿ ಅತ್ಯವಸ್ಥ ಸ್ಥಿತಿಯಲ್ಲಿದ್ದ ಕಾರಣ ಅವರು ಕರ್ನಾಟಕಕ್ಕೆ ಹೋಗಲು ಅಪ್ಪಣೆ ಬೇಡಿದರು, ೮ ದಿನಗಳಾದರೂ ಅರ್ಜಿಗೆ ಉತ್ತರ ಬರಲಿಲ್ಲ! ಲಷ್ಕರದ ಹದ್ದಿನಲ್ಲಿದ್ದರೆ ಹೊಟ್ಟೆ ತುಂಬುವದೆಂತು? ಆದ್ದರಿಂದ ತಮಗೆ ಉದರನಿರ್ವಾಹಕ್ಕೆ ಏನಾದರೂ ವೆಚ್ಚ ಕೊಡಬೇಕೆಂದು ಸರಕಾರಕ್ಕೆ ಅರ್ಜಿ ಮಾಡಿದರು. ಆ ಅರ್ಜಿಗೂ ಪ್ರತ್ಯುತ್ತರ ಸಿಗಲಿಲ್ಲ. ಈ ಎಲ್ಲ ತಮ್ಮ ದುರವಸ್ಥೆಯನ್ನು ಪುಣೆಯ ಡಿ| ಮೆಜಿಸ್ಟ್ರೇಟರಿಗೆ ಬರೆದು ತಿಳಿಸಿ, ನಿರುಪಾಯದಿಂದ ತಮಗೆ ಸರ್ಕಾರದ ಹುಕುಮು ಮುರಿಯಬೇಕಾಗಿದೆಯೆಂದು ಸೂಚನೆ ಕೊಟ್ಟು ಅವರು ಹುಕುಮು ಮುರಿದು ಪುಣೆ ಬಿಟ್ಟು ಹೋದರು! ಕೂಡಲೆ ಅವರಿಗೆ ಸೆರೆಯಾಯಿತು! ಹುಕುಮಿನ ಉಲ್ಲಂಘನೆ ಬಗ್ಗೆ ೨ ವರ್ಷಗಳ ಕಠಿಣ ಶಿಕ್ಷೆ ಮತ್ತು ೫೦ ರೂ ದಂಡವಾಯಿತು. ಇಷ್ಟಿದ್ದರೂ ಸರಕಾರಿ ನಿರ್ಬಂಧನೆಗಳ ತ್ರಾಸು ಸಹಿಸಲಾರದೆ ಡಾ| ಜೋಶಿಯವರಿಗೆ ಒತ್ತಾಯದ ಕಾಯಿದೆ ಭಂಗ ಮಾಡಬೇಕಾಯಿತು! ಆದರೆ ಶಿಕ್ಷೆಯೇನು ಕಡಿಮೆಯಾಗಲಿಲ್ಲ!

⁂

ಸಂಧಾನದ ಮಾತು ನಿಜವಲ್ಲ

ಶ್ರೀ| ಸರೋಜಿನಿ ನಾಯುಡುರವರು ತಮ್ಮ ಕೂಡ ಸಂಧಾನದ ಮಾತನ್ನು ಯಾರೂ ಎತ್ತಲಿಲ್ಲವೆಂದು ಖುಲಾಸೆ ಮಾಡಿರುತ್ತಾರೆ. ಆಫ್ರಿಕೆಯೊಳಗಿನ ಹಿಂದೀ ಜನರ ಹಿತರಕ್ಷಣೆಯ ಬಗ್ಗೆ ನಡೆದ ಕಾರ್ಯಕಲಾಪದ ಪರಿಸಮಾಪ್ತಿಗಾಗಿ ತಾವು ದಿಲ್ಲಿಗೆ ಹೋಗಿದ್ದೆವೆಂತಲೂ, ಈ ಕೆಲಸ ಮುಗಿದ ಮೇಲೆ ರಾಷ್ಟ್ರೀಯ ಸಭೆಯವರ ಕೂಡ—ವಿಶೇಷತಃ [illegible] ಪಂ| ಮಾಲವೀಯರ ಕೂಡ—ಪ್ರಸ್ತುತ ಪರಿಸ್ಥಿತಿಯ ಮೇಲೆ ವಿಚಾರವಿನಿಮಯ ಮಾಡಿದೆವೆಂತಲೂ ನಾಯುಡುರವರು ಜಾಹೀರಮಾಡಿದ್ದಾರೆ. "ತುರ್ತಕ್ಕೆ ಸಂಧಾನವಾಗುವ ಲಕ್ಷಣಗಳು ಕಾಣುವದಿಲ್ಲ! ಕಾದಾಟವು ದೀರ್ಘ ಕಾಲ ನಡೆಯುವದು. ರಾಷ್ಟ್ರೀಯ ಸಭೆಯು ತಾನಾಗಿ ಒಪ್ಪಂದದ ಮಾತು ಎತ್ತಲಿಕ್ಕಿಲ್ಲ. ಸಂಧಿ ಪ್ರಸ್ತಾಪ ಬಂದರೆ ಅದನ್ನು ಸ್ವೀಕರಿಸಲಿಕ್ಕಾಗಲಿ ಧಿಕ್ಕರಿಸಲಿಕ್ಕಾಗಲಿ ರಾಷ್ಟ್ರದಲ್ಲಿ ಒಬ್ಬ ಮಹಾತ್ಮರಿಗೆ ಮಾತ್ರ ಅಧಿಕಾರವಿದೆ. ಬಾಕಿಯವರು ಅವರ ಆಜ್ಞಾವರ್ತಿಗಳಾಗಿರತಕ್ಕದ್ದು" ಎಂದು ಶ್ರೀಮತಿಯವರ ಅಭಿಪ್ರಾಯವಾಗಿರುತ್ತದೆ.

⁂

ಪುನಃ ಪಂಡಿತ ಮಾಲವೀಯರ ತಂತಿ

೭-೧೦ ದಿವಸಗಳಾಚೆ ಪಾರ್ಲಿಮೆಂಟಿನಲ್ಲಿ ಹಿಂದುಸ್ಥಾನದೊಳಗೆ ನಡೆದ ದಬ್ಬಾಳಿಕೆಯ ವಿಷಯವಾಗಿ ಚರ್ಚೆಯಾಯಿತು. ಪಂ| ಮಾಲವೀಯರ ತಂತಿಯ ವಿಷಯ ಬಂತು. ಭಾರತ ಮಂತ್ರಿಗಳು ಸದರಿ ತಂತಿಯಲ್ಲಿ, ಅಧಿಕಾರಿಗಳ ದೃಷ್ಟಿಯಿಂದ, ಬಹಳ ತಪ್ಪು ಮಾಹಿತಿಯಿದ್ದಾಗ್ಯೂ, ತಂತಿಯನ್ನು ಕಳಿಸಿಕೊಡುವ ಮೊದಲು ಸೆನ್ಸಾರು ಮಾಡಲಿಲ್ಲವಾಗಿಯೂ ಪಂಡಿತ ಮಾಲವೀಯರು ಯೋಗ್ಯ ಪದಗಳನ್ನು ಕೊಡಲಿಕ್ಕೆ ಒಪ್ಪದ್ದರಿಂದ ತಂತಿಯು ಹಿಂದಕ್ಕುಳಿಯಿತೆಂದೂ ಸಮರ್ಥನ ಮಾಡಿದರು! ತಂತಿಯು ಏತಕ್ಕೆ ಮತ್ತು ಹ್ಯಾಗೆ ಹಿಂದುಳಿಯಿತೆಂಬುದನ್ನು ನಾವು ಬಲ್ಲೆವು! ತಂತಿಯ ಸ್ಥೂಲದ ತಪ್ಪುಗಳನ್ನು ತೋರಿಸಬೇಕಾಗಿಯೂ, ತಾವು ಅದರೊಳಗಿನ ಪ್ರತಿಯೊಂದು ಶಬ್ದವನ್ನು ಪುರಾವೆಯಿಂದ ಸಿದ್ಧಮಾಡಿ ಕೊಡಲಿಕ್ಕೆ ತಯಾರಿದ್ದೇವಾಗಿ ಈಗ ಪಂಡಿತ ಜಿಯವರು ಭಾರತ ಮಂತ್ರಿಗಳಿಗೆ ಆಹ್ವಾನ ಮಾಡಿದ್ದಾರೆ!

⁂

ಸಹಕಾರವು ಶಕ್ಯವಿಲ್ಲ!

ಹಿಂದೀ ವ್ಯಾಪಾರಿ ಸಂಘಗಳ ವತಿಯಿಂದ ರೌಂಡ ಟೇಬಲ್ ಪರಿಷತ್ತಿನ ಕಮಿಟಿಗಳಲ್ಲಿ ಯಾರೂ ಹೋಗಬಾರದೆಂದು ಕಳೆದ ಜನವರಿ ತಿಂಗಳಲ್ಲಿ ನಿರ್ಣಯವಾಗಿತ್ತಷ್ಟೇ! ವ್ಯಾಪಾರಿಗಳ ಈ ಬಹಿಷ್ಕಾರದಿಂದ ಅಧಿಕಾರಿಗಳು ಸಂತಪ್ತರಾದರು! ಸದರಿ ಸಂಘಗಳ ವಾರ್ಷಿಕ ಮಹಾಸಭೆಗೆ ಪ್ರತಿ ವರ್ಷ ಹಿಂದುಸ್ಥಾನದ ಕೋಶಾಧ್ಯಕ್ಷರೂ, ಬೇರೆ ಅಧಿಕಾರಿಗಳೂ ಹಾಜರ ಇರುವ ವಾಡಿಕೆಯಿತ್ತು! ಸಂಘಗಳು ರೌಂಡ ಟೇಬಲ ಕಾರ್ಯಕ್ಕೆ ಬಹಿಷ್ಕಾರ ಹಾಕಿದ್ದರಿಂದ, ಮಹಾಸಭೆಗೆ ತಾವು ಬಹಿಷ್ಕಾರ ಹಾಕಬೇಕಾಗಿದೆಯೆಂದು ಅಧಿಕಾರಿಗಳು ಬರೆದು ತಿಳಿಸಿದರು. ಅಧಿಕಾರಿಗಳ ಈ ಪತ್ರಕ್ಕೆ ಬೆದರಿ ಮಹಾಸಭೆಯು ಬಹಿಷ್ಕಾರವನ್ನು ಬಿಟ್ಟುಬಿಡುತ್ತದೋ ಎಂದು ಕೆಲವರಿಗೆ ಸಂಶಯ ಬಂದಿತ್ತು. ಆದರೆ ದೇಶದಲ್ಲಿ ದಬ್ಬಾಳಿಕೆಯು ನಡೆದಿರುವಾಗ ರೌಂಡ ಟೇಬಲ್ ಕಮಿಟಿಗಳ ಕೂಡ ಸಹಕಾರವು ಶಕ್ಯವಿಲ್ಲೆಂದು ಮಹಾಸಭೆಯು ತೀರ್ಮಾನ ಮಾಡಿದೆ

⁂

ಲಾರ್ಡ ಲೋದಿಯನ್ ಸಾಹೇಬರು ರೌಂಡ ಟೇಬಲ್ ಕಮಿಟಿಗಳ ಮುಂದಿನ ವಿಷಯಗಳ ಮೇಲೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕಾಗಿ ಪಂ ಮದನಮೋಹನ ಮಾಲವೀಯರಿಗೆ ಬಿನ್ನಹ ಮಾಡಿದ್ದರು. ರಾಜಶಾಸನಗಳು ರದ್ದಾಗುವ ತನಕ ಮತ್ತು ಕಾರಾಗೃಹದಲ್ಲಿ ಬಂಧಿಸಿಟ್ಟ ನಮ್ಮ ಬಾಂಧವರು ಬಿಡುಗಡೆಯಾಗುವ ತನಕ ಸದರಿ ಕಮಿಟಿಗಳ ಕೂಡ ಏನೊಂದೂ ಸಂಬಂಧ ಇಡಲಾರೆನೆಂದು ಪಂ|ಜಿಯವರು ಲೋದಿಯನರಿಗೆ ತಿಳಿಸಿರುತ್ತಾರೆ

ಸತ್ಯಾಗ್ರಹದ ವಾರ್ತೆ.

ಮುಂಬಯಿಯಲ್ಲಿ ಕರಪತ್ರಗಳ ಬಗ್ಗೆ ಧ್ವಜವಂದನೆ ಬಗ್ಗೆ ಕಾವಲು ಮಾಡಿದ ಬಗ್ಗೆ ದಿನಾಲು ಸೆರೆಯಾಗುತ್ತಿವೆ, ಶಿಕ್ಷೆಗಳಾಗುತ್ತಿವೆ. ದೋಂಗರಿಯಲ್ಲಿ ೪ ಜನರಿಗೆ ಕರಪತ್ರಗಳನ್ನು ಹಂಚುವಾಗ ಸೆರೆಹಿಡಿದರು. ಕೋರ್ಟ ಮುಂದೆ ಇಟ್ಟ ಒಂತು ಪೋಲೀಸರು ಮುದ್ದತ್ತು ಬೇಡಿದರು ಆರೋಪಿತರು ತಕರಾರು ಮಾಡಿದರು 'ನಮಗಾಂತ ಯಾಕೆ? ಈಗಲೇ ಶಿಕ್ಷೆ ಕೊಟ್ಟುಬಿಡಿರಲ್ಲ' ಎಂದರು. ಮೆಜಿಸ್ಟ್ರೇಟರು ಮುದ್ದತ್ತಿನ ಮೇಲೆ ಹಟಹಟಿ ಮಾಡಿದರೆ ಶಿಕ್ಷೆ ಮಾಡೇನೆಂದು ನುಡಿದರು. ಅದಕ್ಕೆ ಒಬ್ಬ ಆರೋಪಿಯು "ಹಾಗಾ ಶಿಕ್ಷೆ! ಮುದ್ದತ್ತು ಮಾಡಿದರೆ ಶಿಕ್ಷೆ ಮಾತ್ರ ಮಾಡುವಿರಲ್ಲವೇ?" ಎಂದು ಉತ್ತರ ಕೊಟ್ಟನು. ತಾ ೨೭ನೇ ರವಿವಾರ ಧ್ವಜವಂದನೆಯ ದಿನ ೮ನೇ ಯುದ್ಧ ಮಂಡಳದ ಸಭಾಸದರೂ ೬೦ ಕೆಂಪಂಗಿ ಸ್ವಯಂಸೇವಕರೂ ಚೌಪಾಟಿಯ ಮೇಲೆ ಧ್ವಜ ಹೂಡಿ ವಂದನೆ ಮಾಡಿದರು ಎಲ್ಲರಿಗೂ ಸೆರೆಯಾಯಿತು. ಕೂಡಲೆ ಮತ್ತು ೧೨ ಜನರು ಒಂದು ಧ್ವಜವಂದನೆ ಮಾಡಹತ್ತಿದರು ಅವರಿಗೂ ಸೆರೆಯಾಯಿತು. ಚೌಪಾಟಿಯಲ್ಲಿ ಹಿಡಿದ ೮೦ ಜನರ ಪೈಕಿ ಯುದ್ಧ ಮಂಡಳ ಸಭಾಸದರಿಗೆ ೧—೧ ವರ್ಷದ ಶಿಕ್ಷೆ ಮತ್ತು ೧೦೦ ೧೦೦ ರೂ. ದಂಡವಾಯಿತು, ೫ ಜನರಿಗೆ ಬಿಟ್ಟುಕೊಟ್ಟರು, ೧೬ ಜನರಿಗೆ ವಯಸ್ಸು ಚಿಕ್ಕದ್ದರಿಂದ ೧ ವರ್ಷದ ಜಾಮೀನು ಸಹಿಯಾಗಿದೆ, ೧೫ ಮಂದಿಗೆ ೬—೬ ತಿಂಗಳ ಶಿಕ್ಷೆ, ೧೨ ಮಂದಿಗೆ ೬ ೬ ತಿಂಗಳು ..., ೧೨ ವರ್ಷದ ಹುಡುಗರಿಗೆ ಇನ್ನೂ ಶಿಕ್ಷೆಯಾಗಿಲ್ಲ ತಾ ೨೮ಕ್ಕೆ ಪ್ರಭಾತ ಫೇರಿ ತೆಗೆದ ಬಗ್ಗೆ ೫ ಜನರಿಗೆ ಸೆರೆಯಾಗಿದೆ

ಗುಜರಾಥದಲ್ಲಿ ಸತ್ಯಾಗ್ರಹವು ಮಂದವಾದದ್ದು ಕಾಣುವದಿಲ್ಲ ಬೋರಸದ ತಾಲೂಕಿನಲ್ಲಿ ಇಂದಿನವರೆಗೆ ೧೫೦ಕ್ಕಿಂತ ಹೆಚ್ಚು ಜನರು ಸೆರೆಮನೆ ಸೇರಿದರು ಸುರತ ಜಿಲ್ಲೆಯ ಬರಡಿ ತಾಲೂಕಾ ಕಾಂ ಕ ಯ ರೂ ೩೦೭ ಸರಕಾರ ಜಪ್ತಿ ಆಯಿತು ಪಂಚಮಹಾಲ ಜಿಲ್ಲೆಯಲ್ಲಿ ೭೫ ಜನರು ಶಿಕ್ಷೆ ಹೊಂದಿರುವರು ಅಹಮದಾಬಾದಿನಲ್ಲಿ ಗೋವಿಂದ ಲಿ೯ ಪ್ರಿಂಟಿಂಗ ಪ್ರೆಸ್ಸಿನಲ್ಲಿ ಝಡ್ತಿಯಾಯಿತು ಕಾಂಗ್ರೆಸ ಬಾತಮೀಪತ್ರಗಳು ಹಸ್ತಲಿಖಿತಗಳೂ, ಅಚ್ಚು ಕೂಡಿಸುವ ಮೊಳೆಗಳೂ ಸಿಕ್ಕವು ಛಾಪಖಾನೆಗೆ ಬೀಗ ಹಾಕಲ್ಪಟ್ಟಿದೆ ಇಬ್ಬರಿಗೆ ಹಿಡಿದಿರುತ್ತಾರೆ ತಾ ೨೬ಕ್ಕೆ ರೀಲೀಫ ರೋಡಿನಲ್ಲಿ ತಪಾಸ ಆಯಿತು. ಕರಪತ್ರಗಳ ಎರಡು ಗಂಟುಗಳು ಸಿಕ್ಕವು ಕಳಿಸಿದವರ ಮತ್ತು ಸ್ವೀಕರಿಸುವವರ ಪತ್ತೆ ಇಲ್ಲ! ಕರಪತ್ರಗಳು ಬರೋಡೆಯಿಂದ ಬಂದಿದ್ದವು ಪೋಲೀಸರು ತಪಾಸಣೆ ಬಗ್ಗೆ ಬರೋಡಕ್ಕೆ ರವಾನೆಯಾಗಿದ್ದಾರೆ ಸುರತ ಪೋಗೆ ದುರ್ಲಭದಾಸ ಮಂಗಳದಾಸ ಎಂಬವರಿಗೆ ಹರತಾಳ ಮಾಡಿದ ಬಗ್ಗೆ ೩ ವರ್ಷಗಳ ಸಖ್ತ ಶಿಕ್ಷೆ ಮತ್ತು ರೂ ೨೦೦ ದಂಡವಾಗಿಯದೆ ಅವರು ಈಗ ನ್ಯಾಯಸಭೆಯವರಿಗೆ ರೆಕ್ವ್ರಿ ಅರ್ಜಿ ಮಾಡಿದ್ದಾರೆ

ಸಿಂಧದೊಳಗಿನ ವಾರ್ತೆ ಕರಾಚಿಯಲ್ಲಿ ವಿದೇಶಿ ವಸ್ತ್ರದ ಕಾವಲು ನಡೆದಿದೆ ತಾ ೨೮ನೇ ವ ಪಿಕೆಟರಿಗೆ ಆ ಬಗ್ಗೆ ಸೆರೆಹಿಡಿದರು ಕಳೆದ ವಾರ ಕರಾಚಿಯಲ್ಲಿ ೩ ಜನರಿಗೆ ಶಿಕ್ಷೆಯಾಯಿತು ೩ರಿಂದ ೧೨ ತಿಂಗಳ ಸಜೆ ವಿಧಿಸಲಾಗಿದೆ. ಪ್ರಾಂತಿಕಯ ಸಭೆಯ ಅಧಿನಾಯಕನ ಕಾಲಕ್ಕೆ ಸ್ವಯಂಸೇವಕರ ಸರಸೇನಾಪತಿಗಳಾಗಿದ್ದ ರಾ ಶಾಂತಿದಾಸ ಇದನಮುಲ್ಲರಿಗೆ ಹುಕುಮು ಮೀರಿದ ಬಗ್ಗೆ ಸಭೆಯಲ್ಲಿ ಮಾತಾಡಿದ ಬಗ್ಗೆ ಕೈದು ಮಾಡಿರುತ್ತಾರೆ ಹೈದರಾಬಾದದ ೯ನೇ ಸರ್ವಾಧಿಕಾರಿಗಳಿಗೆ ಒಂದೊಂದು ವರ್ಷದ ಶಿಕ್ಷೆ ಕೊಡಲಾಯಿತು ೩ನೇ ಸರ್ವಾಧಿಕಾರಿಯಾದ " " ಎಂಬ ಪತ್ರಿಕೆಯ ಶ್ರೀ| ಹಿರಾನಂದ ಕರಮಚಂದರಿಗೆ ಸೆರೆ ಹಿಡಿದಿದ್ದಾರೆ

ಪಂಜಾಬದಲ್ಲಿ ೩ನೇ ಸರ್ವಾಧಿಕಾರಿಯಾದ ಲಾಲಾ ಗೋಕುಲಚಂದರಿಗೆ ೪ ತಿಂ. ಶಿಕ್ಷೆ ೨೦೦ ರೂ ದಂಡ ವಿಧಿಸಿದ್ದಾರೆ "ಪ್ರತಾಪ" ಪತ್ರಿಕೆಯ ಸಂಪಾದಕರ ಮಗ ವೀರೇಂದ್ರನೆಂಬವನು ಎಮ್ ಎ ಕಲಿಯುತ್ತಿದ್ದನು. ಕೆಲವು ದಿನಗಳ ಹಿಂದೆ ಅವನಿಗೆ ಕೈದು ಮಾಡಿದ್ದರು. ಈಗ ಅವನಿಗೆ ಲಾಹೋರ ಬಿಟ್ಟು ಹೊರಗೆ ಹೋಗಬಾರದಾಗಿ ವಾರಕ್ಕೊಂದಾವರ್ತಿ ಪೋಲೀಸರಲ್ಲಿ ಹಾಜರಿಕೊಡಬೇಕಾಗಿ ಹುಕುಮು ಕೊಟ್ಟು ಬಿಡುಗಡೆ ಮಾಡಿದ್ದಾರೆ. ಮುಲ್ತಾನದಲ್ಲಿ ತಾ ೨೮ಕ್ಕೆ ಕೈದಿಗಳ ಜೀವನದ ಪ್ರಯೋಗವಾಯಿತು ಪಂಜಾಬದ ೩ನೇ ಸರ್ವಾಧಿಕಾರಿ ಶ್ರೀ ಪ್ರತಾಪಸಿಂಗರಿಗೆ ಮಾಸಿಕ ಧ್ವಜವಂದನೆ ಮಾಡಿದ ಬಗ್ಗೆ ೬ ತಿಂಗಳ ಶಿಕ್ಷೆಯಾಗಿದೆ.

ದಿಲ್ಲಿಯಲ್ಲಿ ೨೨ ಜನ ಹೆಂಗಸು ಪತಿಯಾಲಾ ಮಹಾರಾಜರ ವಿರುದ್ಧ ಸಭಾಧಿಪತಿಗಳ ಕಡೆ ದೂರು ಹೇಳಿಕೆ ನರೇಂದ್ರ ಮಂಡಲದ ಮಂದಿರಕ್ಕೆ ಹೋಗುತ್ತಿದ್ದರು ಅವರನ್ನು ಹಿಡಿದರು, ಸಂಜೆಗೆ ಬಿಟ್ಟುಕೊಟ್ಟರು ಸ್ವದೇಶಿಯ ಪ್ರಚಾರದ ಬಗ್ಗೆ ಹೊರಟ ಅಜಮೀರದ ೧೨ನೇ ಸರ್ವಾಧಿಕಾರಿಗೂ ಇನ್ನೊಬ್ಬ ಸ್ವಯಂಸೇವಕನಿಗೂ ೪ ೪ ತಿಂಗಳ ಶಿಕ್ಷೆ ವಿಧಿಸಿರುತ್ತಾರೆ

ಸಂಯುಕ್ತ ಪ್ರಾಂತದಲ್ಲಿ ಸೆರೆಯಾಳುಗಳ ಸಂಖ್ಯೆ ೩೦೩೩ಕ್ಕೆ ಮುಟ್ಟಿದೆ ಪ್ರಯಾಗದ ಮಹಿಳಾ ಸಭೆಯು ಬೇಕಾಯಿದೆ ಸಂಸ್ಥೆಯಾಗಿದೆ ಸಭೆಯ ಮಂದಿರವು ಸರಕಾರದ ತಾಬೆಗೆ ಹೋಯಿತು ಲಖನೌದಲ್ಲಿ ವಿದೇಶಿ ಬಟ್ಟೆಗಳ "ಸ್ಮಶಾನ ಯಾತ್ರೆ" ಮಾಡಿದರು, ಹೋಳಿ ಮಾಡಿದರು! ಆ ಬಗ್ಗೆ ೪ ಜನರಿಗೆ ಕೈದು. ಪಟ್ಟಣದ ಪ್ಲಾಝಾ ಕಾಂಗ್ರೆಸ ಸಭೆಯ ಮುಂದಾಳುಗಳು ಹಿಂದೆ ಮಾಡಿದ ಪ್ರಕಟಣೆಗಳು ಪ್ರಸಾರವಾಗಿವೆ ಈ ಕುರಿತು ೫೦ ಜನರಿಗೆ ಸೆರೆಯಾಗಿದೆ ಕಾನಪುರದ ಒಂದು ಮನೆಯಲ್ಲಿ ಕಾಂಗ್ರೆಸ ಪ್ರಕಟಣೆಗಳನ್ನು ಛಾಪಿಸುವ ಸಾಮಗ್ರಿ ಸಿಕ್ಕಿತು, ಕೆಲವು ಹಸ್ತಪತ್ರಿಕೆಗಳೂ ಸಿಕ್ಕಿದವು ಮನೆಯಲ್ಲಿ ಯಾರೂ ಇರಲಿಲ್ಲ ಪ್ರಯಾಗದಲ್ಲಿ "ಭಗತಸಿಂಗ ದಿನ"ದ ಬಗ್ಗೆ ಮೆರವಣಿಗೆಗಳು ಹೊರಟಿದ್ದವು ಕುದುರೆ ಸವಾರರು ಬಂದು ಅವನ್ನು ಚದರಿಸಿದರು ಈ ಪ್ರಾಂತದಲ್ಲಿ ಹೋದ ವಾರದೊಳಗೆ ೫೦-೬೦ ಜನರಿಗೆ ಪೆರೋಲ ಮೇಲೆ ಬಿಟ್ಟಿರುತ್ತಾರೆ ಕಾಶಿಯಲ್ಲಿ ಸ್ತ್ರೀ ಕೈದಿಗಳಿಗೆ ಹೊಡೆದ ಬಗ್ಗೆ ಕೆಲವು ಪೋಲೀಸರ ಮೇಲೆ ಈಗ ಫಿರ್ಯಾದಿ ಮಾಡಿದ್ದಾರೆ.

ಬಂಗಾಲದಲ್ಲಿ ಈ ವಾರದೊಳಗೆ ಕೈದಾದವರ ಸಂಖ್ಯೆ ಹೆಚ್ಚು. "ಭಗತ ಸಿಂಗ ದಿನ"ದ ಆಚರಣೆ ಬಗ್ಗೆ ಒಂದು ಜೆಸೂರ ಜಿಲ್ಲೆಯಲ್ಲೇ ೧೮೩ ಜನರಿಗೆ ಕೈದು ಮಾಡಿದರು. ಮಿದನಾಪೂರದ ಜಿಲ್ಲೆಯ ನಂದಿಗ್ರಾಮದ ಬಳಿ ಕೆಲವು ಹೆಂಗಸರೂ ಗಂಡಸರೂ ಉಪ್ಪು ಮಾಡುತ್ತಿದ್ದರು ಪೋಲಿಸರು ಲಾಠೀಪ್ರಯೋಗ ಮಾಡಿದರೂ ಜನರು ಚದರಲಿಲ್ಲ. ಕೊನೆಗೆ ಗೋಳಿಬಾರು ಮಾಡಿ ಚದರಿಸಿದರು ಬಂಗಾಲದಲ್ಲಿ "ಗುಡ್ ಫ್ರಾಯ್‌ಡೇ"ದಿನ ಹೊಸದೊಂದು ರಾಜಶಾಸನವು ಹೊರಟಿದೆ ಇಡೀ ಪ್ರಾಂತದಲ್ಲಿ ಬುಲೆಟಿನ್ನಗಳ ಬಗ್ಗೆ, ಕಾವಲು ಮಾಡಿದ ಬಗ್ಗೆ, ಮೆರವಣಿಗೆಗಳ ಬಗ್ಗೆ ಕೈದು-ಶಿಕ್ಷೆಗಳಾಗುತ್ತಿವೆ; ಝಡ್ತಿಗಳಾಗುತ್ತಿವೆ. ಕಲಕತ್ತೆಯಲ್ಲಿ ಒಂದೇ ದಿನ ೪೦ ಮನೆಗಳಲ್ಲಿ ಝಡ್ತಿಯಾಯಿತು ಕೋಮಿಲ್ಲಾದಲ್ಲಿ ಸ್ಟೀವೆನ್ಸ ಸಾಹೇಬರ ಖೂನಿಯ ಪ್ರಕರಣದಲ್ಲಿ ಕೈದು ಮಾಡಿದವರಿಗೆ ಮೆಜಿಸ್ಟ್ರೇಟರು ಬಿಟ್ಟುಕೊಟ್ಟರು ಅವರಿಗಲ್ಲಿ ಬಂಗಾಲ ರಾಜಶಾಸನದನ್ವಯ ಸೆರೆಹಿಡಿದಿರುತ್ತಾರೆ ಕೋಮಿಲ್ಲೆಯೊಳಗಿನ ವಕೀಲರಾದ ಶ್ರೀ| ಅಖಿಲ ಚಂದ್ರ ದತ್ತರಿಗೂ ಅವರ ಪತ್ನಿಗೂ ಸೂರ್ಯಾಸ್ತದಿಂದ ಸೂರ್ಯೋದಯವಾಗುವ ತನಕ ಮನೆಯ ಹೊರಗೆ ಕಾಲಿಡಬಾರದೆಂದು ಎಮರ್ಜನ್ಸಿ ರಾಜಶಾಸನದಂತೆ ಹುಕುಮವಾಗಿದೆ ಕಳೆದ ವಾರದಲ್ಲಿ ಇನ್ನೂ ಕೆಲವು ಸಂಸ್ಥೆಗಳು ಬೇಕಾಯಿದೆ ಠರಾಯಿಸಲ್ಪಟ್ಟಿವೆ

ಮಧ್ಯಪ್ರಾಂತದಲ್ಲಿ ಬೇತೂಲದೊಳಗೆ ಜಂಗಲ ಸತ್ಯಾಗ್ರಹವಾಯಿತು. ಎಲ್ಲಲ್ಲಿ ಸೆರೆಯಂಗಡಿಗಳ ಮುಂದೆ ಕಾವಲು ನಡೆಯುತ್ತಿದೆ ವರ್ಧಾದಲ್ಲಿ ಕಾವಲು ಮಾಡಿದಬಗ್ಗೂ, ಕರಪತ್ರಗಳಬಗ್ಗೂ ದಿನಾಲು ಕೈದುಗಳಾಗುತ್ತಿವೆ, ಶಿಕ್ಷೆಗಳಾಗುತ್ತಿವೆ ಅಕೋಲೆಯ ೭ನೇ ಸರ್ವಾಧಿಕಾರಿ ಶ್ರೀ| ಕಮಲಾಬಾಯಿ ಭಾಗವತರಿಗೆ ಸೆರೆಯಾಯಿತು ಅವರ ಅಭಿವಂದನೆ ಬಗ್ಗೆ ಸಭೆ ಸೇರಿಸಿದ ೮ನೇ ಸರ್ವಾಧಿಕಾರಿಗೂ ಸೆರೆಯಾಯಿತು ಗೋಂದಿಯಾದಲ್ಲಿ ಹೆಂಡದಂಗಡಿಗಳ ಮುಂದೆ ಕಾವಲು ಮಾಡಿದ ಬಗ್ಗೆ ಮೂವ ಮಹಿಳೆಯರಿಗೆ ೬ ೬ ತಿಂಗಳ ಶಿಕ್ಷೆಯಾಯಿತು ಕಾವಲಿನ ಉಪದ್ರವದ ಮೂಲಕ ಅಲ್ಲಿಯ ವಿಲಾಯತಿ ಜವಳಿ ಅಂಗಡಿಗಳು ಬಾಗಿಲು ತೆರೆಯುವದಿಲ್ಲ

ಮದ್ರಾಸ ಇಲಾಖೆಯಲ್ಲಿ ಕಣ್ಣಾನೂರ ಜೈಲಿನಲ್ಲಿ ಲಾಠಿ ಪ್ರಹಾರವಾಯಿತು. ಜೈಲರನಿಗೂ ಕೈದಿಗಳಿಗೂ ಮಾತಿನ ಮಾತಾಯಿತು ಕೈದಿಗಳಿಗೆ ತಮ್ಮ ತಮ್ಮ ಕೋಣೆಗೆ ಹೋಗಲಿಕ್ಕೆ ಹುಕುಮಾಯಿತು ಅವರು ಹೋಗಲಿಲ್ಲ. ಅವರಿಗೆ ಲಾಠಿಯ ಪ್ರಸಾದ ಹಂಚಲಾಯಿತು ಜೈಲ ಸುಪರಿಂಟೆಂಡೆಂಟರು ಬಂದರು ಅವರಿಗಲ್ಲ ವರ್ತಮಾನ ತಿಳಿಯಿತು. ಅವರು ಕೈದಿಗಳನ್ನು ಹೊರಗೆ ಕರೆದು ಇನ್ನೊಮ್ಮೆ ಲಾಠಿಯ ಪ್ರತಾಪ ತೋರಿಸಿದರು! ಮದ್ರಾಸಿನಲ್ಲಿ ಕಾವಲು ಮಾಡಿದ ಬಗ್ಗೆ ತಂಡು ತಂಡುಗಳನ್ನೇ ಹಿಡಿಯುತ್ತಾರೆ, ಮರುದಿನ ಅಥವಾ ಸಂಜೆಗೆ ಬಿಟ್ಟುಕೊಡುತ್ತಾರೆ ಗುಂಟೂರ, ತೆನ್ನಾಲಿ, ಬೀಮಾವರಮ್, ಮದುರೆ, ಮಂಗಳೂರ ಕಡೆಗೆ ಕಾವಲು ಯಾ ಕರಪತ್ರ ಪ್ರಸಾರದ ಬಗ್ಗೆ ಸೆರೆಹಿಡಿಯುತ್ತಿದ್ದಾರೆ ಗುಡಿವಾಡ ತಾಲೂಕಿನ ವೇತ್ರಪಾಗೋಡಾ ಎಂಬ ಹಳ್ಳಿಯ ಮೇಲೆ ಸತ್ಯಾಗ್ರಹ ಮಾಡಿದ ಬಗ್ಗೆ ದಂಡಾತ್ಮಕ ಕರ ಹೇರಿಸಲಾಗಿದೆ

ಮಹಾರಾಷ್ಟ್ರದಲ್ಲಿ ಪ್ರಕರಣಗಳು "ಎಕ್ಸಪ್ರೆಸ ಜಗತ್ತಿ"ನ ಒಡ್ಡರ ಹಿಂದಿನಗಳನ್ನು ಸರಕಾರ ಜಪ್ತ ಮಾಡಿದ್ದಾರೆ. ಅಹಮ್ಮದನಗರದಲ್ಲಿ ತಾ ೩೧ಕ್ಕೆ ಒಬ್ಬರ ಹಿಂದೊಬ್ಬರಂತೆ ೫ ಸರ್ವಾಧಿಕಾರಿಗಳ ಸೆರೆ ಬಿದ್ದರು. ಅಂತೂ ೪೦ ಸರ್ವಾಧಿಕಾರಿಗಳು ಕೈದು ಖಾನೆಯಲ್ಲಿ ಹೋದರು. ಅಹಮ್ಮದನಗರದಲ್ಲಿ "ಭಗತಸಿಂಗ ದಿನ"ದ ಬಗ್ಗೆ ಹರತಾಳವಾಯಿತು. ಅಪರಾಹ್ನಕ್ಕೆ ಮೆರವಣಿಗೆಯಾಯಿತು; ಮೆರವಣಿಗೆಯು ಪ೦ ದಾಳುಗಳ ಹಿಡಿದರು. ಕೂಡಲೆ ನಾಲ್ಕೂ ಬದಿಯಿಂದ ಮೆರವಣಿಗೆ ಮೇಲೆ ಮೆರವಣಿಗೆಗಳು ಹೊರಟವು! ಸಾಯಂಕಾಲ ಸಭೆಯಾಯಿತು. ಒದ್ಯೊಕ್ಕೆನೆಗೆ ಕೈದಾಯಿತು. ಪೇಣೂರದಲ್ಲಿ ೮-ನೇ ಸರ್ವಾಧಿಕಾರಿಗಳಿಗೆ ಬಹಿಷ್ಕಾರದ ಪ್ರಚಾರ ಮಾಡಿದ ಬಗ್ಗೆ ಸೆರೆಯಾಯಿತು. ನಾಸಿಕ ಜಿಲ್ಹೆಯ ಬಾಗಲಾಣ ತಾಲೂಕಿನಲ್ಲಿ ಹಳ್ಳಿಗಳಲ್ಲಿ ಕಾಂಗ್ರೆಸ ಪ್ರಚಾರ ಮಾಡಿದ್ದಕ್ಕೆ ೮-೧೦ ಜನರಿಗೆ ಕೈದು ಮಾಡಿದ್ದಾರೆ. ಪುಣೆಯಲ್ಲಿ ಮ್ಯು|ಯ ಮೇಲೆ ಧ್ವಜ ಹಚ್ಚಿದ ಬಗ್ಗೆ ಸರಿ-ತಕ್ಕೆಗಳು ನಡದಿವೆ.

ಮಧ್ಯಪ್ರಾಂತದ ಸುದ್ದಿ.

ಬಾಬೂ ಸುಭಾಷಚಂದ್ರ ಬೋಸ ಮತ್ತು ಅವರ ಒಂಬತ್ತು ಜನರು ಈ ಪ್ರಾಂತದ ಸಿವನಿ ಜೈಲಿನಲ್ಲಿರುತ್ತಾರೆಂಬದನ್ನು ವಾಚಕರು ಬಲ್ಲರು. ಅವರೀರ್ವರಿಗೂ ಜಿಲ್ಲೆ ಖರ್ಚಿನ ಬಗ್ಗೆ ದರಮಹಾ ರೂ ೧೦೦ ಮತ್ತು ಊಟದ ಖರ್ಚಿನ ಬಗ್ಗೆ ದಿನಾಲು ರೂ ೩|| ಕೊಡುವಂತ ಹುಕುಮವಾಗಿದೆ.

ಎಲ್ಲಕ್ಕೆ ಏಡೇಪಿ ಒಕ್ಕಿಯ ಹಾಗೂ ಸರಾಯಿಯ ಅಂಗಡಿಗಳ ಮುಂದೆ ಕಾವಲು ನಡೆಯುತ್ತದೆ. ಮಾಲಸೂರ ಮತ್ತು ಬಾಲಾಪೂರ ತಾಲೂಕುಗಳಲ್ಲಿ ಕಾವಲು ಮಾಡಲಿಕ್ಕೆ ಸುರು ಪ್ರಾರಂಭವಾಗಿದೆ. ಈ ಬಗ್ಗೆ ೧೨ ಜನರಿಗೆ ಸೆರೆಹಿಡಿದರು.

ತಾ ೧೬ಕ್ಕೆ ವರ್ಧಾದಲ್ಲಿ ಒಬ್ಬನಿಗೆ ೬ ತಿಂಗಳ ಶಿಕ್ಷೆ, ಹಿಂಗಣಘಾಟದೊಳಗೆ ನಾಲ್ವರಿಗೆ ಆರಾರು ತಿಂಗಳ ಶಿಕ್ಷೆ ಮತ್ತು ಒಬ್ಬ ಸ್ವಯಂಸೇವಕನಿಗೆ ೯ ತಿಂಗಳ ಸಾದಾ ಶಿಕ್ಷೆ ವಿಧಿಸಲ್ಪಟ್ಟಿತ. ಅದೇ ದಿನ ವರ್ಧಾದ ೧೬ನೇ ಸರ್ವಾಧಿಕಾರಿಗೂ, ಇನ್ನೊಬ್ಬ ಸ್ವಯಂಸೇವಕರಿಗೂ ಸೆರೆಹಿಡಿದರು.

ನಾಗಪೂರ ಕೋರ್ಟಿನಲ್ಲಿ ಸರ್ ತೇಜ ಬಹಾದ್ದೂರ ಸಪ್ರೂರವರು ಒಂದು ಖೂನಿ ಖಟ್ಲೆಯ ಆಪೀಲು ನಡಿಸುತ್ತಿದ್ದರು. ಒಬ್ಬ ಸ್ವಯಂಸೇವಕನು ಕೋರ್ಟಿನಲ್ಲಿ ನುಗ್ಗಿ ಹಸ್ತಪತ್ರಿಕೆಗಳನ್ನು ಹಂಚಿದನು, ವಕೀಲಿಯನ್ನು ತ್ಯಜಿಸಿ ಕಾಂಗ್ರೆಸಿಗೆ ಸೇರಿರೆಂದು ಸಪ್ರೂರವರಿಗೆ ವಿನಂತಿಸಿದನು. ಅವನಿಗೆ ಅಲ್ಲಿಂದಲ್ಲೇ ಕೈದು ಮಾಡಿದರು.

ಮಹಾರಾಷ್ಟ್ರದ ಸುದ್ದಿ

ತಾ ೧೪ಕ್ಕೆ ಸೊಲ್ಲಾಪುರದ ೨೫-೨೬ನೇ ಸರ್ವಾಧಿಕಾರಿಗಳ ಮೇಲೆ ಖಟ್ಲೆ ನಡೆಯಿತು. ಇವರ ಪ್ರಾಯವು ಅನುಕ್ರಮವಾಗಿ ೧೫-೧೬ ವರ್ಷಗಳು. ಅವರಿಗೆ ಅನುಕ್ರಮವಾಗಿ ೩—೬ ವರ್ಷ ರಿಫೊರ್ಮೆಟರಿಗೆ ಕಳಿಸಲಾಯಿತು. ತಾ ೧೯ಕ್ಕೆ ೨೭ನೇ ಸರ್ವಾಧಿಕಾರಿಗೆ ೨ ವರ್ಷಗಳ ಕಠಿಣ ಶಿಕ್ಷೆ ಮತ್ತು ರೂ ೪೦ ದಂಡ, ದಂಡ ತೆರದಿದ್ದರೆ ೪೦ ದಿವಸಗಳ ಶಿಕ್ಷೆ ವಿಧಿಸಲಾಗಿದೆ.

ಪುಣೆಯಲ್ಲಿ ಚಿತ್ರಶಾಲಾ ಛಾಪಖಾನೆಯ ಶ್ರೀ|| ಶಂಕರರಾವ ಜೋಶಿಯವರ ಕಡೆಯಿಂದ ಅಂತೂ ರೂ ೪೦೦೦ ಜಾಮೀನು ಬೇಡಿರುತ್ತಾರೆ. ಇಂಪೀರಿಯಲ್ ಬೇಂಕಿನ ಮುಂದೆ ಕಾವಲು ಮಾಡಿದ ಬಗ್ಗೆ ಸ್ತ್ರೀಜನರಿಗೆ, ಮ್ಯುನಿಸಿಪಲ ಇಮಾರತುಗಳ ಮೇಲೆ ರಾಷ್ಟ್ರಧ್ವಜ ಹಚ್ಚಲೆತ್ನಿಸಿದ ಬಗ್ಗೆ ೩ ಜನರಿಗೆ ಸೆರೆಹಿಡಿದರು. ಕೆಲವು ಮುಂದಾಳುಗಳಿಗೆ ನಾಡೋಳಮೇಲ ವಿದುಗಡೆ ಮಾಡಿದ್ದಾರ.

ಅಹಮ್ಮದನಗರದಲ್ಲಿ ೩೩ನೇ ಸರ್ವಾಧಿಕಾರಿಯು ಸಭೆಯಲ್ಲಿ ಜಪ್ತಿಯಾದ ಮೇಲೆ ಕರಪತ್ರಗಳನ್ನು ಮುದ್ರಿಸಿ ಹಂಚಿದನು. ಅವನಿಗೆ ೬ ತಿಂಗಳ ಶಿಕ್ಷೆ ಮತ್ತು ರೂ ೩೦ ದಂಡವಾಯಿತು.

ಜಳಗಾಂವದಲ್ಲಿ ಒಂದು ನಾಟಕದ ಪ್ರಯೋಗ ನಡೆದಿತ್ತು. ತದನಂತರ ಒಬ್ಬನು ರಂಗಭೂಮಿಯಲ್ಲಿ ಒಂದು ಬ್ರಿಟಿಶ ಮಾಲಿಗೆ ಬಹಿಷ್ಕಾರದ ಮೇಲೆ ವ್ಯಾಖ್ಯಾನ ಕೊಡಹತ್ತಿದನು. ಅವನಿಗೆ ಸೆರೆಹಿಡಿದು ೬ ತಿಂಗಳ ಶಿಕ್ಷೆ ಮತ್ತು ರೂ ೩೦ ದಂಡ ವಿಧಿಸಿದರು.

ತಾಜಾ ಸುದ್ದಿ— ಕುಮಟಾ ಮುನಸಿಪಾಲಿಟಿ ಇದು ಪ್ಪ ಶ್ರೀ ಪ್ರಾ ಕೊಡ ಕಲಂ ೧೪೫ನೇ ಪ್ರಕಾರ ಇಲ್ಲಿಯ ೧ನೇ ವರ್ಗ ಮಾಜಿಸ್ಟ್ರೇಟರು ನಡೆಸಿದ ಪ್ರಕರಣ ಮುಂದರಿಸಬಾರದಾಗಿಯೂ, ಇದೇ ಪ್ರಕರಣದ ಕಾಗದ-ಪತ್ರಗಳನ್ನು ಕೂಡಲೇ ತಮ್ಮಕಡೆಗೆ ತಪಾಸಿಗೆ ಕಳಿಸಬೇಕಾಗಿಯೂ, ಮೆ|| ಕಲೆಕ್ಟರ ಸಾಹೇಬರ ಕಡೆಯಿಂದ ನೋಟಿಸ ಬಂದಿದ್ದರಿಂದ ಪ್ರಕರಣವು ತಹಕೂಬ ಇಟ್ಟಿದೆ!

ಸ್ಥಾನಿಕ ವೃತ್ತಾಂತ.

[ಇದೇ ವಾನಿನಿಂದ ಮುಂದರಿಸಿದ್ದು]

ಇನ್ನು ಬಸದೂರು ತೀರ್ಪ ಕೊಡದ ಒಗ್ಗ ಧ್ವಜದ ಮನಸ್ಸಿನಲ್ಲಿ ಜಪ್ತಿ! ಅದೇ ಕರ್ಣಕವಲದಲ್ಲಿ ೩೧ ದಾಮೋದ್ಯ ಮುಂಬಯ್ಯ ಹಗರಣ ಆರ್ಡರ ತೆರಲಿಲ್ಲ. ಈ ಬಗ್ಗೆ ಅಂಕ್ಕೆ ಹೊಲಿದಾಗ ಜಟ್ಟ ಗೌಡನ ಮನೆಯಲ್ಲಿ ಜಪ್ತಾಯಿತು.

ಬೀಗದಲ್ಲಿ ೩ ಜಪ್ತಿಗಳಾದವು. ಒಂದು ಕವಗಿ ಮುತ್ತು ೩ ಟಿಲ ಛತ್ರ ಸಿಕ್ಕಿತ. ಇಟಗಿಯಲ್ಲಿ ೩ ಜಪ್ತಿಗಳಾದವು. ಒಂದು ಮನೆಯಲ್ಲಿ ಬಂದರೂ. ಪತ್ರಗಳು ಸಿಕ್ಕಿದವು. ಹೇರೂರದಲ್ಲಿ ಬಂದರೂ ಅಂಗಡಿಗಳಲ್ಲಿ ಜಪ್ತಿ ಮಾಡಿದರು.

ದೊಡ್ಡನ ನಾ|| ೧೮ ಸೋಗನ ಮನೆಯಲ್ಲಿ ಜಪ್ತಿ—ಅದಿತಾರಗಳ ರಾತ್ರಿ ೩ ಘಂಟೆ ಸಮಯ ಮುತ್ತಿಗೆ ಹಾಕಿದರು. ಆಗ ಒಬ್ಬ ಹೆಂಗಸು ಹಡೆಯಲಿಕ್ಕೆ ತಯಾರಾಗಿದ್ದಳು. ಸುಲಗಿತ್ತಿಯನ್ನು ಕರಿಯಲಿ ಕಳುಹಬೇಕಾಗಿತ್ತು. ಆದರೆ ಮುತ್ತಿಗೆ ಹಾಕಿದ ಪೋಲೀಸರು ಯಾರನ್ನೂ ಹೊರಗೆ ಹೋಗಗೊಡಲಿಲ್ಲ. ಮಾಡುವದೇನು? "ನೀವು ಹೊರ ಹೋಗಗೊಡಿರಿ" ಎಂದು ಪೋಲೀಸರ ಕಾಲುಹಿಡಿಯುವ ಪ್ರಸಂಗ ಬಂತು! ಆಗ ಪೋಲೀಸರಿಗೆ ದಯೆ ಬಂತು! ಆದರೆ ಮುಂಜಾನೆಯಿಂದ ಮಧ್ಯಾನ್ಹದ ತನಕ ಸದ್ರಿ ಹೆಗಡೆರ ಮನೆಯಲ್ಲಿ ಮಾಳದ ಮೇಲೆ ಹುಡುಕಿದರೂ ಏನೂ ಸಿಗಲಿಲ್ಲ. ಇಲ್ಲಲ್ಲಿ ಆಗದು ಕೈಗೆ ಸಿಕ್ಕ ಮಾಡಿಕೊಂಡಿದ್ದೇ ಲಾಭ!

ಬಾಳೇಸರ ಗ್ರಾಮದಲ್ಲಿ ತೀರ್ಪ ಕೊಡದ ಬಗ್ಗೆ ರಾ|| ವೆಂಕಟ್ರಮಣ ಹೆಗಡೆಯವರೂ ಸ ಬ್ರಾಯ ಭಟ್ಟರಿಗೂ ಕೈದು ಮಾಡಿದ್ದಾರೆ.

ತಾ ೩೩ಕ್ಕೆ ಮೈಸೂರ ಹದ್ದಿಯ ಒಬ್ಬ ಗಾಡಿಕಾರನು ಶ್ಯಾಡಗಿಯಿಂದ ಧಾಡಿಗೆ ಗಾಡಿ ಹೊಡೆದುಕೊಂಡು ಬಂದಿದ್ದನು. ಪೋಲಿಸರು ಅವನ ಗಾಡಿ ಮತ್ತು ಎತ್ತುಗಳನ್ನು ಜಪ್ತ ಮಾಡಿದರು. ಅಷ್ಟು ರಲ್ಲಿಗೆ ಒಬ್ಬ ದೈನವೆಂದು ಅವರ ಸೂಚನೆ! ಮಾಲಿಕನು—ಹಾನವಿ—ಕ್ರಯಕ್ಕೆ ತಕ್ಕೊಂಡಿದ್ದೇನೆಂದು ಹೇಳಿದನು. ಕ್ರಯ ಚೀಟಿಯನ್ನು ಕಾಣಿಸಿದನು. ಆದರೂ ಬಿಟ್ಟುಕೊಡಲಿಲ್ಲ. ಮಾರನೆಯ ತಾವಾಗಿಯೇ ಬಿಟ್ಟು ಕೊಟ್ಟರು!

"ಮೈಸೂರ ಮಹಾರಾಜರು ನಮ್ಮ ಕೈಕೆಳಗಿನವರು! ನಾವು ಹೇಳಿದಹಾಗೆ ಕೇಳಬೇಕು. ಅವರ ರಾಜ್ಯದಲ್ಲಿ ಕೈದು, ಜಪ್ತಿ, ಝಡ್ತಿ ಮಾಡುವ ಪೂರ್ಣ ಅಧಿಕಾರ ನಮಗುಂಟು" ಎಂದು ಪೋಲಿಸರು ಹೇಳುತ್ತ ತಿರುಗುತ್ತಾರೆ! ಕೆಲವು ದಿನಗಳ ಹಿಂದೆ ಮೈಸೂರ ಗಡಿಯೊಳಗೆ ಒಂದು ಮನೆಯಲ್ಲಿ ಝಡ್ತಿ ಸಹ ಮಾಡಿದರು!!

ತಾ ೩೧ಕ್ಕೆ ಹೇರೂರದಲ್ಲಿ ಪೋಲಿಸರು ಧ್ವಜಸ್ತಂಭವನ್ನು ಕಿತ್ತುಹಾಕಿದರು. ಪ್ರಭಾತ ಫೇರಿಯ ಜನರನ್ನು ಕೈದು ಮಾಡಿದರು. ಇಬ್ಬರು ಹೆಂಗಳೆಯರಿದ್ದರು. ಅವರಿಗೆ ಒಬ್ಬ ಕ್ರಿಶ್ಚನ್ ಪೋಲಿಸನು ಹೊಡೆದನು. ಕೆಲವು ಕಾಲ ಕಳೆದ ಮೇಲೆ ಕೈದು ಮಾಡಿದ ಜನರಿಗೆ ಬಿಟ್ಟು ಕೊಟ್ಟರು. ಮಾರನೇ ದಿನವೂ ಪ್ರಭಾತ ಫೇರಿಗೆ ಅಡ್ಡಿ ಮಾಡಿದರು.

ತಾ ೩೩ಕ್ಕೆ ಬೀಗಿಯಲ್ಲಿ ಮಹಾತ ಧ್ವಜವಂದನೆ ದಾಯಿತು. ಪೋಲಿಸರು ಖುಷಿ ಹಿಡಿದರು. ಆದರೆ ಹೆಂಗಸರೂ ಹುಡುಗರೂ ಪೋಲಿಸರ ಕಡೆಗೆ ಲಕ್ಷ್ಯ ಮಾಡದೆ ಪ್ರಭಾತ ಫೇರಿಯನ್ನೂ ಧ್ವಜವಂದನೆಯನ್ನೂ ಸಾಗಿಸಿದರು. ಧ್ವಜವಂದನೆ ಬಗ್ಗೆ ೫ ಜನರಿಗೆ ಸಮನಾಗಿದೆ. ದಂಡದ ವಸೂಲಿ ಬಗ್ಗೆ ಜಪ್ತಿಗಳಾಗುತ್ತಿವೆ.

ರಾ|| ಬಿ. ಅಕ್ಕೋಳಮಾದಾಂಬರ ಎಸ್. ಕೇ. ಸಿದ್ದಯ್ಯ, ಕೇ. ಆರ್. ಕೃಷ್ಣ ಭಟ್ಟ, ಜಿ. ಆರ್. ಬಂಗಲಾರಯ್ಯ, ಕಡೆಕೋಡಿ ಮಹಾಬಲೇಶ್ವರ ಭಟ್ಟ, ಕೆಳಗಿನ ಮನೆ ರಾಮಕೃಷ್ಣ ಹೆಗಡೆ, ರಾಮಚಂದ್ರ ಸುಬ್ರಾಯ ಹೆಗಡೆ, ಕೋಣ್ಣಾರ ನಾರಾಯಣ ಹೆಗಡೆ, ರಾಮಕೃಷ್ಣ ಕೆರೆಕೊಪ್ಪ ಹೆಗಡೆ ವಿಟ್ಠಲ ಚಿದಂಬರ ಇವರು ಜನರಿಗೆ ಶಿಕ್ಷೆಯಾಗಿದೆ. ಕೆಲವರಿಗೆ ೬ ೬ ತಿಂಗಳು ಶಿಕ್ಷೆ ೫೦-೭೫ ರೂ ದಂಡ, ಕೆಲವರಿಗೆ ೧-೧ ವರ್ಷದ ಶಿಕ್ಷೆ ಮತ್ತು ೧೦೦-೧೦೦ ರೂ ದಂಡ ವಿಧಿಸಿದ್ದಾರೆ.

ತಾಲೂಕ ಕಚೇರಿಯಲ್ಲಿ ಜಪ್ತಾದ ವಸ್ತುವಿನ ಲಿಲಾಂವು ಗುತ್ತಿದೆ. ಇಂಥಾ ದಿವಸ ಲಿಲಾಂವು ಎಂತ ಈಗ ನಿರು ಮನಿಲ್ಲ. ಗಿರಾಕಿ ಎಷ್ಟಾದಾಗ ಲಿಲಾಂವು! ಲಿಲಾಂವು ನಡೆಯುವಾಗ ಕಚೇರಿಯ ಬಾಗಿಲು ಮುಚ್ಚುತ್ತಾರೆ. ವಸ್ತುವಿನ ಮಾಲಕರನ್ನು ಸಹ ಒಳಕ್ಕೆ ಬಿಡುವದಿಲ್ಲ. ಸರಕಾರಿ ನೌಕರರೂ ಪಟೇಲರೂ ಲಿಲಾಂವಿನಲ್ಲಿ ಸವಾಲು ಮಾಡುತ್ತಾರಂತೆ!

ಜಾಹೀರ ನೋಟೀಸು.

ಗಣೇಶ ದಾಸ ಪೈ ಮಳಗೀಕರ, ಬರ್ಮಾ-ಶೆಲ್ ಪೆಟ್ರೋಲ ಏಜಂಟ ಸಾ|| ಕುಮಟಾ ಈ ಮೂಲಕ ಜಾಹೀರ ಮಾಡುವದೇನಂದರೆ:

ಎಸ್. ಎಸ್. ಮಿರ್ಜಾನಕರ ಎಂಬ ಹೆಸರಿನಿಂದ ಕುಮಟಾ—ಶಿರಸಿ ಮುಂತಾದ ಊರುಗಳಲ್ಲಿ ನಡೆಯುತ್ತಿರುವ ಪೆಟ್ರೋಲ ವಿಕ್ರಿ ದುಕಾನದಲ್ಲಿಯೂ, ಮೋಟಾರ ಉಪಯೋಗದ ಸಾಮಾನುಗಳ ವಿಕ್ರಿ ಹಾಗೂ ಇನ್ಸೂರೆನ್ಸದ ವ್ಯಾಪಾರದಲ್ಲೂ ವ ಕುಮಟೆಯಲ್ಲಿ ಶೇಕ ಎಂಡ್ ಕಂಪನಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಪೆಟ್ರೋಲ ವಿಕ್ರಿ ದುಕಾನದಲ್ಲಿಯೂ ಒಂದು ನಿಶ್ಚಿತ ಕರಾರದ ಮೇಲೆ ಮಿ|| ಎಸ್. ಎಸ್. ಮಿರ್ಜಾನಕರ ಮತ್ತು ಮಿ|| ನಾಗ ಇವರುಗಳಲ್ಲಿ ರುಮಾನಸ ವ|| ಶೇಕ ಮಹಮ್ಮದ ಹರಂಬ ಇವರೊಡನೆ ನಾನು ಕೂಡಾ ಒಬ್ಬ ಭಾಗೀದಾರನಿರುತ್ತಿದ್ದು, ಆ ನಿಶ್ಚಿತ ಕರಾರದಂತೆ ಸದ್ರಿ ಎಲ್ಲಾ ಉದ್ಯೋಗಗಳ ಮುನಾಫೆಯಲ್ಲಿ ನಾನು ೯ ಮೊದಲಿನಿಂದಲೂ ಈಗಲೂ ಭಾಗೀದಾರನಿರುತ್ತೇನೆ ವ ಸದ್ರಿ ಎಲ್ಲಾ ಉದ್ಯೋಗಗಳಲ್ಲಿ ಈ ಮೊದಲಿನಂತೆಯೇ ಈಗಲೂ ವ್ಯಾಪಾರ ನಡಿಸಲಿಕ್ಕೆ ನಾನು ಹಕ್ಕುದಾರನಿರುತ್ತೇನೆ. ಈ ವಿಷಯದಲ್ಲಿ, ನಾನು ಎಲಿ ಕಡೆಯಲ್ಲಿ ಪ್ರತ್ಯೇಕವಾಗಿರುತ್ತೇನಾಗಿಯೂ, ನಾನು ಒಬ್ಬ ಮುಕ್ತನಗಾರನಿರುತ್ತಿದ್ದನೆಂತಲೂ ವಗೈರೆ ಜಲಜಲಿತ ಮಜಕೂರು ಕಾಣಿಸಿ ಮಿ|| ಮಿರ್ಜಾನಕರರು ಹೊರಡಿಸಿದ ನೋಟೀಸುಗಳಿಂದ ಯಾರೂ ಗೈರಸಮಜೂತ ಮಾಡಿಕೊಳ್ಳಬಾರದು. ತಿಳಿಯುವದು.

ಕುಮಟಾ, ತಾ ೩-೪-೩೦.

G. D. Malgikar.

ಸ್ಥಾನಿಕ ವೃತ್ತಾಂತ.

ಕುಮಟಾ— [illegible] ಮುಂದೆ [illegible] ಜನಗಳು [illegible] ಉಪ್ಪಿನ [illegible] ಸತ್ಯಾಗ್ರಹ [illegible]

ಮಂಗಳವಾರ [illegible] ನಾಟಕವು [illegible]

[illegible]

ಭಟಕಳ— ರಾ| ಅನಂತ [illegible] ನಡೆದ [illegible] ಸ್ವಯಂಸೇವಕ [illegible] ಒಂದು ಬಂಗಾರದ [illegible] ಕಳುವಾಗಿ ಹೋಯಿತಂತೆ [illegible] ಎಂದು [illegible]

ನೇ [illegible] ಶೀಘ್ರ ಕೊಟ್ಟರು [illegible] ಕಾಲಕ್ಕೆ ಸಂಶಿತ [illegible] ಹೋಯಿತು.

ಇಲ್ಲಿಯ ಜವಳಿನದ ರ ರಾ| ನಾರಾಯಣ ಶಾಸ್ತ್ರಿಗಳು [illegible] ದೈವತ ಮೂರ್ತಿ ಹಿಂದೆ ಬಂದು ಗೇಟ [illegible] ಮನುಷ್ಯರು [illegible] ಬಸ್ಸಿನಿಂದ [illegible] ಕಲ್ಲು ತೂರಿದರು [illegible] ಪೋಲೀಸರು [illegible] ಮುಂದೆ ಹೋಯಿತು!!! [illegible]

[illegible] ಉತ್ಸವದ [illegible] ಪ್ರವೇಶ ಸಿಗುವದಿಲ್ಲ ಇದೆಂಥ ನ್ಯಾಯ?

ಒಟ್ಟಿನ [illegible] ನಡೆಯುತ್ತಿದೆ [illegible]

ಅಂಕೋಲಾ— (ತಾ ೩-೪-೩೦) [illegible] ಜಪ್ತಿ [illegible] ಸ್ವದೇಶೀ [illegible] ಸ್ವದೇಶೀ [illegible] ಜಾಗೃತರಾಗಲು [illegible] ಸಾಗುತ್ತದೆ.

ಪೀವರ್ ವಸೂಲಿ ಒಗ್ಗೆ ಜಪ್ತಿಗಳೆಂತೂ ನಡೆದೇ ಇವೆ. [illegible] ಜಪ್ತಿಗಳಾದವೆ. ದೇವ [illegible] ಎತ್ತಿದವು! ಸುಬ್ಬಯ್ಯ ವೋಣಪ್ಪ ನಾಯ್ಕರ ಮನೆಯಲ್ಲಿ ಅವರ [illegible] ಮಾತ್ರ ಇದ್ದಳು. ಮಗನು ಎಲ್ಲಿ ಹೋಗಿದ್ದಾನೆಂದು ಅವಳಿಗೆ [illegible] ಜಪ್ತಿ ಅಧಿಕಾರಿಗಳು ಬಂದು [illegible] ಅವರಲ್ಲಿ ೧ ರೂ ಇತ್ತು! ಅದೂ [illegible] ದೇವರ ಲಕ್ಕಡ, ಅಧಿಕಾರಿಗಳು ಆ ರೂಪಾಯಿಯನ್ನು ಬಿಟ್ಟು ೧೭ ಖಂಡಿ ಭತ್ತ ಜಪ್ತ ಮಾಡಿ ಒಯ್ದರು. [illegible] ನಾಯ್ಕರ ಮನೆಯಲ್ಲಿ ಅಧಿಕಾರಿಗಳ [illegible] ಮನೆಯ [illegible] ಹೋದರು.

[illegible] ವೆಂಕಟೇಶ [illegible] ನಾಯ್ಕ [illegible] ಜಪ್ತಿಗೆ [illegible] ಭತ್ತ [illegible]

[illegible] ಜಪ್ತಿಗಳ [illegible] ನಾಯ್ಕರ [illegible] ಗೋವಿಂದ ವೆಂಕಣ್ಣಾ ನಾಯ್ಕರಲ್ಲಿ [illegible] ಹೇಳಿದರು! [illegible] ಆದರಲ್ಲಿ [illegible] ಎತ್ತಿದವು! [illegible] ಇತ್ತು! ಅಧಿಕಾರಿಗಳು ಅದನ್ನು ಬಿಟ್ಟು [illegible] ಅಧಿಕಾರಿಗಳು [illegible] ನಾಯ್ಕರೆಂಬುವರು ತಾವು [illegible] ಹೇಳಿದರು! [illegible]

[illegible] ಎಂದು ಉತ್ತರ ಕೊಟ್ಟಳಂತೆ.

[illegible] ಕೊಟ್ಟಿದ್ದಾರೆ.

[illegible] ನಾಯ್ಕರಲ್ಲಿ [illegible] ಮನೆಯಲ್ಲಿ [illegible]

[illegible] ಬೊಳೆ, [illegible] ಕಾಣದೆ [illegible] ಗ್ರೌಂಡ [illegible]

ತಿ ಪೇರ್ ವಸೂಲಿ [illegible] ನಾಯ್ಕ [illegible] ನಾಯ್ಕ [illegible] ನಾಯ್ಕ [illegible] ನೋಟೀಸು ಕೊಟ್ಟಿದ್ದಾರೆ.

[illegible]

ಮುಚ್ಚಲ್ಲೆ ಹಾಗೆ. ಅನುಕ್ರಮವಾಗಿ ೧೦, ೧೫ ರೂ. ದಂಡವಾಯಿತು

ಸುವರ್ಣ ಪಟೇಲರ ಮಗ ರಾಶು [illegible] ಯನ್ನು ಎಂಬವನಿಗೆ ಕೈದು ಮಾಡಿದ್ದಾರೆ ಅವನು ಉಗ್ರವಾಗಿ ಬೈದನಂತೆ!

ಇನ್ನು ಸರಕಾರಕ್ಕೆ ಹಣದ ಅಡಚಣೆಯಿದೆ ಶೀರ್ವೆ ತೆರಬೇಕು, ಹಣವಿಲ್ಲದೆ ಶೀರ್ವೆ ಬಾಕಿ ಇಟ್ಟುಕೊಂಡವರಿಗೆ ಹಣವಿದ್ದ ರಾಜನಿಷ್ಠರು ಹಣಕೊಟ್ಟು ತಮ್ಮ [illegible] ಊರಿನ ಮಟ್ಟಿಗೆ ಶೀರ್ವೆ ಬಾಕಿ ನಿಲ್ಲದಂತೆ [illegible]ಸ್ಥ ಮಾಡಬೇಕು. ಅವರಿಗೆ ತಗಾವಿ ಸಾಲ ಕೊಡಲಿಕ್ಕೂ ಸರಕಾರದ ಕಡೆ ಹಣವಿಲ್ಲವಾಗಿ ಮಧ್ಯಭಾಗದ ಕಮಿಶನರರು ತಿಳಿಸಿದ್ದಾರೆ. ನಿಸ್ಪೃಹ ಬುದ್ಧಿಯಿಂದ ಬಡವರಿಗೆ ಸಾವುಕಾರ ರಾಜನಿಷ್ಠರು ನೆರವಾಗಬೇಕು ಈ ತಿಂಗಳಲ್ಲಿ ನಮ್ಮ ಜಿಲ್ಹೆಯೊಳಗೆ ನಾಟಕಗಳ ಮೇಲೆ ಮನೋರಂಜಕ ಕರ ಹೇರಿದ್ದಾರೆ. ರೂಪಾಯಿಗೆ ೨ ಆಣೆಯಂತೆ ಕರದ ದರವಾಗಿದೆ ೮ ಆಣೆಗೆ ಕಡಿಮೆಯಾಗಿ ಯಾರೂ ಟಿಕೇಟು ಕೊಳ್ಳಲಾಗದು. ಯಾಕೆಂದರೆ ೮ ಆಣೆಗೂ ಕಡಿಮೆ ಟಿಕೇಟಿನ ಮೇಲೆ ಕರವಿಲ್ಲ. ಆದರಿಂದ ಕನಿಷ್ಠ ೮ ಆಣೆ ಟಿಕೇಟಿಗೆ ಕರ ಸಹಿತ ೯ ಆಣೆ ಕೊಟ್ಟು ರಾಜನಿಷ್ಠರೆಲ್ಲರೂ ನಾಟಕ ನೋಡಿ ಸರಕಾರಕ್ಕೆ ಕೈಲಾದಷ್ಟು ನೆರವಾಗಬೇಕು ಆಣೆ— ಎರಡಾಣೆಯಿಂದ ಏನಾದೀತೆಂದು ಭಾವಿಸಕೂಡದು. ಹನಿ—ಹನಿ ಕೂಡಿದರೆ, ಹಳ್ಳವಾಗುತ್ತದೆ ಹಳ್ಳಗಳಿಂದ ಹೊಳೆಯಾಗುತ್ತದೆ! ಶೇಂದಿ ಕುಡಿಯಬಾರದಾಗಿ ಹೇಳಲಾಗದು, ಕುಡಿಯುವದು ಹಿತಕರವೆಂದು ಹೇಳಬೇಕು ಅದರಿಂದ ದೇಹಕ್ಕೆ ಪುಷ್ಟಿ ದೊರೆಯುತ್ತದೆ, ಆರೋಗ್ಯ ಪ್ರಾಪ್ತಿಯಾಗುತ್ತದೆ, ಎಂದು ಹೇಳಬೇಕು ಶೇಂದಿ ಕುಡಿದಷ್ಟು ಚಳಿ-ಜ್ವರದ ಬಾಧೆ ಕಡಿಮೆ; ಎಂದು ಹೇಳಬೇಕು. ಶೇಂದಿ ಕುಡಿಯುವ ಚಟವಿರುವದರಿಂದ [illegible] ಕಡಿಮೆಯಾಗುತ್ತದೆಂದು ಹೇಳಬೇಕು. ಇದರಿಂದ ಹೆಚ್ಚಿನ ಬೆಲೆಯ ಸರಾಯಿ ಕುಡಿಯುವದು ತಪ್ಪುತ್ತದೆಂದು ಹೇಳಬೇಕು ಬಡಬಗ್ಗರಿಗೆ ಇದೊಂದು ಉಪಕಾರವೆಂದೂ ತಿಳಿಸಬೇಕು ಅಫೀಮು-ಗಾಂಜಾ ಮೊದಲಾದ ಮಾದಕ ಪದಾರ್ಥಗಳ ಅನುಕೂಲತೆಯಿಂದ, ಕೊಕೇನ ಮೊದಲಾದ ಮಾದಕ ದ್ರವ್ಯಗಳನ್ನು ಸೇವಿಸದಂತ ಅನುಕೂಲತೆಯಾಗಿರುವದಾಗಿ ಹೇಳಬೇಕು ಇಷ್ಟ ನಾನು ಹೇಳುವ ಮಾತಲ್ಲ. ನಮ್ಮ ಮುಂಬಯಿ ಇಲಾಖೆಯ ಆಬಕಾರಿ ಕಮಿಶನರರಾದ ಮಿ| ಜೇ ಪಿ ಬ್ರೆಂಡರ್‌ರವರೇ ಹೇಳುವ ಮಾತು ೧೯೨೮—೨೯ನೇ ಸಾಲಿನ ರಿಪೋರ್ಟ ಸದ್ಯಕ್ಕೇ ಪ್ರಕಟವಾಗಿದೆ ಅದರೊಳಗೆ ಈ ವಿಚಾರಗಳು ಒಳಗೊಂಡಿವೆ. ಆಬಕಾರಿ ಖಾತೆಯಲ್ಲಿ ನಮ್ಮ ಮುಂಬಯಿ ಇಲಾಖೆಗೆ ಈ ಬಾರಿ ೯೬ ಲಕ್ಷ ರೂಪಾಯಿ ತುಟ್ಟಿಬಂದಿದೆ. ಇದನ್ನು ತುಂಬಿ ತರಲು ಶಕ್ತಿಮೀರಿ ದುಡಿಯಬೇಕು ಈ ಹಿಂದೆ ನಾನು ಹಲವು ಸೂಚನೆಗಳನ್ನು ಮಾಡಿರುತ್ತೇನೆ. ಇವನ್ನು ಗ್ರಹಿಸಬೇಕು, ಇವನ್ನು ಕೈಕೊಳ್ಳಬೇಕು. ಹ್ಯಾಗೂ ಮಾಡಿ ಬ್ರಿಟಿಶ ಸರಕಾರಕ್ಕೆ ಸತ್ಯಾಗ್ರಹಿಗಳ ಗೋಜು ಮುಗಿದು ಸ್ವರಾಜ್ಯ ಕೊಡುವ ಮಹಾ ಕಾರ್ಯದಲ್ಲಿ ಹಣದ ಅಡಚಣೆಯಾಗದಂತೆ ಜಾಗರೂಕರಾಗಿರಬೇಕು. ನಾವು ಕಷ್ಟದಿಂದ ಕೊಡುವ ಶೀರ್ವೆ ಹಣವನ್ನೆಲ್ಲ ಸತ್ಯಾಗ್ರಹಿ ಕೈದಿಗಳು ಜೈಲಿನಲ್ಲಿಂದು ಸರಕಾರಕ್ಕೆ ಸೋಲಿಸುತ್ತಾರೆಂಬ ಠಕ್ಕಾಗಿ ಜಿಲ್ಹಾ ಕಲೆಕ್ಟರರು ಹೊರಡಿಸಿದ ಸರ್ಕ್ಯುಲಾರನ್ನು ನೆನಸಿ ಸರಕಾರಕ್ಕೆ ತುಂಬ ನೆರವಾಗಬೇಕು.

ಬಾದಶಹಾ ಚಕ್ರವರ್ತಿ ಪಂಚಮ ಜೋರ್ಜ ಭೂಪಾಲರಿಗೂ, ಮೇರಿ ಮಹಾರಾಣಿಯವರಿಗೂ ವಿಜಯವಾಗಲಿ!!

— ಕಟಕದಲ್ಲಿ ಒಂದು ಕೊಂಗ್ರೆಸ ಚೇಷ್ಟೆ! ಹುಲಿಗೂ ಕುರಿಮರಿಗೂ ಅದ್ಭುತ ಕುಸ್ತಿಯಾಗುವದೆಂದು ಜಾಹಿರನಾಮೆ ಹೊರಟಿತು ಹಿಂಡುಗಟ್ಟಿ ಜನಾ ಸೇರಿತು ಸ್ವಯಂಸೇವಕರು ಎದ್ದು ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಪುರಸ್ಕರಿಸುವಂತೆ ಭಾಷಣಮಾಡಲಾರಂಭಿಸಿದರು ಪೋಲೀಸರು ಅವರಿಗೆ ಸೆರೆ ಹಿಡಿದರು.

— ಸರಕಾರವು ಹಣದ ಅಡಚಣೆಯಿಂದ, ದವೆ-ಆಸ್ಪತ್ರಿಗಳ ಗ್ರಾಂಟನ್ನು ಕಡಿಮೆ ಮಾಡಿತು ಆದರೆ ಯುರೋಪಿಯನ್ ಶಾಲೆಗಳ ಗ್ರಾಂಟು ಕುಗ್ಗಲಿಲ್ಲವಾಗಿ ಕಲಿಕತ್ತೆಯ 'ಲಿಬರ್ಟಿ' ಪತ್ರಿಕೆ ಪ್ರಕಟಿಸುತ್ತದೆ.

— ಪಂಡಿತ ಮದನಮೋಹನ ಮಾಲವೀಯರವರು ಹಿಂದುಸ್ಥಾನದೊಳಗಣ ಸ್ಥಿತಿಯನ್ನು ಸಮಕ್ಷ ಅರುಹುವದಕ್ಕಾಗಿ ವಿಲಾಯತಿಗೆ ಹೋಗುವವರಿದ್ದಾರೆಂದು ಒಂದು ವಾರ್ತೆ ಹಬ್ಬಿತ್ತು. ಇದು ದಿಟವಲ್ಲ. ಪಂಡಿತ ಮಾಲವೀಯಜೀಯವರಿಗೆ ಕೆಲ ಬ್ರಿಟಿಶ ನೇಯರು ನಿಮಂತ್ರಿಸಿದ್ದರು. ಈಗಿನ ಸ್ಥಿತಿಯಲ್ಲಿ ಅತ್ತ ಕಡೆ ಬರಲು ಸಾಧ್ಯವಿಲ್ಲವಾಗಿ ಪಂಡಿತಜೀಯವರು ತಿಳಿಸಿರುವರಾಗಿ ತಿಳಿಯುತ್ತದೆ

— ಬಂಗಾಲ ಪ್ರಾಂತದಲ್ಲಿ ಈಚನಕೆ ೫೪ ಸಂಸ್ಥೆಗಳು ಬೇಕಾಯಿದೇಶೀರ ಆಗಿರುತ್ತವ

ಈಗಣ ಸ್ಥಿತಿ.

[ನಿರೀಕ್ಷಕನು ಬರೆದುದು.]

ಸರಕಾರದ ಅಂತರಂಗವನ್ನು ನಾನು ಕಳೆದ ಸಂಚಿಕೆಯಲ್ಲಿ ವರ್ಣಿಸಿದ್ದೆ. ಅದರೊಳಗೆ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ಸ್ವಲ್ಪ ತಿದ್ದುಪಡಿ ಅವಶ್ಯವಿದೆ. ಸಂಕಿ ದೊರೆಗಳು ಚಿಂತಾಕ್ರಾಂತರಾಗಿದ್ದಾರೆ, ಹೀಗೆ ನಾನು ಬರೆದಿದ್ದೆ, ಈಗ ನೋಡಿದರೆ ಅದು ತಪ್ಪು. ಸಂಕಿ ದೊರೆಗಳು ಸ್ವಪಕ್ಷದ 'ನ್ಯೂಸಲೆಟರ' ಎಂಬ ಪತ್ರಿಕೆಯಲ್ಲಿ ಒಂದು ಲೇಖ ಬರೆದು ದಬ್ಬಾಳಿಕೆಯನ್ನು ಸಮರ್ಥಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಅದು ಯೋಗ್ಯವಾದದ್ದೆಂದು ಬರೆದಿದ್ದಾರೆ. ನನಗೆ ತಿಳಿಯಲಿಲ್ಲ. 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯ ಸಂಪಾದಕರಾದ ಶ್ರೀ| ಸದಾನಂದರವರು ಈ ಗೂಢವನ್ನು ಬಯಲಿಗಿಟ್ಟಿದ್ದಾರೆ. ಸಂಕಿ ದೊರೆಗಳೆಂದರೆ ನೀರಿನಂತೆ ನಿರ್ಮಲರು, ಬೇಕಾದವರು ಬೇಕಾದ ಬಣ್ಣ ಬೆರಿಸಿಕೊಳ್ಳಬಹುದು. ಅಂದರೆ ಕಾಲಿಕಾರ ಪಕ್ಷದಲ್ಲಿ ಬೆರೆತರೆ ಕಾಲಿಕಾರ ಪಕ್ಷದ ಪ್ರಮುಖರು, ಲಿಬರಲ್ ಪಕ್ಷದಲ್ಲಿ ಸೇರಿದರೆ ಆ ಪಕ್ಷದ ನಾಯಕರು, ಇವರಿಗೆ ಸ್ವಂತ ಬಣ್ಣವಿಲ್ಲ, ಮತವಿಲ್ಲ. ಸಂಕಿದೊರೆಗಳ ಮೇಲೆ ಮಹಾತ್ಮರ ಪ್ರೀತಿ ಇದ್ದಾಗ್ಯೂ ನಂಬಿಗೆಯಿರಲಿಲ್ಲ. ಶ್ರೀ| ಸಪ್ರೂ-ಜಯಕರರು ಮಾತ್ರ ಅವರಿಗೆ ನಂಬಿಕೊಂಡಿದ್ದರು. ಈಗ ಅವರು ಈ ವೇಷ ನೋಡಿ ಬೆರಗಾಗಿರುವರು. ಮಹಾತ್ಮರಿಗೆ ಮುಂಚಿನಿಂದ ಭಾರತ ಮಂತ್ರಿ ಸರ್ ಸೆಮ್ಯುಅಲ್ ಹೋರರವರ ಮೇಲೆಯೇ ನಂಬಿಗೆ. ಹಿಂದುಸ್ಥಾನದ ಮಟ್ಟಿಗೆ ಪ್ರಧಾನ ಮಂಡಲದಲ್ಲಿ ಈಗ ಅವರೇ ಅಗ್ರೇಸರರು. ಅವರ ಅಭಿಪ್ರಾಯವೇ ಪ್ರಧಾನ ಮಂಡಳದ ಅಭಿಪ್ರಾಯ. "ದಬ್ಬಾಳಿಕೆ ನಿರರ್ಥಕವಾದದ್ದು, ಸ್ವರಾಜ್ಯ ಕೊಟ್ಟನಕ ಬಾಳುಗಾಲವಿಲ್ಲ. ರಾಷ್ಟ್ರೀಯ ಸಭೆಯ ಸಹಕಾರ ಪಡೆದನಕ ಯಾವದೇ ಸ್ವರಾಜ್ಯ ಯೋಜನೆ ಯಶಸ್ವಿಯಾಗದು" ಈ ಪ್ರಕಾರ ಭಾರತಮಂತ್ರಿ ಸರ್ ಸೆಮ್ಯುಅಲ್ ಹೋರರವರ ಮನವರಿಕೆಯಾದರೆ, ದಬ್ಬಾಳಿಕೆ ಕ್ಷಣಾರ್ಧದಲ್ಲಿ ನಿಲ್ಲುವದು. ಸಂಕಿ ದೊರೆಗಳ ಮೇಲೆ ಏನೊಂದೂ ಹೊಂದಿಲ್ಲ. ಅದೂ ಹೋರರವರ ಫೋನೋಗ್ರಾಫು. ಈ ಪ್ರಕಾರ ಶ್ರೀ ಸದಾನಂದರವರು 'ಫ್ರೀ ಪ್ರೆಸ್ ಜರ್ನಲ್' ಪತ್ರಿಕೆಯಲ್ಲಿ ಬರೆಯುತ್ತಾರೆ. ಇದೊಂದು ತಿದ್ದುಪಡಿ ನಾನು ಮಾಡಬೇಕಾದದ್ದು. ಶ್ರೀ| ಸದಾನಂದರು ರೌಂಡ ಟೇಬಲ್ ಪರಿಷತ್ತಿನ ಕಾಲಕ್ಕೆ ಲಂಡನಿಗೆ 'ಫ್ರೀ ಪ್ರೆಸ್' ವಾರ್ತಾವಾಹಕ ಸಂಸ್ಥೆಯ ಪ್ರತಿನಿಧಿಗಳಾಗಿ ಮೂರ್ನಾಲ್ಕು ಇಲ್ಲಿಂದ ಹೋಗಿ ಅಂತಃಸೂತ್ರಗಳನ್ನೆಲ್ಲ ತಿಳಿದುಕೊಂಡು ಬಂದವರು.

ರಾಜ ಶಾಸನಗಳಿಂದ ಸಂಘಟಿತವಾಗಿ ನಿರ್ದಯದಿಂದ ದಬ್ಬಾಳಿಕೆ ನಡಿಸಿದಾಗ್ಯೂ ರಾಷ್ಟ್ರೀಯ ಸಭೆಯ ಪ್ರಾಬಲ್ಯ ಕಡಿಯಲ್ಪಡಲಿಲ್ಲ, ಹೀಗೆ ನಾನು ಹೇಳಿದ್ದ ಅದಕ್ಕೆ ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರ ವಚನದ ಆಧಾರ ಕೊಟ್ಟಿದ್ದೆ. ಕಲೆಕ್ಟರರೂ, ಕಮಿಶನರರೂ ಅಲ್ಲಲ್ಲಿ ರಾಜನಿಷ್ಠ ಸಭೆ ಸೇರಿಸಿ ರಾಜನಿಷ್ಠೆಯ ವಾತಾವರಣವನ್ನು ಹುಟ್ಟಿಸಲು ಪ್ರಯತ್ನಪಡುವದೊಂದು ಹೊಸ ಆಚಾರ. ಕೊಂಗ್ರೆಸಿನ ವರ್ಚಸ್ಸು ಮುರಿದಿದ್ದರೆ, ರಾಜನಿಷ್ಠ ಸಭೆಗಳನ್ನು ಒತ್ತರದಿಂದ ಸೇರಿಸುವ ಪ್ರಸಂಗವಿದ್ದಿಲ್ಲ. ಮುಂಬಯಿಯೊಳಗಿನ ಒಂದು ಉದಾಹರಣೆಯನ್ನೇ ಹೇಳುತ್ತೇನೆ. ಶ್ರೀ| ಜೀವನಲಾಲ ಪ್ರತಾಪ ಎಂಬ ದೊಡ್ಡ ಹತ್ತಿಯ ವರ್ತಕರು ಕೊಂಗ್ರೆಸಿನ ಅಪ್ಪಣೆ ಮುರಿದರು. ಅದಕ್ಕಾಗಿ ಅವರಿಗೆ ಬಹಿಷ್ಕರಿಸಬೇಕೆಂದು ಕೊಂಗ್ರೆಸ ಬುಲೆಟಿನ್ ಪತ್ರಿಕೆಯಲ್ಲಿ ರಾಯಸ ಹೊರಬಿತು. ೫೦೦೦ ರೂಪಾಯಿಗಳ ದಂಡ ಕೊಟ್ಟರೆ ಬಹಿಷ್ಕಾರ ಅಂತ್ಯವಾಗುವದಾಗಿ ಕೊಂಗ್ರೆಸಿನ ಬೆದರಿಕೆ. ಶ್ರೀ| ಜೀವನಲಾಲರು ಪೋಲೀಸ ಕಮಿಶನರರಿಗೆ ಬಹಿಷ್ಕಾರದಿಂದ ತಮಗೆ ರಕ್ಷಿಸಬೇಕಾಗಿ ಬಿನ್ನೈಸಿಕೊಂಡರು. "ಹೆದರಬೇಡಿ ನಾನು ರಕ್ಷಿಸುತ್ತೇನೆ" ಹೀಗೆ ಪೋಲೀಸ ಕಮಿಶನರರು ಅಭಯ ಕೊಟ್ಟರು. ಆದರೆ ಇದರಿಂದ ಶ್ರೀ ಜೀವನಲಾಲರ ವ್ಯಾಪಾರ ಸುಧಾರಿಸಲಿಲ್ಲ. ಬೇರೆ ವರ್ತಕರು ಇವರೊಡನೆ ವ್ಯಾಪಾರ ಮಾಡಲಿಲ್ಲ. ಪೋಲೀಸ ಕಮಿಶನರರು ಪೋಲೀಸ [illegible] ಸಹಾಯಕ್ಕಾಗಿ ಕೊಟ್ಟರು. ಆ ಸಹಾಯ ಶ್ರೀ ಜೀವನಲಾಲರಿಗೆ ಬೇಡ. ಯಾಕಂದರೆ, ರಾಷ್ಟ್ರೀಯ ಸಭೆಯವರು [illegible] ಮಾಡುವದಿಲ್ಲ, ಅದು ಕೊಂಗ್ರೆಸ ಧರ್ಮವಲ್ಲ. [illegible] ಕೊಂಗ್ರೆಸ [illegible] ಅವರು ಬಹಿಷ್ಕಾರವನ್ನು ರದ್ದುಪಡಿಸಿಕೊಂಡರು. ಶ್ರೀ ಜೀವನಲಾಲರು ಕೊಂಗ್ರೆಸ ಪಕ್ಷದವರು. [illegible] ಉಲ್ಲಂಘಿಸುವವರಲ್ಲ. ಆದರೆ ಮಾಡುವದೇನು? ಮುಂಬಯಿಯ ಪ್ರತಿ ವರ್ತಕರಿಗೂ ಇದೇ ಅವಸ್ಥೆಯಾಗಿದೆ. ಸರಕಾರ [illegible] ಪೋಲೀಸರು ಬಿಡಿಸುತ್ತಾರೆ. [illegible] ಮಾತಾಡಿದರೆ ಕೊಂಗ್ರೆಸಿನ ಬಹಿಷ್ಕಾರ [illegible] ಮಾಡದವರಕ್ಕಾಗಿ [illegible] ಸಭೆ ಸೇರಿಸಿದರಂತೆ. ಸಭೆಯ [illegible] ತಿನಾಯಕರಾಗಿ ಕೊಂಗ್ರೆಸ [illegible] ತ್ತು ಆಯಿತು. ಕೊಂಗ್ರೆಸು ಬೇಕಾಯಿದೆಂದಿರ [illegible] ಆಗ ಗುಪ್ತವಾಗಿ [illegible] ವರ್ತಕರು ಕೊಂಗ್ರೆಸಿನ ಪಕ್ಷಕ್ಕೆ [illegible] ಕೊಂಗ್ರೆಸಿನವರಿಗೆ [illegible] ವರ್ತಕರ ಗುಪ್ತ [illegible] ಕೊಂಗ್ರೆಸಿನ ಅಪ್ಪಣೆಯನ್ನು [illegible] ಯುವ ಬಗ [illegible] ತ ಬಟ್ಟೆ ನಡೆಯುವ ಕಸರತ್ತು [illegible] ಎಷ್ಟರತನಕ ನಡಿಸಬಹುದು? ಎಂಬುದೇ ವರ್ತಕರ ಚಿಂತೆ. ಇದು ಮುಂಬಯಿಯ ಕಥೆ. [illegible] ಇದೇ ಪ್ರಕಾರ ಅವಸ್ಥೆ ಇರುವದಾಗಿ ಇದೇ ಈಗ ಗವ್ಹರ್ನರ ನಡಿಸಿ ನಿವೃತ್ತ ಹೊಂದಿದ ಸರ್ ಸ್ಟೇನ್ಲೀ ಜೆಕಸನ್‌ರವರು ನುಡಿಯುತ್ತಾರೆ 'ನಮ್ಮ ಗುಪ್ತ ಪೋಲೀಸರು ಒಳ್ಳೇ ನಿಷ್ಣಾತರಿದ್ದಾರೆ ಆದಾಗ್ಯೂ ಅವರಿಂದ ಪತ್ತೆ ಹಚ್ಚಬರುವದಿಲ್ಲ. ಹಿಂದೀ ಜನರ ಸಹಾಯ ಪಡೆದನಕ ಕ್ರಾಂತಿಕಾರಕರನ್ನು ನಿರ್ಮೂಲಿಸುವದು ಸಾಧ್ಯವಿಲ್ಲ. ಕ್ರಾಂತಿಕಾರಕರು ಒಳ್ಳೇ ಸ್ವದೇಶಾಭಿಮಾನಿಗಳು, ಬ್ರಿಟಿಶರ ಮೇಲೆ ಅವರಿಗೆ ದ್ವೇಷವಿದೆ" ಹೀಗೆ ಸರ್ ಸ್ಟೇನಲೀ ಜೆಕಸನ್‌ರವರು ತಾ| ೧೬ನೇ ಶನಿವಾರ ಲಂಡನಿನ 'ರ್‍ಯುಟರ' ವಾರ್ತಾವಾಹಕರ ಬಳಿ ನುಡಿದರು. ಜೆಕಸನ್‌ರವರ ಕ್ರಾಂತಿಕಾರಕ ಶಬ್ದದಲ್ಲಿ ಕೊಂಗ್ರೆಸೂ ಸೇರುತ್ತದೆಂದು ಗ್ರಹಿಸಿದರೆ ತಪ್ಪಾಗದು. ಭಾರತ ಮಂತ್ರಿಗಳಾದ ಸರ್ ಸಮ್ಯುಅಲ್ ಹೋರರವರು ಮುಂಬಯಿ-ಬಂಗಾಲ ಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಯ ಪ್ರಾಬಲ್ಯವಿರುವದಾಗಿ ನುಡಿದದ್ದರ ವಿವರಣೆಯನ್ನು ಸ್ವಲ್ಪ ವಿಸ್ತಾರವಾಗಿ ಈಗ ನಾನು ಮಾಡಿರುತ್ತೇನೆ

ಜೈಲುಗಳು ತುಂಬಿತುಳುಕುತ್ತಿವೆ. ಮುಂಬಯಿ ಸರಕಾರವು ೧೦೦೦ ಅಪರಾಧಿ ಕೈದಿಗಳನ್ನು ಬಿಡುಗಡೆ ಮಾಡಬೇಕಾಗಿ ಠರಾಯಿಸಿದ ವಾರ್ತೆ ನನಗೆ ಈಗಲೇ ತಿಳಿಯಿತು. ಕಳೆದ ಸತ್ಯಾಗ್ರಹದ ೮-೯ ತಿಂಗಳಲ್ಲಾದ ಅವಸ್ಥೆಯು ಈ ವರ್ಷ ೩ ತಿಂಗಳಲ್ಲೇ ಆಗಿಹೋಗಿದೆ. ಭಾರತ ಮಂತ್ರಿಗಳು ವಿಚಾರಮಗ್ನರಾಗಿರಬೇಕೆಂದು ನನ್ನ ಎಣಿಕೆ. ದಿಲ್ಲಿಯಲ್ಲಿ ಸೇರಲಿಕ್ಕಿದ್ದ ಕೊಂಗ್ರೆಸ್ಸಿನ ವಾರ್ತೆ ಬರುವದಕ್ಕಿಂದ ಮುಂಚಿತವಾಗಿ ಬರೆಯುವ ಲೇಖವಿದು. ಕೊಂಗ್ರೆಸು ಇನ್ನೂ ಬೇಕಾಯಿದೆಂದಿರ ಆಗಿಲ್ಲ. ಸೌ| ಸರೋಜನೀ ನಾಯಡೂರವರು ಶುಕ್ರವಾರ ಕೊಂಗ್ರೆಸ ಅಧಿವೇಶನಕ್ಕಾಗಿ ಮುಂಬಯಿಯಿಂದ ಹೊರಡುವವರಿದ್ದರು. ತಮ್ಮ ಅಪ್ಪಣೆ ಪಡೆದನಕ ಮುಂಬಯಿಯಿಂದ ಎಲ್ಲಿಲ್ಲೂ ಹೊರದಬಾರದಾಗಿ ಪೋಲೀಸ ಕಮಿಶನರರು ಅಪ್ಪಣೆ ಹೊರಡಿಸಿದ್ದಾರೆ. ಬುಧವಾರ ಮುಂಬೈಯಿಂದ ಹಲವರು ಕೊಂಗ್ರೆಸ ಪ್ರತಿನಿಧಿಗಳಾಗಿ ಹೊರಟಿದ್ದರು. ಅವರಿಗೆ, ಅವರ ಜೊತೆಗಿದ್ದ ಪ್ರಯಾಣಿಕರಿಗೆ ಸಹ ಪೋಲೀಸರು ಹೋಗಗೊಡಲಿಲ್ಲ. ಸೌ| ಸರೋಜನಿಯವರಿಗೆ ಸೆರೆಹಿಡಿಯಬೇಕೆಂದು ಹಿಂದುಸ್ಥಾನ ಸರಕಾರದ ಅಪ್ಪಣೆಯಾಗಿರುವದಂತೆ! ಮುಂಬಯಿ ಸರಕಾರವು ಕೈತಡೆಯುತ್ತಿರುವದಂತೆ! ಈ ಪ್ರಕಾರ ದಿಲ್ಲಿಯ ಹಿಂದುಸ್ಥಾನ ಟೈಮ್ಸ ಪತ್ರಿಕೆಯು ಪ್ರಕಟಿಸುತ್ತದೆ. ಇದರೊಳಗೆ ಹುರುಳು ತೋರುವದಿಲ್ಲ. ಹಿಂದುಸ್ಥಾನ ಸರಕಾರವಾಗಲಿ, ಮುಂಬಯಿ ಸರಕಾರವಾಗಲಿ ಸ್ವತಂತ್ರವಲ್ಲ. ಭಾರತಮಂತ್ರಿ ಸರ ಸೆಮ್ಯುಅಲ್ ಹೋರರವರು ವಿಧಿಸಿದಂತೆ ಇಲ್ಲಿಯ ಸರಕಾರಗಳು ತಲೆಬಗ್ಗಿಸಿ ನಡೆಕೊಳ್ಳಬೇಕು. ಸೌ| ಸರೋಜನಿಯವರಿಗೆ ಹಿಡಿಯಬೇಕೆಂಬ ಲವಲವಿಕೆ ಇದ್ದಲ್ಲಿ ದಿಲ್ಲಿಗೆ ಹೋದಾಗಲೇ ಹಿಂದುಸ್ಥಾನ ಸರಕಾರಕ್ಕೆ ಸೆರೆಹಿಡಿಯಬರುತ್ತಿತ್ತು. ಆಗ ಸೆರೆಹಿಡಿಯಲಿಲ್ಲ. ಇದರ ಮೇಲಿಂದ ಭಾರತ ಮಂತ್ರಿಗಳ ಮನೋನಿಶ್ಚಯವಾಗುವದಿಲ್ಲವಾಗಿ ಊಹೆ. ಮಹಾತ್ಮರು ನುಡಿದಂತೆ ಈಗಿನ ಪ್ರಧಾನ ಮಂಡಳದಲ್ಲಿ ಪ್ರಾಮಾಣಿಕ ಪ್ರಧಾನರೆಂದರೆ ಸರ್ ಸೆಮ್ಯುಅಲ್ ಹೋರರವರೇ. ಹಾಗೆ ಅವರು ನಿರ್ಭಯರೂ ಇದ್ದಾರೆ. ಅವರ ಅಭಿಪ್ರಾಯಕ್ಕೆ ಇಡೀ ಪ್ರಧಾನ ಮಂಡಳವೇ ಒಪ್ಪುತ್ತದಾಗಿ ನಾನು ಹೇಳಿ ಬಿಟ್ಟೇನೆ. ದಬ್ಬಾಳಿಕೆಯಿಂದ ಪ್ರಯೋಜನವಿಲ್ಲವಾಗಿ ಅವರಿಗೆ ಈಗೀಗ ಹೊಳೆಯ ಹತ್ತಿದ್ದರಿಂದ ರಾಷ್ಟ್ರೀಯ ಸಭೆಯು ಬೇಕಾಯಿದೆಂಬ ಜಾಹೀರನಾಮೆ ಹೊರಡಲು ವಿಳಂಬವಾಗಿದೆ. ಪಂಡಿತ ಮದನಮೋಹನ ಮಾಲವೀಯರವರಿಗೆ ಸೆರೆ ಹಿಡಿಯುವ ಯಾ ಪ್ರತಿಬಂಧಿಸುವ ನಿಶ್ಚಯವಾಗಲಿಲ್ಲ ನಿಶ್ಚಯವಾಗುವದಿಲ್ಲ. ಸೌ| ಸರೋಜನಿಯವರ ಮೇಲೆ ಪ್ರತಿಬಂಧಕ ಹುಕುಮು ಹೊರಡಿಸುವದಕ್ಕೂ ಇಷ್ಟು ವಿಳಂಬವಾಯಿತು. ಒಂದು ಒಳಗುಟ್ಟು ಈಗ ಹೇಳಿಬಿಡುತ್ತೇನೆ. ಮಹಾತ್ಮರಿಗೂ, ಭಾರತ ಮಂತ್ರಿಗಳಾದ ಸರ ಸೆಮ್ಯುಅಲ್ ಹೋರರವರಿಗೂ ಒಂದು ಶರತ್ತು ಬಿದ್ದಿದೆ. ಆ ಶರ್ತಿನ ಪರೀಕ್ಷೆಯು ಈಗ ಹಿಂದುಸ್ಥಾನದಲ್ಲಿ ನಡೆದಿದೆ. ರೌಂಡ ಟೇಬ

ಪರಿಷತ್ತಿನ ಕಾರ್ಯ ಮುಗಿಸಿ ಮಹಾತ್ಮರು ಲಂಡನ್ನಿನಿಂದ ಬರಲಿಕ್ಕಾಗಿ ಹೊರಡುವ ಸಮಯ ಭಾರತ ಮಂತ್ರಿ ಸರ್ ಸಮ್ಯುಅಲ್ ಹೋರವರ ಕಡೆ ಕೊನೆ ಮಾತು ಆಡಹೋಗಿದ್ದರೆಂಬ ಸಂಗತಿ ಈಗ ಲೋಕವಿಶ್ರುತವಿದೆ "ರಾಷ್ಟ್ರೀಯ ಸಭೆಯು ಲೋಕ ಪ್ರತಿನಿಧಿ ಸಂಸ್ಥೆಯಲ್ಲ ನಿಮಗೆ ಹಿಂದೀ ಜನಾಂಗದ ಪರವಾಗಿ ಮಾತನಾಡುವ ಅಧಿಕಾರವಿಲ್ಲ " ಹೀಗೆ ಮಾತಿನ ಭರದಲ್ಲಿ ಭಾರತ ಮಂತ್ರಿಗಳು ಮಹಾತ್ಮರ ಕಡೆ ದೇಶ ಕಾಂಗ್ರೆಸಿನ ಪ್ರತಿಷ್ಠೆಯನ್ನು ಕೆಣಕಿದರು. "ಹಾಗಾದರೆ ನಿಮ್ಮ ದಾಗು ರಾಷ್ಟ್ರೀಯ ಸಭೆಯು ಬೇಕಾದ ಹಾಗೆ ಸಂತೃಪ್ತ ಮಾಡಿರಿ ನಾನು ತಿರುಗಾಡುತ್ತೇನೆ ನಿಮ್ಮ ಪಟ್ಟಿಯಲ್ಲಿ ನಾನು ಶೀಘ್ರದಿ ಬರುವೆನು ನಿಮ್ಮ ಸಂತೋಷದಿಂದನೆ ನನಗೆ 'ಪಾಸ ಮಾಡುವಿರಿ." ಹೀಗೆ ಮಹಾತ್ಮರು ನಿರ್ಧಾರದಿಂದ ನುಡಿದರು. "ನಿಮ್ಮ ಕಾಂಗ್ರೆಸನ್ನು ಚದರಿಸಿ ಬಿಡುವೆನು ನಿಮಗ ಜನರ ಬೆಂಬಲವಿಲ್ಲವಾಗಿ ನಿಮಗೇ ಮನಗಾಣಿಸುವೆನು." ಹೀಗೆ ಭಾರತ ಮಂತ್ರಿಗಳು ಕಠೋರವಾಗಿ ನುಡಿದರು. ಮೂರು ತಿಂಗಳ ತನಕ ದಬ್ಬಾಳಿಕೆ ನಡೆಯಿತು. ರಾಷ್ಟ್ರೀಯ ಸಭೆಯ ಕಾರ್ಯಕಾರಿ ಮಂಡಳದವರೆಲ್ಲ ಬೇಕಾಯಿದೇಶೀರ ಆದಾಗ್ಯೂ ಅವರ ವ್ಯಾಪಾರಗಳು ಇನ್ನೂ ಎಡೆಬಿಡದೆ ಸಾಗುತ್ತವಾಗಿ ಭಾರತ ಮಂತ್ರಿಗಳು ಒಪ್ಪುತ್ತಾರೆ ಮುಂಬಯಿ-ಬಂಗಾಲ ಪ್ರಾಂತಗಳ ಮಟ್ಟಿಗೆ ಭಾರತಮಂತ್ರಿಗಳೂ, ಬಂಗಾಲದ ಗವ್ಹರ್ನರರಾಗಿ ನಿರ್ದಯದಿಂದ ದಬ್ಬಾಳಿಕೆ ನಡಸಿ ಸ್ವದೇಶಕ್ಕೆ ಮರಳಿದ ಸರ ಸ್ಟೇನಲಿ ಜಾಕ್ಸನರವರೂ ವಿವರಿಸಿ ಕೊಡುತ್ತಾರೆ. ಉಳಿದ ಕಡೆಯಲ್ಲಿ ಕಾಂಗ್ರೆಸಿನ ಪ್ರಾಬಲ್ಯ ಮುರಿಯಿತು ಎಂದು ಭಾ|ಮ|ರವರು ಹೇಳುತ್ತಿದ್ದಾಗ್ಯೂ, ನಿತ್ಯ ಪತ್ರಿಕೆಗಳ ಮೇಲಿಂದ ಸತ್ಯಾಗ್ರಹವು ಎಂದಿನಂತ ನಡೆದಿದೆಂದು ತಿಳುವಳಿಕೆಯುಂಟಾಗುತ್ತದೆ 'ಗಡಿನಾಡಿನಲ್ಲಿ ಸುಧಾರಿಸಿದ ರಾಜ್ಯವು ಇದೀಗಲೇ ಪ್ರಾರಂಭವಾಗಿ ಹೋಯಿತು ಚೀಫಕಮಿಶನರಿಗೆ ಗವ್ಹರ್ನರರ ಗೌರವ ಪದವಿ ಕೊಟ್ಟು ಪಟ್ಟಗಟ್ಟಿದರು ಈ ಸಮಾರಂಭವು ಸಡಗರದಿಂದ ನೆರವೇರಿತೆಂದು ಬೇರೆ ವಿದೇಶಗಳಲ್ಲಿ ಬಹುದೊಡ್ಡ ವರ್ಣನೆ. ಅಲ್ಲಿಯ ಜನರಿಗೆ ಸಮಾಧಾನವಾಯಿತೆಂದು ಅವರ ಅರ್ಥ. ಖಾನ ಅಬ್ದುಲ್ ಗಫ್ಫಾರಖಾನ ಯಾರ ೧ ನಾಡಿನ ಗಾಂಧಿಗಳ ಮೇಲಿನ ಭಕ್ತಿಯನ್ನು ಜನರು ತೋರಿದರೆಂದು ಇದರ ಅರ್ಥ, ಒಂದು ಕೈಯಿಂದ ದಬ್ಬಾಳಿಕೆ, ಇನ್ನೊಂದು ಕೈಯಿಂದ ಸುಧಾರಣೆ ಮಾಡುವ ಕ್ರಮ ಯಶಸ್ವಿಯಾಯಿತೆಂದು ಇದರ ಅರ್ಥ, ಆದಾಗ್ಯೂ ರೆಡ್‌ಶರ್ಟ ಯಾನೆ ಕೆಂಪಂಗಿಯವರಿಗೆ ಇನ್ನೂ ಸರಕಾರ ಹಿಡಿಯುತ್ತಿದ್ದಾರ ಅಂದ ಬಳಿಕ ಅಲ್ಲಿಯೂ ಸಮಾಧಾನವಿಲ್ಲವಾಗಿ ಸ್ಪಷ್ಟವಾಗುತ್ತದೆ (ಭಾರತಮಂತ್ರಿಗಳು ಇವನ್ನೆಲ್ಲ ಮರೆಮಾಚಿಸುತ್ತಿದ್ದಾರೆ. 'ತಾವೇ ಸೋಲುವ ಪ್ರಸಂಗ ಬಂದಿದೆ ಕಾಂಗ್ರೆಸ ಗೆದ್ದಿತು ' ಹೀಗಿನ ಭಾವನೆಯಾಗಹತ್ತಿದ್ದರಿಂದ ರಾಷ್ಟ್ರೀಯ ಸಭೆ ಬೇಕಾಯಿದೇಶೀರ ಎಂಬ ಜಾಹೀರನಾಮೆ ಇನ್ನೂ ಹೊರಡದು ಆದಾಗ್ಯೂ ರಾಷ್ಟ್ರೀಯ ಸಭೆ ಈಗಿನ ಮಟ್ಟಿಗೆ ಬೇಕಾಯಿದೇಶೀರ ಬಗೆದಾಗಿಯೂ ಲೋಕೀಯ ಸಮುಂದಕವರು ಸ್ವದೇಶಕ್ಕೆ ಹೋದಬಳಿಕ ಪ್ರಧಾನಮಂಡಳದ ಸಭೆಯಾಗಿ ಕೊನೆ ನಿರ್ಣಯವಾಗುವದಾಗಿಯೂ ಮಹಾತ್ಮರ ವಿನ ಇರವಲ್ಲಿ ನಾಳೆ ಒಡಂಬಡಿಕೆ ಪ್ರಸ್ತಾಪ ಒಂದಾವರ್ತಿಯಾಗಿಯೂ ಒಪ್ಪಿದರ ಎಂಬೋಣ

ಲೋಥಿಯನ್ ದೊರೆಗಳ ಆಲೋಚನಾ ಮಂಡಳದ ಅಧ್ಯಕ್ಷ ರಿಸ್ಕೇ ಆಕ್ಷಿ, ನದಾಯಕ ಭಾರತ ಮಂತ್ರಿಗಳೂ ಆದದು ಈ ಅಧಿಕಾರದಿಂದ ಅವರು ಹಿಂದುಸ್ತಾನದ ಪರಿಸ್ಥಿತಿಯನ್ನು ವರ್ಣಿಸುತ್ತಿದ್ದಾರಂತೆ. ಅವರಿಗೆ ವಸ್ತುಸ್ಥಿತಿ ತಿಳಿಯಗೊಡದಂತೆ ಅಧಿಕಾರಿಗಳು ಬಹಳ ಜಾಗ್ರತೆ ವಹಿಸುತ್ತಿದ್ದಾರೆ ಆದಾಗ್ಯೂ, ಅವರೊಡನೆ ಅವರ ಗೆಳೆಯರ ಮಾತನಾಡಿ ಪರಿಸ್ಥಿತಿ ತಿಳಿಸುತ್ತಾರಂತೆ ಈ ಆಲೋಚನಾ ಮಂಡಳದ ಕಾರ್ಯವು ಜೂನ ತಿಂಗಳ ಕೊನೆವಾರದಲ್ಲಿ ಮುಗಿಯುವದು ಲೋಥಿಯನ್ ದೊರೆಗಳು ಆಮೇಲೆ ಲಂಡನ್ನಿಗೆ ಹೋಗಿ ಪರಿಸ್ಥಿತಿಯನ್ನು ಪ್ರಧಾನ ಮಂಡಳಕ್ಕೆ ತಿಳಿಸುವರಾಗಿಯೂ, ಆಮೇಲೆ ರಾಜ್ಯಘಟನಾ ಬದಲುವರಾಗಿಯೂ ಒಂದು ಆದ

ಈಗಿನಸ್ಥಿತಿ ಹೀಗೆ ನಾಳೆಯ ಸ್ಥಿತಿ ಸರ್ವಸೂತ್ರ ಚಾಲಕರಾದ ಭಾರತದ ಮಂತ್ರಿ ಸರ ಸಮ್ಯುಯಲ ಹೋರರವರಿಗೇ ಗೋಚರ!

ದಿಲ್ಲಿಕಾಂಗ್ರೆಸು.

ರ ಕ್ರಮಾನುಸಾರ ತನಕ ಗೊತ್ತಾದ ವಾರ್ತೆಗಳಿಂದ ದಿಲ್ಲಿ ಕಾಂಗ್ರೆಸು ಬೇಕಾಯಿದೇಶೀರ ಆಗಲಿಕ್ಕೆ ಸಂಕಲ್ಪದಂತೆ ನಿನ್ನೆ-ಕಡೆಯತ್ತು ಜರು ನೆರೆದಿತ್ತು ಸರಕಾರವು ಸ್ವಾಗತ ಸಮಿತಿಯನ್ನು, ಆ ಸಮಿತಿಯ ಕಛೇರಿ ಇದ್ದ ಸ್ಥಳವನ್ನು ಬೇಕಾಯಿದೇಶೀರ ಎಂದು ಜಾಹೀರನಾಮೆ ಹೊರಡಿಸಿದೆ ಕಾರ್ಯದ ಕರ್ತರಾದ ಶ್ರೀ|ಸೇಠ-ಶಂಕರಲಾಲ ಬಂಡಾರಿ, ಕಾರ್ಯಕಾರಿ ಸಭಾಸದರಾದ ಶ್ರೀಯುತ ರಾಮಕೃಷ್ಣದಾಸ ಮೌಲಾನಾ ಅಬ್ದುಲ್ಲಾ, ನಾರಾಯಣದಾಸ ಗರ್ಗ, ಹನುಮಂತ ಸಹಾಯ, ದಾಮೋದರದಾಸ ವೈದ್ಯ ಹಾಗೂ ಶ್ರೀಯುತ ಕೋಹಿಲವಂತ ಪಾರ್ಸಿ ಸೆರೆಹಿಡಿಯಲಾಗಿದೆ ಆದಾಗ್ಯೂ ಅಧಿವೇಶನ ನಿರ್ಣೀತ ಕ್ಕದೆಂದೇ ಹೇಳುತ್ತಾರೆ ಸ್ವಾಗತಸಮಿತಿಯು ರಾಷ್ಟ್ರೀಯ ಸಭೆಯ ಭಾಗವಲ್ಲ, ಅದೊಂದು ಆರೋಗ್ಯದ ಸಂಸ್ಥೆ. ಅದನ್ನು ಬೇಕಾಯಿದೇಶೀರ ಮಾಡಿದ್ದರಿಂದ ರಾಷ್ಟ್ರೀಯಸಭೆಯ ಅಧಿವೇಶನಕ್ಕೆ ತೊಂದರೆ ಇರುವದಿಲ್ಲವಾಗಿ ಪ್ರಕಟವಾಗಿದೆ

ಅಧಿವೇಶನದ ಸ್ಥಳ ಇನ್ನೂ ಗೊತ್ತಾಗಿಲ್ಲ ಅಧಿವೇಶನದ ದಿನವೇ ಸ್ಥಳ ಗೊತ್ತಾಗುವದಂತೆ ಸ್ತಬ್ಧವಾಗಿ ಎಲ್ಲ ಕಾರ್ಯಕ್ರಮ ನಡೆದಿದೆ. ಸುಮಾರು ೨೦೦೦ ಪ್ರತಿನಿಧಿಗಳು ರಾಷ್ಟ್ರೀಯ ಸಭೆಗೆ ಹೋಗುವರಂತೆ! ಅಲ್ಲಲ್ಲಿಯ ಕಾಂಗ್ರೆಸ ಪ್ರಮುಖರು ತಪ್ಪದೇ ಹಾಜರಾಗುವರಂತೆ! ಅಮೃತಸರ, ಕಲಕತ್ತಾ, ಕಾನಪೂರ, ಅಹಮದಾಬಾದ, ಮುಂಬಯಿ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ಹೊರಟಿರುವರು ಪೋಲೀಸರು ಅಲ್ಲಲ್ಲಿ ಅವರಿಗೆ ಸರೆ ಹಿಡಿದು ಅಡ್ಡಗಟ್ಟುತ್ತಿದ್ದಾರೆ ಪ್ರತಿನಿಧಿಗಳು ಕಂಡ ದಾರಿಯಿಂದ ಹೋಗುತ್ತಿದ್ದಾರ ದಿಲ್ಲಿಯಲ್ಲಂತೂ ಪೋಲೀಸರಿಗೆ ದೊಡ್ಡ ಗಡಿಬಿಡಿ ಬೀಳುವ ಪ್ರಸಂಗ ಒದಗಿಬಂದಿದೆ, ಮೋಟಾರುಗಳಿಂದ ಬರಹೋಗುವವರಿಗೆ ಅಲ್ಲಲ್ಲಿ ಹಿಡಿದು ಚೌಕಶಿ ನಡಿಸುತ್ತಾರೆ. ನಡಕೊಂಡುಬರುವವರಿಗೂ ತೊಂದರೆಯಾಗಹತ್ತಿದೆ ಸಂಶಯವಾದರೆ ಪ್ರಯಾಣಿಕರಿಗೆ ಸೆರೆಹಿಡಿಯುವ ಅಧಿಕಾರ ಉಗಿಬಂಡಿಯವರಿಗೆ ಕೊಡಲಾಗಿದೆ. ನಿನ್ನೆ ರವಿವಾರ ಕ್ರಿಮಿನಲ್ ಪ್ರೊಸಿಜರ ಕೋಡ ಕಲಮಿನನ್ವಯ ಐವರಿಗೆ ಮಿಕ್ಕಿ ಜನರು ಕೂಡಬಾರದಾಗಿ ದ ಹುಕುಮು ಹೊರಡುವದಿತ್ತು.

ಜೈಲಿನಲ್ಲಿ ಗುಡಾರ ಹೊಡೆದು ೧೦೦೦ ಕೈದಿಗಳಿಗೆ ಉಳಕೊಳ್ಳುವ ವ್ಯವಸ್ಥೆ ಮಾಡಲಾಗಿದೆ ಸೆರೆಹಿಡಿಯುವವರ ವಿಚಾರ ಮಾಡಲು ಹೊರಸ್ಥಳದಿಂದ ಮ್ಯಾಜಿಸ್ಟ್ರೇಟರು ಬರುವವರಿದ್ದಾರೆ

ಶುಕ್ರವಾರ ಸಂಜೆ ಸೌ| ಸರೋಜಿನಿಯವರು ಮುಂಬಯಿಯಿಂದ ದಿಲ್ಲಿ ಕಾಂಗ್ರೆಸಿಗಾಗಿ ಹೊರಟವರಿಗೆ ಉಗಿಬಂಡಿಯಲ್ಲೇ ಸೆರೆಹಿಡಿಯಲಾಗಿದೆ. ಪಂಡಿತ ಮಾಲವೀಯರವರು ಶ್ರೀ ಕಾಶೀಕ್ಷೇತ್ರದಿಂದ ಎರಡುದಿನ ಹೊರಟರು ಅವರಿಗೆ ಪ್ರತಿಬಂಧವಾದ ಯಾತ್ರೆಯಲ್ಲಿ ೬೦೦-೭೦೦ ಮಂದಿ ಸ್ವಯಂಸೇವಕರು ರಾಷ್ಟ್ರ ಸಭೆಯ ತಯಾರಿ ನಡಿಸಿದ್ದಾರೆ

ಜಾಹೀರ ವಿನಂತಿ.

ದಿ ಯುನಿವ್ಹರ್ಸಲ ಮ್ಯುಚುವಲ್ ಏಡ್ ಎಂಡ ಪುವರ ಹೌಸೆಸ್ ಎಸೋಸಿಏಶನದ ಯಾವತ್ತೂ ಮೆಂಬರರಿಗೆ ಇದರ ಮೂಲಕ ತಿಳಿಸುವದೇನೆಂದರೆ-ಡ್ರಾಯಿಂಗದ್ವಾರಾ ಬಹುಮಾನಗಳನ್ನು [*Cash Valuable Prizes*] ಹಂಚುವದು ಗುನ್ಹೆಯಾಗಿರುವದರಿಂದ (*294 A. I P C*) ಸದರ ಸಂಘವನ್ನು ಮುಗುಡಿಸಬೇಕಾಗಿ *wind up* ನೇಕ ನಾಮದಾರ ಹ್ಯಾಕೋರ್ಟಿನವರು ಠರಾಯಿಸಿದ ಪ್ರಕಾರ ಸದರ ಸಂಘವನ್ನು ರದ್ದುಪಡಿಸಿ, ಸದರ ಸಂಘದೊಳಗಿನ ಆಸ್ತಿಭಾರದ ಭಾಗಗಳನ್ನು ಕೆಳಗಿನ ಕಂಪನಿ ಅಕ್ಟಿನನ್ವಯ *Pioneer Mutual Benefit and Friend-in-need Society Ltd* ಎಂಬ ಸೊಸೈಟಿಯು ಕೆಳದ ತಾರೀಖು ಗೆ ರಜಿಸ್ಟ್ರ ಆಗಿರುತ್ತದೆ

ಹಿಂದಿನ ಸಂಘದ ಎಷ್ಟು ಯಾನೆ ಜಂಪಗಿನ ಲಕ್ಷ್ಯ ಸಿಕ್ಕುತ್ತಿದ್ದಾಗ್ಯೂ ಅಫೀಶಿಯಲ್ ಲಿಕ್ವಿಡೇಟರ ಮಾರ್ಫತ ದಾಮಾಶಾಯನಂತ ಹಿಂದಣ ಮೆಂಬರ ಜನರಿಗೆ ಅವರವರು ಕೊಟ್ಟ ಹಣ ದಿಸಲು ಸಿಗಬೇಕಾದ್ದರಿಂದ ಈ ರಕಂದ ಸಿಗಲಿಕ್ಕೆ ಎಷ್ಟು ಅವಧಿ ತಗಲೀತು, ಮತ್ತು ದಾಮಾಶಾ ಎಷ್ಟರಂತೆ ಸಿಕ್ಕೀತು ಎಂದು ಹೇಳಲು ಅಸಾಧ್ಯವಿದೆ

ಈ ಸಂದರ್ಭದಲ್ಲಿ ಹಿಂದಣ ಮೆಂಬರರು ಹೊಸ ಸೊಸೈಟಿಯ ಮೆಂಬರರಾದ ಪಕ್ಷಕ್ಕೆ ಅವರ ಬಾಕಿ ಜಮಾ ಆದ ರಕಂ ಸಂಪೂರ್ಣವಾಗಿ ಜಮಾ ಹಿಡಿಯಲಿಕ್ಕೆ ಅವರು ಹಕ್ಕುದಾರರಾಗುವರು ಇದಲ್ಲದೆ ಸೊಸೈಟಿಯ ಯಾವತ್ತೂ ಲಾಭಗಳಿಗೆ ಹಕ್ಕುದಾರರಾಗುವರು

ಇದಕ್ಕೆ ಸಭಾಸದರ ಅನುಮತಿ ಅವಶ್ಯವಿದೆ. ಅನುಮತಿ ಕೊಡಲಿಚ್ಛಿಸುವವರು ಸ್ಥಾನಿಕ ಏಜಂಟರ ಕಡೆಯಿಂದ ಛಾಪಿ ಪತ್ರಿಕೆಗಳನ್ನು ಪಡಕೊಳ್ಳಬೇಕು ಇದಕ್ಕೆ ಸಂಬಂಧಪಟ್ಟ ಯಾವತ್ತೂ ಮಾಹಿತಿ ಏಜಂಟರಿಂದ ತಿಳಕೊಳ್ಳಬಹುದು

ಹಳೇ ಮೆಂಬರರೂ, ಇತರೇ ಜನರೂ ಈ ಹಿಂದೆ ಕೊಟ್ಟಂತೆಯೇ ಇನ್ನು ಮುಂದೆಯೂ ಹೆಚ್ಚಿನ ಪ್ರೋತ್ಸಾಹ ಕೊಟ್ಟು ಸೊಸೈಟಿಯನ್ನು ಅಭಿವೃದ್ಧಿಗೈಯುವರಾಗಿ ಪೂರ್ಣ ನಂಬಿದ್ದೇವೆ

ಹೊನ್ನಾವರ,
ತಾ. ೧೮-೪-೩೨

ತಮ್ಮ ವಿಧೇಯ,
P J Kamat
1HE N E H. K

ಕಾರವಾರದ ಓಲೆ.

ಜೈಲು ತುಂಬಿತು, ಜೈಲಿನೊಳಗಿನ ಕ್ರೌರ್ಯ

[ನಮ್ಮ ಸುದ್ದಿಗಾರರಿಂದ]

ಇಲ್ಲಿಯ ೧ನೇ ವರ್ಗದ [illegible] ಸ್ಥಾನಿಕರ [illegible] ತಾರೀಖಿನ [illegible] ಇಲ್ಲದ [illegible] ಪ್ರತಿ [illegible]

[illegible] ಮೂಲ [illegible] ಕೈದಿ [illegible]

ಕಾರವಾರ [illegible] ನಾರಾಯಣ [illegible] ಉಪವಾಸ [illegible] ಕೈದಿಗಳು [illegible] ಸುಮಾರು ೩೦೦ ಕೈದಿಗಳು [illegible] ಕೈದಿಗ [illegible] ಇದರ [illegible] ಎಪ್ರಿಲ್ (೩) ರಂದು [illegible] ಕಡೆಯ [illegible] ತಿಯನ್ನ [illegible] ಕ್ರಮ ಹೀಗಿದೆ — ಬೆಳಿಗ್ಗೆ [illegible] ದ ಗಂಜಿ ಸರಿಯಾಗಿ ೧೦ ಘಂಟೆಗೆ ತಲೆಗೆ [illegible] ರೊಟ್ಟಿ [illegible] ತಕ್ಕಷ್ಟು ತೂಗಿರಬೇಕಾಯಿತು [illegible] ರೊಟ್ಟಿ [illegible] ಊಟ [illegible] ಕೆಲಸವೆಂದು [illegible] ನಾನು [illegible] ಗಳಲ್ಲಿ [illegible] ಸ್ಥಳ ಸಿಗುವದಿಲ್ಲ. ಉಡಿಗೆ-ತೊಡಿಗೆಗಳ ಬಗ್ಗೆ ಪತ್ತೆ ತಕ್ಕಪ್ಪರು ಉಂಟು ೧ ಅಂಗಿ, ೧ ಟೊಪ್ಪಿಗೆ, ೧ ಚಡ್ಡಿ, [illegible], ೧ ಕಜ್ಜಿ, ಇಷ್ಟು ಕೊಡು [illegible] ವಂತೆ ೨ ಅಂಗಿ, ೨ ಚಡ್ಡಿ, ೨ ಕಂಬ [illegible] ಮತ್ತು [illegible] ಕೊಳ್ಳಲು 'ತರಾಟ' [illegible] ಅಂಗಿ-ಚಡ್ಡಿಗಳನ್ನು ಒಗೆದ [illegible] ಒಣಗುವ ತನಕ ಕಜ್ಜಿಯ ಮೇಲೆಯೇ [illegible] ಮಾಡಬೇಕು. ಒಂದು ಸಂಗತಿ [illegible] ಸತ್ಯಾಗ್ರಹಿ ಎಂಬ ಕೈದಿಗೆ ೨ ಕಂಬಳಿ ಕೊಟ್ಟಿದ್ದರು, ಮುಂದೆ ಆತನ ಕಡೆಯಿಂದ ೧ ಕಂಬಳಿ ತೆಗೆದುಕೊಂಡರು. ನಾನು ಬರುವ ಮುಂಚಿನ ವಾರ, [illegible] ಆತನು [illegible] ಕಂಬಳಿ ತನಗ [illegible] ಕೊಡಬೇಕೆಂದು ಹಟಹಿಡಿದು ಕೂತನು. ಕಂಬಳಿ ಕೊಡುವತನಕ ತಾನು ಒಳಕ್ಕೆ ಹೋಗುವದಿಲ್ಲವಾಗಿ ಹಟ ಹಿಡಿದು ಕೂತನು. ಆ ದಿನ ಆತನು [illegible] ಉಣಗರಾಕಿ ಕಜ್ಜಿಯ ಮೇಲಿದ್ದನು. ಜೈಲರರು ಬಂದು ಆತನಿಗೆ ಹಾಗೆಯೇ ಎಳೆದು ಒಂದು ಕೋಣೆಯಲ್ಲಿ ಹಾಕಿ ಬೀಗ ಹಾಕಿಟ್ಟರು. ಆತನಿಗೆ ಕುಡಿಯಲು ನೀರು ಕೊಡಲಿಲ್ಲ. ಈ ಸುದ್ದಿ ಜೈಲತುಂಬಾಯಿತು. ಸುಮಾರು ೩೦೦ ಕೈದಿಗಳು ಶುಕ್ರವಾರ [illegible] ಅನ್ನಗ್ರಹಣ ಮಾಡದೆ ಉಪವಾಸ ಮಾಡಿದರು. ಜೈಲ ಸುಪರಿಂಟೆಂಡೆಂಟರಿಗೆ ಈ ವಾರ್ತೆ ತಿಳಿಯಿತು. ಶನಿವಾರ ಬೆಳಿಗ್ಗೆ ಚೌಕಶಿ ನಡೆಯಿತು. ಜೈಲರರು ತಮ್ಮ ತಪ್ಪು ಒಪ್ಪಿ ಪಶ್ಚಾತ್ತಾಪ ಪಡಿಸಿದರು. ಆದರಿಂದ ಎಲ್ಲರಿಗೂ ಸಮಾಧಾನವಾಯಿತು.

ಇಲ್ಲಿಯ ಜೈಲು ತುಂಬಿತು. ಕೈದಿಗಳನೇಕರಿಗೆ ಮಲಗಲಿಕ್ಕೆ ಸಾಕಷ್ಟು ಸ್ಥಳವಿಲ್ಲ. ತೊಂದರೆಯಾಗಿದೆ. ಇನ್ನೂ ಕೈದಿಗಳು ಬರುತ್ತಿದ್ದಾರೆ.

ಮಕ್ಕಳಿದ್ದರೆ ಮನೆ ಚಂದ!
ಬಂಜೆತನದಿಂದ ಮುಕ್ತರಾಗುವಿರಿ!
ಮಕ್ಕಳ [illegible]
ಚಿಂತಿಸ ಬೇಡಿರಿ
ಗರ್ಭಧಾರಣ ಸಂಜೀವನೀ.
ಈ ನಮ್ಮ [illegible] ಔಷಧ ಮೂರು ಸಾರೆ ಋತುಸ್ನಾತ ಆಗುವ ವರೆಗೆ ಪ್ರತಿಸಾರೆ ಮೂರು-ಮೂರು ದಿವಸ ತೆಗೆದುಕೊಂಡರೆ ಪೂರ್ಣ ಗುಣ ಆಗುವದು. [illegible] ಗುಳಿಗೆಗಳ ಕಿಂ. ರೂ ೩ [illegible] ಆಣೆ [illegible] ಸಂಗಡ
ಪತ್ತೆ ವೈದ್ಯ. ವ್ಹಿ. ಎಸ್ ಕಾಮಸೇ, ಮಿರಜ. (SMC)

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪರೀಕ್ಷಿಸಲ್ಪಟ್ಟ ಆಯುರ್ವೇದೋಕ್ತ
[illegible] ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು [illegible] ಭಂಗಾರದ ಪದಕ ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗತ್ಪ್ರಸಿದ್ಧ
ದ್ರಾಕ್ಷಾಮೃತವು.
ಈ ದ್ರಾಕ್ಷಾಮೃತವು ಸಹ್ಯಾದ್ರಿಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ [illegible] ಯಂತ್ರದಿಂದ [illegible] ಪದ್ಧತಿ ಪ್ರಕಾರ ತಯಾರ ಮಾಡಿದ್ದರಿಂದ ಸ್ವಾದಿಷ್ಟವೂ [illegible] ಆಗಿದೆ.
ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಟಕಿ (ಗರಮಿ) ಸಂಪೂರ್ಣ ನಾಶವಾಗ [illegible] ಧಾತುಸ್ರಾವ ಸ್ವಪ್ನ [illegible] ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆ [illegible] ಕೈಕಾಲು [illegible] ಯಾವ ಗಲಿಕ ಎಲುಬಿನಲ್ಲಿ ಜ್ವರ ಇರಲೊಣ, [illegible] ಪಿತ್ತದಿಂದ ಕಣ್ಣಿಗೆ [illegible] ಬಂದ [illegible] ಬರಲೊಣ, ಶೌಚಕ್ಕೆ ಸಾಫ ಆಗದೇ ಇರಲೊಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ [illegible] ಪಚನವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ [illegible] ದಿಂದ ಬಂದ ಧಾತುಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಪೌರುಷ [illegible] ಮಕ್ಕಳು [illegible] ಹೆಂಗಸರಿಗೂ [illegible] ಈ ಔಷಧವು ಗುಣಕಾರಿ ಇದೆ [illegible] ಗರ್ಭಕ್ಕೆ ಸಂಬಂಧವಾದ ರೋಗಗಳು [illegible] ಹೆಂಗಸರಿಗೆ [illegible] ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಪಾನ ೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು. ೧ ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೧-೦ ಒಂದು ಡಜನ ಬಾಟ್ಲಿಗೆ ೧೧-೦-೦ [illegible] ೧ ಡಜನ್ ತೆಗೆದುಕೊಂಡರೆ ೧ ಬಾಟ್ಲಿ [illegible] ಬೇರೆ [illegible]
ಏಜಂಟರ [illegible] ೧ ಬಾಟ್ಲಿಗೆ ೧-೧-೦, ೩ ಬಾಟ್ಲಿಗೆ ೩-೮-೦, [illegible] ರೂಪಾಯಿ
ವ್ಯವಸ್ಥಾಪಕರ ದ್ರಾಕ್ಷಾಮೃತ ಕಾರ್ಯಾಲಯ, ಪೋ. ನಿಪ್ಪಾಣಿ (ಜಿಲ್ಲಾ ಬೆಳಗಾವಿ)
ಪ್ರಸಿದ್ಧ [illegible] ಸ್ಟೋರ [illegible] ಮತ್ತು [illegible] ಸಿಗುತ್ತದೆ
ಕುಮಟಾ ಏಜಂಟರು — ಕಾರವಾರ ಏಜಂಟರ -
ನ್ಯೂ ಸಪ್ಲಾಯ ಏಜನ್ಸಿ ವ ನೆಹರೂ ಸ್ಟೋರ್ಸ ವ [illegible] ಮುಜುಮದಾರ
[illegible] — ಎಸ್ ಎಲ್ ಧಾಕಪ್ಪಾ ವ ರಂಗಪ್ಪಾ [illegible]

[೪ನೇ ಪಾನಿನಿಂದ ಮುಂದರಿದದ್ದು]

[illegible] ತಹಕೂಬ ಕೊಡಲು ಸರಕಾರದ ಕಡೆ ಹಣವಿಲ್ಲ ತಗಾವಿ ಕೊಡಲು ಸರಕಾರಕ್ಕೆ ಹಣದ ಅಡಚಣೆಯಾಗಿದೆ ಈ ಬಗ್ಗೆ ಸರಕಾರಕ್ಕೆ ಬಹಳ ವ್ಯಸನವಾಗುತ್ತದೆ. ಇತ್ಯಾದಿ ಭಾಷಣ ಮಾಡಿದರು

⁂

ಇನಕಮ್‌ಟೆಕ್ಸ ಆಕರಣೆಯ ಚಮತ್ಕಾರ !

ಲಂಡನಿನ 'ಮೆಂಚೆಸ್ಟರ ಗಾರ್ಡಿಯನ್' ಪತ್ರಿಕೆಯಲ್ಲಿ ಪಂಜಾಬ ಪ್ರಾಂತದ ಜಲಂಧರದ ವರ್ತಕರೊಬ್ಬರು ಇನಕಮ್ ಟೆಕ್ಸ ಕಮಿಶನರರಿಗೆ ಬರೆದ ಪತ್ರ ಪ್ರಕಟವಾಗಿದೆ ಆ ವರ್ತಕರಿಗೆ ೧೫೦೦ ರೂ ಉತ್ಪನ್ನವಿದೆಂದು ಇನಕಮ್ ಟೆಕ್ಸ ಆಗಿತ್ತು. ಅವರು ಬರೆಯುವದೇನಂದರೆ – 'ಇನಕಮ್ ಟೆಕ್ಸಿನ ಕಾಯಿದೆಯ ಬಹಳ ಚಲೋದು ಅವುಗಳನ್ನು ತಿರಸ್ಕರಿಸಲು ನನಗೆ ಅನುಭವವಿರಲಿಲ್ಲ ನಾನೊಂದು ಸಣ್ಣ ಅಂಗಡಿ ತೆರೆದೆ, ನನಗೆ ಲಾಭವಾಗಲಿಲ್ಲ, ಕೆಲ ಬಂಡವಲ ನಷ್ಟವಾಯಿತು ೧೫೦೦ ರೂಪಾಯಿ ಉತ್ಪನ್ನವಾಯಿತೆಂದು ನನಗೆ ಇನಕಮ್ ಟೆಕ್ಸ ಬೇರೆ, ಬಡತನ, ಉಪವಾಸ ಸಾಯುತ್ತೇನೆ, ಖರ್ಚು ಬಹಳ ಕಡಿಮೆ ಮಾಡಿದೆ, ದೇಹವೊಂದು ಕಾಪಾಡಿಕೊಳ್ಳುವದಕ್ಕಾಗಿ ಉಪಾಯ ಹುಡುಕುತ್ತಿದ್ದೇನೆ. ಆಹಾರ ಕೊಳ್ಳದೆ ಬದುಕಿ ಬಾಳ್ವೆ ಮಾಡುವ ಹಂಚಿಕೆ ಹುಡುಕುತ್ತಿದ್ದೇನೆ ಹೆಂಡರ-ಮಕ್ಕಳಿಗೆಲ್ಲ ದೂರ ಮಾಡಿ ಬ್ರಹ್ಮಚರ್ಯದಿಂದ ಒಬ್ಬೊಂಟಿಗನಾಗಿ ಪ್ರೇಮ ಸರಕಾರಕ್ಕೆ ಬಡ ಜನರ ಮೇಲೆ ವಾತ್ಸಲ್ಯ ಬಹಳ ಇಂಥ ಸರಕಾರಕ್ಕೆ ಇನಕಮ್ ಟೆಕ್ಸ ಕೊಡುವ ಮೊದಲವನೆಂದು ಹೇಳಿಸಿಕೊಳ್ಳಲು ನನಗೆ ನಾಚಿಕೆಯಾಗುತ್ತದೆ ಆದರಿಂದ ಇನಕಮ್ ಟೆಕ್ಸನ್ನು ರದ್ದುಪಡಿಸಬೇಕಾಗಿ ಪ್ರಾರ್ಥಿಸುತ್ತೇನೆ ಅದಾಗದಿದ್ದರೆ, ನನ್ನ ಚಾಪೆ-ಕಂಬಳಿ, ಅಡಿಗೆ ಪಾತ್ರಗಳನ್ನು ಲಿಲಾಂವ ಮಾಡಿ ಇನಕಮ್ ಟೆಕ್ಸ ವಸೂಲ ಮಾಡುವ ತಾರೀಖನ್ನು ನೇಮಿಸುವ ಹುಕುಮಾಗಬೇಕಾಗಿ ಅರಿಕೆಯಿದೆ. ಆದಷ್ಟು ಬೇಗನೆ ವ್ಯವಸ್ಥೆಯಾಗಬೇಕು ಅಂದರೆ ದಂಡ ತಪ್ಪುವ ಹಾಗಿದೆ ನಾನು ರಾಜನಿಷ್ಠನಿದ್ದೇನೆ, ಸಂತೋಷದಿಂದಿದ್ದೇನೆ "

⁂

ಸ್ವದೇಶಿ ಮೋಟಾರುಗಳು

ಈಗ ಮೋ[illegible]ಗಳ ಪ್ರಚಾರ ದೇಶತುಂಬ ಆಗಿದೆ. ಪಟ್ಟಣಗಳಲ್ಲಿ ಪರದೇಶಿ ಇಂಥ ಸಮಯ ಬಂಗಾಲಿ ಯಂತ್ರ ಶಾಸ್ತ್ರಜ್ಞರೊಬ್ಬರು ಸ್ವದೇಶಿ ಮೋಟಾರನ್ನು ತಯಾರಿಸಹತ್ತಿದ್ದಾರೆಂದು ತಿಳಿಸಲು ಸಂತೋಷ ಇದಕ್ಕೆ ರೂ ೩೦೦೦ ತಗಲುವದು ಕಲಕತ್ತೆಯ ಮುನಿಸಿಪಾಲಿಟಿಯವರು ಈ ಮೋಟಾರನ್ನು ಕೊಂಡುಕೊಳ್ಳಲು ಒಪ್ಪಿದ್ದಾರೆ ವಿದ್ಯುಚ್ಛಕ್ತಿಯ ಬೀಸಣಿಗೆಗಳನ್ನು ತಯಾರಿಸುವ ಆಲೋಚನ ಸಹ ಉಂಟು ಸ್ವದೇಶಕ್ಕೆ ತಗಲುವ ಸಾಮಾನು ಸ್ವದೇಶದಲ್ಲಿಯೇ ತಯಾರಾಗಬೇಕು

⁂

ಒಂದಾಣೆ ಮಾಲೆ.

ರಾ| ಗಂಗಾಧರ ಗೋಪಾಲಕೃಷ್ಣ ಹೆಗಡೆ ಸಾಕೀನ ಕುಮಟಾ ಇವರು ಕರ್ನಾಟಕ ಸಾಹಿತ್ಯ ಗ್ರಂಥಮಾಲೆ ಎಂಬ ಹೆಸರಿನಿಂದ ಒಂದಾಣೆ ಮಾಲೆಯನ್ನು ಹೊರಡಿಸುವವರಿದ್ದಾಗಿ ತಿಳಿಸುತ್ತಾರೆ ಪ್ರತಿ ತಿಂಗಳಿಗೆ ಡೆಮಿ ಆಕಾರದ ೩೨ ಪುಟಗಳುಳ್ಳ ಒಂದೊಂದು ಪುಸ್ತಕ ಪ್ರಕಟವಾಗುವದು. ಇವರೊಳಗೆ ಐತಿಹಾಸಿಕ, ಸಾಮಾಜಿಕ, ಪೌರಾಣಿಕ ಕತೆಗಳು ಚಿತ್ತರಂಜನವಾಗುವಂತೆ ಬರೆಯಲ್ಪಡುವವು ವಾರ್ಷಿಕ ಚಂದಾ ಅಂಚೆ ಸಹಿತ ರೂ ೧, ರೂ ೩ ಕೊಟ್ಟು ಆಶ್ರಯದಾತರಾದವರಿಗೆ ೩ ವರ್ಷಗ' ತನಕ, ರೂ ೫ ಕೊಟ್ಟು ಪೋಷಕರಾದವರಿಗೆ ೫ ವರ್ಷಗಳ ತನಕ ಮಾಲೆಯ ಯಾವತ್ತೂ ಗ್ರಂಥಗಳು ಸಿಗುವವು ಕರ್ನಾಟಕ ಸಾಹಿತ್ಯದ ಸ್ಥಿತಿ ನೋಡಿ, ಅದನ್ನು ಸುಧಾರಿಸುವ ಈ ಕಾರ್ಯಕ್ಕಾಗಿ ಜನರ ನೆರವಾಗಬೇಕಾಗಿ ರಾ| ಗಂಗಾಧರಹೆಗಡೆ ವಿನಂತಿಮಾಡಿಕೊಳ್ಳುತ್ತಾರೆ

⁂

ಅಮೇರಿಕೆಯಿಂದ ಹೊರಹಾಕಿದರು !

ಹಿಂದುಸ್ಥಾನ ದೇಶದ ಯುರೋಪ ಖಂಡದವರು ಅಮೇರಿಕೆಯಲ್ಲಿ ಏನಾದರೂ ಕೆಲಸ ಸಿಕ್ಕೀತೆಂಬ ಆಶೆಯಿಂದ ಅಲ್ಲಿ ಹೋಗಿದ್ದರು ! ಅಲ್ಲಿ ಅವರಿಗೆ ಕೆಲಸ ಸಿಗಲಿಲ್ಲ! ಅಮೇರಿಕೆಯ ಸಂಯುಕ್ತಸಂಸ್ಥಾನಗಳ ಸರಕಾರವು ಅವರಿಗೆ ಬೋಟಿನ ಟಿಕೇಟುಗಳನ್ನು ತೆಗೆಸಿಕೊಟ್ಟು, ಸ್ವದೇಶಕ್ಕೆ ಕಳುಹಿಸಿದೆ! ಅವರಲ್ಲಿ ಕೆಲವರು ಜರ್ಮನಿಯವರು, ಪಶ್ಚಿಮಂದಿ ಪ್ರಾಂತದವರು!

⁂

ಗೀತಾಬೋಧದ ಪುನರ್ಮುದ್ರಣ

ಶ್ರೀ|| ಮಾಂಜರೇಕರ, ಬಿ ಏ, ಇವರಿಂದ ಕನ್ನಡಿಸಲ್ಪಟ್ಟು, ನಮ್ಮ "ವೃತ್ತ"ದಲ್ಲಿ ಪ್ರಕಟವಾದ ಮ|| ಗಾಂಧಿಯವರ 'ಗೀತಾ ಬೋಧ'ವು ಬಂಗಳೂರಿನ 'ಸುಬೋಧ' ಮಾಸ ಪತ್ರಿಕೆಯಲ್ಲಿ ಪುನರ್ಮುದ್ರಿತವಾಗುತ್ತಿರುವದು ನಮಗೊಂದು ಹೆಮ್ಮೆಯ ಮಾತು ಇದು ಶೀಘ್ರದಲ್ಲಿಯೇ ಪುಸ್ತಕ ರೂಪದಿಂದ ಕನ್ನಡಿಗರಿಗೆ ಸಿಗಲೆಂದು ನಾವು ಹಾರೈಸುತ್ತೇವೆ ಇದನ್ನು ಗ್ರಂಥ ರೂಪದಲ್ಲಿ ಪ್ರಕಟಿಸಲು ಬಯಸುವ ಪ್ರಕಾಶಕರು, ಶ್ರೀ| ಮಾಂಜರೇಕರ ಇವರ ಹತ್ತರ ಪತ್ರವ್ಯವಹಾರ ಮಾಡಬೇಕೆಂದು ಸೂಚನ

ನಾರಿನ ಮೇಲೆ ರಾಮಬಾಣ!
ಮೂರೇ ದಿವಸಗಳಲ್ಲಿ ನೆಟ್ಟಗಾಗಿ ಮುಂದ ಎಂದೂ ಆಗುವದಿಲ್ಲ. ನಾರಿನವರು ಜರೂರ ತರಿಸಿಕೊಳ್ಳಿರಿ ಕಿಂ ರೂ. ೧|. ಟ ಖ ೫ ಆಣೆ
ಪತ್ತೆ – ವೈದ್ಯ ವ್ಹಿ. ಎಸ್. ಕಾಪಸೇ,
ಮಿರಜಿ S M C

Dr. F. J. P. PEREIRA,
Physician & Specialist in Dentistry
Sunday Market, KARWAR (N K.)
ಆರೋಗ್ಯ ಬಯಸುವಿರಾ?
ಹಾಗಾದರೆ —
ಹಲ್ಲುಗಳನ್ನು ಕಾಪಾಡಿಕೊಳ್ಳಿ !'
ಯಾಕಂದರೆ, ಮಾನವನ ಆರೋಗ್ಯಕ್ಕೆ ಹಲ್ಲುಗಳೇ ಕಾರಣ! ಬರೇ ಸೌಂದರ್ಯಕ್ಕಾಗಿ ಅಲ್ಲ, ಆರೋಗ್ಯ ದೃಷ್ಟಿಯಿಂದಲೂ ಹ[illegible] ಜೋಪಾಸನೆ ಮಾಡುವದು ಅತ್ಯವಶ್ಯ. ಹಲ್ಲುಗಳ ಅಜಾಗ್ರತೆಯಿಂದ ಅಗ್ನಿಮಾಂದ್ಯ, ಸಂಧಿವಾತ, ನೇತ್ರರೋಗ, ಕರ್ಣರೋಗ ಮೊದಲಾದ ಬೇನೆಗಳಾಗುತ್ತವೆ
ಕಾರಣ, ನಿಮ್ಮ ಹಲ್ಲುಗಳು ಸರಿಯಿರದಿದ್ದರೆ,
ನಮ್ಮ ಕಡೆಗೆ ಬನ್ನಿ, ಪರೀಕ್ಷಿಸಿಕೊಳ್ಳಿ!
ಅವನ್ನು ಸ್ವಚ್ಛ–ಸುಂದರ ಮಾಡಿಕೊಡುವೆವು
ಡಾ|| ಎಫ್. ಜೇ. ಪಿ. ಪೆರೇರಾ,
ವೈದ್ಯ ಮತ್ತು ದಂತವೈದ್ಯಕ ವಿಶಾರದ,
ಸಂತೆ ಪೇಟೆ, ಕಾರವಾರ. (ಜಿ ಉ ಕಾನಡಾ)

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೩೬-೩೭) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ
"ಫಾಫ್" ಹೊಲಿಗೆ ಮಶೀನುಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!
ಹಾಗು
ಬೇಕಾದ ಬೇರೆ ಭಾಗಗಳು ಸಹ ದೊರೆಯುತ್ತವೆ ''
ಈ ಮಶೀನುಗಳು
ನೋಡಲಿಕ್ಕೆ ಚಂದವೂ, ನಡೆಸಲಿಕ್ಕೆ ಸುಕರವೂ, ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!
☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!'
ಉತ್ತರ–ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ ಏಜಂಟರು —
ಕುಲಕರ್ಣಿ ನಾಫ್ ಎಂಡ್ ಕಂಪನಿ,
ಶಾಂತಿಭುವನ, ಕಾರವಾರ.
ಮಂಗಳೂರ ಏಜಂಟರು — ಕಮಲಾಕರ ಅಪ್ಪಾಜಿರಾವ ನಾಫ.
ಶಿರ್ಸಿ ಏಜಂಟರು – ಕಾಮತ ಬ್ರದರ್ಸ.
ಕುಮಟಾ ಏಜಂಟರು — ಶಂಕರ ಅಪ್ಪಾಜಿರಾವ ನಾಫ
ಹೊನ್ನಾವರ ಏಜಂಟರು — ಕಕೇಕರ ಮಂಜಪ್ಪಾ ಗಣೇಶ ಶೇಟ

ಜೀವನ ಸಾಹಿತ್ಯ.

೫. ವೀರಧರ್ಮ.

ಲೇ:— ಶ್ರೀ|| ಹನುಮಂತರಾವ ಮೊಹರೇಕರ

ಹಿಂದುಸ್ಥಾನದ ಎಲ್ಲ ಪ್ರಶ್ನೆಗಳಲ್ಲಿ ಬಡತನದ ಪ್ರಶ್ನೆಯೇ ದೊಡ್ಡದು. ಎರಡು ಹೊತ್ತು ಹೊಟ್ಟೆ ತುಂಬ ಅನ್ನ ಸಿಗದೆ ಕೊರಗುವ ಜನತೆಯ ಲಕ್ಷ್ಯವು ಈ ಪ್ರಶ್ನೆಯೊಂದನ್ನು ಬಿಟ್ಟು ಬೇರೆಡೆಗೆ ಹೇಗೆ ಹರಿಯುವದು? ಈ ಪ್ರಾಯೋಪವೇಶನವನ್ನು ದೂರಮಾಡುವ ನಾಳೀ ಏನೊಂದು ಹೊಸ ವೃತ್ತಿಯು ತಮ್ಮ ಜೀವನದಲ್ಲಿ ಸುಧಾರಣೆಯನ್ನು ಮಾಡಲಿಕ್ಕೆ ಬೇಕಾದ ಉದ್ಯೋಗವು ಜನತೆಯು ಬಯಸುವದು. ಪರಕೀಯ ಸ್ಪರ್ಧೆಯ ನಡೆಗೂ, ಒಂದು ವರ್ಷದಿಂದ ಮತ್ತೊಂದು ಜಾತಿಯವರ ವರೆಗೂ, ಹಸಿವೆಯಿಂದ ಸಾಯುವ ವರೆಗೆ ಈ ಪ್ರಾಯೋಪವೇಶನವನ್ನು ನೀಗಿಸುವ ಬಗೆ ಹೇಗೆ ಎಂಬ ಒಂದೇ ಪ್ರಶ್ನೆಯು ಹಿಂದೂಸ್ಥಾನದ ಮುಂದೆ ಯಾವಾಗಲೂ ಇರುತ್ತಿರುತ್ತದೆ.

ಹಳ್ಳಿಗಳಲ್ಲಿ ಮನುಷ್ಯನು ಎಷ್ಟು ಜೀವ ಹಿಡಿದರೂ ಒಂದು ದಿವಸವಾದರೂ ಅವನು ಹೊಟ್ಟೆ ತಣಿಸಲಾರನು, ವಿಶ್ರಾಂತಿಯನ್ನು ಹೊಂದಲಾರನು. ವಿಶ್ರಾಂತಿಯನ್ನು ತೆಗೊಂಡರೆ ಅವನ ಅನ್ನವೆಲ್ಲಿ? ತಾನು ರೋಗ ಬಿದ್ದರೂ ಮುಂದೆ ಹೆಂಡರು ಮಕ್ಕಳು ಪರದಾಡುವರು. ಒಂದು ದಿನದ ಊಟವನ್ನು ಬಿಟ್ಟುಕೊಟ್ಟು ಕಾಯಬೇಕಾಗುವದು. ಬಡತನದಿಂದ ಮನಸ್ಸಿನ ಕಾರ್ಪಣ್ಯವೆಯೂ ಆಗುವದೆಂಬ... ಅವನು ಅನ್ಯಾಯವಾಗುವದನ್ನು ಕಣ್ಣಾರೆ ನೋಡುತ್ತಿದ್ದರೂ, ಅದರ ಪ್ರತೀಕಾರವನ್ನು ಮಾಡಲಾರನು. ತಾನು ವಂಚಿಸಲ್ಪಡುತ್ತೇನೆಂದು ಅವನಿಗೆ ಗೊತ್ತಾದರೂ ಆ ವಂಚನೆಯಿಂದ ತನ್ನನ್ನು ಬಿಡಿಸಿಕೊಳ್ಳುವಷ್ಟು ಸಾಮರ್ಥ್ಯವು ಅವನಲ್ಲಿಲ್ಲ. ಬಡತನದ ಮೂಲಕ ತನ್ನ ಸ್ವಾಭಾವಿಕವಾದ ದಯೆ, ಪ್ರೀತಿ, ಮಮತೆಗಳನ್ನು ಅವನು ಬಿಟ್ಟುಬಿಡಬೇಕಾಗುತ್ತದೆ. ಮಕ್ಕಳಂತೆ ಸಾಕಿ ಸಲಹಿದ ಎತ್ತು-ಕೋಣಗಳನ್ನು ಕತ್ತೆ ಮಾರಿ ಮುದಿಸಿಕೊಳ್ಳಬೇಕಾಗುತ್ತದೆ, ಹಸಿದವನಾಗಿ ಅವುಗಳನ್ನು ಹೊಡೆಯಬೇಕಾಗುತ್ತದೆ.

ಎಲ್ಲಕ್ಕಿಂತಲೂ ಚಿತ್ತ ಕಲಕುವ ಸಂಗತಿಯೇನಂದರೆ — ಬಡ ಮಕ್ಕಳು ಬಡವನಾಗಿರುವದರಿಂದಲೇ ಒಮ್ಮೊಮ್ಮೆ ಹಿಡಿದು ಪೆಟ್ಟು ಮಾಡಬೇಕಾಗುತ್ತದೆ. ಬಡವನಾಗಿರುವದರಿಂದಲೇ ಅವನ ಕಡೆಯಿಂದ ಹಣವು ಒತ್ತಾಯದಿಂದ ಕಸಿದುಕೊಳ್ಳುತ್ತಾರೆ; ಅಂದರೆ ಹೆಚ್ಚು ಕೊಟ್ಟೇ ಅವನು ಹೊಸ ಸೌಕರ್ಯಗಳನ್ನು ಪಡೆಯಬೇಕಾಗುತ್ತದೆ. ಸ್ವಲ್ಪದರಲ್ಲಿ ಹೇಳಬೇಕಾದರೆ ಅವನು ಬಡವನಾಗಿರುವ ಕಾರಣದಿಂದಲೇ ಇನ್ನೂ ಬಡವನಾಗಬೇಕಾಗುತ್ತದೆ.

ಇದಕ್ಕೇನು ಉಪಾಯವು? ಕಾನೂನುಗಳಿಂದ ಇದರ ರಕ್ಷಣೆಯಾಗುವಂತಿಲ್ಲ. ರಾಜಪುತ್ರಾದಿ ದೊಡ್ಡ ದೊಡ್ಡ ಅಧಿಕಾರಿಗಳ ಪ್ರವಾಸ (*Tour*)ಗಳಿಂದಲೂ ಬಡವರ ಸ್ಥಿತಿ ಸುಧಾರಿಸುವದಿಲ್ಲ. ಈ ಪ್ರಸಂಗಗಳಲ್ಲಿ ಬಡ ಜನರು 'ಬಿಟ್ಟಿ' ಕೆಲಸ ಮಾಡಿ ಸತ್ತು ಸುಣ್ಣವಾಗುತ್ತಾರೆ. ಕೋರ್ಟುಗಳಂತೂ ಬಡ ಜನರನ್ನು ಹಿಂಡುವ ಕೆಲಸವನ್ನೇ ಮಾಡುತ್ತವೆ. ಪ್ಲೀಡರರಂತೂ ಬಡ ಜನರಿಗೆ ಯಮರಾಜನಿಗೆ ಸಮಾನರು. ಪಟೀಲರು, ಬಡ್ಡಿಯ ವ್ಯವಹಾರ ಮಾಡುವ ಸಾಹುಕಾರರು, ಅರ್ಜಿ ಬರಕೊಡುವವರು, ಗ್ರಾಮಸ್ಥದ ಶಿಕ್ಷಕರು, ಪುರೋಹಿತರು, ಜ್ಯೋತಿಷಿಗಳು, ಸಾಧು-ಸನ್ಯಾಸಿಯರು, ಫಕೀರರು — ಇವರೆಲ್ಲರೂ ಒಕ್ಕಲಿಗರ ದುಡ್ಡಿನಿಂದಲೇ ಜೀವಿಸುತ್ತಾರೆ. ಬಡ ಒಕ್ಕಲಿಗನು ಇಡೀ ಜಗತ್ತಿಗೆ ಅನ್ನವನ್ನು ಕೊಡುತ್ತಾನೆ. ಆದರೆ ಆ ಬಡ ಜೀವಿಗೆ ಉಣಿಸುವವರು ಯಾರೂ ಸಿಗಲೊಲ್ಲರು. ಅವನ ಹಣೆಬರಹದಲ್ಲಿರುವದು ಆ ಪ್ರಾಯೋಪವೇಶನವೇ!

ಈಗಿದಕ್ಕೆ ಉಪಾಯ ಯಾವುದು? ಇದಕ್ಕೊಂದೇ ಉಪಾಯವನ್ನು ನಾನು ಹೇಳಬಲ್ಲೆನು, ಅದಾವುದೆಂದರೆ ಸ್ವಾವಲಂಬನವೇ. ಯಾರ ಮೇಲೆ ಇಡೀ ಸಮಾಜವೇ ಅವಲಂಬಿಸಿರುವದೋ, ಅವನ ಮುಂದೆ ಸ್ವಾವಲಂಬನದ ಮಾತುಗಳನ್ನಾಡಲಿಕ್ಕೆ ನಾವು ನಾಚಬೇಕು. ಆ ಬಡ ಪ್ರಾಣಿಗೆ ಮಕ್ಕಳು-ಮರಿಗಳು, ತಂದೆ ತಾಯಿಗಳು, ಅಕ್ಕ-ತಂಗಿಯರು, ಅಣ್ಣ-ತಮ್ಮಂದಿರು ಇದ್ದಾರೆ. ಇವರು ದುರ್ದೆಸೆಗೆ ಈಡಾಗಬಾರದೆಂದೇ ಅವನು ಎಲ್ಲವನ್ನು ತಾಳಿಕೊಳ್ಳುವನು. ಇಲ್ಲದಿದ್ದರೆ ಇಷ್ಟರಲ್ಲಿಯೇ ಅವನೊಂದು ಬಂಡುಗಾರನಾಗಬೇಕಾಗಿತ್ತು, ಇಲ್ಲವೆ ವೈರಾಗಿಯಾಗಬೇಕಾಗಿತ್ತು. ಇವನ ಅನ್ನವನ್ನು ದೂರ ಮಾಡುವವರಾರು? ನಾವು ಕೈಕೊಳ್ಳುವ ಎಲ್ಲ ಆಂದೋಲನಗಳೂ, ಚಳುವಳಿಗಳೂ ರೈತರ ಮೇಲೆಯೇ ಜರುಗುತ್ತವೆ. ಉಪವಾಸ ಬೀಳುವದು ರೈತನಲ್ಲಿ. [illegible] ಶಿಕ್ಷಣದ ಒಂದು [illegible] ರೈತರ [illegible] ಸ್ವಾತಂತ್ರ್ಯ [illegible] ರೈತರಲ್ಲಿ [illegible] ಸೌಕರ್ಯ [illegible] ಮೋಟಾರು ಮೊದಲಾದ ಸೌಕರ್ಯದ ಸಾಧನಗಳೆಲ್ಲವೂ ಶಹರಗಳಲ್ಲಿಯೇ. ಹೀಗಾಗಿ ಹಳ್ಳಿಯ ಬಡ ಜನರಿಗೆ ಆಧಾರವಾರು?

ಬಡತನಕ್ಕೆ ಬಡತನವೇ ಮದ್ದು ಎಂದು ವಿಚಾರ ಮಾಡಿದರೆ ತಿಳಿದು ಬರುವದು. ಕೋಟ್ಯಾವಧಿ ಜನರು ಪ್ರಾಯೋಪವೇಶನದಿಂದಿರಬೇಕಾದ ದೇಶದಲ್ಲಿ ಅವರ ಪ್ರಾಯೋಪವೇಶನವನ್ನು ನೀಗಿಸಲಿಕ್ಕೆ ಲಕ್ಷಾವಧಿ ತರುಣರು ಸ್ವೇಚ್ಛೆಯಿಂದಲೂ, ಧಾರ್ಮಿಕ ಬುದ್ಧಿಯಿಂದಲೂ ಬಡತನವನ್ನು ಸ್ವೀಕರಿಸಬೇಕು. ಇದರ ವಿಷಯದಲ್ಲಿ ಇಂಗ್ಲೀಷ ಶಿಕ್ಷಣವನ್ನು ಪಡೆದು ನಾವು ಹೇಡಿಗಳಾಗಿಬಿಟ್ಟಿದ್ದೇವೆ. ಇಂದಿಗೆ ಮನುಷ್ಯನು ಬಡತನಕ್ಕೆ ಅಂಜುವಷ್ಟು ಸಾವಿಗೂ, ಅಪಮಾನಕ್ಕೂ, ಧರ್ಮದ್ರೋಹಕ್ಕೂ, ದೇಶದ್ರೋಹಕ್ಕೂ ಅಂಜುವದಿಲ್ಲ. ಯಾವ ದೇಶದಲ್ಲಿ ಸ್ವೇಚ್ಛೆಯಿಂದ ಸ್ವೀಕರಿಸಿದ ಬಡತನದ ಪ್ರತಿಷ್ಠೆಯು ಎಲ್ಲಕ್ಕೂ ಮಿಗಿಲಾದದ್ದಿತ್ತೋ, ಅದೇ ದೇಶದಲ್ಲಿ ಇಂದು ಶಿಕ್ಷಣ ಪಡೆದ ಯುವಕರು ಬಡತನಕ್ಕೆ ಬೆದರಿ ಓಡುತ್ತಿದ್ದಾರೆ. ರಶಿಯಾ ದೇಶಕ್ಕೊಮ್ಮೆ ಕೆಟ್ಟಗಾಲ ಬಂದಿತ್ತು. ಜನರ ದುಃಖವು ಅಸಹ್ಯವಾಯಿತು. ಇದನ್ನು ಕಂಡು ಸಾಧು ಟಾಲಸ್ಟಾಯನು ಮನೆ-ಮಾರನ್ನು ಬಿಟ್ಟು ಭಿಕಾರಿಯಾದನು. ಬಾಹ್ಯ ದೃಷ್ಟಿಯಿಂದ ನೋಡಿದರೆ ಅವನಿಗಾದ ಲಾಭವಾವುದು? ಬಡ ಜನರ ಸಂಖ್ಯೆಯು ಒಂದರಿಂದ ಹೆಚ್ಚಿತು, ಇಷ್ಟೇ. ಅರ್ಥಶಾಸ್ತ್ರಜ್ಞನು ಇದಕ್ಕೆ ಉತ್ತರ ಕೊಡಲಾರನು. ಅವನ ಶಾಸ್ತ್ರದಲ್ಲಿ ಆತ್ಮಕ್ಕೆ ಸ್ಥಾನವಿಲ್ಲ. ಟಾಲಸ್ಟಾಯನು ಜಗತ್ತಿನ ಆತ್ಮವನ್ನು ಜಾಗೃತಗೊಳಿಸಿದನು, ಸಿರಿವಂತಿಕೆಯಲ್ಲಿ ತೇಲಾಡಿ ಸಾಗುತ್ತಿದ್ದ ಸಾವಿರಾರು ಜನರಿಗೆ ಪ್ರಾಯೋಪವೇಶ ಹಾಗೂ ಅದಕ್ಕೆ ಕಾರಣವಾದ ಅನ್ಯಾಯದ ಪ್ರತ್ಯಕ್ಷ ದರ್ಶನವನ್ನು ಮಾಡಿಕೊಟ್ಟನು.

ನವಯುವಕರು ಹೇಳುವದೇನಂದರೆ— ನೀವು ಹೇಳುವದೆಲ್ಲವೂ ನಿಜ. ನಮ್ಮ ಹೆಂಡರು-ಮಕ್ಕಳ ಗತಿಯೇನು? ಯಾವ ಸ್ಥಿತಿಯಲ್ಲಿರುವದು ಅವರಿಗೆ ರೂಢಿಯಾಗಿರುವದೋ, ಆ ಸ್ಥಿತಿಯಲ್ಲಿಯೇ ಅವರನ್ನಿಡುವದು ಯೋಗ್ಯವಲ್ಲವೇ? ನಮ್ಮ ವಿಚಾರಗಳಿಗಾಗಿ ಅವರನ್ನು ಕಷ್ಟಕ್ಕೀಡುಮಾಡುವದು ಸರಿಯೇ? 'ಸರಿ' ಯೆಂದೇ ನಾನು ಹೇಳುವೆನು, ಇದರಲ್ಲಿ ಅನುಚಿತವಾದುದಾವುದೂ ಇಲ್ಲ. ನಿಮ್ಮ ಹೆಂಡರು-ಮಕ್ಕಳಷ್ಟೇ ಸತ್ಯವೆಂದೂ, ಹೊಟ್ಟೆಗಿಲ್ಲದೆ ಸಾಯುವ ಕೋಟ್ಯಾವಧಿ ಬಾಂಧವರು ಕೇವಲ ಭ್ರಮವಾಯಿಯೆಂದೂ ನೀವು ತಿಳಿಯುವದಾದರೆ ಆ ಮಾತು ಬೇರೆ. ಆದರೆ ನಿಮ್ಮ ಸೊಗಸಿನ ಜೀವನಕ್ಕಾಗಿ ಸಾವಿರಾರು ಬಡವರು ಹಸಿವಿನಿಂದ ಸಾಯಬೇಕಾಗುವದು ಉಚಿತವೇ? ಎಂಬುದನ್ನು ಕುರಿತು ತಾವು ಏಕೆ ವಿಚಾರ ಮಾಡುವದಿಲ್ಲ? ಬಡತನದಲ್ಲಿ ಕಾಲ ಕಳೆಯಬೇಕಾಗುವದು ಎಂಬ ಭಯದಿಂದಲೇ ನಾವು ಎಷ್ಟೋ ಹೇಡಿಗಳಾಗಿಬಿಟ್ಟಿದ್ದೇವೆ. ಹುಟ್ಟು ಹುಟ್ಟಿಗೆ ನಮ್ಮ ತೇಜೋವಧೆಯಾಗುತ್ತಿರುವದಕ್ಕೆ ಬಡತನದ ಭೀತಿಯೇ ಕಾರಣ. ನಾವು ಅನ್ಯಾಯವನ್ನು ಸಹನ ಮಾಡುತ್ತೇವೆ, ಅಪಮಾನದ ಕಹಿಯಾದ ಗೊಟ್ಟನ್ನು ಕುಡಿಯುತ್ತೇವೆ, ಅನ್ಯಾಯ ಮಾಡುವವರಲ್ಲಿ ಸೇರಿಯವರೊಡನೆ ಕಣ್ಣು ಮುಚ್ಚಿ ಸಹಕರಿಸಿ ಹಗಲು ರಾತ್ರಿ ಆತ್ಮನನ್ನು ಅವಮಾನಿಸುತ್ತೇವೆ, ಇದೆಲ್ಲಕ್ಕೂ ಬಡತನದ ಭೀತಿಯ ಹೊರತು ಇನ್ನಾವ ಕಾರಣವೂ ಇಲ್ಲ.

ಯುದ್ಧದಲ್ಲಿ ಹೋರಾಡಲಿಕ್ಕೆ ಹೋಗುವ ಲಕ್ಷಾವಧಿ ಸೈನಿಕರಲ್ಲಿ ಎಲ್ಲರೇನೂ ಮಹಾತ್ಮರಲ್ಲ. ಅವರಿಗೂ ಹೆಂಡರು-ಮಕ್ಕಳಿದ್ದಾರೆ. ಹತ್ತು-ಹದಿನೈದು ರೂಪಾಯಿ ಗಳಿಸುವವನು ಮಕ್ಕಳು-ಮರಿಗಳಿಗಾಗಿ ಏನು ಉಳಿಸಬಲ್ಲನು? ಹೆಂಡರು-ಮಕ್ಕಳು ಆಶ್ರಿತರೆಯಲ್ಲಿರುವ ರೂಢಿಯನ್ನು ನಾವು ಹಾಕಿಟ್ಟಿರುವದರಿಂದಲೇ ಅಜ್ಞಾತವಾದ ಭವಿಷ್ಯದಲ್ಲಿ ದುಮುಕುವದಕ್ಕೆ ನಾವು ಇಷ್ಟು ಅಂಜುವದು. ಪ್ರತಿ ದಿವಸ ದುಡಿದು ಹೊಟ್ಟೆ ಹೊರೆಯುವ, ಭವಿಷ್ಯದ ಚಿಂತೆಯನ್ನೇ ಮಾಡದಿರುವವರಲ್ಲಿದ್ದ ಜೀವನದ ಸವಿಯು, ಪ್ರತ್ಯಕ್ಷವಾಗಿ ಅನುಭವಿಸಿದ ಹೊರತು ತಿಳಿಯುವದಿಲ್ಲ. ಸೌಖ್ಯ-ಸುರಕ್ಷಿತತೆಗಳು ಜೀವನಕ್ಕೆ ಕೇವಲ ವಿಘ್ನಸಂಕಟವಾದವುಗಳು, ಸಂದಿಗ್ಧವಾದ, ಅನಿಶ್ಚಿತವಾದ ಭವಿಷ್ಯ— ನಿತ್ಯವೂ ಹೊಸ ಹೊಸ ಹೋರಾಟ— ಇದೇ ಜೀವನದ ಸಾರವು. ಇದರ ಸವಿಯನ್ನುಣ್ಣದವರು ಹತಭಾಗಿಗಳೆಂದೇ ಅನ್ನಬೇಕು. ಯಾರ ಭವಿಷ್ಯವು ಸುರಕ್ಷಿತವಾಗಿರುವದೋ, ಅವರಲ್ಲಿ ಧಾರ್ಮಿಕತೆಯು ಉದಯಿಸುವದು ಕಠಿಣ. ಸುರಕ್ಷಿತತೆಯನ್ನು ಬಯಸುವವರು ನಿಜವಾಗಿ ನಾಸ್ತಿಕರು. ಕೂಸು ತಾಯಿ-ತಂದೆಗಳನ್ನು ನಂಬಿ ನಿಶ್ಚಿಂತವಾಗಿರುವಂತೆ ವೀರಪುರುಷನು ಪರಮಾತ್ಮನನ್ನು ವಿಶ್ವಾಸಿಸಿ ನಿಶ್ಚಿಂತನಾಗಿರಬೇಕು. ಸುರಕ್ಷಿತತೆಯಿದ್ದಲ್ಲಿ ಪುರುಷಾರ್ಥವಿಲ್ಲ, ಧಾರ್ಮಿಕತೆಯಿಲ್ಲ, ಕಲಾ-ಕಾವ್ಯಗಳೂ ಇಲ್ಲ.

ಸ್ವೇಚ್ಛೆಯಿಂದ ಬಡತನವನ್ನು ಸ್ವೀಕರಿಸಿದವನು ವೀರನಾಗುತ್ತಾನೆ. ಅನ್ಯಾಯ ಮಾಡುವವನಿಗೆ ಅವನು ಕೇವಲ ಮನುಷ್ಯರೂಪಿಯಾಗಿಯೂ ಸಿಡಿಲಾ[illegible]ಯಾಗಿಯೂ ಕಾಣುತ್ತಾನೆ. ದೊಡ್ಡದೊಡ್ಡ

(೧೧ನೇ ಪಾನಿನ ಮೇಲೆ ಮುಂದುವರಿದ)

ದಿಲ್ಲಿಯೊಳಗೆ ೪೭ನೇ ರಾಷ್ಟ್ರೀಯ ಸಭೆಯ ಅಪೂರ್ವ ಅಧಿವೇಶನ.

ದಿಲ್ಲಿ ಕಾಂಗ್ರೆಸು.

ಭಾರತ ರಾಷ್ಟ್ರ ಸಭೆಯ ೪೭ನೇ ಅಧಿವೇಶನವು ದಿಲ್ಲಿಯೊಳಗಿನ ಚಾಂದಣಿ ಚೌಕದಲ್ಲಿ ಕ್ಲಾಕ್ ಟಾವರ ಯಾನೆ ಗಡಿಯಾರದ ಗೋಪುರದ ಅತಿ ಅಪೂರ್ವ ವೈಭವದಿಂದ ಕೊನೆಗೊಂಡಿತು. ಈ ಅಧಿವೇಶನವು ರಾಷ್ಟ್ರೀಯ ಸಭೆಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವದಾಗಿ ಎಲ್ಲರೂ ಹೇಳುತ್ತಾರೆ. ದಿಲ್ಲಿಯ 'ಹಿಂದುಸ್ತಾನ ಟೈಮ್ಸ' ಪತ್ರಿಕೆಯು ಈ ಅಧಿವೇಶನದ ವರ್ಣನೆಯನ್ನು ಸವಿಸ್ತರ ಪ್ರಕಟಿಸಿದೆ.

ರವಿವಾರ ತಾ| ೨೪ನೇಗೆ ರಾಷ್ಟ್ರೀಯ ಸಭೆಯ ಅಧಿವೇಶನ ನಡೆಯುವದಿತ್ತೆಂದು ಜಾಹೀರಾಗಿತ್ತು. ಅತ್ತ ಸರಕಾರಿ ಅಧಿಕಾರಿಗಳೂ, ಇತ್ತ ರಾಷ್ಟ್ರೀಯ ಸಭಾಭಿಮಾನಿಗಳೂ ತಂತಮ್ಮ ತಯಾರಿಯನ್ನು ಬಹು ಗುಪ್ತವಾಗಿ ನಡಿಸಿದರು. ೩ ದಿನ ಮುಂಚಿತವಾಗಿಯೇ ಇಡೀ ದಿಲ್ಲಿ ಪಟ್ಟಣದಲ್ಲಿ ಪೋಲೀಸರ ದಂಡು ತುಂಬಿ ಕೊಂಡಿತ್ತು. ಬೇರೆ ಬೇರೆ ಪ್ರಾಂತಗಳಿಂದಲೂ ಪೋಲೀಸ ದಳಗಳು ಬಂದಿದ್ದವು. ಗುಪ್ತ ಪೋಲೀಸರು ಗುಪ್ತವಾಗಿ, ವ್ಯಕ್ತ ಪೋಲೀಸರು ವ್ಯಕ್ತವಾಗಿ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳನ್ನು ಶೋಧಿಸಿ ತೆಗೆಯಲು ಮಗ್ನರಾಗಿದ್ದರು. ಪಂಡಿತ ಲಕ್ಷ್ಮಣ ಪಾರಿಕರವರ ಮನೆ ಝಡ್ತಿ ಮಾಡಿ ಕ್ರಾಂತಿಕಾರಕ ಸೈನ್ಯ ದಳದ ಕೆಂಪು ಹಸ್ತಪತ್ರಿಕೆಗಳನ್ನು ಜಪ್ತ ಮಾಡಿ ಅವರಿಗೂ ಹಿಡಿದರು. ಕಾಂಗ್ರೆಸ ಕಾರ್ಯಕರ್ತರೆಂದು ಸಂಶಯ ಬಂದವರ ಮೇಲೆ ಪ್ರತಿಬಂಧಕ ನೋಟೀಸುಗಳು ಜಾರಿಯಾದವು. ಕಾಂಗ್ರೆಸ ಪ್ರತಿನಿಧಿಗಳೆಂದು ಸಂಶಯ ಬಂದವರಿಗೆ ಸೆರೆಹಿಡಿದರು. ಶನಿವಾರ ರಾತ್ರಿಯಂತು ದೊಡ್ಡ ಗಡಿಬಿಡಿ. ನಯಾಬಜಾರ ಲಾರಿಯಲ್ಲಿ ಕೂತು ಪೋಲೀಸರು ಕೇರಿ-ಕೇರಿ ಮನೆ-ಮನೆಗಳಲ್ಲಿ ಝಡತಿ ಮಾಡಿ ಪ್ರಾಂತ-ಪ್ರಾಂತಗಳಿಂದ ಬಂದ ಜನರನ್ನು ಪ್ರತಿನಿಧಿಗಳೆಂಬ ಸಂಶಯದ ಮೇಲೆ ಸೆರೆಹಿಡಿದೊಯ್ದರು. ಅಧ್ಯಕ್ಷರ್ಯಾರು " ಸಭೆ ಸೇರುವ ಸ್ಥಳವ್ಯಾವುದು ? ಎಂದು ಕೊನೆತನಕ ಪೋಲೀಸರಿಂದ ಪತ್ತೆ ಹಚ್ಚಲಾಗಲಿಲ್ಲ.

ರವಿವಾರ ಹಿಂದು-ಮುಸಲ್ಮಾನರೆಲ್ಲರೂ ಪೇಟೆ ಮುಚ್ಚಿ ಸಂಪೂರ್ಣ ಹರತಾಳ ಆಚರಿಸಿದರು. ೭ ಅಂಗಡಿಗಳು ಮಾತ್ರ ತೆರೆದುಕೊಂಡಿದ್ದವು. ಅಂಗಡಿ ಮುಚ್ಚಬಾರದಾಗಿ ಪೋಲೀಸರು ಅವರಿಗೆ, ನೋಟೀಸು ಮಾಡಿದ್ದರಿಂದ ಅವರು ಅಂಗಡಿ ತೆರೆದಿಟ್ಟಿದ್ದರು. ಆದರೆ ವ್ಯಾಪಾರ ಮಾಡಲಿಲ್ಲ. ಪೋಲೀಸರು ಅಧಿವೇಶನ ನೆರೆಗೊಡದಂತೆ ಪೋಲೀಸ ದಳದ ವ್ಯವಸ್ಥೆ ಮಾಡಿಕೊಂಡಿರಲು, ಸರಿಯಾಗಿ ೯ ಘಂಟೆಗೆ ೧೨೦ ಕಾಂಗ್ರೆಸ ಪ್ರತಿನಿಧಿಗಳು ಗಡಿಯಾರದ ಗೋಪುರದ ಬಳಿ ಕೂಡಿದರು. ಸೇಟ ರಣಛೋಡದಾಸ ಅಮೃತಲಾಲರವರಿಗೆ ಅಧ್ಯಕ್ಷರಾಗಬೇಕಾಗಿ ಸೂಚನೆ ಬಂದು ಮಂಜೂರಾಯಿತು. ಆ ಮೇಲೆ ಒಬ್ಬ ಪ್ರತಿನಿಧಿಗಳು ನಿಂತು ೫ ಠರಾವುಗಳನ್ನೋದಿದರು. ಠರಾವುಗಳೆಲ್ಲ ಅಚ್ಚಾಗಿದ್ದವು. ಈ ಪ್ರತಿಗಳನ್ನೆಲ್ಲ ಪ್ರತಿನಿಧಿಗಳಿಗೂ, ಪ್ರೇಕ್ಷಕರಿಗೂ ಹಂಚಿದ್ದರು. ಈ ಠರಾವುಗಳಿಗೆ ರೀತಿಯಂತೆ ಅನುಮೋದನ ಸಿಕ್ಕಿತು. ಅಧ್ಯಕ್ಷರು ಠರಾವುಗಳೆಲ್ಲ ಮಂಜೂರಾದವೆಂದು ಜಾಹೀರಪಡಿಸಿದೊಡನೆ, " ಮಹಾತ್ಮಾ ಗಾಂಧಿಕಿ ಜೈ " " ಪಂಡಿತ ಮಾಲವೀಯಕೀ ಜೈ " ಎಂಬ ಜಯಘೋಷಗಳಿಂದ ಚಾಂದಣಿ ಚೌಕು ತುಂಬಿತು. ಜನರು ತಂಡುಗಟ್ಟಿ ನೆರೆದರು. ೧೦ ನಿಮಿಷಗಳಲ್ಲಿ ೪೭ನೇ ರಾಷ್ಟ್ರೀಯ ಸಭೆಯ ಸಮಸ್ತ ಕೆಲಸವು ನಡೆದು ಸಮಾಪ್ತವಾಯಿತು.

ಬಳಿಯಲ್ಲಿ ಸಣ್ಣ ಪೋಲೀಸ ದಳವಿತ್ತು. ಅವರ ಕಡೆ ಒಂದು ಲಾರಿಯಿತ್ತು. ಅವರು ಈ ಸಭೆ ಬೇಕಾಯಿದೇಶೀರ ಎಂದು ಜಾಹೀರ ಮಾಡಲಿಲ್ಲ. ಪ್ರತಿನಿಧಿಗಳಿಗೆ ಲಾರಿಯಲ್ಲಿ ಕೂಡ್ರಹೇಳಿದರು. ಅನೇಕರು ಓಡಿಹೋಗಿ ಮೋಟಾರಿನಲ್ಲಿ ಕೂತರು. ಕೆಲವರಿಗೆ ಮೋಟಾರಿನಲ್ಲಿ ಸ್ಥಳ ಸಿಗಲಿಲ್ಲ. ಅವರು ಮೋಟಾರಿನ ಮಾಡಿನ ಮೇಲೆ ಹೋಗಿ ಕೂತರು. ಮಾಡಿನ ಮೇಲೆ ಕೂತವರು ಠರಾವುಗಳ ಪ್ರತಿಗಳನ್ನು ಹಾರಿಸುತ್ತ, ಜಯಘೋಷಗಳನ್ನು ಮಾಡುತ್ತ ಮೋಟಾರಾರೂಢರಾಗಿ ಮುದದಿಂದ ಕೋತವಾಲಿಗೆ ಕೂಚು ಮಾಡಿದರು. ಅಷ್ಟರಲ್ಲಿ ಪೋಲೀಸ ಸುಪರಿಂಟೆಂಡೆಂಟರು ರಾಷ್ಟ್ರೀಯ ಸಭೆಯ ಅಧಿವೇಶನವಾದ ವರ್ತಮಾನ ತಿಳಿದು ಸುಪರಿಂಟೆಂಡೆಂಟರೂ, ಡೆ| ಪೋಲೀಸ ಸುಪರಿಂಟೆಂಡೆಂಟರೂ ಅಷ್ಟರಲ್ಲಿ ೫ ಲಾರಿಗಳನ್ನು ತಂದರು, ಅವು ತುಂಬಿ ಕೋತವಾಲಿಗೆ ಹೋದವು! ಮತ್ತೆ ಪ್ರತಿನಿಧಿಗಳು ಬರುತ್ತಿದ್ದರು, ಅವರಿಗೂ ಪೋಲೀಸರು ಸೆರೆಹಿಡಿದೊಯ್ದರು. ನೆಟ್ಟಗೆ ಜೈಲಿಗೆ ಒಯ್ಯುವರಂತೆ ಕೆಲವು ಮಂದಿಯ ಪ್ರತಿನಿಧಿಗಳು ಲಾರಿಯಲ್ಲಿ ಕೂಡ್ರಲೊಪ್ಪಲಿಲ್ಲ, ಅವರಿಗೆ ಪೋಲೀಸರು ಕೈಕಟ್ಟಿ ಹಿಡಿದು ಲಾರಿಯಲ್ಲಿ ಕುಳ್ಳಿರಿಸಿದರು. ಚಾಂದಣಿ ಚೌಕಿನ ಬಿಕ್ಕಿಗ ಗುರುದ್ವಾರ-ಸಿಸಗಂಜ ದೇವಸ್ಥಾನದಿಂದ ಸುಮಾರು ೧೦೦ ಮಂದಿ ಅಕಾಲಿಗಳು ಒಂದು ಪ್ರಚಂಡ ರಾಷ್ಟ್ರಧ್ವಜ ಎತ್ತಿಕೊಂಡು ಹೊರ ಬಂದರು. ಮೊದಲನೇ ನಿಲ್ಲಿಸಿ [illegible] ಗಳೊಳಗಿನ ಜನರಾರಿಂದಲೂ ಪರಿವಾರದಿಂದ [illegible] ಅವರೊಪ್ಪಲಿಲ್ಲ. ಎಲ್ಲರೂ [illegible] ಗಟ್ಟಿ ಕೂಡಿದರು. ಅವರಿಗೆ ಸೆರೆಹಿಡಿದು ೫ ಮೋಟಾರ ಲಾರಿಯಲ್ಲಿ ತುಂಬಿ ಡಿಸ್ಟ್ರಿಕ್ಟ ಜೈಲಿಗ ಒಯ್ದರು. ಮತ್ತೆ ಪ್ರತಿನಿಧಿಗಳು ಬಂದರು. ಜನರಂತು ತಂಡುಗಟ್ಟಿ ನೆರೆದರು. ಪೋಲೀಸರೂ, ಕುದುರೆ ಸವಾರರೂ ದೊಣ್ಣೆ ಹೊಡೆದು ಚದರಿಸಿದರು. ಪೋಲೀಸರು ಬೆನ್ನು ತಿರುಗಿದೊಡನೆ ಜನರು ಪುನಃ ತಂಡುಗಟ್ಟಿ ಸೇರುತ್ತಿದ್ದರು. ಸುಮಾರು ೧೦ ಘಂಟೆಗೆ ದಿಲ್ಲಿಯೊಳಗಿನ ಕುಲೀನ ಮನೆತನದ ಸ್ತ್ರೀಯರು ಶ್ರೀಮತಿ ಜಯರಾಣಿಯವರ ನೇತೃತ್ವದಲ್ಲಿ ಖಾದಿಯ ಸೀರೆಗಳನ್ನು ಧರಿಸಿ ಮೆರವಣಿಗೆ ಹೊರಡಿಸಿದರು. ಅವರಿಗೂ ಸೆರೆಹಿಡಿಯಲ್ಪಟ್ಟಿತು. ಮೌಲಾನಾ ಹಫೀಜು-ಉಲ್-ರಹಿಮಾನರವರಿಗೂ ಸೆರೆಹಿಡಿಯಲ್ಪಟ್ಟಿತು. ಇವರು ಜಮಾಯತ್-ಉಲ್-ಉಲೆಮಾದ ಸರ್ವಾಧಿಕಾರಿಗಳು. ಅಂಬಾಲಾ, ಮುಲ್ತಾನ, ಅಮೃತಸರ, ಅಹಮದಾಬಾದ, ಕರಾಚಿ, ಆಂಧ್ರ, ಮುಂಬಯಿ ಮೊದಲಾದ ಕಡೆಗಳೊಳಗಿನ ಪ್ರತಿನಿಧಿಗಳು ತಮಗೂ ಸೆರೆಹಿಡಿಯಬೇಕಾಗಿ ಮುಂದಾಗಿ ಬಂದರು. ಪೋಲೀಸರು ಮುಖ್ಯಸ್ಥರಿಗೆ ಮಾತ್ರ ಸೆರೆಹಿಡಿದು ಉಳಿದವರಿಗೆ ಬಿಟ್ಟರು. ರಾಷ್ಟ್ರಧ್ವಜ ಹಿಡಿದು ಐದು ಪ್ರತಿನಿಧಿಗಳು ಗಡಿಯಾರದ ಗೋಪುರದ ಕಡೆ ಕೂಚುಮಾಡಿ ಬರುತ್ತಿದ್ದರು, ಅವರಿಗೆ ಹಿಡಿದು ಧ್ವಜವನ್ನು ಕಸಕೊಂಡು ಬಿಟ್ಟರು. ಬಳಿಕ ಸ್ವಯಂಸೇವಕರೂ ಧ್ವಜ ಹಿಡಕೊಂಡು ಬಂದರು. ಬೆನ್ನಿಗೇ ಪ್ರತಿನಿಧಿಗಳು ಬಂದರು. ಅವರ ಕಡೆಯಿಂದ ಧ್ವಜ ಸೆಳಕೊಂಡು ಬೆತ್ತ ಪ್ರಹಾರ ಮಾಡಿ ಪೋಲೀಸರು ಅವರಿಗೆ ಕಳಿಸಿದರು. ಸಾಯಂಕಾಲ ೫ ಘಂಟೆಗೆ ಅಹಮದಾಬಾದದ ಪ್ರತಿನಿಧಿಗಳು ತಂದ ಒಂದು [illegible] ಧ್ವಜ ಬಿಡಲೊಪ್ಪಲಿಲ್ಲ. ಸವಾರರು ಅವರಿಗೆ ಎಳ[illegible] ಹೋಗಿ ಧ್ವಜ ಸೆಳಕೊಂಡರು. ಅವರಲ್ಲಿಬ್ಬನಿಗೆ ಕುದುರೆ ತುಳಿಯಿತು. ಅವನು ಪ್ರಾಣಾಂತ್ಯ ಸ್ಥಿತಿಯಲ್ಲಿದ್ದಾನೆ. ಪ್ರತಿನಿಧಿಗಳು ಅಲ್ಲಲ್ಲಿ ಕೂಡಿ

ಮದ್ರಾಸಿನಲ್ಲಿ ಜರುಗಿದ ಅಖಿಲ ಭಾರತ ವಸ್ತು ಪ್ರದರ್ಶನದಲ್ಲಿ (೧೯೩೧-೩೨) ಅತ್ಯುಚ್ಚ ಯೋಗ್ಯತೆಯ ಸರ್ಟಿಫಿಕೇಟು ಪಡೆದ

"ಪಾಫ್" ಹೊಲಿಗೆ ಮಶೀನುಗಳು ನಮ್ಮಲ್ಲಿ ಹಪ್ತೆಯಿಂದ ಸಿಗುತ್ತವೆ!

ಹಾಗು

ಬೇಕಾದ ಬೇರೆ ಭಾಗಗಳು ಸಹ ದೊರೆಯುತ್ತವೆ!!

ಈ ಮಶೀನುಗಳು

ನೋಡಲಿಕ್ಕೆ ಚಂದವೂ ನಡಿಸಲಿಕ್ಕೆ ಸುಕರವೂ ನಿಶ್ಶಬ್ದವೂ, ಖಾತ್ರಿಯವೂ, ಮಜಬೂತಾಗಿಯೂ ಇದ್ದು ಅಗ್ಗವಾಗಿವೆ!!

☞ ಇವಲ್ಲದೆ, ಕೈಹೊಲಿಗೆಯ ಮಶೀನುಗಳೂ ನಮ್ಮಲ್ಲಿ ಸಿಗುತ್ತವೆ!!

ಉತ್ತರ-ದಕ್ಷಿಣ ಕನ್ನಡ ಜಿಲ್ಲೆಗಳ ಸೋಲ ಏಜಂಟರ —

ಕುಲಕರ್ಣಿ ಪಾಫ್ ಎಂಡ್ ಕಂಪನಿ,
ಶಾಂತಿಭುವನ, **ಕಾರವಾರ.**

ಮಂಗಳೂರ ಏಜಂಟರು:— ಕಮಲಾಕರ ಅಪ್ಪಾಜಿರಾವ ಪಾಫ.

ಶಿರಶಿ ಏಜಂಟರು — **ಕಾಮತ ಬ್ರದರ್ಸ.**
ಕುಮಟಾ ಏಜಂಟರು — **ಶಂಕರ ಅಪ್ಪಾಜಿರಾವ ಪಾಫ**
ಹೊನ್ನಾವರ ಏಜಂಟರು:— **ಶೆಣೈ ಮಂಜಪ್ಪಾ ಗಣೇಶ ಶೇಟ**

ಕಾಂಗ್ರೆಸ ಠರಾವುಗಳನ್ನು ಜನರಿಗೆ ಓದಿ ಹೇಳುತ್ತಿದ್ದರು. ಹಲವರು ಮೆರವಣಿಗೆಯಿಂದ ಗಡಿಯಾರದ ಗೋಪುರದ ಕಡೆ ಕೂಚು ಮಾಡುತ್ತಿದ್ದರು. ಅವರೆಲ್ಲರಿಗೆ ಪೋಲೀಸರು ದೊಣ್ಣೆ ಹೊಡೆದು ಚದರಿಸಿದರು. 'ತೇಜ' ಪತ್ರಿಕೆಯ ಡಾಇರೆಕ್ಟರರಾದ ಶ್ರೀ| ದೇಶಬಂಧು ಗುಪ್ತರವರು ೩೫ ಮಂದಿಗಳೊಡನೆ ಮೆರವಣಿಗೆಯಿಂದ ಕಾಂಗ್ರೆಸ ಸಭಾಸ್ಥಳಕ್ಕೆ ಕೂಚು ಮಾಡುತ್ತಿದ್ದರು. ಪೋಲೀಸರು ದೇಶಬಂಧುರವರ ಕಡೆಯಿಂದ ರಾಷ್ಟ್ರಧ್ವಜ ಕಸೆದರು. ಇಬ್ಬ ಪಂಜಾಬಿ ಶಿಪಾಯರು ಅವರಿಗೆ ಹೊಡೆದು ಅಸಭ್ಯ ಶಬ್ದಗಳಿಂದ ಬೈದರು. ಡಿ| ಮ್ಯಾಜಿಸ್ಟ್ರೇಟರಾದ ಮಿ| ಲೆಂಡರರವರ ಸಮಕ್ಷಮವೇ ಈ ಪ್ರಕಾರ ನಡೆಯಿತು. "ಇಂಥ ಬೇಕಾಯಿದೇಶೀರ ವರ್ತನೆಯನ್ನು ನೀವು ಯಾಕೆ ಸಹಿಸುತ್ತೀರೆಂ"ದು ಮಿ| ಲೆಂಡರರವರು ಕೇಳಿದರು. "ಇತಿಹಾಸವು ನಿಮಗೆ ಹೇಳುವದು," ಹೀಗೆ ದೇಶಬಂಧುಗಳು ಉತ್ತರಿಸಿದರು! ಆ ಮೇಲೆ ಅವರಿಗೆ ಸೆರೆಹಿಡಿದೊಯ್ದರು. ಮುಲ್ತಾನದ ಪ್ರತಿನಿಧಿಗಳ ಮೇಲೆ ಬಂದೆ. ಈ ನರಂಗ ಹಿಡಿದು, ಬಹಳ ಜನರಿಗೆ ಹೊಡೆದೋಡಿಸಿದರು. ಗುಂಟೂರಿನ ಶ್ರೀ| ನರಸಿಂಗರಾಯರು ತಮ್ಮೊಡನೆ ಪ್ರತಿನಿಧಿಗಳ ತಂಡವನ್ನು ತಂದರು. ಪೋಲೀಸ ಸುಪರಿಂಟೆಂಡೆಂಟರ ಕಡೆ ಸೆರೆಹಿಡಿಯಹೇಳಿದರು. "ನೀವು ಅಪರಾಧ ಮಾಡಿಲ್ಲ, ಆದ್ದರಿಂದ ನಿಮಗೆ ಸೆರೆಹಿಡಿಯುವದಿಲ್ಲ"ವಾಗಿ ಸುಪರಿಂಟೆಂಡೆಂಟರು ನುಡಿದರು. ಬಳಿಕ, ಕಾಂಗ್ರೆಸ ಠರಾವುಗಳನ್ನು ಓದಿ ಅವರು ತಮಗೆ ಸೆರೆಹಿಡಿಯಹೇಳಿದರು, ಪೋಲೀಸ ಲಾರಿಯಲ್ಲಿ ಹೋಗಿ ಕೂತರು. ಆದಾಗ್ಯೂ, ಅವರಿಗೆ ಸೆರೆಹಿಡಿಯಲಿಲ್ಲ. ಲಾರಿಯೊಳಗಿಂದ ಬಲಾತ್ಕಾರದಿಂದ ಕೆಳಗಿಳಿಸಿದರು. ರಾತ್ರಿ ೮ ಘಂಟೆಯ ತನಕ ಪೋಲೀಸರಿಗೂ, ಪ್ರತಿನಿಧಿಸ್ವಯಂಸೇವಕರಿಗೂ ಈ ಪ್ರಕಾರ ಜಗ್ಗಾಟ ನಡೆಯಿತು. ಮಾರನೇ ದಿನ ಎಲ್ಲ ಸಮಾಧಾನವಾಗಿ ವ್ಯವಹಾರ ವಾಡಿಕೆಯಂತೆ ನಡೆದದೆಂದು ತಿಳಿಯುತ್ತದೆ.

ಅಧ್ಯಕ್ಷರಾದ ಶೇಟ ರಣಛೋಡದಾಸರವರಿಗೂ, ಸ್ವಾಗತಾಧ್ಯಕ್ಷರಾದ ಪಂಡಿತ ಪ್ಯಾರಿಲಾಲರವರಿಗೂ, ಶ್ರೀಮತಿ ಪಾರ್ವತಿದೇವಿ ಮೊದಲಾದ ೧೩ ಸ್ತ್ರೀಯರಿಗೂ ಸೆರೆಹಿಡಿಯಲಾಗಿದೆ. ಒಟ್ಟು ೩೬೯ ಮಂದಿಗಳಿಗೆ ಶನಿವಾರ ಸೆರೆಹಿಡಿದರು. ಇದಕ್ಕೂ ಮುಂಚೆ ಕಾಂಗ್ರೆಸ ಪ್ರತಿನಿಧಿಗಳಾಗಿ ಬಂದ ೩೬೧ ಜನರಿಗೆ ಸೆರೆಹಿಡಿಯಲಾಗಿತ್ತು. ಹೀಗೆ ೭೩೦ ಮಂದಿಗಳಿಗೆ ಕಾಂಗ್ರೆಸ ಅಧಿವೇಶನದ ಪ್ರೀತ್ಯರ್ಥ ಸೆರೆಹಿಡಿದಂತಾಗಿ ಸರಕಾರಿ ಅಧಿಕಾರಿಗಳ ಎಣಿಕೆ

ಶೇಟ ರಣಛೋಡದಾಸ ಅಮೃತಲಾಲರವರು ಅಹಮದಾಬಾದದ ಲಕ್ಷಾಧೀಶರು, ಗಿರಣಿ ಸಾಹುಕಾರರು. ಇವರಿಗೆ ಅಹಮದಾಬಾದ ಪಟ್ಟಣವನ್ನು ಬಿಟ್ಟು ಹೋಗಬಾರದಾಗಿ ಅಪ್ಪಣೆಯಾಗಿತ್ತು. ಅದನ್ನು ಮೀರಿ ಶೇಟ ರಣಛೋಡದಾಸರವರು ಅಹಮದಾಬಾದದಿಂದ ದಿಲ್ಲಿಗೆ ಹೋಗಿ ಇತಿಹಾಸಪ್ರಸಿದ್ಧ ರಾಷ್ಟ್ರೀಯ ಸಭಾಧಿವೇಶನದ ಅಧ್ಯಕ್ಷರಾದರು. ಇವರಿಗೆ ಸೆರೆಹಿಡಿದು ವಿಚಾರಕ್ಕಾಗಿ ಅಹಮದಾಬಾದಕ್ಕೆ ಒಯ್ಯುತ್ತಾರೆ.

ಸ್ವಾಗತಾಧ್ಯಕ್ಷರಾದ ಪಂಡಿತ ಪ್ಯಾರಿಲಾಲರವರಿಗೆ ಬಿನ್ ಶರ್ತ ಬಿಡುಗಡೆಯಾಯಿತು. ಇವರು ಮೀರತದೊಳಗಿನ ಪೆನಶನ ಪಡೆದ ಎಡ್ವೋಕೇಟರಿದ್ದು ೩—೪ ವರ್ಷಗಳಿಂದ ನಡೆಯುತ್ತಿರುವ ಮೀರತ ಖಟ್ಲೆಯಲ್ಲಿ ಆರೋಪಿ ತರ್ಫಿನ ವಕೀಲರು. ಈಗ ಆ ಖಟ್ಲೆಯಲ್ಲಿ ಆರೋಪಿ ಕಡೆ ತರ್ಕಗಳು ಪ್ರಾರಂಭವಾಗಿವೆ. ಪಂಡಿತ ಪ್ಯಾರಿಲಾಲರವರು ಒಂದು ದಿನ ಅಲ್ಲಿ ತರ್ಕಗಳನ್ನು ಸಾದರಪಡಿಸಿ ಈ ಅಧಿವೇಶನಕ್ಕೆ ಬಂದಿದ್ದರು. ಆ ಖಟ್ಲೆಯ ಕೆಲಸಕ್ಕೆ ತೊಂದರೆಯಾಗಬಾರದೆಂದು ಇವರ ಬಿಡುಗಡೆಯಾಗಿರುವದಂತೆ!

ರಾಷ್ಟ್ರೀಯ ಸಭೆಯಲ್ಲಿ ಮಂಜೂರಾದ ಎಲ್ಲಾ ಠರಾವುಗಳು ಸಂಪ್ರದಾಯದಂತೆ ವಿಷಯನಿರ್ಧಾರಕ ಸಭೆಯಲ್ಲಿ ಮಂಜೂರಾಗಿದ್ದವು. ಈ ಸಭೆಗೆ ೪೦ ಮಂದಿ ಸಭಾಸದರನ್ನು ಸೌ| ಸರೋಜಿನೀ ನಾಯುಡೂರವರು ನೇಮಿಸಿದ್ದರು. ಅವರಲ್ಲಿ ೧೭ ಮಂದಿಗಳಿಗೆ ದಿಲ್ಲಿಯ ಪೋಲೀಸರು ಸೆರೆಹಿಡಿದರು. ಉಳಿದ ೨೩ ಜನರು ಶನಿವಾರ ರಾತ್ರಿ ಎಲ್ಲಿಯೋ ಸಭೆಸೇರಿ ೫ ಠರಾವುಗಳನ್ನು ಕೈಕೊಂಡರು. ಅವುಗಳಲ್ಲಿ ೨ ಠರಾವುಗಳು ಮಹತ್ವವಾದವುಗಳು: ಒಂದು ಕರಾಚಿ ಕಾಂಗ್ರೆಸಿನಲ್ಲಿ ಮಂಜೂರಾದ ಪೂರ್ಣ ಸ್ವರಾಜ್ಯದ ಠರಾವು, ಎರಡು ಮುಂಬಯಿಯೊಳಗೆ ಕಳೆದ ಜನವರಿ ತಿಂಗಳಲ್ಲಿ ಸೇರಿದ ಕಾಂಗ್ರೆಸ ಕಾರ್ಯಕಾರಿ ಮಂಡಳಿಯು ನಿರ್ಧರಿಸಿದ ಠರಾವು. ಐದೂ ಠರಾವುಗಳಿಗೆ ಎಲ್ಲ ಪ್ರತಿನಿಧಿಗಳು ಸಹಿ ಹಾಕಿ ತಮ್ಮ ಅನುಮತಿಯನ್ನಿತ್ತಿದ್ದಾರೆ

ದಿಲ್ಲಿಯಲ್ಲಿ ಸೆರೆಹಿಡಿದವರ ಸಂಖ್ಯೆ ಸರಕಾರಿ ಲೆಕ್ಕದಂತೆ ೭೩೦ ಇದ್ದಿದೆ. ದಿಲ್ಲಿ ಕಾಂಗ್ರೆಸಿಗಾಗಿ ಹೊರಟ ಪ್ರತಿನಿಧಿಗಳನ್ನು ಪೇಶಾವರ, ಲಾಹೋರ, ಕಲಕತ್ತಾ ಮೊದಲಾದ ಸ್ಟೇಶನುಗಳಲ್ಲಿ ಸೆರೆ ಹಿಡಿದ್ದಾರೆ. ಹೀಗೆ ಸೆರೆಹಿಡಿದವರ ಸಂಖ್ಯೆ ೮೦೦ಕ್ಕೆ ಕಡಿಮೆಯಾಗದು. ತಕ್ಕ ಮಟ್ಟಿಗೆ ೧೫೦೦ ಪ್ರತಿನಿಧಿಗಳು ರಾಷ್ಟ್ರೀಯ ಸಭೆಯ ಪ್ರೀತ್ಯರ್ಥ ಸೆರೆಯಾಳಾದರೆಂದು ಹೇಳಬಹುದು.

ದಿಲ್ಲಿ ಕಾಂಗ್ರೆಸಿಗಾಗಿ ಹೊರಟ ಸೌ| ಸರೋಜಿನಿ ನಾಯುಡುರವರಿಗೆ ಶುಕ್ರವಾರ ಸಂಜೆ ಪೋಲೀಸರು ಬಾಂದ್ರೆಯಲ್ಲಿ ಸೆರೆಹಿಡಿದರು. ಸೌ|ಯವರಿಗೆ ಜನರು ಸ್ಟೇಶನಿಗೆ ಬಂದು ಜಯಘೋಷದೊಡನೆ ಸಂಭ್ರಮದಿಂದ ಕಳಿಸಿಕೊಟ್ಟರು. "ನಾಸಿಕ ಜೈಲಿಗೆ ಹೋಗುತ್ತೇನೆ" ಎಂಬದಾಗಿ ಸೌ| ಸರೋಜಿನಿ ನಾಯುಡುರವರು ಮುದದಿಂದ ನುಡಿದು, ೧ನೇ ತರಗತಿಯ ಡಬ್ಬಿ ಹತ್ತಿದರು. ಆಗ "ದಿಲ್ಲಿ ಕಾಂಗ್ರೆಸ ಝಿಂದಾಬಾದ" ಮೊದಲಾದ ಜಯಘೋಷಗಳಾದವು; ಉಗಿಬಂಡಿ ಹೊರಟಿತು. ಪೋಲೀಸರೂ ಅದೇ ಉಗಿಬಂಡಿ ಹತ್ತಿದರು. ಬಾಂದ್ರೆಯಲ್ಲಿ ಪೋಲೀಸರು ಉಗಿಬಂಡಿಯನ್ನು ನಿಲ್ಲಿಸಿ ಸೌ| ಸರೋಜಿನಿಯವರಿಗೆ ಸೆರೆಹಿಡಿದು ಮೋಟಾರಿನಿಂದ ಮುಂಬಯಿಗೆ ಒಯ್ದರು. ಪೋಲೀಸ ಕಚೇರಿಯಲ್ಲಿಯೇ ಅವರಿಗೆ ಇಳಕೊಳ್ಳುವ ವ್ಯವಸ್ಥೆಯಾಗಿತ್ತು. ಮಾರನೇ ದಿನ ಶನಿವಾರ ಖಟ್ಲೆಯ ವಿಚಾರವಾಯಿತು. ಪೋಲೀಸ ಕಮಿಶನರರ ಅಪ್ಪಣೆ ಪಡೆಯದೆ ದಿಲ್ಲಿಗೆ ಹೊರಟ ಬಗ್ಗೆ ಖಟ್ಲೆ. ತಮಗೇನೂ ಹೇಳತಕ್ಕದ್ದಿಲ್ಲವಾಗಿ ಸೌ|ಯವರು ಮ್ಯಾಜಿಸ್ಟ್ರೇಟರ ಕಡೆ ನುಡಿದರು. ಅವರ ಪ್ರಕೃತಿಯ ಕಡೆ ಲಕ್ಷ್ಯ ಕೊಟ್ಟು ಬರೇ ೧ ವರ್ಷದ ಶಿಕ್ಷೆ ವಿಧಿಸುತ್ತೇವಾಗಿ ಮ್ಯಾಜಿಸ್ಟ್ರೇಟರು ಉದ್ಗರಿಸಿದರು! ಸೌ|ಯವರು ಮುದದಿಂದ ಇದ್ದಾರೆ. ಅವರಿಗೆ ೧ನೇ ತರಗತಿಯ ಕೈದಿಗಳಂತೆ ನಡಿಸಿಕೊಳ್ಳಬೇಕೆಂದು ಮ್ಯಾಜಿಸ್ಟ್ರೇಟರ ಅಪ್ಪಣೆ. ಕೆಲ ದಿನಗಳಲ್ಲಿಯೇ ಅವರಿಗೆ ಮಹಾತ್ಮರಿರುವ ಯೆರವಡಾ ಜೈಲಿಗೆ ಒಯ್ಯುವವರಿದ್ದಾರಂತೆ.

ರಾಷ್ಟ್ರೀಯ ಸಭೆಯ ನಿಯೋಜಿತ ಅಧ್ಯಕ್ಷರಾದ ಪಂಡಿತ ಮದನಮೋಹನ ಮಾಲವೀಯರವರಿಗೆ ಶನಿವಾರ ಸೆರೆಹಿಡಿದರು. ಪಂಡಿತಜಿಯವರು ಶ್ರೀ ಕಾಶಿಕ್ಷೇತ್ರದಿಂದ ಶುಕ್ರವಾರವೇ ದಿಲ್ಲಿಯ ಕಡೆ ಹೊರಟಿದ್ದರು. ಅಲ್ಲಿಯೇ ಅವರಿಗೆ ಸೆರೆಹಿಡಿಯಬೇಕೆಂಬ ವಿಚಾರವಿತ್ತಂತೆ. ಆದರೆ, ಪಂಡಿತಜಿಯವರು ಶ್ರೀ ಕಾಶಿಕ್ಷೇತ್ರದಿಂದ ಮೋಟಾರಿನಿಂದ ಅಲಹಾಬಾದಿಗೆ ಬಂದು, ಅಲ್ಲಿಂದ ಉಗಿಬಂಡಿ ಹತ್ತಿ ದಿಲ್ಲಿಗೆ ಹೊರಟರು. ಕಾನಪುರದಲ್ಲಿ ಸೆರೆಹಿಡಿಯುವರೆಂದು ಎಲ್ಲರದೂ ಅಂದಾಜು. ಕಾನಪುರ ಸ್ಟೇಶನಿನಲ್ಲಿ ತುಂಬ ಪೋಲೀಸರು, ಆದರೆ ಅಲ್ಲಿಯೂ ಸೆರೆಹಿಡಿಯಲಿಲ್ಲ. ಪಂಡಿತಜಿಯವರೂ, ಪಂಡಿತಜಿಯವರ ಪರಿವಾರದವರೂ ಕಾನಪುರ ದಾಟಿದರು. ದಿಲ್ಲಿಯಿಂದ ದಂಕೌರ ರೇಲ್ವೆ ಸ್ಟೇಶನು ೪೦ ಮೈಲು ದೂರವಿದೆ. ಅಲ್ಲಿ ಪಂ|ಯವರು ಇಳಿದರು. ಅವರ ಜೊತೆಗೆ ಮಗಂದಿರರಾದ ಕಾರ್ಯದರ್ಶಿ ಗೋವಿಂದ ಮಾಲವೀಯರವರೂ, ಸನ್ಮಾನ್ಯ ವೃದ್ಧರಾದ ಡಾ| ಮುಂಗಲಸಿಂಗರವರೂ, ಮೊಮ್ಮಗಂದಿರಾದ ಪಂಡಿತ ಶ್ರೀಧರ ಮಾಲವೀಯರವರೂ, ಪಂಡಿತ ಮೋತಿಲಾಲರ ಅಳಿಯಂದಿರಾದ ಬೆರಿಸ್ಟರ ರಣಜಿತ ಪಂಡಿತರವರೂ ಇದೇ ಸ್ಟೇಶನಿನಲ್ಲಿ ಇಳಿದರು. ಅಲ್ಲಿಂದ ಮೋಟಾರು ಹತ್ತಿ ದಿಲ್ಲಿಯ ಕಡೆ ಹೊರಟರು. ಯಮುನಾ ಸಂಕಕ್ಕೆ ತಲ್ಪುವಷ್ಟರಲ್ಲಿ ಪೋಲೀಸರು ಮೋಟಾರು ನಿಲ್ಲಿಸಿ ದಿಲ್ಲಿಯ ಸೀಮೆ ಸೇರಬಾರದಾಗಿ ನೋಟೀಸುಗಳನ್ನು ಎಲ್ಲರ ಮೇಲೆ ಜಾರಿ ಮಾಡಿದರು. ಮೋಟಾರು ಹೊರಟಿತು. ದಿಲ್ಲಿಯ ಸೀಮಾಂತ್ಯದಲ್ಲಿ ಪೋಲೀಸ ದಳ ನಿಂತಿತ್ತು. ಸೀಮೆ ದಾಟಿದೊಡನೆ ಮೋಟಾರು ನಿಲ್ಲಿಸಿ ರಾಜಶಾಸನದಂತೆ ತಮಗೆ ಸೆರೆಹಿಡಿದಿರುವದಾಗಿ ಪಂಡಿತಜಿಯವರಿಗೆ ಪೋಲೀಸರು ತಿಳಿಸಿದರು. ಪಂಡಿತಜಿಯವರು ನಸುನಕ್ಕು, ಸೆರೆಹಿಡಿಸಿಕೊಳ್ಳುವದಕ್ಕಾಗಿಯೇ ತಾವು ಇಲ್ಲಿಯ ತನಕ ಬಂದೆವಾಗಿ ನುಡಿದರು. ಪಂಡಿತಜಿಯವರೊಡನೆ ಅವರ ಪರಿವಾರದವರನ್ನೆಲ್ಲ ಸೆರೆಹಿಡಿದರು. ಡ್ರೈವ್ಹರ ತುಳಸೀರಾಮನನ್ನೂ ಸೆರೆಹಿಡಿದೊಯ್ದರು. ಪಂಡಿತಜಿಯವರ ಮೇಲಾಗಲಿ, ಇತರರ ಮೇಲಾಗಲಿ ಖಟ್ಲೆ ಮಾಡಿಕೊಡುವ ವಿಚಾರವಿಲ್ಲ. ರಾಜಶಾಸನದಂತೆ ಇವರಿಗಲ್ಲ ಬಂಧನದಲ್ಲಿಡಲ್ಪಡುವದಂತೆ. ಇವರೆಲ್ಲರಿಗೆ ದಿಲ್ಲಿಯ ಡಿಸ್ಟ್ರಿಕ್ಟ ಜೈಲಿನಲ್ಲಿಟ್ಟಿದ್ದಾರೆ. ಸ್ವಂತ ಅಡಿಗೆ ಭಟ್ಟನಿಗೆ ಇಟ್ಟುಕೊಳ್ಳಲಿಕ್ಕೂ, ಒಬ್ಬ ಸೇವಕನಿಗೆ ಇಟ್ಟುಕೊಳ್ಳಲಿಕ್ಕೂ ಪಂಡಿತಜಿಯವರಿಗ ಅಧಿಕಾರಿಗಳ ಅಪ್ಪಣೆಯಿದೆ. ಪಂಡಿತಜಿಯವರು ಹತ್ತಿಬಂದ ಮೋಟಾರನ್ನೂ ಜಪ್ತಮಾಡಿಟ್ಟಿದ್ದಾರೆ. ಇದಲ್ಲದೆ, ಅವರ ಪೆಟ್ಟಿಗೆಯನ್ನು ಝಡತಿ ಮಾಡಿ ೨ ಪತ್ರಗಳನ್ನು ಪೋಲೀಸರು ಕೈವಶ ಮಾಡಿಕೊಂಡಿದ್ದಾರೆ

ಸೌ| ಸರೋಜಿನಿ ನಾಯುಡೂರವರು ತಮ್ಮ ತರುವಾಯ ಕರ್ನಾಟಕದ ಪ್ರಮುಖರಾದ ಶ್ರೀ| ಗಂಗಾಧರರಾವ ದೇಶಪಾಂಡೆಯವರಿಗೆ ಕಾಂಗ್ರೆಸಿನ ಅಧ್ಯಕ್ಷರಾಗಿ ನೇಮಿಸಿರುತ್ತಾರೆ

ಸೋಮವಾರ ಸಂಜೆ ಮುಂಬಯಿಯಲ್ಲಿ ಪ್ರಚಂಡ ಸಭೆ ಸೇರಿ ದಿಲ್ಲಿ ಕಾಂಗ್ರೆಸಿನ ಠರಾವಿಗೆ ಮಾನ್ಯತೆ ಕೊಡಲ್ಪಟ್ಟಿತು ಆನೇ ಯುದ್ಧ ಮಂಡಲದ ಅಧ್ಯಕ್ಷರಾದ ಶ್ರೀ| ಚರಿಭಾಯಿರವರಿಗೂ, ಇತರರಿಗೂ [illegible] ಶಿಕ್ಷೆ ವಿಧಿಸಲಾಯಿತು

ಜಿಲ್ಹಾ ಬೋರ್ಡಿನ ಸಭೆ.

ರಾ| ಬಿಜ್ಜೂರರ ಸ್ವಾರ್ಥಕ್ಕಾಗಿ ಗೋಪಿ-ಬೋರ್ಡಿನ ನೀಚ ತಂತ್ರ!

ಮಿನಿಟ ಬೂಕನ್ನು ಸಹ ತಿದ್ದಿದರು!

[ಕಾರವಾರದ ಸುದ್ದಿಗಾರರಿಂದ]

ತಾ ೩೦-೪-೨೩

ನಿನ್ನೆ ಶುಕ್ರವಾರ ನಡೆದ ಸಭೆ ಈ ಜಿಲ್ಹಾ ಬೋರ್ಡಿನ ಇತಿಹಾಸದಲ್ಲಿ ಚಿರಸ್ಮರಣೀಯವಾದದ್ದು! ಚೀಫ ಆಫೀಸರರಾದ ಮಿ| ಬಿಜ್ಜೂರರ ಪ್ರಕರಣದ ವಿಚಾರಕ್ಕಾಗಿಯೇ ಅಧ್ಯಕ್ಷರಾದ ರಾ| ಗೋಪಿಯವರು ಈ ವಿಶೇಷ ಸಭೆ ಕರೆದಿದ್ದರು. ಸಭಾಸದರಿಗೆಲ್ಲ ಸಿಗತಕ್ಕ ಭತ್ತೆ ರಕಮಿನ ಪರಿವೆ ಸಹ ಹಿಡಿಯಲಿಲ್ಲ! ಮುಖ್ಯವಾಗಿ ತಮ್ಮ ಸಲುವಾಗಿಯೇ ಸಭೆ ಕರೆದಿತ್ತಾಗಿ ಮಿ| ಬಿಜ್ಜೂರರು ಒಪ್ಪಿಕೊಂಡರು. ೬ ತಾಸು ಚರ್ಚೆ ನಡೆದು ಅಂತು ಪ್ರಕರಣದ ನಿಕಾಲಿಯಾಯಿತು. ಬೋರ್ಡಿನ ಖರ್ಚನ್ನು ಕಡಿಮೆ ಮಾಡುವ ದೆಸೆಯಿಂದ, ರಾ| ಬಿಜ್ಜೂರರ ವಯಸ್ಸು ೫೫ಕ್ಕೆ ಈ ಮೊದಲೇ ಮಿಕ್ಕಿ ಹೋದ್ದರಿಂದ, ಎಪ್ರಿಲ್ ೧ನೇ ತಾರೀಖಿನಿಂದ ಇವರನ್ನು ಕಡಿಮೆ ಮಾಡಬೇಕೆಂದು ಬೋರ್ಡಿನಿಂದ ನೇಮಿಸಿದ ರಿಟ್ರೆಂಚಮೆಂಟ ಕಮಿಟಿಯ ಶಿಫಾರಸಿನ ಮೇರೆಗೆ ಡಿಸಂಬರ ೧೬ನೇ ಸಭೆಯಲ್ಲಿ ಠರಾವಾಗಿತ್ತು. ಅಧ್ಯಕ್ಷರಾದ ರಾ| ಗೋಪಿಯವರು ಗುಪ್ತವಾಗಿ ಕಮಿಶನರರಿಗೆ ಬರೆದ ಪತ್ರದ ಕುರಿತು ರಾ| ವಿಶ್ವನಾಥ ಪ್ರಭುಗಳಿಗೂ ಅಧ್ಯಕ್ಷರಿಗೂ ನಡೆದ ಪತ್ರವ್ಯವಹಾರದ ವಿಚಾರವು ಮಾರ್ಚ ೧೧ನೇ ತಾರೀಖಿನ ಸಭೆಯಲ್ಲಿ ನಡೆದು, "ಚೀಫ ಆಫೀಸರರ ೫೫ ವರ್ಷ ಪ್ರಾಯ ಮುಗಿದೊಡನೆ ಇವರು ವೃದ್ಧಿಯಿಂದ ಮೋಕಳೀಕ ಆಗಬೇಕೆಂಬ ರಿಟ್ರೆಂಚಮೆಂಟ ಕಮಿಟಿಯ ಶಿಫಾರಸಿನಂತೆ ಈ ಬೋರ್ಡ ನಿರ್ಣಯ ಮಾಡಿರುವದರಿಂದ ಈ ವಿಷಯವನ್ನು ಪುನಃ ವಿಚಾರ ಮಾಡುವದವಶ್ಯವಿಲ್ಲ' ವಾಗಿ ಪುನಃ ಠರಾವಾಗಿದೆ. ಆದಾಗ್ಯೂ ಈ ವಿಶೇಷ ಸಭೆ ಕರೆಯೋಣಾಗಿತ್ತು, ೩ ತಿಂಗಳ ಮೊದಲು, ವಿಶೇಷ ಸಭೆಯಲ್ಲ ಠರಾವುಗಳ ರದ್ದಾಯಿತಿ ಯಾ ತಿದ್ದುಪಡಿ [*cancel or modify*] ಮಾಡಬರುವದಿಲ್ಲವಾಗಿ ರಾ| ಪ್ರಭುಗಳು ವಾದಿಸಿದರು ಮಾರ್ಚ ೧೧ನೇ ತಾರೀಖಿನ ಠರಾವನ್ನು ನೋಡಲು ಅನೇಕ ಮಂಬರರು ಕುತೂಹಲಪಟ್ಟರು. ಹಿಂದಿನ ಸಭೆಯ ವೃತ್ತಾಂತವನ್ನು ಪೂರ್ಣಮಾಡಲು ಓದಿ ಮಂಜೂರ ಮಾಡುವದು ಬೋರ್ಡಿನ ಈ ವರೇಗಿನ ಸಂಪ್ರದಾಯ; ಆದರೆ ಈ ಸಭೆಯಲ್ಲಿ ಆ ವಿಷಯವಿದ್ದಿಲ್ಲ. ಹೀಗೇಕೆಂದು ಸಭಿಕರ ಪ್ರಶ್ನೆ. ಮಿನಿಟ ಬೂಕ ತೆಗೆದು ನೋಡಿದರೆ, " ಈ ಪ್ರಕರಣ ಕಮಿಶನರ ಸಾಹೇಬರ ವಿಚಾರಣೆಯಲ್ಲಿರುವದರಿಂದ " ಎಂಬ ಶಬ್ದಗಳು ಹೊಸದಾಗಿ ಈ ಠರಾವಿಗೆ ಜೋಡಿಸಿದ್ದು ಕಂಡುಬಂತು ಸಭಿಕರೆಲ್ಲರೂ ದಿಗಿಲು ಬಿದ್ದರು; ಇದು ಭಯಂಕರವೆಂದೂ, ಗುನ್ಹೆಯೆಂದೂ ಮೆಂಬರರು ಉದ್ಗರಿಸಿದರು. ಕಚ್ಚಾ ಟಿಪ್ಪಣಿ, ಪಕ್ಕಾ ಟಿಪ್ಪಣಿ, ಅಸ್ಸಲ ಠರಾವು ಬೂಕುಗಳಲ್ಲೆಲ್ಲ ಈ ಉಪವಾಕ್ಯ ಸೇರಿಸಿದ್ದಿತು ಕಾರಕೂನರ ಜಬಾನಿ ಕೊಳ್ಳಬೇಕು, ಚೀಫ ಆಫೀಸರರ ಹೇಳಿಕೆ ಕೇಳಬೇಕು; ಹೀಗೆ ಕೆಲವರು ಅಭಿಪ್ರಾಯಪಟ್ಟರು ಸಭೆಯ 'ಸೆನ' ಯಾಸೆ ವಿಚಾರವಂದು ತಾವು ಆ ಶಬ್ದಗಳನ್ನು ಹಿಂದಿನಿಂದ ತಾವು ಸೇರಿಸಿದ್ದೇವಾಗಿ ಸ್ವತಃ ಅಧ್ಯಕ್ಷ ರಾ| ಗೋಪಿಯವರೇ ನುಡಿದರು!! ತಾವು ಸಕಾರಣ ಸೇರಿಸಿದ್ದೆವಾಗಿ ಚೀಫ ಆಫೀಸರ ರಾ| ಬಿಜ್ಜೂರರು ಏನೇನೋ ನುಡಿದರು!!! ಸಭಿಕರಿಗೆ ಇದನ್ನು ನೋಡಿ ದಾಗಲವಾಡಿ ಸಂಸ್ಥಾನದಲ್ಲಿ ನಾ ಮುಂದೆ, ನೀ ಮುಂದೆ ಎಂದು ಶೂಲಕ್ಕೇರಹೋದ ಸ್ವಾರ್ಥಿ ಸ್ಥೂಲ ಗುರು-ಶಿಷ್ಯರ ನೆನಪಾಯಿತು! ಹಿಂದಿನ ಸಭೆಯ ಎಲ್ಲ ಠರಾವುಗಳನ್ನು ಓದಬೇಕಾಗಿ ಸಭಿಕರು ಹಟಹಿಡಿದರು. ನಿಯಮಗಳ ಆಧಾರ ತೋರಿಸಿದ ಬಳಿಕ ರಾ| ಗೋಪಿಯವರು ನಿರುಪಾಯದಿಂದ ಒಪ್ಪಿದರು. ಠರಾವುಗಳನ್ನೋದಿದ ಬಳಿಕ, ಗೋಪಿ-ಬಿಜ್ಜೂರರ 'ಸನ್ನ ಹಾಗು ಸಹೇತುಕ ಪುಸ್ತಿ ವಜಾ ಕೀಮು, ವೃತ್ತಾಂತ ಮನ್ನಿಸಬೇಕೆಂದು ರಾ| ಕ್ಯಾಲೊರು ಸೂಚಿಸಿದರು, ರಾ| ರಾಮ ಹೆಗಡೆರು ಅನುಮೋದಿಸಿದರು. ಬೋರ್ಡಿನ ಮನ್ನಣೆ ಪಡೆಯದೆ ಸೇರಿಸಿದ ಉಪವಾಕ್ಯದ ಬಗ್ಗೆ ಕಾರಕೂನ-ಚೀಫ ಆಫೀಸರರ ಜವಾಬು ಪಡೆದು, ಅಧ್ಯಕ್ಷರ ಶರಾ ಕೊಂಡು ಸದರ ಶಬ್ದಗಳನ್ನು ಕಲೆಕ್ಟರ-ಕಮಿಶನರ ಸಾಹೇಬರ ಕಡೆಗೆ ಕಳಿಸಿದ ಠರಾವಿನ ನಕಲುಗಳೊಳಗಿಂದ ತೆಗೆಯುವಂತೆ ಅರಿಕೆ ಬರೆಯಬೇಕಾಗಿ ರಾ| ಪ್ರಭುಗಳವರು ಉಪಸೂಚನೆ ತಂದರು. ಹೀಗೆ ಉಪಸೂಚನೆ ತರಲಾಗುವದಿಲ್ಲವಾಗಿ ರಾ| ರಾಮ ಹೆಗಡೆರು ವಿರೋಧಿಸಿದರು ಉಪಸೂಚನೆ ತಿರಬಿಟ್ಟು ಅಧ್ಯಕ್ಷರು ಹೊತ್ತಿಗೆ ತಕ್ಕ ರೂಪ ಮಾಡಿ ರಾ| ರಾಮ ಹೆಗಡರ ಆತಂಕವನ್ನು ಎತ್ತಿಹಿಡಿದು ಉಪಸೂಚನೆಗೆ ಸಮಾಧಿ ಕೊಟ್ಟರು. ರಾ| ಪ್ರಭುಗಳು ತೋರಿಸಿದ ಕಾಯಿದೆಯ ಆಧಾರಗಳೆಲ್ಲ ನಿರರ್ಥಕವಾದವು. ಹೀಗೆ ರಾ| ಗೋಪಿಯವರು ಮೊದಲನೇ ರೂಲಿಂಗ ಕೊಟ್ಟು ಬೇಗನೆ ಸಭೆ ವಿಸರ್ಜಿಸಿದರು. ಕ್ಯಾಲೊರ ಠರಾವು ಮಂಜೂರಾಯಿತು ಮಧ್ಯಾಹ್ನದ ಸಭೆಯಲ್ಲಿ ರಾ| ಗೋಪಿಯವರು ೨ನೇ ರೂಲಿಂಗ ಕೊಟ್ಟರು ಮಾರ್ಚ ೧೧ನೇ ತಾರೀಖಿನ ಸಭೆಯಲ್ಲಿ ಪಾಸಾದ ಠರಾವು ಠರಾವಲ್ಲವಾಗಿಯೂ, ಡಿಸಂಬರ ೧೬ನೇ ತಾರೀಖಿನ ಸಭೆಯ ಠರಾವಿನ ಚರ್ಚೆಯೇ ಈಗ ನಡೆದಿರುವದಾಗಿಯೂ ಅಭಿಪ್ರಾಯ ಕೊಟ್ಟರು. ರಾ| ಗೋಪಿಯವರ ಕಾಯಿದೆಯ ಪಾಂಡಿತ್ಯ ಕೇಳಿ ಸಭಿಕರು ತಣ್ಣಗಾದರು!! ಆ ಮೇಲೆ ಕಮಿಶನರ ಸಾಹೇಬರ ಕಡೆ ನಡೆದ ಪತ್ರವ್ಯವಹಾರದ ಪ್ರಕರಣವನ್ನು ತರಿಸಿ ವಾಚನಮಾಡಿಸಿದರು. ವಿಚಾರ ವಿಷಯಗಳಲ್ಲಿ ಈ ಪ್ರಕರಣವಿರಲಿಲ್ಲ ರಾ| ದೇವರವರು ಒಂದು ಹೊಸ ಠರಾವನ್ನು ಸೂಚಿಸಿದರು. ಅದೇನೆಂದರೆ— "ಚೀಫ ಆಫೀಸರರಿಗೆ ಈಗ ೫೭ನೇ ವರ್ಷ ನಡೆಯುತ್ತಿದೆ, ನಿಯಮಗಳಂತೆ ಇವರಿಂದ ಸರ್ವಿಸ ಕೆಲಸ ಸಾಗುವದಿಲ್ಲ; ಇದರಿಂದ ಇತ್ತ ೩-೪ ವರ್ಷಗಳಲ್ಲಿ ಸರ್ವಿಸಿನ ಕೆಲಸ ಇವರು ಕಡಿಮೆ ಮಾಡಿದ್ದಾರೆ. ಬೋರ್ಡಿಗೂ, ಸರಕಾರಕ್ಕೂ ಹಣದ ಅಡಚಣೆಯಿರುವದರಿಂದ, ಇವರಿಗಾಗಿ ಹೆಚ್ಚಿನ ಹಣ ಖರ್ಚಾಗುವದರಿಂದ ಕಮಿಶನರರು ಪುನರ್ವಿಚಾರಣೆ ಮಾಡಿ ೬ ತಿಂಗಳ ನೋಟೀಸು ಸಹ ಕೊಡದೆ ಇವರಿಗೆ ಕೆಲಸದಿಂದ ಮುಕ್ತ ಮಾಡಬೇಕು ಬೋರ್ಡಿನ ಅಭಿಪ್ರಾಯವನ್ನು ಕಮಿಶನರರಿಗೆ ತಿಳಿಸಲು ರಾ| ಪ್ರಭು-ಉದ್ಯಾವರರವರಿಗೆ ಬೋರ್ಡಿನ ತಿಸ್ಮರಾಗಿ ಕಳಿಸತಕ್ಕದ್ದು " ಈ ಠರಾವಿಗೆ ಅನುಮೋದನ ದೊರೆಯಿತು ೬ ತಿಂಗಳ ನೋಟೀಸು ಕೊಟ್ಟು ರಾ| ಬಿಜ್ಜೂರರಿಗೆ ಬಿಡುಗಡೆ ಮಾಡಬೇಕಾಗಿ ರಾ| ಕರ್ಕಿಯವರು ತಂದ ಉಪಸೂಚನೆ ಬಿದ್ದುಹೋಯಿತು ಕಮಿಶನರರಿಂದ ನಿರ್ಣಯವಾಗುವ ತನಕ ರಾ| ಬಿಜ್ಜೂರರಿಗೆ ಸಿಗತಕ್ಕ ಪಗಾರಿನ ವಿಷಯವನ್ನು ಇದೀಗಲೇ ನಿರ್ಣಯಿಸಬೇಕಾಗಿ ರಾ| ಕರ್ಕಿಯವರು ತಂದ ೩ನೇ ಸೂಚನೆಗೆ ೩-೪ ಜನರು ಅನುಕೂಲ ಮತಕೊಟ್ಟು, ಉಳಿದವರು ವಿರೋಧಿಸಿದ್ದರಿಂದ ಈ ಸೂಚನೆಯೂ ಬಿದ್ದು ಹೋಯಿತು! ಕೊನೆ ನಿರ್ಣಯವಾದ ಬಳಿಕ, ಪಗಾರಿನ ವಿಚಾರವಾಗತಕ್ಕದ್ದಾಗಿ ಬಹುಮತದ ಅಭಿಪ್ರಾಯವಾಯಿತು. ಉಳಿದ ಚಿಕ್ಕ-ಪುಟ್ಟ ಪ್ರಕರಣಗಳ ವಿಚಾರ ನಾಳೆದು ಸೋಮವಾರಕ್ಕಿಟ್ಟು ರಾ| ಗೋಪಿಯವರು ವಿಶೇಷ ಸಭೆಯನ್ನು ವಿಷಣ್ಣಮನಸ್ಕರಾಗಿ ವಿಸರ್ಜಿಸಿದರು.

—ಮಹಾತ್ಮರು ಯರೋಡಾ ಜೈಲಿನಲ್ಲಿ ವೇದಾಂತ, ಜ್ಯೋತಿಷ ಶಾಸ್ತ್ರ ಹಾಗೂ ಅರ್ಥ ಶಾಸ್ತ್ರ ಇವುಗಳ ಮೇಲಿನ ಗ್ರಂಥಗಳನ್ನು ಅಭ್ಯಾಸ ಮಾಡುತ್ತಿದ್ದಾರೆ.

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.
ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!
ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪಗಳ ಕೂಡಿ
ಮುಖ್ಯ ಆಫೀಸು— ಕೆನಡಾ ಬಿಲ್ಡಿಂಗ, ಹೊರ್ನಬಿ ರೋಡ, ಮುಂಬಯಿ.
ಜನರಲ್ ಮೆನೇಜರು— ನಾ| ಸರ್ ಫಿರೋಜ ಸೇಠನಾ,—ಕೇ. ಟಿ ಓ ಬಿ. ಈ.
೧೯೨೨ನೇ ಇಸ್ವಿಯಲ್ಲಿ ಬಂದ ಹೊಸ ವಿಮೆ ರಕಮು ೧೬.೩ ಕೋಟಿಗೂ ಮಿಕ್ಕಿದೆ
೧೯೨೧ನೇ ಇಸ್ವಿ ಡಿಸಂಬರ ೩೧ನೇ ತಾರೀಖಿಗೆ ಕೂಡಿದ ನಿಧಿ: ೧೬.೩ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಪಡೆದು ಹುರುಪಿನಿಂದ ಹಾಗು ದಕ್ಷತೆಯಿಂದ ನಡೆಯುವವರು
ಮುಡಿಪು ಸುಲಭವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು.
ಕರಾರು ಮೊದಲಾದವುಗಳಿಗಾಗಿ ಪತ್ರವ್ಯವಹಾರ ನಡಿಸುವ ಪತ್ತೆ.—

The District Manager,
Canada Building,
Hornby Road, BOMBAY

OR

Mr. S. B. Rege,
Chief Agent,
171, Civil Lines,
Camp: BELGAUM.

ಅಂತಃಸೂತ್ರಗಳು.

(ನಿರೀಕ್ಷಕನು ಬರೆದದು)

ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರಿಗೂ, ಮಹಾತ್ಮರಿಗೂ ಪತ್ರವ್ಯವಹಾರ ನಡೆದ ವಾರ್ತೆ ನಿಜವಲ್ಲವಾಗಿ ಹೊರಟ ಸರಕಾರಿ ಪ್ರಕಟಣೆಯು ವೃತ್ತವನ್ನು ನಾನು ಈ ಹಿಂದೆ ನಮೂದಿಸಿ ನನಗೆ ನಂಬಿಗೆ ಹುಟ್ಟುವದಿಲ್ಲವಾಗಿ ಬರೆದಿದ್ದೆ. ಇದಕ್ಕೆ ಇನ್ನೊಂದು ಆಧಾರ ದೊರಕಿದೆ. ಮದ್ರಾಸದ 'ಹಿಂದು' ಪತ್ರಿಕೆಯ ಮುಂಬಯಿಯ ಸುದ್ದಿಗಾರರು ಒಂದು ಅನುಮಾನ ಪ್ರಕಟಿಸಿದ್ದಾರೆ. ಪ್ರಧಾನ ಮಂಡಳಕ್ಕೆ ಇಲ್ಲಿಯ ವಸ್ತುಸ್ಥಿತಿ ತಿಳಿದಿರಲಿಲ್ಲ. ಇಲ್ಲಿಂದ ಲಂಡನಿಗೆ ಹೋದ ಪ್ರಮುಖರೊಡನೆ ಇಲ್ಲಿಯ ಪ್ರಮುಖರು ಮಾತನಾಡಿದರಾಗಿಯೂ, ವಸ್ತುಸ್ಥಿತಿ ತಿಳಿದುಕೊಂಡು ವಿಚಾರಗ್ರಸ್ತರಾಗಿರುವರಾಗಿಯೂ ವಾರ್ತೆ. ಪ್ರಧಾನ ಮಂಡಳವು ವ್ಯಗ್ರವಾಗಿದೆ. ಧೋರಣವನ್ನು ಬದಲಿಸುವ ವಿಚಾರ ನಡೆದಿದೆ. 'ಹಿಂದು' ಪತ್ರಿಕೆಯ ಸುದ್ದಿಗಾರರು ಮುಂಬಯಿಯೊಳಗಿನ ಕೆಲ ಒಳ್ಳೆಯ ಪ್ರಮುಖರೊಡನೆ ಆಲೋಚಿಸಿದರಂತೆ. ಇವರಲ್ಲಿ ಕೆಲವರು ಸರಕಾರಿ ಅಂತರಂಗ ಬಲ್ಲವರು. ಭಾರತ ಮಂತ್ರಿಗಳಿಗೂ, ಇತರ ಎಲ್ಲ ಪ್ರಧಾನರಿಗೂ, ಮಹಾತ್ಮರಿಗೂ ಪತ್ರವ್ಯವಹಾರ ನಡೆದಿರುತ್ತದಾಗಿ ಅವರು ಹೇಳಿದರಂತೆ. ಮಹಾತ್ಮರಿಗೆ [illegible] ನೋವು, ಒರಗಲು ಕಷ್ಟವಾಗುತ್ತದೆ, ಎತ್ತರದಿಂದ ಒರಗಬೇಕಾಗುತ್ತದೆ. ಇದಕ್ಕಾಗಿ ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವ ಭಾಯಿಯವರಿಗೆ ಯೆರವಡಾ ಜೈಲಿನಲ್ಲಿ ಮಹಾತ್ಮರ ಬಳಿ ಇರಗೊಟ್ಟಿದ್ದಾರೆ. ಸರದಾರ ವಲ್ಲಭಭಾಯಿಯವರಿಗೂ ಮಹಾತ್ಮರ ಕೋಣೆಯಲ್ಲಿಯೇ ಉಳಿಯಗೊಟ್ಟಿದ್ದಾರೆ. ಇದೆಲ್ಲದರ ಮೇಲಿಂದ ಇತ್ತೀಚಿನಲ್ಲಿ ಪತ್ರವ್ಯವಹಾರ ನಡೆದಿರಬೇಕೆಂಬದಾಗಿ ಸುದ್ದಿಗಾರರ ತರ್ಕ.

ವಸ್ತುಸ್ಥಿತಿ ತಿಳಿಯಗೊಡದಂತೆ ಇಲ್ಲಿಯ ಅಧಿಕಾರಿಗಳು ಜಾಗರೂಕರಾಗಿದ್ದಾರೆಂಬದಾಗಿ ನಾನು ಸಾಮಾನ್ಯ ವಿಧಾನ ಮಾಡಿದ್ದೆ. ಅದಕ್ಕೆ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯು ಒಂದು ಸಂಗತಿಯನ್ನು ಪ್ರಕಟಿಸಿ ಆಧಾರ ಕೊಟ್ಟಿದೆ. ಲೋಧಿಯನ್ ದೊರೆಗಳು ಬ್ರಿಟಿಶ ಪ್ರಧಾನ ಮಂಡಳದ ಪ್ರತಿನಿಧಿಗಳೆಂದು ನಾನು ನಿಸ್ಸಂದೇಹವಾಗಿ ಹೇಳಬಲ್ಲೆ. ಪ್ರಧಾನ ಮಂಡಳದ ಮುಂದಿನ ರಾಜ್ಯಧೋರಣವೆಲ್ಲ ಬಹುತರವಾಗಿ ಲೋಧಿಯನ್ ದೊರೆಗಳ ಅಭಿಪ್ರಾಯದ ಮೇಲೆಯೇ ಅವಲಂಬಿಸಿದೆ. ಲೋಧಿಯನ್ ದೊರೆಗಳು ವಿಲಾಯತಿಗೆ ಹೋದನಂತರ ನಿಶ್ಚಿತ ನಿರ್ಣಯವಾಗದೆಂದು ನಾನು ಎಣಿಸುತ್ತೇನೆ. ಅಧಿಕಾರಿಗಳಾದರೂ ಹಾಗೆಯೇ ಭ್ರಮಿಸಿದ್ದಾರೆ. ಆದರಿಂದ ಲೋಧಿಯನ್ ದೊರೆಗಳಿಗೆ ಅವರು ನಾಲ್ಕೂ ಬದಿಯಿಂದ ಕಾಯುತ್ತಾರೆ. ಮುಂಬಯಿಯಲ್ಲಿ ಲೋಧಿಯನ್ ದೊರೆಗಳ ಮುಕ್ಕಾಮವಾಗಿತ್ತು. ಲೋಧಿಯನ್ ದೊರೆಗಳಿಗೆ ಅಧಿಕಾರಿಗಳು ಅತ್ತಿತ್ತ ಸರಿದಾಡಗೊಡಲಿಲ್ಲ. ಅಧಿಕಾರಿಗಳ ಸಂಕಲ್ಪದಂತೆ ಮಹಾನುಭಾವರು ಭೆಟ್ಟಿಯಾಗಬೇಕು. ಔತಣ, ಮೇಜವಾನಿ ಮೊದಲಾದ ಸಮಾರಂಭಗಳೆಲ್ಲ ಅಧಿಕಾರಿಗಳ [illegible] ನಡೆಯಬೇಕು. [illegible] ಒಬ್ಬನು ಸಂಧಿ ಸಾಧಿಸಿ ದೊರೆಗಳಿಗೆ ಮುಂಬಯಿಯ ವಸ್ತುಸ್ಥಿತಿ ತಿಳಿಸಿದನು. ಇದನ್ನು ಕೇಳಿ ದೊರೆಗಳು ಆಶ್ಚರ್ಯಗೊಂಡರು. ಮುಂಬಯಿಯಲ್ಲಿ ಹಲವು ಯುರೋಪಿಯನ್‌ರು ಕಾಂಗ್ರೆಸಿಗೆ ಸಹಾನುಭೂತಿ ತೋರಿಸುತ್ತಾರೆ. ಅವರಲ್ಲೊಬ್ಬರ ಗೆಳೆಯರು ಈ ಲೋಧಿಯನ್ ಕಮೀಟಿಯ ಸಭಾಸದರಂತೆ. ಉಪಾಯದಿಂದ ಅವರಿಗೆ ಯುರೋಪಿಯನ್ ಗೆಳೆಯರು ತಮ್ಮಲ್ಲಿ ಊಟಕ್ಕೆ ಕರೆತಂದು ಮುಂಬಯಿಯೊಳಗಿನ ಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ವರ್ಣಿಸಿದರು. ಇದನ್ನು ಕೇಳಿ ಅತಿಥಿ ಸಭಾಸದರು ವಿಸ್ಮಯಗೊಂಡರು. "ನಿಮ್ಮಂಥ ಯುರೋಪಿಯನ್‌ರ ಬಾಯಿಯಿಂದ ಈ ಮಾತು ಕೇಳಿ ನಾನು ಚಕಿತನಾಗಿದ್ದೇನೆ, ನಮಗೆ ಅನೇಕ ಹಿಂದೀಯರು ಭೆಟ್ಟಿಯಾಗಿದ್ದಾರೆ, ಅವರ್ಯಾರೂ ಇಂಥ ಭಯಂಕರ ಸಂಗತಿಗಳನ್ನು ಹೇಳಲಿಲ್ಲ, ಅವರೆಲ್ಲರೂ ಸರಕಾರವನ್ನು ಹೊಗಳಿದರು, ಮತ್ತು ಹಿಂದುಸ್ಥಾನದಲ್ಲೆಲ್ಲ ಸಮಾಧಾನವಿದೆಯೆಂದು ಉದ್ಗರಿಸಿದರು!" ಹೀಗೆ ಅತಿಥಿ ಸಭಾಸದರು ತಮ್ಮ ಯುರೋಪಿಯನ್ ಗೆಳೆಯರೊಡನೆ ಆಡಿದ ಮಾತುಗಳ ಮೇಲಿಂದ ಅಧಿಕಾರಿಗಳು ಲೋಧಿಯನ್ ಮಂಡಳದ ಮೇಲಿಟ್ಟ ಕಠಿಣ ಕಾವಲಿನ ಸ್ವರೂಪ ಗೊತ್ತಾಗುತ್ತದೆ. ಸತ್ಯಕ್ಕೆ ಸಾವಿಲ್ಲವೆಂಬ ತತ್ವದಂತೆ ವಸ್ತುಸ್ಥಿತಿ ಲೋಧಿಯನ್ ಮಂಡಳಕ್ಕೆ ಒಂದಿಲ್ಲೊಂದು ಉಪಾಯದಿಂದ ತಿಳಿಯುತ್ತಿದೆ. ಯುರೋಪಿಯನ್‌ರೇ ತಿಳಿಸುತ್ತಿದ್ದಾರೆ. ಈ ಮಾತನ್ನು ನಮೂದಿಸಲು ನನಗೆ ಸಮಾಧಾನವಾಗುತ್ತದೆ.

ಪ್ರಧಾನ ಮಂಡಳದ ಮನೋಭಾವ ಬದಲಾಗುವದಿಲ್ಲವೆಂಬದಾಗಿ ನಾನು ಬರೆದಿದ್ದೆ, ಭಾರತ ಮಂತ್ರಿಗಳು ವಿಚಾರಮಗ್ನರಾಗಿರಬೇಕೆಂದೂ ನಾನು ಬರೆದಿದ್ದೆ. ನಿಷ್ಠುರತನದಿಂದ ದಬ್ಬಾಳಿಕೆ ನಡೆಸಿ, ಸಾವಿರಾರು ಪ್ರಮುಖರನ್ನು ಹಿಡಿಹಿಡಿದು ಸೆರೆಮನೆಗೆ ತಳ್ಳಿದಾಗ್ಯೂ, ರಾಷ್ಟ್ರೀಯ ಸಭೆಯ ಕಾರ್ಯಕ್ರಮವು ಅಪ್ರತಿಹತವಾಗಿ ನಡೆದಿದೆ. ಮೊನ್ನೆ ಜಾಲಿಯನವಾಲಾಬಾಗದಿನ ಅಂಗಡಿ ಮುಚ್ಚಿದ ಬಗ್ಗೆ [illegible] ವರ್ತಕರಿಗೆ ಸೆರೆಹಿಡಿದು ಮುಂಬಯಿಯಲ್ಲಿ ಖಟ್ಲೆಯ ವಿಚಾರ ನಡೆದಿದೆ. ಆ ಖಟ್ಲೆಯಲ್ಲಿ ಪೋಲೀಸ ಅಧಿಕಾರಿಗಳ ಜಬಾನಿಯಾಯಿತು. "ಕಾಂಗ್ರೆಸು ಬೇಕಾಯಿದೇಶೀರ ಆಯಿತು, ಕಾಂಗ್ರೆಸ ಬುಲೆಟಿನ್ ಹೊರಡಿಸಬಾರದಾಗಿಯೂ, ಹರತಾಳ ಮಾಡಬಾರದಾಗಿಯೂ ಹುಕುಮುಗಳು ಹೊರಟವು. ಕಾಂಗ್ರೆಸ ಆಜ್ಞೆಯಂತೆ ನಡೆವವರಿಗೆ ಶಿಕ್ಷೆಯಾಗುತ್ತದೆ, ಆದಾಗ್ಯೂ, ಬುಲೆಟಿನ್ ತಪ್ಪದೆ ದಿನಾ ಹೊರಡುತ್ತದೆ, ಹರತಾಳ ಮಾಡುತ್ತಾರೆ, ಒಮ್ಮೆ ನೇಮಿಸಿದ ಕಾರ್ಯಕ್ರಮದಂತೆ ಜನರು ವರ್ತಿಸುತ್ತಾರೆ, ಪೋಲೀಸರ ಹುಕುಮುಗಳು ಮನ್ನಿಸಲ್ಪಡುವದಿಲ್ಲ" ಹೀಗೆ ಪೋಲೀಸ ಅಧಿಕಾರಿಗಳೇ ಜಬಾನಿ ಕೊಟ್ಟರು. ಈ ಪ್ರಕಾರದ ನಿದರ್ಶನದಿಂದ ಭಾರತ ಮಂತ್ರಿಗಳು ವಿಚಾರಮಗ್ನರಾಗಬೇಕು. ಇಲ್ಲದಿದ್ದರೆ, 'ಕಾಂಗ್ರೆಸ ಸಂಸ್ಥೆ'ಯನ್ನು ಬೇಕಾಯಿದೇಶೀರ ಅಲ್ಲವಾಗಿ ಅವರು ಕಳೆದ ಸೋಮವಾರ ಪಾರ್ಲಿಮೆಂಟಿನಲ್ಲಿ ಸಾರುತ್ತಿರಲಿಲ್ಲ. "ಕಾಂಗ್ರೆಸ ಸಂಸ್ಥೆ ಬೇಕಾಯಿದೇಶೀರ ಸಂಸ್ಥೆಯಲ್ಲ, ಅದು ಬೇಕಾಯಿದೇಶೀರ ಎಂದು ಜಾಹೀರನಾಮೆ ಹೊರಟಿಲ್ಲ, ಕಾಂಗ್ರೆಸಿಗೆ ಒಪ್ಪಿದ ಬೇರೆ ಬೇರೆ ಸ್ಥಳಿಕ ಸಂಸ್ಥೆಗಳು ಮಾತ್ರ ಬೇಕಾಯಿದೇಶೀರ ಎಂದು ಜಾಹೀರಾಗಿವೆ. ದಿಲ್ಲಿಯೊಳಗಿನ ಸಭೆ ಬೇಕಾಯಿದೇಶೀರ ಚಳವಳಿಗೆ ಪ್ರೋತ್ಸಾಹ ಕೊಡುವದಾಗಿದ್ದರಿಂದ ಅದು ಪ್ರತಿಬಂಧಿಸಲ್ಪಟ್ಟಿತು" ಈ ಪ್ರಕಾರ ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರು ಕೂಲಿಕಾರ ಪಕ್ಷದ ಮಿ| ಮೋರ್ಗನ್ ಜೋನ್ಸರವರಿಗೆ ಉತ್ತರ ಕೊಟ್ಟಿದ್ದಾರೆ. ಇದರ ಅರ್ಥ ಸ್ವತಃ ಭಾರತ ಮಂತ್ರಿಗಳಿಗೆ ತಿಳಿದದಾಗಿ ನಾನೆಣಿಸುವದಿಲ್ಲ. ಕಾಂಗ್ರೆಸಿನ ಸಂಪರ್ಕವಿದ್ದ ಖಾನಾವಳಿ—[illegible]ಗಳು ಸಹ ಬೇಕಾಯಿದೇಶೀರ ಆಗಿವೆ. ಇಂಥ ಪ್ರಸಕ್ತಿಯಲ್ಲಿ ಕಾಂಗ್ರೆಸಿಗೊಪ್ಪಿದ ಬೇರೆ ಬೇರೆ ಸಂಸ್ಥೆಗಳೂ ಬೇಕಾಯಿದೇಶೀರ ಆಗಿರುವವಾಗಿ ಹೇಳಿ ವಸ್ತುಸ್ಥಿತಿಯನ್ನು ಹೋರರವರು ಯಾಕೆ ಮುಚ್ಚಿಡುತ್ತಾರೆ? ಕಾಂಗ್ರೆಸು ಬೇಕಾಯಿದೇಶೀರ ಅಲ್ಲವೆಂದು ಯಾಕೆ ಹೇಳುತ್ತಾರೆ? ಕಾಂಗ್ರೆಸಿನ ಸರ್ವಾಧಿಕಾರಿ ಸಂಸ್ಥೆಯಾದ ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯು ಇನ್ನೂ ಯಾಕೆ ಬೇಕಾಯಿದೇಶೀರ ಆಗುವದಿಲ್ಲ? ಈ ಪ್ರಶ್ನೆಗಳಿಗೆ ಸಮಾಧಾನಕಾರಕ ಉತ್ತರ ಸಿಗಲೊಲ್ಲದು. ಭಾರತ ಮಂತ್ರಿಗಳು ದಬ್ಬಾಳಿಕೆಯಿಂದ ರಾಷ್ಟ್ರೀಯ ಸಭೆಯನ್ನು ದಬ್ಬಲು ಅಸಾಧ್ಯವೆಂದು ಗ್ರಹಿಸಿದ್ದಾರೆಂದು ನಾನೆಣಿಸುತ್ತೇನೆ. ಕಾಂಗ್ರೆಸು ಭಾರತೀಯ ಲೋಕಪ್ರತಿನಿಧಿ ಸಂಸ್ಥೆ. ಅದನ್ನು ಬೇಕಾಯಿದೇಶೀರ ಮಾಡಲು ಭಾರತ ಮಂತ್ರಿಗಳಿಗೆ ಧೈರ್ಯ ಸಾಲದು. ಕೈ ತಡೆಯುವದುಚಿತವೆಂದು ಈಗೀಗ ಅವರಿಗೆ ಹೊಳೆಯಹತ್ತಿದ್ದರ ಲಕ್ಷಣವಿದೆಂದು ನನ್ನ ಊಹೆ. ಅಂತು ಪೂರ್ವ ಸಂಕೇತದಂತೆ ಬ್ರಿಟಿಶ ಪ್ರಧಾನ ಮಂಡಳದ ಸುಧಾರಣೆಯ ಕಾರ್ಯಕ್ರಮ ನಡೆಯದೆಂಬ ಮಾತು ನಿಜ. ಅದು ಬದಲುವದು, ಬದಲಲೇಬೇಕು.

'ಮುಂಬಯಿ ಕ್ರಾನಿಕಲ್' ಪತ್ರಿಕಾಕರ್ತರೂ, 'ಫ್ರೀ ಪ್ರೆಸ್' ಪತ್ರಕಾರರೂ ಸಂಯುಕ್ತ ರಾಜ್ಯ ಪದ್ಧತಿಯ ಸ್ಥಾಪನೆಯ ವಿಚಾರವನ್ನು ಪ್ರಧಾನ ಮಂಡಳವು ಇಂದಿನ ಮಟ್ಟಿಗೆ ತೊರೆದಿರುವದಾಗಿ ಪ್ರಕಟಿಸುತ್ತಾರೆ. ಸಂಯುಕ್ತ ರಾಜ್ಯಪದ್ಧತಿಯೆಂದರೆ ಸಂಸ್ಥಾನಗಳಿಗೆ ಸಹ ಸೇರಿಸಿಕೊಂಡು ಇಡೀ ಭರತ ಭೂಮಿಗೆ ಒಂದೇ ಒಂದು ರಾಜ್ಯಘಟನೆಯನ್ನು ತಯಾರಿಸುವದು. ಈ ರಾಜ್ಯಪದ್ಧತಿಗಾಗಿ ಬಹು ದೊಡ್ಡ [illegible] ನಡೆದಿತ್ತು, ಸಂಸ್ಥಾನಿಕರಿಗೆ, ಅವರ ಪ್ರತಿನಿಧಿಗಳಿಗೆ ಲಂಡನಿಗೆ ಕರೆದೊಯ್ದು ಸಾಮ್ರಾಜ್ಯ ಮಂಡಳವು ದೀರ್ಘ ವಿಚಾರ ನಡೆಸಿತ್ತು, ಸಂಸ್ಥಾನಿಕರಿಗೆ ಮನವೊಲಿಸುವ ಬಹು ದೊಡ್ಡ ಪ್ರಯತ್ನ ನಡೆದಿತ್ತು. ಈಗ ಅದೆಲ್ಲ ಬಯಲಾಯಿತು. "ಈ ರಾಜ್ಯಪದ್ಧತಿ ಸಂಕೀರ್ಣವಾದದ್ದು, ಕೂಟಸ್ಥಳಗಳನೇಕವಿವೆ" ಹೀಗೆ ಪ್ರಧಾನ ಮಂಡಳದ ಕಲ್ಪನೆಯಾಗಿರುವದಂತೆ. ಫೆಡರೇಶನ್ ಯಾನೆ ಸಂಯುಕ್ತ ರಾಜ್ಯ ಪದ್ಧತಿಯ ತತ್ವಕ್ಕಾಗಿ ನಡೆದ ಜಗ್ಗಾಟವನ್ನರಿತವರಿಗೆ ಇದನ್ನು ಕೇಳಿ ಪರಮಾಶ್ಚರ್ಯವಾಗಿದೆ. ಸಾಮ್ರಾಜ್ಯಕರ್ತರು ಜೂನ ತಿಂಗಳಿನಲ್ಲಿ ಹಿಂದುಸ್ಥಾನ ಸರಕಾರದ ಕಾಯಿದೆಯನ್ನು ತಿದ್ದುಪಡಿ ಮಾಡುವರು, ಪ್ರಾಂತಾಧಿಕಾರವನ್ನು ಸಂಪೂರ್ಣವಾಗಿ ಪ್ರಾಂತಿಕ ಕಾಯಿದೆ ಕೌನ್ಸಿಲುಗಳಿಗೊಪ್ಪಿಸುವರು, ಹಿಂದುಸ್ಥಾನ ಸರಕಾರದಲ್ಲಿ ಕೆಲ ಖಾತೆಗಳನ್ನು ಲೋಕಪ್ರತಿನಿಧಿಗಳಿಗೊಪ್ಪಿಸುವರು. ಸೈನ್ಯ, ಪರರಾಷ್ಟ್ರೀಯ ಸಂಬಂಧ, [illegible] ಅಧಿಕಾರ ಮೊದಲಾದ ಮುಖ್ಯ ಖಾತೆಗಳು ಮಾತ್ರ ಈಗಿನಂತೆ ಮುಂದೆಯೂ ಅಧಿಕಾರಿಗಳ ಸ್ವಾಧೀನವಿರುವವು, ಅವುಗಳ ಮೇಲೆ ಲೋಕಪ್ರತಿನಿಧಿಗಳ ಹಿಡಿತವಿರಲಿಕ್ಕಿಲ್ಲ. ಮಳೆಗಾಲದಲ್ಲಿಯೇ ಈ ತಿದ್ದುಪಡಿ ಮಂಜೂರಾಗುವದು. ಈ ವಾರ್ತೆಯನ್ನು ಸತ್ಯ

ಕರ್ತರು ಒ.ಸೂತ್ರ ಒಪ್ಪಿದ ಸಂಬಿಗಸ್ತರ ಕಡೆಯಿಂದ ತಾವು ಸಂಗ್ರಹಿಸಿದ್ದಾಗಿ ಸಮೂದಿಸುತ್ತಾರೆ ಮೂಲ ಯೋಜನೆ ಈಗ ಒದಲಹತ್ತಿದೆಂದು ನಾನು ಈ ಮುಂಚೆ ಹೇಳಿದ್ದಕ್ಕೆ ಇದೊಂದು ಆಧಾರ. ಹೋರಿರಿವರು ಮುಖ್ಯಮುಖ್ಯ ಪಾತೆಗಳನ್ನು ಕಾದಿಟ್ಟುಕೊಳ್ಳಬಯಸುತ್ತಿದ್ದಾಗ್ಯೂ, ಅವನ್ನಾದರೂ ಎಷ್ಟರ ಮಟ್ಟಿಗೆ ಕಾಯ್ದುಕೊಳ್ಳುವರೆಂದು ಇದೀಗಲೇ ನಾನು ಹೇಳಲಾರೆ ಯಾಕಂದರೆ, ಮಹಾತ್ಮರಿಗೂ ಭಾರತ ಮಂತ್ರಿಗಳಾದಿ ಪ್ರಧಾನರಿಗೂ ನಡೆಯುತ್ತಿದ್ದ ಪತ್ರವ್ಯವಹಾರದಲ್ಲಿ ಈ ಎಲ್ಲ ವಿವರಗಳು ನಿಶ್ಚಯವಾಗುವವು ಜೂನ ತಿಂಗಳು ಬಂದ ಹಾಗೆಯೇ, ಅಷ್ಟರೊಳಗ ಸಾಮಾನ್ಯವಾಗಿ ಕೊಂಗ್ರೆಸ ಪ್ರಮುಖರ ಒಪ್ಪಿಗೆ ಪಡದರೆ, ಹೊಸ ಯೋಜನೆ ಯಶಸ್ವಿಯಾಗುವಂತಿದೆ ದಿಲ್ಲಿ ಕೊಂಗ್ರೆಸನ್ನು ಸರಕಾರವು ಪ್ರತಿಬಂಧಿಸಿದ್ದರ ಮೇಲಿಂದ ಯಾವ ಅನುಮಾನವೂ ಹೊರಡುವದಿಲ್ಲ ಯಾಕಂದರೆ, 'ಲಂಡನ್ ಟ್ಯಾಯ್ಮ್ಸ' ಪತ್ರಿಕೆಯ ಸುದ್ದಿಗಾರರು ಬರೆದಂತೆ, ಕೊಂಗ್ರೆಸಿನ ನಾಯಕರಾದ ಮಹಾತ್ಮರೂ, ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹಿರಲಾಲ ನೆಹರೂ ಮೊದಲಾದ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರೂ ಜೈಲಿನಲ್ಲಿರುವಾಗ ಕೊಂಗ್ರೆಸ ಅಧಿವೇಶನದಿಂದ ಈಗಿನ ಚಳವಳಿಯ ದಿಕ್ಕು ಬದಲುವ ಆಶೆ ಇರಲಿಲ್ಲ. ಸತ್ಯಾಗ್ರಹದ್ದೇ ಪುರಸ್ಕಾರವಾಗುವದು, ಸರಕಾರವು ಇದಕ್ಕೆ ಪ್ರತಿಬಂಧಿಸದಿದ್ದರೆ, ಸರಕಾರದ ನಡಾವಳಿಯು ಸುಸಂಗತವಾಗದು; ವಿಸಂಗತವಾಗುವದು, ಆದರಿಂದ ಅದಕ್ಕೆ ಪ್ರತಿಬಂಧಿಸಬೇಕಾಯಿತೆಂದು 'ಲಂಡನ್ ಟ್ಯಾಯ್ಮ್ಸ' ಪತ್ರಿಕೆಯ ಸುದ್ದಿಗಾರರ ಅಂಬೋಣ ನನಗೀ ಮಾತು ಒಪ್ಪಿಗೆ. ಸದರ ಸುದ್ದಿಗಾರರು ಅಧಿಕಾರಿಗಳ ಒಳಗುಟ್ಟು ಬಲ್ಲವರೆಂದು ಯಾರೂ ಹೇಳುವರು ಮುಖ್ಯ ನಿರ್ಣಯಗಾರರು ಮಹಾತ್ಮರೆಂದು ಕೊಂಗ್ರೆಸಿನ ಅಧ್ಯಕ್ಷರಾದ ಶ್ರೀ| ಸರೋಜಿನಿಯವರೂ, ಪಂಡಿತ ಮದನ ಮೋಹನ ಮಾಲವೀಯರವರೂ ನುಡಿದಿರುತ್ತಾರೆ ಮಹಾತ್ಮರ ಕಡೆ ನಡೆಯುತ್ತಿದ್ದ ಪತ್ರವ್ಯವಹಾರದ ಮೇಲಿಂದ ಮುಂದಿನ ರಾಜ್ಯಘಟನೆಯ ಪ್ರಾಣಪ್ರತಿಷ್ಠೆಯಾಗುವದಾಗಿ ನಾನು ಎಣಿಸುತ್ತೇನೆ ಪತ್ರವ್ಯವಹಾರದ ಸ್ವರೂಪ ನನಗೆ ಗೊತ್ತಾಗದು ಅದೊಂದು ಅನುಮಾನದ ವಿಷಯ ಆದಾಗ್ಯೂ, ಮುಂದಿನ ರಾಜ್ಯಘಟನೆಯ ಸ್ವರೂಪವೇ ಚರ್ಚಿಸಲ್ಪಡುತ್ತದಾಗಿ ನನ್ನದೊಂದು ಎಣಿಕೆ

ಸಂಯುಕ್ತ ರಾಜ್ಯಪದ್ಧತಿಯ ವಿಚಾರ ತೂರಿದದ್ದರಿಂದ ನಮಗೊಂದು ಲಾಭ. ಇಲ್ಲದಿದ್ದರೆ ಮಟ್ಟಿನ ಮಟ್ಟಿಗೆ ಸಂಸ್ಥಾನಿಕರು ನಮಗೆ ಅಡ್ಡಗಟ್ಟುತ್ತಿದ್ದರು. ಇದಕ್ಕೆ ರೌಂಡ ಟೇಬಲಿನ ಇತಿಹಾಸವೇ ಸಾಕ್ಷಿ. ಸಂಸ್ಥಾನಿಕರು ಪ್ರತ್ಯೇಕರಾದ್ದರಿಂದ ನಮ್ಮ ಬ್ರಿಟಿಶ ಹಿಂದುಸ್ಥಾನದ ರಾಜ್ಯಭಾರದ ಪ್ರಶ್ನೆಯನ್ನು ಸ್ವತಂತ್ರವಾಗಿ ವಿಚಾರಿಸಲು ಅಷ್ಟರಮಟ್ಟಿಗೆ ಅನುಕೂಲವಾಗಿದೆ ನಮ್ಮ ಕೊರಳಸುತ್ತಿನ ಒಂದು ಕುಣಿಕೇ ಹೋಯಿತು.

ಇನ್ನು ಕೆಲ ದಿನಗಳಲ್ಲಿ ಬಂಗಾಲದ ಹೊಸ ಗವ್ಹರ್ನರರಾದ ಸರ್ ಜ್ಹೋನ ಎಂಡರಸನ್‌ರವರು ದಾರ್ಜಿಲಿಂಗದಿಂದ ಸಿಮ್ಲಾ ಪಟ್ಟಣಕ್ಕೆ ಹೋಗಿ ಸರ್ವಾಧಿಪತಿ ವಿಲಿಂಗಡನ್ ದೊರೆಗಳವರೊಡನೆ ಸಮಕ್ಷ ಮಾತನಾಡುವವರಿದ್ದಾರಾಗಿ ಪ್ರಕಟವಾಗಿದೆ ೩-೪ ದಿನಗಳ ತನಕ ಮಾತನಾಡುವರಂತೆ. ಮಹತ್ವದ ವಿಷಯಗಳ ಚರ್ಚೆಯಾಗುವದಾಗಿ 'ಎಸೋಸಿಯೇಟೆಡ್ ಪ್ರೆಸ್'ನ ದಾರ್ಜಿಲಿಂಗದ ಬಾತ್ಮೀದಾರರು ಬರೆಯುತ್ತಾರೆ 'ಎಸೋಸಿಯೇಟೆಡ್ ಪ್ರೆಸ್,' ಸಂಸ್ಥೆಯು ಸಾಮಾನ್ಯವಾಗಿ ಸರಕಾರಿ ಪಕ್ಷದ್ದೆಂದು ಹೇಳಬಹುದು ಬಂಗಾಲ ಗವ್ಹರ್ನರರ ಮುಕ್ಕಾಮು ಈಗ ದಾರ್ಜಿಲಿಂಗದಲ್ಲೇ ಉಂಟು ಸರ್ ಜ್ಹೋನ್ ಎಂಡರಸನ್‌ರವರು ಭಾರತ ಮಂತ್ರಿಗಳ ನಂಬಿಗಸ್ತ ಪ್ರತಿನಿಧಿಗಳೆಂದು ಎಲ್ಲರಿಗೂ ಗೊತ್ತಿದ್ದ ಸಂಗತಿ ಇಂಥವರು ಮಹತ್ವದ ವಿಷಯ ಚರ್ಚೆ ಮಾಡಹೋಗುವದರಲ್ಲಿ ಅರ್ಥವಿದೆ. ಸರ್ವಾಧಿಪತಿ ವಿಲಿಂಗಡನ್ ದೊರೆಗಳ ದೃಷ್ಟಿಕೋನ ಬದಲುವ ಸ್ಥಿತಿಯಲ್ಲಿದೆ ನೇಮಸ್ತರು ಕೊಂಗ್ರೆಸಿಗೆ ಎದುರಾಳಿಗಳಾಗಿ ಸರಕಾರದೊಡನೆ ಸಹಕಾರ ಮಾಡುವರೆಂದು ವಿಲಿಂಗಡನ್ ದೊರೆಗಳು ಎಣಿಸಿದ್ದರು, ಅದು ಕೈಗೂಡದ್ದರಿಂದ ವಿಲಿಂಗಡನ್ ದೊರೆಗಳು ಮುಂದೇನು ಮಾಡಬೇಕೆಂಬ ಆಲೋಚನೆಯಲ್ಲಿದ್ದಾರೆ ಮಹಾತ್ಮರಿಗೂ, ಪ್ರಧಾನ ಮಂಡಳಕ್ಕೂ ನಡದ ಪತ್ರವ್ಯವಹಾರದ ವಿಷಯ ಹಿಂದುಸ್ಥಾನ ಸರಕಾರಕ್ಕೆ ಅಭಿಪ್ರಾಯ ಕೇಳಬೇಕು, ಆ ಆಲೋಚನೆಗಾಗಿ ಸರ್ ಜ್ಹೋನ್ ಎಂಡರಸನ್‌ರವರಿಗೆ ಕರದಿರಬೇಕು, ಹೀಗೆ ನನ್ನ ಎಣಿಕೆ ಇದೇ ಸಮಯ ಶ್ರೀ| ಸರೋಜಿನಿ ನಾಯಡೂರವರಿಗೆ ಮುಂಬಯಿಯೊಳಗಿನ ಆರ್ಥರ ರೋಡ ಜೈಲಿನಿಂದ ಯೆರವಡಾ ಜೈಲಿಗ ವರ್ಗವಾದ ವರ್ತಮಾನ ಬಂದಿದೆ ಈ ಸೂತ್ರಗಳೆಲ್ಲ ಯಾವದೊಂದು ಧೋರಣದಿಂದ ಓಡ್ಯಾಡುತ್ತಿರಬೇಕಾಗಿ ಗ್ರಹಿಸಲು ವಿಶೇಷ ಚಾತುರ್ಯ ಬೇಕೆಂತಿಲ್ಲ ಜ ಮಾರಣವ್ಯಾಪ್ತದಿಂದು ಜನರು ತಿಳಕೊಳ್ಳಲಾರರೇ?

ಸತ್ಯಾಗ್ರಹದ ವಾರ್ತೆ.

— ದಿಲ್ಲಿಯಲ್ಲಿ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರೂ, ಪೋಲಿಸರೂ ಬಹಳ ಗೊಂದಲದಲ್ಲಿ ಬಿದ್ದಿದ್ದಾರೆ. ಕೊಂಗ್ರೆಸ ಅಧಿವೇಶನದ ಪ್ರೀತ್ಯರ್ಥ ಕಳೆದ ಬುಧವಾರ ತಾರೀಖು ೨೭ನೇ ತನಕ ಸುಮಾರು ೮೦೦ ಜನರಿಗೆ ಸೆರೆಹಿಡಿದಿಟ್ಟಿದ್ದಾರೆ. "ಇವರಿಗೆ ವ್ಯಾಗೆ ವ್ಯವಸ್ಥೆಯಾಗುವದೆಂದು ನಾನು ಹೇಳಲಾರೆ. ಯಾವಕಾನೂನಿನಂತೆ ಇದರ ಮೇಲೆ ಖಟ್ಲೆ ನಡೆಯುವದೆಂದು ನಾನು ಹೇಳಲಾರೆ" ಹೀಗೆ ಡಿ| ಮೆಜಿಸ್ಟ್ರೇಟರಾದ ಮಿ| ಲಿಓರ್ಡರವರು ದಿಲ್ಲಿಯ 'ಹಿಂದುಸ್ಥಾನ ಟ್ಯಾಯ್ಮ್ಸ' ಪತ್ರಿಕಾ ಪ್ರತಿನಿಧಿಗಳ ಬಳಿ ನುಡಿದರು ಹಲವರಿಗೆ ಕೆಲ ದಿನಗಳ ಮೇಲೆ ಆರೋಪ ಹೊರಿಸದೆ ಬಿಟ್ಟುಬಿಡುವರೆಂದೂ, ಕೆಲವರ ಮೇಲೆ ಸಭಾಬಂದಿ ಹುಕುಮು ಮುರಿದು ಕೊಂಗ್ರೆಸ ಸಭೆ ಸೇರಿಸಿದ ಬಗ್ಗೆ ಖಟ್ಲೆಯಾಗುವದಾಗಿಯೂ, ಹಲವರ ಮೇಲೆ ಸತ್ಯಾಗ್ರಹಕ್ಕೆ ಸಹಾಯ ಮಾಡಿದ ಆಪಾದನೆ ಹೊರಿಸಲ್ಪಡುವದಾಗಿಯೂ 'ಹಿಂದುಸ್ಥಾನ ಟ್ಯಾಯ್ಮ್ಸ' ಪತ್ರಿಕೆಯ ಬಾತ್ಮಿ ೨೦೦ ಮಂದಿ ಆಕಾಲಿಗಳಿಗೆ ಸಭಾಬಂದಿ ಹುಕುಮು ಮುರಿದ ಬಗ್ಗೆ ಖಟ್ಲೆ ನಡೆದು ಶಿಕ್ಷೆಯಾಯಿತು

— ಅಹಮದಾಬಾದದ ಸೆಶನ್ಸ ಜಡ್ಜರು ಒಂದು ಮಹತ್ವದ ತೀರ್ಪು ಕೊಟ್ಟಿರುತ್ತಾರೆ ಬ್ರಿಟಿಶ ಸರಕುಗಳನ್ನು ಬಹಿಷ್ಕರಿಸಬೇಕಾಗಿ ಹಸ್ತಪತ್ರಿಕೆಗಳನ್ನು ಹಂಚಿದ ಬಗ್ಗೆ ಕೆಲವು ಶಾಲೆಯ ಹುಡುಗರಿಗೆ ವಿರಮಗಾಂವದ ೧ನೇ ವರ್ಗದ ಮೆಜಿಸ್ಟ್ರೇಟರು ೩ ತಿಂಗಳ ಶಿಕ್ಷೆ, ರೂ. ೫೦ ದಂಡ ವಿಧಿಸಿದರು ಬೇಕಾಯಿದೇಶೀರ ಸಂಸ್ಥೆಗೆ ಹುಡುಗರು ಬೆಂಬಲ ಕೊಟ್ಟರೆಂದು ಮಾಜಿಸ್ಟ್ರೇಟರ ಅಭಿಪ್ರಾಯವಾಗಿತ್ತು. ವಿದೇಶಿ ಯಾ ಬ್ರಿಟಿಶ ಸರಕುಗಳ ಬಹಿಷ್ಕಾರ ಪ್ರಚಾರ ಮಾಡಿದ್ದರಿಂದ ಯಾವದೇ ಕಕ್ಷಿಯಂತೆ ಅಪರಾಧವಾಗುವದಿಲ್ಲವಾಗಿ ಸೆಶನ್ಸ ಜಡ್ಜರು ಅಭಿಪ್ರಾಯಪಟ್ಟು ಶಿಕ್ಷೆಯನ್ನು ರದ್ದುಪಡಿಸಿದ್ದಾರೆ. ಇದೇ ಅಪರಾಧದ ಬಗ್ಗೆ ಶಿಕ್ಷೆಯಾದ, ಅಪರೆ ಅಪೀಲು ಮಾಡದ ೭ ಮಂದಿ ವಿದ್ಯಾರ್ಥಿಗಳ ಶಿಕ್ಷೆಯನ್ನು ರದ್ದುಪಡಿಸಬೇಕಾಗಿ ಮುಂಬಯಿ ಹ್ಯಾಯಕೋರ್ಟಿಗೆ ಬರೆದಿರುತ್ತಾರೆ

— ಖೇಡಾ ಜಿಲ್ಲೆಯ ಸುನಾವ ಗ್ರಾಮದಲ್ಲಿ ರವಿವಾರ ಹೆಂಗಸರು ಒಂದು ಪ್ರಚಂಡ ಮೆರವಣಿಗೆ ಹೊರಡಿಸಿದರು ಅದಕ್ಕೆ ಪೋಲೀಸರು ಸುತ್ತುಗಟ್ಟಿ ನಿಂತರು. ಆ ಮೇಲೆ ಮತ್ತೊಂದು, ಗಂಡಸರದೊಂದು ಮೆರವಣಿಗೆ ಹೊರಡಿಸಿ ಊರು ಸುತ್ತಿದರು. ಪೋಲಿಸರು ಇವರ ಕಡೆಯಿಂದ ಧ್ವಜ ಕಸಕೊಂಡು ಹೋದರು. ಒಂದು ದೊಣ್ಣೆ ಮುರಿದು ಹೋಯಿತು, ಆದಾಗ್ಯೂ ಮೆರವಣಿಗೆ ತಡೆಯಲಿಲ್ಲ ಇತ್ತ ಹೆಂಗಸರ ಮೆರವಣಿಗೆ ಮಾರ್ಗದ ಮೇಲೆಯೇ ಕೂತುಕೊಂಡಿತ್ತು. ಸೋಮವಾರ ಮಧ್ಯಾಹ್ನ ೧|| ಘಂಟೆಯ ತನಕ ಹೆಂಗಸರು ಹಾಗೆಯೇ ಕೂತುಕೊಂಡಿದ್ದನ್ನು ನೋಡಿ ಪೋಲೀಸರು ಮುತ್ತಿಗೆ ಬಿಟ್ಟುಹೋದರು. ಆ ವೇಳೆ ನಾಗರಿಕರು ತಂಡುಗಟ್ಟಿ ಬಂದರು ಊರತುಂಬ ಮೆರವಣಿಗೆಯಾಗಿ ಸಭೆಸೇರಿ ಸಂತೋಷದಿಂದ ಜನರು ಮನೆಗೆ ತೆರಳಿದರು. ೨೧ ತಾಸಿನ ತನಕ ಜನರು ಏನೂ ಆಹಾರ ಕೊಳ್ಳದೆ ಕೂತುಕೊಂಡಿದ್ದರು. ಧರ್ಮಾತ್ಮರೊಬ್ಬರು ಎಲ್ಲರಿಗೆ ಒಂದೊಂದು ಪೇಲೆ ಹಾಲು ಕೊಟ್ಟರಂತೆ!

—ಬೋರಸದದಲ್ಲಿ ಕಲೆಕ್ಟರರು ರಾಜನಿಷ್ಠ ಸಹಕಾರಿಗಳ ಒಂದು ಸಭೆ ಕರೆದಿದ್ದರು. ಸ್ವಯಂಸೇವಕರು ಪಿಕೆಟಿಂಗ ಮಾಡಿ ಮಾಡಿ ಪ್ರಮುಖರಿಗೆ ಸಭೆಗೆ ಹೋಗಗೊಡಲಿಲ್ಲ. ೧೦ ವರ್ಷದ ಹುಡುಗನೊಬ್ಬನು ಕರಪತ್ರಗಳನ್ನು ಹಂಚಿದನು. ಆತನಿಗೂ, ಇನ್ನು ೭ ಮಂದಿಗಳಿಗೂ ಸೆರೆಹಿಡಿದಿಟ್ಟಿದ್ದಾರೆ

—ದಕ್ಷಿಣ ಕನ್ನಡ ಜಿಲ್ಹೆಯಲ್ಲಿ ಪೋಲೀಸರು ಪಿಕೆಟಿಂಗ ಮಾಡುವವರಿಗೆ ನಿರ್ದಯದಿಂದ ಹೊಡೆಯುತ್ತಾರೆ. ಈ ಕುರಿತು ಮಂಗಳೂರಿನ ವಕೀಲರೂ, ಇತರ ಪ್ರತಿಷ್ಠಿತ ನಾಗರಿಕರೂ ಕಳೆದ ರವಿವಾರ ಡಿ| ಮೆಜಿಸ್ಟ್ರೇಟರಿಗೆ ಒಟ್ಟಿಯಾಗಿ ತಕರಾರುಮಾಡಬಿನ್ನೈಸಿಕೊಂಡರು ಮಂಗಳೂರಿನಲ್ಲಿ ೧೩-೧೪ ೧೬ ವರ್ಷದ ಹುಡುಗರಿಗೆ ಸಹ ಪೋಲೀಸರು ನಿರ್ದಯದಿಂದ ಹೊಡೆದು ಬೆತ್ತದ ಒಂದು ಒದಿ ಬಾರಾಯಿತು, ಅದನ್ನು ತಿರುವಿ ಮತ್ತೊಂದು ತುದಿಯಿಂದ ಹೊಡೆದರು ಸೇಂಟ ಎಲ್ಯೊಸಿಸ್ ಕಾಲೇಜಿನ ಪ್ರೊ| ರಾಮರಾಯರ ಕಾಲೇಜು ಮುಂದಿದ್ದ ಉಪಚಾರ ಮಾಡಹೋದ ಶುಶ್ರೂಷಾ ಪಥಕದವರಿಗೂ, 'ಫ್ರೀ ಪ್ರೆಸ್' ಪತ್ರಿಕೆಯ ಸುದ್ದಿಗಾರರಿಗೂ ಪೆಟ್ಟು ಬಿದ್ದಿವೆ ಆದರಿಂದ ಈ ತನಕ ಅಲಿಪ್ತವಾಗಿದ್ದ ಕೆಥೋಲಿಕ್ ಸಮಾಜವು ಸಹ ಈಗ ಪಿಕೆಟಿಂಗಿನಲ್ಲಿ ಸೇರಿದೆ ಕಾಸರಗೋಡಿನಲ್ಲಿ ಈವರೆಗೆ ೪-೫ ಮಂದಿ ಪೋಲೀಸರು. ಭರಭರನೆ ಎಳೆದೊಯ್ದು ಮಾರ್ಗದ ಮೇಲೆ ಕೆಡವಿ ಸ್ಮೃತಿ ತಪ್ಪುವ ತನಕ ಹೊಡೆದರು. ಕಳೆದ ೧೭ನೇ ತಾರೀಖಿಗೆ ಸ್ವಯಂಸೇವಕರಿಗೆ ಹೊಡೆದದ್ದನ್ನು ಡಿ| ಮುನಸೀಫರೂ, ವಕೀಲರೂ ನೋಡಿರುತ್ತಾರೆ

ಸ್ಥಾನಿಕ ವೃತ್ತಾಂತ.

ಕುಮಟಾ— ಶ್ರೀ ವೆಂಕಟರಮಣ [illegible] ನವರ [illegible] ದಿಂದಿರುವ ಶ್ರೀ ಗೌರವ [illegible] ತಂದು [illegible] ಬಿದ್ದು [illegible] ಕುಳಿತ [illegible] ಶ್ರೀ [illegible] ಯಿಂದ ಬರುವ [illegible] ಕಾರಣರಾಗಿದ್ದರು [illegible] ಬಿಟ್ಟಿಗಳ [illegible] ಗಿಯುತ್ತದೆ [illegible] ಯಿಂದ [illegible] ತಂದು [illegible]

ಬುಧವಾರ ಇಲ್ಲಿ [illegible] ವರಿಗೆ [illegible] ರಾ। [illegible] ರಾ। ಗಣಪತಿ [illegible] ಸಭೆ [illegible] ರಾ। [illegible] ಕೊಟ್ಟ [illegible] ರಾ। ಉಪಾಧ್ಯರು [illegible]

ಗೋಕರ್ಣಕ್ಷೇತ್ರದ [illegible] — ಶ್ರೀ ಮಹಾಬಲೇಶ್ವರ ದೇವಸ್ಥಾನದ [illegible] ಮ್ಯುನಿಸಿಪಾಲಿಟಿಯವರು [illegible] ಕೆಲಸ [illegible] ದಿವಸಗಳು [illegible] ಇಲ್ಲಿ [illegible] ಮುಂದುಗಡೆ [illegible] ತಿಂಗಳಲ್ಲಿ ೨೦ [illegible] ದಿನಗಳು [illegible] ಮ್ಯುನಿಸಿಪಾಲಿಟಿಯವರು [illegible] ಲಕ್ಷಕೊಡಬೇಕು [illegible]

ಹೊನ್ನಾವರ— [illegible] ವಿಪರೀತ [illegible]

[illegible] ರಾ। [illegible] ಭಟ್ಟ [illegible] ಫೌಜದಾರರು [illegible] ವಿಚಾರವು [illegible] ಮುಂದಿನ [illegible]

[illegible] ರಾ। [illegible] ವಿಚಾರ [illegible] ರಾ। [illegible] ವಿಚಾರ [illegible]

[illegible] ರಾ। [illegible] ಒಂದು [illegible] ಬೆಜ್ [illegible] ಟಿಕೀಟು [illegible] ನಿಯಮಕ್ಕೆ [illegible] ಪೋಲೀಸರು [illegible] ಬೆಜ್ [illegible] ಪ್ರಕರಣ ನಡೆದಿದ್ದ ಫೌಜದಾರರು [illegible]

[illegible] ಮಾತುಗಳು [illegible] ೧೨೦ಂತ [illegible]

ಶಿರ್ಸಿ— ಇಲ್ಲಿ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಶ್ರೀ ಕಾರಮುಂಗರ [illegible] ಒಂದು ಬಿಲ್ಲಿನ ವಿಚಾರ [illegible] ಶ್ರೀ ಕಾರಮುಂಗರರವರಿಗೆ [illegible] ಶ್ರೀ [illegible] ಮ್ಯಾಜಿಸ್ಟ್ರೇಟರು [illegible] ಶ್ರೀ ಕಾರಮುಂಗರರು [illegible] ಮ್ಯಾಜಿಸ್ಟ್ರೇಟರು [illegible] ಸ್ವತಂತ್ರ್ಯಕ್ಕಾಗಿ [illegible] ಮ್ಯಾಜಿಸ್ಟ್ರೇಟರು [illegible] ಶ್ರೀ [illegible] ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ [illegible] ಶ್ರೀ ಕಾರಮುಂಗರ [illegible] ಶ್ರೀ [illegible] — (೧) ಅಂಕೋಲೆಯ [illegible] (೨) [illegible] (೩) [illegible] ಮ್ಯಾಜಿಸ್ಟ್ರೇಟು [illegible] ಶ್ರೀ [illegible] ಶ್ರೀ ಕಾರಮುಂಗರರಿಗೆ (೬) [illegible] ಬಿದ್ದಿಹೋಗಿದೆ

ತಾ। ೨೪ಕ್ಕೆ ನಾಸಿಕ ಧ್ವಜವಂದನೆ, ಪ್ರಭಾತಫೇರಿಗಳು [illegible] ಧ್ವಜವಂದನೆ ಮುಗಿದ ಬಳಿಕ [illegible] ಮಂಡಳದ ಅಧ್ಯಕ್ಷ ರಾ। ರಾಮಚಂದ್ರ ಗಣಪತಿಭಟ್ಟ [illegible] ರಾ। [illegible] ತಿಮ್ಮಣ್ಣ [illegible] ಹೈಸ್ಕೂಲಿನ ವಿದ್ಯಾರ್ಥಿಗಳಿಗೂ, [illegible] ಸ್ವಯಂಸೇವಕರಿಗೂ [illegible] ಸಾಯಂಕಾಲ ಬಿಡುಗಡೆ ಮಾಡಲ್ಪಟ್ಟರು

[illegible] ರಾ। ಮಂಜನಾಥ ಹೆಗಡೆರಿಗೆ [illegible] ನೋಟಿಸು ಕೊಟ್ಟು [illegible] ಪೋಲಿಸರಲ್ಲಿ ಹಾಜರ ಕೊಡಲಿಲ್ಲ! [illegible] ಕೊಟ್ಟ ನೋಟಿ [illegible] ಜುಲಾಯಿ [illegible] ಮನೆ ಮೇಲೆ [illegible] ಗಿದೆ!

[illegible] ಭಟ್ಟರೆಂಬುವರು [illegible] ನಾನು ಕಾಂಗ್ರೆಸ್ಸಿನವನಲ್ಲ, [illegible] ಎಂದು [illegible] ಫೌಜದಾರರು ಒಂದು ಬಿಟ್ಟು ಕೊಟ್ಟರು! [illegible] ರಾ। ನಾರಾಯಣ [illegible] ಗಜಾನನ [illegible] ಗಜಾನನನಲ್ಲವೆಂ [illegible] ಬಿಟ್ಟುಕೊಟ್ಟರು!

[illegible] ಜಪ್ತಿಗಳು ನಡೆಯುತ್ತಿವೆ [illegible] ಜಪ್ತಿಗೊಳಪಟ್ಟ [illegible] ರಾ। [illegible] ಭಟ್ಟರಲ್ಲಿ [illegible] ಪಾತ್ರೆಗಳನ್ನು ಜಪ್ತಮಾಡಿ [illegible]

[illegible] ರಾ। ರಾಮಕೃಷ್ಣ [illegible] ತಂದಿದ್ದಾರೆ

[illegible] ಅಧಿಕಾರಿಗಳು ಒಂದು [illegible] ಜೊತೆಗೆ [illegible] ಹೋಗಿದ್ದರು! [illegible] ಆದರೆ ಜನರು, [illegible] ಬಂದಿದ್ದರೂ [illegible] ತೆರೆದರು! [illegible] ಅಧಿಕಾರಿಗಳೂ [illegible] ಹೋಗಬೇಕಾಯಿತು! [illegible]

ಬುಧವಾರ ಇಲ್ಲಿ [illegible] ಒಂದು [illegible] ಮೇಲೆ [illegible] ಮುಂಗಿಗೆ ಸ್ವಲ್ಪ ಪೆಟ್ಟಾಗಿದೆ

ಸೋಮವಾರ ಕಚೇರಿಯಲ್ಲಿ ಹಾಜರಾಗಬೇಕಾಗಿ [illegible] ನೋಟೀಸಿನಂತೆ ಕೆಲವರು ಕಚೇರಿಗೆ ಹೋಗಿದ್ದರು. ಆದರೆ, ಫೌಜದಾರರು [illegible] ಹಾಜರಾಗಬೇಕು [illegible]

ಅಂಕೋಲೆ— ತಾ। ೨೪ಕ್ಕೆ ರಾ। [illegible] ಬೆಂಗಳೂರಿನ [illegible] ಜಪ್ತಿಯಾಗಿ [illegible]

ರು। ಸ ಒಬ್ಬನ ಸಾಹಸಶೀಲಯುವನು ಹೊಕ್ಕುಮುಂತೆ ಸಂಜೆಗೆ [illegible] ಇಲ್ಲ, ನಾಯಿಯುವನ್ನು ಕೊಡಲಿಲ್ಲ ವಾಗಿ ಪೋಲೀಸರಲ್ಲಿ ಹೋಗಿ ನಿರೆಯಾದನು ಆವನ ನಿತ್ರ ರಷ್ಟ ನಾಗರಿಕರಾತ್ಕೆ ನಡೆದ ಮನ. ಡಾ। ಕಾನ ರಾವ [illegible] ದ ಕ್ತು ಕಂಕದ ದೇಸಾಯಿ ಇವರು ಪೇಟಿಲಿನ ಮಿಟ್ಟಿಗಳ ವಿಟ್ಟಾ[illegible] ಆದೇ ತಾರೀಖಿಗೆ ಪ್ರಾರಂಭವಾಗಲ್ಪಟ್ಟಿದೆ

ಈ ಎಟಕ್ಕೆ ಪಂಡಿತ ಮಾಲವೀಯರಿಗೂ ಸೌ। ಸರೋಜಿನೀ ನಾಯುಡುರವರಿಗೂ ನಿರೆಹಿಡಿದ ಬಗ್ಗೆ ಅಂಕೋಲೆಯಲ್ಲ ಅಪ್ರಸಾರ ಪಟ್ಟಿಕೆ(ರ ಕಾಲಗದ್ದ ಪ್ರಾರಂಭದ ಕಡೆಯಲ್ಲಿ ಸರಕಾರವಾಯಿತು. ಅಂಕೋಲೆಯಲ್ಲಿ ೪ ಅಂಗಡಿಗಳು ಮಾತ್ರ ತೆರೆಯಲ್ಪಟ್ಟಿದ್ದವು ಆದರೆ ಅವುಗಳಮುಂದೆ ಪಿಕೆಟಿಂಗ ನಡೆದದ್ದರಿಂದ ಒಂದು ಪೈಯ ವ್ಯಾಪಾರ ಸಹ ಆಗಲಿಲ್ಲ! ಅಂದು ಅಂಕೋಲೆಯಲ್ಲ ಮುಂಜಾನೆ ಪ್ರಭಾತ ಫೇರಿ ಜಯಂತಿಗಳೂ ಸಂಜೆಗೆ ಮೆರವಣಿಗೆ ಸಭೆಗಳೂ ಆದವು. ಸಭೆಯಲ್ಲಿ ಶ್ರೀ ಗೌರೀಶ [illegible] ಮೇಲೆ ನಡೆಸಿದ ಅತ್ಯಾಚಾರಗಳ ಬಗ್ಗೆ ನಿಷೇಧಪರ ಠರಾವಾಯಿತು. ಡಾ॥ [illegible] ಸಾಹಸ ನಾಯಕರು ಮತ್ತು ಆನು [illegible] ರಾಂಗಿ ಅವರ ಭಾಷಣಗಳಾದವು. [illegible] ಅಂದು ಬೆಳಗ್ಗೆ ಅಂಗಡಿ ತೆರೆದ ವರ್ತಕರನ್ನು ಪ್ರಶ್ನಿಸಿದಂತೆ ಹೇಳಿದರು 'ಅಂಗಡಿ ಮುಚ್ಚಿದ ಬಗ್ಗೆ ಸರಿ ಹಿಡಿಯುವದು ವಿಷ್ಣ ಜ್ಞಾತಿ ಮಾತ್ರ ವರ್ಜೀಯುವರಿಗೆ ವಹಿತ್ರ' ಇವೇಕೆಂದು ಹಲವರ ಪ್ರಶ್ನೆ

ಆದೇ ದಿನ ಸರ್ವರೂ ಡಾ। ಬೊರ್ಕೃಷ್ಣನವನ್ನು ಬಿಗಿ ಕ್ಷೌರ ಮಾಡಿ ಕಂಡರು ಸದರಿಯುವರಿಗೆ ಪರೋಲ ಮೇಲೆ ಬಿಟ್ಟಿದ್ದರು, ಪರೋಲ ಹಾಕುವ [illegible] ಬಗ್ಗೆ ಈ ಕ್ಷೌರ

ಈ ಎಕಿಸೇಗೆ ಬುಧವಾರ ದಿನ ಅಂದಿಗ ಫ್ರೀ-ಧ್ವಜ ವಂದನ-ಮೆರವಣಿಗೆ-ಸಭೆ ಆದವು ಡಾ। ವೆಂಕಟೇಶ ಬಟ್ಟರ ಬಹುಮ್ಯಾಂದ ಮೇಲೆ ವ್ಯಾಖ್ಯಾನ ಕೊಟ್ಟರು

ಈ ಎಲನೇಗೆ ಶನಿ ದೊಡ್ಡ ಜಂಗಲ ಸತ್ಯಾಗ್ರಹ! ಬೆಳಗ್ಗೆ ೮ ಘಂಟೆಗೆ ಜಂಗಲ ಸತ್ಯಾಗ್ರಹ ಮಾಡಿ ತಂದ ಕಟ್ಟಿಗೆಯನ್ನು ಹೊತ್ತುಕೊಂಡು ಹಳ್ಳಿಗರು ನಗರಕ್ಕೆ ಬರುವರೆಂದು ಬಂದಿದ್ದರು ಆಸು ಪ್ರಾರಂಭವಾಗಿ ತಂಗಿ ಸೂಲ್ಪಟ್ಟಿತು ಪೋಲೀಸರು ಒದ್ದರಾಗಿ ನಾಲ್ಕು ಬದಿಯ ೩ ನಗರಕ್ಕೆ ಬರುವ ರಸ್ತೆಗಳನ್ನೆಲ್ಲ ಆಕ್ರಮಿಸಿ ಕಾಳಿತು ಕೊಂಡರು ಕೆಲವರ ಕಡೆಗೆ ಬಂದಿಗಳೂ ಕೆಲವರ ಕಡೆಗೆ ಕತ್ತಿಗಳೂ ಇದ್ದವು ೧೦ ಘಂಟೆಗೆ ಸರಿಯಾಗಿ ನಾಲ್ಕು ರಸ್ತೆಗಳ ಮೇಲೆ ಸತ್ಯಾಗ್ರಹಿಗಳ ಮೆರವಣಿಗೆಗಳು ಬಂದು ಮುಟ್ಟಿದವು ಪ್ರತಿಯೊಂದು ತಂಡದಲ್ಲಿ ನಾಲ್ವತ್ತು ಜನ ಸತ್ಯಾಗ್ರಹಿಗಳಿದ್ದರೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಸ್ತ್ರೀಯರೂ ಸಹ ಪುರ ಪರಿಷ್ಟೇ ಉತ್ಸಾಹದಿಂದ ಸೇರಿದ್ದರು ಮೆರವಣಿಗೆಗಳು ನಗರ ಸೀಮೆಯ ಮೇಲೆ ಬರುತ್ತಲೇ ಪೋಲೀಸರು ಅಡ್ಡಗಟ್ಟಿದರು [illegible] ಗಳ ಬೆದರಿಕೆ ಹಾಕಿ ನೋಡಿದರು ಆದರೂ ಜನರು ಹಿಂದರಿಯಲಿಲ್ಲ ಗಟ್ಟಿಯಾಗಿ ತಮ್ಮ ಜಯಘೋಷಗಳನ್ನು ಮಾಡುತ್ತ ನಿಂತುಕೊಂಡರು ನಾಲ್ಕೂ ಬದಿಯಿಂದ ಬರುವ ಜಯಘೋಷಗಳಿಂದ ದಿಕ್ಕುಗಳೆಲ್ಲ ಕಂಪಿಸಹತ್ತಿತು. ಪ್ರಾರಂಭ ಸತ್ಯಾಗ್ರಹಿಗಳ, ಮಹಾತ್ಮಾ ಗಾಂಧಿಯವರ, ಸ್ವರಾಜದೇವಿಯ ಮೇಲಿನ ಆಸ್ತಿರಿಸಿತ್ತು ಇತ್ತಿಂದತ್ತ ಓಡ್ಯಾಡುತ್ತಿದ್ದರು ದೊಡ್ಡ ಜಾಲವಿದೆಂಬಲೇ ಕೆಲವರ ಕಾಲ್ನಡಿಗೆಯು ಅಂಗಪ್ರಹಾರವಾದಲ್ಲಿ ಗಾಯ ಪಟ್ಟವರ ಶುಶ್ರೂಷೆಗೆಂದು 'ರೆಡ್ ಕ್ರಾಸ' ಸ್ವಯಂಸೇವಕರು ಸಹ ಅಲ್ಲಲ್ಲಿ ಸಜ್ಜಾಗಿ ನಿಂತಿದ್ದರು ಪ್ರತಿ ಕ್ಷಣಕ್ಕೆ ಮುಂದೇನಾಗುವದೆಂದು ನಾಗರಿಕರೆಲ್ಲರೂ ಉತ್ಕಂಠೆಯಿಂದ ನಿರೀಕ್ಷಿಸುತ್ತಿದ್ದರು ಕೆಲವರಂತೂ ವರ್ತಮಾನ ತಿಳಕೊಳ್ಳಲಿಕ್ಕೆ ನಾಲ್ಕು ಬದಿಯ ಮೇಲೆ ಅಲ್ಲಲ್ಲಿ ಹರಿದಾಡುತ್ತಿದ್ದರು ಇಡೀ ಪಾತಿ ವರೆಗಿನಷ್ಟ ದಿಕಾಕ್, ಬ್ಯಾಂಕ್, ಕಾಲಕಾಗಳಿಂದ ವ್ಯಾಪ್ತವಾಗಿ ಹೋಗಿತ್ತು ಇಂಥ ಪರಿಸ್ಥಿತಿಯಲ್ಲಿ ಅಧಿಕಾರಿಗಳು ತಮ್ಮ ಮನಸ್ಸು ಸ್ಥಿರವಾಗಿಟ್ಟುಕೊಂಡು ಜನರಷ್ಟೇ ಸ್ವಸ್ಥ ಶಾಂತತೆಯಿಂದ ವರ್ತಿಸಿ, ಪ್ರಸಂಗೋಚಿತವಾದ ಸೌಜನ್ಯ ಉಪಯೋಗಿಸಿದರೇ ಇಂದ ಪ್ರಸಂಗಕ್ಕೆ ಅರಿದ್ಯದ ಬಗ್ಗೆ ಅವರನ್ನು ಹೊಗಳಲೆ ಬೇಕು ಪೋಲೀಸರಲ್ಲಿ ಪ್ರತಿಯೊಂದು ಕಡೆಯಲ್ಲಿ ಪ್ರಮುಖ ಸತ್ಯಾಗ್ರಹಿಗಳೆಂದು ತಂದು ಇಂದವರನ್ನು ಹಿಡಿದು ನಡೆಸಿದರು ಆ ಮೇಲೆ ಎಲ್ಲವರ ಕಡೆಯಿಂದ ಸತ್ಯಾಗ್ರಹಿ ಕಟ್ಟಿಗೆಯ ತುಂಡುಗಳನ್ನು ಕಸಿದುಕೊಂಡರು ತುಂಡುಗಳು ಸಣ್ಣಸಣ್ಣವಾಗಿದ್ದ[illegible] ಅವುಗಳಿಂದ ೮-೧೦ ಲೋಡಿಗಳು ತುಂಬಿಹೋದವು ಜನಸಂದಣಿಯಲ್ಲಿ ಪೋಲೀಸರು ಕೆಲವರಿಗೆ ದೂಡಿ ಕೆಡವಿದರೂ ಜನರು ಶಾಂತ ರೀತಿಯಿಂದ ಸಹಿಸಿದರು ಕೆಲವು ಪೋಲೀಸರು ಪಡಾಯವಾಗ ಹೆಂಗಸರು, ಗಂಡಸರು ಎಂಬ ಭೇದ ಸಹ ಮಾಡುತ್ತಿದ್ದಿಲ್ಲ! ನಗರಾಗೇರಿಯ ಬೊರ್ಕೃಷ್ಣ ನಾಯ್ಕರೆಂಬುವನಿಗೆ ಒಬ್ಬ ಪೋಲೀಸನು [illegible] ಬೂಟಿನಿಂದ ಸೊಂಟಗಿನ ಮೇಲೆ ಜಪ್ಪಿದನಂತೆ ಮೂಗಿನೊಳಗಿಂದ ರಕ್ತ ಕಾರಿದ ತಕ್ಷಣ "ರೆಡ್ ಕ್ರಾಸ್" ಸ್ವಯಂಸೇವಕರು ಅವನಿಗೆ ದವಾಖಾನೆಗೆ ಒಯ್ದು ಉಪಚಾರ ಮಾಡಿದರು ಪ್ರಮುಖರ ಸ್ವಂತದ ತ್ತು ಸತ್ಯಾಗ್ರಹ ಕಟ್ಟಿಗೆಯ ಜಪ್ತಿಗಳಾದ ಮೇಲೆ ಪೋಲೀಸರು ಬಾಕಿ ಜನರಿಗೆ ನೂಕಿ ಬಿಟ್ಟು ಕೊಟ್ಟರು ಹಿಡಿದ ಸತ್ಯಾಗ್ರಹಿಗಳು ನಾಲ್ಕು ಬದಿಗಳಿಂದ ಹಿಡಿದು ತಂದು "ಗಾಂಧಿ ಮೈದಾನ"ದೊಳಗೆ ಕೂಡಿಸಿದಾಗ ಬಂದರು ವ ತ್ತು ರಾಷ್ಟ್ರಗೀತ ಹಾಡಿ ಜಯ ಘೋಷಗಳನ್ನು ಹಾಕುತ್ತ ಮಧ್ಯಾಹ್ನ ೧ ಘಂಟೆ ಬಡಿದು ಹೋಗ ತನ್ನ ತಮ್ಮ ಮನೆಯ ಹಾದಿ ಹಿಡಿದರು ತಾಲೂಕುಗಳ ಸಕಲ ಭಾಗದ ಹಳ್ಳಿಗಳಲ್ಲಿ ಸತ್ಯಾಗ್ರಹ ಪದ್ಧತಿಗಳೊಳಗಿನ [illegible] ಹಾಡುಗಳನ್ನು ಹೊಂದಿದ ವಿನೋದ ಸಹಿತ ನಿಂತ ನೋಟ ನೋಡತಕ್ಕಂಥದ್ದಿತ್ತು! ಅಂದು ಒಟ್ಟು ಕಡೆಯಲ್ಲಿ ಕ್ಷೌರ ಮಾಡಿದ ಸತ್ಯಾಗ್ರಹಿಗಳು ೧೩೫ ಕೈ ಮೀರಿದ್ದರು ಅವರೆಲ್ಲರಿಗೆ ಒಂದು ಮನೆ ಪ್ರತ್ಯೇಕ ಒದಗಿಸಿ ಇಡಲಾಯಿತು, ೪೦ ಜನರಿಗೆ ಮಾತ್ರ ಇಟ್ಟುಕೊಂಡು ಬಾಕಿಯವರಿಗೆ ಕೊಟ್ಟು ಬಿಟ್ಟರು! ಸರಕಾರದವರ ಬೆಳೆವರು ಸೆರೆಮನೆಯ ಕಾಡಿಗೆ ತಂದು ಇಟ್ಟಿದ್ದರು

ಮಾರನೇ ದಿನ ೪೦ ಜನರ ಮೇಲೆ ಖಟ್ಲೆಯಾಯಿತು ಮೇಲೆ ಹೇಳಿದಂತೆ ಕೆಲವು ಸತ್ಯಾಗ್ರಹದಲ್ಲಿ ಸೇರಿದ್ದರೂ, ಅವರು ಖಟ್ಲೆಯ ವಿಚಾರದಲ್ಲಿ ಭಾಗ ತಕ್ಕೊಳ್ಳಲಿಲ್ಲ ವ ಬಸ್ಸಿಯ ಜಿ ಜನ ಹಳ್ಳಿಗರನ್ನು ಬೇರೆಯಾಗಿ ಬಿಡಲಾಯಿತು ಉಳಿದ ೪೧ ಜನರಿಗೆ ಒಂದು ತಿಂಗಳ ಶಿಕ್ಷೆಯನ್ನು ವಿಧಿಸಿದ್ದಾರೆ ಇವರಿಗೆ ೫೦ರಿಂದ ೫೦ ರೂಪಾಯಿಗಳ ದಂಡವನ್ನು ವಿಧಿಸಿದ್ದಾರೆ ಶಿಕ್ಷೆಯಾದವರಲ್ಲಿ ಕೆಲವರು ೧೮-೧೯ ವರ್ಷಗಳ ಹುಡುಗರೂ ಇದ್ದಾರೆ

ಈ ಎಕನೇಗೂ ಸುಮಾರು ೧೦೦೦ ಜನರು ಜಂಗಲ ಸತ್ಯಾಗ್ರಹ ಆರಿಸಿದರು ಹಿಚಕಡಿ, ಬೆಲೆಕೇರಿಗಳ ಬಿಟ್ಟರೆಲ್ಲ ಸತ್ಯಾಗ್ರಹವಾಯಿತು ಸುಮಾರು ೫೦ ಜನಗ ನಡೆಸಿದರು ಅವರಲ್ಲಿ ೧೩ ಜನರಿಗೆ ಬಿಟ್ಟು ಕೊಟ್ಟು ೧೩ ಮಂದಿಗೆ ಇಟ್ಟುಕೊಂಡರು ಇವರಿಗೆ ೬-೭ ತಿಂಗಳ ಶಿಕ್ಷೆ ವಿಧಿಸಲಾಯಿತು ಜಂಗಲ ಸತ್ಯಾಗ್ರಹದ ನಿಮಿತ್ತ ಹೋದರು ಜನರು ಮನ ಕಡಿದ ಕಟ್ಟಿಗೆ ಹೊರೆ ಒಯ್ದವರಲ್ಲ, ಕಾಡ್ಗಿಚ್ಚಿನ ಟೊಂಗೆಗಳನ್ನು ಮುರಿದು ತಂದಿತ್ತರೆ ಅಲ್ಲಿ ಕಡಿಯುವದು ವಿಶೇಷವಾಗಿ ತೇಗದ ಕಟ್ಟಿಗೆ ಜಂಗಲ ಕಾಯದೆಯಲ್ಲಿ ಜಪ್ತಿ ಶಿಕ್ಷೆಯಿಂದ ಹೊರ್ತು ಹಣ ಖರ್ಚು ಮಾಡ ನಷ್ಟ ಹೊಗೆಮಾಡಿ ಕಗಳನ್ನು ಜನರು ನೆಲಕ್ಕೆ ಮಾಡುತ್ತಾರೆ

ಅವ್ರಸ್ಯಯ ಎಟೊಲದ ಮನೆಯ ಸಮೀಪದ ಬಟ್ಟು ಕಾಲಿಯೊಳ ಕಳಗ ವಾದ ಅಕಸ್ಮಾತ್ ಅದಕ್ಕೆ ಕೆಂಡವನ್ನ ಹಂಚಿಸಾಯ ಹೊಪದಲಾದ ಎರಡು ನಡೆದು ಅವು ಅಂಕೋಲೆಯ ಆಸ್ಪತ್ರೆಯಲ್ಲಿ ಸಾವು ಸಾಯಿತು ಇದು ಬೆಂಕಿಯಿಂದ ಆದ ಪರ್ಯವಸಾನ ಕೊಡಿಗತಕ್ಕ ಪತ್ರವಾಗಬೇಕು ಈ ಹಿಂದೆ ಆದ ಬಿಡು ಲ ಮಾಸ್ತರರ ಹುಡುಗನ ಅಕಸ್ಮಿಕ ಮರಣದ ಪತ್ತೆ ಇನ್ನೂ ಹತ್ತಿಲ್ಲ. ನಗರದಲ್ಲೂ ಪೋಲೀಸರೂ, ಗುಪ್ತ ಪೋಲೀಸರೂ, ಅಧಿಕಾರಿಗಳೂ ತಕ್ಕ ಕಡೆ ಲಕ್ಷ ಕೊಟ್ಟು ಖೂನಿಗಳ ಮೂಲ ಹೊಡಿದ ಬೇಕು ಇಲ್ಲದಿದ್ದರೆ ಅವರ ಉದಾಸ್ತಿ ಉಳಿಯುವವು ಇರುವಂತೆ!

ದಿನಾ ಜಪ್ತಿ, ಲಿಲಾಂವ, ಘಂಟಾಟಿನ ಪ್ರಕರಣಗಳು ನಡೆಯುತ್ತವೆ ಈ ವಾರದಲ್ಲಿ ೨೫ ಜಪ್ತಿಗಳಾದವು ೫೦ ಫೋರಫೀಟ ನೋಟೀಸುಗಳಾದವು!

ಡಾ। ಹರಿ ಪೈನಿಗೆ ಪೋಲೀಸರು ಶೋಧ ಮಾಡುತ್ತಿದ್ದಾರೆ, ಆವರು ನೋಟೀಸಿನಂತೆ ಹಾಜರ ಮಾಡುವರೋ ಇಲ್ಲವೋ ತಿಳಿಯಲಿಲ್ಲ!

ಎಲನೇ ತಾರೀಖಿನ ಜಂಗಲ ಸತ್ಯಾಗ್ರಹ ನೋಡಿದ ವರ್ತಮಾನದೊಬ್ಬರು ಬರೆಯುವದೇನಂದರೆ — ಇಂಥ ದೃಶ್ಯವನ್ನು ನಾನೆಂದೂ ಕಾಣಲಿಲ್ಲ ಹಿಚಕಡಿ, ಬೆಲೇಕೇರಿ ಮೊದಲಾದ ಕಡೆಗಳಿಂದ ೧೦೦೦ ಮಂದಿಗಳು ಈ ಸತ್ಯಾಗ್ರಹದಲ್ಲಿ ಸೇರಿದ್ದರು, ಅದಲ್ಲದೆ ಇತರ ಹಳ್ಳಿಗಳಿಂದಲೂ ಸುಮಾರು ೩೦೦೦ ಜನರು ಬಂದಿದ್ದರು, ಎಲ್ಲರೂ ಗಾಂಧಿ ಮೈದಾನದಲ್ಲಿ ಸೇರಿದರು, ಡಾ। ಲಕ್ಷ್ಮಣ ಪಂಡಿತ ನಾಯಕ ರಾಗಿದ್ದರು ಸುಮಾರು ವ್ಯಾಪಾರ ಸಾಹೇಬರು ಇವರ ಹಣದ ಮೇಲೆ ೮-೫ ಏಟುಗಳನ್ನು ಜೋರಿನಿಂದ ಕೊಟ್ಟರಂತೆ ನಗರಗೇರಿಯ ಸುಬ್ಬಯ್ಯನ ಮ್ಯ ಎಂಬ ೩೦ ವರ್ಷದ ಮನುಷ್ಯನಿಗೆ ೧೩೫ನೇ ನಂಬರಿನ ಪೋಲೀಸನು ಹೊಡೆದು ಕೆಡವಿದನಂತೆ! ೬೪ನೇ ನಂಬರಿನ ಪೋಲೀಸನು ತುಳಿದನಂತೆ! ಪೋಲೀಸರು ಬಾರಿ ತಿರ ಪ್ರತ್ತಿದ್ದಾಗ, ೫೫ ವರ್ಷದ ಅಜ್ಜಿಯ ಕೈಯ ಬೆನ್ನು ವ್ಯವಸ್ಥೆ ಎಂಬವಾಗ ಕಾಲಿ ಮುರಿದಿನ [illegible] ಹೊಗಿವೆ! ಒಬ್ಬ ಹೆಣ್ಣು ಮಗಳು ಕಟ್ಟಿಗೆ ಲಿಲಾಂವ ಮಾಡಿದಂತೆ, ಪೋಲೀಸನ ಅದನ್ನು ಕಸಕೊಳ ಹೋದನು! ಹೆಣ್ಣು ಮಗಳು ಗಟ್ಟಿಯಾಗಿ ನಿಂತಳು, ಅವನಿಂದ ಕಸಕೊಳ್ಳಲಾಗಲಿಲ್ಲ! ಮತ್ತೊಬ್ಬ ಪೋಲೀಸನು ಬಂದನು, ಹೆಣ್ಣುಮಗಳ ಬೆಂಬಲಕ್ಕೆ ಭಗಿನಿಯರು ಬಂದರು! ಬಾರು ಬದಿಯಿಂದ ಪೋಲೀಸರು, ಇನ್ನೊಂದು ಬದಿಯಿಂದ ಭಗಿನಿಯರು ಹೀಗೆ ಕೆಲ ಹೊತ್ತಿನ ತನಕ ಒಗ್ಗಟ್ಟಿನ ನಡೆದು ಕಡೆಗೆ ಹೆಣ್ಣು ಮಕ್ಕಳೇ ಗೆದ್ದರು

ನಾರಿನ ಮೇಲೆ ರಾಮಬಾಣ!

ಮೂರೇ ದಿವಸದಲ್ಲಿ ನಟ್ಟಗಾಗಿ ಮುಂದ ಎಂದೂ ಆಗುವದಿಲ್ಲ ನಾರಿನವರು ಜರೂರ ತರಿಸಿಕೊಳ್ಳಿರಿ ಕಿಂ [illegible]
ಪತ್ರ - ವೈದ್ಯ ಪ್ಪ ಎಸ್ ಕುಪಸೇ,
ಮಿರಜಿ S C M

Dr. F. J. P. PEREIRA,
Physician & Specialist in Dentistry
Sunday Market, KARWAR (N. K.)

ಆರೋಗ್ಯ ಬಯಸುವಿರಾ?

ಹಾಗಾದರೆ—
ಹಲ್ಲುಗಳನ್ನು ಕಾಪಾಡಿಕೊಳ್ಳಿ!!

ಯಾಕೆಂದರೆ, ಮಾನವನ ಆರೋಗ್ಯಕ್ಕೆ ಹಲ್ಲುಗಳೇ ಕಾರಣ! ಒಂದೇ ಸೌಂದರ್ಯಕ್ಕಾಗಿ ಇಲ್ಲ, ಆರೋಗ್ಯ ವೃದ್ಧಿಯಿಂದಲೂ ಹಲ್ಲುಗಳು ಜೀರ್ಣಶಕ್ತಿನೆ ಮಾಡುವದು ಅಕ್ಕನವರ್ಷ ಹಲ್ಲುಗಳ [illegible] ಯಿಂದ ಅಗ್ನಿಮಾಂದ್ಯ, ಸಂಧಿವಾತ, ನೇತ್ರರೋಗ, ಕರ್ಣರೋಗ ಮೊದಲಾದ ಬೇನೆಗಳಾಗುತ್ತವೆ
ಕಾರಣ, ನಿಮ್ಮ ಹಲ್ಲುಗಳು ಸರಿಯಿರದಿದ್ದರೆ,
ನಮ್ಮ ಕಡೆಗೆ ಬನ್ನಿ, ಪರೀಕ್ಷಿಸಿಕೊಳ್ಳಿ!
ಅವನ್ನು ಸ್ವಚ್ಛ-ಸುಂದರ ಮಾಡಿಕೊಡುವೆವು

ಡಾ॥ ಎಫ್. ಜೇ. ಪಿ. ಪೇರೇರಾ,
ವೈದ್ಯ ಮತ್ತು ದಂತವೈದ್ಯಕ ವಿಶಾರದ,
ಸಂತೆ ಪೇಟೆ, ಕಾರವಾರ. (ಜಿ ಉ ಕಾನಡಾ)

೫ ವೀರಧರ್ಮ

[೨ನೇ ಪಾನಿನಿಂದ ಮುಂದರಿಸಿದ್ದು]

ರಾಜ್ಯಗಳನ್ನು ಆವನು ಎಮುರಿಸಬಲ್ಲನು ವರ್ಣದ ರಹಸ್ಯವು ಆವನಿಗೆ ಸಹಜವಾಗಿ ಹೊಳೆಯುತ್ತದೆ ಒಡತನವು ಮನುಷ್ಯನಿಗೆ ಅನ್ನವು, ಈಶ್ವರನ ಪ್ರಸಾದವು. ಪರ್ಮದ ಆಧಾರವು ಇಂತಹ ಒಡ ಜನರು ನ ದಿನಲ್ಲಿ ಹೆಚ್ಚಲಿ, ನಾಡಿನ ಒಡತನವು ನೀಗುವದು, ಸ್ವಾಯೋಪಜೀವನವು ಇಲ್ಲದಂತಾಗುವದು, ನಾಡಿನಲ್ಲಿ ಸಾಹಸವು ತಲೆದೋರುವದು, ಹಾಗೂ ಇಂದು ಅಶಕ್ಯವೆಂದು ಕಾಣುವ ಸಂಗತಿಗಳು ಅಂದು ಶಕ್ಯವಾಗುವವು, ಸುಲಭವಾಗುವವು

× × ×

ವಾರ್ತೆಗಳು.

— ಪಾರ್ಲಿಮೆಂಟಿನಲ್ಲಿ ಭಾರತ ಮಂತ್ರಿಗಳು ಸತ್ಯಾಗ್ರಹದಲ್ಲಿ [illegible] ಹೇಳಿದರು ಜನ [illegible] ಸಾವಿರ, [illegible] ಸಾವಿರ, [illegible] ಸಾವಿರ, ಹೀಗೆ [illegible] ಸಾವಿರ ಜನ [illegible] ಭಾರತ ಮಂತ್ರಿಗಳು [illegible] ದರು

— [illegible] ವರ್ಷ ವಯಸ್ಸಿನ ಮುದುಕಿಯನ್ನು ಲಗ್ನ ಮಾಡಿಕೊಂಡ ಬಗ್ಗೆ ಅಹಮದಾಬಾದದಲ್ಲಿ ಕನ್ಹಯಾ [illegible] ಲಾಲ ಎಂಬವರಿಗೆ ರೂ [illegible] ಹಾಗು ತಂದೆ [illegible] ಕನ್ಹರಾ [illegible] ವರಿಗೆ ರೂ ೧೦೦, ಹೀಗೆ [illegible] ಕಾಯಿದೆಯಂತೆ ಶಾಸನವಾಗಿದೆ

— ಮದ್ರಾಸ, ಕಲಕತ್ತಾ, ಅಲಹಾಬಾದ, ಲಾಹೋರ ಮೊದಲಾದ ಕಡೆಗಳಲ್ಲಿ ಟಪಾಲ ಒಡಿಸ್ಕ್ಯಾರೆ ಜನರು ಟಪಾಲ ಪೆಟ್ಟಿಗೆಗಳಲ್ಲಿ ಒಮ್ಮೆಲೆ ಎಣ್ಣೆ ಹಾಕಿ ಪತ್ರಗಳನ್ನು ಸುಡುತ್ತಾರೆ ಅದರಿಂದ ಪತ್ರಗಳನ್ನೆಲ್ಲ ಟಪಾಲ ಆಫೀಸಿನಲ್ಲಿಟ್ಟ ಪೆಟ್ಟಿಗೆಗಳಲ್ಲಿಯೇ ಹಾಕಬೇಕೆಂತಲೂ ಊರಲ್ಲಿಟ್ಟ ಪೆಟ್ಟಿಗೆಗಳಲ್ಲಿ ಹಾಕಬಾರದಾಗಿಯೂ ಮದ್ರಾಸ ಟಪಾಲ ಖಾತೆಯ ಸರ್ಕಾರರು ಕಲಕತ್ತೆಯಲ್ಲಿನ ಲ್ವರಿಗ ಸರಿಹಿಡಿದಿದ್ದಾರೆ

— ದಾಕ್ಕಾದಲ್ಲಿ ಒಂದು ಅದ್ಭುತ ಪ್ರಕಾರ! 'ವಂದೇ' 'ಮಾತರಂ' ಹೀಗೆ ಕೂಗುವಲ್ಲಿ ಕೂತ ಅಬಕಾರಿ ಸುಪರಿಂಟೆಂಡೆಂಟರು ಕೂಗಿದರು, ಕಾರಕೂನರೂ, ಹೆಂಡಗಳೂ ಓಡಿದರು ಏನು ಪ್ರಕಾರವೆಂದು ವಿಚಾರಿಸಲು ತಿಳಿದದ್ದೇನಂದರೆ – ಇನ್ಸಪೆಕ್ಟರಿಗೆ ರಜೆ ಬೇಕಾಗಿತ್ತು ಅವರು ರಜೆ ಅರ್ಜಿ ಕೊಂಡು [illegible] ಸುಪರಿಂಟೆಂಡೆಂಟರ ಬಳಿಗೆ ಹೋಗಿ ಅರ್ಜಿ ಕೊಟ್ಟರು [illegible] ಜಿವನು [illegible] ಅದರಿಂದ ಅವರು [illegible] ದ ಕೃತ್ಯಕ್ಕೆ ತೆರೆದು [illegible] ತೆಗೆದು ತಮ್ಮ ಮೊಹರ ಎಂದರೆಂದು ಸುಪರಿಂಟೆಂಡೆಂಟರ [illegible] 'ವಂದೇ' 'ಮಾತರಂ' ಎಂದ [illegible] ರಿದರು ಇನ್ಸಪೆಕ್ಟರು [illegible] ಬಂಗಾಲದಲ್ಲಿ ಅಧಿಕಾರಿಗಳು [illegible]

[illegible] ದಲ್ಲಿ ಪ್ರೊಫೆಸರರ [illegible] ಗೆ ಮುತ್ತರವಾದ ಒಂದು ದೊಣ್ಣೆಯನ್ನು [illegible] ಜನರು ಹಿಡಿದು ಹೊಟ್ಟೆಯ ಮೇಲೆ ಬಡಿದರು ಕುಸ್ತಿಗೆ ಹಗ್ಗ ಹಾಕಿ ಒಂದಡೆ ೧೫ ಜನರು, ಮತ್ತೊಂದೆಡೆ ೧೫ ಜನರು, ಹೀಗ ಜಗ್ಗಿದರು ಆದಾಗ್ಯೂ ಪ್ರೊ||! ರಮಾಸರವರಿಗೆ ಸ್ವಲ್ಪಮಾತ್ರ ನೋವಾಗಲಿಲ್ಲ ಪ್ರೊಫೆಸರರು ಜೊತೆಗೆ ತಮ್ಮ ೫ನ್ನು ಶಿಷ್ಯಣಿಯರನ್ನೂ ಕೊಂಡೊಯ್ದಿದ್ದರು. ಅವರು ಕಬ್ಬಿಣ ಸರಳು ಬಗ್ಗಿಸುವ ಮೊದಲಾದ ಪ್ರಕಾರಗಳನ್ನು ಮಾಡಿತೋರಿಸಿದರು ಕುಮಾರಿ ಹಸನಾ ಎಂಬ ಶಿಷ್ಯಣಿಯು ಕೂದಲಿನಿಂದ ತುಂಬಿದ ಎತ್ತಿನ ಚಕ್ಕಡಿಯನ್ನು ಸರಸರನೆ ಎಳೆದೊಯ್ದಳು! ಇದನ್ನು ನೋಡಿ ಪ್ರೇಕ್ಷಕರು ಚಕಿತರಾದರು!

– ಮುಂಬಯಿ ಹೈಕೋರ್ಟಿಗ ಕಳೆದ ವಾರದಿಂದ ಬೇಸಿಗ ರಜೆ. ಹೈಕೋರ್ಟ ಜೂನ ೨ನೇ ತಾರೀಖಿಗೆ ಪುನಃ ಪ್ರಾರಂಭವಾಗುತ್ತದೆ

ಮದ್ರಾಸ ಇಲಾಖೆಯ ಮನ್ನಾರಗುಡಿಯಲ್ಲಿ ತಿಂಪ ಕೊಡದ್ದರಿಂದ ತಂಬಿಗೆ ಮೊದಲಾದ ಶ್ರೀಮಂತರ ಪಾತ್ರ ಸಾಹಿತ್ಯಗಳು ಜಪ್ತ ಮಾಡಲ್ಪಟ್ಟಿವೆ

ಸರತ ಜಿಲ್ಲೆಯ ಜಲಾಲಪುರ ತಾಲೂಕಿನ [illegible] ದಾರರು ಮೋಟಾರಿನವರಿಗ ಒಂದು ಸರ್ಕಾಲಾರನ, ಹೊರಡಿಸಿದ್ದಾರೆ ಮೋಟಾರುಗಳ ಮೇಲೆ ಬ್ರಿಟಿಶ ಧ್ವಜವನ್ನಿಡಬೇಕು ಈ ಹುಕುಮನ್ನು ಅವಮಾನ ಮಾಡಿದ ಬಗ್ಗೆ ಒಬ್ಬ ಡ್ರ್ಯಾಯವ್ಹರನಿಗೆ ಚಲೋ ಶಿಕ್ಷೆ ಕೊಡಲ್ಪಟ್ಟಿತು

ಒಳ್ಳೆವಿಯಲ್ಲಿ 'ಪ್ರಿಯದರ್ಶಿ ಕೊಸ್ಯಾಟಿ' ಯಾನೆ [illegible] ಸಂಪಾದಿಸಿದೆ ಈ ಸಂಪದವರು ಕಳೆ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಉಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರದೆ ಕಾಂತಿ, ನೀವು ವಿನಾ ಅ ಕುರಿತು ಲಕ್ಷ್ಯಕೊಡಬೇಕು ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ವಿನಾ ಮಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು ಜವಿ ತಿಕ್ಕಿದ ಕೂಡಲೆ ತಲೆಯು ಹೊಟ್ಟು ಹೋಗುತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ ಹೀಗೆ ಒಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ. ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟಿಗಳಿಗ ,, ೨—೧೦—೦
ಅಂಚವೆಚ್ಚ ,, ೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

— 0 —

೪ ಔಂಸಿಗೆ ರೂ. ೨—೦—೦
ಔಂಸಿಗೆ ,, ೦—೮—೦
ಡ್ರ್ಯಾಮಿಗೆ ,, ೦—೧೨—೦
ಅಂಚೆವೆಚ್ಚ ,, ೦—೬—೦

ಒಟ್ಟೋದಿಲ್ ಬಹಾರ

ಬೇಳಗಿಕ, ಮರಮಾಜೇರಿಸಿ

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು ?

ಒಟ್ಟೋದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಕೆಡುವದು ಒಟೋದಿಲ್ ಬಹಾರದಿಂದ ಅಸ್ಸಲವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

ಪೋಸ್ಟ ಬಾಕ್ಸ ೩೦೮ BOMBAY No. 2

ದ ಗುಲಾಬಿ ಪುಷ್ಪದ ದಿನ ಕ್ರೈಸ್ತರೊಳಗಿನ ೧೨೦೦ ಸ್ತ್ರೀಯರಿಗೆ ಮಿಷ್ಟಾನ್ನಭೋಜನವನ್ನಿತ್ತರು

— ಬಂಗಾಲದಲ್ಲಿ ಸ್ತ್ರೀ-ಸತ್ಯಾಗ್ರಹಿಗಳ ಸಂಖ್ಯೆ ೨೬ ತಿರುವಾಗಿತ್ತು. ಇವರಿಂದ ಒಬ್ಬಾಕೆ ಮುಸಲ್ಮಾನರೊಳಗಿನ ಸ್ತ್ರೀ ಜಾ ಪೈಕಿನ್ನ ೩ ಸ್ತ್ರೀ ಜೈಲಿಗೆ ಬಿಡುಗಡೆಮಾಡುವದೆಂದಿದ್ದಾರೆ

— ವನವಾಸಿಯಾಯಿ ಮಠದ ಶ್ರೀ ಸ್ವಾಮಿ ಗಳವರು ಬಾ ೩೦ ಸಾವಿರ ಖರ್ಚು ಮಾಡಿ ಒಂದು ಬಂಗಾರದ ರಥವನ್ನು ಕಟ್ಟಿಸಿದ್ದಾರೆ

— ಫ್ರಾನ್ಸ ದೇಶದ ಜಲಸಂಶೋಧಕರಾದ ಎಮ್. ಹೆನ್ರಿ ಮಾಜರರವರು 'ಪ್ರಾಚೀನ ಡಿವ್ಯಾನರ್ಸ ಎಂಡ್ ದೇರ ಮೆಥಡ್ಸ' ಜಲಸಂಶೋಧಕರೂ, ಶೋಧನೆಯ ಪ್ರಕಾರಗಳೂ ಎಂಬ ಪುಸ್ತಕ ಬರೆದು ಭೂಗರ್ಭದಲ್ಲಿರುವ ಜಲದ ಪತ್ತೆ ಹಚ್ಚುವ ಪ್ರಕಾರಗಳನ್ನು ವಿವರಿಸಿದ್ದಾರೆ ಇದರಿಂದ ಜಲಸಂಶೋಧನಕ್ಕೆ ಬಹಳ ಅನುಕೂಲತೆಯಾಗುವಂತಿದೆ

— ಫೆಬ್ರುವರಿ ತಿಂಗಳಲ್ಲಿ ಇಡೀ ಹಿಂದುಸ್ಥಾನದಲ್ಲಿ ೧೩೦ ಪುನರ್ವಿವಾಹಗಳಾದವು ಅವುಗಳಲ್ಲಿ ಮದ್ರಾಸ ಇಲಾಖೆಯಲ್ಲಿ ತೀರ ಕಡಿಮೆ, ಬರೇ ಎರಡು! ಮುಂಬಯಿ ಇಲಾಖೆಯಲ್ಲಿ ೯೨

— ಸಿಂಹಲ ದ್ವೀಪದೊಳಗಿನ ಕೆಂಡಿ ಪಟ್ಟಣದಲ್ಲಿ ಕಳ್ಳತನದ ಹೊಸ ಪ್ರಕಾರ ಒಬ್ಬ ಕಳ್ಳನಿಗೆ ಡಾಕ್ಟರರ ಮನೆಯಲ್ಲಿ ಕಳವು ಮಾಡುವದಿತ್ತು. ಡಾಕ್ಟರರು ಸಜ್ಜನರೆಂದು ಅವನಿಗೆ ಗೊತ್ತಿತ್ತು. ಇದರಿಂದ ಆತನು ಡಾಕ್ಟರರ ಮನೆಗೆ ಬೆಂಕಿ ಹಚ್ಚಿದನು ಅಲ್ಲಿ ಬೊಬ್ಬೆಯಾದ ಕೂಡಲೆ ಡಾಕ್ಟರರು ಓಡಿದರು ಕಳ್ಳನು ಡಾಕ್ಟರರ ಮನೆ ಹೊಕ್ಕನು ಡಾಕ್ಟರರ ಹೆಂಡತಿ ಬಾಗಿಲಲ್ಲಿ ನಿಂತಳು, ಕದಲಲಿಲ್ಲ ಆಕೆಯ ಕಡೆ ಕಳ್ಳನ ಆಟ ಸಾಗದೆ ಆತನು ಹಾಗೆಯೇ ಹಿಂಜರಿದು ಹೋದನು

— ಪುಣೆಯ ಫರ್ಗ್ಯೂಸನ್ ಕೊಲೇಜಿನಲ್ಲಿ ೧೭೦೦ ವಿದ್ಯಾರ್ಥಿಗಳಿದ್ದಾರೆ ವಿದ್ಯಾರ್ಥಿಗಳ ಸಂಖ್ಯೆ ಮಿತಿ ಮೀರಿ ಬೆಳೆದದ್ದರಿಂದ ವಿದ್ಯಾರ್ಥಿಗಳ ಮೇಲೆ ತಕ್ಕ ಅಂಕೆಯಿಡಲು ಅಧ್ಯಾಪಕರಿಗೆ ಅಸಾಧ್ಯವಾಗುತ್ತದಾಗಿ ಮುಂಬಯಿ ಸರಕಾರದ ಅಭಿಪ್ರಾಯವಾಗಿ ೧೯೩೩ನೇ ಇಸ್ವಿ ಜೂನ ತಿಂಗಳೊಳಗೆ ವಿದ್ಯಾರ್ಥಿಗಳ ಸಂಖ್ಯೆಯನ್ನು ೧೫೦೦ಕ್ಕೆ ಇಳಿಸದಿದ್ದರೆ ಸರಕಾರದಿಂದ ಕಾಲೇಜಿಗೂ, ಕಾಲೇಜಿಗೊಪ್ಪಿದ ಹೈಸ್ಕೂಲುಗಳಿಗೂ, ಕಾಲೇಜು ನಡಿಸುತ್ತಿದ್ದ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಎಲ್ಲ ಸಂಸ್ಥೆಗಳಿಗೂ ಸಿಗತಕ್ಕ ಸುಮಾರು ೬೦ ಸಾವಿರ ರೂಪಾಯಿ ಗ್ರಾಂಟು ಸಿಗಲಿಕ್ಕಿಲ್ಲವಾಗಿ ಹೇಳಿದ್ದರಿಂದ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯವರು ವಿದ್ಯಾರ್ಥಿಗಳ ಸಂಖ್ಯೆಯನ್ನು ಕುಗ್ಗಿಸಿಕೊಳ್ಳುತ್ತಿದ್ದಾರೆ ಬಹುಶಃ ಗವರ್ನರರಾಗಿದ್ದ ಸರ್ ಅರ್ನೆಸ್ಟ ಹಾಟ್ಸನ್‌ರವರ ಮೇಲೆ ಗುಂಡು ಹಾರಿಸಿದ ಬಗ್ಗೆ ಕೊಲೇಜಿಗೆ ಆದ ಪ್ರಾಯಶ್ಚಿತ್ತ ಪ್ರಕರಣವು ಈ ರೀತಿ ಪೂರ್ತಿಗೊಂಡಿತು

— ಇಂಗ್ಲಂಡದಲ್ಲಿ ಒಂದು 'ಕ್ರೂಡ' ಎಣ್ಣೆಯ ಪ್ರಯೋಗವಾಯಿತು ಮೋಟಾರಿಗೆ 'ಕ್ರೂಡ' ಎಣ್ಣೆ ಹಾಕಿ ಓಡಿಸಿದರು, ಸರಾಸರಿ ತಾಸಿಗೆ ೪೦ ಮೈಲಿನಂತೆ ಓಡುತ್ತದೆ ೧೦೦ ಮೈಲು ಓಟಕ್ಕೆ ೩ ಆಣೆ ಖರ್ಚು ಬರಿತು ಇದು ಯಶಸ್ವಿಯಾದರೆ ಪೆಟ್ರೋಲಿನ ಗಿರಾಕಿ ಕುಗ್ಗಿ 'ಕ್ರೂಡ' ಎಣ್ಣೆಯ ಗಿರಾಕಿ ಹೆಚ್ಚುವದು ಇದರಿಂದ ಮೋಟರ ಪ್ರವಾಸವೂ ಅಗ್ಗವಾಗಬಹುದೇ?

— ಬಂಗಾಲ ಪ್ರಾಂತದ ಬಂಕುರಾದಲ್ಲಿ ಒಂದು ಬಾನಾವಳಿ ಪೇಠಾಯಿದೇವಿ ಎಂದು ಜಾಹೀರನಾಮೆ ಹೊರಟಿದೆ ಬಾನಾವಳಿ ನಡಿಸುವದರಿಂದ ಕೋಂಗ್ರೆಸಿಗೆ ಸಹಾಯವಾಗುತ್ತದೆ ರಾಜದ್ರೋಹದ ಯುಗದೊಳಗಿನ ಇದೊಂದು ವಿಶೇಷ ತರಗತಿಯು ಅಸಾದ!

— ಹೆಂಗಸರ ಕಡೆ ಗೌಪ್ಯ ಮಾಡಬಾರದು, ಅವರ ಸ್ವಾಭಾವಿಕವಾಗ ತ್ವರಿತಾಗಿ ಇಲ್ಲಿ ಭಾವನೆಯುಳ್ಳ ಫ್ರಾನ್ಸ ದೇಶದಲ್ಲಿಯೂ ಹಾಗೆಯೇ ಭಾವನೆ ಹೆಂಗಸರಿಗೆ ಸಾಲಿಸಿಟರರಾಗಲು ಅಧಿಕಾರ ಕೊಡಬೇಕೆಂದು ಕಾಯಿದೆ ತಯಾರಾಗಿತ್ತು. ಅದಕ್ಕೆ ಕಾಯಿದೆ ಕೌನ್ಸಿಲು ಒಪ್ಪಲಿಲ್ಲ ಯಾಕೆಂದರೆ, ಹೆಂಗಸರ ಕಡೆ ಅಂತರಂಗವಲ್ಲಿ ಬಹಿರಂಗವಾಗುತ್ತದ ಸುಪಾರಿಸಿದ ರಾಷ್ಟ್ರಗಳೊಳಗಿನ ನಿರ್ಣಯವಿದು ಗಂಡಸರಿಗಿಂತ ಹೆಂಗಸರೇ ಹೆಚ್ಚಿಗೆಯಾಗಿ ಅಂತರಂಗ ಕಾಡಬಲ್ಲರೆಂದು ಹೆಂಗಸರು ಅಲ್ಲಿ ಬಹು ದೊಡ್ಡ ಹೂಟಿ ಯಬ್ಬಿಸಿದ್ದಾರೆ ಸದ್ಯಕ್ಕೆ ಗಂಡಸರ ಕೌನ್ಸಿಲು ಇದನ್ನೊಪ್ಪುವದಿಲ್ಲ ಹೆಂಗಸರ ಕೌನ್ಸಿಲು ಬಂದಾಗ ನೋಡುವಾ!

— ಇಬ್ಬ ಬಂಗಾಲಿ ತಂದೆ-ಮಗಂದಿರು ಬಂಗಾಲದಲ್ಲಿ ಒಂದು ದೊಡ್ಡ ಬಂಗಾಲಿ ಎಬ್ಬಿಸಿದ್ದಾರೆ ಕೆಲ ಪರಿವಾರ ಕಟ್ಟಿಕೊಂಡು ಊರೂರು ತಿರುಗುತ್ತಿದ್ದಾರೆ ಇವರು ಐಶ್ವರ್ಯವಂತರು, ವಿಶ್ವವಿದ್ಯಾಲಯದ ಪದವೀಧರರು, ಇಂಪ್ರೆಂ-ದಂಪ್ರರು, ಹೀಗ ಪರಿವಾರದವರ ಕಡೆಯಿಂದ ಘೋಷಣೆ ಮಾಡಿಸಿಕೊಳ್ಳುತ್ತಾರೆ. ರೂ ೫೦೦೦ ವರದಕ್ಷಿಣೆ ಕೊಡಬೇಕು, ೨|| ಸಾವಿರ ರೂ ಕೊಡಬೇಕು, ಹೀಗ ಹೇಳಿ ವರದಕ್ಷಿಣೆ ಪಡೆಯುತ್ತಾರೆ ವಧುವೆ ಸಂಬಂಧವಾದ ಕೂಡಲೆ ಮದ ೧ಗೆ ತ್ರಿವೇಣಿಯಲ್ಲಿ ಬಿಟ್ಟು ಬೇರೂರಿಗೆ ಹೋಗಿ ಪುನಃ ಮದುಮಕ್ಕಳೆಂದು ಮೆರೆಯುತ್ತಾರೆ! ಹೀಗೆ ಇವರು ಅನೇಕ ಹೆಣ್ಣುಮಕ್ಕಳ ಮದುವೆಯಾಗಿರುವರಂತೆ! ಈಗಿನ ದಿನಮಾನದಲ್ಲಿ ಬಂದಪಲಿಲ್ಲದ ಉದ್ಯೋಗವಿದು!

ಮಕ್ಕಳಿದ್ದರೆ ಮನೆ ಚಂದ!

ಬಂಜೆತನದಿಂದ ಮುಕ್ತರಾಗುವಿರಿ!

ಮಕ್ಕಳ ಕ್ಲಿಂಮ

ಪಿಂಡ ಬೇಡಿರಿ

ಗರ್ಭಧಾರಣ ಸಂಜೀವನೀ.

ಈ ನಮ್ಮ ಅನುಭವಿಕ ಔಷದ ಮೂರು ಸಾರೆ ಋತುಸ್ನಾತ ಆಗುವ ವರೆಗೆ ಪ್ರತಿಸಾರೆ ಮೂರು-ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ ೯ ಗುಳಿಗೆಗಳ ಕಿಂ ರೂ ೩ ಟ ಖ. ೬ ಆಣೆ ಅನುಪಾನ ಪತ್ರಿಕೆ ಸಂಗಡ

ಪತ್ತೆ— ವೈದ್ಯ ವ್ಹಿ. ಎಸ್ ಕಾವಸೇ, ಮಿರಜ. (S M C)

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ತಾಜಾ ಮತ್ತು ಪೌಷ್ಟಿಕ ವನಸ್ಪತಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟಗಳು ಮತ್ತು ಬಂಗಾರದ ಪದಕಲು ದೊರೆತಿರುವ ಧಾತುಪೌಷ್ಟಿಕ ಮತ್ತು ರಕ್ತವರ್ಧಕ ಜಗತ್ಪ್ರಸಿದ್ಧ

ದ್ರಾಕ್ಷಾಮೃತವು.

ಈ ದ್ರಾಕ್ಷಾಮೃತವು ಸಹ್ಯಾದ್ರಿಪರ್ವತದಲ್ಲಿರುವ ಅನೇಕ ವನಸ್ಪತಿಗಳ ಪದಾರ್ಥಗಳಿಂದಿಗ ದ್ರಾಕ್ಷಾರಸವನ್ನು ಮಿತ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿದ್ದರಿಂದ ಸ್ವಾದಿಷ್ಟವೂ ಸುಮಧುರವೂ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯೊಳಗ ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳಿಗೆ ಉರುಪು ಏಳೋಣ ಯಾವ ಗಳಿಗೆ ಎಲುಬಿನಲ್ಲಿ ಜ್ವರ ಇರೋಣ, ತಲೆ ಸೋಯೋಣ, ಪಿತ್ತದಿಂದ ಕಣ್ಣಿಗೆ ಕತ್ತಲೆ ಬಂದ ಬೇಸರಿಕೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿಯು ಪ್ರದೀಪ್ತವಾಗುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೆ, ವೃದ್ಧರಿಗೆ ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೂ ಮತ್ತು ಕಷ್ಟದ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಅಶಕ್ತ ಹುಡುಗರು ಬಲವಂತರಾಗುವರು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ—೧ ಬಾಟ್ಲಿ ಸೇವನೆ ಮಾಡಿದ ನಂತರ ತಿಳಿದೀತು. ೧ ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೪-೦ ಒಂದು ಡಜನ ಬಾಟ್ಲಿಗೆ ೧೧-೦-೦ ಪಟ್ಟಿಗೆ ೧ ಡಜನ್ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೇವೆ ಟಪಾಲ ಖರ್ಚು ಪ್ಯಾಕಿಂಗ ಬೇರೆ ಬೀಳುತ್ತದೆ

ಏಜಂಟರ ಮುಖಾಂತರ ೧ ಬಾಟ್ಲಿಗೆ ೧-೪-೦, ೩ ಬಾಟ್ಲಿಗೆ ೩-೮-೦; ಈ ೧೨ ರೂಪಾಯಿ

ಮ್ಯಾನೇಜರ, **ದ್ರಾಕ್ಷಾಮೃತ ಕಾರ್ಯಾಲಯ, ಪೋ. ನಿಪ್ಪಾಣಿ** (ಜಿಲ್ಹಾ ಬೆಳಗಾವಿ)

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು

ಕುಮಟಾ ಏಜಂಟರು — ಕಾರವಾರ ಏಜಂಟರು —

ನ್ಯೂ ಸಪ್ಲಾಯ ಏಜನ್ಸಿ ವ ನೆಹರೂ ಸ್ಟೋರ್ಸ. ದಾಮೋದರ ಶಾನಭಾಗ ಮ ಮುಜುಮದಾರ

ಶಿರ್ಸಿ ಏಜಂಟರ — ಎಸ್. ಎಲ್ ಧಾರೇಶ್ವರ ವ ರಂಗಪ್ಪಾ ಗಾಂಜಾ.

ಜೀವನ ಸಾಹಿತ್ಯ.

೬. ರಕ್ತವೂ, ಬೆವರೂ:

* * *

ಅ:— ಶ್ರೀ|| ಹನುಮಂತರಾವ ಮಾಂಜರೇಕರ.

ನಮ್ಮ ಮೈಯೊಳಗಿನ ಮಾಲಿನ್ಯ ನೀರಿನಿಂದ ತೊಳೆದು ಹೋಗುತ್ತದೆ. ಬಟ್ಟೆಯ ಕೊಳೆಯು ಸಾಬೂನದಿಂದ ಹೋಗುತ್ತದೆ, ಪಾತ್ರೆಗಳ ಮೇಲಿನ ಕಲೆಗಳು ಆಮ್ಲದಿಂದ ಇಲ್ಲದಂತಾಗುತ್ತವೆ, ಆದರೆ ಸಾಮಾಜಿಕ ದೋಷವಾಗಲಿ, ರಾಷ್ಟ್ರೀಯ ಪಾಪವಾಗಲಿ ಯಾವ ಪದಾರ್ಥದಿಂದ ತೊಳೆಯಲ್ಪಡಬಹುದು? ಅದಕ್ಕೆ ಧಾರ್ಮಿಕ ಪ್ರಾಯಶ್ಚಿತ್ತವು ಸಾಕಾಗಲೊಲ್ಲದು. ನದಿಗಳಾಗಲಿ ಸಮುದ್ರದಲ್ಲಾಗಲಿ ಸ್ನಾನ ಮಾಡುವುದರಿಂದ ಕೆಲಸವಾಗುವಂತಿಲ್ಲ. ಅದು [illegible] ಅಂತಃಕರಣದ ಪ್ರಾಯಶ್ಚಿತ್ತದಿಂದಲೇ, ಆಂತರಿಕ ಪರಿವರ್ತನೆಯಿಂದಲೇ [illegible] ಹೋಗಬಲ್ಲದು. ರಾಷ್ಟ್ರೀಯ ಹಾಗೂ ಸಾಮಾಜಿಕ ಪಾಪವು ತೊಳೆದು ಹೋಗಲಿಕ್ಕೆ ಸಮುದ್ರ ನೀರಿನ ಮೇಲೂ ಉಪಯೋಗವಿಲ್ಲ, ಅದು ನಮ್ಮ ರಕ್ತ, ನಮ್ಮ ಬೆವರುಗಳಿಂದಲೇ ಕ್ಷಾಲನವಾಗಬೇಕು

ಇದಕ್ಕಾಗಿಯೇ ಈಶ್ವರನ ಯೋಜನೆಗನುಸಾರವಾಗಿ ಪ್ರತಿಯೊಂದು ಧರ್ಮದ ಸ್ಥಾಪನೆಗೆ ಮೊದಲು, ಮನುಷ್ಯನ ಬಿಸಿ ನೆತ್ತರವು ಹರಿದಿದೆ. ರಕ್ತದ ಬಲಿಯಿಂದಲೇ ಹೃದಯವು ಮಾರ್ದವ ಹೊಂದುತ್ತದೆ, ಪಾಪವು ತೊಳೆದು ಹೋಗುತ್ತದೆ ರಕ್ತದಿಂದಲೇ ಇಸ್ಲಾಮ ಧರ್ಮದ ಸ್ಥಾಪನೆಯಾಯಿತು, ರಕ್ತದಿಂದಲೇ ಯಹೂದಿಯರ [illegible] ಗಟ್ಟಿಯಾದ ಭೂಮಿಯಲ್ಲಿ ಕ್ರಿಸ್ತನ ಪವಿತ್ರ ಧರ್ಮವು ನೆಲೆಗೊಂಡಿತು, ಸಿಖಧರ್ಮದ ಹಬ್ಬುಗೆಯೂ ರಕ್ತದಿಂದಲೇ ಆಯಿತು, ಸತ್ಯಾಗ್ರಹವೂ ರಕ್ತದಿಂದಲೇ ವಿಶ್ವಮಾನ್ಯವಾಗುವುದೆಂದು ಈಶ್ವರೇಚ್ಛೆಯು ಇರುವ ಹಾಗೆ ಕಾಣುತ್ತದೆ

ರಕ್ತ-ಬೆವರುಗಳಲ್ಲಿ ಯಾವ ಭೇದವೂ ಇರುವುದಿಲ್ಲ ಹಾಲೂ ತುಪ್ಪವೂ ರಕ್ತಮಾಂಸಗಳ ಸತ್ವವಾಗಿರುವಂತೆ, ಬೆವರೂ ಮನುಷ್ಯನ ರಕ್ತದ ದ್ರವವಾಗಿರುತ್ತದೆ ಯಾರೊಬ್ಬನ ಕಡೆಯಿಂದ ಒತ್ತಾಯದಿಂದ ಸೇವೆಯನ್ನು ಮಾಡಿಕೊಳ್ಳುವುದು, ಅವನ ಬೆವರು ಹರಿಯುವಂತೆ ಮಾಡುವದು,— ಅವನ ಕೊಲೆಗೆ ಸಮಾನವೆಂಬುದೇ ಸರಿ [illegible] — ಇದರ ಪಂಚಾಮೃತ [illegible] ಸಾಸಕ್ಕಾಗಿ [illegible] ಗುಲಾಮಗಿರಿಯಲ್ಲಿ ದೂಡಿ [illegible] ರಕ್ತವನ್ನು ಸುರಿಸುವುದರಲ್ಲಿಯೂ, ತಮ್ಮ ಹಂಡಿಸ [illegible]ಕ್ಕಾಗಿ ದೀನ ಭಾರತವನ್ನು ಸುಲಿದು ಅವರ ಸತ್ವವನ್ನು ಹೀರುವುದರಲ್ಲಿಯೂ ತಾತ್ವಿಕ ಭೇದವು ಯಾವುದೂ ಇರುವುದಿಲ್ಲ ಇದರಂತೆಯೇ ಆಫ್ರಿಕದ ಹಬಶಿ ಜನರನ್ನು ಹಿಡಿದು ಮನುಷ್ಯರು ಕೊಂದು ತಿನ್ನುವುದರಲ್ಲಿಯೂ, ಸಣ್ಣ [illegible] ಮಡಿತದಿಂದ ಮದ್ದುಗಳು [illegible] ಹಾಕುವುದರಲ್ಲಿಯೂ ಯಾವ ತಾತ್ವಿಕ ಭೇದವೂ ಇಲ್ಲ ಒಂದು ದೇಶದ ಮಾಲೀಕನಾಗಿ ಹೋಗಿ ಅಲ್ಲಿಯ ಲಕ್ಷಾವಧಿ ಜನರನ್ನು ಬುದ್ಧಿಪುರಸ್ಸರವಾಗಿ ಕೊಲೆ ಮಾಡುವುದು ಎಷ್ಟು ದೊಡ್ಡ ಮನುಷ್ಯವಧೆಯೋ, ಒಂದು ನಾಡಿನ ಪ್ರಜೆಗಳನ್ನು ಗುಲಾಮರನ್ನಾಗಿ ಮಾಡಿ ಅವರನ್ನು ಬಲಾತ್ಕಾರದಿಂದ ದುಡಿಸಿಕೊಂಡು ಅವರನ್ನು [illegible] ಕೂಲಿಯಾಳುಗಳನ್ನಾಗಿ ಮಾಡುವುದೂ ಅಷ್ಟೇ ದೊಡ್ಡ ಮನುಷ್ಯವಧೆಯು.

ಬೇರೆಯವರ ನೆತ್ತರವನ್ನು ಸುರಿಸುವುದಕ್ಕೆ ಸಮಾನವಾದ ಮಹಾಪಾಪವು ಇನ್ನೊಂದಿಲ್ಲ ಇದರಂತೆ [illegible] ಇಚ್ಛಾಪೂರ್ವಕವಾಗಿಯೂ ಜ್ಞಾನಪೂರ್ವಕವಾಗಿಯೂ ತನ್ನ ರಕ್ತದ ಬಲಿದಾನವನ್ನು ಮಾಡುವುದಕ್ಕೆ ಸಮಾನವಾದ ಪ್ರಾಯಶ್ಚಿತ್ತವೂ ಇಲ್ಲ, ಬೇರೆಯವರ ನೆತ್ತರವನ್ನು ತಕ್ಕೊಳ್ಳುವುದಕ್ಕೆ ಒಮ್ಮೆ ಅವರ ಬೆವರನ್ನು ತಕ್ಕೊಳ್ಳುವ ಹೊಸ ಪದ್ಧತಿಯು ಪ್ರಪಂಚದಲ್ಲಿ ಹೊರಟಿರುವಂತೆ, ತನ್ನ ರಕ್ತದ ಬಲಿದಾನ ಮಾಡುವುದಕ್ಕೆ ಪ್ರತಿಯಾಗಿ ತನ್ನ ಬೆವರನ್ನು ಕೊಡುವುದೇ ಬಹು ಸಮರ್ಪಕವಾದ ಪ್ರಾಯಶ್ಚಿತ್ತವು. ಪಾಪಿ ಮನುಷ್ಯನು ತನಗೆ ಬೇಕಾದಾಗ ಬೇರೆಯವರ ಕೊಲೆ ಮಾಡಬಲ್ಲನು, ಆದರೆ ಆತನ ಬೆವರು ಅವನ ಸತ್ಕಾರ್ಯದಿಂದಲೇ ಸಿಗುವುದು. ಸಾಧ್ಯ, ಇದಕ್ಕೆ ವಿರುದ್ಧವಾಗಿ, ಪ್ರಾಯಶ್ಚಿತ್ತಕ್ಕಾಗಿ ನಾವು ನಮ್ಮ ನೆತ್ತರವನ್ನು ಸುರಿಸಲಿಕ್ಕೆ ಸಿದ್ಧರಾದರೂ ದುಷ್ಟ ಮನುಷ್ಯನು ನಮ್ಮ ನವ [illegible] ಬಿಡದೆ ಹೋಗಬಹುದು, ಅದನ್ನು (ರಕ್ತವನ್ನು) ಕೊಡುವುದು ನಮಗೆ ಸಾಧ್ಯ [illegible] ಜಾಗೆ ಸಿಕ್ಕಿ ದರ [illegible] ಅಲ್ಲದೆ ರಾಷ್ಟ್ರ [illegible] ತನ್ನ ರಕ್ತವನ್ನು ಅರ್ಪಿಸುವ ಸಂಧಿಯು ಹೇಗೆ ಸಿಗುತ್ತದೆ? ಆದರ ಬೆವರಿನ ಮಾತು ಹಾಗಲ್ಲ; ಅದನ್ನು ನಮ್ಮ ಸ್ವೇಚ್ಛೆಯಂತೆ ಬೇಕಾದಾಗ ಬಲಿದಾನ ಮಾಡಲು ನಾವು ಸಮರ್ಥರು ಇದರಲ್ಲಿ ಅತ್ಯಾಚಾರಿಯ ಸಹಕಾರಿತೆಯ ಅವಶ್ಯಕತೆಯೇನೂ ಇಲ್ಲ ರಾಷ್ಟ್ರೀಯ ಪ್ರಾಯಶ್ಚಿತ್ತ ಆತ್ಮಶುದ್ಧಿಗಳಿಗಾಗಿ, ಸ್ವತಂತ್ರತಾದೇವಿಯ ಒಲುಮೆಗಾಗಿ, ತನ್ನ ಪರಿಶ್ರಮವನ್ನು—ಅವಿಶ್ರಾಂತ ಪರಿಶ್ರಮವನ್ನು ಬಲಿದಾನವಾಗಿ ಸಮರ್ಪಿಸುವದರಲ್ಲಿ ತನ್ನ ಸ್ವಂತದ ಬಗ್ಗೆ ಕನಿಕರ ಹಿಡಿಯದೆ ಕೆಲಸ ಮಾಡುವುದಕ್ಕೆ 'ರಚನಾತ್ಮಕ ಕಾರ್ಯಕ್ರಮ' ಎಂಬ ಹೆಸರು. ರಚನಾತ್ಮಕ ಕಾರ್ಯಕ್ರಮದೊಳಗಣ ಹಿರಿತನವು ಹೊರಗಿನಿಂದ ಕಾಣುವುದಿಲ್ಲ ಇಷ್ಟರಿಂದಲೇ ಅದರ ಮಹತ್ವವು ಕಡಿಮೆಯಾಗುವುದಿಲ್ಲ. ಸ್ವರಾಜ್ಯವನ್ನು ಬಯಸುವವನು ಯಾವಾಗಲೂ ತನ್ನ ನೆತ್ತರವನ್ನು ಕೊಡಲಿಕ್ಕೆ ಸಿದ್ಧನಾಗಿರಬೇಕು ಅಂತಹ ಪ್ರಸಂಗವು ಬರುವವರೆಗೆ ರಚನಾತ್ಮಕ ಕಾರ್ಯದಲ್ಲಿ ಅವನು ಬೆವರನ್ನು ಸುರಿಸುತ್ತಿರಬೇಕು ಹಾಗೂ ಇದರೊಂದಿಗೆ ತಾನು ಬೇರೆಯವರ ರಕ್ತವನ್ನು ಸುರಿಸುವ ಪಾಪವನ್ನು ಎಂದೂ ಮಾಡಲಿಕ್ಕಿಲ್ಲೆಂದೂ, ಬೇರೆಯವರ ಬೆವರನ್ನು ಹಿಂಡಿ ಅದರಿಂದ ಅನುಚಿತ ಲಾಭವನ್ನು ಪಡೆಯಲಿಕ್ಕಿಲ್ಲೆಂದೂ— ನಿಶ್ಚಯ ಮಾಡಬೇಕು

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.

ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!

ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ
ಮುಖ್ಯ ಆಫೀಸು ಕೆನಡಾ ಬಿಲ್ಡಿಂಗ, ಹೋರ್ನಬಿ ರೋಡ, ಮುಂಬಯಿ.
ಜನರಲ್ ಮೆನೇಜರ— ನಾ|| ಸರ ಫಿರೋಜ ಸೇಠನಾ, ಕೆ ಟಿ ಒ ಬಿ ಈ
೧೯೩೧ನೇ ಇಸ್ವಿಯಲ್ಲಿ ಒಂದ ಹೊಸ ವಿಮೆ ರಕಮು. [illegible] ಕೋಟಿಗೂ ಮಿಕ್ಕಿದೆ
೧೯೩೧ನೇ ಇಸ್ವಿ ಡಿಸೆಂಬರ ೩೧ನೇ ತಾರೀಖಿಗೆ ಕೂಡಿದ ನಿಧಿ [illegible] ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಪಡದು ಮರುಸಿನಿಂದ ಹಾಗು ದಕ್ಷತೆಯಿಂದ ನವಯುವಕರು ದುಡಿದು ಸುಲಭವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು
ಕರಾರು ಮೊದಲಾದವುಗಳಿಗಾಗಿ ಪತ್ರವ್ಯವಹಾರ ನಡಿಸುವ ಪತ್ತೆ—

The District Manager,
Canada Building,
Hornby Road, BOMBAY.

OR

Mr. S. B. Rege,
Chief Agent,
171, Civil Lines,
Camp BELGAUM

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಶೇಅರ ದಾರರೂ, ಚಾಲಕರೂ ಬಹಳ ಸುಯೋಗ್ಯರು ಇದ್ದಾರೆ. ಕಂಪೆನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ವತಃ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ತಿಳಿವದು.

Kumta Agents—
D K NAYAK Bros
Honavar Agent
R V PARBHU Esq

K. Padmanabha Rao & Sons,
BELGAUM
Chief Agents for
Karnatak Districts & S. M. States

ಸಿದ್ಧಾಪುರದೊಳಗಿನ ಪ್ರಚಂಡ ರಾಜನಿಷ್ಠರ ಸಭೆ.

ಸಭೆ ಒಂದು; ಅಧ್ಯಕ್ಷರೆರಡು!

ಪೋಲೀಸ ಇನಸ್ಪೆಕ್ಟರರ ಸ್ವದೇಶಿ!!

ರಾ|| ಗಂಗೊಳೀಯವರ ಒಯ್ಯಾರಗಳು!

[ಅಪ್ರಸಿದ್ಧನು ಪ್ರಸಿದ್ಧಿಗಾಗಿ ಬರೆದುದು]

ಸಿದ್ಧಾಪುರದೊಳಗೆ ನಡೆದ ಪ್ರಚಂಡ 'ರಾಜನಿಷ್ಠರ ಸಭೆಯ ವೃತ್ತಾಂತವನ್ನು ನನಗೊಬ್ಬರೂ ತಿಳಿಸಲಿಲ್ಲ. ಅದನ್ನು ಕಾರವಾರದ 'ವಿಚಾರಿ' ಪತ್ರಿಕೆಯಲ್ಲಿ ಕಂಡೆನು. ಅದನ್ನೋದಿ ನನಗೆ ಹೇಳಲಾರದಷ್ಟು ಸಂತೋಷ. ಮೂಲ ವೃತ್ತಾಂತವು ಇಂಗ್ಲಿಷ ಭಾಷೆಯಲ್ಲಿದೆ. ಭಾಷೆಯ ಸೊಗಸು, ತರ್ಕಶುದ್ಧ ವಿಚಾರ, ರಾಜನಿಷ್ಠೆಯ ಉತ್ಸಾಹ, ಕೊಂಗ್ರೆಸಿನ ದ್ವೇಷ, ದೇಶಾಭಿಮಾನ, ಬಡ-ಬಗ್ಗರ ದುಃಖ ನಿವಾರಣೆಗಾಗಿ ಕಳವಳ, ತೀರ್ವೆ ವಸೂಲಿಯ ಆಗ್ರಹ ಮೊದಲಾದ ವಿವಿಧ ಗುಣಗಳಿಂದ ೨ನೇ ಅಧ್ಯಕ್ಷರು ಕೊಟ್ಟ ವೃತ್ತಾಂತವು ತುಂಬಿತುಳುಕುತ್ತಿದೆ. ಅದನ್ನು ಭಾಷಾಂತರಿಸಿ ಕೊಡಬಹುದೆಂದು ನನಗೆ ಬಹು ಲವಲವಿಕೆ. ಆದರೇನು ಮಾಡಲಿ? ಮೂಲ ಲೇಖದ ಸ್ವಾರಸ್ಯವು ನನ್ನ ಭಾಷಾಂತರದಲ್ಲಿ ಬರಲಾರದಲ್ಲಾ! ಎಂದು ವ್ಯಸನ. ಪೋಲೀಸ ಇನ್ಸಪೆಕ್ಟರರ ಸ್ವದೇಶಿಯ ವಿಚಾರದ ಭಾಷಾಂತರ ನನ್ನಿಂದ ಎಂದೆಂದಿಗೂ ಮಾಡಬಹುದಂತಿಲ್ಲ. ಈ ಸ್ವದೇಶಿಯಲ್ಲಿ ನಾನು ಪರದೇಶಿಯಾಗಿ ಬಿಟ್ಟೆ! ಹೊನ್ನಾವರದ ರಾ|| ಗಂಗೋಳಿಯವರು ಈ ಸಿದ್ಧಾಪುರದ ಸಭೆಯ ೨ನೇ ಅಧ್ಯಕ್ಷರು. ಪೋಲೀಸ ಇನ್ಸಪೆಕ್ಟರರ ಪೊಗಳಿಕೆ, ಸ್ವಯಂಸೇವಕರ ತಿರಸ್ಕಾರ, ತೋಟಿಗರಿಗೆ ಕೊಟ್ಟ ಅಭಯ, ಮಾಮಲೇದಾರರ ಶಿಫಾರಸು ಮೊದಲಾದ ವಿವಿಧ ಒಯ್ಯಾರ—ವಚನಗಳನ್ನು ಯಥಾರ್ಥವಾಗಿ ನಾನು ಕನ್ನಡ ಭಾಷೆಯಲ್ಲಿ ವಾಚಕರಿಗೆ ಅರುಹಲಾರೆ, ಇದೇ ದೊಡ್ಡ ವ್ಯಸನ. ಮೇಲಾಗಿ ವೃತ್ತಾಂತವು ಉದ್ದವಾದದ್ದು, ಪುರಸತ್ತಿದ್ದಾಗ ಭಾಷಾಂತರಿಸಹತ್ತಿದರೆ ಎಷ್ಟು ಕಾಲ ತಗಲೀತೆಂದು ನಾನು ಹೇಳಲಾರೆ, ಅದರಿಂದ ಆ ಗೊಡವೆಯನ್ನೇ ಬಿಟ್ಟು ಅದರ ತಾತ್ಪರ್ಯವನ್ನಿಷ್ಟು ಕೊಡುತ್ತೇನೆ. ಅಷ್ಟರಿಂದಲೇ ವಾಚಕರು ಸಮಾಧಾನ ಹೊಂದಬೇಕಾಗಿ ನನ್ನ ಅರಿಕೆ. ಹೆಚ್ಚಿನ ಅಭಿಲಾಷೆಯುಳ್ಳ ಆಂಗ್ಲ ಭಾಷಾವಿಶಾರದರು 'ವಿಚಾರಿ' ಪತ್ರಿಕೆಯ ತಾ. ೧[illegible]ನೇ ಸಂಚಿಕೆಯನ್ನು ಸಮಗ್ರ ಓದತಕ್ಕದ್ದು ಇರಲಿ.

ಮೊಟ್ಟಮೊದಲು, ಸಭೆಯಲ್ಲಿ ಹಾಜರಿದ್ದ ೨೫ ಮಂದಿ ಮಹಾನುಭಾವರ ಹೆಸರುಗಳನ್ನೂ, ಪಟ್ಟಣದೊಳಗಿನ, ನೆರೆಹೊರೆಯ ಗ್ರಾಮದೊಳಗಿನ ಬೇರೆ ಬೇರೆ ಜಾತಿಯ ೧೫೦೦ ಮಂದಿ ಸಭಿಕರು ಸೇರಿದ್ದರೆಂದೂ ಬರೆದಿದೆ. ಆ ಮೇಲೆ ರಾ|| ಕಿಲಾರ ಗಣೇಶ ಹೆಗಡೆರು ಅಧ್ಯಕ್ಷರಾಗಬೇಕಾಗಿ ಸೂಚನೆ ಬಂದು, ಸರ್ವಾನುಮತಿಯಿಂದ ಅದು ಪಾಸಾಗಿ ರಾ|| ಹೆಗಡೆರ ಅಧ್ಯಕ್ಷತೆಯಲ್ಲಿ ಸಭಾಕಾರ್ಯವು ಪ್ರಾರಂಭವಾಯಿತು. ಶಾಲೆಯ ಹುಡುಗರು ಮೊಟ್ಟಮೊದಲು ಪ್ರಾರ್ಥನೆ ಮಾಡಿದರಂತೆ. ಯಾರ ಬಗ್ಗೆ ಪ್ರಾರ್ಥನೆ ನಡೆಯಿತೆಂದು ವೃತ್ತಾಂತದಲ್ಲಿ ನಮೂದಿಸಿಲ್ಲ. ಆ ಮೇಲೆ ಭಾಷಣಗಳಿಗೆ ಪ್ರಾರಂಭ. ಇಬ್ಬ ಅಧ್ಯಕ್ಷರು ಹಿಡಿದು ೧೦ ಜನರು ೧೦ ವಿಷಯಗಳ ಮೇಲೆ ೧೦ ಭಾಷಣ ಮಾಡಿದರು!! ಕನ್ನಡ ಶಾಲೆಯ ಹೆಡ್ ಮಾಸ್ತರರು ಬ್ರಿಟಿಶರ ರಾಜ್ಯದಿಂದ ಹಿಂದುಸ್ಥಾನಕ್ಕುಂಟಾದ ತರತರದ ಲಾಭಗಳನ್ನು ವಿವರಿಸಿದರಾಗಿ ಬರೆದಿದೆ. ಲಾಭಗಳ ವಿವರ ಕೊಟ್ಟಿಲ್ಲ. ಅವನ್ನು ಕೊಟ್ಟಿದ್ದರೆ ಬೇರೆ ಬೇರೆ ತಾಲೂಕಿನವರಿಗೆ ಮಾರ್ಗದರ್ಶಕವಾಗುತ್ತಿತ್ತು. ತ್ಯಾಗಿ ಶಾಲೆಯ ಹೆಡ್ ಮಾಸ್ತರರು ರೌಂಡ ಟೇಬಲ್ ಪರಿಷತ್ತಿನ ಪುರಾಣ ಬಿಚ್ಚುವಷ್ಟರಲ್ಲಿ, ರಾ|| ಗಂಗೋಳಿಯವರು ಬಂದರು. ಪೋಲೀಸ ಇನ್ಸಪೆಕ್ಟರರಾದ ರಾ|| ಮನಗೋಳಿಯವರು ಅವರಿಗೆ ಮುದ್ದಾಂ ನಿಮಂತ್ರಿಸಿದ್ದರಂತೆ. ರೌಂಡ ಟೇಬಲಿನ ಪುರಾಣ ಅಷ್ಟಕ್ಕೇ ತಡೆಯಿತು. ಇದು ರೌಂಡ ಟೇಬಲಿನ ಮೊದಲನೇ ಪರ್ವ. ಅಧ್ಯಕ್ಷರಾದ ರಾ|| ಕಿಲಾರ ಗಣೇಶ ಹೆಗಡೆರವರು ಎದ್ದು ನಿಂತರು. ರಾ|| ಗಂಗೋಳಿಯವರು ಹೆಚ್ಚಿನ ಯೋಗ್ಯತೆಯವರೆಂದು ಅಂದ ಸೂಚನೆಗೆ ಎದ್ದರೂ ತಲೆದೂಗಿದರು, ಆ ಮೇಲೆ ಮುಂದಿನ ರೌಂಡ ಟೇಬಲು ನಡೆದು ಮುಗಿಯಿತು. ಜಿಲ್ಹಾ ಬೋರ್ಡ ಮೆಂಬರರಾದ ರಾ|| ಹೆಗ್ಗೋಡಮನೆ ಜನ್ನಿಯಪ್ಪಗೌಡರು ಕಲಬಂದಿಯಿಂದ ರೈತರ ಘಾತವಾಗುತ್ತದೆಂದರು. ತೀರ್ವೆ ಕೊಡಬಲ್ಲವರು ತೆರಬೇಕೆಂದರು; ತೆರಲಾರದವರು ಸರಕಾರಕ್ಕೆ ಅರ್ಜಿ ಮಾಡಿಕೊಳ್ಳಬೇಕೆಂದರು. ಪಕ್ಷತಿಪಂತೆ ಆಶೆ ಮಾಡಬಾರದೆಂದರು, ಕೊಂಗ್ರೆಸ ಚಳವಳಿಯವರು ಬೇಜವಾಬದಾರರಿದ್ದವರಿಂದ ಅವರ ಮಾತು ಕೇಳಬಾರದೆಂದರು. ರಾ|| ರಾಮಚಂದ್ರ ಭಟ ಕಳಕೆರರು ಸರಕಾರದ ಸಹಾನುಭೂತಿ ಬಣ್ಣಿಸಿದರು. ಹಿಂದೆ ತಗಾವಿ ಕೊಟ್ಟು ಸರಕಾರವು ನೆರವಾಗಿದೆಂದರು. ಕೊಲಿನ್ಸರವರು ೮ ವರ್ಷಗಳ ಹಿಂದೆ ಮಾಡಿದ ಶಿಫಾರಸಿನ ಮೇರೆಗೆ ಹೊಂದ ೯— ಈ ವರ್ಷ ಸರಕಾರವು ಕೊಟ್ಟ ತೀರ್ವೆ ಸೂ[illegible]ನ್ನು ಹೊಗಳಿದರು. ತೀರ್ವೆ ಏರಿಸಬೇಕೆಂದು ಒದ ರಿಪೋರ್ಟಿನ ಮೇಲಿಂದ ಈ ತನಕ ತೀರ್ವೆ ಏರಿಸದ ಬಗ್ಗೆ ಸರಕಾರಕ್ಕೆ ಧನ್ಯವಾದಗಳನ್ನರ್ಪಿಸಿದರು. ತೀರ್ವೆ ತೆರಬಲ್ಲವರು ಕೂಡಲೇ ತೀರ್ವೆ ತತ್ತಲ್ಲಿ ತೀರ್ವೆ ತೆರಲಾರದವರಿಗೆ ಸರಕಾರವು ದಯೆ ತೋರಿಸುವದಾಗಿ ರಾ|| ಭಟಕಳಕರರವರು ನುಡಿದರು. ತಾಲೂಕ ಲೋಕಲ್ ಬೋರ್ಡಿನ ಸಭಾಸದರಾದ ರಾ|| ಮಹಾದೇವಪ್ಪ ಗೌಡರವರೂ, ಮಿ|| ಫರ್ನಾಂಡೀಸರವರೂ ಸರಕಾರದೊಡನೆ ಅಂತಃಕರಣಪೂರ್ವಕ ಸಹಕಾರ ಮಾಡುವ ಅವಶ್ಯಕತೆಯನ್ನೂ ರಾಜನಿಷ್ಠೆಯ ಅವಶ್ಯಕತೆಯನ್ನೂ ಪ್ರತಿಪಾದಿಸಿದರು. ಅವಶ್ಯಕತೆಯ ಕಾರಣಗಳು ವೃತ್ತಾಂತದಲ್ಲಿ ನಮೂದಿಸಿಲ್ಲ; ಅವನ್ನು ನಮೂದಿಸಿದ್ದರೆ ಸೊಗಸಾಗುತ್ತಿತ್ತು. ರಾ|| ಫರ್ನಾಂಡೀಸರವರ ಒಂದು ವಚನ ಮಾತ್ರ ಅಮೂಲ್ಯವಿದೆ: ಹಿಂದುಸ್ಥಾನದಲ್ಲಿ ಭಿನ್ನ ಭಿನ್ನ ಜಾತಿಗಳಿದ್ದು ಅವುಗಳಿಗೆಲ್ಲ ತಕ್ಕ ಸುಧಾರಣೆಯನ್ನೂ, ನ್ಯಾಯವನ್ನೂ ಕರುಣಿಸಲು ಪರಮಾತ್ಮನು ಬ್ರಿಟಿಶ ರಾಜ್ಯವನ್ನು ಸ್ಥಾಪಿಸಿದನು. ಪರಮಾತ್ಮನ ಮೇಲಿನ ಭಕ್ತಿ ನೋಡಿ ಮನಸ್ಸಿಗೆ ಆಲ್ಹಾದವೆನಿಸುತ್ತದೆ. ಪೋಲೀಸ ಇನ್ಸಪೆಕ್ಟರರಾದ ರಾ|| ಮನಗೋಳಿಯವರ ಭಾಷಣವು ಬಹು ವಿಸ್ತಾರವಾದದ್ದಿತ್ತು. "ನಾನು ಇತ್ತ ಕಡೆ ಬಂದ ೨-೩ ವಾರಗಳಲ್ಲಿ ಹೇರೂರ ಸೀಮೆಯ ಕಡೆ ಅಜ್ಞಾನಿ ಜನರಿಗೆ ಕಾಯಿದೆಭಂಗದಲ್ಲಿ ಸೇರದಂತೆ ಮಾಡಿದ ಉಪದೇಶವನ್ನು ಜನರು ಕೇಳಿದರು. ಈ ತಾಲೂಕಿನ ಹವೀಕರು ಸರಳ ಸ್ವಭಾವದವರು, ಆದರ-ಸತ್ಕಾರಕ್ಕಾಗಿ ಇವರು ಪ್ರಸಿದ್ಧಿ ಪಡೆದವರು. ಯೋಗ್ಯ ಉಪದೇಶ ಕೊಟ್ಟರೆ ಯೋಗ್ಯ ಮಾರ್ಗದಿಂದ ಅವರು ನಡೆಯುವ ಸಂಭವವಿದೆ. ಹೀಗೆ ಪೋಲೀಸ ಇನ್ಸಪೆಕ್ಟರರ ಸರ್ಟಿಫಿಕೇಟು! ಈಗ ನಡೆಯುತ್ತಿರುವ ಬಹಿಷ್ಕಾರದಿಂದ ಹಿತವಿಲ್ಲ. ಪರರಾಷ್ಟ್ರಗಳಂತೆ ನಾವು ಯಂತ್ರ ಶಾಸ್ತ್ರದಲ್ಲಿ, ರಸಾಯನ ಶಾಸ್ತ್ರದಲ್ಲಿ ಪ್ರವೀಣರಾಗಬೇಕು, ಇಲ್ಲದಿದ್ದರೆ ನಮ್ಮ ಉಳಿಗಾಲವಿಲ್ಲ. ನಾವು ಬಡವರು, ಅಗ್ಗ ಸಿಗುವ ಸರಕುಗಳನ್ನು ಕೊಳ್ಳಬೇಕು, ಯಂತ್ರದಿಂದ ಅಗ್ಗ ಸರಕು ತಯಾರಾಗುತ್ತವೆ, ಸೂಜಿಗಳು ಪರದೇಶಿಯೆಂದು ನಾವು ತಿರಸ್ಕರಿಸಲಾಗದು, ಅವನ್ನು ನಾವು ಯಂತ್ರ ಸಾಮುಗ್ರಿಯಿಲ್ಲದೆ ತಯಾರಿಸಹೋಗಬಾರದು, ಮೋಟಾರುಗಳು ಪರದೇಶಿಯೆಂದು ಚಕ್ಕಡಿಯ ಮೇಲೆ ಕೂಡ್ರುವದು ಮೂರ್ಖತನ. ಕಬ್ಬಿಣದ ನಂತೆ ತರಬೇಕು, ಹೊಡಲು ಮೋಟಾರು ತರಬೇಕು, ನೀರು ಹಾಕಲು ನೀರಿನ ಪಂಪು ತರಬೇಕು. ನಾವು ಅಜಾಗ್ರತೆ ಮಾಡಿದರೆ ಕೊಳೆ ರೋಗದಿಂದ ನಷ್ಟವಾಗುತ್ತದೆ. ಜವಳಿಯ ವಿಚಾರ ಮಾಡುತ್ತೇನೆ. ಹಿಂದುಸ್ಥಾನದಲ್ಲಿ ಮೊದಲು ಜನುಗು ಜವಳಿ ತಯಾರಾಗುತ್ತಿತ್ತು, ಈಗ ಬೇಕಾದವರು ನೂಲಬಹುದು, ನೇಯಬಹುದು; ಆದರೆ ಪರದೇಶಿ ಅರಿವೆಗೆ ಬಹಿಷ್ಕಾರ ಹಾಕಬಾರದು. ಪರದೇಶಗಳಂತೆ ನಾವೂ ಯಂತ್ರಗಳನ್ನು ತಯಾರಿಸಬೇಕು. ಇಲ್ಲದಿದ್ದರೆ, ನಮ್ಮ ಈ ಪೇಟೆಗಿನ ಯಂತ್ರ-ಶಾಸ್ತ್ರ ಜ್ಞಾನವೆಲ್ಲ ನಿರರ್ಥಕವಾಗುವದು. ಇದು ಸವರ್ಣಯೋಗ. ಇದು ನನ್ನ ಕೈತಪ್ಪಿ ಹೋದರೆ ಕಾಡು ಜನರಂತೆಯೇ ನಾವು ದಿನಗಳೆಯಬೇಕಾಗುವದು. ದೇಶಿ-ಪರದೇಶಿಯೆಂಬ ವಿಚಾರ ಮಾಡಬೇಡಿ, ಅಗ್ಗ ಸಿಗುವ ಸಾಮಾನು ಕೊಂಡುಕೊಳ್ಳಿ. ಮತ್ತು ಹೀಗೆ ಉಳಿತಾಯ ಮಾಡಿದ ಹಣದಿಂದ ಯಂತ್ರಶಾಸ್ತ್ರ-ರಸಾಯನ ಶಾಸ್ತ್ರ ಕಲಿತು ಮುಂದಾಗಿರಿ. ಭೂಮಂಡಲದಲ್ಲಿ ಹಿಂದುಸ್ಥಾನವು ಒಂದು ಮಹತ್ವದ ದೇಶ. ವರ್ತಕರು ಅಂಗಡಿ ಮುಚ್ಚಿದರೆ ಅವರಿಗೇ ನಷ್ಟವಾಗುತ್ತದೆ. ಬಡ ಜನರಿಗೆ, ಪ್ರಯಾಣಿಕರಿಗೆ ಬಹು ಕಷ್ಟ! ಹೊತ್ತು ಹೊತ್ತಿಗೆ ತಂದುಣ್ಣುವವರಿಗೆ ತೊಂದರೆ!! ಹರತಾಳ ಮಾಡಿದರೆ ರಾಜಶಾಸನವಂತೆ ಬಿಟ್ಟಿಯಾಗುತ್ತದೆ. ರಾ|| ಗಂಗೋಳಿಯವರಂಥ ಶಿಕ್ಷಿತ ಜನರ ಉಪದೇಶದಿಂದ ಹವೀಕರ ಸ್ಥಿತಿ ಸುಧಾರಿಸುವದೆಂದು ನನ್ನ ಕೋರಿಕೆ." ಹೀಗಿದ್ದ ಪೋಲೀಸ ಇನ್ಸಪೆಕ್ಟರರಾದ ರಾ|| ಮನಗೋಳಿಯವರು ಬರದಿಂದ ಭಾಷಣ ಮಾಡಿದರು. ಈ ಭಾಷಣ ಓದಿ ನನಗೆ ಪರಮ ಸಂತೋಷವಾಯಿತು, ಪೋಲೀಸ ಇನ್ಸಪೆಕ್ಟರರಿಗೆ ಇಂಥ ತರ್ಕಶುದ್ಧ ವಿಚಾರಗಳೆಲ್ಲಿ ಸೂಚಿಸಿದವೆಂದು ನನಗೊಂದು ಸೋಜಿಗ! "ತೀರ್ವೆ ತೆರಬಲ್ಲವರು ತೆರಬೇಕು. ತೆರಲಾರದವರು ಅರ್ಜಿ ಮಾಡಬೇ

(೧೧ನೇ ಪಾನಿನ ಮೇಲೆ ಮುಂದುವರಿಸಿದೆ)

ಪ್ರಪಂಚ-ಪರಿಚಯ.

ಪಂಡಿತ ಮಾಲವೀಯರ ಪ್ರಕಟಣೆ

ದಿಲ್ಲಿ ಕಾಂಗ್ರೆಸಿನ ನಿಯೋಜಿತ ಅಧ್ಯಕ್ಷರಾದ ಪಂಡಿತ ಮದನ ಮೋಹನ ಮಾಲವೀಯರವರೂ, ಮಗಂದಿರಾದ ಗೋವಿಂದ ಮಾಲವೀಯರೂ, ಮೊಮ್ಮಗರಾದ ಶ್ರೀಧರ ಮಾಲವೀಯರವರೂ, ಅವರ ಮನೆತನದ ವೈದ್ಯರಾದ ಡಾ [illegible]ಸಿಂಗರವರೂ ಜೊತೆಗಿದ್ದ ಪತ್ರಿಕಾ ಪ್ರತಿನಿಧಿಗಳಾದ ಶ್ರೀ ವಾಮನ [illegible]ರವರೂ [illegible] ರಾತ್ರಿ [illegible] ಘಂಟೆಗೆ ಬಿಡುಗಡೆ ಹೊಂದಿದ ವರ್ತಮಾನವು ಮನೋರಂಜಕ [illegible] ಏಪ್ರಿಲ್ [illegible] ಡಿ| ಮೆಜಿಸ್ಟ್ರೇಟರು [illegible] ಘಂಟೆಗೆ ದಿಲ್ಲಿ [illegible] ಪಂಡಿತ ಮಾಲವೀಯ ಮೊದಲವರಿಗೆ ಹೊರಡತಯಾರಾಗ ಹೇಳಿದರು, ಎಲ್ಲಿಗೆಂಬುದು [illegible] ರೈಲ್ವೆ ಸ್ಟೇಶನಿನಲ್ಲಿ [illegible] ಒಬ್ಬರು "ನಿಮಗೆಲ್ಲಿಗೆ ಹೋಗಬೇಕೆಂದು ಮನಸ್ಸಿದೆ?" ಎಂದು ಕೇಳಿದಾಗ ಜತೆಗೆ ಬಂದಿದ್ದ ಡಿ| ಪೋಲೀಸ ಸುಪರಿಂಟೆಂಡೆಂಟರು ಕೇಳಿದರು 'ನಮಗೆ ಬಿಡುಗಡೆಯಾದರೆ, ನಾವು [illegible] ಹೋಗುತ್ತೇವೆ, ಬಿಡುಗಡೆಯಾಗದಿದ್ದರೆ, ನಮಗೆ ಬೇಕಾದಲ್ಲಿಗೆ ಒಯ್ಯಬಹುದು.' ಹೀಗೆ ಪಂಡಿತಜಿಯವರು ನುಡಿದರು. [illegible] ಡಿ| ಪೋಲೀಸ ಸುಪರಿಂಟೆಂಡೆಂಟರು ನುಡಿದು, [illegible] ಹೋಗುವ [illegible] ಗಾಡಿಯಲ್ಲಿ ಪಂಡಿತ ಮಾಲವೀಯರವರಿಗೆ [illegible]ನೇ ವರ್ಗದ ಡಬ್ಬಿಯಲ್ಲಿ ಕುಳ್ಳಿರಿಸಿದರು. [illegible] ಹೊರಡುವಾಗ [illegible]ನೇ ವರ್ಗದ ಟಿಕೀಟು ಕೊಟ್ಟು ನಿಮಗೆ ಬಿಡುಗಡೆ ಮಾಡಿದೆವು ಎಂದು ಹೇಳಿದರು. ಪಂಡಿತಜಿಯವರು ೧ನೇ ವರ್ಗದ [illegible] ಕೊಟ್ಟು, ೧ನೇ ವರ್ಗದಿಂದ ಸೋಮವಾರ [illegible] ಅಲಹಾಬಾದಿಗೆ ತಲ್ಪಿದರು. ಪಂಡಿತಜಿಯವರು ಅಲಹಾಬಾದಿಗೆ ತಲ್ಪಿದೊಡನೆ ಒಂದು ಪ್ರಕಟಣೆಯನ್ನು ಮಾಡಿದ್ದಾರೆ ಅದರ ತಾತ್ಪರ್ಯವೇನಂದರೆ — "ರಾಷ್ಟ್ರೀಯ ಸಭೆಯ ಸ್ವಾಗತ ಸಮಿತಿಯನ್ನು ಸರಕಾರವು ಬೇಕಾಯಿದೆಶೀರ ಎಂದು ಜಾಹೀರ ಮಾಡಿ ರಾಷ್ಟ್ರೀಯ ಸಭೆಯ ಅಧಿವೇಶನವನ್ನು ನೆರವೇರಗೊಡಲಿಕ್ಕಿಲ್ಲವಾಗಿ ಜಾಹೀರ ಮಾಡಿದ್ದರು. [illegible] ಅಧಿವೇಶನ ಜರಗುವದು ಖಂಡಿತವೆಂದು [illegible] ಅಧಿವೇಶನವು [illegible] ಆಯಿತು, ಈ [illegible] ಸರಕಾರದ [illegible] ಪ್ರತಿಬಂಧಗಳನ್ನೆಲ್ಲ [illegible] ಸುಮಾರು ೧೨೦೦ ಪ್ರತಿನಿಧಿಗಳು ದಿಲ್ಲಿಗೆ ಹೋದರು, ಇನ್ನೂ ಅನೇಕ ಜನರು ಹೊರಟಿದ್ದರು, ಇವರ [illegible] ರಾಷ್ಟ್ರೀಯ ಸಭೆಯ ಮೇಲಿನ ನಿಷ್ಠೆಯು [illegible] ಸರಕಾರವು ಈ [illegible] ಭವದ ಮೇಲಿಂದ [illegible] ಸರ್ ಸ್ಯಾಮ್ಯುಯಲ್ ಹೋರರವರ ಭಾಷಣದ ಮೇಲಿಂದ [illegible] ಯುವದಿಲ್ಲ [illegible] ಸರಕಾರವು ರಾಷ್ಟ್ರೀಯ ಸಭೆಯ ಸಹಕಾರದ ಅಪೇಕ್ಷೆ ಮಾಡಲಿಲ್ಲ. ಅದನ್ನು ನಿರ್ನಾಮ ಮಾಡುವ ಧೋರಣ ಹಿಡಿಯಿತು. "ಈಗಲೂ ಸಹಕಾರ ಮಾಡಲು ನಾವು ತಯಾರಿದ್ದೇವೆ ನಮ್ಮೊಡನೆ ಸಹಕಾರ ಮಾಡಲು ತಯಾರಿದ್ದವರ ಕಡೆ ಸಹಕಾರ ಮಾಡಲು ನಾವು ತಯಾರಿದ್ದೇವೆ ಆದರೆ, ಪಾರ್ಲಮೆಂಟಿನಲ್ಲಿ ಕೊಟ್ಟ ಭಾಷಣಗಳಿಗನುಸಾರವಾಗಿ ಸಹಕಾರ ಮಾಡಬೇಕು ಇದು ಸಹಕಾರವಲ್ಲ, ಶರಣಾಗತಿಯಾಗುವದು. ರಾಷ್ಟ್ರೀಯ ಸಭೆಯು ಎರಡೂ ಪಕ್ಷಗಳಿಗೆ ಮರ್ಯಾದೆ ಆಗುವಂಥ ಗೌರವವನ್ನು ಸಂಪಾದಿಸಲು ಪ್ರಯತ್ನ ಪಡುತ್ತದೆ ರಶಿಯಾ ದೇಶದಂತೆ ಇಲ್ಲಿ ಪ್ರಜಾಪೀಡನೆಯಾಗುತ್ತದೆಂಬ ಮಾತನ್ನು ಸರ್ ಸ್ಯಾಮ್ಯುಯಲ್ ಹೋರರವರು ಒಪ್ಪಲಿಕ್ಕಿಲ್ಲ. ಆದರೆ, ಕಳೆದ [illegible] ತಿಂಗಳಲ್ಲಿ ನಡೆದ ಪ್ರಕಾರವನ್ನು ರಶಿಯಾ ದೇಶದ ಇತಿಹಾಸದಲ್ಲಿ ಕಾಣುವದು ಸಹ ಅಸಂಭವ! ಏಪ್ರಿಲ್ [illegible] ತಾರೀಖಿನ ವರೆಗೆ [illegible] ತಿಂಗಳಲ್ಲಿ [illegible] ಜನರು ಇಡೀ ಹಿಂದುಸ್ಥಾನದಲ್ಲಿ ಸೆರೆಯಾಗಿದ್ದಾರೆ. ಅವರಲ್ಲಿ [illegible] ಜನ ಸ್ತ್ರೀಯರು ಇದ್ದಾರೆ ಮತ್ತು [illegible] ಕೂಡಿದ್ದಾರೆ ಇದು ವರ್ತಮಾನ ಪತ್ರಗಳಲ್ಲಿ ಪ್ರಕಟವಾದ ಲೆಕ್ಕ. ದೂರ ದೂರದ [illegible] ಕಾಂಗ್ರೆಸ [illegible] ಜನರು [illegible] ಕಳು ಸುಡಿದವು, [illegible] ಜನರ ಮೇಲೆ ಗೋಲಿಬಾರು [illegible] ಕಡೆ ಮನೆ [illegible] ಪ್ರಕರಣಗಳಲ್ಲಿ ಆಸ್ತಿ ಜಪ್ತಿಯಾಯಿತು. [illegible] ಬಂದ ವಿದೇಶೀಯ ಘೋರಣೆ ನಡೆದಿದೆ. [illegible] ಮಿತವಾದ ಆಸ್ತಿ ಜಪ್ತು ಮಾಡಲ್ಪಟ್ಟಿತು. ವರ್ತಮಾನ ಪತ್ರಗಳಿಗೆ ಈಗಿರುವಷ್ಟು ಪ್ರತಿಬಂಧವು [illegible] ಎಂದೂ ಇರಲಿಲ್ಲ. ಇಂಥ ಪ್ರಕರಣಗಳು [illegible] ಅನೇಕ ಸಭೆ [illegible] ಹೋದರು ಕೆಲವರೆ [illegible] ಸಿದರು. ಆದ್ದರಿಂದ [illegible] ಪೋಲೀಸರು ವಿಪರೀತವಾದ ಪ್ರಯೋಗಗಳನ್ನು [illegible] ಸರ್ ಸ್ಯಾಮ್ಯುಯಲ್ ಹೋರರವರು [illegible] ತ ವಿಚಾರ ಮಾಡಲು ಅಂತರ್ರಾಷ್ಟ್ರೀಯ ಪ್ರಸಿದ್ಧಿ ಪಡೆದ ಮೂವರು ಪ್ರಮುಖರ ಚೌಕಶಿ ಮಂಡಳವನ್ನು ನೇಮಿಸಲು ಸರ್ ಸ್ಯಾಮ್ಯುಯಲ್ ಹೋರರವರು ಒಪ್ಪುತ್ತಾರೇನು? ಸದ್ಯ ಸ್ಥಿತಿಯು ನಿರ್ವಿವಾದವಾಗಿ ಸಿದ್ಧವಾಗಲಿ. ಹಿಂದುಸ್ಥಾನದ ಸ್ಥಿತಿ ಸುಧಾರಿಸುತ್ತಿರುವದಾಗಿ ಸರ್ ಹೋರರವರು ನುಡಿಯುತ್ತಾರೆ. ಒಮ್ಮೆ [illegible] ಲಕ್ಷ್ಯದ ನೋಟದಿಂದ ಈ ವಿಧಾನವು ಸಿದ್ಧವಾಗುವದಿಲ್ಲ. ಸರಕಾರವು ನಿಮ್ಮ ರಕ್ತದಿಂದ ದಬ್ಬಾಳಿಕೆ ನಡಿಸಿದಾಗ್ಯೂ ರಾಷ್ಟ್ರೀಯ ಸಭೆಯ ಯಾವದೇ ಕಾರ್ಯಕ್ರಮಕ್ಕೆ ತಡಬಂದಿಲ್ಲ. ಹೀಗಿಲ್ಲ ವಿಚಾರ ಮಾಡಿದರೆ, ಸ್ಥಿತಿ ಸುಧಾರಿಸಲಿಲ್ಲವಾಗಿ ಸ್ಪಷ್ಟವಾಗುತ್ತದೆ ೬೦ ಸಾವಿರ ದೇಶಭಕ್ತರು [illegible] ಜೈಲಿನಲ್ಲಿ ಅಪಮಾನಾಸ್ಪದವಾಗಿ ಕಾಲಕ್ಷೇಪ ಮಾಡುತ್ತಿದ್ದಾಗ [illegible]ಗಾಗಿ ಸರಕಾರವು ಜನರ ಸಹಕಾರ ಪಡೆಯಲಿಚ್ಛಿಸುವದು ಮಾನವೀ ಸ್ವಭಾವಕ್ಕೆ ವಿಪರೀತವಾದದ್ದು"

⁂

ದಿಲ್ಲಿ ಕಾಂಗ್ರೆಸಿನ ಸೋಜಿಗಗಳು!!

ಪಂಜಾಬದ ಡಾ' ಸೈಫುದ್ದೀನ ಕಿಚಲೂರವರು ಕಾಂಗ್ರೆಸಿನ ಗುಪ್ತ ಕಾರಬಾರವನ್ನು ಅಲಹಾಬಾದದ 'ಲೀಡರ' ಪತ್ರಿಕೆಯ ದಿಲ್ಲಿ ಸುದ್ದಿಗಾರರ ಬಳಿ ನುಡಿದರು - "ಸರಕಾರದ ಸಂಪೂರ್ಣ ಹಂಚಿಕೆಗಳೆಲ್ಲ ನಮಗೆ ತಿಳಿಯುತ್ತಿದ್ದವು. ಹ್ಯಾಗೆ ಅಧಿವೇಶನದ ತಯಾರಿ ನಡೆಯಿತು? ಯಾರು ಯಾರು ಯಾವ ಯಾವ ಕಾರ್ಯಭಾಗ ವಹಿಸಿದ್ದರು? ಎಂಬದನ್ನು ಈಗ ನಾನು ಹೇಳಲಾರೆನು. ಮುಂದಿನ ಇತಿಹಾಸಕಾರರು ಅದನ್ನೆಲ್ಲ ಸಂಗ್ರಹಿಸತಕ್ಕದ್ದು. ನಾನು ಒಂದು ಚಕಾರ ಶಬ್ದ ಹೇಳುವದಿಲ್ಲ, ಆದರೆ ಕಣ್ಣಿಗೆ ಕಂಡದ್ದಕ್ಕಿಂತ [illegible] ವ್ಯವಸ್ಥೆಯಾಗಿತ್ತೆಂದು ಹೇಳುವದು ನನಗೆ ಆಲ್ಹಾದವೆನಿಸುತ್ತದೆ. ಈ ಅಧಿವೇಶನದ ಅಧ್ಯಕ್ಷನನ್ನಾಗಿ ಆರಿಸಿದೊಡನೆ ನನಗೂ ನೇಮಿಸಲಾಗಿತ್ತು. ನಮಗೆ ಬೇಕಾದದ್ದು ಅಧಿವೇಶನ. ನಾನು ಅಧ್ಯಕ್ಷನಾಗುವೆನೆಂದು ವಾರ್ತೆ ಹಬ್ಬಿ ಗುಪ್ತ ಪೋಲೀಸರೆಲ್ಲರೂ ನನಗೆ ಸುತ್ತುಗಟ್ಟಿದ್ದರು. ನನ್ನ ಮನೆಯ ಮುಂದೆ ಪೋಲೀಸರ ಪಹರೆಯಿತ್ತು. [illegible] ಅಧ್ಯಕ್ಷರಾಗಿ ಅಧಿವೇಶನ ಜರಗುವದೆಂದು ಪೋಲೀಸರು ಎಣಿಸಲಿಲ್ಲ. ಇದರಿಂದ ಅಧಿಕಾರಿಗಳಿಗೆ ಮೋಸವಾಯಿತು." [illegible] ವಿಜಾಪುರ [illegible] ಮುಕುಮಾಗಿತ್ತು. ಅವರು [illegible] ವಿಜಾಪುರ ಬಿಟ್ಟು ದಿಲ್ಲಿಗೆ ತಲ್ಪಿದರು. ಅಲ್ಲಿ ಕಾಂಗ್ರೆಸ ಪ್ರತಿನಿಧಿಗಳೆಂದು ಅವರಿಗೆ ಸೆರೆ ಹಿಡಿಯೋಣಾಯಿತು. ಪೋಲೀಸರು ವಿಜಾಪುರದಲ್ಲಿ ಅವರ ಶೋಧ ಮಾಡುತ್ತಿದ್ದರು. ದಿಲ್ಲಿ ಕಾಂಗ್ರೆಸಿನ ಅಧ್ಯಕ್ಷರಾದ ಶೇಟ ರಣಛೋಡಲಾಲರವರ ಮೇಲೆ ಪೋಲೀಸರಿಗೆ ಹಾಜರಿ ಕೊಡಬೇಕೆಂದು ಅಹಮದಾಬಾದ ಪೋಲೀಸರು ಹುಕುಮು ಮಾಡಿದ್ದರು. ಅಲ್ಲಿಂದ ಅವರು ತಪ್ಪಿಸಿಕೊಂಡು ಪ್ರತಿನಿಧಿಗಳ ಸಹಿತ ದಿಲ್ಲಿಗೆ ತಲ್ಪಿದರು.

⁂

ಯುನಾನಿ ವೈದ್ಯದ ಅದ್ಭುತ ಪ್ರಯೋಗ!

ಮುಂಬಯಿಯ ಒಬ್ಬರು ಮೆಜಿಸ್ಟ್ರೇಟರಾದ ಮಿ [illegible] ಯವರ ತಮ್ಮನ ಮಗನಿಗೆ ಈಗ ೬ ವರ್ಷಗಳಿಂದ ಹೊಟ್ಟೆ ಕಡಿತ. ಹೆಸರಾದ ವೈದ್ಯರ ಉಪಚಾರವಾಯಿತು. ಎಲ್ಲರೂ ಅಸಾಧ್ಯ ರೋಗವೆಂದು ಅಭಿಪ್ರಾಯಪಟ್ಟರು. ಭೂತಬಾಧೆಯೆಂದು ಉಪಚಾರ ನಡೆಯಿತು. ಆದಾಗ್ಯೂ ಹೊಟ್ಟೆಕಡಿತ ತಪ್ಪಲಿಲ್ಲ. ಬಾಲಕನಿಗೆ ಊಟ ಮಾಡಿದಾಗ ಯಾ ಪಾನಮಾಡಿದಾಗ ಹೊಟ್ಟೆ ಕಡಿಯುತ್ತಿತ್ತು. ಪ್ರೊ| ಎ [illegible] ಎಂಬವರು ಹಿಂದುಸ್ಥಾನದಲ್ಲಿ ಹೆಸರಾದ ಯುನಾನಿ ವೈದ್ಯರು ಅವರು ಪರೀಕ್ಷೆ ಮಾಡಿದರು ಹೊಟ್ಟೆಯಲ್ಲಿ ಕೀಟಕಗಳಿವೆ, ಅವರಿಂದ ಹೊಟ್ಟೆ ಕಡಿಯುತ್ತದೆಂದು ಅಭಿಪ್ರಾಯ ಪಟ್ಟರು. ಕೀಟಕವೆಂದರೆ, ಜಂತುಗಳಲ್ಲ. ಈ ಸಿದ್ಧಾಂತವನ್ನು ವೈದ್ಯರು ನಂಬಲಿಲ್ಲ. ಹೊಟ್ಟೆಯಲ್ಲಿ ಯಾವದೇ ಕೀಟಕ ಇರುವ ಕಾರಣ ಬೇಡವೆಂದು ಅವರು ಅಭಿಪ್ರಾಯಪಟ್ಟರು. ಉದರ [illegible] ಉಪಚಾರಗಳಿಂದ ನಿರಾಶರಾದ್ದರಿಂದ ಪ್ರೊ| ರಾಮನಾಥರವರ ಉಪಚಾರ

ಮಾಡಗೊಡಬೇಕೆಂದು ಗೊತ್ತಾಯಿತು. ಜಪದೊಂದು ಪುಡಿ ಕೊಟ್ಟರು, ಅದರಿಂದ ಪ್ರಯೋಜನವಾಗಲಿಲ್ಲ. ಮತ್ತೊಂದು ಪುಡಿ ಕೊಟ್ಟರು. ಕೂಡಲೆ ಚಮತ್ಕಾರವಾಯಿತು. ೨-೩ ಇಂಚು ಉದ್ದ ಕೀಟಕವು ಹೊರಬಿತ್ತು. ಇದಕ್ಕೆ ನಡುಮಧ್ಯದಲ್ಲಿ ಮೊಸಳೆಗಿರುವಂತ ಗೋಲಾಕಾರದ ಒಂದು ಪಟ್ಟೆಯುಂಟು; ಮುಖಕ್ಕೆ ಮಿತಿಯುಂಟು; ಹರಿತವಾದ ಹಲ್ಲುಗಳಿವೆ. ಪ್ರೊ| ರಾಧುಭಾರವರು ಅದನ್ನು ಬಾಟ್ಲಿಯೊಳಗೆ ಹಾಕಿಟ್ಟಿದ್ದಾರೆ. ೫ ದಿನಗಳ ತನಕ ಒದ್ದಾಡಿ ಅದು ಸತ್ತು ಹೋಯಿತು. ಹೊಟ್ಟೆಯೊಳಗೆ ತನಗಾಗಿ ಅನ್ನದಿಂದ ಅದೊಂದು ಕವಚ ಕಟ್ಟಿಕೊಂಡಿತ್ತು. ಆ ಕವಚವೂ ಗುದದ್ವಾರದಿಂದ ಹೊರಬಿತ್ತು. ಈಗ ಹುಡುಗನು ಕ್ಷೇಮದಿಂದಿದ್ದಾನೆ. "ಅನೇಕ ಬಾರಿ ಕೊಟ್ಟ ಪುಡಿ ಹುಡುಗನಿಗೆ ಕೊಡುವದಲ್ಲ, ಪ್ರಬಲ ಸ್ಫೂರ್ತಿ ಮಾತ್ರ ಕೊಡುವದದು. ದೇವರ ಪ್ರೇರಣೆಯಾಯಿತು, ನಾನದನ್ನು ಕೊಟ್ಟೆ" ಹೀಗೆ ಪ್ರೊ| ರಾಧುಭಾರವರು 'ಕ್ರೊನಿಕಲ್' ಪತ್ರಿಕಾ ಪ್ರತಿನಿಧಿಗಳ ಬಳಿ ನುಡಿದರು. ಪ್ರೊ| ರಾಧುಭಾರವರು ವೈದ್ಯಶಾಸ್ತ್ರಪ್ರವೀಣರು, ಹಾಗೆಯೇ ಪರಮಾರ್ಥಿಗಳು. ಜಾತಕ ನೋಡರು, ಹಸ್ತರೇಖೆ ಸಹ ನೋಡರು. ಅವರು ಜನರ ಭಾಗ್ಯ ಹೇಳುತ್ತಾರೆ. ಮದ್ದಿಗೆ ಯಾ ಸಲಹೆಗೆ ಫೀಯಿಲ್ಲ, ಯಾವದಕ್ಕೂ ಅವರು ಫೀ ಕೊಳ್ಳುವದಿಲ್ಲ. ರೋಗಿಗಳಿಗೆ ಧರ್ಮ ಮಾಡಲು ಉಪದೇಶ ಮಾಡುತ್ತಾರೆ. ತಮ್ಮ ನಿರ್ವಾಹ ಹ್ಯಾಗೆ ನಡೆಯುತ್ತದೆಂದು ಕೇಳಲು, "ಪರಮಾತ್ಮನ ಮೇಲೆ ನನಗೆ ಶ್ರದ್ಧೆಯಿದೆ, ಗೆಳೆಯರ ಆಶೀರ್ವಾದವಿದೆ," ಹೀಗೆ ಪ್ರೊ| ರಾಧುಭಾರವರು ಪತ್ರಿಕಾಪ್ರತಿನಿಧಿಗಳ ಬಳಿ ನುಡಿದರು. ಹಿಂದುಸ್ಥಾನವು ಧರ್ಮಭೂಮಿ!

⁂

ಮಹಾತ್ಮರಷ್ಟು ಧರ್ಮಿಷ್ಠ ಮುಸಲ್ಮಾನರಿಲ್ಲ!

ಮುಂಬಯಿಗೆ ಬೇಗಮ್ ಫಾತಮಾ ರಶೀದಾ ಇಸ್ಮತ್ ಪಾಶಾ ಎಂಬ ಅರಬೀ ವಿದುಷಿಯು ಬಂದಿದ್ದಾಳೆ. ಇವಳು ೩೧ ವರ್ಷದ ಪ್ರಾಯದವಳು. ಇವಳಿಗೆ ೬ ಭಾಷೆಯ ಜ್ಞಾನವಿದೆ. ಅರಬೀ ಭಾಷೆ ಇವಳ ಮಾತೃಭಾಷೆ. ಇಂಗ್ಲೀಷ, ಫ್ರೆಂಚ, ಗ್ರೀಕ, ಇಟಾಲಿ, ತುರ್ಕಿ, ಈ ೫ ಭಾಷೆಗಳನ್ನು ಇವಳು ಕಲಿತಿದ್ದಾಳೆ. ಫ್ರೆಂಚ-ಇಂಗ್ಲೀಷ ಭಾಷೆಗಳಲ್ಲಿ ಇವಳು ಕವಿತೆಗಳನ್ನು ರಚಿಸಿದ್ದಾಳೆ. ಇವಳ ತಂದೆಯವರು ಸೀರಿಯಾ ದೇಶದ ಕಂದಾಯ ಖಾತೆಯ ಮಂತ್ರಿಗಳಿದ್ದಾರೆ, ಕೋಟ್ಯಾಧೀಶರು. ೧೯೦೮ನೇ ಇಸ್ವಿಯಲ್ಲಿ ತುರ್ಕಿ ತರುಣರು ಸುಲ್ತಾನ ಅಬದುಲ್ ಹಮೀದರವರಿಗೆ ಪದಚ್ಯುತ ಮಾಡಿದಾಗ ಅವರ ಜೊತೆಗೆ ಇವರ ತಂದೆಯವರೂ ಇಂಗ್ಲಂಡಕ್ಕೆ ಹೋಗಿದ್ದರು. ತಂದೆಯ ಜೊತೆಗೆ ಮಗಳೂ ಹೋಗಿದ್ದಳು. ೧೯೧೯ನೇ ಇಸ್ವಿಯಲ್ಲಿ ತಂದೆಯವರು ಇಂಗ್ಲಂಡದಿಂದ ಮರಳಿ ಸೀರಿಯಾಕ್ಕೆ ಬಂದಿದ್ದರು. "ಮಹಾತ್ಮರ ಮೇಲೆ ನನಗೆ ಹೆಚ್ಚಿನ ಭಕ್ತಿ, ಅಷ್ಟು ಆದರ ನನಗೆ ಯಾರ ಮೇಲೂ ಇಲ್ಲ. ಲಂಡನನಲ್ಲಿ ರೌಂಡ ಟೇಬಲ್ ಪರಿಷತ್ತಿನ ಸಮಯ ನಾನು ಅನೇಕಾವರ್ತಿ ಮಹಾತ್ಮರಿಗೆ ಭೆಟ್ಟಿಯಾಗಿದ್ದೇನೆ. ನಮ್ಮ ಸೀರಿಯಾ ದೇಶಕ್ಕೆ ಬರಲು ಆಮಂತ್ರಣ ಕೊಟ್ಟೆ, 'ಲಗುಬಗೆಯಿಂದ ಹಿಂದುಸ್ಥಾನಕ್ಕೆ ಹೋಗಬೇಕಾಗಿದೆ ಬರಲಾರೆ'ನೆಂದು ಮಹಾತ್ಮರು ಹೇಳಿದರು. ನಾನು ಮುಂಚೆ ಮಹಾತ್ಮರಿದ್ದಲ್ಲಿಗೆ ಹೋಗಿ ಒಳಬರಲೇನೆಂದು ಮಹಾತ್ಮರ ಕಡೆ ಪ್ರಶ್ನೆ ಮಾಡಿದೆನು, 'ಯಾಕೆ ಅಪ್ಪಣೆ ಕೇಳುತ್ತೀರಿ? ನೀವು ಯಾವಾಗಲೂ ಒಳಬರಬಹುದು. ಇದು ದೇವರ ಮನೆ' ಎಂದು ಮಹಾತ್ಮರು ಉದ್ಗರಿಸಿದರು! ಈ ಮಾತಿನ ಸ್ಮರಣೆ ನನಗೆ ಆಗಿಂದಾಗ ಆಗಿ ಬಹು ಆನಂದವೆನಿಸುತ್ತದೆ. "ಎಂಥಾ ಮನುಷ್ಯನು! ಭೂಮಂಡಲದ ಮೇಲೆ ಇದ್ದ ಎಲ್ಲ ಪುರುಷರಲ್ಲಿ ಇವನೇ ಶ್ರೇಷ್ಠನು. ಗಾಂಧಿಗಿಂತ ಧರ್ಮಿಷ್ಠ ಮುಸಲ್ಮಾನನ್ಯಾರು? ಸರಳತನ, ಪ್ರಾಮಾಣಿಕತನ, ನಿಷ್ಕಪಟತನ, ವಿನಯ, ಇವೆಲ್ಲ ನಮ್ಮ ಮುಸಲ್ಮಾನ ಧರ್ಮದ ಮುಖ್ಯ ಗುಣಗಳು. ಅವರು ಇಸ್ಲಾಮ ಧರ್ಮದ ಸೇವೆ ಮಾಡಿದ್ದಾರೆ. ಇನ್ನೂ ಸೇವೆ ಮಾಡಲು ಅವರು ತಯಾರಿದ್ದಾರೆ. ಗಾಂಧಿಯವರಿಗೆ ಮನ್ನಣೆ ಕೊಡದವನು ಸತ್ಪಕ್ಷಪಾತಿಯಲ್ಲ; ಸತ್ಯವನ್ನು ದ್ವೇಷಿಸುವವನು. ಸ್ವದೇಶಿಯಿಂದ ಹಿಂದುಸ್ಥಾನದಲ್ಲಿ ಬಹಳ ಕಾರ್ಯಭಾಗವಾಗಿದೆ. ನಾನೂ ಒಂದು ಸಂತೋಷ ಕೂಟಕ್ಕೆ ಹೋಗಿದ್ದೆ, ಆ ಸಮಯ ಸೌ| ಸರೋಜಿನೀ ನಾಯಡು ಮೊದಲಾದ ಪ್ರಮುಖ ಹಿಂದೀಯರು ಹಾಜರಿದ್ದರು. ಒಬ್ಬ ಮಹಾನುಭಾವರ ನೆಕ್ಟೈ ಯಾನೆ ಕೊರಳಪಟ್ಟಿ ವಿದೇಶಿಯಾಗಿದ್ದಿತು, ಉಳಿದ ಉಡುಪೆಲ್ಲ ಸ್ವದೇಶಿ. ಆ ಬಗ್ಗೆ ಅವರಿಗೆ ಜನರು ಚೇಷ್ಟೆ ಮಾಡಿದರು. ಇದರಿಂದ ಅವರಿಗೆ ನಾಚಿಕೆಯಾಯಿತು. ಹಿಂದುಸ್ಥಾನ ದೇಶವು ವಿಶಾಲವಾದ ದೇಶ. ಇಂಥ ದೇಶದಲ್ಲಿ ಇಷ್ಟು ಜಾಗೃತಿಯಾದದ್ದು ನೋಡಿ ನನ್ನ ದೇಶದ ಬಗ್ಗೆ ನನಗೆ ನಾಚಿಕೆಯೆನಿಸುತ್ತದೆ. ಸೀರಿಯಾ ದೇಶದಲ್ಲಿ ೧ ಕೋಟಿ, ೬೦ ಲಕ್ಷ ಜನವಸ್ತಿಯಿದೆ. ಅಲ್ಲಿನದು ಇಷ್ಟು ಕಾರ್ಯಭಾಗವಾಗುವದಿಲ್ಲ. ಸೀರಿಯಾ ದೇಶವು ಫ್ರಾನ್ಸ ದೇಶದ ಸ್ವಾಧೀನವಿದೆ. ಈ ಪಾರತಂತ್ರ್ಯವನ್ನು ಹೊಗಲಾಡಿಸುವದಕ್ಕಾಗಿ ನಾನು ಯಾವಾಗಲೂ ಹಂಬಲಿಸುತ್ತಿದ್ದೇನೆ" ಹೀಗೆ ಬೇಗಮ್‌ರವರು ಶ್ರೀ| ಡಿ. ಸಿ. ಶರ್ಮರವರ ಕೂಡ ಹೇಳಿದ ಸಂಗತಿ 'ಮುಂಬಯಿ ಕ್ರೊನಿಕಲ್' ಪತ್ರಿಕೆಯಲ್ಲಿ ಪ್ರಕಟವಾಗಿದೆ.

⁂

ಪಂಜಾಬ ಸರಕಾರದ ಸ್ತುತ್ಯ ಉಪಕ್ರಮ.

ಪಂಜಾಬ ಸರಕಾರವು ಸದ್ಯಕ್ಕೊಂದು ಪ್ರಕಟಣೆ ಹೊರಡಿಸಿದೆ. ಕೈದಿಗಳಿಗೆ ಸುಧಾರಿಸುವ ಪ್ರಕಾರಗಳು ಅದರೊಳಗೆ ನಮೂದಿಸಲ್ಪಟ್ಟಿವೆ. ಕೈದಿಗಳಿಗೆ ಜೈಲಿನಲ್ಲಿ ತಕ್ಕ ಶಿಕ್ಷಣ ಕೊಟ್ಟಲ್ಲಿ ಪ್ರಾಮಾಣಿಕತನದಿಂದ ಅವರು ಉದ್ಯೋಗ ನಡಿಸಿ [illegible]ದಿಂದ ಹೊಟ್ಟೆ ಹೊರಕೊಳ್ಳಬಹುದು. ಇದಕ್ಕಾಗಿ ಪಂಜಾಬ ಸರಕಾರವು ಕೈಕೊಂಡ ಉಪಾಯಗಳ್ಯಾವವೆಂದರೆ—ಒಳ್ಳೇ ನಡತೆಯ ಕೈದಿಗಳಿಗೆ ಬಿಡುಗಡೆ ಮಾಡುವದು ಮತ್ತು ಅವರಿಗೆ ಸರಕಾರಿ ಹೊಲ ಕೊಟ್ಟು ಉದ್ಯೋಗಕ್ಕೆ ಹಚ್ಚುವದು, ಇಲ್ಲವೆ ಜಮೀನದಾರರ ಕಡೆಯಿಂದ ಭೂಮಿ ಕೊಡಿಸುವದು, ವಕೀಲರ ಕಡೆ ಅಥವಾ ಕಂಟ್ರಾಕ್ಟರರ ಕಡೆ ಅವರಿಗೆ ಕೆಲಸಕ್ಕೆ ಹಚ್ಚುವದು. ಈ ಉಪಾಯಗಳಿಂದ ಕೈದಿಗಳು ಒಳ್ಳೇ ನಾಗರಿಕರಾಗುತ್ತಾರೆ. ಲಾಹೋರ ಸೆಂಟ್ರಲ್ ಜೈಲಿನಲ್ಲಿ ಪ್ರಬುದ್ಧ ಕೈದಿಗಳಿಗಾಗಿ ಒಂದು ಶಾಲೆ ಹೊರಡಿಸಲ್ಪಟ್ಟಿದೆ. ರಿಫೊರ್ಮೇಟರಿ ಶಾಲೆಯಲ್ಲಿ ಓದು-ಬರಹ ಕಲಿಸುತ್ತಾರೆ, ಶಾರೀರಿಕ ಶಿಕ್ಷಣ ಕೊಡುತ್ತಾರೆ. ಇದರಿಂದ ಕೈದಿಗಳು ಪ್ರಾಮಾಣಿಕತನದಿಂದ ಮುಂದಿನ ಜೀವನಕ್ರಮ ನಡಿಸಿದ್ದುಂಟು. ಪಂಜಾಬ ಸರಕಾರದ ಅನುಭವವಿದು! ಓದು-ಬರಹ ಕಲಿಸಿದಲ್ಲಿ, ಉದ್ಯೋಗ ದೊರಕಿಸಿಕೊಟ್ಟಲ್ಲಿ ಕಳ್ಳ-ಸುಳ್ಳರು ಸಹ ಪ್ರಾಮಾಣಿಕರಾಗುತ್ತಾರೆ. ಜನಸಾಮಾನ್ಯರಿಗೆ ಇದೇ ಪ್ರಕಾರ ಸರಕಾರವು ಏರ್ಪಾಟು ಮಾಡಿಕೊಟ್ಟಲ್ಲಿ ಕಳ್ಳ-ಸುಳ್ಳತನದ ಪ್ರವೃತ್ತಿಯೇ ಹುಟ್ಟಲು ಇಂಬಿರಲಾರದು.

ವಾರ್ತೆಗಳು.

— ಚೀನ-ಜಪಾನ ಯುದ್ಧವು ಅಂತು ಸಮಾಪ್ತಿಯಾಯಿತು. ಗುರುವಾರ ತಹನಾಮೆಯ ಮೇಲೆ ಚೀನ-ಜಪಾನ-ಬ್ರಿಟಿಶ ಫ್ರೆಂಚ ಪ್ರತಿನಿಧಿಗಳ ಸಹಿಗಳಾದವು. ಸಂಭ್ರಮವಿಲ್ಲದೆ ಸಹಿಗಳಾದವಂತೆ.

— ಗುರುವಾರ ಪೋಲೀಸರು ಮುಂಬಯಿಯಲ್ಲಿ ಒಂದು ಮನೆಯ ಮೇಲೆ ಸಾಗಿಹೋಗಿ ಕೊಂಗ್ರೆಸ ಬುಲೆಟಿನ್ನಿನ ೩೦೦೦ ಪ್ರತಿಗಳನ್ನು ಜಪ್ತ ಮಾಡಿ ಮೂವರಿಗೆ ಸೆರೆಹಿಡಿದಿರುತ್ತಾರೆ.

— ಯರವಡಾ ಜೈಲಿನಲ್ಲಿದ್ದ ರಾಜಕೋಟದ ಮುಂದಾಳುಗಳಾದ ಶ್ರೀ| ಜಮುನಭಾಯಿ ವೈಷ್ಣವರವರಿಗೆ ಮಹಾತ್ಮರು ಶುಶ್ರೂಷೆ ಮಾಡುತ್ತಿದ್ದಾರೆ. ಶ್ರೀ| ಜಮುನಭಾಯಿಯವರು ಕ್ಷಯ ವಿಕಾರದಿಂದ ನರಳುತ್ತಿದ್ದಾರೆ.

— ಮಿದ್ನಾಪುರದ ಡಿ| ಮೆಜಿಸ್ಟ್ರೇಟರಾದ ಮಿ| ಡೋಗ್ಲಾಸರವರು ಜಿಲ್ಹಾ ಬೋರ್ಡಿನ ಕಚೇರಿಯಲ್ಲಿ ಕಾಗದ-ಪತ್ರಗಳ ಮೇಲೆ ಸಹಿ ಮಾಡುತ್ತಿರುವಾಗ ೧೮ ವರ್ಷ ಪ್ರಾಯದ ಪ್ರಬೋಧಚಂದ್ರ ಭಟ್ಟಾಚಾರಜೀ ಎಂಬ ಟ್ಯಾಪಿಂಗ ಉಮೇದ್ವಾರನು ಒಂದೇ ಸವನೆ ೬ ಗುಂಡು ಹಾರಿಸಿದನು. ಬೋಳೆಗೊಂದು, ಎದೆಗೊಂದು, ಸೊಂಟಕ್ಕೊಂದು, ಹೀಗೆ ೩ ಗುಂಡುಗಳು ತಗಲಿ, ಔಷಧೋಪಚಾರ ನಡಿಸಿದಾಗ್ಯೂ ಡಿ|ಮ್ಯಾ|ರು ತೀರಿಕೊಂಡರು. ಹುಡುಗನು ಒಬ್ಬ ಡಾಕ್ಟರರ ತಮ್ಮನಂತೆ! ವಕೀಲರ ಅಪ್ಪನಂತೆ! "ಹಿಜಲಿಯಲ್ಲಿ ನಡೆದ ಅತ್ಯಾಚಾರಗಳ ಕುರಿತು ಸಣ್ಣ ಸೇಡಿಂದು" ಆತನ ಜೇಬಿನಲ್ಲಿ ಇಕ್ಕಿದ ಕಾಗದದ ತುಂಡಿನ ಮೇಲೆ ಬರೆದಿತ್ತು. ಹೀಗೆ ಅತ್ಯಾಚಾರ ಮಾಡುವದು ಎಂದೆಂದಿಗೂ ವಿಹಿತವಲ್ಲ. ಗುಂಡು ಹಾರಿಸಿದವರಿಬ್ಬರಂತೆ! ಇನ್ನೊಬ್ಬನ ಪತ್ತೆ ಹಚ್ಚಿ ಕೊಡುವವರಿಗೆ ೫೦೦೦ ರೂಪಾಯಿಗಳ ಇನಾಮು ಇಡೋಣಾಗಿದೆ.

Dr. F. J. P. PEREIRA,
Physician & Specialist in Dentistry
Sunday Market, KARWAR (ಉ. ಕ.)

ಆರೋಗ್ಯಬಯಸುವಿರಾ?

ಹಾಗಾದರೆ—

ಹಲ್ಲುಗಳನ್ನು ಕಾಪಾಡಿಕೊಳ್ಳಿ!!

ಯಾಕೆಂದರೆ ಮಾನವನ ಆರೋಗ್ಯಕ್ಕೆ ಹಲ್ಲುಗಳೇ ಕಾರಣ! ಬರೇ ಸೌಂದರ್ಯಕ್ಕಾಗಿ ಅಲ್ಲ, ಆರೋಗ್ಯ ವೃದ್ಧಿಯಿಂದಲೂ ಹಲ್ಲುಗಳ ಜೋಪಾಸನೆ ಮಾಡುವದು ಕರ್ತವ್ಯ. ಹಲ್ಲುಗಳ ಅಜಾಗ್ರತೆಯಿಂದ ಅಗ್ನಿಮಾಂದ್ಯ, ಸಂಧಿವಾತ, ನೇತ್ರರೋಗ, —ಕರ್ಣರೋಗ ಮೊದಲಾದ ಬೇನೆಗಳಾಗುತ್ತವೆ.
ಕಾರಣ, ನಿಮ್ಮ ಹಲ್ಲುಗಳು ಸರಿಯಿರದಿದ್ದರೆ,
ನಮ್ಮ ಕಡೆಗೆ ಬನ್ನಿ, ಪರೀಕ್ಷಿಸಿಕೊಳ್ಳಿ!

ಅವನ್ನು ಸ್ವಚ್ಛ-ಸುಂದರ ಮಾಡಿಕೊಡುವೆವು

ಡಾ|| ಎಫ್. ಜೇ. ಪಿ. ಪೆರೇರಾ,
ವೈದ್ಯ ಮತ್ತು ದಂತವೈದ್ಯಕ ವಿಶಾರದ,
ಸಂತೆ ಪೇಟೆ, **ಕಾರವಾರ.** (ಜಿ. ಉ. ಕಾನಡಾ)

ಅಂತಃಸೂತ್ರಗಳು.

(೨)

[ನಿರೀಕ್ಷಕನು ಬರೆದುದು]

ಪತ್ರಕರ್ತರ ಮೇಲೆ ಖಟ್ಲೆ

ನಿನ್ನೆ ಮಧ್ಯಾಹ್ನ ಸುಮಾರು ೧೨ ಘಂಟೆಗೆ ಪತ್ರಕರ್ತರಮೇಲೆ ಈ ಕೆಳಗಿನಂತೆ ಡಿಸ್ಟ್ರಿಕ್ಟ ಮೇಜಿಸ್ಟ್ರೇಟರ ಹುಕುಮು ಜಾರಿಯಾಗಿರುತ್ತದೆ

ಹುಕುಮು

ಪಾಂಡುರಂಗ ಕೃಷ್ಣ ರಾನಭಾಗ ಕುಮಟಾ ಇವರಿಗೆ!—

ನೀವು 'ಕಾನಡಾವೃತ್ತ'ದ ಸಂಪಾದಕ, ಮುದ್ರಕ, ಮತ್ತು ಪ್ರಕಾಶಕರಿದ್ದು ಸಾರ್ವಜನಿಕ ಶಾಂತತೆ ಅಥವಾ ಸುರಕ್ಷಿತತೆಗೆ ವಿರೋಧವಾದ ಚಳವಳಿಯ ಪುರಸ್ಕಾರ ಮಾಡಿದ್ದೀರಿ, ಮತ್ತು ಮಾಡುವ ತಯಾರಿಯಲ್ಲಿದ್ದೀರಿ, ಎಂಬುದಾಗಿ ತಿಳಕೊಳ್ಳಲು ಕಾನಡಾ ಜಿಲ್ಹೆಯ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಾದ ನನಗೆ ಸಾಕಷ್ಟು ಆಧಾರ ದೊರೆತಿರುವದರಿಂದ, ೧೯೩೨ನೇ ಇಸ್ವಿಯ ೨ನೇ ಆಪತ್ಕಾಲದ ರಾಜಶಾಸನದ ೪ (೧)ನೇ ಕಲಮಿನನ್ವಯ ನನಗುಳ್ಳ ಅಧಿಕಾರದ ಪ್ರಕಾರ ಈ ಮೂಲಕ, ನಿಮಗೆ ಅಂದರೆ ಸದರ ಪಾಂಡುರಂಗ ಕೃಷ್ಣ ರಾನಭಾಗ ಇವರಿಗೆ ಹುಕುಮು ಮಾಡುವದೇನಂದರೆ —

(ಅ) ಈ ಕೆಳಗೆ ವರ್ಣಿಸಿದ ನಮೂನೆಯ ಮಜಕೂರನ್ನು ನೀವು ಪ್ರಕಟಿಸಕೂಡದು:—

(೧) ಯಾವದೇ ಪ್ರಕಾರದ ಕೊಂಗ್ರೆಸ ಪ್ರಚಾರ (ಸೆರೆಹಿಡಿದವರ ಸಂದೇಶ ಸಹ,)

(೨) ಜೈಲಿನಲ್ಲಿಟ್ಟವರ ಕಡೆಯಿಂದ ಬರುವ ಇಲ್ಲವೆ ಬಂದಿರುತ್ತವೆಂಬ ಸಂದೇಶಗಳು

(೩) ಸರಕಾರದ ಯಾ ಸರಕಾರಿ ಅಧಿಕಾರಿಗಳ ವಿಪರೀತ ಟೀಕೆ,

(೪)-ರಾಜಕೀಯ-ಸಂಗತಿಗಳ ಅತಿಶಯೋಕ್ತಿಯ ವರ್ಣನೆ

(೫) ಸತ್ಯಾಗ್ರಹಕ್ಕೆ ಪುರಸ್ಕಾರ ಕೊಡುವ ಇರಾದೆಯಿಂದ ನಡಿಸಿದ ಸಭೆ, ಮೆರವಣಿಗೆ ಮೊದಲಾದ ಚಳವಳಿಗಳ ಜಾಹೀರಾತು,

(೬) ಕೊಂಗ್ರೆಸ ಚಳವಳಿಯಲ್ಲಿ ಸೇರಿದವರ, ಯಾ ಸೆರೆಹಿಡಿದವರ, ಯಾ ಶಿಕ್ಷೆಯಾದವರ ಹೆಸರು ಇಲ್ಲವೆ ಫೋಟೋಗ್ರಾಫು, ಕೊಂಗ್ರೆಸ ಚಳವಳಿಗೊಪ್ಪಿದ ಸಂಗತಿಗಳ ಫೋಟೋಗ್ರಾಫು

(೭) ಸತ್ಯಾಗ್ರಹಕ್ಕೆ ಪುರಸ್ಕಾರವಾಗುವಂಥ ಇತರ ಮಜಕೂರು, ಅಥವಾ ತಾ ೧೬-೧-೩೨ನೇ ಹಿಂದುಸ್ಥಾನ ಸರಕಾರದ ಗಾಝೆಟಿನಲ್ಲಿ ಪ್ರಕಟವಾದ ಕಾರ್ಯಕಾರಿ ಮಂಡಳದ ಕಾರ್ಯಕ್ರಮದ ಪುರಸ್ಕಾರವಾಗುವಂಥ ಮಜಕೂರು.

ಮತ್ತು

(ಬ) ಸತ್ಯಾಗ್ರಹಕ್ಕೆ ಬೆಂಬಲ ಕೊಡುವಂಥ ಯಾವತ್ತೂ ಚಳವಳಿಯಿಂದ ಅಲಿಪ್ತವಾಗಿರತಕ್ಕದ್ದು

ಕಾರವಾರ ತಾರೀಖು ೧೯ನೇ ಮೇ ೧೯೩೨

ಆರ್. ಎಸ್. ಹಿರೇಮಠ
ಡಿಸ್ಟ್ರಿಕ್ಟ ಮೆಜಿಸ್ಟ್ರೇಟ, ಕನಡಾ.

* * *

ಇದಲ್ಲದೆ, ವೃತ್ತದ ತಾರೀಖು ೨೫-೪-೩೨ನೇ ಸಂಚಿಕೆಯ ೬ನೇ ಪದರಿನಲ್ಲಿ ಸ್ವಾ. ಗೌರವ್ಯನಿಗೆ ಹೊಡೆದ ಸುದ್ದಿ ಪ್ರಕಟಿಸಿದ್ದರಿಂದ ಬೇಕಾಯಿದೇಶೀರ ಸಭೆಗೆ ಉತ್ತೇಜನ ಕೊಟ್ಟಂತಾಯಿತೆಂಬ ಆರೋಪವನ್ನು ಈ ಪತ್ರಕರ್ತರ ಮೇಲೆ ಹೊರಿಸಿ, ಶಿರ್ಸಿ ಸಬ ಡಿವಿಜನಲ್ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಕ್ರಿ. ಲೊ. ಎ. ಆಕ್ಟಿನ ೧೭ (೧)ನೇ ಕಲಮಿನಂತೆ ಖಟ್ಲೆ ವಾರಂಟು ಹೊರಟು, ಅದರಂತೆ ಸದರ ಮಜಿಸ್ಟ್ರೇಟ ಕೋರ್ಟಿನಲ್ಲಿ ನಿನ್ನೆ ಹಾಜರಾದರು ಖಟ್ಲೆಯ ವಿಚಾರ ತಾ. ೩೧ನೇಗೆ ಕಾರವಾರ ಮುಕ್ಕಾಮಿನಲ್ಲಿಟ್ಟಿದೆ

ಟೀಪು:— ಮೇಲ್ಕಾಣಿಸಿದ ಹುಕುಮು ನಿನ್ನೆ ಸಂಪಾದಕರ ಮೇಲೆ ಜಾರಿಯಾದಾಗ ಈ ಹೊತ್ತಿನ ಸಂಚಿಕೆಯ ಬಹುತೇಕ ಎಲ್ಲ ವ್ಯವಸ್ಥೆ ಮುಗಿದಿತ್ತು ಹಲವು ಪ್ರತಿಗಳು ಅಚ್ಚಾಗಿಹೋಗಿದ್ದವು. ಹುಕುಮಿನ ಪ್ರಕಟಣೆಗೆ ಸ್ಥಳಾನುಕೂಲತೆ ಮಾಡಿಕೊಳ್ಳಬೇಕಾಯಿತು ಆದ್ದರಿಂದ ಅಂಕೋಲಾ, ಕಾರವಾರ, ವಗೈರೆ ವಾರ್ತಾಪತ್ರಗಳನ್ನು ಬದಿಗೊತ್ತಬೇಕಾಯಿತು ಉಪಾಯವಿಲ್ಲ

ವಾರ್ತೆಗಳು.

—ಮೋಟಾರು ಬಿಡಿಗಳಿಗೆ ಗಿರಾಕಿ ಇಲ್ಲದ್ದರಿಂದ ಮುಂಬಯಿಯ ಜನರಲ್ ಮೊಟರ್ಸ ಕಂಪನಿಯವರು ೨ ತಿಂಗಳ ತನಕ ಕಂಪನಿಯಲ್ಲಿ ಮೋಟಾರು ತಯಾರಿಸಲಿಕ್ಕಿಲ್ಲವಾಗಿ ಪ್ರಕಟಿಸಿದ್ದಾರೆ ಈ ಕಂಪನಿಯಲ್ಲಿ ದಿನಾ ೩೦ ಮೋಟಾರು ತಯಾರಾಗುತ್ತಿದ್ದವು

— ಅಖಿಲ ಭಾರತೀಯ ಜಮಾಯತ-ಉಲ್-ಉಲೆಮಾ-ಹಿಂದ ಸಂಸ್ಥೆಯ ಸರ್ವಾಧಿಕಾರಿಗಳು ಪೋಲೀಸ ನೋಟೀಸಿನಂತೆ ದಿಲ್ಲಿ ಪಟ್ಟಣವನ್ನು ಬಿಟ್ಟು ಹೋಗದೆ ಚಾಂದಣಿ ಚೌಕಿನಲ್ಲಿ ಮೆರವಣಿಗೆ ಹೊರಡಿಸಿ ಬೇಕಾಯಿದೇಶೀರ ಸಂಸ್ಥೆಗೆ ನೆರವಾದ ಬಗ್ಗೆ ಅವರ ಮೇಲೆ ಖಟ್ಲೆ ನಡೆದು, ೨ ವರ್ಷಗಳ ಶಿಕ್ಷೆಯಾಗಿದೆ.

— ಅಫಘಾನಿಸ್ಥಾನದಲ್ಲಿ ಅಮೀರರಾದ ಸೇನಾಪತಿ ನಾದಿರಷಹಾರವರು ಹಿಂದು-ಮುಸಲ್ಮಾನ ಪ್ರಜೆಗಳನ್ನು ಸಮದೃಷ್ಟಿಯಿಂದ ನೋಡುತ್ತಾರೆ ಅವರ ತತ್ವ 'ಗುಣಾಃ ಪೂಜಾಸ್ಥಾನಂ'! ಗುಣಪ್ರಧಾನ ಮಾಡಿ ದಿವಾನ ಹುಕುಮಚಂದರವರಿಗೆ ಮಜ್ಲಿಸ ರಾಜಾಲೋಚನಾಸಭೆಯ ಸಭಾಸದರಾಗಿ ನೇಮಿಸಿಕೊಂಡಿದ್ದಾರೆ ಈ ಧೋರಣವೇ ಲೋಕದಲ್ಲಿ ಹಬ್ಬಬೇಕು

— ಕಲಕತ್ತೆಯ 'ಲಿಬರ್ಟಿ' ಪತ್ರಿಕೆಯ ಸಿಮ್ಲಾದ ಸುದ್ದಿಗಾರರು ಬರೆಯುವದೇನಂದರೆ:— ಬಂಗಾಲಿಪಾತೆಯ ಉತ್ಪನ್ನವು ಕುಗ್ಗಿತು, ಉಗಿಬಂಡಿ-ಕಸ್ಟಮ್ ಖಾತೆಗಳ ಉತ್ಪನ್ನವೂ ಕುಗ್ಗುತ್ತಲಿದೆ ಪ್ರಾಂತಿಕ ಸರಕಾರದ ಸಾಂಪತ್ತಿಕ ಸ್ಥಿತಿ ನೆಟ್ಟಗಿಲ್ಲ. ಇದನ್ನು ಸುಧಾರಿಸುವ ಉಪಾಯಗಳ ಆಲೋಚನೆ ಗವ್ಹರ್ನರರ ಪರಿಷತ್ತಿನಲ್ಲಿ ನಡೆಯಿತು ಹಿಂದುಸ್ಥಾನ ಸರಕಾರವು ಪ್ರಾಂತಿಕ ಉತ್ಪನ್ನದ ಮುಖ್ಯ ಮುಖ್ಯ ಬಾಬುಗಳನ್ನು ಪಡೆಯುವದರಿಂದ, ಹಿಂದುಸ್ಥಾನ ಸರಕಾರವು ಪ್ರಾಂತಿಕ ಸರಕಾರಗಳಿಗೆ ನೆರವಾಗತಕ್ಕದ್ದಾಗಿ ಬಂಗಾಲದ ಗವರ್ನರಾದಿಗಳ ಅಂಬೋಣ ಇದರೆ ಹಿಂದುಸ್ಥಾನ ಸರಕಾರದ ಸ್ಥಿತಿ ನೆಟ್ಟಗಿಲ್ಲ ಹೊಸ ಸುಧಾರಣೆಯಿಂದ ಸರಕಾರದ ಖರ್ಚು ಮತ್ತೂ ಬೆಳೆಯುವ ಹಾಗಿದೆ. ಖರ್ಚು ಕುಗ್ಗಿಸಿ, ಜಮೆ ಬೆಳಸುವ ಉಪಾಯಗಳನ್ನು ಗವ್ಹರ್ನರರು ತಿಳಿಸಿದರಾಗಿ ಹೇಳಿಕೆ. ಪರಿಷತ್ತು-ಮಂಡಳಗಳ ದೀರ್ಘಾಲೋಚನೆಯಿಂದ ಹೇರಳ ಖರ್ಚು ಬರುತ್ತದಾಗಿ ಸಹ ಅಭಿಪ್ರಾಯವಾಗಿರುತ್ತದೆ

— ಜಪಾನದ ಮಂತ್ರಿಮಂಡಳವು ರಾಜೀನಾಮೆಯನ್ನು ಕೊಟ್ಟಿದೆ ಹೊಸ ಮಂತ್ರಿಮಂಡಳವು ಯಾವದೇ ಪಕ್ಷಕ್ಕೆ ಸೇರಿದ್ದು ಇರಬಾರದೆಂದೂ ರಾಷ್ಟ್ರೀಯ ಮಂತ್ರಿಮಂಡಳವನ್ನು ನೇಮಿಸಬೇಕೆಂದೂ ಸೇನಾಧಿಕಾರಿಗಳ ಆಗ್ರಹ! ತಮ್ಮ ಹೇಳಿಕೆಯಂತೆ ನಡೆಯದಿದ್ದರೆ, ಯುದ್ಧ ಮಂತ್ರಿಗಳನ್ನು ತಾವು ಆರಿಸಿ ಕೊಡಲಿಕ್ಕಿಲ್ಲವೆಂದು ಅವರು ಹೇಳುತ್ತಾರೆ ಅಂತು ಜಪಾನದ ಕಾರಭಾರವು ಲಷ್ಕರಿ ಜನರ ಕೈಯ್ಯಲ್ಲಿ ಹೋಗುವದು

— "ಜಾರ್ಜೆಸ್ ಫಿಲಿಫಾರ" ಎಂಬ ಫ್ರೆಂಚ ಹಡಗಕ್ಕೆ ಏಡನ್ ಬಂದರದ ಸಮೀಪದ ಹಿಂದೀಮಹಾಸಾಗರದಲ್ಲಿ ಅಕಸ್ಮಾತ್ ಬೆಂಕಿ ಹತ್ತಿ, ಜಲಸಮಾಧಿ ಹೊಂದಿತು! ಕೆಲವರು ಸುಟ್ಟು ಸತ್ತರು ಕೆಲವರು ಮುಳುಗಿ ಸತ್ತರು ಹಡಗದ ಮೇಲಿದ್ದ ೭೬೭ ಜನರಲ್ಲಿ ಇನ್ನೂ ೫೦ ಜನರ ಪತ್ತೆಯಿಲ್ಲ

— ಸತ್ಯಾಗ್ರಹಿ ಸ್ತ್ರೀ-ಕೈದಿಗಳ ಮೇಲೆ ಅತ್ಯಾಚಾರ ಮಾಡಿದರೆಂಬ ಆರೋಪದ ಮೇಲೆ ಐದು ಪೋಲೀಸರ ಮೇಲೆ ಕಾಶಿಯಲ್ಲಿ ನಡೆದ ಖಟ್ಲೆಯಲ್ಲಿ ಎಲ್ಲರೂ ನಿರಪರಾಧಿಗಳೆಂದು ಬಿಡುಗಡೆ ಹೊಂದಿದರು

ಮಕ್ಕಳಿದ್ದರೆ ಮನೆ ಚಂದ!

ಬಂಜೆತನದಿಂದ ಮುಕ್ತರಾಗುವಿರಿ!

ಮಕ್ಕಳ ಕ್ಲೇಮು

ಗರ್ಭಧಾರಣ ಸಂಜೀವನೀ.

ಚಂತಿನ ಬೇಡಿರಿ

ಈ ನಮ್ಮ ಅನುಭವಿಕ ಔಷಧ ಮೂರು ನಾಲ್ಕು ಋತುಸ್ನಾತ ಆಗುವ ವರೆಗ ಪ್ರತಿಸಾರ ಮೂರು-ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ ೯ ಗುಳಿಗೆಗಳ ಕಿಂ. ರೂ ೩ ಟ ಖ ೩ ಆಣೆ. ಅನುಪಾನ ಪತ್ರಿಕೆ ಸಂಗಡ.

ಪತ್ತೆ — ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ. (S M C)

ಸ್ಥಾನಿಕ ವೃತ್ತಾಂತ.

ಕುಮಟೆ— ಈ ವಾರದಲ್ಲಿ ಮಳೆ [illegible] ಒಳ್ಳೇ ಮಳೆ ಬಿತ್ತು. ಮುಂದಿನ ವಾರದಲ್ಲಿ ಅದೇ [illegible] ಮಳೆ ಬಿದ್ದದರಿಂದ ಬಹಳ ತಂಪಾದರೆ [illegible] ವಾತಾವರಣ ರೋಗಕಾರಿಯಾ ಗದೆ.

ಸಹಕಾರಿ ಸಂಘಗಳ ರಜಿಸ್ಟ್ರಾರರು ಇಲ್ಲಿ ಕಳೆದವಾರ ಮುಕ್ಕಾಮು ಮಾಡಿ, ಅರ್ಬನ್ ಬ್ಯಾಂಕ, ಆರ್ಥಿಕ ಸಹಕಾರಿ [illegible] ಉಪ್ಪಿನ [illegible] ಸಂಘಗಳನ್ನು ತಪಾಸಣೆ ಮಾಡಿದರು. ಇಲ್ಲಿಯ ಅರ್ಬನ್ ಬ್ಯಾಂಕಿನ ಸಭಾಸದರಿಗಾಗಿ ರಜಿಸ್ಟ್ರಾರರು ಕೆಲ ಸೂಚನೆಗಳನ್ನು ಕೊಡುವವರಾಗಿ ತಿಳಿಯುತ್ತದೆ. ಬರುವ ರವಿವಾರ ಈ ಬ್ಯಾಂಕಿನ ವಾರ್ಷಿಕ ಸಭೆ [illegible] ಸಾಧಾರಣ [illegible] ಮೊದಲಾದ ಕೆಲಸಗಳು ನಡೆಯಲಿವೆ.

[illegible] ಸೋಮವಾರದ [illegible] ಈ ಜಿಲ್ಲೆಯೊಳಗಿನ [illegible] ಪ್ರತಿ [illegible] ಭವಾಗುತ್ತವೆ.

ಇಲ್ಲಿಯ ಟಪಾಲು ಆಫೀಸಿನ [illegible] ಒಬ್ಬರು ಇದ್ದ ಇಲ್ಲಿ ಕೆಲ ದಿವಸಗಳ ಹಿಂದೆ [illegible] ಪೋಲೀಸ [illegible] ಯಾವಾಗ [illegible] ಮಾಡಲಾಗದು.

ಸಾಣಿಕಟ್ಟೆಯ ಉಪ್ಪಿನ ಆಗರಗಳ [illegible] ವ್ಯಕ್ತಿಗಳ [illegible] ರಾತ್ರಿ ೩ ಘಂಟೆಯಿಂದ ಜನರು [illegible] ಉಪ್ಪಿನ [illegible] ಬೆಳಗಿನ ೫ ಘಂಟೆಯಿಂದ ೭ ಘಂಟೆಯವರೆಗೆ, ಬೆಳಗಿನ ೭ ಘಂಟೆಯಿಂದ ೧೧ ಘಂಟೆಯವರೆಗೆ [illegible] ಪೋಲೀಸರಿಗೆ [illegible] ಉಪ್ಪು [illegible] ಉಪ್ಪಿನ ಮಾಲೀಕರು [illegible] "ಬೇಕಾದಷ್ಟು ಉಪ್ಪು ತೆಗೆದುಕೊಳ್ಳಿರಿ, ನಾಳೆ [illegible]" ಎಂದು ಉದ್ಗರಿಸಿದರು! [illegible] ರೂ. ದಂಡ [illegible] ಕೆಲ ವ್ಯಕ್ತಿಗಳಿಗೆ [illegible] ಉಪ್ಪಿನ ಮಾಲೀಕರು [illegible] ವಿರುದ್ಧವಾಗಿ ಉಪ್ಪಿನ [illegible] ೨೫—೩೦ [illegible] ಉಪ್ಪು [illegible] ೫೦—೬೦ [illegible] ಎಂಬ ಸುದ್ದಿ [illegible] ಇತ್ಯಾದಿ.

ಶ್ರೀ ಗೋಕರ್ಣ ಕ್ಷೇತ್ರದಿಂದ [illegible] ಬರೆಯುತ್ತಾರೆ,— ಇಲ್ಲಿ ೫-೬ ದಿವಸಗಳಿಂದ ಒಳ್ಳೆ ಮಳೆ ಬೀಳುತ್ತದೆ. [illegible] ಶ್ರೀ ಜಗನ್ನಾಥ [illegible] ಇವರು [illegible] ಹಿಂದುಧರ್ಮದ [illegible] ಪೂರ್ವಜರು [illegible] ಇವರ [illegible] ಎಂಬಿತ್ಯಾದಿ ಎಂದು ಇವರಿಗೆ ಹಿಂದು ಧರ್ಮದ ಮೇಲೆ ಶ್ರದ್ಧೆ [illegible] ಧರ್ಮದ ಮೇಲೆ ಇವರಿಗೆ ಪ್ರೀತಿ ಉಂಟಾಗಿ ಹೋಗಿಯೇ, ಹಿಂದು ಧರ್ಮದ ಮೇಲೆ ಭಕ್ತಿ [illegible] ೪-೫ ವರುಷಗಳ ಹಿಂದೆ ಇವರು ಹಿಂದುಸ್ಥಾನದಲ್ಲಿ ಸಂಚರಿಸುತ್ತಿದ್ದಾಗ, ಶ್ರೀ ಗೋಕರ್ಣಕ್ಷೇತ್ರದಲ್ಲಿ ಹಿಂದುಧರ್ಮದ ದೀಕ್ಷೆ ಪಡೆದರು. ಹೊಸ ಧರ್ಮದ ಹೊಸ ಹೆಸರು 'ಜಗನ್ನಾಥ ಬುಧದಾಸ' ಎಂದು. ಇವರು ಅವಿವಾಹಿತರು. ಹಿಂದುಧರ್ಮಕ್ಕೆ ಸೇರಿದಂದಿನಿಂದ ಜೀವನವನ್ನು [illegible] ಸುಖವಾಗಿಯೇ [illegible] ಹಿಂದು ಧರ್ಮಗ್ರಂಥಗಳ ಪಠಣದಿಂದ ಆರ್ಯಧರ್ಮದ ಬಗ್ಗೆ ಅವರಿಗೆ ಆದರ ಹುಟ್ಟಿತು. ಇದರಿಂದ ಈ ತನಕ ಹಿಂದು ಧರ್ಮದಲ್ಲಿಯೇ ಹುಟ್ಟಿ ಬೆಳೆದ [illegible] ಹಿಂದುಗಳು [illegible] ನೋಡುವದ [illegible] ಇತ್ಯಾದಿ.

ಶ್ರೀ ಗೋಕರ್ಣ ಕ್ಷೇತ್ರದ ಶ್ರೀ ಗಣಪತಿ ದೇವಸ್ಥಾನದ [illegible] ರೂ. ೫೦೦೦ ಬೆಲೆಯ [illegible] ದಾಗಿನೆಗಳು ಕಳವಾದವು. [illegible] ಎಲ್ಲ ದಾಗಿನೆಗಳು ದೊರೆತಿವೆ. [illegible] ೧೫-೧೬ ವರ್ಷದ ವ್ಯಸನಿ ಹುಡುಗನು [illegible] ಸಂಶಯದಿಂದ [illegible].

ಹೊನ್ನಾವರ— ಇಲ್ಲಿಯ ಡಾ। ರಾಮಚಂದ್ರ ನಾರಾಯಣ ಶಾಸ್ತ್ರಿ [illegible] ಇವರು [illegible] ಗೆ ಹೋಗಿ [illegible] ಶಸ್ತ್ರಚಿಕಿತ್ಸೆಯಿಂದ [illegible] ಎಲ್ಲ [illegible] ತಿಳಿಯುತ್ತದೆ.

[illegible] ಭವಾನಿಶಂಕರ [illegible].

[illegible] ಶ್ರೀ ರಾಮೇಶ್ವರ ದೇವಸ್ಥಾನದ [illegible] ಕೆಡವಿದರು [illegible] ಕಾಣುವದಾಗಿರುವದಂತೆ. [illegible].

[illegible] ಒಂದು ಅಪಘಾತ [illegible] ಗಾಡಿಗಾರನು [illegible] ಹಿಂಗಸು [illegible] ಮೊಗಳಾಯಿ [illegible] ಡಾ। [illegible] ಶಸ್ತ್ರಚಿಕಿತ್ಸೆ [illegible] ವ್ಯವಸ್ಥೆ ಮಾಡಿದ [illegible] ಅಪಘಾತ ತಪ್ಪಿದಂತಿದೆ.

ಶ್ರೀ ವೆಂಕಟರಮಣ ದೇವಸ್ಥಾನದ [illegible] ಶ್ರೀ ರಾಮತೀರ್ಥ [illegible] ಧರ್ಮಶಾಲೆ [illegible] ಮಳೆಗಾಲದಲ್ಲಿ [illegible].

[illegible] ವಾಸುದೇವ [illegible] ಕೆಂಗ್ರೆಸ [illegible] ನಡೆದಿತ್ತು.

ಭಟಕಳ— [illegible] ತಿರುಮಲದೇವರ [illegible] ಇವರು [illegible] ಒಂದು [illegible] ದಿನಗಳು [illegible] ಕಳವು [illegible] ಮೇಲೆ [illegible] ಗಳನ್ನು ಬಾಳೆಗಿಡ [illegible] ವೊಟ್ಟುಗಳನ್ನು ರಸ್ತೆಯ ಮೇಲೆ ತೊಳೆಯುತ್ತಾರೆ, ಕೆಸರಾಗುತ್ತದೆ, [illegible] ಆಕ್ಷೇಪ [illegible] ರಿಪೋರ್ಟ ಮಾಡಿದಂತೆ [illegible] ಇಂಜಿನಿಯರ [illegible] ವೇಗ ಬಂದು ಎಲ್ಲ ಸಂಗತಿ ನೋಡಿ ಹೋಗಿರುತ್ತಾರೆ. [illegible] ತೊಳೆಯುವದಕ್ಕೆ ಪ್ರತ್ಯೇಕ ವ್ಯವಸ್ಥೆ ಇಟ್ಟಿರುವ ಸಂಗತಿ [illegible] ಈ ಮಾರಿಗೆಯಿಂದ ಮ್ಯುನಿಸಿಪಾಲಿಟಿಯಿಂದ ಬರುವ ಭಾಗದ ಗಾಡಿಯು ಎತ್ತುಗಳಿಗೂ, ಘಟ್ಟಿಗೆ ಗಾಡಿ ಎತ್ತುಗಳಿಗೂ ನೀರು ಕುಡಿಯಲಿಕ್ಕೆ ಅನುಕೂಲವಾಗುತ್ತಿತ್ತು.

[illegible] ದಕ್ಷತೆಯಿಂದ [illegible] ಕೆಲಸ ಮಾಡಿದ್ದಾರೆ [illegible] ಗಣಪತಿ ಎಂಬುವನಿಗೆ [illegible] ತಿಂಗಳ ಕಠಿಣ ಸಜೆ. ಈತನು [illegible] ಮನೆಯಲ್ಲಿ ಬೆಳ್ಳಿಯ ಸಾಮಾನು ಕದ್ದಿದ್ದನು. ಆ ಕಾಲದಲ್ಲಿ ಈತನು [illegible] ಜಾತಿಯವನಿಗೆ [illegible] ರೂ. ೫೦ ದಂಡ [illegible] ಮನೆಯಲ್ಲಿ ಬೆಳ್ಳಿಯ ಸಾಮಾನು [illegible] ಗೆ [illegible] ಭೇದವಾಗುವ ಕಾರಣವೇನೆಂದು [illegible] ಕೇಳುತ್ತಾರೆ. [illegible] ಮಾಜಿಸ್ಟ್ರೇಟರು [illegible]! [illegible] ಸಾಹೇಬರು [illegible].

[illegible] ವರ್ಷದ [illegible] ಮೇಲೆ [illegible] ಹುಡುಗನಿಗೆ [illegible] ಪೋಲೀಸ [illegible] (ತ) [illegible] ನಡೆದಿದೆ [illegible].

ಶಿರಸಿ— ತೀರ್ಥ [illegible] ಜಪ್ತಿಗಳು [illegible] ನಡೆದಿವೆ. [illegible] ಕೇಂದ್ರದ [illegible] ಜಪ್ತಿ [illegible] ಡಾ। ಹೆಗ್ಡೆ [illegible] ಸೀಮಿಯ [illegible] ವಾಲಂ [illegible] ರಾಮರಾಯರು [illegible] ಕೊಟ್ಟಿಗೆಗಳಿಗೆ [illegible] ದನಗಳನ್ನು [illegible] ತೀರ್ವೆ [illegible] ಅವರಲ್ಲಿ [illegible] ಒಂದು [illegible] ಮಾಡಿದರು! [illegible] ತೀರ್ವೆ ಬಗ್ಗೆ? [illegible] ತೀರ್ವೆ ಬಗ್ಗೆ ಅವರ [illegible] ಒಂದು ಎಮ್ಮೆಯನ್ನು ಜಪ್ತಿ ಮಾಡಿದರು, ಅವರು [illegible] ತೆತ್ತಿರುತ್ತಾರಾಗಿ ಅವರ ಹೇಳಿಕೆ. [illegible] ಕಾಲದಿಂದ [illegible] ಹಾಲು ಬೇಕು [illegible] ಎಂದು ಅವರು ಕೇಳಲಾಗಿ, ಅಧಿಕಾರಿಗಳು "ಅದಕ್ಕಿಲ್ಲವೇ ಬಿಟ್ಟುಬಿಡುವದು" ಎಂದು [illegible] ಪುನಃ ಜಪ್ತಿಗೆ ಹೋಗಿದ್ದರು. ಹಿಂದಿನ ಪಟೇಲರಾದ ರಾ। [illegible] ತೀರ್ವೆಯ [illegible] ವಕೀಲರಾದ ರಾ। [illegible] ಈ ಸಂಗತಿ [illegible] ತೀರ್ವೆಯನ್ನು [illegible] ಅವರು [illegible] ದಿನ ಪುನಃ ಬಂದು ಜಪ್ತಿಗಳನ್ನು ನಡಿಸಿದರು. [illegible] ರಾ। [illegible] ರಾ। ಕಂಬೂ ಗಣಪತಿ [illegible] ತೀರ್ವೆಯ ಬಗ್ಗೆ ಜಪ್ತಿಯಿಂದ [illegible] ರಾ। [illegible] ರೂ. ೫೦ [illegible] ಕೊಟ್ಟಿಗೆಯೊಳಗಿನ [illegible] ಜಪ್ತಿ ಮಾಡಿದರು. [illegible] ತೀರ್ವೆ [illegible] ಇಟ್ಟಿದ್ದ [illegible] ಕೊಟ್ಟಿದ್ದ [illegible] ನೋಟೀಸು [illegible] ಬೆಳ್ಳಿ [illegible] ಸಾಮಾನು ಜಪ್ತಿಯಾಯಿ

ಕ. ಪಂಚನಾಮೆ ಬೆಲೆ ರೂ ೨೦| ಬಜಾರದ ಬೆಲೆ ರೂ ೪೬-೪-೨

ಶಿರಸಿ ಕೇಂದ್ರದ ಮುಂದಾಳುವಾದ ಡಾ| ವ.ನಾ.ಹುಲಿ ಹೆಗಡೆ ರೂ ೩೪ ರ ಬಗ್ಗೆ ಅವರ ಮನೆಯೊಳಗಿನ ಕೆಲವು ಸಾಮಾನು ಹಾಗೂ ನೆರೆಮನೆಯವರಿಂದ ಕೆಲವು ಸಾಮಾನು ಜಪ್ತಾಗಿವೆ. ಜಪ್ತ ಸಾಮಾನಿನ ಬೆಲೆಯನ್ನು ಬಜಾರದ ರೂ ೫೦-೫೫ ಕಟ್ಟುತ್ತಾರಾದರೆ, ಪಂಚನಾಮೆ ಬೆಲೆ ರೂ ೧೨ ಬಂದು ಎಷ್ಟು ಮಾರಲಿಕ್ಕೆಂದು ಕೊಟ್ಟ ಪತ್ರದಂತೆ ಡಾ| ಈಶ್ವರ ಹೆಗಡೆಯವರೆಂದು ಹೇಳಿಕೆ

ತಾ ೧೩-೧೪ಕ್ಕೆ ಬಿಸಲಕೊಪ್ಪ ಕೇಂದ್ರದಲ್ಲಿ ಜಪ್ತಿಗಳಾದವು! ಜಪ್ತಿ ಮಾಡುವಾಗ ಕೆಲವು ಮನೆಗಳಲ್ಲಿ ನೆಲವನ್ನು ಅಲ್ಲಲ್ಲಿ ಅಗೆದರು ! ಗೋಡೆಗಳನ್ನು ಕೆಡವಿದರು ! ಹಾಸಿಗೆಗಳನ್ನು ಸಹ ಹರಿದು ನೋಡಿದರು ! ಡಾ| ಗೋವಿಂದ ಗಣೇಶ ಹೆಗಡೆರ ಮನೆಯಲ್ಲಿ ೩೦ ಸ್ಥಳಗಳಲ್ಲಿ ಅಗೆದರು ಎಂದರಂತೆ! ಡಾ| ಗೋವಿಂದಹೆಗಡೆ, ತಿಮ್ಮಯ್ಯಹೆಗಡೆ ಇವರಲ್ಲಿ ಪಾತ್ರೆ, ಬೆಲ್ಲ, ಹತ್ತಿಕಾಳು ವಗೈರೆ ಜಪ್ತಾಗಿವೆ. ಡಾ| ತಿಮ್ಮಣ್ಣ ರಾಮ ಭಟ್ಟರಲ್ಲಿ ಕೆಲವು ಪಾತ್ರೆ ಮತ್ತು ಒಂದು ಬಂದೂಕ ಜಪ್ತಾಗಿವೆ ಇವರ ಮನೆಯಲ್ಲಿ ಅಗೆದದ್ದರಿಂದ ಉಗ್ರಾಣಕ್ಕೆ ಸಹ ಸ್ಥಳವಿಲ್ಲದಂತಾಗಿದೆ ಹಾಲಿನ ಗಡಿಗೆ ಮಾರಿಕೆ ಒಡೆದು ಹೋದವು. ಇವರಲ್ಲಿ ಒಂದ ಬೆಳ್ಳಿಯ ಖಡ್ಗ ಸಹ ಸಿಕ್ಕಿತು ! ಡಾ| ರಾಮಕೃಷ್ಣ ವೆಂಕಭಟ್ಟರ ಮನೆಯಿಂದ ೩ ಕಂಬಿಗೆಗಳನ್ನು, ಡಾ| ಸುಬ್ರಾಯ ಅಣ್ಣಯ್ಯಭಟ್ಟರ ಮನೆಯಿಂದ ೬ ಕೊಡಪಾನ ಮತ್ತು ೧ ಕಡಾಯಿಗಳನ್ನು ಒಯ್ದರು. ಡಾ| ಶಿವಭಟ್ಟ ನಾರಾಯಣ ಭಟ್ಟರಲ್ಲಿ ಮನೆ ಹಂಚು ಒಡೆಯುತ್ತೇವೆಂದು ಹೇಳಿದರು ಆದರೆ ಒಡೆಯಲಿಲ್ಲ ! ೧ ಕಪಾಟು ೧ ಪೀತಾಂಬರ ಮತ್ತು ಅತ್ತರಬುಡ್ಡಿಗಳನ್ನು ಮಾತ್ರ ಒಯ್ದರು

ಹೆಗಡೆಕಟ್ಟೆ ಕೇಂದ್ರದಲ್ಲಿ ಗರಡಿಮನೆಯ ಡಾ| ದೇವರು ಹೆಗಡೆರು ತೆರತಕ್ಕ ರೂ. ೬೩ರ ಬಗ್ಗೆ ೧ ಕರು ಸಹಿತ ಎಮ್ಮೆ, ಭತ್ತ, ಕೆಲವು ಬೆಳ್ಳಿ ಭಂಗಾರದ ಆಭರಣಗಳು ಕೂಡಿ ರೂ. ೮೦-೯೦ರ ಸಾಮಾನು ಜಪ್ತಾಗಿವೆ ಮನೆಯ ಗ್ರಾಮದವಳಗಿನ ಕಲ್ಲುಮಠ್ಠಿನ ಸುಬ್ರಾಯ ಭಟ್ಟರು ಕೊಡತಕ್ಕ ರೂ. ೪೮ರ ಬಗ್ಗೆ ೧ ತಾಮ್ರದ ಕೊಪ್ಪರಿಗೆ ಜಪ್ತಾಗಿದೆ ಗೋಳಿಕೊಪ್ಪದ ಡಾ| ಗಣಪತಿ ದೇವಪ್ಪ ಹೆಗಡೆರ ರೂ. ೧೪೨ ಬಗ್ಗೆ ಬೆಲ್ಲ, ಪಾತ್ರೆ ವಗೈರೆ ರೂ. ೩೦೦ರ ಸಾಮಾನು ಜಪ್ತಾಗಿವೆ. ಬೆಳ್ಳೆಕೇರಿಯ ಡಾ| ಗಣಪತಿ ರಾಮಕೃಷ್ಣ ಭಟ್ಟರ ರೂ. ೧೭೫ರ ಬಗ್ಗೆ ೨ ಮೆಣಸಿನ ಕಂಸ, ೬|| ಮಣ ಅಡಿಕೆ, ೨ ತಂಬಿಗೆ, ೩ ಬೇಲಿ ಹೀಗೆ ಒಟ್ಟು ರೂ. ೩೦ ರೊಳಗಿನ ಸಾಮಾನು ಜಪ್ತಾಗಿದೆ ಕೆಳಗಿನ ತಾರಗೋಡದ ನಾರಾಯಣನೆಂಬ ಅಪ್ರಾಪ್ತ ಹುಡುಗನ ಪಾಲಿನ ಬಾಕಿ ರೂ. ೩೦ರ ಬಗ್ಗೆ ೧ ಕರು ಸಹಿತ ಎಮ್ಮೆ, ೧ ಕರು ಸಹಿತ ದನಗಳು ಮತ್ತು ಕೆಲವು ಪಾತ್ರೆಗಳು ಜಪ್ತಾಗಿವೆ. ಜಪ್ತಾದ ಎಮ್ಮೆಯು ಡಾ| ನಾರಾಯಣ ಸುಬ್ಬಯ್ಯ ಹೆಗಡೆ ಎಂಬುವವರದಂತೆ! ಹಾರಗಾರ ಕೇಂದ್ರದ ಹೊಸತೋಟ ಗ್ರಾಮದ ಡಾ| ವೆಂಕಟರಮಣ ತಿಮ್ಮಪ್ಪ ಇವರ ಮನೆಯಲ್ಲಿ ಏನೂ ಸಿಗಲಿಲ್ಲ. ಡಾ| ಭಟ್ಟರ ಒಡೇ ಗೌಡಾ ಇವರಿಗೆ ಆದಂ ಒಡೆಯುವ ತೀರ್ವ ಕುಂಬಾಳವನ ಗೇಣಿ ವಸೂಲ ಕೊಡಬೇಕೆಂದು ಹುಕುಮಾಗಿದ ಡಾ| ವೆಂಕಟರಮಣ ಭಟ್ಟರಲ್ಲಿ ಕೆಲವು ಭತ್ತ ಜಪ್ತ ಮಾಡಿದರು; ಭಟ್ಟರು ತೀರ್ವ ತೆತ್ತರು ಆದರೂ ಭತ್ತ ಬಿಟ್ಟು ಕೊಡಲಿಲ್ಲ ! ಕಳದ ವರ್ಷ ತಕ್ಕಂತೆ ತಗಾವಿ ಹಣ ತಾ ೧೯ರೊಳಗೆ ವಸೂಲ ೬ ಆದರೆ, ಭತ್ತ ಬಿಟ್ಟು ಕೊಡಲಾಗುತ್ತದೆಂದು ತಿಳಿಸಿದರು

ತಾ ೧೫ಕ್ಕೆ ತಾರಗೋಡದ ಡಾ| ಸುಬ್ಬಾ ಗಣಪ ಭಟ್ಟರಲ್ಲಿ ಜಪ್ತಿಯಾಯಿತು ೨-೩| ತಾಸು ರಾತ್ರಿ ಇರುವಾಗ ಜಪ್ತಿಗಳಿಗೆ ಪ್ರಾರಂಭವಾಯಿತು ಡಾ| ಸುಬ್ಬಾ ಭಟ್ಟರು ಕೊಡತಕ್ಕ ರೂ. ೪೪ರ ಬಗ್ಗೆ ೩ ಹಾಲು ಕರೆಯುವ ಎಮ್ಮೆಗಳು ಮತ್ತು ೧ ದನಗಳು ಜಪ್ತಾದವು ತಾ ೧೬ಕ್ಕೆ ಸಹ ರಾತ್ರಿಯಿರುವಾಗಲೇ ಹುಡುಕಿ ೪-೫ ಮನೆ-ಕೊಟ್ಟಿಗೆ ಮುತ್ತಿ ಬೆಳಗಾದ ಮೇಲೆ ಜಪ್ತಿ ನಡೆಸಿದರು ಡಾ| ಅಣ್ಣಯ್ಯ ಹೆಗಡೆರು ಕೊಡತಕ್ಕ ರೂ ೧೧೦ರ ಬಗ್ಗೆ ೬ ದನಗಳನ್ನು ಪಾತ್ರೆಗಳನ್ನು ಜಪ್ತ ಮಾಡಿದರು ಡಾ| ಶಂಭಯ್ಯ ವೆಂಕಪ್ಪ ಹೆಗಡೆರು ತೆರತಕ್ಕ ರೂ ೩೯೦ ಬಗ್ಗೆ ಕೆಲವು ಪಾತ್ರೆ ಧೋತರ, ವಸ್ತ್ರ ಬೆಲ್ಲ ನಗದಿ ವಗೈರೆ ಜಪ್ತಾಗಿವೆ ಇವರ ಮನೆಯಲ್ಲಿ ೩ ಕಡೆ ಅಗೆದು ನೋಡಿದರು. ಡಾ| ಗಣಪತಿ ಗಣಪಯ್ಯ ಹೆಗಡೆರು ಕೊಡತಕ್ಕ ರೂ ೪೪೦ ಬಗ್ಗೆ ಬೆಲ್ಲ ಪಾತ್ರೆ ವಗೈರೆ ಕೂಡಿ ರೂ ೨೫೦ರಷ್ಟು ಸಾಮಾನು ಸಿಕ್ಕಿತು ಒಂದು ಕಡೆ ಅಗೆದು ನೋಡುವಾಗ ಹಾರೆಕೋಲು ಮುರಿದು ಹೋಯಿತು !

ಕಡವೆಯ ಡಾ| ರಾಮಕೃಷ್ಣ ಹೆಗಡೆರು ಜೈಲಿನಲ್ಲಿದ್ದರೆ ಅವರ ತೀರ್ವ ಬಗ್ಗೆ ತಾ ೧೬ಕ್ಕೆ ೧೫ ಜನ ಅಧಿಕಾರಿಗಳು ಒಡನೆಗೇರಿಯೊಳಗಿನ ಹೆಗಡೆರ ಕೈಕೆಳ ಮನೆಗಳನ್ನು ಮುತ್ತಿ ಅಲ್ಲೆತರಿಂದ ಅಂಕು ೪೩||| ಬೇಲ ಪಾತ್ರೆ, ಇನ್ನೊಂದು ಪ್ರತ್ಯೇಕ ರೂ ೬೪-೫-೦ ವಸೂಲ ಮಾಡಿದರು ವರೇಬೇದಿನ ಸಂಗಾರ ಬಾಳೆಗಳಾಗಿ ಗೇಣಿದಾರರ ಕಡೆಯಿಂದ ರೂ ೩೩-೯-೯ನ್ನು ವಸೂಲ ಮಾಡಿದ್ದರು.'

ಕಡವೆಯ ಡಾ| ಅಣ್ಣಯ್ಯ ವೆಂಕಪ್ಪ ಹೆಗಡೆರಲ್ಲಿ ಜಪ್ತಿಯೊಳಗೆ ಏನೂ ಸಿಗಲಿಲ್ಲ !

ಹುಲಿಮಾಳಗಿಯ ಡಾ| ರಾಮಕೃಷ್ಣ ಹೆಗಡೆಯವರು ರೂ. ೬೯ ತೀರ್ವ ಕೊಡಬೇಕು ಅವರ ಕೈಕೆಳಗಿನ ಚಕ್ಕಂಗಳಿ ಬಸ್ಸು ಗೇಣಿನಿಂದ ರೂ. ೫ ವಸೂಲ ಮಾಡಿದ್ದರೆ ಅವರ ಜಮೀನು ಖಾಲಸಾ ಮಾಡುವದಾಗಿ ನೋಟೀಸು ಸಹ ಹೊರಟಿದೆ ಎಂದು ವರ್ತಮಾನ ಹೊಸತೋಟದ ಡಾ| ಗಣಪಯ್ಯ ತಿಮ್ಮಯ್ಯ ಹೆಗಡೆ, ಸೆಗ್ಗ ಗ್ರಾಮದ ಲಕ್ಷ್ಮೀಬಾಯಿ ಕೋಂ ರಾಮ ಕೃಷ್ಣ ಹೆಗಡೆ, ಹೆಗಡೆಕಟ್ಟೆಯ ಡಾ| ಮಹಾಬಲೇಶ್ವರ ಹೆಗಡೆ ಗದ್ದೆಮನೆ, ಡಾ| ರಾಮಕೃಷ್ಣ ಹೆಗಡೆ ಕಲಗಾರ ಮತ್ತು ಡಾ| ತಿಮ್ಮಯ್ಯ ಹೆಗಡೆ ದೇವರಗುಡಿ ಇವರಿಗೂ ಜಮೀನು ಖಾಲಸಾತಿಯ ನೋಟೀಸುಗಳಾಗಿವೆ ಅಂತು ೩೩ ಖಾಲಸಾತಿಯ ನೋಟೀಸುಗಳಾದವು.

ಕಡವೆಯಲ್ಲಿ ಜಪ್ತಿಗೆ ಹೋದಾಗ ರೈತರಿಗೆ ಧೈರ್ಯ ಕೊಡಲಿಕ್ಕೆ ಹೋಗಿದ್ದರೆಂಬ ಆರೋಪದ ಮೇಲೆ ಇಬ್ಬರು ಸ್ವಯಂಸೇವಕರಿಗೆ ಕೈದು ಮಾಡಿದ್ದಾರೆ

'ಇದು ಎನೇ ಯುದ್ಧಮಂಡಳದ ಅಧ್ಯಕ್ಷ ಮತ್ತು ೩ನೇ ಯುದ್ಧಮಂಡಳದ ಕಾರ್ಯದರ್ಶಿಗಳಿಗೆ ರೂ ೧೦೦-೧೦೦ ದಂಡವಾಗಿತ್ತು. ಈ ಅಧ್ಯಕ್ಷರ ತಂದೆಯವರಾದ ಡಾ| ಗೋಪಭಟ್ಟರು ಸಾವಿರಾರು ರೂಪಾಯಿ ತೀರ್ವ ಕೊಡುವವರು ಅವರು ಸುಮಾರ ರೂ ೨೦ ತೀರ್ವ ತೆರತಕ್ಕದ್ದಿತ್ತು. ಅವರ ವಸೂಲಿಯ ಬಗ್ಗೆ ಹಾಗು ಅವರ ಮಗನಿಗಾದ ದಂಡ ವಸೂಲಿಯ ಬಗ್ಗೆ ಜಪ್ತಿಗೆ ಹೋದರು ಮನೆಯಲ್ಲಿ ಭಟ್ಟರು ಇಲ್ಲ ಅವರ ಸಣ್ಣನೆಂಬ ಹುಡುಗನು ಈಗ ಸ್ಕೂಲಮೇಲೆ ಹೋಗಿ ತಂದೆಗೆ ತಿಳಿಕೊಂಡು ಬರುತ್ತೇನೆ, ಅಲ್ಲಿ ತನಕ 'ನಿಲ್ಲಿರಿ" ಎಂದು ಹೇಳಿ ಹೋದನು ಇಷ್ಟರಲ್ಲಿ ಹುಡುಗನು ನಿಶ್ಚಯದಂತೆ ದನಗಳನ್ನು ಬಿಡಲಿಕ್ಕೆ ಹೋದನು ಒಬ್ಬ ಪೋಲೀಸನು ಹುಡುಗನಿಗೆ ಬೇಡಿ ಹಾಕಿ ಕೆಲಹೊತ್ತು ಕೂಡ್ರಿಸಿದನು ಡಾ| ಗೋಪಭಟ್ಟರು ಬಂದರು. 'ನಾನು ಸಾವಿರಾರು ರೂಪಾಯಿ ತೆತ್ತಿದ್ದೇನೆ, ಹೀಗೆ ಹತ್ತಿಪತ್ತು ರೂಪಾಯಿಗಳ ಬಗ್ಗೆ ಜಪ್ತಿಯಲ್ಲವೇ! ಹಾಗಾದರೆ ಜಪ್ತಿ ಮಾಡಿಯೇ ಬಿಡ್ರಿ" ಎಂದು ಉದ್ಗರಿಸಿದರು ಜಪ್ತಿಯು ಕ್ರಮಕ್ಕೆ ಬರುವಾಗುವ ಸ್ಥಳದಲ್ಲಿ ಅನುಭೋಗಿಗಳು ತಾವು ತೀರ್ವ ತುಂಬುತ್ತೇವಾಗಿ ಹೇಳಿದರು ಅನಂತರ ಪೋಲೀಸರು ಗೋಪಭಟ್ಟರ ಇಬ್ಬರು ಮಕ್ಕಳಿಗಾದ ದಂಡದ ರೂ ೨೦೦ ಕೊಡ ಹೇಳಿದರು ಆಗ ಹೆಗಡೆರು ತಮ್ಮ ಹುಡುಗನಿಗೆ ಬೇಡಿ ಹಾಕಿದ್ದೇಕೆಂದು ಕೇಳಿದರು. ಅದಕ್ಕೆ ಒಬ್ಬ ಪೋಲೀಸನು "ಇದು ಕೇಳುವ ಅಧಿಕಾರ ನಿಮಗಿಲ್ಲ ನನ್ನ ಮನಸ್ಸಿಗೆ ಬಂದರೆ ನಿಮಗೆ ಸಹ ಬೇಡಿ ಹಾಕುವ ಅಧಿಕಾರ ನನಗುಂಟು ! ಎಂದು ಉತ್ತರ ಕೊಟ್ಟನು. ಹೆಗಡೆರು ಅದಕ್ಕೆ ಅಧಾರವಾದರು ಅವರ ಈ ಅಗ್ರವಿಷಯ ಅಷ್ಟಕ್ಕೇ ಬಿಟ್ಟು ದಂಡದ ಬಗ್ಗೆ ೨ ಗಾವಿ, ೪ ಎತ್ತು ಮತ್ತು ೧ ಸ್ಟ್ಯಾಕಲ ಜಪ್ತ ಮಾಡಿ ಒಯ್ದರು

ತಾ ೧೬ಕ್ಕೆ ಒಬ್ಬ ಸ್ವಯಂಸೇವಕನು ಬಿಸಲಕೊಪ್ಪದ ಕಾಂಗ್ರೆಸ ಟಪಾಲು ತಕ್ಕೊಂಡು ಹೋಗುತ್ತಿದ್ದನು ಪೋಲೀಸರು ಹಿಡಿದರು ಅವನ ಅಂಗ ಝಡ್ತಿಯಲ್ಲಿ ಕೆಲವು ಕಾಗದಪತ್ರಗಳು ತಾ ೧೭ಕ್ಕೆ ಸುಗಾವಿಯಲ್ಲಿ ಆಗಲಿಕ್ಕಿದ್ದ ಸಭೆ ಮತ್ತು ಇತರ ಮಾಹಿತಿಯ ಜಾಹಿರಾತಿಯೂ ಸಿಕ್ಕಿದಂತೆ ಕೆಲಹೊತ್ತು ಕಳೆದ ಮೇಲೆ ಆ ಸ್ವಯಂಸೇವಕನನ್ನು ಬಿಟ್ಟುಕೊಟ್ಟರು ಮೇಲಿನ ಜಾಹಿರಾತಿನ ಮಾಹಿತಿ ಸಿಕ್ಕಿದ್ದರಿಂದ ಏನೋ ಸಿರ್ಸಿಯಿಂದ ೧೨ ಬೋರ ಹತ್ತಿ ಪೋಲೀಸರು ಬಂದು ಸುಗಾವಿಯಲ್ಲಿ ಕ್ಯಾಂಪ ಹೂಡಿದ್ದರು

ತಾ ೧೭ಕ್ಕೆ ಸಿರ್ಸಿ ತಾಲೂಕಿನಲ್ಲಿ ಅಲ್ಲಲ್ಲಿ ಜಂಗಲ ಕಾಯದೆಭಂಗವಾಯಿತು ಹೆಗಡೆಕಟ್ಟೆಯಲ್ಲಿ ಸುಮಾರು ೧೫೦ ಜನರು ಕಾಯದೆಭಂಗ ಮಾಡಿದರು ತಾರಗೋಡದಲ್ಲಿ ಸುಮಾರು ಸ್ತ್ರೀ-ಪುರುಷರು ಸೇರಿದ್ದರು ಈ ಬಗ್ಗೆ ಯಾರಿಗೂ ಸೆರೆಹಿಡಿದ ಸುದ್ದಿಯಿಲ್ಲ

ತಾ ೯ಕ್ಕೆ ೧ನೇ ಯುದ್ಧ ಮಂಡಳದ ಕಾರ್ಯದರ್ಶಿಗಳ ದಂಡದ ರೂಪಾಯಿ ೧೦೦ನ್ನು ಅವರ ತಂದೆಯವರಿಂದ ವಸೂಲ ಮಾಡಿದರು ಅಧ್ಯಕ್ಷರಿಗಾದ ದಂಡವನ್ನು ಅವರ ತಂದೆಯವರು ಕೊಡಲಿಲ್ಲ ಜಪ್ತಿಯಾಯಿತು ಏನೂ ಸಿಗಲಿಲ್ಲ! ಅಧಿಕಾರಿಗಳಿಗೆ ಊಟಮಾಡಿಸಿ ಕಳಿಸಿಕೊಟ್ಟರು

ಹಾಲೇರ ಕೊಪ್ಪದಲ್ಲಿ ಒಬ್ಬರಿಗೆ ರೂ. ೫೦ ದಂಡವಾಗಿತ್ತು ಅದರಲ್ಲಿ ರೂ ೩೫|| ಹಿಂದೆಯೇ ವಸೂಲಾಗಿತ್ತು. ಅವರು ದಂಡದ ಬದಲಾಗಿ ಕೆಲ್ಲ ಕಾರಾಗೃಹದ ಶಿಕ್ಷೆಯನ್ನು ಸಹ ಅನುಭವಿಸಿದ್ದರೆ. ಬಾಕಿಯುಳಿದ ದಂಡದ ಬಗ್ಗೆ ತಾ ೧೬ಕ್ಕೆ ಅವರಲ್ಲಿ ಜಪ್ತಿಯಾಗಿ ೧೦೦-೧೨೫ ರೂಗಳ ಸಾಮಾನು ಜಪ್ತಾಗಿದೆ ಶಿಕ್ಷೆ ಅನುಭವಿಸಿ ಬಂದ ಮೇಲೆ ದಂಡದ ಬಗ್ಗೆ ಆದ ಜಪ್ತಿ ಇದೇ ಮೊದಲನೇದಂತೆ! ಬೇದೂರ ಜಪ್ತಿನ ಬಗ್ಗೆ ಶಿಕ್ಷೆಯಾದ ಅಂಗಡಿಕಾರರ ದಂಡದ ಬಗ್ಗೆ ಜಪ್ತಿಯಾಯಿತು. ಏನೂ ಸಿಗಲಿಲ್ಲ.

೮-೧೦ ದಿನಗಳ ಹಿಂದೆ ಹೆಗಡೆಕಟ್ಟೆ ಕೇಂದ್ರದ ಕಳ್ಳಿರೆ, ಸೈಗಾರ, ಮೊದಲಾದ ಕಡೆಗೆ ಕಾಡಾನೆಗಳು ಬಂದು ಅಡಿಕೆ ತೋಟಗಳ ನಾಶ ಮಾಡಿದವಂತೆ ೧೦ ಹಜಾರದ ಲುಕ್ಸಾನು ಆದೀತು ಮಾನ!"

ತಾ ೧೮ನೇ ರಾತ್ರಿ ೧೦ ಘಂಟೆಯ ಸುಮಾರಕ್ಕೆ ಮ್ಯುನಿಸಿಪಲ ಕಚೇರಿಯ ಸುಮಾರಕ್ಕೆ ಮುನಿಸಿಪಲ ಕಚೇರಿಯ ಹಿಂದೆ ಒಂದು ಭಯಂಕರ ಸ್ಫೋಟವಾಯಿತು. ಸಮೀಪದ ಇದಾಳ ಜನರ ಮಂದಿರದಲ್ಲಿ ಜಾಗೃತ ಆದ ಶ್ರೀಮಂತ ಜನರು ಹಾರಿ ಬಿದ್ದರಂತೆ! ೬-೭ ಏಟುಗಳ ತನಕ ಹೊಗೆಯೇ ಹೊಗೆಯಾದ್ದರಿಂದ ಯಾರಿಗೂ ಅಲ್ಲಿ ಹೋಗಲಾಗಲಿಲ್ಲ ಸಾಧ್ಯವಿದ್ದವರ ಯಾರಿಗೂ ಗಾಯವಾಗಿಲ್ಲ

ಸಿದ್ದಾಪುರ— ಜಪ್ತಿಗಳು ನಡೆಯುತ್ತಿವೆ ಇಟಗಿಯ ಮಹದೇವಪ್ಪನವರು ಜೈಲಿಗೆ ಹೋಗಿದ್ದಾರೆ, ಅವರ ತೀರ್ವ ಬಗ್ಗೆ ಅವರ ಜಮೀನದಾರ ಡಾ| ರಾಮಚಂದ್ರ ಭಟ್ಟರ ೫ ದನಗಳನ್ನು ಜಪ್ತ ಮಾಡಿದ್ದಾರೆ. ಇವೆ ಪಟೇಲರಲ್ಲೇ ಇದ್ದವು ಅವುಗಳಲ್ಲಿ ಒಂದು ಕರು ಸತ್ತು ಹೋಗಿದೆ ಕಂಚಿಕೈಯಲ್ಲಿ ಡಾ| ಪರಮೇಶ್ವರ ನಾರಾಯಣಪ್ಪ ಹೆಗಡೆಯವರ ನಗದಿ ೫ ರೂ ಇಟ್ಟುಕೊಂಡು ಬಾಕಿ ಬಿಟ್ಟರು ಹೊಸತೋಟದಲ್ಲಿ ಡಾ| ಅಂಬಾ ಸುಬ್ರಾಯ ಭಟ್ಟರು ತೆರತಕ್ಕ ರೂ ೪೦ರ ಬಗ್ಗೆ ೧೪ ಮಣ ತೂಕದ ತಾಮ್ರದ ಪಾತ್ರೆ, ೨ ಉಂಗುರಗಳು ಮತ್ತು ರೂ ೧೫ ನಗದಿ ಜಪ್ತಾಗಿವೆ ಕಾನಸಾಲದ ಡಾ| ರಾಮಕೃಷ್ಣ ಹೆಗಡೆರಿಗೆ ಜಮೀನು ಖಾಲಸಾತಿಯ ನೋಟೀಸು ಕೊಟ್ಟಿದ್ದಾರೆ. ಕೆಳಗಿನ ಹಿರೇಕೈಯಲ್ಲಿ ಡಾ| ಸುಬ್ಬಯ್ಯ ದೇವಪ್ಪ ಹೆಗಡೆರು ಏನೇ ಜಪ್ತಿಯನ್ನು ಕೊಡಲಿಲ್ಲ ಬರಿ ಜೊತೆ ಜಪ್ತಿ ಮಾಡಲಿಕ್ಕಾಗಲಿ ಜಮೀನು ಜಪ್ತಿಮಾಡಲಿಕ್ಕಾಗಲಿ ಆಸ್ಪದ ಇಲ್ಲವೆಂದು ಹೇಳಿದರು ಅಧಿಕಾರಿಗಳು ಅವರಲ್ಲಿ ಜಪ್ತಿ ಮಾಡಲಿಲ್ಲ ಡಾ| ಮಂಜಪ್ಪ ಹೆಗಡೆ ಮಾರಿಗೆ ಪಟೇಲರು 'ನಿನ್ನ ತಿಜೋರಿ ತೆರೆದು ಕೊಡುತ್ತೀಯೋ ಮುರಿದು ಒಡೆಯಲೋ' ಎಂದು ಹೇಳಿದರು ಅದಕ್ಕೆ ಅವರು 'ನೀವು ನನ್ನ ಅಪಮಾನ ಮಾಡಿದ್ದು ಸಾಕು ನನ್ನ ಮಾನಸ್ಸಿಂತ ತಿಜೋರಿ ಹೆಚ್ಚಿನದಲ್ಲ ! ಅದು ನನಗೆ ಬೇಡ' ಎಂದು ಉತ್ತರ ಕೊಟ್ಟರಂತೆ.

ವಾರ್ತೆಗಳು.

— ವ ಸಪೇಂಜಮೋಳಗಿನ ಒಂದು ಕಡೆ ಪೋಲೀಸ ಹೇವೆಗೆ ಒಬ್ಬ ಹೆಂಡತಿಯಿರುತ್ತಾಳೆ, ಆವಳು ಕಾಯಿದೆಭಂಗದಲ್ಲಿ ಸೆರೆ ಶಿಕ್ಷೆ ಹೊಂದಿದಳು. ಪೋಲೀಸನ ಹೆಂಡತಿಯಾಗಿ ಸತ್ಯಾಗ್ರಹದಲ್ಲಿ ಸೇರುವ ಪ್ರಸಂಗವಾಯಿತೆಂದು ಮೆಜಿಸ್ಟ್ರೇಟರು ಕೇಳಿದರು. ಗಂಡನು ನನಗೆ ಹೊಟ್ಟೆಗೆ ಕೊಡಲಿಲ್ಲ, ಉಪವಾಸ ಹಾಕಿದನು, ಆದರಿಂದ ನಿರುಪಾಯವಾಗಿ ನಾನು ಕಾಯಿದೆಭಂಗದಲ್ಲಿ ಸೇರಿದನಾಗಿ ಆವಳು ಹೇಳಿದಳು. ಮೆಜಿಸ್ಟ್ರೇಟರು ಪೋಲೀಸನ ಮೇಲೆ ಖಟ್ಲೆಯ ಪ್ರಕರಣವನ್ನೆಬ್ಬಿಸಿದ್ದಾರೆ.

— ನಾಗಪುರದ ಸತ್ಯಾಗ್ರಹ ಪ್ರಮುಖರಾದ ಶ್ರೀ ವಾಮನರಾವಪಂತ ಅಭ್ಯಂಕರರವರ ಶೇ ೩೦೦ ದಂಡದ ವಸೂಲಿಗಾಗಿ ಅವರ ಮೋಟರ ಒಂದು ಜಪ್ತಿಯಾಗಿತ್ತು. ೨-೩ ಬಾರಿ ಅದರ ಲಿಲಾಂವಾದಾಗ್ಯೂ ಸಹಾ ಉಹರಲಿಲ್ಲ. ಎದರಿಂದ ಮುಂಬಯಿಯ 'ಟೈಮ್ಸ ಆಫ್ ಇಂಡಿಯಾ' ಪತ್ರಿಕೆಯಲ್ಲಿ ಜಾಹೀರಾತು ಕೊಟ್ಟು ಹೊಂದರು. ತರುಸಿ ೧೬೦೦ ರೂಪಾಯಿಗಳಿಗೆ ಮಾರಬೇಕೆಂದು ಗೊತ್ತಾಗಿದೆ. ಈ ಪ್ರಕಾರ ಲಿಲಾಂವು ಕರಿಯದೆ ವರ್ತಮಾನಪತ್ರಗಳೊಳಗಿನ ಜಾಹೀರಾತಿನಿಂದ ಜಪ್ತಿ ಮಾಡಿದ ಜಿಂದಿಗೆಯನ್ನು ಮಾರುವ ರೀತಿಯು ವದಿಗೆ ಸಮ್ಮತವೇನೆಂದು ಕಲಕತ್ತೆಯ 'ಅಮೃತ ಬಜಾರ' ಪತ್ರಿಕೆಯು ಪ್ರಶ್ನೆ.

— ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಕೋಳಿಗಳಿಗೊಂದು ರೋಗ ಬಂದಿರುವದು. ದಿನ ತಪ್ಪದೆ ಸಾಯುತ್ತವೆ, ನಾಗಾಯಿ ಸತ್ತುಹೋಗುತ್ತವೆ.

— ಪುಣೆಯೊಳಗಿನ ಮಧುರಾ ಕುಮಾರಿ ಎಂಬವನಿಗ ಡಿಸ್ಟ್ರಿಕ್ಟ ಮಾಜಿಸ್ಟ್ರೇಟರು ೧೨|| ಆಣೆ ಗಂಟು ಕದ್ದ ಬಗ್ಗೆ ವಿಚಾರಣೆಗಾಗಿ ಸೆಶನ್ಸ ಕೋರ್ಟಿಗೆ ಕಳಿಸಿದ್ದಾನೆ. ಕುಮಾರಿಯು ಕಳ್ಳತನದ ಹೀಗೆ ಸಿಕ್ಕಿಸಿರುವದೆ. ಬೇರೆ ಬೇರೆ ಪ್ರಾಂತಗಳಲ್ಲಿ ಈತನು ೩೩ ಬಾರಿ ಕಳ್ಳತನ ಮಾಡಿ ಅಂತು ೨೬ ವರ್ಷ ಜೈಲಿನಲ್ಲಿ ಕಳೆದಿದ್ದಾನೆ. ಇವನಿಗೆ ಹೀಗೆ ಕಡಿಮೆ ಶಿಕ್ಷೆಯೆಂದರೆ ೧೦ ಬೆತ್ತದ ಪ್ರಹಾರ, ಹೆಚ್ಚೆಂದರೆ ೩ ವರ್ಷದ ಸಜೆ. ಈಗ ಈತನ ವಯಸ್ಸು ೬೫ ವರ್ಷ.

— ಟಪಾಲ ಬಹಿಷ್ಕಾರವೆಂದು ಇತ್ತಿತ್ತ ಟಪಾಲ ಪೆಟ್ಟಿಗೆಗಳಲ್ಲಿ ಆಮ್ಲ ಹಾಕಿ ಪತ್ರಗಳನ್ನು ಸುಟ್ಟು ತೆಗೆದರು. ಶ್ರೀಕ್ಷೇತ್ರ ಕಾಶಿಯಲ್ಲಿ ಹೊಸ ಉಪಕ್ರಮ: ಪತ್ರ ಹಾಕಲಿಕ್ಕಿಟ್ಟ ಡಬ್ಬಿಗಳನ್ನೇ ಪರಾರಿ ಮಾಡಿದರು. ಇಂಥ ಬಹಿಷ್ಕಾರವೆಂದು ಜನರು ಧಿಕ್ಕರಿಗೊಂಡಿದ್ದಾರೆ. ಇಂಥ ವಿನಾಶಕ ಬಹಿಷ್ಕಾರ ಕ್ರಮವು ಹಿತಕರವಲ್ಲ.

— ಢಾಕ್ಕಾದೊಳಗಿನ ಸೆಂಟ್ರಲ ಜೈಲಿನಲ್ಲಿ ಸತ್ಯಾಗ್ರಹಿ ಕೈದಿಗಳು ಸರಕಾರ ಸಲಾಮು ಮಾಡಲೊಪ್ಪುವದಿಲ್ಲ, ಇದೊಂದು ಅಪಮಾನವೆಂದು ಅವರ ಅಂಬೋಣ. ಇದು ಜೈಲ ನಿಯಮದ ಭಂಗವಾಯಿತೆಂದು ಜೈಲಿನ ಅಧಿಕಾರಿಗಳು ಗ್ರಹಿಸಿ ಈ ಬಗ್ಗೆ ಅವರಿಗೆ ಶಿಕ್ಷೆ ವಿಧಿಸಿದ್ದಾರೆ. ಅದೆಂದರೆ.— ಆಪ್ತೇಷ್ಟ-ಮಿತ್ರರಿಗೆ ಪತ್ರ ಬರೆಯಕೂಡದು, ಯಾರಿಗೂ ಪತ್ರ ಬರೆಯಕೂಡದು, ಯಾರಿಂದಲೂ ಬಂದ ಪತ್ರ ಸಿಗದು, ಆಪ್ತೇಷ್ಟ-ಮಿತ್ರರೊಡನೆ ಮಾತಾಡುವ ಹಕ್ಕು ರದ್ದು.

— ರತ್ನಾಗಿರಿ ಜಿಲ್ಲೆಯೊಳಗಿನ ಒಂದು ಗ್ರಾಮದಲ್ಲಿ ರಾಷ್ಟ್ರೀಯ ಸಭೆಗಾಗಿ ಒಂದು ಸೊಗಸಾದ ಹಂದರ ಹಾಕಿದ್ದರು. ಅದನ್ನು ಯಾರೋ ಒಬ್ಬರು ಸುಟ್ಟು ಬೂದಿ ಮಾಡಿದರಂತೆ! ಅದರಿಂದ ಬಹು ಗಡಿಬಿಡಿ!

— ಪುದುಕೋಟೆಯಲ್ಲಿ ಭಯಂಕರ ಗುಡುಗಾಯಿತು. ಹೊರಗಡೆ ಕೆಲಸ ಮಾಡುತ್ತಿದ್ದ ಮೂವ ಕೂಲಿಯಾಳುಗಳು ತಮ್ಮ ಗುಡಿಸಲುಗಳಲ್ಲಿ ಸೇರಿದರು. ಆದಾಗ್ಯೂ ಮಿಂಚು ಬಿದ್ದು ಇಬ್ಬರು ಅಲ್ಲಿಂದಲ್ಲೇ ಸತ್ತರು. ಮೂರನೆಯವರು ಆಸ್ಪತ್ರೆಯಲ್ಲಿ ತೀರಿಕೊಂಡರು.

— ಬಾರ್ಡೋಲಿಯೊಳಗಿನ ಕಲ್ಯಾಣ ಆಶ್ರಮದ ಇಮಾರತನ್ನು ಪೋಲೀಸರು ಕೆಡವಿ ನೆಲಸಮ ಮಾಡಿದರು. ಆಶ್ರಮದ ಒಡೆಯರಿಗೆ ಕರಿಸಿ ಅಲ್ಲಿಂದಲ್ಲೇ ರೂ ೫೦ ದಂಡ ವಿಧಿಸಲ್ಪಟ್ಟಿತು. ಇಷ್ಟೆಲ್ಲ ಅವಸ್ಥೆಗೆ ಕಾರಣವೇನೆಂದರೆ— ರಾಷ್ಟ್ರೀಯ ಸಭೆಯವರಿಗೆ ಆಶ್ರಯ ಕೊಟ್ಟಿದ್ದು.

— ಆಗ್ರಾದೊಳಗಿನ ಡಿ| ಮೆಜಿಸ್ಟ್ರೇಟರು ಅಲ್ಲಿಯ ದೊಡ್ಡ ಜಮೀನದಾರರಾದ ಕುನ್ವರ ಪ್ರಬಲ ಪ್ರತಾಪಸಿಂಗರವರ ಮೇಲೆ ಒಂದು ನೋಟೀಸು ಹೊರಡಿಸಿ ನಿಮಗೆ ಕೊಟ್ಟ ಲೈಸನ್ಸನ್ನು ಯಾಕೆ ರದ್ದುಮಾಡಬಾರದೆಂಬುದರ ಕಾರಣ ಕೇಳಿದ್ದಾರೆ. ಕೊಂಗ್ರೆಸ ಕಾರ್ಯಕರ್ತರಿಗೆ ಆಶ್ರಯ ಕೊಟ್ಟರೆಂಬ ಆರೋಪ ಹೊರಿಸಲಾಗಿದೆ. ಪ್ರತಾಪಸಿಂಗರವರು, ಆರೋಪದ ಪ್ರಮಾಣವನ್ನು ಡಿ| ಮೆಜಿಸ್ಟ್ರೇಟರಿಗೆ ಕೇಳಿದ್ದಾರೆ. ಅದೇನೆಂದರೆ— ಮಹೇಂದ್ರ ಎಂಬವರು ನನ್ನ ಗೆಳೆಯರು, ಅವರ ಹೆಂಡತಿಗೆ ಕ್ಷಯರೋಗವಾಯಿತು. ಉಪಚಾರಕ್ಕಾಗಿ ನನ್ನಲ್ಲಿ ತಂದಿಟ್ಟಿದ್ದರು. ರೋಗಿಷ್ಟಳ ನೆವಕ್ಕಾಗಿ ಶ್ರೀ| ಮಹೇಂದ್ರರೂ ಅವರ ಗೆಳೆಯರೂ ನಮ್ಮಲ್ಲಿ ಬರಹೋಗುತ್ತಿದ್ದರು. ಮಹೇಂದ್ರ ವಂಶಿಕರು ಕೊಂಗ್ರೆಸ ಕಾರ್ಯಕರ್ತರೇನೋ ಹೌದು, ಆದರೆ, ಆ ಕಾರಣದಿಂದ ಅವರಿಗೆ ಸ್ನೇಹಭಾವದ ಆತಿಥ್ಯ ಮಾಡಲು ಪ್ರತಿಬಂಧವಾಗದು. ಇದು ಪ್ರಪಂಚ ಧರ್ಮವಿದೆ. ಇಷ್ಟರಿಂದಲೇ ಕೊಂಗ್ರೆಸ ಕಾರ್ಯಕರ್ತರಿಗೆ ನನ್ನ ಮನೆ ಆಶ್ರಯವಾಯಿತಾಗಿ ಆರೋಪ ಹೊರಿಸುವದು ತಪ್ಪು. ಕೊಂಗ್ರೆಸ ಕಾರ್ಯಕರ್ತರಂತೆ ರಾಜನಿಷ್ಠ ಸಭೆಯವರೂ ನನ್ನ ಗೆಳೆಯರಿದ್ದಾರೆ. ರಾಜಕೀಯ ಅಭಿಪ್ರಾಯದ ಮೂಲಕ ಸ್ನೇಹಭಾವದ ಆತಿಥ್ಯ ಮಾಡಲು ಭಂಗ ಬರದು. ನಾನೂ ಕಿಸಾನ ಸಭೆಗಳ ಅಧ್ಯಕ್ಷನಿದ್ದೆ. ಇವುಗಳಿಗೂ, ಕೊಂಗ್ರೆಸಿಗೂ ಏನೂ ಸಂಬಂಧವಿಲ್ಲ. ಒಕ್ಕಲಿಗರ ಸ್ಥಿತಿ ಸುಧಾರಣೆಗಾಗಿ ಜಮೀನದಾರರು ಪ್ರಯತ್ನಪಡುವದು ಕರ್ತವ್ಯವಿದೆ. ಹಾಗು ಈಗಿನ ಸ್ಥಿತಿಯಲ್ಲಿ ಅವಶ್ಯವೂ ಇದೆ. ಇದರ ಮೇಲಿಂದ ಪೋಲೀಸ ರಿಪೋರ್ಟು ಸತ್ಯಾಪಲಾಪವೆಂದು ಹೊಳೆಯುತ್ತದೆ.

— ಮೈಮನಸಿಂಗದಲ್ಲಿ ಅದ್ಭುತವಾದ ಬಿರುಗಾಳಿ ಬೀಸಿ ವಿಶೇಷ ಅನರ್ಥ. ಮೈಮನಸಿಂಗದ ಡಿಸ್ಟ್ರಿಕ್ಟ ಜೈಲಿನ ಪ್ರಾಕಾರ-ಬರೆಕುಗಳೆಲ್ಲ ಕಡಕೊಂಡುಬಿದ್ದು ನಷ್ಟ. ಮೇಲ್ಛಾವಣಿಗಳು ಹಾಳಪಟದಂತೆ ಹಾರಿಹೋದವು. ೫೦ ಮಂದಿ ಕೈದಿಗಳು ರವ ಶಿಕ್ಷೆ, ಇನ್ನೆಷ್ಟೋ ಮಂದಿ ಮಣ್ಣಿನಲ್ಲಿ ಹೂತುಬಿದ್ದಿರಬೇಕು, ಸುಮಾರು ೩೦೦-೪೦೦ ಮಂದಿಗಳಿಗೆ ಘಾಯವಾಗಿರಬೇಕು. ಇದೇ ಸಂಧಿಯಿಂದ ೬೦-೭೦ ಕೈದಿಗಳು ಪಲಾಯನ ಮಾಡಿದರು. ಸತ್ಯಾಗ್ರಹಿ ಕೈದಿಗಳು ತಮ್ಮ ಜೈಲ ಆವಾರನ್ನೆ ಬಿಟ್ಟುಹೋಗಲಿಲ್ಲ. ಈ ಜೈಲಿನಲ್ಲಿ ೧೨೦೦ ಮಂದಿ ಕೈದಿಗಳಿದ್ದರು, ಸರಕಾರಕ್ಕೆ ಜೈಲಿನ ಬರಗಾಲದಲ್ಲಿ ಇದೊಂದು ಅಧಿಕಮಾಸ. ನೆರೆ-ಹೊರೆಯ ಗ್ರಾಮಗಳಲ್ಲಿ ಸುಮಾರು ೩೦೦ ಜನರೂ, ೫೦೦ಕ್ಕೆ ಮಿಕ್ಕಿ ದನ-ಕರುಗಳೂ ಈ ಬಿರುಗಾಳಿಗೆ ಬಲಿಬಿದ್ದರಾಗಿ ವಾರ್ತೆ. ೧೦೦೦ ಮನೆಗಳು ನೆಲಸಮವಾಗಿರಬಹುದು. ದೈವೀ ಆಪತ್ತಿಗೆ ಯಾರದೇನುಪಾಯ?

— ಪೋಲೀಸರು ಹೊಡೆದ ಬಗ್ಗೆ ಮಂಗಳೂರಿನ ಪ್ರೊ| ರಾಮ ರಾಯರು ಫೌಜದಾರ-ಪೋಲೀಸರ ಮೇಲೆ ಕೊಟ್ಟ ಫಿರ್ಯಾದಿಯ ವಾರ್ತೆ ಈ ಹಿಂದೆ ಪ್ರಕಟವಾಗಿದೆ. ಪೋಲೀಸರು ಪ್ರೊ| ರಾಮರಾಯರ ಮೇಲೆ ಒಂದು ಫಿರ್ಯಾದು ಕೊಟ್ಟಿದ್ದಾರೆ. ಎರಡೂ ಫಿರ್ಯಾದುಗಳ ವಿಚಾರ ಬರುವ ಜೂನ ತಿಂಗಳಲ್ಲಿ.

— ರಾಜಮಹೇಂದ್ರಿಯೊಳಗಿನ ಸಮಾಚಾರ. ಡಾ| ಸುಬ್ರಹ್ಮಣ್ಯಂ ಎಂಬ ಪ್ರಸಿದ್ಧ ಕೊಂಗ್ರೆಸ ಕಾರ್ಯಕರ್ತರ ಮೇಲೆ ಪೋಲೀಸರದೊಂದು ಪ್ರಕರಣ. ಮೆಜಿಸ್ಟ್ರೇಟರು ಕೂಲಂಕುಷವಾಗಿ ಎಲ್ಲಿ ವಿಚಾರ ಮಾಡಿದರು. ಪೋಲೀಸರು ಹೊರಿಸಿದ ಎಲ್ಲ ಆರೋಪಗಳು ಬುಡಗೂಡಿ ಸುಳ್ಳು; ಬುದ್ಧಿಪೂರ್ವಕವಾಗಿ ಸುಳ್ಳು ಆರೋಪಗಳನ್ನು ಹೊರಿಸಿ ಈ ಖಟ್ಲೆ ನಡಿಸಿದರು, ಹೀಗ ಬರೆದು ಡಾ| ಸುಬ್ರಹ್ಮಣ್ಯರವರಿಗೆ ಬಿಡುಗಡೆ ಮಾಡಿದರು. ತೀರ್ಪಿನ ವಿಸ್ತಾರ ೧೫೫ ಪುಟ. ಹೀಗೆ ಡಾ| ಸುಬ್ರಹ್ಮಣ್ಯರವರು ನಿರಪರಾಧಿಯಾಗಿ ಕೋರ್ಟಿನ ಹೊರಬರುವಷ್ಟರಲ್ಲಿ, ಅವರ ಮೇಲೆ ಮತ್ತೊಂದು ವಾರಂಟು ತಯಾರು! ಪುನಃ ಅವರಿಗೆ ಸೆರೆ!!

— ನೇಪಾಳದೊಳಗೆ ಯಾರಿಗೂ ಗಲ್ಲಿಗೇರಿಸಬಾರದಾಗಿ ನೇಪಾಳದ ಅರಸರು ಅಪ್ಪಣೆ ಮಾಡಿದ್ದಾರೆ. ಆದರೆ, ಇದಕ್ಕೊಂದು ಅಪವಾದವಿದೆ. ಗೋವಧೆ ಮಾಡುವವರಿಗೆ ಫಾಶಿ ಶಿಕ್ಷೆಯಿದೆ.

— ಮುಂಬಯಿಯೊಳಗೆ ಶೇಟ ದಾಮೋದರ ಸುಲೇಮಾನ ಎಂಬ ಹಾಲಿನ ವರ್ತಕರಿದ್ದಾರೆ. ಇವರ ಕಡೆ ಬಹಳೇ ದನ-ಕರುಗಳಿವೆ. ದನ-ಕರುಗಳನ್ನು ಕಟುಕರಿಗೆ ಇವರು ಮಾರುವದಿಲ್ಲ. ಇದಲ್ಲದೆ ತಮ್ಮ ಕೈಯಿಂದ ಗೋಸೇವೆಯಾಗಬೇಕೆಂದು ಗೋವಿಕ್ರಯದ ಹಣದ ಕೆಲವಂಶವನ್ನು ಗುಜರಾಥಿ 'ಗೋಗ್ರಾಸ' ಪತ್ರಿಕೆಗೆ ಅರ್ಪಿಸುತ್ತಾರೆ.

— ನೆಲ್ಲೂರಿನ ಆಯುರ್ವೇದ ವೈದ್ಯರಾದ ಡಾ| ಹನುಮಂತರಾಯರು ಮಾರ್ಗದ ಮೇಲೆ “ಪರದೇಶಿ ಜವಳಿಯನ್ನು ಧರಿಸಬೇಡಿರಿ, ೪೦ ಸಾವಿರ ಜನರು ಜೈಲಿನಲ್ಲಿದ್ದಾರೆ ಬಹಿಷ್ಕಾರ” ಹೀಗೆ ಬರೆದರು. ಇದರಿಂದ ಬೇಕಾಯಿದೇಶೀರ ಸಭೆಗೆ ಉತ್ತೇಜನ ಕೊಟ್ಟಂತಾಯಿತೆಂದು ಅಭಿಪ್ರಾಯಪಟ್ಟು ಮೆಜಿಸ್ಟ್ರೇಟರು ಶಿಕ್ಷೆ ವಿಧಿಸಿದರು. ಸೆಶನ್ಸ ಕೋರ್ಟಿನಲ್ಲಿ ಅಪೀಲಾಯಿತು. ಕೊಂಗ್ರೆಸ ಕಾರ್ಯಕಾರಿಮಂಡಳವು ಬೇಕಾಯಿದೇಶೀರ ಎಂದು ಸಿದ್ಧವಾಗಲಿಲ್ಲ. ಕೊಂಗ್ರೆಸ ಕಾರ್ಯಕಾರಿ ಮಂಡಳವು ಬಹಿಷ್ಕಾರ ಠರಾವು ಮಂಜೂರ ಮಾಡಿತ್ತೆಂದು ಸಿದ್ಧವಾಗಲಿಲ್ಲ. ಹೀಗೆ ಸೆಶನ್ಸ ಜಡ್ಜರು ಅಭಿಪ್ರಾಯಪಟ್ಟು ಪುನಃ ಖಟ್ಲೆ ವಿಚಾರ ನಡೆಯತಕ್ಕದ್ದಾಗಿ ವಿಧಿಸಿದರು. ಇದರ ಮೇಲೆ ಮದ್ರಾಸ ಹೈಕೋರ್ಟಿಗೆ ಅರ್ಜಿಯಾಯಿತು. ಹೊಸ ಪುರಾವೆ ಕೊಳ್ಳಬಾರದಾಗಿ ನ್ಯಾಯಮೂರ್ತಿಗಳು ಅಪ್ಪಣೆ ಕೊಟ್ಟು ಇದ್ದ ಪುರಾವೆಯ ಮೇಲೆಯೇ ಪುನರ್ವಿಚಾರಣೆ ನಡೆಯತಕ್ಕದ್ದಾಗಿ ಪ್ರಕರಣವನ್ನು

ನೆಲ್ಲೂರ ಮಜಿಸ್ಟ್ರೇಟರ ಕಡೆ ಕಳಿಸಿದರು. ಕ್ರಿಮಿನಲ ಪ್ರೊಸೀಜರ ಕೋಡ ಕಲಂ ೫೪೦ನೇದಂತೆ ದೋಷಾರೋಪ ಹೊರಿಸುವ ಹಕ್ಕು ಹೈಕೋರ್ಟ ಹುಕುಮಿನಿಂದ ರದ್ದಾಗಲಿಲ್ಲವಾಗಿ ಮಜಿಸ್ಟ್ರೇಟರು ಅಭಿಪ್ರಾಯಪಟ್ಟು ಹೊಸ ಫಿರ್ಯಾದ ಕೊಂಡು ಬಿಲ್ಲ ನಡಿಸಿದರು. ಹಿಂದಿನ ಆರೋಪ ಬದಲಿಸಿ ಮಾರ್ಗದ ವೇಳೆ ಬರೆದ ವರ್ತಮಾನಪತ್ರದ ಕಾಪಿಯಂತೆ ಅಪವಾದವಾಗುತ್ತದಾಗಿ ಹೊಸ ಆರೋಪವನ್ನು ಡಾ| ಹನುಮಂತರಾಯರ ಮೇಲೆ ಹೊರಿಸಿ ಬಿಲ್ಲ ವಿಚಾರ ನಡವದೆ. ರಾಜಶಾಸನಗಳ ಕಾರಕೀರ್ದಿಯಲ್ಲಿ ಮಜಿಸ್ಟ್ರೇಟರು ಹೈಕೋರ್ಟಿಗಿಂತ ಮೇಲಾದರೆಂದು ವೇಶತುಂಬ ಓಕೆ

— ಮಹಾತ್ಮರು ಲಂಡನ್ನಿನಿಂದ ಹಿಂದಿರುಗಿ ಮುಂಬಯಿಯಲ್ಲಿ ಬಂದಿಳಿದಾಗ, ಇಳಿಯುವ ಗಾಬರಿಯಲ್ಲಿ ಅವರೊಂದು ಪೆಟ್ಟಿಗೆ ಹಡಗದೊಳಗೇ ಉಳಿದಿತ್ತು. ಅದರೊಳಗೆ ಪುಸ್ತಕ, ಅರಿವೆ-ಅಂಚಡಿಗಳಿದ್ದವು. ಹಡಗದವರು ಕೊಲಂಬೋಕ್ಕೆ ಹೋದಮೇಲೆ, ಮಾಲೀಕರಿಲ್ಲದ ಜಿಂದಿಗೆಯೆಂದು ಅದನ್ನು ಕಸ್ಟಮ್ ಖಾತೆಯವರಿಗೆ ಕೊಟ್ಟರು. ೩ ತಿಂಗಳತನಕ ಇಟ್ಟುಕೊಂಡು, ಆ ಮೇಲೆ ಲಿಲಾಂವು ಮಾಡುವವರಿದ್ದರು. ೩ ತಿಂಗಳ ಅವಧಿ ಮುಗಿಯುವಷ್ಟರಲ್ಲಿ ಇದು ವತ್ಸಾಕ್ಕರ ವಿಶ್ಯರಾದ ಶ್ರೀ| ಆಲುವಿಹಾರಿಯವರಿಗೆ ತಿಳಿಯಿತು. ಆಲುವಿಹಾರಿಯವರು ಗುಜರಾಥದವರು, ಸತ್ಯಾಗ್ರಹದಲ್ಲಿ ಶಿಕ್ಷೆಯನ್ನನುಭವಿಸಿ ಸಧ್ಯಕ್ಕೇ ಕೊಲಂಬೋಕ್ಕೆ ಹೋಗಿದ್ದರು. ಅವರು ಕಸ್ಟಮ್ ಫೀ ಕೊಟ್ಟು ಅದನ್ನು ಬಿಡಿಸಿ ತಂದಿರುತ್ತಾರೆ. ಪೆಟ್ಟಿಗೆಯ ಮೇಲೆ 'ಎಮ್. ಕೆ. ಜಿ.' ಎಂಬ ಅಕ್ಷರಗಳಿದ್ದವು!

— ಬಂಗಾಲ ಪ್ರಾಂತದ ಕೋಮಿಲ್ಲಾ-ನೌಖಾಲಿ ಜೈಲಿನವರದೊಂದು ಉಪಕಾರ. ಹೊಸ ತರಗತಿಯ ಸತ್ಯಾಗ್ರಹಿ ಕೈದಿಗಳಿಗಾಗಿ ಜನರು ವಂತಿಗೆ ಮಾಡಿ ಸೊಳ್ಳೆಗಳ ಉಪದ್ರವನಿವಾರಣಗಾಗಿ ಪರದೆಗಳನ್ನು ಮಾಡಿಕೊಟ್ಟಿದ್ದರು. ಅವನ್ನು ಜೈಲಿನವರು ಕೈದಿಗಳಿಗೆ ಒಪ್ಪಿಸಿದ್ದಾರೆ. ಇದೇ ಪ್ರಕಾರ ಕೈದಿಗಳ ಮೇಲೆ ಕರುಣೆಯಿರಬೇಕು

— ಬರ್ಮಾ ಆಯಿಲ್ ಕಂಪನಿಗೆ ಈ ಬಾರಿ ನಿರೀಕ್ಷ ಲಾಭ. ಶೇರುದಾರರಿಗೆ ಶೇಕಡಾ ೫೦ರಂತೆ ಲಾಭ ಹಂಚಿ, ಮೇಲೆ ೭ ಲಕ್ಷ ೬೦ ಸಾವಿರ ಹಣವನ್ನು ರಿಝರ್ವ ಫಂಡಿಗೆ ಜಮಾ ಮಾಡಿತು. ೫ ಲಕ್ಷ ೫೭ ಸಾವಿರ ಹಣವನ್ನು ಮುಂದಿನ ವರ್ಷ ಎಳೆಕೊಂಡಿತು. ವ್ಯಾಪಾರ ಚಿಮಣಿಎಣ್ಣೆಯದು, ಪೆಟ್ರೋಲಿನದು!!

— ಪಂಜಾಬ ಕಾಯಿದೆ ಕೌನ್ಸಿಲಿನಲ್ಲಿ ಒಳ್ಳೇ ಗೊಂದಲ! ಪಿಕೆಟಿಂಗ ಮಾಡಬಾರದೆಂದು ಹೊರಟ ರಾಜಶಾಸನದಂತೆ ಒಂದು ಚಿರಸ್ಥಾಯಿ ಕಾಯಿದೆಯನ್ನೇ ನಿರ್ಮಿಸಬೇಕೆಂಬ ಠರಾವು ನಡೆಯಿತು. ಆ ಕಾಯಿದೆಯ ವಿಚಾರಣಾ ಮಂಡಳದಲ್ಲಿ ಸಭಾಸದರ ಕಡೆಯಿಂದ ಖಾಲಿ ಕಾಗದದ ಮೇಲೆ ಸಹಿ ಪಡೆದು ಸರಕಾರಿ ಕಾಯಿದೆ ಪಂಡಿತರು ತಮ್ಮ ಇಚ್ಛೆಯಂತೆ ರಿಪೋರ್ಟ ತಯಾರಿಸಿದರು. ಇಂಥ ರಿಪೋರ್ಟ ಕಾಯಿದೆಗೆ ಸಮ್ಮತವಲ್ಲವಾಗಿ ಅಧ್ಯಕ್ಷರು ನುಡಿದು ರಿಪೋರ್ಟನ್ನು ವಿಚಾರಕ್ಕೆ ಕೊಳ್ಳಲೊಪ್ಪಲಿಲ್ಲ. ಕಪಟ ನಾಟಕವೆಲ್ಲ ನಿರರ್ಥಕವಾಯಿತು

— ಸಂಯುಕ್ತಪ್ರಾಂತಿಕ ಕಾಯಿದೆ ಕೌನ್ಸಿಲಿನ ಸಭಾಸದರಾದ ಶ್ರೀ| ವಾಜಪೇಯಿಯವರದೊಂದು ದೂರು. ಸರಕಾರಿ ಠರಾವಿನಂತೆ ಕಾಯಿದೆ ಕೌನ್ಸಿಲಿನ ಸಭಾಸದರೆಲ್ಲರೂ ಜೈಲುಗಳ ಮೇಲ್ವಿಚಾರಕರು. ಮಿರತ ಜೈಲಿನಲ್ಲಿ ಸತ್ಯಾಗ್ರಹಿ ಕೈದಿಗಳಿಗೆ ಸರಿಯಾಗಿ ನಡಿಸಿಕೊಳ್ಳುವದಿಲ್ಲವಾಗಿ ತಾವು ಪ್ರಾರ್ಥನಾಪತ್ರ ಕೊಡದೆ ಮಿರತ ಡಿಸ್ಟ್ರಿಕ್ಟ ಜೈಲನ್ನು ನೋಡಬಯಸಿದರು. ಆದರೆ ಜೈಲರರು ಒಳಸೇರ ಬಿಡಲಿಲ್ಲ. ಸುಪರಿಂಟೆಂಡೆಂಟರಿಗೆ ಕೇಳಿದರೆ ಅಪ್ಪಣೆಯಿಲ್ಲವಾಗಿ ಹೇಳುತ್ತಾರೆ. ಜೈಲಿನ ರೋಗಗಳು ಹಬ್ಬುವವಾಗಿ ಒಪ್ಪುತ್ತಾರೆ. ಜೈಲರರು ಸರಕಾರಿ ಠರಾವಿಗೆ ಲೆಕ್ಕಿಸುವದಿಲ್ಲ, ಸುಪರಿಂಟೆಂಡೆಂಟರಿಗೂ ಲೆಕ್ಕಿಸುವದಿಲ್ಲ. ರಾಜಶಾಸನ ಯುಗದೊಳಗಿನ ನೂತನ ದರಬಾರಿದು!

೧೯೩೨ನೇ ಇಸವಿ ೨ನೇ ಆರ್ಡಿನನ್ಸದ ಅನ್ವಯ ನಾನು ಪ್ರತಿದಿವಸ ಬೆಳಿಗ್ಗೆ ಮತ್ತು ಸಾಯಂಕಾಲ ಹೊನ್ನಾವರ ಪೋಲಿಸ ಕಚೇರಿಯಲ್ಲಿ ಹಾಜರಿ ಕೊಡತಕ್ಕದ್ದು ಎಂತ ಮಜ್ಕೂರ ನೋಟೀಸನ್ನು ನನ್ನ ಮೇಲೆ ಜ್ಯಾರಿ ಮಾಡಿದ್ದರು. ಸದರ ನೋಟಿಸದ ಶರ್ತುಗಳಂತೆ ನಾನು ನಡಿಯಲಿಲ್ಲವೆಂದು ನನ್ನಮೇಲೆ ಕೇಸ ಮಾಡಲಾಗಿತ್ತು. ನಾನು ಗಲ್ತಿಮಾಡಿದ ಬಗ್ಗೆ ಒಪ್ಪಿ ಮಾಫಿ ಬೇಡಿರುತ್ತೇನೆ

ಹೊನ್ನಾವರ, ೨೦—೫—೩೨

ಕೂಡ್ಲ ವಾಸುದೇವ ಪಾಂಡುರಂಗ ವ್ಯಾಸಬಾಗ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಜಾಣರಾಗಲು ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನಿತ್ಯ ಬಿನಾ ಆ ಕಡೆ ಲಕ್ಷಕೊಡಬೇಕು. ಕೂದಲುಗಳನ್ನು ದುರ್ಲಕ್ಷ ಮಾಡಿದರೆ, ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲಿನ' ಕೊಡಬೇಕು. ಶ್ರೇಷ್ಠವಾದ ಕೂದಲೆಣ್ಣೆ ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಒಮ್ಮೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರೆತು ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ತಿಕ್ಕಿದ ತೈಲವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

೪ ಔಂಸಿಗೆ	ರೂ.	೨—೦—೦
೨ ಸಿಗೆ	,,	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಹಿಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು. ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದೆಂದು ಬಲ್ಲಿರಾ?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಧಾರಣ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಹೋಗುವದು. ಒಟ್ಟೋ-ದಿಲ್ ಬಹಾರದಿಂದ ಶುದ್ಧವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.,
POST BOX 2082, BOMBAY No. 2.

ಜೀವನ ಸಾಹಿತ್ಯ

೮. ಬಲಿದಾನದ ಶಾಸ್ತ್ರ.

ಲೇ— ಶ್ರೀ|| ಹನುಮಂತರಾವ ಮಾಂಜರೇಕರ.

[illegible] ಸೇನೆಯು ಯಾವಾಗ ಬೊ ಸಾಯಲು ಸಿದ್ಧರಾಗಿರಬೇಕು. "ನಾವು ಸಾಯಲಿಕ್ಕೆ ಸಿದ್ಧರಿದ್ದೇವೆ ಆದರೆ ಸಾಯುವ ಅವಶ್ಯಕತೆ [illegible] ನಮಗೆ [illegible]ಗಿಲ್ಲವು ನಾವು ಮುದಿದು [illegible] ನಮ್ಮ [illegible] ಹಿಗದಂತೆ ನಾವೇಕೆ ಮಾಡಬೇಕು" ಎಂದು [illegible] ಅನ್ನಲಿಕ್ಕೆ ಪ್ರಾರಂಭಿಸುವರು, ಅದರ ಕ್ಷಾತ್ರಕರ್ತವ್ಯವು ಆಳದ ಸಂದೇ[illegible]ಯಬೇಕು. [illegible]ವೇಗ, ಧಾರೆ ಎರೆದವರು ನಮ್ಮಿಂದ ಎತ್ತಿ ಕೆಲಸ [illegible] ಎಂಬ ವಿಚಾರ [illegible] ತೋರಿಸಬೇಕು. [illegible] ಗಂಭೀರ ಪರಿಸ್ಥಿತಿಯಲ್ಲಿ [illegible] ಎಂಬುದರ ಕಡೆ ಅವರ ಲಕ್ಷ್ಯವಿರಬೇಕು. [illegible]ದೊಂದು ಕೆಲಸ ಮಾಡಬೇಕಾದರೆ, ಇಲ್ಲವೆ ತನ್ನ ಶಕ್ತಿಯನ್ನು ತೆಳೆಯ [illegible], ತಮ್ಮಿಂದ್ಧ[illegible] ಮಾಡುವ ವರೆಗ ಓಡಲಿಕ್ಕ್ಕುದು ಎಂಬುದೇ ಲಕ್ಷ್ಯ [illegible] ವದು [illegible]ದಿತ್ತು. ಅವರೆ, ಬೆಕ್ಕುಟ್ಟಿನ ಶಕ್ತಿಯು [illegible] ಯೌವನದ [illegible] ವನ್ನು [illegible] ನಲ್ಲಿ, [illegible] ಪ್ರೇಮಪಾತ್ರವನ್ನು [illegible] ವಲ್ಲ, [illegible] ಹೆಗ್ಗಳಿಕೆಯನ್ನು [illegible] ದಲ್ಲಿ [illegible] ಕ್ಕೊಳಗಿಂದ [illegible] ಬೇಕಾದ [illegible] ಶಕ್ತಿಯ [illegible] ತೊಡಕೊಳ್ಳ[illegible] ಏನೂ ಕೆಲಸವಾಗಲಿಕ್ಕಿಲ್ಲ. ಇಂಥ ಪ್ರಸಂಗದಲ್ಲಿ ಈಶ್ವರನ ಮೇಲೆ ಶ್ರದ್ಧೆಯಿಟ್ಟು, ಪೌರುಷದ [illegible]ಯನ್ನು ಹಿಡಿಯದೆ ಪ್ರಯತ್ನಪಡಬೇಕು. 'ಪ್ರಾಣ ಹೋದರೂ ಅಡ್ಡಿಯಿಲ್ಲ, ಈ ಕಾರ್ಯದಲ್ಲಿ ನಾನು ಮಡಿಯಬೇಕು, ಈಶ್ವರೇಚ್ಛೆಯಾದರೆ ಇದರೊಳಗಿಂದ ನನ್ನನ್ನು ಅವರು ಪಾರುಗಾಣಿಸುವರು' ಎಂಬ ವೃತ್ತಿಯನ್ನು ಮನುಷ್ಯನು ಅವಲಂಬಿಸಬೇಕು. ಪ್ರತಿಯೊಬ್ಬ ಸೈನಿಕನು, ನಿಜವಾದ ವೀರನು ಈ ನಿಶ್ಚಯದಿಂದಲೇ ರಣಭೂಮಿಗೆ ಓಡುತ್ತಾನೆ. ಸೈನ್ಯವನ್ನು [illegible]ವ ಹೊತ್ತಿಗ— ತಾನು ಇಂದು ಶೈಲೊಂಡ ದೇಹದ [illegible] ಮೆಯನ್ನು ತನ್ನ ಜೀವದಿಂದಲೂ ಮರಣದಿಂದ [illegible] ನೆಸುವನೆಂದು— ಆತ ಮಾಡುತ್ತಾನೆ.

[illegible] ಸಾರ ಮನುಷ್ಯನ ಜಗಯಾದ ಮಾನ್ಯನು [illegible]ಯಲ್ಲಿ ಒಂದು ಹೇಳುವದೇನಂದರ—

[illegible] ಹುಟ್ಟಿ ಒಡೆದಿರುವದೇನ? [illegible] ಪ್ರವರಿಂದ [illegible] ನಿನ್ನ [illegible] ದೇಹವು ವ್ಯರ್ಥವಾಗಿ [illegible] ಸೋಲ[illegible]? ಈ [illegible] ಬದುಕಿರುವುದೇ ಶ್ರೇಯಸ್ಕರವ [illegible] ಮಾಡಿ ಬದುಕಿರು ಬಹುಕಿತ್ತಿರ ಮಸ್ತಿ [illegible] "ದೀರ-ವೀರನು ಮಾರನಿಗೆ ಒಂದೇ ಉತ್ತರವನ್ನು ಕೊಡಬಲ್ಲನು— ಹೊತ್ತು ಬಂದಾಗ [illegible] ಮಾಡದೆ ಹೋದರ ನೂರು ವರುಷ ಬಾಳಿದರೇನು? ನಿನ್ನಿಂದ ಯಾವ [illegible]ವದು? ಕ್ಷತ್ರಿಯರಾದ ನಾವು ಆತ್ಮಬಲಿದಾನದ ಶಿಕ್ಷಣ [illegible] ಹೊಂದುವದರಲ್ಲಿ [illegible] ಸಾವಿಗೂ [illegible] ಬದುಕಿರುವ [illegible] ನಾಶಿ, ಮೂಢ [illegible] ಪ್ರಸಂಗವು [illegible] ಹೋದ [illegible] ಪ್ರಸಂಗ [illegible] ಇಲ್ಲ [illegible] ಒಪ್ಪಾಟ [illegible] ಪ್ರಸಂಗ ಬಂದರ? ಬಂದ ಪ್ರಸಂಗ [illegible] ಬರಲಿಕ್ಕಿರುವ ಪ್ರಸಂಗಕ್ಕಾಗಿ [illegible] ಕಾಯಲಿ? ಅದರ ಚಿಂತೆ ಈಶ್ವರನಿಗೆ."

ನಿಜವಾದ ವೀರನು ತನ್ನ ಕಾರ್ಯದ [illegible] ಜಗತ್ತಿನ ತ್ಯಾಗದಲ್ಲಿ ಮಹಾತ್ಮರು ಸೇವೆಯನ್ನು [illegible] ತಮ್ಮ ತ್ಯಾಗದ [illegible] ಹುಡುಕಿರಲಿಲ್ಲ. ಯಾವ ಸ್ವರಾಜ್ಯಕ್ಕಾಗಿ ಅವರು ಅಪಾರ ಬಲಿದಾನವನ್ನು ಮಾಡಿದರೋ, ಆ ಸ್ವರಾಜ್ಯದ ಆದಷ್ಟು ಬೇಗನೆ [illegible] ಪ್ರಗತವಾಗುವದು ಎಂಬುದರ [illegible]ವನ್ನು [illegible] ಮಾಡಬೇಕು [illegible] ಆತ್ಮಬಲಿದಾನವನ್ನು [illegible] ಅವರು ಅಷ್ಟಕ್ಕೆ [illegible] ಚಿತ್ತ [illegible] "[illegible]ತ್ರಸ್ಥ [illegible] ಸ್ವರಾಜ್ಯಕ್ಕಾಗಿ [illegible] ನನ್ನ [illegible] ಕಡೆಗೆ [illegible] ಇದ್ದಿಲ್ಲ. ಅವರ ಸರ್ವಸ್ವವನ್ನು [illegible] ನಾನು [illegible] ಅದು [illegible] ಸ್ವತಂತ್ರ [illegible] ದಂಡಿಯ [illegible] ವಿಶ್ವ [illegible] ಕೊಡುವದನ್ನು ನಾನು ನೋಡಿದ್ದೇನೆ [illegible] ಸ್ವತಂತ್ರವಾದ [illegible] ವನ್ನು [illegible] ದೇಶದ [illegible] ಮನುಷ್ಯನು [illegible] ಸ್ವತಂತ್ರತೆಯ [illegible] ಬಲಿಯನ್ನು [illegible] ಕೊಡುವದು [illegible] ಪ್ರಸ [illegible] ದಿವ್ಯವಾದುದು ಪ್ರಸನ್ನವಾದ [illegible] ಎನು ವಿಷಲಿ, ಎಂಬುದರ ವಿಚಾರವನ್ನು [illegible]ಮಾಡುವದಿಲ್ಲ [illegible] ಕರಗುವದಿಲ್ಲ [illegible] ಪ್ರಸನ್ನ [illegible] ಇರುವನಕ [illegible] ವಜ್ರದ [illegible] ನಿರ್ಮತೆಯ [illegible] ಅವನ್ನು [illegible] ಬಲಿದಾನದ ಸೂಸೆಯನ್ನು [illegible] ಯಾರು ಎದ್ದರು ಎಷ್ಟು ಮಂದಿ ಎದ್ದರು, ಇದರ ವಿಚಾರವನ್ನು ಅವಳು ಮಾಡುವದಿಲ್ಲ. ಅವಳು ತನ್ನ ತಂಗಿಯಾದ [illegible]ದೇವಿಯನ್ನು ಕುರಿತು ಹೇಳುವದೇನಂದರೆ— 'ಬಿದ್ದಿರುವವರ ಶಿಕ್ಷವನ್ನು [illegible] ಇದು ಅದು ನಿನ್ನ ಕೆಲಸ. ಬಲಿದಾನದಿಂದ [illegible] ನಾನು [illegible] ನಿನ್ನ [illegible] ಇರವವು."

[illegible] ವೀರರು ಆ ಮಾನಿನಿಯ [illegible]ವವನ್ನು [illegible] ಒಳ್ಳೆ ಭಕ್ತಿಯಲ್ಲಿ [illegible] ಆ ಮಾನಿನಿಗೆ ಅದೂ [illegible] ಸ್ವತಂತ್ರ್ಯ [illegible] ಗಾಂಧೀಜಿ [illegible] ಇಲ್ಲ [illegible] ಸನ್ನದ್ಧವಿಲ್ಲ ಅವ [illegible] ವದೇನಂದರೆ

[illegible]ಂದಿಯ [illegible] ತನ್ನ ಸರ್ವಸ್ವವನ್ನು [illegible] ಅವನನ್ನು ಕುರಿತು ಮಮತ್ವವನ್ನು ಹಿಡಿಯುವವರು [illegible]? [illegible] ಸಿನ ಗೆ [illegible] ಅವನಂತಯೇ [illegible] ಸಾನ್ನಿಧ್ಯದಲ್ಲಿ ಒಳ್ಳೆ, ನನಗ [illegible] ಒಂದು [illegible].'

[illegible] ಕನ್ನಡದಲ್ಲ ತರ್ಜುಮೆಯಾಗಿ ಹೊಸ [illegible] ಗಿರುವ [illegible] ದ್ಧ [illegible]

[illegible]ಆಫ್ ಟೆಲಿಂಗ್"

ಪುಸ್ತಕವು, ಹುಡುಗರು, ಹೆಂಗಸರು ಮತ್ತು ಗಂಡಸರ ಉಡುಪುಗಳನ್ನು [illegible] ಕತ್ತರಿಸುವದಲ್ಲದೆ, ಎಲ್ಲಾ ತರದ [illegible] ರಚನೆ ಮತ್ತು ಅವನ್ನು ಹೊಲಿಯುವ ರೀತಿ ಸಹ ಒಳಗೊಂಡಿದೆ. ಬೆಲೆ [illegible] ರೂಪಾಯಿ ಮಾತ್ರ [illegible]

ರಾವ್ಸ್ ಟೇಲರಿಂಗ್ ಕಾಲೇಜ್,

ನಾಯಿಬವನ ೧೯೩ ಪ್ರಿನ್ಸೆಸ್ ಸ್ಟ್ರೀಟ್

ಮುಂಬಯಿ ೨

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ 1908.

ಈ ಕಂಪನಿಯು ಪೂರ್ಣ [illegible] ವರ್ಷದ [illegible] ಬರ [illegible] ಸರ್ಕಾರಿ ಪ್ರಾ [illegible] ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ [illegible] ರಿಟಿಗಳಲ್ಲಿಯೂ [illegible]

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು [illegible] ಲಾಭಕರವಾಗಿದೆ

ಸವಿಸ್ತರ ಮಾಹಿತಿ [illegible] ಕಡೆಗೆ [illegible] ಪತ್ರದ್ವಾರದಿಂದ [illegible] ವಿಳಾಸಕ್ಕೆ ಬರೆದಲ್ಲಿ [illegible]

Kumta Agents—
D K NAYAK Bros
Honavar Agent
R V PARBHU Esq

K. Padmanabha Rao & Sons,
BELGAUM
Chief Agents for
Karnatak Districts & S M State

ಈಗಿನ ಪ್ರಪಂಚ.

ವತನದಾರರು ಕೊಂಗ್ರೆಸಿಗೆ ಸೇರಲಾಗದು

ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಸರ್ ಜಾನ್ ಬ್ಯೂಮಂಟ ಹಾಗು ಬ್ರೂಮಫೀಲ್ಡರವರು ಇತ್ತೀಚೆ ಒಂದು ತೀರ್ಪಿನಲ್ಲಿ ಬ್ರಿಟಿಶ ಸರಕಾರದ ದ್ರೋಹವೆಂದರೇನು? ಅದು ಹೇಗೆ ಉಂಟಾಗುತ್ತದೆ? ವತನದಾರರು ಹ್ಯಾಗೆ ನಡೆದುಕೊಳ್ಳಬೇಕು? ಎಂಬ ವಿವರವನ್ನು ತಿಳಿಸಿ ಹೇಳಲ್ಪಟ್ಟಿದೆ. ಧಾರವಾಡ ಜಿಲ್ಲೆಯ ಹಾನಗಲ್ಲ ತಾಲೂಕಿನ ಕಲ್ಲಾಪುರ ಗ್ರಾಮದಲ್ಲಿ ರಾ| ನರಸಿಂಗರಾವ ಶ್ರೀನಿವಾಸರಾವ ದೇಸಾಯಿ ಎಂಬ ವಂಶಪರಂಪರಾಗತ ದೇಸಾಯಿಯಿದ್ದರು. ಇವರ ಮನೆತನದವರಿಗೆ ವಿಜಯನಗರದ ಅರಸರು ವತನು ಕೊಟ್ಟಿದ್ದರು. [illegible] ಇಸ್ವಿಯಲ್ಲಿ ಬ್ರಿಟಿಶ ಸರಕಾರವು ತಮ್ಮದೊಂದು ಹೊಸ ಸನದು ಕೊಟ್ಟಿತು. "ವಂಶಾಯಿ ವತನಕ್ಕೆ ಒಪ್ಪಿದ ರಾಜಸೇವೆ ಮಾಡುವದು ಬೇಡ, ವಸೂಲಿ ರಕಮನ್ನು [illegible] ಸರಕಾರಗಿಂದ ವರ್ಷಾಸನ ಪಡೆಯಿರಿ, ನೀವು ನಡಿಸುವ ಆದರತೆಯನ್ನಲ್ಲ ಬ್ರಿಟಿಶ ಸರಕಾರವು ಬಿಡಿಸುವದು. ನೀವು, ನಿಮ್ಮ ಸಂತತಿಯವರೂ ಬ್ರಿಟಿಶ ಸರಕಾರದ ನಂಬಿಗಸ್ತ ಪ್ರಜೆಗಳಾಗಿ ಉಳಿದರಾಯಿತು" ಹೀಗೆ ಸನದಿನಲ್ಲಿ ಬರೆದಿತ್ತು. ರಾ| ನರಸಿಂಗರಾಯರು [illegible] ಇಸ್ವಿಯಲ್ಲಿ ನಾಗಪುರ ರಾಷ್ಟ್ರೀಯ ಸಭೆಯ [illegible] ಹಾನಗಲ್ಲ ತಾಲೂಕ ಕೊಂಗ್ರೆಸ ಕಮೀಟಿಯ ಅಧ್ಯಕ್ಷರಾದರು. ಇದರಿಂದ ಬ್ರಿಟಿಶ ಸರಕಾರದ [illegible] ಕಲೆಕ್ಟರರು [illegible] ವತನವನ್ನು ಜಪ್ತ ಮಾಡಿದರು. ರಾ| ನರಸಿಂಗರಾಯರು ಧಾರವಾಡದ ಡಿ. ಕೋರ್ಟಿನಲ್ಲಿ ಕಲೆಕ್ಟರರ ಹುಕುಮನ್ನು ರದ್ದುಪಡಿಸಬೇಕೆಂದು ಹೂಡಿದ ದಾವೆಯನ್ನು ಡಿ| ಜಡ್ಜರು [illegible] ಅವರು ಆ ನಿರ್ಣಯದ ಮೇಲೆ ಮುಂಬಯಿ ಹೈಕೋರ್ಟಿನಲ್ಲಿ [illegible] ಈ ವ್ಯಾಜ್ಯಕ್ಕೆ [illegible] ನ್ಯಾಯಮೂರ್ತಿ ಬ್ಯೂಮಂಟ [illegible] ತೀರ್ಪಿನಲ್ಲಿ ಬರೆಯುವದೇನೆಂದರೆ— ರಾಷ್ಟ್ರೀಯ ಸಭೆಯ ಕಾರ್ಯಕ್ರಮವನ್ನು ಪ್ರತಿಪಾದಿಸಿ ವಾದಿಯು ಬ್ರಿಟಿಶ ಸರಕಾರದ ದ್ರೋಹ ಬಗೆದನೆಂದು ಡಿ. ಜಡ್ಜರು [illegible] ಇಸ್ವಿಯ [illegible] ರಾಜರ [illegible] ಹರತಾಳವನ್ನು ಪುರಸ್ಕರಿಸಿದ್ದರಿಂದಲೂ ಬ್ರಿಟಿಶ ಸರಕಾರದ ದ್ರೋಹ ಬಗೆದಂತಾಯಿತೆಂದು ಡಿ. ಜಡ್ಜರ ಇನ್ನೊಂದು ಅಭಿಪ್ರಾಯ. ಯುವರಾಜರಿಗೆ ಸತ್ಕಾರ ಮಾಡದ್ದರಿಂದ ಬ್ರಿಟಿಶ ಸರಕಾರದ ದ್ರೋಹವಾಯಿತೆಂದು ತರ್ಮಾನಿಸುವದಿಲ್ಲವಾಗಿ ನ್ಯಾ| ಮೂ| ಬ್ಯೂಮಂಟರವರ ಅಭಿಪ್ರಾಯವಿದೆ. ಈ ಅಭಿಪ್ರಾಯವು ಇದೇ ಹೈಕೋರ್ಟಿನ [illegible] ಇನ್ನೊಂದು [illegible] ವಿಸಂಗತವಾಗುತ್ತದೆ. [illegible] ಈ ವಿಷಯ ಬಗ್ಗೆ ಚರ್ಚೆ ಮಾಡುವದು ಅವಶ್ಯ ಬೀಳಲಿಲ್ಲವಾಗಿ ನ್ಯಾ| ಮೂ|ಗಳು ಅಭಿಪ್ರಾಯಪಡುತ್ತಾರೆ. ಕಾರಣವೇನೆಂದರೆ ವಾದಿಯ ದಾವೆ [illegible] ಪ್ರಶ್ನೆಯ ಮೇಲೆಯೇ ರದ್ದಾಗುತ್ತದೆ. [illegible] ಇಸ್ವಿಯಲ್ಲಿ ನಾಗಪುರದಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನವಾಯಿತು. ಅದಕ್ಕೆ ನರಸಿಂಗರಾಯರು ಹೋಗಿದ್ದರು. [illegible] ಸಭೆಯ ಧ್ಯೇಯ [illegible] ವಿಧಾಯಕ ಕಾರ್ಯಕ್ರಮದಲ್ಲಿ ಒದಗಿತ, ಅಹಿಂಸಾತ್ಮಕ [illegible] ಅಸಹಕಾರಿತೆಯ ಕಾರ್ಯಕ್ರಮವು ಸ್ವೀಕೃತವಾಯಿತು. ಜಿಲ್ಹಾ-ತಾಲೂಕ ಕೊಂಗ್ರೆಸ ಕಮೀಟಿಗಳು ಕೊಂಗ್ರೆಸ ಸಂಸ್ಥೆಯ ಘಟಕಗಳಾದವು. ರಾ| ನರಸಿಂಗರಾಯರು ಈ ಧ್ಯೇಯಕ್ಕೆ ಒಪ್ಪಿ ತಾಲೂಕ ಕೊಂಗ್ರೆಸ ಕಮೀಟಿಯಲ್ಲಿ ಸೇರಿದರು. ನಾಗಪುರದ ರಾಷ್ಟ್ರೀಯ ಸಭೆಯ ಧ್ಯೇಯವೇನೆಂದರೆ — ಹಿಂದುಸ್ಥಾನದ ಜನರು ಯೋಗ್ಯ ಮತ್ತು ಶಾಂತ ಉಪಾಯಗಳಿಂದ ಸ್ವರಾಜ್ಯ ಸಾಧಿಸತಕ್ಕದು. ಯೋಗ್ಯ ಮತ್ತು ಶಾಂತ ಉಪಾಯಗಳೆಂದರೆ, ಶಾಲೆಗಳ ಬಹಿಷ್ಕಾರ, [illegible] ಕೋರ್ಟುಗಳ ಬಹಿಷ್ಕಾರ, ಕೊಂಗ್ರೆಸ ಕಮೀಟಿಗಳ ಸಂಘಟನೆ, ಆರ್ಥಿಕ ರೀತಿಯಿಂದ ಹಿಂದುಸ್ಥಾನವನ್ನು ಸ್ವತಂತ್ರ ಹಾಗು ಸ್ವಾಯತ್ತವಾಗಿ ಮಾಡುವದು, ಇತ್ಯಾದಿ. ಅಂದರೆ, ಸರಕಾರದ ಅಧಿಕಾರಿತೆಯನ್ನು ಅಹಿಂಸೆಯಿಂದ ಅಲಕ್ಷ್ಯಗೊಳಿಸುವದು. ಇಂಥ ಸಂಸ್ಥೆಗೆ ಸೇರುವದರಿಂದ ಬ್ರಿಟಿಶ ಸರಕಾರದ ದ್ರೋಹ ಆಯಿತೋ, ಇಲ್ಲವೋ? ಎಂಬುದೇ ಪ್ರಶ್ನೆ. ಸರಕಾರಿ ಧೋರಣವನ್ನು ಸನದಿನ ಮೂಲಕ [illegible] ಯಿಂದ ಬೇಕಾದ ಹಾಗೆ ನಿಷೇಧಿಸುವ ಅಧಿಕಾರವು ಪ್ರಜೆಗಳಿಗಿದೆ. ಅದನ್ನು ಬದಲಿಸುವದಕ್ಕಾಗಿ ಸರಕಾರದ ಮನವೊಲಿಸಲು [illegible] ಪ್ರಯತ್ನ ಮಾಡಬಹುದು. ಆದರೆ ಇದೇ ಸರಕಾರವನ್ನು [illegible] ಪ್ರತಿಯಾಗಿ ಅಹಿಂಸೆಯು ಅಥವಾ ಹಿಂಸೆಯ ಉಪಾಯಗಳಿಂದ ರಾಷ್ಟ್ರೀಯ ಸರಕಾರವನ್ನು ಏರ್ಪಡಿಸುವದು ಬ್ರಿಟಿಶ ಸರಕಾರದ ಮೇಲಿನ ಭಕ್ತಿಯ ದ್ಯೋತಕವಲ್ಲ, ಅಂದರೆ ಬ್ರಿಟಿಶ ಸರಕಾರದ ಪ್ರಜೆಯೆಂದು ಮಾಲಿಕರ ದೃಷ್ಟಿಯಲ್ಲಿ ಸಂಶಯಾಸ್ಪದ. ರಾ| ನರಸಿಂಗರಾಯರ ಪರಂಪರೆಯಿಂದ ನಡೆದುಬಂದಿರುವ [illegible] ಕೆಲಸ ಮಾಡಿದ್ದಾರೆ. ತಾಲೂಕ [illegible] ಸರಕಾರಿ ನೌಕರಿಯಲ್ಲಿದ್ದರು. [illegible] ಜಿಲ್ಹಾ ಬೋರ್ಡಿನ ಸಭಾಸದರಿದ್ದರು. [illegible] ಯುದ್ಧ ಕಾಲಕ್ಕೆ ಸ್ವಯಂಸ್ಫೂರ್ತಿಯಿಂದ ಸಹಾಯ ಮಾಡಿದ್ದರು. [illegible] ಲೆಜಿಸ್ಲೆಟಿವ್ ಕೌನ್ಸಿಲು ಬಹಿಷ್ಕಾರದಲ್ಲಿ ತಮ್ಮ ಒಪ್ಪಿಗೆಯಿಲ್ಲವಾಗಿ ರಾ| ನರಸಿಂಗರಾಯರು ಸಾಕ್ಷ ಕೊಟ್ಟಿದ್ದಾರೆ. ಹಾಗಿದ್ದಾಗ್ಯೂ, [illegible] ಸಭೆಯ ಕಾರ್ಯಕರ್ತರಾದ್ದರಿಂದ ಅವರು [illegible] ಬಂಗ [illegible] 'ಯೋಗ್ಯ' ಎಂಬ ಸ್ವರಾಜ್ಯವಾದದ [illegible] ಯದ ಅರ್ಥವೇನೆಂದರೆ — ಸರಕಾರವು ನಿಷ್ಠಾವಂತ ಪ್ರಜೆಗಳ [illegible] ಕೆಡಿಸಿದ್ದರ [illegible] ಎದುರಾಳಿಯಾಗಿ ಹೋರಾಡ [illegible] ಮ ಪ್ರಕರಣಕ್ಕೆ ನಿರ್ಬಂಧವಿಲ್ಲ. ತಪ್ಪು ತಿಂಗಳಾಗಿ [illegible] ಕೋರ್ಟಿನ ಕೆಲಸ ನಡೆಯುತ್ತ [illegible] ಸನ್ನದಿಯ ಹುಕುಮನ್ನು ಮುರಿಯುವ ಉದ್ದೇಶ ಸಭೆಗಿತ್ತು. ಆದ್ದರಿಂದ ರಾ| ನರಸಿಂಗರಾಯರು ವ್ಯಕ್ತವಾದ ಕರಾರಿನ ಅಂದಿಯನ್ನು ಕೈಕೊಂಡು ಸರಕಾರದ ಆದರತೆಯನ್ನು ಮುರಿಯಬೇಕೆಂದು ಆ ಸಭೆಯಲ್ಲಿ ಬರುವ [illegible] ಸಹ ಆಗಿದ್ದ ಹಿಂದೀ ಜನರಲ್ಲಿಯೂ

---

* ನ್ಯಾಯಮೂರ್ತಿಗಳು ಲೋಕಮಾನ್ಯರ ಬರಹವನ್ನು ಓದಿದ್ದಾರೆ. ಸರಹದ್ದಿನವರ ಮಸದು [illegible] ಓರದಾಗಿ 'ವೃತ್ತಿ'ಕ್ಕೆ ನಿರ್ಬಂಧನೆಯಿರುವದರಿಂದ ಲೋಕಪೂಜ್ಯರು ಹೀಗೆ ಬರೆದರೆ

ಇದ್ದವು. ಯುರೋಪಿಯನ್ನರಿಗೆ ಹೊರತಾಗಿ ಬೇರೆ [illegible] ಬ್ರಿಟಿಶ ಸರಕಾರದ ನಿಷ್ಠೆ ಕಡಿಮೆಯಾಗಿಯೇ ಆ ಸಭೆಯಲ್ಲಿ [illegible] ಆಯಿತು. ಇದ ಬ್ರಿಟಿಶ ಸರಕಾರದ [illegible] ಅವರು ಸನದಿನವರ ಕರ್ತವ್ಯವಲ್ಲ, [illegible] ವಾದಿ ಕಡೆ ವಕೀಲರಿಗೆ ಸಹ ತೋರ [illegible] ಈಗಿನ ರಾಜ್ಯದಲ್ಲಿ ವಿಶೇಷ ಹಕ್ಕು [illegible] ಸರಕಾರಕ್ಕೆ ಈ ಪ್ರಶ್ನೆ [illegible] ಇತ್ಯಾದಿ [illegible] ನ್ಯಾಯಮೂರ್ತಿಗಳು ದಾವೆಯನ್ನು [illegible] ನಾಗಪುರದ ರಾಷ್ಟ್ರೀಯ ಸಭೆಯ ಧ್ಯೇಯ [illegible] ರಾಷ್ಟ್ರೀಯ ಸಭೆಯ ಧ್ಯೇಯವು [illegible] ಬ್ರಿಟಿಶ ಸರಕಾರದ [illegible] ಪ್ರಜೆಗಳಲ್ಲಿ ಜಾಗ್ರತೆ ಪಡೆಯಬೇಕು [illegible] ಹಕ್ಕು ಸನದು ಪಡೆದ ಪ್ರಜೆಗಳು [illegible] ಮುಂದಿನ ವಿಚಾರಮಾಡಿ ನಡೆಕೊಳ್ಳಬೇಕು.

⁂

ಹಿಂದು-ಮುಸಲ್ಮಾನರ ಜೋಂಬಿ ಸ್ವಾಭಾವಿಕ

ಕವಿಶ್ರೇಷ್ಠ ರವೀಂದ್ರನಾಥ ಠಾಕೂರರವರು ಇತ್ತೀಚೆ ಮೊದಲನೆ ಮುಸಲ್ಮಾನ ದೇಶಗಳ [illegible] ವಿಮಾನ ಮಾರ್ಗವಾಗಿ ಹೋಗಿ [illegible] ಕರಾಚಿಗೆ ಬಂದು, ಅಲ್ಲಿಂದ ವಿಮಾನದಿಂದಲೇ ಕಲಕತ್ತೆಗೆ ತೆರಳಿದರು. ಕವಿಶ್ರೇಷ್ಠರ ಕಡೆ ಪತ್ರಿಕಾ ಪ್ರತಿನಿಧಿಗಳು [illegible] ಬೇಡಲು, ಮುಂಬಯಿಯ ಈಗಿನ ಹಿಂದು-ಮುಸಲ್ಮಾನರ ದೊಂಬಿಯ ವಿಷಯವನ್ನು ಕುರಿತು ಬಹು ವ್ಯಸನಭರಿತರಾಗಿ ಅವರು ನುಡಿದದ್ದೇನೆಂದರೆ — ' ಈ [illegible] ದಲ್ಲಿ ಹಿಂದು-ಮುಸಲ್ಮಾನರೊಳಗೆ ಕಂಡು ಬರುವಷ್ಟು [illegible] ನನಗೆ ಮುಸಲ್ಮಾನ [illegible] ಕಂಡು ಬರಲಿಲ್ಲ. ಇದು [illegible] ನನಗೆ [illegible] ಇಲ್ಲಿಯ [illegible] ಆ ಜನ [illegible] ನನಗೆ [illegible] ಇವರು [illegible] ತಮ್ಮ [illegible] ಕಲಹ [illegible] ತಿಳಿಯುವ [illegible] ವನ್ನು ಉಪಯೋಗಿಸುವದಿಲ್ಲ. ನಮ್ಮಂತೆಯೇ ಅವರಿಗೂ ವ್ಯಸನವಾಗಿದೆ. ಮುಸಲ್ಮಾನ ಪ್ರಜೆಗಳೂ [illegible] ಗಳು ಸಂಪ್ರದಾಯದಿಂದ ಸ್ವಾಗತ ಮಾಡಿದರು. ನಿಮ್ಮ ಮೇಲೆ ನಮಗೆ ಭಕ್ತಿ ಇದೆ, ಎಂದು [illegible] ಇದು ಹೇಳಿದರು. ಇಸ್ಲಾಮು ಧರ್ಮವೆಂದ ನಿಷೇಧ [illegible] ಹೇಳುವದಿಲ್ಲ. ಮುಸಲ್ಮಾನ ಧರ್ಮಾನುಯಾಯಿ, ಮಾನವ ಜಾತಿ [illegible] ವರ್ಣಭೇದ ಇಲ್ಲ. ಇದೂ ನ [illegible] ನಮ್ಮ ಭಕ್ತಿಯವರಾದರು. [illegible] ಜಗಳ ಇಲ್ಲ. ಅವರು ನುಡಿದದ್ದೇನೆಂದರೆ — ' ಬಾಯಿಯಿಂದ [illegible], ಕೈಯಿಂದಾಗಲಿ ಪರರಿಗೆ [illegible] ಮುಸಲ್ಮಾನನಲ್ಲವಾಗಿ ನಮ್ಮ ಪೂಜ್ಯ ಪೈಗಂಬರರ ಆಜ್ಞೆಯಿದೆ " ಇದರಿಂದ ಹಿಂದು ಮುಸಲ್ಮಾನರ ದೊಂಬಿಯು [illegible] ನಮ್ಮ ದೇಶದಲ್ಲಿಯೇ [illegible] ಮುಸಲ್ಮಾನ ಸಂಸ್ಕೃತಿ [illegible] ದೊರಕಿಸಿದ್ದರ ಮೂಲಕ [illegible] ಒಡೆದ ಆಶಯವುಂಟಾಗಿದೆ. ಮುಂದೆ [illegible] ಸ್ವತಂತ್ರವುಂಟಾಗುವದ, ಮತ್ತು ನಾವು [illegible] ಹಿಂದುಮುಸಲ್ಮಾನರ ದೊಂಬಿಯನ್ನೆಬ್ಬಿಸುವದು ತಪ್ಪುವದು. ಇದಾ [illegible] ಧರ್ಮವನ್ನು ಸಂರಕ್ಷಿಸಿ [illegible] ದ್ದರಿಂದ ಈ ದೇಶದೊಳಗೆ ಜಾತಿಮತ್ಸರ ಕುಗ್ಗುವದು. ಈ ಪ್ರಕಾರ ಕವಿಶ್ರೇಷ್ಠರು [illegible]

ಈ ಪ್ರತಿನಿಧಿಗಳ ಒಳ ಪೇಳಿ, ಶಾಗೆಯೇ ವಿಮಾನ ಹತ್ತಿ ಕಲಕತ್ತೆಗೆ ತೆರಳಿದರು.

⁂

ಸ್ವದೇಶಿಗೆ ಅಡ್ಡಿಯಿಲ್ಲ, ಆದರೆ ..?

ಆಸಾಮ ಪ್ರಾಂತದ ರಾಜಧಾನಿಯಾದ ಶಿಲಾಂಗ್ ದೊಳಗಿನ ಶ್ರೀ| ನೃಪೇಂದ್ರ ಚೌಧರಿ ವಕೀಲರವರು 'ಬಾಯ್ ಇಂಡಿಯನ್' ಯಾನೆ 'ಹಿಂದೀ ಸರಕುಗಳನ್ನೇ ಕೊಂಡುಕೊಳ್ಳಿರೆಂ'ಬುದಾಗಿ ಪ್ರಚಾರ ಮಾಡುವ ಪಂಡಿತ ಮದನ ಮೋಹನ ಮಾಳವೀಯರವರು ಹೊರಡಿಸಿದ ಸಂಘದ ಶಾಖೆಯೊಂದನ್ನು ಸ್ಥಾಪಿಸುವದಕ್ಕಾಗಿ ಸಭೆ ಸೇರಿಸಬಹುದೋ ಎಂದು ಡಿ| ಮೆಜಿಸ್ಟ್ರೇಟರಿಗೆ ಒಂದು ಪತ್ರ ಬರೆದಿದ್ದರು. ಡೆಪ್ಯುಟಿ ಕಮಿಶನರರ ಕಡೆ ಕಳಿಸಿ ಉತ್ತರ ಕಳಿಸುತ್ತೇನಾಗಿ ಡಿ| ಮೆಜಿಸ್ಟ್ರೇಟರು ಚೌಧರಿಯವರಿಗೆ ತಿಳಿಸಿದರು. ಡೆ| ಕಮಿಶನರರು ಉತ್ತರ ಬರೆದದ್ದೇನಂದರೆ — "ಈಗ ನೀವು, ನಿಮ್ಮ ಸಂಗಡಿಗರೂ ಸಾರ್ವಜನಿಕ ಸಭೆ ಸೇರಿಸದಿದ್ದರೆ ಒಳಿತು. ಪಟ್ಟಣದಲ್ಲಿ ಸದ್ಯಕ್ಕೆ ಸಮಾಧಾನವಿದೆ. ಸಭೆ, ಮೆರವಣಿಗೆ ಮೊದಲಾದ ಕೃತ್ರಿಮ ವ್ಯವಸಾಯಗಳು ಸದ್ಯಕ್ಕೆ ನಿಂತಿವೆ. ಶಾಂತಿ ಭಂಗವಾಗಲು ನನ್ನ ಒಪ್ಪಿಗೆಯಿಲ್ಲ. 'ಬಾಯ್ ಇಂಡಿಯನ್' ಯಾನೆ ಸ್ವದೇಶಿ ಪ್ರಚಾರವೂ, ಕೊಂಗ್ರೆಸ ಪ್ರಚಾರವೂ ಈಗಿನ ಸ್ಥಿತಿಯಲ್ಲಿ ಸಾಮಾನ್ಯವಾಗಿ ಒಂದೇ ಪ್ರಕಾರ ಪುರಸ್ಕಾರ ಮಾಡುವವಲ್ಲಂತು ತೋರುವದೇ ಕಠಿಣ. ನಿಮ್ಮದೇ ಉದಾಹರಣೆ ನೋಡಿ. 'ಬಾಯ್ ಇಂಡಿಯನ್' ಪ್ರಚಾರಕರು ಕೊಂಗ್ರೆಸ ಪ್ರಚಾರಕರಲ್ಲವಾಗಿ ತಿಳಿಯಬೇಕೆಂದು ನೀವು ಹವಣಿಸುತ್ತೀರಿ. ಇದೇ ೨ ತಿಂಗಳ ಹಿಂದೆ ಏಪ್ರಿಲ ೧೧ನೇ ತಾರೀಖಿಗೆ 'ಗೋವಿಂದ ಉಪವನ'ದಲ್ಲಿ ಒಂದು ಸಭೆ ನೆರೆದಿತ್ತು. ಆಗ ನೀವು ನುಡಿದದ್ದೇನಂದರೆ — 'ಈಗಿನ ಸ್ಥಿತಿಗೆ ಸರಕಾರವೇ ಹೊಣೆಯಾಗಿದೆ, ಅವರೇ ಮುಂದಾಗಿ(ಕೊಂಗ್ರೆಸಿನ)ವ್ಯಮೇಲೆ ಬಿದ್ದವರು. ದಿನ ಹೋದ ಹಾಗೆ ಪರಿಸ್ಥಿತಿಯು ತಾಳಗೆಟ್ಟಿದೆ. ಇಲ್ಲಿ ಬ್ರಿಟಿಶ ಧ್ವಜ ಹಾರಾಡುತ್ತಿದ್ದಿಲ್ಲ, ರಾಷ್ಟ್ರಧ್ವಜ ಕಿತ್ತೊಗೆಯಲ್ಪಡುತ್ತಿದ್ದಿಲ್ಲ. ಶಿಪಾಯಿಯರ ದಂಗೆಯಲ್ಲಿ ಜನರು ದ್ರೋಹ ಬಗೆದರು. ಸರಕಾರದ್ದೇ ಕರ್ಮಾದ್ದರಿಂದ ಈ ಸ್ಥಿತಿಯುಂಟಾಯಿತು. ಕಸ್ಟಮ್ ಖಾತೆಯಿಂದ ಸರಕಾರಕ್ಕೆ ಸಿಗುವ ೫೧ ಕೋಟಿ ರೂಪಾಯಿಗಳನ್ನು ನಾವು ನಿಲ್ಲಿಸಿದರೆ, ಇಂಗ್ಲಂಡದಿಂದ ಹಣ ತಂದು ಸರಕಾರವು ಇಲ್ಲಿ ಆಳಿಕೆ ನಡಿಸಲಿ ನೋಡುವಾ ಇತ್ಯಾದಿ ಇತ್ಯಾದಿ" ಎಂದರೆ ಬಹಿಷ್ಕಾರ ಮೊದಲಾದ ಬೇಕಾಯದೇಶೀರ ಉಪಾಯಗಳಿಂದ ಬ್ರಿಟಿಶ ಹಿಂದುಸ್ತಾನದಲ್ಲಿ ಕಾಯಿದೆಯಂತೆ ಸ್ಥಾಪಿತವಾದ ಸರಕಾರವನ್ನು ಉರುಳಿಸುವ ಕಾರ್ಯಕ್ರಮದಲ್ಲಿ ನೀವು ಸೇರಿಕೊಂಡಿದ್ದೀರಿ. ಇಂಥ ಪ್ರಸಕ್ತಿಯಲ್ಲಿ, ಈಗಿನ ದಿನಮಾನದಲ್ಲಿ ಬೇಕಾಯದೇಶೀರ ಒಂದು ಜಾಹೀರಾದ ಕಾರ್ಯಕ್ರಮವನ್ನು ಬೇರೆ ಹೆಸರಿನಿಂದ ಪ್ರಾರಂಭಿಸಲು ನಾನು ಅಪ್ಪಣೆ ಕೊಡಲಾರೆ."

⁂

ಪುಣೆ ಜಿಲ್ಹೆಯ ಪರವಾಗಿ ಶಾಸನ ಕೌನ್ಸಿಲಿನ ಸಭಾಸದರಾದ ರಾ| ಗಣಪತಿ ಲಕ್ಷ್ಮಣರಾಯರು ಪುಣೆಯ ಕಲೆಕ್ಟರರಿಗೆ ಒಂದು ಪತ್ರ ಬರೆದರು. ಸರದಾರರಿಗೂ, ಜಹಾಗೀರದಾರರಿಗೂ, ಸರಕಾರಿ ನೌಕರರಿಗೂ 'ಮಹಾರಾಷ್ಟ್ರ ಸ್ವದೇಶಿ ಸಂಘ' ಯಾನೆ 'ಬಾಯ್ ಇಂಡಿಯನ್ ಲೀಗ' ಸಂಸ್ಥೆಯ ಸಭಾಸದರಾಗಲು ನಾನು ವಿನಂತಿ ಮಾಡಿಕೊಂಡಿದ್ದೇನೆ. ಆದರೆ, ಕೆಲವರಿಗೆ ಸಂದೇಹವುಂಟಾಗಿದೆ. ಈ ಸಂಸ್ಥೆಯಲ್ಲಿ ಸೇರಿದರೆ ಸರಕಾರದ ಅವಕೃಪೆಯಾಗಬಹುದೆಂದು ಅವರು ಬೆದರುತ್ತಾರೆ. ಆದರಿಂದ ಸರಕಾರದ ಆಕ್ಷೇಪವಿಲ್ಲವಾಗಿ ತಾವು ಪ್ರಕಟಣೆಯನ್ನು ಹೊರಡಿಸಿದರೆ ಸಂಘದ ಕಾರ್ಯಕ್ಕೆ ಅನುಕೂಲವಾಗುವದು. ಇದಕ್ಕೆ ಕಲೆಕ್ಟರರು ಉತ್ತರ ಬರೆದದ್ದೇನಂದರೆ — "ಇಂಥ ಪ್ರಕಟಣೆ ಹೊರಡಿಸುವದು ಉಚಿತ ತೋರುವದಿಲ್ಲ. ಆದರೆ, ಈ ಜಿಲ್ಹೆಯ ಸರದಾರ ಹಾಗು ಜಹಾಗೀರದಾರರೊಡನೆ ಇಂಥ ಪ್ರಶ್ನೆ ಒಂದಲ್ಲ ಚರ್ಚೆ ಮಾಡಿ ತಕ್ಕ ಸಲ್ಲೆ ಕೊಡಲು ನಾನು ಯಾವಾಗಲೂ ತಯಾರಿದ್ದೇನೆ." ಕಲೆಕ್ಟರರೊಡನೆ ವಿಚಾರಿಸಿ ಅವರ ಅಪ್ಪಣೆ ಪಡೆದು ಪರಿಷ್ಕಾರಿದ ಕೌನ್ಸಿಲಿನ ಸಭಾಸದರಾದ ಸರದಾರ ಮುಝುಮದಾರರವರು ಈ ಸ್ವದೇಶಿ ಸಂಘದ ಸಭಾಸದರಾಗಿರುವರಾಗಿ ಕೇಳುತ್ತದೆ. ರಾ| ಗೋಖಲೆಯವರ ಪ್ರಯತ್ನದಿಂದ [illegible] ಪುರ ತಾಲೂಕಿನ [illegible] ಸ್ವದೇಶಿ ಸಂಘಗಳು ಸ್ಥಾಪನೆಯಾಗಿವೆ.

⁂

ಲೋಥಿಯನ್ ಮಂಡಳದ ವರದಿ

ಹೊಸ ರಾಜ್ಯಘಟನೆಯಲ್ಲಿ ಮತಾಧಿಕಾರ ಯಾರಿಗಿರಬೇಕೆಂಬುದರ ಕುರಿತು ವಿಚಾರಿಸಿ ತಕ್ಕ ಶಿಫಾರಸು ಮಾಡಲು ಸಹಾಯಕ ಭಾರತ ಮಂತ್ರಿಗಳಾದ ಲೋಥಿಯನ್ ದೊರೆಗಳ ಅಧ್ಯಕ್ಷತೆಯ ಕೆಳಗೆ [illegible] ಮಂಡಳ ನೇಮಿಸಲಾಗಿತ್ತು. [illegible] ಸಂಗಡಿಗರೊಡನೆ ಭರತ ಖಂಡದಲ್ಲಿ [illegible] ಮುಂಬಯಿ, ಮದ್ರಾಸ, ಕಲಕತ್ತಾ, ಪ್ರಯಾಗ [illegible], ಕರಾಚಿ ಮೊದಲಾದ ಕಡೆ [illegible] ಸಿದ ರಿಪೋರ್ಟು ಚಕ್ರವರ್ತಿ [illegible] ಬಾದಶಹರ ವರ್ಧಂತಿಯ ದಿನ ಹಿಂದುಸ್ತಾನದಲ್ಲಿಯೂ, ಇಂಗ್ಲಂಡದಲ್ಲಿಯೂ ಒಮ್ಮೆಲೆ ಪ್ರಕಟವಾಯಿತು. ಈ ರಿಪೋರ್ಟಿನ [illegible] ಗಳು ೩೩ ಅಧ್ಯಾಯಗಳಿವೆ. ಜನವರಿ [illegible]ನೇ ತಾರೀಖಿಗೆ ತಾವು ಇಲ್ಲಿ ಬಂದು ಮುಟ್ಟಿದ [illegible] ಆಸಾಮ ಮತ್ತು ಮಧ್ಯ ಪ್ರಾಂತ ಬಿಟ್ಟು [illegible] ಪ್ರವಾಸ ಮಾಡಿದ್ದಾಯಿತು. ಪ್ರಾಂತಿಕ ಸರಕಾರಗಳ ಕಡೆ, ಹಿಂದುಸ್ತಾನ ಸರಕಾರದ ಕಡೆ ಆಲೋಚನೆ ಮಾಡಿದೆ [illegible] ಮಂದಿಗಳ ಸಾಕ್ಷಿ ಕೇಳಿದೆ [illegible] ಪಕ್ಷದ [illegible] ಮಾತ್ರ ತನಗೆ ತಿಳಿಯಲಿಲ್ಲ. ಅವರ ಆ ಪಕ್ಷದ [illegible] ಈ ಮೊದಲೇ [illegible] ಹೀಗಲ್ಲಿ ಪ್ರಸ್ತಾವನೆ ಬರೆದು ಹಿಂದು-ಮುಸಲ್ಮಾನ ಜಾತಿಯ ಮತಾಧಿಕಾರದ ಪ್ರಶ್ನೆ ಜಾತಿಯ ದೃಷ್ಟಿಯಿಂದ ತಾವು ವಿಚಾರಿಸಲಿಲ್ಲವಾಗಿಯೂ, ಆ ಪ್ರಶ್ನೆ ವಿಚಾರಿಸುವ ಕೆಲಸ ಸಾಮ್ರಾಜ್ಯ ಸರಕಾರದ್ದೇ ಎಂದೂ ದೊರೆಗಳು ಅಭಿಪ್ರಾಯಪಟ್ಟಿದ್ದಾರೆ. ಪ್ರಬುದ್ಧ ಸ್ತ್ರೀ ಪುರುಷರಿಗೆಲ್ಲ ಮತಾಧಿಕಾರ ಕೊಡುವದು ಹಿಂದುಸ್ತಾನದ ಸ್ಥಿತಿಯಲ್ಲಿ ಅಶಕ್ಯ ಮಾತು. ಜನಸಾಮಾನ್ಯರಿಗೆ ತಕ್ಕಷ್ಟು ಶಿಕ್ಷಣವಿಲ್ಲ. ಕೋಟ್ಯಾವಧಿ ಮತದಾರರಿಗೆ ಆಗಿಸುವಷ್ಟು ಪೋಲೀಸ ಬಲವಿಲ್ಲ. ಇಡೀ ಹಿಂದುಸ್ತಾನದಲ್ಲಿ ೧ ಲಕ್ಷ ೬೪ ಸಾವಿರ ಪೋಲೀಸರಿದ್ದಾರೆ. ಇಷ್ಟು ಜನರಿಂದ ಕೋಟ್ಯಾವಧಿ ಮತದಾರರ [illegible] ಬರದು. ಸ್ತ್ರೀ ಮತದಾರರಿಗೆ ಪ್ರತ್ಯೇಕವನ್ನಿಸಬೇಕಾದರಿಂದ ಅದರಿಂದ ಆ ಗೊಡವೆಯನ್ನೇ ಬಿಟ್ಟು ಮತಾಧಿಕಾರದ ಈಗಿನ ಪ್ರಮಾಣವನ್ನು ತಗ್ಗಿಸಿ ೩ ಕೋಟಿ ೬೦ ಲಕ್ಷ ಜನರಿಗೆ ಮತಾಧಿಕಾರ ಕೊಡಬಹುದೆಂದು ಶಿಫಾರಸಾಗಿದೆ. ಈ ಮತದಾರರಲ್ಲಿ ಅಷ್ಟಮಾಂಶ ಸ್ತ್ರೀಯರು. ಅಸ್ಪೃಶ್ಯರಿಗೂ, ಸ್ತ್ರೀಯರಿಗೂ ಮತಾಧಿಕಾರ ಪಡೆಯಲು ಬೇರೆಯವರಿಗಿಂತ ಕಡಿಮೆ ಸಂಸ್ಕೃತಿ ಇಟ್ಟಿದೆ. ಈಗ ಬರೇ ೭೧ ಲಕ್ಷ ಜನರಿಗೆ ಮತಾಧಿಕಾರವಿದೆ. ಸ್ತ್ರೀಯರಿಗೆ ಪ್ರಾಂತಿಕ ಕಾಯಿದೆ ಕೌನ್ಸಿಲುಗಳಲ್ಲಿ ಶೇಕಡಾ ೨ರಿಂದ ೫ರ ವರೆಗೆ ಸದಸ್ಯರ ಆಸನಗಳು ಕಾದಿಟ್ಟಿರುತ್ತವೆ. ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾರ ಸಂಘಗಳನ್ನು ಕೊಡಲಿಲ್ಲ. ವರಿಷ್ಠ ಕಾಯಿದೆ ಕೌನ್ಸಿಲು ಯಾನೆ ಸಂಯುಕ್ತ ಮತದಾರರ ಸಂಖ್ಯೆ ೮೦ ಲಕ್ಷವಾಗುವದು. ಈಗ ಆ ಮತದಾರರ ಸಂಖ್ಯೆ ೧೧—೧೨ ಲಕ್ಷವಿದೆ. ಸಂಯುಕ್ತ ಕೌನ್ಸಿಲು ಸಭೆಯಲ್ಲಿ ಒಟ್ಟು ೩೦೦ ಸಭಾಸದರು, ಅವರಲ್ಲಿ ೨೦೦ ನಮ್ಮ ಬ್ರಿಟಿಶ ಹಿಂದುಸ್ತಾನಕ್ಕೆ, ಉಳಿದ ೧೦೦ ಸಂಸ್ಥಾನಿಕರಿಗೆ, ಇತರರಿಗೆ ಹೀಗೆಲ್ಲ ರಿಪೋರ್ಟಿನಲ್ಲಿ ಬರೆದದೆ. ಈ ರಿಪೋರ್ಟಿಗೆ ನೇಮಸ್ತಾಗ್ರಣಿಗಳು ಒಪ್ಪುವದಿಲ್ಲ. ರಾ| ತಾಂಬೆ, ಚಿಂತಾಮಣಿ, ಜಯಕರರವರು ಪ್ರಬುದ್ಧರಿಗೆಲ್ಲ ಮತಾಧಿಕಾರವಿರಬೇಕೆಂದು ಪ್ರತಿಪಾದಿಸಿ ರಿಪೋರ್ಟಿಗೆ ತಮ್ಮ ನಿಷೇಧ ಪತ್ರಿಕೆಯನ್ನು ಜೋಡಿಸಿದ್ದಾರೆ. ರಾ| ಸುಬ್ಬರಾಯನ್‌ರವರು ಬಂಗಾಲದ ವಕೀಲಿ [illegible] ಮತಪತ್ರಿಕೆ ಜೋಡಿಸಿದ್ದಾರೆ. ಸರ್ ಮಹಮ್ಮದ ಯಾಕೂಬ, ಸರ್ ಸುಂದರಸಿಂಗ, ಡಾ| ಅಂಬೇಡಕರ ಮೊದಲಾದ ಸಭಾಸದರು ತಮ್ಮ ತಮ್ಮ [illegible] ಭಿನ್ನಾಭಿಪ್ರಾಯ ಕೊಟ್ಟಿದ್ದಾರೆ. [illegible]ವಾಗಿ ಹಿಂದೀ ಜನಾಂಗದ ಈ ರಿಪೋರ್ಟ [illegible] ಆಶಾವಾದದವನ್ನಿಂದ ಪಡೆದ ಭಿನ್ನ ಮತ ಪತ್ರಿಕೆಗಳನ್ನೆಲ್ಲ [illegible] ತಮ್ಮ ರಿಪೋರ್ಟ ಯೋಗ್ಯವೆಂದು ಲೋಥಿಯನ್ ದೊರೆಗಳಾದಿ ಬಹುಮತದವರು ತಮ್ಮದೇ ಶಿಫಾರಸು ಮಾಡಿಕೊಂಡ ಪತ್ರಿಕೆಯೂ ರಿಪೋರ್ಟಿನೊಡನೆ ಪ್ರಕಟವಾಗಿದೆ. ಹೀಗೆ ಬಹುಮತದವರು ಅಲ್ಪ ಮತದವರಿಗೆ ಅಲಕ್ಷಿಸಿ ಅವರಿಗೆ ಸಭೆಯ ಸೂಚನೆ ಸಹ ಕೊಡದೆ ಏಕಪಕ್ಷದಿಂದ ಅವರ ಮೇಲೆ ಟೀಕೆ ಮಾಡುವದು ಅಪ್ರಶಸ್ತವೆಂದು ನೇಮಸ್ತಾಗ್ರಣಿಗಳಾದ ರಾ| ಚಿಂತಾಮಣಿಯವರು ನಿಷೇಧ ಮಾಡಿದ್ದಾರೆ. ಲೋಥಿಯನ್ ದೊರೆಗಳ ಶಿಫಾರಸ ರಿಪೋರ್ಟಿನಲ್ಲಿ ಪ್ರಕಟವಾಗಿದೆ. ವಿರಾಯತಿಯಲ್ಲಿಯೂ ಈ ರಿಪೋರ್ಟಿಗೆ ಜಾಸ್ತಿ ತಪ್ಪು ಮನವಿಲ್ಲ. ರಾಜಪಕ್ಷದ 'ಮಾರ್ನಿಂಗ ಪೋಸ್ಟ' ಪತ್ರಿಕೆಗೆ ಬಲು ದೊಡ್ಡ ಸಿಟ್ಟು ಬಂದಿದೆ. "ಹಿಂದುಸ್ತಾನಕ್ಕೆ ಲೋಕಶಾಹಿ ಗೊತ್ತಿಲ್ಲ, ಕೃತ್ರಿಮ ಉಪಾಯಗಳಿಂದ ಲೋಕಶಾಹಿ ಕಲಿಸಲು ರಿಪೋರ್ಟು ಪ್ರಯತ್ನಪಡುತ್ತದೆ. ರಿಪೋರ್ಟಿನಲ್ಲಿ ಹಿಂದೂ—ಮುಸಲ್ಮಾನ ಪ್ರಶ್ನೆಯ ವಿಚಾರವಿಲ್ಲದ್ದರಿಂದ ರಿಪೋರ್ಟ [illegible] ನಿರರ್ಥಕವಾಗಿದೆ. ಲಂಡನಿನ 'ಟೈಮ್ಸ' ಪತ್ರಿಕೆಯು ಲೋಥಿಯನ್ ದೊರೆಗಳ ಅವರ ಪ್ರಶಂಸಿತ ರಿಪೋರ್ಟಿನಲ್ಲಿ ತಿದ್ದುಪಡಿ ಅವಶ್ಯವಿರುವದಾಗಿ ಪ್ರತಿಪಾದಿಸುತ್ತದೆ. ಇನ್ನೂ ಹೆಚ್ಚಿನ ಜನರಿಗೆ ಮತಾಧಿಕಾರ ದೊರೆಯುವಂತೆ "ತಿದ್ದುಪಡಿಯಾಗಬೇಕಾಗಿಯೂ ಸೂಚಿಸುತ್ತದೆ." ಹೀಗೆ ಈ ರಿಪೋರ್ಟಿಗೆ ಸ್ವಂತ ರಿಪೋರ್ಟು ಬರೆದವರದೇ ಶಿಫಾರಸು ದೊರತು, ಬೇರೆ ಯಾವರ ಶಿಫಾರಸಿಲ್ಲ. ಇದನ್ನು ತಿಳಿಯೋ ಏನೋ ಲೋಥಿಯನ ದೊರೆಗಳು ಮುಂದಾಗಿಯೇ ಶಿಫಾ

ರಸು ಮಾಡಿಕೊಂಡಿರಬೇಕೆಂದು ಕೆಲವರ ಊಹೆ

⁂

ನಾಶಿಕದಲ್ಲಿ ಸಿಂಹಸ್ಥ ಯಾತ್ರೆ.

ಗುರು ಗ್ರಹವು ಸಿಂಹ ರಾಶಿಯಲ್ಲಿ ಸಂಕ್ರಮಣವಾದಾಗ ನಾಶಿಕ ಕ್ಷೇತ್ರದಲ್ಲಿ ದೊಡ್ಡ ಯಾತ್ರೆಯಾಗುತ್ತದೆ. ಇದೇ ತಿಂಗಳಲ್ಲಿ ಗುರುವು ಸಿಂಹಸ್ಥನಾಗುತ್ತಾನೆ. ೧ ವರ್ಷದ ತನಕ ತ್ರ್ಯಂಬಕದೊಳಗಿನ ಗೋದಾವರಿಯಲ್ಲಿ ಸ್ನಾನ ಮಾಡಿ ತ್ರ್ಯಂಬಕೇಶ್ವರನ ದರ್ಶನ ಪಡೆಯಲು ಸಾವಿರಾರು ಯಾತ್ರಿಕರು ಹೋಗುತ್ತಾರೆ. ೩೦ ಸಾವಿರ ಜನರು ಒಡ್ಡಾಮುಷ್ಪುರದಿಂದ ಹೊರಟು ಇದೇ ತಿಂಗಳಲ್ಲಿ ನಾಶಿಕಕ್ಕೆ ತಲ್ಪುವರು. ಇಲ್ಲಿ ಉಳಿಯುವದು ಒಂದು ಪಕ್ಷ ಧರ್ಮಶಾಲೆಯಲ್ಲಿಯೂ, ಹೊಲಮನೆಗಳಲ್ಲಿಯೂ ಜನರು ಇಳಿಕೊಳ್ಳುತ್ತಾರೆ. ಮೊಟ್ಟಮೊದಲು ಕುಶಾವರ್ತ ತೀರ್ಥಸ್ನಾನ ಮಾಡಿ ತ್ರ್ಯಂಬಕೇಶ್ವರನ ದರ್ಶನ ಪಡೆಯುತ್ತಾರೆ. ಆಮೇಲೆ ಗೋದಾವರಿ ನದಿಯ ಉಗಮಸ್ಥಾನಕ್ಕೆ ಹೋಗಿ ಅಲ್ಲಿ ಸ್ನಾನ ಮಾಡುತ್ತಾರೆ. ಗೋದಾವರಿಯ ಉಗಮಸ್ಥಾನವು ಸಹ್ಯಾದ್ರಿಯ ಬೆಟ್ಟದ ಮೇಲಿದೆ. ನಾಶಿಕ ಪಟ್ಟಣದಿಂದ ಬೆಟ್ಟದ ತನಕ ಹೋಗಿ ೭೦೦ ಪಾವಟಿಗೆಗಳನ್ನು ಹತ್ತಿಹೋಗಬೇಕು. ಮುಂಚೆ ಇವನ್ನು ಸರಿಯಾಗಿ ಕಟ್ಟಿದ್ದಿಲ್ಲ. ಈಗ ಅವನ್ನು ಮುಂಬಯಿಯ ಧನಾಢ್ಯ ಲೋಹಾಣಾ ವರ್ತಕರಾದ ಶೇಟ ಕರಮಸಿ ಹಂಸರಾಜರವರು ಕಟ್ಟಿಸಿದ್ದಾರೆ. ಶಿಖರದಲ್ಲಿ ಒಂದು ದೊಡ್ಡ ಹೀರವಿದೆ. ಈ ಹೀರಕ್ಕೆ ಆಸಿಕೆಯಾಗಿ ಒಂದು ದೊಡ್ಡ ಗೋಡೆ ಕಟ್ಟಿದ್ದಾರೆ. ಈ ಹೀರಕ್ಕೆ ಹೊಂದಿಕೆಯಾಗಿ ಪೋಟ್ಟಿದಿಗೆ ೩೦೦ ಅಡಿ ಎತ್ತರವಾದ ಒಂದು ದೊಡ್ಡ ಬಂಡೆಗಲ್ಲಿದೆ. ಈ ಬಂಡೆಗಲ್ಲಿನೊಳಗಿಂದಲೇ ಹನಿ ಹನಿ ನೀರು ಬೀಳುತ್ತದೆ. ಅದು ಗೋಮುಖದ ದ್ವಾರಾ ಒಂದು ಹೌದಿನಲ್ಲಿ ಬಿದ್ದು ಮುಂದ ಸಾಗುತ್ತದೆ. ಗೋಮುಖಕ್ಕೆ ಹೂ-ಪತ್ರಿ ಮೊದಲಾದವುಗಳಿಂದ ಪೂಜೆ ಮಾಡುತ್ತಾರೆ. ಇದೇ ಗೋದಾವರಿಯ ಉಗಮವು. ಇಲ್ಲಿ ಯಾತ್ರಿಕರು ಸ್ನಾನ ಮಾಡಬೇಕು. ಈ ವರ್ಷದ ಸಿಂಹಸ್ಥ ಯಾತ್ರೆಗೆ ಒಂದು ವಿಶೇಷವಿದೆ. ದಿಗಂಬರ ಗೋಸಾವಿಗಳು ಈ ಸಾರಿ ಮೆರವಣಿಗೆಯಿಂದ ಹೋಗಿ ಗೋಮುಖದಲ್ಲಿ ಸ್ನಾನ ಮಾಡುವವರಿದ್ದಾರೆ. ೧೮೭೧ನೇ ಇಸ್ವಿಯಲ್ಲಿ ಇಂಥ ಮೆರವಣಿಗೆ ಹೊರಡಿಸಬಾರದಾಗಿ ಸರಕಾರವು ಪ್ರತಿಬಂಧಿಸಿತ್ತು. ಸರಕಾರವು ಈ ಪ್ರತಿಬಂಧವನ್ನು ಈ ಬಾರಿ ಕಿತ್ತೊಗೆದಿದೆ. ಪ್ರಯಾಗ ತೀರ್ಥದಲ್ಲಿ ಇವರದೊಂದು ಮಠವಿದೆ. ಪುರಾತನ ಕಾಲದಲ್ಲಿ ಇವರು ೩-೪ ಸಾಲುಗಳನ್ನು ಮಾಡಿ ಧ್ವಜ ಹಾರ್ಯಾಡಿಸುತ್ತ, ತುತೂರಿ ಊದುತ್ತ ಸಂಭ್ರಮದಿಂದ ಕೂಚು ಮಾಡಿ ಗೋಮುಖದಲ್ಲಿ ಸ್ನಾನ ಮಾಡುತ್ತಿದ್ದರು. ಈ ಗೋಸಾವಿಯರಲ್ಲಿ ೩ ಭೇದಗಳಿವೆ. ಒಂದು ನಿರ್ವಾಣಿ, ಇನ್ನೊಂದು ಉದಾಸಿ, ನಿರ್ವಾಣಿಗಳು ದಿಗಂಬರರು, ನಿರ್ವಾಣಿಗಳಿಗೆ ಬೆತ್ತಲೆಯಾಗಿ ಮೆರವಣಿಗೆಯಿಂದ ಹೋಗುವ ಅಧಿಕಾರವಿಲ್ಲವೆಂದು ಉದಾಸಿಗಳು ಆಕ್ಷೇಪ ತೆಗೆದು ಗೋಸಾವಿಯರೊಳಗೆ ದೊಡ್ಡದೊಂದು ದೊಂಬಿಯಾದ್ದರಿಂದ ೧೮೭೧ನೇ ಇಸ್ವಿಯಲ್ಲಿ ಸರಕಾರವು ಹಾಗೆ ಪ್ರತಿಬಂಧಕ ಹುಕುಮು ಹೊರಡಿಸಿತ್ತು. ಸೀಲ ಪ್ರಿವರ್ ನಿರಂಜನ ನಿರ್ವಾಣಿ ಅಖ್ಯಾಲ್ ಆಖಾಡಾ ಯಾನೆ ಸಂಘದವರು ಸರಕಾರಕ್ಕೆ ಒದರಿಕೊಂಡು ಪುರಾತನ ಪರಂಪರೆಯನ್ನು ಸಂರಕ್ಷಿಸಬೇಕಾಗಿ ಅರಿಕೆ ಮಾಡಿಕೊಂಡ ಮೇಲೆ ನಾಶಿಕದ ಮೆಜಿಸ್ಟ್ರೇಟರು ೩ ಮೆರವಣಿಗೆಗಳನ್ನು ಹೊರಡಿಸಲು ಅಪ್ಪಣೆ ಕೊಟ್ಟಿದ್ದಾರೆ. ಆಷಾಢ ಕೃಷ್ಣ ೧೪ರ ಸೋಮವಾರ ತಾ ೧-೮-೪೩ನೇ ದಿನ ಬೆಳಗಿನ ೪ ಘಂಟೆಯಿಂದ ೬ ಘಂಟೆಯ ವರೆಗೆ ೧೦೦ ಮಂದಿಗಳದೊಂದು ಮೆರವಣಿಗೆ, ೭೫ ಮಂದಿಗಳದೊಂದು ಮೆರವಣಿಗೆ, ಹೀಗೆ ೧೭೫ ಮಂದಿಗಳ ೩ ಮೆರವಣಿಗೆಗಳನ್ನು ದಿಗಂಬರ ಗೋಸಾವಿಗಳು ಹೊರಡಿಸಿಕೊಂಡು ಕುಶಾವರ್ತ ತೀರ್ಥಸ್ನಾನ ಮಾಡಿ ಹಾಗೆಯೇ ಮರಳಿ ಮರಳತಕ್ಕದ್ದು. ಇದೊಂದೇ ದಿನ ೩ ತಾಸುಗಳಲ್ಲಿ ಬೆತ್ತಲೆ ಮೆರವಣಿಗೆಯ ಕಾರ್ಯಕ್ರಮ ಮುಗಿಯತಕ್ಕದ್ದು. ಮಠದಿಂದ ಕುಶಾವರ್ತ ತೀರ್ಥವು ೩ ಮೈಲು ಅಂತರದಲ್ಲಿದೆ. ಇದಕ್ಕೆ ವಿರುದ್ಧ ಯಾರಾದರೂ ನಡೆದಲ್ಲಿ ಅವರಿಗೆ ಶಾಸನವಾಗುವದು. ಸಿಂಹಸ್ಥ ಯಾತ್ರೆಯು ೧ ವರ್ಷದ ತನಕ ನಾಶಿಕ ಕ್ಷೇತ್ರದಲ್ಲಿ ನಡೆಯುತ್ತದೆ. ಗುರುವು ಕನ್ಯಾ ಸಂಕ್ರಮಣವಾಗುವ ತನಕ ಈ ಯಾತ್ರೆಯ ಅವಧಿ. ಆರೋಗ್ಯ ಇಲಾಖೆಯವರು ಯಾತ್ರಿಕರ ಆರೋಗ್ಯಪಾಲನಕ್ಕಾಗಿ ತಕ್ಕ ಜಾಗ್ರತೆ ಕೊಳ್ಳಲಾರಂಭಿಸಿದ್ದಾರೆ. ಆದಾಗ್ಯೂ, ಈಗಿನ ಕಠಿಣ ಸ್ಥಿತಿಯಲ್ಲಿ ಯಾತ್ರಿಕರು ಹಿಂದಿನಂತೆ ಒದಗಲಿಕ್ಕಿಲ್ಲವಾಗಿ ಅಲ್ಲಿಯವರ ತರ್ಕ

⁂

ಪತ್ರಿಕೆಗಳ ಮೇಲೆ ರಾಜಶಾಸನದ ಹೊಸ ಪ್ರಯೋಗ.

'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಮುದ್ರಕರ ಕಡೆಯಿಂದ ರೂ ೩೦೦೦, ಪ್ರಕಾಶಕರ ಕಡೆಯಿಂದ ರೂ ೩೦೦೦, ಹೀಗೆ ರೂ ೬೦೦೦ಗಳ ಜಾಮೀನು ಮುಂಬಯಿ ಸರಕಾರವು ಕೇಳಿತು. 'ಕ್ರಾನಿಕಲ್' ಪತ್ರಿಕೆಯು ಕಟ್ಟಿತು. ರೂ ೬೦೦೦ಗಳಿಗಾಗಿ ರೂ. ೧೬೦೦೦ಗಳ ಸರಕಾರಿ ಸಾಲದ ಬೋಂಡುಗಳನ್ನು ಕಟ್ಟಬೇಕಾಯಿತು. ಮುಂಬಯಿಯಲ್ಲಿ ದೊಂಬಿ ನಡೆದಿರುವದಕ್ಕೆ "ಅದಕ್ಕೆ ಪ್ರತೀಕಾರ ಮಾಡಲು ಸರಕಾರವು ಯಾಕೆ ತಯಾರಿದ್ದಿಲ್ಲ?" ಎಂಬದಾಗಿ ಮಿ| ಹಾರ್ನಿಮನ್‌ರವರ 'ಕ್ರಾನಿಕಲ್' ಪತ್ರಿಕೆಯಲ್ಲಿ ಒಂದು ಲೇಖ ಬರೆದಿದ್ದರು. ಆ ಲೇಖದಿಂದ ಸರಕಾರಿ ಅಧಿಕಾರಿಗಳ ಪ್ರತಿಷ್ಠೆಗೆ ಭಂಗ ಬಂತೆಂದು ಮುಂಬಯಿ ಸರಕಾರವು ಮುದ್ರಣಶಾಸನದಂತೆ ರೂ ೬೦೦೦ಗಳ ಜಾಮೀನು ಕೇಳಿತು. ಸತ್ಯಾಗ್ರಹವನ್ನು ನಿರ್ನಾಮಗೊಳಿಸುವದಕ್ಕಾಗಿ ರಾಜಶಾಸನಗಳು ಹೊರಡಿಸಲ್ಪಟ್ಟಿರುವವಾಗಿಯೂ, ಬೇರೆ ಪ್ರಕಾರದಿಂದ ಇವುಗಳ ಉಪಯೋಗವಾಗಲಿಕ್ಕಿಲ್ಲವಾಗಿಯೂ ಭಾರತಮಂತ್ರಿ ಸರ್ ಸಮ್ಯುಅಲ್ ಹೋರ ದೊರೆಗಳು ಪಾರ್ಲಿಮೆಂಟಿನಲ್ಲಿ ಆಶ್ವಾಸನ ಕೊಟ್ಟಿದ್ದರು. ದೊಂಬಿಗೂ ಸತ್ಯಾಗ್ರಹಕ್ಕೂ ಸಂಬಂಧವಿಲ್ಲ, ಹೀಗಿದ್ದು ಇವನ್ನು ಉಪಯೋಗ ಮಾಡಿದ್ದು ತಪ್ಪೆಂದು ಮಿ| ಹಾರ್ನಿಮನ್‌ರವರು ಭಾರತ ಮಂತ್ರಿಗಳಿಗೆ ತಂತಿ ಮಾಡಿ ಹೀಗೆ ದುರುಪಯೋಗ ಮಾಡಬಾರದಾಗಿ ಸೂಚಿಸಿದ್ದಾರೆ. ಆ ತಂತಿಗೆ ಉತ್ತರ ದೊರೆಯಲಿಲ್ಲ. ಪಾರ್ಲಿಮೆಂಟಿನಲ್ಲಿ ಸಭಾಸದರೊಬ್ಬರು ಜಾಮೀನು ಕೇಳುವ ಕಾರಣ ಕೇಳಲು, ಭಾರತ ಮಂತ್ರಿಗಳು 'ಸಾಸರಿಯೆ' ಎಂದರು. ಆದರೆ, ಈಗಿನಂಥ ಇಕ್ಕಟ್ಟಿನ ಪ್ರಸಂಗದಲ್ಲಿ ಸರಕಾರದ ಅಧಿಕಾರವನ್ನು ದುರ್ಲಕ್ಷ ಮಾಡುವಂಥ ದುಷ್ಟ ಪ್ರಯತ್ನವು ದೊಂಬಿಗೆ ಉತ್ತೇಜಕವಾಗುತ್ತದಾಗಿ ಒಂದು ಅಭಿಪ್ರಾಯ ಹೇಳಿ ಲೇಖನದ ಚೌಕಶಿ ಮಾಡಿ ತಿಳಿಸುತ್ತೇವಾಗಿ ಹೇಳಿದ್ದಾರೆ. 'ಕ್ರಾನಿಕಲ್' ಪತ್ರಿಕಾಕರ್ತರು ಕಳೆದ ಮೇ ೩೧ನೇ ತಾರೀಖಿಗೆ ರೂ ೬೦೦೦ಗಳ ಸರಕಾರಿ ಬೋಂಡುಗಳನ್ನು ಕಟ್ಟಿದರು. ಆದರೆ, ಈ ಬೋಂಡಗಳ ಈಗಿನ ಬೆಲೆ ರೂ. ೬೦೦೦ ವಟ್ಟಾದ್ದರಿಂದ ರೂ ೯೬೦೦ಗಳ ಸರಕಾರಿ ಬೋಂಡುಗಳನ್ನು ಕಟ್ಟಬೇಕಾಗಿ ಮೆಜಿಸ್ಟ್ರೇಟರು ವಿಧಿಸಿದರು. ಪೇಟೆಯ ಧಾರಣೆ ಏರಿದ್ದಾಗ್ಯೂ, ಸರಕಾರಿ ಬೋಂಡುಗಳ ಕಿಮ್ಮತ್ತನ್ನು ಸರಕಾರವೇ ಅಲ್ಲಗಳೆಯುವದು ಎಲ್ಲಿಯ ನ್ಯಾಯ? ಎಲ್ಲಿಯ ರೀತಿ? ಎಂದು 'ಕ್ರಾನಿಕಲ್' ಪತ್ರಿಕಾಕರ್ತರು ಟೀಕಿಸುತ್ತಾರೆ.

⁂

ಶಿದ್ದಾಪುರ ತಾಲೂಕ ಮಾವಿನಗುಂಡಿಯಲ್ಲಿ ಪೋಲೀಸ ಅತ್ಯಾಚಾರದ ಕುರಿತು ಸ್ತ್ರೀ-ಸತ್ಯಾಗ್ರಹಿಯ ಕೈಫೀಯತನ್ನು ಪಡೆದ ಬಗ್ಗೆ ಶಿವಮೊಗ್ಗೆಯ ಮದ್ರಾಸದ 'ಹಿಂದು' ಪತ್ರಿಕೆಯ ಪ್ರತಿನಿಧಿಗಳಿಗೆ ಸೆರೆಹಿಡಿಯಲಾಗಿದೆ.

⁂

ಬಂಗಾಲ ಪ್ರಾಂತದ ಜಲಪೈಗುರಿಯಲ್ಲಿ 'ಜನಮತ'ವೆಂಬ ಪತ್ರಿಕೆಯಿದೆ. ಇದು ವಾರಪತ್ರಿಕೆ. ೧ ತಿಂಗಳ ತನಕ ಈ ಪತ್ರಿಕೆಯನ್ನು ಹೊರಡಿಸಬಾರದಾಗಿ ಡೆ| ಕಮಿಶನರರು ಮುದ್ರಣ ಶಾಸನದಂತೆ ನೋಟೀಸನ್ನು ಹೊರಡಿಸಿದ್ದಾರೆ.

⁂

ಆಸಾಮ ಪ್ರಾಂತದೊಳಗಿನ ಸಿಲಹೆಟ್ ಪಟ್ಟಣದಲ್ಲಿ 'ಜನಶಕ್ತಿ' ಎಂಬ ವಾರಪತ್ರಿಕೆಯಿದೆ. ಆ ಪತ್ರಿಕೆಯ ಎಪ್ರಿಲ್ ೧೭ನೇ ತಾರೀಖಿನ ಸಂಚಿಕೆಯಲ್ಲಿ, ಫೆಬ್ರುವರಿ ೧೦ನೇ ತಾರೀಖಿಗೆ ಕರಿಮಗಂಜ ಗ್ರಾಮದಲ್ಲಿ ಪೋಲೀಸರು ಸತ್ಯಾಗ್ರಹಿಗಳಿಗೆ ಹೊಡೆದರೆಂದು ಪ್ರಕಟವಾಗಿತ್ತು. ಈ ಸುದ್ದಿ ಸುಳ್ಳೆಂದು ಪ್ರಾಂತಿಕ ಸರಕಾರವು ಅಭಿಪ್ರಾಯಪಟ್ಟು ಪತ್ರಿಕೆಯ ಕಡೆಯಿಂದ ಜಾಮೀನು ಬೇಡಿತ್ತು. ಕಲಕತ್ತೆಯ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರೂ, ನ್ಯಾಯಮೂರ್ತಿ ಮಿತ್ರ-ಪಂಕಜರವರೂ ಈ ಕುರಿತು 'ಜನಶಕ್ತಿ'ಯ ಕರ್ತರು ಮಾಡಿದ ಅಪೀಲನ್ನು ವಿಚಾರಿಸಿ ಪ್ರತ್ಯಕ್ಷ ಪೋಲೀಸ ಆಫೀಸರರ ಮೇಲೆ ಮಾಡಿದ ಆರೋಪದಿಂದ ಸರಕಾರಕ್ಕೆ ಅಪ್ರತಿಷ್ಠೆ ಬರಲಿಲ್ಲವಾಗಿ ಅಭಿಪ್ರಾಯಪಟ್ಟು ಆಸಾಮ ಸರಕಾರದ ಜಾಮೀನಿನ ಹುಕುಮನ್ನು ರದ್ದುಪಡಿಸಿದ್ದಾರೆ. ಸರಕಾರಿ ವ್ಯವಸ್ಥೆಯ ಧೋರಣದ ಅಂಗವೆಂದು ಪೋಲೀಸರು ಅತ್ಯಾಚಾರ ಮಾಡಿದರಾಗಿ ಸರಕಾರದ ಆರೋಪಣವಿಲ್ಲ. ಅದು ಒಂದು ಸುದ್ದಿಯೆಂದು, ಟೀಕೆ ಮಾಡದೆ ಪ್ರಕಟಿಸಲ್ಪಟ್ಟಿತ್ತು. ಇದರಿಂದ ಮುದ್ರಣಶಾಸನದಂತೆ ಇಂಥ ಪ್ರಕಟಣ ಆಕ್ಷೇಪಾರ್ಹವಾಗುವದಿಲ್ಲವಾಗಿ ನ್ಯಾಯಮೂರ್ತಿ ಪಂಕಜರವರು ಅಭಿಪ್ರಾಯಪಡುತ್ತಾರೆ.

⁂

ಧಾರವಾಡದ ಡಿ| ಮೆಜಿಸ್ಟ್ರೇಟರು 'ವಿಜಯ' ಪತ್ರಿಕೆಯ ಮೇಲೆ ಕಳೆದ ೨೬ನೇ ತಾರೀಖಿಗೆ ರಾಜಶಾಸನದ ಕಲಮು ೪ (೧) ರನ್ವಯ ಹೊರಡಿಸಿದ ಹುಕುಮೇನಂದರೆ — 'ವಿಜಯ' ಪ್ರಕಾಶಕರೂ, ಮುದ್ರಕರೂ ಸಾರ್ವಜನಿಕ ಸುರಕ್ಷಿತತೆ ಹಾಗು ಶಾಂತತೆಗೆ ಭಂಗಪಡಿಸುವಂಥ ಸುದ್ದಿಗಳನ್ನು ಪ್ರಕಟಿಸಿ ಬೇಕಾಯಿದೆಯೀರ ವರ್ತನೆಗೆ ಪ್ರೋತ್ಸಾಹ ಕೊ

[೧೦ನೇ ಪಾನಿನ ಮೇಲೆ ಮುಂದುವರಿದಿದೆ.]

ಯೋಗಬಲ ಹೇಗೆ?

[ನಿರೀಕ್ಷಕನು ಬರೆದುದು]

ಯೋಗಬಲ ಹೇಗೆಂದು ನಾನು ಹೇಳಲಾರೆ, ಗ್ರಹಗಳ ಬಲಾಬಲಗಳ ನಿರೀಕ್ಷ ಮಾತ್ರ ಮಾಡಬಲ್ಲೆ. ಅವಕ್ಕೂ ಹೆಚ್ಚಿಗೆ ನನ್ನಿಂದ ಹೇಳ್ಬಾರದು. ಉಚ್ಚ ಗ್ರಹಗಳಿಗೆ ಬಲವಿಲ್ಲವೆಂದೇ ಈಗಿನ ಮಟ್ಟಿಗೆ ನನ್ನ ನಿರೀಕ್ಷೆಯ ಫಲ. ಪ್ರಾಂತಿಕ ಸ್ವಾಯತ್ತತೆಯನ್ನು ಮಾತ್ರ ಕೊಟ್ಟು, ಸಂಯುಕ್ತ ರಾಜ್ಯಪದ್ಧತಿಯ ಸೂಚನೆ ಘಟನೆಯ ವಿಚಾರವನ್ನು ಕಾಲಾಂತರದ ಮೇಲೆ ಹಾಕಿ ಇಂದಿನ ಮಟ್ಟಿಗೆ ಇಕ್ಕಟ್ಟಿನೊಳಗಿಂದ ಪಾರಾಗಬೇಕೆಂದು ಸಾಮ್ರಾಜ್ಯಕರ್ತರು ಹವಣಿಸುತ್ತಾರೆಂಗಿ ಲೋಕವಾರ್ತೆ. ಲೋಕವಾರ್ತೆಯೇಕೆ? ಖಂಡಿತವಾದ ವರ್ತಮಾನವೆಂದು ನಾನು ಹೇಳಬಲ್ಲೆ. ಇದಕ್ಕಾಗಿಯೇ ಹಿಂದುಸ್ಥಾನದಲ್ಲಿಯೂ, ಲಂಡನಿನಲ್ಲಿಯೂ ಲೋಕಮತ ಸಂಗ್ರಹದ ಪ್ರಯತ್ನವು ಒಳಗಿಂದೊಳಗೆ ನಡೆದಿದೆ. ಕಳೆದ ಗುರುವಾರ ಲಂಡನಿನಿಂದ ಹೊರಳಿ ಬಂದ ಶ್ರೀ| ದಿವಾಣ ಚಮನಲಾಲರವರು ಇದೇ ಸುದ್ದಿಯನ್ನು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗೆ ಬಳಿ ಹೇಳಿದರು. ನೇಮಸ್ತರಾದ, ಸರಕಾರದ ಅಂತರಂಗ ಬಲ್ಲವರೆಂದು ಎಣಿಸಬಹುದಾದ ಸರ್ ಚಿಮನಲಾಲ ಸೆಟಲವಾಡ, ಸರ್ ಫಿರೋಜ ಸೇಠನಾ, ನಾ| ಶ್ರೀನಿವಾಸ ಶಾಸ್ತ್ರಿ, ಸರ್ ತೇಜಬಹಾದ್ದೂರ ಸಪ್ರುರವರು ಪ್ರಾಂತಿಕ ಸ್ವಾಯತ್ತತೆಯನ್ನಷ್ಟೇ ಕೊಟ್ಟಲ್ಲಿ ತಮಗೆಂದಿಗೂ ಸಮಾಧಾನವಾಗಲಿಕ್ಕಿಲ್ಲವಾಗಿ ಖಂಡಿತ ಹೇಳಿದ್ದಾರೆ. ನಿಸಂಪಕ್ಕೆ ಮನ್ನಣೆಯನ್ನೀಯದೆ ಸರಕಾರವು ಪ್ರಾಂತಿಕ ಸ್ವಾಯತ್ತತೆಯ ಯೋಜನೆಯನ್ನೇ ಮುಂದರಿಸಿದ್ದಲ್ಲಿ ನೇಮಸ್ತರು ಆ ಯೋಜನೆಯ ಗೊಡವೆಗೆ ಹೋಗಲಿಕ್ಕಿಲ್ಲವಾಗಿ ಮುಂಜಾಗ್ರತೆ ಕೊಟ್ಟಿರುತ್ತಾರೆ. ಈ ಯೋಜನೆಯು ಯೆರವಡಾ ಜೈಲಿಗೆ ರವಾನೆಯಾಗಿರುವದಂತೆ. ಅಲ್ಲಿ ಮನ್ನಣೆ ದೊರೆತರೆ ಸತ್ಯಾಗ್ರಹವನ್ನು ಹಿಂತೆಗೆದುಕೊಳ್ಳಲು ಅಪ್ಪಣೆಯಾಗುವದೆಂದೂ, ಹಾಗೆ ಹಿಂತೆಗೆದುಕೊಂಡರೆ ರಾಜಶಾಸನಗಳು ರದ್ದಾಗಿ ಸತ್ಯಾಗ್ರಹಿ ಕೈದಿಗಳೆಲ್ಲ ಒಮ್ಮೆಲೇ ಬಿಡುಗಡೆಹೊಂದುವರೆಂದೂ ಮಿ| ಹೊರ್ನಿಮನ್ನರವರು ಬರೆಯುತ್ತಾರೆ. ಅವಕ್ಕಾಪ್ಪಣೆ ದೊರೆಯದಿದ್ದರೆ ಆಯುರ್ಮಾನವು ತೀರಿಬಂದ ರಾಜಶಾಸನಗಳಿಗೆ ಪುನಃ ಆಯುರ್ವರ್ಧನವಾಗುವದು. ಪುನಃ ಆಯುರ್ಮಾನ ಮಾಡುವ ನಿರ್ಧಾರವಾಗಿದೆಂದು 'ಫ್ರೀ ಪ್ರೆಸ್' ಪತ್ರಿಕೆಯ ಲಂಡನ್ ಸುದ್ದಿಗಾರರು ಬರೆಯುತ್ತಾರೆ. ಪ್ರಧಾನ ಮಂಡಳಕ್ಕೆ ಹಿಂದುಸ್ಥಾನದಿಂದ ಹೋದ ಪ್ರಮುಖರು ರಾಜಶಾಸನಗಳಿಂದ ಕಾರಭಾರ ನಡಿಸಿದ್ದಲ್ಲಿ ಹಿತವಿಲ್ಲವಾಗಿ ಸಾರಿ ಸಾರಿ ಹೇಳಿದಾಗ್ಯೂ ರಾಜಶಾಸನಗಳನ್ನು ಉದ್ಧರಿಸಿ ರಾಷ್ಟ್ರೀಯ ಸಭೆಯನ್ನು ಬುಡಗೂಡಿ ಸದೆಬಡಿಯಬೇಕೆಂದೇ ಕಲ್ಪಿಸಿದ್ದಾರಂತೆ. “ಪ್ರಧಾನ ಮಂಡಳದ ನಿರ್ಣಯವಾಗಿಲ್ಲೆಂದು ಇನ್ನೂ ತಿಳಿಕೊಳ್ಳಬೇಡಿ, ಆ ಪ್ರಶ್ನೆ ಬಿಟ್ಟುಬಿಡಿ.” ಹೀಗೆ ಮಿ| ಹೊರ್ನಿಮನ್ನರು ಎಚ್ಚರಿಟ್ಟು ಹೇಳುತ್ತಾರೆ. ಬಂಗಾಲದ ಕ್ರಾಂತಿಕಾರಕ ರಾಜಶಾಸನದ ಅವಧಿ ತೀರಿದ್ದರಿಂದ ಹೊಸ ರಾಜಶಾಸನವು ಏರ್ಪಡಿಸಲ್ಪಟ್ಟಿದೆ. ಜೈಲುಗಳು ತುಂಬಿಹೋಗಿದ್ದರಿಂದ ಕೆಲ ಕೈದಿಗಳಿಗೆ ಅಂಡಮಾನಿಗೆ ಕಳಿಸಬಹುದೆಂದು ಪಾರ್ಲಮೆಂಟಿನ ಸಭಾಸದರಾದ ಸರ್ ಚಾರ್ಲ್ಸ್ ಓಮನ್ನರವರು ತಂದ ಸೂಚನೆಯನ್ನು ತಾವು ಆಲೋಚಿಸಿ ತೀವ್ರವಾಗಿ ಭಾರತ ಮಂತ್ರಿಗಳು ಬುಧವಾರ ಸೇರಿದ ಪಾರ್ಲಿಮೆಂಟಿನ ಸಭೆಯಲ್ಲಿ ಉದ್ಗರಿಸಿದರು. ಲೋಕಪ್ರಜ್ಞರು ಬಿನ್‌ಶರ್ತ ಸತ್ಯಾಗ್ರಹವನ್ನು ಹಿಂತೆಗೆದುಕೊಂಡನಕ ಯಾವದೇ ವಿಷಯ ಅವರೊಡನೆ ಮಾತು-ಕಥೆ ನಡಿಸಬಾರದಾಗಿ ಬ್ರಿಟಿಶ ಪ್ರಧಾನ ಮಂಡಳದ ನಿರ್ಧಾರವಾಗಿರುವದಂತೆ. ಸತ್ಯಾಗ್ರಹಿಗಳೆಲ್ಲರೂ ಶೀಘ್ರವೇ ಬಿಡುಗಡೆ ಹೊಂದುವ ಆಶೆಯನ್ನು ಒಮ್ಮೆಲೇ ತ್ಯಜಿಸಬೇಕಾಗಿ ಹೇಳುತ್ತಾರೆ. ಎಲ್ಲರೂ ತಮತಮಗೆ ವಿಧಿಸಿದ ಶಿಕ್ಷೆಯನ್ನು ಅನುಭವಿಸಿ ತೀರಬೇಕಾಗುವದಂತೆ. ತಮಗ ಶೀಘ್ರವೇ ಬಿಡುಗಡೆಯಾಗುವದಾಗಿ ಭವಿಷ್ಯವಾದಿಗಳು ಹೇಳಿದ ಭವಿಷ್ಯವನ್ನು ಕೇಳಿದ ಯೆರವಡಾ ಜೈಲಿನಲ್ಲಿದ್ದವರು ವಿನೋದ ಮಾಡಿದರಾಗಿ ಪ್ರಕಟವಾದ ವರ್ತಮಾನದ ಮೂಲದಿಂದಲೂ ಆತಗೆ ಇಂಬಿಲ್ಲವೆಂದು ಊಹಿಸಬಹುದಾಗಿದೆ. ದೀನಬಂಧು ಎಂಡ್ರ್ಯೂಸರವರು ಮುಖ್ಯ ಪ್ರಧಾನ, ಭಾರತ ಮಂತ್ರಿ ಮೊದಲಾದವರ ಕಡೆ ಸಮಕ್ಷ ಪ್ರಸ್ತುತ ಪರಿಸ್ಥಿತಿಯನ್ನು ಚರ್ಚಿಸುತ್ತಿದ್ದಾರೆ. ತಿಳಿದ ವೃತ್ತದ್ವಾರ 'ಫ್ರೀ ಪ್ರೆಸ್' ಪತ್ರಿಕೆಯ ಲಂಡನಿನ ಪ್ರತಿನಿಧಿಗಳು ದೀನಬಂಧುಗಳ ಕಡೆ ಮುಖ್ಯ ಮಾತನ್ನು ಕೇಳಿದರು. “ಸರಕಾರವು ಮನಸ್ಸು ಒಲಿಯ ಕ್ರಮಗಳನ್ನು ಕೈಕೊಳ್ಳುವದೋ ಹೇಗೆ? ಈಗಿನ ಸ್ಥಿತಿಯಲ್ಲಿ ನನಗೇನು ಆಶಾ ತೋರುವದಿಲ್ಲ” ಹೀಗೆ ದೀನಬಂಧುಗಳು ಉದ್ಗರಿಸಿದರು. ಲೋಥಿಯನ್ ದೊರೆಗಳ ಮಾತೇ ಹಲವರಿಗೆ ನಂಬಿಗೆಯಿತ್ತು. ಹಿಂದುಸ್ಥಾನದ ಸ್ಥಿತಿಯನ್ನು ನೋಡಿದ್ದಾರೆ. ಸಮಕ್ಷ ನೋಡಿದ್ದಾರೆ ಅವನ್ನವರು ಸಾಮ್ರಾಜ್ಯ ಸರಕಾರಕ್ಕೆ ತಿಳಿಸಿ ಹಿಂದುಸ್ಥಾನಕ್ಕೆ ಸಮಾಧಾನವನ್ನುಂಟುಮಾಡುವರಾಗಿ ಒಂದು ನಂಬಿಗೆಯಿತ್ತು. ಸರ್ ಹರ್ಬರ್ಟ ಸೆಮ್ಯುಅಲ್ ಎಂಬ ಪ್ರಮುಖರು ರಾಷ್ಟ್ರೀಯ ಸಭೆಯವರ ಕಡೆ ಒಪ್ಪಂದದ ಮಾತ-ಕಥೆ ನಡಿಸಬೇಕೆಂಬ ಪಂಥದವರೆಂದೂ, ಲೋಥಿಯನ್ ದೊರೆಗಳು ಅವರ ಅಭಿಪ್ರಾಯಕ್ಕೇ ಬಲಕೊಡುತ್ತಾರೆಂದೂ 'ಫ್ರೀ ಪ್ರೆಸ್' ಪತ್ರಿಕೆಯ ಸಿಮ್ಲಾ ಸುದ್ದಿಗಾರರ ವಾರ್ತೆ. ಆದರೆ, ಸರ್ ಹರ್ಬರ್ಟ ಸೆಮ್ಯುಅಲ್‌ರವರ ಅಭಿಪ್ರಾಯಕ್ಕೆ ಪ್ರಧಾನ ಮಂಡಳದಲ್ಲಿ ಬೆಂಬಲವಿಲ್ಲ. ಇದಲ್ಲದೆ ಸತ್ಯಾಗ್ರಹಕ್ಕೆ ನೊಟ್ಟಮೊದಲು ತಡೆಹಾಕದ ಹೊರತು ರಾಷ್ಟ್ರೀಯ ಸಭೆಯೊಡನೆ ಒಪ್ಪಂದದ ಮಾತು-ಕಥೆ ಯುಕ್ತಿದ್ದಲ್ಲಿ ಅಪ್ರತಿಷ್ಠೆಯಾಗುವದೆಂದು ಸರ್ ಹರ್ಬರ್ಟ ಸೆಮ್ಯುಅಲ್‌ರವರೂ ಅಭಿಪ್ರಾಯವಿದೆ. ಇದರಿಂದ ಸೆಮ್ಯುಅಲ್-ಲೋಥಿಯನ್‌ರವರ ಮನೋರಥವು 'ಉತ್ಪದ್ಯಂತೇ ವಿಲೀಯಂತೇ' ವರ್ಗದೊಳಗಿನದು. ಮೇಲಾಗಿ ಲೋಥಿಯನ್ ದೊರೆಗಳ ಅಭಿಪ್ರಾಯವೇ ಭಿನ್ನವಿರುವದೆಂದು 'ಕ್ರಾನಿಕಲ್' ಪತ್ರಿಕೆಯ ಲಂಡನ್ ಪ್ರತಿನಿಧಿಗಳ ಅಂಬೋಣ. ಹೊಸ ರಾಜ್ಯಸುಧಾರಣೆಗೆ ಎಷ್ಟು ವಿರೋಧವಾದಾಗ್ಯೂ ಪ್ರತ್ಯಕ್ಷ ರಾಜ್ಯಘಟನೆ ಪ್ರಾರಂಭವಾದೊಡನೆ ಬಹುಜನಸಮಾಜವು ಇಲೆಕ್ಷನಿನಲ್ಲಿ ಉತ್ಸಾಹದಿಂದ ಸೇರಿ ಈಗಿನ ದಬ್ಬಾಳಿಕೆಯನ್ನೆಲ್ಲ ಒಮ್ಮೆಲೇ ಮರೆತುಬಿಡುವದೆಂದು ಲೋಥಿಯನ್ ದೊರೆಗಳು ಪ್ರಧಾನ ಮಂಡಳಕ್ಕೆ ಅಭಿಪ್ರಾಯ ಹೇಳಿರುವರಂತೆ. ಹೀಗೆ ಮುಖ್ಯ ಭಾರತ ಮಂತ್ರಿಗಳ ಮೂಲ ಆಲೋಚನೆಗೆ ಸಹಾಯಕ ಭಾರತ ಮಂತ್ರಿಗಳು ಅನುಕೂಲರೇ ಹೊರತು ಪ್ರತಿಕೂಲರಲ್ಲ. ಆದರೆ, ಪ್ರಧಾನ ಮಂಡಳದಲ್ಲಿ ಒಂದು ವಿಷಯ ಮಾತ್ರ ಇನ್ನೂ ನಿರ್ಧಾರವಾಗಿಲ್ಲ. ಅದು ಹಿಂದು-ಮುಸಲ್ಮಾನ ಪ್ರಶ್ನೆಯದು. ಹಿಂದುಗಳಿಗೆಷ್ಟು, ಮುಸಲ್ಮಾನರಿಗೆಷ್ಟು, ಅಸ್ಪೃಶ್ಯರಿಗೆಷ್ಟು, ಹೀಗೆ ಜಾತಿವಿಷಯಕ ಪ್ರಶ್ನೆಯ ಕೊನೆಯ ನಿರ್ಣಯ ಇನ್ನೂ ಆಗುವದಿದೆ. ಅದು ಬಹುತರವಾಗಿ ಜಾತಿವಾತ್ಸಲ್ಯದವರ ಹೇಳಿಕೆಯಂತೆ ಒದಗಿಬರದು. ಅವರಿಂದ ಪ್ರಕೃತಿಸ್ವಾಸ್ಥ್ಯದ ನಾಶ ಮಾಡಿ ಮುಸಲ್ಮಾನ ಪ್ರಮುಖರಾದ ಸರ್ ಫಜಲಿ ಹುಸೇನರವರು ಲಂಡನ್ನಿಗೆ ಹೊರಟಿದ್ದಾರೆ. ಡಾ. ಅಂಬೇಡಕರರು ಸುದ್ದಿ-ಸುಳಿವು ಕೊಡದೆ ಹಡಗ ಹತ್ತಿ ಲಗಬಗೆಯಿಂದ ಆ ಕಡೆ ತೆರಳಿದ್ದಾರೆ. ಇನ್ನು ಮೂರು ವಾರಗಳಲ್ಲಿ ರಾಜಶಾಸನಗಳ ಅವಧಿ ತೀರುತ್ತದೆ. ಅಷ್ಟರೊಳಗ ಯಾವದೇ ಒಂದು ನಿರ್ಣಯದ ಜಾಹೀರನಾಮೆ ಹೊರಬೀಳಬೇಕು. ಯೋಗಬಲ ಅನುಕೂಲವಿಲ್ಲವಾಗಿಯೂ, ಪ್ರತಿಕೂಲ ಗ್ರಹಗಳೇ ಬಲಕಾರಿಯಾಗುವವೆಂದೂ ರಾಜಕಾರಣಪಟುಗಳ ಅಂಬೋಣ.

ಅಂತು, ಉಚ್ಚ ಗ್ರಹಗಳು ಪೂರ್ಣ ನಿರ್ಬಲರೆಂದು ನನ್ನಿಂದ ಹೇಳಬರದು. ಪ್ರಾಂತಿಕ ಸ್ವಾಯತ್ತತಾ ವರ್ಗದ ಕೊನೆಯ ನಿರ್ಣಯವಾಗಿದ್ದರೆ ಆ ವಿಷಯ ದೀನಬಂಧು ಎಂಡ್ರ್ಯೂಸರವರ ಕಡೆ ಮುಖ್ಯ ಪ್ರಧಾನರಾಗಲಿ, ಭಾರತ ಮಂತ್ರಿಗಳಾಗಲಿ ಪುನಃ ವಿಚಾರಿಸುತ್ತಿರಲಿಲ್ಲ. ಮುಖ್ಯ ಪ್ರಧಾನರಿಗ ಹಿಂದುಸ್ಥಾನದ ಸಂಪೂರ್ಣ ಸ್ಥಿತಿಯನ್ನು ತಾವರಿಕೆ ಮಾಡಿಕೊಂಡವರಾಗಿ ದೀನಬಂಧುಗಳು ತಿಳಿಸುತ್ತಾರೆ. ಮುಖ್ಯ ಪ್ರಧಾನರ ಅಭಿಪ್ರಾಯವೇನಾಯಿತೆಂದು ಫ್ರೀ ಪ್ರೆಸ್ ಪತ್ರಿಕಾ ಪ್ರತಿನಿಧಿಗಳು ಕೇಳಲು, ಅದನ್ನು ಹೇಳಲಾರದಾಗಿ ಅವರು ನುಡಿದರು. ಮುಖ್ಯ ಪ್ರಧಾನರಾದ ಮಿ| ಮೆಕಡೋನಲ್ಡರವರೂ, ರಾಜಪಕ್ಷದ ಮುಖ್ಯಸ್ಥರಾಗಿ ಪ್ರಧಾನರಾದ ಮಿ| ಬೋಲ್ಡ್‌ವಿನ್ನರವರೂ ಇನ್ನೂ ತಮ್ಮ ಅಭಿಪ್ರಾಯ ನಿರ್ಧರಿಸಲಿಲ್ಲವಾಗಿ ಸಿಮ್ಲಾದೊಳಗಿನ ವಾರ್ತೆ. ಈವರೆಗೂ ಇದ ಸಮಯದಲ್ಲಿ ಇದೇ ಯೋಜನೆಯನ್ನು ತಿದ್ದುಪಡಿ ಮಾಡಿ ಹಿಂದುಸ್ಥಾನದಲ್ಲಿ ಸಮಾಧಾನವನ್ನುಂಟು ಮಾಡಬಹುದಂತೆ. ಸ್ವತಃ ಪರಿಸ್ಥಿತಿಯನ್ನು ನಿರೀಕ್ಷಿಸುವದಕ್ಕಾಗಿ ಮೆಕಡೋನಲ್ಡರು ಹಿಂದುಸ್ಥಾನಕ್ಕೆ ಬರಬಹುದು, ಬೋಲ್ಡ್‌ವಿನ್‌ರೂ ಬರಬಹುದು, ಹೀಗೆ ಲಂಡನಿನಲ್ಲಿ ಒಂದು ವಾರ್ತೆ ಹಬ್ಬಿದ್ದು. ಅದರ ಮೇಲಿಂದ ಹಿಂದೀ ಜನಾಂಗದ ಭವಿಷ್ಯವು ಇನ್ನೂ ನಿರ್ಣಯವಾಗುವದರಲ್ಲಿದೆಯೆಂದು ಎಣಿಸಬೇಕಾಗಿದೆ. ಪ್ರಯಾಗದ ರಾ| ಚಿಂತಾಮಣಿಯವರೂ ಸರಕಾರದ ನಿರ್ಧಾರವಾಗಿಲ್ಲವಾಗಿ ಹೇಳುತ್ತಾರೆ. ಚಿಂತಾಮಣಿಯವರು ನೇಮಸ್ತಾಗ್ರಣಿಗಳು, ಲೋಥಿಯನ್ ಜಾಕಿ ಮಂಡಳದ ಸಭಾಸದರು. ಸರಕಾರದ ಅಂತರಂಗ ಇವರಿಗೆ ಹೆಚ್ಚಾಗಿ ಗೊತ್ತಾಗಿರಬೇಕೆಂದು ನನಗೆನಿಸುತ್ತದೆ. ಇವೆರಡರ ಮೇಲಿಂದ ಪ್ರಧಾನ ಮಂಡಳದ ಸಭೆಗಳು ಲಂಡನಿನಲ್ಲಿ ಮೇಲಿಂದ ಮೇಲೆ ಆಗಹತ್ತಿವೆ. ಈ ವಾರದ ಮಹಿಮೆಯು ದೊಡ್ಡದೆಂದು ದೀನಬಂಧು ಎಂಡ್ರ್ಯೂಸರವರು ಉದ್ಗರಿಸಿದ ವಾರ್ತೆಯಿದೆ. ಹಿಂದುಸ್ಥಾನದ ದೃಷ್ಟಿಯಿಂದ ಈ ವಾರ ಮಹತ್ವದ್ದಂತೆ. ಲಂಡನಿನೊಳಗಿನ ಪಾದ್ರಿಗಳೆಲ್ಲರೂ ಹಿಂದುಸ್ಥಾನದೊಳಗೆ ಪ್ರಜೆಗಳನ್ನು ಮಮತೆಯಿಂದ ನಡಿಸಿಕೊಳ್ಳಬೇಕಾಗಿ ಸಾಮ್ರಾಜ್ಯ ಸರಕಾರಕ್ಕೆ ಬಿನ್ನಹ ಮಾಡಿಕೊಳ್ಳುವವರಿದ್ದಾರೆ. ಇದಕ್ಕಾಗಿಯೇ ಒಕ್ಕಟ್ಟಾಗಿ ಎಲ್ಲರ ಅಭಿಪ್ರಾಯ ತಿಳಿಸಬೇಕಾಗಿ ರಾ| ಚಿಂತಾಮಣಿ

ಯವರು ಆಗ್ರಹ ಮಾಡುತ್ತಾರೆ ಈ ಲಕ್ಷಣಗಳೆಲ್ಲ ಕೊನೆಯ ನಿರ್ಣಯವಾಗಲಿಲ್ಲವಾಗಿ ಸೂಚಿಸುತ್ತವೆ. ಕಲಕತ್ತೆಯ ಯುರೋಪಿಯನ್ ಸಂಘದ ಪ್ರತಿನಿಧಿಗಳಾಗಿ ಲಂಡನಿಗೆ ಹೋದ ಮಿ| ಬೆಂಥೋಲರವರು ಪದ್ಯಕರ ನುಡಿಗಳನ್ನೇ ಆಡಹತ್ತಿದ್ದಾರೆ: "ಹಿಂದುಸ್ಥಾನದ ಸ್ಥಿತಿ ಕ್ರಮವಾಗಿ ಕೆಡಲಾರಂಭಿಸಿದೆ. ಶೀಘ್ರವೇ ಉಪಾಯಯೋಜನ ಮಾಡಿರಿ, ಎಷ್ಟಕ್ಕೂ ಕಾಲಹರಣ ಮಾಡಬೇಡಿ, ನೇಮಸ್ತರಿಗೆ ಸಮಾಧಾನ ಮಾಡಹೋಗಬೇಡಿ ಹಿಂದುಸ್ಥಾನದಲ್ಲಿ ಅವರಿಗೆ ಅನುಯಾಯಿಗಳಿಲ್ಲ, ಅವರ ಹೆಸರು ಮಾತ್ರ ದೊಡ್ಡದು" ಹೀಗೆ ಮಿ| ಬೆಂಥೋಲರವರು ನುಡಿಯುತ್ತಾರೆ ಕೂಲಿಕಾರ ಪಕ್ಷದ 'ಡೇಲಿ ಹೆರಲ್ಡ' ಪತ್ರಿಕೆ ಸಹ ಸಾಮ್ರಾಜ್ಯ ಸರಕಾರಕ್ಕೆ ಸಾಹಸದಿಂದ ಮುಂದಾಗಿ ಹಿಂದುಸ್ಥಾನದಲ್ಲಿ ಸಮಾಧಾನ ನೆಲಿಸಲು ಬುದ್ಧಿ ಹೇಳಹತ್ತಿದೆ. 'ಎಕೊನೊಮಿಸ್ಟ' ಎಂಬ ಲಂಡನಿನ ಅರ್ಥಸಾಧಕ ಪತ್ರಿಕೆಯು ರಾಜಶಾಸನಗಳಿಂದ ಹಿಂದುಸ್ಥಾನದ ಸ್ಥಿತಿ ಸುಧಾರಿಸುವ ಬದಲು ಕೆಂಗೆಟ್ಟಿರುವದಾಗಿಯೂ, ವರ್ತಕ-ಉದ್ದಿಮೆಯವರಂಥ ವ್ಯವಹಾರಜ್ಞರು ಈ ಸ್ಥಿತಿ ಸುಧಾರಿಸುವ ಪ್ರಯತ್ನ ನಡಿಸಬೇಕಾಗಿಯೂ ಪ್ರತಿ ಸಂಚಿಕೆಯಲ್ಲಿ ಬರವಣಿಗೆ ಬರೆಯುತ್ತಿದೆ ಅದಕ್ಕಿಂತ ಲಂಡನಿನ 'ಡೇಲಿ ಎಕ್ಸಪ್ರೆಸ್' ಪತ್ರಿಕೆಯೊಳಗಿನ ಸುದ್ದಿ ವಿಶೇಷವಾದದ್ದು 'ಡೇಲಿ ಎಕ್ಸಪ್ರೆಸ್' ಪತ್ರಿಕೆ ರಾಷ್ಟ್ರೀಯ ಸಭೆಯ ವಿರೋಧ ಬಗೆಯುತ್ತದೆ. ಅದರೊಳಗೆ ಕಳೆದ ಬುಧವಾರ 'ಪ್ರಮುಖ ಹಿಂದೀ ಕಾಯಿದೆ ಕೌನ್ಸಿಲು ಸಭಾಸದರ' ಸಿನಾಪಿ ಮಜಕೂರು ಪ್ರಕಟವಾಗಿದೆ ಹಿಂದುಸ್ಥಾನದಲ್ಲಿ ಬ್ರಿಟಿಶ ಸರಕಿನ ಬಿದ್ದ ಬಹಿಷ್ಕಾರವನ್ನು ಅಂತ್ಯಪಡಿಸುವದಕ್ಕಾಗಿ ಬ್ರಿಟಿಶ ಹಾಗು ಹಿಂದೀ ವರ್ತಕರ ಪರಿಷತ್ತನ್ನು ಸೇರಿಸುವ ವಿಚಾರ ನಡೆದದಾಗಿಯೂ, ಆ ಕುರಿತು ಒಂದು ಕೈಫೀಯತು ತಯಾರಾಗಿದ್ದು ಅದು ಹಿಂದುಸ್ಥಾನದಿಂದ ಲಂಡನಿಗೆ ಸದ್ಯಕ್ಕೇ ತಲ್ಪುವದಾಗಿಯೂ, ಈ ಪರಿಷತ್ತಿನಿಂದ ಬ್ರಿಟಿಶ-ಹಿಂದುಸ್ಥಾನ ದೇಶಗಳೊಳಗಿನ ವ್ಯಾಪಾರದ ತೊಡಕುಗಳು ನಿವಾರಣೆ ಹೊಂದುವವಾಗಿಯೂ 'ಎಕ್ಸಪ್ರೆಸ್' ಪತ್ರಿಕೆಯ ಆಶೆ ಈ ಸುದ್ದಿ ತಾವರಿಯವಾಗಿ ಲಂಡನಿನೊಳಗಿನ ಹಿಂದೀ ವರ್ತಕ ಸಂಘದ ಅಧ್ಯಕ್ಷರಾದ ರಾ| ಎದುಲ್ಕರರವರು ಪ್ರಕಟಿಸುತ್ತಾರೆ ಸುದ್ದಿಯೇನೋ ಸಣ್ಣದು, ಆದರೆ, ಲಂಡನಿನೊಳಗಿನ ವರ್ತಕ ಪ್ರಮುಖರಿಗೆ ಹಿಂದೀ ವರ್ತಕರೊಡನೆ ಸ್ನೇಹಭಾವ ಬೆಳೆಸಬೇಕೆಂಬ ಇಚ್ಛೆಯುಂಟಾಗಿದೆ. ವರ್ತಕ ಪ್ರಮುಖರು ಒಪ್ಪಂದ ಮಾಡಿಕೊಂಡರೆ ಹಿಂದುಸ್ಥಾನದ ರಾಜಕಾರಣದೊಳಗಿನ ಕೂಟಸ್ಥ ಶೋಧನೆಯಾದಂತೆಯೇ 'ಮುಂಬಯಿ ಕ್ರೊನಿಕಲ್' ಪತ್ರಿಕೆಯ ಲಂಡನಿನ ಪ್ರತಿನಿಧಿಗಳು ಮೇ ೨ನೇ ತಾರೀಖಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ ಒಂದು ಸಂಗತಿ ಹಿಂದುಸ್ಥಾನಕ್ಕೆ ಉಪಯೋಗಕಾರಕವಿದೆ ಇಂಗ್ಲಂಡಾದಿ ದೇಶಗಳಿಗೂ, ರಶಿಯಾ ದೇಶಕ್ಕೂ ಮನಸ್ಥಿತಿ ನೆಟ್ಟಗಿಲ್ಲ. ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ರಶಿಯಾ ದೇಶದ ಪ್ರತಿನಿಧಿಗಳಾದ ಎಮ್. ಲಿಟವಿನೊಫರವರು ತಂಡದನ್ನಾಡಿ ಬ್ರಿಟಿಶ-ಫ್ರೆಂಚಾದಿ ಸನ್ಯಾಸಿಗಳ ಶಸ್ತ್ರಸಂಸಾರದ ಬಿಂಡು ಹೊರಹಾಕಿಬಿಟ್ಟಿದ್ದಾರೆ ಇಡೀ ಯುರೋಪ ಖಂಡದಲ್ಲಿ ಈಗ ಸಮೃದ್ಧವಾದ ದೇಶವೆಂದರೆ, ರಶಿಯಾ ದೇಶವೇ ಇಂಗ್ಲಂಡ, ಫ್ರಾನ್ಸ, ಜರ್ಮನಿ, ಅಮೇರಿಕಾ ದೇಶಗಳಲ್ಲಿ ಉದ್ಯೋಗವಿಲ್ಲದ ಲಕ್ಷಾವಧಿ ಜನರು ಅಲೆದಾಡುತ್ತಿದ್ದಾರೆ. ಅವರಿಗಲ್ಲಿ ಆಯಾ ಸರಕಾರಗಳು ಧರ್ಮ ಕೇಮು ಸಾಕಬೇಕು. ಈ ರಾಷ್ಟ್ರಗಳು ಮೊದಲೇ ಜಮಾ-ಖರ್ಚು ಬಾಯಿಗೂಡುವದಿಲ್ಲವಾಗಿ ಒದ್ದಾಡುತ್ತಿವೆ, ಅದರೊಳಗೆ ನಿರುದ್ಯೋಗಿಗಳ ಧರ್ಮಪಟ್ಟಿ! ಬರಗಾಲದಲ್ಲಿ ಅಧಿಕಮಾಸ ಬಂದಂತಾಗಿದೆ. ರಶಿಯಾ ದೇಶದಲ್ಲಿ ಅಂಥ ಎಡರುಗಳಿಲ್ಲ ಅಲ್ಲಿ ನಿರುದ್ಯೋಗಿಗಳಿಲ್ಲ ಬೇಸಾಯವನ್ನು ಉದ್ಧರಿಸುವದಕ್ಕಾಗಿ ಹೊಸಹೊಸ ಯಂತ್ರ ಸಾಮುಗ್ರಿಗಳು ಅಲ್ಲಿ ತಯಾರಾಗಿವೆ ಈ ಪ್ರಕಾರ ಇಂಗ್ಲಂಡ, ಫ್ರಾನ್ಸ ಮೊದಲಾದ ಸಂಪನ್ನ ರಾಷ್ಟ್ರಗಳು ಹಣದ ಅಡಚಣೆಯಲ್ಲಿರುವಾಗ, ರಶಿಯಾ ದೇಶವು ಸಂಪನ್ನವಾಗಿದೆ ಕಳೆದ ತಿಂಗಳಲ್ಲಿ ತುರ್ಕಸ್ಥಾನದ ಮುಖ್ಯ ಪ್ರಧಾನರಾದ ಇಸ್ಮೆತ್ ಪಾಶಾರವರು ಮಾಸ್ಕೋ ಪಟ್ಟಣಕ್ಕೆ ಹೋಗಿ ೨೦ ವರ್ಷಗಳ ಮುದತ್ತಿನ ಮೇಲೆ ೮೦ ಲಕ್ಷ ಡಾಲರು([illegible] ರೂಪಾಯಿ)ಗಳ ಸಾಲ ಪಡೆದಿದ್ದಾರೆ. ತುರ್ಕಸ್ಥಾನದಲ್ಲಿ ರಶಿಯಾ ದೇಶದಂತೆಯೇ ಬೇಸಾಯ-ಉದ್ದಿಮೆಗಳ ಸುಧಾರಣೆ ಮಾಡಿ ದೇಶವನ್ನು ಸಮೃದ್ಧಗೊಳಿಸುವ ಪ್ರಯತ್ನ ನಡೆದಿದೆ ಇಟಾಲಿಯಿಂದ ೩—೩| ಕೋಟಿ ಹಣದ ಸಾಲವನ್ನು ತುರ್ಕಸ್ಥಾನವು ಪಡೆದಿದೆ ಹೀಗೆ ರಶಿಯಾ ದೇಶದ ಪ್ರತಿಷ್ಠೆ ಬೆಳೆಯುತ್ತಿದೆ ಇದು ಬ್ರಿಟಿಶ-ಫ್ರೆಂಚ-ಜಪಾನ ದೇಶಗಳಿಗೆ ಗಂಡಾಂತರ ರಶಿಯಾ ದೇಶದ ಮೇಲೆ ಸವಾರಿ ಮಾಡಿ ಸಾಗಿ ಹೋಗಬೇಕೆಂಬ ವಿಚಾರವಿರುವದಂತೆ. ರಶಿಯಾ ದೇಶಕ್ಕೆ ಒಂದ ಸೊಕ್ಕು ಮುರಿಯಬೇಕಾಗಿ ಇವರು ಹವಣಿಸುತ್ತಾರೆ. ಅದಕ್ಕಾಗಿ 'ಹಿಂದುಸ್ಥಾನದೊಳಗೆ ಹ್ಯಾಗಾದರೂ ಮಾಡಿ ಸಮಾಧಾನ ಮಾಡಿರಿ, ಅಲ್ಲಿ ಸಮಾಧಾನ ನೆಲೆಸಿದ್ದರೆ ರಶಿಯಾ ದೇಶದ ವಿರುದ್ಧ ನಡೆಯುವ ಕಾರ್ಯಕ್ರಮಕ್ಕೆ ತಕ್ಕ ಬಲ ಸಿಗದು," ಎಂಬದಾಗಿ ಅನೇಕರು ಆಗ್ರಹ ಮಾಡುತ್ತಾರೆಂದು 'ಕ್ರೊನಿಕಲ್' ಪತ್ರಿಕೆಯ ಲಂಡನಿನ ಪ್ರತಿನಿಧಿಗಳು ಬರೆಯುತ್ತಾರೆ ವಿಲಂಬವಾಗಬಾರದಾಗಿಯೂ ಇವರ ಹೇಳಿಕೆಯಿರುತ್ತದಂತೆ ರಾಜಶಾಸನಗಳ ಅವಧಿ ತೀರುತ್ತಬಂತು ಈವಾಗಲೇ ಯಾವದೊಂದು ನಿರ್ಣಯ ಕೈಕೊಳ್ಳಬೇಕಾಗಿದೆ ಒಂದು ವಾರ, ಹೆಚ್ಚೆಂದರೆ ಒಂದು ಪಕ್ಷವೆಲ್ಲ ಎಲ್ಲ ಬಣ್ಣ ತಿಳಿದೀತು ಇದೇ ಮುಂದೆ ಬರುವ ಜುಲೈ ತಿಂಗಳಲ್ಲಿ ಗ್ರಹಕುಂಡಲಿಯೊಳಗೆ ರಶಿಯಾ-ಜಪಾನಗಳಿಗೆ ಯುದ್ಧವಾಗುವ ಭಯಂಕರ ಯೋಗವಿರುವದೆಂದು ಹೊಸರಿತ್ತಿ ಪಂಡಿತ ಶಂಕರ ಶಾಸ್ತ್ರಿಗಳ ಭವಿಷ್ಯ ಈ ಪ್ರಕಾರ

ನನಗೆ ಕಂಡ ಅಂತರಂಗ—ಬಹಿರಂಗ ಸೂತ್ರಗಳನ್ನಷ್ಟು ಸಂಕ್ಷಿಪ್ತವಾಗಿ ಇಲ್ಲಿ ನಿವೇದಿಸಿದ್ದೇನೆ ಯೋಗಬಲವು ಅನುಕೂಲವಾದದ್ದೋ, ಪ್ರತಿಕೂಲವಾದದ್ದೋ? ನಾನೇನು ಹೇಳಲಿ? ಓದುಗರು ಈ ಸೂತ್ರಗಳನ್ನೆಲ್ಲ ಪರಾಂಬರಿಸಿ ಗ್ರಹಿಕೆ ಪಡೆದರಾಯಿತು.—

—ದಿಲ್ಲಿಯಲ್ಲಿ ಸ್ವದೇಶಿ ಹಸ್ತಪತ್ರಿಕೆಗಳನ್ನು ಹಂಚಿ ಪಿಕೆಟಿಂಗ ರಾಜಶಾಸನದಂತೆ ಅಪರಾಧವಾಯಿತೆಂದು ಇಬ್ಬರು ಸ್ತ್ರೀಯರ ಮೇಲೆ ಖಟ್ಲೆಯಾಗಿತ್ತು ಅಪರಾಧವಾಗುವದಿಲ್ಲವಾಗಿ ಅವರಿಗೆ ಬಿಟ್ಟಿದೆ

— ಮುಂಬಯಿಯ ಪೋಸ್ಟಮಾಸ್ತರ ಜನರಲ್‌ರಾದ ರಾ| ಜೆ ವ್ಹಿ. ಬೇಪೂರರವರ ಚಾಲಕತ್ವದಲ್ಲಿ ಪುಣೆಯ ಡೆಕ್ಕನ ಕಾಲೇಜಿನ ಮಾಜಿ ವಿದ್ಯಾರ್ಥಿಗಳ ಸಂಘ ಸ್ಥಾಪನೆಯಾಗಿದೆ ಸಂಘಕ್ಕೆ ಸೇರಬೇಕೆನ್ನುವವರು ರಾ| ಬೇಪೂರರ ಕಡೆ ಪತ್ರವ್ಯವಹಾರ ನಡಿಸತಕ್ಕದ್ದು.

ವಾರ್ತೆಗಳು.

— ಮುಂಬಯಿಯೊಳಗಿನ ದೊಂಬಿ ಈ ವಾರವಲ್ಲ ಶಾಂತವಾಯಿತು. ಕೆಲವೆಡೆ ಅಧಮರು ಚೂರಿ ಹಾಕಿದ ವಿವಿಧ ವಾರ್ತೆ ಬರುತ್ತದೆ ಆದರೆ, ದೊಂಬಿಯ ಅಬ್ಬರ ಹಿಂಗಾಯಿತು ರಾತ್ರಿ ಓಣಿಗಳಲ್ಲಿ ಅಡ್ಡಾಡಬಾರದು, ದೊಣ್ಣೆ, ಕೀರ್ಪಾನ, ಚೂರಿ ಮೊದಲಾದ ಆಯುಧಗಳನ್ನು ಧರಿಸಬಾರದು, ಮೊದಲಾದ ಕಟ್ಟಪ್ಪಣೆಯಿಂದ ಹಾಗೂ—ಪ್ರೇಕ್ಷಕರು ಹಣ್ಣಿಗೆ ಬಂದರು ದೊಂಬಿಯಾಗಲು ಬುದ್ಧಿಕುಶಲರೇ ಕಾರಣರೆಂದೂ, ಅವರಿಗೆ ಹಣದ ಅನುಕೂಲತೆಯಾಗುತ್ತದೆಂದೂ, ಶಾಂತತೆಯ ಸ್ಥಾಪನೆಗಾಗಿ ನೇಮಿಸಲ್ಪಟ್ಟ ನಾಗರಿಕ ಸಭೆಯ ಪ್ರಕಟಣೆ. ಈ ಕುರಿತು ಮುಂಬಯಿ ಸರಕಾರವು ಚೌಕಸಿ ನಡಿಸಬೇಕಾಗಿಯೂ ಸೂಚಿಸೋಣಾಗಿದೆ ವರಿಷ್ಠ ಕಾಯಿದೆ ಕೌನ್ಸಿಲಿನ ಸಭಾಸದರೊಬ್ಬರು ಮುಂಬಯಿ ದಂಗೆಗೆ ಮೌಲಾನಾ ಶೌಕತ ಅಲ್ಲಿಯವರೇ ಕಾರಣರೆಂಬರ್ಥದ ಒಂದು ಸವಾಲನ್ನು ಸರಕಾರಕ್ಕೆ ಕೇಳಿದ್ದರು "ಇದು ತೀರ ಸುಳ್ಳು, ನನಗೆ ಸರಕಾರದ ಕಡೆಯಿಂದ ಏನೊಂದೂ ಹಣ ದೊರಕುವದಿಲ್ಲ. ಸರಕಾರದ ಕಡೆಯಿಂದ ಹಣ ದೊರಕುತ್ತದಾಗಿ ಹೊರಟ ಸುದ್ದಿ ನಿರಾಧಾರವಿದೆ ನಮ್ಮ ಒಳ್ಳೇತನದ ಹಾಗು ಸಹನಶೀಲತೆಯ ದುರುಪಯೋಗ ಮಾಡಿ ದುಷ್ಟ ಆರೋಪಗಳು ಹೊರಿಸಲ್ಪಡುತ್ತವೆ. ಅದಕ್ಕಾಗಿ ಸುಳ್ಳು ಸುದ್ದಿ ಹರಡಿದ ವರ್ತಮಾನಪತ್ರಗಳ ಮೇಲೂ, ಜನರ ಮೇಲೂ ಖಟ್ಲೆ ಮಾಡುವದಕ್ಕಾಗಿ ವಕೀಲರ ಕಡೆ ಕಾಗದ ಪತ್ರಗಳು ಕಳಿಸಲ್ಪಟ್ಟಿವೆ" ಇತ್ಯಾದಿ ಬರೆದು ಮೌ| ಶೌಕತ ಅಲ್ಲಿಯವರು ದೊಡ್ಡ ಪ್ರಕಟಣೆಯನ್ನೇ ಹೊರಡಿಸಿಬಿಟ್ಟಿದ್ದಾರೆ

— ಈ ಬಾರಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ [illegible] ವಿದ್ಯಾರ್ಥಿಗಳು ಕೂತಿದ್ದರು ಅವರಲ್ಲಿ ೬೨೦೬ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದರು ಶೇಕಡಾ ೩೮ರಷ್ಟು ವಿದ್ಯಾರ್ಥಿಗಳ ತೇರ್ಗಡೆಯಾಯಿತು

— ಜೂನ ೪ನೇ ತಾರೀಖಿನ ಸಂಜೆ ಮುಂಬಯಿಯಲ್ಲಿ ಪೋಲೀಸರು ಪಕ್ಕನೆ ಮುತ್ತಿಗೆ ಹಾಕಿ ಏಳ ಕಾಂಗ್ರೆಸ ಚಾಲಕರಿಗೆ ಸೆರೆಹಿಡಿದರು ಸೆರೆಹಿಡಿಯುವಾಗ ಅವರೆಲ್ಲರೂ ಮಾತಾಡುತ್ತ ಕುಳಿತಿದ್ದರಂತೆ! ಪೋಲೀಸರು ಈ ಸಮಯ ಖಾದಿ ಯುನಿಫಾರ್ಮಗಳನ್ನು ಧರಿಸಿದ್ದರು! ಈ ಮುತ್ತಿಗೆಯಲ್ಲಿ ಮುಂಬಯಿಯೊಳಗಿನ [illegible] ಚಳವಳಿಗೆ ಸಂಬಂಧಪಟ್ಟ ಮಹತ್ವದ ಅನೇಕ ದಾಖಲೆಗಳು ಪೋಲೀಸರಿಗೆ ದೊರೆತವಂತೆ. ಮುಂಬಯಿಯಲ್ಲಿ ಪಿಕೆಟಿಂಗ ಮಾಡಿದ ಬಗ್ಗೆ ಅನೇಕರಿಗೆ ಸೆರೆಹಿಡಿಯೋಣಾಯಿತು 'ಕಾಂಗ್ರೆಸ ಬುಲೆಟಿನ್' ಮಾರುವ ಹುಡುಗನು ತನಗೆ ಚೇಷ್ಟೆ ಮಾಡಿದನೆಂಬ ಒಬ್ಬ ಹುಡುಗನ ಮೇಲೆ ಪೋಲೀಸ ಪೇದೆಯು ಮುದ್ರಣಶಾಸನದಂತೆ ಮಾಡಿದ ಖಟ್ಲೆಯಲ್ಲಿ ಹುಡುಗನಿಗೆ ೪ ತಿಂಗಳ ಶಿಕ್ಷೆ ವಿಧಿಸಲಾಗಿದೆ!

——ನಾ| ವಿಠ್ಠಲಭಾಯಿ ಪಟೇಲರವರ ಪ್ರಕೃತಿ ಸುಧಾರಿಸಿದೆ ವ್ಹಿಯೆನ್ನಾದಿಂದ ಅವರು ಇಂಗ್ಲಂಡಕ್ಕೆ ಹೋಗಿರುತ್ತಾರೆ

— ಪ್ರಯಾಗದೊಳಗಿನ ಸಿ ಎ ವ್ಹಿ ಸ್ಕೂಲಿನ ಮುಖ್ಯಾಧ್ಯಾಪಕರಾಗಿದ್ದ ಯುರೋಪಿಯನ್ ಗೃಹಸ್ಥರು ಕಾಂಗ್ರೆಸ ಬುಲೆಟಿನ್ನುಗಳನ್ನು ತಯಾರಿಸುತ್ತಾರೆಂಬ ಸಂಶಯದ ಮೇಲೆ ಅವರಿಗೆ ಸೆರೆಹಿಡಿಯೋಣಾಗಿದೆ ಅಲ್ಲಿಯ 'ಅಲಹಾಬಾದ ಪ್ರಿಂಟಿಂಗ' ಮುದ್ರಣಾಲಯವನ್ನು ಸರಕಾರವು ಕೈವಶಮಾಡಿಕೊಂಡಿದೆ.

ನಿಬಂಧದೊಳಗಿರುವ ‘ವೃತ್ತ’ದ ಸಂಚಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಜೋರಿನಿಂದ ಬೀಳುತ್ತದೆ ಹವೆಯಲ್ಲಿ ವಿಲಕ್ಷಣವಾದ ತಂಪು ಹುಟ್ಟಿದೆ ಬತ್ತ [illegible] ತೀಸ ಯುದ್ಧ ರೊತಗಿದ್ದರೆ ಅಕ್ಕಿಯು ದರ ೮೪–೮೦ ಖಾಕೆ ಪಡತು ಮಾರಿಗೆ ೧೧ಕ್ಕೆ ರೂ ೫|–೫–೬ ಹೀಗೆ ದರವಾಗಿದೆ

ಮೇ ತಾ ೨೯ನೇ ಅಲ್ಲಿಯ ಅರ್ಬನ್ ಬೇಂಕಿನ ವಾರ್ಷಿಕ ಸಾಧಾರಣ ಸಭೆಯು ಶ್ರೀ ವಸ್ತಾಳಿಸಾ ದೇವಸ್ಥಾನದಲ್ಲಿ ನೆರೆಯಿತು ಈ ಸಭೆಯಲ್ಲಿ ಬೇಂಕಿನ ಆಡಳಿತವು ಕಾರ್ಯತು ಪ್ರಶ್ನೆ ಚರ್ಚೆಯಾಗುವದರಿಂದ ಸಭಾಸದರು ೧೦-೫ ತಾಸು ವಾದವಿವಾದವಾಗಿದೆ ಎಂಬ ಗಟ್ಟಿ ಹೋರುತ್ತಿದ್ದರು ಆದರೆ, ಸಭಾಸದರು ಅಷ್ಟು ಮುಂಬೆಕವಾಗಿ ನೆರೆದಂತೆ ದೇವಸ್ಥಾನದ ಬಾಗಿಲುಗಳನ್ನು ಮುಚ್ಚಿ [illegible] ಸಭೆ ನಿಂತು [illegible] ಬೋರ್ಡ ಮಂಜೂರ ಮಾಡತಕ್ಕೆಂಬ ಸೂಚನೆಯನ್ನು ಸಭಾಧ್ಯಕ್ಷರು [illegible] ಸೂಚಿಸಿದರು ಅನುಮೋದಿಸಿ ವಿಶ್ವಾಸದ ಕೃತಿಯು [illegible] ವಿಚಾರದಲ್ಲಿ ವಾದರಿಂದ ಆದಷ್ಟು [illegible] ಮುಂಜೂರ ಮಾಡಬಹುದೆಂದು [illegible] ಬಹುಮತದಿಂದ [illegible] ಡಿರೆಕ್ಟರ್ ಮಂಜೂರ ಮಾಡಿಕೊಳ್ಳಲ್ಪಟ್ಟಿತು [illegible] ಈಗಿನ ಸೆಕ್ರೆಟರಿಗೆ ಬದಲಾಗಿ ಮಾಡಬೇಕೆಂದು ಆದಕ್ಕೆ [illegible] ವ್ಯವಸ್ಥಾಪಕ [illegible] ಇಳದವರು ಒಪ್ಪದ್ದರಿಂದ ಕರಾ ಒದಗಿದ್ದರೆ ಈಗಿನ ಸೆಕ್ರೆಟರಿಯವರಿಗೆ ಬೇಂಕಿನಲ್ಲಿ ಯಾವದೇ ತರದ ಸಂಬಂಧವೂ ಉಳಿಯದಂತಾಗಿ ಅಭಿಪ್ರಾಯ ನಮೂದಿಸಿದ್ದು ವರ್ಗಾವ ಕಡಿಮೆ ಯೆಂದು (ಈಗ ರೂ ೩೦ ವರ್ಗಾವ ಇದೆ) ಸೆಕ್ರೆಟರಿಯವರು ಮನೆಬೇಂಗ ಕಮಿಷನಿಗೆ ಬರೆದು ಪದತ್ಯಾಗವು ಅಪ್ಪಣೆ ಕೊಟ್ಟ [illegible] ನೀವ ಮುನ್ನ ಕೊಟ್ಟರು ಅದನ್ನು ಮನೆಬೇಂಗ ಕಮಿಟಿಯವರು ಅಂಗೀಕರಿಸಿ ಹೊಸ ಸೆಕ್ರೆಟರಿಯು ನೇಮಣೂಕಿಯಾಗುವ ವರೆಗೆ ಈ ಸೆಕ್ರೆಟರಿಯವರು ಕೆಲಸ ನಡೆಸಬೇಕೆಂದು ಅವರನ್ನು ವಿನಂತಿಕೊಂಡಿದ್ದಾರೆ ಈ ವರ್ಷ ಬೇಂಕಿಗೆ ೩೬೮ ರೂ ೭೦೦ ಮುನಾಫೆಯಾಗಿದೆ ಮುದ್ದತಿನ ಠೇವಣಿಗಳು ಸುಮಾರು ೨ ಲಕ್ಷಕ್ಕೆ ಮಿಕ್ಕಿದೆ ಮುಂಬಯಿ ಪ್ರಾಂತ ಬೇಂಕಿನಲ್ಲಿ ಠೇವು ಇರುವಷ್ಟು [illegible] ದಿಂದ [illegible] ಮುನಾಫೆ ಹಂಚಬಾರದೆಂದು [illegible] ಸೂಚನೆ ಬಿದ್ದುಹೋಗಿ ಠೇವಿ ಹರಿಂತೆ ಮುನಾಫೆ ಹಂಚಬೇಕಾಗಿಯೂ ಹೀಗೆ ಹಂಚಲು ಕಡಿಮೆ ಬೀಳುವ ಹಣವನ್ನು ರಿಸ್ಸೀರ್ವ ಫಂಡಿನಿಂದ ತೆಗೆದುಕೊಳ್ಳಬೇಕಾಗಿಯೂ ಠರಾವಾಗಿದೆ ಈ

ಸಭೆಯ [illegible] ಸಭಾಸದರ ಮತಸಂಗ್ರಹಕ್ಕಾಗಿ ನಡೆದ ಪ್ರಯತ್ನವು ಪ್ರಶಂಸನೀಯವಿದೆ ವೋಟು [illegible] ಸಭಾಸದರು ಸಭೆಗೆ ಬಾರದಿದ್ದರು ಅಷ್ಟು ಕ್ಕಿಂತ ಮತ ಪ್ರತಿನಿಧಿತ್ವದ ಅವಶ್ಯಕತೆಯು ಒದಗಬಾರದೆಂದು ವಿನಾರಣೆಯಾಗುವದಾಗಿ ಸಭೆಗೆ ಬಾರದ ಮತದಾರರು [illegible] ತಿಳಿಸುತ್ತಾರೆ ಮುಂಬಯಿ ಸರಕಾರ ೧೦೦೦ಕ್ಕೆ ಮಿಕ್ಕಿವೆ ಶ್ರೀ ದೇವಸ್ಥಾನದಲ್ಲಿ ೩೦೦–೫೦೦ ಜನರಿಗೆ ಕೂಡ್ರಲು ಸ್ಥಳವಿಲ್ಲದೆ ಮುಂಬಯಿ ಬೇರೆ ಕಟ್ಟಬೇಕಾಗಿದ್ದು ಮುಂಬಯಿ ಸರಕಾರ ೧|| ಲಕ್ಷದಷ್ಟು ರಸ್ತೆ ಮಾಡಿಸುತ್ತಿದ್ದು ಅದರಲ್ಲಿ ರೂ ೩೦ ಬಿಚ ಸಾವಿರ ಪಡ್ಡಿ ಕಟ್ಟಿ ಬಡ್ಡಿಯಾಗಿರುತ್ತದೆ ಹೊಸ ಮನೆಬೇಂಗ ಕಮಿಟಿಯಲ್ಲಿ ಹಳೇ ಮನೆಬೇಂಗ ಕಮಿಟಿಯವರೇ ಮುಖ್ಯವಾಗಿ ಆರಿಸ ಬಂದಿರುತ್ತಾರೆ ಸೆಕ್ರೆಟರಿ ಸ್ಥಳಕ್ಕೆ ರೂ ೮೦೦ ಇಷ್ಟು ಸಂಬಳ ಕೊಡುವಂತೆ ಸರಕಾರಕ್ಕೆ ಬರೆದು ಕೊಳ್ಳಬೇಕೆಂದು ಠರಾವಾಗಿರುತ್ತದೆ

ಇಲ್ಲಿಯ “ಕರ್ನಾಟಕ ಧ್ವನಿ” ಪತ್ರಿಕೆಯ ಮೇಲೆ ಈ ಪತ್ರಿಕೆಗೆ ವಿರುದ್ಧವಂತೆ ಡಿ| ಮೆಜಿಸ್ಟ್ರೇಟರು ಪ್ರತಿಬಂಧಕ ಹುಕುಮನ್ನು ಹೊರಡಿಸಿರುತ್ತಾರೆ

ವೃತ್ತದ ಸಂಪಾದಕರ ಮೇಲಿನ ಖಟ್ಲೆಯ ವಿಚಾರ ಪ್ರತಿ ತಾ ೧೩ನೇಗೆ ಇಟ್ಟಿರುತ್ತದೆ

ಇಲ್ಲಿಯ ಪೂರ್ಣೇಲರ ಇಂಗ್ಲಿಷ ಶಾಲೆಯು ೮ ಜೂನಿನಿಂದ ಪ್ರಾರಂಭವಾಗುತ್ತದೆ ಸೇರಬಯಸುವ ವಿದ್ಯಾರ್ಥಿಗಳ ಈ ಹೊತ್ತಿನಿಂದ ಹೆಸರ ದಾಖಲು ಮಾಡಿಸಿಕೊಳ್ಳಬಹುದಾಗಿ ಬಾಗಲಕೊಡದ ರಾ ದತ್ತಾತ್ರೆಯ ಪ್ರಭು ಇವರು ತಿಳಿಸುತ್ತಾರೆ

ವ್ಯಾಪಾರಿಗಳಿಗಾಗಿ ಇಲ್ಲಿ ಆಳಕೊಳ್ಳಲು ಈಗ ಇರುವ ನಮೂನೆಯ ಬಂದೇ ಪ್ರಾಮಾಣಿಕತ್ವವು ನಾಶವಾಯಿತೆಂದು [illegible] ಆದಕ್ಕೆ ಪರ್ಯಾಯ [illegible] ನಡಿಸದೆ ಬಹಳ ವರ್ಷಗಳವರೆಗೂ ಅಮಾರಬು ಜೀರ್ಣವಾಗಿದೆ ಬೀಳುವ [illegible] ಬಂದಿದ ಈ ಧರ್ಮಶಾಲೆಯನ್ನು ಆಗಿಂದಾಗ ದುರು [illegible] ಮಾಡತಕ್ಕ [illegible] ವ್ಯವಸ್ಥೆ ಮಾಡಿ ಗುಜರಾಥ ಪ್ರಭು ಒರ [illegible] ಕೊಟ್ಟಿರುತ್ತಾರೆ ಈಗ ಇದರ ಆಡಳಿತದಾರರು ರಾ| ದಮಾನಾವಾಸ ದಾಮೋದರ ಶೇಟರವರು ರಾ| [illegible] ಬರುವ ಧರ್ಮಶಾಲೆಯನ್ನು ನೋಡಿ ತಕ್ಕ ದುರುಸ್ತಿ ಮಾಡಿ ಬರುವ ಯಾತ್ರಿಕ ವ್ಯಾಪಾರಿಗಳಿಗೆ ಆಶ್ರಯ ಕೊಡುವ ವ್ಯವಸ್ಥೆಯಾಗಬೇಕಾಗಿ ಕೋರಿಕೆ

ಮೋಟಾರ ಬಸಗಳ ನಾಶ ಪಡಿಸಬಹುದು ಬಸ್ಸಿನಲ್ಲಿ ಪ್ರವಾಸಿಗಳನ್ನು ಹಾಕಿಕೊಂಡು ಡ್ರಾಯವರ [illegible] ಹಾಸ್ಪಿಟಲ್ ಬಳಿ ಪೊಲೀಸರು [illegible] ಬಸ್ ಮಾಲಕನ ಕೋಟಿನ ಮುಂದೆ ತಂದು ಬಂಧಿಸಿದರು [illegible] ಪೊಲೀಸನವರು ನಡೆಸಿದ ಕ್ರಮ ನಡೆದದ್ದು [illegible] ಗ್ರಹಿಕೆಯಾಗಿದೆ ಅಧಿಕಾರಿಗಳು ಇವರ ಉಪಟಳ ದೂರದವರಾಗಿ ಜನರ ಹೇಳಿಕೆ

ಮೇ ತಾ ೨೯ನೇ ಸ್ವದೇಶಿ ದಿನ ಗೋಕರ್ಣದಲ್ಲಿ ಮೆರವಣಿಗೆ ಹೊರಡಿಸಿ ಪೊಲೀಸರು [illegible] ಸಂಘಕ್ಕೆ ಸೇರಿದ ರೆಂಬ ಆರೋಪದ ಮೇಲೆ ೨ ಜನರಿಗೆ ಸರಿಹಿಡಿದು ಇಲ್ಲಿಯ ೧ನೇ ವರ್ಗದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆ ನಡೆದ ಆರೋಪಿಗಳ ವಕೀಲರಿಗೆ ಕೊಟ್ಟ ಬೇಡಿಕೆಯ ದೇಶದ ಸಂಸ್ಥೆಗೆ [illegible] ಒಪ್ಪಿದವರಲ್ಲವಾಗಿಯೂ, ಸ್ವದೇಶಿ ದಿನದ ಪ್ರೀತ್ಯರ್ಥ ಮೆರವಣಿಗೆ ಹೊರಡಿಸಿದ್ದಾಗಿಯೂ ಸಾರಿಸಿದರು ಈ ಹೊತ್ತು ತೀರ್ಪು [illegible]

ಶಿರಸಿ— ಮೇ ತಾ ೨೯ಕ್ಕೆ ಪಂಡಿತ ಮಾಲವೀಯ [illegible] ಸಭೆಯಾಗಿ [illegible] ಸ್ವದೇಶಿ ಸಂಘದ ಕಾರ್ಯವೆಂದು ಸ್ಥಾಪನವಾಗಿದೆ ಶ್ರೀ| ಶಿವರಾಮರಾವ ಕೋಪರ್ಡಕರವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿರುತ್ತಾರೆ ಈ ಸಂಘಕ್ಕೆ ರಾಜಕೀಯ ಸಂಬಂಧವಿಲ್ಲ ಬಂದವರು ಪ್ರವೇಶ ಫೀ ಕೊಟ್ಟು ಸ್ವದೇಶಿ ಪ್ರತಿಜ್ಞಾ ಪತ್ರದ ಮೇಲೆ ಸಹಿ ಮಾಡಿಕೊಡಬೇಕು [illegible] ಈ ಸಂಘದ ನಿಬಂಧನೆಗಳನ್ನು ಸ್ವದೇಶಿ ದಿನ [illegible] ಬಟ್ಟೆಯ ಮೇಲೆ [illegible] ಶ್ರೀ| ಕೇಶವ [illegible] ಸ್ವದೇಶಿ ವ್ರತದ ಮಹತ್ವವನ್ನು ತಿಳಿಸಿ ಹೇಳಿದರು

೧ನೇ ಯುದ್ಧ ಮಂಡಳದ ಅಧ್ಯಕ್ಷರಿಗೆ ೬ ತಿಂಗಳ ಕಠಿಣ ಶಿಕ್ಷೆಯಾಗಿದೆ ಪರ [illegible] ಕರಬಂದಿಯ [illegible] ಪ್ರೋತ್ಸಾಹನ ಕೊಟ್ಟ ಬಗ್ಗೆ [illegible] ೬ ೬ ತಿಂಗಳ ಕಠಿಣ ಶಿಕ್ಷೆ ಮತ್ತು ೧೦೦–೧೦೦ ರೂಪಾಯಿ ದಂಡವಾಗಿದೆ

ತೀರ್ವೆ ವಸೂಲಿಯ ಬಗ್ಗೆ ಇಲ್ಲಿ [illegible] ನಡೆಯುತ್ತಿದೆ [illegible] ಅಧಿಕಾರಿಗಳು [illegible] ಳ ಆತಿಕ್ರಮಗಳನ್ನು ಬಹಿರಂಗವಾಗಿ ಹೊರಗೆಳೆಯುತ್ತದೆ ಮೇಲಧಿಕಾರಿಗಳು ಜಾಗ್ರತೆ ವಹಿಸಬೇಕಾಗಿ ಸೂಚನೆ ಪತ್ರಗಳ ಸಂಖ್ಯೆಯು ೧೨೫ಕ್ಕೆ ಮಿಕ್ಕಿ ಹೋಗಿದೆ ಜಪ್ತಿನ ಖಾಲಸಾತಿಯ ನೋಟೀಸುಗಳು ೨೦ಕ್ಕೆ ಮುಟ್ಟಿವೆ

ಕಡವೆಯ ಜಮೀನದಾರರೊಬ್ಬರು ಕಾರವಾರ ಕಾರಿಂಗದಲ್ಲಿದ್ದಾರೆ ಅವರಲ್ಲಿ ತೀರ್ವೆ ವಸೂಲಿಯ ಬಗ್ಗೆ ಕಳೆದ ತಿಂಗಳ ಕೊನೆಗೆ ಜಪ್ತಿಯಾಯಿತು ಆ ಕಾಲಕ್ಕೆ ಅಧಿಕಾರಿಗಳು ಮನೆಯವರಕ್ಕಿಲ್ಲ [illegible] ಮನೆಗೆ ಬೀಗ ಹಾಕಿದ ಕಾವಲು ಇಟ್ಟಿದ್ದರು ಮನೆಯವರು ಮನೆಯಲ್ಲೇ ಬೇಯಿಸಿ ಉಣ್ಣುವವೆಂದು ಹಟ ಹಿಡಿದು ಕೂತು ಕೊಂಡರು ಜಪ್ತಿಯ ಕೆಲಸ ೨ ೩ ದಿನ ನಡೆಯಿತು ಹೀಗಾಗಿ ಮನೆಯವರ ೨ ೩ ದಿನ ಉಪವಾಸ ಬಿದ್ದರು ಕೊನೆಗೆ ಅಂದರೆಯ ವೆಂಕಟರಮಣ ಹೆಗಡೆಯವರು ಸರಕಾರಿ ತೀರ್ವೆಯನ್ನು ತುಂಬಿದರು ಈ ರೀತಿ ತೀರ್ವೆ ತುಂಬಿದ ಬಗ್ಗೆ ರಾ| ವೆಂಕಟರಮಣ ಹೆಗಡೆಯ ಮೇಲೆ ಮನೆಯವರು ಕೋಪಗೊಂಡರೆಂತಲೂ ಹೆಗಡೆಯವರು ತಪ್ಪು ಒಪ್ಪಿದರೆಂತಲೂ ವಾರ್ತೆ

ರಾ ೩೧ಕ್ಕೆ ಈ ತಾಲೂಕಿನ ಕೆಲವು ಹಳ್ಳಿಗಳಲ್ಲಿ ಸಾರ್ವತ್ರಿಕ ಜಂಗಲ ಸತ್ಯಾಗ್ರಹವಾಯಿತು ಸತ್ಯಾಗ್ರಹಿ ಕಟ್ಟಿಗೆಯನ್ನು ಕಡಿದುಕೊಂಡು ಜನರು ಮೆರವಣಿಗೆಯಿಂದ ಊರಿಗೆ ಬಂದಿದ್ದರು ಮೆರವಣಿಗೆಯು ಪಟ್ಟಣದ ಸಮೀಪ ಮುಟ್ಟಿದಾಗ ಪೊಲೀಸರು ಮೆರವಣಿಗೆಯನ್ನು ತಡೆಗಟ್ಟಿ ಅಗ್ರ ಭಾಗದಲ್ಲಿದ್ದ ಮಹಿಳೆಯ ಕೈಯೊಳಗಿಂದ ಧ್ವಜವನ್ನು ಕಸಕೊಂಡರು, ಕೆಲವು ಜನರಿಗೆ ಪೆಟ್ಟು ಬಿತ್ತು, ೪ ಜನರಿಗೆ ಗಾಯವಾಯಿತು ರಾತ್ರಿಗೆ ನಾಲ್ವರಲ್ಲಿ [illegible] ಯುದ್ಧ ಮಂಡಳದ ಅಧ್ಯಕ್ಷ ಕಾರ್ಯದರ್ಶಿಗಳನ್ನು ಮಾತ್ರ [illegible] ಕೊಂಡು ಉಳಿಯುವರಿಗೆ ಬಿಟ್ಟುಕೊಟ್ಟರು

ತಾ ೩೧ಕ್ಕೆ ಪು [illegible] ಜಂಗಲ [illegible] ಭಂಗವಾಯಿತು ನೂರಾರು ಜನರು ಸೇರಿದ್ದರು

ಅಂಕೋಲಾ ತಾಲೂಕಿನಲ್ಲಿ ಕರಬಂದಿ ಸತ್ಯಾಗ್ರಹಕ್ಕೆ ಚಾಲನೆ ಕೊಟ್ಟ ಬಗ್ಗೆ ಶಿಕ್ಷೆಯಾದ [illegible] ವಕೀಲರಿಗೂ ಇಲ್ಲಿಯ ಪ್ರಮುಖ ವರ್ತಕರೊಬ್ಬರಿಗೂ ಮೆಜಿಸ್ಟ್ರೇಟರು “ಬ” ವರ್ಗದಲ್ಲಿ ಇಡಬೇಕೆಂದು [illegible] ದ್ದರು ಸಪ್ಪಿಯವರಿಗೆ ಈಗ “ಕ” ವರ್ಗದಲ್ಲಿ [illegible] ವರೆಂದು ತಿಳಿಯುತ್ತದೆ

ಕರಬಂದಿ ಬಗ್ಗೆ ಜಪ್ತಾದ ವಸ್ತುಗಳ ಲಿಲಾಂವು ತಾಲೂಕ ಕಚೇರಿಯಲ್ಲಿ ನಡೆಯುತ್ತಿದೆ ವಸ್ತುಗಳು ಅಗ್ಗವಾಗಿ ಮಾರಾಟವಾಗುತ್ತವೆ

ಹಾರಗೋಳದಲ್ಲಿ ಒಂದು ಎಮ್ಮೆ ಸತ್ತಿತ್ತು ಆದ ಎಮ್ಮೆ ತನ್ನದೆಂದು ರಾ| ನಾರಾಯಣ ಸುಬ್ರಾಯ ಹೆಗಡೆ ರಾ| ರಾಮಚಂದ್ರ ಸಾಚಿ ಬರಕಾಸಿಗೆ ಅರ್ಜಿ ಕೊಡಹೋಗಿದ್ದರಂತೆ ಅದನ್ನು [illegible] ಸ್ವೀಕರಿಸಲಿಲ್ಲವಾಗಿ ರಾ ಹೆಗಡೆ ಅಂದು

ಸ್ವರ್ಣವಲ್ಲಿ ಸಂಸ್ಥಾನದ ರಥೋತ್ಸವದ ಕಾಲಕ್ಕೆ ಸ್ವಯಂಸೇವಕರು ದಕ್ಷರಾಗಿ ದುಡಿದದ್ದರಿಂದ ಅವಾಂತರಗಳು ಕಡಿಮೆ, ಗಲಗಲ ಮೊದಲಾದ ಜೂಜಾಟಕ್ಕೆ ಅವಕಾಶವಾಗಲಿಲ್ಲ ಉತ್ಸವದಲ್ಲಿ ಮದ್ದು ಗುಂಡುಗಳಿಗೆ ಬೆಂಕಿ ತಗಲಿ ರಥ ಎಳೆಯುವಾಗ ಸ್ವಯಂಸೇವಕರ ಪಹರೆಯಿದ್ದುದರಿಂದ ಉತ್ಸವವು ನಿರ್ವಿಘ್ನವಾಗಿ ನೆರವೇರಿತು

ಸಿದ್ದಾಪುರ— ಕೆಲವು ದಿನಗಳ ಹಿಂದೆ ಪಟ್ಟಣದ ರಥೋತ್ಸವವಾಯಿತು ತೇರಿಗೆ ಅಲ್ಲಲ್ಲಿ ರಾಷ್ಟ್ರಧ್ವಜ ಹಚ್ಚಿದ್ದರು ತೇರು ಎಳೆಯುವಾಗ ಜಯಜಯಕಾರ ಮಾಡಕೂಡದೆಂದು ಪೊಲೀಸರ ಹುಕುಮಿನ ಹುಕುಮುಗಳಾಗಿದ್ದವು ಈ ಕಾರಣ ಜನರು ತೇರು ಎಳೆಯಲಿಲ್ಲ

ತೀರ್ವೆ ಬಗ್ಗೆ ಜಪ್ತಿಗಳು ನಡೆದಿವೆ ೫ ಜನರಿಗೆ ಜಮೀನು ಜಪ್ತಿಯ ನೋಟೀಸುಗಳಾಗಿವೆ

ಹೇದಿನದಲ್ಲಿ ಕಾಂಗ್ರೆಸ ಕಾರ್ಯಕ ಪಾಪಹುತ್ತಿದ್ದ ಪ್ರಕರಣ ಮೇಯು ಒಪ್ಪಿಗೆ ೬ ೫೦ [illegible] ಇನ್ನೊಬ್ಬರಿಗೆ [illegible] ಕ್ರಿಯಾಗಿರುತ್ತದೆ

ಅಂಕೋಲಾ— (ತಾ ೨೫ ಮೇ ೩೩) ತಿ ಮ ದು ಪಸಾಲಿ ಬಗ್ಗೆ ಜಪ್ತಿಗಳು ನಡೆದಿವೆ ಕಾಗಾಲ ಭಾವಿಕೇರಿ ಬೆಲೆಕೇರಿ ಕೋಳ ವೇಪಡಾದ ಹಳ್ಳಿಗಳಲ್ಲಿ ಜಪ್ತಿಗಳವವು ಕೆಲವು ಮನೆಗಳಲ್ಲಿ ಏನೂ ಸಿಗಲಿಲ್ಲ ಕೆಲವರ ಮನೆಗಳಲ್ಲಿ ಅಕ್ಕಿ ಮುಂತಾದ್ದು ಜಪ್ತಾಗಿದೆ

ಬಲೇಕೇರಿಯಲ್ಲಿ ಎಲ ಮಾತೇದಾರರ ಒಬ್ಬಿ ಗಳ ಬಾಲಕರು ಪಾಪಶಪ್ಪಟ್ಟಿದೆ ಜಪ್ತಿಗೆ ಬರುವಾಗ ವಸ್ತುಗಳು ಘೋರ ಮಾಡಿಸಿದರೆಂಬ ಆರೋಪದ ಮೇಲೆ ಬೆಲೇಕೇರಿ ದುಲ್ಲ ಒಬ್ಬರನ್ನು ಕೈದು ಮಾಡಿರುವರು

ವೇಂಗಟಿವಾ ೮೦ ವರ್ಷ ನಾಯಕರು ತೀರ್ವ ತೆರಿಗೆ ವಸ್ತುಲ ತನ್ನ ಮನೆಯಲ್ಲಿ ಇಟ್ಟುಕೊಂಡು ಸತ್ಯಾಗ್ರಹಿಗಳಿಗೆ ಸಹಾಯ ಮಾಡುತ್ತಿರೆಂದು ಆರೋಪ ಹೊರಿಸಿ ಅವರಿಗೆ ದಂಡವಾಗಿತ್ತು ಅವರ ಮೇಲೆ ಅಪೀಲು ನಡೆದು ದಂಡ ರದ್ದಾಗಿದೆ ಜಪ್ತಿದ ವಸ್ತುಗಳನ್ನು ಅವರಿಗೆ ಕೊಡಬೇಕೆ ಗಿಯೂ ಹುಕುಮಾಗಿದೆ

ಹಿಚಕಡದ ಶ್ರೀಯುತ ಕಾರ್ಯಕರ್ತರೊಬ್ಬರು ಪರೋಲು ಮೇಲೆ ಬಿಡುಗಡೆಯಾಗಿದ್ದರು ಅವರ ಪತ್ನಿಯ ಲ್ಲದೆ ೩ ತಿಂಗಳಾದವು ತಾ ೧೮ಕ್ಕೆ ಅವರ ಒಪ್ಪಿ ಜಾಮೀನಾದೆಯನ್ನು ಹೊಂದಿರುತ್ತಾರೆ

೮೦ ಗೋಪಾಲಕೃಷ್ಣ ಬಿಕ್ಕು ಮುಹಾಲೀ ಅವರ ಮನೆಯಲ್ಲಿ ಅವರ ಅಮ್ಮನಿಗೆ ವಿಧಿಸಿದ ದಂಡದ ವಸೂಲಿಯ ಬಗ್ಗೆ ಪಾತ್ರೆ ಜಪ್ತಿಗಿದ್ದವು ಹೀಗೆ ಜಪ್ತಿ ಮಾಡುವಾಗಿ ದಲ್ಲಾಗಿದೂ ಅವನ್ನು ಅವರಿಗೆ ಒಪ್ಪಿಸದಿದ್ದರೆ ಸರಕಾರದ ಮೇಲೆ ದಾವೆಯಾಗುವದಾಗಿದೆ ಅವರು ಸರಕಾರಕ್ಕೆ ನೋಟೀಸು ಕೊಟ್ಟಿದ್ದರು ನೋಟೀಸಿನಂತೆ ಜಪ್ತಿದ ಪಾತ್ರೆಗಳು ಅವರಿಗೆ ಸಂತರಿಗಿ ಕೊಡಲಾಗಿದೆ

ಹೊನ್ನಾವರ— ಮಿ ರಪ್ಪ ನಾಳ ಬಿಕ್ಕು ಜೂನ ಗಂಪೇ ತಾರೀಖಿನೊಳಗೆ ಬಿಡ್ಡ ವ ೪ ೧೯ ಇಂಚಿನಿಗವ ಶನಿವಾರ ಬಂದೇ ದಿನ ೫ ಇಂಚು ಮಳೆ ಬಿತ್ತು

ರೋಗಗಳಿಂದ ಕಿಪ್ಪಂ ಹೋಲಿನಲ್ಲಿ ಅನ್ಯ ಊಡಿದ್ದರೆ ಕಪ್ಪದ ಪ್ಲೇಗ ರೋಗದಿಂದ ಸಾಗಿದೆ ಟಿಪ್ಪಂ ಹೋಲ ಬೇಕಾಯಿದೆಯ ಸಂಸ್ಥೆಯ ಉಳಿಯೋಗದ್ದಂತಾ ಸರಕಾರ ಜಪ್ತಿಗಿ ಸರಕಾರದಿಂದ ಇವಾರಿತು

ಎಂದರೆ ದಿನ್ನ ದಿನ ಅಲ್ಲ ಸೇಪ್ಟಿ ಕವಿತೆ ಯಾನೆ ಇದ್ರತೆಯು ಸಂಪೆ ಹಾಸಿಯಾಗಿದೆ ಉದ್ದೇಶವೇನೆಂದರೆ — ರಾಷ್ಟ್ರೀಯ ಸಪು ಚಳವಳಿಯಿಂದ ಉಂಟಾದ ಅನಿಷ್ಟ ಜನರಿಗೆ ತಿಳಿಸುವದು ಅಷ್ಟು ಮಾಡಿ ಹಿಡಿದು ಹೋದ ಜನರಿಗೆ ಸರಿ ದಾರಿಗೆ ಹಚ್ಚುವದು ಸಭೆಯಲ್ಲಿ ಬಪ್ಪಿಸ್ಪ ಪಾಲರು ಗೌಂಡ ಟೇಬಲು, ಸರಕಾರದ ದಕ್ಷತೆ ವಿಷಯಗಳ ಮೇಲೆ ವಿಚಾರಭರಿತ ಮಾತಾಡಿದರು ಮಾಪ ಲೇಮಂಡರು ಈ ಸಭೆಯ ಅಧ್ಯಕ್ಷರು

ರಾಮತೀರ್ಥ ದರ ಗಾಲೆಯನ್ನ ಮ್ಯುನಿಸಿಪಾಲಿಟಿಯವರು ಈಗಲಾದರೂ ಮುರುಸ್ತ ಮಾಡಿದರೆ ಹಳ್ಳಿ ಬಂದೀತು ಬಿದ್ದು ಹೋದರೆ ಜನರಿಗೆ ಬಹಳ ಅನಾನುಕೂಲವಾಗುವದು

ಟೀಪು — ನಿರ್ಬಂಧದಿಂದ ಕಾನಡಾ ವೃತ್ತ'ದಲ್ಲಿ ಸಂಚಿಕೆಯ ಬ್ಬದ ಟೀಕೆಯಾದವರ ಪತ್ರ, ಸಂದೇಶ, ಟಿಪ್ಪಣಿಗಳ ಹಾಗು ಸತ್ಯಾಗ್ರಹದ ಸವಿಸ್ತರ ವೃತ್ತಾಂತ, ಸತ್ಯಾಗ್ರಹಿಗಳಿಗೆ ಚಿತ್ರ ಕೊಡಲು ಬೇಡದಿರುವುದರ ಉಲ್ಲೇಖ ಮಾಡಾವಧಕ್ಕೆ ಸಂ]

ನಿರ್ಬಂಧದೊಳಗಿರುವ 'ವೃತ್ತ'ದ ಸಂಚಿಕೆ.

Matriculation Result.

KARWAR HIGH SCHOOL

Perkar G S, Mujumdar M P, Miss Mujumdar C M, Nadkarni B G, Sohoni K V, Bhat N S, Dhume B S, Gokarn S V, Kulkarni V S, Mahabali N R, Mujumdar K M, Mujumdar V G, Nadkarni M S, Nadkarni P P, Palekar G M, Telang D G, Wagh P V, Wagle J K, Shaik M F, Shail A F, Worth D P, Desai G M, Kasbekar M M, Sabnis K G, Sabnis M A, Bhatkal S S, Kaushik A L, Borkar B L, Wagh G A, Wagh M A, Bansode R M, Dharmatma R N, Mudkatti N R, Phatarphekar D K, Potdar K B, Prabhu K G, Warty S N, Vaernekar S N, Herlekar S G, Koppalkar K S, Lolrekar K G, Shet N S, Hattangadi V S, Shet G L, Kelunnaya S K, Sawant P G, Phal R N, Naik P P,

GIBB HIGH SCHOOL KUMTA

Bhat J G, Balgi V V, Gokarn M A, Hegde L V, Jalisatgi M M, Kumta N M, Naik N D, Pandit S V, Miss Gaonkar A J (Ex) Shanbhag K K

ST THOMAS HIGH SCHOOL HONAVAR

Balsavally R D, Dsilva Anthony, Murdeshwar B S, Naik M L, Naik P R, Nayak R T, Grace Periyan, Victor Periyan, Sashihittal N S, Udyavar S M, (Ex) R S Chandavar

SHRI MARIKAMBA HIGH SCHOOL, SIRSI

Balur R V, Dharmendra Laxmi, Naik L M, Nejjoor S S, Joglekar, Hegde S S, Naragundkar V R, (Ex) Devihosur

ಸರ್ಪಸಂಹಾರ.

ಕಲವು ದಿನಗಳನ್ನು ಹಾವಿನ ಮೇಲೆ ಹಾಕಲು ಭಯಂಕರ ಸರ್ಪವಿದ್ದರೂ ಕೂಡ ತಕ್ಷಣ ಸಾಯುವದು ಹಾವು-ಚೇಳಿನ ವಿಷದ ಮೇಲೆ ಪ್ಲೇಗ, ಕಾಲರಾ, ಕಠಿಣವಾದ ಇಸಬು, ಗಜಕರ್ಣ ಇವುಗಳ ಮೇಲೂ ಅಪ್ರತಿಮ ಗುಣಕಾರಿ' ಇವತ್ತೇ ಸಂಗ್ರಹಿಸಿರಿ

೧ ಔಂಸಿನ ಬಾಟ್ಲಿ ಕಿಮ್ಮತ್ತು ೧ } ಅಂಚೆ
೧ ಡಝನ ರೂ ೯ } ಬೇರೆ

ಸರ್ಪ ಸಂಹಾರ ಕಾರ್ಯಾಲಯ,
ಕನ್ನಡಿಗ" ಬಾಗಲಕೋಟೆ

ಮಕ್ಕಳಿದ್ದರೆ ಮನೆ ಚಂದ!

ಬಂಜೆತನದಿಂದ ಮುಕ್ತರಾಗುವಿರಿ!

ಮಕ್ಕಳ ಕ್ಲಿಂಡು

ಒಂದರ ಬೆಲೆ

ಗರ್ಭಧಾರಣ ಸಂಜೀವನೀ.

ಈ ನಮ್ಮ ಒನುಭವಿಕ ಔಷಧ ಮೂರು ಸಾರೆ ಋತುಸ್ನಾತ ಒಗುವ ವರೆ, ಪ್ರತಿಸಾರ ಮೂರು-ಮೂರು ದಿವಸ ತಕ್ಕೊಂಡು ಪತ್ರಿಗೆ ಒಗುವಿರಿ ೯ ಗುಳಿಗಳ — [illegible] ಅನುಪಾನ ಪತ್ರಿಕ ಸಂಗಡ

ಪತ್ತೆ — ವೈದ್ಯ ವ್ಹಿ. ಎಸ್. ಕಾಪಸೇ, ಮಿರಜ. (S V C)

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.

ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!!

ಹಿಂದುಸ್ಥಾನ ಬ್ರಹ್ಮದೇಶ, ಸಿಂಹಲದ್ವೀಪಗಳ ಕಾರಿ

ಮುಖ್ಯ ಆಫೀಸು — ಕೆನಡಾ ಬಿಲ್ಡಿಂಗ ಹಾರ್ನಬಿ ರೋಡ, ಮುಂಬಯಿ.

ಜನರಲ್ ಮ್ಯಾನೇಜರ — ನಾ| ಸರ್ ಫಿರೋಜ ಸೇಠನಾ, ಕೆ ಟಿ ಒ ಬಿ ಇ

೧೯೩೨ರಲ್ಲಿ ಇಲ್ಲಿಯಲ್ಲಿ ಬಂದ ಹೊಸ ವಿಮಾ ರಕಮು ೧೬॥ ಕೋಟಿಗೂ ಮಿಕ್ಕಿದೆ

೧೯೩೨ನೇ ಇಸ್ವಿ ಡಿಸೆಂಬರ ತಿಂಗಳ ಅಖೇರಿಗೆ ಕೂಡಿದ ನಿಧಿ ೧೩೩ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಪಡೆದು ಉದ್ಯೋಗದಿಂದ ಹಾಗು ದಕ್ಷತೆಯಿಂದ ನವಯುವಕರು ಮುದಿಮ ಸುಖವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು

ಕರಾರು ಮಾಡಬೇಕಾದವರು ಕೆಳಗೆ ಪತ್ರವ್ಯವಹಾರ ನಡಿಸುವ ಪತ್ತೆ —

The District Manager,
Canada Building,
Hornby Road, BOMBAY

OR

Mr. S. B. Rege,
Chief Agent
171, Civil Lines
Camp BELGAUM

ಈಗಿನ ಪ್ರಪಂಚ.

(ಸರ್ವ ಪತ್ರಿಕೆಗಳಿಂದ ಸಂಗ್ರಹಿಸಿದ್ದು)

ದುತ್ತಾರಾಷ್ಟ್ರದಿಂದ ಹಾಗೆ ಮಾಡಬೇಕಾದಾಗಿ ಈ ಹಿಂದೆ ಹೊರಡಿಸಿದ ಹುಕುಮನ್ನು ಉಲ್ಲಂಘಿಸಿದ್ದರಿಂದ 'ವಿಜಯ' ಮುದ್ರಣಾಲಯವನ್ನು ೧ ತಿಂಗಳ ತನಕ ಏನೊಂದೂ ಮುದ್ರಿಸಲು ಉಪಯೋಗ ಮಾಡಕೂಡದು, ಧಾರವಾಡದ ಫೌಜದಾರರು ಅದಕ್ಕೆ ಮುದ್ರೆ ಹಾಕಬೇಕು; ಎಂಬರ್ಥದ ನೋಟೀಸನ್ನು ಹೊರಡಿಸಿ ಮುದ್ರಣಾಲಯಕ್ಕೆ ಸರಕಾರಿ ಮೋಹರು ಹಾಕಿಟ್ಟದ್ದರಿಂದ 'ವಿಜಯ' ಪತ್ರಿಕೆಯು ಸಧ್ಯಕ್ಕೆ ನಿಂತುಬಿಟ್ಟಿದೆ.

⁂

ಗದಗದ 'ಕರ್ನಾಟಕ ಬಂಧು' ವಾರಪತ್ರಿಕೆಯ ಮುದ್ರಣಾಲಯಕ್ಕೆ ರಾಜಶಾಸನದಂತೆ ಮುದ್ರೆ ಹಾಕಿಟ್ಟಿತ್ತು ೧ ತಿಂಗಳು ಕಳೆಯಿತು. ಪತ್ರಿಕೆ ಪುನಃ ಹೊರಟಿದೆ.

⁂

ಸಿಯಾಮ ದೇಶವೂ, ಹಿಂದುಸ್ಥಾನವೂ.

ಹಿಂದುಸ್ಥಾನದಲ್ಲಿ ಬ್ರಿಟಿಶ ರಾಜ್ಯವಿದ್ದದರಿಂದ ಬಹಳ ಪ್ರಗತಿಯಾಯಿತೆಂದು ಬಹಳ ಪ್ರಶಂಸೆಯಾಗುತ್ತದ. ಹಿಂದುಸ್ಥಾನದಲ್ಲಿ ಬ್ರಿಟಿಶ ರಾಜ್ಯವಿದ್ದದರಿಂದಲೇ ಜನರು ಓದು ಬರಹ ಕಲಿತರು, ಸುಸಂಸ್ಕೃತರಾದರು, ಹೀಗೆಲ್ಲ ಹೇಳಲಾಗುತ್ತದೆ. ಸಿಯಾಮ ದೇಶವು ಸಣ್ಣ ದೇಶ ಅಲ್ಲಿ ಬ್ರಿಟಿಶ ರಾಜ್ಯವಿಲ್ಲ ಅಲ್ಲಿಯ ವರ್ತಮಾನವನ್ನು 'ಲಂಡನ್ ಟೈಮ್ಸ' ಪತ್ರಿಕೆಯ ಸುದ್ದಿಗಾರರು ವರ್ಣಿಸುತ್ತಾರೆ. ಅದರ ಮೇಲಿಂದ ಹಿಂದೀ ಜನರು ಬ್ರಿಟಿಶರಿಗೆ ಎಷ್ಟರ ಮಟ್ಟಿಗೆ ಕೃತಜ್ಞರಾಗಬೇಕೆಂಬುದು ಸ್ಪಷ್ಟವಾಗುವದು. ಈಗಿನ ಅಡಚಣೆಯಲ್ಲಿ ಇಲ್ಲಿಯ ಅಧಿಕಾರಿಗಳಿಗೂ [illegible] ನಡೆಸಬೇಕೆಂಬುವರ ಕುರಿತು ತಕ್ಕ ಬೋಧ ಸಿಗುವಂತಿದೆ. 'ಟೈಮ್ಸ' ಪತ್ರಿಕಾ ಪ್ರತಿನಿಧಿಗಳು ಬರೆಯುವದೇನಂದರೆ — ಸಿಯಾಮದಲ್ಲಿ ಪ್ರಾಥಮಿಕ ಶಿಕ್ಷಣವು ಒತ್ತಾಯದಿಂದ ಕಲಿಸಲ್ಪಡುತ್ತದೆ. ಸಾಮಾನ್ಯವಾಗಿ ಶಿಕ್ಷಣಕ್ಕೆ ಹೆಚ್ಚು ಖರ್ಚು ತಗಲುವದಿಲ್ಲ, ತೀರ ಅಗ್ಗವಾದದ್ದು; ಜನಸಾಮಾನ್ಯರ ಅಧಿಕಾರಿ [illegible] ಸಿಯಾಮದ ರಾಜಧಾನಿಯಾದ ಬ್ಯಾಂಕಾಕ ಪಟ್ಟಣವು ಈಗಿನ ದಿನಮಾನಕ್ಕೆ ಉಚಿತವಾಗಿ ಆಧುನಿಕ ಪಟ್ಟಣವಾಗಿರುತ್ತದ. ಯುರೋಪಿಯನ್ನರಿಗೆ ಇಲ್ಲಿಯವರು ಸೇವಿಸಿಕೊಳ್ಳುತ್ತಾರೆ ಆದರೆ, ಅವರು ರಾಜ್ಯಕರ್ತರಲ್ಲ, ಬರೇ ಸಲ್ಲಾಗಾರರು. ಈಗ ಸಿಯಾಮ ದೇಶದಲ್ಲಿ ಎಲ್ಲೆಲ್ಲಿಯಂತೆ ಹಣದ ಅಡಚಣೆ! ಆದ್ದರಿಂದ ಅವರು ಕ್ರಮವಾಗಿ ಯುರೋಪಿಯನ್ ಸಲ್ಲಾಗಾರರನ್ನು ತೆಗೆದು ಅವರ ಬದಲಿಗೆ ಸಿಯಾಮ ಜನರನ್ನು ನೇಮಿಸತೊಡಗಿದ್ದಾರೆ. ಸಿಯಾಮದಲ್ಲಿ ಅಕ್ಕಿ ವಿಪುಲವಾಗಿ ಬೆಳೆಯುತ್ತದೆ. ಅಕ್ಕಿಯ ದರ ಇಳಿಮುಖವಾಯಿತು; ಹೊರದೇಶಕ್ಕೆ ಹೋಗುವ ಅಕ್ಕಿ ಹೇರಳ ಕುಗ್ಗಿತು. ತೇಗ ಮೊದಲಾದ ಇತರೇ ಸರಕುಗಳ ರಫ್ತೂ ಕುಗ್ಗಿತು. ಇದರಿಂದ ಸರಕಾರದ ಉತ್ಪನ್ನವು ಭರಭರ ಕುಗ್ಗಿತು. ಕಾರಣ ಸರಕಾರವು ಹೆಚ್ಚಿನ ಸಂಬಳದ ಹುದ್ದೆಯಲ್ಲಿ ಸಿಯಾಮ ಜನರಿಗೆ ಸಲ್ಲಾಗಾರರೆಂದು ನೇಮಿಸಲಾರಂಭಿಸಿದೆ. ಇವರಲ್ಲಿಯೂ ಯುರೋಪಿಯನ್ ಸಲ್ಲಾಗಾರರ ಕೈಯಲ್ಲಿ ಕಲಿತು ತಯಾರಾದವರು. ಇಂಥವರಿಂದ ಸಿಯಾಮದ ರಾಜ್ಯಭಾರವು ದಕ್ಷತೆಯಿಂದ ನಡಿಸಬಂದೀತೇನೆಂದು ನೋಡಬೇಕಾಗಿದೆ, ಎಂಬದಾಗಿ 'ಟೈಮ್ಸ' ಪತ್ರಿಕೆಯ ಪ್ರತಿನಿಧಿಗಳು ಬರೆಯುತ್ತಾರೆ. ಹಿಂದುಸ್ಥಾನದಲ್ಲಿ ತಕ್ಕಮಟ್ಟಿಗೆ ಇದೇ ಸ್ಥಿತಿ. ಜಮಾ ಖರ್ಚು ಬಾಯಿಗೂಡುವದಿಲ್ಲ. ಹಿಂದುಸ್ಥಾನ ಸರಕಾರಕ್ಕೆ ಹಣದ ಅಡಚಣೆ. ಕಸ್ಟಮ್, ಉಗಿಬಂಡಿ, ಟಪಾಲು, ಇನಕಮ್‌ಟ್ಯಾಕ್ಸ ಮೊದಲಾದ ಖಾತೆಗಳಲ್ಲಿ ಸಂಕಲ್ಪಿತ ಉತ್ಪನ್ನ ಬರದೆ ಹಣದ ಅಡಚಣೆ. ಹಿಂದುಸ್ಥಾನ ಸರಕಾರವು ಹೊಸ ಸಾಲವನ್ನೆತ್ತುವದು ಮಾಡಿದೆ. ಬಡ್ಡಿಯ ದರ ಶೇಕಡಾ ೫½. ೧೦೦ ರೂಪಾಯಿಗಳಿಗೆ [illegible] ರೂಪಾಯಿಗಳು. ಸಾಲದ ಪತ್ರ ಬೋಂಡು ಸಿಗುತ್ತದೆ. ಸಾಲ ೧೯೩೮-೧೯೪೦ ಇಸವಿಯಲ್ಲಿ ತಿರುಗಿ ಸಿಗುವದು. ಇಷ್ಟಲ್ಲದೆ ಸರಕಾರಕ್ಕೆ ಸಾಲವಾಗಿ ಕೊಡಬಹುದು. ಹಣ ಕೊಡುವವರಿಗೆ ಅನುಕೂಲವಾಗಬೇಕೆಂದು ಟಪಾಲ ಆಫೀಸಗಳಲ್ಲಿ ಸಹ ಬೋಂಡು ಸಿಗುವ ವ್ಯವಸ್ಥೆಯಾಗಿದೆ. ಯಾವದೇ [illegible] ಕ್ಯಾಶ ಬೋಂಡುಗಳನ್ನು ಪಡೆಯಬಹುದು. ಎಲ್ಲರಿಗೂ ಸರಕಾರಿ ಬೋಂಡಿನಲ್ಲಿ ಹಣವಿಡಲು ಅನುಕೂಲವಾಗಬೇಕೆಂದು ಸರಕಾರದವರು ಅಪರಿಮಿತವಾಗಿ ಹಣ [illegible] ಇದೀಗಲೇ ೭-೮ ಕೋಟಿ ರೂಪಾಯಿಗಳು ದೊರೆತವೆ. ೧೯೩೭ನೇ ಸಾಲಿನಲ್ಲಿ ತಿರುಗಿ [illegible] ಬೋಂಡುಗಳನ್ನು ಕೊಟ್ಟು ಈ ಬೋಂಡುಗಳನ್ನು [illegible] ಬಯಸುವ [illegible] ರಶೀದಿ [illegible] ೧೦೦೦ ರೂಪಾಯಿಗಳ [illegible] ರೂಪಾಯಿ [illegible] ೧೦೦೦ ಬೋಂಡು [illegible] ೬ ತಿಂಗಳಿಗೊಮ್ಮೆ [illegible] ಪಡೆಯುತ್ತಿರಬಹುದು [illegible] ೪೦½ ಸಾಲಿನಲ್ಲಿ ಇಸಲು [illegible] ರೂ. ೧೦೦ ಸಿಗುತ್ತವೆ. ಸರಕಾರದ ಉತ್ಪನ್ನ ಕಡಿಮೆ [illegible] ಹೀಗೆ ಸಾಲ ಹೊರಡಿಸುವ ಪ್ರಸಂಗ ಬಂತು. ಮುಂಬಯಿ ಸರಕಾರವು ಇಡೀ ರಾಜ್ಯಭಾರವನ್ನು ಪುನರ್ಘಟಿಸಿ ರಾಜ್ಯಭಾರದ ಖರ್ಚನ್ನು ಕುಗ್ಗಿಸುವ ಆಲೋಚನೆ ಮಾಡುವದಕ್ಕಾಗಿ ನನ್ನ ಪ್ರಾಂತಿಕ ಸರಕಾರದ ಕಾರ್ಯಕಾರಿ ಸಭಾಸದರಾಗಿದ್ದ ಮಿ. ಥೋಮಸ್‌ರವರ ಅಧ್ಯಕ್ಷತೆಯಲ್ಲಿ ಒಂದು ಪುನರ್ಘಟನೆಯ ಮಂಡಳವನ್ನು ನೇಮಿಸಿದೆ. ಖರ್ಚಿನ ಭಾರ ಸಹಿಸಲಾಗದೆ ಮುಂಬಯಿ ಸರಕಾರವು ಇಷ್ಟು ಕಾರ್ಯಕಾರಿ ಸಭಾಸದರನ್ನೂ, ಒಬ್ಬ ದಿವಾಣರನ್ನೂ ಕಡಿಮೆ ಕಡಿಮೆ ಮಾಡಿತು. ಕಾರ್ಯಕಾರಿ ಸಭಾಸದರಾದ ಸರ್ ಗೋವಿಂದರಾವ ಪ್ರಧಾನರವರೂ, ಮೋಲ್ಯಾಣಿಕದ ಮಿ. ಥೋಮಸ್‌ರವರೂ, ದಿವಾಣ ಬಹಾದ್ದೂರ ಮೌಲ್ವಿ ರಫಿಯುದ್ದೀನರವರೂ ಅಧಿಕಾರತ್ಯಾಗ ಮಾಡಬೇಕಾಯಿತು. ಮಿ| ಥೋಮಸ್‌ರವರಿಗೆ ಮಾತ್ರ ಕಾರ್ಯಕಾರಿ ಸಭಾಸದಾಧಿಕಾರ ಹೋದಾಗ್ಯೂ ಪುನರ್ಘಟನಾ ಮಂಡಳದ ಅಧ್ಯಕ್ಷಸ್ಥಾನವು ದೊರೆಕಿದೆ. ಕಾರ್ಯಕಾರಿ ಸಭಾಸದರು ೪ ಮಂದಿ, ದಿವಾಣರು ೩ ಮಂದಿ; ಹೀಗೆ ೭ ಮಂದಿಗಳ ಕೆಲಸವನ್ನು ಈಗ ೪ ಮಂದಿಗಳು ಮಾಡಬೇಕಾಗಿದೆ. "ಇದರಿಂದ ಉಳಿದವರಿಗೆ ಮಿತಿಮೀರಿ ಕೆಲಸ ಬಿದ್ದೀತು; ಹುದ್ದೆಗಳನ್ನು ಕಡಿಮೆ ಮಾಡುವದಕ್ಕಿಂತ ಇವರ ಸಂಬಳವನ್ನು ತಗ್ಗಿಸಿ ಎಲ್ಲರಿಗೂ ಇರಗೊಟ್ಟಿದ್ದರೆ ಸರಕಾರಿ ಕೆಲಸವು ಸುಸೂತ್ರವಾಗಿ ನಡೆದು ಖರ್ಚು ಉಳಿಯುತ್ತಿತ್ತೆಂದು 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಅಂಬೋಣ. ಸಿಯಾಮ ದೇಶದ ಉದಾಹರಣೆಯನ್ನು ಹಿಂದುಸ್ಥಾನ ಸರಕಾರವೂ, ಪ್ರಾಂತಿಕ ಸರಕಾರಗಳೂ ಅನುಕರಿಸಿದರೆ ಸರಕಾರಕ್ಕೆ ಹಿತವಿದೆ.

⁂

ಸ| ವಾ| ಸರ್ ದೋರಾಬ ಟಾಟಾರವರು.

ಹಿಂದುಸ್ಥಾನದೊಳಗೆ ಔದ್ಯೋಗಿಕ ಸಮ್ರಾಟ್ ರೆಂದು ಖ್ಯಾತಿ ಹೊಂದಿದ ಪ್ರಸಿದ್ಧ ಟಾಟಾ ಮನೆತನದ ಕೊನೆಯ ಹಂಶಜರಾದ ಸರ್ ಜಮಶೆಟಜ ಟಾಟಾರವರ ಜ್ಯೇಷ್ಠ ಚಿರಂಜೀವರಾದ ಸರ್ ದೋರಾಬ ಟಾಟಾರವರು ಜರ್ಮನಿಯ ಬೆಡ್‌ಕಿಸಿಂಜನದೊಳಗಿನ 'ಆರೋಗ್ಯ ಭವನ' ದಲ್ಲಿ ಹೃದಯಕ್ರಿಯೆ ನಿಂತು ಜೂನ ತಾ. ೩ನೇಗ ಪರಲೋಕವಾಸಿಗಳಾದ ದುಃಖದಾಯಕ ಸುದ್ದಿ ಒಂದು ಮುಂಬಯಿಯಲ್ಲಿಯೂ, ಟಾಟಾ ಮನೆತನದ ಧರ್ಮ ಪಡೆದ ಹಿಂದುಸ್ಥಾನದೊಳಗಿನ ಅನೇಕ ಸಂಸ್ಥೆಗಳೂ ಶೋಕಮಗ್ನವಾಗಿವೆ. ಸರ್ ದೋರಾಬರವರು ಪ್ರಕೃತಿ ಸ್ವಾಸ್ಥ್ಯಕ್ಕಾಗಿ ಎಪ್ರಿಲ್ ತಿಂಗಳಲ್ಲಿ ಇಲ್ಲಿಂದ ಹೊರಟು ಜರ್ಮನಿಯೊಳಗಿನ 'ಆರೋಗ್ಯ ಭವನ'ಕ್ಕೆ ಹೋಗಿದ್ದರು. ಮೇ ೩ನೇ ತಾರೀಖಿಗೆ ಅವರು ಅಲ್ಲಿ ತಲ್ಪಿದರು. ಜೊತೆಗೆ ತಮ್ಮ ಡಾಕ್ಟರರಾದ ಡಾ| ಪಟೇಲರವರಿಗೆ ಕರೆಕೊಂಡೇ ಹೋಗಿದ್ದರು. ಅಲ್ಲಿಯ ಡಾಕ್ಟರರೂ, ಡಾ| ಪಟೇಲರೂ ಬಹಳ ಉಪಚಾರ ನಡಿಸಿದಾಗ್ಯೂ ಹೋದ ಪ್ರಾಣವು ತಿರುಗಿ ಬರಲಿಲ್ಲ. ಸರ್ ದೋರಾಬರವರು ನಿಪುತ್ರಿಕರಾಗಿ ತೀರಿದರು. ಇವರ ಹೆಂಡತಿ ಕಳೆದ ವರ್ಷ ಇಂಗ್ಲಂಡದಲ್ಲಿ ತೀರಿದ್ದಳು. ಮರಣ ಕಾಲದಲ್ಲಿ ಇವರ ಪ್ರಾಯ ೭೩ ವರ್ಷ. ಸರ್ ದೋರಾಬರವರ ತಂದೆಯಾದಿರಾದ ಜಮಶೆಟಜ ಟಾಟಾರವರು ಉದ್ದಿಮೆಗಳ ಪುರಸ್ಕರ್ತರು, ಆದರೆ,ಅವರು ತೀರಿಕೊಂಡದ್ದರಿಂದ ಅವರು ಕೈಕೊಂಡ ಕಾರ್ಯ ಕಡೆಗಾಣಿಸುವ ಭಾರ ಸರ್ ದೋರಾಬರವರ ಮೇಲೆ ಬಿತ್ತು, ಇವರು ಅದನ್ನು ಅಂಗೀಕರಿಸಿ ದಕ್ಷತೆಯಿಂದ ನಡಿಸಿದರು. ಸರ್ ದೋರಾಬರವರ ದೊಡ್ಡ ಗುಣವೆಂದರೆ, ಮನುಷ್ಯ ಪರೀಕ್ಷೆ. ರತ್ನ ಪರೀಕ್ಷೆಯಂತೆ ಮನುಷ್ಯರ ಪರೀಕ್ಷೆ ಮಾಡಿ ಅವರವರಿಗೆ ಅವರವರ ಒಲವಿನ ಕಾರ್ಯ ಹಂಚಿಕೊಟ್ಟು ವಿಧ ವಿಧದ ಕಂಪನಿಗಳನ್ನು ಸ್ಥಾಪಿಸಿದರು. ಜಮಶೆಡಪುರದ ಉಕ್ಕಿನ ಕಾರಖಾನೆ ಲೋಕವಿಖ್ಯಾತವಿದೆ. ಟಾಟಾ ವಿದ್ಯುತ್ತಿನ ಕಾರಖಾನೆ, ಎಣ್ಣೆಯ ಕಾರಖಾನೆ ಇವುಗಳಿಂದ ದೇಶದಲ್ಲಿ ಹೊಸ ಉದ್ದಿಮೆಗಳನ್ನು ಇವರು ಹೊರಡಿಸಿದರು. ಕರಾಚಿಯಿಂದ ದಕ್ಷಿಣ ಹಿಂದುಸ್ಥಾನಕ್ಕೆ ವಿಮಾನ ಮಾರ್ಗ ಮಾಡುವ ಇವರ ಯೋಜನೆಯಿದ್ದಿತು. ಬೆಂಗಳೂರಿನಲ್ಲಿ ಶಾಸ್ತ್ರೀಯ ಸಂಶೋಧಕ ಶಾಲೆಯನ್ನು ಇವರು ಸ್ಥಾಪಿಸಿದ್ದಾರೆ. ಇವರಿಗೆ ಅಮೇರಿಕದವರು ಹೆಚ್ಚಾಗಿ ಸೇರುತ್ತಿದ್ದರು. 'ಟಾಟಾ' ಹೆಸರಿನಿಂದ ೩೫ ಕಂಪನಿಗಳು ನಡೆಯುತ್ತವೆ. ಉಕ್ಕಿನ ಕಾರಖಾನೆಯ ಭಂಡವಲು ರೂ. ೧೫ ಕೋಟಿ. ಲಂಡನ್, ಪ್ಯಾರೀಸ, ಶಾಂಘಾಯ,ನ್ಯೂ ಯೋರ್ಕ,ಕೋಬ ಮೊದಲಾದ ಕಡೆಗಳಲ್ಲಿ ಇವರ ಕಂಪನಿಯ ಶಾಖೆಗಳಿವೆ. ಮರಣಕಾಲದಲ್ಲಿ ತಮ್ಮ ೩ ಕೋಟಿ ರೂಪಾಯಿಗಳ ಚರಸ್ಥಿರ ಸೊತ್ತನ್ನು ಇವರು ಧರ್ಮಸತ್ರವಾಗಿ ಕೊಟ್ಟಿರುತ್ತಾರೆ. ಇದಲ್ಲದೆ ರೂ ೨೫ ಲಕ್ಷಗಳನ್ನು ಅಸಾಧ್ಯ ರೋಗಗಳ ಸಂಶೋಧನ ಮಾಡುವವರಿಗೆ ಪ್ರತಿಫಲ ಕೊಡುವದಕ್ಕಾಗಿ ಅರ್ಪಿಸಿದ್ದಾರೆ. ಸರ್ ದೋರಾಬರವರ ಕಡೆ ಒಂದು ಅಮೂಲ್ಯ ವಜ್ರವಿದ್ದ ಇದರ

ಬೆಲೆ ರೂ. ೩೦ ಲಕ್ಷ ಎಷ್ಟಿವರು ಇಂಗ್ಲಂಡದಲ್ಲಿ ಕೆಲ ವರ್ಷಗಳ ಹಿಂದ ಕೊಂಡಿದ್ದರು ಇಂಥ ಔದ್ಯೋಗಿಕ ಪುರುಷರು ಕಾಲಾಧೀನರಾಗಿ ಹಿಂದುಸ್ಥಾನಕ್ಕೆ ಹೇರಳ ನಷ್ಟವಾಗಿದೆ

⁂

ಲೋಕಪೂಜ್ಯರ ಸಮಾಚಾರ.

ಸಾಬರಮತಿ ಆಶ್ರಮದವರು ಯೆರವಡಾ ಜೈಲಿನಲ್ಲಿ ಲೋಕಪೂಜ್ಯರಿಗೆ ಮೇ ೨೯ನೇ ತಾರೀಖಿಗೆ ಕಂಡರು ಲೋಕಪೂಜ್ಯರ ಪ್ರಕೃತಿ ನೆಟ್ಟಗಿದೆ, ಅವರ ಒಲಗೈಯಿಂದ ಯಾವದೇ ಕೆಲಸವಾಗುವದಿಲ್ಲ ಎಡಗೈ ತೋಳು ನೋಯುತ್ತದೆ, ಎಡಗೈ ಅತ್ತಿತ್ತ ಸರಿದಾಡಿಸಬರುವದಿಲ್ಲ ಆದರಿಂದ ಲೋಕಪೂಜ್ಯರು ಕಾಲಿನಿಂದ ನೂಲುವ ಅಭ್ಯಾಸ ಮಾಡುತ್ತಿದ್ದಾರೆ. ಡಾ| ಪರಮಾರರವರ ಕಡೆಯಿಂದ ಕೈ ಮೇಲೆ ವಿದ್ಯುತ್ಪ್ರಯೋಗ ಮಾಡಿಸಿಕೊಳ್ಳಬಹುದಾಗಿ ಡಾಕ್ಟರರು ಹೇಳುತ್ತಾರಂತೆ. ಅದರಂತೆ ಡಾ| ಬಿಂಬಾಟಾರವರ ಕಡೆಯಿಂದ ಮರ್ದನ ಮಾಡಿಸಿಕೊಳ್ಳಬಹುದಾಗಿಯೂ ಹೇಳುತ್ತಾರಂತೆ ಸದ್ಯಕ್ಕೆ ಅವರ ಕಾರ್ಯದರ್ಶಿಗಳು ಕೈಗಳ ಆರೈಕೆ ಮಾಡುತ್ತಾರೆ ಲೋಕಪೂಜ್ಯರು ಸತ್ಯಾಗ್ರಹಾಶ್ರಮದ ಇತಿಹಾಸವನ್ನು ಬರೆಯುತ್ತಿದ್ದಾರಂತೆ ಸದ್ಯಕ್ಕೇ ತಮ್ಮ ಬಿಡುಗಡೆಯಾಗುವದಾಗಿ ಪ್ರಕಟಿಸಿದ ಬಗ್ಗೆ ಕೇಳಿ ಲೋಕಪೂಜ್ಯರು ವಿನೋದದಿಂದ ಹಾಸ್ಯ ಮಾಡಿದರಾಗಿಯೂ, ಬಿಡುಗಡೆಯ ವಿಚಾರವೇ ತಮಗೆ ಹೊಂಕುವದಿಲ್ಲವಾಗಿ ಹೇಳಿದರಾಗಿಯೂ, ಅಹಮದಾಬಾದದ 'ಎಸೋಸಿಯೇಟೆಡ್ ಪ್ರೆಸ್' ವಾರ್ತಾವಾಹಕರ ಸುದ್ದಿ. ಆಶ್ರಮದ ಕುಮಾರಿ ಮೀರಾಬಾಯಿಯವರು ಲೋಕಪೂಜ್ಯರ ಭೆಟ್ಟಿ ಪಡೆಯಲಪೇಕ್ಷಿಸಿದರು. ಅದಕ್ಕೆ ಮುಂಬಯಿ ಸರಕಾರವು ಅಪ್ಪಣೆ ಕೊಡಲಿಲ್ಲ. ಇದರಿಂದ ಲೋಕಪೂಜ್ಯರಿಗೂ ಸರಕಾರಿ ಅಧಿಕಾರಿಗಳಿಗೂ ಪತ್ರವ್ಯವಹಾರ ನಡೆದಿದೆ. ಅಪೇಕ್ಷೆಯಂತೆ ಈ ನಿರ್ಬಂಧದ ಪರಿಹಾರವಾಗದಿದ್ದಲ್ಲಿ ತಾವು ಯಾರಿಗೂ ಭೆಟ್ಟಿ ಕೊಡಲಪೇಕ್ಷಿಸುವದಿಲ್ಲವಾಗಿ ಲೋಕಪೂಜ್ಯರ ನಿರ್ಧಾರವಾಗಿದೆಂದು 'ನವಾಕಾಳ' ಪತ್ರಿಕೆಯ ಸಾಕ್ಷಿಗಾರರು ಪ್ರಕಟಿಸುತ್ತಾರೆ

⁂

ಮಾನವ ದೇಹದ ಬೆಲೆ: ರೂ. ೩–೩||.

ಡಾ| ಲೊಸನ್‌ರವರು ಮಾನವ ದೇಹದ ಬೆಲೆಯನ್ನು ಕಂಡುಹಿಡಿದಿದ್ದಾರೆ ಸ್ಥೂಲ ದೇಹದವರಿರಲಿ, ಸೂಕ್ಷ್ಮ ದೇಹದವರಿರಲಿ, ಎಲ್ಲರ ಬೆಲೆ ಸಾಮಾನ್ಯವಾಗಿ ಒಂದೇ. ಸಾವಿರಾರು—ಲಕ್ಷಾವಧಿ ರೂಪಾಯಿ ಗಳಿಸುವವರೂ ದಿನಾ ೨–೪ ಆಣೆ ಕೂಲಿ ಗಳಿಸುವವರೂ ಸಹ ಒಂದೇ ಬೆಲೆಯವರು. ಜಡ ದೇಹದ ತೂಕ ಸಾಮಾನ್ಯವಾಗಿ ೧೪೦ ರತ್ತಲು ಅದರೊಳಗೆ ೪೦ ಬಾಟ್ಲಿ ನೀರು, ೭ ಸಾಬೂನು ಬಟ್ಟೆಯಲ್ಲಿರುವಷ್ಟು ಸೇಣ, ೯೦೦೦ ಪೆನ್ಸಿಲಿಗೆ ಸಾಲುವಷ್ಟು ಅಂಗಾರ, ೨೨೦೦೦ ಬೆಂಕಿಕಡ್ಡಿಗಳಿಗೆ ಸಾಲುವಷ್ಟು ಫೋಸ್ಫರಸ್, ಒಂದು ಗುಟುಕು ಮೆಗ್ನಿಶಿಯಾ ಧಾತು, ಒಂದು ಮೊಳೆಗೆ ಸಾಲುವಷ್ಟು ಕಬ್ಬಿಣ, ಒಂದಿಷ್ಟು ಸುಣ್ಣ-ಗಂಧಕ, ಇಷ್ಟೇ ಈ ಜಡ ದೇಹದಲ್ಲಿದೆ. ಇವುಗಳ ಈಗಿನ ಬಾಜಾರಿ ಬೆಲೆ ರೂ. ೩–೩|| !! ಇದೇ ಡಾ| ಲೊಸನ್‌ರವರ ಶೋಧದ ಫಲ.

⁂

ಕೈದಿಗೆ ಜೈಲ ಕಾರಕೂನನಿಂದ ನಷ್ಟಾಂಶ.

ಕಣ್ಣಾನೂರ ಜೈಲಿನಲ್ಲಿ ಒಬ್ಬ ಸತ್ಯಾಗ್ರಹಿ ಕೈದಿಗೆ ಶಿಕ್ಷೆಯ ಮುದ್ದತ್ತು ಮುಗಿದರೂ ಬಿಡಲಿಲ್ಲ; ಇನ್ನು ೩ ತಿಂಗಳು ಹೆಚ್ಚು ಇಟ್ಟುಕೊಳ್ಳಲಾಯಿತು ಇನಸ್ಪೆಕ್ಟರ ಜನರಲ್‌ರು ಈ ಕುರಿತು ಚೌಕಶಿ ನಡೆಸಿ ಕಾರಕೂನನ ತಪ್ಪಿನಿಂದ ಹೆಚ್ಚಿನ ಶಿಕ್ಷೆ ಅನುಭವಿಸಬೇಕಾದ ಬಗ್ಗೆ ಕೈದಿಗೆ ದಿನ ೧ರ ೧ ರೂಪಾಯಿಯಂತೆ ಕಾರಕೂನನ ಪಗಾರದೊಳಗಿಂದ ಮುರಕೊಂಡು ನಷ್ಟವ ಕೈದಿಗೆ ಕೊಡಬೇಕೆಂದು ಜೈಲ ಅಧಿಕಾರಿಗಳ ಹುಕುಮವಾಗಿದೆ.

⁂

ಟಪಾಲ ಖಾತೆಯ ಸೂಚನೆ

ಬ್ರಿಟಿಶ ಸರಕು ಯಾ ಯಾವದೇ ಪ್ರಕಾರದ ಸರಕುಗಳ ಬಹಿಷ್ಕಾರವನ್ನು ಉತ್ತೇಜಿಸುವಂಥ ಶಬ್ದ ಯಾ ಭಾವಚಿತ್ರ ಯಾ ವಿನೋದ ಚಿತ್ರಗಳುಳ್ಳ ಪತ್ರಗಳನ್ನು ಟಪಾಲ ಖಾತೆಯವರು ಕಳಿಸಲಿಕ್ಕಿಲ್ಲವಾಗಿ ಪ್ರಕಟನೆ ಹೊರಟಿದೆ ಆದರೆ, "ಹಿಂದೀ ಸರಕುಗಳನ್ನೇ ಕೊಂಡುಕೊಳ್ಳಿರಿ," "ದೇಶಿ ಉದ್ದಿಮೆಗಳಿಗೆ ಆಶ್ರಯಕೊಡಿರಿ;" ಎಂಬರ್ಥದ ಶಬ್ದ ಯಾ ಚಿತ್ರಗಳುಳ್ಳ ಪತ್ರಗಳಿಗೆ ಪ್ರತಿಬಂಧವಿಲ್ಲ. ಅವು ವ್ಯಾಪಾರದ ಬೆಳವಣಿಗೆಗೆ ಉಪಯೋಗಿಸಲ್ಪಡಬೇಕು ಈ ಪ್ರಕಾರ ಟಪಾಲ ಖಾತೆಯವರು ಪತ್ರವ್ಯವಹಾರ ಮಾಡುವವರಿಗೆ ಮುಂಜಾಗ್ರತೆ ಕೊಟ್ಟಿರುತ್ತಾರೆ.

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನ' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂದಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತ ಹೀಗೆ ಸಿಕ್ಕಿದ ಜೀವನಸತ್ವ ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

—:o.—

ದೊಡ್ಡ ಬಿಂದಿಗೆ	ರೂ.	೨—೮—೦
ಬಿಂದಿಗೆ	"	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋ-ದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.
POST BOX 2082. BOMBAY No 2.

ಜೀವನ ಸಾಹಿತ್ಯ

ಹಳೇ ಹೊಲದಲ್ಲಿ ಹೊಸ ಸಾಗುವಳಿ.

ಆ — ಡಾ|| ಹನುಮಂತರಾವ ಮಾಂಜರೇಕರ

ಒಬ್ಬ ಮುದುಕನು ಸಾಯುವ ಹೊತ್ತಿಗೆ ತನ್ನ ಮಕ್ಕಳನ್ನು ಕರೆದು ಹೇಳಿದ್ದೇನೆಂದರೆ "ನನ್ನ ಹೊಲದಲ್ಲಿ ಹಣವು ಹೂಳಿದೆ" ಅವನು ಸತ್ತ ನಂತರ ಅವನ ಮಕ್ಕಳು ಆ ಹೊಲವನ್ನೆಲ್ಲ ಅಗೆದು ನೋಡಲು ಅವರಿಗೆ ಧನವೇನೂ ಸಿಕ್ಕಲಿಲ್ಲ ಆದರೆ, ಆ ವರುಷ ಬೆಳೆ ಬಹಳ ಬಂತು, ಮುಂದೆ ಆ ಹಣ ಅವರಿಗೆ [illegible] ಅದರ [illegible] ಬೆಳೆಯ ಮುಂದ ತುತ್ತವಾಯಿತು

ಸಮಾಜದ ಸಾಮಾನ್ಯ ಜನರು [illegible] ವನ್ನು ನಾಶ ಮಾಡಿ [illegible] ಆಧುನಿಕ ಸಂಪೂರ್ಣ ಜೀವನವು ಕ್ಷೀಣವಾಗುತ್ತದೆ. ಆದರೆ ಆ ಮನುಷ್ಯನ [illegible] ರೀತಿ ಧೀರ [illegible] ನು ವಿಚಾರಕ್ಷೇತ್ರವನ್ನು ಆಳವಾಗಿ ಅಗೆದರೆ ಮಾತ್ರ ವಿಚಾರದ ಬೆಳೆಯು ವಿಪುಲವಾಗಿ ಬರುವದು ಶ್ರೀಕೃಷ್ಣನು ಗೀತೋಪದೇಶ ಮಾಡಿದ [illegible] ರದ ಪಾಠವಾಯಿತು [illegible] ಬುದ್ಧನು [illegible] ಆತ್ಮಕ್ರಾಂತಿಯೊಂದನ್ನು [illegible] ಪ್ರಸಾರ [illegible] ಳನ್ನು ರಕ್ಷಿಸಲು ಆರ್ಯ ಸಂಸ್ಕೃತಿಯ ಜ್ಞಾನಾಗ್ನಿಯ ಮೇಲಿದ್ದ ಬೂದಿಯು ಹಾರಿಹೋಯಿತು ಆರ್ಯವಿಚಾರ—ಧಾರ್ಮಿಕರೂಪಿಯಾದ ಅಗ್ನಿಯು ಪ್ರಜ್ವಲಿತವಾಯಿತು ಫ್ರಾನ್ಸ ದೇಶದೊಳಗೂ ಹಾಗೂ ವಿಶ್ವಕೋಶದ ಲೇಖಕರು ವಿಚಾರಕ್ಷೇತ್ರವನ್ನು ಊಳುವ [illegible] ಸಮಾಜಕ್ಕೆ ಆಧಾರವಾಗಿದ್ದ ತತ್ವವಾಸ್ತವಿಕ [illegible] ವನ್ನು ಗೊತ್ತುಹಚ್ಚಿದರು ಯುರೋಪಿನಲ್ಲಿ ಕ್ರಾಂತಿಯಾಯಿತು ಜನತೆಯು ಸ್ವತಂತ್ರವಾಯಿತು ಮಾರ್ಟಿನ್ ಲೂಥರನು ಆ ಕಾಲದ ಧರ್ಮವ್ಯವಸ್ಥೆಯನ್ನು ಅಗ್ನಿಯಲ್ಲಿಟ್ಟುದರ ಫಲವಾಗಿ ಧರ್ಮಸ್ವಾತಂತ್ರ್ಯವು ಚೆನ್ನವಾಗಿ ಹೊರಬಿದ್ದಿತು ಮನುಷ್ಯನ ಅಂಥ ಪರಂಪರೆಯನ್ನು ಹರಿದೊಗೆದು ಪ್ರತಿಯೊಂದು ಸಣ್ಣ ದೊಡ್ಡ ಪದಾರ್ಥವನ್ನು 'ನೀನು ಯಾರು?', 'ಎಲ್ಲಿ ಬಂದಿದ್ದಿ?' ಎಂದು ಪ್ರಶ್ನಿಸುವ [illegible] ಧರ್ಮಸಂಸ್ಕರಣ [illegible] ವಾಗುವದು ನಾಡಿನಲ್ಲಿ ಹೊಸ ಶಕ್ತಿಯು ಸಂಚರಿಸುವದು, ವಿದ್ವಾಂಸರು ಹೊಸ ದೃಷ್ಟಿಯನ್ನು ಪಡೆಯುವರು ಈ ದೃಷ್ಟಿಯು ಪ್ರಾಪ್ತವಾಗುವ [illegible] ಮೋಕ್ಷಯೂ ಬೀಳುವದು

ಇಂದಿನ ಭಾರತದಲ್ಲಿ ಎಂಥದೊಂದು ತತ್ವಜ್ಞಾನಿಯು [illegible] ಸಮಾಜಜ್ಞಾನಿಯು [illegible] ಕರ್ಮಜ್ಞಾನಿಯು ಬೇಗನೆ ನಾವು ಪ್ರತಿಯೊಂದು ವಸ್ತುವಿನ ಗುಟ್ಟನ್ನು ಹುಡುಕಬೇಕಾಗಿದೆ [illegible] ಹೊಸದೊಂದು ಸಮಾಜವ್ಯವಸ್ಥೆಯನ್ನು, ನೂತನವಾದ ಆಚಾರಗಳನ್ನು ವಿಚಾರ ಬಲದಿಂದ ಸಮಾಜದಲ್ಲಿ ಬಳಕೆಗೆ ತರಲು ಪ್ರಯತ್ನಪಡುತ್ತೇವೆ, ಹಾಗೂ ಈ ನೂತನ ಪ್ರಾಣದಿಂದೊಡಗೂಡಿ ವಿಚಾರ ಪ್ರಪಂಚದಮೇಲೆ ಸಾತ್ವಿಕವಾದ ದಿಗ್ವಿಜಯವನ್ನು ಪಡೆಯಲು ಬಯಸುತ್ತೇವೆ ಇಂದು ಕೃಷ್ಣ, ಶಂಕರಾಚಾರ್ಯ, ಬುದ್ಧ, ಮಹಾವೀರ, ಚೈತನ್ಯ, ನಾನಕ, ಕ್ರಿಸ್ತ, ಮಹಮ್ಮದ—ಇವರಲ್ಲಿಯೂ ಹೊಸ ಅವತಾರವನ್ನು ಧಾರಣಮಾಡುವವರಿದ್ದಾರೆ, ಹೊಸ ರೂಪವನ್ನು ಧರಿಸುವವರಿದ್ದಾರೆ, ಒಂದೇ ರೂಪವನ್ನು ಧರಿಸುವ ಸಂಭವವಿದೆ ಪ್ರತಿಯೊಂದು ವಿಭೂತಿಯೂ ಅನೇಕ ರೂಪಗಳನ್ನು ಧಾರಣ ಮಾಡಬಹುದು ನಾವು ವಿಚಾರಸಾಗರದ ಮಂಥನ ನಡಿಸಿದ್ದೇವಷ್ಟೆ?

ಸರ್ಪಸಂಹಾರ.

ಕೆಲವು ಹನಿಗಳನ್ನು ಹಾವಿನ ಮೇಲೆ ಹಾಕಲು ಬಹಳ ಕ್ರೂರ ಸರ್ಪವಿದ್ದರೂ ಕೂಡ ತತ್ಕಾಲ ಸಾಯುವದು ಹಾವು—ಚೇಳಿನ ವಿಷದ ಮೇಲೂ, ಪ್ಲೇಗ, ಕಾಲರ, ಹರಿಣವಾದ ಇಸಬು, ಗಜಕರ್ಣ ಇವುಗಳ ಮೇಲೂ ಅಪ್ರತಿಮ ಗುಣಕಾರಿ! ಇವತ್ತೇ ತರಿಸಿರಿ

೧ ಔನ್ಸಿನ ಬಾಟ್ಲಿ ೧ಕ್ಕೆ ರೂ ೧ } ಟಪಾಲ ಖರ್ಚ
೧ ಡಜನ ,, ರೂ ೯ } ಬೇರೆ

ಸರ್ಪ ಸಂಹಾರ ಕಾರ್ಯಾಲಯ,
'ಕನ್ನಡಿಗ" ಬಾಗಲಕೋಟೆ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಅಹುದು, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕುರಿತು ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಉದುರುವವು ಮತ್ತು ಉದುರುವವು ನೀವು ಅವಕ್ಕೆ ಚಲೋ 'ಆಹಾರವನ್ನು' ಕೊಡಬೇಕು. ಶ್ರೇಷ್ಠವಾದ ಆಹಾರವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು. ಇದು ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ ಹೀಗೆ ತಿಕ್ಕಿದ ತೈಲವು ಕೂದಲ ಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ
ಈ ತೈಲವು ದೊರೆಯುತ್ತದೆ
ಅಥವಾ
ನಮಗೆ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ ೧—೦—೦
ಅಂಚೆವೆಚ್ಚ ,, ೦—೬—೦
೩ ಬಾಟಲಿಗಳಿಗೆ ,, ೨—೧೦—೦
ಅಂಚೆವೆಚ್ಚ ,, ೦—೧೨—೦

ನಿಮ್ಮ ಅಂಗಡಿಕಾರರಿಂದ
ತರಿಸಿಕೊಳ್ಳಿರಿ

೪ ಔನ್ಸಿಗೆ ರೂ. ೨-೦-೦
೨ ಔನ್ಸಿಗೆ " ೧-೪-೦
೧ ಔನ್ಸಿಗೆ ,, ೦-೧೨-೦
ಅಂಚೆವೆಚ್ಚ ,, ೦-೬-೦

ಒಟ್ಟೋದಿಲ್ ಬಹಾರ
ಕೇಳಲಿಕ್ಕೆ ಮರೆಯಬೇಡಿರಿ!

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇಡಿಯ, [illegible] ಸಂಗ್ರಹಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ ಆದರೆ ಅವುಗಳಲ್ಲಿ ಹೂವಿನ ಸಹಜ ಪರಿಮಳವಿಲ್ಲ ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು [illegible] ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ [illegible]

THE ANGLO INDIAN DRUG & CHEMICAL CO.
POST BOX 2080 BOMBAY No 2.

ಈಗಿನ ಪ್ರಪಂಚ.

ಸರ್ವಾಧಿಪತಿಗಳು ಹೇಗೆ ನಡೆಕೊಳ್ಳಬೇಕು?

ಇತ್ತಲಾಗಿ ಹಿಂದುಸ್ಥಾನದೊಳಗೂ, ಲಂಡನ್ನಿನೊಳಗೂ ಸರ್ವಾಧಿಪತಿಗಳಾದ ವಿಲಿಂಗ್ಡನ್ ದೊರೆಗಳ ನಡಾವಳಿಯ ವಿಷಯು ಟೀಕೆಯಾಗುತ್ತಿದೆ. ಸರ್ವಾಧಿಪತಿಗಳು ಲೋಕಪ್ರಿಯರಾದರೆ ಮಾತ್ರ ಸಾಹಟೊಪ್ಪದಿದ್ದಷ್ಟು ಅಪ್ರಿಯರಾಯುತ್ತಾಗಿ ಅನೇಕರು ಅಭಿಪ್ರಾಯಪಡುತ್ತಾರೆ. ಇದೇ ಕಳೆದ ಜೂನ ೩ನೇ ತಾರೀಖಿಗೆ ಪೂಜ್ಯ ವಿಕ್ಟೋರಿಯಾ ಮಹಾರಾಣಿಯವರ ಪತ್ರವ್ಯವಹಾರದ ೩ ಗ್ರಂಥಗಳು ಪ್ರಕಟವಾಗಿವೆ. ಅವುಗಳಲ್ಲಿ ಮಹಾರಾಣಿಯವರು ಹಿಂದುಸ್ಥಾನದ ಸರ್ವಾಧಿಪತಿಗಳಿಗಿರಬೇಕಾದ ಗುಣಗಳನ್ನು ಚಲುವಾದ ವರ್ಣನೆ ಮಾಡಿರುತ್ತಾರೆ. ಕರ್ಝನ್ ದೊರೆಗಳಿಗೆ ಸರ್ವಾಧಿಪತಿಗಳೆಂದು ನೇಮಿಸುವ ವಿಚಾರ ನಡೆದಿತ್ತು, ಅದನ್ನನುಲಕ್ಷಿಸಿ ಮಹಾರಾಣಿಯವರು ಬರೆಯುವದೇನೆಂದರೆ— "ಮಿ| ಕರ್ಝನ್‌ರವರ ಬಗ್ಗೆ ಹಿಂದುಸ್ಥಾನದೊಳಗಿನ ಮುಖ್ಯ ಸೇನಾಧಿಪತಿಗಳ ಮತವನ್ನು ಕೇಳಿಕೊಳ್ಳಬೇಕು. ಹಾಗೆಯೇ ಅಫಘಾಣಿಸ್ಥಾನದ ಅಮೀರರೊಡನೆ ಇವರಿಗೆ ಗೆಳೆತನವಿರಬೇಕು. ಅಫಘಾಣಿಸ್ಥಾನದ ಬಗ್ಗೆ ಮಾಹಿತಿಯಿರಬೇಕು, ಹಿಂದುಸ್ಥಾನದ ಭಾಷಾ ವ್ಯಾಸಂಗವಿರಬೇಕು. ಕಾರ್ಯಕಾರಿ ಮಂಡಳ, ಪರಿಷತ್ ಮಂಡಳ, ದೊಡ್ಡ ದೊಡ್ಡ ಅಧಿಕಾರಿಮಂಡಳಗಳೊಳಗೆ ಬೆರೆತು ಹೋಗದೆ ಅಲಿಪ್ತರಾಗಿರತಕ್ಕದ್ದು. ನಮಗೆ ಹಿಂದುಸ್ಥಾನದಲ್ಲಿ ಶಾಂತತೆಯಿಂದಲೂ, ಸುಖದಿಂದಲೂ ಉಳಿಯಬೇಕಾಗಿದೆ. ಸಮಸ್ತ ವರ್ಗಗಳ ಜನರು ನಮಗೆ ಮಾನ್ಯತೆ ಕೊಡಬೇಕು. ಹೀಗೆ ನಮ್ಮ ಇಚ್ಛೆ ಇದ್ದರೆ, ಸರ್ವಾಧಿಪತಿಗಳು ಸ್ವತಂತ್ರರಾಗಿದ್ದು ಜನರ ಭಾವನೆಗಳನ್ನು ತಿಳಕೊಂಡು ಅವನ್ನು ಗ್ರಹಿಸತಕ್ಕದ್ದು. ಸರ್ವಾಧಿಪತಿಗಳು ಸೂಕ್ಷ್ಮನ, ಗರ್ವಿಷ್ಟ ಸಿವಿಲಿಯನ್ ಹಾಗು ಪೊಲಿಟಿಕಲ್ ಏಜಂಟರ ಮಾತುಗಳಿಗೆ ಕಿವಿಗೊಡದೆ ನಿರ್ದಾಕ್ಷಿಣ್ಯದಿಂದ ತಮಗೆ ಯೋಗ್ಯವಾದದ್ದನ್ನೇ ಮಾಡಬೇಕು. ಅವರಿಗೆ ಯಾವಾಗಲೂ ಬೆಚ್ಚಿ ನಾವು ಗೆದ್ದವರು, ಜನರು ಸೋತವರು, ಹೀಗೆ ಆಗಿಂದಾಗ ನೆನಪು ಮಾಡಿ ಕೊಡಕೂಡದು. ನಾವು ಒಡೆಯರೆಂದು ಅವರಿಗೆ ತಿಳಿಸುವದರ ಬದಲು, ಮಮತೆಯಿಂದ ಅವರನ್ನು ತಿಳಿಸಬೇಕಲ್ಲದೆ, ನಿರಂಕುಶ ಕಾರಭಾರದಿಂದಲ್ಲ. ಆದರೆ ಬಹುತರವಾಗಿ ಸರ್ವಾಧಿಪತಿಗಳು ನಿರಂಕುಶರಾಗಿಯೇ ಕಾರಭಾರವನ್ನು ನಡೆಸುತ್ತಾರೆ. ಇದು ನಮಗೆ ವ್ಯಸನಕಾರಕ. ಮಿ| ಕರ್ಝನ್‌ರವರು ಇದನ್ನೆಲ್ಲ ತಿಳಕೊಂಡು ಅದರಂತೆ ನಡೆಕೊಳ್ಳಬಹುದೇನು?" ಪೂಜ್ಯ ವಿಕ್ಟೋರಿಯಾ ಮಹಾರಾಣಿಯವರಿಗೆ ಹಿಂದುಸ್ಥಾನದಲ್ಲಿ ಒಡೆಯರಾಗಿ ನಡೆಕೊಳ್ಳಬೇಕೆಂಬ ಮಾತು ಮಾನ್ಯವಿತ್ತು, ಪ್ರೀತಿಯಿಂದ ಅದನ್ನು ನಡೆಸಬೇಕೆಂದು ಮಹಾರಾಣಿಯವರ ಅಭಿಪ್ರಾಯ. ಈಗ ಬ್ರಿಟಿಶ ಸಾಮ್ರಾಜ್ಯದಲ್ಲಿಯ ಪ್ರಜೆಗಳೆಲ್ಲರೂ ಸಮಾನರು, ಒಡೆಯ-ಒಕ್ಕಲು, ಉಚ್ಚ-ನೀಚವೆಂಬ ಭಾವನೆಗಳೆಲ್ಲ ಹಾಗೆ ಭೇದ ಹಿಡಿಯಬಾರದಾಗಿ ಬ್ರಿಟಿಶ ರಾಜಕಾರಣಿಗಳು ಉದ್ದುದ್ದ ಮಾತುಗಳನ್ನಾಡುತ್ತಿದ್ದಾರೆ. ಈ ಯುಗದಲ್ಲಿ ವಿಕ್ಟೋರಿಯಾ ಮಹಾರಾಣಿಯವರಿದ್ದರೆ, ಸರ್ವಾಧಿಪತಿಗಳ ಕಡೆಯಿಂದ ಅವರೇನು ಅಪೇಕ್ಷೆ ಮಾಡುತ್ತಿದ್ದರು? ಆ ಅಪೇಕ್ಷೆಗೆ ತಕ್ಕದ್ದಾಗಿ ವಿಲಿಂಗ್ಡನ್ ದೊರೆಗಳು ನಡೆಕೊಂಡರೇನು? ಎಂಬದನ್ನು ವಿಚಾರಶೀಲರು ವಿಚಾರಿಸತಕ್ಕ ವಿಷಯ.

⁂

ಲೋಥಿಯನ್ ಮಂಡಳದ ಸಭಾಸದರ ಎದೆ ಹಾರಿತು!

ಮತಾಧಿಕಾರವನ್ನು ಯಾರಿಗೆ ಕೊಡಬೇಕೆಂಬುದರ ಕುರಿತು ಚೌಕಸಿ ಮಾಡನೇಮಿಸಿದ ಲೋಥಿಯನ್ ಮಂಡಳದ ಸಭಾಸದರಾದ ಸರ್ ಅರ್ನೆಸ್ಟ ಬೆನೆಟ್‌ರವರು 'ಅನ್ಸರ್ಸ್' ಯಾನೆ 'ಉತ್ತರಗಳೆಂಬ' ಒಂದು ಲಂಡನ್ನಿನೊಳಗಿನ ಪತ್ರಿಕೆಯಲ್ಲಿ ತಮ್ಮ ಭಾರತೀಯ ಪ್ರವಾಸದ ವರ್ಣನೆ ಮಾಡಿರುತ್ತಾರೆ. ಸರ್ ಅರ್ನೆಸ್ಟ ಬೆನೆಟ್‌ರವರು ಪಾರ್ಲಿಮೆಂಟಿನ ಸಭಾಸದರು. ಅವರು ಬರೆಯುವದೇನೆಂದರೆ— ೩—೪|| ತಿಂಗಳುಗಳಲ್ಲಿ ನಾವು ೬೦೦೦ ಮೈಲು ಅಡ್ಡಾಡಿ ೩೦೦ ಮಂದಿಗಳ ಸಾಕ್ಷಿ ತೆಗೆದೆವು. ಇದೇ ಲೋಥಿಯನ್ ಮಂಡಳವು ನಡೆಸಿದ ಕೆಲಸ. ತಮಿಳುನಾಡಿನಲ್ಲಿ ನಾವು ಇಲೆಕ್ಷನು ನೋಡಿದೆವು. ಮತದಾರರು ತಂಡುಗಟ್ಟಿ ಮತ ಕೊಡಲು ಹೋಗುತ್ತಿದ್ದರು. ಕೆಲವರು ನಡೆಕೊಳ್ಳುತ್ತ, ಕೆಲವರು ವಾಹನ ಹತ್ತಿ ಮತದಾನ ಸ್ಥಳದ ಕಡೆ ಓಡುತ್ತಿದ್ದರು. ಎಲ್ಲರಿಗೂ ಇಲೆಕ್ಷನ್ ಹುಚ್ಚು ತಲೆಗೇರಿತ್ತು. ಕೆಲವೆಡೆ "ರೆಡ್ ಶರ್ಟ್ಸ್" ಯಾನೆ ಖುದಾಯಿ ಖಿದಮತಗಾರರು ಪಿಕೆಟಿಂಗ ಮಾಡಿದರು. ಅಲ್ಲಿ ಮಾತ್ರ ಮತದಾರರು ವಿಶೇಷ ಸೇರಲಿಲ್ಲ. ಹಿಂದುಸ್ಥಾನದಲ್ಲಿ ಇಂಗ್ಲಂಡದಲ್ಲಿರುವಂತೆ ತಾತ್ವಿಕ ಮತಭೇದದ ಪಕ್ಷಗಳಿಲ್ಲ. ವ್ಯಕ್ತಿಗೆ ನೋಡಿ ಇಲ್ಲಿ ಮತ ಕೊಡೋಣಾಗುತ್ತದೆ. ಕೊಂಗ್ರೆಸ ಪಕ್ಷದವರು ಗುಪ್ತವಾಗಿ ರಾಜದ್ರೋಹದ ಪತ್ರಿಕೆಗಳನ್ನು ಹೊರಡಿಸಿ ನಮ್ಮ ಮಂಡಳಕ್ಕೆ ಬಹಳ ಹೆದರಿಕೆ ಹಾಕಿದರು. ನಮ್ಮ ಬಗ್ಗೆ ಸರಕಾರವು ಒಳ್ಳೇ ಬಂದೋಬಸ್ತಿಟ್ಟಿತ್ತು. ಆದಾಗ್ಯೂ ಮುಕ್ಕಾಲು ನಾವು ಇಂಮೊಡನೆ ಕರಿ ಪತಾಕೆಗಳನ್ನು ಹಾರಿಸುತ್ತ 'ಲೋಥಿಯನ್ ರೇ ಹಿಂದಿರುಗಿರೆಂ'ತ ಒದರುತ್ತ ನಮಗೆ ಸ್ವಾಗತ ಮಾಡುತ್ತಿದ್ದರು. ನಾವು ಗ್ರಾಮ ಸಂಚಾರಕ್ಕೆ ಹೋದಾಗ ಕೊಂಗ್ರೆಸ ಮಂದಿಗಳ ಕಡೆಯಿಂದ ನಮಗೆ ಅಪಮಾನವಾಗದಂತೆ ಪೋಲೀಸರು ಜಾಗ್ರತೆ ವಹಿಸಿದರು. ಕೊಂಗ್ರೆಸ ಪಕ್ಷದವರ ವಿರೋಧ ಹಾಗಿರಲಿ, ಸಾಮಾನ್ಯ ಸ್ತ್ರೀ-ಪುರುಷರಿಗೆ ನಮ್ಮ ವಿಷಯ ಅಭಿಪ್ರಾಯವೇನೆಂದು ತಿಳಕೊಳ್ಳಲು ನಾನು ಕುತೂಹಲಪಟ್ಟೆ. ಮುಖವಟಿಕೆಯ ನೋಟದಿಂದ ಭಾವನೆ ತಿಳಕೊಳ್ಳುವದಾದರೆ, ಜನಸಾಮಾನ್ಯರಿಗೆ ನಾವು ಬಂದಿದ್ದರೂ ಒಂದೇ, ಬಾರದಿದ್ದರೂ ಒಂದೇ, ಎಂಬಂತೆ ನನಗೆ ಭಾಸವಾಯಿತು. ಅಷ್ಟು ಅವರು ದುರ್ಲಕ್ಷ ಮಾಡುತ್ತಿದ್ದರು. ಹಿಂದುಸ್ಥಾನದ ಜನರು ಮುಖ್ಯವಾಗಿ ಒಕ್ಕಲುತನದವರು, ಇವರೆಲ್ಲರೂ ಬಡವರು, ಹೊಟ್ಟೆತುಂಬ ಕೂಳಿಗೆ ಗತಿಯಿಲ್ಲದವರು, ಚಳಿಜ್ವರದಿಂದ ಮರ್ದಿತರಾದವರು, ಸಾಲದಲ್ಲಿಯೇ ಮುಳುಗಿ ಬಿದ್ದಿದ್ದಾರೆ. ಇಂಥವರಿಗೆ ಈ ವರ್ಷ ಕ್ಯಾವ್ಯಾ ಮತಾಧಿಕಾರ ಕೊಡುವದರಿಂದ ಲಾಭವೇನಿದೆ? ಪೋಲೀಸರು ಎಷ್ಟು ಬಂದೋಬಸ್ತಿಟ್ಟಾಗ್ಯೂ ಅವರಿಂದ ನಿಷೇಧ ಪತ್ರಿಕೆಗಳನ್ನು ನಿಲ್ಲಿಸಲಾಗಲಿಲ್ಲ. ನಿಷೇಧ ಪತ್ರಿಕೆಯ ನಮೂನಾ— 'ನಾಗರಿಕರೇ, ನಮ್ಮ ಹಿರ್ಯರಿಂದ ವಿಲಾಯಿತಿ ಉಗಿ ಬಂಡಿಗಳಲ್ಲಿ, ಬಂಡಿಯ ಸ್ವಾರರಂತೆ, ಪ್ರಜಾಪೀಡನ ಹಾಗು ಸುಲಿಗೆಯಿಂದ ಬಡಬಿದ್ದ ದೇಶದಲ್ಲಿ ಸಂಭ್ರಮದಿಂದ ಸಂಚರಿಸುತ್ತ ಲೋಥಿಯನ್ ಮಹೋದಯರು ಮುಂಬಯಿಯಲ್ಲಿ ೭ನೇ ತಾರೀಖಿಗೆ ತಮ್ಮ ಕೊಲೆಪಾತಕದ ರೂಪಪ್ರದರ್ಶನ ಮಾಡುವವರಿದ್ದಾರೆ . . . . . ಇವರು ಮಂದಬುದ್ಧಿಯವರು, ನಿರ್ಲಜ್ಜರು, ವಿದೂಷಕರು, ಇವರ ಬಗ್ಗೆ ನಮಗುಂಟಾದ ತಿರಸ್ಕಾರವನ್ನೂ ಅಸಹ್ಯತೆಯನ್ನೂ ವ್ಯಕ್ತಗೊಳಿಸಲು ನಾಗರಿಕರು ಎಲ್ಲ ಪ್ರಯತ್ನ ಮಾಡತಕ್ಕದ್ದು. ಪ್ರತಿಯೊಬ್ಬರ ಕೈಯಲ್ಲಿ ಕರೀ ನಿಶಾನೆಯಿರಬೇಕು, ಎಲ್ಲರೂ ಸಂಪೂರ್ಣ ಹರತಾಳ ಆಚರಿಸಬೇಕು." ಪೋಲೀಸರು ಒಳ್ಳೇ ಬಂದೋಬಸ್ತಿಟ್ಟಿದ್ದರಿಂದ ಮೇಲ್ಕಾಣಿಸಿದ ಸರ್ಕ್ಯುಲರಿಗೆ ಜನರು ಪುರಸ್ಕಾರ ಕೊಡಲಿಲ್ಲ, ಹರತಾಳ ಮಾತ್ರ ಸಂಪೂರ್ಣವಾಗಿ ನಡೆದಿತ್ತು. ಅಂಗಡಿ ಮುಚ್ಚಿ ಹರತಾಳ ಮಾಡಿ ವ್ಯಾಪಾರ ನಿಲ್ಲಿಸುವದು ಆತ್ಮಘಾತವೇ ಸರಿ. ಆದರೆ, ನಮಗೆ ಕಾಣದ ಸಂಗತಿ ದೃಷ್ಟಿಯೊಳಗಿರುವದಿಲ್ಲವಾಗಿ ಬಾಧಿಸುವದು ಯೋಗ್ಯವಲ್ಲ. ಹೊಸ ರಾಜ್ಯಘಟನೆಯಾದ ಬಳಿಕ ಏನವಸ್ಥೆಯಾದೀತೆಂದು ನಾನು ವಿಚಾರಿಸುತ್ತಿದ್ದೇನೆ. ಕೊಂಗ್ರೆಸ ಪಕ್ಷದವರು ನಮ್ಮ ಮಂಡಳಕ್ಕೆ ಬಹಿಷ್ಕಾರ ಮಾಡಿದರು. ಅನೇಕ ಸಾಕ್ಷಿದಾರರು ನಮ್ಮ ಕಡೆ ಸಾಕ್ಷಿ ಕೊಟ್ಟರು. ಆದರೆ, ಕೊಂಗ್ರೆಸ ಪಕ್ಷದ ಮತವೇನೆಂದು ಒಬ್ಬರಿಂದಲೂ ಹೇಳಬರಲಿಲ್ಲ. ಹಿಂದುಸ್ಥಾನದೊಳಗಿನ ಸುಸಂಘಟಿತವಾದ ಮತ್ತು ಪ್ರಬಲ ರಾಜಕೀಯ ಸಂಸ್ಥೆಯೆಂದರೆ, ರಾಷ್ಟ್ರೀಯ ಸಭೆಯೇ. ಜೈಲಿನಲ್ಲಿದ್ದ ೩೦ ಸಾವಿರ ಕೈದಿಗಳು ಹೊರಬಿದ್ದ ಕೂಡಲೆ ಯಾವ ಅವಸ್ಥೆಯಾದೀತು? ೬ ತಿಂಗಳು ಶಿಕ್ಷೆಯಾದ ಕೈದಿಗಳೆಲ್ಲರೂ ಜೂನ ತಿಂಗಳಲ್ಲಿ ಬಿಡುಗಡೆಯಾಗುವರು. ಇಂದಲ್ಲ ನಾಳೆ, ಒಂದಿಲ್ಲೊಂದು ದಿನ ಒಳ್ಳೇ ರಾಜಕೀಯ ಕೈದಿಗಳಿಗೆ ಬಿನ್‌ಶರ್ತ ಬಿಡುಗಡೆ ಮಾಡಲೇ ಬೇಕಾಗುವದು. ಅನೇಕರು ಬ್ರಿಟಿಶರ ಮೇಲೆ ಹಗೆ ಬಗೆದು ಜೈಲಿನೊಳಗಿಂದ ಹೊರಬೀಳುವರು. ಬ್ರಿಟಿಶ ರಾಜ್ಯದ ವಿರುದ್ಧ ಅನೇಕರು ದುಷ್ಕೃತ್ಯವನ್ನು ಸಹ ಆಶ್ರಯಿಸುವರು. ಇದು ಅಸಭ್ಯ ಕೊಂಗ್ರೆಸ ರಾಜಕಾರಣಿಗಳ ಮಾತಾಯಿತು. ಸ್ವತಂತ್ರ ಹಿಂದುಸ್ಥಾನದ ಉತ್ಕಟ ಧ್ಯೇಯವಾದಿಗಳನೇಕರಿದ್ದಾರೆ. ಇವರಿಗೆ ಹಿಂದುಸ್ಥಾನದ ಪರಂಪರೆಗನುಚಿತವಾಗಿ ಸಂಘಟಿಸಬೇಕೆಂದೆನಿಸುತ್ತದೆ. ಇವರು ಕರ್ತವ್ಯದಕ್ಷರು, ನಿಸ್ಪೃಹರು. ಈ ಕೈದಿಗಳಿಗೆ ಹಿಂದುಸ್ಥಾನದಲ್ಲಿ ಒಳ್ಳೇ ಪ್ರತಿಷ್ಠೆಯಿದೆ. ಇವರು ಸಭೆಸೇರಿಸಿ ಜನರಿಗೆ ಯಾವದನ್ನೂ ಸ್ಪಷ್ಟ ಹೇಳಿಕೊಳ್ಳುವಷ್ಟು ಸಾಮರ್ಥ್ಯವಿದೆ. ಇನ್ನೂ, ಇವರ ಸಾವಿರಾರು ಅನುಯಾಯಿಗಳು ಹೊಸ ಮತಾಧಿಕಾರವನ್ನೂ, ಹೊಸ ರಾಜ್ಯವನ್ನೂ ಹೇಗೆ ಒಪ್ಪಿಗಿಸುವರು? ಇವರು ಇಲೆಕ್ಷನನ್ನು ಬಹಿಷ್ಕರಿಸಲಿಕ್ಕಿಲ್ಲ. ಹೊಸ ರಾಜ್ಯಯಂತ್ರವನ್ನು ಕೈವಶ ಮಾಡಿಕೊಂಡು ತಮ್ಮ ಕಾರ್ಯಸಾಧನೆ ಮಾಡುವರು. ಹಿಂದುಸ್ಥಾನದಲ್ಲಿ ತಕ್ಕ ಶಿಕ್ಷಣವಿಲ್ಲ. ಇಲೆಕ್ಷನಿನ ಕಾಲದಲ್ಲಿ ಲಂಚಗೊಳತನ ವಿಪರೀತ ನಡೆಯುತ್ತದೆ. ನಮ್ಮ ಮತದಾನ ಮಂಡಳದವರು ದೇವರಿಗೆ ಸ್ಮರಿಸಿ ಮಾಡಿದ್ದಾರೆ. ಇಂಥ ಮಂಡಳದ ಶಿಫಾರಸುಗಳ ಮೇಲೆ ಘಟಿತವಾದ ರಾಜ್ಯಘಟನೆಯಿಂದ ಹಿಂದೀಯರಿಗೆ ಉಪಕಾರವಾಗುವದೋ, ಅಥವಾ ರಾಷ್ಟ್ರೀಯ ಸಭೆಯ ಹಠತನದಿಂದ ಎಲ್ಲವೂ ನಿರರ್ಥಕವಾಗುವದೋ? ದೇವರಿಗೇ ಗೋಚರ"

ಲೋಥಿಯನ್ ಮಂಡಳದವರಿಗೆ ಸತ್ಯ ತಕ್ಕೆ ಮುಟ್ಟಿಗ ತಿಳಿದಿದೆಂದು ತಿಳಿಸಲು ಸಂತೋಷವಾಗುತ್ತದೆ. ರಾಷ್ಟ್ರೀಯ ಸಭೆಯ ಹಗೆತನವನ್ನು ಬಗಹರಿಸದನಕ ಯಾವದೇ ರಾಜ್ಯಘಟನೆ ಯಶಸ್ವಿಯಾಗುವದು ಕಠಿಣ. ಅದನ್ನು ಬ್ರಿಟಿಶ ರಾಜಕಾರಣ ಧುರಂಧರರು ಹೇಗೆ ಬಗೆಹರಿಸಬಯಸುತ್ತಾರೆಂದು ನೋಡಲು ಎಲ್ಲರೂ ಕುತೂಹಲಪಡುತ್ತಾರೆ

⁂

ರಾಜಶಾಸನಗಳ ವರ್ಣನೆ.

ಕಳೆದ ಸೋಮವಾರ ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿಗಳಾದ ಬಾರ್ಲಿ-ವಾಡಿಯಾರವರ ಕೋರ್ಟಿನಲ್ಲಿ ವಕೀಲ ಸಂಘದವರು ಮಾಡಿದ ಅಪೀಲನ್ನು ಅಂಗೀಕರಿಸಿ ವಿಚಾರಕ್ಕೆ ಇಟ್ಟಿದ್ದಾರೆ. ...... ಮತ್ತು ದೇವಿದಾಸ ಸೊಲಿಸಿಟರ ಕಂಪನಿಯ ಸೊಲಿಸಿಟರರಾದ ರಾ|... ರವರಿಗೆ ಪೋಲೀಸ ಕಮಿಶನರರ ಹಾಜರಿ ಹುಕುಮು ಮುರಿದ ಬಗ್ಗೆ ೨ ವರ್ಷಗಳ ಸಶ್ರಮ ಶಿಕ್ಷೆಯಾಗಿದೆ. ಈ ಕುರಿತು ವಕೀಲ ಸಂಘದವರು ಒಂದು ಅರ್ಜಿಯನ್ನು ತಯಾರಿಸಿ ಹೈಕೋರ್ಟಿನಲ್ಲಿ ದಾಖಲಪಡಿಸಿದ್ದಾರೆ. ಆ ಅಪೀಲಿನಲ್ಲಿ ರಾಜಶಾಸನಗಳ ಸಂಬಂಧದ ಅವಸ್ಥೆ ವರ್ಣಿಸಲ್ಪಟ್ಟಿದೆ. ರಾ| ....ರವರಿಗೆ ರಾಜಶಾಸನದ ೩ನೇ ಕಲಮಿನಂತೆ ಜನವರಿ ೬ನೇ ತಾರೀಖಿಗೆ ಸೆರೆಹಿಡಿದು, ಬಾಯಖಳಾ ಜೈಲಿನಲ್ಲಿ ಬಂಧಿಸಿಟ್ಟರು. ೯ನೇ ತಾರೀಖಿಗೆ ಅವರಿಗೆ ಬಿನ ಶರ್ತ ಬಿಡುಗಡೆಯಾಯಿತು. ಹಾಗೆಯೇ ೪ನೇ ಕಲಮಿನಂತೆ ದಿನಾ ಬೆಳಗಿನ ೧೦ ಘಂಟೆಗೆ ಒಮ್ಮೆ, ಮಧ್ಯಾಹ್ನ ೩ ಘಂಟೆಗೆ ಒಮ್ಮೆ; ಹೀಗೆ ೨ ಬಾರಿ ಹಾಜರಿ ಕೊಡಬೇಕೆಂದು ಪೋಲೀಸ ಕಮಿಶನರರು ಹುಕುಮು ಕೊಟ್ಟರು. ಮಾರನೇ ದಿನ ೧೪ನೇ ತಾರೀಖಿಗೆ ಹಾಜರಿ ಕೊಡದಬಗ್ಗೆ ಅವರಿಗೆ ಸೆರೆಹಿಡಿದು ತಾ. ೧೫ನೇಗೆ ಖಟ್ಲೆಯಾಗಿ ೭ನೇ ಕಲಮಿನಂತೆ ೨ ವರ್ಷಗಳ ಕಠಿಣ ಶಿಕ್ಷೆಯಾಯಿತು. ಇದಕ್ಕಿಂತ ಹೆಚ್ಚಿಗೆ ಶಿಕ್ಷೆ ಕೊಡಲು ಮೆಜಿಸ್ಟ್ರೇಟರಿಗೆ ಹಕ್ಕಿಲ್ಲ. ಕಲಮಿನಲ್ಲಿ ವಿಧಿಸಿದ ಪೂರ್ಣ ಶಿಕ್ಷೆ ಕೊಡೋಣಾಗಿದೆ. ಅಪೀಲು ಮಾಡಿದ ಸಂಘದವರು ಹೇಳುವದೇನಂದರೆ — "ಹೀಗೆ ಶಾಸನ ಮಾಡಿ ನ್ಯಾಯದ ಘಾತವಾಗಿದೆ. ಕ್ರಿ. ಪ್ರೊ. ಕೋಡಿನ ಕಲಮು ೪೩೫ ಯಾ ೬ನೇ ರಾಜಶಾಸನದ ಅಪೀಲ ಅಧಿಕಾರವನ್ನಯ ಇಲ್ಲದೆ ಹಿಂದುಸ್ಥಾನ ಸರಕಾರ ಕಾಯಿದೆಯ ೧೦೭ನೇ ಕಲಮಿನನ್ವಯ ನ್ಯಾಯಸ್ಥಾನಕ್ಕಿರುವ ಅಧಿಕಾರದಂತೆ ನ್ಯಾಯಸ್ಥಾನವು ಮೇಲ್ವಿಚಾರ ಮಾಡಬೇಕು. ಬ್ರಿಟಿಶ ಹಿಂದುಸ್ಥಾನ ಯಾ ಅದರ ಯಾವದೊಂದು ಭಾಗದಲ್ಲಿ ಶಾಂತತೆ ಹಾಗು ಸುರಾಜ್ಯ ಇರಿಸುವದಕ್ಕಾಗಿ ರಾಜಶಾಸನಗಳನ್ನು ಆಪತ್ಕಾಲದಲ್ಲಿ ಹೊರಡಿಸುವ ಅಧಿಕಾರ ಹಿಂದುಸ್ಥಾನ ಸರಕಾರ ಕಾಯಿದೆಯ ೭೨ನೇ ಕಲಮಿನನ್ವಯ ಗವ್ಹರ್ನರ ಜನರಲ್‌ರಿಗೆ ಉಂಟು. ಹಿಂದೀ ಕಾಯಿದೆ ಕೌನ್ಸಿಲುಗಳಿಗೆ ಕಾಯಿದೆ ಮಾಡುವ ಅಧಿಕಾರದ ಮೇಲೆ ಇರುವಷ್ಟೇ ನಿರ್ಬಂಧಗಳು ರಾಜಶಾಸನಗಳಿಗೂ ಹಾಗು ಉಂಟು. ಕಾಲಕಾಲಕ್ಕೆ ಜಾಹೀರನಾಮೆಗಳನ್ನು ಹೊರಡಿಸಿ ರಾಜಶಾಸನಗಳ ವ್ಯಾಪ್ತಿಯನ್ನು ಬೇರೆ ಬೇರೆ ಪ್ರಾಂತಗಳಿಗೆ ಹಚ್ಚುವ ಅಧಿಕಾರವು ಗವ್ಹರ್ನರ ಜನರಲ್‌ರಿಗಿರುವಂತಾಗಿ ರಾಜಶಾಸನಗಳಲ್ಲಿ ವಿಧಿಸಲ್ಪಟ್ಟಿದೆ. ಹೀಗೆ ಜಾಹೀರನಾಮೆ ಹೊರಡಿಸುವ ಅಧಿಕಾರ ಪಡೆಯುವದು ಕಾಯಿದೆಗೆ ವಿರೋಧವಾಗಿದ್ದಿದೆ. ಹಿಂದುಸ್ಥಾನ ಸರಕಾರ ಕಾಯಿದೆಯಲ್ಲಿ ಹೀಗೆ ವಿಧಿಸಲ್ಪಟ್ಟಿಲ್ಲ. ಇದರಂತೆ ಪ್ರಾಂತಿಕ ಸರಕಾರಗಳಿಗೆ ಜಾಹೀರನಾಮೆ ಹೊರಡಿಸುವ ಅಧಿಕಾರ ಕೊಟ್ಟಿದ್ದಾದರೂ ಕಾಯಿದೆಗೆ ವಿರೋಧವಾದದ್ದೇ. ಅದರಿಂದ ಈ ಅಧಿಕಾರದಂತೆ ಹೊರಡಿಸಿದ ಯಾವತ್ತು ಜಾಹೀರನಾಮೆಗಳು ಅಸಿಂಧುವಾಗಿವೆ, ನಿರರ್ಥಕವಿವೆ. ರಾಜಶಾಸನಗಳಲ್ಲಿ ನಿರ್ದೇಶಿಸಿದಂತೆ ಭವಿಷ್ಯತ್ಕಾಲದಲ್ಲಿ ಅಮಲಿನಲ್ಲಿ ಬರತಕ್ಕ ಎಲ್ಲ ಕಲಮುಗಳು ನಿರರ್ಥಕವಿವೆ. ರಾ ...ರವರು ಸೊಲಿಸಿಟರರು. ೨೫ ವರ್ಷಗಳಿಂದ ಅವರು ಸೊಲಿಸಿಟರ [illegible] ನಡಿಸುತ್ತಾರೆ. ಈ ಹಿಂದೆ ಅವರು ಯಾವದೇ ಅಪರಾಧ ಮಾಡಲಿಲ್ಲ. ಅವರಿಗೆ ಯಾವದೇ ಶಿಕ್ಷೆ ಕೂಡ ಆಗಲಿಲ್ಲ; ಹಾಗೆ [illegible] ರಾಜಶಾಸನದ ೪ನೇ ಕಲಮಿನನ್ವಯ ಪೋಲೀಸರಲ್ಲಿ ಹಾಜರಿ ಕೊಡಬೇಕಾಗಿ ವಿಧಿಸುವ ಅಧಿಕಾರ ಪೋಲೀಸರಿಗಿಲ್ಲ. ರಾಜಶಾಸನದ ಕಲಮಿಗೆ ಹಾಗು ಹೇತುವಿಗೆ ಅದು ವಿಸಂಗತವಾಗಿದೆ. ಹಾಗೆ ಅಧಿಕಾರವಿರುವದಾಗಿ ಗ್ರಹಿಸಿದರೂ, ರಾ .....ರವರ [illegible] ಪೋಲೀಸ ಕಮಿಶನರರು ಹುಕುಮು ಹೊರಡಿಸುವಾಗ ನ್ಯಾಯದಂತೆ ವಿಚಾರ ಮಾಡಲಿಲ್ಲ. ಹುಕುಮು ಅವಿಚಾರದಿಂದ ಹೊರಡಿಸಿದ್ದಿದೆ. [illegible] ದೆ, ಪ್ರಜಾಪೀಡಕವಾದ, [illegible] ಆಸ್ಪದವಾದ ಒಗ್ಗೆ [illegible] ಶಿಕ್ಷೆ ವಿಧಿಸಿ ನ್ಯಾಯ ಸ್ಥಾನವು [illegible] ಮತ್ತು ಆ ಹುಕುಮು ಲೋಕಕಂಟಕವಾದದ್ದು ಪ್ರಜಾಪೀಡಕವಾದದ್ದು, ಅವಿವೇಕದ್ದು ಇದೆ. ರಾ ......ರವರ ಅಪರಾಧವು [illegible] ಸಾಧಾರಣವಾಗುವದು. ಹೀಗೆ ಅವಿವೇಕದಿಂದ ಶಿಕ್ಷೆ ವಿಧಿಸಿದ್ದಲ್ಲಿ ಕಾಯಿದೆ ಹಾಗು ವ್ಯವಸ್ಥೆಯ ಮೇಲೆ ಜನರಿಗಿರುವ ಭಕ್ತಿ ಕುಗ್ಗುವದು. ರಾಜಶಾಸನ ಹೊರಡಿಸುವ ಸಂಕಲ್ಪಕ್ಕೆ ಭಂಗ ಬಂದೀತು. ಆದರಿಂದ ನ್ಯಾಯಮೂರ್ತಿಗಳು ಕೆಳಕೋರ್ಟಿನಿಂದ ಖಟ್ಲೆಯ ರಿಕಾರ್ಡನ್ನು ತರಿಸಿ, ಅನ್ಯಾಯದಿಂದ ವಿಧಿಸಲ್ಪಟ್ಟ ಶಿಕ್ಷೆಯನ್ನು ರದ್ದು ಮಾಡಬೇಕು. ಅಥವಾ ನ್ಯಾಯದೃಷ್ಟಿಯಿಂದ ವಿಚಾರ ಮಾಡಿ ತಕ್ಕ ಹುಕುಮು ಮಾಡಬೇಕು." ಈ ಪ್ರಕಾರ ವಕೀಲ ಸಂಘದವರು ರಾಜಶಾಸನಗಳನ್ನು [illegible] ಎಲ್ಲ ಉಪಾಯಗಳನ್ನು ನ್ಯಾಯಸ್ಥಾನಕ್ಕೆ ಸೂಚಿಸಿದ್ದಾರೆ. ಹೊಸ ರಾಜಶಾಸನಗಳನ್ನು ಸರಕಾರವು ಹೊರಡಿಸುವ ವಿಚಾರದಲ್ಲಿರುವದಾಗಿ ಲೋಕವಾರ್ತೆಯಿದೆ. ಅಂಥ ಪ್ರಸಂಗದಲ್ಲಿ ಕೋರ್ಟಿನವರಿಂದ ರಾಜಶಾಸನಗಳ ಪರಾಂಬರಿಕೆಯಾಗುವದು ಉಚಿತವಿದೆ. ಕಾಯಿದೆಯಂತೆ ಬ್ರಿಟಿಶರು ರಾಜ್ಯವನ್ನಾಳುತ್ತಾರೆ, ಅವರಿಗೂ ಕಾಯಿದೆಯ [illegible] ಮುಂದಿನ ಮಾರ್ಗದ ಸೂಚನೆಯಾಗುವದು

⁂

ಪವಿತ್ರಾತ್ಮಾ ಮಾಲವೀಯರವರು !

ಲಂಡನಿನೊಳಗಿನ 'ಟ್ಯಾಮ ಎಂಡ್ ಟ್ಯಾಡ' "ಕಾಲಚಕ್ರವೂ, ಏರಿಳಿತವೂ" ಎಂಬ ಪತ್ರಿಕೆಯಲ್ಲಿ ಎಪ್ರಿಲ್ ೨೦ನೇ ತಾರೀಖಿಗೆ ಕುಮಾರಿ ಎಲಿನ್ ವಿಲ್ಕಿನ್ಸನ್‌ರವರು ಬರೆಯುವದೇನಂದರೆ — ಪಂ| ಮಾಲವೀಯರವರಿಗೆ ಸೆರೆ ಹಿಡಿದದ್ದರಿಂದ ಹಿಂದುಸ್ಥಾನದೊಳಗಿನ ರಾಜಕಾರಣಕ್ಕೆ ಹೊಸ ಅವಸ್ಥೆಯುಂಟಾಗಿದೆ. ಹಿಂದುಗಳಿಗೆ ಮಾಲವೀಯರೆಂದರೆ ಸರ್ವೋತ್ಕೃಷ್ಟರು, ಸಾಧು ಶಿರೋಮಣಿಗಳು; ಮಾಲವೀಯರವರ ಸಭ್ಯತೆಯನ್ನೂ, ವಿನಯವನ್ನೂ ನೋಡಿದರೆ ಧರ್ಮಶ್ರದ್ಧೆಯಿಲ್ಲದ ನನ್ನಂಥ ಆಂಗ್ಲರಿಗೆ ಸಹ ಶ್ರದ್ಧೆ ಹುಟ್ಟುತ್ತದೆ. ಇಂಡಿಯಾ ಲೀಗ ಯಾನೆ ಹಿಂದುಸ್ಥಾನ ಸಂಘದವಲ್ಲ ಕೆಲ ಪಾರ್ಲಮೆಂಟಿನ ಸಭಾಸದರೊಡನೆ, ನಾವು ಪಂಡಿತ ಮಾಲವೀಯರಿಗೂ, ಲೋಕಪೂಜ್ಯರಿಗೂ [illegible] ರವರ ಉಪ್ಪರಿಗೆಯ ಮೇಲೆ ಭೆಟ್ಟಿಯಾದೆವು. ಲೋಕಪೂಜ್ಯರ ಸನ್ನಿಧಿಯಲ್ಲಿ ನನಗೆ ವಿಶೇಷ ಭಯ-ಭಕ್ತಿ ಹುಟ್ಟಲಿಲ್ಲ. ನನ್ನಂತೆಯೇ ಅವರೂ ರಾಜಕಾರಣಿಗಳೆಂದೇ ನನಗನಿಸಿತು. ಲೋಕಪೂಜ್ಯರಲ್ಲಿ ಕೈಕೊಂಡ ಕಾರ್ಯವನ್ನು ಶೌರ್ಯದಿಂದ ನೆರವೇರಿಸುವ ಸಾಹಸವಿದೆ. ಇಷ್ಟೇ ನನ್ನ-ಅವರ ಅಂತರ. ಆದರೆ, ಪಂ| ಮಾಲವೀಯರವರ ಸನ್ನಿಧಿಯಲ್ಲಿ ನನಗೊಂದು ಪಾವಿತ್ರ್ಯ ಕಂಡು ಬಂತು. ನನಗವರ ಸನ್ನಿಧಿಯಲ್ಲಿ ಹೋಗಲಾಗಲಿಲ್ಲ; ಯಾವದೋ ಒಂದು ಶಕ್ತಿಯು ನನಗೆ ಹಿಂದಕ್ಕೆಳೆದೊಯ್ದಂತೆ ಭಾಸವಾಯಿತು. ನಾನವರಿಗೆ ಒಂದು ವೇಳೆ [illegible] ಆಗ ನನಗುಂಟಾದ ಭಾವನೆ ವರ್ಣಿಸಲಸದಳ. ಚಿಕ್ಕ ಮೂರುತಿ, ಸೂಕ್ಷ್ಮ ಮುಖಚರ್ಯೆ, ಬೆಳ್ಳನ್ನ ಉಣ್ಣೆಯ ಬಟ್ಟೆ ಉಡಿಗೆ-ತೊಡಿಗೆಗಳು, ನನಗೆ ನೋಡುವದರಿಂದ ಭಾವನೆ, ಚಿತ್ತಾಕರ್ಷಕ [illegible] ಇವುಗಳಿಂದೊಡಗೂಡಿದ ಮೂರ್ತಿ [illegible] ಹಿಂದೂ ಧರ್ಮದ [illegible] ಪ್ರತಿನಿಧಿಯೆಂದು ನನಗನಿಸಿತು, ನನ್ನ [illegible] ನನಗನಿಸಿತು. ಅವರು ಜನರನ್ನು [illegible] ನನಗೆ ಗೊತ್ತಿತ್ತು, ಆದರೆ, ಅವರು ಎಷ್ಟು ಸಭ್ಯತೆಯಿಂದ, ಎಷ್ಟು ವ್ಯಸನಪಟ್ಟು ಅವನ್ನು ನಿರಾಕರಿಸಿದರೆಂದು ನಾನು ಹೇಗೆ ವರ್ಣಿಸಲಿ? ಅವರು ತರ್ಕದಲ್ಲಿ ನಿಷ್ಣಾತರು; ಯಾವಾಗಲೂ ಪ್ರತಿಪಕ್ಷದ ಅಂಬೋಣ ಕೇಳಿಕೊಳ್ಳಲು ಆತುರರು. ಪ್ರಪಂಚದಲ್ಲಿ ಅಧಿಕಾರಿಗಳು ಹೇಗೆ ನಡಿಸಿಕೊಳ್ಳುತ್ತಾರೆಂಬ ಪರಿವೆಯೇ ಇವರಿಗಿಲ್ಲ; ಆದರದನ್ನು ಸಂಪೂರ್ಣ ಮರೆತಿದ್ದಾರೆ. ಪವಿತ್ರಾತ್ಮರಿಗೆ ಜೈಲಿನಲ್ಲಿ ಒದಗುವ ಅಪವಿತ್ರ ಸಹವಾಸವನ್ನು ನೆನಿಸಿ ಹಿಂದುಗಳು ದೌಡಾಯಿಸುವರು. ಲೋಕಪೂಜ್ಯರು ಜೈಲಿನಲ್ಲಿ ಮುದದಿಂದ ನೆಲಸುವರು. ಮಾನವೀ ಸ್ವಭಾವವೇ ಹಾಗೆಂದು ಅವರು ಎಣಿಸುವರು. ಆದರೆ, ಸುಖದಿಂದ ಕಾಲಕ್ಷೇಪ ಮಾಡಿದ ೭೦ ವರ್ಷದ ವಯೋವೃದ್ಧರು ದೀರ್ಘಕಾಲದ ತನಕ ಜೈಲಿನಲ್ಲಿ ಬಾಳ್ಕೆ ಮಾಡರು. ಮಾಲವೀಯರಂಥ ಪುರುಷರಿಗೆ ಕಾರಾಗೃಹಕ್ಕೆಟ್ಟುವದು ಹಾಗಿನ ರಾಜ್ಯಭಾರದಲ್ಲಿ ಅವಶ್ಯವೆಂದೆನಿಸುತ್ತಿದ್ದರೆ, ನಮ್ಮ ರಾಜ್ಯಭಾರವು ನ್ಯಾಯಯುತವೂ, ಪ್ರಜೆಗಳಿಗೆ ಹಿತಕಾರಕವೂ ಎಂದೂ ಗ್ರಹಿಸಲಾಗುವದಿಲ್ಲ."

⁂

ಕೌನ್ಸಿಲಿನಲ್ಲಿ ಪೋಲೀಸರ ವರ್ಣನೆ.

ಪುಣೆಯ ಕ್ರಿಸ್ತ ಸೇವಾ ಸಂಘದ ಪರವಾಗಿ ಕ್ರಿಸ್ತ ಧರ್ಮ ತತ್ವಗಳಂತೆ ಪರೋಪಕಾರನಿರತರಾಗಿರುವ ಎಲ್ವಿನ್ ಪಾದ್ರಿ ಸಾಹೇಬರನ್ನು ಎಲ್ಲರೂ ಬಲ್ಲರು. ಇವರು ಒಕ್ಸಫರ್ಡ ವಿಶ್ವವಿದ್ಯಾಲಯದ ೧ನೇ ತರಗತಿಯ ಪದವೀಧರರು. ವಿದ್ವಾಂಸರು, ಸಮಾಜಸೇವಕರು. ವನವಾಸದಲ್ಲಿರುವ 'ಗೊಂಡ' ಜಾತಿಯವರ ಸುಧಾರಣೆಗಾಗಿ ಇವರು ಸರ್ವಸ್ವವನ್ನರ್ಪಿಸಿದ್ದಾರೆ.

ಲೋಕಪೂಜ್ಯರಿಗೂ, ಎಲ್ವಿನ್ ಪಾದ್ರಿ ಸಾಹೇಬರಿಗೂ ಬಲು ಮಮತೆ. ಲೋಕಪೂಜ್ಯರಿಗೆ ಕಳೆದ ಜನವರಿ ೪ನೇ ತಾರೀಖಿಗೆ 'ಮಣಿ ಭುವನ'ದಲ್ಲಿ ಸೆರೆಹಿಡಿದಾಗ ಎಲ್ವಿನ್‌ರವರು ಅಲ್ಲಿದ್ದರು. ಬಡಬಗ್ಗರ ಸೇವೆ ಮಾಡುವದಕ್ಕಾಗಿಯೇ ಇವರು ಸರ್ವಸ್ವವನ್ನರ್ಪಿಸಿದ್ದಾರೆ. ಇವರ ತಾಯಿ ಇಂಗ್ಲಂಡದಲ್ಲಿರುತ್ತಾಳೆ. ಒಮ್ಮೆ ಸ್ವದೇಶಕ್ಕೆ ಬಂದು ಹೋಗಬೇಕಾಗಿ ಮಗನಿಗೆ ಅವಳು ಪತ್ರಗಳ ಮೇಲೆ ಪತ್ರಗಳನ್ನು ಬರೆದಳು. ಹೋಗಿ-ಬರಲು ಪಾಸಪೋರ್ಟ ಕೊಡಬೇಕಾಗಿ ಎಲ್ವಿನ್ ಪಾದ್ರಿ ಸಾಹೇಬರು ಸರಕಾರಕ್ಕೆ ಬರೆಕೊಳ್ಳಲು, "ಹೋಗಲು ಮಾತ್ರ ಪಾಸಪೋರ್ಟ ಸಿಕ್ಕೀತು; ತಿರುಗಿ ಬರಲಿಗದೆಂ"ದು ಅಪ್ಪಣೆಯಾಯಿತು. ಬಡಬಗ್ಗರ ಸೇವಾಕ್ಷೇತ್ರದಿಂದ ಅಗಲಲು ಎಲ್ವಿನ್ ಪಾದ್ರಿ ಸಾಹೇಬರು ಎಷ್ಟಕ್ಕೂ ತಯಾರಿಲ್ಲ. ಆದರಿಂದ ಸ್ವದೇಶಕ್ಕೆ ಹೋಗುವ ವಿಚಾರವನ್ನೇ ಅವರು ತೊರೆದು ಬಿಟ್ಟಿದ್ದಾರೆ. ಇಷ್ಟಾಗಿ ಅವರ ಪ್ರಕೃತಿ ನೆಟ್ಟಗಿಲ್ಲ. ಪ್ರತಿ ವರ್ಷ ಮಳೆಗಾಲದಲ್ಲಿ ಅವರಿಗೆ ಅತಿಸಾರದ ಬೇನೆಯಾಗುತ್ತದೆ. ೧೯೨೮ನೇ ಇಸ್ವಿಯಲ್ಲಿ ಅವರು ಮರಣೋನ್ಮುಖರಾಗಿದ್ದರು. ಪುಣೆಯ ಸಸೂನ ಆಸ್ಪತ್ರೆಯಲ್ಲಿ ನಡೆದ ಉಪಚಾರದಿಂದ ಮಾತ್ರ ತಾವು ಬದುಕಿದೆವಾಗಿ ಅವರು ಬರೆಯುತ್ತಾರೆ. ಅಂದಿನಿಂದ ಪ್ರತಿ ವರ್ಷ ಮಳೆಗಾಲದಲ್ಲಿ ಈ ಉಪಹತಿ ಇದ್ದೇ ಇದೆ. ಆದರಿಂದ ಲೋಕಪೂಜ್ಯರೂ, ಇತರ ಗೆಳೆಯರೂ ಎಲ್ವಿನ್‌ರವರಿಗೆ ಈ ಬಾರಿ ಸ್ವದೇಶಕ್ಕೆ ಹೋಗಿ-ಬರಹೇಳಿದ್ದರು. ಈ ಸ್ಥಿತಿಯಲ್ಲಿ ಸಹ ಅವರಿಗೆ ಪಾಸಪೋರ್ಟ ದೊರೆಯಲಿಲ್ಲ. "ನಾನು ಪ್ರಕೃತ ಪರಿಸ್ಥಿತಿಯನ್ನು ಚೆನ್ನಾಗಿ ಪರಾಂಬರಿಸಿದ್ದೇನೆ. ಕ್ರಿಸ್ತ ಧರ್ಮಾನುಯಾಯಿ ಇಂಗ್ಲಂಡ ದೇಶಕ್ಕೆ ತನ್ನ ಹೆಸರಿನಿಂದ ಹಿಂದುಸ್ಥಾನದಲ್ಲಿ ನಡೆಯುವ ಪ್ರಕಾರಗಳು ತಿಳಿದಲ್ಲಿ ಭಯಂಕರ ಪಶ್ಚಾತ್ತಾಪವಾಗುವದು." ಹೀಗೆ ಎಲ್ವಿನ್‌ರವರು ಪ್ರಕಟಿಸುತ್ತಾರೆ. ಬಂಗಾಲ ಪ್ರಾಂತದ ಬೇತೂಲ ಜಿಲ್ಹೆಯಲ್ಲಿ ಕೋರ್ಕು ಎಂಬದೊಂದು ಕಾಡು ಜಾತಿಯಿದೆ. ಇವರು ಗಟ್ಟಿಗರು; ದೂಪ್ಪ್ಯವರು; ಸರಳ ಸ್ವಭಾವದವರು. ಮೋತಿ ಕೋರ್ಕು ಎಂಬವನಿಗೆ . ಎಂಬ ಹುಡುಗನಿದ್ದನು. ಕಳೆದ ಮಾರ್ಚ ತಿಂಗಳಲ್ಲಿ ಸೀಲಗರ ಬೆಟ್ಟದಲ್ಲಿ ಜಂಗಲ ಸತ್ಯಾಗ್ರಹ ನಡೆಯಿತು. ಕೋರ್ಕು ಜಾತಿಯವರು ಈ ಸತ್ಯಾಗ್ರಹದಲ್ಲಿ ಸೇರಿದ್ದರು. ಅದರಂತೆ ಮೋತಿ ಕೋರ್ಕುವಿನ ೧೩ ವರ್ಷ ಪ್ರಾಯದ......ಎಂಬ ಚಿಕ್ಕ ಹುಡುಗನೂ ಸತ್ಯಾಗ್ರಹಿಯಾದನು. ಅತನಿಗೆ ಸೆರೆಹಿಡಿದು ಶಿಕ್ಷೆ ವಿಧಿಸಲ್ಪಟ್ಟಿತು. ಅತನಿಗೆ ಜ್ವರ ಬಂತು. ಜೈಲ ಡಾಕ್ಟರರು ತಪಾಸ ಮಾಡಿದರು. ಮಾರನೇ ದಿನ ಆತನಿಗೆ ೧೫ ಬೆತ್ತಪ್ರಹಾರ ಮಾಡುವ ಹುಕುಮಾಯಿತು. ಅದರಂತೆ ಆತನಿಗೆ ತ್ರಿಕೋನಕ್ಕೆ ಕಟ್ಟಿ ಬೆತ್ತದಿಂದ ಹೊಡೆದು ಮನೆಗೆ ಕಳಿಸಿದರು. ಐದು ಎಪ್ರಿಲ ೫ನೇ ತಾರೀಖಿಗೆ ಜ್ವರ ಏರಿತು; ವಿಪರೀತ ಏರಿತು! ಬಡ ಹುಡುಗ; ಚಾಪೆಯ ಮೇಲೆ ಹೊರಳಾಡಿ, ನರಳಿ ಮೇ ತಾ ೫ನೇ ಗುರುವಾರ ಪ್ರಾಣ ಬಿಟ್ಟನು! ಕ್ರಿಸ್ತ ಧರ್ಮರಾಜ್ಯದಲ್ಲಿ ಈ ಗುರುವಾರವು ಪವಿತ್ರವಾದದ್ದು. ಕ್ರಿಸ್ತ ದೇವರು ಆ ದಿನ ಸಮಾಧಿಯೊಳಗಿಂದ ಎದ್ದು ಸ್ವರ್ಗವನ್ನೇರಿದರೆಂದು ಕ್ರೈಸ್ತ ಮತಾನುಯಾಯಿಗಳ ಶ್ರದ್ಧೆ. ಆ ದಿನ ಕ್ರಿಸ್ತ ಮತಾನುಯಾಯಿಗಳು ಮಿಷ್ಟಾನ್ನಭೋಜನ ಮಾಡುತ್ತಾರೆ! ಅಂಥ ಪವಿತ್ರ ದಿನ ...... ಎಂಬ ಆ ೧೩ ವರ್ಷದ ಹುಡುಗನು ತೊಳಲಿ ಬಳಲಿ ತೀರಿಕೊಂಡನು!! "ಅಪರಿಚಿತ ಗೆಳೆಯಾ, ಇಕೋ ನೋಡು, ಒಬ್ಬೊಂಟಿಗ ಆಂಗ್ಲನಾದರೂ ನಿನ್ನ ಬಗ್ಗೆ ಕಣ್ಣೀರು ಸುರಿಸಿ, ನಿನಗೆ ವಂದಿಸುತ್ತಾನೆ. ಇದರಿಂದ ಸಮಾಧಾನ ಮಾಡಿಕೋ." ಎಂದು ಪಾದ್ರಿಸಾಹೇಬರು ಹುಡುಗನ ಅವಸ್ಥೆಯ ಬಗ್ಗೆ ಮರಮರನೆ ಮರುಗುತ್ತಾರೆ. ಎಲ್ವಿನ್ ಸಾಹೇಬರು ಪುಣೆಯ ಭಾರತ ಸೇವಕ ಸಮಾಜದಲ್ಲಿ ಇದ್ದಾಗ ಬೇರೆ ಬೇರೆ ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ರಿಪೋರ್ಟುಗಳೊಳಗಿಂದ ಪೋಲೀಸರ ನಡಾವಳಿಯ ಕುರಿತು ಬೇರೆ ಬೇರೆ ಕಡೆಯಲ್ಲಿ ನಡೆದ ಸಂಗತಿಗಳನ್ನು ಒಟ್ಟುಗೂಡಿಸಿದ್ದಾರೆ. ಇವರ ಮೇಲಿಂದ ಪಾದ್ರಿ ಸಾಹೇಬರು ನುಡಿದಂತೆ, ಕ್ರಿಸ್ತ ಧರ್ಮಾನುಯಾಯಿ ಆಂಗ್ಲರ ಹೆಸರಿನಿಂದ ನಡೆಯುವ ಪ್ರಕಾರಗಳ ಕಲ್ಪನೆ ಬರುವದು. ಮೊಟ್ಟಮೊದಲು ವಾರ್ಷಿಕ ಸರಕಾರಿ ಪೋಲೀಸ ರಿಪೋರ್ಟಿನೊಳಗಿನ ಒಂದು ಉಲ್ಲೇಖ ಮಾಡಬಹುದು. "ಸತ್ಯಾಗ್ರಹ ಮನ್ವಂತರದಲ್ಲಿ ಪೋಲೀಸ ಶಿಬಂದಿಯನ್ನು ಬೆಳಸುವದಕ್ಕಾಗಿ ಹೊಸ ಪೋಲೀಸರನ್ನು ದಾಖಲಪಡಿಸಿಕೊಂಡಿತು. ಇವರಿಗೆ ಎಮರ್ಜನ್ಸಿ ಪೋಲೀಸ ಯಾನೆ ಆಪತ್ಕಾಲದ ಪೋಲೀಸರೆಂಬ ಸಂಜ್ಞೆಯಿದೆ. ಇವರು ಕಾಕ-ಪೋಕರ ವರ್ಗ ಸೇರಿದವರು. ಇವರಿಗೆ ಹೊಟ್ಟೆ ತುಂಬ ಕೂಳು ಇದ್ದಿಲ್ಲ; ಉಡಿಗೆ ತೊಡಿಗೆಗಳಿಲ್ಲ; ಇವರು ಮೇಲಧಿಕಾರಿಗಳ ದ್ರೋಹ ಬಗೆಯುವವರು. ಈ ಪೋಲೀಸರು ಕಟ್ಟಿ ಉದಾಹರಣೆಯನ್ನು ಹಾಕಿಕೊಟ್ಟಿರುತ್ತಾರೆ, ಹೀಗೆ ಸರಕಾರವೇ ಪೋಲೀಸರಿಗೆ ಕೊಟ್ಟ ಶಿಫಾರಸನ್ನು ಮುಂಬಯಿ ಕೌನ್ಸಿಲಿನ ಸಭಾಸದರೊಬ್ಬರು ಕೌನ್ಸಿಲು ಸಭೆಯಲ್ಲಿ ನುಡಿದು ಇಂಥವರಿಗೆ ವಿಶೇಷ ಅಧಿಕಾರ ಕೊಟ್ಟರೆ ರಾಕ್ಷಸರ ಕೈಯಲ್ಲಿ ಹಗಲು ದೀವಟಿಗೆ ಕೊಟ್ಟಂತಾಗುವದೆಂದು ಮಾರ್ಚ ೯ನೇ ತಾರೀಖಿಗೆ ಮುಂಬಯಿಯ ಕೌನ್ಸಿಲಿನಲ್ಲಿ ಪೋಲೀಸ ಖಾತೆಯ ಖರ್ಚಿನ ಕುರಿತು ಚರ್ಚೆ ' ತ್ತು. ಆ ಕಾಲದಲ್ಲಿ ಸಿಂಧ ಪ್ರಾಂತದೊಳಗಿನ ಸಭಾಸದರೊಬ್ಬರು ನುಡಿದದ್ದೇನಂದರೆ:— "ಪೋಲೀಸರು ಮಿತಿಮೀರಿ ಲಂಚ ತಿನ್ನುತ್ತಾರೆ. ವರ್ಷಾಸನ ಒಂದು ಕೋಟಿ ರೂಪಾಯಿ ನಮ್ಮಲ್ಲಿಯ ಪೋಲೀಸರಿಗೆ ಪ್ರಾಪ್ತಿಯಿದೆ. ಅನೇಕ ಪೋಲೀಸ ಅಧಿಕಾರಿಗಳು ಭವ್ಯ ಮನೆಗಳನ್ನು ಕಟ್ಟಿಸಿದ್ದಾರೆ; ಕಟ್ಟಿಸುತ್ತಿದ್ದಾರೆ. ಜುಗಾರು ಮಂದಿಗಳಿಂದಲೂ, ಅಫೀಮಿನ ವ್ಯಾಪಾರಿಗಳಿಂದಲೂ ಎತ್ತಿದ ಹಣವಿದು! ಪೋಲೀಸರು ಖಾದಿ ಉಡುಪು-ಗಾಂಧಿ ಟೊಪ್ಪಿಗೆಗಳ ಮೇಲೂ, ಶಾಂತ ನಾಗರಿಕರ ಮೇಲೂ ದೊಡ್ಡ ದಾಳಿಯನ್ನೇ ಎಬ್ಬಿಸಿ ದಣಿಸಿದರಾಗಿ ಮಧ್ಯಪ್ರಾಂತ ಕಾಯಿದೆ ಕೌನ್ಸಿಲಿನ ಸಭಾಸದರೊಬ್ಬರ ದೂರು. "ತಾಯಿಯಂತೆ ಜನರಿಗೆ ನಡಿಸಿಕೊಳ್ಳಿರಿ; ಮತ್ಸರಗ್ರಸ್ತ ಅತ್ತೆಯಂತೆ ನಡಕೊಳ್ಳಬೇಡಿರಿ." ಹೀಗೆ ಅದೇ ಕೌನ್ಸಿಲಿನ ಸ್ತ್ರೀ ಸಭಾಸದರು ಸರಕಾರಕ್ಕೆ ಅರಿಕೆ ಮಾಡಿಕೊಂಡರು. ಧರ್ಷಣದಲ್ಲಿ ನಡೆದ ಪ್ರಕಾರಗಳನ್ನು ಸರಕಾರವು ಯಥಾರ್ಥವಾಗಿ ಪ್ರಕಟಣೆಯಲ್ಲಿ ನಮೂದಿಸದೆ ಅಡಗಿಸಿಟ್ಟಿತಾಗಿ ಇನ್ನೊಬ್ಬರು ಆಕ್ಷೇಪ ಮಾಡಿ ನುಡಿದದ್ದೇನಂದರೆ:— ಆ ದಿನ ಧರ್ಷಣದಲ್ಲಿ ನಡೆದ ಲಾಠಿ ಹೊಡತದ ಭೀಕರ ಸ್ವರೂಪವನ್ನು ವರ್ಣಿಸುವದು ಕಠಿಣ. ದೊಣ್ಣೆ ತಲೆಯ ಮೇಲೆ ಬೀಳುತ್ತದೋ, ಮೂಗಿನ ಮೇಲೆ ಬೀಳುತ್ತದೋ? ಎಂಬದನ್ನು ಪೋಲೀಸರು ವಿಚಾರ ಮಾಡಲಿಲ್ಲ. ಇಕ್ಕಟ್ಟಿನ ಓಣಿಯೊಳಗೆ ಪೋಲೀಸರು ದೊಣ್ಣೆಯಿಂದ ಹೊಡೆಯುತ್ತ ಹೋದರು. ಹೊಡತ ತಿಂದು ನೆಲದ ಮೇಲೆ ಬಿದ್ದವರಿಗೂ ಮತ್ತೊಂದು ಏಟು ಬಿತ್ತು. ಜನರಿಗೆ ಓಡಿಹೋಗಲು ಇಂಬಿರಲಿಲ್ಲ. ಅನೇಕರು ಎಲುಬು ಮುರಕೊಂಡರು; ಕೆಲವರು ಬೆನ್ನು ಮುರಕೊಂಡರು. ಮದ್ರಾಸ ಕಾಯಿದೆ ಕೌನ್ಸಿಲಿನಲ್ಲಿ ಮಾರ್ಚ ೧೭ನೇಗೆ ಪೋಲೀಸ ಖಾತೆಯ ಖರ್ಚಿನ ಕುರಿತು ಚರ್ಚೆ ನಡೆದಾಗ ಸಭಾಸದರು ನುಡಿದದ್ದೇನಂದರೆ:— "ಪೋಲೀಸ ಖಾತೆಯಷ್ಟು ಅಪರಿಮಿತ ಟೀಕೆಗೆ ಪಾತ್ರವಾಗಿ ಆಸ್ಪದ ಕೊಟ್ಟ ಬೇರೆ ಖಾತೆಯೇ ಇಲ್ಲ. ಖಾದಿ ಧರಿಸಿದ ಬಗ್ಗೆ ಜನರಿಗೆ ಪೋಲೀಸರು ಹೊಡೆದರು. ಅದೇ ಒಂದು ಅಪರಾಧ. ಅನೇಕರಿಗೆ ಹೊಡೆದು ಮೋಟಾರುಗಳಲ್ಲಿ ಹಾಕಿ ದೂರ ಒಯ್ದು ರಾತ್ರಿ ಮಾರ್ಗದ ಮೇಲೆ ಬಿಟ್ಟುಬಂದರು. ಅವರಿಗೆ ಯಾರಾದರೂ ಉಳಕೊಳ್ಳಗೊಟ್ಟರೆ ಅವರಿಗೂ ಪೋಲೀಸರು ಹೊಡೆಯುತ್ತಾರೆ. ಆಹಾರ ಕೊಡಬಂದವರಿಗೂ ಹೊಡೆದರು.

[೧೦ನೇ ಪಾನಿನ ಮೇಲೆ ಮುಂದರಿಸಿದೆ.]

ನಿರ್ಬಂಧದೊಳಗಿರುವ 'ವೃತ್ತ'ದ ಸಂಚಿಕೆ.

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪೆನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಠಂಚಿನ ದರಗಳೂ, ಶರ್ತುಗಳೂ ಬಹಳ ಸೋಯಿಯುಕ್ತ ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ್ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents:-
D K. NAYAK Bros
Honavar Agent.-
R.V PARBHU E-q

K. PadmanabhaRao & Sons.,
BELGAUM
Chief Agents for
Karnatak Districts & S M. States

ಶುಭ ಗ್ರಹಸ್ಥಿತಿ.

[ನಿರೀಕ್ಷಕನು ಬರೆದುದು]

ಶುಭ ಗ್ರಹಗಳು ನಿರ್ಬಲರಲ್ಲವಾಗಿ ನಾನು ಕಳೆದ ವಾರ ಮಾಡಿದ ಊಹೆ ದಿಟವಾಗುತ್ತಿದೆಂದು ಹೇಳಲು ನನಗ ತುಂಬಾ ಸಂತೋಷ. ಸಿಮ್ಲಾದೊಳಗ ಶಾಂತಿದೇವಿಯ ಆರಾಧನೆಯಾಗ ತಕ್ಕದ. ಗುರುವಾರ ಶಾಂತಿದೂತರಾದ ಸರ್ ತೇಜಬಹಾದ್ದೂರ ಸಪ್ರೂರವರು ಸಿಮ್ಲಾಕ್ಕೆ ತಲ್ಪಿದರು. ರಾಜಕಾರ್ಯಕ್ಕಾಗಿಯೇ ಸಿಮ್ಲಾ ಪಟ್ಟಣಕ್ಕೆ ಬಂದಿರುವರೆಂದು 'ಫ್ರೀ ಪ್ರೆಸ್' ಪತ್ರಿಕೆಯ [illegible] ರಾ. ಮುಕುಂದರಾವ ಜಯಕರರವರೂ ಶುಕ್ರವಾರ ಸಿಮ್ಲಾಕ್ಕೆ ತಲ್ಪುವವರಿದ್ದರು. ಪ್ರಯಾಗದಿಂದ ಹೊರಡುವ ಮುಂಚೆ ಸರ್ ತೇಜಬಹಾದ್ದೂರರು ರಾ. ಜಯಕರರವರಿಗೆ ಆಗತ್ಯದ ತಂತಿ ಕೊಟ್ಟು ಕರೆಸಿ, ಕೊಂಡದ್ದರಿಂದ ರಾ. ಜಯಕರರು ಮುಂಬಯಿಯಲ್ಲಿ ರಲಿಲ್ಲ. ಕಳೆದ ಸೋಮವಾರ [illegible] ದ್ದರು. ತಂತಿ ಬಂದದ್ದರಿಂದ ಅಲ್ಲಿಂದಲೇ ಅವರು ಸಿಮ್ಲಾ ಪಟ್ಟಣಕ್ಕೆ ಹೊರಟರಂತೆ. ರಾ. ಸಪ್ರೂ ಜಯಕರರವರ ಮುಖಾಂತರ ಪುನಃ ಸಂಧಿ ಪ್ರಸ್ತಾಪ ಪ್ರಾರಂಭವಾಗಲಿರುವದಾಗಿ ಈಗ ಹೇಳಬಹುದಿಲ್ಲ. ಪೂರ್ವ ಸ್ವಪ್ನಸೂಚನವಾದರೂ ಹಾಗೆಯೇ ಉಂಟು. ಕಲಕತ್ತೆಯ 'ಈವನಿಂಗ ನ್ಯೂಸ' ಪತ್ರಿಕೆಯ ಸಿಮ್ಲಾ ಸುದ್ದಿಗಾರರು ಜೂನ ೭ನೇ ತಾರೀಖಿನ ತಂತಿಯಿಂದ ತಿಳಿಸುವದೇನಂದರೆ— ಸತ್ಯಾಗ್ರಹಿ ಕೈದಿಗಳಿಗೆಲ್ಲ ಸರಕಾರವು ಒಂದು ಶರ್ತ ಹಾಕಿ ಬಿಡುಗಡೆ ಮಾಡ ನಿಶ್ಚಯಿಸಿದೆ. ಶರ್ತವೆಂದರೆ [illegible] ಶರ್ತ ಅದನ್ನು ಮನ್ನಿಸಲು ರಾಷ್ಟ್ರೀಯ ಸಭೆಯ ಮಂದಿಗೆ ಕಠಿಣವೆನಿಸದಂತೆ ಇದ್ದು ಸುಲಭ ಶರ್ತಿನ ಮೇಲೆ ತುಕಡಿ-ತುಕಡಿಯಿಂದ ಬಾಕಿಯ ಬಂದಿಗಳಿಗೆ ಬಿಡುಗಡೆಯಾಗಲಿಕ್ಕಿರುವದಂತೆ! ರೌಂಡ ಟೇಬಲ್ ಕೊನ್ಫರನ್ಸಿನ ಪೂರ್ವದಲ್ಲಿ ಉಂಟಾದ ಸ್ನೇಹಭಾವದ ಪರಿಸ್ಥಿತಿಯನ್ನು ಪುನಃ ಪ್ರಸ್ಥಾಪಿಸುವದಕ್ಕಾಗಿ ಲಿಬರಲ್ ಮುಂದಾಳುಗಳು ಮಾಡಿದ ಪ್ರಯತ್ನಗಳಿಗೆ ಯಶಸ್ಸು ಬರಹತ್ತಿದೆಯೆಂದು ಈ ಸುದ್ದಿಗಾರರ ವಾರ್ತೆ. ಯಾವ ರೂಪದಿಂದ ಸಂಧಿ ಒದಗಿ ಬರಬೇಕೆಂಬುವರ ಕುರಿತು ಹಿಂದುಸ್ಥಾನ ಸರಕಾರಕ್ಕೂ, ಭಾರತ ಮಂತ್ರಿಗಳಿಗೂ ಅಂತರಂಗದಿಂದ ಪತ್ರವ್ಯವಹಾರ ನಡೆದಿದೆ. ರಾಷ್ಟ್ರೀಯ ಸಭೆಯೊಡನೆ ರಾಜಿ ಮಾಡಿಕೊಳ್ಳಬೇಕೆಂದು ಎಲ್ಲರೂ ಹೇಳುವವರಾಯಿತು. ಇದಕ್ಕೆ, ಮುಂಬಯಿ 'ಟೈಮ್ಸ' ಪತ್ರಿಕೆಯಲ್ಲಿ 'ಇಂಗ್ಲಿಷ ಸ್ಟೇಟ್ಸಮನ್' 'ಆಯರಿಶ್‌ಮನ್' ಮೊದಲಾದವರು ರಾಜಶಾಸನಗಳನ್ನು ಪುನಃ ಉದ್ಘೋಷಿಸಬಾರದೆಂದು ಸರಕಾರಕ್ಕೆ ಎಚ್ಚರಿಕೆ ಕೊಡುತ್ತಾರೆ "ಹಿಂದುಸ್ಥಾನದೊಳಗಿನ ಇಂಗ್ಲಿಷರ ಪರವಾಗಿ ನಾನು ಈ ಪತ್ರ ಬರೆದಿದ್ದೇನೆ. ಸರ್ವಾಧಿಪತಿಗಳ ಅಪೇಕ್ಷೆಯಂತೆ ರಾಜಶಾಸನದಿಂದ ಅನುಕೂಲ ವಾತಾವರಣವುಂಟಾಗಲಿಲ್ಲ. ಜನರೊಳಗ ಅಸಂತೋಷ ಹೆಚ್ಚಿತು. ಪರಿಸ್ಥಿತಿಯನ್ನು [illegible] ಬಿಟ್ಟಿಲ್ಲ, ಈಗ ೬೦ ಸಾವಿರ ಜನರು ಜೈಲಿನಲ್ಲಿದ್ದಾರೆ. ಇನ್ನು ೬೦ ಸಾವಿರ ಜನರು ಜೈಲಿನಲ್ಲಿ [illegible] ಗಲು ಸಿದ್ಧರಿದ್ದಾರೆ. ರಾಜಶಾಸನಗಳಿಂದ ಕೊಂಗ್ರೆಸ ವ್ಯಾಪಾರಗಳಿಗೆ ಸರಕಾರದಿಂದ ಪ್ರತಿಬಂಧವಾಗಲಿಲ್ಲ. ಸುಧಾರಿಸಿದ ರಾಜ್ಯಕಾರ ನಡಿಸುವ ಹೊಂತಕಾರಿ ಸ್ತ್ರೀ ಪುರುಷರ ಜೈಲಿನಲ್ಲಿಟ್ಟು ರಾಜ್ಯಸುಧಾರಣೆ ಮಾಡುವದು ಶಕ್ಯವೇ? ಹಿಂದುಸ್ಥಾನಕ್ಕೆ ಕೊಡಮಾಡಿದ ರಾಜ್ಯಾಧಿಕಾರ ಅತ್ಯಲ್ಪವಾದದ್ದು ಈ ದೂರು ಸಾಧಾರವಾದದ್ದು. ನಿಷ್ಪಕ್ಷಪಾತ ದೃಷ್ಟಿಯಿಂದ ವಿಚಾರಿಸಿದರೆ ರಾಷ್ಟ್ರೀಯ ಸಭೆಯವರ ಅಂಬೋಣವನ್ನು ಪ್ರತಿಕರು ಮನ್ನಿಸಲೇ ಬೇಕು" ಹೀಗೆ ಇಂಗ್ಲೀಷ ಸ್ಟೇಟ್ಸಮನರು ಮುಂಬಯಿ '[illegible]' ಪತ್ರಿಕೆಯಲ್ಲಿ ಪತ್ರ ಬರೆದು ಸರಕಾರಕ್ಕೆ ಪರಸ್ಪರ ಉತ್ತರ ಕೇಳುತ್ತಿದ್ದಾರೆ. [illegible], ಇವರೆಲ್ಲ ರಾಷ್ಟ್ರೀಯ ಸಭೆಯ [illegible], ಸರಕಾರ [illegible] ಒಂದು ರಾಜಶಾಸನ ಹೊರಡಿಸಿ ಬಿಡಿ ಒಬ್ಬರು ಕಾಂಗ್ರೆಸಿಗ ಸೇರಿದರೆ ಅವರನ್ನು ವ ಸರಕಾರಿ ನೌಕರಿ [illegible] ಹೀಗೆ [illegible] ರವರು [illegible] ಮಾಡಿದ್ದಾರೆ. ಸರಕಾರ [illegible] ಮುಂಬಯಿಯ 'ಪತ್ರಿಕೆ [illegible] ಪ್ರಕಟಿಸಿ [illegible] ಇವರ ನಡತೆ [illegible] ವಾಸ್ತವ ಪ್ರತಿನಿಧಿಯಾದ [illegible] ಜನರಾದರೂ ಇದ [illegible] ಇವರ ನಡತೆ ಚಿತ್ರಗೊಳಿಸಿದೆ" [illegible] ರವರ [illegible] ಸರಕಾರವೆಲ್ಲ ಮನ್ನಣೆ ಮಾಡಿದ್ದಾರೆ. ಇವರ ಮಗನು ರೌಂಡ ಟೇಬಲ ಪರಿಷತ್ತಿನ ಸಭಾಸದರು. ಹೀಗೆಲ್ಲ ಪರಂಪರೆಯಿರುವ [illegible] ರವರು ರಾಷ್ಟ್ರೀಯ ಸಭೆಯ ಎಲ್ಲಾ ಪ್ರತಿನಿಧಿಗಳೊಡನೆ ರಾಜಿ ಮಾಡಿಕೊಳ್ಳಬೇಕೆಂದು. ಇದೇ ಸಮಯ ಪತ್ರ ಬರೆಯುವದು ಯಾವ ಮಹತ್ವದ? [illegible] ರವರು ರಾಷ್ಟ್ರೀಯ ಸಭೆಯ ಪಕ್ಷಪಾತಿಗಳಲ್ಲ. ಇವರನ್ನು [illegible] ಬೇಕು ಎಂದವರಿಲ್ಲ. ಸ್ವಾತಂತ್ರ್ಯ ಕನ್ಸಿಲಿಯೇಶನ್ ಗ್ರೂಪ' ಎಂಬುದೊಂದು ಸಂಸ್ಥೆಯು ವಿವಾದಗಳನ್ನು ರಾಜಿಯಿಂದ ಬಗೆಹರಿಸುವದು. ಈ ಗ್ರೂಪ ಕಳಿಸಿದ ಇವರೊಂದು ಪತ್ರವನ್ನು ಲೋಕಪೂಜ್ಯರಿಗೆ ಬರೆದು ಸಂಧಿ ಶರ್ತು ಕೇಳಿದ್ದರು. ಆ ಪತ್ರಕ್ಕೆ ಲೋಕಪೂಜ್ಯರು ಜೈಲಿನಿಂದ ಬರೆದ ಉತ್ತರ ಭಾರತ ಮಂತ್ರಿಗಳ 'ಇಂಡಿಯಾ ಆಫೀಸ' ಕಛೇರಿಯ ವಿದ್ಯಮಾನ ಆ ಗ್ರೂಪ [illegible] ಸಂಘಕ್ಕೆ ದೊರಕಿದೆ "ಪ್ರಕೃತ ಪರಿಸ್ಥಿತಿಯ ಬಗ್ಗೆ ನಾನು ಸೂಚನೆ ಮಾಡಬೇಕಾದರೆ ನನ್ನ ಮೊದಲು ಸಹಕಾರಿಗಳೊಡನೆ ಸ್ವತಂತ್ರವಾಗಿ ನಾನು ವಿಚಾರವಿನಿಮಯ ಮಾಡಬೇಕು. ಕವಿಶ್ರೇಷ್ಠ ರವೀಂದ್ರನಾಥ ಟಾಗೋರರು ಮಾಡಿದ ಸೂಚನೆಯಂತೆ ಹಿಂದುಸ್ಥಾನ ಹಾಗು ಬ್ರಿಟಿಶ ಜನಾಂಗಗಳೊಳಗೆ ಗೆಳೆತನ ಬೆಳೆಯುವದು ಅವಶ್ಯವಿದೆ" ಹೀಗೆ ಲೋಕಪೂಜ್ಯರು ಉತ್ತರ ಬರೆದಿರುವರಾಗಿ ಮದ್ರಾಸದ 'ಹಿಂದು' ಪತ್ರಿಕೆಯ ಲಂಡನಿನ ಸುದ್ದಿಗಾರರು ತಂತಿಯಿಂದ ತಿಳಿಸುತ್ತಾರೆ. "ಕೇಂದ್ರ ಸ ಕಾರ್ಯಕಾರಿ ಮಂಡಳದವರಿಗ ಬಿನ್‌ಶರ್ತ ಬಿಡುಗಡೆ ಮಾಡಿ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟನಂತರ ಯಾವದೇ ಸೂಚನೆಯ ವಿಚಾರ ಮಾಡುವದು ಸಾಧ್ಯವಿಲ್ಲವಾಗಿ ಲೋಕಪೂಜ್ಯರ ಅಭಿಪ್ರಾಯವಿರುವದೆಂದು ಸಿಮ್ಲಾದೊಳಗಿನ 'ಫ್ರೀ ಪ್ರೆಸ್' ಪತ್ರಿಕೆಯ ಪ್ರತಿನಿಧಿಗಳು ತಂತಿಯಿಂದ ತಿಳಿಸುತ್ತಾರೆ. ಸರಕಾರಕ್ಕೂ, ರಾಷ್ಟ್ರೀಯ ಸಭೆಗೂ ಒತ್ತಟ್ಟಿಗೆ ತಂದು ರಾಜ್ಯಸುಧಾರಣೆಯ ಪ್ರಶ್ನೆಯನ್ನು ಬಿಡಿಸುವ ಉಪಾಯ ಕಲ್ಪಿಸವದಕ್ಕಾಗಿಯೇ ಸರ್ ಸಪ್ರೂ, ಹಾಗು ರಾ| ಜಯಕರರವರು ಹೊರಟಿದ್ದಾರೆಂದು ಹೇಳುತ್ತಾರೆ. ಕಮಿಟಿಗಳಾದವು, ಪರಿಷತ್ತುಗಳಾದವು, ಏನಾದರೂ, ರಾಜ್ಯಸುಧಾರಣೆಯ ಕಾರ್ಯವೇನೂ ಹೇ ತಕ್ಕಷ್ಟು ಮುಂದರಿಯಲಿಲ್ಲ. ಹಿಂದು-ಮುಸಲ್ಮಾನ ಪಂಚನೈಸಲಿಯ ವಿಚಾರವನ್ನು ಇನ್ನೂ ಮುಖ್ಯ ಪ್ರಧಾನರು ನಡಿಸುತ್ತಿದ್ದಾರೆ. ಅದು ನಿರ್ಣಯವಾಗಿಲ್ಲ. ರೌಂಡ ಟೇಬಲ್ ಪರಿಷತ್ತಿನ ಕಾರ್ಯವನ್ನು ಹಿಂದುಸ್ಥಾನದಲ್ಲಿ ನಡಿಸುವದಕ್ಕಾಗಿ ಸರ್ವಾಧಿಪತಿಗಳ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಮಂಡಳ ನೇಮಿಸಲಾಗಿತ್ತು. ಒಮ್ಮೆ ಸಭೆಯಾಗಿ ಯಾವದೇ ಕಾರ್ಯದ ನಿರ್ಣಯವಾಗದ ಈ ಸಭೆ ವಿಸರ್ಜನ ಹೊಂದಿತು. ಸಭೆಯೊಳಗಿನ ಚರ್ಚೆ ಅವ್ಯವಹಾರಿಕವೆಂದು ರಾ| ಜಯಕರರಂಥ ಸಭಾಸದರು ಸೂಚಿಸಿದರು. ಆ ಮೇಲೆ ಮೂರು ತಿಂಗಳಲ್ಲಿ ಸಭೆ ಸೇರುವದೆಂದು ಹೇಳಲಾಗಿತ್ತು, ಆದರೆ, ಸಭೆ ಸೇರಲಿಲ್ಲ. ಈಗ ಎರಡು ತಿಂಗಳಲ್ಲಿ ಯಾವಾಗಲಾದರೂ ಸೇರುವದೆಂದು ಪ್ರಕಟವಾಗಿದೆ "ಹಿಂದು-ಮುಸಲ್ಮಾನರ ಪ್ರಶ್ನೆಯ ನಿರ್ಣಯವಾಗಿದ್ದಿಲ್ಲ, ಲೋಥಿಯನ್ ಮಂಡಳದ ಮೂರು ಮಂಡಳಗಳ ರಿಪೋರ್ಟ ತಯಾರಾಗಿದ್ದಿಲ್ಲ, ಅದರಿಂದ ವಿಳಂಬವಾಯಿತು," ಹೀಗೆ 'ಎಸ್ಸೋಸಿಯೇಟೆಡ್ ಪ್ರೆಸ್ಸ'ನ ಸಿಮ್ಲಾ ಸುದ್ದಿಗಾರರು ನಡಿಸುವ ಸರಕಾರದ [illegible] ಲೋಥಿಯನ್ ಮಂಡಳವು ಪ್ರಧಾನ ಮಂಡಳಕ್ಕೆ ಸದ್ಯಸ್ಥಿತಿಯನ್ನು ಅರಿಕೆ ಮಾಡಿಕೊಂಡರಂತೆ. ಅದರಿಂದ ಹಿಂದುಸ್ಥಾನ ಸರಕಾರದಲ್ಲಿ ಕೆಲ ಖಾತೆಗಳನ್ನು ಜನರಿಗೊಪ್ಪಿಸಲು ಭಾರತ ಮಂತ್ರಿಗಳ ಮನಸ್ಸೊಪ್ಪಿದಂತಾಗಿದೆ. ಅದಾಗ್ಯೂ ಸ್ವಸ್ವಾಧಿಕಾರ ಹೊಂದಿದ ಮುಖ್ಯ ಖಾತೆಗಳು ಜನರಿಗ ಪ್ರಾಪ್ತವಾಗವು. ಹೆಚ್ಚೆಂದರೆ, ಭಾರತ ಮಂತ್ರಿಗಳಿಗಿದ್ದ ಅಧಿಕಾರವು ಸರ್ವಾಧಿಪತಿಗಳಿಗೆ ದೊರೆಯಿತು. ಆದರೆ, ಅದರಿಂದ ಜನರಿಗೇನು ಪ್ರಯೋಜನ? ಅದೇನಿದ್ದಾಗ್ಯೂ ಯಾವದೇ ಅಭಿಪ್ರಾಯ ತಿಳಿಯಲು ಲೋಕಪೂಜ್ಯರ ಬಿಡುಗಡೆಯಾಗಬೇಕು. ಅವರ ಜೊತೆಗ ಕೊಂಗ್ರೆಸ ಕಾರ್ಯಕಾರಿ ಮಂಡಳದವರ ಬಿಡುಗಡೆಯಾಗಬೇಕು. ಆ ಮೇಲೆ ಸರಕಾರಗೆ ಕೂಡ ಬ್ರಿಟಿಶ ಪ್ರಧಾನ ಮಂಡಳದೊಡನೆ ಹಿಂದುಸ್ಥಾನದ ಭವಿತವ್ಯದ ನಿರ್ಣಯವಾಗಬೇಕು, ಬಿಡುಗಡೆಯಾಗುವ ಸಮಯ ಬಂದ ಸಮೀಪಿಸಿದಂತಿದೆ. ಒಬ್ಬ ಜ್ಯೋತಿಷಿಯು ಜೂನ ೨೦ನೇ ತಾರೀಖಿನೊಳಗೆ ಲೋಕಪೂಜ್ಯರು ಬಿಡುಗಡೆ ಹೊಂದುವರಾಗಿ ಮಾಡಿದ ಭವಿಷ್ಯದ ಅವಧಿಗೂ, ರಾಜಶಾಸನಗಳ ಕಾಲಾವಧಿ [illegible] ಗಂಟು ಬಿದ್ದಿದ ರಾಜಶಾಸನಗಳನ್ನು ಸರಕಾರವು ಪುನರುಜ್ಜೀವಿಸುವದೆಂಬ ವಾರ್ತೆಯಲ್ಲಿ ನಂಬಿಗೆ ಹುಟ್ಟುವದಿಲ್ಲ. ಸರಕಾರಿ ವ್ಯವಹಾರದ ಒಳಗುಟ್ಟು ಬಲ್ಲವರು| ರೋಶಿಮನ್‌ರವರು ಬರೆಯುತ್ತಾರೆ ಇವೆಲ್ಲ ಪರಿಸ್ಥಿತಿಯ ಮೇಲಿಂದ [illegible]

ಹಿಂದುಸ್ಥಾನದ ಮೇಲೆ ಉಳಿದಿರುವದೆಂದು ನನಗನಿಸುತ್ತದೆ. ಇನ್ನೊಂದು ವಾರ ಉಳಿಯಿತು ಧೀನಬಂಧು ಎಂಡ್ರ್ಯೂಸವರು ನುಡಿದಂತೆ, ಇದು ಮಹತ್ವದ ವಾರ, ಲೋಕಪೂಜ್ಯರೊಡನೆ, ಕಾಂಗ್ರೆಸಿನವರೊಡನೆ ಚರ್ಚೆ ಮಾಡಿದನಃ ಯಾವದೇ ನಿರ್ಣಯ ಕೈಕೊಳ್ಳುವದಸಾಧ್ಯ. ಈಗಂತೂ ಬ್ರಿಟಿಶ ಪ್ರಧಾನ ಮಂಡಳವು ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದೆ. ಲೌಸೇನದಲ್ಲಿ ಜರ್ಮನ್ ಖಂಡಣಿ ಪ್ರಶ್ನೆಯ ವಿಚಾರ ನಡೆದದೆ "ನಾವು ಸಾಲ ತೀರಿಸಲಾರೆವು. ಎಂದೂ ನನ್ನಿಂದಾಗದ ಕೈಸಾಗದ ಮಾತು" ಹೀಗೆ ಜರ್ಮನಿಯ ಅಂಬೋಣ ಬ್ರಿಟಿಶ-ಫ್ರೆಂಚರು ಕಾಸು ಬಿಡಲೊಪ್ಪುವದಿಲ್ಲ "ನಮ್ಮ ಸಾವುಕಾರರು ಅಮೇರಿಕೆಯವರು, ನಮಗವರು ಸಾಲ ಬಿಡಲೊಪ್ಪುವದಿಲ್ಲ. ಕೊಟ್ಟ ಸಾಲ ಕೇಳದೆ, ತಂದ ಸಾಲ ತೀರಿಸಲು ನಮ್ಮಿಂದಸಾಧ್ಯ." ಹೀಗೆ ಬ್ರಿಟಿಶ-ಫ್ರೆಂಚರ ಅಂಬೋಣ. "ಹಣವಿಲ್ಲವಾಗಿ ನಮಗ ನೀವು ಹೇಳುತ್ತೀರಿ. ಸೈನ್ಯ ಖರ್ಚಿಗೆ ತಡೆಹಾಕದೆ, ಅದನ್ನು ಪ್ರತಿವರ್ಷ ಬೆಳೆಸುತ್ತ ನಡಿಸಿದ್ದೀರಿ, ಅದರಿಂದ ನಿಮಗೆ ಕಾಸು ಬಿಡುವದಿಲ್ಲ" ಹೀಗೆ ಅಮೇರಿಕೆಯವರು ಬ್ರಿಟಿಶ-ಫ್ರೆಂಚರಿಗೆ ಪ್ರತಿಪ್ರಶ್ನೆ ಕೇಳುತ್ತಾರೆ. ಬಲಾತ್ಕಾರದಿಂದ ಸಾಲ ವಸೂಲ ಪಡೆಯುವದು ಬ್ರಿಟಿಶ-ಫ್ರೆಂಚರಿಗೆ ಅಸಾಧ್ಯ ಮಾತು. ಈ ವಿಷಯ ಲೌಸೇನ ಪರಿಷತ್ತಿನಲ್ಲಿ ಸವಿಸ್ತರ ಚರ್ಚೆಯಾಗುವದಿದೆ ಮುಖ್ಯ ಪ್ರಧಾನರು ಈವಾಗ ಲೌಸೇನಿನಲ್ಲಿಯೇ ಇದ್ದಾರೆ. ಕಳೆದ ಗುರುವಾರ ಪರಿಷತ್ತಿನ ಅಧ್ಯಕ್ಷರಾಗಿ ಮೆಕಡೋನಲ್ಡರು ಒಂದು ಭಾಷಣ ಸಹ ಮಾಡಿದರು. ವಿಶಾಲ ಭೂಮಂಡಳದ ಕ್ಷೇಮವಿಚಾರದಿಂದ, ವಿಶ್ವಬಾಂಧವ್ಯದ ವಿಚಾರದಿಂದ ಪರಿಷತ್ತಿನಲ್ಲಿ ಚರ್ಚೆ ನಡಿಸಬೇಕಾಗಿ ಮುಖ್ಯ ಪ್ರಧಾನರು ಹೇಳಿದರು. ಈ ಮ್ರೋಣ ಸಮರದಲ್ಲಿ ವಿರಾಟಸ್ವರೂಪಿಯಾದ ಬಡ ಹಿಂದುಸ್ಥಾನದ ವಿಚಾರ ತಲೆದೋರುವದೆಂತು? ಅದರಿಂದ ಕಲಕತ್ತೆಯ 'ಈವನಿಂಗ ನ್ಯೂಸ' ಪತ್ರಿಕೆಯ ಸುದ್ದಿಗಾರರು ಒರೆದಂತೆ, ಮೊಟ್ಟಮೊದಲು ಸತ್ಯಾಗ್ರಹಿಗಳು ಜೈಲಿನಿಂದ ಹೊರಬೀಳುವರೆಂಬ ವಾರ್ತೆಯೇ ಸಾಧಾರ ಕಾಣುತ್ತದೆ ತಕ್ಕಮಟ್ಟಿಗೆ ಒಂದೇ ವಾರ ಉಳಿಯಿತು, ವೃಥಾ ಅನುಮಾನದಲ್ಲಿಯೇ ತೇಲಾಡುವದೇಕೆ? ಶೀಘ್ರವೇ ಎಲ್ಲ ಗುಟ್ಟು ತಾನೇ ಹೊರಬೀಳುವದು ಅದನ್ನೇ ನಿರೀಕ್ಷಿಸಿರೆಂದು ನಿರೀಕ್ಷಕನ ಸೂಚನೆ

ತಾ| ಕ| ಇದೀಗಲೇ ಒಂದು ವಾರ್ತೆಯನ್ನೊಂದು ಹೇಳಿಬಿಡುತ್ತೇನೆ. ಸರ್ ಸಪ್ರೂರವರೂ, ರಾ| ಜಯಕರರವರೂ ಶುಕ್ರವಾರ ಸಾಯಂಕಾಲ ಸರ್ವಾಧಿಪತಿಗಳೊಡನೆ ಮಾತನಾಡಿದರು ರಾಜಕೀಯ ನಭೋಮಂಡಲದಲ್ಲಿ ಅಘಟಿತ ಘಟನೆಗಳು ಸಂಭವಿಸುವವಾಗಿ ಸರಕಾರಿ ಪಕ್ಷದ 'ಎಸ್ಸೋಸಿಯೇಟೆಡ್ ಪ್ರೆಸ್' ಪತ್ರಿಕೆಯ ಸಿಮ್ಲಾ ಪ್ರತಿನಿಧಿಗಳ ವಾರ್ತೆ ಲೋಕಪೂಜ್ಯರು ಯೆರವಡಾ ಜೈಲಿನೊಳಗಿಂದ ಬಿಡುಗಡೆಹೊಂದಿ ಸಿಮ್ಲಾ ಪಟ್ಟಣದ ಕಡೆ ಹೊರಟರೆಂದು ಮುಂಬಯಿಯ ಹತ್ತಿಯ ಪೇಟೆಯಲ್ಲಿ ವಾರ್ತೆ ಹಬ್ಬಿ ಹತ್ತಿಯ ಧಾರಣ ಸಹ ಏರಿತು! ಜುಲೈ ತಾ ೧ನೇಗ ರಾಜಶಾಸನಗಳ ಆಯುಷ್ಯ ತೀರುವೊಡನೆ, ಸತ್ಯಾಗ್ರಹಿ ಕೈದಿಗಳೆಲ್ಲ ತಾನಾಗಿ ಬಿಡುಗಡೆಯಾಗುವದಾಗಿ ಮುಂಬಯಿ ಫ್ರಿ ಪ್ರೆಸ್' ಪತ್ರಿಕೆಯ ಸ್ವಂತ ಪ್ರತಿನಿಧಿಗಳ ಪ್ರಕಟನೆ

ವಾರ್ತೆಗಳು.

— ಕರ್ನಾಟಕ ಕಲಾಸಂಘದವರು ಬೆಳಗಾವಿಯೊಳಗೆ ಗಿಲಗಂಚಿ-ಅರಟಾಳ ಹೈಸ್ಕೂಲಿನಲ್ಲಿ ಚಿತ್ರಕಲಾ ಪ್ರದರ್ಶನ ನೆರಿಸಿದ್ದರು. ವಿಲಾಯತಿಯಲ್ಲಿ ಚಿತ್ರಕಲೆಯ ಒಳ್ಳೇ ಅಭ್ಯಾಸ ಮಾಡಿ ಹೆಸರು ಪಡೆದ ರಾ| ಬಡಿಗೇರ ಹಾಗು ಆರ್ಟರವರ ಒಳ್ಳೇ ಸೊಬಗಿನ ಚಿತ್ರಗಳು ಪ್ರದರ್ಶನದಲ್ಲಿಡಲ್ಪಟ್ಟಿದ್ದವು.

— ಬಳ್ಳಾರಿ ಬೋರ್ಡಿನೊಳಗಿನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ೬ ತಿಂಗಳ ತನಕ ಸಂಬಳ ದೊರಕಲಿಲ್ಲವಾಗಿ ದೂರು.

— ಕಲಬುರ್ಗಿಯಲ್ಲಿ ಕರನಿರಾಕರಣೆಯ ಠರಾವಾಗಿದೆ ಈ ಠರಾವಿಗೆ ಮಿಕ್ಕಿ ಕೆಲವರಿಂದ ಕರವೇ ವಸೂಲಾಯಿತು ಅದನ್ನು ಸರಕಾರ ಟ್ರೆಜೋರಿಯೊಳಗಿಂದ ಬಲಾತ್ಕಾರದಿಂದ ವಸೂಲ ಮಾಡುವ ದುರ್ಬುದ್ಧಿ ಕೆಲವರಿಗೆ ಹುಟ್ಟಿ ಪೇಶ್ಕಾರ ಕಾವಲಿಗರನ್ನೂ, ಮುಖ್ಯ ಅಧಿಕಾರಿಗಳನ್ನೂ ಕೊಂದು ಟ್ರೆಜೋರಿ ಲೂಟಿ ಮಾಡಿದರು ಆದರೆ, ಹಣ ಒಯ್ಯದೆ ಅದನ್ನು ಪೋಲೀಸ ಚೌಕಿಯಲ್ಲಿಯೇ ಬಿಟ್ಟು ಬಿಟ್ಟ ಸೇರಿದರಂತೆ ಮೂವರಿಗೆ ಸೆರೆಹಿಡಿಯಲಾಗಿದೆ.

— ಹಿಂದುಸ್ಥಾನದ ಖರ್ಚಿನ ಕುರಿತು ವಿಚಾರ ಮಾಡಲಿಕ್ಕೆ ಒಂದು ಚೌಕಶಿ ಮಂಡಳ ನೇಮಿಸಲ್ಪಡುವದಾಗಿ ಭಾರತ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಜಾಹೀರಪಡಿಸಿದ್ದಾರೆ.

— ಮುಂಬಯಿಯಲ್ಲಿ ಒಂದು ಹೊಸ ಪ್ರಕಾರ ಕೋಠಾರೀ ಎಂಬವರ ೧೬ ವರ್ಷದ ಹುಡುಗನು ಶಾಲೆಗೆ ಹೋಗಿದ್ದನು ಆತನಿಗ ಕೆಲವರು ಒಂದು ಓಣಿಯಲ್ಲಿ ಹಿಡಿದು ಮೋಟಾರ ಬಂಡಿಯಲ್ಲಿ ಹಾಕಿ ಒಯ್ದು ಬಿಟ್ಟರು ಹಗಲು ೧೨ ಘಂಟೆಗೆ ಈ ಪ್ರಕಾರ ನಡೆಯಿತು ಮೋಟಾರನ್ನು ಘಾಟಿಯಲ್ಲಿ ನಿಲ್ಲಿಸಿ, ದರೋಡೆಖೋರರು ಚಹ ಕುಡಿಯ ಹೋದರು ಇದೇ ಸಂಧಿ ಸಾಧಿಸಿ ಹುಡುಗನು ಒಬ್ಬ ಅಂಬಿಗರ ಮನೆಗೆ ಹೋಗಿ ಅಡಗಿ ಕೂತು ಅಂತು ಮಾರನೇ ದಿನ ಮನಗೆ ಬಂದು ಮುಟ್ಟಿದನು! ಆತನ ಮೈಮೇಲಿನ ಚಿನ್ನವಿರಲಿಲ್ಲ

— ಕಾಂಜೀವರಂದಲ್ಲಿ ರಥೋತ್ಸವ ನಡೆದಿತ್ತು ಸ್ವಯಂಸೇವಕರು ರಾಷ್ಟ್ರಧ್ವಜ ಹಿಡಿದು ಜಯಘೋಷ ಮಾಡುತ್ತ ನಡೆದಿದ್ದರು. ಅವರಿಗ ಚದರಲು ಹುಕುಮಾಯಿತು, ಅವರೊಪ್ಪಲಿಲ್ಲ ಲಾಠಿ ಹೊಡೆಯಲ್ಪಟ್ಟಿತು. ಒಬ್ಬ ಹುಡುಗನಿಗ ಹಣೆಯ ಮೇಲೆ ಒಳ್ಳೇ ಪೆಟ್ಟು ಬಿತ್ತು, ಆಸ್ಪತ್ರೆಯಲ್ಲಿ ಒಯ್ದು ಎಷ್ಟು ಉಪಚಾರ ನಡಿಸಿದಾಗ್ಯೂ ಆತನನ್ನು ಉಳಿಸಿಕೊಳ್ಳಲಾಗಲಿಲ್ಲ ಎಳೆ ಹುಡುಗ!

— ಕಲಕತ್ತೆಯಲ್ಲಿ ಅಖಿಲ ಭಾರತೀಯ ಮುಸ್ಲಿಮ ಲೀಗಿನ ಸಭೆಸೇರಿ, ಪ್ರಕೃತ ಪರಿಸ್ಥಿತಿಯ ವಿಚಾರಣೆಯಾಯಿತು. ಮುಸಲ್ಮಾನ ಜಾತಿಗೆ ಇದು ಬೇಕು, ಅದು ಬೇಕು, ಎಂಬವರ ಕುರಿತು ಉದ್ದುದ್ದ ಠರಾವುಗಳಾಗಿವೆ ಈ ಠರಾವುಗಳು ಸಭೆ ಸೇರುವ ಮುಂಚೆಯೇ ತಯಾರಾಗಿ ಅಲ್ಲಲ್ಲಿ ಕಳಿಸಲ್ಪಟ್ಟಿದ್ದವೆಂದು ಮದ್ರಾಸ 'ಸಂಡೇ ಟೈಮ್ಸ' ಪತ್ರಿಕೆಯ ಸುದ್ದಿ. ಸಭೆ [illegible] ಸೇರಿತಾಗಿ ಸಹ ಆ ಪತ್ರಿಕೆಯು ಬೇಳಿಕೆ ಸಭೆ ಸೇರಿತೆಂಬ ಪ್ರಕಟವಾದ ದಿನ, ಈ ಮುಂಚೆ ಕಳಿಸಿದ ಠರಾವುಗಳನ್ನು ಪ್ರಕಟಿಸಬೇಕಾಗಿ ಅಲ್ಲಿಯ 'ಎಸೋಸಿಯೆಟೆಡ್ ಪ್ರೆಸ್' ಆಫೀಸಿಗೆ ತಂತಿ ಬಂದಿತ್ತಂತೆ ಈ ಅಖಿಲ ಭಾರತೀಯ ಸಭೆಗೆ ೩ ಮಂದಿ ಸಭಾಸದರು ಕೂಡಿದರಾಗಿ ದಿಲ್ಲಿಯ 'ಹಿಂದುಸ್ಥಾನ ಟೈಮ್ಸ' ಪತ್ರಿಕೆಯ ಸುದ್ದಿ "ಮಹಾಯುದ್ಧ ಸಮಯ ನಮ್ಮ ಜಾತಿ ನೆರವಾಗಿದೆ, ಸತ್ಯಾಗ್ರಹ ಸಮಯ ರಾಜನಿಷ್ಠರಾಗಿದ್ದೇವೆ, ಮುಸಲ್ಮಾನರು ರಾಜಕೀಯ ಕಾರಣದ ದೆಸೆಯಿಂದ ಯಾರದೂ ಕೊಲೆ ಮಾಡಲಿಲ್ಲ, ಅದರಿಂದ ಹೊಸ ರಾಜ್ಯಘಟನೆಯಲ್ಲಿ ನಮ್ಮ ಜಾತಿಗೆ ವಿಶೇಷ ಪ್ರಾಧಾನ್ಯ ಕೊಡಬೇಕು" ಹೀಗೆ ಪ್ರಮುಖ ಜಾತ್ಯಭಿಮಾನಿ ಮುಸಲ್ಮಾನರು ಒಂದು ಕೈಫೀಯತನ್ನು ಪ್ರಧಾನ ಮಂಡಳಕ್ಕೆ ರವಾನಿಸಿದ್ದಾರಂತೆ

— ಬಂಗಾಲದಲ್ಲಿ ಕ್ರಾಂತಿಕಾರಕ ಚಳವಳಿಯನ್ನು ದಬ್ಬುವದಕ್ಕಾಗಿ ಪೋಲೀಸರಿಗೆ ವಿಶೇಷಾಧಿಕಾರ ಕೊಡಲ್ಪಟ್ಟಿದೆ. ಅವರು ಸಂಶಯಪಟ್ಟವರಿಗೆ ಬೇಕಾದಾಗ ಝಡತಿ ಮಾಡಬಹುದು ಕ್ರಾಂತಿಕಾರಕರ ಸಂಬಂಧವಿದ್ದವರಿಗೆ ಯಾವದೇ ಸುದ್ದಿ ದೊರೆಯದಂತೆ ಬೇಕಾದ ಮುಂಜಾಗ್ರತೆ ಕೊಳ್ಳಬಹುದು.

— ನಾಶಿಕದೊಳಗಿನ ಧನುಷ್ಯ-ರಾಮ-ಸೀತಾ ಮೊದಲಾದ ಕುಂಡಗಳಲ್ಲಿ ಸ್ನಾನ ಮಾಡಲು ಅಸ್ಪೃಶ್ಯರಿಗ ಅಧಿಕಾರವಿಲ್ಲವಾಗಿ ಡಿ| ಮೆಜಿಸ್ಟ್ರೇಟರು ಚೌಕಶಿ ಮಾಡಿ ನಿರ್ಣಯಿಸಿದ್ದಾರೆ ಅವಶ್ಯವಿದ್ದಲ್ಲಿ ಅಸ್ಪೃಶ್ಯರು ದಿವಾಣಿ ಕೋರ್ಟುಗಳಲ್ಲಿ ಇಲಾಜು ನಡಿಸಿಕೊಂಡು ತಮ್ಮ ಹಕ್ಕುಗಳನ್ನು ಪ್ರಸ್ಥಾಪಿಸಿಕೊಳ್ಳಬಹುದಾಗಿ ಹುಕುಮವಾಗಿದೆ.

— ಪೇಶಾವರ, ಕಾನಪುರ, ದಿಲ್ಲಿಗಳಲ್ಲಿ ಭಯಂಕರ ಸೆಕೆ, ಬಿಸಿಲು ತಾಪದಿಂದ ದಿಲ್ಲಿಯಲ್ಲಿ ೭೫ ಮಕ್ಕಳು ತೀರಿಕೊಂಡರು ಕಾನಪುರ-ಬೀರುಹಾದಾಗಳಲ್ಲಿ ಇಬ್ಬಿಬ್ಬರು.

— ದಾವಣಗೇರಿಯ ಪ್ರಾಣಿದಯಾ ಪ್ರಚಾರಕ ಸಂಘದ ಶ್ರೀಮಾನ್ ತವನಪ್ಪನವರ ದೇವೇಂದ್ರಪ್ಪನವರು ದೈವಾಧೀನರಾದರು. ಶ್ರೀಯುತರು ಜೈನ ಮತಸ್ಥರು, ಅವರೂ ಸಕಲ ಮತಗಳಲ್ಲಿಯೂ ಇವರಿಗೆ ಅಭಿಮಾನವಿತ್ತು. ತಮ್ಮ ವ್ಯವಹಾರ ನಾಗಿಸಿಕೊಂಡು ಸಾರ್ವಜನಿಕ ಕಾರ್ಯದಲ್ಲಿ ದುಡಿದು ಇವರು ಒಳ್ಳೇ ಕೀರ್ತಿ ಸಂಪಾದಿಸಿದ್ದಾರೆ ನಲಿಗಪ್ಪ ಎಣ್ಣೆ ತೆಗೆಯುವ ೧೦-೧೨ ಕಾರಖಾನೆಗಳ ಮಾಲೀಕರಾಗಿದ್ದರಿವರು.

— ಬೆಳಗಾವಿ ಜಿಲ್ಹೆಯ ಕುಡಚಿ ಗ್ರಾಮದಲ್ಲಿ ಮುಸಲ್ಮಾನರ ಜನಸಂಖ್ಯೆ ಹೆಚ್ಚು ೩೦೦೦ ಮಂದಿ ಮುಸಲ್ಮಾನರು, ಹಿಂದುಗಳು-ಲಿಂಗಾ, ಜೈನರು [illegible]. ತುಂಟ ಮುಸಲ್ಮಾನರು ಜೈನರ ಕಡೆ ಕಾಲು ಕೆದರಿ ಜಗಳ ಹೂಡಿ ಅವರಿಗೆ ನಾನಾ ತರದಿಂದ ಪೀಡಿಸುತ್ತಾರೆ. ಲೋಕರಕ್ಷಣೆಗಾಗಿ ಮುಂಬಯಿ ಸರಕಾರವು ಜಾದಾ ಪೋಲೀಸರನ್ನ ನೇಮಿಸಿದೆ ಈ ಖರ್ಚ ಮುಸಲ್ಮಾನರ ಕಡೆಯಿಂದ ವಸೂಲ ಮಾಡಬೇಕಾಗಿಯೂ ವಿಧಿಸಿದೆ.

— ಕುಂದಾಪುರದಲ್ಲಿ ವಿದೇಶಿ ಸಕ್ಕರೆಯ ಬಹಿಷ್ಕಾರ ಚಳವಳ ಮಾಡಿದ ಬಗ್ಗೆ ಉಡುಪಿಯ ಸರ್ವಾಧಿಕಾರಿಗೆ ೬ ತಿಂಗಳ ಸಜೆ, ರೂ ೧೦೦ ದಂಡ ವಿಧಿಸಲ್ಪಟ್ಟಿದೆ.

— ಇರ್ವಿನ್ ಕಾಲುವೆಯ ನೀರಿನ ಮೇಲೆ ವಿಶೇಷ ಕರ ವಿಧಿಸುವದರಿಂದ ಆ ಕುರಿತು, ವಿಚಾರ ನಡಿಸುವದಕ್ಕಾಗಿ ಮೈಸೂರಿನೊಳಗೆ ರೈತರ ಪರಿಷತ್ತು ಸೇರುವದಿತ್ತು. ಅದನ್ನು ಸೇರಿಸಬಾರದಾಗಿ ಮೈಸೂರಿನ ಡಿ| ಮೆಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ.

ನಿರ್ಬಂಧದೊಳಗಿರುವ ‘ವೃತ್ತ’ದ ಸಂಚಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಒಳ್ಳೇ ರಭಸದಿಂದ ಮಳೆ ಬೀಳುತ್ತಿದೆ. ಒಕ್ಕಲಿಗರು ಬೀಜವುದಕ್ಕೆ ತೊಡಗಿದ್ದಾರೆ.

ಶ್ರೀ ಕ್ಷೇತ್ರ ಗೋಕರ್ಣದಲ್ಲಿ [illegible] ತಾ [illegible]ನೇಗೆ ಸ್ವದೇಶಿ ದಿನ ಮೆರವಣಿಗೆಯಲ್ಲಿ ಹಿಡಿದ ೭ ಜನರ ಮೇಲೆ ಕ್ರಿಮಿನಲ್ ಲಾ ಎಮೆಂಡಮೆಂಟು ಆಕ್ಟದಂತೆ ನಡೆದ ಖಟ್ಲೆಯ ಫೈಸಲಿಯೊಬ್ಬರಿಗೆ ೬-೬ ಮಾಂಗಳ ಶಿಕ್ಷೆ, ರೂ ೪-೫ ದಂಡ ವಿಧಿಸಲ್ಪಟ್ಟಿದೆ. ದಂಡ ಕೊಡದಿದ್ದರೆ ಪಟ್ಟಿ ೬ ವಾರಗಳ ಶಿಕ್ಷೆ ವಿಧಿಸಲಾಗಿದೆ. ಮೆಜಿಸ್ಟ್ರೇಟರು ಸೋಮವಾರ ಕೊಟ್ಟ ತೀರ್ಪಿನಲ್ಲಿ ಬರೆಯುವದೇನೆಂದರೆ ‘ತಾ [illegible]ನೇಗೆ ಶ್ರೀ ಕೃಷ್ಣಾಪುರದ ರವಳಗೆ ಕೊಂಗ್ರೆಸ ಸ್ವಯಂಸೇವಕ ಟೋಳಿಗಳಿಂದ ಆರೋಪಿಗಳು ಇತರ ಅವ್ಯವಸ್ಥ ಜನಗಳೊಡನೆ ಒಂದು ಮೆರವಣಿಗೆ ಹೊರಡಿಸಿದರು. ಮೆರವಣಿಗೆಯಲ್ಲಿಯ ಜನ, ನಡೆಯುವರು, ಹೀಗೆ ಮುಂಚೆಯೇ ಹಂಗುದ [illegible] ಎಲ್ಲರೂ ರಾಷ್ಟ್ರಗೀತೆಗಳನ್ನು ಹಾಡುತ್ತಿದ್ದರು. “ಗಾಂಧಿ ಮಹಾರಾಜಕಿ ಜಯ”, “ಭಾರತ ಮಾತಾಕಿ ಜಯ” ಹೀಗೆ ಘೋಷಿಸುತ್ತಿದ್ದರು. ಇದರಿಂದ ಕರ್ನಾಟಕ ಪ್ರಾಂತಿಕ ಕೊಂಗ್ರೆಸ ಕಮಿಟಿಯ ಕಾರ್ಯಕ್ಕೆ ಪ್ರೋತ್ಸಾಹ ದೊರೆಯಿತು. ಹೀಗೆ ಫಿರ್ಯಾದಿ ಸಾಕ್ಷಿದಾರರ ಅಂಬೋಣವಿದೆ. ಆರೋಪಿಗಳು ಅಪರಾಧವನ್ನೊಪ್ಪುವದಿಲ್ಲ. ತಾವು ಸ್ವಯಂಸೇವಕರಲ್ಲವಾಗಿ ಹೇಳುತ್ತಾರೆ. (ಪಂಡಿತ) ಮದನ ಮೋಹನ ಮಾಲವೀಯರವರು ಅಪ್ಪಣೆ ಕೊಟ್ಟಂತೆ ಸ್ವದೇಶಿ ಪ್ರಚಾರಕ್ಕಾಗಿ ತಾವು ಮೆರವಣಿಗೆ ಹೊರಡಿಸಿದ್ದೇವಾಗಿ ಅವರು ಹೇಳುತ್ತಾರೆ. ಕೊಂಗ್ರೆಸ ಸ್ವಯಂಸೇವಕರು ವಾಸಕ್ಕಾಗಿ ಉಳಕೊಳ್ಳುವ ಸ್ಥಳ ಕೃಷ್ಣಾಪುರ ಹೊರವಾಗಿರುತ್ತದೆ, ಅಲ್ಲಿ ವ್ಯವಹಾರದ ಸಂಬಂಧದ ಪ್ರಕಾರಗಳು ನಡೆಯುತ್ತಿದ್ದವು. ಆರೋಪಿಗಳು ಆ ದಿನ ಮೆರವಣಿಗೆಯನ್ನು ಅಲ್ಲಿಂದಲೇ ಹೊರಡಿಸಿದರು. “ಸ್ವದೇಶಿ ಸರಕು ಕೊಂಡುಕೊಳ್ಳಿರಿ” ಎಂಬ ಪಟ್ಟಿಗಳನ್ನು ಹಿಡಕೊಂಡು ಹಾಗೂ “ಗಾಂಧಿ ಮಹಾರಾಜಕಿ ಜಯ” “ಭಾರತ ಮಾತಾಕಿ ಜಯ” ಎಂಬ ಘೋಷ ಮಾಡುತ್ತ ಸಾಗಿದರು. ಇದರಿಂದ ಕೊಂಗ್ರೆಸು ಕೈಕೊಂಡ ಸತ್ಯಾಗ್ರಹಕ್ಕೆ ಬೆಂಬಲ ದೊರೆಯಿತು. ಈ ಪ್ರಕಾರ ಫಿರ್ಯಾದಿ ಪಕ್ಷದ ಹೇಳಿಕೆಯಾಗುತ್ತದೆ. ಆರೋಪಿಗಳ ಕಡೆಯಿಂದ ಇಬ್ಬರು [illegible] ವೆ ಕೊಟ್ಟಿದ್ದಾರೆ. ಒಬ್ಬ ಸಾಕ್ಷಿಗಾರರು ಒಬ್ಬ [illegible] ಆರೋಪಿಗಳು ಕೊಂಗ್ರೆಸ ಸ್ವಯಂಸೇವಕರಲ್ಲವಾಗಿ ಅವರ ಸಾಕ್ಷಿ. “ಗಾಂಧಿ ಮಹಾರಾಜಕಿ ಜಯ” “ಭಾರತ ಮಾತಾಕಿ ಜಯ” ಹೀಗೆ ಘೋಷಿಸಿದ್ದು ನಿಜವೆಂದು ಎರಡನೇ ಸಾಕ್ಷಿದಾರರು ಒಪ್ಪುತ್ತಾರೆ. ಈ ಘೋಷಣೆಗಳು ಕೊಂಗ್ರೆಸ ಚಳವಳಿಯವರ ಘೋಷಣೆಗಳಿವೆ. ಸ್ವದೇಶಿ ಸಂಘ ಮುಂತಾದ ಮೆರವಣಿಗೆಗಳು ಬೇಕಾದಷ್ಟು [illegible] “ಸ್ವದೇಶಿ ಸರಕುಗಳನ್ನೇ ಕೊಳ್ಳಿರಿ”, “ಸ್ವದೇಶಿಗೆ ಪ್ರೋತ್ಸಾಹ ಕೊಡಿರಿ” ಎಂಬ ಚಳವಳಿಗೂ, ಕೊಂಗ್ರೆಸ ಪ್ರಚಾರಕ್ಕೂ ಇರುವ [illegible] ಅಪಾಯಕರ (*dangerously thin*) [illegible] ಚಳವಳಿಯು ಪ್ರತ್ಯಕ್ಷ [illegible] (*still thinner*) [illegible] ಫೆಬ್ರುವರಿ ಮಾರ್ಚ ತಿಂಗಳಲ್ಲಿ ನಡೆದ ಕೊಂಗ್ರೆಸ ಸಭೆ, [illegible] ಮೆರವಣಿಗೆಗಳಲ್ಲಿ [illegible] ಹೇಳುತ್ತಾರೆ. ಇದಕ್ಕೆ ವಿರುದ್ಧವಾದ ಪುರಾವೆಯನ್ನು ಆರೋಪಿಗಳು ಕೊಟ್ಟಿಲ್ಲ. ಇವರು ಬಟ್ಟ ಸ್ವದೇಶಿ ಪ್ರಚಾರಕರೆಂದ ನನ್ನ ಅಭಿಪ್ರಾಯದಲ್ಲಿ ವಿದೇಶಿ ಸರಕುಗಳ ಬಹಿಷ್ಕಾರ ಪುರಸ್ಕರಿಸುವವರಲ್ಲಿ ಇವರು ಸೇರಿದ್ದರಿಂದ ವಿದೇಶೀ ಸರಕುಗಳ ಬಹಿಷ್ಕಾರದ ವಿಷಯದಲ್ಲಿಯೇ ಸ್ವದೇಶೀಯ ಪ್ರಚಾರ ನಡೆದಂತಾಯಿತು. ಹೀಗೆ ಬೇಕಾಯಿದೇಶೀರ (ಕೊಂಗ್ರೆಸ) ಕಾರ್ಯಕಾರಿ ಮಂಡಳದ ಪುರಸ್ಕಾರ ಮಾಡಿದಂತಾಯಿತು. ಆದರಿಂದ ಆರೋಪಿಗಳು ಅಪರಾಧಿಗಳು. ಜಪ್ತ ಮಾಡಿ ಕಂಡ ಪಟ್ಟಿಗಳನ್ನು ನಾಶಪಡಿಸತಕ್ಕದ್ದು.” ಹೀಗೆ ತೀರ್ಪು.

‘ವೃತ್ತ’ [illegible] ಮೇಲೆ ನಡೆದ ಒಟ್ಲೆ ಜುಲೈ ಮೊದಲನೇ ವಾರದ ತನಕ ತಹಕೂಬು ಇಡಲಾಗಿದೆ. ‘ವೃತ್ತ’ದ ಮೇಲೆ ಹೊರಡಿಸಿದ ನಿರ್ಬಂಧಕ ಹುಕುಮವು ಜುಲೈ ೩ನೇ ತಾರೀಖಿನ ವರೆಗೆ ಜಾರಿಯಲ್ಲಿರುವದೆಂದು ಮುಂಬಯಿ ಸರಕಾರದ ಹುಕುಮವಾಗಿರುವದಾಗಿ ಡಿ. ಮೆಜಿಸ್ಟ್ರೇಟರು ನೋಟೀಸು ಕೊಟ್ಟಿರುತ್ತಾರೆ.

ಮೊಗಲಾಯಿಗಳ ಕಾಟ ಇನ್ನೂ ತಪ್ಪಲಿಲ್ಲ.

ಹೊನ್ನಾವರ— ಮೊಗಲಾಯಿಗಳ ಉಪದ್ರವವೇ [illegible] ನಗರದ ಪಿರ್ [illegible] ಗುಡಿಸೇ [illegible] ಅವರ [illegible]ಗಾರು ಬಂದ ಹೊಡಿದ್ದಾರೆ ಒಳ್ಳೆ [illegible] ನೆರೆದ ಹಗಲಿಗಂತೂ [illegible] ರಾತ್ರಿ ೧೦ ೧೧ ಘಂಟೆಯ ವರೆಗೂ [illegible] ಜನರ [illegible] ಮಳೆಗಾಲದಲ್ಲಿ [illegible] ಒಳ್ಳೇ [illegible] ಆಗುವದು [illegible] ಬಂದೋಬಸ್ತ [illegible] ಮಾಡುವದು ಅವಶ್ಯ ಆದಿದೆ.

ಶಿರಸಿ— ಕಳೆದ ಮಂಗಳವಾರ ಇಲ್ಲಿಯ [illegible] ನಾಟ್ಯಗೃಹದಲ್ಲಿ ರಾಜಕೀಯ ಸಭೆಯೊಂದಾಯಿತು. ಮುಂಚಿನ ದಿನವೇ ಜಾಹೀರಾತುಗಳು [illegible] ಹಂಚಲ್ಪಟ್ಟಿದ್ದವು. ಅದರಂತೆ ಮರುದಿನ ರಾ। ರಾ। [illegible] ಆಲೂರರವರ ಅಧ್ಯಕ್ಷತೆಯಲ್ಲಿ ಸಭೆಯಾಯಿತು. ಸರಕಾರಿ ನೌಕರರೂ ಬಹಳ ಶಿಕ್ಷಕರೂ, ಕೆಲ ವ್ಯಾಪಾರಿಗಳೂ ಸೇರಿ ೬೦-೬೫ ಜನರು ನೆರೆದಿದ್ದರು. [illegible] ಯವರ ಬಂದ ಗೃಹಸ್ಥರು ಉಪನ್ಯಾಸ ಕೊಟ್ಟು ದಾಸ್ಯವು ನಮಗೆ ಎಷ್ಟು ಘಾತಕವಾಗಿದೆಂದು ಅವರು [illegible] ಹೇಳಿದರು. ಕೊಂಗ್ರೆಸ ಕಾರ್ಯಕರ್ತರು ಈ ಸಭೆಯು ನಿಷ್ಫಲ [illegible] ಪತ್ರಿಕೆಗಳನ್ನು ಊರಲ್ಲೆಲ್ಲ ಹಂಚಿದ್ದರು.

[illegible] ನಡೆದಿರುವ [illegible] ಜಮೀನದಾರರಿಂದ [illegible] ಜಮೀನ ಖಾತೆದಾರರು ನೋಟೀಸು ಬಂದಿದೆ [illegible] ಅವರ ರೂ ೧೩ ತೀರ್ವೆ ಬಗ್ಗೆ ಕೆಲವು ದಿನಗಳ ಹಿಂದೆ ಅವರ [illegible] ಮನೆಯಲ್ಲಿ ಜಪ್ತಿಯಾಗಿ ೨ ಖಂಡಗ ಭತ್ತವನ್ನು ಒಯ್ದರು. ಹನಮಂತ [illegible] ಪಿಕಾನದಾರರಲ್ಲಿ ಹಿಂದೆ ಎರಡು ವರ್ಷಗಳ [illegible] ಭತ್ತ [illegible] ಮಂಜಪ್ಪ ಹೆಗಡೆ [illegible] ಬಾಕಿ ತೀರ್ವೆ ತುಂಬಿದರು. [illegible] ಮನೆಯಲ್ಲಿ [illegible] ಸಾರೆ ಜಪ್ತಿಗೆ ಹೋದಾಗ್ಗೆ [illegible] ಅಧಿಕಾರಿಗಳು ನೆರೆದಿದ್ದರು [illegible] ಹೆಗಡೆಯಲ್ಲಿ [illegible] ತೀರ್ವೆ ಬೇಡಿದರು. ಅವಕ್ಕೆ [illegible] “ನಾನು ಎಲ್ಲ ತೀರ್ವೆ ಕೊಟ್ಟದ್ದೇನೆ [illegible]” ಎಂದು ಹೇಳಿದರು! [illegible] ಹೆಗಡೆ ತೀರ್ವೆ ಕೊಡಲಿಲ್ಲ ನೀವು [illegible] ನೀವು ಕೊಡುತ್ತೀರೋ ಜಪ್ತ ಮಾಡಬೇಕೋ?” ಎಂದು ಕೇಳಿದರು. [illegible] ತೀರ್ವೆ ಕೊಡತಕ್ಕ [illegible] ಹೇಳಿದ ಬಳಿಕ ಅಧಿಕಾರಿಗಳು ಪ್ರತ್ಯಕ್ಷ [illegible] ಇನ್ನೂ [illegible] ಕೆಲವ [illegible] ಪಟ್ಟಿಗಳಾದರೂ ಜಮೀನ ಖಾತೆದಾರರ ನೋಟೀಸುಗಳೂ ಆಗಿವೆ. ಸುಗಾವಿಯಲ್ಲಿ ಮೂರು ಖಾತೆದಾರರಿಗೆ ಇಂಥ ನೋಟೀಸುಗಳು ಜಾರಿಯಾಗಿವೆ.

ಸುಗಾವಿಯ ೯ ಖಾತೇದಾರರೊಬ್ಬರ ಆಕಳು ಜಪ್ತಿಗಿದ್ದು ತೀರ್ವೆ ಮತ್ತು [illegible] ಕೊಟ್ಟು ಆಕಳನ್ನು ಒಯ್ಯಿರೆಂದು ಹೇಳಿದರೂ ಖಾತೇದಾರರು ಒಪ್ಪಲಿಲ್ಲ. ಆ ಆಕಳನ್ನು [illegible] ಊರಲ್ಲಿ ಲಿಲಾವು ಮಾಡಿಸಿ ಅದನ್ನು ಅವರೇ ಕೊಂಡುಕೊಂಡರಾಗಿ ಸುದ್ದಿ.

[illegible] ಸ್ವಯಂಸೇವಕನೊಬ್ಬನು ಕಾರವಾರದಿಂದ ಒಂದು ತಿಂಗಳ ಹಿಂದ ಬಿಡುಗಡೆಯಾಗಿ ಬಂದಿದ್ದನು. ಆವನನ್ನು ಸುದ್ದಿಯ ಬೋರ್ಡು ಹಚ್ಚುವಾಗ ಕೈದು ಮಾಡಿ ೬ ತಿಂಗಳ ಕಠಿಣ ಶಿಕ್ಷೆ ವಿಧಿಸಿರುತ್ತಾರೆ.

ಸುಗಾವಿಯ [illegible] ಪಟೇಲರು ಮ್ಯುನಿಸಿಪಲ್ ಹದ್ದಿನೊಳಗೆ [illegible] ಕೊಡಬೇಕೆಂದು ಹುಕುಮವಾಗಿದೆ. ಬಿಸಲಕೊಪ್ಪದ ರಾ ೪೦೦೦ ತೀರ್ವೆ ಕೊಡುವ ಒಬ್ಬ [illegible] ಜಮೀನದಾರರಿಗೂ ಇದೇ ತರದ ನೋಟೀಸು ಬಂದಿದೆ. ಸದರಿ ಜಮೀನದಾರರು ತಮ್ಮ ತೀರ್ವೆ ವಸೂಲ ಕೊಟ್ಟಿರುತ್ತಾರೆ.

ಕಾರವಾರದಲ್ಲಿ ಸಿವ್ಹಿಲ್ ಸರ್ಜನ್‌ರಾಗಿ ಒಳ್ಳೇ ಪ್ರೀತಿಪಾತ್ರರಾದ ಡಾ। [illegible] ಇಲ್ಲಿ ಆ। ಸರ್ಜನ್‌ರಾಗಿ ವರ್ಗವಾದಂತೆ ಅವರು ಇಲ್ಲಿ ಬಂದಿರುತ್ತಾರೆ. ಕಾರವಾರದಲ್ಲಿ [illegible] ಅವರು [illegible] ಅವರಿಗೆ [illegible] ಹೀಗೆ ಅವರಿಗೆ [illegible] ಇಲ್ಲಿಯವರು ಉತ್ತರ ಕೊಟ್ಟ ಸಂಗತಿ ಪ್ರಸಿದ್ಧವಾಗಿತ್ತು. ಅವರ ವರ್ಗ ರದ್ದಾಗದ್ದರಿಂದ ಅವರು ಇಲ್ಲಿ ಬಂದಿರುತ್ತಾರೆ.

ಸಿದ್ದಾಪುರ— ಜಪ್ತಿ, ಸತ್ಯಾಗ್ರಹ, ಬೋರಪೇಟ ನೋಟೀಸು ಲಿಲಾವಿನಲ್ಲಿ ಸಾಮಾನು ಕೊಳ್ಳಗೊಡದ ಸತ್ಯಾಗ್ರಹ ಎಲ್ಲ ಪ್ರಕಾರಗಳು ನಡೆದಿವೆ. ಈ ತಾಲೂಕಿನಲ್ಲಿ ಒಳ್ಳೇ ಪೋಲೀಸ ಬಂದೋಬಸ್ತಿದೆ. ಪರಭಾರವರು ಬಂದರೆ ಅವರ ಹೆಸರು [illegible] ಬಂದ ಕಾರ್ಯಭಾಗ ಮೊದಲಾದವುಗಳ ಟಾಚಣಿಯಾಗುತ್ತದೆ. ಅವರ ಬೆನ್ನಿಗೆ ಪೋಲೀಸರು ಇದ್ದೇ ಇರುತ್ತಾರೆ. ಹೋದ ಹೋದಲ್ಲಿ ಬಾತಮಿಯಾಗುತ್ತದೆ. [illegible] ಪೋಲೀಸರು [illegible] ಮಾಡುತ್ತಿದ್ದಾರಂತೆ. [illegible] ಪತ್ತೆ ದೊರೆಯುತ್ತಿಲ್ಲವಂತೆ. ಒಬ್ಬ ಕಾರ್ಯಕರ್ತರಿಗೆ ಸೆರೆಮನೆಯಾಗಿದೆ. ತೀರ್ವೆ ಬಹಳ ಬಾಕಿಯುಳಿದಿದೆ. ಈಗ [illegible] ಗ್ರಾಮಗಳಲ್ಲಿ [illegible] ಹಳ್ಳ [illegible] ಬರುವದರಿಂದ ತಿರುಗಾಟಕ್ಕೆ ತೊಂದರೆ. [illegible] ಮೆಜಿಸ್ಟ್ರೇಟ [illegible] ಲಿಲಾವಿನಲ್ಲಿ [illegible] ಸತ್ಯಾಗ್ರಹ [illegible] ಶಿಕ್ಷೆಯಾಗಿ [illegible] ಕಲಾಯಿತು.

ಅಂಕೋಲಾ— [illegible] ರಾ। (೧) (೨) ೩) [illegible] ಕೊಂಗ್ರೆಸ ಚಳವಳಿಯಲ್ಲಿ [illegible]

ಯಲ್ಲಾಪುರ— ಕಳೆದ ವಾರದಲ್ಲಿ [illegible] ತೀರ್ವೆ ಕೇಳಲು

ಹಾನೆಸು ರಾಜವಾನ ತಾಗನ ಕತೆ ತೀರ್ವ ಕೇಳದೇ ದಳು ಅದಕ್ಕಾಗಿ [illegible] ಅವರಿಗೆ ಹೊತ್ತದಂತೆ ಮಾಡುತ್ತಿ ಬೇರೆದಳು ಗದ್ದೆಯ ಕ್ಷಿದ್ದ ರಾ| ರವರು ಬಿಟ್ಟಿಂದರು ಅವರಿಗೆ ಅರ್ಧ ತಾಸು ಅವಕ ಬೇಡಿ ಹಾಕಿ ಕೂಡ್ರಿಸಿ ಮಾನೆಸೇರಿ ಇಂಥ ಜೇರ್, ತೋಳ್ದು ಮಾಡಲು ಕ ಸಾಮಾನು ಬಿಟ್ಟರು ಮಾನವೇ ದಿವ ಮಾ(೧) . (೨) .(೩) . ಇದರು ಗದ್ದೆಯಲ್ಲಿ ಗೊಬ್ಬರ ಹಾಕುತ್ತಿದ್ದರು ಪಟ್ಟಿ ಜಿಂದಗಿ ಸೊಂಕೇಳಲು ಅವರೊಪ್ಪಲಿಲ್ಲ ಅದಕ್ಕಾಗಿ ಅವರಿಗೆ ಕೈಗ ಬೇಡಿ, ಸೊಂಟಕ್ಕೆ ಹಗ್ಗ ಹಾಕಿ ತಾಲೂಕ ಕಚೇರಿಗೆ ಒಯ್ದರು. ಅವರಿಗೆ ಚಿತ್ತದಿಂದ ಬೊತೆದರಾಗಿ ಉರೆಕಂಬ ಮರಿ

ಕಾರವಾರ— ಇಲ್ಲಿಯ ಡಿ ಕೋರ್ಟಿನಲ್ಲಿ ಜನ ಮಾಸ್ತ್ರೀ ನ ಧುಕೇಶ್ವರ ದ ಹಸ್ತಿನದಲ್ಲಿ ಪ್ರವೇಶಿಸಿದ್ದರಿಂದ ಸಂಪ್ರೋಕ್ಷಣೆ ಮೊದಲಾದ ವಿಧಿಗಾಗಿ ಬರಿಗಿದ ಖರ್ಚನ ಬಗ್ಗೆ ರಾ| ವಡೇರರವರ ಮೇಲೆ ಡಿ ಕೋರ್ಟಿನಲ್ಲಿ ಇದ ಡಿಕ್ರಿಯ ವಿರುದ್ಧ ಆದ ಅಪೀಲು ಇವೇ ತಾ ೬ನೇಯಿಂದ ವಿಚಾರವಾಗುತ್ತಿದೆ ಅಪೀಲಂಟ ಮಿ| ವಡೇರರವರ ಪರ್ಯಿಂದ ಕೆಲಸ ನಡಿಸಲು ಧಾರವಾಡದಿಂದ ವಕೀಲರಾ| ಜೋಗ ವಿನಾಯಕರಾವ, ಹಾಗು ರಾ| ಪಾವಟೆಯವರು ಬಂದಿದ್ದಾರೆ ಶ್ರೀ ದೇವಸ್ಥಾನದ ಮೊಕ್ತೇಸರರ ಪರನಿಂದ ರಾ| ಕೃಷ್ಣರಾವ ಹಳದೀಪೂರಕರ ಹಾಗು ರಾ| ಗೋಕರ್ಣಕರವರು ಕೆಲಸ ನಡಿಸುತ್ತಾರೆ

ಗೊ ಕಾರ್ವಾರ ದೂರದ ಬಕ್ಕಲಿಗರಿಗೆ ಹೊನ್ನಾವರ ಮೆಜಿಸ್ಟ್ರೇಟರು ವಿಧಿಸಿದ ಶಿಕ್ಷೆಯ ವಿರುದ್ಧ ದಾಖಲಮಾಡಿದ ಅಪೀಲ ಅರ್ಜಿಯ ಸಂಗಡ ಹಾಜರಮಾಡಲು ಹೊನ್ನಾವರ ಮೆಜಿಸ್ಟ್ರೇಟರ ತೀರ್ಪಿನ ನಕಲು ಸಿಗಲಿಲ್ಲ. ಮೇ| ೮ಗೆ ಆರೋಪಿಗಳು ನಕಲಿನ ಬಗ್ಗೆ ಅರ್ಜಿ ಮಾಡಿ ೧ ತಿಂಗಳಾಯಿತು ಜೈಲರ ೨ ಬಾರಿ ಮೆಜಿಸ್ಟ್ರೇಟರಿಗೆ ಪತ್ರ ಬರೆದು ನಕಲು ಕಳಿಸಲು ನೆನಪು ಮಾಡಿದಾಗ್ಯೂ ನಕಲ ಸಿಗಲಿಲ್ಲ ಆದರಿಂದ ನಿರುಪಾಯವಾಗಿ ತೀರ್ಪಿಲ್ಲದೆ ಅಪೀಲ ದಾಖಲ ಮಾಡಬೇಕಾಯಿತೆಂದು ವಕೀಲರು ಅಪೀಲ ಅರ್ಜಿಯಲ್ಲಿ ಬರೆದಿರುತ್ತಾರೆ ನಕಲಿಗೆ ವಿಳಂಬವಾಗುವ ಕಾರಣವೇನೆಂದು ಸೆಶನ್ಸ ಜಡ್ಜರು ಮೆಜಿಸ್ಟ್ರೇಟರಿಗೆ ಬರೆದು ಕೇಳಿರುತ್ತಾರಂತೆ ಆರೋಪಿಗಳಿಗೆ ಕೋರ್ಟ ಕಳವು ಮಾಡಿದ ಅಪರಾಧದ ಬಗ್ಗೆ ೩ ತಿಂಗಳ ಕಠಿಣ ಶಿಕ್ಷೆಯಾಗಿತ್ತು ಈ ಖಟ್ಲೆ ಮೊದಲು ಕುಮಟೆ ೨ನೇ ವರ್ಗದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ನಡೆದಿತ್ತು ಖಟ್ಲೆ [illegible] ಕೇಳಕೊಳ್ಳುವ ಮುಂಚೆಯೇ ಮೆಜಿಸ್ಟ್ರೇಟರು ಆರೋಪಿಗಳಿಂದ ಹಾಜರಾದ ಕೋರ್ಟ [illegible] ಮಾವತಿ ಕೃತ್ರಿಮವೆಂದು ಅಭಿಪ್ರಾಯಪಟ್ಟಿದ್ದರಿಂದ ಈ ಖಟ್ಲೆಯು ವಿಚಾರ ಹೊನ್ನಾವರ ಕೋರ್ಟಿಗೆ ವರ್ಗಾಯಿಸಿತ್ತು

ಇಲ್ಲಿಯ ಮಿತ್ರಮಂಡಳದ ಹಿಂದಿನ ಮೈದಾನಿನಲ್ಲಿ ತಾ ೩ನೇಗೆ ಇಲ್ಲಿಯ ಪ್ರೊ| ಪಿ ಎಸ್ ನಾಗಳೇಕರವರು ಅದ್ಭುತ ಶಕ್ತಿಪ್ರಯೋಗ ಮಾಡಿ ತೋರಿಸಿದರು ೨೦೦ ರತ್ತಲ ತೂಕ ಕಬ್ಬಿಣ ಹಂಡೆಯನ್ನು ಸಹಜ ಎತ್ತಿ ಅದನ್ನು ಹಾರಿಸಿ ಹಿಡಿದು ತೋರಿಸಿದರು ಇಲ್ಲಿಯವರು ಪ್ರೊ| ನಾಗಳೇಕರವರಿಗೆ ೨೫೦ ರೂಪಾಯಿಗಳ ಥೈಲಿಯನ್ನರ್ಪಿಸಿದರು ಈ ಸಭೆಗೆ ರಾ| ಮಂಗೇಶರಾವ ತೇಲಂಗರವರು ಅಧ್ಯಕ್ಷರಿದ್ದರು. ಮುಂಬಯಿ ಹೈಕೋರ್ಟ ವಕೀಲರಾದ ರಾ| [illegible] ಮುಳೇಕರರವರು ಪ್ರೊ| ನಾಗಳೇಕರರ ಪ್ರಶಂಸೆ ಮಾಡಿದರು

ಚಕ್ರವರ್ತಿ ಪಂಚಮ ಜೋರ್ಜರವರ ವರ್ಧಂತಿಯ ದಿನ ತಾಲೂಕ ಕಚೇರಿಯಲ್ಲಿ ಸಭೆಯಾಗಿ ಬಾದಶಹರಿಗೆ ದೀರ್ಘಾಯುರಾರೋಗ್ಯಪ್ರಾಪ್ತಿಯಾಗಲೆಂದು ಪ್ರಾರ್ಥನೆಯಾಯಿತು. ಮಾಮಲೇದಾರರಾದ ರಾ| ಮುತಾಲಿಕರವರು ರಾಜಾಧಿರಾಜ ಯವರ ಪ್ರಜಾವಾತ್ಸಲ್ಯವನ್ನು

" ಸ್ನೇಹಂ ದಯಾಂ ಚ ಸೌಖ್ಯಂ ಚ
ಯದಿ ವಾ ಜಾನಕೀಮಪಿ ।
ಆರಾಧನಾಯ ಲೋಕಸ್ಯ
ಮುಂಚತೋ ನಾಸ್ತಿ ಮೇ ವ್ಯಥಾ ॥ "

ಎಂಬ ಭವಭೂತಿಯ ಉಕ್ತಿಯಿಂದ ವಿವರಿಸಿದರು ಲೋಕಾರಾಧನಕ್ಕಾಗಿ ಶ್ರೀರಾಮದೇವರು ತಮ್ಮ ಸೌಖ್ಯವನ್ನೆಲ್ಲ ತೊರೆಯಲು ಸಿದ್ಧರಾಗಿದ್ದರು, ಭಗವತೀ ಸೀತಾದೇವಿಯನ್ನು ಸಹ ತ್ಯಾಗ ಮಾಡುವ ಪ್ರಸಂಗ ಬಂದಾಗ್ಯೂ ಹಾವು ಹಿಂಜರಿಯಲಿಕ್ಕಿಲ್ಲವಾಗಿ ಶ್ರೀ ರಾಮದೇವರ ಪ್ರತಿಜ್ಞೆಯಿತ್ತು, ಹೀಗೆ ರಾ| ಮುತಾಲಿಕರು ಹೇಳಿದರು ಈಗ ರಾಜಸತ್ತೆಯಷ್ಟೇ ಜನರಿಗೆ ಒಪ್ಪಿಸುವ ವಿಚಾರ ನಡೆದದೆ ಅಂಥ ಪ್ರಸಕ್ತಿಯಲ್ಲಿ ರಾಮರಾಜ್ಯಕ್ಕಿಂತ ಈಗಿನ ಪದ್ಧತಿ ಹೆಚ್ಚು ಲೋಕಪ್ರಿಯವಾಗಬೇಕು ರಾಮರಾಜ್ಯದಲ್ಲಿ ರಾಜಸತ್ತೆ ರಾಜನ ಕೈಯಲ್ಲಿತ್ತು, ಈಗ ರಾಜಸತ್ತೆ ಪ್ರಜೆಗಳ ಕೈಯಲ್ಲಿ ಒಪ್ಪಿಸಲಾಗುತ್ತದೆ. ಬಾದಶಹರು ಲೋಕಪ್ರಿಯರು, ಲೋಕನಾಯಕರು, ಹಿಂದುಸ್ಥಾನದ ಬಗ್ಗೆ ಅವರಿಗೆ ಬಹಳ ಪ್ರೀತಿಯಿದೆ. ರಾಷ್ಟ್ರೀಯ ಸಭೆಯ ಚಳವಳಿ ವಿಧ್ವಂಸಕವಾದದ್ದು ಸರಕಾರವು ಕೈಕೊಂಡ ಸ್ವರಾಜ್ಯ ಸಂಘಟನೆಯ ಕಾರ್ಯದಲ್ಲಿ ಎಲ್ಲರೂ ನೆರವಾಗಬೇಕಾದ್ದು ಆ ಮೇಲೆ ಬ್ರಿಟಿಶ ರಾಷ್ಟ್ರಗೀತ ಹಾಡಿ, ಬಾದಶಹರ ಹೆಸರಿನಲ್ಲಿ ಜಯಘೋಷ ಮಾಡಿ ಸಭೆ ವಿಸರ್ಜನ ಸಲ್ಪಟ್ಟಿತು.

ಈ ತಾಲೂಕ ಬಾಡದಲ್ಲಿರುವ 'ನ್ಯೂ ಇಂಗ್ಲಿಷ ಸ್ಕೂಲ' ಶಾಲೆಯ ಇಬ್ಬ ಹುಡುಗರು ವ್ಯಾಕ್ಯುಲ ಸ್ಕಾಲರಶಿಪ್ ಪರೀಕ್ಷೆಯಲ್ಲಿ ತೇರ್ಗಡೆಯಾದರು ಅವರಿಗೆ ಸ್ಟೇಟ್ ಸ್ಕಾಲರಶಿಪ್ ಕೊಡಲಾಗಿದೆ ಇಲ್ಲಿಯ ಸಹಕಾರ ಸಂಘವು ಈ ಶಾಲೆಗೆ ೮೦ ರೂಗಳನ್ನು ಅರ್ಪಿಸಿದೆ. ಇದು ಸ್ತುತ್ಯವಾದದ್ದು

ಜಿಲ್ಲಾ ಬೋರ್ಡಿನ ಸಭೆ.

(ನಮ್ಮ ಕಾರವಾರದ ಬಾತ್ಮೀದಾರರಿಂದ.)

ತಾ ೧೬—೬—೩೨

ಜಿಲ್ಲಾ ಬೋರ್ಡಿನ ಸಭೆ ಬೋರ್ಡಿನ ಕಚೇರಿಯಲ್ಲಿ ತಾ ೧೬ನೇಗೆ ನಡೆದ ವಿವಿಧ ವಿಷಯಗಳು ಚರ್ಚಿಸಲ್ಪಟ್ಟವು ಮುಖ್ಯ ಮುಖ್ಯ ವಿಷಯಗಳನ್ನಷ್ಟೇ ನಮೂದಿಸುತ್ತೇನೆ ಆಫೀಸರರಾದ ಮಿ| ಬಿಜೂರರವರ ನೌಕರಿ ಪ್ರಕರಣದ ಠರಾವಿನಲ್ಲಿ ಹೊಸದಾಗಿ ಸೇರಿಸಿದ ಶಬ್ದಸಮುಚ್ಚಯದ ಕುರಿತು ಕಾರಕೂನ ಸೋದರಿ ದವರ ಕಡೆಯಿಂದ ಜಬಾನಿ ಕೊಂಡು ಚೌಕಶಿ ನಡಿಸಬೇಕಾಗಿ ರಾ| ದೇವ ಮೊದಲಾದ ೬ ಮಂದಿ ಸಭಾಸದರು ಯಾದಿ ಕೊಟ್ಟಿದ್ದರು । ಯಾದಿಯ ಚರ್ಚೆಯಲ್ಲಿ ಸರಿ ಮತಗಳಾದವು, ಅಧ್ಯಕ್ಷರ ಮತ ಸಹಿತ ಸರಿ ಮತಗಳಾದವು ಅಧ್ಯಕ್ಷರಾದ ರಾ| ಗೋಪಿಯವರು ಅಧ್ಯಕ್ಷಸ್ಥಾನದ ಕಾಸ್ಟಿಂಗ ಯಾನೆ ವಿಶೇಷ ಮತ ಕೊಟ್ಟು ಜಬಾನಿ ಕೊಳ್ಳುವ ಸೂಚನೆಯನ್ನು ತಿರಸ್ಕರಿಸಿದರು. ಈ ಪ್ರಕರಣದಲ್ಲಿ ರಾ| ಗೋಪಿಯವರ ಪ್ರತ್ಯಕ್ಷ ಸಂಬಂಧವಿದ್ದದರಿಂದ ಈ ಪ್ರಕಾರ ಪಕ್ಷಾಭಿಮಾನ ಹಿಡಿದು ಸಾಮಾನ್ಯ ಸಭ್ಯತೆಯನ್ನು ಸಹ ತೋರಿಸದ್ದು ಅಪ್ರಶಸ್ತವಾಯಿತೆಂದು ಅನೇಕರು ಟೀಕಿಸುತ್ತಾರೆ ಮಿ| ಬಿಜೂರರವರಿಗೆ ೬ ತಿಂಗಳ ನೋಟೀಸು ಕೊಡಬೇಕಾಗಿ ಕಮಿಶನರರು ಬೋರ್ಡಿಗೆ ಬರೆದಿದ್ದರು ಗೋಪಿ-ಬೋರ್ಡ ೯ ತಿಂಗಳ ಪಗಾರ ಅವರಿಗೆ ಇಟ್ಟುಕೊಳ್ಳಬೇಕೆಂಬ ಠರಾವು ಮಾಡಿದೆ ತಾ ೧-೯-೧೯೩೨ನೇಗೆ ಮಿ| ಬಿಜೂರರವರಿಗೆ ಬೋರ್ಡ ಪಗಾರವನ್ನು ಕಳಿಸುವದು. ಬಿಜೂರರವರಿಗೆ ಪಗಾರ ಕೊಡಬಾರದೆಂಬ ಠರಾವು ನ್ಯಾಯಶಾಸ್ತ್ರವಿರೋಧ ಎಂತ ಕಲೆಕ್ಟರರು ಅಭಿಪ್ರಾಯಪಟ್ಟಿರುತ್ತಾರೆ ಶ್ರೀ ಗೋಕರ್ಣ ಕ್ಷೇತ್ರದಲ್ಲಿ ದವಾಖಾನೆಯ ಡಾಕ್ಟರರ ಮನೆಯ ಸ್ಪೆಶಲ್ ರಿಪೇರಿಯ ಬಗ್ಗೆ ರೂ ೧೧೧೫ ಗಳನ್ನು ಮಂಜೂರಿ ಪಡೆಯದೆ ಹೆಚ್ಚಿಗೆ ಖರ್ಚ ಮಾಡಿದ ಬಗ್ಗೆ ಮಂಜೂರಿ ಕೇಳಿತ್ತು. ಮಂಜೂರಿ ಪಡೆಯದೆ ಖರ್ಚ ಮಾಡಿದ್ದರಿಂದ ಆ ಠರಾವು ತಿರಸ್ಕರಿಸಲ್ಪಟ್ಟಿತು. ಕುಮಟಾ ತಾ ಬೋರ್ಡ ಮೇಲೆ ಮತ್ತು ಮಿ| ಸ್ವಾ ಟಿ ಹೆಗಡೆ ಇವರ ಮೇಲೆ ಕುಮಟಾ ಕೋರ್ಟಿನಲ್ಲಿ ಒಂದು ದಾವೆಯಾಗಿದೆ. ಮುರೂರ ರಸ್ತೆಗೆ ಕಳೆದ ವರ್ಷ ೧೦೦ ರೂ ಖರ್ಚ ಮಾಡಬೇಕೆಂದಿತ್ತು, ೪೦೦ ರೂ. ಖರ್ಚ ಮಾಡಲ್ಪಟ್ಟಿತು, ಮೇಲೆ ಅಪನ್ನಿಧಿಯೊಳಗಿಂದ ರೂ ೩೪ನ್ನು ಖರ್ಚ ಮಾಡಿದರು ಈ ಬಗ್ಗೆ ವ್ಯವಹರಿಸಲಿಕ್ಕೆ ರಾ| ಹೆಗಡೆಯವರು ಜಿಲ್ಲಾ ಬೋರ್ಡಿನ ಒಪ್ಪಿಗೆ ಬೇಡಿದ್ದರು ತಾಲೂಕ ಬೋರ್ಡಿನ ಅಭಿಪ್ರಾಯ ಕೇಳಬೇಕಾಗಿ ಠರಾವಾಗಿದೆ ರಾ| ಹೆಗಡೆಯ ತಾಲೂಕ ಬೋರ್ಡಿನ ಅಭಿಪ್ರಾಯ ಕೇಳದ ಪರಸ್ಪರ ಜಿಲ್ಲಾ ಬೋರ್ಡಿಗೆ ಈ ವಿಷಯ ಹೇಗೆ ಬರಕೊಂಡರೆಂದು ತಿಳಿಯುವದಿಲ್ಲ ಪ್ರಾಥಮಿಕ ಶಿಕ್ಷಣ ಕಾಯಿದೆಯ ೬೬ನೇ ಕಲಮಿನಂತೆ ೩೦ ವರ್ಷ ಸರ್ವಿಸಾಗಿ ೫೫ ವರ್ಷ ಪ್ರಾಯವಾಗದ ಶಿಕ್ಷಕರಿಗೆ ಒತ್ತಾಯದಿಂದ ಪೆನ್ಶನು ಕೊಡಲಿಕ್ಕೆ ಬರುವದಿಲ್ಲವಾಗಿ ವಿದ್ಯಾ ಇಲಾಖೆಯ ಡೈರೆಕ್ಟರರು ಬರೆದಿದ್ದರು ಆ ಕುರಿತು ಅವರ ಕಡೆ ಪತ್ರವ್ಯವಹಾರ ನಡಿಸಬೇಕಾಗಿ ಗೊತ್ತಾಯಿತು ಸ್ಕೂಲ ಬೋರ್ಡಿನ ಗ್ರಾಂಟು ಕಡಿಮೆಯಾದ್ದರಿಂದ ಸ್ಕೂಲ ಬೋರ್ಡಿನವರು ಜಮಾ-ಖರ್ಚು ಬಾಯಿಗೂಡಿಸುವದಕ್ಕಾಗಿ ಕೈಕೊಂಡ ಉಪಕ್ರಮವನ್ನು ಸರಕಾರವು ಮನ್ನಿಸುವದಿಲ್ಲ ಆ ಕುರಿತು ಜಿಲ್ಲಾ ಬೋರ್ಡಿನಲ್ಲಿ ಚರ್ಚೆಯಾಯಿತು. ಸರಕಾರವು ಒಂದೋ ಗ್ರಾಂಟು ಹೆಚ್ಚಿಸಬೇಕು, ಇಲ್ಲವೆ ಶಾಲೆಗಳ ಬದಲಿಯನ್ನು ತಿರುಗಿ ಪಡಿಸಿಕೊಳ್ಳಬೇಕು, ಹೀಗೆ ಠರಾವಾಗಿದ ಕೀಪಿಸುವ ಮಾಡಲಾದ ಸೂಚನೆಗಳನ್ನು ಸ್ಕೂಲ ಬೋರ್ಡ ಪುನರಾಲೋಚಿಸಬೇಕಾಗಿ ಠರಾವಾಯಿತು ಈ ಪ್ರಕಾರ ಸಭೆ ನಡೆದು ವಿಸರ್ಜನವಾಯಿತು

— ಪಂಡಿತ ಮದನ ಮೋಹನ ಮಾಲವೀಯ ರವರು ಸಂಯುಕ್ತ ಪ್ರಾಂತದೊಳಗಿನ ರಾಜಕೀಯ ಕೈದಿಗಳ ಸ್ಥಿತಿ-ಗತಿಯ ವಿಚಾರಕ್ಕಾಗಿ ಸಂಯುಕ್ತ ಪ್ರಾಂತದೊಳಗಿನ ೯ ಮಂದಿ ಹಿಂದು-ಮುಸಲ್ಮಾನ ಪಕ್ಷದರ ಚೌಕಶಿ ಮಂಡಳವನ್ನೊಂದು ನೇಮಿಸಿದ್ದಾರೆ

ಉಚ್ಚ ಕನ್ನಡದಲ್ಲಿ ತರ್ಜುಮೆಯಾಗಿ ಹೊಸದಾಗಿ ತಯಾರಾಗಿರುವ ಲೋಕಪ್ರಸಿದ್ಧ 'ಜಂ ಸಿಸ್ಟಂ ಆಫ್ ಕಟಿಂಗ್' ಪುಸ್ತಕವು, ಹುಡುಗರು ಹೆಂಗಸರು ಮತ್ತು ಗಂಡಸರ ಉಡುಪುಗಳನ್ನು ಶಾಸ್ತ್ರರೀತಿ ಕತ್ತರಿಸುವದಲ್ಲದೆ, ಎಲ್ಲಾ ತರದ ಉಡುಪುಗಳ ರಕ್ಷಣೆ ಮತ್ತು ಅವನ್ನು ಶುಚಿ ಮಾಡುವ ರೀತಿ ಸಹ ಒಳಗೊಂಡಿದೆ ಕಿಂ ೩ ರೂಪಾಯಿ ಮಾತ್ರ. ಟ ಖ ೬ ಆಣೆ

ರಾವ್ಸ್ ಟೇಲರಿಂಗ್ ಕಾಲೇಜ್,
ನಾಯಿಭುವನ, ೧೪೩ ಪ್ರಿನ್ಸೆಸ್ ಸ್ಟ್ರೀಟ್
ಮುಂಬಯಿ ೨.

ಈಗಿನ ಪ್ರಪಂಚ.

(೫ನೇ ಪಾನದಿಂದ ಮುಂದರಿಸಿದ್ದು)

ಒಬ್ಬ ಸ್ವಯಂಸೇವಕರ ಬಾಯಲ್ಲಿ ಮೂತ್ರಹಾಕಿದರು! ಕೆಲವರ ಪ್ರೈವೇಟಿನ ವ ಖಾದಿಯ ಉಡಿಗೆ-ತೊಡಿಗೆಗಳನ್ನು ತೆಗೆದು ಅವನ್ನು ಸುಟ್ಟುಹಾಕಿ ಅವರಿಗೆ ಒತ್ತಾಯದಿಂದ ಪರದೇಶಿ ಅರಿವೆ ಕೊಂಡುಕೊಳ್ಳಹಚ್ಚಿ ತೊಡಿಸಿದರು. ಒಬ್ಬ ಹುಡುಗನಿಗ ರಕ್ತ ಕಾರುವ ವರೆಗೆ ಹೊಡೆದರು. ತಿರುಕೋವಿಲೂರದಲ್ಲಿ ಪೊಲೀಸ ಅತ್ಯಾಚಾರದಿಂದ ಘಾಯಪಟ್ಟವರಿಗೆ ಒಯ್ಯಬಾರದೆಂದು ಪೊಲೀಸ ಇನ್ಸಪೆಕ್ಟರರು ಮೋಟಾರಿನವರಿಗೆ ಹುಕುಮನ್ನೇ ಮಾಡಿಸಿಬಿಟ್ಟಿದ್ದರ." 'ಇದ್ದಷ್ಟು ಬಲದಿಂದ ಮೊಗ್ಗೆ ಹೊಡೆಯಬೇಕು, ಕುತ್ತಿಗೆಯ ಮೇಲೆ ದೊಣ್ಣೆಯಿಂದ ಹಚ್ಚಾಗಿ ಹೊಡೆಯಬೇಕು," ಹೀಗೆ ಮದ್ರಾಸ ಸರಕಾರವು ಸೂಚನ ಹೊರಡಿಸಿತ್ತಾಗಿ ಒಬ್ಬ ಸಭಾಸದರು ನುಡಿದರು. ಮದ್ರಾಸ ಪ್ರಾಂತದೊಳಗಿನ ಜೈಲುಗಳಲ್ಲಿ ಸ್ತ್ರೀಯರ ಬಳೆಗಳನ್ನು ತೆಗೆಯುತ್ತಾರೆ, ಕುಂಕುಮ ಒರಸುತ್ತಾರೆ, ಬಿಳೀ ವಸ್ತ್ರವನ್ನು ಉಡಹಚ್ಚುತ್ತಾರೆ, ಬೀಸುವ ಕೆಲಸ ಕೊಡುತ್ತಾರೆ ಉಣ್ಣುವದು ರಾಗಿ. ಒಳ್ಳೆ ಜೈಲಿನಲ್ಲಿ ಕೈದಿಗಳಿಗೆ ಹೊಡೆದರು ಆ ಕುರಿತು ಪೌರತಿ ಮಾತನಾಡುವವರಿಗೆ ಚೌಕಸಿ ಮಾಡಗೊಡಲಿಲ್ಲ. ತಕ್ಕಷ್ಟು ನೀರಿನ ಪೂರೈಕೆಯಾಗದೆ ಅನೇಕರು ಅಸ್ವಸ್ಥ ಬಿದ್ದರು. ಸಾಕಷ್ಟು ಆಹಾರ ಕೂಡ ಸಿಗುವದಿಲ್ಲ. ರಾಜಮಹೇಂದ್ರಿಯಲ್ಲಿ ಕೈದಿಗಳಿಗೆ ಕೊಟ್ಟ ಅನ್ನದಲ್ಲಿ ಹುಳ ಮತ್ತು ಮೊಳೆಗಳಿದ್ದವಾಗಿ ಒಬ್ಬ ಸಭಾಸದರು ನುಡಿದರು. ಸಂಯುಕ್ತ ಪ್ರಾಂತದ ಕಾಯಿದೆ ಕೌನ್ಸಿಲಿನಲ್ಲಿ ಮಾರ್ಚ ೧೬ನೇ ತಾರೀಖಿಗೆ ಜೈಲು ಖಾತೆಯ ಚರ್ಚೆ ನಡೆದಿತ್ತು. ಜೈಲಿನಲ್ಲಿ ಕೊಡುವ ಅನ್ನವು ದನ ತಿನ್ನುವಂಥಾದ್ದು. ಸಾಕಷ್ಟು ಉಡಿಗೆ ತೊಡಿಗೆಗಳಿಲ್ಲ. ಕೋಣೆಯಲ್ಲಿ ಜನರು ತುಂಬಿಹೋಗಿದ್ದಾರೆ. ಹೊಲಸು ತೆಗೆಯುವ ವ್ಯವಸ್ಥೆ ನೆಟ್ಟಗಿಲ್ಲ. ಕೈದಿಗಳಿಗೆ ಎಣ್ಣೆಯ ಗಾಣಕ್ಕೆ ಕಟ್ಟಿ ದಿನಾ ೫-೬ ತಾಸು ಎತ್ತು ಕೋಣಗಳಂತೆ ತಿರುಗಿಸುತ್ತಾರೆ. ಅನ್ನಕ್ಕೆ ದುರ್ಗಂಧ, ಹಿಟ್ಟಿನಲ್ಲಿ ಕೆಸರು. ಅನೇಕ ಕೈದಿಗಳಿಗೆ ಬೇಡಿ ಹಾಕಿ ಇಡುತ್ತಿದ್ದರು. ಲಖನೌದಲ್ಲಿ ಕೆಂಪ್ ಜೈಲಿದೆ. ಆ ಜೈಲಿನ ಮೇಲ್ಛಾವಣಿ ತಗಡಿನದು; ಮೇಲೆ ಸೀಲಿಂಗ ಒಂದು ಸಹ ಮಾಡಿಲ್ಲ, ತಗಡು ಕಾಯುತ್ತದೆ. ೧೧೦ ಉಗ್ರ ಉಷ್ಣತೆ. ಇಂಥಲ್ಲಿ ರಾಜಕೀಯ ಕೈದಿಗಳು ಉಳಿಯುವ ಬಗೆ ಹೇಗೆ? ನಗರಪಾಲಿಯು ನೆಟ್ಟಗಿಲ್ಲ. ಬುದ್ಧಿಪೂರ್ವಕವಾಗಿ ಕೈದಿಗಳಿಗೆ ಕಳವಳಗೊಳಿಸುವಲ್ಲಿಟ್ಟು ಸಿಂಡಿಸಿ ಇನ್ನು ಮುಂದೆ ಅವರು ರಾಜಕಾರಣದಲ್ಲಿ ಸೇರಬಾರದೆಂದು ಸರಕಾರದ ಸಾಧನೆ ಇದ್ದಂತೆ ಭಾವನೆಯಾಗುತ್ತದಾಗಿ ಒಬ್ಬ ಸಭಾಸದರು ನುಡಿದರು. ಗುಪ್ತ ಸರ್ಕಾರು ಹೊರಟ ಸಂಧಿಯ ಬರುತ್ತದಾಗಿ ಇನ್ನೊಬ್ಬ ಸಭಾಸದರು ಉದ್ಗರಿಸಿದರು. ಸುಧಾರಿಸಿದ ರಾಷ್ಟ್ರಗಳಲ್ಲಿ ಪ್ರತ್ಯಕ್ಷ ಯುದ್ಧ ನಡೆದಾಗ ರಣಕ್ಷೇತ್ರದಲ್ಲಿ ಸೆರೆಹಿಡಿದ ಕೈದಿಗಳಿಗೆ ಸಭ್ಯತೆಯಿಂದ ನಡಿಸಿಕೊಳ್ಳುತ್ತಾರಾಗಿಯೂ ಒಬ್ಬ ಸಭಾಸದರು ನುಡಿದರು. ಸಾಮಾನ್ಯ ಕೈದಿಗಳಂತೆ ಅವರಿಗೆ ನಡಿಸಿಕೊಳ್ಳುವದಿಲ್ಲ, ಹೀಗೆ ಸಹ ನುಡಿದರು "ಎಲ್ವಿನ್‌ರವರು ಊರಲ್ಲಿ ಉತ್ಸವ ಮಾಡಿ ಆಂಗ್ಲರು ಸ್ವಾತಂತ್ರ್ಯದ ಪುರಸ್ಕರ್ತರೆಂದೂ, ಯಾವದೇ ನಿರ್ಬಂಧಗಳನ್ನು ಯಾರ ಮೇಲೂ ಇಡಬಾರದೆಂಬ ತತ್ವದವರೆಂದೂ ನೆನಪು ಮಾಡಿಕೊಟ್ಟಿರುತ್ತಾರೆ. ರಾಜಶಾಸನಗಳಿಂದ ಪೊಲೀಸರಿಗೆ ವಿಶೇಷಾಧಿಕಾರಗಳು ದೊರೆತಿವೆ. ಇವುಗಳ ಪ್ರಯೋಗದಿಂದ ಬಡಬಗ್ಗರ ಹಿಂಸೆಯಾಗುತ್ತದೆ. ಭಾರತ ಮಂತ್ರಿಗಳಾದ ಸರ್ ಸಮ್ಯುಅಲ್ ಹೋರರವರು ಒಮ್ಮೆ ಹಳ್ಳಿಗಳಲ್ಲಿ ಬಂದು ಬಡಬಗ್ಗರ ಅಭಿಪ್ರಾಯ ಕೇಳಿಕೊಂಡು ಹೋಗಲಿ, ಅಂದರೆ, ಸತ್ಯಸ್ಥಿತಿ ಅವರಿಗೆ ತಿಳಿದೀತು ಎಂಬದಾಗಿ ಎಲ್ವಿನ್‌ರವರು ಸೂಚನೆ ಸಹ ಮಾಡಿರುತ್ತಾರೆ. ಮೇಲೆ ವರ್ಣಿಸಿದ ಸಂಗತಿಗಳನ್ನು ಸರಕಾರದೊಡನೆ ಸಹಕಾರ ಮಾಡುವ ಸಭಾಸದರೇ ಸರಕಾರಕ್ಕೆ ಕೌನ್ಸಿಲಿನಲ್ಲಿ ಹೇಳಿದ್ದು; ಕಾಂಗ್ರೆಸ ಪಕ್ಷಪಾತಿಯಾಗಿ ನುಡಿದ ವಚನಗಳಲ್ಲ, ಹೀಗೆ ಸಹ ಎಲ್ವಿನ್ ಸಾಹೇಬರು ಬರೆದಿದ್ದಾರೆ.

⁂

ಮುಂಬಯಿಯ ದಂಗೆ.

ಮುಂಬಯಿಯೊಳಗಿನ ದಂಗೆ ಕೆಲ ಮಟ್ಟಿಗೆ ಶಾಂತವಾಗಿತ್ತು, ಪುನಃ ಪ್ರಾರಂಭವಾಗಿದೆ. ಬುಧವಾರ ಮಾರುತಿ ಗುಡಿಗೆ ಬೆಂಕಿ ಹಚ್ಚುವ ಪ್ರಯತ್ನವಾಯಿತು, ಹಿಂದುಗಳು ಅದನ್ನು ನಂದಿಸಿದರು. ಪೀರ ಯಾನೆ ಮುಸಲ್ಮಾನ ಸಮಾಧಿಗೆ ಬೆಂಕಿ ಹಾಕುವ ಪ್ರಯತ್ನ ನಡೆಯಿತು. ಮುಸಲ್ಮಾನರು ಅದನ್ನು ನಂದಿಸಿದರು. ದಾದರದಲ್ಲಿ ಸಾವಿರಾರು ಹಿಂದುಗಳು ಪ್ರಭಾತ ಮೆರವಣಿಗೆ ಹೊರಡಿಸಿದರು. ಆದರೆ, ಪೋಲೀಸರು ಬಂದೋಬಸ್ತಿಯಿಂದ ಅನಿಷ್ಟ ಪ್ರಸಂಗ ಒದಗಲಿಲ್ಲ. ಇಬ್ಬ ಹಿಂದುಗಳಿಗೆ ಚೂರಿಯಿಂದ ತಿವಿಯೋಣವಾಯಿತು. ಆದರಿಂದ ಮುಂಬಯಿಯ ನೇಬಾರೂದ ಬಾಯುಸೀ. ಪರದ ವೇದಶಾಸ್ತ್ರ ಪ್ರಸಂಗಗಳಲ್ಲಿ ಇನ್ನು ಸಮಾಧಾನವಾಗಲಿಲ್ಲ. ದೊಂಬಿಯ ಭೂತಬಾಧೆಯಿಂದ ಮುಂಬಯಿಯು ಇನ್ನೂ ಪೂರ್ಣ ಬಿಡುಗಡೆಯಾಗಲಿಲ್ಲ. ಮೆಜಿಸ್ಟ್ರೇಟ ಕೋರ್ಟಿನಲ್ಲಿ ನೂರಾರು ಜನರ ಮೇಲೆ ಖಟ್ಲೆಗಳಾಗುತ್ತಿವೆ. ಚೂರಿ, ದೊಣ್ಣೆ ಕೊಂಡು ತಿರುಗಾಡಬಾರದೆಂಬ ಹುಕುಮನ್ನು ಉಲ್ಲಂಘಿಸಿ ವರ್ತಿಸಿದವರಿಗೆ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಶಿಕ್ಷೆಗಳಾಗುತ್ತಿವೆ. "ಮಾವಿನ ಹಣ್ಣು ಕೊಯ್ಯಲಿಕ್ಕೆ ನಾನು ಚೂರಿ ಒಯ್ದಿದ್ದೆ, ನಾನು ಮಾವಿನ ಹಣ್ಣಿನ ವ್ಯಾಪಾರಿ." "ನಾನೊಬ್ಬ ಬಯ್ಯಾ, ನನ್ನ ಯಜಮಾನರು ಹೋಗುವಾಗ ತಮ್ಮ ರಕ್ಷಣೆಯ ಬಗ್ಗೆ ನನಗ ಕರೆಕೊಂಡಿದ್ದರು, ರೀತಿಯಂತೆ ನಾನು ದೊಣ್ಣೆ ಒಯ್ದೆ." "ನಾನು ಶೀಖನಿದ್ದೇನೆ, ಕೀರ್ಪಾನ ಯಾನೆ ಖಡ್ಗ ಒಯ್ಯುವದು ನನ್ನ ಧರ್ಮವು." ಹೀಗೆ ಹೇಳಿದಾಗ್ಯೂ, ಈಗಿನ ಯುಗದಲ್ಲಿ ಪೋಲೀಸ ಕಮಿಶನರರು ಹೊರಡಿಸಿದ ಹುಕುಮನ್ನು ತಪ್ಪದೆ ಪಾಲಿಸಬೇಕಾಗಿ ಮೆಜಿಸ್ಟ್ರೇಟರು ಹುಕುಮು ಮಾಡಿ ಇಷ್ಟ ಕಂಡಂತೆ ದಂಡ-ಶಿಕ್ಷೆ ವಿಧಿಸಿದರು ನಾಲ್ವರು ಮುಸಲ್ಮಾನರು ಹಿಂದುಗಳ ಕೊಲೆ ಮಾಡಿದರೆಂದು ಅವರ ಮೇಲೆ ಖಟ್ಲೆ ನಡೆಯುತ್ತಿತ್ತು, ಆ ಖಟ್ಲೆಯಲ್ಲಿ ಆರೋಪಿಗಳಿಗೆ ಜಾಮೀನಿನ ಮೇಲೆ ಬಿಟ್ಟಿದ್ದರು. ಹೀಗೆ ಜಾಮೀನಿನ ಮೇಲೆ ಬಿಡುವದು ಕಾಯಿದೆಗೆ ವಿರುದ್ಧವಾದದ್ದೆಂದು ಮೆಜಿಸ್ಟ್ರೇಟರಾದ ಮಿ| ಒಸ್ಕಾರ ಬ್ರೌನರವರು ಟೀಕಿಸಿ ಮುಚ್ಚಳಿಕೆಗಳನ್ನು ರದ್ದು ಮಾಡಿ ಅವರಿಗೆ ಕಾರಾಗೃಹಕ್ಕಟ್ಟಿದರು. ಸರಕಾರಿ ವಕೀಲರು ಜಾಮೀನು ರದ್ದು ಮಾಡಬಾರದಾಗಿಯೂ, ಅವರಿಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕಾಗಿಯೂ ಆರೋಪಿ ಕಡೆಯ ವಕೀಲಿ ವಾದಿಸಿದರು. ಈ ಪ್ರಕಾರ ನೋಡಿ ಮುಂಬಯಿಯಲ್ಲಿ ಟೀಕೆಯಾಗುತ್ತಿದೆ. ಕ್ರಾಫರ್ಡ ಮಾರ್ಕೆಟಿನ ಬಳಿ ಮೋಟಾರು ಹತ್ತಿಹೋಗುತ್ತಿದ್ದ ೪ ಮಂದಿ ಮುಸಲ್ಮಾನರಿಗೆ ತಪಾಸ ಮಾಡಲು ಅವರ ಬಳಿ ೩ ಬಂದಲು ಚೂರಿ ಸಿಕ್ಕಿದವು. "ಅವರು ಕೋಳಿಗಡಕರು, ಕುರಿ ಹೊಡೆಯುವದಕ್ಕಾಗಿ ಚೂರಿ ಒಯ್ಯುತ್ತಿದ್ದರು" ಹೀಗೆ ಆರೋಪಿ ಕಡೆಯ ವಕೀಲರು ವಾದಿಸಿದರು. ಮೆಜಿಸ್ಟ್ರೇಟರು ೨-೨ ರೂಪಾಯಿ ದಂಡ ವಿಧಿಸಿ ಇವರಿಗೆ ಬಿಟ್ಟರು. ಚೂರಿಗಳು ಸರಕಾರಜಪ್ತದವು. ಇಲ್ಲಿ ಒಂದು ವಿಷಯ ನಮೂದಿಸತಕ್ಕುದಾಗಿದೆ. ಇದೇ ದಿನ ಇದೇ ಕೋರ್ಟಿನಲ್ಲಿ ಶಾಂತತೆಯಿಂದ ಜವಳಿ ಅಂಗಡಿಯ ಮುಂದ ಪಿಕೆಟಿಂಗ ಮಾಡಿದ ಬಗ್ಗೆ ನಡೆದ ಖಟ್ಲೆಯಲ್ಲಿ ೪ ತಿಂಗಳ ಕಠಿಣ ಸಜೆ, ರೂ ೨೫ ದಂಡ ವಿಧಿಸಲ್ಪಟ್ಟಿದೆ. ಚೂರಿ ಒಯ್ದ ಹಿಂಸಾವಾದಿಗಳಿಗೆ ರೂ ೨-೨ ದಂಡ, ಪಿಕೆಟಿಂಗ ಮಾಡುವ ಅಹಿಂಸಾವಾದಿಗಳಿಗೆ ೪ ತಿಂಗಳ ಸಜೆ, ರೂ ೨೫ ದಂಡ, ಇದು ಯಾವಲ್ಲಿಯ ನ್ಯಾಯವೆಂದು ಎಲ್ಲರದೂ ಟೀಕೆ. ಈ ದೊಂಬಿಯು ಬೆನ್ನಿಗೆ ಸಂಘಟನೆಯುಳ್ಳವರಾಗಿಯೂ, ಪ್ರತ್ಯುಪಕಾರವಾಗಿರುವದಾಗಿಯೂ ನಾಗರಿಕ ಸಭೆಯ ಸಾದರ ಅಭಿಪ್ರಾಯವಾಗಿದೆ. ಎಲ್ವಿನ್ ಪಾದ್ರಿ ಸಾಹೇಬರೂ ತಕ್ಕ ಮಟ್ಟಿಗೆ ಹೀಗೇ ಅಭಿಪ್ರಾಯಪಡುತ್ತಾರೆ. ಚೌಕಸಿಯಾಗಬೇಕಾಗಿ ಮುಂಬಯಿಯ 'ಟೈಮ್ಸ' ಪತ್ರಿಕೆಯು ಸೂಚನೆ ಮಾಡುವಾಗ ಕಾಂಗ್ರೆಸ ಬೆನ್ನಿಗಿರಬೇಕೆಂದು ಊಹಿಸುತ್ತದೆ. ಕಾಂಗ್ರೆಸಿಗೆ ಹಿಂದು-ಮುಸಲ್ಮಾನರೊಳಗೆ ಪ್ರೀತಿಸಂಗ್ರಹ ಮಾಡುವದು ಅವಶ್ಯವಿದ್ದುದರಿಂದ ಇಂಥ ಕುಹಕವನ್ನು ಕಾಂಗ್ರೆಸು ಎಂದಿಗೂ ಕೈಕೊಳ್ಳದೆಂದು ಪ್ರತಿಪಕ್ಷದ ಅಂಬೋಣ. ಮೌ| ಶೌಕತ ಅಲ್ಲಿಯವರು ದೊಂಬಿಗೆ ಪ್ರೋತ್ಸಾಹ ಕೊಡುತ್ತಾರಾಗಿ 'ಫ್ರೀ ಪ್ರೆಸ್' ಪತ್ರಿಕೆಯಲ್ಲಿ ಪ್ರಕಟಿಸಿದರೆಂದು ಸಂಪಾದಕ-ಪ್ರಕಾಶಕರ ಮೇಲೆ ಗುರುವಾರ ಮಾನನಷ್ಟದ ಫಿರ್ಯಾದು ದಾಖಲಮಾಡಿಸಿದ್ದಾರೆ. ಮುಂಬಯಿಯ 'ಖಿಲಾಫತ' ನಿತ್ಯಪತ್ರಿಕೆಯಲ್ಲಿ ನಿತ್ಯವೂ ಒಂದಿಲ್ಲೊಂದು ಪ್ರಕಾರದಿಂದ ಕ್ಷೋಭಕಾರಕ ಲೇಖ ಪ್ರಕಟವಾಗುತ್ತದಾಗಿ 'ಫ್ರೀ ಪ್ರೆಸ್' ಪತ್ರಿಕೆಯ

ಮಕ್ಕಳಿದ್ದರೆ ಮನೆ ಚಂದ!

ಮಕ್ಕಳ ಕ್ಲೆಂದು

ಬಂಜೆತನದಿಂದ ಮುಕ್ತರಾಗುವಿರಿ!

ಚಿಂತಿಸ ಬೇಡಿರಿ

ಗರ್ಭಧಾರಣ ಸಂಜೀವನೀ.

ಈ ನಮ್ಮ ಅನುಭವಿಕ ಔಷಧ ಮೂರು ಸಾರೆ ಋತುಸ್ನಾತ ಆಗುವ ವರೆಗೆ ಪ್ರತಿಸಾರೆ ಮೂರು-ಮೂರು ದಿವಸ ತಕ್ಕೊಂಡರೆ ಪುತ್ರಿಣಿ ಆಗುವಿರಿ ಕಿಮ್ಮತ್ತು ಕಿಂ. ರೂ ೩. ೬. ೨. ೫ ಆಣೆ ಅನುಪಾನ ಪತ್ರಿಕೆ ಸಂಗಡ

ಪತ್ತೆ— ವೈದ್ಯ ವ್ಹಿ. ಎಸ್. ಕಾವಸೇ, ಮಿರಜ. (S M C)

ದೂರು. ಮೌ| ಶೌಕತ ಅಲ್ಲಿಯವರ ಮೇಲೆ ಸರಕಾರವು ಕಾಯಿದೆ ಕ್ರಮ ನಡಿಸಬೇಕಾಗಿ ಹಲವರ ಅಂಬೋಣ. ಸರ್ ಪುರುಷೋತ್ತಮದಾಸ ಠಾಕೂರದಾಸರವರು ತಮ್ಮ ಆಫೀಸಿನೊಳಗಿಂದ ಹೊರಗಿಳಿದು ಬರುವಾಗ ಒಬ್ಬ ಮುಸಲ್ಮಾನನು ಅವರಿಗೆ ಕೊಡೆಯಿಂದ ಹೊಡೆದನು. ಪೋಲೀಸ ಪೇದೆಯು ಬಳಿಯಲ್ಲಿದ್ದರೂ ಏನೂ ಮಾಡಿಕೊಡಲಿಲ್ಲ ಸರ್ ಪುರುಷೋತ್ತಮದಾಸರು ಹಿಂದೂ ಪಕ್ಷಪಾತಿಯೆಂದು ಅವರಿಗೆ ಹೊಡೆಯಬೇಕಾಯಿತು, ಹಾಗೆ ಹೇಳಿ ಆತನು ಕೂಗಿದನು. ಈ ವಿಷಯ ಸಹ ಟೀಕೆಯಾಗುತ್ತಿದೆ ಹಿಂದೂ-ಮುಸಲ್ಮಾನ ಪ್ರಮುಖರಿದ್ದ ನಾಗರಿಕ ಸಂಘದವರು ಶಾಂತಿಸ್ಥಾಪನೆಗಾಗಿ ಪ್ರಯತ್ನ ಪಡುತ್ತಿದ್ದಾರೆ. ದೊಂಬಿಯಿಂದ ಕಲಿಯತಕ್ಕಂಥ ಒಂದು ಪಾಠವಿದೆ ಹಿಂದುಗಳು ಮುಸಲ್ಮಾನರ ಕೋಪಕ್ಕೆ ಪಾತ್ರರಾದಾಗ ಅಸ್ಪೃಶ್ಯರೆಂದ ಕೆಳಜಾತಿಯ ಹಿಂದುಗಳು ಮೇಲ್ಜಾತಿಯವರಿಗೆ ಆಶ್ರಯ ಕೊಟ್ಟು ಬದುಕಿಸಿಕೊಂಡರು ಹಿಂದುಗಳಿಗೆ ಮುಸಲ್ಮಾನರು ಬದುಕಿಸಿದ ಉದಾಹರಣೆಗಳಿವೆ, ಮುಸಲ್ಮಾನರಿಗೆ ಹಿಂದುಗಳು ರಕ್ಷಿಸಿದ ಉದಾಹರಣೆಗಳಿವೆ. ಮುಸಲ್ಮಾನ ನೆರೆಹೊರೆಯವರ ಮೇಲೆ ಶ್ರದ್ಧೆಯನ್ನಿಟ್ಟು, ಮುಸಲ್ಮಾನ ಕೇರಿಯಲ್ಲಿ ಉಳಿಯಬಾರದಾಗಿ ಹೇಳಿದಾಗ್ಯೂ ಕೇಳದೆ ಉಳಕೊಂಡ ಮುದುಕ ಮಾರವಾಡಿಗೆ ಕೊಂದ ಉದಾಹರಣೆಯೂ ಇದೆ ಇದರ ಮೇಲಿಂದ "ಹಿಂದು-ಮುಸಲ್ಮಾನ ಧರ್ಮ ಭೇದವು ದೊಂಬಿಯ ಕಾರಣವಲ್ಲವೆಂಬು ಸ್ಪಷ್ಟವಾಗುತ್ತದೆ ಬೆನ್ನಿಗೆ ಯಾವದಾದರೊಂದು ಹಿಂದಹಿತವಿಘಾತಕ ಕಾರಸ್ಥಾನವಿರಬೇಕಾಗಿ ಒಳ್ಳೇ ಸಂಶಯ ಬರುತ್ತದೆ." ಅದನ್ನು ಸರಕಾರವು ಚೌಕಶಿ ಮಾಡತಕ್ಕದ್ದು ದೊಂಬಿಯ ಕುರಿತು ಮುಂಬಯಿಯ 'ಫ್ರೀ ಪ್ರೆಸ್' ಪತ್ರಿಕೆಯ ಮೇ ೧೯ನೇ ತಾರೀಖಿನ ಸಂಚಿಕೆಯಲ್ಲಿ ಲೇಖ ಬರೆದು ಸರಕಾರದ ಮೇಲೆ ವೃಥಾರೋಪ ಹೊರಿಸಿದ ಬಗ್ಗೆ, ಚಕ್ರವರ್ತಿ ಪಂಚಮ ಜೋರ್ಜರ ಪ್ರಜೆಗಳೊಳಗ ದ್ವೇಷ ಹಬ್ಬಿಸಲೆಳಸಿದ ಬಗ್ಗೆ 'ಫ್ರೀ ಪ್ರೆಸ್' ಪತ್ರಿಕೆಯ ಚಾಲಕರ ಕಡೆಯಿಂದ ರೂ ೬೦೦೦ ಗಳ ಜಾಮೀನು ಬೇಡೋಣಾಗಿದೆ "ಕೈಯಲ್ಲಿ ಸಿಕ್ಕ ಹಿಂದುವಿಗೆ ನೀವು ಚೂರಿಯಿಂದ ತಿವಿದು ಯಾಕೆ ಕೊಲ್ಲಲಿಲ್ಲವಾಗಿ ಕೆಲ ಖಿಲಾಫತ ಸ್ವಯಂಸೇವಕರು ಧರ್ಮಬಾಂಧವರಿಗೆ ಹೇಳಿದ ಸಂಗತಿ ಮುಂಬಯಿ 'ಟ್ಯಾಮ್ಸ' ಪತ್ರಿಕೆಯ ಸುದ್ದಿಗಾರರು ಪ್ರತ್ಯಕ್ಷ ಕೇಳಿದ್ದರು, ಕಂಡಿದ್ದರು ಅದನ್ನು ಸಂಪಾದಕರು ಪ್ರಕಟಿಸಲೊಪ್ಪಲಿಲ್ಲ ಖಿಲಾಫತ ಸ್ವಯಂಸೇವಕರು ಶಾಂತಿಸ್ಥಾಪನೆಯ ನೆವ ಮಾಡಿ ದೊಂಬಿಯ ಪ್ರದೇಶದಲ್ಲಿ ಹೋಗಿ ಸ್ವಯಂಸೇವಕ ಉಡುಪು ತೆಗದಿಟ್ಟು ಜನರಿಗೆ ಕಲ್ಲನೆಯಲು ಉತ್ತೇಜಿಸುತ್ತಾರಾಗಿ ನಾಂವದೇವಿಯ ಯುರೋಪಿಯನ್ ಪೋಲೀಸ ಸರ್ಜಂಟರು ಉದ್ಗರಿಸಿದರು ಪೋಲೀಸರು ಹಿಂದುಗಳ ಬಗ್ಗೆ ತಾತ್ಸಾರಮಾಡುತ್ತಾರೆ, ಮುಸಲ್ಮಾನರ ಬಗ್ಗೆ ಹೆಚ್ಚಿನ ಜಾಗ್ರತೆ ಕೊಳ್ಳುತ್ತಾರೆ, ಇದರ ಕಾರಣವೇನು? ಬ್ರಿಟಿಶ ಜನರ ಹಾಗು ಸೊತ್ತಿನ ರಕ್ಷಣೆಯಾಗುವಂತೆ ಹಿಂದಿಯರ ರಕ್ಷಣೆಗಾಗಿ ಪೋಲೀಸರು ಎಚ್ಚರಪಡುವದಿಲ್ಲ" ಇತ್ಯಾದಿ ಆ ಲೇಖದಲ್ಲಿ ಬರೆದಿತ್ತು.

⁂

ಅದ್ಭುತ ಮಾಂತ್ರಿಕ ಉಪಚಾರ.

ಬಂಗಾಲ ಪ್ರಾಂತದ ರಾಜಶಾಹಿಯಲ್ಲಿ ಒಬ್ಬ ಕವಿರಾಜರ ಮಗಳಿಗೆ ಅತಿಸಾರ ಮತ್ತು ಜ್ವರದ ಬೇನೆಯಾಗಿ ನರಳಿ ನರಳಿ ಕೊನೆಗೆ ಅರ್ಧಾಂಗವಾಯುವಾಗಿ ಪರಿಣಮಿಸಿತು, ತಿರುಗಾಡಲಾಗಲಿಲ್ಲ, ಮಾತಾಡಬರುವದಿಲ್ಲ; ಹಾಸಿಗೆಯ ಮೇಲೆ ಬಿದ್ದಲ್ಲಿಯೇ ಬಿದ್ದುಕೊಳ್ಳಬೇಕು, ಹೀಗವಳ ಸ್ಥಿತಿಯಾಯಿತು. ೮ ವರ್ಷಗಳಿಂದಲೂ ಇದೇ ಸ್ಥಿತಿ ಕೆಲ ದಿನಗಳ ಹಿಂದೆ ಪುನಃ ಅತಿಸಾರ-ಜ್ವರ ಬಂದು ವಾತದ ಉಪಹತಿ ವಿಪರೀತವಾಯಿತು ಈ ಬಾರಿ ಇಡೀ ಮೈ ನೋಯಹತ್ತಿತು ಕಲಕತ್ತೆಗೊಯ್ದು ಹಲ ತರದ ಉಪಚಾರ ನಡಿಸಿದಾಗ್ಯೂ, ಅವಳಿಗೆ ಸ್ವಾಸ್ಥ್ಯಪ್ರಾಪ್ತಿಯಾಗಲಿಲ್ಲ ವಿದ್ಯುಚ್ಛಕ್ತಿಯ ಪ್ರಯೋಗ ನಡೆಯಿತು ಅದರಿಂದ ನೋವು ನಿಂತಿತು, ಆದರೆ, ವಾತ ನಿಲ್ಲಲಿಲ್ಲ. ಸೊಂಟದ ಕೆಳಗಿನ ಭಾಗವೆಲ್ಲ ನಿರ್ಜೀವವಾಗಿತ್ತು. ಅದರಿಂದ ಅವಳಿಗೆ ಪುನಃ ರಾಜಶಾಹಿಗೆ ಒಯ್ದರು. ರಾಜಶಾಹಿ ಗ್ರಾಮದ ಬಳಿ ಮೂವರು ಮುಸಲ್ಮಾನರಿದ್ದಾರೆ ಅವರು ಮಾಂತ್ರಿಕರು, ಮಂತ್ರೋಪಚಾರ ಮಾಡುತ್ತೇವಾಗಿ ಅವರು ಮುಂದಾದರು ಈ ಚಮತ್ಕಾರ ನೋಡಲು ನೂರಾರು ಜನರು ಸೇರಿದ್ದರು. ಅವರೆಲ್ಲರ ಸಮಕ್ಷ ಮೂವರೂ ಮಂತ್ರಪಾಠ ಹೇಳಿದರು ಹುಡುಗಿಗ ಸಮಾಧಿ ಹತ್ತಿದಂತಾಗಿ ಸಮಾಧಿಯಲ್ಲಿ ಕಾಳಿದರ್ಶನವಾಯಿತು. ಅಂದಿನಿಂದ ಹುಡುಗಿಯ ಪ್ರಕೃತಿ ಸುಧಾರಿಸಹತ್ತಿತು ೩-೪ ದಿನಗಳ ತನಕ ಮಂತ್ರಪಾಠ ನಡೆದಿತ್ತು, ಹುಡುಗಿಗೆ ಮಾತಾಡಬಂತು. ದಂಟುಗೋಲು ಹಿಡಕೊಂಡು ಅವಳೀಗ ಅಡ್ಡಾಡುತ್ತಾಳೆ. ಕೈಯಿಂದ ತಾನೇ ಉಣ್ಣುತ್ತಾಳೆ. ಮಂತ್ರಪ್ರಭಾವ ನೋಡಿಕೊಳ್ಳಿ!

⁂

ಈ ಕೊಲೇಜುಗಳಿಂದೇನು ಪ್ರಯೋಜನ?

ಕಳೆದ ಬುಧವಾರ ಮುಂಬಯಿ ವಿಶ್ವವಿದ್ಯಾಲಯದ ಸಭೆಯಲ್ಲಿ ಪುಣೆಯೊಳಗೆ 'ವಾಡಿಯಾ ಕೊಲೇಜು' ಎಂಬ ಹೊಸ ಕೊಲೇಜನ್ನು ಹೊರಡಿಸಲು ಅಪ್ಪಣೆ ಕೊಡುವ ವಿಷಯವಿತ್ತು, ಪುಣೆಯಲ್ಲೀಗ ೩ ಕೊಲೇಜುಗಳಿವೆ ಡೆಕ್ಕನ್ ಕೊಲೇಜ ಎಂಬ ಸರಕಾರಿ ಕೊಲೇಜು ೧, ಫರ್ಗ್ಯೂಸನ್ ಹಾಗು ಪರಶುರಾಮ ಎಂಬ ಖಾಸಗಿ ಕೊಲೇಜುಗಳು ೨ ಹೀಗೆ ೩ ಕೊಲೇಜುಗಳಿರುತ್ತಾ, ಹೊಸ ಕೊಲೇಜು ಅವಶ್ಯವಿಲ್ಲವಾಗಿ ಚರ್ಚೆ ವಿಚಾರವಂತರೆಂದು ಹೆಸರಾದ ಶ್ರೀ| ನಟರಾಜನರವರು ನುಡಿದದ್ದೇನಂದ "ಮಹಾರಾಷ್ಟ್ರದಲ್ಲಿ ಕೊಲೇಜುಗಳ ಸಂಖ್ಯೆ ವಿಪರೀತವಾಗಿದೆ, ಹೊಸ ಕೊಲೇಜು ಸ್ಥಾಪಿಸುವ ಗರಜಿಲ್ಲ. ಈಗಿನ ಶಿಕ್ಷಣಕ್ರಮಕ್ಕೆ ಮಾನ್ಯತೆಯಿಲ್ಲ ಸರಕಾರವೂ, ವಿಶ್ವವಿದ್ಯಾಲಯದವರೂ ಅದನ್ನು ಹೇಳಿಯುತ್ತಾರೆ ಈ ಶಿಕ್ಷಣ ನಿಷ್ಪ್ರಯೋಜಕವಾದದ್ದು ಈ ಶಿಕ್ಷಣ ಹೊಂದಿದವರು ತಮ್ಮ ಜೀವನ ಸಾಗಿಸಲಸಮರ್ಥರು ಇತ್ತಲಾಗಿ ವಿದ್ಯಾರ್ಥಿಗಳ ಸಂಖ್ಯೆ ಕುಗ್ಗುತ್ತಲಿದೆ ಅಂಥ ಪ್ರಸಕ್ತಿಯಲ್ಲಿ ಹೊಸ ಕೊಲೇಜುಗಳನ್ನು ಸ್ಥಾಪಿಸುತ್ತ ಹೋಗುವದು ಇಷ್ಟವಲ್ಲ. ಈ ಕೊಲೇಜನ್ನು ಹೊರಡಿಸುವದರಲ್ಲಿ ಏನೋ ಕಾರಸ್ಥಾನವಿರಬೇಕೆಂದು ನನಗನಿಸುತ್ತಿದೆ" ಇತ್ಯಾದಿ ಸರ್ ಅರ್ನೆಸ್ಟ ಹೊಟ್ಸನ್‌ರವರ ಮೇಲೆ ಪುಣೆಯ ಫರ್ಗ್ಯೂಸನ್ ಕೊಲೇಜಿನಲ್ಲಿ ಗುಂಡು ಹಾರಿಸಿದ ಪ್ರಕರಣದಲ್ಲಿ ರಾಜೀನಾಮೆ ಕೊಟ್ಟ ಅಧ್ಯಾಪಕ ವರ್ಗದವರು ಈ ಹೊಸ ಕೊಲೇಜಿನ ಪುರಸ್ಕಾರ ಕೈಕೊಂಡಿದ್ದಾರೆ ಕೊಲೇಜು ಹೊರಡಿಸುವ ಸಂಸ್ಥೆಯು ಮೊಡರ್ನ ಎಜ್ಯುಕೇಶನ್ ಸೊಸ್ಯಾಟಿ ಯಾನೆ ಆಧುನಿಕ ಶಿಕ್ಷಣ ಸಂಘವೆಂಬ ಸಂಸ್ಥೆ. ಇನ್ನೊಂದು ವರ್ಷದಲ್ಲಿ ೧೨ ಸಾವಿರ ರೂಪಾಯಿಗಳ ಎತ್ತುವಳಿಯಾಗಬೇಕು ಇನ್ನು ೫ ವರ್ಷಗಳಲ್ಲಿ ೧ ಲಕ್ಷ ರೂಪಾಯಿಗಳ ನಿಧಿಸಂಗ್ರಹವಾಗಬೇಕು. ಈಗ ಬಿ.ಎ. ತನಕ ಕಲಿಸುವ ಏರ್ಪಾಟಿದೆ ಶ್ರೀ| ನಟರಾಜನ ಮೊದಲಾದ ಸಭಾಸದರ ವಿರೋಧ ಫಲಿಸಲಿಲ್ಲ. ಬಹುಮತದಿಂದ ಕೊಲೇಜು ಸ್ಥಾಪಿಸುವ ಠರಾವಾಯಿತು.

⁂

ಪ್ರಾಂತಿಕ ಪರಿಷತ್ತುಗಳ ಗಲಾಟೆ.

ದಿಲ್ಲಿ ಕೊಂಗ್ರೆಸಿನ ಅಧಿವೇಶನ ಮುಗಿದ ಬಳಿಕ ಬೇರೆ ಬೇರೆ ಪ್ರಾಂತಗಳಲ್ಲಿ ಪ್ರಾಂತಿಕ ಪರಿಷತ್ತು ಸೇರಿಸುವ ಗದ್ದಲ ನಡೆದಿದೆ. ಪೋಲೀಸರು ಅವನ್ನು ಪ್ರತಿಬಂಧಿಸುತ್ತಿದ್ದಾರೆ ಸ್ವಯಂಸೇವಕರು ಅವನ್ನು ಸೇರಿಸುತ್ತಿದ್ದಾರೆ. ಪರಿಷತ್ತು ಸೇರಿ ದಿಲ್ಲಿ ಕೊಂಗ್ರೆಸಿನ ಠರಾವುಗಳು ಮನ್ನಿಸಲ್ಪಟ್ಟವೆಂದು ಕೊಂಗ್ರೆಸ ಪಕ್ಷಪಾತಿಗಳ ಅಂಬೋಣ ಸೇರಗೊಡಲಿಲ್ಲ, ಪ್ರತಿನಿಧಿಗಳಿಗೆ, ಅಧ್ಯಕ್ಷರಿಗೆಲ್ಲ ತಾವು ಹಿಡಿದೆವು, ಸಭಾಸ್ಥಾನಕ್ಕೆ ಹೋಗಗೊಡಲಿಲ್ಲ, ಹೀಗೆ ಪೋಲೀಸರ ಅಂಬೋಣ ಪೋಲೀಸರು ಬರುವ ಮುಂಚೆಯೇ ೨-೩ ಸಾವಿರ ಜನರು ನಾಗಪುರದಲ್ಲಿ ಮಧ್ಯಾಹ್ನ ೧ ಘಂಟೆಗೆ ಸೇರಿ ಪರಿಷತ್ತು ಮುಗಿಯಿತಂತೆ ಆ ಮೇಲೆ ಪೋಲೀಸರು ಅಧ್ಯಕ್ಷ-ಪ್ರತಿನಿಧಿ-ಪ್ರೇಕ್ಷಕರನ್ನು ಸೆರೆಹಿಡಿದರಂತೆ. ಗುಜರಾಥದಲ್ಲಿ ಸಾಬರಮತಿಯ ದಡದ ಮೇಲೆ ಪ್ರಾಂತಿಕ ಪರಿಷತ್ತು ಸೇರಿಸಿದ ಬಗ್ಗೆ ೪೦೦ ಜನರಿಗೆ ಸೆರೆ. ಕೆಲವರಿಗಿಟ್ಟುಕೊಂಡು ಹಲವರಿಗೆ ಬಿಟ್ಟರು ಉತ್ಕಲ ಪ್ರಾಂತಿಕ ಪರಿಷತ್ತಿನ ಪ್ರೀತ್ಯರ್ಥ ೧೩೮ ಜನರು ಸೆರೆಬಿದ್ದರು. ಸಂಯುಕ್ತ ಪ್ರಾಂತಿಕ ಪರಿಷತ್ತು ಸೇರಿಸದಂತೆ ಪ್ರತಿಬಂಧಕ ಹುಕುಮು ಹೊರಟಿದೆ ೫-೬ ಮಂದಿಗಳಿಗೆ ಸೆರೆಯಾಗಿದೆ ಬಂಗಾಲ ಪ್ರಾಂತಿಕ ಪರಿಷತ್ತು ಸೇರದಂತೆ ಸಾರ್ವಜನಿಕ ಉಪವನದ ಸುತ್ತುಮುತ್ತು ಪೋಲೀಸರು ಮುತ್ತಿಗೆ ಹಾಕಿ ಬಂದೋಬಸ್ತಿಟ್ಟಿದ್ದರು. ನೆರೆಹೊರೆಯ ಗ್ರಾಮಗಳಿಂದ ಪ್ರತಿನಿಧಿಗಳು ಬಂದಾರೆಂಬ ಸಂದೇಹದ ಮೇಲೆ ಸ್ಟೇಶನುಗಳಲ್ಲಿ ಟಿಕೀಟು ಕೊಡದಂತೆ ವ್ಯವಸ್ಥೆಯಾಗಿತ್ತು. ಕೊಂಗ್ರೆಸ ಕಾರ್ಯಕ್ಷೇತ್ರವೆಂಬ ಸಂದೇಹದ ಮೇಲೆ ಅಲ್ಲಲ್ಲಿ ಝಡತಿ ಮಾಡಿ ಹಲವರಿಗೆ ಸೆರೆಹಿಡಿದರು ಸುಮಾರು ೬೪ ಮಂದಿಗಳಿಗೆ ಸೆರೆಯಾಗಿದೆ ಬಾಗಲಕೋಟೆಯಲ್ಲಿ ಕರ್ನಾಟಕ ಪ್ರಾಂತಿಕ ಪರಿಷತ್ತು ಸೇರುವ ಸುಳುವು ಪೋಲೀಸರಿಗ ದೊರೆತು ೮ ದಿನಗಳಿಂದಲೇ ಬಂದೋಬಸ್ತು ಶುರುವಾಯಿತು! ಪರಿಷತ್ತು ಪ್ರಾರಂಭವಾಗುವ ಮುಂಚೆಯೇ ೧೦೦ ಜನರಿಗೆ ಸೆರೆಯಾಯಿತು! ಪರಿಷತ್ತಿನ ದಿನ ಒಳ್ಳೇ ಬಂದೋಬಸ್ತಿಟ್ಟಿತ್ತು ಸಭಾಸ್ಥಾನವೆಂದು ಜಾಹೀರಾದ ಸ್ಥಳದ ಸುತ್ತುಮುತ್ತು ಕಠಿಣ ಪಹರೆ. ಬೇರೊಂದು ಹಾದಿನ ಬಳಿ ೨೪-೩೫ ಜನರು ನೆರೆದರಂತೆ, ಆಗ ಅಲ್ಲಿ ಒಬ್ಬ ಪೋಲೀಸ ಪೇದೆಯಿದ್ದನು, ಆತನು ಸಿಳ್ಳು ಊದಿದನು ಸಂತೆಗಾಗಿ ಸೇರಿದ ಜನರು ಸಿಳ್ಳು ಕೇಳಿ ಅಲ್ಲಿ ಸೇರಿದರು ಕೂಡಲೆ ಅಧ್ಯಕ್ಷರೆಂಬುವರು ಭಾಷಣ ಮಾಡಿ ಠರಾವು ಮಂಜೂರ ಮಾಡಿಕೊಂಡು ಸಭೆ ಮುಗಿಸುವಷ್ಟರಲ್ಲಿ, ಪೋಲೀಸ ಸಿಳ್ಳಿನಂತೆ ಪೋಲೀಸ ಪಾರ್ಟಿ ಬಂದು ಅಧ್ಯಕ್ಷಾದಿಗಳಿಗೆ ಸೆರೆಹಿಡಕೊಂಡು ಹೋಯಿತು. ಇನ್ನೂ ಹಲವೆಡೆ ಪರಿಷತ್ತು ಸೇರುವ ಗಲಾಟೆ ನಡೆದದೆ

ಜೀವನ ಸಾಹಿತ್ಯ.

೧೦. ಹಿಂಸೆಯು ಸ್ವಾಭಾವಿಕವೇ?

ಲೇ — ಶ್ರೀ|| ಹನುಮಂತರಾವ ಗಾಂಜವೇಕರ.

ನಾವು [illegible] ಹಿಂಸಾ-ಪಕ್ಷವನ್ನು ಎತ್ತಿ ಹಿಡಿಯುವವರ ಹಾಗೂ ಸ್ವಾಭಾವಿಕವಾಗಿ ಹಿಂಸೆಯಲ್ಲಿ ಆನಂದಪಡುವವರ ಮಾತನ್ನು ಬಿಟ್ಟು ಬಿಟ್ಟರೂ, ಅಹಿಂಸೆಯು ಪ್ರಿಯವಾದಾಗ್ಯೂ ಅವ್ಯವಹಾರ್ಯವೆಂದು ಹೇಳುವ ಅನೇಕ ಜನರು ಸಿಕ್ಕಬಹುದು ಅವರು ಅನ್ನುವದೇನಂದರೆ ' ಅಹಿಂಸೆಯನ್ನು ಜಾರಿಗೊಳಿಸುವದರಲ್ಲಿ ಅಹಿತವೇನೂ ಇಲ್ಲವೆಂಬುದು ನಿಜ, ನಮ್ಮ ರಾಷ್ಟ್ರೀಯ ಧ್ಯೇಯವು ಅದರಿಂದ ಸುಲಭವಾಗಿ ಸಾಧ್ಯವಾಗಬಹುದು ಎಂಬುದೂ ನಿಜ. ಆದರೆ ಇಷ್ಟು ಅಹಿಂಸೆಯನ್ನು [illegible]ದು ಹೇಗೆ ಎಂಬುದೇ ಪ್ರಶ್ನೆ. ಇದು ನಮಗೆ ತಿಳಿಯದು. [illegible] ಸರಕಾರವು ಹಿಂಸಾವಾದಿಯು. ಸ್ವರಾಜ್ಯವನ್ನು ಕೊಡಬೊಪ್ಪದೆ ಇರುವವರೆಗೆ ಅದು ಹಿಂಸೆಯನ್ನೇ ಅವಲಂಬಿಸಿರಬೇಕಾಗುವದು. ಒಂದು ನಿಶ್ಶಸ್ತ್ರ ರಾಷ್ಟ್ರವನ್ನು ವಶದಲ್ಲಿಡಲಿಕ್ಕೆ ಬೇಕಾದಷ್ಟು ಅಪಾರವಾದ ಶಕ್ತಿಯು ಸರಕಾರದ ಹತ್ತರ ಇದೆ. ಈ ವಿಷಯದ ಸರಕಾರದ ನೀತಿಯಲ್ಲಿ ಬದಲಾವಣೆಯಾಗಲಿಲ್ಲವೆಂದು ನಾವು ಇತ್ತೀಚಿನ ಅನುಭವದಿಂದ [illegible] ಬಲ್ಲೆವು. ಇಂಥದ ಸ್ಥಿತಿಯಲ್ಲಿ ಅತ್ಯಾಚಾರಗಳನ್ನು ಸಹಿಸಿ ಸಹಿಸಿ ವ್ಯಾಕುಲವಾದ ಪ್ರಜೆಯು ಹಿಂಸಾಸತ್ರವನ್ನು ಪ್ರಾರಂಭಿಸಿದರೆ ಅದರಲ್ಲಿ ಅಸ್ವಾಭಾವಿಕವಾದುದೇನು ? ಯಾವ ಪರಿಸ್ಥಿತಿಯಲ್ಲಿಯೂ ಉಪದ್ರವವನ್ನು ಕೊಡುತ್ತಿರುವದು ಒಳ್ಳಿತಲ್ಲವೆಂಬುದನ್ನು ನಾವು ಬಲ್ಲೆವು. ನಮ್ಮಿಂದ ಹಿಂಸೆಯು ಎಂದೂ ಸಂಭವಿಸಲಿಕ್ಕಿಲ್ಲವೆನ್ನುವಂತಹ [illegible] ವೃತ್ತಿಯು [illegible] ರಾಗುವದು ನಮಗಂತೂ ಅಸಂಭವವೆಂದು ತೋರುತ್ತದೆ"

ಹೀಗ ಸಂದೇಹಪಟ್ಟ ಜನರ ಸಂಖ್ಯೆಯು ಪ್ರಾಮಾಣಿಕವಾಗಿದೆ. ಅದನ್ನು ಕುರಿತು ಸಂಪೂರ್ಣ ವಿಚಾರವನ್ನು ಮಾಡಬೇಕು. ಇಂಥಹ ಜನರು ಮನುಷ್ಯ ಸ್ವಭಾವದ ಒಂದೇ ಬದಿಯನ್ನು ನೋಡುತ್ತಾರೆ, [illegible] ಅಂಶಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾರೆ, ಹಾಗೂ ತಮ್ಮಲ್ಲಿ ಒಂದೇ ತರದ ಅನುಭವದ ಟಿಪ್ಪಣಿ ಮಾಡುತ್ತಾರೆ ಅಹಿಂಸಾದರ್ಶವು ಯೋಗ್ಯವಾದುದೆಂದು ಒಪ್ಪಿಕೊಳ್ಳುತ್ತಾರೆ ಆದರೆ ಯೋಗ್ಯವಾದುದು [illegible] ಅಶಕ್ಯವೆಂಬುದನ್ನು ಆರೋಪಿಸುತ್ತಾರೆ. ಮನುಷ್ಯ ಸ್ವಭಾವವು ಇಂದು ಇರುವಂತೆಯೇ ಮುಂದೆಯೂ ಇರುವದೆಂದು ಅವರಿಗೆ ಭೀತಿ. ರಾಷ್ಟ್ರೀಯ, ಬೌದ್ಧಿಕ, ಭೌತಿಕ ಶಿಕ್ಷಣದ [illegible] ಪ್ರಯತ್ನದಿಂದ ಮಾನವ್ಯ ಸ್ವಭಾವವನ್ನು ಸಾಧಿಸಬಹುದೆಂಬ ಶ್ರದ್ಧೆಯೇ ಜನರಲ್ಲಿ ಇಲ್ಲವಾಗಿದೆ. ಪ್ರತಿಯೊಬ್ಬನು ತನ್ನ ಸ್ವಾರ್ಥವನ್ನೇ ಸಾಧಿಸುವನು, ಸ್ವಾರ್ಥವನ್ನು ಸಾಧಿಸಲಿಕ್ಕೆ ಹಿಂಸಾ[illegible]ಗುಣವನ್ನು [illegible] ಅವನು ಎಂದೂ ಮಾಡದೆ ಇರಲಿಕ್ಕಿಲ್ಲ. ಮೇಲಾಗಿ ಇದು ಮಾನವ ಪ್ರಕೃತಿಯೆಂದು ಹೇಳಲ್ಪಡುತ್ತದೆ. ಆದರೆ ನಿಜವಾಗಿ ಇದು ಪ್ರಕೃತಿಯಲ್ಲ, ವಿಕೃತಿ

ಸ್ವಾರ್ಥವಾಗಲಿ, ಹಿಂಸೆಯಾಗಲಿ ಮನುಷ್ಯ ಪ್ರಕೃತಿಯಾಗಿದ್ದಿದ್ದರೆ ಸಮಾಜವು ಎಂದೋ ರಸಾತಳಕ್ಕೆ ಇಳಿಯುತ್ತಿತ್ತು. ಬಡವನಾಗಲಿ, ಗುಲಾಮನಾಗಲಿ ಯಾರೂ ಇಂದು ಬದುಕುತ್ತಿರಲಿಲ್ಲ

ಒಬ್ಬನು ಹಸುವನ್ನು ಕೊಂದರೆ ಇನ್ನೊಬ್ಬನು ಕರುವನ್ನು ಕೊಲ್ಲಬಾರದೆಂದು ಹೇಳುತ್ತಾನೆ. ಈ ಹೇಳಿಕೆಯು [illegible] ಕೊಡುವಿಕೆಗಿಂತ ಮಹತ್ವವಾಗಿ ಏನೂ ಇಲ್ಲ. ಯಾವ ಹಿಂದಿನ ವಸ್ತು [illegible] ಸ್ವಾರ್ಥಕ್ಕಾಗಿ ಕಟುಕನ ಕೆಲಸ ಮಾಡುವವರಲ್ಲಿ, ಗೋಮಾಂಸವನ್ನು ಮಾರಲಿಕ್ಕೆ [illegible] ಸ್ವಾರ್ಥಕ್ಕಾಗಿ ತಮ್ಮ ಧರ್ಮಕ್ಕೆ [illegible] ಯಾವ ಕೆಲಸವನ್ನೂ ಮಾಡಲಿಕ್ಕಿಲ್ಲ. [illegible] ಹೀಗೆಯೇ ಹೇಳಬಹುದು. ಒಬ್ಬ ಹಿಂದುವು [illegible] ಹಿಂದುವು [illegible] ಸಮಯದಲ್ಲಿ, ಅವನ ವಿರುದ್ಧ [illegible] ಅವನು [illegible] [illegible] ನಡೆದದ್ದು [illegible] [illegible] ಇನ್ನೊಬ್ಬನು [illegible] ಬಹುವವನ್ನು [illegible] [illegible] ಮಾಡುವದು [illegible] ನಮ್ಮ [illegible] ನದ ಜ್ಯೋತಿಷ [illegible] ನಮ್ಮ [illegible] ಕುರಿತು ನನ್ನ [illegible] ಅವನ್ನು ಅಜ್ಞಾನಿ [illegible] ದರ ಮೂಲಿಂದ ಹಿಂಸೆಯು [illegible] ಲಿಕ್ಕೆ ಬರುವದಿಲ್ಲ.

ಬುದ್ಧಿಶಾ [illegible] ಎಂಬುದನ್ನೇ ಮನುಷ್ಯನು ತಿಳಿಕೊಳ್ಳುವದಾದರೆ [illegible] ಈಗ ಮಾಡುವ ಹಿಂಸೆಗಿಂತ ಕಡಿಮೆ ಹಿಂಸೆಯು ಪ್ರಮಾದವಾಗುತ್ತದೆ. ಒಂದೊಂದು ಸಾರೆ ಮನುಷ್ಯನು ವಿಕಾರವಶನಾಗಿ ತನ್ನ ಸ್ವಾರ್ಥದ [illegible] ಹಿಂಸೆಗೆ ಪ್ರವೃತ್ತನಾಗುತ್ತಾನೆ ಹಿಂಸೆ ಮಾಡದೆ ಇರುವದರಿಂದ ಸ್ವಾರ್ಥ ಸಾಧಿಸುತ್ತದಾದರೆ ಆ ವಿಕಾರವನ್ನು ದಬ್ಬಿ [illegible]ನ್ನು ತನ್ನ ಹಿಡಿತದಲ್ಲಿ ಸಂಯಮವನ್ನು ಇಂಥಿಸ ಸುದಾರಿಸಿದ [illegible] ಸ್ವರಾಜ್ಯವನ್ನು [illegible] ಗಿಸುವ ಪ್ರಯೋಗದಲ್ಲಿ ಇಂಥಹ ಶಕ್ತಿಯು ಇಷ್ಟು ಇದ [illegible] ಸ್ಥಿತಿಯಲ್ಲಿದ್ದಾರೋ

ಯಾರು ಸ್ವದೇಶಕ್ಕೆ ಬೇಕಾದ ವಾತಾವರಣವನ್ನು ಮರೆತು ಬಿಟ್ಟಿರುವರೋ ಯಾರಲ್ಲಿ ಸ್ವರಾಜ್ಯ ಸಂಪಾದನೆಯ ಮಹತ್ವಾಕಾಂಕ್ಷೆಯು ನಿಸ್ತೇಜವಾಗಿದೆಯೋ— ಅವರು ಮಾತ್ರ ಇಂತಹ ವಿಚಾರಕ್ಕೆ ಬಲಿಯಾಗುವರು

ಎರಡು [illegible] ರಾಷ್ಟ್ರಗಳಲ್ಲಿ ಕಡುತರವಾದ ಹಗೆತನ [illegible], ಯುದ್ಧವು ತಡೆಯಲು ಶತ್ರುಪಕ್ಷದ [illegible] ರಕ್ತಪಾತವಾಗುತ್ತದೆ. ಒಂದು ನಾಡಿನಲ್ಲಿ ಎರಡು [illegible] ಯಾವದೇ ಯುದ್ಧವು ನಡೆದಾಗ, ಮನಸ್ಸು ಹುಚ್ಚನಾಗಿ ಕೊಲೆಮಾಡುವವರಲ್ಲಿ [illegible], ಶರಣಾಗತ ರಾಜನೂ ತನಗೆ ಸುರಕ್ಷಿತವಾಗಿದ ನಮ್ಮ ಸಂಯಮವು ಅವನಲ್ಲಿ [illegible] ಸ್ಥಿತಿಯಲ್ಲಿಯೂ ಸಂಯಮವನ್ನು ಪಾಲಿಸುವದು ಅಶಕ್ಯವಾದ ಮಾತಲ್ಲವೆಂಬುದು ಇದರ ಮೇಲಿಂದ ಸ್ಪಷ್ಟವಾಗುತ್ತದೆ. ಇದಕ್ಕೆ [illegible] ಅಹಿಂಸೆಯನ್ನು [illegible] ಸ್ವೀಕರಿಸಬೇಕೆಂದು ರಾಷ್ಟ್ರಕ್ಕೆ ಉಪದೇಶ ಮಾಡುತ್ತಿರುವಾಗ ಇತರ ದೇಶಗಳ [illegible] ಕಂಡುಬರುವಂತಹ [illegible] ಇದಕ್ಕಿಂತ [illegible] ಜನರಲ್ಲಿ ಉದಯಿಸಿದರ [illegible], ಸ್ವರಾಜ್ಯವನ್ನು [illegible] ಸಂಯಮವು [illegible] ಇರಬೇಕು

[illegible] ಜನರಲ್ಲಿ ನಮ್ಮಲ್ಲಿರುವಷ್ಟು ಸ್ವರಾ[illegible] ಅವರು ಸಂಯಮವನ್ನು [illegible] ಕೆಲವರು ವಾದಿಸುವದುಂಟು. ನಾವು ನಮ್ಮಲ್ಲಿ ಸ್ವರಾಜ್ಯವಿಷಯಕ ಶ್ರದ್ಧೆಯನ್ನು ಹುಟ್ಟಿಸಬೇಕೆಂಬುದೇ ಇದಕ್ಕೆ ಉತ್ತರವು. [illegible] ಜನರು ಅಹಿಂಸೆಯ ಉಪದೇಶ ಮಾಡಿ ಅವರಲ್ಲಿ ಸ್ವರಾಜ್ಯದ ಅಭಿಲಾಷೆಯನ್ನು ಹುಟ್ಟಿಸಬಲ್ಲರು ಜನತೆಯಲ್ಲಿ, ಅಹಿಂಸೆಯಲ್ಲಿ [illegible] ಶ್ರದ್ಧೆಯನ್ನು ಹುಟ್ಟಿಸಲು ಸಾಧ್ಯವಾದರೆ, [illegible] ಶಾಂತಿಯಿಂದ [illegible] ನಮ್ಮ ಬುದ್ಧಿ[illegible] ಶಾಂತಿಯನ್ನು [illegible], ಸ್ವರಾಜ್ಯವನ್ನು ದೊರಕಿಸಬೇಕು ಇನ್ನೇ ಇಲ್ಲ ಜಗತ್ತಿನಲ್ಲಿ [illegible] ಶಾಂತಿಸ್ಥಾಪನೆಗೆ ಅದಕ್ಕೆ ವಿಶ್ವಾಸವನ್ನು [illegible] ಸಮರ್ಥರಾಗುವೆವು.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ. 1908.

ಈ ಕಂಪನಿಯು [illegible] ಹಿಂದೀ ಇದ್ದು, [illegible] ಕಂಪನಿಯ ಹಣವು ಸರಕಾರಿ [illegible]. [illegible] ಇಂಡಿಯನ್ [illegible] ಎಕ್ಟಿನ ನಿಯಮಗಳಂತೆ ಜವಾಬ್ದಾರಿಯು ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ

ಮಲ್ಟಿಪಲ್ ಬೆನಿಫಿಟ್ ಎಂಬ [illegible] ಪಾಲಿಸಿದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ [illegible] ಪತ್ರವ್ಯವಹಾರದಿಂದ [illegible] ಬರೆಯಲ್ಪಡುವದು [illegible].

Kumta Agents:-
D K NAYAK Bros
Honavar Agent-
R V PARBHU Esq

K. Padmanabha Rao & Sons.,
BELGAUM
Chief Agents for
Karnatak Districts & S M. States

ಈಗಿನ ಪ್ರಪಂಚ.

ಕೊಂಗ್ರೆಸ್ಸಿನ ಅತಿಕ್ರಮ ವಿರೋಧಿಸಬೇಕು. ಆದರೆ... .

ಸರ್ ಅರ್ನೆಸ್ಟ ಹೊಟ್ಸನ್‌ರವರಿಗ ಎಲ್ಲರೂ ಬಲ್ಲರು. ಇವರು ನಮ್ಮ ಮುಂಬಯಿ ಸರಕಾರದ ಗೃಹಮಂತ್ರಿಗಳಿದ್ದರು. ಗವ್ಹರ್ನರರಾದ ಸರ್ ಫ್ರೆಡರಿಕ್ ಸ್ಟೈಕ್ಸರವರು ರಜೆ ಕೊಂಡು ಸ್ವದೇಶಕ್ಕೆ ಹೋದಾಗ ಹೊಟ್ಸನ್‌ರವರು ಗವ್ಹರ್ನರರಾಗಿದ್ದರು. ಈಗ ಇವರು ಪೆನ್ಶನು ಪಡೆದು ಸ್ವದೇಶಕ್ಕೆ ಹೋಗಿದ್ದಾರೆ. ಕಳೆದ ಬಾರಿ ನಡೆದ ಸತ್ಯಾಗ್ರಹ ಮನ್ವಂತರದಲ್ಲಿ ರಾಷ್ಟ್ರೀಯ ಸಭೆಯ ಚಪಲ ಚೇಷ್ಟೆಗಳನ್ನೆಲ್ಲ ಮುರಿಯುವದಕ್ಕಾಗಿ ಇವರು ಅನೇಕ ಉಪಾಯಗಳನ್ನು ಕೈಕೊಂಡರು. ಪಂ| ಮದನ ಮೋಹನ ಮಾಲವೀಯ ಪ್ರಭೃತಿ ಕೊಂಗ್ರೆಸ ಪ್ರಮುಖರು ಲೋಕಮಾನ್ಯರ ಪುಣ್ಯ ತಾರೀಖಿನ ದಿನ ಹೊರಡಿಸಿದ ಮೆರವಣಿಗೆಯನ್ನು ಪ್ರತಿಬಂಧಿಸಿ, ಆ ನೋಲ ಕೆಲವರಿಗ ಸೆರೆಹಿಡಿಸಿ, ಅನೇಕರಿಗೆ ಹೊಡಿಸಿ ಸಭೆ ಚದರಿಸಿದರಾಗಿಯೂ, ಆ ಸಮಯ ಹೊಟ್ಸನ್‌ರವರು ಸ್ವತಃ ಬಳಿಯ ಒಂದು ಇಮಾರತಿನಲ್ಲಿ ಕೂತುಕೊಂಡಿದ್ದರಾಗಿಯೂ, ಆ ಕಾಲಕ್ಕೆ ಒಂದು ಲೋಕಪ್ರವಾದವಿದ್ದಿತ್ತು. ಪಂಡಿತ ಮದನ ಮೋಹನ ಮಾಲವೀಯ ಪ್ರಭೃತಿಗಳ ಮೇಲೆ ನಡೆದ ಮುಷ್ಟಿಯಲ್ಲಿ ಸರ್ ಅರ್ನೆಸ್ಟ ಹೊಟ್ಸನ್‌ರವರಿಗೆ ಸಾಕ್ಷಿಗ ಸಹ ಬರಬೇಕೆಂಬದೊಂದು ಸೂಚನ ಸಹ ಆಗಿತ್ತು. ಫರ್ಗ್ಯೂಸನ್ ಕಾಲೇಜನ್ನು ನೋಡಹೋದಾಗ ವಿದ್ಯಾರ್ಥಿಯೊಬ್ಬನು ಒಮ್ಮೆಲೇ ಇವರ ಮೇಲೆ ಗುಂಡು ಹಾರಿಸಿದ್ದೂ, ಎದೆಯೊಳಗಿದ್ದ ಉಕ್ಕಿನ ತಗಡುಳ್ಳ ವಿಸ್ಟ್‌ಕೋಟಿನಿಂದ ಇವರ ರಕ್ಷಣೆಯಾಗಿ ಹಿಂದೀಯರ ಮಾನರಕ್ಷಣೆಯಾದದ್ದೂ ಈಗ ಲೋಕವಿಶ್ರುತವಾದ ಸಂಗತಿ. ಸರ್ ಹೊಟ್ಸನ್‌ರವರು ಕೊಂಗ್ರೆಸ ಪಕ್ಷಪಾತಿಗಳಲ್ಲ, ಕೊಂಗ್ರೆಸ ವಿರೋಧಿಗಳು, ಬ್ರಿಟಿಶ ಜನಾಂಗದ ಅಭಿಮಾನಿಗಳು. ಇದ್ದಕ್ಕೆ ಲಂಡನಿನಲ್ಲಿ ಇವರದೊಂದು ಭಾಷಣವಾಯಿತು. ಅವರು ನುಡಿಯುವದೇನಂದರೆ – 'ಬನಿಯಾ' ಯೆಂಬ ವೈಶ್ಯರು ಧರ್ಮಕಾರ್ಯಕ್ಕಾಗಿ ಪ್ರಯತ್ನ ಮಾಡುತ್ತಾರೆಂಬ ಸಂಗತಿ ನಮಗೆಲ್ಲರಿಗೆ ಗೊತ್ತುಂಟು, ಔದಾರ್ಯದಿಂದ ಅವರು ಧರ್ಮಕಾರ್ಯಗಳಿಗ ಹಣ ಕೊಡುತ್ತಾರೆ. ಆದರೆ, ಒಂದು ಧ್ಯೇಯಸಾಧನೆಗಾಗಿ ಅವರು ಎರಡೂ ಕೈಗಳಿಂದ ಹಣ ಕೊಟ್ಟು ಈ ರೀತಿ ಹಣದ ಅಪವ್ಯಯ ಮಾಡುವರೆಂದ ನಾವಂದಿಗೂ ಎಣಿಸಿರಲಿಲ್ಲ. ಈ ಚಮತ್ಕಾರವನ್ನು ನಾವು ಕಣ್ಣಾರ ಕಂಡೆವು; ಕಣ್ಣಾರ ಕಾಣುತ್ತಿದ್ದೇವೆ. ಮುಂಬಯಿಯು ತಾನಾಗಿ ವ್ಯಾಪಾರದ ಘಾತ ಮಾಡಿಕೊಳ್ಳುತ್ತದೆ. ಯಾಕೆ? ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಮತ್ತು ಕಲ್ಪನೆಯೊಳಗಿನ ಯೂಟೊಪಿಯಾ ಎಂಬ ಸುಖಸಾಮ್ರಾಜ್ಯ (*Utopia*)ಕ್ಕಾಗಿ! ಮುಂಬಯಿಯ ವ್ಯಾಪಾರ ಕ್ರಮವಾಗಿ ಮುಳುಗುವದನ್ನು ಅವರು ನೋಡುತ್ತಾರೆ. ಬೇರೆ ಬೇರೆ ಬಂದರಗಳ ವ್ಯಾಪಾರಾಭಿವೃದ್ಧಿ ಹೊಂದುವದನ್ನು ನೋಡುತ್ತಾರೆ. ಅವರು ಬಹಳ ಹಣ ಕಳಕೊಂಡರು. ಮುಂಬಯಿಯಲ್ಲಿ ಈಗ ನಷ್ಟಪಟ್ಟವರಾರು, ಪ್ರತಿಷ್ಠಿತರಿವರ್ಯಾರೆಂದು ಪತ್ತೆ ಹಚ್ಚುವದೇ ಕಠಿಣ. ಹಣ ತಿರುಗಿ ಬರುವ ಆಶೆ ಅವರು ಬಿಟ್ಟಿದ್ದಾರೆ. ವ್ಯಾಪಾರ ಸಹ ಪುನಃ ಅವರ ಕೈಸೇರದು, ಬೇಕಾದ ಹಾಗ ರಾಜ್ಯಸುಧಾರಣೆಯಾಗಲಿ, ಈಗ ನಡೆದ ಚಳವಳಿಯಿಂದ ಮುಂಬಯಿಯೊಳಗಿನ ವರ್ತಕ ವರ್ಗದಲ್ಲುಂಟಾದ ಅವಸ್ಥಾಂತರವನ್ನು ನಾವು ಅರಿತುಕೊಳ್ಳಬೇಕು. ಬ್ರಿಟಿಶ ವರ್ತಕರ ಮೇಲ ವ್ಯಕ್ತಿಶಃ ಇವರಿಗ ದ್ವೇಷವಿಲ್ಲ. ಇವರಿಗೆ ಸ್ವಂತ ಬುದ್ಧಿ ಮಾತ್ರ ಕಡಿಮೆ. ಅಡಗಿ ಕೂತ, ಗುಪ್ತವಾಗಿ ಸೂತ್ರ ಚಲಿಸುವ ಧೂರ್ತರ ಕೈಯಲ್ಲಿ ಇವರು ಎಲ್ಲ ಬುದ್ಧಿ ಕೊಟ್ಟುಬಿಟ್ಟಿದ್ದಾರೆ. ಈ ಕುತಂತ್ರಗಾರರಿಗೆ ಲೋಕಪೂಜ್ಯರ ಹೆಸರು ಮತ್ತು ಕೀರ್ತಿ ಬೇಕು, ಅದೇ ಇವರ ಬಂಡವಲು. ಆದರೆ, ಇವರು ಲೋಕಪೂಜ್ಯರ ಎಣಿಕೆಯಲ್ಲಿಲ್ಲ. ಗಾಂಧಿಯವರ ಇಚ್ಛೆಯಲ್ಲಿ ಜನರಿಗೆ ಸಮಾಧಾನವಾಗಬಹುದಾದ ರಾಜ್ಯಾಧಿಕಾರದಿಂದ ಈಗ ಯಾರಿಗೂ ಸಮಾಧಾನವಾಗಲೊಲ್ಲದು. ಮುಂಬಯಿಯೊಳಗ ಗೆಳೆತನ ಉಳಿಯಬೇಕಾದರೆ, ಹಿಂದುಸ್ಥಾನ ಸರಕಾರವು ಆರ್ಥಿಕ ರಾಜ್ಯಭಾರವನ್ನು ಹಿಂದೀ ಆಕಾಂಕ್ಷೆಗಳಿಗೆ ಉಚಿತವಾಗಿ ನಡಿಸುವದೇ ಮುಖ್ಯವಾದದ್ದೆಂದು ನನ್ನ ಅಭಿಪ್ರಾಯವಿದೆ. ಜನರಿಗ ನಿಷ್ಕಾರಣವಾಗಿ ನೋಯಿಸಬಾರದು, ಮತ್ತು ಅವಸ್ಥರ ಮುಷ್ಟಿಗೆ ನಿರ್ಬಂಧಗಳ ತೀಕ್ಷ್ಣತೆ ತಗ್ಗಿಸಬೇಕು. ನಿರ್ಬಂಧಗಳಿಡುವದರಿಂದ ಏನೊಂದು ಪ್ರಯೋಜನವಿಲ್ಲ. ಈ ಚಳವಳಿಯೊಳಗಿನ ಸುಲಕ್ಷಣಗಳ್ಯಾವವೆಂದರೆ — (೧) ಬನಿಯಾ ಜನರ ಸ್ವಾತಂತ್ರ್ಯಭಾವ. ಹಣಕ್ಕಿಂತ ಸ್ವಾತಂತ್ರ್ಯದ ಮೇಲ ಅವರಿಗ ಪ್ರೀತಿ ಹೆಚ್ಚಾದದ್ದು! (೨) ಸ್ತ್ರೀಯರ ಉನ್ನತಿ. ಪರಕಾರ್ಯವೆಂಬ ಗ್ರಹಿಕೆಯಿಂದ ಕಾದಾಡುವದಕ್ಕಾಗಿ ಅವರು ಹೊರಬಿದ್ದದ್ದು! (೩) ಲೋಕಸೇವ ಹಾಗು ಲೋಕಸಹಕಾರದ ಪ್ರವೃತ್ತಿ. ಪರರ ಕಲ್ಯಾಣವಾಗಲಿ ಅಕಲ್ಯಾಣವಾಗಲಿ, ಬೇರೆ ಬೇರೆ ಜಾತಿಯ ಒಟ್ಟು ಒಕ್ಕಟ್ಟಾಗಿ ದೇಶಕಾರ್ಯದಿಂದ ಮಾಡುಯುವದೆ! (೪) ಕೊಂಗ್ರೆಸ ಸ್ವಯಂಸೇವಕ ವರ್ಗದೊಳಗೆ ಬೆಳೆದ ಶಿಸ್ತು! ಕೊಂಗ್ರೆಸ ಧೋರಣದ ಅತಿಕ್ರಮಗಳನ್ನು ನಾವು ವಿರೋಧಿಸುವಾಗ ಈ ಸುಲಕ್ಷಣಗಳನ್ನು ನಾವು ಮರೆಯಬಾರದು. ಈ ಪ್ರಕಾರ ಸರ್ ಅರ್ನೆಸ್ಟ ಹೊಟ್ಸನ್‌ರವರು ಲಂಡನಿನಲ್ಲಿ ತಮ್ಮ ದೇಶಬಾಂಧವರಿಗೆ ಹಿಂದೀ ವರ್ತಕ ವರ್ಗದಲ್ಲಿ ಸ್ನೇಹಭಾವ ಬೆಳಸುವಂತೆ ಸರಕಾರದ ಸಾಂಪತ್ತಿಕ ಇಲಾಖೆಯ ಧೋರಣವನ್ನು ತಿದ್ದುಪಡಿ ಮಾಡಬೇಕೆಂದಾಗಿ ಸೂಚಿಸಿದ್ದಾರೆ. ಕೊಂಗ್ರೆಸಿನ ದೋಷಗಳನ್ನೇ ಹೇಳುತ್ತ ಹೋಗುವವರು ಗುಣಗಳನ್ನು ಮರೆಯುವದಾಗಿಯೂ ಗ್ರಹಣ ಮಾಡಿ ತಕ್ಕ ಸುಧಾರಣೆ ಕೈಕೊಳ್ಳಬೇಕಾಗಿಯೂ ಸೂಚಿಸಿದ್ದಾರೆ.

⁂

ಸ್ವದೇಶಿಪ್ರಚಾರ.

ಮುಂಬಯಿಯಲ್ಲಿ ಕಳೆದ ಶುಕ್ರವಾರ ತಾ| ೨೦ನೇಗೆ ಸ್ವದೇಶಿ ಪ್ರಚಾರದ ಸಭೆ ಸರ್ ಲಲ್ಲೂಭಾಯಿ ಸಾಮಳದಾಸರವರ ಅಧ್ಯಕ್ಷತೆಯಲ್ಲಿ ನೆರೆತು. ಈ ಸಭೆಯ ವೃತ್ತಾಂತವು ಸ್ವದೇಶಿ ಪ್ರಚಾರಕರಿಗೆ ಮಾರ್ಗದರ್ಶಕವಿದೆ. ಈ ಸಭೆ 'ಮುಂಬಯಿ ಸ್ವದೇಶಿ ಲೀಗ' ಸಂಸ್ಥೆಯ ವಿದ್ಯಮಾನ ನೆರೆತ್ತು. ಸರ ಲಲ್ಲೂಭಾಯಿ ಸಾಮಳದಾಸರವರು ತಮ್ಮ ಭಾಷಣದಲ್ಲಿ ನುಡಿದದ್ದೇನಂದರೆ – ಮುಂಬಯಿಯ ಸ್ವದೇಶಿ ಲೀಗು ೧೯೦೫ನೇ ಇಸ್ವಿಯ ಮೊದಲ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಸ್ವದೇಶಿ [illegible] ಕೊಂಡು ರಾಷ್ಟ್ರ ಸಂಪತ್ತಿಯನ್ನು ಅಭಿವೃದ್ಧಿಗೊಳಿಸಬೇಕಾಗಿ ಸಂಸ್ಥೆಯವರು ಆರಂಭದಲ್ಲಿ ಹಸ್ತಪತ್ರಿಕೆಗಳನ್ನು, ಪಾಂಪ್ಲೆಟುಗಳನ್ನು ಹಂಚಿ ಪ್ರಚಾರ ನಡಿಸಿದರು. ಸ್ವದೇಶಿ ಪ್ರದರ್ಶನಗಳನ್ನು ಹಾಕಿದ್ದನ್ನೂ ಈ ಸಂಸ್ಥೆಯವರು ಏರ್ಪಡಿಸಿದ್ದಾರೆ. ಸ್ವದೇಶಿ ಲೀಗಿಗೂ, ರಾಜಕಾರಣ ಸಂಸ್ಥೆಗಳಿಗೂ ಏನೊಂದೂ ಸಂಬಂಧವಿಲ್ಲ. ಪ| ವಾ| ಗೋಪಾಲ ಕೃಷ್ಣ ಗೋಖಲೆಯವರು ನುಡಿದಂತೆ, "ಸ್ವದೇಶಿಯು ಸರ್ವಾಂಗಿಕ ಔದ್ಯೋಗಿಕ ಜೀವನ. ಆದರ, ಸ್ವದೇಶಿಯನ್ನು ಆ ಮೂಲಾಗ್ರ ಪುರಸ್ಕರಿಸುವದರಿಂದ ಇಡೀ ರಾಷ್ಟ್ರಜೀವನವೇ ಬದಲುತ್ತದ. ಮಾತೃಭೂಮಿಯ ನಿಸ್ವಾರ್ಥ ಸೇವೆಯೇ ಸ್ವದೇಶಿಯ ಪೂರ್ಣಾವಸ್ಥೆ. ಸರಕಾರವು ಪ್ರಾಮಾಣಿಕ ಸ್ವದೇಶಿಯನ್ನು ಪುರಸ್ಕರಿಸುವಲ್ಲಿ ತಮ್ಮ ಪ್ರತಿಬಂಧವಿಲ್ಲವಾಗಿ ಇಲ್ಲಿಯ ನೇಮಸ್ತ ಸಂಘಕ್ಕೆ ಉತ್ತರ ಕೊಟ್ಟಿದೆ. ಸ್ವದೇಶಿಯಲ್ಲಿ ಪ್ರಾಮಾಣಿಕ, ಅಪ್ರಾಮಾಣಿಕ ಭೇದ ಹೇಗಾಗುತ್ತದೆಂದು ನಾನರಿಯದ ಮಾತು. ಸ್ವದೇಶಿಯ ಪ್ರವೃತ್ತಿ ಬೆಳೆಯಬೇಕೆಂದು ಸರಕಾರದ ಅಪೇಕ್ಷೆಯಿದ್ದರೆ ಈ ಕುರಿತು ಸ್ಪಷ್ಟ ಖುಲಾಸೆಯಾಗುವದವಶ್ಯ, ಅತಿ ಅವಶ್ಯ. ಯಾಕಂದರೆ, ಕೆಲ ಜಿಲ್ಲಾಧಿಕಾರಿಗಳ ನಡತೆಯು ಸ್ವದೇಶಿಗೆ ಉತ್ತೇಜಕವಿಲ್ಲ. ಸರಕಾರದ ಅಭಿಪ್ರಾಯದ ಅಭಾವದಲ್ಲಿ ಸ್ವದೇಶಿಯ ಕುರಿತು ನಮ್ಮ ಅಭಿಪ್ರಾಯಗಳನ್ನಷ್ಟೇ ಸ್ಪಷ್ಟವಾಗಿ ಹೇಳಬೇಕಾಗಿದ. ಪ್ರಾಮಾಣಿಕ ಸ್ವದೇಶಿ ಜನರು ನಡಕೊಳ್ಳುವ ಮಾರ್ಗವನ್ನು ಜನರಿಗೂ, ಸರಕಾರಕ್ಕೂ ತಿಳುಹಬೇಕಾಗಿದೆ. ನಮ್ಮ ಬ್ರಿಟಿಶ ಸಾಮ್ರಾಜ್ಯದ ಯುವರಾಜರು ಬ್ರಿಟಿಶ ಸರಕುಗಳ ವ್ಯಾಪಾರವನ್ನು ಬೆಳಸುವದಕ್ಕಾಗಿ ಯುರೋಪದೊಳಗಿನ ಬೇರೆ ಬೇರೆ ದೇಶಗಳಲ್ಲಿ ಸಂಚರಿಸುತ್ತಿದ್ದ ಸಂಗತಿ ನಿಮಗೆಲ್ಲರಿಗೂ ಗೊತ್ತಿದ್ದ ವಿಷಯ. ರಾಜಪುತ್ರನೇ ಆ ದೇಶಕ್ಕೆ ಸರಕು ಮಾರಾಟ ಮಾಡಲು ದೊರಕಿದ್ದನೆ ಇದು ನಿಜವಾಗಿ ಅಭಿಮಾನಾಸ್ಪದ ಸಂಗತಿ. ನಮ್ಮ ಸಂಸ್ಥಾನಿಕರು, ಐಶ್ವರ್ಯವಂತ ವರ್ತಕರೂ ಹೀಗೆಯೇ ವರ್ತಿಸುವಂತಾಗಿ ನಮಗ ಹೇಳುತ್ತಿದ್ದರೆ ಒಳಿತಾಗುತ್ತಿತ್ತು. ಇಂಗ್ಲಂಡವು, ಬೇರೆ ಬೇರೆ ದೇಶಗಳೂ ಸ್ವಂತ ನಾಡಿನ ಜನಶಕ್ತಿಯಿಂದ ನಮಗೂ ಕ್ಷೇಮವಾಗಬೇಕು. ಸ್ವದೇಶಿಯನ್ನು ಬಹಿಷ್ಕಾರದಲ್ಲಿ ಸೇರಿಸಲಾಗದು. ಹಾಗ ಯಾಕೆ ಸ ತ್ತಾರೆಂದು ನನಗೆ ತಿಳಿಯದು. ಈಗಿನ ಬಿಕಟ ಸ್ಥಿತಿಯಲ್ಲಿ ನಾವು ಹಿಂದೀ ಹಿತಸಂಬಂಧಗಳ ವಿಚಾರವನ್ನೇ ನಡಿಸತಕ್ಕದ್ದು. ಸ್ವದೇಶಿ ಸರಕುಗಳ ಪ್ರಚಾರಕ್ಕಾಗಿ ಈ ರೀತಿ ದುಡಿಯಬೇಕು. ಸ್ವದೇಶಿ ಸಂಸ್ಥೆಗಳಿಂದಲೇ ನಾವು ಎಲ್ಲ ಕಾರ್ಯ ಸಾಧಿಸಿಕೊಳ್ಳಬೇಕು. ಸ್ವದೇಶಿ ಬ್ಯಾಂಕಿನಲ್ಲಿ ಹಣ ಇಡಬೇಕು, ಸ್ವದೇಶಿ ವಿಮೆ ಕಂಪನಿಯಲ್ಲಿ ವಿಮೆ ಇಳಿಸಬೇಕು; ಸ್ವದೇಶಿ ಹಡಗಗಳಲ್ಲಿ ಪ್ರವಾಸ ಮಾಡಬೇಕು, ಇದರಿಂದ ರಾಷ್ಟ್ರದ ಸಂಪತ್ತು ರಾಷ್ಟ್ರದಲ್ಲಿಯೇ ಉಳಿಯುವದು. ಸ್ವದೇಶಿ ಸರಕು ಹೀನವೆಂದು ಎಣಿಸಲಾಗದು. ಸ್ವದೇಶಿ ಸರಕುಗಳ ಪ್ರಚಾರಕ್ಕಾಗಿ ಕೆಲಮಟ್ಟಿಗೆ ಸ್ವಾರ್ಥತ್ಯಾಗ ಮಾಡಲು ಜನರಿಗೆ ಕಲಿಸಬೇಕು. ಇದರಿಂದ ರಾಷ್ಟ್ರಸಂಪತ್ತಿ ಬೆಳೆಯುವದೆಂದು ಜನರಿಗೆ ತಿಳಿಸಿಹೇಳಬೇಕು. ಖಾದಿಯ ವಿಷಯ ಕೆಲ ಮಾತು ಹೇಳುವದವಶ್ಯ. ಖಾದಿಯಿಂದ ಹಳ್ಳಿಗರಿಗ ಬಹಳೇ ಪ್ರಯೋಜನವಾಗಿದ. ಬೇಸಾಯಗಾರರ ಉದ್ಧಾರ ಯೋಜನೆಗಾಗಿ ಬೇಸಾಯ

ಕಮಾಂಡರು ದೇಶತುಂಬ ತಿರುಗಾಡಿತು ಆದರೆ, ಜೋಸಾಯಗಾರರು ಕೆಲಸವಿಲ್ಲದೆ ಸೋಮಾರಿಯಾಗಿ ಕಳೆಯುವ ೫-೬ ತಿಂಗಳುಗಳ ಬಗ್ಗೆ ಯೋಗ್ಯವಾದ ಬುದ್ಧಿಮಯನ್ನು ಅವರಿಂದ ಬೋಧಿಸಲಾಗಲಿಲ್ಲ ಕೈಗಾರಿ-ಕೈಮಗ್ಗಗಳೇ ಎಲ್ಲ ಹಳ್ಳಿಗಳಿಗೆ ಯೋಗ್ಯವಾದ ಕೈಗಾರಿಕೆಗಳು. ಇವರಿಂದ ದಿನಾ ೩ ಆಣೆ ಮಟ್ಟಿಗೆ ಪ್ರಾಪ್ತಿಯಾದ ಇದೇನು ದೊಡ್ಡ ಮಾತಲ್ಲ. ಆದಾಗ್ಯೂ ಈಗಿನ ದಿನಮಾನದಲ್ಲಿ ಇದು ಹಿರಿದು ಮಾತೇ. ಇದರಿಂದ ಬಡ-ಬಗ್ಗರಿಗೆ ತುತ್ತು [illegible] ವಾದಿಯ ಪ್ರಶಸ್ತಿ ಮಾಡಿದ್ದರಿಂದ ಗಿರಣಿಗಳಿಗೆ ನಾವು [illegible] ಹಂತಾಗುವದಿಲ್ಲ. ಇನ್ನು ಈ ಸಂಘದವರು ತಕ್ಕಷ್ಟು ಮಟ್ಟಿಯಲ್ಲಿ [illegible] ಪರವಾಗಿ ಕಾರ್ಯಕರ್ತರನ್ನು ಪ್ರತಿ ಹಳ್ಳಿಗೆ ಕಳಿಸಿ ಅಲ್ಲಿ ಸ್ವದೇಶಿ ಪ್ರದರ್ಶನ, ಸ್ವದೇಶಿ ಅಂಗಡಿಗಳನ್ನು [illegible], ಸ್ವದೇಶಿ ಭಾಂಡಾರಗಳನ್ನು ಸ್ಥಾಪಿಸಬೇಕು. ಜಿಲ್ಲೆಗಳಿಂದಾದರೂ ಭಾಂಡಾರವಿರಬೇಕು. ಎಲ್ಲರೂ ಈ ಕಾರ್ಯದಲ್ಲಿ ನೆರವಾಗಬೇಕು. ಈ ಪ್ರಕಾರ ಸರ್ ಲಲ್ಲೂಭಾಯಿ ಸಾಮಳದಾಸರವರ ಭಾಷಣವಾದ ಬಳಿಕ ಮುಂಬಯಿ ಪ್ರಾಂತಿಕ [illegible] ಅಧ್ಯಕ್ಷರಾದ ರಾ| ವಸಂತರಾವ ಡಾಂಗಾವಕರವರು ನುಡಿದದ್ದೇನಂದರೆ — " ಸ್ವದೇಶಿಯ ಪ್ರವೃತ್ತಿಯು ಸಹಜವಿದೆ. ಅದೊಂದು ನಮ್ಮ ಸ್ವಾಭಿಮಾನದ [illegible] ನಮ್ಮಲ್ಲಿಯ ಐಶ್ವರ್ಯವಂತರು ಆರೋಗ್ಯಕ್ಕಾಗಿ, [illegible] ಪರದೇಶಗಳ ಕಡೆಗೆ ಹೋಗುತ್ತಾರೆ. ಇಂಥ ಸಂಪ್ರದಾಯ [illegible] ಹಿಂದುಸ್ತಾನದಲ್ಲಿ ಬೇಕಾದ [illegible] ಆರೋಗ್ಯ[illegible] ಆದ್ದರಿಂದ [illegible] ಶ್ರೀ ನಾಡಿಗರವರು ನುಡಿದದ್ದೇನಂದರೆ - "ರಾಜಕಾರಣದ ಯಾವದೇ ನಿರ್ಬಂಧವಿಲ್ಲದ ಸ್ವತಂತ್ರ ರಾಷ್ಟ್ರಗಳಲ್ಲಿ ಸಹ ರಾಷ್ಟ್ರಸಂಪತ್ತಿಯ ರಕ್ಷಣೆಗಾಗಿ [illegible] ವ್ಯಾಪಾರ ನಡೆಯಗೊಡುವದಿಲ್ಲ. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯವಿಲ್ಲದ ಇಂದಿನ ದೇಶದಲ್ಲಿ ರಾಷ್ಟ್ರಸಂಪತ್ತಿಯ ರಕ್ಷಣೆ ಮಾಡಲು ನಿರ್ಬಂಧಗಳಿರಬೇಕು. ಸ್ವದೇಶಿ ಚಳವಳಿಯು ಕೇವಲ ನಿರುಪದ್ರವಿಯಾದ ಚಳವಳಿ [illegible] ಸ್ವಾತಂತ್ರ್ಯಕ್ಕಾಗಿ ರಾಷ್ಟ್ರದೊಳಗಿನ ಶಕ್ತಿಗಳನ್ನು ಪ್ರೋತ್ಸಾಹಿಸುವದಕ್ಕೆ [illegible] ನಾವು ಸಂಪನ್ನ-ಸಂಪೂರ್ಣರಾಗುವದಕ್ಕಾಗಿ ಸ್ವದೇಶಿಯ ಪ್ರಚಾರ ಅತ್ಯವಶ್ಯವಿದೆ. ರಾ| [illegible]ರವರು ನುಡಿದದ್ದೇನಂದರೆ — ಸ್ವದೇಶಿ ಸರ್ವವ್ಯಾಪಿಯಾದದ್ದು. ಯಾವದೇ ಒಂದು ಭಾಗಕ್ಕೆ, ಯಾವದೇ ಒಂದು ವಸ್ತುವಿಗೆ ಅದು ನಿರ್ಬಂಧಿತವಾಗಿಲ್ಲ. ಸ್ವದೇಶಿ [illegible] ಮೇಲೆ ಹಿಂದು-ಮುಸಲ್ಮಾನರು ಒಕ್ಕಟ್ಟಾಗಬಹುದು " 'ಹಿಂದೀ ಎಂಬ ಅಭಿಮಾನ ಹಿಡಿಯಿರಿ ಹಿಂದೀ ಸರಕುಗಳನ್ನೇ ಕೊಂಡುಕೊಳ್ಳಿರಿ " ಹೀಗೆ ರಾ| ದೇಶಮುಖರವರು ಸಭಿಕರಿಗೆ ಹುರಿದುಂಬಿಸಿದರು. [illegible] ಸ್ವದೇಶಿಯಾಂದೋಲನದಿಂದ ಅವರ ಉದ್ಧಾರವಾಗಬೇಕು. ಹೀಗ ಸೌ| [illegible] ನುಡಿದರು. ಪ್ರತಿ ಮನೆ ಮನೆಯಲ್ಲಿ ಸ್ವದೇಶಿಯ ಸಂದೇಶವನ್ನು ತಿಳಿಸಿ [illegible] ಸೌ| ಕ್ಷಮಾಬಾಯಿ ರಾವ್‌ರವರು ಉತ್ತೇಜಿಸಿದ ಬಳಿಕ, ಆಭಾರ ಪ್ರದರ್ಶನೆಯಾಗಿ ಸಭೆ ವಿಸರ್ಜನೆ ಹೊಂದಿತು.

* * *

ಒಂದು ಅದ್ಭುತ ಚಮತ್ಕಾರ

[illegible] ರಾಜ್ಯದ [illegible]ದಲ್ಲಿ ಒಂದು ಅದ್ಭುತ ಚಮತ್ಕಾರವಾಯಿತು [illegible]ನು ಥೇರು ಬಡಿದು ಜನರಿಗ ತೋರಿಸುತ್ತಿದ್ದನು. ಇತ್ತ ಕಡ ಬುಟ್ಟಿಯಲ್ಲಿದ್ದ ಒಂದು ನಾಗರಹಾವು ಸುದ್ದಿ-ಸುಳುವಿಲ್ಲದೆ ತಲೆಯೆತ್ತಿ, ಬುಟ್ಟಿಯಿಂದ ಹೊರಬಿದ್ದು ಆಟ ನೋಡಬಂದ ೧೬ ವರ್ಷದ ಹುಡುಗನಿಗ ಕಚ್ಚಿಬಿಟ್ಟಿತು. ಹುಡುಗನು ಚೀರಿದನು ೧-೨ ನಿಮಿಷ ತಲ್ಲಣಿಸಿದನು ಹಾಗೆಯೆ ಮೂರ್ಛೆ ಬಂದು ಸಲಿಕ್ಕರುಳಿದನು ಇದನ್ನು ನೋಡಿ ಜನರಿಗೆ ಗಾಬರಿಯಾಯಿತು. ಆದರೆ, ಡೊಂಬರ ಟಪಾಸಿಗೆ ಏನೊಂದು ಗಾಬರಿಯಿಲ್ಲ ತನ್ನ ಹರಕು ಜೋಳಿಗೆಯಿಂದ ಒಂದು ಬೇರಿನ ತುಂಡು ತೆಗೆದು ತನ್ನ ಮುಂಗುಲಿಗೆ ಕೊಟ್ಟನು, ಮುಂಗುಲಿಯು ಅದನ್ನು ಜಗಿದು ಥುಕಿ ಥುಕಿ ಮಾಡಿ ಹಾಗೆಯೇ ಆ ಹುಡುಗನ ಕಡೆಗೋಗಿ [illegible] ಕೂತು ಹುಡುಗನ ಬಾಯಿ ತೆರೆದು ಹಾಕಿ ಬಂದು ಕೂಡಲೆ ಹುಡುಗನಿಗೆ ಸ್ಮೃತಿ ಬಂತು, ಆತನು ಎಚ್ಚತ್ತು ಕೂತುಕೊಂಡನು ಜನರೆಲ್ಲರೂ ಚಕಿತರಾದರು! ದಿವ್ಯ ವನಸ್ಪತಿಯ ಮಹಿಮೆ [illegible]

* * *

ವಿಖ್ಯಾತ ಜ್ಯೋತಿಷಿಗಳು.

ಮುಂಬಯಿಯಲ್ಲಿ [illegible] [illegible] ಲಕ್ಷ್ಮಣ [illegible] ಇವ [illegible] ಭವಿಷ್ಯ [illegible] ಹೇಳುತ್ತಿದ್ದಾಗ [illegible] ಜನರ [illegible] ರನ್ನ [illegible] ಜ್ಯೋತಿಷ[illegible] ರನು ಪತ್ರಿಗೆ [illegible] ಕೊಟ್ಟಿದ್ದಾರೆ [illegible] ರಿಗೆ ಬಹಳ [illegible] ಹರಡಿ [illegible] ಗಣ್ಯರಾದ [illegible] ರಾಜ ಒಡೆ [illegible] ಪ್ರಸಿದ್ಧ [illegible] ಅವರ [illegible] ನೋಡಿ ಇವರು [illegible] ಇಷ್ಟು [illegible] ತಿಳಿದುಕೊಳ್ಳಬಹುದು [illegible] ಇಷ್ಟರಲ್ಲಿಯೇ ಪ್ರಸಿದ್ಧಿ ಪಡಿಸಲ್ಪಟ್ಟಿದ್ದವು. [illegible] ಒದಗಿಬಂದಿದೆ. ಹೀಗೆ ಶಾಸ್ತ್ರದಂತೆ ಭವಿಷ್ಯ ಮಾಡುವವರು ತೀರ ವಿರಳರು. —

* * *

ಅನಾಹುತಗಳು.

ಕ್ರಾಂತಿಕಾರಕರ ಬಗ್ಗೆ ದೊರೆತ ಕೆಲವು ಮಾಹಿತಿಯ ಮೇಲಿಂದ ಗುರ್ಖಾ ಸೈನ್ಯ ಪಥಕವನ್ನೊಂದು ಕೊಂಡು, ಕಪ್ತಾನ [illegible]ರವರು [illegible] ಗ್ರಾಮಕ್ಕೆ ಕೂಚು ಮಾಡಿದರು. ಅಲ್ಲೊಂದು ಮನೆ ಸುಗ್ಗಿ [illegible] ಹತ್ತಿ ಕೆಲವರಿಗೆ ಸೆರೆಹಿಡಿಯಬೇಕೆನ್ನುವಷ್ಟರಲ್ಲಿ ಹವಾಲಿದಾರರ ಹಿಂಬದಿಯಿಂದ ಒಬ್ಬ ಕ್ರಾಂತಿಕಾರಕನು ಪಿಸ್ತೂಲ ಹಿಡಿದು ಬಂದು ಕಪ್ತಾನನಿಗೆ ಗುಂಡುಹಾರ[illegible] ಗುರ್ಖಾ ಜನರು ಅವನಿಗೆ [illegible] ಕೆಡವಿದರು ಆ ಮೇಲೆ ಇನ್ನೊಬ್ಬರು ಪೋಲೀಸ ದಳದ ಮೇಲೆ ಗುಂಡು ಹಾಕಿದರು ಪೋಲೀಸರಿಗೆ ಅಪಾಯವಾಗಲಿಲ್ಲ. ಡಿ| ಮೆಜಿಸ್ಟ್ರೇಟರ [illegible] ಪೋಲೀಸ [illegible] ತಪ್ಪಿದರು [illegible], ಇಬ್ಬರು ಹುಡುಗರಿಗೆ ಸೆರೆಯಾಗಿದ್ದ ಮನೆ ಝಡತಿ ಮಾಡಲು ತುಬಾಕಿಗಳು, ಗುಂಡುಗಳೂ ದೊರೆತವು [illegible] ಈಗ ಈ ಗ್ರಾಮದಲ್ಲಿ [illegible] ಮನೆಯಲ್ಲಿ ಇದೇ ರಾತ್ರಿ [illegible] ಸಮಯ [illegible] ಪ್ರತಿಯೊಬ್ಬರು [illegible] ದಂಗುರ [illegible] ಪೋಲೀಸ [illegible] ಪೋಲೀಸರಿದ [illegible]

* * *

[illegible] ಪ್ರಾಂತದಲ್ಲಿ [illegible] ಮನೆಯಲ್ಲಿ [illegible] ಜನರಿಗೆ ಎಲ್ಲ [illegible] ಮಾತ್ರ [illegible] ಪ್ರತಿಬಂಧಕ [illegible] ಬಲಾತ್ಕಾರ ಮಾಡಿದರು [illegible] ಪ್ರತಿಬಂಧ [illegible] ಅವರಿಂದ ಅವರು [illegible]

☞ ಮಕ್ಕಳಿದ್ದರೆ ಮನೆ ಚಂದ! ☜

ಮಕ್ಕಳ [illegible]

ಬಂಜೆತನದಿಂದ ಮುಕ್ತರಾಗುವಿರಿ!

ಗರ್ಭಧಾರಣ ಸಂಜೀವನೀ.

ಬಂಜೆ[illegible]

ಈ ನಮ್ಮ ಅನುಭವಿಕ ಔಷಧ ನೂರು ಜನರ ಅನುಭವದ ಬಗೆಗೆ ಪ್ರಶಂಸಾಪತ್ರ [illegible] ಮೂರು ದಿವಸ ತೆಗೆದುಕೊಂಡರೆ [illegible] ಪತ್ರಿಕೆ ಸಂಗಡ

ಪತ್ತೆ— ವೈದ್ಯ ವ್ಹಿ. ಎಸ್. [illegible], ಮಿರಜ. [illegible]

ಪೋಲೀಸ ರಾಜ್ಯಕ್ಕೆ ಸರ[illegible] ಮಾಹಾಸ್ತ್ರವು ಆ ನಿಯಮಗಳಿಂದ ಪೋಲೀಸರಿಗೆ [illegible] ಬ್ಬನಿಗೆ ೩, ಇತರನ್ನಿಬ್ಬರಿಗೆ ೨ ವರ್ಷಗಳ ಕಠಿಣ ಸಜೆ ವಿಧಿಸಲ್ಪಟ್ಟಿದೆ. ಈಗ ನಡೆಯುವ ಶಿಕ್ಷೆಯು ಸಾಲದು ಇದು ತೀರ ಕಡಿಮೆ ಎಂದು ಕಲಕತ್ತೆಯ ಅಮೃತಬಜಾರ ಪತ್ರಿಕೆಯು ಆಕ್ಷೇಪಿಸಿ 'ಈ ಪೋಲೀಸರಿಗೆ ಅಪರಿಮಿತ ಅಧಿಕಾರವಿತ್ತು ಅಂಥವರ ನಡತೆ ತೀರ ನಿರ್ಮಲವಿರಬೇಕು. ಅಧಿಕಾರವನ್ನು ಈ ಪರಿ ದುರುಪಯೋಗ ಮಾಡಿ ಭ್ರಷ್ಟರಾಗುವವರಿಗೆ ಇಷ್ಟು ಶಿಕ್ಷೆಯೋ ? ಸರಸ್ವತಿ ಜಜ್ಜರ ದಯೆಗೆ ಇವರು ಪಾತ್ರರೇ ?'' ಎಂಬುದಾಗಿ ಪತ್ರಿಕೆಯ ಪ್ರಶ್ನೆ. ಮುಂಬಯಿ ಕ್ರಾನಿಕಲ್ ' ಕೂಡ ಇದೇ ಪ್ರಕಾರ ಆಕ್ಷೇಪ ಮಾಡುತ್ತದೆ.

* *

ಚಿರನೇರಿನಲ್ಲಿ ಜಂಗಲ ಸತ್ಯಾಗ್ರಹ ನಡೆದಾಗ ಮೊಮಲೇದಾರರಾದ ರಾ| ಜೋಶಿಯವರೂ ಕೆಲ ಪೋಲೀಸ ಪೇದೆಗಳೂ, ಹಲವು ಸತ್ಯಾಗ್ರಹಿಗಳು ಗುಂಡಿನ ಪೆಟ್ಟಿಗೆ ಬಲಿಬಿದ್ದಿದ್ದರಷ್ಟೆ. ಆಕ್ಟೋಬರ ಪರ್ವತದ ಮೇಲೆ ಈ ಸತ್ಯಾಗ್ರಹ ನಡೆದಿತ್ತು. ಹೀಗೆ ಮಡಿದವರ ಸ್ಮಾರಕಕ್ಕಾಗಿ ಅಲ್ಲೊಂದು ಸ್ಮಾರಕ ಸ್ತಂಭ ರಚಿಸಲ್ಪಟ್ಟಿತ್ತು. ಇದು ೧೪೪ ಚೌಕಟ್ಟಿನ ಕಟ್ಟೆಯ ಮೇಲೆ ೧೧ ಅಡಿ ಎತ್ತರವಾಗಿ ಕಟ್ಟಿಸಿತ್ತು. ಇದನ್ನು ಕಟ್ಟಿಸಿದ್ದು ರಾ| ಪೌಳೀಯವರ ಜಾಗದಲ್ಲಿ. ಇದಕ್ಕಾಗಿ ಚಿರನೇರ ಸಿರಾತ್ರಿಕದ ಮಂಡಳಿಯವರು ಮುಂಬಯಿಯಲ್ಲಿಯೂ, ಇತರ ಕಡೆಗಳಲ್ಲಿಯೂ ನಿಧಿ ಒಟ್ಟುಗೂಡಿಸಿದ್ದರು. ಕಳೆದ ಜನವರಿ ತಾರೀಖು ೪ನೇಗೆ ನಾ| ವಿಠ್ಠಲಭಾಯ ಪಟೇಲರವರು ಈ ಸ್ಮಾರಕ ಸ್ತಂಭದ ಉದ್ಘಾಟನ ಸಮಾರಂಭ ಮಾಡಿದ್ದರು. ಇಂಥ ಸ್ತಂಭವನ್ನು ಕಳೆದ ಜೂನ ೭ನೇ ತಾರೀಖಿಗೆ ಕೆಡವಿದರು. ಇದೇನೆಂದು ಜನರಿಗೆ ತಿಳಿಯಲಿಲ್ಲವು. ಜೂನ ೭ನೇ ತಾರೀಖಿಗೆ ಕೆಲ ಪೋಲೀಸ ಅಧಿಕಾರಿಗಳೂ, ಮುಲ್ಕಿ ಅಧಿಕಾರಿಗಳೂ ಪನವೇಲಿನಿಂದ ಚಿರನೇರಿಗೆ ಹೋದರು. ಸ್ಮಾರಕ ಸ್ತಂಭ ನೋಡಿ ಹೋದರು ಜನರಿಗೇನೂ ತಿಳಿಯಲಿಲ್ಲ. ಮಾರನೇ ದಿನ ಅಲ್ಲಿ ಹೋಗಿ ಸ್ತಂಭದ ಸುತ್ತು-ಮುತ್ತು ಅಚೆ-ಈಚೆ ಪೋಲೀಸ ಬಂದೋಬಸ್ತಿಟ್ಟು ಇದೇ ದಿನ ಸ್ಮಾರಕ ಸ್ತಂಭದ ಸಿರ ಒಡೆದು ಸ್ತಂಭ ಕೆಡವಿದರು. ಆ ದಿನ ಸುತ್ತಮುತ್ತಲಿನ ಗ್ರಾಮದವರಿಗೆ ನೀರು ಸಹ ದೊರೆಯಲಿಲ್ಲ. ಯಾಕಂದರೆ ಗ್ರಾಮದವರಿಗೆ ನೀರು ಪೂರೈಕೆಯಾಗುವ ಬಾವಿ ಸ್ಮಾರಕ ಸ್ತಂಭದ ಬಳಿಯಲ್ಲಿಯೇ ಇತ್ತು. ಸರಕಾರ ಹಾಗು ಜನರ ಕಡೆಯಿಂದ ಸತ್ಯಾಗ್ರಹದಲ್ಲಿ ತೀರಿಕೊಂಡ ನಿರಪರಾಧಿಗಳ ಸ್ಮಾರಕಕ್ಕಾಗಿ ಈ ಸ್ತಂಭ ರಚಿಸಲಾಗಿತ್ತು—ಇಂಥ ಸ್ತಂಭ ಕೆಡಹಲು ಸರಕಾರದ ಅಪ್ಪಣೆಯಿರಲಿಕ್ಕಿಲ್ಲವಾಗಿ ಹೇಳುತ್ತಾರ ಇದಕ್ಕಾಗಿ ಸರಕಾರಿ ಸ್ಥಳದಲ್ಲಿ ಸ್ತಂಭವಿರಲಿಲ್ಲ ೬ ತಿಂಗಳ ವರೆಗೆ ಸ್ತಂಭ ನಿಂತಕೊಂಡಿತ್ತು ಆದರಿಂದ ಯಾರಿಗೂ ಏನೂ ತೊಂದರೆಯಾಗಿದ್ದಿಲ್ಲ ಇದೀಗಲೇ ಏನಾಯಿತೆಂದು ಯಾರಿಗೂ ತಿಳಿಯದ ಮಾತು. ಈ ಆಟ ನೋಡಿ ಎಲ್ಲರೂ ದಿಗಿಲುಬಿದ್ದಿದ್ದಾರೆ ಹಿಂದು-ಮುಸಲ್ಮಾನ-ಅಸ್ಪೃಶ್ಯ-ಹಿಂದುಳಿದವರು, ಅಂಬಿಗರು, ರೈತರು, ಎಲ್ಲರೂ ಈ ಅನಾಹುತ ಕೇಳಿ ಎಚ್ಚರಿಗೊಂಡಿದ್ದಾರೆ ಎಲ್ಲರೂ ನಿಷೇಧ ಪ್ರದರ್ಶನ ಮಾಡಿದರಾಗಿಯೂ, ವ್ಯಾಕುಲಗೊಂಡರಾಗಿಯೂ 'ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಪ್ರಕಟಿಸುತ್ತಾರ ಈ ಕುರಿತು ಅವಶ್ಯವಾಗಿ ಕಾಯಿದೆ ಇಲಾಜು ನಡಿಸಿ ಕಡವಿದ ಸ್ಮಾರಕ ಸ್ತಂಭ ಪುನಃ ಕಟ್ಟಿಸುವಂತೆ ಉಪಾಯ ಯೋಜನೆ ಮಾಡುವದಕ್ಕಾಗಿ ನಾರಾರಿಯ. ರಾ| ಪಾಲಾಸಾಹೇಬ ಕರಂದೀಕರ, ಪ| ಜಮುನಾದಾಸ ಮೆಹತಾ, ಡಾ| ಎಸ್. ಸಿ ಜೋಶಿ ಮೊದಲಾದವರು ಉಪಾಯ ಕೈಕೊಳ್ಳುವವರಿದ್ದಾರೆ

* *

ಅನಿಲ ಕುಮಾರ ದಾಸರವರು ಢಾಕ್ಕಾ ಸೆಂಟ್ರಲ್ ಜೈಲಿನಲ್ಲಿ ತೀರಿಕೊಂಡ ವಾರ್ತೆ ಬಹು ಕರುಣಾಜನಕವಿದೆ. ಢಾಕ್ಕಾ ಉಗಿಬಂಡಿಯಲ್ಲಿ ದರೋಡೆಯಾಗಿತ್ತು. ಆ ದರೋಡೆಯಲ್ಲಿ ಇವರ ಅಂಗವಿರುತ್ತದೆಂಬ ಸಂದೇಹದ ಮೇಲೆ ಜೂನ ೬ನೇ ತಾರೀಖಿಗೆ ಇವರಿಗೆ ಪೋಲೀಸರು ಹಿಡಿದು ಕಲಕತ್ತೆಗೆ ಒಯ್ದರು. ಆ ಕಾಲಕ್ಕೆ ಇವರು ಆರೋಗ್ಯದಿಂದಿದ್ದರು. ಜೂನ ೭ನೇ ತಾರೀಖಿಗೆ ಇವರಿಗೆ ಎಲ್ಲಿಗೋ ಒಯ್ದರು. ಜೂನ ೧೦ನೇ ತಾರೀಖಿಗೆ ಅನಿಲ ಕುಮಾರರ ತಾಯಿ ಅರ್ಜಿ ಮಾಡಿ ಮಗನಿಗೆ ಹಿಡಿದದ್ದು ಬೇಕಾಯಿದೇಶೀರ ಎಂದು ತಿಳಿಸಿ ಬಿಡುಗಡೆ ಮಾಡಬೇಕಾಗಿ ಬಿನ್ನೈಸಿದಳು. ೧೬ನೇ ತಾರೀಖಿಗೆ ಡಿ| ಮೆಜಿಸ್ಟ್ರೇಟರ ಮುಂದ ಅನಿಲಕುಮಾರನಿಗೆ ಹಾಜರ ಮಾಡಲು, '' ಲಾಲಬಾಗ ಪೋಲೀಸ ಠಾಣ್ಯದಲ್ಲಿ ನನಗೆ ಅನ್ನ ಸಿಗಲಿಲ್ಲ. ಜಳಕವಿಲ್ಲ, ನನಗ ಹೊಡೆದರು,'' ಹೀಗೆ ಹೇಳಿ ಅನೇಕರಿಗೆ ಬಾಸುಂಡೆ ತೋರಿಸಿದನು ಮೆಜಿಸ್ಟ್ರೇಟರು ಈತನ ಸಮಾಚಾರ ನೋಡಿ ತಕ್ಕ ಕೆಲ್ಸದೆಂದು ಬರೆದಿಟ್ಟರು ಜೂನ ೯ನೇ ತಾರೀಖಿನಿಂದ ಆತನಿಗೆ ಅನ್ನದ ಮೇಲೆ ಇಚ್ಛೆಯೇ ಇದ್ದಿಲ್ಲವಾಗಿ ಸರಕಾರಿ ಪ್ರಕಟಣೆ. ಪ್ರಾಂತಿಕ ಠಾಣ್ಯದಲ್ಲಿ ಹೊಡೆದದ್ದು ಸಂಪೂರ್ಣ ಸುಳ್ಳೆಂದ ಸರಕಾರಿ ಪ್ರಕಟಣೆ. ಜೂನ ೧೬ನೇ ತಾರೀಖಿಗೆ ಆತನಿಗೆ ಬೇಧಿ ಹಿಡಿಯಿತು, ಜೂನ ೧೭ನೇಗೆ ಆತನು ತೀರಿಕೊಂಡನು ಸರಕಾರಿ ವೈದ್ಯಾಧಿಕಾರಿಗಳು ಎಲ್ಲ ಉಪಚಾರ ನಡಿಸಿದಾಗ್ಯೂ, ಆತನಿಗೆ ಬದುಕಿಸಿಕೊಳ್ಳಲಾಗಲಿಲ್ಲವಾಗಿ ಸರಕಾರಿ ಪ್ರಕಟಣೆ. ಮರಣೋತ್ತರ ಮಾಡಿದ ಚೌಕಶಿಯಲ್ಲಿ ಮಿದುಳಿನ ವಿಕಾರವಾದದ್ದು ಕಂಡುಬಂತು ಅನಿಲಕುಮಾರನ ತಂದೆಗೂ ಹುಚ್ಚಿನ ವಿಕಾರವಿತ್ತೆಂದು ಸರಕಾರಿ ಪ್ರಕಟಣೆಯಲ್ಲಿ ಬರೆದಿದೆ. ಅನಿಲ ಕುಮಾರನು ಹೊಂತಕಾರಿ ಪುರುಷನು! ಈತನ ಅಜ್ಜ ರಾಯಬಹಾದ್ದೂರ ನಿಖಿಲನಾಥ ಬೋಸ್ ರವರು, ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿದ್ದರು. ಇವರ ತಂದೆ ಬಾಬು ನಿವಾರಣಚಂದ್ರ ದಾಸರವರು ಸಬರಜಿಸ್ಟ್ರಾರರಿದ್ದರು. ಇವರು ಘನವಾದ ಕುಟುಂಬದವರು. ಅನಿಲಕುಮಾರನು ತನ್ನ ೧೬ನೇ ವಯಸ್ಸಿನಲ್ಲಿಯೇ ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಇಡೀ ಕಲಕತ್ತಾ ವಿಶ್ವವಿದ್ಯಾಲಯದಲ್ಲಿ ೯ನೇ ನಂಬರ ಪಡೆದನು ಹಾಗೆಯೇ ೬ ವರ್ಷಗಳಲ್ಲಿ ಅಂದರೆ ೧೯[illegible]ನೇ ಇಸ್ವಿಯಲ್ಲಿ ಎಮ್. ಎಸ್. ಸಿ, ಎಂಬ ಶಾಸ್ತ್ರೀಯ ಪರೀಕ್ಷೆಯಲ್ಲಿ ಅತ್ಯುಚ್ಚ ಪದವಿ ಪಡೆದನು. ಬಹು ಸುಶೀಲನು, ಲೋಕೋಪಕಾರಿಯು, ಢಾಕ್ಕಾ ಕಾಲೇಜಿನಲ್ಲಿ ಕಲಿಯಬಂದ ಅನೇಕ ಬಡ-ಬಗ್ಗ ವಿದ್ಯಾರ್ಥಿಗಳಿಗೆ ಎಲ್ಲ ತರದಿಂದ ಈತನು ನೆರವಾಗಿದ್ದಾನೆ. ಸ್ವಾವಲಂಬನದಿಂದಲೇ ಜೀವನ ಮಾಡಬೇಕೆಂದು ಮುಂಚಿನಿಂದಲೂ ಈತನ ಆಕಾಂಕ್ಷೆ. ನೌಕರಿಗಾಗಿ ಈತನು ಹಂಬಲಿಸಲಿಲ್ಲ ಮಾಧ್ಯಮಿಕ ಶಾಲೆಗಳಿಗಾಗಿ ಈತನು ಭೂಮಿತಿಯ ಪುಸ್ತಕಗಳನ್ನು ಬರೆದನು ಇಂಗ್ಲ ಸರಕಾರ ಮನ್ನಣೆ ಪಡೆದ ಕ್ರಮಿಕ ಪುಸ್ತಕ ಮಂಡಳಿಯವರು ಶಾಲೆಗಳಿಗಾಗಿ ಮನ್ನಿಸಿದ್ದಾರೆ. ಬೀಜಗಣಿತ, ಅಂಕಗಣಿತ, ಆರೋಗ್ಯಶಾಸ್ತ್ರ ಮೊದಲಾದ ಶಾಸ್ತ್ರೀಯ ವಿಷಯಗಳ ಬಗ್ಗೆ ಬಂಗಾಲಿಗಳಲ್ಲಿ ಮೆಟ್ರಿಕ್ಯುಲೇಶನ್ ತನಕ ವರ್ಗಗಳಿಗಾಗಿ ಕ್ರಮಿಕ ಪುಸ್ತಕಗಳನ್ನು ಬರೆಯಬೇಕೆಂದು ಈತನ ಕಾಂಕ್ಷೆಯಿತ್ತು ಆದರೆ, ದೈವಸಂಕಲ್ಪವೇ ಬೇರ ಆಕಾಶದಲ್ಲಿ ಚಿಕ್ಕ ಥಕ್ಕನೆ ಮಿಂಚಿ ಗಿ, ಒಮ್ಮೆಲೆ ಕಡಕೊಂಡು ಬೀಳುವಂತೆ ೧೦-೧೨ ದಿನಗಳಲ್ಲಿ ಅನಿಲ ಕುಮಾರನು ತೀರಿಕೊಂಡನು ಸರಕಾರವು ಮಾಡಿದ ಉಪಚಾರಗಳೆಲ್ಲ ನಿರರ್ಥಕವಾದವು! ಅಹಾ! ದೈವದುರ್ವಿಪಾಕ!

* *

ಸರಕಾರಕ್ಕೊಂದು ಎಚ್ಚರಿಕೆ.

ಸಂಯುಕ್ತ ಪ್ರಾಂತಿಕ ಕಾಯಿದೆ ಕೌನ್ಸಿಲಿನಲ್ಲಿ ಅಧ್ಯಕ್ಷರಾದ ಸರ್ ಸೀತಾರಾಮರವರು ಸರಕಾರಿ ಸಭಾಸದರಿಗೆ ಒಳ್ಳೇ ಮುಂಜಾಗ್ರತೆ ಕೊಟ್ಟರು ಸಭಾಸದರು ಕೇಳಿದ ಪ್ರಶ್ನೆಗಳಿಗೆ ಸರಕಾರದಿಂದ ಸಪ್ರಮಾಣವಾಗಲಿ, ಅಸಮರ್ಪಕವಾಗಲಿ ಉತ್ತರವಾಗುವದಿಲ್ಲ ಪಂಡಿತ ಮೋತಿಲಾಲರ ಮಗಂದಿರಾದಿ ನಾಲ್ವ ಪ್ರಮುಖ ಸತ್ಯಾಗ್ರಹಿ ಕೈದಿಗಳ ಆರೋಗ್ಯ ಹೇಗಿದೆಂಬ ಪ್ರಶ್ನೆಗೆ ಸರಕಾರಿ ಸಭಾಸದರು ಈ ಅಧಿವೇಶನದಲ್ಲಿ ಉತ್ತರಕೊಡಬಯಸಲಿಲ್ಲ ಪ್ರಯಾಗದ 'ಪಾಯೋನಿಯರ' ಪತ್ರಿಕೆಗೆ ಪ್ರಶ್ನೆಸಹಾಯ ದಿನವಂತೆ ಸರಕಾರದ ಬಿಟ್ಟುಕೊಟ್ಟಿರುವದೇನಂಬ ಪ್ರಶ್ನೆಗೂ ಸರಕಾರವು ಉತ್ತರ ಕೊಡಬಯಸಲಿಲ್ಲ ನಾ| ಚಿಂತಾಮಣಿಗಳವರು ಈ ನಡತೆಯನ್ನು ನಿಷೇಧಿಸಿದರು, ಈ ನಡತೆಯು ಕಾಯಿದ ಕೌನ್ಸಿಲಿನ ಕ್ರಮಕ್ಕೆ ವಿರೋಧವಾದದ್ದೆಂದೂ ಅಭಿಪ್ರಾಯಪಟ್ಟರ ಮುಂದ ಕಾಯಿದ ಕೌನ್ಸಿಲಿನ ಅಧಿವೇಶನವಾಗುವದು ಅಕ್ಟೋಬರ ತಿಂಗಳಲ್ಲಿ ಆಗ ಈ ಪ್ರಶ್ನೆಗಳಿಗ ಉತ್ತರ ಕೊಟ್ಟು ಫಲವೇನು ? ಎಂಬದಾಗಿ ಅಧ್ಯಕ್ಷರು ನುಡಿದು ಕಾಲಹರಣದ ಕಾರಣ ಅನುಚಿತವಾದದ್ದೆಂದು ಅಭಿಪ್ರಾಯಪಟ್ಟು, ಸರಕಾರದ ಸಭಾಸದರು ಸುಧಾರಿಸದಿದ್ದರ ತಾವು ಅಧ್ಯಕ್ಷ ನಾತೆಯಿಂದ ಯುಕ್ತ ಕಂಡ ಇಲಾಜು ಕೈಕೊಳ್ಳಬೇಕಾದೀತಾಗಿ ಮುಂಜಾಗ್ರತೆ ಕೊಟ್ಟರು ಸರಕಾರದ ಪರವಾಗಿ ವ್ಯವಸ್ಥಾಪಕರ [illegible] ಮಾತು ಸ್ವತಃ ತಾವು ಎಲ್ಲ ಪ್ರಕಾರ ಚೌಕಸಿ ಮಾಡುತ್ತೇವಾಗಿ ನುಡಿದು ಮಾರನೇ ದಿನ ಸರಕಾರಿ ಸಭಾಸದರು ಉತ್ತರ ಕೊಟ್ಟರ — 'ಪಂಡಿತ ಮೋತಿಲಾಲರ ಮಗಂದಿರ ಪ್ರಕೃತಿ ನಾಲ್ವರ ಪ್ರಕೃತಿಯ ಮಾಹಿತಿ ಸರಕಾರಕ್ಕಿಲ್ಲ 'ಪಾಯೋನಿಯರ' ಪತ್ರಿಕೆಗಾಗಿ ಸರಕಾರದ ಬೆಂಬಲವಿಲ್ಲ'' ಹೀಗೆ ಉತ್ತರ ದೊರೆತವು ಕೆಲ ಹೊತ್ತಿನ ಮೇಲೆ 'ಪಾಯೋನಿಯರ' ಪತ್ರಿಕೆಯಲ್ಲಿ ಸರಕಾರಿ ಸಭಾಸದರೊಬ್ಬರ ಅಂಗವಿರುವದಾಗಿಯೂ, ಅವರ ಹೆಸರು ಈ ಮೊದಲೇ ಪ್ರಸಿದ್ಧವಿರುವದರಿಂದ ಉಲ್ಲೇಖ ಮಾಡುವದವಶ್ಯವಿಲ್ಲವಾಗಿಯೂ ಸರಕಾರದಿಂದ ಉತ್ತರ ಸಿಕ್ಕಿತು

— ಉಡುಪಿಯಲ್ಲಿ ವಿದೇಶಿ ಸಕ್ಕರೆ ಅಂಗಡಿಗಳ ಮುಂದೆ ಪಿಕೆಟಿಂಗ ಮಾಡಿದ ಪಹರೆಗಾರರಿಗೆ ಪೋಲೀಸರು ಸ್ಟೇಶನಿನಲ್ಲಿ ಒಯ್ದು ಹೊಡೆದರೆಂದು ಕುಂದಾಪುರದ ಮೆಜಿಸ್ಟ್ರೇಟ ಕೋರ್ಟಿನಲ್ಲಿ ಖಟ್ಲೆ ನಡೆದು ಪೋಲೀಸರ ಮೇಲೆ ಆರೋಪ ಹೊರಿಸಲಾಗಿದೆ. ಮುಂದಿನ ವಿಚಾರ ಕಳೆದ ತಾ. ೨೧ನೇಗೆ ಇತ್ತು

ಪುನಃ ಕಾರ್ಮೋಡ.

[ನಿರೀಕ್ಷಕನು ಬರೆದುದು]

ಅಹುದು; ಪುನಃ ಕಾರ್ಮೋಡ ಮುಸುಕಿ ಬಂದತ್ತ. ಕಳೆದ ವಾರದಲ್ಲಿ ನಿರಭ್ರ ತೋರಿದ ನಭೋಮಂಡಲದಲ್ಲಿ ಪುನಃ ಕಾರ್ಮೋಡಗಳು ಕವಿಕವಿದು ಒಂದಿವೆ. ರಾಜಾಸನಗಳ ಆಯುಷ್ಯ ನಾಳಿನ ಸೋಮವಾರ ತೀರುತ್ತದೆ. ಇದರಿಂದ ಎಲ್ಲ ರಾಜಾಸನಗಳನ್ನು ಒಟ್ಟುಗೂಡಿಸಿ ಪ್ರಚಂಡವಾದ ಒಂದೇ ಒಂದು ರಾಜಾಸನವನ್ನ ಸರ್ವಾಧಿಪತಿಗಳು ಹೊರಡಿಸಲಿರುವರಾಗಿ ಸಿಮ್ಲಾದೀಗಿನ ಬಿಸಿ ಬಿಸಿ ಸುದ್ದಿ! ಪರಿಸ್ಥಿತಿ ಬದಲಿತೆಂದು ಸಾಮ್ರಾಜ್ಯ ಸರಕಾರದ ಗ್ರಹಿಕೆಯಾಗಿಲ್ಲ. ರಾಜಾಸನಗಳು ಅವಶ್ಯವೆಂದು ಇನ್ನೂ ಭಾರತ ಮಂತ್ರಿಗಳ ಅಂಬೋಣ. ರಾಷ್ಟ್ರೀಯ ಸಭೆಯವರು ಕಾಯಿದೆಭಂಗದ ಅಸ್ತ್ರವನ್ನು ಮೊಟ್ಟಮೊದಲು ಬಿನ್‌ಶರ್ತ ಒರೆಯಲ್ಲಿ ಹಾಕಿದರೆ, ಭಾರತ ಮಂತ್ರಿಗಳು ಪ್ರಕೃತ ಪರಿಸ್ಥಿತಿಯನ್ನು ಪುನರಾಲೋಚಿಸಲು ಒಗ್ಗಲಿನ ಮೇಲೆ ಸಿದ್ಧರಿದ್ದಾರೆ. ಅವರ ವರೆಗೆ ಸಾಮೋಪಚಾರದ ಸವಿ ನುಡಿಗಳನ್ನು ಪ್ರತಿಪಕ್ಷದ ಬಳಿ ಸಾಮ್ರಾಜ್ಯ ಸರಕಾರವು ಎಂದಿಗೂ ಎತ್ತದು. ಶಾಂತಿದೂತರಾದ ಸರ್ ತೇಜಬಹಾದ್ದೂರ ಸಪ್ರುರವರೂ, ಬೆರಿಸ್ಟರ ಮುಕುಂದರಾವ ಜಯಕರರವರೂ ಸರ್ವಾಧಿಪತಿಗಳೊಡನೆ ಮಾತನಾಡಿದರು. ಸುಧಾರಣೆಯ ಶ್ವೇತಪತ್ರಿಕೆಯನ್ನಷ್ಟೇ ಚರ್ಚಿಸಿದರಂತೆ. ಯಾವ ಸಭೆ, ಯಾವಾಗ ಕೂಡಬೇಕು, ಯಾವಲ್ಲಿ ಕೂಡಬೇಕು, ಚರ್ಚೆಯ ವಿಷಯಗಳ್ಯಾವವು? ಎಂಬುದರ ಕುರಿತು ಸಂಭಾಷಣೆ ನಡೆಯಿತಂತೆ. ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಲದ ಸಭಾಸದರೂ ಈ ಕಾರ್ಯಕ್ಕೆ ಹಾಜರಿದ್ದರಂತೆ. ಹಾಗೆಯೇ ೧-೨ ದಿನ ಸಿಮ್ಲಾದಲ್ಲಿ ಉಳಿದು ಸೋಮವಾರ ಅಪರಾಹ್ನ ಅಲ್ಲಿಂದ ಹೊರಟು ಇರ್ವರೂ ಪುಣೆಗೆ ಹೋಗಿ ಗವ್ಹರ್ನರರ ಸತ್ಕಾರ ಪಡೆದು ಯೆರವಡಾ ಮಂದಿರಕ್ಕೆ ಹೋಗುವರಾಗಿ ಪುಣೆಯಲ್ಲಿ ಕಂಡ ಕಂಡವರು ಹೇಳುತ್ತಿದ್ದರು. ಆದರೆ, ಆ ವಾರ್ತೆ ದಿಟವಾಗಲಿಲ್ಲ. ಇಲ್ಲಿಗೆ ಸಪ್ರು ಜಯಕರರ ಶಿಷ್ಟಾಯಿಯ ವಾರ್ತೆ ಮುಗಿಯಿತು.

ರೌಂಡ ಟೇಬಲ್ ಪರಿಷತ್ತಿನ ಯೋಜನೆ ಈಗ ಬಿದ್ದುಹೋದಂತೆಯೇ. ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರು ರೌಂಡ ಟೇಬಲ್ ಪರಿಷತ್ತನ್ನು ಇನ್ನು ಸೇರಿಸಬಾರದಾಗಿ ಅಭಿಪ್ರಾಯಪಟ್ಟಿದ್ದಾರಂತೆ. ಆಗಸ್ಟ ತಿಂಗಳಲ್ಲಿ ಕೆಲವರನ್ನು ಹಿಂದುಸ್ಥಾನದಿಂದ ಕರೆಸಿಕೊಂಡು ಅವರೊಡನೆ ಆಲೋಚನೆ ಮಾಡಿ ಪ್ರಾಂತಿಕ ಸ್ವಾಯತ್ತತೆಯನ್ನಷ್ಟೇ ಕೊಡಬೇಕೆಂಬುದಾಗಿ ಸಾಮ್ರಾಜ್ಯ ಸರಕಾರದ ನಿರ್ಧಾರವಾಗಿರುವದಂತೆ. ಹಿಂದುಸ್ಥಾನ ಸರಕಾರದಲ್ಲಿ ಶಿರಸೋಳ ಖಾತೆಗಳನ್ನು ರಾಯಿಟ ಕೌನ್ಸಿಲಿಗೆ ಒಪ್ಪಿಸಿಕೊಡುವ ವಿಚಾರವೂ ನಡೆಯದಂತೆ! ಕಂದಾಯ ಖಾತೆಯಾಗಲಿ, ನ್ಯಾಯ ಖಾತೆಯಾಗಲಿ, ಖುಗಿಬಂದಿ ಇಲಾಖೆಯಾಗಲಿ, ಪರರಾಷ್ಟ್ರ ಇಲಾಖೆಯಾಗಲಿ ಕಾಯಿದೆ ಕೌನ್ಸಿಲಿನ ವಶವಾಗವು. ಈ ಯೋಜನೆಗೆ ಸರ್ ತೇಜಬಹಾದ್ದೂರ ಸಪ್ರುರವರಾಗಲಿ, ಡಾ|| ಜಯಕರರಾಗಲಿ ಒಪ್ಪಲಿಲ್ಲವಂತೆ! ಮುಖ್ಯ ಪ್ರಧಾನರಾದ ಎ.| ಮೆಕಡೊನಲ್ಡರವರು, ಸಾಮ್ರಾಜ್ಯ ಸರಕಾರದ ಪರವಾಗಿ ಡಿಸೆಂಬರ ೧ನೇ ತಾರೀಖಿಗೆ ಕೊಟ್ಟ ವಚನಕ್ಕೆ ಭಂಗ ಬಂತೆಂದು ಇವರು ವಾದಿಸಿದರು. ಮುಂದೆ ಕಷ್ಟವಾಗುವದೆಂದೂ ತಿಳಿಸಿದರಂತೆ. ಆದಾಗ್ಯೂ, ಸರ್ವಾಧಿಪತಿಗಳು ತಮ್ಮ ಉಪಾಯ ಸಾಗದೆಂದು ತಿಳಿಸಿದರಾಗಿಯೂ, ಸಾಮ್ರಾಜ್ಯ ಸರಕಾರದ ಆಜ್ಞೆಯನ್ನು ಶಿರಸಾವಹಿಸುವ ಪ್ರಸಂಗವಿರುವದಾಗಿಯೂ ತಿಳಿಸಿದರಂತೆ. ಇಂತು ಭಾರತ ಮಂತ್ರಿಗಳಿಗೂ, ಹಿಂದುಸ್ಥಾನ ಸರಕಾರಕ್ಕೂ ನಡೆದ ಹೋರಾಟದಲ್ಲಿ ಹೋರರೇ ಗೆದ್ದರು! ಸರ್ವಾಧಿಪತಿಗಳು ಸೋತರು! ಈ ಹೊತ್ತು ಸೋಮವಾರ, ಈ ಹೊತ್ತೇ ರಾಜ್ಯಸುಧಾರಣೆಯ ಯೋಜನೆಯ ಪ್ರಕಟಣೆ ಹೊರಡಬಹುದು. ಅಥವಾ ಇದೇ ವಿಷಯ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ನಡೆದು ರಾಜ್ಯಸುಧಾರಣೆಯ ಶ್ವೇತಪತ್ರಿಕೆ ಸರಕಾರದ ವಿದ್ಯಮಾನ ಪ್ರಕಟವಾಗುವದು. ಇನ್ನು ಒಂದು—ಮುಸಲ್ಮಾನರ ಪ್ರಾತಿನಿಧಿತ್ವದ ವಿಷಯ ನಿರ್ಣಯವಾಗಿಲ್ಲ. ಅದು ಜಾತಿವತ್ತಿ ಮುಸಲ್ಮಾನ ಪ್ರತಿನಿಧಿಗಳ ಅಂಬೋಣದಂತೆ ನಿರ್ಣಯಿಸಲ್ಪಡುವದಂತೆ. ಹಿಂದುಸ್ಥಾನ ಸರಕಾರವು ಅನರ್ಗಸೂಚಕವಾಗಿಯೇ ರಿಪೋರ್ಟ ಮಾಡಿರುವದಂತೆ. ಸರಕಾರಿ ಕಾರ್ಯಕಾರಿ ಮಂಡಳದ ಒಂದು ಸಭಾಸದರಾದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರೂ, ಸರ್ ನೃಪೇಂದ್ರ ಮಿತ್ರರವರೂ ಇದನ್ನು ವಿರೋಧಿಸಿ ಒಂದು ಜನಾಂಗಕ್ಕೆ ಅನ್ಯಾಯವಾಗುತ್ತಿದ್ದಾಗಿ ಪ್ರತ್ಯೇಕವಾದ ವಿಶೇಷ ಪತ್ರಿಕೆಯನ್ನು ಜೋಡಿಸಿದ್ದಾರಂತೆ. ಆದಾಗ್ಯೂ, ಹೋರರವರು ಪೂರ್ವಸಂಕೇತದಂತೆ, ಡಾ|| ಶಫತ ಅಹ್ಮದಖಾನ, ಸರ್ ಫಜಲಿ ಹುಸೇನ ಮೊದಲಾದ ಮುಸಲ್ಮಾನ ಜಾತ್ಯಭಿಮಾನಿಗಳ ಅಪೇಕ್ಷೆಯಂತೆ ನಿರ್ಣಯ ಕೊಡುವರೆಂದು ನನ್ನ ಗ್ರಹಿಕೆ. ಯಾಕೆಂದರೆ, ಹೋರರ ಪ್ರಾಂತಿಕ ಸ್ವಾಯತ್ತತೆಯ ಯೋಜನೆಗೆ ಯಾರದೂ ಪುರಸ್ಕಾರವಿಲ್ಲ. ಸರ್ ಚಿಮಣಲಾಲ ಸೆಟಲವಾಡ, ಸರ್ ಕಾವಸಜಿ ಜಹಾಂಗೀರ, ಪಂಡಿತ ಹೃದಯನಾಥ ಕುಂಝುರುರವರಂಥ ನೇಮಸ್ತಪಕ್ಷದವರು ವಿರೋಧಿಸುತ್ತಾರೆ. ಮುಂಬಯಿಯ 'ಟೈಮ್ಸ ಆಫ ಇಂಡಿಯಾ' ಪತ್ರಿಕೆಗೂ, ರೌಂಡ ಟೇಬಲ್ ಪರಿಷತ್ತಿನ ಘಾತವಾದದ್ದು ಸೇರದಾಗುವದಿಲ್ಲ. 'ದೇಶದಲ್ಲಿ ಅಸಮಾಧಾನಕ್ಕೆ ಒಳಗಾಗಲಿಲ್ಲ. ಈ ಸಂಕುಚಿತ ರಾಜ್ಯಾಧಿಕಾರದ ಯೋಜನೆ ಪ್ರಸಕ್ತವಿದೆ. ಅಸಮಾಧಾನವನ್ನು ಇನ್ನು ಬೆಳೆಸಬೇಡಿ,' ಎಂಬುದಾಗಿ 'ಟೈಮ್ಸ' ಪತ್ರಿಕೆಯು ಮುಂಜಾಗ್ರತೆ ಕೊಡುತ್ತದೆ. ಪುಣೆಯ ಭಾರತ ಸೇವಕ ಸಮಾಜವು ಸಾಮ್ರಾಜ್ಯ ಸರಕಾರಕ್ಕೆ ಕೈತಡೆಯಹೇಳುತ್ತದೆ. ಇಂಥ ಪ್ರಸಕ್ತಿಗಳಲ್ಲಿ ಹೋರರವರ ಯೋಜನೆಗೆ ಯಾರಾದರೊಬ್ಬ ಪುರಸ್ಕರ್ತರು ಬೇಕೇ ಬೇಕು. ಜಾತ್ಯಾಭಿಮಾನಿಗಳಿಗಾದರೂ ಸಂತೈಸಿದರೆ ಅವರು ಸ್ವಾರ್ಥಪರಾಯಣರಾಗಿ ಯೋಜನೆಗೆ ಆಶ್ರಯ ಕೊಡಲಾರದಲ್ಲವೇ? ಎಂಬ ತಿಳುವಳಿಕೆಯಿಂದ ಅರಾಷ್ಟ್ರೀಯ ಮುಸಲ್ಮಾನಾದಿ ಜಾತ್ಯಾಭಿಮಾನಿಗಳ ಹೇಳಿಕೆಗೆ ಸಾಮ್ರಾಜ್ಯ ಸರಕಾರವು ಕಿವಿಗೊಡುವದಾಗಿ 'ಫ್ರೀ ಪ್ರೆಸ್' ಪತ್ರಿಕೆಯ ಸಿಮ್ಲಾ ಸುದ್ದಿಗಾರರು ವರ್ತಿಸಿದ ಭವಿಷ್ಯ ನಿಜವಾಗುವದೆಂದು ನನಗನಿಸುತ್ತದೆ.

ಈ ಸುಧಾರಣೆ ಯಾವಾಗ ಎರುವದು? ಎಂಬುದೊಂದು ಪ್ರಶ್ನೆ ಉಂಟಾಗುವದು ಸಹಜ. ಈ ಮಳೆಗಾಲದಲ್ಲಿ ಕಾಯಿದೆಯ ಒಕ್ಕಣಿಕೆ ತಯಾರಾಗುವದು. ನವೆಂಬರ ತಿಂಗಳಲ್ಲಿ ಪಾರ್ಲಿಮೆಂಟಿನಿಂದ ಮಾನ್ಯತೆ ಪಡೆಯುವದು, ೧೯೩೩ನೇ ಇಸ್ವಿಯಲ್ಲಿ ಹೊಸ ಸುಧಾರಣೆಗಳನ್ನು ಇಲೆಕ್ಷನು ನಡೆಯುವದು; ಹೀಗೊಂದು ಭವಿಷ್ಯ ವರ್ತಿಸಲ್ಪಟ್ಟಿತ್ತು. ಆದರೆ, 'ಮುಂಚೆಸ್ಟರ ಗಾರ್ಡಿಯನ' ಪತ್ರಿಕೆಯ ಲಂಡನಿನೊಳಗಿನ ಸ್ವಂತ ಪ್ರತಿನಿಧಿಗಳು ಸುಧಾರಣೆ ಕಾಯಿದೆಯ ಕ್ರಮವನ್ನು ಸೂಚಿಸಿದ್ದಾರೆ. ಈ ಮಳೆಗಾಲದಲ್ಲಿ ಕಾಯಿದೆಯ ಒಕ್ಕಣಿಕೆ ತಯಾರಾಗುವದು. ಆ ಮೇಲೆ 'ಫರ್ರಿಣ'ರಿಗೂ, ತಜ್ಞರಿಗೂ ಸಾಮ್ರಾಜ್ಯ ಸರಕಾರವು ಕರಿಸಿ ಆಲೋಚನೆ ಮಾಡುವದು. ನೇಮಸ್ತ ರಾಷ್ಟ್ರೀಯ ಸಭೆಯವರು ಸಭೆ ಕೂಡತಯಾರಿದ್ದರೆ ಅವರಿಗೂ ಕರಿಸಿ ಆಲೋಚನೆಯಾಗುವದು. ಆ ಮೇಲೆ ಪಾರ್ಲಿಮೆಂಟಿನಿಂದ ಒಂದು ಮಂಡಳ ನೇಮಿಸಿ ಚರ್ಚೆ ನಡೆಯುವದು. ಒಕ್ಕಣಿಕೆಯು ೧೯೩೩ನೇ ಇಸ್ವಿಯ ಮಾರ್ಚ—ಏಪ್ರಿಲ್ ತಿಂಗಳಲ್ಲಿ ಕಾಯಿದೆಯಾಗಿ ಪರಿಣಮಿಸುವದು. ೧೯೩೩ನೇ ಇಸ್ವಿಯ ಡಿಸೆಂಬರ ತಿಂಗಳಲ್ಲಿ ನೂತನವಾದ ರಾಜ್ಯ ಸುಧಾರಣೆಯ ವ್ಯವಸ್ಥಾಂತರಕ್ಕೆ ಪ್ರಾರಂಭವಾಗುವದು. ಸಂಯುಕ್ತ ರಾಜ್ಯಪದ್ಧತಿಗೆ ಪ್ರಾರಂಭವಾಗಲು ಇನ್ನೆರಡು ವರ್ಷ ಕಳೆಯುವವು. ೧೯೩೫ನೇ ಇಸ್ವಿಯ ವಸಂತಋತುವಿಗೂ ಮುಂಚಿತವಾಗಿ ಅದು ಪ್ರಾರಂಭವಾಗುವ ಲಕ್ಷಣಗಳಿಲ್ಲ. ಪ್ರಾಂತಿಕ ಕಾಯಿದೆ ಕೌನ್ಸಿಲುಗಳ ಇಲೆಕ್ಷನಿನಲ್ಲಿ ಸರಕಾರಕ್ಕನುಕೂಲವಾಗುವಂತೆ ಸತ್ಯಾಗ್ರಹ ಕೈದಿಗಳ ಬಿಡುಗಡೆಯಾಗುವದು. ಇನ್ನು ಅಂದರೆ, ಇನ್ನೊಂದು ವರ್ಷವಾದರೂ ಹೀಗೆಯೇ ಕಳೆಯುವದು. ಇಲೆಕ್ಷನಿನ ಸಮಯಕ್ಕಾದರೂ ಸತ್ಯಾಗ್ರಹಿಗಳಿಗೆ ಖಂಡಿತವಾಗಿ ಬಿಡುಗಡೆಯಾಗುವದೆಂದು ನಾನು ಹೇಳಬಲ್ಲೆ. 'ಗಾರ್ಡಿಯನ' ಪತ್ರಿಕೆಯ ಇಷ್ಟಾನಿಷ್ಟತೆಯ ವಿಚಾರವನ್ನು ನಾ ಅರಿಯೆ. ಕಲಕತ್ತೆಯ 'ಸ್ಟೇಟ್ಸಮನ್' ಪತ್ರಿಕೆಯು ಸತ್ಯಾಗ್ರಹಿಗಳಿಗೆ ಬಿಡುಗಡೆ ಮಾಡಬಾರದಾಗಿ ಸೂಚಿಸುತ್ತದೆ— "ಸತ್ಯಾಗ್ರಹಿಗಳಿಗೆ ಬಿಡುಗಡೆ ಮಾಡಿದೊಡನೆ ಅವರೆಲ್ಲರೂ ತಮ್ಮ ಅಭಿಪ್ರಾಯದಂತೆ ರಾಜ್ಯಭಾರ ನಡಿಸಬೇಕೆನ್ನುವರು, ಬ್ರಿಟಿಶ ಅಭಿಪ್ರಾಯದಂತೆ ರಾಜ್ಯಭಾರ ನಡಿಸಗೊಡರು. ಅಂಥವರಿಗೆ ಬಿಡುಗಡೆ ಮಾಡಿ ಫಲವೇನು?" ಹೀಗೆ 'ಸ್ಟೇಟ್ಸಮನ' ಪತ್ರಿಕೆಯ ಸವಾಲು. ಸಾಮಾನ್ಯವಾಗಿ ಸರಕಾರದ ಮನೋಭಿಪ್ರಾಯವನ್ನೇ ಸರಕಾರ ಪಕ್ಷಪಾತಿ 'ಸ್ಟೇಟ್ಸಮನ್' ಪತ್ರಕರ್ತರು ಸೂಚಿಸಿದ್ದಾರೆಂದು ನನಗನಿಸುತ್ತದೆ. ಅವಾಗಿ ಪರಾಂಬರಿಸಿದರೆ, ಇದು ಸುಸಂಗತವಾದದ್ದೇ. ಈಗಲೂ ಸೆರೆಹಿಡಿಯುವ, ಶಿಕ್ಷೆ ವಿಧಿಸುವ, ಬಿಟ್ಟಿ ಮಾಡುವ ಗಲಾಟೆ ನಡೆದದೆ, ಅದಕ್ಕೆ ತುಂಡಿಲ್ಲ. ಬಿಡುತ್ತಾರೆ, ಹಿಡಿಯುತ್ತಾರೆ, ಮೊದಲಾದ ಕ್ರಮ ವಿಕಸನವೇ ನಡೆದದೆ. ರಾಜಾಸನಗಳು ಈಗ ಪ್ರಾರಂಭವಾದಂತೆ ಕಾರ್ಯಾಂತರ ನಡೆದಿದೆ. ದೀಪ ನಂದಿಹೋಗುವಾಗ ದೆಪ್ಪನೆ ಬೆಳಕು ಕೊಟ್ಟು ಹಠಾತ್ ನಂದಿಹೋಗುವಂತೆ ಕ್ಷೀಣಾಯುಷ್ಯದ ರಾಜಾಸನಗಳು ವರ್ತಿಸಹತ್ತಿವೆಂದು ಒಮ್ಮೆ ಅನುಮಾನ ಏರುತ್ತದೆ. ಕಲಕತ್ತೆಯ 'ಎಡ್ವಾನ್ಸ' ಪತ್ರಿಕೆಯು ಈ ಅನುಮಾನಕ್ಕೊಂದು ಆಧಾರ ಕೊಟ್ಟಿದೆ. ಸತ್ಯಾಗ್ರಹಿ ಕೈದಿಗಳಿಗೆ ಜುಲೈ ತಾ ೧ನೇಗೆ ಬಿಡುಗಡೆ ಮಾಡಬೇಕೆಂಬ ವಿಚಾರದಲ್ಲಿ ತನ್ನ ಎಂಗಾಲ ಸರಕಾರವು ತೊಡಗಿರುವದಾಗಿಯೂ, ಆ ದೊರೆಗಳ

ಕ್ಕನುಸಾರವಾಗಿಯೇ ಶಿಕ್ಷೆಯ ಅವಧಿ ಮುಗಿಯುವ ಮುಂಚೆ ಅನೇಕ ಕೈದಿಗಳಿಗೆ ಜೇಲಿನಿಂದ ಬಿಡುಗಡೆಯಾಯಿತಾಗಿಯೂ 'ಎಡ್ವಾನ್ಸ' ಪತ್ರಿಕೆಯ ವಾರ್ತೆ. ಹಾಗೆಯೇ ದಿನಜಾಪುರ ಕೊಂಗ್ರೆಸ ಕಮಿಟಿಯು ಜಪ್ತಾದ ಫಂಡಗಳನ್ನು ತಿರುಗಿ ಪಡೆಯಬೇಕಾಗಿ ಕೊಂಗ್ರೆಸ ಕಮಿಟಿಯ ಉಪಾಧ್ಯಕ್ಷರಾದ ಶ್ರೀ| ಜೋಗೇಂದ್ರ ಚಕ್ರವರ್ತಿಯವರಿಗೆ ಬಂಗಾಲ ಸರಕಾರದ ಅಪ್ಪಣೆ. ಹೋರರವರ ಯೋಜನೆಗೆ ಜೈಲಿನಲ್ಲಿದ್ದ 'ನೇಮಸ್ತ ರಾಷ್ಟ್ರೀಯ'ರ ಬೆಂಬಲ ಪಡಕೊಳ್ಳುವ ಯೋಜನೆ ನಡೆದವಾಗಿ ಮಿ| ಹೊರ್ನಿಮನ್‌ರ ತರ್ಕ. ಇವರ ಮೇಲಿಂದ ಸತ್ಯಾಗ್ರಹಿ ಕೈದಿಗಳನ್ನು ಬಿಡುಗಡ ಮಾಡಿ ಸರಕಾರದ ಔದಾರ್ಯ ತೋರಿಸುವ ಸುಸಂಧಿಯನ್ನು ಸರಕಾರವು ಕಳಕೊಳ್ಳಲಿಕ್ಕಿಲ್ಲವಾಗಿ ಕೆಲ ದೀರ್ಘಾಲೋಚಕರ ಅಂಬೋಣ. ಸತ್ಯ ಯಾವುದು? ದಿಟವ್ಯಾವುದು? ನಾನರಿಯೆ.

ಇದೇ ಸಮಯ ಲೋಕಪೂಜ್ಯರು ಯೆರವಡಾ ಮಂದಿರದಿಂದ ಬರೆದ ಒಂದು ಪತ್ರ ಪ್ರಕಟವಾಗಿದೆ. ಇದು ಕಳೆದ ಸಂಚಿಕೆಯಲ್ಲಿ ಉಲ್ಲೇಖಿಸಿದಂತೆ, 'ಇಂಡಿಯಾ ರಿಕನ್ಸಿಲಿಯೇಶನ್ ಗ್ರೂಪ' ಯಾನೆ 'ಹಿಂದೀ ಸಾಮೋಪಚಾರ ಸಂಘ'ದ ಮಿ| ಪರ್ಸೀ ಬಾರ್ಟಲೆಟ್‌ರವರಿಗೆ ಬರೆದದ್ದು. ಮಿ| ಬಾರ್ಟಲೆಟ್‌ರವರು ಹಿಂದುಸ್ಥಾನಕ್ಕೆ ಒಂದು ರಾಜಕೀಯ ಸ್ಥಿತಿ ತಿಳಕೊಂಡು ಶಾಂತತೆಯ ಆವಶ್ಯಕತೆ ಗ್ರಹಿಸಿಕೊಂಡಿದ್ದರ ಲೋಕಪೂಜ್ಯರು ಬರೆಯುವದೇನೆಂದರೆ.—

> "ಸಾಮೋಪಚಾರಕ್ಕೂ, ಸಂಧಿಗೂ ನಾನು ಎಲ್ಲರಿಗಿಂತಲೂ ಮುಂದ! ಅವಕ್ಕೆ ಧಕ್ಕೆ ತರುವಂಥ ಯಾವದೇ ಕೃತ್ಯವನ್ನು ನಾನೆಂದಿಗೂ ಮಾಡುವವನಲ್ಲ, ಈ ಬಗ್ಗೆ ನೀವು ಎಳ್ಳಷ್ಟು ಸಂದೇಹಪಡಬಾರದು. ರಾಷ್ಟ್ರದ ಸ್ವಾಭಿಮಾನಕ್ಕೆ ಭಂಗ ಬರದಂತ ಸಾಮೋಪಚಾರಕ್ಕೂ ಸಂಧಿಗೂ ಅನುಕೂಲವಾಗಿಯೇ ನಾನು ವರ್ತಿಸುವೆನು. ಇದಕ್ಕೂ ಹೆಚ್ಚಿಗೆಯಾಗಿ ಜೈಲು ನಿರ್ಬಂಧದಲ್ಲಿ ನಾನು ಬರೆಯಲಾರೆ."

ಈ ಪತ್ರ ಲಂಡನಿನ 'ಟ್ಯಾಯಿಮ್ಸ' ಪತ್ರಿಕೆಯಲ್ಲಿ ಕಳೆದ ಬುಧವಾರವೇ ಪ್ರಕಟವಾಗಿದೆ. ಇದರಿಂದ ಮಾಲ್ಯಾಗುವದು [illegible] ಲೋಕಪೂಜ್ಯರ ಪತ್ರದಿಂದ ಉಂಟಾದ ಸಂಧಿಯನ್ನು ಸಾಮ್ರಾಜ್ಯ ಸರಕಾರವು ಹೋಗಲಾಡಿಸದೆ ಪ್ರಯೋಜನ ಪಡೆಯಬೇಕಾಗಿ ಯಾರ್ಕದ ಆರ್ಕಬಿಶಪರೂ, ಒಕ್ಸಫರ್ಡ ವಿಶ್ವವಿದ್ಯಾಲಯದ ಬೆಲಿಯಲ್ ಕಾಲೇಜಿನ ಮುಖ್ಯಾಧ್ಯಾಪಕರಾದ ಡಾ| ಎ. ಡಿ. ಲಿಂಡಸೇಯವರೂ, ಪ್ರೊ| ಗಿಲ್ಬರ್ಟ ಮರೇಯವರೂ, ಸರ್ ಫ್ರಾನ್ಸಿಸ್ ಯಂಗಹಜಬಂಡರವರೂ ಬರೆಯುತ್ತಾರೆ. ಲಂಡನಿನ 'ಟ್ಯಾಯಿಮ್ಸ' ಪತ್ರಿಕೆಯು ಈ ಪತ್ರಗಳಿಗೆ ಪ್ರಾಮುಖ್ಯವಾಗಿ ಎಡೆಗೊಟ್ಟಿರುವದರಿಂದ ಲೋಕಪೂಜ್ಯರ ವಚನಾಧಾರದ ಮೇಲೆ ಒಡಂಬಡಿಕೆಯ ಪ್ರಯತ್ನಗಳು ಪುನಃ ಪ್ರಾರಂಭವಾಗುವವಾಗಿ ಹಲವರ ಊಹೆ. "ಆದರೆ, ಇದರಿಂದ ಸ್ಥಿತ್ಯಂತರವಾಗಿಲ್ಲ. 'ರಾಷ್ಟ್ರದ ಸ್ವಾಭಿಮಾನಕ್ಕೆ ಭಂಗ ಬರದಂತೆ' ಎಂಬ ಶಬ್ದಗಳು ರಾಷ್ಟ್ರೀಯ ಸಭೆಯ ಮೂಲ ಧೋರಣವನ್ನೇ ಸ್ಥಿರಪಡಿಸುತ್ತವೆ. ಈ ಶಬ್ದಗಳ ಅರ್ಥ ಸ್ಪಷ್ಟವಿಲ್ಲ. ಸತ್ಯಾಗ್ರಹಕ್ಕೆ ತಡ ಹಾಕುವ ಲಕ್ಷಣ ತೋರುವದಿಲ್ಲ. ಸತ್ಯಾಗ್ರಹ ಪ್ರವೃತ್ತಿ ಇರುವ ತನಕ ಒಡಂಬಡಿಕೆಯ ಮಾತನೆತ್ತಲಾಗದೆಂದು ಭಾರತ ಮಂತ್ರಿ ಸರ್ ಸೆಮ್ಯುಅಲ್ ಹೋರರವರು ಕಳೆದ ಫೆಬ್ರುವರಿ ೨೯ನೇ ತಾರೀಖಿಗೆ ಪಾರ್ಲಿಮೆಂಟಿನಲ್ಲಿ ನುಡಿದಿದ್ದಾರೆ. ಲೋಕಪೂಜ್ಯರ ಪತ್ರದಿಂದ ಸಂಧಿ ಪ್ರಸ್ತಾಪಿಗೆ ಹೊಸ ಮಾರ್ಗ ದೊರೆಯಲಿಲ್ಲ." ಹೀಗೆ ಸರಕಾರಿ ಪಕ್ಷದ 'ಎಸೋಸಿಯೇಟೆಡ್ ಪ್ರೆಸ್' ವಾರ್ತಾವಾಹಕರ ಸುದ್ದಿ. ಬೆರಿಸ್ಟರ ಸಪ್ರು-ಜಯಕರರವರ ಸಿಮ್ಲಾ ಯಾತ್ರೆಯಿಂದ ಅಘಟಿತ ಘಟನೆಗಳು ಒದಗಿಬರುವವಾಗಿ ಕಳೆದ ವಾರ ಭವಿಷ್ಯ ಹೇಳಿದ ಸಿಮ್ಲಾ ಸುದ್ದಿಗಾರರೇ ಈ ವಾರ ಈ ಪ್ರಕಾರ ನಿರಾಶರಾಗಿದ್ದಾರೆ. ಅಂಥಲ್ಲಿ 'ನಿರೀಕ್ಷಕ'ನವೇನು ಮಾಡು?

ಆದಾಗ್ಯೂ, ಆಶಾತಂತುವು ಇನ್ನೂ ಸಂಪೂರ್ಣವಾಗಿ ಹರಿದು ಹೋಗಲೊಲ್ಲದು. ಭಾರತ ಸೇವಕ ಸಮಾಜದ ಪರವಾಗಿ ಅಧ್ಯಕ್ಷರಾದ ರಾ| ಗೋಪಾಲರಾವ ದೇವಧರರವರೂ, ಉಪಾಧ್ಯಕ್ಷರಾದ ಪಂಡಿತ ಹೃದಯನಾಥ ಕುಂಜ್ರುರವರೂ, ಇತರ ಒಬ್ಬಿಬ್ಬರೂ ಕಳೆದ ಜೂನ ೧೮ನೇ ತಾರೀಖಿಗೆ ಯೆರವಡಾ ಜೈಲಿನಲ್ಲಿದ್ದ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸೌ| ...... ಯವರಿಗೆ ಭೆಟ್ಟಿಯಾದರು. ಶಾಂತಿದೂತರಾಗಿಯೇ ಇವರು ಹೋಗಿದ್ದರೆಂದು ದೇಶತುಂಬ ವಾರ್ತೆ. "ಯಾವದೊಂದು ರಾಜಕಾರ್ಯಕ್ಕಾಗಿ ನಾವು ಹೋಗಿರಲಿಲ್ಲ. ವ್ಯಕ್ತಿಕಾರ್ಯಕ್ಕಾಗಿ ನಾವು ಹೋಗಿದ್ದೆವು" ಹೀಗೆ ಪಂ| ಕುಂಜ್ರುರವರ ಪ್ರಕಟಣೆ. ಖಾಸಗಿ ಕಾರ್ಯದ ರೂಪರೇಷೆಯೇನೆಂದು ಕೇಳಿದರೆ, ನಾನರಿಯೆನೆಂದು ಹೇಳುತ್ತೇನೆ; ಯಾಕೆಂದರೆ, ಪಂಡಿತ ಕುಂಜ್ರುರವರು ಹೇಳಲಿಲ್ಲ. ಆದರೆ, ಅದೇ ದಿನ ಅವರೊಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. "ಹಿಂದುಸ್ಥಾನಕ್ಕೆ ಕನಿಷ್ಟ ಎಷ್ಟು ರಾಜ್ಯಾಧಿಕಾರ ಬೇಕು? ಎಂಬ ಕುರಿತು ಭಾರತ ಸೇವಕ ಸಮಾಜವು ಸದ್ಯಕ್ಕೇ ಒಂದು ಪ್ರಕಟಣೆ ಹೊರಡಿಸಲಿಕ್ಕಿದೆ. ಅನಕ ವರೆಗೆ ಸರಕಾರವು ಕೈತಡೆಯಬೇಕು. ಕೈ ತಡೆಯದೆ ಒಡಂಬಡಿಕೆಗೆ ಇನ್ನು ಹೆಚ್ಚಿನ ವಿಘ್ನಗಳನ್ನುಂಟು ಮಾಡಲಾಗದು" ಹೀಗೆ ಪಂಡಿತ ಕುಂಜ್ರುರವರು ಪ್ರಕಟಿಸಿದ್ದರ ಅರ್ಥವೇನು? "ತಮ್ಮ ಪ್ರಕಟಣೆಯಿಂದ ಇತ್ತಿಟ್ಟಿನಲ್ಲಿ ಸಂಧಿಯಾಗಲು ಅನುಕೂಲವಾಗುವದಾಗಿ"ಯೂ ಪಂಡಿತ ಹೃದಯನಾಥ ಕುಂಜ್ರುರವರು ಪ್ರಕಟಿಸುತ್ತಾರೆ. ಭಾರತ ಸೇವಕ ಸಮಾಜದ ಅಧ್ಯಕ್ಷರಾದ ಗೋಪಾಲರಾವ ದೇವಧರರವರೂ ರಾಜಶಾಸನಗಳನ್ನು ಪುನರುದ್ಧರಿಸದೆ ಮನಸ್ಪೂರ್ತಿಕೆಗೆ ಅನುಕೂಲ ವಾತಾವರಣವನ್ನುಂಟು ಮಾಡಲು ಸರಕಾರಕ್ಕೆ ವಿನ್ನೈಸಿಕೊಳ್ಳುತ್ತಾರೆ. ಮುಂಬಯಿಯ 'ಟ್ಯಾಯಿಮ್ಸ ಆಫ್ ಇಂಡಿಯಾ' ಪತ್ರಿಕೆಯೂ, ರೌಂಡ ಟೇಬಲ್ ಪರಿಷತ್ತಿನ ಮರ್ಮಾಘಾತ ಮಾಡಬಾರದಾಗಿ ಸರಕಾರಕ್ಕೆ ಹೇಳುತ್ತದೆ. ಮುಂಬಯಿಯ ಮಿ| ಎಮ್. ಆಯ್. ಡೇವಿಡ್ ಎಂಬ ಯುರೋಪಿಯನ್ ಪ್ರಮುಖರು ಮುಂಬಯಿಯ 'ಟ್ಯಾಯಿಮ್ಸ' ಪತ್ರಿಕೆಯಲ್ಲಿ ಬರೆದ ಪತ್ರ ಬೋಧಪ್ರದವಿದೆ. "ಹೋರಾಟ ಸಾಕು; ಇನ್ನು ಬೇಡ. ಬಹಳ ಕಾಲ ನಡೆಯಿತು, ಇನ್ನೂ ಈ ಹೋರಾಟ ನಡೆಯಗೊಟ್ಟಲ್ಲಿ ಇತ್ತಿಟ್ಟಿನಲ್ಲಿಯೂ ಮುಕ್ತದ್ವಾರಗಳಿಲ್ಲವೆಂದು ಲೋಕಾಪವಾದವಾಗುವದು ಕಾರಣ, ಕೈ ತಡೆಯಿರಿ. ಅಷ್ಟಮಾರ್ಗ ಹಿಡಿಯಬೇಡಿ; ಕಷ್ಟ—ನಷ್ಟಗಳಿಗೆ ಗುರಿಯಾಗಬೇಡಿ" ಹೀಗೆ ಮಿ| ಡೇವಿಡ್‌ರವರು ಸರಕಾರಕ್ಕೆ ಬುದ್ಧಿ ಹೇಳಿ ಪ್ರಾಂತಿಕ ಸ್ವಾಯತ್ತತೆಯಿಂದ ಎಂದಿಗೂ, [illegible] ಸಮಾಧಾನವಿಲ್ಲವಾಗಿಯೂ ಆ ಕುರಿತು ಪ್ರಯತ್ನ ಮಾಡಬಾರದಾಗಿಯೂ, ಅದರಿಂದ ಕಾರ್ಯಭಾಗವಾಗದಾಗಿಯೂ ಸಾರಿ ದೂರಿ ಹೇಳುತ್ತಾರೆ. "ಸುವರ್ಣ ಸಂಧಿಯನ್ನು ಹೋಗಲಾಡಿಸಬೇಡಿ. ಗಾಳಿ ಬಂದಾಗ ತೂರಿಕೊಂಡು ಪ್ರಯೋಜನ ಪಡೆಯಿರಿ. ಇಂಥ ಸಮಯ ಮುಂದೆಂದಿಗೂ ಬರದು. ಬ್ರಿಟಿಶ-ಹಿಂದುಸ್ಥಾನ ದೇಶಗಳೊಳಗೆ ಒಡಂಬಡಿಕೆಯಾಗುವ ಯೋಗವಿದು. ಲೋಕಪೂಜ್ಯರೊಡನೆ ಸಂಧಿಪ್ರಸ್ತಾಪನ್ನೆತ್ತಿರಿ" ಹೀಗೆ ಮಿ| ಡೇವಿಡ್‌ರವರು ಆತ್ಯಾಗ್ರಹದಿಂದ ಸರಕಾರಕ್ಕೆ ತಿಳಿಸುತ್ತಾರೆ. ರಾಜಶಾಸನದ ಮನ್ವಂತರವು ಕ್ಷೇಮಕರವಲ್ಲೆಂದು ಎಲ್ಲರಿಗೂ ಹೊಳೆದದೆ. ಸಾಮೋಪಚಾರದಿಂದ ಸುಧಾರಿಸಿಕೊಳ್ಳಲು ಎಲ್ಲರೂ ಆತುರಪಡುತ್ತಿದ್ದಾರೆ. ಕೆಲ ಕೊಂಗ್ರೆಸ ಪಕ್ಷಪಾತಿಗಳಿಗೆ ಹೋರರವರ ಯೋಜನೆಯ ಪುರಸ್ಕಾರಕ್ಕಾಗಿ ಮನವೊಲಿಸುವ ಯತ್ನ ಒಳಗಿಂದೊಳಗೆ ನಡೆದದೆ. ರಾಜಶಾಸನಗಳು ಪುನರುದ್ಧರಿಸಲಿಕ್ಕಿಲ್ಲವಾಗಿ ಒಂದು ಆಶೆ. [illegible] ಸೋಮವಾರ ಜುಲೈ ೪ನೇ ತಾರೀಖು. ರಾಜಶಾಸನಗಳ ಉತ್ತರಕ್ರಿಯೆ ಆ ದಿನ ದೇಶತುಂಬ ನಡೆಯುವದು. ಅವುಗಳ ಉದ್ಧಾರವಾಗುವದೇನೆಂದು ಅಷ್ಟರಲ್ಲಿ ತಿಳಿದೀತು. ಬ್ರಿಟಿಶ ಮುತ್ಸದ್ದಿಗಳು ವಿಚಾರವಂತರು, ರಾಜಕಾರಣಧುರಂಧರರು. ಈ ಸುವರ್ಣಯೋಗದ ಪ್ರಯೋಜನವನ್ನು ಹೇಗೆ ಪಡೆಯುತ್ತಾರೆಂದು ತಿಳಕೊಳ್ಳಲು ಎಲ್ಲರೂ ಕುತೂಹಲಪಡುವದು ಸಹಜವಿರುವದಲ್ಲವೇ? ಕಾರ್ಮೋಡಗಳು ಚದರಿಹೋಗುತ್ತವೋ, ಕವಿದುಬಂದು ಮಳೆಗರೆಯುತ್ತವೋ ನೋಡುತ್ತಿರುವಾ!!

— ಸೊಲ್ಲಾಪುರದಲ್ಲಿ ತಾ. ೮-೫-೩೦ನೇಗೆ ತಮ್ಮ ಹುಡುಗನು ಒಕ್ಸಿಲಿಯರಿ ಫೋರ್ಸಿನ ಸಾರ್ಜಂಟನ ಗುಂಡಿಗೆ ಬಲಿಬಿದ್ದು ತೀರಿದ್ದರಿಂದ ಸರಕಾರದ ಮೇಲೆ ಹುಡುಗನ ತಾಯಿ-ತಂದೆಗಳು ರೂ ೫೦,೦೦೦ಗಳ ನಷ್ಟಭರ್ತಿಯ ದಾವೆ ಮಾಡಿರುತ್ತಾರೆ. ಸರಕಾರದ ಮೇಲೆ ದಾವೆ ನಡೆಯುವದಿಲ್ಲವಾಗಿ ಸರಕಾರದ ಅಂಬೋಣ. ಪೋಲೀಸರ ಮುಖ್ಯತ್ವವನ್ನು ಸರಕಾರವು ಮೊದಲ ಹಿಡಿಯುವದಿಲ್ಲವಾಗಿ ಸರಕಾರದ ಸಾಧನ. ಗುಂಡು ಹಾರಿಸಿದ "ಒಕ್ಸಿಲಿಯರಿ ಫೋರ್ಸ" ಯಾನೆ ಬೆಂಬಲ ಸೈನಿಕರು ಹುಡುಗನಿಗೆ ಹೊಡೆದದ್ದರಿಂದ ಸಹ ಸರಕಾರದ ಮೇಲೆ ಜವಾಬದಾರಿ ಬರುವದಿಲ್ಲ. ಈರ್ವರ ವರ್ಜಿಯೂ ಒಂದೇ, ಹೀಗೆ ಸರಕಾರದ ಪರವಾಗಿ ಮುಂಬಯಿಯಿಂದ ಮುದ್ದಾಂ ಸೊಲ್ಲಾಪುರತನಕ ಹೋದ ಬೆ| ವೇಲಣಕರರು ಕಳೆದ ಜೂನ ತಾ ೧೮ನೇಗೆ ವಾದಿಸಿದರು. ವಾದಿ ಕಡೆ ವಕೀಲರಾದ ರಾ| ಪ್ರಂಷೇಯವರು ಪುರಾವ ಕೊಡದ ಹೊರತು ಪ್ರಸ್ತಾವನೆಯಲ್ಲಿಯೇ ಸರಕಾರಕ್ಕೆ ದಾವೆಯೊಳಗಿಂದ ಕಿತ್ತು ಹಾಕಬರುವದಿಲ್ಲವೆಂದರು. ಇನ್ನು ತೀರ್ಮಾನಗಳಿಲ್ಲ. ಈಗಿನ ಸಬಜಜ್ಜರು ರಾ| ಕೆಂಭಾವಿಯವರು. ಮೊದಲು ರಾ| ಹಟ್ಟಂಗಡಿಯವರಿದ್ದರು. ಅವರ ಕೋರ್ಟಿನಲ್ಲಿ ತಾ ೯-೩-೩೨ನೇಗೆ ಇದೇ ಚರ್ಚೆ ನಡೆದು ಒಕ್ಸಿಲಿಯರಿ ಫೋರ್ಸಿನ ದರ್ಜೆಯೇನೆಂದು ಸರಕಾರವೇ ಸಿದ್ಧಮಾಡಬೇಕಾಗಿ ಅಭಿಪ್ರಾಯಪಟ್ಟು ವಿಚಾರದ ಬಗ್ಗೆ ತಾ ೨-೪-೩೨ನೇದನ್ನು ನೇಮಿಸಿದ್ದರು. ಆ ತಾರೀಖಿನ ಪೂರ್ವದಲ್ಲೇ ರಾ| ಹಟ್ಟಂಗಡಿಯವರಿಗೆ ವರ್ಗವಾಯಿತು. ಬೆ| ವೇಲಣಕರರು ಸರಕಾರ-ಸೈನ್ಯಖಾತೆಗಳೊಳಗೆ ನಡೆದ ಪತ್ರವ್ಯವಹಾರವನ್ನು ಹಾಜರಪಡಿಸಲೊಪ್ಪಿದ್ದಾರೆ.

ಪರದೇಶಗಳಲ್ಲಿ.

ಯುರೋಪ ಖಂಡದಲ್ಲಿ.

ಯುರೋಪ ಖಂಡದ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಇಷ್ಟು ದಿನ ಯುದ್ಧ ಕಾಲದ ಸಾಲ 'ವನ್ನು [illegible] ಮಿತ್ರರಾಷ್ಟ್ರಗಳಿಗೆ [illegible] ತರಬೇಕು, ಮಿತ್ರರಾಷ್ಟ್ರಗಳು ಅಮೇರಿಕೆಯವರಿಗೆ ಸಾಲ ತೀರಿಸಬೇಕು, ಕಾಲದ ಪ್ರವೃತ್ತಿ ಹಿಂದಿನಂತೆ ನ್ಯಾಯ ಮಾರ್ಗಾನುಸರಿಸುತ್ತದೆ. ಜರ್ಮನಿ ಎಲ್ಲಿಯವರೆಗೆ ಸಾಲ ಕೊಡಲಿಕ್ಕಾಗುವದೆಂದು ಹೇಳಿ ಬಿಡುತ್ತದೆ. "ಕಾಸು ಬಡವರಕ್ಕೆ ಹಣ ಬೇಕ್ಯಾಕ? ಜೀವ ಹೋದಂತೆಯ" ಹೀಗೆ ಫ್ರಾಂಚ ದೇಶದ ಪ್ರತಿನಿಧಿಗಳಿಗೆ ಹೇಳುವದು ಅಂದಿನಿಂದ. ಬ್ರಿಟಿಶರು ಬಡವಕ್ಕನ್ನು, ಇದಕ್ಕನ್ನು" ಹೀಗೆ [illegible] ಮಾಡುತ್ತಾರೆ ಜರ್ಮನಿಯಿಂದ ಹಿಂದಕ್ಕೆ [illegible] ಬ್ರಿಟಿಶರಿಗೆ [illegible] ಅಮೇರಿಕನ ಪ್ರವಾಸಿಗರಿಂದ ಸಂಗತಿ [illegible] ಕೊಡತಕ್ಕ [illegible] ಇದರಿಂದ ಬ್ರಿಟಿಶ ಸರಕಾರ [illegible] ವಾಗುವದಾಗಿ ಫ್ರಾಂಚ ಪ್ರಧಾನರು ಹೇಳಿದರು. ಈಗಲೇ ರೊಕ್ಕ ಹಣ ಕೊಡಲಿಕ್ಕೆ [illegible] ಜರ್ಮನ [illegible] ಕೊಡಿ, ಕೆಲವು ಪ್ರೋನಿಸರಿ ನೋಟುಗಳನ್ನು ಬರೆಕೊಡಿ, ಇಷ್ಟನ್ನು ಸರಕು ಕೊಡಿ, ಹಣ ಕೊಡು ವ್ಯಾಪಾರದ ಮೂಲಕ ಸಾಲ ತೀರಿಸಿ, ಮುದ್ದತ್ ಮಾತ್ರ ಇದೆ ಬೇಡಿಕೊ, ಹೀಗೆ ಫ್ರಾಂಚ ಪ್ರತಿನಿಧಿಗಳ ಅಂಬೋಣ. ಬ್ರಿಟಿಶ ಪ್ರಧಾನರೂ, ಫ್ರಾಂಚ ಪ್ರಧಾನರೂ ಗುಪ್ತವಾಗಿ ಮಾತನಾಡಿದರು. ಜರ್ಮನ್ ಪ್ರಧಾನರೂ ಮಾತನಾಡಿದರು ಜೊತೆ ಜೊತೆಯಾಗಿ ಮಾತನಾಡಿದರು, ಒತ್ತಟ್ಟಿಗೆ ಮಾತನಾಡಿದರು ಎಲ್ಲ ಮಾತು ಅಂತರಂಗದಿಂದ ನಡೆಯಿತು. ಒಂದೊಂದು ಪದವು ಒಡಂಬಡಿಕೆಯಾಗುತ್ತಿದೆ. ಜಾಹೀರ ಅಧಿವೇಶನ ಇಂದು ನಡೆಯುವದು ನಾಳೆ ನಡೆಯುವದು, ಹೀಗೆ ಹೇಳುತ್ತ ಹೇಳುತ್ತ ಜಾಹೀರ ಅಧಿವೇಶನ ನಡೆಯಿತು. ಲೌಸಾನ ಪರಿಷತ್ತಿನಲ್ಲಿ ಒಂದು ಪ್ರತಿನಿಧಿಗಳು ಏನೊಂದೂ ನಿಶ್ಚಯ ಮಾಡದೆ ತಮ್ಮ ತಮ್ಮ ದೇಶಗಳಿಗೆ ತೆರಳಿದರು. ತಮ್ಮ ತಮ್ಮ ಸರಕಾರಗಳ ಅಭಿಪ್ರಾಯ ಪಡೆಯಲು ಅವರು ಹೋಗಿದ್ದಾರೆ. ಎಷ್ಟು ತಿಕ್ಕಾಟ ನಡೆಸಿದರಾಗ್ಯೂ ಹಣ ಬಿಡುವದೆಂದರೆ ಜೀವದ ಸುತ್ತು, ಹಣ ಕೊಡುವದೆಂದರೆ, ಜೀವಕ್ಕೆ ಸುತ್ತು ಎಂದು ಬನಿಯಾದ ಸುತ್ತು! ಹೀಗೆ ತೊಂದರೆಯಾಗಿದೆ. ಬ್ರಿಟಿಶ-ಫ್ರೆಂಚರ ಸಾಹುಕಾರರಾದ -ಅಮೇರಿಕೆಯವರು-ಸಾಲ-ಬಿಡಲೊಪ್ಪುವದಿಲ್ಲ. "ಜರ್ಮನಿಯು ದಿವಾಳಿ ನಾವೆಂಬುವು, ನಮ್ಮಿಂದ ಸಾಲ ಪಡೆದವರು ನೀವು, ನೀವು ಸಾಲ ಕೊಟ್ಟುಬಿಡಿ ನಿಮಗೆ ಹಣದ ಅಡಚಣೆಯುಂಟಾದರೆಂಬ ಮಾತನ್ನು ನಾವು ನಂಬುವದಿಲ್ಲ ಸೈನ್ಯ ಖಿತೆಯ ಮೇಲೆ ಖರ್ಚು ಮಾಡುವ ಹಣವನ್ನು ಕಡಿಮೆ ಮಾಡಿ ನೀವು ನಮಗೆ ಕೊಡಬಹುದು, ನಮ್ಮ ಸಾಲ ತೀರಿ ಹೋಗುತ್ತದೆ ಇದನ್ನು ನೀವು ಕಡಿಮೆಮಾಡಲೊಪ್ಪದಿದ್ದರೆ, ಸಾಲ ಬಿಡಲು ನಮಗೆ ಒಪ್ಪಿಗೆಯಿಲ್ಲ. ಸೈನ್ಯಾಂಶದಿಂದ ವಿಮಾನಗಳನ್ನು, ಸೈನಿಕರನ್ನು, ಮದ್ದು-ಗುಂಡುಗಳನ್ನು, ಶಸ್ತ್ರಾಸ್ತ್ರಗಳನ್ನು ನೀವು ಕಡಿಮೆ ಮಾಡಬೇಕು" ಹೀಗೆ ಅಮೇರಿಕೆಯ ಪ್ರತಿನಿಧಿಗ [illegible] ದವರು ಶಸ್ತ್ರ ಸನ್ಯಾಸ ಪರಿಷತ್ತಿನಲ್ಲಿ ಹೇಳಿದರು. ಜಿನೀವಾ ಲೌಸಾನದಲ್ಲಿದ್ದ ಮಿ| ಗಿಬ್ಸನ್‌ರವರಿಗೂ, ಅಮೇರಿಕೆಯ ನ್ಯೂಯಾರ್ಕದಲ್ಲಿದ್ದ ಪ್ರೆಸಿಡೆಂಟ ಹೂವರರವರಿಗೂ ಟೆಲಿಫೋನಿನಿಂದ ಸಂಭಾಷಣ ನಡೆಯಿತು. ಶಸ್ತ್ರ ಸನ್ಯಾಸ ಪರಿಷತ್ತಿಗೆ, [illegible] ಪ್ರತಿಪತ್ತಿಗೂ ಅಮೇರಿಕೆಯವರು [illegible] ಫ್ರಾಂಚರು ಸೈನ್ಯ ಕುಗ್ಗಿಸಿದಲ್ಲಿ [illegible] ಕುಗ್ಗವದಾಗಿ ಹೇಳಿ ಸೈನ್ಯ ಕಡಿಮೆ ಮಾಡಬಾರದ್ದುವದಿಲ್ಲ. "ಸೈನಿಕರನ್ನು ಕಡಿಮೆ ಮಾಡುವ ಧೋರಣಕ್ಕೆ ಸಾಮಾನ್ಯವಾಗಿ ತಮ್ಮ ಒಪ್ಪಿಗೆಯಿದೆ. ವಿಮಾನ ಹಡಗುಗಳನ್ನು ಕಡಿಮೆ ಮಾಡುವ ವಿಷಯ ಮಾತ್ರ ಆಲೋಚನೆಮಾಡಬೇಕು. ಶಸ್ತ್ರ ಸನ್ಯಾಸ ವಿಷಯದಲ್ಲಿ ಬ್ರಿಟಿಶ ರಾಷ್ಟ್ರದ ವಿಚಾರ ಹೂವರರವರ ಅಭಿಪ್ರಾಯದಷ್ಟು" ಹೀಗೆ ಬ್ರಿಟಿಶ ಪ್ರಧಾನಿಗಳಾದ ಸರ್ ಜೋನ್ ಸೈಮನ್ನರವರು ಹೇಳಿ ತಮ್ಮ ನೌಕಾ ಸೈನ್ಯವನ್ನು ಕಡಿಮೆ ಮಾಡಲಿಕ್ಕೆ [illegible] ಹೂವರರ ಸೂಚನೆಗಳು ವಿಚಾರಾರ್ಹವಿವೆ [illegible] ಜಂಗಿ ಒಂದಂತೆ ಸೈನ್ಯ [illegible] ಕಡಿಮೆಯಾಗಬೇಕು" ಎಂದು ಜಪಾನ [illegible] ಮಾಡುವರು [illegible] 'ಮಂಚೂರಿಯಾದಲ್ಲಿ ಸೈನಿಕರನ್ನಿಟ್ಟು [illegible] ಆಕ್ರಾಂತ ಮಾಡುವ [illegible] ನಮ್ಮ ರಶಿಯಾ ದೇಶದ [illegible] ಪ್ರಾಂತದ ಮೇಲೆ ದಾಳಿ ಮಾಡುವದಕ್ಕಾಗಿ ಅಕ್ಕರೆದ ಜಪಾನ ಸೈನ್ಯ ಸಂಗ್ರಹವಾಗುತ್ತಿದೆ [illegible] ಹೋಗಿದೆ. ಜಪಾನ ದೇಶವು ಹಲ್ಲು ಮುರಿಕೊಳ್ಳಬೇಕಾಗುವದು" ಹೀಗೆ ರಶಿಯಾ ಸರಕಾರದ 'ಇಸ್ವೆಸ್ತಿಯಾ' ಪತ್ರಿಕೆಯು ಜಪಾನ ದೇಶಕ್ಕೆ ಎಚ್ಚರಿಕೆ ಕೊಟ್ಟು ಸಂಗ್ರಾಮದ [illegible] ತೊರದುಬಿಡಬೇಕಾಗಿ ಎಚ್ಚರಿಕೆ ಕೊಟ್ಟಿದೆ. ಈ ಸ್ಥಿತಿಯನ್ನಿಲ್ಲಿ ಶಸ್ತ್ರಸನ್ಯಾಸ ಪರಿಷತ್ತಿನ ಪ್ರತಿನಿಧಿಗಳು ಒಪ್ಪಿದರು ಶಸ್ತ್ರಸನ್ಯಾಸ ಪರಿಷತ್ತಿನಲ್ಲಿ ಶಸ್ತ್ರಾಸ್ತ್ರಗಳನ್ನು ಕುಗ್ಗಿಸಬೇಕೆಂಬ ಅಮೇರಿಕೆಯ ಪ್ರೆಸಿಡೆಂಟರಾದ ಮಿ. ಹೂವರರವರ ಸೂಚನೆಯ [illegible] ವಿಚಾರಿಸತಕ್ಕ ಪ್ರಸ್ತಾಪ ಎಲ್ಲರೂ ಮಾತ್ರ ನೆಲದಿಂದ ಮಾತಾಡುವ ಆರ್ಭಾಟ ನೋಡಿ ರುಶ್ಯ ದೇಶದ ಪ್ರತಿನಿಧಿಗಳಾದ ಮಿ| ಲಿಟ್ವಿನವ್ಹಫ್‌ರವರಿಗೆ ಬೇಸರ ಬಂತು. "ಇದು ಶಸ್ತ್ರಸನ್ಯಾಸ ಪರಿಷತ್ತೆಂಬುದನ್ನು ಮರೆಯಬೇಡಿ." ಹೀಗವರು ಎಚ್ಚರಿಕೆ ಕೊಟ್ಟರು. ಇಟಲಿ, ಜರ್ಮನಿ ದೇಶದವರೂ, ಇತರ ೧೦-೧೨ ಸಣ್ಣ-ಪುಟ್ಟ ರಾಷ್ಟ್ರಗಳೂ ಹೂವರರವರ ಸೂಚನೆಯನ್ನು ಮನ್ನಿಸಿವೆ ಆದಾಗ್ಯೂ ಪರಿಷತ್ತು ಏನೂ ನಿರ್ಣಯ ಮಾಡದೆ-ವಿಸರ್ಜನೆ ಹೊಂದಿತು. ಖಂಡಣೆಯ ಪ್ರಶ್ನೆ ವಿಚಾರಿಸುವದಕ್ಕಾಗಿ ಸೇರಿದ ಲೌಸಾನ ಪರಿಷತ್ತಿನಲ್ಲಿಯೂ ನಿರ್ಣಯವಾಗಲಿಲ್ಲ! ಜಿನೀವಾದಲ್ಲಿ ಸೇರಿದ ಶಸ್ತ್ರ ಸನ್ಯಾಸ ಪರಿಷತ್ತಿನಲ್ಲಿಯೂ ನಿರ್ಣಯವಾಗಲಿಲ್ಲ!! ಹೀಗೆ ಎರಡೂ ಪರಿಷತ್ತುಗಳು ಅಂತ್ಯವಾದವು!

⁂

ಆಯರ್ಲಂಡದೊಳಗೆ.

ಆಯರ್ಲಂಡದ ರಾಜಧಾನಿಯಾದ ಡಬ್ಲಿನ್ ಪಟ್ಟಣದಲ್ಲಿ ಈಗ ಕ್ರಿಸ್ತ ಧರ್ಮಪರಿಷತ್ತಿನ ಗಲಾಟೆ. ಇದಕ್ಕಾಗಿ ಬೇರೆ ಬೇರೆ ದೇಶಗಳಿಂದ ೩ ಲಕ್ಷ ಜನರು ಸೇರಿದ್ದಾರೆ. ದಿನಾ ೫-೬ ಸಾವಿರ ಜನರು ಸಹ ಬರುವರು. ಇದರಿಂದ ಅನ್ನಸಾಮಗ್ರಿಗಳ ಪೂರೈಕೆಯಾಗದ ತೊಂದರೆಯಾಗಬಹುದೆಂದು ಭೀತಿಯಿಂದ ಅನ್ನಸಾಮಗ್ರಿಗಳನ್ನುಪಯೋಗಿಸಬೇಕಾಗಿ ಜನರಿಗೆ ಉಪದೇಶ ಮಾಡುತ್ತಾರೆ ನೀರನ್ನು ನೀರಿನಂತೆ ಖರ್ಚು ಮಾಡಿದರೆ, ಮುಂದೆ ತೊಂದರೆಯಾಗಬಹುದಂತೆ ಈ ಪರಿಷತ್ತಿಗಾಗಿ ರೋಮ ಪಟ್ಟಣದಿಂದ ಪೋಪ ಧರ್ಮಗುರುಗಳ ಪ್ರತಿನಿಧಿಗಳಾದ ಕಾರ್ಡಿನಲ್ ಲೌರಿಯವರು ಲಂಡನ್ ಮಾರ್ಗವಾಗಿ ಡಬ್ಲಿನ್ನಿಗೆ ಹೋಗಿದ್ದಾರೆ. ಆಯರ್ಲಂಡದ ಅಧ್ಯಕ್ಷರಾದ ಮಿ| ಡಿ. ವಲೇರಾರವರು ರಾಜವೈಭವದಿಂದ ಗುರು ಪ್ರತಿನಿಧಿಗಳನ್ನು ಬರಮಾಡಿಕೊಂಡರು. ಕಾರ್ಡಿನಲ್‌ರವರಿಗೆ ಉತ್ಸಾಹದಿಂದ ಎಲ್ಲರೂ ಸ್ವಾಗತಿಸಿದರು ಈ ಪರಿಷತ್ತಿನ ಹೆಸರು 'ಯುಕಾರಿಸ್ಟ ಕಾಂಗ್ರೆಸ' ಎಂದು. ಪರಿಷತ್ತಿನ ಮಂಟಪದ ಮೇಲೆ ಎಲ್ಲ ರಾಷ್ಟ್ರಗಳ ಧ್ವಜಗಳು ಹಾರ್ಯಾಡುತ್ತಿದ್ದವು. ಬ್ರಿಟಿಶ ಧ್ವಜಕ್ಕೆ ಮಾತ್ರ ಎಲ್ಲಿಯೂ ಇರಲಿಲ್ಲ. ಯಾವನೋ ಒಬ್ಬರು ಬ್ರಿಟಿಶ ಧ್ವಜ ಹಚ್ಚಿದ್ದರು, ನಿಷೇಧ ಮಾಡಿದಾಗ್ಯೂ ಕೇಂದ್ರ ರಿಪಬ್ಲಿಕನ್ ಸೈನಿಕರು ಅದನ್ನು ಕೆಡವಿದರು. ಬ್ರಿಟಿಶ ರಾಜಪ್ರತಿನಿಧಿಯಾದ ಆಯರ್ಲಂಡದ ಗವ್ಹರ್ನರ ಜನರಲ್‌ರಿಗೆ ಸ್ವಾಗತ ಸಮಾರಂಭಕ್ಕೆ ಆಮಂತ್ರಣವಿರಲಿಲ್ಲ. ಆಯರ್ಲಂಡ ದೇಶದಲ್ಲಿ ಧಾರ್ಮಿಕ ಉತ್ಸಾಹವು ಉಕ್ಕೇರಿ ಬಂದಿದೆ

ಮುದ್ರಣ ಸಮಯ.

ಸತ್ಯಾಗ್ರಹಿಗಳಿಗೆ ಕೂಡಲೆ ಬಿಡುಗಡೆ ಮಾಡಿ ರಾಜ್ಯಸುಧಾರಣೆಯ ಕಾರ್ಯದಲ್ಲಿ ನೆರವಾಗ ನಿಮಂತ್ರಿಸದಿದ್ದರೆ ಮುಂದ ಅನರ್ಥವಾಗುವದಾಗಿಯೂ, ಸಹಕಾರಿಗಳು ಪುನರಾಲೋಚನೆ ಮಾಡಬೇಕಾಗುವದಾಗಿಯೂ ಪುಣೆ ಭಾರತ ಸೇವಕ ಸಮಾಜದ ಪ್ರಕಟಣ!

ಸ್ಥಾನಿಕ ವೃತ್ತಾಂತ.

ಕಾರವಾರ— ೫೫ ವರ್ಷ ವಯಸ್ಸಾಗಿದ ೩೦ ವರ್ಷ ಸರ್ವಿಸಾದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ನಿವೃತ್ತಿಯಿಂದ ಪೆನ್ಶನು ಕೊಡುವದು ಬೇಡವೆಂದೇನೋ ಎಂದು [illegible] ಕಳೆದ ತಿಂಗಳಲ್ಲಿಯೇ ನಿರ್ಣಯವಾದರು ಬಂದಾಗ್ಯೂ ಜೂನ ೧೩ನೇ ತಾರೀಖಿನ ಸಭೆಯಲ್ಲಿ ಈ ಕುರಿತು ಸ್ಕೂಲ ಬೋರ್ಡ ವಿಚಾರವನ್ನೇ ಮಾಡಲಿಲ್ಲ. ಅವರಿಗೆ ಕಾಯುವಂತೆ ಪಗಾರು ಕೊಡಬೇಕಾಗಿತ್ತು; ಈಗ ಅವರ ಸ್ಥಳದಲ್ಲಿದ್ದ ಶಿಕ್ಷಕರಿಗೆ ಪಗಾರು ಕೊಡಬೇಕು. ದುಪ್ಪಟ್ಟು ಖರ್ಚಾಗುವದಲ್ಲಿ ಹೀಗೆ ಅವಿಚಾರವೇಕೆ? ಪ್ರಾಥಮಿಕ ಶಿಕ್ಷಕರಿಗೆ ಮೇ ತಿಂಗಳ ಪಗಾರು ಇನ್ನೂ ದೊರಕಲಿಲ್ಲ. ಜಿಲ್ಲಾ ಬೋರ್ಡಿನಿಂದ ಪಗಾರ ಬಿಲು ಇನ್ನೂ ಮಂಜೂರಾಗಿ ಬಂದಿಲ್ಲವಂತೆ

ಬನವಾಸಿಯ ಶ್ರೀಮಧುಕೇಶ್ವರ ದೇವಸ್ಥಾನದ ಅಪೀಲಿನ ವಿಚಾರ ಇನ್ನೂ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ನಡೆದಿದೆ

ಹೊನ್ನಾವರ— ಮಳೆ ಚೆನ್ನಾಗಿ ಬೀಳುತ್ತಿದೆ. ತಾ. ೨೪ರ ರಾತ್ರಿ ಬಿದ್ದ ಮಳೆ ೮೦ ಇಂಚು. ಶರಾವತಿ ಹೊಳೆ [illegible] ರಸ್ತೆ ಬಹಳ ಕೆಟ್ಟಿರುತ್ತದೆ. ಮೋಟರು [illegible] ಅಪಘಾತವಾಗುವ ಸಂಭವವಿದೆ ಇಂಜನಿಯರ ಖಾತೆಯವರು ಕಾಳಜಿಯಿಟ್ಟು ರಸ್ತೆಗಳನ್ನು ಶೀಘ್ರವೇ ಕಟ್ಟಿಸಬೇಕು

[illegible] ಜನರ [illegible] ತಪ್ಪದಲ್ಲಿ ಬಿದ್ದಿದೆ! ಬಂದರು ಲಕ್ಷ್ಮೀ ಟಪ್ಪಾಲ ಹೋಲಿನ ಪ್ರತಿಷ್ಠೆ ಸ್ಥಳ. ಉದ್ಯೋಗ [illegible] ದುರ್ಲಕ್ಷ. [illegible] ಇವರ [illegible] ಇಲ್ಲವೇ?

ವ್ಯಾಪಾರಿಗಳು ಕೆಟ್ಟ ಹೋದ ವಹಿಗಳನ್ನು ದುರುಸ್ತಿ ಮಾಡಬೇಕಾಗಿ ಸೂಚನೆ.

ನಿರ್ಬಂಧದೊಳಗಿರುವ 'ವೃತ್ತ'ದ ಸಂಚಿಕೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಮಳೆ ಒಳ್ಳೇ ನಡಿಸುತ್ತದೆ. ಒಕ್ಕಲಿಗರೆಲ್ಲರೂ ನಟ್ಟಿಯ ಕೆಲಸದಲ್ಲಿ ತೊಡಗಿದ್ದಾರೆ. ಹೀಗೇ ನಡೆದರೆ ಒಳ್ಳೇ ಬೆಳೆಯಾಗುವದು. ಈ ವಾರದಲ್ಲಿ ೧೫-೧೬ ಇಂಚು ಮಳೆ, ಅಂತು ಈ ವರೆಗೆ ೭೯-೮೯ ಇಂಚು ಮಳೆಯಾಯಿತು.

ಇಲ್ಲಿಯ ಶಿರಸ್ತೇದಾರರಾದ ಮಿ. ಧಾರವಾಡೀಕರವರಿಗೆ ಹಳಿಯಾಳಕ್ಕೆ ವರ್ಗವಾಗಿದೆ. ಇಲ್ಲಿ ಶಿರಸ್ತೇದಾರರಾದ ಮಿ| ಜೋಶಿಯವರಿಗೆ ಮುಂಡಗೋಡಕ್ಕೆ ವರ್ಗವಾಗಿದೆ. ಹಳಿಯಾಳದಿಂದ ಮಿ| ನಬಾಬರು ಇಲ್ಲಿ ಶಿರಸ್ತೇದಾರಿ ಜಾಗೆಗೆ ಬರುತ್ತಾರೆ.

ಈಗ ಮೋಗೇರರು ಯಾತ್ರಿಗಳಿಗೆ ದೂಡದಕ್ಕೂ ಕಡಿಮೆಯಿಲ್ಲ. ಶ್ರೀ ವೆಂಕಟರಮಣ ದೇವರೇ ಪ್ರಸನ್ನನಾಗಿದ್ದಾನೆ! ಶ್ರೀ ವೆಂಕಟರಮಣ ದೇವರ ಭಕ್ತರಿಗೆ ಬೇಕಾದ ರೋಗ ಸುಲಿದು ಅವರು ಗಂಟು ಕಟ್ಟಿದರಾಯಿತು. ಮೊಕ್ತೇಸರರು ಶ್ರೀ ದೇವಸ್ಥಾನದ ಆವರಿಗೆ ಶ್ರೀ ದೇವರ ಸ್ಥಳ ಕೊಟ್ಟು ಗುಡಿಸಲು ಕಟ್ಟಿ ವ್ಯಾಪಾರ ನಡಿಸಗೊಟ್ಟಿದ್ದಾರೆ. ಮೋಗೇರಯಿಗಳು ಈಗ ಕುಮಟೆಯ ಸ್ಥಳವಂತಿಕರು! ಅವರು ಅಂಗಡಿಗಳಲ್ಲಿ ಹೋಗಿ ನೋಟು ಮುರಿಸುವ ನೆವ ಮಾಡಿ ದುಡ್ಡಿನ ಕಟ್ಟಿಯಲ್ಲಿ ಸಹ ಕೈಹಾಕಿ ಹಣ ಸುಲಿದ ದಾಗಿ ದನಿದೆ.

ಇಲ್ಲಿ ಗೋಡೆಗಳಿಗೆ ಕೆಲವರು ಮಾಫಿ ಬೇಡಿದ ಛಾಪಿ ಪತ್ರಗಳು ಅಂಟಿಸಲ್ಪಟ್ಟಿವೆ. ಇವರು ಸಾಣಿಕಟ್ಟೆಯಲ್ಲಿ ಉಪ್ಪಿನ ಆಂದೋಲನದಲ್ಲಿ ಸೆರೆಹಿಡಿಯಲ್ಪಟ್ಟ ಒಕ್ಕಲಿಗರು. ಅವರ ಮೇಲೆ ಉಪ್ಪಿನ ಕಾಯಿದೆಯಂತೆ ಖಟ್ಲೆ ನಡೆದು, ಅವರು ಮಾಫಿ ಬೇಡಿ ಬಿಡುಗಡೆಯಾದರು. ಸತ್ಯಾಗ್ರಹದಲ್ಲಿ ಅವರು ಸೇರಿದವರಿಲ್ಲ, ಸತ್ಯಾಗ್ರಹದಲ್ಲಿ ಸೇರಿದ ಒಕ್ಕಲಿಗರಿಗೆ ಪಶ್ಚಾತ್ತಾಪವಾಗುತ್ತದೆ. ಕ್ರಿಮಿನಲ್ ಲಾ ಎಮೆಂಡಮೆಂಟ ಆಕ್ಟಿನ ಕಲಮು ೧೬ (೧)ರಂತೆ ತಮ್ಮ ಮೇಲೆ ಹೊರಿಸಿದ ಆರೋಪದಿಂದ ಬಿಡುಗಡೆಯಾಗಬೇಕು; ಹೀಗೆಲ್ಲ ಬರೆದದೆ. ಇವರು ಸತ್ಯಾಗ್ರಹಿಗಳೂ ಅಲ್ಲ, ಕಾಂಗ್ರೆಸಿಗೆ ಸೇರಿದವರೂ ಅಲ್ಲ, ಹೀಗೆ ಶ್ರೀ ಗೋಕರ್ಣಕರ ಕೊಟ್ಟಿರು ಹೇಳುತ್ತಾರೆ. ಮಾಫಿ ಬೇಡಿದವರ ಉಸಾಬರಿ ಬೇಕೆ?

ಸಿದ್ದಾಪುರದಲ್ಲಿ ಕರಬಂದಿಯ ಬಗ್ಗೆ ಪ್ರಚಾರ ಕಾರ್ಯ ನಡಿಸುತ್ತಿದ್ದರೆಂಬ ಆರೋಪದ ಮೇಲೆ ಸೆರೆಹಿಡಿದು ಒಯ್ದ ಈರ್ವರಿಗೆ ನಿನ್ನೆ ಇಲ್ಲಿಂದ ಕಾರವಾರಕ್ಕೊಯ್ದರು. ಒಬ್ಬರು ಸಾರಸ್ವತರು; ಇನ್ನೊಬ್ಬರು ಹವೀಕರು.

ಭಟಕಳ— ಇಲ್ಲಿಯ ಫೌಜದಾರರಿಗೆ ಮೈಮೇಲೆ ಕೈಹಾಕಿ ಹೊಡೆದರೆಂಬ ಆರೋಪದ ಮೇಲೆ ಆದ ಖಟ್ಲೆಯ ವಿಚಾರವು ಮುಗಿದು, ಮೊನ್ನೆ ತಾರೀಖು ೧ನೇ ವರ್ಗದ ಮೆಜಿಸ್ಟ್ರೇಟರು ಇಬ್ಬರೂ ಆರೋಪಿಗಳು ದೋಷಿಗಳೆಂದು ಠರಾಯಿಸಿ, ಮಿ| ವೆಂಕಟ್ರಮಣ ಭಟ್ಟರಿಗೆ ರೂ. ೧೦೦ ದಂಡ, ಮತ್ತು ಮಿ| ಲಕ್ಷ್ಮಣ ಅನಂತ ಭಟ್ಟರಿಗೆ ರೂ. ೫೧ ದಂಡ ತೆರಲಿದ್ದರೆ ಪ್ರತಿಯೊಬ್ಬರಿಗೆ ಒಂದೊಂದು ತಿಂಗಳ ಸಾದಾ ಶಿಕ್ಷೆ ವಿಧಿಸಿದರು. ೧ನೇ ಆರೋಪಿಯು ದಂಡ ತುಂಬಿದನು, ೨ನೇ ಆರೋಪಿಯು ಜೈಲಿಗೆ ಹೋಗಿರುತ್ತಾನೆ. ಇಲ್ಲಿ ಧ್ವಜವಂದನ-ಪ್ರಭಾತಫೇರಿ ನಡೆದ ಕಾರಣಕ್ಕೆ ಉಂಟಾದ ಒಂದು ಪ್ರಕರಣದ ನಿಕಾಲೆಯಿದು.

ಹೊನ್ನಾವರದ ಪ್ರಮುಖ ವಕೀಲರಾದ ಇಲ್ಲಿಯ ಜಹಗೀರದಾರ ಶ್ರೀ [illegible]ಗಳವರ ಹೆಬ್ಬಳ ಗ್ರಾಮದ ಸುಮಾರು ೩೦ ರೂ. ತೀರ್ವೆ ಭೂಮಿ ತೀರ್ವೆ ತುಂಬದ ಕಾರಣ ಲಿಲಾವಿಗೆ ಬೀಳುವದಾಗಿರುತ್ತದೆ. ಈ ಭೂಮಿಗೆ ಸುಮಾರು ೩೦ ಖಂಡಗ ಅಕ್ಕಿ ಉತ್ಪನ್ನವಿರುತ್ತದೆ.

ಶಿರಸಿ— ಮುಂಡಗೇಸರದವರೊಬ್ಬರು ಯಾವದೋ ಒಂದು ಕೆಲಸದ ಬಗ್ಗೆ ಶ್ಯಾಗ್ಲಿ ಬದಿಗೆ ಹೋಗಿದ್ದರು. ಸಿದ್ದಾಪುರದ ಪೋಲೀಸರು ಅವರನ್ನು, ಅವರ ಸಂಗಡವಿದ್ದ ಸೈಕಲನ್ನು ಕೈದು ಮಾಡಿದರು. ಬಿಸಲಕೊಪ್ಪದಲ್ಲಿ ಒಬ್ಬವರಿಗೆ ಸೆರೆಹಿಡಿದಿರುತ್ತಾರೆ. ಇವರ ಮಗನು ಈ ಮುಂಚೆಯೇ ಜೈಲಿಗೆ ಹೋಗಿದ್ದಾನೆ. ಇಸಳೂರಲ್ಲಿ ಒಬ್ಬರಿಗೆ ಕೈದಾಗಿದೆ.

ಮಾಫಿ ಬೇಡಿದರೆಂದು ೫ನೇ ಯುದ್ಧ ಮಂಡಳದ ಕಾರ್ಯದರ್ಶಿಗಳಿಗೆ ಹಿಂದೆ ಬಿಟ್ಟುಕೊಟ್ಟರು! ಅಂದಿನಿಂದಲೂ ಅವರು ಕಾಲಪತ್ರ ಹಂಚುವದು, ಸುದ್ದಿ ಬೋರ್ಡ ಬರೆಯುವದು ವಗೈರೆ ಕೆಲಸ ಮಾಡುತ್ತಿದ್ದರಂತೆ. ಅವರಿಗೆ ತಾ. ೧೩ಕ್ಕೆ ಪುನಃ ಕೈದು ಮಾಡಿರುತ್ತಾರೆ.

ಸುಗಾವಿಯ ಸಸ್ಪೆಂಡ ಪಟೇಲರಿಗೆ ವಶೂಲಿ ನೋಟೀಸು ಜಾರಿಯಾಗಿತ್ತಷ್ಟೇ! ಅವರು ವಶೂಲಿ ಕೊಡಲಿಲ್ಲ; ದಾಖಲಾಗಿದ್ದರೆ ಪೋಲೀಸರು ಅವರನ್ನು ಹುಡುಕಲಿಕ್ಕೆ ತಾ ೧೯ಕ್ಕೆ ಸುಗಾವಿಗೆ ಬಂದಿದ್ದರು, ಪಟೇಲರು ಸಿಗಲಿಲ್ಲ. ತಾ ೨೦ಕ್ಕೆ ನಸುಕು ಇದ್ದಾಗಲೇ ಅವರ ಮನೆ ಮುತ್ತಿ ಬಾಗಿಲು ತೆರೆಯುತ್ತಲೇ ಒಳಗೆ ಹೋಗಿ ಸಂದಿ-ಮೂಲೆಗಳನ್ನೆಲ್ಲ ಹುಡುಕಿ ನೋಡಿದರು, ಪಟೇಲರು ಕಾಣಲಿಲ್ಲ. ಮನೆಯಲ್ಲಿದ್ದ ಇಬ್ಬ ಗೃಹಸ್ಥರಿಗೆ ಇವರೇ ಪಟೇಲರಾಗಿರಬಹುದೆಂದು ಕೈದು ಮಾಡುವ ವಿಚಾರದಲ್ಲಿ ಪೋಲೀಸರಿದ್ದರು. ಆದರೆ ಹವಾಲದಾರನು ಭ್ರಾಂತಿಯನ್ನು ದೂರಪಡಿಸಿದನು. ಇಲ್ಲಿ ಒಬ್ಬ ಹೆಂಗಸಿಗೂ ಪೋಲೀಸರಿಗೂ ಸ್ವಲ್ಪ ತಿಕ್ಕಾಟವಾಯಿತು. ಆದರೆ, ಪೋಲೀಸರು ಅದನ್ನು ಸಾವಧಾನದಿಂದ ಸುಧಾರಿಸಿಕೊಂಡಾಗ ತಿಳಿಯುತ್ತದೆ. ಸರಿಕೊಂಡೆಯ ವಾಸಗಳಲ್ಲೂ ಝಡ್ತಿಯಾಯಿತು. ಎಲ್ಲೂ ಪಟೇಲರು ಸಿಗಲಿಲ್ಲ!

ಮೇಣಸಿ ಕೇಂದ್ರದ ದುಂಡಶಿಯವರೆಯ ಇಬ್ಬ ಖಾತೇದಾರರು ತೀರ್ವೆ ಕೊಟ್ಟಿಲ್ಲ. ಅವರಲ್ಲಿ ದಸ್ತದಾಗಿತ್ತು ಜಿನಿಸಿನ ಬಾಕಿ ನೋಟೀಸು ಸಹ ಬಂದಿದೆ. ತಾ ೧೩ಕ್ಕೆ ಅಧಿಕಾರಿಗಳು ಪುನಃ ತೀರ್ವೆ ವಸೂಲಿಯ ಬಗ್ಗೆ ಅವರಲ್ಲಿ ಹೋದರು. "ತೀರ್ವೆ ಕೊಡಿರಿ, ಇಲ್ಲವಾದರೆ ಒಂದು ಹಜ್ಜ ಭೂಮಿ ಸಹ ಸಿಗಲಿಕ್ಕಿಲ್ಲ" ಎಂದು ಅಧಿಕಾರಿಗಳು ಅವರಿಗೆ ಚನ್ನಾಗಿ ತಿಳಿಸಿದರು. ಅದರೂ ಸದರಿ ಖಾತೇದಾರನು ತೀರ್ವೆ ಕೊಡಲಿಲ್ಲ. ಬಗ ಒಬ್ಬ ಖಾತೇದಾರನಿಗೆ ಒಬ್ಬ ಅಧಿಕಾರಿಯು "ಪ್ರಾಮಿಸರಿ ನೋಟು ಬರಕೊಡು; ನಾನು ಹಣ ಕೊಡಿಸುತ್ತೇನೆ" ಎಂದು ಹೇಳಿದನು. ಅದಕ್ಕೆ ಖಾತೇದಾರನು "ಅಹುದೇ! ಮುಂದಿನ ಬೆಳೆ ಬರುವ ವರೆಗೆ ಸಂಸಾರಕ್ಕಾಗಿ ನನಗೆ ಹಣ ಬೇಕು. ಒಟ್ಟು ರೂ. ೫೦೦ ಕೊಡಿಸಿರಿ, ಪ್ರಾಮಿಸರಿ ನೋಟು ಬರಕೊಡುತ್ತೇನೆ" ಎಂದು ಉತ್ತರ ಕೊಟ್ಟನು. ಅಧಿಕಾರಿಗಳು ಅವನ ಮನೆ ಬಿಟ್ಟು ಎರಡನೇ ಖಾತೇದಾರನ ಮನೆಯಲ್ಲಿ ಹೋದರು. ಅಲ್ಲಿಯೂ ಏನೂ ಸಿಗಲಿಲ್ಲ! ಹುಡುಕಿದ್ದರೊಳಗೆ ಒಂದು ಪೆಟ್ಟಿಗೆ ದೊರೆಯಿತು, ಅದನ್ನು ಒಡೆಯಲಾಗಿ ಕೆಲವು ದಾಗಿನೆಗಳು ಸಿಕ್ಕವು. ಅವು ಸದರಿ ಖಾತೇದಾರರ ಅಣ್ಣನ ಹೆಂಡತಿಯ ದಾಗಿನೆಗಳಂತೆ! ಆಕೆಯು "ನನ್ನ ದಾಗಿನೆ ಕೊಡಿರಿ, ನಾನು ತೀರ್ವೆ ಹಣ ಕೊಡುತ್ತೇನೆ!" ಎಂದು ಹೇಳಿದಳು. ಅಧಿಕಾರಿಗಳು ಆ ಮನೆಯವರ ತೀರ್ವೆಯಷ್ಟೇ ಅಲ್ಲ, ಆ ಬೇರೆ ಖಾತೇದಾರನ ತೀರ್ವೆ ಸಹ ತುಂಬಿಕೊಂಡು ದಾಗಿನೆಗಳನ್ನು ತಿರುಗಿ ಕೊಟ್ಟರು.

ಸಿದ್ದಾಪುರ— (ತಾ ೧೯-೬-೩೨) ಜೂನ ತಾ. ೪ನೇಗೆ ಈ ತಾಲೂಕಿನಲ್ಲಿ ಬಾಳೂರು, ತಾರೇಸರ, ಕಂಚಿಕೈ, ಹೊಸತೋಟ ಮುಂತಾದ ಹಳ್ಳಿಗಳಲ್ಲಿ ಜಂಗಲ ಸತ್ಯಾಗ್ರಹವಾಯಿತು. ಬಾಳೂರದ ೮ ಜನರನ್ನು ಕೈದು ಮಾಡಿದ್ದರು. ಅವರಲ್ಲಿ ಇಬ್ಬರನ್ನು ಮಾತ್ರ ಇಟ್ಟುಕೊಂಡು ಬಾಕಿಯವರಿಗೆ ಬಿಟ್ಟುಕೊಟ್ಟಿದ್ದಾರೆ.

ಮಾವಿನಗುಂಡಿಯಲ್ಲಿ ನಡೆದ ಉಪವಾಸ ಸತ್ಯಾಗ್ರಹದ ಸ್ತ್ರೀಯರನ್ನು ಕೈದು ಮಾಡಿ ಖಟ್ಲೆ ನಡಿಸಿದರು. ಉಪವಾಸವಿದ್ದ ಸ್ತ್ರೀಯರಿಗೆ ಒಂದೊಂದು ದಿವಸದ ಶಿಕ್ಷೆಯಾಯಿತು. ಅವರ ಬೆಂಬಲಕ್ಕಿದ್ದ ಮೂವರು ಭಗಿನಿಯರಿಗೆ ೪-೪ ತಿಂಗಳ ಸಾದಾ ಶಿಕ್ಷೆಯಾಯಿತು.

ಬಿಳಗಿಯ ಒಬ್ಬ ಮುದುಕರಿಗೂ ಇನ್ನೊಬ್ಬರಿಗೂ ಶಿಕ್ಷೆಗಳಾಗಿವೆ. ಮುದುಕರಿಗೆ ೬ ತಿಂಗಳ ಸಾದಾ ಶಿಕ್ಷೆ ಮತ್ತು 'ಬಿ' ವರ್ಗ ಸಿಕ್ಕಿದೆ. ಉಳಿದವರಿಗೆ ೬—೬ ತಿಂಗಳ ಕಠಿಣ ಶಿಕ್ಷೆ ವಿಧಿಸಿದೆ.

ಈ ತಾಲೂಕಿನಲ್ಲಿ ಜನವರಿಯಿಂದ ಈ ವರೆಗೆ ೧೩೫ ಗಂಡಸರೂ, ೪ ಹೆಂಗಸರೂ ಶಿಕ್ಷೆಪಟ್ಟಿರುವರು. ತೀರ್ವೆ ಬಗ್ಗೆ ೩೦೦ರಷ್ಟು ಜಪ್ತಿಗಳಾಗಿರುವವು. ೨೦೦ರಷ್ಟು ಜಾಲಾತಿಯ ನೋಟೀಸುಗಳಾಗಿವೆ. ೫೫-೬೦ ಸಾವಿರ ರೂಪಾಯಿಯಷ್ಟು ತೀರ್ವೆ ಇನ್ನೂ ಬಾಕಿಯುಳಿದಿರುತ್ತದಂತೆ! ಅಷ್ಟು ತೀರ್ವೆ ಬಾಕಿಯಿರುವದಿಲ್ಲವಾಗಿ ಅಧಿಕಾರಿಗಳು ನುಡಿಯುತ್ತಾರೆ.

ತೀರ್ವೆ ಬಗ್ಗೆ ಜಪ್ತಾದ ಕೆಲವು ದನಗಳು ಲಿಲಾವಾಗಿವೆ. ಬಾಕಿಯಿದ್ದ ದನಗಳನ್ನು ಇತ್ತಿತ್ತಲಾಗಿ ಮಾಲೀಕರಿಗೆ ತಿರುಗಿ ಕೊಟ್ಟಿರುವರು. ದನಗಳಿಗೆ ಸಾಕಲು ಬಹಳ ಖರ್ಚು ತಗಲುತ್ತದೆ.

೧೯೩೦ನೇ ಇಸ್ವಿಯಿಂದ ಕಾಂಗ್ರೆಸ ಕೆಲಸ ಮಾಡುತ್ತಿದ್ದ ಕುಮಟೆಯ ಸಾರಸ್ವತ ಜಾತಿಯ ಕಾರ್ಯಕರ್ತರಿಗೆ ತಾ ೧೫ಕ್ಕೆ ಸಿದ್ದಾಪುರ ತಾಲೂಕಿನಲ್ಲಿ ಕೈದು ಮಾಡಿದರು. ಅವರಿಗೆ ೧ ವರ್ಷದ ಕಠಿಣ ಶಿಕ್ಷೆ ಮತ್ತು ರೂ ೫೦ ದಂಡ; ದಂಡ ತೆರದಿದ್ದರೆ ಮೇಲೆ ೩ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ. ಈ ತಾಲೂಕಿನಲ್ಲಿ ಈ ಬಾರಿಯ ಸತ್ಯಾಗ್ರಹದಲ್ಲಿ ಇವರೇ ಪ್ರಮುಖರಂತೆ! ಇವರ ಜೊತೆಗೆ ಸೆರೆಹಿಡಿದ ಇನ್ನೊಬ್ಬರಿಗೆ ೧ ವರ್ಷದ ಕಠಿಣ ಶಿಕ್ಷೆ ಕೊಟ್ಟರು. ಕಳೆದ ವರ್ಷ ಇವರು ಕೈಕರ ಕಷ್ಟ ನಿವಾರಣೆಯ ಸಂಘದ ಪರವಾಗಿ ದುಡಿದಿದ್ದರು.

ಇವರು ಕಾಂಗ್ರೆಸ ಪ್ರಚಾರಕರೆಂದು ಕಾರವಾರದಲ್ಲಿ ಸೆರೆಹಿಡಿಯಲ್ಪಟ್ಟಿದ್ದರು. ಅವರಿಗೆ ೪ ತಿಂಗಳ ಕಠಿಣ ಶಿಕ್ಷೆ ಮತ್ತು ರೂ ೨೫ ದಂಡ, ಇಲ್ಲವೆ ೧ ತಿಂಗಳ ಶಿಕ್ಷೆ ವಿಧಿಸಿದ್ದಾರೆ. ಅವರ ಬಳಿ ಮಹತ್ವದ ಕಾಂಗ್ರೆಸ ಕಾಗದ ಪತ್ರಗಳು ಸಿಕ್ಕಿದವಂತೆ.

ಬಿಳಗಿಯಲ್ಲಿ ಒಂದು ರಾಜನಿಷ್ಠರ ಸಭೆಯಾಯಿತು. ಧಾರವಾಡದವರು ಬಂದಿದ್ದರು. ಸತ್ಯಾಗ್ರಹದಿಂದ ಒದಗುವ ಅನರ್ಥಗಳು ತಿಳಿಸಲ್ಪಟ್ಟವು. ಸರಕಾರವನ್ನು ಸ್ತುತಿಸಿ, ತೀರ್ವೆಯನ್ನು ತುಂಬಬೇಕಾಗಿ ಜನರಿಗೆ ಉಪದೇಶವಾಯಿತು.

— ಈ ವರ್ಷ ನಡೆದ ಸತ್ಯಾಗ್ರಹದಲ್ಲಿ ಮೇ ತಿಂಗಳ ಅಖೈರ ವರೆಗೆ ೪೮,೬೦೩ ಮಂದಿಗಳಿಗೆ ಶಿಕ್ಷೆಯಾಯಿತು. ಅವರಲ್ಲಿ ಮೇ ಅಖೈರಿಗೆ ಜೈಲಿನಲ್ಲಿದ್ದವರ ಸಂಖ್ಯೆ ೩೧೧೯೪.

— ಶ್ರೀ| ಎಸ್. ಕೇ. ಜೋರ್ಜ ಎಂಬುವರ 'ಇಂಡಿಯಾ ಇನ್ ಟ್ರಾವೆಲ' ಯಾನೆ 'ಕಷ್ಟದಲ್ಲಿರುವ ಹಿಂದುಸ್ಥಾನ' ವೆಂಬ ಲೇಖ ಪ್ರಕಟಿಸಿದ್ದಕ್ಕಾಗಿ ಕಲಕತ್ತೆಯ 'ಅಮೃತ ಬಝಾರ' ಪತ್ರಿಕೆಯಿಂದ ರೂ. ೬೦೦೦ ಜಾಮೀನು ಬೇಡಲಾಗಿದೆ.

— ಬೆಂಕಿಪೆಟ್ಟಿಗೆಯ ಮೇಲೆ ಭಗತಸಿಂಗರ ಚಿತ್ರವಿರುವದರಿಂದ ಅವು ಜಪ್ತ ಸರಕಾರದವಾಗಿರುವವಾಗಿ ಮಧ್ಯಪ್ರಾಂತ ಸರಕಾರದ ಪ್ರಕಟಣೆ.

— ಪ್ರಕಾಶ ಪೊಡರುವ ಶಕ್ತಿಯ ಶೋಧದಿಂದ ಒಳ್ಳೇ ಹೆಸರು ಪಡೆದ ಸರ್ ಸಿ. ವ್ಹಿ. ರಾಮನ್‌ರವರಿಗೆ ಪ್ಯಾರಿಸದ ವಿಶ್ವವಿದ್ಯಾಲಯದವರು ಇದೇ ಬರುವ ನವಂಬರ ೨ನೇ ತಾರೀಖಿಗೆ ವಿಶೇಷ ಸಭೆ ಸೇರಿಸಿ 'ಡಾ| ಕೊಡು' ಎಂಬ ಬಿರುದು ಅರ್ಪಿಸುವವರಿದ್ದಾರೆ. ಇದಕ್ಕಾಗಿ ಸರ್ ಸಿ. ವ್ಹಿ. ರಾಮನ್‌ರವರು ಇದೇ ಬರುವ ಅಕ್ಟೋಬರ ತಿಂಗಳಲ್ಲಿ ಪ್ಯಾರಿಸಿಗೆ ಹೋಗುತ್ತಾರೆ.

— ನಿಪ್ಪಾಣಿಯ ಡಾ| ಜ. ಎಮ್. ಸಂಕಪಾಳರವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ತರಗತಿಯಲ್ಲಿ ಈ ವರ್ಷ ತೇರ್ಗಡೆ ಹೊಂದಿದ್ದಾರೆ.

ವಾರ್ತೆಗಳು.

— ರಾಯ[illegible]ಪುರದ ಆಸ್ಪತ್ರೆಯಲ್ಲಿ [illegible] ವನ್ನು [illegible] ನಷ್ಟ ಮಾಡಿದರೆಂದು [illegible] ಎಸ್ [illegible] ಎಂಬ [illegible] ಸಿವ್ಹಿಲ್ ಸರ್ಜನ್ [illegible] ದಾನ ಮಾಡಿದರು [illegible]

[illegible] ಪತ್ರಿಕೆಯಲ್ಲಿ [illegible] ಎಂಬ [illegible] ಪತ್ರಿಕೆ [illegible]

[illegible] ಸತ್ಯಾಗ್ರಹ [illegible]

— [illegible]

ದ [illegible] ಶೂಸ್ತರದವರು ಸ್ವರಾಜ್ಯಕ್ಕೆ ತೆರ[illegible]ವರು ಸರಕಾರವು ಹೊರಡಿಸಿದ ಹೊಸ ಸಾಲಕ್ಕೆ [illegible] ಕೋಟಿ ಮೊತ್ತವ ಹಿಂದೀಯರು [illegible] ಮಾಡಲಿಲ್ಲ. ಇಷ್ಟ ಹಣ ಈ [illegible]ಲದಲ್ಲಿ ಹಾಕಿದ್ದರೆ, [illegible] ಒಳ್ಳೇ ಲಾಭವಾಗು[illegible]ತ್ತು ಇಂಥ ಸಂಧಿ ಮುಂದಂದೂ ಬರಲಿಕ್ಕಿಲ್ಲ, [illegible] ಕೂಡದವರಿಗೆ ಮುಂದೆ ಅವರಿಗೆ ಪಶ್ಚಾತ್ತಾಪವಾಗುವದು, ಹಿಂದುಸ್ತಾನದ ಸ್ಥಿತಿ ಅಷ್ಟು ಕೆಟ್ಟಿಲ್ಲ. ಬೇರೆ ದೇಶಗಳಿಗಿಂತ ಹಿಂದುಸ್ತಾನದ ಸ್ಥಿತಿ [illegible] ಸರಕಾರದ [illegible] ಇಷ್ಟು [illegible] ಮುಂಬಯಿ [illegible] ತರದವರು

ಕಲಕತ್ತೆಯ [illegible] ಲೇನ ಎಂಬ ಕೇರಿಯಲ್ಲಿ [illegible] ಈ ಮನೆಯಲ್ಲಿ [illegible] ಇಲ್ಲ ಯಾರೂ [illegible] ಎಂಗ್ಲೋ ಇಂಡಿಯನ್ ಯಾನೆ ಆಂಗ್ಲ-[illegible] ಈ ಮನೆಯನ್ನು [illegible] ಕೊಂಡರು [illegible] ಭೂತ ಪ್ರೇತ [illegible] ನಂಬಿಗೆಯಿಲ್ಲ. ದಿನಾ ಮಧ್ಯರಾತ್ರಿ [illegible] ಒಬ್ಬ ಸ್ತ್ರೀ [illegible] ಕಾಣುತ್ತದೆ? ಅವಳ್ಯಾರು [illegible] ಎಂಬುದರ [illegible] ಒಂದ ದಿನ [illegible] ಹುಡುಗಿ [illegible] ಮೇಲಿಂದ ಕೆಳಗ ನೂಕಲ್ಪಟ್ಟನು. ಒಮ್ಮೆಲೆ ಆಸ್ಪತ್ರೆಗೆ ಕಳಿಸಿ ಶಸ್ತ್ರಪ್ರಯೋಗ ಮಾಡಬೇಕಾಯಿತು, [illegible] ಅವಳಿಗೇನೋ ವಿಕಾರವಾಗಿತ್ತಂತೆ. ಇನ್ನೊಂದು ದಿನ ೧೦ ವರ್ಷದ ಹುಡುಗನ ಉಟ್ಟ ವಸ್ತ್ರಗಳೆಲ್ಲ ಕೋಣೆಯಲ್ಲಿ ಹರಡಿ ಬಿದ್ದವು, ಆತನು [illegible] ದ ಎದ್ದನು. ಮತ್ತೊಂದು ದಿನ ರಾತ್ರಿ ಕರೀ ಹಂಗಸು ಒಂದು ಕೋಣೆಯಿಂದ ಮತ್ತೊಂದು ಕೋಣೆಗೆ ಅಡ್ಡಾಡುವಂತೆ ಕಂಡು ಬಂತು. ಮಲಕೊಂಡವರು ಹೆದರಿದರು, ಒಂದೆರಡು ಒಮ್ಮೆಲೆ ವಿದ್ಯುದ್ದೀಪಗಳನ್ನು ಹಚ್ಚಿದರು ಏನೂ ಕಾಣಲಿಲ್ಲ. ಈಗ ಎಲ್ಲರೂ ಹದರಿಹೋಗಿದ್ದಾರೆ. ಭೂತಕೋಟಿ ಇರುವದೆಂದು ಈಗ ಅವರ ನಂಬಿಗೆಯಾಗಿದ

— ಬ್ರಿಟಿಶ ದೇಶದ ವ್ಯಾಪಾರವು ದಿನ ಹೋದ ಹಾಗೆ ತಗ್ಗುತ್ತದೆ. ಎಪ್ರಿಲ್ ತಿಂಗಳಿಗಿಂತ ಮೇ ತಿಂಗಳಲ್ಲಿ [illegible] ಲಕ್ಷ ಪವನಿನ ವ್ಯಾಪಾರ ತಗ್ಗಿತು. ಬರೇ ೩ ಕೋಟಿ ೬೦ ಲಕ್ಷ ಪವನಿನ ಸರಕು ಪರದೇಶಗಳಿಗೆ ಹೋಯಿತು. ಆಮದು-ಸರಕು ಕಟ್ಟಿದೆ. ೨೦ ಲಕ್ಷ ಪವನಿನ ಸಾಮಾನು ಹೆಚ್ಚಿಗೆ ಬಂತು. ಒಂದರೆ, ೨ ಕೋಟಿ ೫೦ ಲಕ್ಷ ಪವನಿನ ಆಮದಾಯಿತು. ೨ ಕೋಟಿ ೯೦ ಲಕ್ಷ ಪವನಗಳನ್ನು ಬ್ರಿಟಿಶರು ಮೇ ತಿಂಗಳಲ್ಲಿ ಪರದೇಶಗಳಿಗೆ ಕಳಿಸುವ ಪ್ರಸಂಗ ಬಂತು. ಹೀಗೆ ಆಮದು ಹೆಚ್ಚಾಗಿ ರಫ್ತು ಕಡಿಮೆಯಾದರೆ, ಬ್ರಿಟಿಶ ದೇಶದ ಸ್ಥಿತಿ [illegible]ಪ್ರದವಾಗುವದೆಂದು ಅರ್ಥಶಾಸ್ತ್ರಜ್ಞರ ಅಭಿಪ್ರಾಯ. ಆದರೆ, ಜರ್ಮನಿ—ಫ್ರಾನ್ಸ ಮೊದಲಾದ ದೇಶಗಳ ಸ್ಥಿತಿ ಇಷ್ಟು ಕೆಟ್ಟಿಲ್ಲ. ಫ್ರಾನ್ಸ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ್ಯ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ ನೀವು ದಿನಾ ಅವರ [illegible] ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ ಅವು ಬಾಡುವವು ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕಾಂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನವ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

[illegible] ಅರ್ಧ ಚಮಚ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ನಿಮ್ಮ ತಿಕ್ಕುವ ಕೂದಲು ತಲೆಯ ಹೊಟ್ಟು ಹೋಗುತ್ತದೆ. ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ [illegible] ಕೂದಲುಗಳಿಗೆ ಪುಷ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

[illegible] ಒಂದಕ್ಕೆ	ರೂ.	೨-೦-೦
[illegible]		೦ ೪-೦
[illegible] ,,		೦ ೧೨-೦
[illegible] ,,		[illegible]

ಒಟ್ಟೋ ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ

" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು. ಎಲ್ಲ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಅದ್ಯಾವುದು?

ಒಟ್ಟೋ ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದಿಲ್ಲ. ಒಟ್ಟೋದಿಲ್ ಬಹಾರದಿಂದ [illegible] ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ

THE ANGLO INDIAN DRUG & CHEMICAL CO..

POST BOX 2082 BOMBAY No 2

ದೇಶದ ವ್ಯಾಪಾರ ಉದ್ಯಮ [illegible] ವ್ಯವಹಾರಗಳಿಗೆ ಸಾಲ ಕೊಡುವುದರಿಂದ ಹೆಚ್ಚಿದ್ದರಿಂದ ಬಚ್ಚಿಟ್ಟ ಸಾಲ ಲಾಭ ದೊರೆತು [illegible] ದೇಶದ ಸ್ಥಿತಿ ಮಾತ್ರ [illegible] ಎಂದು ಮದ್ರಾಸದ 'ಸಂಡೇ ಟೈಮ್ಸ್' ಪತ್ರಿಕೆಯು [illegible]

— ಪಂಜಾಬದ ಆರ್ಯಪ್ರತಿನಿಧಿ ಸಭೆಯವರು ಶ್ರೀ ನಾರಾಯಣ ಸ್ವಾಮಿಜಿ ಮಹಾರಾಜರವರ ಅಧ್ಯಕ್ಷತೆಯಲ್ಲಿ ಗುರುಕುಲ ಶೋಧಕ ಮಂಡಳವನ್ನು ನೇಮಿಸಿ ಅದರ ದ್ವಾರ ಕಳೆದ ೩೦ ವರ್ಷಗಳಿಂದ ನಡೆದ ಗುರುಕುಲದ ಶಿಕ್ಷಣಕ್ರಮವನ್ನು ಪರಾಂಬರಿಸಿ ಕಾಲೋಚಿತವಾದ ಸುಧಾರಣೆ ಮಾಡುವದಕ್ಕಾಗಿ ಕೆಲ ಜನರಿಗೆ ಆಜ್ಞೆಯಾಗಿದೆ.

—ಢಾಕಾ ಪಟ್ಟಣದ ಸಮೀಪದ ಒಂದು ಗ್ರಾಮದಲ್ಲಿ ನಡೆದ ಮದುವೆ ಸಮಾರಂಭದ ವೃತ್ತಾಂತ ಹೇಳತಕ್ಕಂಥದ್ದಿದೆ, ಕೇಳತಕ್ಕಂಥದ್ದಿದೆ. ಮದುವೆಯ ನಿಶ್ಚಯವಾಗಿ ಮದುಮಗಳ ಕೈ ಹಿಡಿಯಲು ಮದುಮಗನು ಮಂಟಪದಲ್ಲಿ ಆಸನಸ್ಥನಾಗಿದ್ದನು. ಮುಂಗಡ ಗಡಿಯಾರಕ್ಕೆ ಸಂಬಂಧಿ ತರಬೇಕಾಗಿ ವರದಕ್ಷಿಣೆ ನಿಶ್ಚಯವಾಗಿತ್ತು, ಅದನ್ನು ತಾರದ್ದರಿಂದ ಮದುಮಗನ ಮಂಟಪದಲ್ಲಿ ವರಪಕ್ಷದವರು ಆಕ್ಷೇಪ ಮಾಡಿದರು, ದೊಡ್ಡ ದೊಡ್ಡ ಮಾತುಗಳಾದವು. ಇಷ್ಟು ಸಣ್ಣ ಮಾತಿಗೆ ವರಪಕ್ಷದವರೆತ್ತಿದ ಆಕ್ಷೇಪ ಕೇಳಿ ವಧೂಪಕ್ಷದವರು ಬೇಸರಪಟ್ಟು ಕನ್ಯಾದಾನ ಮಾಡುವದಿಲ್ಲವಾಗಿ ಹೇಳಿಬಿಟ್ಟರು. ವರಪಕ್ಷಕ್ಕೆ ಸಿಟ್ಟುಬಂದು, ದಿಬ್ಬಣ ಕೊಂಡು ಹೊರಬಿದ್ದರು. ಅದೇ ಗ್ರಾಮದಲ್ಲಿ ಮದುವೆ ಪ್ರಾಯದ ಒಬ್ಬ ಹುಡುಗಿಯಿದ್ದಳು, ಅವಳು ಮಲಕೊಂಡಿದ್ದಳು. ಆಕೆಯನ್ನೆಬ್ಬಿಸಿ ಅದೇ ಮುಹೂರ್ತದಲ್ಲಿ ಮದುವೆ ಮಾಡಿದರು. ವಧೂಪಕ್ಷದವರು ಬಿಟ್ಟುಹೋದ ಮದುಮಗನನ್ನು ತಂದು ಅದೇ ಚಪ್ಪರದಲ್ಲಿ ಮದುವೆ ಮಾಡಿದರು !!

ಗೋಮಾಂತಕದ [illegible] ಸಂಸ್ಥಾನದಲ್ಲಿ ಶ್ರೀ [illegible] ಅದ್ಭುತವಾದ ಕಳೇಬರ [illegible] ಶವ ಸುಮಾರು ೩೦೦ ವರ್ಷದ [illegible] ೧೦-೧೨ ವರ್ಷಕ್ಕೆ ಆ ಶವದ ದರ್ಶನದಲ್ಲಿ ಕಟ್ಟಿಗೆ ಮುಚ್ಚಿ ಇಂಡ ಸಂದೂಕದಲ್ಲಿ [illegible] ಜಾತ್ರೆಯ ದಿನ ಈ ಕಳೇಬರದೊಳಗಿನ [illegible] ಪ್ರತ್ಯಕ್ಷವಾಗಿ [illegible] ಇಲ್ಲಿದ್ದರ ಮೈಸುಟ್ಟು [illegible] ಭಯಂಕರ [illegible] ಕಲಿಯುಗದಲ್ಲಿ [illegible] ಮಾತ್ರ [illegible] ನೈಸುಟ್ಟು [illegible] ಅವರು ಸನ್ಯಾಸಿ ಶ್ರೀ [illegible] ತೀರ್ಥ—ಪ್ರಸಾದ ಕೊಟ್ಟು [illegible] ಕಲಿ ಮತ್ತು [illegible] ಕೂಡಿ ಈ [illegible] ಸಂಭವ ನಿಜವಾಗಿ ನೋಡತಕ್ಕಂಥದ್ದು. ಪಾವಕ [illegible] ಹೋಗುತ್ತಿದ್ದಾಗ್ಯೂ [illegible] ೧೦೦-೨೦೦ ಮೊಳ ಪ್ರಾಕಾರದಲ್ಲಿ ನಿಲ್ಲುತ್ತ ಜನರು [illegible] ಅವರಿಗೆ ಏನೂ ಬಾಧೆಯಾಗುವದಿಲ್ಲ. [illegible] ಮಹಿಮೆ

— [illegible] ಲಾಲಾ ಲಜಪತರಾಯ ಲೋಕಮಾನ್ಯ ಟಿಳಕರವರ ಜೊತೆಗಾರರಾದ, ಬಂಗಾಲದ ಸಿಂಹರೆಂದು ಖ್ಯಾತಿಗೊಂಡ ಬಾಬು ಬಿಪಿನಚಂದ್ರ ಪಾಲರವರು ಕಲಕತ್ತೆಯಲ್ಲಿ [illegible] ದಿವಂಗತರಾದರು. ಶ್ರೀ| ಬಿಪಿನ ಬಾಬುರವರು ವಂಗಭಂಗದ ಚಳವಳಿಯಲ್ಲಿ ಒಳ್ಳೇ ರಭಸದಿಂದ ದುಡಿದು ಇಡೀ ಭರತಖಂಡದಲ್ಲಿ ರಾಷ್ಟ್ರೀಯ ಮುಂದುವರಿಕೆಯನ್ನೆಬ್ಬಿಸಿದರು. ಇತ್ತ [illegible] ಇವರು ರಾಷ್ಟ್ರೀಯ ಸಭೆಯ ಮೇಲೆ [illegible] ಆಕ್ಷೇಪ ಮಾಡಹತ್ತಿದ್ದರಿಂದ ಇವರ ಲೋಕಪ್ರಿಯತೆ [illegible] ಇವರ ನಿಧನದಿಂದ [illegible] ಅಸಾಮಾನ್ಯ ಪುರುಷರೊಬ್ಬರು ಹೋದಂತಾಗಿ [illegible] ಕಡಿಮೆಯಿಲ್ಲ.

— ಬಂಗಾಲದ [illegible] ಗವರ್ನರ [illegible] ಬಂಗಾರ [illegible] ಅಲ್ಲಿಯ [illegible] ಒಂದು [illegible] ಹೋಗಿ [illegible]

— ಅನಂತಶಯನದ ರಾಜ್ಯಕ್ಕೆ [illegible] ಜಮೀನದಾರ [illegible] ಕೋರ್ಟಿನ [illegible] ಪ್ರಿವಿ— [illegible] ಇವರಿಗೆ ಹೋಗಲಿಕ್ಕೆ [illegible]

— ರತ್ನಾಗಿರಿ ಜಿಲ್ಲೆಯ ಸಂಗಮೇಶ್ವರದ ರಾ| ರಾಮಭಾವು ಸಾರೀ ಎಂಬವರು ಮುಂಬಯಿಯಲ್ಲಿ [illegible] ೧೦೦ [illegible] ನೌಕರಿಯಲ್ಲಿದ್ದರು. ಅದನ್ನು ಬಿಟ್ಟು ಸಂಗಮೇಶ್ವರದಲ್ಲಿ [illegible] ಕೈಕೊಂಡರು. ಅತ್ತ ಕಡೆ [illegible] ಹಣ್ಣು ಬೆಳೆಸುವ ಪ್ರಘಾತವಿಲ್ಲ. ಇದನ್ನಿವರು ಕೈಕೊಂಡು ಈಗ ೧೨ ವರ್ಷಗಳಿಂದ ಅದರ ಕುರಿತು ಪ್ರಯತ್ನ ಮಾಡುತ್ತಿದ್ದಾರೆ. ಈ ವರ್ಷ [illegible] ಸಾವಿರ [illegible] ಜನರಿಗೂ [illegible] ಸ್ವತಂತ್ರ.

— ಇಂಗ್ಲಂಡದೊಳಗ ವಿದ್ಯಾರ್ಥಿಗಳ [illegible] ಒಳ್ಳೇ ಜಾಗ್ರತೆ [illegible] ಬೇಕಾಗುವಷ್ಟು ಹಾಲು ದೊರೆಯುವ ಅವರ ಆರೋಗ್ಯ [illegible] ಒಂದು ಗ್ಲಾಸು ಹಾಲು [illegible] ಸರಕಾರದ ಏರ್ಪಾಟಾಗಿದೆ [illegible] ಲಕ್ಷ ವಿದ್ಯಾರ್ಥಿಗಳು [illegible] ಇದಕ್ಕಾಗಿ ೧ ಲಕ್ಷ ೨೦ ಸಾವಿರ [illegible] ಹುಡುಗರಿಗೆ [illegible] ಹಾಲು ಕೊಡುತ್ತಾರೆ. ಈ [illegible] ಲಕ್ಷ [illegible] ಮಾತ್ರ ಹಾಲು ಪಡೆಯುತ್ತಿದ್ದರು. ಈ ಸಲ ಸರಕಾರಿ ನಿಯಂತ್ರಣದಲ್ಲಿ [illegible] ಪೌಷ್ಟಿಕ [illegible]

— ಸ್ವರ್ಗೀಯ [illegible] ಪಂಡಿತ ಮದನಮೋಹನ ಮಾಲವೀಯರವರ ಅಧ್ಯಕ್ಷತೆಯಂತೆ ಮೈಸೂರ ಸಂಸ್ಥಾನದ ಮುಖ್ಯ ಮುಖ್ಯ ಪಟ್ಟಣಗಳಲ್ಲಿ ಮೆರವಣಿಗೆ ಸಭೆ [illegible] ಬೆಂಗಳೂರಿನಲ್ಲಿ [illegible] ಕಾರ್ಯ [illegible] ಶ್ರೀ| ಎಸ್. ಜಿ. ಶಾಸ್ತ್ರಿಯವರೂ [illegible] ಏಜಂಟರಾದ ಶ್ರೀ| ಆಚಾರ್ಯರವರೂ [illegible] ಒಂದು ಪ್ರಚಂಡ ರಥವನ್ನು ತಯಾರಿಸಿದ್ದರು. ಈ ರಥದಲ್ಲಿ ತರತರದ [illegible] ಇಟ್ಟು ಊರ ತುಂಬ ರಥವನ್ನು ಮೆರೆಸಿ ಸ್ವದೇಶಿ ರಥೋತ್ಸವ ನೆರವೇರಿಸಿದರು. ಸ್ವದೇಶಿ ಯುಗದೊಳಗಿನ ಮಹೋತ್ಸವ!

ಈ ಬಾರಿ ಸರಕಾರದ [illegible] ವಿಷಯ [illegible] ಇರುವದರಿಂದ ಪಂಜಾಬ ಸರಕಾರವು [illegible] ಲಕ್ಷ ರೂಪಾಯಿ [illegible] ಸೂಟು ಬಿಟ್ಟಿದೆ. ಇದಲ್ಲದೆ [illegible] ನಷ್ಟವಾದ [illegible] ಲಕ್ಷ ರೂಪಾಯಿ ಸೂಟು ಬಿಟ್ಟಿದೆ.

— [illegible] ವಿಷಯದಲ್ಲಿರುವ [illegible] ತಯಾರಿಸಲಿಕ್ಕೆ [illegible] ದ್ವಾರ [illegible] ಜನರ [illegible] ತಿಂಗಳುದಿಂದ [illegible] ವ್ಯಾಸಕ್ರಮ [illegible] ಮುಂದಿನಗಳನ್ನು ಕಲಿಸುವ ಏರ್ಪಾಟಾಗಿದೆ. [illegible] ವಿದ್ಯಾರ್ಥಿಗಳಿಗೆ ತಿಂಗಳ [illegible] ದೊರೆಯುತ್ತದೆ. [illegible] ಯುವರಾಜರು ಈ ಯೋಜನೆಯ [illegible]

— ಬಂಗಾಲ ಪ್ರಾಂತದ [illegible] ಈ [illegible] ಜನರ ಮೇಲೆ ಸರಕಾರದ ಒಂದು [illegible] ಈ [illegible] ಪೋಲೀಸರ [illegible] ಸರಿಯಾದ ಹಾದಿ [illegible] ವಿರುದ್ಧ ಜನರ [illegible] ಆರೋಪದ ಮೇಲೆ [illegible] ನಡೆದರೆ ಸಂಕಟ [illegible] ಜನರು ಯಾವ [illegible] ಕಾಯಿದೆಯು [illegible] ಸರಿಯಾದ [illegible] ತೋರಿಸಬೇಕು.

— ಮುಂಬಯಿ ಪಟ್ಟಣದ [illegible] ಜಾಹೀರು ಮಾಡಿ [illegible] ಮುಂಬಯಿ ಮ್ಯುನಿಸಿಪಾಲಿಟಿಯವರು ಮುಂಬಯಿ ಸರಕಾರಕ್ಕೆ [illegible] ಮಾಡಿಕೊಂಡಿದ್ದಾರೆ.

— ಸಂಯುಕ್ತ ಪ್ರಾಂತದಲ್ಲಿ ಸತ್ಯಾಗ್ರಹವನ್ನು ಸದೆಬಡಿಯುವದಕ್ಕಾಗಿ [illegible] ಜೂನ [illegible] ತಾರೀಖಿಗೆ [illegible] ಒಂದು ಸಭೆಯಾಗಿ [illegible] ಗ್ರಾಮೋದ್ಧಾರದ ಯೋಜನೆಯಂತೆ ಗ್ರಾಮೋದ್ಧಾರ [illegible] ನಿರ್ಧಾರವಾಯಿತು. [illegible] ಉದ್ಧಾರಕ್ಕಾಗಿ ಒಂದು ಸಂಘ ಸ್ಥಾಪನೆಯಾಗಿದೆ. [illegible] ಉದ್ಧಾರಕ [illegible] ಸಂಘ [illegible] ಒಂದು ಸಂಘ ಸ್ಥಾಪಿಸಿಕೊಂಡಿದ್ದಾರೆ. 'ಸತ್ಯಾಗ್ರಹದಿಂದ ದೇಶದ ಘಾತವಾಯಿತು, [illegible] ಚಳವಳಿಯ ಉಪಕ್ರಮದಿಂದ ಜನರಿಗೆ ಅಪರಿಮಿತ ಕಷ್ಟಗಳೊದಗಿದವು. [illegible] ಮಾರ್ಗದಿಂದ ಸರಕಾರದ ಕಡೆ ಹೋರಾಡಿದರೆ [illegible] ಇದರಿಂದಲೇ [illegible] ಉದ್ಧಾರವಾಗುವದು. [illegible] ಕರಗಳನ್ನು ಕೊಟ್ಟು [illegible] ಇವನ್ನು ಬಿಟ್ಟು [illegible] ಸರಕಾರವು ರಾಜ್ಯರಕ್ಷಣೆ ಮಾಡುವ ಬಗೆ ಹೇಗೆ?' ಇತ್ಯಾದಿ ಪ್ರಚಾರವಾಗುತ್ತದೆ. ಸುಮಾರು ೧೦ [illegible] ಪ್ರಾಂತದಲ್ಲಿ [illegible] ಸಭೆಗಳು ಸ್ಥಾಪಿಸಲ್ಪಟ್ಟಿವೆ. [illegible] ಸಭೆ [illegible] ರಾಜನಿಷ್ಠ ಸಭೆ [illegible] ಇದಲ್ಲದೆ ಸಂಯುಕ್ತ ಪ್ರಾಂತಿಕ ಸರಕಾರವು ಒಂದು ವಾರಪತ್ರಿಕೆಯನ್ನು ಹೊರಡಿಸಿ ೨೦ ಸಾವಿರ ಪ್ರತಿಗಳನ್ನು ಪ್ರಾಂತದಲ್ಲಿ ಹಂಚುತ್ತಿದೆ. ಹೀಗೆ ಸಂಯುಕ್ತ ಪ್ರಾಂತಿಕ ಸರಕಾರವು ಕಾಂಗ್ರೆಸಿನ ಮೇಲೆ [illegible] ಎಬ್ಬಿಸಿದೆ.